ಭಗವಾನ್ ಶ್ರೀವೇದವ್ಯಾಸಪ್ರಣೀತ

ಮಹಾಭಾರತ

ಲಕ್ಷಾಲಂಕಾರಕ್ಕೆ ಅನುಗುಣವಾಗಿ
ಮಹಾಭಾರತತಾತ್ಪರ್ಯನಿರ್ಣಯದೊಂದಿಗೆ
ಪ್ರತಿ ಶ್ಲೋಕಗಳ ಜೊತೆಗೆ ಕನ್ನಡಾನುವಾದ

ಸಭಾಪರ್ವ

ಭಾಗ-5

ಪ್ರಕಾಶಕರು

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿದೆ

ಪಲಿಮಾರು ಮಠ, ಉಡುಪಿ

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಭಾಪರ್ವ

ಭಾಗ-೫

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜತೀರ್ಥರ
ಲಕ್ಷಾಲಂಕಾರದೊಂದಿಗೆ ಪ್ರತಿ ಶ್ಲೋಕಗಳ ಜೊತೆಗೆ ಕನ್ನಡಾನುವಾದ)

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ವಿದ್ವಾನ್॥ ಪಿ. ಎಸ್. ಶೇಷಗಿರಿ ಆಚಾರ್ಯ,

ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ - ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಕೃತಿಗಳನ್ನು ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರ ಷಷ್ಟಿಪೂರ್ತಿಯ ಸಮಾರಂಭದಲ್ಲಿ ಮನ್ಮಥ ಸಂ/ ಕಾರ್ತಿಕ ಬಹುಳ ತೃತೀಯಾ (28.11.2015) ದಂದು ತಿರುಮಲಕ್ಷೇತ್ರದಲ್ಲಿ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಅನಾವರಣಗೊಳಿಸಿ ಶ್ರೀನಿವಾಸನ ಅಡಿದಾವರೆಗಳಲ್ಲಿ ಸಮರ್ಪಿಸಿದರು.

ಮಹಾಭಾರತ ಸಭಾಪರ್ವ ಭಾಗ-೫

© ತತ್ವಸಂಶೋಧನಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-81807-47-7

ಪುಟಗಳು	-	VIII + 764 = 772
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಪುಟ ಸಂಯೋಜನೆ	-	ಎಂ. ಶರತ್ ಚಂದ್ರ
ಅಕ್ಷರ ಜೋಡಣೆ	-	ಬೆಮ್ಮತ್ತಿ ಶ್ರೀನಿವಾಸ ಮತ್ತು ಶ್ರೀಮತಿ ಎಸ್. ನಾಗಲತಾ
ಮುದ್ರಕರು	-	ಪವನ ಮುದ್ರಣಾಲಯ, ಬೆಂಗಳೂರು. 9686489131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಿಷಯಾನುಕ್ರಮಣಿಕೆ

ಮಹಾಭಾರತ

ಸಭಾಪರ್ವ, ಭಾಗ-೫

		ಪುಟ ಸಂ.
1.	ದಿಗ್ವಿಜಯದ ವ್ಯವಸ್ಥೆ ಮತ್ತು ಅರ್ಜುನನ ಉತ್ತರದಿಗ್ವಿಜಯ	9
2.	ಅರ್ಜುನ ದಿಗ್ವಿಜಯ ಮತ್ತು ಪ್ರತಿನಿವೃತ್ತಿ	25
3.	ಪೂರ್ವದಿಗ್ವಿಜಯವನ್ನುಮಾಡಿ ಭೀಮಸೇನನ ಪ್ರತಿನಿವೃತ್ತಿ	41
4.	ಸಹದೇವನ ದಕ್ಷಿಣ ದಿಗ್ವಿಜಯ. ಮಾಹಿಷ್ಮತಿ ನಗರದಲ್ಲಿ ಅಗ್ನಿಸ್ತುತಿ. ಘಟೋತ್ಕಚನ ಮೂಲಕ ವಿಭೀಷಣನಿಂದ ಕರದಾನ	56
5.	ನಕುಲನ ಪಶ್ಚಿಮ ದಿಗ್ವಿಜಯ	99
6.	ಕೃಷ್ಣನ ಅನುಮತಿಯನ್ನು ಪಡೆದು ಧರ್ಮರಾಜನಿಂದ ರಾಜಸೂಯಯಜ್ಞದ ಸಿದ್ಧತೆಗಳು	106
7.	ಎಲ್ಲರ ಆಗಮನ; ಅಧಿಕಾರವ್ಯವಸ್ಥೆ; ಮತ್ತು ಯಾಗಾನುಷ್ಠಾನ	115
8.	ಅಭಿಷೇಕಾರ್ಥವಾಗಿ ಬ್ರಾಹ್ಮಣರ ನಾರದರ ರಾಜರ ಆಗಮನ. ನಾರದರಿಂದ ಪೂರ್ವವೃಂತ್ತಾಂತದ ಸ್ಮರಣೆ	132
9.	ಕೃಷ್ಣನ ಆಗಮನ, ಭೀಷ್ಮರ ಆಜ್ಞೆಯಂತೆ ಸಹದೇವನಿಂದ ಕೃಷ್ಣನಿಗೆ ಅಗ್ರಪೂಜೆ ಶಿಶುಪಾಲನ ನಿಂದೆ	137
10.	ಶಿಶುಪಾಲನಿಂದ ಕೃಷ್ಣನ ನಿಂದೆ ಮತ್ತು ಸಭಾತ್ಯಾಗ	145
11.	ಶಿಶುಪಾಲನನ್ನು ಸಮಾಧಾನಪಡಿಸುವ ಯುಧಿಷ್ಠಿರನನ್ನು ತಡೆದು ಭೀಷ್ಮರಿಂದ ಕೃಷ್ಣನ ಮಹಿಮೆಯ ಕಥನ ಮತ್ತು ಸಹದೇವನ ವೀರವಚನದ ಪ್ರಶಂಸೆ	153
12.	ಯುಧಿಷ್ಠಿರನಿಂದ ಪ್ರಾರ್ಥಿತರಾದ ಭೀಷ್ಮರಿಂದ ಕೃಷ್ಣನ ಸೃಷ್ಟ್ಯಾದಿಮಹಿಮೆಯ ವರ್ಣನೆ	162

13. ಭೀಷ್ಮರಿಂದ ವಿಷ್ಣುವಿನ ಸೃಷ್ಟಿಯ ಮತ್ತು ಮಧುಕೈಟಭರ ವಧೆಯ ವರ್ಣನೆ 168

14. ಭೀಷ್ಮರಿಂದ ವರಾಹ ನರಸಿಂಹಾವತಾರಗಳ ವರ್ಣನೆ 174

15. ವಾಮನಾವತಾರ ಕಥನ 191

16. ದತ್ತಾತ್ರೇಯ ಅವತಾರ ಕಥನ 198

17. ಪರಶುರಾಮಾವತಾರ ಕಥನ 203

18. ರಾಮಾವತಾರ ಕಥನ 210

19. ಕೃಷ್ಣಾವತಾರಕ್ಕಾಗಿ ಭೂದೇವಿಯ ಪ್ರಾರ್ಥನೆ 220

20. ವಿಷ್ಣುವಿನಿಂದ ಭೂಮಿಯಲ್ಲಿ ಅವತಾರಮಾಡಲು ದೇವತೆಗಳಿಗೆ ಪ್ರೇರಣೆ 231

21. ಕೃಷ್ಣಾವತಾರ ಮತ್ತು ಕೃಷ್ಣ ಬಲರಾಮರ ಬಾಲಲೀಲೆಗಳು 233

22. ಕಾಲಿಯ ದಮನ, ಕಂಸಾದಿ ಹನನ 240

23. ಕೃಷ್ಣ ಬಲರಾಮರ ವಿದ್ಯಾಭ್ಯಾಸ ಗುರುದಕ್ಷಿಣೆ ಮತ್ತು ಪುನಃ ಕಂಸವಧೆಯ ಕಥನ 246

24. ನರಕಾಸುರನ ಸಂಹಾರ. ದ್ವಾರಕೆಗೆ ಇಂದ್ರನ ಆಗಮನ 254

25. ಇಂದ್ರನಪ್ರಾರ್ಥನೆಯಂತೆ ನರಕಾಸುರನ ವಧೆ 260

26. ಪ್ರಾಗ್ಜ್ಯೋತಿಷ ಪುರದಲ್ಲಿ ಇದ್ದ ರತ್ನಾದಿಗಳನ್ನು ಸಂಗ್ರಹಿಸಿ ಸ್ವರ್ಗದಲ್ಲಿ ಅದಿತಿಗೆ ಕುಂಡಲಗಳನ್ನು ಕೊಟ್ಟು ಕೃಷ್ಣನ ದ್ವಾರಕಾ ಪ್ರಾಪ್ತಿ 266

27. ದ್ವಾರಕೆಯಲ್ಲಿ ರುಗ್ಮಿಣ್ಯಾದಿಗಳ ಪ್ರಾಸಾದಗಳ ವರ್ಣನೆ 277

28. ಕೃಷ್ಣನ ದ್ವಾರಕಾಪ್ರವೇಶ 289

29. ಎಲ್ಲರ ಅನುಮತಿಯನ್ನು ಪಡೆದು ದ್ವಾರಕೆಯಿಂದ ಇಂದ್ರನ ನಿರ್ಗಮನ 293

30. ತಾಯಿಯರಿಗೆ ನಮಸ್ಕರಿಸಿ ಕೃಷ್ಣನ ಸ್ವಗೃಹಪ್ರವೇಶ 298

31. ಬಾಣನನ್ನು ಯುದ್ಧದಲ್ಲಿ ಸೋಲಿಸಿ ಅನಿರುದ್ಧನನ್ನು ಬಿಡಿಸಿ ಕೃಷ್ಣನ ಪ್ರತಿನಿವೃತ್ತಿ 302

32. ಭೀಷ್ಮರಿಂದ ಕೃಷ್ಣನ ವಿಜಯವನ್ನು ಹೇಳಿ ಉಪಸಂಹಾರ 310

33. ಸಹದೇವನಿಂದ ಕೃಷ್ಣನಿಗೆ ಅಗ್ರಪೂಜೆಯ ಸಮರ್ಥನೆ. ವೀರವಚನ. ಶಿಶುಪಾಲನ ಕ್ರೋಧ 318

34. ಧರ್ಮರಾಜನ ಭಯದ ವಚನಗಳು ಮತ್ತು ಭೀಷ್ಮರ ಸಮಾಧಾನ 322

35. ಶಿಶುಪಾಲನಿಂದ ಪರಿಹಾಸಪೂರ್ವಕವಾಗಿ ಭೀಷ್ಮರ ನಿಂದೆ 326

36. ಶಿಶುಪಾಲನ ವಾಕ್ಯವನ್ನು ಕೇಳಿ ಭೀಮನ ಕೋಪ. ಭೀಷ್ಮನಿಂದ ಭೀಮನ ಸಾಂತ್ವನ 337

37. ಶಿಶುಪಾಲನು ಭೀಮಸೇನನನ್ನು ಆಹ್ವಾನಿಸಲು ಭೀಷ್ಮರಿಂದ ಕಾರಣ ನಿರೂಪಣೆ 342

38. ಶಿಶುಪಾಲನಿಂದ ಭೀಷ್ಮನಿಂದೆ. ಭೀಷ್ಮರ ಪ್ರತ್ಯುತ್ತರ 347

39. ಶಿಶುಪಾಲನಿಂದ ಕೃಷ್ಣನ ನಿಂದೆ, ಶಿಶುಪಾಲನನ್ನು ಕೊಲ್ಲಲು ಕೃಷ್ಣನ ನಿರ್ಧಾರ 355

40. ಶಿಶುಪಾಲನಿಗೆ ಉಂಟಾದ ಅಪಶಕುನಗಳು ಮತ್ತು ನಾರದರಿಂದ ವಿಸ್ತಾರವಾದ ಅಪಶಕುನಗಳ ಕಥನ 364

41. ನಾರದರಿಂದ ಕೃಷ್ಣನು ಸೃಷ್ಟಿಸಿದ ದುರ್ನಿಮಿತ್ತಗಳ ಪ್ರದರ್ಶನ 373

42. ಕೃಷ್ಣ ಮತ್ತು ಶಿಶುಪಾಲರ ಯುದ್ಧ, ಶಿಶುಪಾಲವಧೆ 378

43. ರಾಜಸೂಯಯಾಗದ ವಿಸ್ತಾರವಾದ ವರ್ಣನೆ 392

44. ರಾಜಸೂಯ ಸಮಾಪ್ತಿ. ಕೆಲವರನ್ನು ಬಿಟ್ಟು ಉಳಿದವರೆಲ್ಲರಿಂದ ತಮ್ಮ ತಮ್ಮ ಪಟ್ಟಣಕ್ಕೆ ಪ್ರಯಾಣ 401

45. ವ್ಯಾಸರ ಮುಖದಿಂದ ಅಪಶಕುನಗಳ ಫಲವನ್ನು ಕೇಳಿದ ಧರ್ಮರಾಜನ ಸಂಕಲ್ಪ 411

46. ಸಭೆಯಲ್ಲಿ ದುರ್ಯೋಧನ ಹೊಂದಿದ ದುರವಸ್ಥೆ, ದ್ರೌಪದಿ ಮೊದಲಾದವರ ಹಾಸ್ಯ, ದುರ್ಯೋಧನನ ಅಸೂಯೆ ಮತ್ತು ಶಕುನಿಯ ದುರ್ಮಂತ್ರಣ 424

47. ಧೃತರಾಷ್ಟ್ರನ ಸಮೀಪದಲ್ಲಿ ದುರ್ಯೋಧನನಿಂದ ತನ್ನ ಅಸಮಾಧಾನದ ವರ್ಣನೆ 439

48. ದುರ್ಯೋಧನನಿಂದ ವಶೀಕೃತನಾದ ಧೃತರಾಷ್ಟ್ರನಿಂದ ಧರ್ಮರಾಜನನ್ನು ಕರೆತರಲು ವಿದುರನ ಪ್ರೇಷಣೆ 453

49. ಏಕಾಂತದಲ್ಲಿ ತನ್ನನ್ನು ಸಮಾಧಾನ ಮಾಡಲು ಹೊರಟ ಧೃತರಾಷ್ಟ್ರನಿಗೆ ದುರ್ಯೋಧನನಿಂದ ತನಗೆ ಆದ ಅವಮಾನದ ವರ್ಣನೆ 459

50. ಧೃತರಾಷ್ಟ್ರನ ಮುಂದೆ ದುರ್ಯೋಧನನಿಂದ ತಾನು ನೋಡಿದ ಯುಧಿಷ್ಠಿರನ ಯಾಗದ ವೈಭವದ ವರ್ಣನೆ 467

51. ಪುನಃ ಅಸೂಯೆಯಿಂದ ದುರ್ಯೋಧನನಿಂದ ಯಜ್ಞವೈಭವದ ವರ್ಣನೆ 482

52. ಪುನಃ ಅಸೂಯಾಪರನಾದ ದುರ್ಯೋಧನನಿಂದ ಯುಧಿಷ್ಠಿರನ ವೈಭವದ ವರ್ಣನೆ 493

53. ಧೃತರಾಷ್ಟ್ರನಿಂದ ದುರ್ಯೋಧನನಿಗೆ ಶಾಂತಿಯ ಉಪದೇಶ, ಅವನಿಂದ ನಿರಾಕರಣೆ 498

54. ಶಕುನಿಯಿಂದ ದುರ್ಯೋಧನನ ಉತ್ತೇಜನ, ಧೃತರಾಷ್ಟ್ರನ ಸಮ್ಮತಿ. ಮತ್ತು ವಿದುರನ ಪ್ರೇಷಣೆ 505

55. ಪರಿವಾರಸಹಿತನಾದ ಯುಧಿಷ್ಠಿರನಿಂದ ಹಸ್ತಿನಾಪುರಗಮನ ಮತ್ತು ಅಲ್ಲಿ ವಿಶ್ರಾಂತಿ 516

56. ಶಕುನಿ ಮತ್ತು ಯುಧಿಷ್ಠಿರ ಸಂವಾದ. ದ್ಯೂತ ನಿರ್ಧಾರ ಮತ್ತು ಉಪಕ್ರಮ 528

57. ದ್ಯೂತದಲ್ಲಿ ಧರ್ಮರಾಜನ ಪರಾಭವಸರಣಿ 535

58. ವಿದುರನಿಂದ ಧೃತರಾಷ್ಟ್ರನನ್ನು ಕುರಿತು ದುರ್ಯೋಧನನ್ನು ನಿಂದಿಸಿ ದ್ಯೂತವನ್ನು ನಿಲ್ಲಿಸುವಂತೆ ಒತ್ತಾಯ **542**

59. ಪುನಃ ವಿದುರನಿಂದ ಭಾವಿ ವಿನಾಶವನ್ನು ಹೇಳಿ, ದ್ಯೂತದಿಂದ ಹಿಂದಿರುಗಿಸುವ ಪ್ರಯತ್ನ **547**

59. ದುರ್ಯೋಧನನಿಂದ ವಿದುರನ ನಿಂದೆ. ಆದರೂ ವಿದುರನ ಹಿತೋಪದೇಶ **550**

60. ತಮ್ಮಂದಿರನ್ನು ದ್ರೌಪದಿಯನ್ನು ಮತ್ತು ತನ್ನನ್ನೂ ಪಣಕ್ಕಿಟ್ಟು ಯುಧಿಷ್ಠಿರನ ಪರಾಜಯ **558**

61. ದುರ್ಯೋಧನನಿಂದ ದ್ರೌಪದಿಯನ್ನು ಕರೆತರಲು ಆದೇಶ. ವಿದುರನ ಕಟೂಕ್ತಿ **569**

62. ದುಶ್ಶಾಸನನಿಂದ ದ್ರೌಪದಿಯ ಸಭಾನಯನ, ದ್ರೌಪದಿಯ ಮಾತುಗಳು **576**

63. ಯುಧಿಷ್ಠಿರನ ಮೇಲೆ ಭೀಮನ ಕೋಪ, ವಿಕರ್ಣನ ವಚನ, ದುಶ್ಶಾಸನನಿಂದ ದ್ರೌಪದಿಯ ವಸ್ತ್ರಾಪಹರಣದ ಕ್ರಿಯೆ, ಕೃಷ್ಣನಿಂದ ರಕ್ಷಣೆ, ವಿದುರ ವಚನ **599**

64. ದ್ರೌಪದಿಯ ವಿಲಾಪ ಮತ್ತು ವಿದುರನ ಸಾಂತ್ವನ **620**

65. ಧರ್ಮರಾಜನು ನಮಗೆ ಪ್ರಭುವಲ್ಲ ಎಂದು ಪಾಂಡವರು ಹೇಳಲಿ ಎಂದು ದುರ್ಯೋಧನನ ಒತ್ತಾಯ, ಅದಕ್ಕೆ ಭೀಮಸೇನನ ಉತ್ತರ **625**

66. ಕರ್ಣನಮಾತುಗಳು. ದುರ್ಯೋಧನನಿಂದ ಊರುದರ್ಶನ, ದ್ರೌಪದಿ ಮೊದಲಾದರ ಪ್ರತಿಜ್ಞೆ, ವಿದುರನ ಮಾತಿನಂತೆ ಧೃತರಾಷ್ಟ್ರನಿಂದ ದ್ರೌಪದಿಗೆ ವರಪ್ರದಾನ **635**

67. ಕರ್ಣಪ್ರಲಾಪದಿಂದ ಕ್ರೋಧಗೊಂಡ ಭೀಮನನ್ನು ಸಂತೈಸಿ, ಪಾಂಡವರಿಂದ ಇಂದ್ರಪ್ರಸ್ಥಗಮನ **653**

68. ದುರ್ಯೋಧನನಿಂದ ಧೃತರಾಷ್ಟ್ರನ ಬುದ್ಧಿ ಭೇದನ ಮತ್ತು ಕಾರ್ತವೀರ್ಯನ ಕಥೆಯ ನಿರೂಪಣೆ **668**

69. ದುರ್ಯೋಧನನಿಂದ ಅರ್ಜುನನ ಶೌರ್ಯವರ್ಣನೆ. ವಶೀಕೃತನಾದ ಧೃತರಾಷ್ಟ್ರನಿಂದ ಪಾಂಡವರನ್ನು ಮತ್ತೆ ಕರೆತರಲು ಆದೇಶ **683**

70. ಪುನಃ ದ್ಯೂತ. ವನವಾಸ ಅಜ್ಞಾತವಾಸದ ಪಣದಲ್ಲಿ
ಧರ್ಮರಾಜನ ಪರಾಜಯ 705

71. ಸಭೆಯಿಂದ ಹೊರಗೆ ಹೊರಟ ಪಾಂಡವರ ಪ್ರತಿಜ್ಞೆಗಳು 711

72. ಭೀಷ್ಮಾದಿಗಳ ಅನುಜ್ಞೆಯನ್ನು ಪಡೆದು ಪಾಂಡವರ ಪ್ರಯಾಣ 723

73. ಪಾಂಡವರು ಕಾಡಿಗೆ ಹೊರಡುತ್ತಿರಲು ಪೌರರ ಮತ್ತು
ಕುಂತಿಯ ವಿಲಾಪ 728

74. ವಿದುರನಿಂದ ಪಾಂಡವರ ಚೇಷ್ಟಾವಿಶೇಷದ ಅಭಿಪ್ರಾಯ ಕಥನ.
ನಾರದರಿಂದ ಕೌರವರ ವಿನಾಶದ ಭವಿಷ್ಯವಾಣಿ.
ದುರ್ಯೋಧನಾದಿಗಳಿಂದ ದ್ರೋಣರ ಶರಣಾಗತಿ.
ದ್ರೋಣರ ಮತ್ತು ಧೃತರಾಷ್ಟ್ರನ ಹಿತೋಪದೇಶ 742

75. ಸಂಜಯ ಧೃತರಾಷ್ಟ್ರ ಸಂವಾದ 755

—0—

ಮಹಾಭಾರತ

ಸಭಾಪರ್ವ ಭಾಗ-೫

೩. ದಿಗ್ವಿಜಯಪರ್ವ

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ದ್ವೈಪಾಯನೋऽಥ ಭಗವಾನಭಿಗಮ್ಯ ಪಾರ್ಥಾ-
ನಾಜ್ಞಾಪಯತ್ ಸಕಲಸಂಭೃತಿಸಾಧನಾಯ ।
ತಂ ರಾಜಸೂಯಸಹಿತಂ ಪರಮಾಶ್ವಮೇಧ-
ಯಜ್ಞಂ ಸಮಾದಿಶದನನ್ಯಕೃತಂ ವಿರಿಂಚಾತ್ ॥೧೭೬॥

ಅಷ್ಟರಲ್ಲಿ ಭಗವಾನ್ ವ್ಯಾಸರು ಪಾಂಡವರ ಬಳಿಗೆ ಬಂದು ಯಾಗದ ಸಕಲ ಸಿದ್ಧತೆಗಳನ್ನು ಮಾಡಲು ಆಜ್ಞಾಪಿಸಿದರು. ಬ್ರಹ್ಮದೇವನು ಹೊರತು ಇನ್ನಾರೂ ಮಾಡದಿದ್ದ ರಾಜಸೂಯ ಸಹಿತವಾದ ಮಹಾಶ್ವಮೇಧ ಯಾಗವನ್ನು ನದೆಸಲು ಅಪ್ಪಣೆಯಿತ್ತರು.

ಕರ್ತಾ ಹಿ ತಸ್ಯ ಪರಮೇಷ್ಠಿಪದಂ ಪ್ರಯಾತಿ
ಯದ್ಯನ್ಯಸದ್ಗುಣವರೈಃ ಪರಮೇಷ್ಠಿತುಲ್ಯಃ ।
ಭೀಮೇ ಮಖಸ್ಯ ಫಲಮತ್ಯಧಿಕಂ ನಿಧಾತುಂ
ವ್ಯಾಸಃ ಕ್ರತುಂ ತಮದಿಶದ್ ಗುರುರಬ್ಜಜಸ್ಯ ॥೧೭೭॥

ಆ ಯಾಗ ಮಾಡುವವನು ಬ್ರಹ್ಮಪದವಿ ಹೊರತು ಬೇರೆ ಉತ್ತಮ ಗುಣಗಳಲ್ಲಿ ಬ್ರಹ್ಮನಿಗೆ ಸಮಾನನಾಗಿದ್ದರೆ ಬ್ರಹ್ಮಪದವಿಯನ್ನು ಪಡೆಯುತ್ತಾನೆ. ಭೀಮ ಬ್ರಹ್ಮನಿಗೆ ಸಮಾನನಾದ್ದರಿಂದ ಅವನಿಗೆ ಯಾಗದ ಪೂರ್ಣಫಲ ಸಿಗುವಂತೆ ಮಾಡಲು ಬ್ರಹ್ಮನಿಗೆ ಗುರುವಾದ ವ್ಯಾಸರು ಭೀಮನಿಗೆ ಯಾಗದ ದಿಗ್ವಿಜಯಕ್ಕೆ ಆದೇಶ ನೀಡಿದರು.

ಅಸಾಧಾರಣಹೇತುರ್ಯಃ ಕರ್ಮಣೋ ಯಸ್ಯ ಚೇತನಃ ।
ಸ ಏವ ತತ್ಫಲಂ ಪೂರ್ಣಂ ಭುಂಕ್ತೇಽನ್ಯೋಲ್ಪಮಿತಿ ಸ್ಥಿತಿಃ ॥೧೭೮॥

ಯಾರು ಯಾವ ಕಾರ್ಯಕ್ಕೆ ಮುಖ್ಯಕಾರಣನೋ ಅವನು ಆ ಕರ್ಮದ ಪೂರ್ಣಫಲಕ್ಕೆ ಭಾಗಿಯಾಗುವನು. ಇತರರು ಯೋಗ್ಯತಾನುಸಾರ ಅಲ್ಪಫಲವನ್ನೇ ಪಡೆಯುವರು. ಇದು ಶಾಸ್ತ್ರನಿರ್ಣಯ.

ವಿನಾ ವಿಷ್ಣುಂ ನಿರ್ಣಯೋಽಯಂ ಸ ಹಿ ಕರ್ಮಫಲೋಜ್ಜಿತಃ ।
ಹೇತವೋಽಪಿ ಹಿ ಪಾಪಸ್ಯ ನ ಪ್ರಾಯಃ ಫಲಭಾಗಿನಃ ॥೧೭೯॥

ದೇವಾಃ ಪುಣ್ಯಸ್ಯ ದೈತ್ಯಾಶ್ಚ ಮಾನುಷಾಸ್ತದ್ವಿಭಾಗಿನಃ ।
ಅಸಾಧಾರಣಹೇತುಶ್ಚ ಭೀಮ ಏವ ಪ್ರಕೀರ್ತಿತಃ ॥೧೮೦॥

ಯಜ್ಞಸ್ಯಾಸ್ಯ ಜರಾಸಂಧವಧಾತ್ ಕರ್ಣಜಯಾದಪಿ ।
ಜಯಾಚ್ಚ ಕೀಚಕಾದೀನಾಮನ್ಯೈರ್ಜೇತುಮಶಕ್ಯತಃ ॥೧೮೧॥

ವಿಷ್ಣುವನ್ನು ಹೊರತುಪಡಿಸಿಯೆ ಈ ನಿರ್ಣಯ. ಏಕೆಂದರೆ ಅವನು ಎಲ್ಲ ಕರ್ಮಗಳಿಗೂ ಮುಖ್ಯಕಾರಣನೇ ಆಗಿದ್ದರೂ ಪೂರ್ಣಕಾಮನಾದ್ದರಿಂದ ಕರ್ಮಫಲವನ್ನು ಉಣ್ಣುವುದಿಲ್ಲ. ದೇವತೆಗಳು ಪಾಪಕರ್ಮಕ್ಕೆ ಮುಖ್ಯಕಾರಣರಾದರೂ ಸಾಮಾನ್ಯವಾಗಿ ಪಾಪಫಲಕ್ಕೆ ಭಾಗಿಗಳಾಗುವುದಿಲ್ಲ. ಹಾಗೇ ದೈತ್ಯರು ಪುಣ್ಯಕರ್ಮ ಮಾಡಿದರು ಸಾಮಾನ್ಯವಾಗಿ ಪುಣ್ಯಫಲಕ್ಕೆ ಭಾಗಿಗಳಾಗುವುದಿಲ್ಲ. ಮನುಷ್ಯರು ಪುಣ್ಯಪಾಪಗಳೆರಡರಲ್ಲಿಯೂ ಅಂಶಮಾತ್ರಕ್ಕೆ ಭಾಗಿಗಳೆನಿಸುತ್ತಾರೆ. ಈ ಯಾಗದಲ್ಲಿ ಜರಾಸಂಧ ವಧೆಯಿಂದಲೂ ಬೇರೆಯವರಿಗೆ ಗೆಲ್ಲಲು ಅಶಕ್ಯರಾದ ಕರ್ಣಕೀಚಕಾದಿಗಳನ್ನು ಗೆದ್ದುದರಿಂದಲೂ ಭೀಮನೆ ಮುಖ್ಯ ಕಾರಣನೆನಿಸಿದ್ದಾನೆ.

ದ್ವಿತೀಯಃ ಫಲ್ಗುನಶ್ಚೈವ ತೃತೀಯಸ್ತು ಯುಧಿಷ್ಠಿರಃ
ತಸ್ಮಾದ್ ಬ್ರಹ್ಮಪದಾವಾಪ್ತೌ ವ್ಯಾಸೋ ಭೀಮಸ್ಯ ತಂ ಕ್ರತುಂ ।
ಅನನ್ಯಕೃತಮಾದಿಶ್ಯ ದಿಶಾಂ ವಿಜಯಮಾದಿಶತ್ ॥೧೮೨॥

ಈ ಯಾಗ ನಡೆಯುವಲ್ಲಿ ಎರಡನೆ ಮುಖ್ಯಕಾರಣ ಅರ್ಜುನ, ಮೂರನೆಯವನು ಧರ್ಮರಾಜ. ಅದರಿಂದ ಭೀಮನಿಗೆ ಬ್ರಹ್ಮಪದವಿ ಪ್ರಾಪ್ತಿಗಾಗಿ ವ್ಯಾಸರು ಬೇರೆ ಯಾರೂ

ಮಾಡದಿದ್ದ ಆ ಮಹಾಯಾಗವನ್ನು ನಡೆಸಲು ಭೀಮನಿಗೇ ಆದೇಶಿಸಿ ದಿಗ್ವಿಜಯಕ್ಕೆ ಅಪ್ಪಣೆ ನೀಡಿದರು.

ಅಥಾಬ್ರವೀದ್ ಧನಂಜಯೋ ಧನುರ್ಧ್ವಜೋ ರಥೋ ವರಃ।
ಮಮಾಸ್ತಿ ತದ್ದಿಶಾಂಜಯೋ ಮಮೈವ ವಾಂಛಿತಃ ಪ್ರಭೋ ॥೧೮೩॥

ಆಗ ಅರ್ಜುನ 'ಪ್ರಭು, ಉತ್ತಮವಾದ ಧನುಸ್ಸು ಧ್ವಜ ರಥವೆಲ್ಲವೂ ನನ್ನಲ್ಲಿ ಇದೆ. ಅದರಿಂದ ದಿಗ್ವಿಜಯ ಕಾರ್ಯವನ್ನು ಮುಖ್ಯವಾಗಿ ನನಗೇ ವಹಿಸಿಕೊಡಬೇಕು' ಎಂದ.

ಇತೀರಿತೋಽಖಿಲಪ್ರಭುರ್ಜಗಾದ ಸತ್ಯಮಸ್ತಿ ತೇ ।
ಸಮಸ್ತ ಸಾಧನೋನ್ನತಿರ್ಮಹಚ್ಚ ವೀರ್ಯಮಸ್ತಿ ತೇ ॥೧೮೪॥

ತಥಾಪಿ ಕೀಚಕಾದಯೋ ವೃಕೋದರಾದೃತೇ ವಶಂ ।
ನ ಯಾಂತಿ ನಾಪಿ ತೇ ವಶಂ ಪ್ರಯಾತಿ ಕರ್ಣ ಏವ ಚ ॥೧೮೫॥

ಅರ್ಜುನ ಹೀಗೆ ಹೇಳಿದಾಗ ಸರ್ವಶಕ್ತರಾದ ವ್ಯಾಸರು ಹೇಳಿದರು. 'ನಿನಗೆ ಸಕಲ ಸಾಧನ ಸಂಪತ್ತೂ ನಿಶ್ಚಯವಾಗಿ ಇದೆ. ಮಹತ್ತಾದ ಬಲವೂ ಇದೆ. ಆದರೂ ಕೀಚಕಾದಿಗಳು ಭೀಮನಿಗೆ ವಶರಾಗುವರು, ನಿನಗಲ್ಲ. ಕರ್ಣನೂ ನಿನಗೆ ವಶನಾಗುವುದಿಲ್ಲ.

ಬಲಾಧಿಕೋಽಸಿ ಕರ್ಣತಸ್ತಥಾಪಿ ನಾಮೃತಃ ಕರಂ ।
ದದಾತಿ ತೇ ಹ್ಯತಿಸ್ಪೃಧಾ ನ ವಧ್ಯ ಏಷ ತೇಽದ್ಯ ಚ ॥೧೮೬॥

ನೀನು ಕರ್ಣನಿಗಿಂತ ಬಲದಲ್ಲಿ ಹೆಚ್ಚೇ ಆದರೂ ಕರ್ಣ ಬದುಕಿರುವಷ್ಟು ಕಾಲ ನಿನ್ನಲ್ಲಿ ತೀವ್ರವಾದ ಸ್ಪರ್ಧೆ ಇರುವುದರಿಂದ ಕಪ್ಪ ಕೊಡುವುದಿಲ್ಲ. ಈಗ ನೀನು ಅವನನ್ನು ಕೊಲ್ಲುವುದೂ ಶಕ್ಯವಿಲ್ಲ.

ಸವರ್ಮಕುಂಡಲತ್ವತೋ ನ ವಧ್ಯ ಏಷ ಯತ್ ತ್ವಯಾ ।
ತತೋ ವೃಕೋದರೋ ದಿಶಂ ಪ್ರಯಾತು ತೇ ಪಿತುಃ ಪ್ರಿಯಾಂ ॥೧೮೭॥

ಕರ್ಣ ಈಗ ಕವಚಕುಂಡಲ ಯುಕ್ತನಾಗಿರುವುದರಿಂದ ನಿನಗೆ ವಧ್ಯನೆನಿಸುವುದಿಲ್ಲ. ಅದರಿಂದ ಭೀಮನೆ ಪೂರ್ವದಿಕ್ಕಿನ ವಿಜಯಕ್ಕೆ ಹೊರಡಲಿ.

ಜೀವಗ್ರಾಹಭಯಾತ್ ಕರ್ಣೋ ದದಾತಿ ಕರಮಂಜಸಾ ।
ಭೀಮಾಯ ನಾತ್ರ ಸಂದೇಹೋ ಜಿತೋಽನೇನ ಚ ಸಂಯುಗೇ॥೧೪೪॥

ಈ ಹಿಂದೆ ಯುದ್ಧದಲ್ಲಿ ಭೀಮನಿಗೆ ಸೋತಿರುವ ಕರ್ಣ ಜೀವಂತವಾಗಿ ಸೆರೆ ಸಿಕ್ಕುವ ಭಯದಿಂದ ಭೀಮನಿಗೆ ಚೆನ್ನಾಗಿ ಕಪ್ಪ ನೀಡುತ್ತಾನೆ. ಇದರಲ್ಲಿ ಸಂಶಯವಿಲ್ಲ.

ಅಜೇಯೌ ಶರ್ವವಚನಾತ್ ರಣೇ ಕೀಚಕಪೌಂಡ್ರಕೌ ।
ವಶಂ ಪ್ರಯಾತೋ ಭೀಮಸ್ಯ ತಥಾವಧ್ಯೋಽಪಿ ಚೇದಿಪಃ ॥೧೪೯॥

ರುದ್ರವರದಿಂದ ಯುದ್ಧದಲ್ಲಿ ಅಜೇಯರೆನಿಸಿದ ಕೀಚಕ ಪೌಂಡ್ರಕರೂ ಭೀಮನಿಗೆ ವಶರಾಗುವರು. ಅವಧ್ಯನಾದ ಶಿಶುಪಾಲನೂ ಅವನಿಗೆ ವಶನಾಗುವನು.

ಜೀವಗ್ರಾಹಭಯಂ ಹ್ಯೇಷಾಂ ಭೀಮಾನ್ಮಾಗಧಪಾತನಾತ್ ।
ತಸ್ಮಾತ್ ಕರಂ ಪ್ರಯಚ್ಛಂತಿ ಜಿತಾ ವಾ ಪೂರ್ವಮೇವ ವಾ ॥೧೯೦॥

ಭೀಮನಿಂದ ಜರಾಸಂಧ ಹತನಾದ್ದರಿಂದ ಇವರೆಲ್ಲರಿಗೂ ಜೀವಂತ ಸೆರೆ ಸಿಕ್ಕುವ ಭಯವಿದೆ. ಪರಾಜಿತರಾಗಿ ಅಥವಾ ಅದಕ್ಕೂ ಮೊದಲಿಗೇ ಅವರು ಕಪ್ಪ ಕೊಡುತ್ತಾರೆ.

ಪ್ರಯಾಹಿ ಚ ತ್ವಂ ಧನದಪ್ರಪಾಲಿತಾಂ
ದಿಶಂ ದ್ವೀಪಾನ್ ಸಪ್ತ ಚಾಶೇಷದಿಕ್ಷು ।
ನಾಗಾಂಶ್ಚ ದೈತ್ಯಾಂಶ್ಚ ತಥಾಧರಸ್ಥಾನ್
ವಿಜಿತ್ಯ ಶೀಘ್ರಂ ಪುನರೇಹಿ ಚಾತ್ರ ॥೧೯೧॥

ಅದರಿಂದ ಅರ್ಜುನ, ನೀನು ಭರತಖಂಡದಲ್ಲಿ ಉತ್ತರದಿಕ್ಕಿಗೆ ಹೋಗು. ಹೊರಗೆ ಎಲ್ಲ ದಿಕ್ಕುಗಳಲ್ಲಿ ಸಪ್ತದ್ವೀಪಗಳನ್ನೂ ಪಾತಾಳಗಳಲ್ಲಿರುವ ನಾಗರನ್ನೂ ದೈತ್ಯರನ್ನೂ ಗೆದ್ದು ಬೇಗನೆ ಹಿಂತಿರುಗಿ ಬಾ.

ರಥೋ ಹಿ ದಿವ್ಯೋಽಂಬರಗಸ್ತವಾಸ್ತಿ
ದಿವ್ಯಾನಿ ಚಾಸ್ತ್ರಾಣಿ ಧನುಶ್ಚ ದಿವ್ಯಂ ।

ಯೇಽನ್ಯೇ ಚ ಬಾಣಪ್ರಮುಖಾ ಅಜೇಯಾಃ
ಶರ್ವಾಶ್ರಯಾಸ್ತಾನಪಿ ಭೀಮ ಏತು ॥೧೯೨॥

ನಿನಗೆ ಅಂತರಿಕ್ಷದಲ್ಲಿ ಸಂಚರಿಸುವ ದಿವ್ಯರಥವಿದೆ. ದಿವ್ಯ ಅಸ್ತ್ರಗಳಿವೆ. ದಿವ್ಯ ಧನುಸ್ಸಿದೆ. ಇನ್ನು ಶಿವನನ್ನು ಆಶ್ರಯಿಸಿ ಅಜೇಯರಾಗಿರುವ ಬಾಣಾಸುರ ಮುಂತಾದವರನ್ನು ಕೂಡ ಭೀಮನೇ ಆಕ್ರಮಿಸಲಿ.

ತಥಾ ಸುರಾಶ್ಚಾಪಿ ಸಮಸ್ತಶೋಽಸ್ಯ
ಬಲಿಂ ಪ್ರಯಚ್ಛಂತಿ ಮದಾಜ್ಞಯೇತರೇ ।
ದಿಶಂ ಪ್ರತೀಚೀಮಥ ದಕ್ಷಿಣಾಂ ಚ
ಯಾತಾಂ ಯಮೌ ಕ್ರಮಶೋ ಹ್ಯಧ್ವರಾರ್ಥೇ ॥೧೯೩॥

ಯಶಶ್ಚ ಧರ್ಮಶ್ಚ ತಯೋರಪಿ ಸ್ಯಾ-
ದಿತಿ ಸ್ಮ ಕೃಷ್ಣೇನ ಸುತೇನ ಕಾಳ್ಯಾಃ ।
ಉಕ್ತೇ ಯಯುಸ್ತೇ ತಮಭಿಪ್ರಣಮ್ಯ
ದಿಶೋ ಯಥೋಕ್ತಾಃ ಪರಮೋರುಸದ್ಗುಣಾಃ ॥೧೯೪॥

ಇತರ ಸಮಸ್ತ ದೇವತೆಗಳೂ ನನ್ನ ಪ್ರೇರಣೆಯಿಂದ ಭೀಮನಿಗೆ ಕಪ್ಪ ಕೊಡುತ್ತಾರೆ. ನಕುಲ ಸಹದೇವರು ಕ್ರಮವಾಗಿ ಪಶ್ಚಿಮ ದಕ್ಷಿಣ ದಿಕ್ಕುಗಳಿಗೆ ಯಾಗದ ದಿಗ್ವಿಜಯಕ್ಕೆ ಹೋಗಲಿ. ಏಕೆಂದರೆ ಯಾಗ ಮಾಡಿದ ಯಶಸ್ಸೂ ಪುಣ್ಯವೂ ಅವರಿಗೂ ಲಭಿಸಲಿ ಎಂದು ವೇದವ್ಯಾಸರು ಹೇಳಿದಾಗ ಉತ್ತಮವಾದ ಮಹಾಗುಣಗಳುಳ್ಳ ಪಾಂಡವರು ಅವರನ್ನು ನಮಿಸಿ ಆಯಾ ದಿಕ್ಕುಗಳಿಗೆ ಹೊರಟರು.

ವೃಕೋದರೋಽಜಯನ್ನೃಪಾನ್ ವಿರಾಟಮಾಸಸಾದ ಹ ।
ಜಿತೇಽತ್ರ ಕೀಚಕೇ ರಣೇ ಸಮಾದದೇ ಕರಂ ತತಃ ॥೧೯೫॥

ಭೀಮಸೇನ ರಾಜರನ್ನು ಗೆಲ್ಲುತ್ತ ವಿರಾಟರಾಜನಲ್ಲಿಗೂ ಬಂದ. ಅಲ್ಲಿ ಕೀಚಕ ಯುದ್ಧದಲ್ಲಿ ಸೋತಾಗ ಭೀಮ ಅವನಿಂದ ಕಪ್ಪ ತೆಗೆದುಕೊಂಡ.

ತತಃ ಕ್ರಮಾನ್ನೃಪಾನ್ ಜಿತ್ವಾ ಚೇದೀನಾಂ ವಿಷಯಂ ಗತಃ ।
ಮಾತೃವಾಕ್ಯಾದ್ ಭಯಾಚ್ಚೈವ ಶಿಶುಪಾಲೇನ ಪೂಜಿತಃ ॥೧೯೬॥

ಬಳಿಕ ಕ್ರಮೇಣ ರಾಜರನ್ನು ಗೆದ್ದು ಭೀಮ ಚೇದಿ ದೇಶಕ್ಕೆ ಹೋದ. ಅಲ್ಲಿ ತಾಯಿಯ ಉಪದೇಶದಿಂದಲೂ ಭೀಮನ ಭಯದಿಂದಲೂ ಶಿಶುಪಾಲ ಕಪ್ಪ ನೀಡಿ ಸತ್ಕರಿಸಿದ.

ಮಾತೃಷ್ವಸುರ್ಗೃಹೇ ಚೋಷ್ಯ ದಿವಸಾನ್ ಕತಿಚಿತ್ ಸುಖಂ ।
ಕರಂ ಸುಮಹದಾದಾಯ ತತಃ ಪೂರ್ವಾಂ ದಿಶಂ ಯಯೌ ॥೧೯೭॥

ಭೀಮ ಚಿಕ್ಕಮ್ಮನ ಮನೆಯಲ್ಲಿ ಕೆಲವು ದಿನ ಸುಖವಾಗಿದ್ದು ಕಪ್ಪವನ್ನು ತೆಗೆದುಕೊಂಡು ಅಲ್ಲಿಂದ ಪೂರ್ವದಿಕ್ಕಿಗೆ ಹೊರಟ.

ಕ್ರಮೇಣ ಸರ್ವಾನ್ನಿರ್ಜಿತ್ಯ ಪೌಂಡ್ರಕಂ ಚ ಮಹಾಬಲಂ ।
ವಿರಥೀಕೃತ್ಯ ಕರ್ಣಂ ಚ ಕರಮಾದಾಯ ಸರ್ವತಃ ॥೧೯೮॥

ಹಿಮವಚ್ಛಿಖರೇ ದೇವಾನ್ ಜಿತ್ವಾ ಶಕ್ರಪುರೋಗಮಾನ್ ।
ಕ್ರೀಡಾರ್ಥಂ ಯುಧ್ಯತಸ್ತೇಭ್ಯಸ್ತುಷ್ಟೇಭ್ಯೋ ರತ್ನಸಂಚಯಮ್ ॥೧೯೯॥

ಬಾಹುಯುದ್ಧೇನ ಶೇಷಂ ಚ ಗರುಡಂ ಚ ಮಹಾಬಲಂ ।
ಕ್ರೀಡಮಾನೌ ವಿನಿರ್ಜಿತ್ಯ ಭೂಷಣಾನ್ಯಾಪ ತೋಷತಃ ।
ತಾಭ್ಯಾಂ ಚ ದೃಢಮಾಶ್ಲಿಷ್ಟಃ ಸ್ನೇಹವಿಕ್ಲಿನ್ನಯಾ ಧಿಯಾ ॥೨೦೦॥

ಭೀಮ ಪೂರ್ವದಿಕ್ಕಿನಲ್ಲಿ ಕ್ರಮದಿಂದ ಎಲ್ಲ ರಾಜರನ್ನೂ ಗೆದ್ದು ಮಹಾಬಲಿಷ್ಠನಾದ ಪೌಂಡ್ರಕ ವಾಸುದೇವನನ್ನೂ ಕರ್ಣನನ್ನೂ ವಿರಥನನ್ನಾಗಿ ಮಾಡಿ ಎಲ್ಲರಿಂದಲೂ ಕಪ್ಪ ತೆಗೆದುಕೊಂಡು ಹಿಮಾಲಯದ ಶಿಖರದಲ್ಲಿ ಇಂದ್ರಾದಿ ದೇವತೆಗಳನ್ನೂ ಗೆದ್ದು ಕ್ರೀಡೆಗಾಗಿ ಯುದ್ಧ ಮಾಡಿ ಸಂತುಷ್ಟರಾದ ಅವರಿಂದ ರತ್ನಗಳ ರಾಶಿಗಳನ್ನು ಪಡೆದ. ಮಹಾಬಲಿಷ್ಠರಾದ ಶೇಷ ಗರುಡರೂ ಬಾಹು ಯುದ್ಧದಿಂದ ಕ್ರೀಡೆ ಮಾಡಿದರು. ಆ ಕ್ರೀಡೆಯಲ್ಲಿ ಅವರನ್ನು ಗೆದ್ದು ಅವರಿಂದ ಸ್ನೇಹಾರ್ದ್ರ ಅಂತಃಕರಣದಿಂದ ಗಾಢವಾಗಿ ಆಲಿಂಗಿತನಾಗಿ ಸಂತೋಷದಿಂದ ಅವರು ನೀಡಿದ ಆಭರಣಗಳನ್ನು ಸ್ವೀಕರಿಸಿದ.

ಪೋಪ್ಲೂಯಮಾನಃ ಸ ತತೋऽಂಬುಧೌ ಬಲೀ
ಜಗಾಮ ಬಾಣಸ್ಯ ಪುರಂ ಹರಂ ಚ ।
ರಣೇऽಜಯದ್ ವಾರಣರೂಪಮಾಸ್ಥಿತಂ
ಕ್ರೀಡಂತಮೇತೇನ ಚ ತೋಷಿತೋ ಹರಃ ॥೨೦೧॥

ಬಳಿಕ ಬಲಿಷ್ಠನಾದ ಭೀಮ ಸಮುದ್ರದಲ್ಲಿ ಈಜಾಡಿ ಬಾಣದ ನಗರಕ್ಕೆ ಹೋಗಿ ಅಲ್ಲಿ ಯುದ್ಧದಲ್ಲಿ ಆನೆಯ ರೂಪವನ್ನು ತಳೆದು ಕ್ರೀಡೆಯಾಡಿದ ಶಿವನನ್ನು ಗೆದ್ದ. ಸಂತೋಷಗೊಳಿಸಿದ.

ಪೃಷ್ಟಶ್ಚ ಗಿರಿಶೇನಾಸೌ ವಿಸ್ತರಂ ದಿಗ್ಜಯಸ್ಯ ಚ ।
ಸಿಂಹವ್ಯಾಘ್ರಾದಿರೂಪಾಶ್ಚ ಆತ್ಮನಾ ವಿಜಿತಾ ಯಥಾ ।
ಗರುತ್ಮಚ್ಛೇಷಶಕ್ರಾದ್ಯಾ ದೇವಾಃ ಸರ್ವೇ ತದಬ್ರವೀತ್ ॥೨೦೨॥

ಶಿವ ಭೀಮನ ದಿಗ್ವಿಜಯ ವೃತ್ತಾಂತವನ್ನು ವಿಸ್ತಾರವಾಗಿ ಕೇಳಲು ಬಯಸಿದಾಗ ಸಿಂಹ ಹುಲಿ ಮುಂತಾದ ರೂಪದಿಂದ ಬಂದ ಗರುಡ ಶೇಷ ಇಂದ್ರಾದಿ ಸಕಲ ದೇವತೆಗಳೂ ತನ್ನಿಂದ ಹೇಗೆ ಪರಾಜಿತರಾದರೆಂಬುದನ್ನು ಅವನಿಗೆ ಬಣ್ಣಿಸಿ ಹೇಳಿದ.

ನಿಶಮ್ಯ ಶಂಕರೋಽಖಿಲಂ ಮಖಿಸ್ಯ ಚ ಪ್ರಸಾಧಕಂ ।
ಹರಿಂ ತತೋ ಬಲೇಃ ಸುತಾದ್ ದದೌ ಚ ರತ್ನಸಂಚಯಂ ॥೨೦೩॥

ಶಿವ ಎಲ್ಲವನ್ನೂ ಕೇಳಿ ಈ ಯಾಗವನ್ನು ಸ್ವತಃ ನಿಂತು ಮಾಡಿಸಿಕೊಳ್ಳುವವನು ಶ್ರೀಹರಿಯೆ ಎಂದು ತಿಳಿದು ಬಾಣಾಸುರನಿಂದ ರತ್ನ ಸಮೂಹವನ್ನು ಕೊಡಿಸಿದ.

ಸ ಬಾಣದೈತ್ಯತೋ ಮಹಚ್ಛಿವೇನ ದತ್ತಮುತ್ತಮಂ ।
ಪ್ರಗೃಹ್ಯ ರತ್ನಸಂಚಯಂ ಸ್ವಕಂ ಪುರಂ ಸಮಾಯಯೌ ॥೨೦೪॥

ಭೀಮ ಬಾಣಾಸುರನ ಮೂಲಕ ಶಿವನಿತ್ತ ಉತ್ತಮವಾದ ದೊಡ್ಡ ರತ್ನರಾಶಿಯನ್ನು ತೆಗೆದುಕೊಂಡು ತನ್ನ ಪಟ್ಟಣಕ್ಕೆ ಹಿಂತಿರುಗಿದ.

ಸ ವಿಪ್ರಯಾದವೇಶ್ವರಂ ದ್ವಿಧಾ ಸ್ಥಿತಂ ಜನಾರ್ದನಂ ।
ಪುರೋ ನಿಧಾಯ ತದ್ ವಸು ಪ್ರಭೂತಮಾನಮತ್ ಸದಾ ॥೨೦೫॥

ಒಡನೆ ಆ ಮಹಾಸಂಪತ್ತನ್ನು ಮುಂದೆ ಇಡುತ್ತ ವೇದವ್ಯಾಸ ಕೃಷ್ಣ ಎಂದು ಎರಡು ರೂಪಗಳಿಂದ ಇದ್ದ ಹರಿಯನ್ನು ನಮಿಸಿದ.

ಸೋಽಭಿವಂದ್ಯಾಗ್ರಜಂ ಚೈವ ಯಥಾವೃತ್ತಂ ನ್ಯವೇದಯತ್ ।
ಆತ್ಮನಃ ಕೃಷ್ಣಯೋಃ ಸರ್ವಂ ಧರ್ಮರಾಜಾಗ್ರತೋ ಮುದಾ ॥೨೦೬॥

ಯಥಾ ಜಿತಾಃ ಕೀಚಕಾದ್ಯಾ ಏಕಲವ್ಯಸಹಾಯವಾನ್ ।
ಯಥಾ ಜಿತಃ ಪೌಂಡ್ರಕಶ್ಚ ಕರ್ಣಾದ್ಯಾಶ್ಚ ತಥಾಪರೇ ॥೨೦೭॥

ಯಥಾ ಸಿಂಹಾದಿತನವಃ ಶೇಷಮೀಂದ್ರೇಂದ್ರಪೂರ್ವಕಾಃ ।
ಯಥಾ ಗಜತನುಃ ಶರ್ವಸ್ತಚ್ಚ ಸರ್ವಮವರ್ಣಯತ್ ॥೨೦೮॥

ಭೀಮ ಧರ್ಮರಾಜನನ್ನು ವಂದಿಸಿ ಅವನ ಸಮಕ್ಷಮದಲ್ಲಿ ವೇದವ್ಯಾಸ ಕೃಷ್ಣರಿಗೆ ತನ್ನ ಎಲ್ಲ ವೃತ್ತಾಂತವನ್ನೂ ಸಂತೋಷದಿಂದ ನಿವೇದಿಸಿದ. ಕೀಚಕ ಮುಂತಾದವರನ್ನೂ ಏಕಲವ್ಯ ಪೌಂಡ್ರಕರನ್ನೂ ಇತರ ಕರ್ಣಾದಿ ರಾಜರನ್ನೂ ಸಿಂಹಾದಿರೂಪದಿಂದ ಬಂದ ಶೇಷಗರುಡ ಇಂದ್ರಾದಿ ದೇವತೆಗಳನ್ನೂ ಆನೆಯ ರೂಪದಿಂದ ಬಂದ ಶಿವನನ್ನೂ ತಾನು ಹೇಗೆ ಗೆದ್ದೆನೆಂಬುದೆಲ್ಲವನ್ನೂ ಯಥಾವತ್ತಾಗಿ ಬಣ್ಣಿಸಿದ.

ಸಂಭಾವಿತಶ್ಚ ಕೃಷ್ಣಾಭ್ಯಾಂ ರಾಜ್ಞಾ ಚ ಸುಮಹಾಬಲಃ ।
ಆಜ್ಞಯಾ ವಾಸುದೇವಸ್ಯ ಯಜ್ಞಾಂಗಾನಿ ಸಮಾರ್ಜಯತ್ ॥೨೦೯॥

ಮಹಾಬಲಿಷ್ಠನಾದ ಭೀಮ ವ್ಯಾಸಕೃಷ್ಣರಿಂದಲೂ ಧರ್ಮರಾಜನಿಂದಲೂ ಆದರಿಸಲ್ಪಟ್ಟು ಕೃಷ್ಣನ ಆಜ್ಞೆಯಿಂದ ಯಾಗಕ್ಕೆ ಅವಶ್ಯ ಬೇಕಾದುದನ್ನೆಲ್ಲ ಸಿದ್ಧಪಡಿಸಿದ.

ಊಚೇ ತಂ ಭಗವಾನ್ ವ್ಯಾಸೋ ಜಿತಂ ಸರ್ವಂ ತ್ವಯಾರಿಹನ್ ।
ಜಯೇ ಸರ್ವಸ್ಯ ಯಜ್ಞೋಽಯಂ ಪೂರ್ಣೋ ಭವತಿ ನಾನ್ಯಥಾ ॥

ವಿರಿಂಚಃ ಸರ್ವಜಿತ್ ಪೂರ್ವಂ ದ್ವಿತೀಯಸ್ತ್ವಮಿಹಾಭವಃ ।
ಇತ್ಯುಕ್ತ್ವೈನಂ ಸಮಾಶ್ಲಿಷ್ಯ ಯಜ್ಞಾಂಗಾನಿ ಸಮಾದಿಶತ್ ॥೨೧೧॥

ಭಗವಾನ್ ವೇದವ್ಯಾಸರು ಭೀಮನನ್ನು ಆಲಿಂಗಿಸಿ ಹೇಳಿದರು 'ಶತ್ರುನಾಶಕನೆ, ನೀನು ಎಲ್ಲವನ್ನೂ ಗೆದ್ದಿರುವೆ. ಎಲ್ಲರನ್ನು ಗೆದ್ದಾಗಲೆ ಈ ಯಾಗ ಪೂರ್ತಿ ಕೈಗೂಡುವುದು. ಇಲ್ಲದಿದ್ದರೆ ಇಲ್ಲ. ಹಿಂದೆ ಬ್ರಹ್ಮ ಎಲ್ಲರನ್ನೂ ಹೀಗೇ ಗೆದ್ದಿದ್ದ. ಅನಂತರ ಈ ರೀತಿ ಗೆದ್ದವನು ನೀನು ಎರಡನೆಯವನಾದೆ'. ಹೀಗೆ ಹೇಳಿ ಯಾಗ ಸಾಧನಗಳನ್ನು ಸಿದ್ಧಗೊಳಿಸಲು ಆದೇಶಿಸಿದರು.

★ ★ ★ ★

ಇಪ್ಪತ್ತೈದನೆಯ ಅಧ್ಯಾಯ

(ದಿಗ್ವಿಜಯದ ವ್ಯವಸ್ಥೆ ಮತ್ತು ಅರ್ಜುನನ ಉತ್ತರದಿಗ್ವಿಜಯ.)

ವೈಶಂಪಾಯನಃ

ಋಷೇಸ್ತದ್ವಚನಂ ಚಿಂತ್ಯ ನಿಶಶ್ವಾಸ ಯುಧಿಷ್ಠಿರಃ ।
ಧರ್ಮಂ ಧರ್ಮಭೃತಾಂ ಶ್ರೇಷ್ಠಃ ಕರ್ತುಮಿಚ್ಛನ್ ಪರಂತಪಃ ॥೧॥

ಪರಂತಪನೂ ಧರ್ಮಿಷ್ಠರಲ್ಲಿ ಶ್ರೇಷ್ಠನೂ ಆದ ಯುಧಿಷ್ಠಿರನು ನಾರದರ ಆ ಮಾತುಗಳನ್ನು ಸ್ಮರಿಸಿ ಧರ್ಮವನ್ನು ಮಾಡಲು ಬಯಸಿ ನಿಟ್ಟುಸಿರನ್ನು ಬಿಟ್ಟನು.

ತಸ್ಯೇಂಗಿತಜ್ಞೋ ಬೀಭತ್ಸುಃ ಸರ್ವಶಸ್ತ್ರಭೃತಾಂ ವರಃ ।
ಸಂವಿವರ್ತಯಿಷುಃ ಕಾಮಂ ಪಾವಕಾತ್ ಪಾಕಶಾಸನಿಃ ॥೨॥

ಪಾರ್ಥಃ ಪ್ರಾಪ್ಯ ಧನುಃಶ್ರೇಷ್ಠಮಕ್ಷಯ್ಯೌ ಚ ಮಹೇಷುಧೀ ।
ರಥಂ ಧ್ವಜಂ ಸಭಾಂ ಚೈವ ಯುಧಿಷ್ಠಿರಮಭಾಷತ ॥೩॥

ಸರ್ವ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಇಂದ್ರನ ಪುತ್ರನಾದ ಅರ್ಜುನನು ಅವನ ಸಂಕಲ್ಪವನ್ನು ತಿಳಿದವನಾಗಿ ಅವನ ಅಗ್ನಿಮುಖದಲ್ಲಿ ರಾಜಸೂಯಯಾಗವನ್ನು ಮಾಡುವ ಸಂಕಲ್ಪವನ್ನು ನೆರವೇರಿಸುವವನಾಗಿ ಗಾಂಡೀವ ಧನುಸ್ಸನ್ನೂ ಅಕ್ಷಯ ಬತ್ತಳಿಕೆಗಳನ್ನೂ ರಥ ಧ್ವಜ ಮತ್ತು ಸಭೆಗಳನ್ನೂ ಅಗ್ನಿಯಿಂದ ಸಂಪಾದಿಸಿದವನಾಗಿ ಧರ್ಮರಾಜನನ್ನು ಕುರಿತು ಮಾತನಾಡಿದನು.

ಧನುರಸ್ತ್ರಂ ಶರಾ ವೀರ್ಯಂ ಪಕ್ಷೋ ಭೂಮಿರ್ಯಶೋ ಬಲಮ್।
ಪ್ರಾಪ್ತಮೇತನ್ಮಯಾ ರಾಜನ್ ದುಷ್ಪ್ರಾಪಂ ಯದಭೀಪ್ಸಿತಮ್ ॥೪॥

ರಾಜನೇ! ಇನ್ನೊಬ್ಬರು ಸಂಪಾದಿಸಲು ಅಸಾಧ್ಯವಾದ ಧನುಸ್ಸನ್ನೂ ಅಸ್ತ್ರಗಳನ್ನೂ ಪರಾಕ್ರಮವನ್ನೂ ಪಕ್ಷವನ್ನೂ ಭೂಮಿಯನ್ನೂ ಮತ್ತು ಕೀರ್ತಿಯನ್ನೂ ನಾನು ಸಂಪಾದಿಸಿದ್ದೇನೆ.

ತಸ್ಯ ಕೃತ್ಯಮಹಂ ಮನ್ಯೇ ಕೋಶಸ್ಯಾದ್ಯ ವಿವರ್ಧನಮ್ ।
ಕರಮಾಹಾರಯಿಷ್ಯಾಮಿ ರಾಜಭ್ಯೋ ನೃಪಸತ್ತಮ ॥೫॥

ಇವುಗಳ ಪ್ರಯೋಜನವು ಈದಿನ ನಮ್ಮ ಕೋಶವನ್ನು ಅಭಿವೃದ್ಧಿಗೊಳಿಸುವುದೆಂದು ತಿಳಿದಿದ್ದೇನೆ. ರಾಜಶ್ರೇಷ್ಠನೇ! ಉಳಿದ ರಾಜರು ನಿನಗೆ ಕಪ್ಪವನ್ನು ಕೊಡುವಂತೆ ಮಾಡುವೆನು.

ಏತಚ್ಛ್ರುತ್ವಾ ಕುರುಶ್ರೇಷ್ಠೋ ಧರ್ಮರಾಜಃ ಸಹಾನುಜಃ ।
ಪ್ರಹೃಷ್ಟೋ ಮಂತ್ರಿಭಿಶ್ಚೈವ ವ್ಯಾಸಧೌಮ್ಯಾದಿಭಿಃ ಸಹ ॥೬॥

ಇದನ್ನು ಕೇಳಿದ ತಮ್ಮಂದಿರಿಂದೊಡಗೂಡಿದ ಕುರುಶ್ರೇಷ್ಠನಾದ ಧರ್ಮರಾಜನು ವ್ಯಾಸ ಧೌಮ್ಯಾದಿಗಳ ಮತ್ತು ಮಂತ್ರಿಗಳ ಸನ್ನಿಧಿಯಲ್ಲಿ ಸಂತೋಷಗೊಂಡನು.

ತತೋ ವ್ಯಾಸೋ ಮಹಾಬುದ್ಧಿರುವಾಚೇದಂ ವಚೋऽರ್ಜುನಮ್।
ಸಾಧು ಸಾಧ್ವಿತಿ ಕೌಂತೇಯ ದಿಷ್ಟ್ಯಾ ತೇ ಬುದ್ಧಿರೀದೃಶೀ ॥೭॥

ಆಗ ಮಹಾಮೇಧಾವಿಗಳಾದ ವ್ಯಾಸರು ಅರ್ಜುನನನ್ನು ಕುರಿತು ಕೌಂತೇಯನೇ ಒಳ್ಳೆಯ ಮಾತನ್ನಾಡಿದೆ. ದೇವರ ದಯೆಯಿಂದ ನಿನಗೆ ಇಂತಹ ಒಳ್ಳೆಯ ಬುದ್ಧಿಯು ಉಂಟಾಗಿದೆ ಎಂಬ ಮಾತನ್ನು ಆಡಿದರು.

ಪೃಥಿವೀಮಖಿಲಾಂ ಜೇತುಮ್ ಏಕೋऽಪ್ಯಭಿಮತೋ ಭವಾನ್।
ಧನ್ಯಃ ಪಾಂಡುರ್ಮಹೀಪಾಲೋ ಯಸ್ಯ ಪುತ್ರಸ್ತ್ವಮೀದೃಶಃ ॥೮॥

ನೀನೊಬ್ಬನೇ ಸಮಗ್ರವಾದ ಭೂಮಿಯನ್ನು ಜಯಿಸಲೂ ಸಮರ್ಥನಾಗಿದ್ದೀಯೆ ನಿನ್ನಂತಹ ಪುತ್ರನನ್ನು ಪಡೆದ ಪಾಂಡುರಾಜನು ಧನ್ಯನಾದವನು.

ಸರ್ವಂ ಪ್ರಾಪ್ಸ್ಯತಿ ರಾಜೇಂದ್ರೋ ಧರ್ಮಪುತ್ರೋ ಯುಧಿಷ್ಠಿರಃ ।
ತ್ವದ್ವೀರ್ಯೇಣ ಸ ಧರ್ಮಾತ್ಮಾ ಸಾರ್ವಭೌಮತ್ವಮೇಷ್ಯತಿ ॥೯॥

ಧರ್ಮಪುತ್ರನಾದ ಧರ್ಮಾತ್ಮನಾದ ರಾಜೇಂದ್ರನಾದ ಯುಧಿಷ್ಠಿರನು ನಿನ್ನ ಪರಾಕ್ರಮದಿಂದ ಎಲ್ಲವನ್ನುಹೊಂದಿ ಸಾರ್ವಭೌಮನಾಗುತ್ತಾನೆ.

ತ್ವದ್ಬಾಹುಬಲಮಾಶ್ರಿತ್ಯ ರಾಜಸೂಯಮವಾಪ್ಸ್ಯತಿ ।
ಸುನಯಾದ್ ವಾಸುದೇವಸ್ಯ ಭೀಮಾರ್ಜುನಬಲೇನ ಚ ।
ಯಮಯೋಶ್ಚೈವ ವೀರ್ಯೇಣ ಸರ್ವಂ ಪ್ರಾಪ್ಸ್ಯತಿ ಧರ್ಮರಾಟ್ ॥

ನಿನ್ನ ಬಾಹುಬಲವನ್ನು ಆಶ್ರಯಿಸಿ ರಾಜಸೂಯಯಾಗವನ್ನು ನೆರವೇರಿಸುವನು. ವಾಸುದೇವನ ಸುನೀತಿಯಿಂದಲೂ ಭೀಮಾರ್ಜುನರ ಬಲದಿಂದಲೂ ನಕುಲಸಹದೇವರ ಪರಾಕ್ರಮದಿಂದಲೂ ಧರ್ಮರಾಜನು ಎಲ್ಲವನ್ನೂ ಸಂಪಾದಿಸುತ್ತಾನೆ.

ತಸ್ಮಾದ್ ದಿಶಂ ದೇವಗುಪ್ತಾಮುದೀಚೀಂ ಗಚ್ಛ ಫಲ್ಗುನ ।
ಶಕ್ತೋ ಭವಾನ್ ಸುರಾನ್ ಜಿತ್ವಾ ರತ್ನಾನ್ಯಾಹರ್ತುಮೋಜಸಾ ॥೧೧॥

ಆದ್ದರಿಂದ ಅರ್ಜುನನೇ! ನೀನು ದೇವರಕ್ಷಿತವಾದ ಉತ್ತರದಿಕ್ಕಿಗೆ ಪ್ರಯಾಣಮಾಡು. ನೀನು ನಿನ್ನ ಪರಾಕ್ರಮದಿಂದ ದೇವತೆಗಳನ್ನೂ ಗೆದ್ದು ರತ್ನಗಳನ್ನು ತರಲು ಸಮರ್ಥನಾಗಿದ್ದೀಯೆ.

ಪ್ರಾಚೀಂ ಭೀಮೋ ಬಲಶ್ಲಾಘ್ಯಃ ಪ್ರಯಾತು ಭರತರ್ಷಭಃ ।
ಯಾಮ್ಯಾಂ ತತ್ರ ದಿಶಂ ಯಾತು ಸಹದೇವೋ ಮಹಾರಥಃ ॥೧೨॥

ತನ್ನ ಬಲದಿಂದ ಪ್ರಸಿದ್ಧನಾದ ಭರತರ್ಷಭನಾದ ಭೀಮನು ಪೂರ್ವದಿಕ್ಕಿಗೆ ಹೋಗಲಿ. ಮಹಾರಥನಾದ ಸಹದೇವನು ದಕ್ಷಿಣದಿಕ್ಕನ್ನು ಕುರಿತು ಪ್ರಯಾಣಮಾಡಲಿ.

ಪ್ರತೀಚೀಂ ನಕುಲೋ ಗಂತಾ ವರುಣೇನಾಭಿಪಾಲಿತಾಮ್ ।
ಏಷಾ ಮೇ ನೈಷ್ಠಿಕೀ ಬುದ್ಧಿಃ ಕ್ರಿಯತಾಂ ಭರತರ್ಷಭಾಃ ॥೧೩॥

ನಕುಲನು ವರುಣಪಾಲಿತವಾದ ಪಶ್ಚಿಮದಿಕ್ಕಿಗೆ ಪ್ರಯಾಣಮಾಡಲಿ. ಇದು ನನ್ನ ನಿಶ್ಚಿತವಾದ ಬುದ್ಧಿ. ಭರತ ಶ್ರೇಷ್ಠರೇ ಹೀಗೆ ಮಾಡಿ.

ಶ್ರುತ್ವಾ ವ್ಯಾಸವಚೋ ಹೃಷ್ಟಾಸ್ತಮೂಚುಃ ಪಾಂಡುನಂದನಾಃ ।
ಏವಮಸ್ತು ಮುನಿಶ್ರೇಷ್ಠ ಯಥಾऽऽಜ್ಞಾಪಯಸಿ ಪ್ರಭೋ ॥೧೪॥

ವ್ಯಾಸದೇವರ ಈ ಮಾತುಗಳನ್ನು ಕೇಳಿ ಹರ್ಷಗೊಂಡ ಪಾಂಡುನಂದನರು ಮುನಿಶ್ರೇಷ್ಠರೇ ಹಾಗೆಯೇ ಆಗಲಿ. ಪ್ರಭುಗಳೇ! ತಮ್ಮ ಆಜ್ಞೆಯಂತೆ ನಡೆಯುತ್ತೇವೆ ಎಂದು ಹೇಳಿದರು.

ವೈಶಂಪಾಯನಃ

ತೇऽಪ್ಯನುಜ್ಞಾಪ್ಯ ರಾಜಾನಂ ಸೈನ್ಯೇನ ಮಹತಾ ವೃತಾಃ ।
ವಿಜಯಾಯ ಪ್ರಯಾತಾಸ್ತು ದಿಶಃ ಸರ್ವಾ ನರೋತ್ತಮಾಃ ।
ತಿಥಾವಹನಿ ನಕ್ಷತ್ರೇ ಮುಹೂರ್ತೇ ಚ ತಥಾ ಶಿವೇ ॥೧೫॥

ನರಶ್ರೇಷ್ಠರಾದ ಅವರೆಲ್ಲರೂ ಧರ್ಮರಾಜನ ಅನುಮತಿಯನ್ನು ಪಡೆದು ದೊಡ್ಡ ಸೈನ್ಯವನ್ನು ಹೊಂದಿದವರಾಗಿ ಶುಭ ನಕ್ಷತ್ರ ಮತ್ತು ತಿಥಿ ಮತ್ತು ಮಂಗಳವಾದ ಮುಹೂರ್ತದಲ್ಲಿ ವಿಜಯವನ್ನು ಉದ್ದೇಶಿಸಿ ಬೇರೆ ಬೇರೆ ದಿಕ್ಕುಗಳಿಗೆ ಹೊರಟರು.

ಪ್ರಹೃಷ್ಟೋ ಮುದಿತಶ್ಚಾಪಿ ಧರ್ಮರಾಜೋ ಯುಧಿಷ್ಠಿರಃ ।
ಸ್ನಿಗ್ಧಗಂಭೀರನಾದಿನ್ಯಾ ತಂ ಗಿರಾ ಪ್ರತ್ಯಭಾಷತ ॥೧೬॥

ಧರ್ಮರಾಜನಾದ ಯುಧಿಷ್ಠಿರನು ಹರ್ಷವನ್ನೂ ಮೋದವನ್ನೂ ಹೊಂದಿದವನಾಗಿ ಮೇಘ ಗಂಭೀರವಾದ ತನ್ನ ವಾಣಿಯಿಂದ ಅರ್ಜುನನನ್ನು ಕುರಿತು ಮಾನಾಡಿದನು.

ಸ್ವಸ್ತಿ ವಾಚ್ಯಾರ್ಹತೋ ವಿಪ್ರಾನ್ ಪ್ರಯಾಹಿ ಭರತರ್ಷಭ ।
ದುರ್ಹೃದಾಮಪ್ರಹರ್ಷಾಯ ಸುಹೃದಾಂ ನಂದನಾಯ ಚ ।
ವಿಜಯಸ್ತೇ ಧ್ರುವಃ ಪಾರ್ಥ ಪ್ರಿಯಂ ಕಾಮಮವಾಪ್ಸ್ಯಸಿ ॥೧೭॥

ಭರತರ್ಷಭನೇ! ಬ್ರಾಹ್ಮಣರಿಂದ ಮಂಗಳ ಆಶೀರ್ವಾದವನ್ನು ಪಡೆದು ಪ್ರಯಾಣ ಮಾಡು. ನೀನು ಶತ್ರುಗಳ ದುಃಖಕ್ಕೂ ಹಿತೈಷಿಗಳ ಸಂತೋಷಕ್ಕೂ ಕಾರಣನಾಗು. ಅರ್ಜುನನೇ ನಿನಗೆ ನಿಶ್ಚಿತವಾಗಿಯೂ ವಿಜಯ ಉಂಟಾಗುತ್ತದೆ. ನಿನ್ನ ಎಲ್ಲಾ ಪ್ರಿಯಕಾಮಗಳನ್ನೂ ಹೊಂದುವಿ.

ಇತ್ಯುಕ್ತಃ ಪ್ರಯಯೌ ಪಾರ್ಥಃ ಸೈನ್ಯೇನ ಮಹತಾ ವೃತಃ ।
ಅಗ್ನಿದತ್ತೇನ ದಿವ್ಯೇನ ರಥೇನಾದ್ಭುತಕರ್ಮಣಾ ॥೧೮॥

ಹೀಗೆ ಹೇಳಲ್ಪಟ್ಟ ಅರ್ಜುನನು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಅಗ್ನಿಯು ಕೊಟ್ಟ ಅದ್ಭುತಸಾಮರ್ಥ್ಯವುಳ್ಳ ರಥದಲ್ಲಿ ಪ್ರಯಾಣಮಾಡಿದನು.

ತಥೈವ ಭೀಮಸೇನೋಽಪಿ ಯಮೌ ಚ ಪುರುಷರ್ಷಭೌ ।
ಸಸೈನ್ಯಾಃ ಪ್ರಯಯುಃ ಸರ್ವೇ ಧರ್ಮರಾಜಾಭಿಪೂಜಿತಾಃ ॥೧೯॥

ಹಾಗೆಯೇ ಭೀಮಸೇನನೂ ಪುರುಷಶ್ರೇಷ್ಠರಾದ ನಕುಲಸಹದೇವರೂ ಧರ್ಮರಾಜನಿಂದ ಅಭಿನಂದಿಸಲ್ಪಟ್ಟು ಸೈನ್ಯಗಳನ್ನು ತೆಗೆದುಕೊಂಡು ಹೊರಟರು.

ದಿಶಂ ಧನಪತೇರಿಷ್ಟಾಂ ವ್ಯಜಯತ್ ಪಾಕಶಾಸನಿಃ ।
ಭೀಮಸೇನಸ್ತಥಾ ಪ್ರಾಚೀಂ ಸಹದೇವಶ್ಚ ದಕ್ಷಿಣಾಮ್ ॥೨೦॥

ಅರ್ಜುನನು ಕುಬೇರನಿಗೆ ಇಷ್ಟವಾದ ಉತ್ತರದಿಕ್ಕನ್ನು ಜಯಿಸಿದನು. ಹಾಗೆಯೇ ಭೀಮಸೇನನು ಪೂರ್ವದಿಕ್ಕನ್ನೂ ಮತ್ತು ಸಹದೇವನು ದಕ್ಷಿಣದಿಕ್ಕನ್ನೂ ಜಯಿಸಿದರು.

ಪ್ರತೀಚೀಂ ನಕುಲೋ ರಾಜನ್ ದಿಶಂ ವ್ಯಜಯದಸ್ತ್ರವಿತ್ ।
ಖಾಂಡವಪ್ರಸ್ಥಮಧ್ಯಾಸ್ತೇ ಧರ್ಮರಾಜೋ ಯುಧಿಷ್ಠಿರಃ ॥೨೧॥

ರಾಜನೇ! ಅಸ್ತ್ರಜ್ಞನಾದ ನಕುಲನು ಪಶ್ಚಿಮದಿಕ್ಕನ್ನು ಜಯಿಸಿದನು. ಧರ್ಮರಾಜನಾದ ಯುಧಿಷ್ಠಿರನು ಆಗ ಇಂದ್ರಪ್ರಸ್ಥದಲ್ಲಿ ವಾಸಿಸುತ್ತಿದ್ದನು.

ಜನಮೇಜಯಃ

ದಿಶಾಮಪಿ ಜಯಂ ಬ್ರಹ್ಮನ್ ವಿಸ್ತರೇಣ ವದಸ್ವ ಮೇ ।
ನಹಿ ತೃಪ್ಯಾಮಿ ಭಗವನ್ ಪೂರ್ವೇಷಾಂ ಚರಿತಂ ಮಹತ್ ॥೨೨॥

ಪೂಜ್ಯನೇ! ಈ ದಿಗ್ವಿಜಯವನ್ನು ನನಗೆ ವಿಸ್ತಾರವಾಗಿ ಹೇಳು. ಬ್ರಾಹ್ಮಣೋತ್ತಮನೇ! ನನ್ನ ಪೂರ್ವಜರ ಮಹಾಚರಿತ್ರೆಯನ್ನು ಎಷ್ಟು ಕೇಳಿದರೂ ತೃಪ್ತಿಯಾಗುವುದಿಲ್ಲ.

ವೈಶಂಪಾಯನಃ

ಧನಂಜಯಸ್ಯ ವಕ್ಷ್ಯಾಮಿ ವಿಜಯಂ ಪೂರ್ವಮೇವ ತೇ ।
ಯುಗಪತ್ ಕುರುವೀರೈಸ್ತು ವಿಜಿತೇಯಂ ವಸುಂಧರಾ ॥೨೩॥

ಧನಂಜಯನ ದಿಗ್ವಿಜಯವನ್ನು ಮೊದಲು ಹೇಳುವೆನು. ಈ ಕುರುಶ್ರೇಷ್ಠರಿಂದ ಸಮಗ್ರವಾದ ಭೂಮಿಯು ಸಮಾನಕಾಲದಲ್ಲಿ ಜಿತವಾಯಿತು.

ಅವಾಪ್ಯ ರಾಜಾ ರಾಜ್ಯಾರ್ಧಂ ಕುಂತೀಪುತ್ರೋ ಯುಧಿಷ್ಠಿರಃ ।
ಮಹತ್ತ್ವೇ ರಾಜಶಬ್ದಸ್ಯ ಮನಶ್ಚಕ್ರೇ ಮಹಾಮನಾಃ ॥೨೪॥

ಕುಂತಿಪುತ್ರನಾದ ಮಹಾಮನಸ್ಸುಳ್ಳ ಯುಧಿಷ್ಠಿರನು ಅರ್ಧರಾಜ್ಯವನ್ನು ಪಡೆದು ಮಹಾರಾಜನಾಗಲು (ಸಾರ್ವಭೌಮನೆನೆಸಿಕೊಳ್ಳಲು) ನಿರ್ಧರಿಸಿದನು.

ತದಾ ಕ್ಷಾತ್ರಂ ವಿದಿತ್ವಾಽಸ್ಯ ಪೃಥಿವೀವಿಜಯಂ ಪ್ರತಿ ।
ಅಮರ್ಷಾತ್ ಪಾರ್ಥಿವೇಂದ್ರಾಸ್ತೇ ತಂ ಸಮೀಯುರ್ಯುಯುತ್ಸವಃ ॥೨೫॥

ಆಗ ಪೃಥಿವೀ ವಿಜಯವನ್ನು ಕುರಿತು ಅರ್ಜುನನ ಸಂಕಲ್ಪವನ್ನು ತಿಳಿದ ರಾಜಶ್ರೇಷ್ಠರು ಸಿಟ್ಟಿನಿಂದ ಅವನ ಜೊತೆಯಲ್ಲಿ ಯುದ್ಧಕ್ಕೆ ಬಂದರು.

ತತ್ ಸಮೇತ್ಯ ಭುವಃ ಕ್ಷತ್ರಂ ರಥನಾಗಾಶ್ವಪತ್ತಿಮತ್ ।
ಅಭ್ಯಯಾತ್ ಪಾಂಡವಂ ಜಿಷ್ಣುಂ ಮೋಘೀಕರ್ತುಂ ಜನಾಧಿಪ ॥೨೬॥

ಜನಾಧಿಪನೇ! ಆಗ ಭೂಮಿಯ ಮೇಲಿದ್ದ ಕ್ಷತ್ರಿಯರು ತಮ್ಮ ರಥ ಗಜ ಪದಾತಿಗಳಿಂದ ಕೂಡಿದ ಸೈನ್ಯವನ್ನು ತೆಗೆದುಕೊಂಡು ಪಾಂಡುಪುತ್ರನಾದ ಅರ್ಜುನನಮೇಲೆ ಎರಗಿ ಅವರ ಸಂಕಲ್ಪವನ್ನು ವ್ಯರ್ಥಗೊಳಿಸುವ ಪ್ರಯತ್ನವನ್ನು ಮಾಡಿದರು.

ತತ್ ಪಾರ್ಥಃ ಪಾರ್ಥಿವಂ ಕ್ಷತ್ರಂ ಯುಯುತ್ಸುಃ ಪರಮಾಹವೇ ।
ಪ್ರತ್ಯುದ್ಯಯೌ ಮಹಾಬಾಹುಃ ತರಸಾ ಪಾಕಶಾಸನಿಃ ॥೨೭॥

ಪಾಕಶಾಸನಿಯೂ ಮಹಾಬಾಹುವೂದ ಅರ್ಜುನನು ಭೂಮಿಯ ಮೇಲೆ ಇದ್ದ ಆ ಕ್ಷತ್ರಿಯರ ಸಮೂಹದ ಜೊತೆಯಲ್ಲಿ ಯುದ್ಧವನ್ನುಮಾಡಲು ಬಯಸಿ ಶೀಘ್ರವಾಗಿ ಅವರನ್ನು ಎದುರಿಸಿದನು.

ತದ್ ಭಗ್ನಂ ಪಾರ್ಥಿವಂ ಕ್ಷತ್ರಂ ಪಾರ್ಥೇನಾಕ್ಲಿಷ್ಟಕರ್ಮಣಾ ।
ವಾಯುನೇವ ಘನಾನೀಕಂ ಮೋಘೀಭೂತಂ ಯಯೌ ದಿಶಃ ॥೨೮॥

ಅನಾಯಾಸವಾಗಿ ಯುದ್ಧಮಾಡುವ ಅರ್ಜುನನಿಂದ ಆ ಕ್ಷತ್ರಿಯಸಮೂಹವು ಭಗ್ನವಾಗಿ ತಮ್ಮ ಪ್ರಯತ್ನವನ್ನು ವ್ಯರ್ಥಮಾಡಿಕೊಂಡು ವಾಯುವೇಗಕ್ಕೆ ಸಿಕ್ಕಿದ ಮೇಘಸಮೂಹದಂತೆ ಎಲ್ಲಾ ದಿಕ್ಕುಗಳಲ್ಲಿಯೂ ಚದುರಿಹೊಯಿತು.

ತಜ್ಜಿತ್ವಾ ಪಾರ್ಥಿವಂ ಕ್ಷತ್ರಂ ಸಮರೇ ಪರವೀರಹಾ ।
ಯಯೌ ತದಾ ವಶೀಕರ್ತುಮುದೀಚೀಂ ಪಾಂಡುನಂದನಃ ॥೨೯॥

ಪರವೀರಮಾರಕನಾದ ಪಾಂಡುನಂದನನಾದ ಅರ್ಜುನನು ಹೀಗೆ ಆ ರಾಜರುಗಳನ್ನು ಯುದ್ಧದಲ್ಲಿ ಗೆದ್ದು ಅನಂತರ ಉತ್ತರ ದಿಕ್ಕನ್ನು ವಶಪಡಿಸಿಕೊಳ್ಳಲು ಪ್ರಯಾಣಮಾಡಿದನು.

ಪೂರ್ವಂ ಕುಣಿಂದವಿಷಯೇ ವಶೇ ಚಕ್ರೇ ಮಹೀಪತಿಮ್ ।
ಧನಂಜಯೋ ಮಹಾಬಾಹುರ್ನಾತಿತೀವ್ರೇಣ ಕರ್ಮಣಾ ।
ತೇನೈವ ಸಹಿತಃ ಪ್ರಾಯಾಜ್ಜಿಷ್ಣುಃ ಸಾಲ್ವಪುರಂ ಪ್ರತಿ ॥೩೦॥

ಮೊದಲು ಕುಣಿಂದರಾಜ್ಯದಲ್ಲಿ ಮಹಾಬಾಹುವಾದ ಧನಂಜಯನು ಸುಲಭವಾಗಿ ಆ ರಾಜನನ್ನು ವಶಪಡಿಸಿಕೊಂಡು ಅವನಿಂದ ಸಹಿತನಾಗಿ ಸಾಲ್ವಪಟ್ಟಣಕ್ಕೆ ಪ್ರಯಾಣಮಾಡಿದನು.

ಸ ಸಾಲ್ವಪುರಮಾಸಾದ್ಯ ಸಾಲ್ವರಾಜಂ ಧನಂಜಯಃ ।
ವಿಕ್ರಮೇಣೋಗ್ರಧನ್ವಾನಂ ವಶೇ ಚಕ್ರೇ ಮಹಾಮನಾಃ ।
ತಂ ಪಾರ್ಥಃ ಸಹಸಾ ಜಿತ್ವಾ ದ್ಯುಮತ್ಸೇನಂ ಧನೇಶ್ವರಮ್ ॥೩೧॥

ಸಾಲ್ವಪಟ್ಟಣವನ್ನು ತಲುಪಿದ ಮಹಾಮನಸ್ಸುಳ್ಳ ಧನಂಜಯನು ಉಗ್ರಧನುಸ್ಸುಳ್ಳ ಸಾಲ್ವರಾಜನನ್ನು ತನ್ನ ಪರಾಕ್ರಮದಿಂದ ಸೋಲಿಸಿ ವಶಪಡಿಸಿಕೊಂಡನು.

ಕೃತ್ವಾನುಸೈನಿಕಂ ಪ್ರಾಯಾತ್ ಕಟದೇಶಮರಿಂದಮಃ ॥೩೨॥

ಪಾರ್ಥನ ಸಾಲ್ವರಾಜನಾದ ಧನಪತಿಯಾದ ದ್ಯುಮತ್ಸೇನನನ್ನು ತನ್ನ ಬಲದಿಂದ ಸೋಲಿಸಿ ಅವನು ತನ್ನ ಸೈನ್ಯವನ್ನು ಹಿಂಬಾಲಿಸುವಂತೆಮಾಡಿ ಅನಂತರ ಕಟದೇಶವನ್ನು ಕುರಿತು ಪ್ರಯಾಣಮಾಡಿದನು.

ತತ್ರಾಪರಾಜಿತಂ ಜಿಷ್ಣುಃ ಸುನಾಭಂ ವಸುಧಾಧಿಪಮ್ ।
ವಿಕ್ರಮೇಣ ವಶೇ ಕೃತ್ವಾ ಕೃತವಾನನುಸೈನಿಕಮ್ ॥೩೩॥

ಅರ್ಜುನನು ಅಪರಾಜಿತನಾಗಿದ್ದಂತಹ ಸುನಾಭನೆಂಬ ರಾಜನನ್ನು ತನ್ನ ಪರಾಕ್ರಮದಿಂದ ವಶಪಡಿಸಿಕೊಂಡು ಅವನು ಸೈನ್ಯವು ತನ್ನ ಸೈನ್ಯವನ್ನು ಹಿಂಬಾಲಿಸುವಂತೆ ಮಾಡಿದನು.

ಸ ತೇನ ಸಹಿತೋ ರಾಜನ್ ಸವ್ಯಸಾಚೀ ಪರಂತಪಃ ।
ಅನಂತಕಾಲಕುಟಿಕಾನ್ ಕುಣಿಂದಾಂಶ್ಚ ವಿಜಿತ್ಯ ಸಃ ।
ಸುಮಂಡಲಂ ಪಾಪಜಿತಂ ಕೃತವಾನನುಸೈನಿಕಮ್ ॥೩೪॥

ಅವನ ಜೊತೆಯಲ್ಲಿ ಅಲ್ಲಿಂದ ಹೊರಟ ಪರಂತಪನಾದ ಸವ್ಯಸಾಚಿಯಾದ ಅರ್ಜುನನು ಅನಂತ ಕಾಲಕುಟಿಕ ಮೊದಲಾದ ಕುಣಿಂದದೇಶದ ಎಲ್ಲಾ ಭಾಗಗಳನ್ನೂ ಗೆದ್ದು ಅಲ್ಲಿಯ ರಾಜರಾದ ಸುಮಂಡಲ ಮತ್ತು ಪಾಪಜಿತನನ್ನು ತನ್ನ ಸೈನ್ಯವನ್ನು ಹಿಂಬಾಲಿಸುವಂತೆ ಮಾಡಿದನು.

ವಿಜಿತ್ಯ ಶಾಕಲದ್ವೀಪಂ ಪ್ರತಿವಿಂಧ್ಯಂ ಚ ಪಾರ್ಥಿವಮ್ ।
ಶಾಕಲದ್ವೀಪವಾಸಾಂಶ್ಚ ಸಪ್ತದ್ವೀಪೇ ಚ ಯೇ ನೃಪಾಃ ।
ತಾನ್ ಸರ್ವಾನಜಯತ್ ಪಾರ್ಥೋ ಧರ್ಮರಾಜಪ್ರಿಯೇಪ್ಸಯಾ ॥

ಅರ್ಜುನನು ಶಾಕಲದ್ವೀಪವನ್ನು ಗೆದ್ದು ಅಲ್ಲಿಯ ರಾಜನಾದ ಪ್ರತಿವಿಂಧ್ಯನನ್ನು ಗೆದ್ದು ಧರ್ಮರಾಜನಿಗೆ ಪ್ರಿಯವನ್ನು ಉಂಟುಮಾಡುವ ಅಭಿಪ್ರಾಯದಿಂದ ಶಾಕಲದ್ವೀಪವಾಸಿಗಳೆಲ್ಲವರನ್ನೂ ಮತ್ತು ದ್ವೀಪದಲ್ಲದ್ದ ಎಲ್ಲ ರಾಜರನ್ನೂ ಗೆದ್ದನು.

ಸ ತಾನಾಜೌ ಮಹೇಷ್ವಾಸೋ ನಿರ್ಜಿತ್ಯ ಪುರುಷರ್ಷಭ ।
ತೈರೇವ ಸಹಿತಃ ಸರ್ವೈಃ ಪ್ರಾಗ್ಜ್ಯೋತಿಷಮುಪಾದ್ರವತ್ ॥೩೬॥

ಪುರುಷರ್ಷಭನೇ! ಮಹಾಧರ್ನುಧಾರಿಯಾದ ಅರ್ಜುನನು ಅವರೆಲ್ಲರನ್ನೂ ಯುದ್ಧದಲ್ಲಿ ಸೋಲಿಸಿ ಅವರೆಲ್ಲರಿಂದಲೂ ಸಹಿತನಾಗಿ ಪ್ರಾಗ್ಜ್ಯೋತಿಷಪಟ್ಟಣಕ್ಕೆ ಹೊರಟನು.

ತತ್ರ ರಾಜಾ ಮಹಾನಾಸೀದ್ ಭಗದತ್ತೋ ವಿಶಾಂಪತೇ ।
ತೇನೈವ ಸುಮಹದ್ ಯುದ್ಧಂ ಪಾಂಡವಸ್ಯ ಮಹಾತ್ಮನಃ ॥೩೭॥

ಜನಮೇಜಯರಾಜನೇ! ಆ ಪಟ್ಟಣದಲ್ಲಿ ಭಗದತ್ತನೆಂಬ ಶ್ರೇಷ್ಠರಾಜನಿದ್ದನು ಮಹಾತ್ಮನಾದ ಪಾಂಡವನಿಗೂ ಮತ್ತು ಭಗದತ್ತನಿಗೂ ದೊಡ್ಡ ಯುದ್ಧವಾಯಿತು.

ಸ ಕಿರಾತೈಶ್ಚ ಚೀನೈಶ್ಚ ವೃತಃ ಪ್ರಾಗ್ಜ್ಯೋತಿಷೋಽಭವತ್ ।
ಅನ್ಯೈಶ್ಚ ವಿವಿಧೈರ್ಯೋಧೈಃ ಸಾಗರಾನೂಪವಾಸಿಭಿಃ ॥೩೮॥

ಪ್ರಾಗ್‌ಜ್ಯೋತಿಷಪತಿಯಾದ ಆ ಭಗದತ್ತನು ಕಿರಾತರಿಂದಲೂ ಚೀನರಿಂದಲೂ ಸಾಗರತೀರದಲ್ಲಿರುವ ಇನ್ನು ಅನೇಕ ಯೋಧರಿಂದಲೂ ಕೂಡಿದವನಾಗಿ ಯುದ್ಧವನ್ನು ಮಾಡಿದನು.

ತತಃ ಸ ದಿವಸಾನಷ್ಟೌ ಯೋಧಯಿತ್ವಾ ಧನಂಜಯಮ್ ।
ಪ್ರಹಸನ್ನಬ್ರವೀದ್ ರಾಜನ್ ಸಂಗ್ರಾಮೇ ವಿಗತಜ್ವರಃ ॥೩೯॥

ರಾಜನೇ! ಅವನು ಎಂಟು ದಿವಸಗಳಕಾಲ ಅರ್ಜುನನ ಜೊತೆಯಲ್ಲಿ ಯುದ್ಧವನ್ನುಮಾಡಿ ಯುದ್ಧದಲ್ಲಿ ನಿರುತ್ಸಾಹನಾಗಿ ಅರ್ಜುನನನ್ನು ಕುರಿತು ನಗುತ್ತಾ ಹೀಗೆ ಮಾತನಾಡಿದನು.

ಉಪಪನ್ನಂ ಮಹಾಬಾಹೋ ತ್ವಯ್ಯೇತತ್ ಪಾಂಡುನಂದನ ।
ಪಾಕಶಾಸನದಾಯಾದೇ ವೀರ್ಯಮಾಹವಶೋಭಿನಿ ॥೪೦॥

ಮಹಾಬಾಹುವಾದ ಪಾಕಶಾಸನಪುತ್ರನಾದ ಯುದ್ಧಕ್ಕೆ ಶೋಭೆಯನ್ನು ತರುವ ಪಾಂಡುನಂದನನಾದ ನಿನ್ನಲ್ಲಿ ಈ ಪರಾಕ್ರಮವು ಯುಕ್ತವೇ ಆಗಿದೆ.

ಅಹಂ ಸಖಾ ಸುರೇಂದ್ರಸ್ಯ ಶಕ್ರಾದನವಮೋ ರಣೇ ।
ನಹಿ ಶಕ್ನೋಮಿ ತೇ ತಾತ ಸ್ಥಾತುಂ ಪ್ರಮುಖತೋ ಯುಧಿ ॥೪೧॥

ಪ್ರೀತಿಪಾತ್ರನೇ! ನಾನು ದೇವೇಂದ್ರನ ಸ್ನೇಹಿತ. ಯುದ್ಧದಲ್ಲಿ ಅವನಿಗಿಂತ ಯಾವ ವಿಧದಲ್ಲಿಯೂ ಕಡಿಮೆಯಿಲ್ಲ. ಆದರೆ ನಿನ್ನ ಎದುರಿನಲ್ಲಿ ಯುದ್ಧದಲ್ಲಿ ನಿಲ್ಲಲು ನನಗೆ ಸಾಧ್ಯವಾಗುತ್ತಿಲ್ಲ.

ತುಷ್ಟೋಽಸ್ಮಿ ತವ ಶೌರ್ಯೇಣ ಬ್ರೂಹಿ ಕಿಂ ಕರವಾಣಿ ತೇ ।
ಯದ್ದಕ್ಷ್ಯಸಿ ಮಹಾಬಾಹೋ ತತ್ ಕರಿಷ್ಯಾಮಿ ಪಾಂಡವ ॥೪೨॥

ಮಹಾಬಾಹುವಾದ ಪಾಂಡವನೇ! ನಿನ್ನ ಪರಾಕ್ರಮಕ್ಕೆ ನಾನು ಮೆಚ್ಚಿದೆ. ನಿನಗೆ ಏನುಮಾಡಲಿ ಎಂದು ಹೇಳು. ನೀನು ಹೇಳಿದಂತೆ ಮಾಡುವೆನು.

ಅರ್ಜುನಃ

ಕುರೂಣಾಂ ಪ್ರವರೋ ರಾಜಾ ಧರ್ಮನಿತ್ಯೋ ಯುಧಿಷ್ಠಿರಃ ।
ತಸ್ಯ ಪಾರ್ಥಿವತಾಮೀಪ್ಸೋಃ ಕರಸ್ತಸ್ಮೈ ಪ್ರದೀಯತಾಮ್ ॥೪೩॥

ಕುರುಶ್ರೇಷ್ಠನಾದ ಧರ್ಮನಿತ್ಯನಾದ ಯುಧಿಷ್ಠಿರನು ಮಹಾರಾಜನಾಗಲು ಬಯಸಿ ರಾಜಸೂಯಯಾಗವನ್ನು ಮಾಡುತ್ತಿದ್ದಾನೆ. ಅವನಿಗೆ ಕಪ್ಪವನ್ನು ಒಪ್ಪಿಸು.

ಭವಾನ್ ಪಿತೃಸಖಾ ಚೈವ ಪ್ರೀಯಮಾಣೋ ಮಯಾ ಯುಧಿ ।
ಅತೋ ನಾಜ್ಞಾಪಯಾಮಿ ತ್ವಾಂ ಪ್ರೀತಿಪೂರ್ವಂ ಪ್ರದೀಯತಾಮ್ ॥

ನೀನು ನನ್ನ ತಂದೆಯ ಸ್ನೇಹಿತ ಮತ್ತು ಯುದ್ಧದಲ್ಲಿ ನನ್ನ ವಿಷಯದಲ್ಲಿ ಸಂತೋಷಗೊಂಡಿರುವೆ. ಆದ್ದರಿಂದ ನಿನಗೆ ನಾನು ಅಜ್ಞೆಯನ್ನು ಮಾಡುವುದಿಲ್ಲ. ಪ್ರೀತಿಪೂರ್ವಕವಾಗಿ ನೀನಾಗಿಯೇ ಕೊಡು.

ಭಗದತ್ತಃ

ಕುಂತೀಸುತ ಯಥಾ ಮೇ ತ್ವಂ ತಥಾ ರಾಜಾ ಯುಧಿಷ್ಠಿರಃ ।
ಸರ್ವಮೇತತ್ ಕರಿಷ್ಯಾಮಿ ಕಿಂ ಚಾನ್ಯತ್ ಕರವಾಣಿ ತೇ ॥೪೫॥

ಕುಂತಿಪುತ್ರನಾದ ಅರ್ಜುನನೇ ! ನೀನು ಹೇಗೆ ನನಗೆ ಪ್ರಿಯನೋ ರಾಜನಾದ ಯುಧಿಷ್ಠಿರನೂ ಹಾಗೆಯೇ ಸರಿ. ನೀನು ಹೇಳಿದುದೆಲ್ಲವನ್ನೂ ಮಾಡುವೆನು. ಬೇರೆ ಏನು ಮಾಡಲಿ ಎಂದು ಹೇಳು.

ವೈಶಂಪಾಯನಃ

ಸ ತತ್ರ ಸತ್ಕೃತಸ್ತೇನ ಮಾಸಮುಷ್ಯ ಧನಂಜಯಃ ।
ಉದಕ್ಪ್ರತ್ಯಾಂ ವಿನಿರ್ಜಿತ್ಯ ಪ್ರಾಯಾದ್ ರಾಮಗಿರಿಂ ಪ್ರತಿ ॥೪೬॥

ಧನಂಜಯನು ಅಲ್ಲಿ ಭಗದತ್ತನಿಂದ ಸತ್ಕರಿಸಲ್ಪಟ್ಟವನಾಗಿ ಒಂದುತಿಂಗಳ ಕಾಲ ವಾಸಮಾಡಿ ಈಶಾನ್ಯದಿಕ್ಕನ್ನು ಗೆದ್ದು ಅಲ್ಲಿಂದ ರಾಮಗಿರಿಗೆ ಹೊರಟನು.

ತತೋ ರಾಮಗಿರಿಂ ಜಿತ್ವಾ ತಥಾ ಭುವನಪರ್ವತಮ್ ।
ಅನ್ಯಾನಪಿ ವಶೇ ಚಕ್ರೇ ತರಸಾ ಪಾಕಶಾಸನಿಃ ॥೪೭॥

ಅನಂತರ ರಾಮಗಿರಿಯನ್ನು ಹಾಗೆಯೇ ಭುವನಪರ್ವತವನ್ನು ಗೆದ್ದು ಉಳಿದ ಭಾಗಗಳನ್ನು ಅರ್ಜುನನು ಶೀಘ್ರವಾಗಿ ವಶಪಡಿಸಿಕೊಂಡನು.

ಸ ವಿಜಿತ್ಯ ಮಹಾಬಾಹುಃ ಕುಂತೀಪುತ್ರೋ ಧನಂಜಯಃ ।
ಪ್ರಯಯಾವುತ್ತರಾಂ ತಸ್ಮಾದ್ ದಿಶಂ ಧನದಪಾಲಿತಾಮ್ ॥೪೮॥

ಮಹಾಬಾಹುವಾದ ಕುಂತೀಪುತ್ರನಾದ ಧನಂಜಯನು ಹೀಗೆ ಈಶ್ಯಾನ್ಯದಿಕ್ಕನ್ನು ಗೆದ್ದು ಅಲ್ಲಿಂದ ಕುಬೇರಪಾಲಿತವಾದ ಉತ್ತರದಿಕ್ಕನ್ನು ಕುರಿತು ಪ್ರಯಾಣಮಾಡಿದನು.

ಅಭ್ಯಂತರಂ ಚ ಕೌಂತೇಯಸ್ತಥೈವ ಚ ಬಹಿರ್ಗಿರಿಮ್ ।
ತಥೋಪರಿಗಿರಿಂ ಚಾಪಿ ವಿಜಿಗ್ಯೇ ಪುರುಷರ್ಷಭಃ ॥೪೯॥

ಪುರುಷಶ್ರೇಷ್ಠನಾದ ಕುಂತೀಪುತ್ರನಾದ ಅರ್ಜುನನು ಆ ಮಧ್ಯದಲ್ಲಿರುವ ಬಹಿರ್ಗಿರಿಯನ್ನು ಮತ್ತು ಉಪರಿಗಿರಿಯನ್ನು ಜಯಿಸಿದನು.

ವಿಜಿತ್ಯ ಯವನಾನ್ ಸರ್ವಾನ್ ಯೇ ಚ ತತ್ರ ನರಾಧಿಪಾಃ ।
ತಾನ್ ವಶೇ ಸ್ಥಾಪಯಿತ್ವಾ ಸ ರತ್ನಾನ್ಯಾದಾಯ ಸರ್ವಶಃ ॥೫೦॥

ತೈರೇವ ಸಹಿತಃ ಸರ್ವೈರನುಸಂಗಮ್ಯ ತಾನ್ ನೃಪಾನ್ ।
ಕುಲೂತವಾಸಿನಂ ರಾಜನ್ ಬೃಹಂತಮುಪಜಗ್ಮಿವಾನ್ ॥೫೧॥

ರಾಜನೇ! ಅರ್ಜುನನು ಅಲ್ಲಿ ವಾಸವಾಗಿದ್ದ ಯವನರಾಜರುಗಳನ್ನೆಲ್ಲಾ ಗೆದ್ದು ವಶಪಡಿಸಿಕೊಂಡು ಅವರೆಲ್ಲರಿಂದಲೂ ರತ್ನಗಳನ್ನು ತೆಗೆದುಕೊಂಡು ಆ ಎಲ್ಲರಿಂದಲೂ ಸಹಿತನಾಗಿ ಕುಲೂತವಾಸಿಯಾದ ಬೃಹಂತರಾಜನ ಕಡೆಗೆ ನಡೆದನು.

ವಾದಿತ್ರರಥನಾದೇನ ಹಯಹೇಷಾಸ್ವನೇನ ಚ ।
ಕುಂಜರಾಣಾಂ ಚ ಶಬ್ದೇನ ಕಂಪಯನ್ನಿವ ಮೇದಿನೀಮ್ ॥೫೨॥

ವಾದ್ಯಗಳ ಮತ್ತು ರಥಗಳ ನಾದದಿಂದಲೂ ಕುದುರೆಗಳ ಹೇಷಾಧ್ವನಿಗಳಿಂದಲೂ ಅನೆಗಳ ಬೃಂಹಿತೆಗಳಿಂದಲೂ ಭೂಮಿಯನ್ನು ನಡುಗಿಸುತ್ತಾ ಅವನು ಪ್ರಯಾಣಮಾಡಿದನು.

ತತೋ ಬೃಹಂತಸ್ತರುಣೋ ಬಲೇನ ಚತುರಂಗಿಣಾ ।
ನಿಷ್ಕಮ್ಯ ನಗರಾದ್ ರಾಜನ್ನುಪತಸ್ಥೇ ಧನಂಜಯಮ್ ॥೫೩॥

ಆಗ ತರುಣನಾದ ಬೃಹಂತನು ಚತುರಂಗಬಲಸಹಿತನಾಗಿ ನಗರದಿಂದ ಹೊರಗೆ ಬಂದು ಅರ್ಜುನನನ್ನು ಎದುರಿಸಿದನು.

ಸುಮಹಾನ್ ಸನ್ನಿಪಾತೋಽಭೂದ್ ಧನಂಜಯಬೃಹಂತಯೋಃ।
ನ ಶಶಾಕ ಬೃಹಂತಸ್ತು ಸೋಢುಂ ಪಾರ್ಥಸ್ಯ ವಿಕ್ರಮಮ್ ॥೫೪॥

ಧನಂಜಯ ಮತ್ತು ಬೃಹಂತರಿಗೆ ಘೋರವಾದ ಸಂಘರ್ಷವುಂಟಾಯಿತು. ಬೃಹಂತನು ಅರ್ಜುನನ ವಿಕ್ರಮವನ್ನು ಸಹಿಸಿಕೊಳ್ಳಲು ಸಮರ್ಥನಾಗಲಿಲ್ಲ.

ಸೋಽವಿಷಹ್ಯತಮಂ ಜ್ಞಾತ್ವಾ ಕೌಂತೇಯಂ ಪರ್ವತೇಶ್ವರಃ ।
ಉಪಾವರ್ತತ ದುರ್ಮೇಧಾ ಧನಾನ್ಯಾದಾಯ ಸರ್ವಶಃ ॥೫೫॥

ದುರ್ಬುದ್ಧಿಯುಳ್ಳ ಪರ್ವತೇಶ್ವರನಾದ ಬೃಹಂತನು ಅರ್ಜುನನ ಜೊತೆಯಲ್ಲಿ ಯುದ್ಧಮಾಡಲು ಸಾಧ್ಯವಿಲ್ಲವೆಂದು ಭಾವಿಸಿ ಕಪ್ಪಕಾಣಿಕೆಗಳನ್ನು ತಂದು ಒಪ್ಪಿಸಿದನು.

ಸ ತದ್ರಾಜ್ಯಮವಸ್ಥಾಪ್ಯ ಕೌಲೂತಸಹಿತೋ ಯುವಾ ।
ಸೇನಾಬಿಂದುಮಥೋ ರಾಜನ್ ರಾಜ್ಯಾದಾಶು ಸಮಾಕ್ಷಿಪತ್ ॥೫೬॥

ತರುಣನಾದ ಅರ್ಜುನನು ಕುಲೂತ ರಾಜ್ಯವನ್ನು ಸಮಾದಾನದಲ್ಲಿ ಇಟ್ಟು ಆ ಬೃಹಂತನ ಸಹಿತನಾಗಿ ಬಂದು ಸೇನಾಬಿಂದುರಾಜನ ಜೊತೆಯಲ್ಲಿ ಯುದ್ಧವನ್ನು ಮಾಡಿ ಅವನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಿದನು.

ಮೋದಾಪುರೇ ವಾಮದೇವಂ ಸುನಾಮಾನಮನಾಮಿನಮ್ ।
ಕುಲೂತಾನುತ್ತರಾಂಶ್ಚೈವ ತಾಂಶ್ಚ ರಾಜ್ಞಃ ಸಮಾನಯತ್ ॥೫೭॥

ಮೋದಾಪುರದಲ್ಲಿ ಯಾರಿಗೂ ಬಗ್ಗದಿರುವ ವಾಮದೇವ ಎಂಬ ಹೆಸರಿನ ರಾಜನನ್ನು ಹಾಗೆಯೇ ಉತ್ತರ ಕ್ಯಲೂತ ರಾಜರುಗಳನ್ನೂ ಗೆದ್ದನು.

ತತ್ರಸ್ಥೈಃ ಪುರುಷೈರೇವ ಧರ್ಮರಾಜಸ್ಯ ಶಾಸನಾತ್ ।
ವ್ಯಜಯದ್ ಧನಂಜಯೋ ರಾಜನ್ ದೇಶಾನ್ ಪಂಚ ಪ್ರಧಾನತಃ ॥

ಧರ್ಮರಾಜನ ಶಾಸನಕ್ಕೆ ಅನುಗುಣವಾಗಿ ನಡೆದುಕೊಳ್ಳುವ ಅರ್ಜುನನು ಅಲ್ಲಿದ್ದ ಯೋಧರಿಂದಲೇ ಅದರ ಸಮೀಪದಲ್ಲಿದ್ದ ಐದು ಪ್ರಧಾನವಾದ ದೇಶಗಳನ್ನು ಗೆದ್ದನು.

ಸಮೀಪಸ್ಥಂ ಸಮಾಸಾದ್ಯ ಸೇನಾಬಿಂದೋಃ ಪುರಂ ಮಹತ್ ।
ಬೇನ ಚತುರಂಗೇಣ ನಿವೇಶನಮಥಾಕರೋತ್ ॥೫೯॥

ಸಮೀಪದಲ್ಲಿದ್ದ ಸೇನಾಬಿಂದುವಿನ ದೊಡ್ಡಪಟ್ಟಣವನ್ನು ತಲುಪಿ ಅಲ್ಲಿ ತನ್ನ ಚತುರಂಗ ಸೈನ್ಯದ ಜೊತೆಯಲ್ಲಿ ಬೀಡುಬಿಟ್ಟನು.

ಸ ತೈಃ ಪರಿವೃತಃ ಸರ್ವೈರ್ವಿಶ್ವಗಶ್ವಂ ನರಾಧಿಪಮ್ ।
ಅಭ್ಯಗಚ್ಛನ್ಮಹಾಬಾಹುಃ ಪೌರವಂ ಪುರುಷರ್ಷಭಃ ॥೬೦॥

ಅನಂತರ ಅವರೆಲ್ಲರಿಂದಲೂ ಕೂಡಿದವನಾಗಿ ಪುರುಷಶ್ರೇಷ್ಠನಾದ ಮಹಾಬಾಹುವಾದ ಅರ್ಜುನನು ಪೌರವವಂಶದ ರಾಜನಾದ ವಿಶ್ವಗಶ್ವನಮೇಲೆ ದಂಡೆತ್ತಿಹೊದನು.

ತಂ ವಿಜಿತ್ಯಾಹವೇ ಶೂರಂ ಪಾರ್ವತೀಯಂ ಮಹಾರಥಃ ।
ಧ್ವಜಿನ್ಯಾऽಪ್ಯಜಯದ್ ರಾಜನ್ ಪುರಂ ಪೌರವರಕ್ಷಿತಮ್ ॥೬೧॥

ರಾಜನೇ! ಮಹಾರಥನಾದ ಅರ್ಜುನನು ಶೂರನಾದ ವಿಶ್ವಗಶ್ವನನ್ನು ಯುದ್ಧದಲ್ಲಿ ಸೋಲಿಸಿ ತನ್ನ ಸೈನ್ಯದಿಂದ ಅವನಿಂದ ರಕ್ಷಿತವಾದ ಪಟ್ಟಣವನ್ನೂ ಗೆದ್ದನು.

ಪೌರವಂ ಚ ವಿನಿರ್ಜಿತ್ಯ ಸೇನಾಬಿಂದುಂ ಚ ತತ್ಪುರೇ ।
ನ್ಯಧಾಪಯದಮೇಯಾತ್ಮಾ ದಸ್ಯೂನಾಂ ಪತಿಮರ್ಜುನಃ ॥೬೨॥

ಪೌರವರಾಜನಾದ ಸೇನಬಿಂದುವನ್ನು ಗೆದ್ದು ಅಪರಿಮಿತಪ್ರಭಾವವುಳ್ಳ ಅರ್ಜುನನು ಅವನನ್ನು ಆ ಪಟ್ಟಣದಲ್ಲಿ ದಸ್ಯುಗಳಿಗೆ ಅಧಿಪತಿಯನ್ನಾಗಿ ಮಾಡಿದನು.

ತತಃ ಕಾಶ್ಮೀರಕಾನ್ ವೀರಾನ್ ಕ್ಷತ್ರಿಯಾನ್ ಕ್ಷತ್ರಿಯರ್ಷಭಃ ।
ವ್ಯಜಯಲ್ಲೋಹಿತಂ ಚೈವ ಮಂಡಲೈರ್ದಶಭಿಃ ಸಹ ॥೬೩॥

ಕ್ಷತ್ರಿಯಶ್ರೇಷ್ಠನಾದ ಅರ್ಜುನನು ಕಾಶ್ಮೀರದೇಶದ ಎಲ್ಲಾ ವೀರಕ್ಷತ್ರಿಯರನ್ನೂ ಮತ್ತು ಹತ್ತು ಮಂಡಲಗಳಿಂದ ಕೂಡಿದ ಲೋಹಿತದೇಶವನ್ನೂ ಗೆದ್ದನು.

ತತಸ್ತ್ರಿಗರ್ತಾನ್ ಕೌಂತೇಯೋ ದಾರ್ವಿಕಾನಥ ತಂಕಣಾನ್ ।
ಕ್ಷತ್ರಿಯಾನ್ ಸುಬಹೂನ್ ರಾಜನ್ನುಪಾವರ್ತತ ಸರ್ವಶಃ ॥೬೪॥

ಅನಂತರ ಅರ್ಜುನನು ತ್ರಿಗರ್ತರು ದಾರ್ವಿಕರು ತಂಕಣರು ಮೊದಲಾದ ಅನೇಕ ಕ್ಷತ್ರಿಯರ ಮೇಲೆ ದಂಡೆತ್ತಿ ಹೋದನು.

ಅಭಿಸಾರಂ ತಥಾ ರಮ್ಯಂ ವಿಜಿಗ್ಯೇ ಕುರುಸತ್ತಮಃ ।
ಕಕೂಶವಾಸಿನಂ ಚೈವ ರೋಚಮಾನಂ ರಣೇऽಜಯತ್ ॥೬೫॥

ಕುರುಶ್ರೇಷ್ಠನಾದ ಅರ್ಜುನನು ಅಭಿಸಾರವನ್ನು ಗೆದ್ದು ಅನಂತರ ಕುಕೂಶದೇಶವಾಸಿಯಾದ ರೋಚಮಾನ ಎಂಬ ರಾಜನನ್ನು ಯುದ್ಧದಲ್ಲಿ ಗೆದ್ದನು.

ತತಃ ಸಿಂಹಪುರಂ ರಮ್ಯಂ ಚಿತ್ರಾಯುಧಸುರಕ್ಷಿತಮ್ ।
ಪ್ರಾಮಥದ್ ಬಲಮಾಸ್ಥಾಯ ಪಾಕಶಾಸನಿರಾಹವೇ ॥೬೬॥

ಅನಂತರ ಪಾಕಶಾಸನಿಯಾದ ಅರ್ಜುನನು ಚಿತ್ರಾಯುಧಯೆಂಬ ರಾಜನಿಂದ ರಕ್ಷಿತವಾದ ಸಿಂಹಪುರದ ಮೇಲೆ ದಂಡೆತ್ತಿಹೋಗಿ ತನ್ನ ಸೈನ್ಯದಿಂದ ಆ ದೇಶವನ್ನು ಸೋಲಿಸಿದನು.

ತತೋ ವಂಗಾಂಶ್ಚ ಚೋಳಾಂಶ್ಚ ಕಿರೀಟೀ ಪಾಂಡವರ್ಷಭಃ ।
ಸಹಿತಃ ಸರ್ವಸೈನ್ಯೇನ ಪ್ರಾಮಥತ್ ಪೃಥುವಿಕ್ರಮಃ ॥೬೭॥

ಅನಂತರ ಮಹಾಪರಾಕ್ರಮಿಯಾದ ಪಾಂಡವಶ್ರೇಷ್ಠನಾದ ಅರ್ಜುನನು ತನ್ನ ಎಲ್ಲಾ ಸೈನ್ಯವನ್ನೂ ತೆಗೆದುಕೊಂಡು ಹೋಗಿ ವಂಗರನ್ನು ಮತ್ತು ಚೋಳರನ್ನು ಸೋಲಿಸಿದನು.

ತತಃ ಪರಮಸಂಹೃಷ್ಟೋ ಬಾಹ್ಲೀಕಾನ್ ಸಮಿತಿಂಜಯಃ ।
ಮಹತಾ ಪರಿಮರ್ದೇನ ವಶೇ ಚಕ್ರೇ ದುರಾಸದಾನ್ ॥೬೮॥

ಅನಂತರ ಯುದ್ಧದಲ್ಲಿ ಜಯಶೀಲನಾದ ಅರ್ಜುನನು ಪರಮ ಸಂತೋಷದಿಂದ ಕೂಡಿದವನಾಗಿ ತಲುಪಲು ಅಸಾಧ್ಯವಾದ ಬಾಹ್ಲೀಕದೇಶವನ್ನು ದೊಡ್ಡ ಯುದ್ಧದಿಂದ ವಶಪಡಿಸಿಕೊಂಡನು .

ತತಃ ಸಾರಬಲಂ ಗೃಹ್ಯ ಫಲ್ಗುನೋಽನ್ಯಾನ್ ವಿಸೃಜ್ಯ ಸಃ ।
ದರದಾನ್ ಸಹ ಕಾಂಭೋಜೈರಜಯತ್ ಪಾಕಶಾಸನಿಃ ।
ಯವನಾಂಶ್ಚ ಮಹಾರಾಜ ಶಕಾಂಶ್ಚ ವ್ಯಜಯದ್ ಯುಧಿ ॥೬೯॥

ಅನಂತರ ಅರ್ಜುನನು ತನ್ನ ಸೈನ್ಯದ ಶ್ರೇಷ್ಠವಾದ ಭಾಗವನ್ನು ಮಾತ್ರ ಉಳಿಸಿಕೊಂಡು, ಉಳಿದ ಎಲ್ಲಾ ಸೈನ್ಯವನ್ನು ಕಳುಹಿಸಿಕೊಟ್ಟು ದರದರನ್ನೂ ಕಾಂಬೋಜರನ್ನೂ ಯವನರನ್ನೂ ಶಕರನ್ನೂ ಯುದ್ಧದಲ್ಲಿ ಗೆದ್ದನು.

ಕಿರಾತಾನ್ ಸಹಯಾನ್ ಸರ್ವಾನ್ ಖರಾನ್ ಕಾಚಾನ್ ಸಬಭ್ರಿಕಾನ್ ।
ಭೀರಾನುತ್ಸಾಪಿಕಾಂಶ್ಚೈವ ಮ್ಲೇಚ್ಛಾಂಶ್ಚಾನ್ಯಾನ್ ಸಹಸ್ರಶಃ ।
ತಾನ್ ಸರ್ವಾನಜಯತ್ ಪಾರ್ಥೋ ಧರ್ಮರಾಜಪ್ರಿಯೇಪ್ಸಯಾ ॥೭೦॥

ಅರ್ಜುನನು ಧರ್ಮರಾಜನಿಗೆ ಪ್ರಿಯವನ್ನು ಉಂಟುಮಾಡುವ ಸಲುವಾಗಿ ಕಿರಾತರು ಸಹಯರು ಖರರು ಕಾಚರು ಬಭ್ರಿಕರು ಭೀರರು ಉತ್ಸಾಪಿಕರು ಮತ್ತು ಸಹಸ್ರ ಸಂಖ್ಯೆಯ ಮ್ಲೇಚ್ಛರು ಇವರೆಲ್ಲರನ್ನೂ ಜಯಿಸಿದನು.

ಹಾಗೆಯೇ ಈಶಾನ್ಯದಿಕ್ಕನ್ನು ಆಶ್ರಯಿಸಿವಾಸಿಸುವ ಎಲ್ಲ ದಸ್ಯುಗಳನ್ನು ಕಾಡುಗಳಲ್ಲಿ ವಾಸಿಸುವ ಎಲ್ಲಾ ದಸ್ಯುಗಳನ್ನು ಸೋಲಿಸಿದನು.

ತತಃ ಪರಮಕಾಂಭೋಜಾನಿಷೀಕಾನುತ್ತರಾನಪಿ ।
ಸಹಿತಾಂಸ್ತಾನ್ ಮಹಾರಾಜ ವ್ಯಜಯತ್ ಪಾಕಶಾಸನಿಃ ॥೭೧॥

ಮಹಾರಾಜನೇ ಅನಂತರ ಪಾಕಶಾಸನಿಯಾದ ಅರ್ಜುನನು ಒಟ್ಟಿಗೆ ಯುದ್ಧಕ್ಕೆ ಬಂದ ಪರಮಕಾಂಭೋಜ ದೇಶವನ್ನೂ ಮತ್ತು ಉತ್ತರ ಇಷೀಕದೇಶವನ್ನೂ ಗೆದ್ದನು.

ಇಷೀಕೇಷು ತು ಸಂಗ್ರಾಮೋ ಬಭೂವ ಸುಭಯಂಕರಃ ।
ತಾರಕಾಮಯಸಂಕಾಶಃ ಪರಮೈಷೀಕಪಾರ್ಥಯೋಃ ॥೭೨॥

ಇಷೀಕದೇಶದಲ್ಲಿ ಅರ್ಜುನ ಮತ್ತು ಪರವೈಷೀಕರಾಜನಿಗೆ ತಾರಕಾಮಯಸದೃಶವಾದ ಭಯಂಕರವಾದ ಯುದ್ಧವಾಯಿತು.

ಸ ವಿಜಿತ್ಯ ತಥಾ ರಾಜನ್ನಿಷೀಕಾನ್ ರಣಮೂರ್ಧನಿ ।
ಶುಕೋದರಸಮಪ್ರಖ್ಯಾನ್ ಹಯಾನಷ್ಟೌ ಸಮಾನಯತ್ ॥೭೩॥

ಮಯೂರಸದೃಶಾನನ್ಯಾನ್ ಉಭಯಾನೇವ ಚಾಪರಾನ್ ।
ತತಃ ಸ ಜಿತ್ವಾ ಬೀಭತ್ಸುರ್ಭಾರತಂ ವರ್ಷಮುತ್ತಮಮ್ ॥೭೪॥

ರಾಜನೇ! ಘೋರವಾದ ಯುದ್ಧದಲ್ಲಿ ಅವನು ಎಲ್ಲಾ ಇಷೀಕರನ್ನೂ ಗೆದ್ದು ಗಿಣಿಯ ಉದರದಬಣ್ಣವುಳ್ಳ ಎಂಟು ಕುದುರೆಗಳನ್ನೂ ನವಿಲಿನ ಬಣ್ಣವುಳ್ಳ ಬೇರೆ ಕುದುರೆಗಳನ್ನೂ ಎರಡೂ ಬಣ್ಣಗಳುಳ್ಳ ಇನ್ನೂ ಅನೇಕ ಕುದುರೆಗಳನ್ನೂ, ಸಂಪಾದಿಸಿದನು.

ಅನ್ಯಾನ್ ವೈ ದಿವ್ಯವರ್ಷಾಂಶ್ಚ ಜಿತವಾನ್ ಕುಲಪರ್ವತಾನ್ ॥೭೫॥

ಅನಂತರ ಬೀಭತ್ಸುವು ಶ್ರೇಷ್ಠವಾದ ಭಾರತವರ್ಷವನ್ನೂ ಗೆದ್ದು ಉಳಿದ ದಿವ್ಯವರ್ಷಗಳನ್ನು ಮತ್ತು ಕುಲಪರ್ವತಗಳನ್ನೂ ಗೆದ್ದನು.

ತಥಾ ನಿರ್ಜಿತ್ಯ ಸಂಗ್ರಾಮೇ ಹಿಮವಂತಂ ಸನಿಷ್ಕುಟಮ್ ।
ಶ್ವೇತಂ ಪರ್ವತಮಾಸಾದ್ಯ ನ್ಯವಸತ್ ಪುರುಷರ್ಷಭಃ ॥೭೬॥

ಹಾಗೆ ಯುದ್ಧದಲ್ಲಿ ಹಿಮಾಲಯವನ್ನು ನಿಷ್ಕುಟಪರ್ವತವನ್ನೂ ಗೆದ್ದು ಶ್ವೇತಪರ್ವತಕ್ಕೆ ಬಂದು ಪುರುಷಶ್ರೇಷ್ಠನಾದ ಅರ್ಜುನನು ಅಲ್ಲಿ ಸ್ವಲ್ಪ ಕಾಲವಾಸ ಮಾಡಿದನು.

ಜನಮೇಜಯಃ

ಕಥಂ ಸ ಜಿತವಾನ್ ಪಾರ್ಥೋ ದಿವ್ಯಾನ್ ವರ್ಷಾನ್ ಸಪರ್ವತಾನ್ ।
ಆನುಪೂರ್ವ್ಯಂ ಚ ಮೇ ಶಂಸ ನಾಮಭಿಃ ಸಹ ವೈ ದ್ವಿಜ ॥೭೭॥

ಬ್ರಾಹ್ಮಣಶ್ರೇಷ್ಠರೇ! ಪಾರ್ಥನು ದಿವ್ಯವರ್ಷಗಳನ್ನೂ ಮತ್ತು ಪರ್ವತಗಳನ್ನೂ ಹೇಗೆ ಗೆದ್ದನು. ಅವುಗಳನ್ನು ಗೆದ್ದ ಕ್ರಮವನ್ನು ಮತ್ತು ವರ್ಷ ಪರ್ವತಗಳ ಹೆಸರುಗಳನ್ನು ನನಗೆ ತಿಳಿಸಿ.

ವೈಶಂಪಾಯನಃ

ಸ ಜಿತ್ವಾ ಭಾರತಂ ವರ್ಷಂ ಬಲಾದ್ ರಾಜನ್ ಧನಂಜಯಃ ।
ದಸ್ಯೂಂಶ್ಚಾಪ್ಯಜಯತ್ ಸರ್ವಾನ್ ಕುಕ್ಷೌ ಹಿಮವತೋ ಬಲಾತ್ ॥೭೮॥

ಜನಮೇಜಯನೇ! ಧನಂಜಯನು ತನ್ನಬಲದಿಂದ ಭಾರತವರ್ಷವನ್ನು ಗೆದ್ದು ಅನಂತರ ಹಿಮಾಲಯದ ಕುಕ್ಷಿಯನ್ನು ಆಶ್ರಯಿಸಿದ್ದ ಎಲ್ಲಾ ದಸ್ಯುಗಳನ್ನೂ ಪರಾಕ್ರಮದಿಂದ ಗೆದ್ದನು.

ಸ ವಿನಿರ್ಜಿತ್ಯ ಸಂಗ್ರಾಮೇ ಹಿಮವಂತಂ ಚ ನಿಷ್ಕ್ರಮನ್ ।
ಶ್ವೇತಪರ್ವತಮಾಸಾದ್ಯ ನ್ಯವಸದ್ ಭರತರ್ಷಭಃ ॥೭೯॥

ಭರತಶ್ರೇಷ್ಠನಾದ ಅವನು ಯುದ್ಧದಲ್ಲಿ ಹಿಮಾಲಯಪರ್ವತವನ್ನು ಗೆದ್ದು ಅಲ್ಲಿಂದ ಶ್ವೇತಪರ್ವತವನ್ನು ತಲುಪಿ ಅಲ್ಲಿ ಸ್ವಲ್ಪ ಸಮಯವಾಸಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ಸಭಾಪರ್ವಣಿ ಪಂಚವಿಂಶೋऽಧ್ಯಾಯಃ ॥
॥ ದಿಗ್ವಿಜಯಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಇಪ್ಪತ್ತೈದನೆಯ ಅಧ್ಯಾಯವು ಮುಗಿಯಿತು.

★★★★★

ಇಪ್ಪತ್ತಾರನೆಯ ಅಧ್ಯಾಯ

(ಅರ್ಜುನ ದಿಗ್ವಿಜಯ ಮತ್ತು ಪ್ರತಿನಿವೃತ್ತಿ)

ವೈಶಂಪಾಯನಃ

ಸ ಶ್ವೇತಪರ್ವತಂ ವೀರಃ ಸಮತಿಕ್ರಮ್ಯ ಭಾರತ ।
ದೇಶಂ ಕಿಂಪುರುಷಾವಾಸಂ ರಾಮಭೃತ್ಯೇನ ರಕ್ಷಿತಮ್ ॥೧॥

ಮಹತಾ ಸನ್ನಿಪಾತೇನ ಕ್ಷತ್ರಿಯಾಂತಕರೇಣ ಹ ।
ಅಜಯತ್ ಪಾಂಡವಶ್ರೇಷ್ಠಃ ಕರೇ ಚೈವ ನ್ಯವೇಶಯತ್ ॥೨॥

ಭಾರತನೇ! ವೀರವಾದ ಅರ್ಜುನನು ಶ್ವೇತಪರ್ವತವನ್ನು ದಾಟಿ ರಾಮಭೃತ್ಯನಾದ ಹನುಮಂತನಿಂದ ರಕ್ಷಿತವಾದ ಕಿಂಪುರುಷವರ್ಷಕ್ಕೆ ಹೋಗಿ ಕ್ಷತ್ರಿಯವಿನಾಶಕಾರಿಯಾದ ದೊಡ್ಡ ಸಂಘರ್ಷವನ್ನು ಮಾಡಿ ಆದೇಶವನ್ನು ಗೆದ್ದನು. ಪಾಂಡವಶ್ರೇಷ್ಠನಾದ ಅರ್ಜುನನು ಅವರಿಂದ ಕಪ್ಪಕಾಣಿಕೆಗಳನ್ನು ತೆಗೆದುಕೊಂಡನು. (ತಾತ್ಪರ್ಯನಿರ್ಣಯದಲ್ಲಿ ಭೀಮಸೇನನ ಉಲ್ಲೇಖವಿದೆ).

ತಂ ಜಿತ್ವಾ ಹಾಟಕಂ ನಾಮ ದೇಶಂ ಗುಹ್ಯಕರಕ್ಷಿತಮ್ ।
ಪಾಕಶಾಸನಿರವ್ಯಗ್ರಃ ಸಸೈನ್ಯೋ ವಶಮಾನಯತ್ ॥೩॥

ಪಾಕಶಾಸನಿಯಾದ ಅರ್ಜುನನು ಅನಂತರ ಗುಹ್ಯಕರಿಂದ ರಕ್ಷಿತವಾದ ಹಾಟಕ ಎಂಬ ದೇಶವನ್ನು ತನ್ನ ಸೈನ್ಯ ಸಹಿತನಾಗಿ ವಶಮಾಡಿಕೊಂಡನು.

ತಾಂಸ್ತು ಸಾಂತ್ವೇನ ನಿರ್ಜಿತ್ಯ ಮಾನಸಂ ಸರ ಉತ್ತಮಮ್ ।
ಋಷಿಕುಲ್ಯಾಂಶ್ಚ ತಾನ್ ಸರ್ವಾನ್ ದದರ್ಶ ಕುರುನಂದನಃ ॥೪॥

ಹಾಟಕ ದೇಶವಾಸಿಗಳನ್ನು ಸಮಾಧಾನದ ವಚನಗಳಿಂದಲೇ ಜಯಿಸಿ ಶ್ರೇಷ್ಠವಾದ ಮಾನಸ ಸರೋವರವನ್ನು ತಲುಪಿ ಅದರ ಸುತ್ತಲೂ ಇರುವ ಋಷಿಗಳ ಕುಲಕ್ಕೆ ಆಶ್ರಯವಾದ ಆಶ್ರಮಗಳನ್ನು ನೋಡಿದನು.

ಮಾನಸಂ ಸರ ಆಸಾದ್ಯ ಹಾಟಕಾನಭಿತಃ ಪ್ರಭುಃ ।
ಗಂಧರ್ವರಕ್ಷಿತಂ ದೇಶಮಗಮತ್ ಪಾಂಡುನಂದನಃ ॥೫॥

ಪಾಂಡುನಂದನನಾದ ಅರ್ಜುನನು ಮಾನಸಸರೋವರವನ್ನು ತಲುಪಿ ಅದರ ಸುತ್ತಲೂ ಇರುವ ಗಂಧರ್ವರಕ್ಷಿತವಾದ ಹಾಟಕಪ್ರದೇಶಗಳನ್ನು ತಲುಪಿದನು.

ತತ್ರ ತಿತ್ತಿರಿಕಲ್ಮಾಷಾನ್ ಸಮುದ್ರಾಕ್ಷಾನ್ ಹಯೋತ್ತಮಾನ್ ।
ಲೇಭೇ ಸ ಕರಮತ್ಯಂತಂ ಗಂಧರ್ವನಗರಾತ್ ತದಾ ।
ಹೇಮಕೂಟಮಥಾಸಾದ್ಯ ನ್ಯವಿಶತ್ ಫಲ್ಗುನಸ್ತಥಾ ॥೬॥

ಫಲ್ಗುನನು ಅಲ್ಲಿ ತಿತ್ತಿರಿಪಕ್ಷಿಗಳಂತೆ ಬಿಳಿ ಮತ್ತು ಕಪ್ಪುಬಣ್ಣಗಳಿಂದ ಕೂಡಿದ ಕಣ್ಣಿನ ಸುತ್ತಲೂ ಮುದ್ರೆ ಇರುವ ಶ್ರೇಷ್ಠವಾದ ಅಶ್ವಗಳನ್ನು ಆ ಗಂಧರ್ವನಗರಿಯಿಂದ

ಕಾಣಿಕೆಯಾಗಿ ಪಡೆದನು. ಅನಂತರ ಹೇಮಕೂಟಪರ್ವತವನ್ನು ತಲುಪಿ ಅಲ್ಲಿ ತಂಗಿದನು.

ತಂ ಹೇಮಕೂಟಂ ರಾಜೇಂದ್ರ ಸಮತಿಕ್ರಮ್ಯ ಪಾಂಡವಃ ।
ಹರಿವರ್ಷಂ ವಿವೇಶಾಥ ಸೈನ್ಯೇನ ಮಹತಾ ವೃತಃ ॥೭॥

ರಾಜೇಂದ್ರನೇ! ಆ ಪಾಂಡವನು ಹೇಮಕೂಟಪರ್ವತವನ್ನು ದಾಟಿ ದೊಡ್ಡ ಸೈನ್ಯದಿಂದ ಕೂಡಿದವನಾಗಿ ಹರಿವರ್ಷಖಂಡವನ್ನು ಪ್ರವೇಶಿಸಿದನು.

ತತ್ರ ಪಾರ್ಥೋ ದದರ್ಶಾಥ ಬಹೂಂಶ್ಚೈವ ಮನೋರಮಾನ್ ।
ನಗರಾಂಶ್ಚ ನಗಾಂಶ್ಚೈವ ನದೀಶ್ಚ ವಿಮಲೋದಕಾಃ ।
ಪುರುಷಾನ್ ದೇವಕಲ್ಪಾಂಶ್ಚ ನಾರೀಶ್ಚ ಪ್ರಿಯದರ್ಶನಾಃ ॥೮॥

ಪಾರ್ಥನು ಅಲ್ಲಿ ಅನೇಕ ಮನೋಹರವಾದ ನಗರಗಳನ್ನೂ ಸ್ವಚ್ಛವಾದ ನೀರಿನ ಅನೇಕ ನದಿಗಳನ್ನೂ ದೇವತೆಗಳಂತಿದ್ದ ಪುರುಷರನ್ನೂ ಸುಂದರಿಯರಾದ ಸ್ತ್ರೀಯರನ್ನೂ ನೋಡಿದನು.

ತಾನ್ ಸರ್ವಾಂಸ್ತತ್ರ ದೃಷ್ಟ್ವಾಽಥ ಮುದಾ ಯುಕ್ತೋ ಧನಂಜಯಃ ।
ವಶೇ ಚಕ್ರೇ ಚ ರತ್ನಾನಿ ಲೇಭೇ ಚ ಸುಬಹೂನಿ ಚ ॥೯॥

ಅವರೆಲ್ಲರನ್ನು ನೋಡಿ ಹರ್ಷಗೊಂಡ ಅರ್ಜುನನು ಅವರನ್ನು ವಶಪಡಿಸಿಕೊಂಡು ಅವರಿಂದ ಬಹಳ ರತ್ನಗಳನ್ನು ಪಡೆದನು.

ಅಥ ರಾಜನ್ನತಿಕ್ರಮ್ಯ ನಿಷಧಂ ಶೈಲಮಾಯತಮ್ ।
ವಿವೇಶ ಮಧ್ಯಮಂ ವರ್ಷಂ ಪಾರ್ಥೋ ದಿವ್ಯಮಿಳಾವೃತಮ್ ॥೧೦॥

ರಾಜನೇ! ಅನಂತರ ಪಾರ್ಥನು ದೀರ್ಘವಾಗಿ ಹಬ್ಬಿರುವ ನಿಷಧಪರ್ವತವನ್ನು ದಾಟಿ ಮಧ್ಯಭಾಗದಲ್ಲಿರುವ ದಿವ್ಯವಾದ ಇಲಾವೃತವರ್ಷವನ್ನು ಪ್ರವೇಶಿಸಿದನು.

ತತ್ರ ದೇವೋಪಮಾನ್ ದಿವ್ಯಾನ್ ಪುರುಷಾನ್ ದೇವದರ್ಶನಾನ್ ।
ಅದೃಷ್ಟಪೂರ್ವಾನ್ ಸುಭಗಾನ್ ಸ ದದರ್ಶ ಧನಂಜಯಃ ॥೧೧॥

ಅಲ್ಲಿ ಧನಂಜಯನು ದೇವತೆಗಳಿಂತಿದ್ದ ದೇವತೆಗಳನ್ನು ನೋಡುವ ಸಾಮರ್ಥ್ಯವನ್ನು ಹೊಂದಿದ್ದ ಹಿಂದೆಂದೂ ನೋಡದಿದ್ದಂತಹ ಸುಂದರರಾದ ದಿವ್ಯಪುರುಷರನ್ನು ನೋಡಿದನು.

ಸದನಾನಿ ಚ ಶುಭ್ರಾಣಿ ನಾರೀಶ್ಚಾಪ್ಸರಸನ್ನಿಭಾಃ ।
ದೃಷ್ಟ್ವಾ ತಾನಹರದ್ ರಮ್ಯಾನ್ ಸ ತೈಶ್ಚ ದದೃಶೇ ತದಾ ॥೧೨॥

ಅರ್ಜುನನು ಅಲ್ಲಿ ಶುಭ್ರವಾದ ಮನೆಗಳನ್ನೂ ಅಪ್ಸರೆಯರಂತೆ ಕಂಗೊಳಿಸುವ ಸ್ತ್ರೀಯರನ್ನೂ ಮನೋಹರರಾದ ಪುರುಷರನ್ನೂ ನೋಡಿ ತಾನೂ ಸಹ ಅವರಿಂದ ನೋಡಲ್ಪಟ್ಟನು.

ಜಿತ್ವಾ ಚ ತಾನ್ ಮಹಾಭಾಗಾನ್ ಕರೇ ಚ ವಿನಿವೇಶ್ಯ ಸಃ ।
ರತ್ನಾನ್ಯಾದಾಯ ದಿವ್ಯಾನಿ ಭೂಷಣೈರ್ವಸನೈಃ ಸಹ ।
ಉದೀಚೀಮಥ ರಾಜೇಂದ್ರ ಯಯೌ ಪಾರ್ಥೋ ಮುದಾऽನ್ವಿತಃ॥೧೩॥

ರಾಜೇಂದ್ರನೇ! ಆ ಮಹಾನುಭಾವರನ್ನೂ ಗೆದ್ದು, ಅವರು ಕಪ್ಪಕಾಣಿಕೆಯನ್ನು ಕೊಡುವಂತೆಮಾಡಿ ಅವರಿಂದ ದಿವ್ಯವಾದ ರತ್ನಗಳನ್ನೂ ಭೂಷಣಗಳನ್ನೂ ಮತ್ತು ವಸ್ತ್ರಗಳನ್ನೂ ತೆಗೆದುಕೊಂಡು ಪಾರ್ಥನು ಸಂತೋಷದಿಂದ ಕೂಡಿದವನಾಗಿ ಉತ್ತರದಿಕ್ಕಿಗೆ ಪ್ರಯಾಣಮಾಡಿದನು.

ಸ ದದರ್ಶ ತತೋ ಮೇರುಂ ಶಿಖರಾಣಾಂ ಪ್ರಭುಂ ಮಹತ್ ।
ತಂ ಕಾಂಚನಮಯಂ ದಿವ್ಯಂ ಚತುರ್ವರ್ಣಂ ದುರಾಸದಮ್ ॥೧೪॥

ಅನಂತರ ಅವನು ಎಲ್ಲಾ ಪರ್ವತಗಳಿಗೆ ಒಡೆಯನಾದ ಸುವರ್ಣಮಯವಾದ ನಾಲ್ಕು ಬಣ್ಣಗಳಿಂದ ಕೂಡಿದ ತಲುಪಲು ಅಸಾಧ್ಯವಾದ ದಿವ್ಯವಾದ ಮೇರುಪರ್ವತವನ್ನು ನೋಡಿದನು.

ಆಯತಂ ಶತಸಾಹಸ್ರಂ ಯೋಜನಾನಾಂ ತು ಸುಸ್ಥಿರಮ್ ।
ಜ್ವಲಂತಮಚಲಂ ಮೇರುಂ ತೇಜೋರಾಶಿಮನುತ್ತಮಮ್ ॥೧೫॥

ನೂರು ಸಾವಿರ ಯೋಜನ ಎತ್ತರವಾಗಿ ಭೂಮಿಯಲ್ಲಿ ಸ್ಥಿರವಾಗಿನಿಂತಿದ್ದ ಶ್ರೇಷ್ಠವಾದ ತೇಜೋರಾಶಿಯಂತೆ ಆ ಮೇರುಪರ್ವತವು ಕಂಗೊಳಿಸುತ್ತಿತ್ತು.

ಆಕ್ಷಿಪಂತಂ ಪ್ರಭಾಂ ಭಾನೋಃ ಸ್ವಶೃಂಗೈಃ ಕಾಂಚನೋಜ್ಜ್ವಲೈಃ ।
ಕಾಂಚನಾಭರಣಂ ದಿವ್ಯಂ ದೇವಗಂಧರ್ವಸೇವಿತಮ್ ॥೧೬॥

ಕಾಂಚನಮಯವಾದ ತನ್ನ ಶೃಂಗಗಳಿಂದ ಸೂರ್ಯಪ್ರಕಾಶವನ್ನು ಪ್ರತಿಫಲಿಸುತ್ತಾ ಕಾಂಚನ ಆಭರಣಗಳನ್ನು ಹೊಂದಿದ ಆ ದಿವ್ಯವಾದ ಪರ್ವತವು ದೇವತೆಗಳಿಂದ ಮತ್ತು ಗಂಧರ್ವರಿಂದ ಸೇವಿತವಾಗಿದೆ.

ನಿತ್ಯಪುಷ್ಪಫಲೋಪೇತಂ ಸಿದ್ಧಚಾರಣಸೇವಿತಮ್ ।
ಅಪ್ರಮೇಯಮನಾಧೃಷ್ಯಮಧರ್ಮಬಹುಲೈರ್ಜನೈಃ ॥೧೭॥

ನಿತ್ಯವೂ ಫಲಪುಷ್ಪಗಳಿಂದ ತುಂಬಿದ ವೃಕ್ಷಗಳಿಂದ ಕೂಡಿದ್ದು ಸಿದ್ಧರಿಂದ ಮತ್ತು ಚಾರಣರಿಂದ ಸೇವಿಸಲ್ಪಟ್ಟ ಅದು ಅದರ ಸ್ವರೂಪವೇ ತಿಳಿಯಲು ಅಸಾಧ್ಯವಾದದ್ದಾಗಿ ಅಧರ್ಮಿಷ್ಠರಿಂದ ಎಂದೂ ಆಕ್ರಮಣಕ್ಕೆ ಒಳಗಾಗದೆ ಇದ್ದಿತು.

ವ್ಯಾಳೈರಾಚರಿತಂ ಘೋರೈರ್ದಿವ್ಯೌಷಧಿವಿದೀಪಿತಮ್ ।
ಸ್ವರ್ಗಮಾವೃತ್ಯ ತಿಷ್ಠಂತಮುಚ್ಛ್ರಾಯೇಣ ಮಹಾಗಿರಿಮ್ ॥೧೮॥

ಅದು ಘೋರವಾದ ವ್ಯಾಳಮೃಗಗಳ ಸಂಚಾರದಿಂದ ಕೂಡಿದ್ದು ದಿವ್ಯ ಔಷಧಿಗಳಿಂದ ಬೆಳಗುತ್ತಿದ್ದಿತು. ಆ ಮಹಾಪರ್ವತವು ತನ್ನ ಔನ್ನತ್ಯದಿಂದ ಸ್ವರ್ಗವನ್ನು ಮುಚ್ಚುವಂತೆ ಇದ್ದಿತು.

ಅಗಮ್ಯಂ ಮನಸಾऽಪ್ಯೇನಂ ನದೀವೃಕ್ಷಸಮನ್ವಿತಮ್ ।
ನಾನಾವಿಹಗಸಂಘೈಶ್ಚ ನಾದಿತಂ ಸುಮನೋಹರೈಃ ॥೧೯॥

ಉಳಿದವರು ಮನಸ್ಸಿನಿಂದಲೂ ತಲುಪಲು ಅಸಾಧ್ಯವಾಗಿ ನದಿಗಳಿಂದ ಮತ್ತು ವೃಕ್ಷಗಳಿಂದ ಕೂಡಿದ್ದು ಅತ್ಯಂತ ಮನೋಹರವಾದ ನಾನಾಪಕ್ಷಿಗಳ ಸಮೂಹದ ನಾದದಿಂದಲೂ ಕೂಡಿದ್ದಿತು.

ತಂ ದೃಷ್ಟ್ವಾ ಫಲ್ಗುನೋ ಮೇರುಂ ಪ್ರೀತಿಮಾನಭವತ್ ತದಾ ।
ಮೇರೋರಿಲಾವೃತಂ ವರ್ಷಂ ಸರ್ವತಃ ಪರಿಮಂಡಲಮ್ ॥೨೦॥

ಫಲ್ಗುನನು ಆ ಮೇರುಪರ್ವತವನ್ನು ನೋಡಿ ಸಂತೋಷವನ್ನು ಹೊಂದಿದನು. ಮೇರುಪರ್ವತದ ಸುತ್ತಲೂ ಮಂಡಲಾಕಾರವಾಗಿ ಇಳಾವೃತವರ್ಷವು ಇದೆ.

ಮೇರೋಸ್ತು ದಕ್ಷಿಣೇ ಪಾರ್ಶ್ವೇ ಜಂಬೂರ್ನಾಮ ವನಸ್ಪತಿಃ ।
ನಿತ್ಯಪುಷ್ಪಫಲೋಪೇತಃ ಸಿದ್ಧಚಾರಣಸೇವಿತಃ ॥೨೧॥

ಮೇರುವಿನ ದಕ್ಷಿಣಪಾರ್ಶ್ವದಲ್ಲಿ ಜಂಬೂ ಎಂಬ ವನಸ್ಪತಿಯು ಯಾವಾಗಲೂ ಫಲ ಪುಷ್ಪಗಳಿಂದ ಕೂಡಿದ್ದು ಸಿದ್ಧಚಾರಣರಿಂದ ಸೇವಿತವಾಗಿದೆ.

ಆಸ್ವರ್ಗಮುಚ್ಛ್ರಿತಾ ರಾಜಂಸ್ತಸ್ಯ ಶಾಖಾ ವನಸ್ಪತೇಃ ।
ಯಸ್ಯ ನಾಮ್ನಾ ತ್ವಿದಂ ದ್ವೀಪಂ ಜಂಬೂದ್ವೀಪಮಿತಿ ಶ್ರುತಮ್ ।
ತಂ ಚ ಜಂಬೂಂ ದದರ್ಶಾಥ ಸವ್ಯಸಾಚೀ ಪರಂತಪಃ ॥೨೨॥

ಜನಮೇಜಯರಾಜನೇ! ಆ ಜಂಬೂವೃಕ್ಷದ ಕೊಂಬೆಗಳು ಸ್ವರ್ಗದವರೆಗೂ ಔನ್ನತ್ಯವನ್ನು ಹೊಂದಿವೆ. ಆ ವೃಕ್ಷದ ಹೆಸರಿನಿಂದಲೇ ಈ ದ್ವೀಪಕ್ಕೆ ಜಂಬೂದ್ವೀಪ ಎಂದು ಹೆಸರು ಬಂದಿದೆ. ಪರಂತಪನೂ ಸೌವ್ಯಸಾಚಿಯೂ ಆದ ಅರ್ಜುನನು ಆ ಜಂಬೂವೃಕ್ಷವನ್ನು ನೋಡಿದನು.

ತೌ ದೃಷ್ಟ್ವಾऽಪ್ರತಿಮೌ ಲೋಕೇ ಜಂಬೂಂ ಮೇರುಂ ಚ ಸಂಸ್ಥಿತೌ।
ಪ್ರೀತಿಮಾನಭವದ್ ರಾಜನ್ ಸರ್ವತಃ ಸ ವಿಲೋಕಯನ್ ॥೨೩॥

ರಾಜನೇ! ಅಸದೃಶವಾಗಿ ಬೆಳೆದು ನಿಂತಿದ್ದ ಆ ಜಂಬೂವೃಕ್ಷವನ್ನು ಮತ್ತು ಮೇರುಪರ್ವತವನ್ನು ನೋಡಿ ಸಂತೋಷಗೊಂಡ ಅರ್ಜುನನು ಪುನಃ ಅವುಗಳನ್ನು ಎಲ್ಲಾ ಕಡೆಗಳಿಲ್ಲಿಯೂ ಅವಲೋಕಿಸಿದನು.

ತತ್ರ ಲೇಭೇ ತತೋ ಜಿಷ್ಣುಃ ಸಿದ್ಧೈರ್ದಿವ್ಯೈ ರ್ಯಶ್ಚ ಚಾರಣೈಃ ।
ರತ್ನಾನಿ ಬಹುಸಾಹಸ್ರಂ ವಸ್ತ್ರಾಣ್ಯಾಭರಣಾನಿ ಚ ॥೨೪॥

ಅಲ್ಲಿ ಅರ್ಜುನನು ದಿವ್ಯರಾದ ಸಿದ್ಧಚಾರಣರಿಂದ ಅನೇಕ ಸಹಸ್ರರತ್ನಗಳನ್ನು ವಸ್ತ್ರಗಳನ್ನು ಮತ್ತು ಆಭರಣಗಳನ್ನು ಪಡೆದನು.

ಅನ್ಯಾನಿ ಚ ಮಹಾರ್ಹಾಣಿ ತತ್ರ ಲಬ್ಧ್ವಾ ಽರ್ಜುನಸ್ತದಾ ।
ಆಮಂತ್ರಯಿತ್ವಾ ತಾನ್ ಸರ್ವಾನ್ ಯಜ್ಞಮುದ್ದಿಶ್ಯ ವೈ ಗುರೋಃ ।
ಬಹೂನ್ಯಾದಾಯ ರತ್ನಾನಿ ಗಮನಾಯೋಪಚಕ್ರಮೇ ॥೨೫॥

ಅರ್ಜುನನು ಆಗ ಅಲ್ಲಿ ಉಳಿದ ಬೆಲೆಬಾಳುವ ಪದಾರ್ಥಗಳನ್ನು ಪಡೆದು, ಅವರೆಲ್ಲರನ್ನೂ ತನ್ನ ಅಣ್ಣನ ಯಜ್ಞಕ್ಕೆ ಬರಬೇಕೆಂದು ಆಹ್ವಾನಿಸಿ ಎಲ್ಲ ರತ್ನಗಳನ್ನೂ ತೆಗೆದುಕೊಂಡು ಅಲ್ಲಿಂದ ಹೊರಡಲು ಉಪಕ್ರಮಿಸಿದನು.

ಮೇರುಂ ಪ್ರದಕ್ಷಿಣಂ ಕೃತ್ವಾ ಪರ್ವತಪ್ರವರಂ ಪ್ರಭುಃ ।
ಯಯೌ ಜಂಬೂನದೀತೀರೇ ನದೀಂ ಶ್ರೇಷ್ಠಾಂ ವಿಲೋಕಯನ್ ॥೨೬॥

ಪ್ರಭುವಾದ ಅರ್ಜುನನು ಪರ್ವತಶ್ರೇಷ್ಠವಾದ ಮೇರುವಿಗೆ ಪ್ರದಕ್ಷಿಣೆಯನ್ನು ಮಾಡಿ ಶ್ರೇಷ್ಠವಾದ ಜಂಬೂನದಿಯನ್ನು ನೋಡುತ್ತಾ ಅದರ ತೀರದಲ್ಲಿಯೇ ನಡೆದನು.

ಸ ತಾಂ ಮನೋರಮಾಂ ದಿವ್ಯಾಂ ಜಂಬೂಸ್ವಾದುರಸಾವಹಾಮ್ ।
ಹೈಮಪಕ್ಷಿಗಣೈರ್ಜುಷ್ಟಾಂ ಸೌವರ್ಣಜಲಜಾಕುಲಾಮ್ ॥೨೭॥

ಆ ನದಿಯು ದಿವ್ಯವೂ ಮನೋರಮವೂ ಆಗಿದ್ದು ಜಂಬೂವೃಕ್ಷದ ಹಣ್ಣಿನ ಮಧುರರಸದ ಹೊಳೆಯಾಗಿ ಹರಿಯುತ್ತಿದ್ದಿತು. ಅದರಲ್ಲಿ ಸುವರ್ಣಮಯವಾದ ಪಕ್ಷಿಗಳ ಸಮೂಹವೂ ಸುವರ್ಣಮಯವಾದ ಕಮಲಗಳೂ ತುಂಬಿದ್ದವು.

ಹೈಮಪಂಕಾಂ ಹೈಮಜಲಾಂ ಶುಭಾಂ ಸೌವರ್ಣವಾಲುಕಾಮ್।
ಕ್ವಚಿತ್ ಸೌವರ್ಣಪದ್ಮೈಶ್ಚ ಸಂಕುಲಾಂ ಹೈಮಪುಷ್ಪಕೈಃ ॥೨೮॥

ಆ ನದಿಯು ಸುವರ್ಣಮಯವಾದ ಕೆಸರಿನಿಂದಲೂ ಸುವರ್ಣವರ್ಣದ ನೀರಿನಿಂದಲೂ ಸುವರ್ಣಮಯವಾದ ಮರಳುಗಳಿಂದಲೂ ಸುವರ್ಣಮಯವಾದ ಪದ್ಮಗಳಿಂದಲೂ ಮತ್ತು ಸುವರ್ಣಮಯವಾದ ಪುಷ್ಪಗಳಿಂದಲೂ ಕೂಡಿ ಶುಭವಾಗಿದ್ದಿತು.

ಕ್ವಚಿತ್ ಸುಪುಷ್ಪಿತೈಃ ಕೀರ್ಣಾಂ ಸುವರ್ಣಕುಮುದೋತ್ಪಲೈಃ।
ಕ್ವಚಿತ್ ತೀರರುಹೈಃ ಕೀರ್ಣಾಂ ಹೈಮವೃಕ್ಷೈಃ ಸುಪುಷ್ಪಿತೈಃ ॥೨೯॥

ಕೆಲವು ಪ್ರದೇಶದಲ್ಲಿ ಪೂರ್ಣವಾಗಿ ಅರಳಿದ ಸುವರ್ಣಮಯವಾದ ಕುಮುದ ಮತ್ತು ಉತ್ಪಲಗಳಿಂದ ಕೂಡಿದ್ದಿತು. ಇನ್ನು ಕೆಲವುಕಡೆ ತೀರದಲ್ಲಿ ಬೆಳೆದ ಪುಷ್ಪಭರಿತವಾದ ಸುವರ್ಣಮಯವಾದ ವೃಕ್ಷಗಳಿಂದ ನಿಬಿಡವಾಗಿದ್ದಿತು.

ತೀರ್ಥೈಶ್ಚ ರುಗ್ಮಸೋಪಾನೈಃ ಸರ್ವತಃ ಸಂಕುಲಾಂ ಶುಭಾಮ್ ।
ವಿಮಲೈರ್ಮಣಿಜಾತೈಶ್ಚ ನೃತ್ತಗೀತರವೈರ್ಯುತಾಮ್ ॥೩೦॥

ಆ ನದಿಯ ಸಮೀಪದಲ್ಲಿ ಎಲ್ಲಾಕಡೆಗಳಲ್ಲಿಯೂ ಸುವರ್ಣಮಯವಾದ ಸೋಪಾನಗಳನ್ನು ಹೊಂದಿದ್ದ ಶುಭಪ್ರದವಾದ ಅನೇಕ ತೀರ್ಥಗಳಿದ್ದವು. ಅವುಗಳು ವಿಮಲವಾದ ಮಣಿಸಮೂಹಗಳಿಂದಲೂ ನೃತ್ಯಗೀತ ಧ್ವನಿಗಳಿಂದಲೂ ತುಂಬಿದ್ದವು.

ದೀಪ್ತೈರ್ಹೇಮವಿತಾನೈಶ್ಚ ಸಮಂತಾಚ್ಛೋಭಿತಾಂ ಶುಭಾಮ್ ।
ತಥಾವಿಧಾಂ ನದೀಂ ದೃಷ್ಟ್ವಾ ಪಾರ್ಥಸ್ತಾಂ ಪ್ರಶಶಂಸ ಹ ॥೩೧॥

ಪ್ರಕಾಶಮಾನವಾದ ಸುವರ್ಣಮಯವಾದ ತೋರಣಗಳಿಂದ ಎಲ್ಲಾ ಕಡೆಗಳಲ್ಲಿಯೂ ಶೋಭಿಸುತ್ತಿದ್ದ ಅಂತಹ ಆಶುಭವಾದ ನದಿಯನ್ನು ನೋಡಿ ಪಾರ್ಥನು ಅದನ್ನು ಪ್ರಶಂಸಿಸಿದನು.

ಅದೃಷ್ಟಪೂರ್ವಾಂ ರಾಜೇಂದ್ರ ದೃಷ್ಟ್ವಾ ಹರ್ಷಮವಾಪ ಚ ।
ದರ್ಶನೀಯಾನ್ ನದೀತೀರೇ ಪುರುಷಾನ್ ಸುಮನೋಹರಾನ್ ॥೩೨॥

ತಾನ್ ನದೀಸಲಿಲಾಹಾರಾನ್ ಸದಾರಾನಮರೋಪಮಾನ್ ।
ನಿತ್ಯಂ ಸುಖಮುದಾ ಯುಕ್ತಾನ್ ಸರ್ವಾಲಂಕಾರಶೋಭಿತಾನ್।
ತೇಭ್ಯೋ ಬಹೂನಿ ರತ್ನಾನಿ ತದಾ ಲೇಭೇ ಧನಂಜಯಃ ॥೩೩॥

ರಾಜೇಂದ್ರನೇ! ಹಿಂದೆ ಎಂದೂ ನೋಡದಿದ್ದ ಆ ನದಿಯನ್ನು ನೋಡಿ ಅರ್ಜುನನು ಸಂತೋಷಗೊಂಡನು. ಆ ನದಿಯ ತೀರದಲ್ಲಿ ಬಹಳ ಮನೋಹರವಾದ ಸುಂದರರಾದ ದೇವತೆಗಳಂತೆ ಶೋಭಿಸುವ ತಮ್ಮ ತಮ್ಮ ಪತ್ನಿಯರಿಂದ ಕೂಡಿದ ಆ ನದಿಯನೀರನ್ನೇ ಆಹಾರವಾಗಿ ಉಪಯೋಗಿಸುವ ಸರ್ವಾಲಂಕಾರ ಶೋಭಿತರಾದ ವಿಷಯ- ಸುಖಗಳಿಂದಲೂ ಮತ್ತು ಮನಸ್ಸಿನ ಹರ್ಷಗಳಿಂದಲೂ ಯುಕ್ತರಾದ ಅನೇಕ ಪುರುಷರನ್ನು ನೋಡಿ ಅವರಿಂದ ಬಹಳ ರತ್ನಗಳನ್ನು ಸ್ವೀಕರಿಸಿದನು.

ದಿವ್ಯಂಜಾಂಬೂನದಂ ಹೈಮಭೂಷಣಾನಿ ಚ ಪೇಶಲಮ್ ।
ಲಬ್ಧ್ವಾ ತಾನ್ ದುರ್ಲಭಾನ್ ಪಾರ್ಥಃ ಪ್ರತೀಚೀಂ ಪ್ರಯಯೌ ದಿಶಮ್ ।
ನಾರೀಣಾಂ ರಕ್ಷಿತಂ ದೇಶಮಜಯಚ್ಚಾರ್ಜುನಸ್ತತಃ ॥೩೪॥

ಪಾರ್ಥನು ಅವರಿಂದ ದಿವ್ಯವಾದ ಸುವರ್ಣವನ್ನೂ ಸುಂದರವಾದ ದುರ್ಲಭವಾದ ಸುವರ್ಣಮಯವಾದ ಆಭರಣಗಳನ್ನೂ ಪಡೆದು ಅಲ್ಲಿಂದ ಪಶ್ಚಿಮ ಹೊರಟನು. ಅನಂತರ ಅರ್ಜುನನು ನಾರಿಯರಿಂದ ರಕ್ಷಿತವಾದ (ನಾಗಗಳಿಂದ ರಕ್ಷಿತವಾದ) ಆ ದೇಶವನ್ನು ಜಯಿಸಿದನು.

ತತೋ ಗತ್ವಾ ಮಹಾರಾಜ ವಾರುಣೀಂ ಪಾಕಶಾಸನಿಃ ।
ಗಂಧಮಾದನಮಾಸಾದ್ಯ ತತ್ರಸ್ಥಾನಜಯತ್ ಪ್ರಭುಃ ॥೩೫॥

ಮಹಾರಾಜನೇ! ಅನಂತರ ಪಾಕಶಾಸನಿಯಾದ ಅರ್ಜುನನು ಇನ್ನೂ ಪಶ್ಚಿಮಕ್ಕೆ ಪ್ರಯಾಣಮಾಡಿ ಗಂಧಮಾಧನಪರ್ವತವನ್ನು ತಲುಪಿ ಅಲ್ಲಿದ್ದ ಪುರುಷರನ್ನು ಜಯಿಸಿದನು.

ತಂ ಗಂಧಮಾದನಂ ರಾಜನ್ನತಿಕ್ರಮ್ಯ ತತೋಽರ್ಜುನಃ ।
ಕೇತುಮಾಲಂ ವಿವೇಶಾಥ ವರ್ಷಂ ರತ್ನಸಮನ್ವಿತಮ್ ॥೩೬॥

ರಾಜನೇ ಪ್ರಭುವಾದ ಅರ್ಜುನನು ಅನಂತರ ಗಂಧಮಾಧನ ಪರ್ವತವನ್ನು ದಾಟಿ ಬಹುರತ್ನ ಸಮನ್ವಿತವಾದ ಕೇತುಮಾಲಪ್ರದೇಶವನ್ನು ಪ್ರವೇಶಿಸಿದನು.

ಸೇವಿತಂ ದೇವಕಲ್ಪೈಶ್ಚ ನಾರೀಭಿಃ ಪ್ರಿಯದರ್ಶನೈಃ ।
ತಂ ಜಿತ್ವಾ ಚಾರ್ಜುನೋ ರಾಜನ್ ಕರೇಣ ವಿನಿವೇಶ್ಯ ಚ ॥೩೭॥

ಆ ವರ್ಷವು ದೇವತೆಗಳಂತೆ ಇರುವ ಪುರುಷರಿಂದಲೂ ಮನೋಹರವಾದ ಸ್ತ್ರೀಯರಿಂದಲೂ ಕೂಡಿದ್ದಿತು. ರಾಜನೇ ಅರ್ಜುನನು ಆ ವರ್ಷವನ್ನು ಗೆದ್ದು ಅವರು ಕಪ್ಪಕಾಣಿಕೆಗಳನ್ನು ಕೊಡುವಂತೆ ಮಾಡಿದನು.

ಆಹೃತ್ಯ ತತ್ರ ರತ್ನಾನಿ ದುರ್ಲಭಾನಿ ತಥಾಽರ್ಜುನಃ ।
ಪುನಶ್ಚ ಪರಿವೃತ್ಯಾಥ ಮಧ್ಯಂ ದೇಶಮಿಳಾವೃತಮ್ ॥೩೮॥

ಅರ್ಜುನನು ಅಲ್ಲಿ ದುರ್ಲಭವಾದ ರತ್ನಗಳನ್ನು ಪಡೆದು ಪುನಃ ಹಿಂದಿರುಗಿ ಬಂದು ಮಧ್ಯಭಾಗದಲ್ಲಿರುವ ಇಳಾವೃತ ಖಂಡಕ್ಕೆ ಬಂದನು.

ಗತ್ವಾ ಪ್ರಾಚೀಂ ದಿಶಂ ರಾಜನ್ ಸವ್ಯಸಾಚೀ ಪರಂತಪಃ ।
ಮೇರುಮಂದರಯೋರ್ಮಧ್ಯೇ ಶೈಲೋದಾಮಭಿತೋ ನದೀಮ್ ॥೩೯॥

ಯೇ ತೇ ಕೀಚಕವೇಣೂನಾಂ ಛಾಯಾಂ ರಮ್ಯಾಮುಪಾಸತೇ ।
ಖಿಷಾನ್ ಋಷಾಂಶ್ಚ ನದ್ಯೋತಾನ್ ಪ್ರಘಸಾನ್ ದೀರ್ಘವೇಣಿಕಾನ್ ।
ಪಶುಪಾಂಶ್ಚ ಕುಣಿಂದಾಂಶ್ಚ ತಂಕಣಾನ್ ಪರತಂಕಣಾನ್ ॥೪೦॥

ಏತಾನ್ ಸಮಸ್ತಾನ್ ಜಿತ್ವಾ ಸ ಕರೇ ಚ ವಿನಿವೇಶ್ಯ ಚ ।
ರತ್ನಾನ್ಯಾದಾಯ ಸರ್ವೇಭ್ಯೋ ಮಾಲ್ಯವಂತಂ ತತೋ ಯಯೌ ॥೪೧॥

ರಾಜನೇ! ಸವ್ಯಸಾಚಿಯೂ ಪರಂತಪನೂ ಆದ ಅರ್ಜುನನು ಅಲ್ಲಿಂದ ಪೂರ್ವದಿಕ್ಕಿಗೆ ಪ್ರಯಾಣಮಾಡಿ ಮೇರು ಮಂದರ ಪರ್ವತಗಳ ಮಧ್ಯೆ ಇರುವ ಶೈಲೋದಾ ನದಿಯ ಸುತ್ತಲೂ ಇರುವ ಕೀಚಕ ಮತ್ತು ವೇಣುಗುಲ್ಮಗಳ ಸುಂದರವಾದ ಛಾಯೆಯಲ್ಲಿ ವಾಸಿಸುವ ಖಿಷರನ್ನು ಋಷರನ್ನು ನದ್ಯೋತರನ್ನು ಪ್ರಘಸರನ್ನು ದೀರ್ಘವೈಣಿಕರನ್ನು ಪಶುಪರನ್ನು ಕುಣಿಂದರನ್ನು ತಕಂಣರನ್ನು ಪರತಂಕಣರನ್ನು ಎಲ್ಲರನ್ನೂ ಗೆದ್ದು ಅವರಿಂದ ಕಪ್ಪವನ್ನು ಪಡೆದು ಎಲ್ಲರೂ ಕೊಟ್ಟ ರತ್ನಗಳನ್ನು ಸ್ವೀಕರಿಸಿ ಅಲ್ಲಿಂದ ಮಾಲ್ಯವಾನ್ ಪರ್ವತದ ಕಡೆಗೆ ನಡೆದನು.

ತಂ ಮಾಲ್ಯವಂತಂ ಶೈಲೇಂದ್ರಂ ಸಮತಿಕ್ರಮ್ಯ ಪಾಂಡವಃ ।
ಭದ್ರಾಶ್ವಂ ಪ್ರವಿವೇಶಾಥ ವರ್ಷಂ ಸ್ವರ್ಗೋಪಮಂ ಶುಭಮ್ ॥೪೨॥

ಪಾಂಡುಪುತ್ರನಾದ ಅರ್ಜುನನು ಅನಂತರ ಆ ಮಾಲ್ಯವಾನ್ ಪರ್ವತವನ್ನು ದಾಟಿ ಸ್ವರ್ಗಕ್ಕೆ ಸದೃಶವಾದ ಶುಭವಾದ ಭದ್ರಾಶ್ವವರ್ಷವನ್ನು ಪ್ರವೇಶಿಸಿದನು.

ತತ್ರಾಮರೋಪಮಾನ್ ರಮ್ಯಾನ್ ಪುರುಷಾನ್ ಸುಖಿಸಂಯುತಾನ್ ।
ಜಿತ್ವಾ ತಾನ್ ಸ್ವವಶೇ ಕೃತ್ವಾ ಕರೇ ಚ ವಿನಿವೇಶ್ಯ ಚ ॥೪೩॥

ಆಹೃತ್ಯ ಸರ್ವರತ್ನಾನಿ ಅಸಂಖ್ಯಾನಿ ತತಸ್ತತಃ ।
ನೀಲಂ ನಾಮ ಗಿರಿಂ ಗತ್ವಾ ತತ್ರಸ್ಥಾನಜಯತ್ ಪ್ರಭುಃ ॥೪೪॥

ಅಲ್ಲಿ ದೇವತೆಗಳಂತೆ ಇದ್ದ ಸುಖಯುಕ್ತರಾದ ಸುಂದರಪುರುಷರನ್ನು ಗೆದ್ದು ತನ್ನ ವಶಪಡಿಸಿಕೊಂಡು ಅವರು ಕಪ್ಪಕಾಣಿಕೆಗಳನ್ನು ಕೊಡುವಂತೆಮಾಡಿ ಅವರುಕೊಟ್ಟ ಅಸಂಖ್ಯಾತವಾದ ಎಲ್ಲಾ ರತ್ನಗಳನ್ನೂ ಸ್ವೀಕರಿಸಿ ನೀಲಪರ್ವತಕ್ಕೆ ಹೋಗಿ ಅಲ್ಲಿದ್ದವರನ್ನು ಗೆದ್ದನು.

ತತೋ ಜಿಷ್ಣುರತಿಕ್ರಮ್ಯ ಪರ್ವತಂ ನೀಲಮಾಯತಮ್ ।
ವಿವೇಶ ರಮ್ಯಕಂ ವರ್ಷಂ ಸಂಕೀರ್ಣಂ ಮಿಥುನೈಃ ಶುಭೈಃ ॥೪೫॥

ಅನಂತರ ಅರ್ಜುನನು ದೀರ್ಘವಾಗಿದ್ದ ನೀಲಪರ್ವತನ್ನು ದಾಟಿ ಯಾವಾಗಲೂ ಸ್ತ್ರೀಪುರುಷರ ಜೋಡಿಯಿಂದ ನಿಬಿಡವಾದ ರಮ್ಯಕವರ್ಷವನ್ನು ಪ್ರವೇಶಿಸಿದನು.

ತಂ ದೇಶಮಥ ಜಿತ್ವಾ ಸ ಕರೇ ಚ ವಿನಿವೇಶ್ಯ ಚ ।
ಅಜಯಚ್ಚಾಪಿ ಬೀಭತ್ಸುರ್ದೇಶಂ ಗುಹ್ಯಕರಕ್ಷಿತಮ್ ॥೪೬॥

ಬೀಭತ್ಸುವು ಆ ದೇಶವನ್ನು ಗೆದ್ದು ಕಪ್ಪಕಾಣಿಕೆಗಳನ್ನು ಕೊಡುವಂತೆಮಾಡಿ ಅನಂತರ ಗುಹ್ಯಕರಕ್ಷಿತವಾದ ದೇಶವನ್ನು ಜಯಿಸಿದನು.

ತತ್ರ ಲೇಭೇ ಚ ರಾಜೇಂದ್ರ ಸೌವರ್ಣಾನ್ ಮೃಗಪಕ್ಷಿಣಃ ।
ಅಗೃಹ್ಣಾದ್ ಯಜ್ಞಭೃತ್ಯರ್ಥಂ ರಮಣೀಯಾನ್ ಮನೋರಮಾನ್ ॥೪೭॥

ರಾಜೇಂದ್ರನೇ! ಅಲ್ಲಿ ಅವನು ಸುವರ್ಣಮಯವಾದ ಮೃಗಗಳನ್ನು ಮತ್ತು ಪಕ್ಷಿಗಳನ್ನು ಪಡೆದನು. ಧರ್ಮರಾಜನ ಯಜ್ಞಶಾಲೆಯ ಸೌಂದರ್ಯವೃದ್ಧಿಗೆ ಕಾರಣವಾಗುತ್ತದೆ ಎಂಬ ಉದ್ದೇಶದಿಂದ ಸುಂದರವಾದ ಸುವರ್ಣಮಯ ಪ್ರತಿಮೆಗಳನ್ನು ತೆಗೆದುಕೊಂಡನು.

ಅನ್ಯಾಂಶ್ಚ ಲಬ್ಧ್ವಾ ರತ್ನಾನಿ ಪಾಂಡವೋಽಥ ಮಹಾಬಲಃ ।
ಗಂಧರ್ವರಕ್ಷಿತಂ ದೇಶಮಜಯತ್ ಸಗಣಂ ತದಾ ॥೪೮॥

ಮಹಾಬಲನಾದ ಪಾಂಡವನು ಬೇರೆ ರತ್ನಗಳನ್ನು ಪಡೆದು ಗಂಧರ್ವರ ಗಣಸಹಿತವಾದ ಗಂಧರ್ವರ ದೇಶವನ್ನು ಜಯಿಸಿದನು.

ತತ್ರ ರತ್ನಾನಿ ದಿವ್ಯಾನಿ ಲಬ್ಧ್ವಾ ರಾಜನ್ನಥಾರ್ಜುನಃ ।
ಶ್ವೇತಪರ್ವತಮಾಸಾದ್ಯ ಜಿತ್ವಾ ಪರ್ವತವಾಸಿನಃ ॥೪೯॥

ರಾಜನೇ! ಅಲ್ಲಿ ಅರ್ಜುನನು ದಿವ್ಯವಾದ ಅನೇಕ ರತ್ನಗಳನ್ನು ಪಡೆದು ಶ್ವೇತಪರ್ವತಕ್ಕೆ ಪುನಃ ತಿರುಗಿ ಬಂದು ಶ್ವೇತಪರ್ವತವಾಸಿಗಳನ್ನು ಜಯಿಸಿದನು.

ಸ ಶ್ವೇತಂ ಪರ್ವತಂ ರಾಜನ್ ಸಮತಿಕ್ರಮ್ಯ ಪಾಂಡವಃ ।
ವರ್ಷಂ ಹಿರಣ್ಯಕಂ ನಾಮ ವಿವೇಶಾಥ ಮಹೀಪತೇ ॥೫೦॥

ಮಹೀಪತಿಯೇ! ಪಾಂಡವನು ಶ್ವೇತಪರ್ವತವನ್ನು ದಾಟಿ ಹಿರಣ್ಯಕವೆಂಬ ವರ್ಷವನ್ನು ಪ್ರವೇಶಿಸಿದನು.

ಸ ತು ದೇಶೇಷು ರಮ್ಯೇಷು ಗಂತುಂ ತತ್ರೋಪಚಕ್ರಮೇ ।
ಮಧ್ಯೇ ಪ್ರಾಸಾದವೃಂದೇಷು ನಕ್ಷತ್ರಾಣಾಂ ಶಶೀ ಯಥಾ ॥೫೧॥

ಅವನು ಆ ವರ್ಷದಲ್ಲಿ ನಕ್ಷತ್ರಗಳ ಮಧ್ಯದಲ್ಲಿ ಚಲಿಸುವ ಚಂದ್ರನಂತೆ ಪ್ರಾಸಾದಸಮೂಹಗಳ ಮಧ್ಯೆ ನಡೆದಾಡಲು ಪ್ರಾರಂಭಿಸಿದನು.

ಮಹಾಪಥೇಷು ರಾಜೇಂದ್ರ ಸರ್ವತೋ ಯಾಂತಮರ್ಜುನಮ್।
ಪ್ರಾಸಾದವರಶೃಂಗಸ್ಥಾಃ ಪರಯಾ ವೀರ್ಯಶೋಭಯಾ ।
ದದೃಶುಸ್ತಾಃ ಸ್ತ್ರಿಯಃ ಸರ್ವಾಃ ಪಾರ್ಥಮಾತ್ಮಯಶಸ್ಕರಮ್ ॥೫೨॥

ರಾಜೇಂದ್ರನೇ! ಮಹಾಮಾರ್ಗಗಳಲ್ಲಿ ಎಲ್ಲ ಕಡೆಗಳಲ್ಲಿಯೂ ಸಂಚರಿಸುವ ಶ್ರೇಷ್ಠವಾದ ಪರಾಕ್ರಮ ಮತ್ತು ಕಾಂತಿಯಿಂದ ಶೋಭಿಸುವ ಆತ್ಮಯಶಸ್ಕರನಾದ ಅರ್ಜುನನನ್ನು ಅಲ್ಲಿನ ಎಲ್ಲಾ ಸ್ತ್ರೀಯರು ತಮ್ಮ ಉಪ್ಪರಿಗೆಯ ಮೇಲಿನ ಶಿಖರಗಳನ್ನು ಏರಿ ನೋಡಿದರು.

ತಂ ಕಲಾಪಧರಂ ಶೂರಂ ಸರಥಂ ಸಾನುಗಂ ಪ್ರಭುಮ್ ।
ಸವರ್ಮಾಣಂ ಸಕಿರೀಟಂ ವೈ ಸನ್ನದ್ಧಂ ಸಪರಿಚ್ಛದಮ್ ॥೫೩॥

ಸುಕುಮಾರಂ ಮಹಾಸತ್ತ್ವಂ ತೇಜೋರಾಶಿಮನುತ್ತಮಮ್ ।
ಶಕ್ರೋಪಮಮಮಿತ್ರಘ್ನಂ ಪರವಾರಣವಾರಣಮ್ ।
ಪಶ್ಯಂತಃ ಸ್ತ್ರೀಗಣಾಸ್ತತ್ರ ಶಕ್ತಿಪಾಣಿಂ ಸ್ಮ ಮೇನಿರೇ ॥೫೪॥

ರಥದಿಂದ ಯುಕ್ತನಾಗಿ ಅನುಚರರಿಂದ ಕೂಡಿ ಆಭರಣಗಳನ್ನೂ ಕವಚವನ್ನೂ ಮತ್ತು ಕೀರಿಟವನ್ನೂ ಧರಿಸಿ ಯುದ್ಧದ ಸಾಮಗ್ರಿಗಳಿಂದ ಸನ್ನಗ್ಧನಾಗಿ ಸಂಚರಿಸುವ ಮಹಾಸತ್ವಶಾಲಿಯೂ ಸುಕುಮಾರನೂ ಶ್ರೇಷ್ಠವಾದ ತೋಜೋರಾಶಿಯೂ ಶಕ್ರನಿಗೆ ಸದೃಶನಾದವನೂ ಶತ್ರು ಸಂಹಾರಕನೂ ಪರಸೈನ್ಯ ನಿವಾರಕನೂ ಆದ ಅರ್ಜುನನನ್ನು ನೋಡಿ ಅಲ್ಲಿಯ ಸ್ತ್ರೀಸಮೂಹವು ಅವನನ್ನು ಷಣ್ಮುಖನೆಂದು ತಿಳಿಯಿತು.

ಅಯಂ ಸ ಪುರುಷವ್ಯಾಘ್ರೋ ರಣೇऽದ್ಭುತಪರಾಕ್ರಮಃ ।
ಯಸ್ಯ ಬಾಹುಬಲಂ ಪ್ರಾಪ್ಯ ನ ಭವಂತ್ಯಸುಹೃದ್ಗಣಾಃ ॥೫೫॥

ಇತಿ ವಾಚೋ ಬ್ರುವಂತ್ಯಸ್ತಾಃ ಸ್ತ್ರಿಯಃ ಪ್ರೇಮ್ಣಾ ಧನಂಜಯಮ್।
ತುಷ್ಟುವುಃ ಪುಷ್ಪವೃಷ್ಟಿಂ ಚ ಸಸೃಜುಸ್ತಸ್ಯ ಮೂರ್ಧನಿ ॥೫೬॥

ದೃಷ್ಟ್ವಾ ತೇ ತು ಮುದಾ ಯುಕ್ತಾಃ ಕೌತೂಹಲಸಮನ್ವಿತಾಃ ।
ರತ್ನೈರ್ವಿಭೂಷಣೈಶ್ಚೈವ ಅಭ್ಯವರ್ಷಂಶ್ಚ ಪಾಂಡವಮ್ ॥೫೭॥

ಇವನೇ ಯುದ್ಧದಲ್ಲಿ ಅದ್ಭುತಪರಾಕ್ರಮವುಳ್ಳ ಆ ಪುರುಷವ್ಯಾಘ್ರನಾದವನು ಇವನ ಬಾಹುಬಲವನ್ನು ಸೇರಿದ ಶತ್ರುಸಮೂಹಗಳು ನಾಶಹೊಂದುತ್ತವೆ ಎಂಬ ಪ್ರೇಮಪೂರಿತವಾದ ಮಾತುಗಳನ್ನು ಆಡುತ್ತಾ ಆ ಸ್ತ್ರೀಯರು ಅರ್ಜುನನ ತಲೆಯ ಮೇಲೆ ಪುಷ್ಪವೃಷ್ಟಿಯನ್ನು ಮಾಡಿದರು. ಅವರೆಲ್ಲರೂ ಪಾಂಡವನಾದ ಅರ್ಜುನನನ್ನು ನೋಡಿ ಕುತೂಹಲದಿಂದಲೂ ಮತ್ತು ಸಂತೋಷದಿಂದಲೂ ಕೂಡಿದವರಾಗಿ ಅವನ ಮೇಲೆ ರತ್ನ ಮತ್ತು ವಿಭೂಷಣಗಳ ಮಳೆಯನ್ನು ಕರೆದರು.

ಅಥ ಜಿತ್ವಾ ಸಮಸ್ತಾಂಸ್ತು ಕರೇ ಚ ವಿನಿವೇಶ್ಯ ಚ ।
ಮಣಿಹೇಮಪ್ರವಾಲಾನಿ ರತ್ನಾನ್ಯಾಭರಣಾನಿ ಚ ।
ಏತಾನಿ ಲಬ್ಧ್ವಾ ಪಾರ್ಥೋऽಪಿ ಶೃಂಗವಂತಂ ಗಿರಿಂ ಯಯೌ ॥೫೮॥

ಅರ್ಜುನನು ಅವರೆಲ್ಲರನ್ನೂ ಗೆದ್ದು ಕಪ್ಪಕಾಣಿಕೆಗಳನ್ನು ಕೂಡುವಂತೆ ಮಾಡಿ ರತ್ನಗಳು ಮತ್ತು ಸುವರ್ಣವನ್ನು ಮತ್ತು ಹವಳಗಳನ್ನು ಅನೇಕ ಮಣಿಮಯವಾದ ಆಭರಣಗಳನ್ನು ಪಡೆದು ಅಲ್ಲಿಂದ ಶೃಂಗವಾನ್ ಪರ್ವತಕ್ಕೆ ಹೊರಟನು.

ಶೃಂಗವಂತಂ ಚ ಕೌಂತೇಯಃ ಸಮತಿಕ್ರಮ್ಯ ಫಲ್ಗುನಃ ।
ಉತ್ತರಂ ಕುರುವರ್ಷಂ ತು ಸಮಾಸಾದ್ಯ ಧನಂಜಯಃ ॥೫೯॥

ವಿದ್ಯಾಧರಗಣಾಂಶ್ಚೈವ ಯಕ್ಷೇಂದ್ರಾಂಶ್ಚ ವಿನಿರ್ಜಯನ್ ।
ತತ್ರ ಲೇಭೇ ಮಹಾಬಾಹುರ್ವಾಸೋ ದಿವ್ಯಮನುತ್ತಮಮ್ ॥೬೦॥

ಕುಂತಿಯ ಪುತ್ರನಾದ ಅರ್ಜುನನು ಶೃಂಗವಂತ ಪರ್ವತವನ್ನು ದಾಟಿ ಉತ್ತರ ಕುರುವರ್ಷವನ್ನು ಸೇರಿ ಅಲ್ಲಿಂದ ವಿದ್ಯಾಧರರ ಸಮೂಹಗಳನ್ನು ಯಕ್ಷಪತಿಗಳನ್ನು ಗೆದ್ದು ಮಹಾಬಾಹುವಾದ ಅವನು ದಿವ್ಯವಾದ ಮತ್ತು ಶ್ರೇಷ್ಠವಾದ ಅನೇಕ ವಸ್ತ್ರಗಳನ್ನು ಪಡೆದನು.

ಕಿನ್ನರದ್ರುಮಪತ್ರಾಂಶ್ಚ ತತ್ರ ಕೃಷ್ಣಾಜಿನಾನ್ ಬಹೂನ್ ।
ಯಾಜ್ಞೀಯಾಂಶ್ಚೈವ ಯಾನ್ ದಿವ್ಯಾಂಸ್ತಾನ್ ಸ ಲೇಭೇ ಧನಂಜಯಃ ।
ಇಯೇಷ ಜೇತುಂ ತಂ ದೇಶಂ ಪಾಕಶಾಸನನಂದನಃ ॥೬೧॥

ತತ ಏನಂ ಮಹಾವೀರ್ಯಂ ಮಹಾಕಾಯಾ ಮಹಾಬಲಾಃ ।
ದ್ವಾರಪಾಲಾಃ ಸಮಾಸಾದ್ಯ ಧೃಷ್ಟಂ ವಚನಮಬ್ರವೀತ್ ॥೬೨॥

ಅಲ್ಲಿ ಅನೇಕ ಕೃಷ್ಣಾಜಿನಗಳನ್ನೂ ಕಿನ್ನರ ಮತ್ತು ದ್ರುಮಪತ್ರಗಳನ್ನೂ ಮತ್ತು ಯಜ್ಞಕ್ಕೆ ಉಪಯೋಗಿಯಾದ ಇನ್ನೂ ಅನೇಕ ದಿವ್ಯವಸ್ತುಗಳನ್ನೂ ಪಡೆದ ಇಂದ್ರನ ಪುತ್ರನಾದ ಅರ್ಜುನನು ಆ ದೇಶವನ್ನು ಗೆಲ್ಲಲು ಬಯಸಿದನು. ಆಗ ದೊಡ್ಡದೇಹವುಳ್ಳ ಮಹಾಬಲವುಳ್ಳ ಅಲ್ಲಿನ ದ್ವಾರಪಾಲಕರು ಮಹಾಪರಾಕ್ರಮಿಯಾದ ಈ ಅರ್ಜುನನ್ನು ಸಮೀಪಿಸಿ ಧೈರ್ಯದಿಂದ ಈ ಮಾತುಗಳನ್ನು ಹೇಳಿದರು.

ಪಾರ್ಥ ನೇದಂ ತ್ವಯಾ ಶಕ್ಯಂ ಪುರಂ ಜೇತುಂ ಕಥಂಚನ ।
ಉಪಾವರ್ತಸ್ವ ಕಲ್ಯಾಣ ಪರ್ಯಾಪ್ತಮಿದಮಚ್ಯುತ ॥೬೩॥

ಪಾರ್ಥನೇ! ನೀನು ಈ ಪಟ್ಟಣವನ್ನು ಜಯಿಸುವುದು ಸಾಧ್ಯವಿಲ್ಲ. ಕಲ್ಯಾಣ ಮೂರ್ತಿಯೇ ಹಿಂದಿರುಗು ನೀನು ಗೆದ್ದಷ್ಟು ಸಾಕು.

ಇದಂ ಪುರಂ ಯಃ ಪ್ರವಿಶೇದ್ ಧ್ರುವಂ ನ ಸ ಭವೇನ್ನರಃ ।
ಪ್ರೀಯಾಮಹೇ ತ್ವಯಾ ವೀರ ಪರ್ಯಾಪ್ತೋ ವಿಜಯಸ್ತವ ॥೬೪॥

ಈ ಪಟ್ಟಣವನ್ನು ಯಾವನು ಪ್ರವೇಶಿಸುತ್ತಾನೋ ಅಂತಹ ಮನುಷ್ಯನು ನಾಶವನ್ನು ಹೊಂದುತ್ತಾನೆ. ವೀರನೇ! ನಾವು ನಿನ್ನ ಮೇಲೆ ಸಂತೋಷಗೊಂಡಿದ್ದೇವೆ. ನೀನು ಸಂಪಾದಿಸಿರುವ ವಿಜಯವು ಸಾಕು.

ನಚಾಪಿ ಕಿಂಚಿಜ್ಜೇತವ್ಯಮರ್ಜುನಾತ್ರ ಪ್ರದೃಶ್ಯತೇ ।
ಉತ್ತರಾಃ ಕುರವೋ ಹ್ಯೇತೇ ನಾತ್ರ ಯುದ್ಧಂ ಪ್ರವರ್ತತೇ ॥೬೫॥

ಅರ್ಜುನನೇ ಅದೂ ಅಲ್ಲದೆ ಇಲ್ಲಿಗೆಲ್ಲಬೇಕಾದ ಯಾವ ವಸ್ತುವೂ ಕಾಣುವುದಿಲ್ಲ. ಇದು ಉತ್ತರ ಕುರುವರ್ಷ. ಇಲ್ಲಿ ಯುದ್ಧವು ನಡೆಯುವುದಿಲ್ಲ.

ಪ್ರವಿಷ್ಟೋಽಪಿ ಹಿ ಕೌಂತೇಯ ನೇಹ ದ್ರಕ್ಷ್ಯಸಿ ಕಿಂಚನ ।
ನಹಿ ಮಾನುಷದೇಹೇನ ಶಕ್ಯಮತ್ರಾಭಿವೀಕ್ಷಿತುಮ್ ॥೬೬॥

ಕೌಂತೇಯನೇ! ನೀನು ಈ ವರ್ಷವನ್ನು ಪ್ರವೇಶಮಾಡಿದರೂ ನಿನ್ನ ಕಣ್ಣಿಗೆ ಯಾರೂ ಕಾಣುವುದಿಲ್ಲ. ಇಲ್ಲಿ ಮನುಷ್ಯದೇಹವನ್ನು ಧರಿಸಿದವನ ಕಣ್ಣುಗಳಿಗೆ ಯಾವುದೂ ಕಾಣುವುದಿಲ್ಲ.

ಅಥೇಹ ಪುರುಷವ್ಯಾಘ್ರ ಕಿಂಚಿದನ್ಯಚ್ಚಿಕೀರ್ಷಸಿ ।
ತದ್ವದಸ್ವ ಕರಿಷ್ಯಾಮೋ ವಚನಾತ್ ತವ ಭಾರತ ॥೬೭॥

ಪುರುಷವ್ಯಾಘ್ರನಾದ ಭಾರತನೇ! ನೀನು ಇನ್ನೇನನ್ನಾದರೂ ಮಾಡಬೇಕೆಂದು ಬಯಸಿದರೆ ಅದನ್ನು ಹೇಳು. ನಾವು ನಿನ್ನ ಮಾತಿನಂತೆ ಅದನ್ನು ಮಾಡುವೆವು.

ವೈಶಂಪಾಯನಃ

ತತಸ್ತಾನಬ್ರವೀದ್ ರಾಜನ್ ಪಾಂಡವಃ ಪಾಕಶಾಸನಿಃ ॥೬೮॥

ರಾಜನೇ! ಆಗ ಇಂದ್ರಪುತ್ರನಾದ ಅರ್ಜುನನು ಅವರನ್ನು ಕುರಿತು ಹೇಳಿದನು. ಮೇಧಾವಿಯಾದ ಧರ್ಮರಾಜನನ್ನು ಸಾರ್ವಭೌಮನನ್ನಾಗಿ ಮಾಡಲು ಇಚ್ಛಿಸುತ್ತೇನೆ.

ಪಾರ್ಥಿವತ್ವಂ ಚಿಕೀರ್ಷಾಮಿ ಧರ್ಮರಾಜಸ್ಯ ಧೀಮತಃ ।
ನ ಪ್ರವೇಕ್ಷ್ಯಾಮಿ ವೋ ದೇಶಂ ಯದ್ಯದೃಶ್ಯಾಃ ಸ್ಥ ಮಾನುಷೈಃ ।
ಯುಧಿಷ್ಠಿರಾಯ ಯತ್ ಕಿಂಚಿತ್ ಕರಂ ಸಾಧು ಪ್ರದೀಯತಾಮ್॥೬೯॥

ನೀವು ಮನುಷ್ಯದೃಷ್ಟಿಗೆ ಗೊಚರವಾಗದೆ ಇರುವುದಾದರೆ ನಾನು ನಿಮ್ಮ ದೇಶವನ್ನು ಪ್ರವೇಶಿಸುವುದಿಲ್ಲ. ಯುಧಿಷ್ಠಿರನ ಸಲುವಾಗಿ ಏನಾದರೂ ಒಳ್ಳೆಯ ವಸ್ತುವನ್ನು ಕಪ್ಪವಾಗಿ ಕೊಡಿ.

ತತೋ ದಿವ್ಯಾನಿ ವಸ್ತ್ರಾಣಿ ದಿವ್ಯಾನ್ಯಾಭರಣಾನಿ ಚ ।
ಯೋಗಾಜಿನಾನಿ ಶುಭ್ರಾಣಿ ತಸ್ಮೈ ತೇ ಪ್ರದದುಃ ಕರಮ್ ॥೭೦॥

ಆಗ ಅವರು ಅರ್ಜುನನಿಗೆ ದಿವ್ಯವಾದ ವಸ್ತ್ರಗಳನ್ನೂ, ದಿವ್ಯವಾದ ಆಭರಣಗಳನ್ನೂ, ಶುಭ್ರವಾದ ಯೋಗಪಟ್ಟಿಕೆಗಳನ್ನೂ ಕಪ್ಪವಾಗಿ ಕೊಟ್ಟರು.

ಏವಂ ಸ ಪುರುಷವ್ಯಾಘ್ರೋ ವಿಜಿಗ್ಯೇ ದಿಶಮುತ್ತರಾಮ್ ।
ಸಂಗ್ರಾಮಾನ್ ವಿವಿಧಾನ್ ಕೃತ್ವಾ ಕ್ಷತ್ರಿಯೈರ್ದಸ್ಯುಭಿಸ್ತಥಾ ॥೭೧॥

ಸ ವಿನಿರ್ಜಿತ್ಯ ರಾಜ್ಞಸ್ತಾನ್ ಕರೇ ಚ ವಿನಿವೇಶ್ಯ ಚ ।
ಧನಾನ್ಯಾದಾಯ ಸರ್ವೇಭ್ಯೋ ರತ್ನಾನಿ ವಿವಿಧಾನಿ ಚ ॥೭೨॥

ಹಯಾಂಸ್ತಿತ್ತಿರಿಕಲ್ಮಾಷಾನ್ ಶುಕಪತ್ರನಿಭಾನಪಿ ।
ಮಯೂರಸದೃಶಾನನ್ಯಾನ್ ಸರ್ವಾನನಿಲರಂಹಸಃ ॥೭೩॥

ವೃತಃ ಸ ಮಹತಾ ರಾಜನ್ ಬಲೇನ ಚತುರಂಗಿಣಾ ।
ಆಜಗಾಮ ಪುನರ್ನಿರಃ ಶಕ್ರಪ್ರಸ್ಥಂ ಪುರೋತ್ತಮಮ್ ॥೭೪॥

ಹೀಗೆ ಪುರುಷವ್ಯಾಘ್ರನಾದ ಅರ್ಜುನನು ಕ್ಷತ್ರಿಯರ ಜೊತೆಯಲ್ಲಿಯೂ ದಸ್ಯುಗಳ ಜೊತೆಯಲ್ಲಿಯೂ ಅನೇಕ ಯುದ್ಧಗಳನ್ನು ಮಾಡಿ ಉತ್ತರದಿಕ್ಕನ್ನು ಗೆದ್ದನು. ಅರ್ಜುನನು ಆ ರಾಜರನ್ನೆಲ್ಲಾ ಜಯಿಸಿ ಅವರು ಕಪ್ಪಕಾಣಿಕೆಗಳನ್ನು ಕೊಡುವಂತೆ ಮಾಡಿ ಅವರೆಲ್ಲರಿಂದಲೂ ವಿವಿಧವಾದ ಧನವನ್ನು ರತ್ನಗಳನ್ನು ತಿತ್ತಿರಿಪಕ್ಷಿಯಂತೆ ಕೃಷ್ಣಪಾಂಡರವಾದ ಹಾಗೆಯೇ ಶುಕಪಕ್ಷದಂತೆ ವರ್ಣವುಳ್ಳಂತಹ ಮತ್ತು ನವಿಲಿನ

ಬಣ್ಣವುಳ್ಳಂತಹ ವಾಯುವೇಗವುಳ್ಳಂತಹ ಅನೇಕ ಅಶ್ವಗಳನ್ನು ಪಡೆದು ಮಹಾಚತುರಂಗ ಬಲದಿಂದ ಯುಕ್ತನಾಗಿ ಪುನಃ ವೀರನಾದ ಅವನು ಶ್ರೇಷ್ಠವಾದ ಇಂದ್ರಪ್ರಸ್ಥಪಟ್ಟಣಕ್ಕೆ ಹಿಂದುರುಗಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಷಷ್ಠಿವಿಂಶೋಽಧ್ಯಾಯಃ ॥
॥ ದಿಗ್ವಿಜಯಪರ್ವಣಿ ದ್ವಿತೀಯೋಽಧ್ಯಾಯಃ॥೨॥

ಇಪ್ಪತ್ತಾರನೆಯ ಅಧ್ಯಾಯವು ಮುಗಿಯಿತು.

★★★★★

ಇಪ್ಪತ್ತೇಳನೆಯ ಅಧ್ಯಾಯ

(ಪೂರ್ವದಿಗ್ವಿಜಯವನ್ನುಮಾಡಿ ಭೀಮಸೇನನ ಪ್ರತಿನಿವೃತ್ತಿ)

ವೈಶಂಪಾಯನಃ

ಏತಸ್ಮಿನ್ನೇವ ಕಾಲೇ ತು ಭೀಮಸೇನೋಽಪಿ ವೀರ್ಯವಾನ್ ।
ಧರ್ಮರಾಜಮನುಜ್ಞಾಪ್ಯ ಯಯೌ ಪ್ರಾಚೀಂ ದಿಶಂ ಪ್ರತಿ ॥೧॥

ಇದೇ ಸಮಯದಲ್ಲಿ ಪರಾಕ್ರಮಶಾಲಿಯಾದ ಭೀಮಸೇನನು ಸಹ ಧರ್ಮರಾಜನ ಅಪ್ಪಣೆಯನ್ನು ಪಡೆದು ಪೂರ್ವದಿಕ್ಕಿಗೆ ಹೊರಟನು.

ಮಹತಾ ಬಲಚಕ್ರೇಣ ಪರರಾಷ್ಟ್ರವಿಮರ್ದಿನಾ ।
ವೃತೋ ಭರತಶಾರ್ದೂಲ ದ್ವಿಷಚ್ಛೋಕವಿವರ್ಧನಃ ॥೨॥

ಭರತಶಾರ್ದೂಲನೇ! ಶತ್ರುಶೋಕವಿವರ್ಧನನಾದ ಅವನು ಶತ್ರುರಾಷ್ಟ್ರವನ್ನು ಸದೆಬಡಿಯುವ ದೊಡ್ಡಸೈನ್ಯದಿಂದ ಯುಕ್ತನಾಗಿ ಹೊರಟನು.

ಸ ಗತ್ವಾ ನರಶಾರ್ದೂಲ ಪಾಂಚಾಲಾನಾಂ ಪುರಂ ಮಹತ್ ।
ಪಾಂಚಾಲಾನ್ ವಿವಿಧೋಪಾಯೈಃ ಸಾಂತ್ವಯಾಮಾಸ ಪಾಂಡವಃ ।
ಕಿಂಚಿತ್ ಕರಂ ಸಮಾದಾಯ ವಿದೇಹಾನಾಂ ಪುರಂ ಯಯೌ ॥೩॥

ನರಶಾರ್ದೂಲನೇ!ಪಾಂಡುಪುತ್ರನಾದ ಭೀಮಸೇನನು ಪಾಂಚಾಲರ ರಾಜಧಾನಿಯನ್ನು ತಲುಪಿ ಪಾಂಚಾಲರನ್ನು ಅನೇಕ ವಿಧವಾದ ಉಪಾಯಗಳಿಂದ ಸಮಾಧಾನಪಡಿಸಿ ಸ್ವಲ್ಪ ಕಪ್ಪವನ್ನು ಸ್ವೀಕರಿಸಿ ವಿದೇಹರಾಜನ ಪಟ್ಟಣಕ್ಕೆ ಹೊದನು.

ತತಃ ಸ ಕಂಟಕೀಂ ವೀರೋ ವಿದೇಹಾಂಶ್ಚ ನರರ್ಷಭಃ ।
ವಿಜಿತ್ಯಾಲ್ಪೇನ ಕಾಲೇನ ದಶಾರ್ಣಾನಜಯತ್ ಪ್ರಭುಃ ॥೪॥

ಪುರುಷಶ್ರೇಷ್ಠನೂ ಪ್ರಭುವೂ ಆದ ವೀರನಾದ ಭೀಮಸೇನನು ಕಂಟಕೀದೇಶವನ್ನೂ ವಿದೇಹ ದೇಶವನ್ನೂ ಗೆದ್ದು ಅಲ್ಪಕಾಲದಲ್ಲಿಯೇ ದಶಾರ್ಣ ದೇಶವನ್ನು ಗೆದ್ದನು.

ತತ್ರ ದಾಶಾರ್ಣಕೋ ರಾಜಾ ಸುಧರ್ಮಾ ರೋಮಹರ್ಷಣಃ ।
ಅದ್ಭುತಂ ಕರ್ಮ ಭೀಮೇನ ಯುಧಿ ಚಕ್ರೇ ನಿರಾಯುಧಮ್ ॥೫॥

ದಶಾರ್ಣದೇಶದ ರಾಜನಾದ ಸುಧರ್ಮನು ಭೀಮಸೇನನ ಜೊತೆಯಲ್ಲಿ ರೋಮಾಂಚಕಾರಿಯಾದ, ಅದ್ಭುತವಾದ ಯುದ್ಧವನ್ನುಮಾಡಿ, ಭೀಮಸೇನನ್ನು ನಿರಾಯುಧನನ್ನಾಗಿ ಮಾಡಿದನು.

ಭೀಮಸೇನಸ್ತು ತದ್ ದೃಷ್ಟ್ವಾ ತಸ್ಯ ಕರ್ಮ ಪರಂತಪಃ ।
ಅಧಿಸೇನಾಪತಿಂ ಚಕ್ರೇ ಸುಧರ್ಮಾಣಂ ಮಹಾಬಲಮ್ ॥೬॥

ಪರಂತಪನಾದ ಮಹಾಬಲನಾದ ಭೀಮಸೇನನಾದರೋ ಅವನ ಅದ್ಭುತಕರ್ಮವನ್ನು ನೋಡಿ ಸುಧರ್ಮನನ್ನು ತನ್ನ ಸೇನಾಧಿಪತಿಯನ್ನಾಗಿ ಮಾಡಿಕೊಂಡನು.

ತತಃ ಪ್ರಾಚೀಂ ದಿಶಂ ಭೀಮೋ ಯಯೌ ಭೀಮಪರಾಕ್ರಮಃ ।
ಬಲೇನ ಮಹತಾ ರಾಜನ್ ಕಂಪಯನ್ನಿವ ಮೇದಿನೀಮ್ ॥೭॥

ರಾಜನೇ! ಭಯಂಕರಪರಾಕ್ರಮವುಳ್ಳ ಭೀಮಸೇನನು ದೊಡ್ಡಸೈನ್ಯದಿಂದ ಕೂಡಿದವನಾಗಿ ಭೂಮಿಯನ್ನು ನಡುಗಿಸುವಂತೆ ಅಲ್ಲಿಂದ ಪೂರ್ವದಿಕ್ಕಿಗೆ ಪ್ರಯಾಣಮಾಡಿದನು.

ಸೋಽಶ್ವಮೇಧೇಶ್ವರಂ ರಾಜನ್ ರೋಚಮಾನಂ ಸಹಾನುಗಮ್।
ಜಿಗಾಯ ಸ ತದಾ ವೀರೋ ಬಲೇನ ಬಲಿನಾಂ ವರಃ ॥೮॥

ರಾಜನೇ! ಬಲಿಷ್ಠರಲ್ಲಿ ಶ್ರೇಷ್ಠನಾದ ವೀರನಾದ ಭೀಮಸೇನನು ಅಲ್ಲಿ ಅಶ್ವಮೇಧಯಾಗವನ್ನು ಮಾಡಿದ್ದ ರೋಚಮಾನ ಎಂಬ ರಾಜನನ್ನೂ ಅವನ ತಮ್ಮನನ್ನೂ ತನ್ನ ಸೈನ್ಯದಿಂದ ಸೋಲಿಸಿದನು.

ಸ ತಂ ನಿರ್ಜಿತ್ಯ ಕೌಂತೇಯೋ ನಾತಿತೀವ್ರೇಣ ಕರ್ಮಣಾ ।
ಪೂರ್ವದೇಶಂ ಮಹಾವೀರ್ಯೋ ವಿಜಿಗ್ಯೇ ಕುರುನಂದನಃ ॥೯॥

ಕುಂತಿಯ ಮಗನಾದ ಮಹಾವೀರ್ಯನಾದ ಕುರುನಂದನನಾದ ಭೀಮನು ಬಹಳ ಆಯಾಸವಿಲ್ಲದ ಯುದ್ಧವನ್ನು ಮಾಡಿ ಅವನನ್ನು ಗೆದ್ದು ಪುನಃ ಅಲ್ಲಿಂದ ಪೂರ್ವದೇಶಗಳನ್ನು ಗೆದ್ದನು.

ತತೋ ದಕ್ಷಿಣಮಾಸಾದ್ಯ ಪುಲಿಂದನಗರಂ ಪ್ರತಿ ।
ಸುಕುಮಾರಂ ಕರೇ ಚಕ್ರೇ ಸುಮಿತ್ರಂ ಚ ನರಾಧಿಪಮ್ ॥೧೦॥

ಅಲ್ಲಿಂದ ದಕ್ಷಿಣದಿಕ್ಕಿಗೆ ಪುಲಿಂದನಗರಕ್ಕೆ ಬಂದು ಸುಕಮಾರ ಮತ್ತು ಸುಮಿತ್ರ ಎಂಬ ರಾಜರನ್ನು ವಶಪಡಿಸಿಕೊಂಡು ಕಪ್ಪವನ್ನು ಕೊಡುವಂತೆ ಮಾಡಿದನು.

ತತಃ ಸ ಧರ್ಮರಾಜಸ್ಯ ಶಾಸನಾತ್ ಕುರುನಂದನಃ ।
ಶಿಶುಪಾಲಂ ಮಹಾವೀರ್ಯಮಭ್ಯಯಾಜ್ಜನಮೇಜಯ ॥೧೧॥

ಜನಮೇಜಯನೇ! ಅನಂತರ ಕುರುನಂದನನಾದ ಅವನ ಧರ್ಮರಾಜನ ಶಾಸನದಂತೆ ಮಹಾಬಲಶಾಲಿಯಾದ ಶಿಶುಪಾಲನ ಕಡೆಗೆ ಹೊರಟನು.

ಚೇದಿರಾಜೋಽಪಿ ತಚ್ಚ್ರುತ್ವಾ ಪಾಂಡವಸ್ಯ ಚಿಕೀರ್ಷಿತಮ್ ।
ಉಪನಿಷ್ಕ್ರಮ್ಯ ನಗರಾತ್ ಪ್ರತ್ಯಗೃಹ್ಣಾತ್ ಪರಂತಪಃ ॥೧೨॥

ಪರಂತಪನಾದ ಚೇದಿರಾಜನಾದ ಶಿಶುಪಾಲನೂ ಸಹ ಪಾಂಡವನ ಅಭಿಪ್ರಾಯವನ್ನು ತಿಳಿದು ನಗರದಿಂದ ಹೊರಗೆ ಬಂದು ಆದರದಿಂದ ಸ್ವೀಕರಿಸಿದನು.

ತೌ ಸಮೇತ್ಯ ಮಹಾರಾಜ ಕುರುಚೇದಿವೃಷಾವುಭೌ ।
ಉಭಯೋರಾತ್ಮಕುಲಯೋಃ ಕೌಶಲಂ ಪರ್ಯಪೃಚ್ಛತಾಮ್ ॥೧೩॥

ಮಹಾರಾಜನೇ! ಕುರುಶ್ರೇಷ್ಠನು ಮತ್ತು ಚೇದಿಶ್ರೇಷ್ಠನು ಆದ ಅವರಿಬ್ಬರು ಪರಸ್ಪರ ಸಂಧಿಸಿ ಪರಸ್ಪರವಾಗಿ ತಮ್ಮ ಕುಲಗಳ ಕುಶಲಪ್ರಶ್ನೆಯನ್ನು ಮಾಡಿದರು.

ತತೋ ನಿವೇದ್ಯ ತದ್ರಾಜ್ಯಂ ಚೇದಿರಾಜೋ ವಿಶಾಂಪತೇ ।
ಉವಾಚ ಭೀಮಂ ಪ್ರಹಸನ್ ಕಿಮಿದಂ ಕುರುಷೇऽನಘ ॥೧೪॥

ರಾಜನೇ! ಅನಂತರ ಚೇದಿರಾಜನು ತನ್ನ ರಾಜ್ಯವನ್ನು ಭೀಮಸೇನನಿಗೆ ನಿವೇದಿಸಿ ನಗುತ್ತಾ ಗುಣವಂತನೇ ಏನುಮಾಡಲು ಹೊರಟಿರುವೆ ಎಂದು ಕೇಳಿದನು.

ತಸ್ಯ ಭೀಮಸ್ತದಾಚಖ್ಯೌ ಧರ್ಮರಾಜಚಿಕೀರ್ಷಿತಮ್ ।
ಸ ಚ ತತ್ ಪ್ರತಿಗೃಹ್ಯೈವ ತಥಾ ಚಕ್ರೇ ನರಾಧಿಪಃ ॥೧೫॥

ಆಗ ಭೀಮಸೇನನು ಧರ್ಮರಾಜನ ಸಂಕಲ್ಪವನ್ನು ತಿಳಿಸಲು ಶಿಶುಪಾಲನು ಅದನ್ನು ಸ್ವೀಕರಿಸಿ ಅದರಂತೆಯೇ ನಡೆದುಕೊಂಡನು.

ತತ್ರ ಭೀಮಸ್ತದಾ ರಾಜನ್ನುಷಿತ್ವಾ ತ್ರಿದಶ ಕ್ಷಪಾಃ ।
ಸತ್ಕೃತಃ ಶಿಶುಪಾಲೇನ ಯಯೌ ಸಬಲವಾಹನಃ ।
ತತಃ ಕುಣಿಂದವಿಷಯೇ ಶ್ರೇಣಿಮಂತಮಥಾಜಯತ್ ॥೧೬॥

ರಾಜನೇ! ಆಗ ಭೀಮನು ಒಂದು ತಿಂಗಳ ಕಾಲ ಚೇದಿರಾಜ್ಯದಲ್ಲಿದ್ದು ಶಿಶುಪಾಲನಿಂದ ಸತ್ಕರಿಸಲ್ಪಟ್ಟ ಅನಂತರ ಬಲವಾಹನಸಮೇತನಾಗಿ ಅಲ್ಲಿಂದ ಹೊರಟು ಕುಣಿಂದದೇಶದಲ್ಲಿ ಶ್ರೇಣಿಮಂತನೆಂಬ ರಾಜನನ್ನು ಜಯಿಸಿದನು.

ಕೋಸಲಾಧಿಪತಿಂ ಚೈವ ಬೃಹದ್ಬಲಮರಿಂದಮಮ್ ।
ಅಯೋಧ್ಯಾಯಾಂ ಮಹೀಪಾಲಂ ದೀರ್ಘಪ್ರಜ್ಞಂ ಮಹಾಬಲಮ್ ।
ಅಜಯತ್ ಪಾಂಡವಶ್ರೇಷ್ಠಃ ಸತತಂ ಭೂರಿದಕ್ಷಿಣಮ್ ॥೧೭॥

ಪಾಂಡವಶ್ರೇಷ್ಠನಾದ ಭೀಮಸೇನನು ಕೋಸಲಾಧಿಪತಿಯಾದ ಶತ್ರುದಮನನಾದ ಬೃಹದ್ಬಲನನ್ನೂ ಅಯೋದ್ಯಯಲ್ಲಿ ಮಹಾಬಲಿಷ್ಠನಾಗಿ ಸತತವಾಗಿ ದಕ್ಷಿಣೆಯನ್ನು ದಾನಮಾಡುತ್ತಾ ರಾಜನಾಗಿದ್ದ ದೀರ್ಘಪ್ರಜ್ಞನನ್ನೂ ಜಯಿಸಿದನು.

ಗೋಪಾಲಂ ಚೈವ ಕೌಂತೇಯೋ ಹ್ಯಂತಪಾಲಂ ತಥೋತ್ತಮಮ್ ।
ಮಲ್ಲಾನಾಮಧಿಪಂ ಚೈವ ಪಾರ್ಥಿವಂ ಚಾಜಯತ್ ಪ್ರಭುಃ ॥೧೮॥

ಪ್ರಭುವಾದ ಕೌಂತೆಯನಾದ ಭೀಮಸೇನನು ಗೋಪಾಲನನ್ನೂ ಶ್ರೇಷ್ಠನಾದ ಅವರ ಅಂತಪಾಲನನ್ನೂ ಮಲ್ಲರ ಅಧಿಪತಿಯಾಗಿದ್ದ ರಾಜನನ್ನೂ ಜಯಿಸಿದನು.

ತತೋ ಹಿಮವತಃ ಪಾರ್ಶ್ವೇ ದೇಶಾನ್ ಬಹುವಿಧಾನ್ ಬಹೂನ್ ।
ಸರ್ವಾನಲ್ಪೇನ ಯತ್ನೇನ ವಶೇ ಚಕ್ರೇ ಬಲಾದ್ ಬಲೀ ॥೧೯॥

ಬಲಿಷ್ಠನಾದ ಭೀಮಸೇನನು ಅನಂತರ ಹಿಮಾಲಯದ ಪಾರ್ಶ್ವದಲ್ಲಿ ಇರುವ ಅನೇಕ ದೇಶಗಳೆಲ್ಲವನ್ನೂ ಅಲ್ಪ ಪ್ರಯತ್ನದಿಂದಲೇ ವಶಪಡಿಸಿಕೊಂಡನು.

ಏವಂ ಬಹುವಿಧಾನ್ ದೇಶಾನ್ ವಿಜಿತ್ಯ ಪುರುಷರ್ಷಭಃ ।
ಕುಂತಲಾನಭಿತೋ ಜಿಗ್ಯೇ ಕುಕ್ಷಿಮಂತಂ ಚ ಪರ್ವತಮ್ ॥೨೦॥

ಪುರುಷರ್ಷಭನಾದ ಭೀಮಸೇನನು ಹೀಗೆ ಅನೇಕ ದೇಶಗಳನ್ನೂ ಗೆದ್ದು ಕುಂತಳದೇಶಕ್ಕೆ ಬಂದು ಆ ದೇಶವನ್ನೂ ಮತ್ತು ಅಲ್ಲಿದ್ದ ಕುಕ್ಷಿಮಂತ ಪರ್ವತವನ್ನೂ ಜಯಿಸಿದನು.

ಪಾಂಡವಃ ಸುಮಹಾವೀರ್ಯೋ ಬಲೇನ ಬಲಿನಾಂ ವರಃ ।
ಕಾಶಿರಾಜಂ ಸಮೇಯಾಯ ಸುಬಂಧುಮನಿವರ್ತಿನಮ್ ।
ವಶೇ ಚಕ್ರೇ ಮಹಾಬಾಹುರ್ಭೀಮೋ ಭೀಮಪರಾಕ್ರಮಃ ॥೨೧॥

ಮಹಾವೀರ್ಯಶಾಲಿಯಾದ ಬಲಿಷ್ಠರಲ್ಲಿ ಶ್ರೇಷ್ಠನಾದ ಪಾಂಡುಪುತ್ರನಾದ ಭೀಮಸೇನನು ತನ್ನ ಸೈನ್ಯದ ಜೊತೆಯಲ್ಲಿ ಯುದ್ಧದಲ್ಲಿ ಹಿಮ್ಮೆಟ್ಟದ ಕಾಶಿರಾಜನಾದ ಸುಬಂಧುವನ್ನು ಎದುರಿಸಿದನು. ಭಯಂಕರ ಬಲವುಳ್ಳ ಮಹಾಬಾಹುವಾದ ಭೀಮನು ಅವನನ್ನು ವಶಪಡಿಸಿಕೊಂಡನು.

ತತಃ ಸುಪಾರ್ಶ್ವಮಭಿತಸ್ತಥಾ ರಾಜಪತಿಂ ಕ್ರಥಮ್ ।
ಯುಧ್ಯಮಾನಂ ಬಲಾತ್ ಸಂಖೇ ವಿಜಿಗ್ಯೇ ಪಾಂಡವರ್ಷಭಃ ॥೨೨॥

ಅನಂತರ ಪಾಂಡವಶ್ರೇಷ್ಠನಾದ ಭೀಮಸೇನನು ಸುಪಾರ್ಶ್ವನನ್ನೂ ಸುತ್ತಮುತ್ತಲಿನ ರಾಜರನ್ನೂ ಕ್ರಥನನ್ನೂ ಯುದ್ಧದಲ್ಲಿ ತನ್ನ ಬಲದಿಂದ ಜಯಿಸಿದನು.

ತತಃ ಕಾಶಿಪತೀನ್ ಮತ್ಸ್ಯಾನ್ ಮಾಲವಾನಿಹ ಪಾಂಡವಃ ।
ಅನವದ್ಯಾಂ ಗಯಾಂ ಚೈವ ಪಶುಭೂಮಿಂ ಚ ಸರ್ವಶಃ ॥೨೩॥

ನಿರ್ಜಿತ್ಯ ಚ ಮಹಾಬಾಹುರಟವೀಶಂ ಚ ಪರ್ವತಮ್ ।
ಗೋಪತೇಯಾಂಶ್ಚ ನಿರ್ಜಿತ್ಯ ಪ್ರಯಯಾವುತ್ತರಾಮುಖಃ ।
ವತ್ಸಭೂಮಿಂ ಚ ಕೌಂತೇಯೋ ವಿಜಿಗ್ಯೇ ಬಲವಾನ್ ಬಲಾನ್ ॥೨೪॥

ಅನಂತರ ಆ ಪಾಂಡವನು ಕಾಶಿರಾಜರುಗಳನ್ನೂ ಮತ್ಸ್ಯದೇಶವನ್ನೂ ಮಾಳವದೇಶವನ್ನೂ ಪರಿಶುದ್ಧವಾದ ಗಯಾಕ್ಷೇತ್ರವನ್ನೂ ಮತ್ತು ಪಶುಭೂಮಿಯನ್ನೂ ಗೆದ್ದು ಮಹಾಬಾಹುವಾದ ಅವನು ಅಟವೀಶನನ್ನೂ ಪರ್ವತನನ್ನೂ ಗೋಪತಿಯನ್ನೂ ಗೆದ್ದು ಅಲ್ಲಿಂದ ಉತ್ತರಾಭಿಮುಖವಾಗಿ ಹೊರಟನು. ಬಲಿಷ್ಠನಾದ ಕೌಂತೇಯನು ತನ್ನ ಸಾಮರ್ಥ್ಯದಿಂದ ವತ್ಸದೇಶವನ್ನು ಗೆದ್ದನು.

ಗರ್ಗಾಣಾಮಧಿಪಂ ಚೈವ ನಿಷಾದಾಧಿಪತಿಂ ತಥಾ ।
ವಿಜಿಗ್ಯೇ ಭೂಮಿಪಾಲಾಂಶ್ಚ ಮಣಿಮತ್ಪ್ರಮುಖಾನ್ ಬಹೂನ್ ॥೨೫॥

ಹಾಗೆಯೇ ಗರ್ಗದೇಶದ ಅಧಿಪತಿಯನ್ನೂ ನಿಶಾದಾಧಿಪತಿಯನ್ನೂ ಮಣಿಮಂತ ಮೊದಲಾದ ಅನೇಕ ಪ್ರಮುಖರಾಜರುಗಳನ್ನೂ ಗೆದ್ದನು.

ತತೋ ದಕ್ಷಿಣಮದ್ರಾಂಶ್ಚ ಭೋಜವಂತಂ ಚ ಪಾಂಡವಃ ।
ತರಸೈವಾಜಯದ್ ಭೀಮೋ ನಾತಿತೀವ್ರೇಣ ಕರ್ಮಣಾ ॥೨೬॥

ಅನಂತರ ಪಾಂಡುಪುತ್ರನಾದ ಭೀಮಸೇನನು ದಕ್ಷಿಣ ಮದ್ರದೇಶವನ್ನು ಮತ್ತು ಭೋಜವಂತನನ್ನು ಅಲ್ಪ ಪ್ರಯತ್ನದಿಂದಲೇ ಶೀಘ್ರವಾಗಿ ಜಯಿಸಿದನು.

ಶರ್ಮಕಾನ್ ವರ್ಮಕಾಂಶ್ಚೈವ ಸಾಂತ್ವೇನೈವಾಜಯತ್ ಪ್ರಭುಃ ।
ವೈದೇಹಂ ಚಾಪಿ ರಾಜಾನಂ ಜನಕಂ ಜಗತೀಪತಿಮ್ ।
ವಿಜಿಗ್ಯೇ ಪುರುಷವ್ಯಾಘ್ರೋ ನಾತಿತೀವ್ರೇಣ ಕರ್ಮಣಾ ॥೨೭॥

ಪ್ರಭುವಾದ ಭೀಮಸೇನನು ಶರ್ಮಕರನ್ನೂ ಧರ್ಮಕನ್ನೂ ಮೃದುವಚನಗಳಿಂದಲೇ ಗೆದ್ದು ಜಗತೀಪತಿಯಾದ ವಿದೇಹರಾಜನಾದ ಜನಕರಾಜನನ್ನು ಪುರುಷವ್ಯಾಘ್ರನಾದ ಅವನು ಮೃದುವಾದ ವಚನದಿಂದಲೇ ಗೆದ್ದನು.

ವೈದೇಹಸ್ಥಸ್ತು ಕೌಂತೇಯ ಇಂದ್ರಪರ್ವತಮಂತಿಕಾತ್ ।
ಕಿರಾತಾಧಿಪತೀನ್ ಸಪ್ತ ವ್ಯಜಯತ್ ತತ್ರ ಪಾಂಡವಃ ॥೨೮॥

ವಿದೇಹನಗರದಲ್ಲಿ ಇದ್ದ ಕೌಂತೇಯನಾದ ಪಾಂಡವನು ಇಂದ್ರಪರ್ವತದಲ್ಲಿದ್ದ ಸಮೀಪದಲ್ಲಿದ್ದ ಏಳುಮಂದಿ ಕಿರಾತಾಧಿಪತಿಗಳನ್ನು ಜಯಿಸಿದನು.

ತತಃ ಸುಹ್ಮಾನ್ ಪ್ರಸುಹ್ಮಾಂಶ್ಚ ಸಮಕ್ಷಾಂಶ್ಚಾಪಿ ವೀರ್ಯವಾನ್ ।
ವಿಜಿತ್ಯ ಯುಧಿ ಕೌಂತೇಯೋ ಮಾಗಧಾನುಪಯಾದ್ ಬಲೀ ॥೨೯॥

ಅನಂತರ ಬಲಿಷ್ಠನಾದ ಕುಂತೀಸುತನಾದ ಬುದ್ಧಿಶಾಲಿಯಾದ ಪರಾಕ್ರಮಶಾಲಿಯಾದ ಭೀಮಸೇನನು ಸುಹ್ಮದೇಶವನ್ನೂ ಪ್ರಸುಹ್ಮದೇಶವನ್ನೂ ಸಮಕ್ಷದೇಶವನ್ನೂ ಗೆದ್ದು ಮಗಧದೇಶದ ಕಡೆಗೆ ಹೊರಟನು.

ದಂಡಂ ಚ ದಂಡಧಾರಂ ಚ ವಿಜಿತ್ಯ ಪೃಥಿವೀಪತಿಃ ।
ತೈರೇವ ಸಹಿತಃ ಸರ್ವೈರ್ಗಿರಿವ್ರಜಮುಪಾದ್ರವತ್ ॥೩೦॥

ಪೃಥಿವೀಪತಿಯಾದ ಭೀಮನು ದಂಡನನ್ನೂ ದಂಡಧಾರನನ್ನೂ ಗೆದ್ದು ಅವರೆಲ್ಲರಿಂದಲೂ ಸಹಿತನಾಗಿ ಮಗಧದೇಶದ ರಾಜಧಾನಿಯಾದ ಗಿರಿವ್ರಜವನ್ನು ತಲುಪಿಸದನು.

ಜಾರಾಸಂಧಿಂ ಸಾಂತ್ವಯಿತ್ವಾ ಕರೇ ಚ ವಿನಿವೇಶ್ಯ ಹ ।
ತೈರೇವ ಸಹಿತಃ ಪಾರ್ಥಃ ಕರ್ಣಮಭ್ಯದ್ರವದ್ ಬಲೀ ॥೩೧॥

ಪಾರ್ಥನು ಜರಾಸಂಧನ ಮಗನಾದ ಸಹದೇವನನ್ನು ಸಮಾದಾನಪಡಿಸಿ ಅವನು ಕಪ್ಪಕಾಣಿಕೆಗಳನ್ನು ಕೊಡುವಂತೆಮಾಡಿ ಅವರಿಂದ ಸಹಿತನಾಗಿ ಕರ್ಣನಮೇಲೆ ದಂಡೆತ್ತಿಹೋದನು.

ಸ ಕಂಪಯನ್ನಿವ ಮಹೀಂ ಬಲೇನ ಚತುರಂಗಿಣಾ ।
ಯುಯುಧೇ ಪಾಂಡವಶ್ರೇಷ್ಠಃ ಕರ್ಣೇನಾಮಿತ್ರಕರ್ಶಿನಾ ॥೩೨॥

ಪಾಂಡವಶ್ರೇಷ್ಠನಾದ ಭೀಮನು ತನ್ನ ಚತುರಂಗಸೈನ್ಯದಿಂದ ಭೂಮಿಯನ್ನು ನಡುಗಿಸುವವನಂತೆ ಶತ್ರುಪೀಡಕನಾದ ಕರ್ಣನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಸ ಕರ್ಣಂ ಯುಧಿ ನಿರ್ಜಿತ್ಯ ವಶೇ ಕೃತ್ವಾ ಚ ಭಾರತ ।
ತತೋ ವಿಜಿಗ್ಯೇ ಬಲವಾನ್ ರಾಜ್ಞಃ ಪರ್ವತವಾಸಿನಃ ॥೩೩॥

ಭಾರತನೇ! ಬಲಿಷ್ಠನಾದ ಅವನು ಯುದ್ಧದಲ್ಲಿ ಕರ್ಣನನ್ನು ಗೆದ್ದು ಅವನನ್ನು ವಶಪಡಿಸಿಕೊಂಡು ಅನಂತರ ಪರ್ವತವಾಸಿಗಳಾದ ರಾಜರುಗಳನ್ನು ಜಯಿಸಿದನು.

ಅಥ ಮೋದಂ ಗಿರಿಪತಿಂ ರಾಜಾನಂ ಚ ಮಹೌಜಸಮ್ ।
ಪಾಂಡವೋ ಬಾಹುವೀರ್ಯೇಣ ನಿಜಘಾನ ಮಹಾಮೃಧೇ ।
ತತಃ ಪುಂಡ್ರಾಧಿಪಂ ವೀರಂ ವಾಸುದೇವಾಖ್ಯಮಾಯಯೌ ॥೩೪॥

ಅನಂತರ ಗಿರಿಪತಿಯಾದ ಮೋದನನ್ನೂ ಮಹೌಜಸರಾಜನನ್ನೂ ಪಾಂಡವನು ತನ್ನ ಭುಜಬಲ ಪರಾಕ್ರಮದಿಂದಲೇ ದೊಡ್ಡ ಯುದ್ಧದಲ್ಲಿ ಸಂಹರಿಸಿದನು. ಅಲ್ಲಿಂದ ಪೌಂಡ್ರಕವಾಸುದೇವನೆಂಬ ವೀರನಪಟ್ಟಣಕ್ಕೆ ಬಂದು.

ಇದಾನೀಂ ವೃಷ್ಣಿವೀರೇಣ ನ ಯೋತ್ಸ್ಯಾಮೀತಿ ಪೌಂಡ್ರಕಃ ।
ಕೃಷ್ಣಸ್ಯ ಭುಜಸಂತ್ರಾಸಾತ್ ಕರಮಾಶು ದದೌ ನೃಪಃ ॥೩೫॥

ಪೌಂಡ್ರಕವಾಸುದೇವನಾದರೋ ಈಗ ನಾನು ವೃಷ್ಣಿವೀರನ ಜೊತೆಯಲ್ಲಿ ಯುದ್ಧವನ್ನು ಮಾಡುವುದಿಲ್ಲವೆಂದು ನಿಶ್ಚಿಯಿಸಿ ಕೃಷ್ಣನ ಭುಜಬಲಕ್ಕೆ ಹೆದರಿ ಬೇಗ ಕಪ್ಪಕಾಣಿಕೆಗಳನ್ನು ಕೊಟ್ಟನು.

ಕೌಶಿಕಂ ಕಚ್ಛನಿಲಯಂ ರಾಜಾನಂ ಚ ಮಹೌಜಸಮ್ ।
ಉಭೌ ಬಲವೃತೌ ವೀರಾವುಭೌ ಭೀಮಪರಾಕ್ರಮೌ ।
ನಿರ್ಜಿತ್ಯಾಜೌ ಮಹಾವೀರ್ಯಂ ವಂಗರಾಜಮುಪಾದ್ರವತ್ ॥೩೬॥

ಸಮುದ್ರತೀರನಿವಾಸಿಯಾದ ಕೌಶಿಕ ಮತ್ತು ಮಹೌಜಸ ರಾಜ ಇವರಿಬ್ಬರೂ ಸೈನ್ಯದಿಂದ ಕೂಡಿದವರು ವೀರರು ಮತ್ತು ಮಹಾಪರಾಕ್ರಮಶಾಲಿಗಳು. ಮಹಾಬಲಶಾಲಿಯಾದ ಭೀಮನು ಅವರಿಬ್ಬರನ್ನೂ ಯುದ್ಧದಲ್ಲಿ ಗೆದ್ದು ವಂಗದೇಶದ ಕಡೆಗೆ ಬಂದನು.

ಸಮುದ್ರಸೇನಂ ನಿರ್ಜಿತ್ಯ ಚಂದ್ರಸೇನಂ ಚ ಪಾರ್ಥಿವಮ್ ।
ತಾಮ್ರಲಿಪ್ತಂ ಚ ರಾಜಾನಂ ಕಾಚಂ ವಂಗಾಧಿಪಂ ತಥಾ ॥೩೭॥

ಅಂಗಾನಾಮಧಿಪಂ ಚೈವ ಯೇ ಚ ಸಾಗರವಾಸಿನಃ ।
ಸರ್ವಾನ್ ಮ್ಲೇಚ್ಛಗಣಾಂಶ್ಚೈವ ವಿಜಿಗ್ಯೇ ಭರತರ್ಷಭಃ ॥೩೮॥

ಭರತರ್ಷಭನಾದ ಭೀಮನು ಸಮುದ್ರಸೇನನನ್ನೂ ಮತ್ತು ಚಂದ್ರಸೇನರಾಜನನ್ನೂ ತಾಮ್ರಲಿಪ್ತ ಎಂಬ ರಾಜನನ್ನೂ ಕಾಚನೆಂಬ ವಂಗಾಧಿಪತಿಯಾದ ರಾಜನನ್ನೂ ಅಂಗದೇಶದ ರಾಜನನ್ನೂ ಸಾಗರ ಸಮೀಪದಲ್ಲಿ ವಾಸಿಸುವ ಮ್ಲೇಚ್ಛರ ಎಲ್ಲಾ ಗಣಗಳನ್ನೂ ಗೆದ್ದನು.

ಏವಂ ಬಹುವಿಧಾನ್ ದೇಶಾನ್ ವಿಜಿತ್ಯ ಪವನಾತ್ಮಜಃ ।
ವಸೂಂಸ್ತೇಭ್ಯ ಉಪಾದಾಯ ಲೌಹಿತ್ಯಮಗಮದ್ ವಶೀ ॥೩೯॥

ಪವನಸೂನುವಾದ ಭರತರ್ಷಭನಾದ ಭೀಮಸೇನನು ಹೀಗೆ ಬಹುವಿಧದೇಶಗಳನ್ನು ಗೆದ್ದು ಆ ದೇಶಗಳಿಂದ ಧನವನ್ನು ಸಂಗ್ರಹಿಸಿ ಲೌಹಿತ್ಯದೇಶಕ್ಕೆ ಬಂದನು.

ಸ ಸರ್ವಾನ್ ಮ್ಲೇಚ್ಛನೃಪತೀನ್ ಸಾಗರಾನೂಪವಾಸಿನಃ ।
ಕರಮಾಹಾರಯಾಮಾಸ ರತ್ನಾನಿ ವಿವಿಧಾನಿ ಚ ॥೪೦॥

ಅವನು ಸಾಗರತೀರದಲ್ಲಿ ವಾಸಿಸುವ ಎಲ್ಲಾ ಮ್ಲೇಚ್ಛರಾಜರು ವಿವಿಧ ರತ್ನರೂಪವಾದ ಕಪ್ಪವನ್ನು ಕೊಡುವಂತೆ ಮಾಡಿ ಅದನ್ನು ಸ್ವೀಕರಿಸಿದನು.

ಚಂದನಾಗುರುವಸ್ತ್ರಾಣಿ ಮಣಿಮುಕ್ತಮನುತ್ತಮಮ್ ।
ಕಾಂಚನಂ ರಜತಂ ವಸ್ತ್ರಂ ವಿದ್ರುಮಂ ಚ ಮಹಾಧನಮ್ ॥೪೧॥

ಚಂದನ ಅಗುರು ವಸ್ತ್ರಗಳು ಮಣಿಗಳು ಶ್ರೇಷ್ಠವಾದ ಮುತ್ತುಗಳು ಸುವರ್ಣ ರಜತ ವಜ್ರಗಳು ಹವಳಗಳು, ಮತ್ತು ಬಹಳ ಧನ (ಇವೆಲ್ಲವನ್ನು ಕಪ್ಪವಾಗಿ ಸ್ವೀಕರಿಸಿದನು.)

ಸ ಕೋಟಿಶತಸಂಖ್ಯೇನ ಧನೇನ ಮಹತಾ ವೃತಃ ।
ಅಭ್ಯವರ್ಷದಮೇಯಾತ್ಮಾ ಧನವರ್ಷೇಣ ಪಾಂಡವಃ ॥೪೨॥

ಪಾಂಡವನಾದ ಭೀಮಸೇನನು ಶತಕೋಟಿಧನದ ದೊಡ್ಡ ಸಂಚಯದಿಂದ ಯುಕ್ತನಾಗಿ ಅಪರಿಮೇಯ ಪ್ರಭಾವನಾದ ಅವನು ಧನವರ್ಷವನ್ನು ಸುರಿಸಿದನು.

ಇಂದ್ರಪ್ರಸ್ಥಮಥಾಗಮ್ಯ ಭೀಮೋ ಭೀಮಪರಾಕ್ರಮಃ ।
ನಿವೇದಯಾಮಾಸ ತದಾ ಧರ್ಮರಾಜಾಯ ತದ್ಧನಮ್ ॥೪೩॥

ಭೀಮಪರಾಕ್ರಮನಾದ ಭೀಮನು ಅನಂತರ ಇಂದ್ರಪ್ರಸ್ಥವನ್ನು ತಲುಪಿ ಧರ್ಮರಾಜನಿಗೆ ಆ ಎಲ್ಲಾ ಸಂಪತ್ತನ್ನೂ ನಿವೇದಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಸಪ್ತವಿಂಶೋऽಧ್ಯಾಯಃ ॥
॥ ದಿಗ್ವಿಜಯಪರ್ವಣಿ ತೃತೀಯೋऽಧ್ಯಾಯಃ ॥॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಇಪ್ಪತ್ತೇಳನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ತದೈವಾನ್ಯೇ ದಿಶೋ ಜಿತ್ವಾ ಸಮೀಯುಸ್ತಸ್ಯ ಯೋಽನುಜಾಃ ।
ಸಹದೇವೋ ದಕ್ಷಿಣಾಶಾಂ ಜಿತ್ವಾ ರತ್ನಾನ್ಯುಪಾಹರತ್ ॥೨೧೨॥

ಅಷ್ಟರಲ್ಲಿ ಬೇರೆ ದಿಕ್ಕುಗಳನ್ನು ಗೆದ್ದು ಯುಧಿಷ್ಠಿರನ ಇತರ ತಮ್ಮಂದಿರೂ ಬಂದರು. ಸಹದೇವ ದಕ್ಷಿಣ ದಿಕ್ಕನ್ನು ಗೆದ್ದು ರತ್ನಗಳನ್ನು ತಂದ.

ತತ್ರ ರುಗ್ಮೀ ನ ಯುಯುಧೇ ಸಹದೇವೇನ ವೀರ್ಯವಾನ್ ॥೨೧೩॥

ಜಿತಃ ಕೃಷ್ಣೇನ ಪೂರ್ವಂ ಯಃ ಶರ್ವಾದಾಪ ಧನುರ್ವರಂ ।
ತಪಸಾ ತೋಷಿತಾತ್ ಕೃಷ್ಣಾದನ್ಯಾನೇವಾಮುಖಾಖಿಲಾನ್ ॥೨೧೪॥

ವಿಜೇಷ್ಯಸಿ ಯದಾ ಕೃಷ್ಣವಿರೋಧಸ್ತೇ ತದಾ ಧನುಃ ।
ಮಾಮೇಷ್ಯತೀತಿ ತೇನೋಕ್ತೋ ನ ವ್ಯರುಧ್ಯತ ಕೇಶವೇ ॥೨೧೫॥

ಸ್ವಸುಃ ಸ್ನೇಹಾಚ್ಚ ಕೃಷ್ಣಸ್ಯ ಯಜ್ಞಕಾರಯಿತೃತ್ವತಃ ।
ಭೀಮಾರ್ಜುನಬಲಾಚ್ಚೈವ ಮಾದ್ರೇಯಾಯ ದದೌ ಕರಂ ॥೨೧೬॥

ದಕ್ಷಿಣದಲ್ಲಿ ವೀರ್ಯಶಾಲಿಯಾದ ರುಕ್ಮಿ ಸಹದೇವನೊಡನೆ ಯುದ್ಧ ಮಾಡಲಿಲ್ಲ. ಏಕೆಂದರೆ ಹಿಂದೆ ರುಕ್ಮಿಣೀ ಸ್ವಯಂವರ ಕಾಲದಲ್ಲಿ ಕೃಷ್ಣನಿಂದ ಪರಾಜಿತನಾದ ಆತ ಶಿವನನ್ನು ತಪಸ್ಸಿನಿಂದ ಒಲಿಸಿಕೊಂಡು ಉತ್ತಮ ಧನುಸ್ಸನ್ನು ಪಡೆದ. ಆದರೆ 'ಈ ಧನುಸ್ಸಿನಿಂದ ಕೃಷ್ಣನನ್ನು ಹೊರತು ಬೇರೆ ಎಲ್ಲರನ್ನೂ ಗೆಲ್ಲುವಿ. ಕೃಷ್ಣನೊಡನೆ ವಿರೋಧ ಮಾಡಿದರೆ ಧನುಸ್ಸು ನನ್ನ ಬಳಿಗೇ ಹಿಂತಿರುಗಿ ಬರುವುದು' ಎಂದು ಶಿವ ಹೇಳಿದ್ದ. ಅದರಿಂದಲೂ ತಂಗಿಯಾದ ರುಕ್ಮಿಣಿಯ ಮೇಲೆ ಪ್ರೀತಿಯಿಂದಲೂ ರುಕ್ಮಿ ಕೃಷ್ಣನಲ್ಲಿ ವಿರೋಧ ಮಾಡುತ್ತಿರಲಿಲ್ಲ. ಈಗ ಕೃಷ್ಣನೆ ಸ್ವತಃ ನಿಂತು ಯಾಗವನ್ನು ಮಾಡಿಸುತ್ತಿದ್ದುದರಿಂದ ಮತ್ತು ಭೀಮಾರ್ಜುನರ ಬಲದಿಂದ ರುಕ್ಮಿ ಸಹದೇವನಿಗೆ ಕಪ್ಪ ಕೊಡಬೇಕಾಯಿತು.

ಚಂದನ ಅಗುರು ವಸ್ತ್ರಗಳು ಮಣಿಗಳು ಶ್ರೇಷ್ಠವಾದ ಮುತ್ತುಗಳು ಸುವರ್ಣ ರಜತ ವಜ್ರಗಳು ಹವಳಗಳು, ಮತ್ತು ಬಹಳ ಧನ (ಇವೆಲ್ಲವನ್ನು ಕಪ್ಪವಾಗಿ ಸ್ವೀಕರಿಸಿದನು.)

ಸ ಕೋಟಿಶತಸಂಖ್ಯೇನ ಧನೇನ ಮಹತಾ ವೃತಃ ।
ಅಭ್ಯವರ್ಷದಮೇಯಾತ್ಮಾ ಧನವರ್ಷೇಣ ಪಾಂಡವಃ ॥೪೨॥

ಪಾಂಡವನಾದ ಭೀಮಸೇನನು ಶತಕೋಟಿಧನದ ದೊಡ್ಡ ಸಂಚಯದಿಂದ ಯುಕ್ತನಾಗಿ ಅಪರಿಮೇಯ ಪ್ರಭಾವನಾದ ಅವನು ಧನವರ್ಷವನ್ನು ಸುರಿಸಿದನು.

ಇಂದ್ರಪ್ರಸ್ಥಮಥಾಗಮ್ಯ ಭೀಮೋ ಭೀಮಪರಾಕ್ರಮಃ ।
ನಿವೇದಯಾಮಾಸ ತದಾ ಧರ್ಮರಾಜಾಯ ತದ್ಧನಮ್ ॥೪೩॥

ಭೀಮಪರಾಕ್ರಮನಾದ ಭೀಮನು ಅನಂತರ ಇಂದ್ರಪ್ರಸ್ಥವನ್ನು ತಲುಪಿ ಧರ್ಮರಾಜನಿಗೆ ಆ ಎಲ್ಲಾ ಸಂಪತ್ತನ್ನೂ ನಿವೇದಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಸಪ್ತವಿಂಶೋऽಧ್ಯಾಯಃ ॥
॥ ದಿಗ್ವಿಜಯಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಇಪ್ಪತ್ತೇಳನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ತದೈವಾನ್ಯೇ ದಿಶೋ ಜಿತ್ವಾ ಸಮೀಯುಸ್ತಸ್ಯ ಯೋऽನುಜಾಃ ।
ಸಹದೇವೋ ದಕ್ಷಿಣಾಶಾಂ ಜಿತ್ವಾ ರತ್ನಾನ್ಯುಪಾಹರತ್ ॥೨೧೨॥

ಅಷ್ಟರಲ್ಲಿ ಬೇರೆ ದಿಕ್ಕುಗಳನ್ನು ಗೆದ್ದು ಯುಧಿಷ್ಠಿರನ ಇತರ ತಮ್ಮಂದಿರೂ ಬಂದರು. ಸಹದೇವ ದಕ್ಷಿಣ ದಿಕ್ಕನ್ನು ಗೆದ್ದು ರತ್ನಗಳನ್ನು ತಂದ.

ತತ್ರ ರುಗ್ಮೀ ನ ಯುಯುಧೇ ಸಹದೇವೇನ ವೀರ್ಯವಾನ್ ॥೨೧೩॥

ಜಿತಃ ಕೃಷ್ಣೇನ ಪೂರ್ವಂ ಯಃ ಶರ್ವಾದಾಪ ಧನುರ್ವರಂ ।
ತಪಸಾ ತೋಷಿತಾತ್ ಕೃಷ್ಣಾದನ್ಯಾನೇವಾಮುಖಾಖಿಲಾನ್ ॥೨೧೪॥

ವಿಜೇಷ್ಯಸಿ ಯದಾ ಕೃಷ್ಣವಿರೋಧಸ್ತೇ ತದಾ ಧನುಃ ।
ಮಾಮೇಷ್ಯತೀತಿ ತೇನೋಕ್ತೋ ನ ವ್ಯರುಧ್ಯತ ಕೇಶವೇ ॥೨೧೫॥

ಸ್ವಸುಃ ಸ್ನೇಹಾಚ್ಚ ಕೃಷ್ಣಸ್ಯ ಯಜ್ಞಕಾರಯಿತೃತ್ವತಃ ।
ಭೀಮಾರ್ಜುನಬಲಾಚ್ಚೈವ ಮಾದ್ರೇಯಾಯ ದದೌ ಕರಂ ॥೨೧೬॥

ದಕ್ಷಿಣದಲ್ಲಿ ವೀರ್ಯಶಾಲಿಯಾದ ರುಕ್ಮಿ ಸಹದೇವನೊಡನೆ ಯುದ್ಧ ಮಾಡಲಿಲ್ಲ. ಏಕೆಂದರೆ ಹಿಂದೆ ರುಕ್ಮಿಣೀ ಸ್ವಯಂವರ ಕಾಲದಲ್ಲಿ ಕೃಷ್ಣನಿಂದ ಪರಾಜಿತನಾದ ಆತ ಶಿವನನ್ನು ತಪಸ್ಸಿನಿಂದ ಒಲಿಸಿಕೊಂಡು ಉತ್ತಮ ಧನುಸ್ಸನ್ನು ಪಡೆದ. ಆದರೆ 'ಈ ಧನುಸ್ಸಿನಿಂದ ಕೃಷ್ಣನನ್ನು ಹೊರತು ಬೇರೆ ಎಲ್ಲರನ್ನೂ ಗೆಲ್ಲುವಿ. ಕೃಷ್ಣನೊಡನೆ ವಿರೋಧ ಮಾಡಿದರೆ ಧನುಸ್ಸು ನನ್ನ ಬಳಿಗೇ ಹಿಂತಿರುಗಿ ಬರುವುದು' ಎಂದು ಶಿವ ಹೇಳಿದ್ದ. ಅದರಿಂದಲೂ ತಂಗಿಯಾದ ರುಕ್ಮಿಣಿಯ ಮೇಲೆ ಪ್ರೀತಿಯಿಂದಲೂ ರುಕ್ಮಿ ಕೃಷ್ಣನಲ್ಲಿ ವಿರೋಧ ಮಾಡುತ್ತಿರಲಿಲ್ಲ. ಈಗ ಕೃಷ್ಣನೆ ಸ್ವತಃ ನಿಂತು ಯಾಗವನ್ನು ಮಾಡಿಸುತ್ತಿದ್ದುದರಿಂದ ಮತ್ತು ಭೀಮಾರ್ಜುನರ ಬಲದಿಂದ ರುಕ್ಮಿ ಸಹದೇವನಿಗೆ ಕಪ್ಪ ಕೊಡಬೇಕಾಯಿತು.

ಜಿಗ್ಯೇ ಬಲೇನಾನ್ಯನೃಪಾನ್ ಸಹದೇವಃ ಪ್ರತಾಪವಾನ್ ॥೨೧೭॥

ಪ್ರತಾಪಶಾಲಿಯಾದ ಸಹದೇವ ಬೇರೆ ರಾಜರನ್ನು ಸ್ವಸಾಮರ್ಥ್ಯದಿಂದಲೇ ಗೆದ್ದ.

ತಥಾ ಸ್ಮೃತಂ ಸಮಾಗತಂ ಘಟೋತ್ಕಚಂ ವಿಭೀಷಣೇ ।
ಸಮಾದಿಶದ್ ಯಯೌ ಚ ಸೋಽಪಿ ಸೋದದಾನ್ಮಹಾಕರಮ್ ॥೨೧೮॥

ಸ್ಮರಿಸಿದೊಡನೆ ಬಂದ ಘಟೋತ್ಕಚನನ್ನು ಸಹದೇವ ವಿಭೀಷಣನ ಬಳಿಗೆ ಕಳುಹಿಸಿದ. ಒಡನೆ ಅವನು ಅಲ್ಲಿಗೆ ಹೋದ. ವಿಭೀಷಣ ಅವನಿಗೆ ಬಹಳ ಕಪ್ಪವನ್ನು ಕೊಟ್ಟ.

ಪುರಾ ಹಿ ರಾಘವೋದಿತಂ ತದಸ್ಯ ಸೋಽಖಿಲಂ ತದಾ ।
ವಿಚಾರ್ಯ ಕೇಶವಂ ಚ ತಂ ಬಲಂ ಚ ಭೀಮಪಾರ್ಥಯೋಃ ।
ದಿವೌಕಸಶ್ಚ ಪಾಂಡವಾನವೇತ್ಯ ಸೋಽದದಾತ್ ಕರಂ ॥೨೧೯॥

ಘಟೋತ್ಕಚ ಬಂದಾಗ ವಿಭೀಷಣ ಹಿಂದೆ ಅವನಿಗೆ ಶ್ರೀರಾಮ ಹೇಳಿದ್ದನ್ನೆಲ್ಲ ನೆನೆಸಿಕೊಂಡ. ಶ್ರೀಕೃಷ್ಣಶ್ರೀರಾಮನೇ ಎಂಬುದನ್ನು ಆಲೋಚಿಸಿ, ಭೀಮಾರ್ಜುನರ ಬಲವನ್ನೂ ಆಲೋಚಿಸಿ ಪಾಂಡವರನ್ನು ದೇವತೆಗಳೆಂದೂ ತಿಳಿದು ಕಪ್ಪಕೊಟ್ಟ.

ಮಹೌಘರತ್ನಸಂಚಯಂ ಸ ಆಪ್ಯ ಭೀಮಸೇನಜಃ ।
ಯಯೌ ಚ ಮಾದ್ರಿನಂದನಂ ಸ ಚಾಯಯೌ ಸ್ವಕಂ ಪುರಂ ॥೨೨೦॥

ಘಟೋತ್ಕಚ ವಿಭೀಷಣನಿಂದ ಮಹೌಘ ರತ್ನರಾಶಿಯನ್ನು ತೆಗೆದುಕೊಂಡು ಸಹದೇವನ ಬಳಿಗೆ ಬಂದ. ಬಳಿಕ ಸಹದೇವ ತನ್ನ ಪಟ್ಟಣಕ್ಕೆ ಹಿಂದಿರುಗಿದ.

ನಕುಲಃ ಪಶ್ಚಿಮಾಶಾಯಾಂ ವಿಜಿಗ್ಯೇಽಖಿಲಭೂಭೃತಃ ।
ಕರಮಾಪ ಚ ವೀರೋಸೌ ಸೌಹಾರ್ದಾದೇವ ಮಾತುಲಾತ್ ।
ಆಯಯೌ ಚ ಮಹಾರತ್ನಸಂಚಯೇನ ಸ್ವಕಂ ಪುರಂ ॥೨೨೧॥

ವೀರನಾದ ನಕುಲ ಪಶ್ಚಿಮ ದಿಕ್ಕಿನಲ್ಲಿ ಎಲ್ಲ ರಾಜರನ್ನೂ ಗೆದ್ದ. ಪ್ರೀತಿಯಿಂದಲೆ ತನ್ನ ಸೋದರಮಾವನಾದ ಶಲ್ಯನಿಂದಲೂ ಕಪ್ಪವನ್ನು ಪಡೆದ. ಮಹಾರತ್ನರಾಶಿ ಸಮೇತನಾಗಿ ತನ್ನ ಪಟ್ಟಣಕ್ಕೆ ಹಿಂತಿರುಗಿದ.

ಅರ್ಜುನಃ ಕಪಿವರೋಚ್ಛ್ರಿತಧ್ವಜಂ
ಸ್ಯಂದನಂ ಸಮಧಿರುಹ್ಯ ಗಾಂಡಿವೀ ।
ಯಾತ ಏವ ದಿಶಮುತ್ತರಾಂ ಯದಾ
ಪಾರ್ವತೀಯಕನೃಪಾಃ ಸಮಾಯಯುಃ ॥೨೨೨॥

ಅರ್ಜುನ ಕಪಿಶ್ರೇಷ್ಠನಾದ ಹನುಮಂತನಿಂದ ಯುಕ್ತವಾದ ಉನ್ನತಧ್ವಜವುಳ್ಳ ರಥವೇರಿ ಗಾಂಡೀವಧರಿಸಿ ಉತ್ತರ ದಿಕ್ಕಿಗೆ ಹೋದಾಗ ಪರ್ವತವಾಸಿಗಳಾದ ಕ್ಷುದ್ರ ರಾಜರು ಅವನನ್ನು ತಡೆದರು.

ತ್ರೈಗರ್ತಾಃ ಪಾರ್ವತೇಯಾಶ್ಚ ಸಹಿತಾಃ ಪಾಂಡುನಂದನಂ ।
ಅಭ್ಯೇತ್ಯ ಯೋಧಯಾಮಾಸುರ್ಜಾನಂತಸ್ತಚ್ಚಿಕೀರ್ಷಿತಂ ॥೨೨೩॥

ತ್ರಿಗರ್ತದೇಶದ ರಾಜನಿಂದ ಕೂಡಿದ ಪರ್ವತ ರಾಜ್ಯಗಳ ನಾಯಕರು ಅರ್ಜುನನ ಬಳಿಗೆ ಬಂದು ಅವನ ಉದ್ದೇಶವನ್ನರಿತು ಯುದ್ಧಮಾಡಿದರು.

ತಾನ್ವಿಜಿತ್ಯ ಯುಗಪತ್ ಸ ಪಾಂಡವಃ
ಸಂಜಯನ್ ಕ್ರಮಶ ಏವ ತಾಂ ದಿಶಂ ।
ಪ್ರಾವ್ರಜಚ್ಚ ಭಗದತ್ತಮೂರ್ಜಿತಂ
ತೇನ ಚಾಸ್ಯ ಸಮಭೂನ್ಮಹಾರಣಃ ॥೨೨೪॥

ಅವರೆಲ್ಲರನ್ನೂ ಒಮ್ಮೆಗೇ ಪರಾಭವಗೊಳಿಸಿ ಅರ್ಜುನ ಕ್ರಮವಾಗಿ ಆ ಉತ್ತರದಿಕ್ಕನ್ನು ಗೆದ್ದು ಬಲಿಷ್ಠನಾದ ಭಗದತ್ತನಲ್ಲಿಗೆ ಹೋದ. ಅವನೊಂದಿಗೆ ದೊಡ್ಡ ಯುದ್ಧನಡೆಯಿತು.

ಸೋಽಭಿಯುಧ್ಯ ಸಗಜೋ ದಿನಾಷ್ಟಕಂ
ಶ್ರಾಂತ ಆಹ ಪುರುಹೂತನಂದನಂ ।
ಬ್ರೂಹಿ ತೇ ಸಮರಕಾರಣಂ ತ್ವಿತಿ
ಪ್ರಾಹ ದೇಹಿ ಕರಮಿತ್ಯಥಾರ್ಜುನಃ ॥೨೨೫॥

ಭಗದತ್ತ ಸುಪ್ರತೀಕವೆಂಬ ಆನೆಯನ್ನೇರಿ ಬಂದು ಎಂಟು ದಿನಗಳ ಕಾಲ ಯುದ್ಧ ಮಾಡಿ ಆಯಾಸಗೊಂಡು ಅರ್ಜುನನಿಗೆ ಹೇಳಿದ 'ನಿನ್ನ ಯುದ್ಧಕ್ಕೆ ಕಾರಣವೇನು ಹೇಳು' ಅರ್ಜುನನೆಂದ 'ಕಪ್ಪ ಕೊಡು'.

ಸೋಽಪ್ಯದಾತ್ ಕರಮಮುಷ್ಯ ವಾಸವೋ
ಮದ್ಗುರುಸ್ತವ ಪಿತೇತಿ ಸಾದರಂ ।
ನೈವ ಜೇತುಮಿಹ ಶಕ್ಷ್ಯಸಿ ತ್ವಮಿ-
ತ್ಯಾವದದ್ಧರಿವರಾಸ್ತ್ರತೇಜಸಾ ॥೨೨೬॥

'ನಿನ್ನ ತಂದೆ ಇಂದ್ರ ನನಗೆ ಗುರು' ಎನ್ನುತ್ತ ಭಗದತ್ತ ಆದರಪೂರ್ವಕವಾಗಿ ಅರ್ಜುನನಿಗೆ ಕಪ್ಪವನ್ನಿತ್ತ. ಆದರೆ 'ನನ್ನಲ್ಲಿರುವ ವೈಷ್ಣವಾಸ್ತ್ರತೇಜಸ್ಸಿನಿಂದ ನೀನು ನನ್ನನ್ನು ಗೆಲ್ಲಲು ಸಾಧ್ಯವಿಲ್ಲ' ಎಂದ.

ಸ್ನೇಹಪೂರ್ವಂ ಪ್ರದತ್ತೇ ತು ಕರೇ ನೈವಾಹ ಚೋತ್ತರಂ ।
ಅರ್ಜುನೋ ವ್ಯರ್ಥಕಲಹಮನಿಚ್ಛನ್ ಸ್ನೇಹಯಂತ್ರಿತಃ ॥೨೨೭॥

ಸ್ನೇಹಪೂರ್ವಕವಾಗಿ ಅವನು ಕಪ್ಪವನ್ನು ಕೊಟ್ಟಾದ ಬಳಿಕ ಅರ್ಜುನ ಏನೂ ಉತ್ತರ ಕೊಡಲಿಲ್ಲ. ಸ್ನೇಹಕ್ಕೆ ಕಟ್ಟುಬಿದ್ದು ವ್ಯರ್ಥಕಲಹವನ್ನು ಬಯಸದೆ ಸುಮ್ಮನಾದ.

ಪಾರ್ಥೋ ಜಿತ್ವಾಽಷ್ಟವರ್ಷಾಣಿ ಷಡ್ ದ್ವೀಪಾನಪರಾನಪಿ ।
ಅಜಯಚ್ಚತುರ್ದಿಶಮಪಿ ಸರ್ವಶಃ ಶಸ್ತ್ರತೇಜಸಾ ॥೨೨೮॥

ಅರ್ಜುನ ಎಂಟು ವರ್ಷಗಳನ್ನೂ ಆರು ದ್ವೀಪಗಳನ್ನೂ ವಶಪಡಿಸಿಕೊಂಡು ಸಕಲಶಸ್ತ್ರಾಸ್ತ್ರತೇಜಸ್ಸಿನಿಂದ ನಾಲ್ಕೂ ದಿಕ್ಕುಗಳನ್ನು ಗೆದ್ದ.

ಪಾತಾಳಸಪ್ತಕಂ ಗತ್ವಾ ಜಿತ್ವಾ ದೈತೇಯದಾನವಾನ್ ।
ಬಲೇಶ್ಚ ವಿಷ್ಣುವಚನಾತ್ ಕರಂ ಜಗ್ರಾಹ ಸಾಮತಃ ॥೨೨೯॥

ಅರ್ಜುನ ಏಳು ಪಾತಾಳಗಳನ್ನು ಹೊಕ್ಕು ದೈತ್ಯದಾನವರನ್ನು ಗೆದ್ದು ಶ್ರೀಹರಿಯ ಆಜ್ಞೆಯಂತೆ ಬಲಿಯಿಂದ ಕಪ್ಪವನ್ನು ಸಾಮದಿಂದಲೆ ತೆಗೆದುಕೊಂಡ.

ಜಿತ್ವಾ ಚ ವಾಸುಕಿಂ ಭೂರಿರತ್ನಮಾದಾಯ ಸತ್ವರಃ ।
ಆಜಗಾಮ ಪುರಂ ಸ್ವೀಯಂ ವೀರೋ ವತ್ಸರಮಾತ್ರತಃ ॥೨೩೦॥

ವಾಸುಕಿಯನ್ನೂ ಗೆದ್ದು ಬಹಳ ರತ್ನವನ್ನು ತೆಗೆದುಕೊಂಡು ಬೇಗನೇ ಒಂದೇ ವರ್ಷದಲ್ಲಿ ವೀರನಾದ ಅರ್ಜುನ ತನ್ನ ಪಟ್ಟಣಕ್ಕೆ ಹಿಂತಿರುಗಿ ಬಂದ.

ಸುವರ್ಣರತ್ನಗಿರಯಶ್ಚತುರ್ಭಿಸ್ತೈಃ ಸಮಾರ್ಜಿತಾಃ ।
ಚತ್ವಾರೋ ಯೋಜನಾನಾಂ ಹಿ ದಶತ್ರಿಂಶಚ್ಛತಂ ತಥಾ ॥೨೩೧॥

ಚತುಃಶತಂ ಚ ಕ್ರಮಶ ಉಚ್ಛ್ರಿತಾ ದಿಗ್ಜಯಾರ್ಜಿತಾಃ ।
ಪ್ರತೀಚ್ಯಾದ್ಯಪಸವ್ಯೇನ ಕ್ರಮಾದ್‌ದಿಗ್ಭ್ಯಃ ಸಮಾರ್ಜಿತಾಃ ॥೨೩೨॥

ಬಂಗಾರ ರತ್ನಗಳ ನಾಲ್ಕು ಬೆಟ್ಟಗಳನ್ನೆ ನಕುಲ ಸಹದೇವ ಭೀಮ ಅರ್ಜುನರು ನಾಲ್ವರು ಸಂಪಾದಿಸಿದರು. ಪಶ್ಚಿಮದಿಂದ ತೊಡಗಿ ಅಪ್ರದಕ್ಷಿಣವಾಗಿ ನಾಲ್ಕು ದಿಕ್ಕುಗಳಿಂದ ಅವರು ದಿಗ್ವಿಜಯದಲ್ಲಿ ಸಂಪಾದಿಸಿದ ರತ್ನಪರ್ವತಗಳು ಕ್ರಮವಾಗಿ ಹತ್ತು ಮೂವತ್ತು ನೂರು ಮತ್ತು ನಾನ್ನೂರು ಯೋಜನ ವಿಸ್ತಾರವಾಗಿದ್ದುವು.

ವಿಶ್ವಕರ್ಮಕೃತತ್ವಾತ್ತು ಪುರಸ್ಯಾಲ್ಪೇऽಪಿ ಚ ಸ್ಥಲೇ ।
ಅಂತರ್ಗತಾಸ್ತೇ ಗಿರಯಸ್ತದದ್ಭುತಮಿವಾಭವತ್ ॥೨೩೩॥

ಇಂದ್ರಪ್ರಸ್ಥದಲ್ಲಿ ಇರುವ ಸ್ಥಳಾವಕಾಶ ಅಲ್ಪವಾಗಿದ್ದರೂ ಆ ನಗರ ವಿಶ್ವಕರ್ಮ ನಿರ್ಮಿತವಾದ್ದರಿಂದ ಆ ಎಲ್ಲ ರತ್ನಪರ್ವತಗಳೂ ನಗರದೊಳಗೆ ಇರಲು ಶಕ್ಯವಾಯಿತು. ಇದೊಂದು ನೋಡುವವರಿಗೆ ಬಹಳ ಅದ್ಭುತವಾಗಿತ್ತು.

★ ★ ★ ★

ಇಪ್ಪತ್ತೆಂಟನೆಯ ಅಧ್ಯಾಯ

(ಸಹದೇವನ ದಕ್ಷಿಣ ದಿಗ್ವಿಜಯ. ಮಾಹಿಷ್ಮತಿ ನಗರದಲ್ಲಿ ಅಗ್ನಿಸ್ತುತಿ. ಘಟೋತ್ಕಚನ ಮೂಲಕ ವಿಭೀಷಣನಿಂದ ಕರದಾನ.)

ವೈಶಂಪಾಯನಃ

ತಥೈವ ಸಹದೇವೋಽಪಿ ಧರ್ಮರಾಜೇನ ಪೂಜಿತಃ ।
ಮಹತ್ಯಾ ಸೇನಯಾ ಸಾರ್ಧಂ ಪ್ರಯಯೌ ದಕ್ಷಿಣಾಂ ದಿಶಮ್ ॥೧॥

ಹಾಗೆಯೇ ಸಹದೇವನು ಸಹ ಧರ್ಮರಾಜನಿಂದ ಸತ್ಕೃತನಾಗಿ ದೊಡ್ಡ ಸೈನ್ಯವನ್ನು ತೆಗೆದುಕೊಂಡು ದಕ್ಷಿಣಾಭಿಮುಖವಾಗಿ ಹೊರಟನು.

ಸ ಶೂರಸೇನಾನ್ ಕಾತ್ಸ್ನ್ಯೇನ ಪೂರ್ವಮೇವಾಜಯತ್ ಪ್ರಭುಃ।
ಮತ್ಸ್ಯರಾಜಂ ಚ ಕೌರವ್ಯೋ ವಶೇ ಚಕ್ರೇ ಬಲಾದ್ ಬಲೀ ॥೨॥

ಬಲಿಷ್ಠನೂ ಪ್ರಭುವೂ ಆದ ಅವನು ಮೊದಲೇ ಶೂರಸೇನದೇಶವನ್ನೆಲ್ಲಾ ಸಮಗ್ರವಾಗಿ ಗೆದ್ದನು. ಜನಮೇಜಯನೇ! ಹಾಗೆಯೇ ಮತ್ಸ್ಯರಾಜನನ್ನು ವಶಪಡಿಸಿಕೊಂಡನು.

ಅಧಿರಾಜಂ ಚ ರಾಜಾನಂ ದಂತವಕ್ರಂ ಮಹಾಹವೇ ।
ಜಿಗಾಯ ನರಕಂ ಚೈವ ಸ್ವಾರಾಜ್ಯೇ ಸನ್ನ್ಯವೇಶಯತ್ ॥೩॥

ಹಾಗೆಯೇ ರಾಜನಾದ ಅಧಿರಾಜನನ್ನೂ ದಂತವಕ್ರನನ್ನೂ ಮತ್ತು ನರಕಾಸುರನನ್ನೂ ದೊಡ್ಡಯುದ್ಧದಲ್ಲಿ ಗೆದ್ದು ಧರ್ಮರಾಜನ ಸಾರ್ವಭೌಮತ್ವವನ್ನು ಅಂಗೀಕರಿಸುವಂತೆ ಮಾಡಿದನು.

ಸುಕುಮಾರಂ ವಶೇ ಚಕ್ರೇ ಸುಮಿತ್ರಂ ಚ ನರಾಧಿಪಮ್ ।
ತಥೈವಾಪರಮತ್ಸ್ಯಾಂಶ್ಚ ವ್ಯಜಯತ್ ಸ ಪಟಚ್ಚರಾನ್ ॥೪॥

ಸುಕುಮಾರನೆಂಬ ರಾಜನನ್ನೂ ಸುಮಿತ್ರನೆಂಬ ರಾಜನನ್ನೂ ಅಪರಮತ್ಸ್ಯರಾಜನನ್ನೂ ಮತ್ತು ಪಟಚ್ಚರರನ್ನೂ ಗೆದ್ದನು.

ನಿಷಾದಭೂಮಿಂ ಗೋಶೃಂಗಂ ಪರ್ವತಪ್ರವರಂ ತಥಾ ।
ತರಸಾ ವ್ಯಜಯದ್ ಧೀಮಾನ್ ಶ್ರೇಣಿಮಂತಂ ಚ ಪಾರ್ಥಿವಮ್ ॥

ಮೇಧಾವಿಯಾದ ಅವನು ನಿಷಾದಭೂಮಿಯನ್ನೂ ಪರ್ವತಶ್ರೇಷ್ಠವಾದ ಗೋಶೃಂಗವನ್ನೂ ಶೀಘ್ರವಾಗಿ ಗೆದ್ದು ಶ್ರೇಣಿಮಂತರಾಜನನ್ನೂ ಜಯಿಸಿದನು.

ನವರಾಷ್ಟ್ರಂ ವಿನಿರ್ಜಿತ್ಯ ಕುಂತಿಭೋಜಮುಪಾದ್ರವತ್ ।
ಪ್ರೀತಿಪೂರ್ವಂ ಚ ತಸ್ಯಾಸೌ ಪ್ರತಿಜಗ್ರಾಹ ಶಾಸನಮ್ ॥೬॥

ನವರಾಷ್ಟ್ರವನ್ನು ಗೆದ್ದು ಕುಂತಿಭೋಜನ ಕಡೆಗೆ ಧಾವಿಸಿದನು. ಕುಂತಿಭೋಜನು ಪ್ರೀತಿಯಿಂದ ಅವನ ಆಜ್ಞೆಯನ್ನು ಸ್ವೀಕರಿಸಿದನು.

ತತಶ್ಚರ್ಮಣ್ವತೀತೀರೇ ಜಂಭಕಸ್ಯಾತ್ಮಜಂ ನೃಪಮ್ ।
ದದರ್ಶ ವಾಸುದೇವೇನ ಶೇಷಿತಂ ಪೂರ್ವವೈರಿಣಾ ॥೭॥

ಅನಂತರ ಚರ್ಮಣ್ವತೀತೀರದಲ್ಲಿ ಪೂರ್ವಶತ್ರುವಾದ ವಾಸುದೇವನಿಂದ ಉಳಿಸಲ್ಪಟ್ಟ ಜಂಭಕನ ಪುತ್ರನಾದ ರಾಜನನ್ನು ನೋಡಿದನು.

ಚಕ್ರೇ ಸ ತೇನ ಸಂಗ್ರಾಮಂ ಸಹ ಭೋಜೇನ ಭಾರತ ।
ಸ ತಮಾಜೌ ವಿನಿರ್ಜಿತ್ಯ ದಕ್ಷಿಣಾಭಿಮುಖೋ ಯಯೌ ॥೮॥

ಭಾರತನೇ ! ಅವನು ಆ ಭೋಜರಾಜನ ಜೊತೆಯಲ್ಲಿ ಯುದ್ಧವನ್ನುಮಾಡಿ ಅವನನ್ನು ಜಯಿಸಿ ಅಲ್ಲಿಂದ ದಕ್ಷಿಣಾಭಿಮುಖವಾಗಿ ಹೊರಟನು.

ಮೋಕಾನ್ ಪರಮಮೋಕಾಂಶ್ಚ ವ್ಯಜಯತ್ ಸ ಪುನಃ ಪುನಃ ।
ಕರಾಂಸ್ತೇಭ್ಯ ಉಪಾದಾಯ ರತ್ನಾನಿ ವಿವಿಧಾನಿ ಚ ।
ತತಸ್ತೈರೇವ ಸಹಿತೋ ನರ್ಮದಾಮಭಿತೋ ಯಯೌ ॥೯॥

ಅವನು ಮೋಕರನ್ನೂ ಮತ್ತು ಪರಮಮೋಕರನ್ನೂ ಗೆದ್ದು ಅವರು ಪುನಃ ಪುನಃ ವಿವಿಧ ರತ್ನರೂಪವಾದ ಕಪ್ಪವನ್ನು ಕೊಡುವಂತೆ ಮಾಡಿ ಅವರಿಂದ ಸಹಿತನಾಗಿ ನರ್ಮದಾ ನದಿಯ ಬಳಿಗೆ ಹೋದನು.

ವಿಂದಾನುವಿಂದಾವಾವಂತ್ಯೌ ಸೈನ್ಯೇನ ಮಹತಾ ವೃತೌ ।
ಜಿಗಾಯ ಸಮರೇ ವೀರಾವಾಶ್ವಿನೇಯಃ ಪ್ರತಾಪವಾನ್ ॥೧೦॥

ಪ್ರತಾಪಶಾಲಿಯಾದ ಅಶ್ವಿನೀ ಪುತ್ರನಾದ ಸಹದೇವನು ದೊಡ್ಡ ಸೈನ್ಯದಿಂದಕೂಡಿದ್ದ ಅವಂತಿ ದೇಶದ ವಿಂದಾನುವಿಂದರನ್ನು ಯುದ್ಧದಲ್ಲಿ ಜಯಿಸಿದನು.

ತತೋ ರತ್ನಾನ್ಯುಪಾದಾಯ ಪುರಂ ಭೋಜಕಟಂ ಯಯೌ ।
ತತ್ರ ಯುದ್ಧಮಭೂತ್ ತಾತ ದಿವಸದ್ವಯಮಚ್ಯುತ ॥೧೧॥

ಅಲ್ಲಿಂದ ರತ್ನಗಳನ್ನು ತೆಗೆದುಕೊಂಡು ಭೋಜಕಟಪಟ್ಟಣಕ್ಕೆ ಬಂದನು. ಪ್ರೀತಿಪಾತ್ರನೇ! ಸದ್ಗುಣಗಳಿಂದ ರಹಿತನಾಗದವನೇ, ಅಲ್ಲಿ ಎರಡು ದಿನಗಳಕಾಲ ಯುದ್ಧವುನಡೆಯಿತು.

ವಿನಿರ್ಜಿತ್ಯ ದುರಾಧರ್ಷಂ ಭೀಷ್ಮಕಂ ಮಾದ್ರಿನಂದನಃ ।
ಕೋಸಲಾಧಿಪತಿಂ ಚೈವ ತಥಾ ವೇಣ್ಣಾಕಟಾಧಿಪಮ್ ॥೧೨॥

ಕ್ರಾಂತಕಾಂಶ್ಚ ರಣೇ ಜಿತ್ವಾ ತಥಾ ಪ್ರಾಕೋಟಕಾನ್ ನೃಪಾನ್ ।
ಬಾಲಕೇಯಾನ್ ವಶೇ ಕೃತ್ವಾ ತಥಾ ಹೈರಂಬಕಾನಪಿ ॥೧೩॥

ಮಾದ್ರಿನಂದನನಾದ ಸಹದೇವನು ಸೋಲಿಸಲು ಅಸಾಧ್ಯನಾದ ಭೀಷ್ಮಕನನ್ನು ಸೋಲಿಸಿ ಹಾಗೆಯೇ ಕೋಸಲಾಧಿಪತಿಯನ್ನೂ ವೇಣ್ಣಾತಟಾಧಿಪತಿಯನ್ನೂ ಕ್ರಾಂತಕರನ್ನೂ ಪ್ರಾಕೋಟಕರಾಜರನ್ನೂ ಬಾಲಕೇಯರನ್ನೂ ಹೈರಂಬಕರನ್ನೂ ಯುದ್ಧದಲ್ಲಿ ಗೆದ್ದು ವಶಪಡಿಸಿಕೊಂಡನು.

ಸ್ವರೂಪಂ ಚ ವಿನಿರ್ಜಿತ್ಯ ಧರ್ಮಗ್ರಾಮಾನ್ ಸಕೌಸಲಾನ್ ।
ತೈತ್ತಿರಾನರ್ಧಪಾಂಶ್ಚೈವ ಶಂಬರಾಂಶ್ಚ ಸಹಸ್ರಶಃ ।
ತಾಂಶ್ಚೈವಾಟವಿಕಾನ್ ಸರ್ವಾನಜಯತ್ ಪಾಂಡುನಂದನಃ ॥೧೪॥

ಸ್ವರೂಪರಾಜನನ್ನು ಗೆದ್ದು ಕೋಸಲದೇಶವನ್ನು ಧರ್ಮಗ್ರಾಮಗಳನ್ನೂ ಗೆದ್ದು ತೈತ್ತಿರರನ್ನೂ ಅರ್ಧಪರನ್ನೂ ಮತ್ತು ಸಹಸ್ರ ಸಂಖ್ಯೆಯಲ್ಲಿ ಶಂಬರರನ್ನೂ ಗೆದ್ದು ಪಾಂಡುನಂದನನಾದ ಸಹದೇವನು ಎಲ್ಲಾ ಅರಣ್ಯವಾಸಿರಾಜರುಗಳನ್ನೂ ಗೆದ್ದನು.

ಕಾರಂಡಮೇಯಂ ಚ ನೃಪಂ ತಥಾ ಚಕ್ರಪುರೇऽಜಯತ್ ।
ಪುಳಿಂದಾಂಶ್ಚ ರಣೇ ಜಿತ್ವಾ ಯಯೌ ದಕ್ಷಿಣತಃ ಪುನಃ ॥೧೫॥

ಹಾಗೆಯೇ ಚಕ್ರಪುರದಲ್ಲಿ ಕಾರಂಡಮೇಯ ಎಂಬ ರಾಜನನ್ನೂ ಮತ್ತು ಯುದ್ಧದಲ್ಲಿ ಪುಳಿಂದರಾಜರುಗಳನ್ನೂ ಗೆದ್ದು ಪುನಃ ದಕ್ಷಿಣಾಭಿಮುಖವಾಗಿ ಹೊರಟನು.

ತತಸ್ತು ಪತ್ತನಂ ಪ್ರಾಪ್ಯ ಸಹದೇವಃ ಪ್ರತಾಪವಾನ್ ।
ಯಯುಧೇ ಚ ದ್ರುಮೇಂದ್ರೇಣ ದಿವಸಂ ನಕುಲಾನುಜಃ ।
ತಂ ಚ ಜಿತ್ವಾ ಮಹಾಬಾಹುಂ ಪ್ರಯಯೌ ದಕ್ಷಿಣಾಂ ದಿಶಮ್ ॥೧೬॥

ಅನಂತರ ಪತ್ತನ ಎಂಬ ರಾಜ್ಯಕ್ಕೆ ಹೋಗಿ ಪ್ರತಾಪಶಾಲಿಯಾದ ನಕುಲಾನುಜನಾದ ಸಹದೇವನು ಅಲ್ಲಿಯ ರಾಜನಾದ ದ್ರುಮೇಂದ್ರನ ಜೊತೆಯಲ್ಲಿ ಒಂದು ದಿವಸ ಯುದ್ಧವನ್ನುಮಾಡಿ ಆ ಮಹಾಬಾಹುವನ್ನು ಜಯಿಸಿ ಪುನಃ ದಕ್ಷಿಣಾಭಿಮುಖವಾಗಿ ಹೊರಟನು.

ಗುಹಾಮಾಸಾದಯದ್ ರಾಜನ್ ಕಿಷ್ಕಿಂಧಾಂ ಲೋಕವಿಶ್ರುತಾಮ್ ।
ಪುರಾ ವಾನರರಾಜೇನ ಸುಗ್ರೀವೇಣಾಭಿಪಾಲಿತಾಮ್ ॥೧೭॥

ರಾಜನೇ! ಅಲ್ಲಿಂದ ಲೋಕವಿಶ್ರುತವಾದ ಹಿಂದೆ ವಾನರರಾಜನಾದ ಸುಗ್ರೀವನಿಂದ ಪಾಲಿಸಲ್ಪಟ್ಟ ಕಿಷ್ಕಿಂಧಾಗುಹೆಯನ್ನು ಸಮೀಪಿಸಿದನು.

ತತಃ ಕೋಸಲರಾಜಸ್ಯ ರಾಮಸ್ಯೈವಾನುಗೇನ ಚ ।
ಸುಗ್ರೀವೇಣಾಭಿಗುಪ್ತಾಂ ತಾಂ ಪ್ರವಿಷ್ಟಸ್ತಮಥಾಹ್ವಯತ್ ॥೧೮॥

ಅಲ್ಲಿ ಕೋಸಲರಾಜನಾದ ರಾಮನ ಅನುಚರನಾದ ಸುಗ್ರೀವನಿಂದ ರಕ್ಷಿತವಾದ ಆ ಗುಹಾಪಟ್ಟಣವನ್ನು ಪ್ರವೇಶಿಸಿ ಯುದ್ಧಕ್ಕೆ ಆಹ್ವಾನಿಸಿದನು.

ತತ್ರ ವಾನರರಾಜಾಭ್ಯಾಂ ಸುಷೇಣವಸುಷೇಣಯೋಃ ।
ಯುಯುಧೇ ದಿವಸಾನ್ ಸಪ್ತ ನಚ ತೌ ವಿಮುಖೀಕೃತೌ ॥೧೯॥

ತತಸ್ತುತೋಷ ಸುಗ್ರೀವಃ ಕೋಸಲಾಧಿಪತೇಃ ಸಖಾ ।
ತತಸ್ತುಷ್ಟೌ ಮಹಾತ್ಮಾನೌ ಸಹದೇವಾಯ ವಾನರೌ ।
ಊಚತುಶ್ಚೈವ ಸಂಹೃಷ್ಟೌ ಪ್ರೀತಿಪೂರ್ವಮಿದಂ ವಚಃ ॥೨೦॥

ಸಹದೇವನು ಆಗ ಕಿಷ್ಕಿಂಧಾಪಟ್ಟಣವನ್ನು ಪಾಲಿಸುವ ವಾನರರಾಜರಾದ ಸುಷೇಣ ಮತ್ತು ವಸುಷೇಣರ ಜೊತೆಯಲ್ಲಿ ಏಳು ದಿವಸಗಳ ಕಾಲ ಯುದ್ಧಮಾಡಿದರು. ಅವರಿಬ್ಬರೂ ವಿಮುಖರಾಗಲಿಲ್ಲ. ಆಗ ಕೋಸಲಾಧಿಪತಿಯಾದ ರಾಮನ ಸಖನಾದ ಸುಗ್ರೀವನು ಸಂತೋಷಗೊಂಡನು. ಆಗ ಮಹಾನುಭಾವರಾದ ಸುಷೇಣ, ವಸುಷೇಣರು ಪರಮ ಸಂತೋಷದಿಂದ ಸಹದೇವನನ್ನು ಕುರಿತು ಪ್ರೀತಿ ಪೂರ್ವಕವಾಗಿ ಈ ಮಾತುಗಳನ್ನು ಆಡಿದರು.

ಗಚ್ಛ ಪಾಂಡವಶಾರ್ದೂಲ ಕೃಷ್ಣಸ್ಯಾನುಮತೇ ಸ್ಥಿತಃ ।
ಧರ್ಮರಾಜಃ ಪ್ರಿಯೋ ಯಸ್ಮಾದ್ ವಿಷ್ಣೋರಮಿತತೇಜಸಃ ॥೨೧॥

ಸರ್ವಮೇತಚ್ಛ್ರುತಂ ರಾಜನ್ ಪಾರಂಪರ್ಯೇಣ ಪಾಂಡವ ।
ಗಚ್ಛ ಪಾಂಡವಶಾರ್ದೂಲ ರತ್ನಾನ್ಯಾದಾಯ ಸರ್ವಶಃ ।
ಅವಿಘ್ನಮಸ್ತು ಯಜ್ಞಾಯ ಧರ್ಮರಾಜಸ್ಯ ಧೀಮತಃ ॥೨೨॥

ಎಲೈ ಪಾಂಡವಶಾರ್ದೂಲನೇ, ಕೃಷ್ಣನ ವಶವರ್ತಿಯಾದ ಪಾಂಡವಶಾರ್ದೂಲನಾದ ಧರ್ಮರಾಜನು ಅಮಿತಪರಾಕ್ರಮಿಯಾದ ವಿಷ್ಣುವಿಗೆ ಅತಿಪ್ರಿಯನಾದವನು. ಪಾಂಡವನೇ! ನಾವು ಈ ಎಲ್ಲವಿಷಯಗಳನ್ನು ಪರಂಪರೆಯಿಂದ ತಿಳಿದಿದ್ದೇವೆ. ಪಾಂಡವ ಶಾರ್ದೂಲನೇ! ಈ ಎಲ್ಲಾ ರತ್ನಗಳನ್ನೂ ತೆಗೆದುಕೊಂಡು ನೀನು ಹೊರಡು. ಮೇಧಾವಿಯಾದ ಧರ್ಮರಾಜನ ಯಜ್ಞವು ನಿರ್ವಿಘ್ನವಾಗಿ ನಡೆಯಲಿ.

ಇತ್ಯುಕ್ತ್ವಾ ವಾನರೌ ತೌ ತು ದದತುರ್ಧನಮಕ್ಷಯಮ್ ।
ತತೋ ರತ್ನಾನ್ಯುಪಾದಾಯ ಪುರೀಂ ಮಾಹಿಷ್ಮತೀಂ ಯಯೌ ॥೨೩॥

ಹೀಗೆ ಹೇಳಿ ಆ ಇಬ್ಬರು ವಾನರರು ಅಕ್ಷಯವಾದ ಧನವನ್ನು ಕೊಟ್ಟರು. ಅಲ್ಲಿಂದ ರತ್ನಗಳನ್ನು ತೆಗೆದುಕೊಂಡು ಸಹದೇವನು ಮಾಹಿಷ್ಮತೀಪಟ್ಟಣಕ್ಕೆ ಬಂದನು.

ತತ್ರ ನೀಲೇನ ರಾಜ್ಞಾ ಸ ಯುದ್ಧಂ ಚಕ್ರೇ ನರಾಧಿಪಃ ।
ಪಾಂಡವಃ ಪರವೀರಘ್ನಃ ಸಹದೇವಃ ಪ್ರತಾಪವಾನ್ ॥೨೪॥

ತತೋಽಸ್ಯ ಸುಮಹದ್ ಯುದ್ಧಮಾಸೀಲ್ಲೋಕಭಯಂಕರಮ್ ।
ಸೈನ್ಯಕ್ಷಯಕರಂ ಚೈವ ಪ್ರಾಣಾನಾಂ ಸಂಶಯಾವಹಮ್ ।
ಚಕ್ರೇ ತಸ್ಯ ಚ ಸಾಹಾಯ್ಯಂ ಭಗವಾನ್ ಹವ್ಯವಾಹನಃ ॥೨೫॥

ನರಾಧಿಪನೂ ಪರವೀರಘಾತಕನೂ ಪ್ರತಾಪಶಾಲಿಯೂ ಪಾಂಡುಪುತ್ರನೂ ಆದ ಸಹದೇವನು ನೀಲರಾಜನ ಜೊತೆಯಲ್ಲಿ ಯುದ್ಧವನ್ನು ಮಾಡಿದನು. ಆಗ ಸೈನ್ಯನಾಶಕ್ಕೆ ಕಾರಣವಾದ ಪ್ರಾಣಸಂಶಯವನ್ನು ಉಂಟುಮಾಡುವ ಲೋಕಭಯಂಕರವಾದ ಘೋರವಾದ ಯುದ್ಧವಾಯಿತು. ಆ ಯುದ್ಧದಲ್ಲಿ ಭಗವಂತನಾದ ಅಗ್ನಿಯು ನೀಲನಿಗೆ ಸಹಾಯವನ್ನು ಮಾಡಿದನು.

ತತೋ ರಥಾ ಹಯಾ ನಾಗಾಃ ಪುರುಷಾಃ ಕವಚಾನಿ ಚ ।
ಪ್ರದೀಪ್ತಾನಿ ವ್ಯದೃಶ್ಯಂತ ಸಹದೇವಬಲೇ ತಥಾ ॥೨೬॥

ಆಗ ಸಹದೇವನ ಸೈನ್ಯದಲ್ಲಿ ರಥಗಳು ಅಶ್ವಗಳು ಗಜಗಳು ಪದಾತಿಗಳು ಮತ್ತು ಕವಚಗಳು ಎಲ್ಲವೂ ಬೆಂಕಿಯಿಂದ ಹತ್ತಿಕೊಂಡು ಉರಿಯುತ್ತಿದ್ದುದು ಕಾಣಬಂದಿತು.

ತತಃ ಸುಸಂಭ್ರಾಂತಮನಾ ಬಭೂವ ಕುರುನಂದನಃ ।
ನೋತ್ತರಂ ಪ್ರತಿಪತ್ತುಂ ಚ ಶಕ್ತೋಽಭೂಜ್ಜನಮೇಜಯ ॥೨೭॥

ಜನಮೇಜಯನೇ! ಕುರುನಂದನನಾದ ಸಹದೇವನು ಆಗ ಸಂಭ್ರಾಂತವಾದ ಮನಸ್ಸುಳ್ಳವನಾಗಿ ಯಾವ ಪರಿಹಾರವನ್ನೂ ಯೋಚಿಸಲು ಸಮರ್ಥನಾಗಲಿಲ್ಲ.

ಜನಮೇಜಯಃ

ಕಿಮರ್ಥಂ ಭಗವಾನಗ್ನಿಃ ಪ್ರತ್ಯಮಿತ್ರೋಽಭವದ್ ಯುಧಿ ।
ಸಹದೇವಸ್ಯ ಯಜ್ಞಾರ್ಥಂ ಘಟಮಾನಸ್ಯ ವೈ ದ್ವಿಜ ॥೨೮॥

ಬ್ರಾಹ್ಮಣಶ್ರೇಷ್ಠರೇ! ಪೂಜ್ಯನಾದ ಅಗ್ನಿಯು ಯಾವಕಾರಣದಿಂದ ಯಜ್ಞಾರ್ಥವಾಗಿ ಯುದ್ಧದಲ್ಲಿ ಪ್ರಯತ್ನಪಡುತ್ತಿರುವ ಸಹದೇವನಿಗೆ ಶತ್ರುವಾದನು?

ವೈಶಂಪಾಯನಃ

ತತ್ರ ಮಾಹಿಷ್ಮತೀವಾಸೋ ಭಗವಾನ್ ಹವ್ಯವಾಹನಃ ।
ಶ್ರೂಯತೇ ನಿಗೃಹೀತೋ ವೈ ಪುರಸ್ತಾತ್ ಪಾರದಾರಿಕಃ ।
ನೀಲಸ್ಯ ರಾಜ್ಞಃ ಪೂರ್ವೇಷಾಂ ಉಪನೀತಶ್ಚ ಸೋಽಭವತ್ ॥೨೯॥

ಮಾಹಿಷ್ಮತೀನಗರದಲ್ಲಿ ಪೂಜ್ಯನಾದ ಅಗ್ನಿಯು ವಾಸವಾಗಿದ್ದಾನೆ. ಹಿಂದೆ ಪಾಣಿಗ್ರಹಣಕ್ಕೆ ಸಾಕ್ಷಿಯಾಗಿದ್ದ ಅಗ್ನಿಯು ಪರಪತ್ನಿಯ ಅಭಿಮರ್ಷವನ್ನು ಮಾಡಿದ ಆ ದೇಶದ ರಾಜನನ್ನು ನಿಗ್ರಹಿಸಿದನು. ಅನಂತರ ನೀಲರಾಜನ ಪೂರ್ವಜರು ಅಗ್ನಿಯನ್ನು ಸ್ತೋತ್ರಮಾಡಿ ಅವನನ್ನು ಪ್ರಸನ್ನೀಕರಿಸಿ ಕೊಂಡರು.

ತತೋ ಬ್ರಾಹ್ಮಣರೂಪೇಣ ಚರಮಾಣೋ ಯದೃಚ್ಛಯಾ ।
ತಂ ತು ರಾಜಾ ಯಥಾಶಾಸ್ತ್ರಮಶಾಸದ್ ಧಾರ್ಮಿಕಸ್ತದಾ ॥೩೦॥

ಆಗ ಅಗ್ನಿಯು ಬ್ರಾಹ್ಮಣರೂಪದಿಂದ ಮಾಹಿಷ್ಮತೀನಗರಕ್ಕೆ ಯದೃಚ್ಛೆಯಿಂದ ಬಂದು ಸರ್ವಭಕ್ಷಕನಾಗಿದ್ದನು. ಧಾರ್ಮಿಕನಾದ ರಾಜನು ಈ ಬ್ರಾಹ್ಮಣನು ಸರ್ವಭಕ್ಷಕನೆಂದು ತಿಳಿದು ಅವನಿಗೆ ಶಿಕ್ಷೆಯನ್ನು ನೀಡಿದನು.

ಪ್ರಜಜ್ವಾಲ ತತಃ ಕೋಪಾದ್ ಭಗವಾನ್ ಹವ್ಯವಾಹನಃ ।
ತಂ ದೃಷ್ಟ್ವಾ ವಿಸ್ಮಿತೋ ರಾಜಾ ಜಗಾಮ ಶಿರಸಾ ಕವಿಮ್ ।
ಚಕ್ರೇ ಪ್ರಸಾದಂ ಚ ತದಾ ತಸ್ಯ ರಾಜ್ಞೋ ವಿಭಾವಸುಃ ॥೩೧॥

ಆಗ ಪೂಜ್ಯನಾದ ಅಗ್ನಿಯು ಕೋಪದಿಂದ(ತನ್ನ ನಿಜರೂಪದಿಂದ) ಪ್ರಜ್ವಲಿಸಿದನು. ಅವನನ್ನು ನೋಡಿ ವಿಸ್ಮಿತನಾದ ರಾಜನು ಅವನಿಗೆ ಶರಣಾಗತನಾದನು. ಆಗ ಅಗ್ನಿಯು ಆ ರಾಜನಿಗೆ ಪ್ರಸನ್ನನಾದನು.

ವರೇಣ ಚ್ಛಂದಯಾಮಾಸ ತಂ ನೃಪಂ ಸ್ವಿಷ್ಟಕೃತ್ ತದಾ ।
ಅಭಯಂ ವೈ ಸ ಜಗ್ರಾಹ ಪರಸೈನ್ಯಾನ್ಮಹೀಪತಿಃ ॥೩೨॥

ಭಕ್ತರ ಇಷ್ಟವನ್ನು ಪೂರೈಸುವ ಪೂಜ್ಯನಾದ ಅಗ್ನಿಯು ರಾಜನನ್ನು ಕುರಿತು ಬೇಕಾದ ವರವನ್ನು ಕೇಳು ಎಂದು ಸೂಚಿಸಿದನು. ಆಗ ಆ ರಾಜನು ಪರಸೈನ್ಯಗಳಿಂದ ಅಭಯವನ್ನು ವರವನ್ನಾಗಿ ಬೇಡಿದನು.

ತದಾಪ್ರಭೃತಿ ಯೇ ಕೇಚಿದಜ್ಞಾನಾತ್ ತಾಂ ಪುರೀಂ ನೃಪಾಃ ।
ಜಿಗೀಷಂತಿ ಬಲಾದ್ ರಾಜಂಸ್ತೇ ದಹ್ಯಂತೇ ಸ್ಮ ವಹ್ನಿನಾ ॥೩೩॥

ಆಗಿನಿಂದ ಪ್ರಾರಂಭಿಸಿ ಯಾರಾದರೂ ಅಜ್ಞಾನದಿಂದ ಮಾಹಿಷ್ಮತೀನಗರವನ್ನು ಪ್ರವೇಶಿಸಿ ತಮ್ಮ ಬಲದಿಂದ ಗೆಲ್ಲಲು ಬಯಸಿದರೆ ಅಗ್ನಿಯು ಅವರನ್ನು ದಹಿಸುತ್ತಾನೆ.

ತಸ್ಯಾಂ ಪುರ್ಯಾಂ ತದಾ ಚೈವ ಮಾಹಿಷ್ಮತ್ಯಾಂ ಕುರೂದ್ವಹ ।
ಬಭೂವುರನತಿಗ್ರಾಹ್ಯಾ ಯೋಷಿತಶ್ಚಂದತಃ ಕಿಲ ॥೩೪॥

ಕುರೂದ್ವಹನೇ! ಆ ಮಾಹಿಷ್ಮತೀಪಟ್ಟಣದಲ್ಲಿ ಆಗಿನಿಂದಲೂ ಸ್ತ್ರೀಯರು ಯಾರ ಇಚ್ಛೆಗೂ ಒಳಗಾಗಿ ಬಲಾತ್ಕರಕ್ಕೆ ಒಳಗಾಗುವುದಿಲ್ಲವಷ್ಟೇ ?

ಏವಮಗ್ನಿರ್ವರಂ ಪ್ರಾದಾತ್ ಸ್ತ್ರೀಣಾಮಪ್ರತಿವಾರಣೇ ।
ಸ್ವೈರಿಣ್ಯಸ್ತತ್ರ ನಾರ್ಯೋ ಹಿ ಯಥೇಷ್ಟಂ ಪ್ರಚರಂತ್ಯುತ ॥೩೫॥

ಹೀಗೆ ಅಗ್ನಿಯು ಸ್ತ್ರೀಯರಿಗೆ ಇನ್ನೊಬ್ಬರು ನಿವಾರಿಸಲಾಗದ ವರವನ್ನು ದಯಪಾಲಿಸಿದನು. ಅಲ್ಲಿನ ಸ್ತ್ರೀಯರು ತಮ್ಮ ಪತಿಗಳಿಂದಲೇ ಪ್ರೇರಿತರಾಗಿ ಯಾರ ಭಯವೂ ಇಲ್ಲದೆ ನಗರದಲ್ಲಿ ಸಂಚರಿಸುತ್ತಾರೆ.

ವರ್ಜಯಂತಿ ಚ ರಾಜಾನಸ್ತದ್ರಾಷ್ಟ್ರಂ ಪುರುಷರ್ಷಭ ।
ಭಯಾದಗ್ನೇರ್ಮಹಾರಾಜ ತದಾಪ್ರಭೃತಿ ಸರ್ವದಾ ॥೩೬॥

ಮಹಾರಾಜನೇ! ಪುರುಷಶ್ರೇಷ್ಠನೇ! ಆದ್ದರಿಂದ ಯಾವಾಗಲೂ ಅಗ್ನಿಯ ಭಯದಿಂದ ರಾಜರು ಆ ರಾಷ್ಟ್ರವನ್ನು ವರ್ಜಿಸುತ್ತಾರೆ.

ಸಹದೇವಸ್ತು ಧರ್ಮಾತ್ಮಾ ಸೈನ್ಯಂ ದೃಷ್ಟ್ವಾ ಭಯಾರ್ದಿತಮ್ ।
ಪ್ರದೀಪ್ತಮಗ್ನಿನಾ ರಾಜನ್ ನಾಕಂಪತ ಯಥಾ ಗಿರಿಃ ।
ಉಪಸ್ಪೃಶ್ಯ ಶುಚಿರ್ಭೂತ್ವಾ ಸೋಽಬ್ರವೀತ್ ಪಾವಕಂ ತದಾ ॥೩೭॥

ಧರ್ಮಾತ್ಮನಾದ ಸಹದೇವನು ತನ್ನ ಸೈನ್ಯವು ಭಯದಿಂದ ಪೀಡಿತವಾಗಿ ಅಗ್ನಿಯಿಂದ ಜ್ವಲಿಸುತ್ತಿರುವುದನ್ನು ಕಂಡರೂ ಪರ್ವತದಂತೆ ಸ್ವಲ್ಪವೂ ಅಲುಗಾಡಲಿಲ್ಲ.

ಅವನು ಕೈಕಾಲುಗಳನ್ನು ತೊಳೆದು ಶುಚಿಯಾಗಿ ಅಗ್ನಿಯನ್ನು ಕುರಿತು ಹೀಗೆ ಮಾತನಾಡಿದನು.

ತ್ವದರ್ಥೋಽಯಂ ಸಮಾರಂಭಃ ಕೃಷ್ಣವರ್ತ್ಮನ್ ನಮೋಽಸ್ತು ತೇ।
ಮುಖಂ ತ್ವಮಸಿ ದೇವಾನಾಂ ಯಜ್ಞಸ್ತ್ವಮಸಿ ಪಾವಕ ॥೩೮॥

ಕೃಷ್ಣವರ್ತ್ಮನೇ! ನಿನಗೆ ನಮಸ್ಕಾರ. ನಿನ್ನ ಸಲುವಾಗಿ ಈ ಪ್ರಯತ್ನವು ನಡೆದಿದೆ. ನೀನು ದೇವತೆಗಳ ಮುಖ ಎಂದು ಕರೆಸಿಕೊಳ್ಳುತ್ತೀಯೆ. ಪಾವಕನೇ ನೀನೇ ಯಜ್ಞನೆಂದು ಕರೆಸಿಕೊಳ್ಳುತ್ತೀಯೆ.

ಪಾವನಾತ್ ಪಾವಕಶ್ಚಾಸಿ ವಹನಾದ್ ಹವ್ಯವಾಹನಃ ।
ವೇದಾಸ್ತ್ವದರ್ಥಂ ಜಾತಾಶ್ಚ ಜಾತವೇದಾಸ್ತತೋ ಹ್ಯಸಿ ॥೩೯॥

ಪವಿತ್ರೀಕರಿಸುವುದರಿಂದ ನಿನಗೆ ಪಾವಕನೆಂದು ಹೆಸರು. ಹವಿಸ್ಸನ್ನು ಕೊಂಡೊಯ್ಯುವುದರಿಂದ ನಿನಗೆ ಹವ್ಯವಾಹನನೆಂದು ಹೆಸರು. ನಿನ್ನ ಸಲುವಾಗಿ ಜನಿಸಿದವರೆಲ್ಲರನ್ನು ನೀನು ತಿಳಿದಿರುವ ಕಾರಣದಿಂದ ನಿನ್ನನ್ನು ಜಾತವೇದ ಎಂದು ಕರೆಯುತ್ತಾರೆ.

ಚಿತ್ರಭಾನುಃ ಸುರೇಶಶ್ಚ ಅನಲಸ್ತ್ವಂ ವಿಭಾವಸೋ ।
ಸ್ವರ್ಗದ್ವಾರಸ್ಪ್ರಶಶ್ಚಾಸಿ ಹುತಾಶೋ ಜ್ವಲನಃ ಶಿಖೀ ॥೪೦॥

ವಿಚಿತ್ರ ಕಿರಣಗಳನ್ನು ಹೊಂದಿರುವುದರಿಂದ ನೀನು ಚಿತ್ರಭಾನು ನೀನು ಸುರೇಶ ನಿನ್ನನ್ನು ಅನಲನೆಂದೂ ವಿಭಾವಸು ಎಂದೂ ಕರೆಯುತ್ತಾರೆ. ನೀನು ಸ್ವರ್ಗದ್ವಾರದಲ್ಲಿ ಸ್ಥಿತನಾಗಿದ್ದೀಯೆ. ನೀನು ಹುತಾಶನೂ ಜ್ವಲನನೂ ಶಿಖಿಯೂ ಹೌದು.

ವೈಶ್ವಾನರಸ್ತ್ವಂ ಪಿಂಗೇಶೋ ಭೂರಿತೇಜಾಃ ಪ್ಲವಂಗಮಃ ।
ಕುಮಾರಗರ್ಭೋ ಭಗವಾನ್ ರುಗ್ಮಗರ್ಭೋ ಹಿರಣ್ಯಕೃತ್ ॥೪೧॥

ನೀನು ವೈಶ್ವಾನರ ಪಿಂಗೇಶ ಬಹುಪರಾಕ್ರಮಿ ಪ್ಲವಂಗಮ ಕುಮಾರಗರ್ಭ ಪೂಜ್ಯನಾದವನು ರುಗ್ಮಗರ್ಭನಾದವನು ಮತ್ತು ಸುವರ್ಣವನ್ನು ಮಾಡುವವನು.

ಅಗ್ನಿರ್ದದಾತು ಮೇ ತೇಜೋ ವಾಯುಃ ಪ್ರಾಣಂ ದದಾತು ಮೇ ।
ಪೃಥಿವೀ ಬಲಮಾದದ್ಯಾಚ್ಛಿವಂ ಚಾಪೋ ದಿಶಂತು ಮೇ ॥೪೨॥

ಅಗ್ನಿಯು ನನಗೆ ತೇಜಸ್ಸನ್ನು ಕೊಡಲಿ ವಾಯುವು ನನಗೆ ಪ್ರಾಣವನ್ನು ಕೊಡಲಿ. ಭೂಮಿಯು ನನಗೆ ಬಲವನ್ನು ಕೊಡಲಿ, ಜಲವು ನನಗೆ ಮಂಗಳವನ್ನು ಕೊಡಲಿ.

ಅಭ್ಯಾಗಚ್ಛ ಮಹಾಸತ್ತ್ವ ಜಾತವೇದಃ ಸುರೇಶ್ವರ ।
ದೇವಾನಾಂ ಮುಖಮಗ್ನೇ ತ್ವಂ ಸತ್ಯೇನ ಚ ಪುನೀಹಿ ಮಾಮ್ ॥೪೩॥

ಮಹಾಸತ್ವನಾದ ಜಾತವೇದನಾದ ಸುರೇಶ್ವರನಾದ ಅಗ್ನಿಯೇ ನನ್ನ ಎದುರಿಗೆ ಬಾ. ನೀನು ದೇವತೆಗಳ ಮುಖವಾಗಿದ್ದೀಯೆ. ಈ ಸತ್ಯವಚನದಿಂದ ನನ್ನನ್ನು ಪವಿತ್ರೀಕರಿಸು.

ಋಷಿಭಿರ್ಬ್ರಾಹ್ಮಣೈಶ್ಚೈವ ದೈವತೈರಸುರೈರಪಿ ।
ನಿತ್ಯಂ ಸುಕೃತಯಜ್ಞೇಷು ಸತ್ಯೇನ ಚ ಪುನೀಹಿ ಮಾಮ್ ॥೪೪॥

ಋಷಿಗಳಿಂದಲೂ ಬ್ರಾಹ್ಮಣರಿಂದಲೂ ದೇವತೆಗಳಿಂದಲೂ ಅಸುರರಿಂದಲೂ ಯಾವಾಗಲೂ ಯಜ್ಞಗಳಲ್ಲಿ ಪೂಜಿತನಾದವನೇ, ಈ ಸತ್ಯವಚನದಿಂದ ನನ್ನನ್ನು ಪವಿತ್ರೀಕರಿಸು.

ಧೂಮಕೇತುಃ ಶಿಖೀ ಚ ತ್ವಂ ಪಾಪಹಾಽನಿಲಸಂಭವಃ ।
ಸರ್ವಪ್ರಾಣೇಷು ನಿತ್ಯಸ್ಥಃ ಸತ್ಯೇನ ಚ ಪುನೀಹಿ ಮಾಮ್ ॥೪೫॥

ನೀನು ಧೂಮಕೇತು ಶಿಖೀ ಪಾಪಪರಿಹಾರಕನಾದವನು ವಾಯುಸಂಭೂತನಾದವನು ಎಲ್ಲಾಪ್ರಾಣಿಗಳಲ್ಲಿಯೂ ನಿತ್ಯದಲ್ಲಿಯೂ ಇರುವವನು. ಈ ಸತ್ಯವಚನದಿಂದ ನನ್ನನ್ನು ಪವಿತ್ರೀಕರಿಸು.

ಏವಂ ಸ್ತುತೋಽಸಿ ಭಗವನ್ ಪ್ರೀತೇನ ಶುಚಿನಾ ಮಯಾ ।
ತುಷ್ಟಿಂ ಪುಷ್ಟಿಂ ಧೃತಿಂ ಚೈವ ಪ್ರೀತಿಂ ಚಾಗ್ನೇ ಪ್ರಯಚ್ಛ ಮೇ ।
ಯಜ್ಞವಿಘ್ನಮಿಮಂ ಕರ್ತುಂ ನಾರ್ಹಸಿ ತ್ವಂ ಹುತಾಶನ ॥೪೬॥

ಪೂಜ್ಯನಾದ ಅಗ್ನಿಯೇ ನಾನು ವಿಶ್ವಾಸದಿಂದ ಶುಚಿಯಾಗಿ ನಿನ್ನನ್ನು ಹೀಗೆ ಸ್ತೋತ್ರಮಾಡಿದ್ದೇನೆ. ಅಗ್ನಿಯೇ ನನಗೆ ತುಷ್ಟಿಯನ್ನು ಪುಷ್ಟಿಯನ್ನು ಧೈರ್ಯವನ್ನು ಮತ್ತು ಪ್ರೀತಿಯನ್ನು ದಯಪಾಲಿಸು. ಹುತಾಶನನೇ! ನೀನು ಹೀಗೆ ಯಜ್ಞವಿಘ್ನವನ್ನು ಮಾಡಬಾರದು.

ವೈಶಂಪಾಯನಃ

ಏವಮುಕ್ತ್ವಾ ತು ಮಾದ್ರೇಯಃ ಕುಶೈರಾಸ್ತೀರ್ಯ ಮೇದಿನೀಮ್ ।
ವಿಧಿವತ್ ಪುರುಷವ್ಯಾಘ್ರಃ ಪಾವಕಂ ಪ್ರತ್ಯುಪಾವಿಶತ್ ॥೪೭॥

ಪ್ರಮುಖೇ ಸರ್ವಸೈನ್ಯಸ್ಯ ಭಯೋದ್ವಿಗ್ನಸ್ಯ ಭಾರತ ।
ನಚ್ಚೈನಮತ್ಯಗಾದಗ್ನಿರ್ವೇಲಾಮಿವ ಮಹೋದಧಿಃ ॥೪೮॥

ಹೀಗೆ ಹೇಳಿ ಮಾದ್ರೀಸುತನಾದ ಪುರುಷವ್ಯಾಘ್ರನಾದ ಸಹದೇವನು ಭೂಮಿಯ ಮೇಲೆ ದರ್ಭೆಗಳನ್ನು ಹರಡಿ ವಿಧಿಪೂರ್ವಕವಾಗಿ ಅಗ್ನಿಗೆ ಅಭಿಮುಖವಾಗಿ ಭಯೋದ್ವಿಗ್ನವಾದ ಎಲ್ಲಾ ಸೈನ್ಯದ ಎದುರಿನಲ್ಲಿ ಕುಳಿತು ಕೊಂಡನು. ಭಾರತನೇ! ಆಗ ಸಮುದ್ರವು ದಡವನ್ನು ಮೀರದೇ ಇದ್ದಂತೆ ಅಗ್ನಿಯು ಸಹದೇವನನ್ನು ದಾಟಿ ಮುಂದೆ ಹೋಗಲಿಲ್ಲ.

ತಮಭ್ಯೇತ್ಯ ಶನೈರಗ್ನಿರುವಾಚ ಕುರುನಂದನಮ್ ।
ಸಹದೇವಂ ನೃಣಾಂ ದೇವಂ ಸಾಂತ್ವಪೂರ್ವಮಿದಂ ವಚಃ ॥೪೯॥

ಅಗ್ನಿಯು ಕುರುನಂದನನಾದ ನರದೇವನಾದ ಸಹದೇವನನ್ನು ಮೆಲ್ಲನೆ ಸಮೀಪಿಸಿ ಸಮಾಧಾನ ಪೂರ್ವಕವಾಗಿ ಈ ಮಾತನ್ನು ಆಡಿದನು.

ಉತ್ತಿಷ್ಠೋತ್ತಿಷ್ಠ ಕೌರವ್ಯ ಜಿಜ್ಞಾಸೇಯಂ ಕೃತಾ ಮಯಾ ।
ವೇದ್ಮಿ ಸರ್ವಮಭಿಪ್ರಾಯಂ ತವ ಧರ್ಮಸುತಸ್ಯ ವೈ ॥೫೦॥

ಕೌರವ್ಯನೇ! ಏಳು ಏಳು. ನಾನು ಕೇವಲ ಪರೀಕ್ಷೆಯನ್ನು ಮಾಡಿದೆ ನಿನ್ನನ್ನೂ ಧರ್ಮರಾಜನ ಎಲ್ಲಾ ಅಭಿಪ್ರಾಯವನ್ನೂ ನಾನು ತಿಳಿದಿದ್ದೇನೆ.

ಮಯಾ ತು ರಕ್ಷಿತವ್ಯೇಯಂ ಪುರೀ ಭರತಸತ್ತಮ ।
ಯಾವದ್ ರಾಜ್ಞೋಽಸ್ಯ ನೀಲಸ್ಯ ಕುಲೇ ವಂಶಧರಾ ಇಹ ।
ಈಪ್ಸಿತಂ ತೇ ಕರಿಷ್ಯಾಮಿ ಮನಸಸ್ತವ ಪಾಂಡವ ॥೫೧॥

ಭರತಸತ್ತಮನೇ! ನೀಲರಾಜನ ವಂಶಧರರು ಇರುವವರೆಗೆ ನಾನು ಈ ಪಟ್ಟಣವನ್ನು ರಕ್ಷಿಸಬೇಕಾಗಿದೆ. ಪಾಂಡವನೇ! ನಿನ್ನ ಮನಸ್ಸಿಗೆ ಇಷ್ಟವಾದುದನ್ನು ನಾನು ನೆರವೇರಿಸುವೆನು.

ತತ ಉತ್ಥಾಯ ಹೃಷ್ಟಾತ್ಮಾ ಪ್ರಾಂಜಲಿಃ ಶಿರಸಾ ನತಃ ।
ಪೂಜಯಾಮಾಸ ಮಾದ್ರೇಯಃ ಪಾವಕಂ ಪುರುಷರ್ಷಭ ॥೫೨॥

ಪುರುಷರ್ಷಭನೇ! ಆಗ ಮಾದ್ರಿಯ ಪುತ್ರನಾದ ಸಹದೇವನು ಸಂತೋಷದಿಂದ ಎದ್ದು ಕೈಗಳನ್ನು ಮುಗಿದು ತಲೆಯನ್ನು ತಗ್ಗಿಸಿ ಅಗ್ನಿಗೆ ಪೂಜೆಯನ್ನು ಸಲ್ಲಿಸಿದನು.

ಪಾವಕೇ ವಿನಿವೃತ್ತೇ ತು ನೀಲೋ ರಾಜಾಽಭ್ಯಯಾತ್ ತದಾ ।
ಪಾವಕಸ್ಯಾಜ್ಞಯಾ ಚೈನಮರ್ಚಯಾಮಾಸ ಪಾರ್ಥಿವಃ ॥೫೩॥

ಅಗ್ನಿಯ ವಿನಿವೃತ್ತನಾದ ಮೇಲೆ ಅಗ್ನಿಯ ಆಜ್ಞೆಯಂತೆ ನೀಲರಾಜನು ಬಂದು ನರವ್ಯಾಘ್ರನಾದ ಯೋಧಪತಿಯಾದ ಸಹದೇವನನ್ನು ಸತ್ಕಾರದಿಂದ ಅರ್ಚಿಸಿದನು.

ಮಾದ್ರೀಸುತಸ್ತತಃ ಪ್ರಾಯಾದ್ ವಿಜಯೀ ದಕ್ಷಿಣಾಂ ದಿಶಮ್ ॥೫೪॥

ಮಾದ್ರಿಸುತನಾದ ಸಹದೇವನು ಅವನ ಸತ್ಕಾರವನ್ನು ಸ್ವೀಕರಿಸಿ ಅವನು ಕಪ್ಪವನ್ನು ಕೊಡುವಂತೆಮಾಡಿ ವಿಜಯಶಾಲಿಯಾಗಿ ಅಲ್ಲಿಂದ ದಕ್ಷಿಣಾಭಿಮುಖವಾಗಿ ಹೊರಟನು.

ತ್ರೈಪುರಂ ಸ ವಶೇ ಕೃತ್ವಾ ರಾಜಾನಮಮಿತೌಜಸಮ್ ।
ನಿಜಗ್ರಾಹ ಮಹಾಬಾಹುಸ್ತರಸಾ ಪೌರವೇಶ್ವರಮ್ ॥೫೫॥

ಮಹಾಬಾಹುವಾದ ಅವನು ತ್ರಿಪುರವನ್ನು ತನ್ನ ವಶಕ್ಕೆ ತೆಗೆದುಕೊಂಡು ಅದರ ರಾಜನಾದ ಪೌರವೇಶ್ವರನಾದ ಅಮಿತೌಜನನ್ನು ನಿಗ್ರಹಿಸಿದನು.

ಆಹುತಿಂ ಕೈಶಿಕಾಚಾರ್ಯಂ ಯತ್ನೇನ ಮಹತಾ ತತಃ ।
ವಶೇ ಚಕ್ರೇ ಮಹಾಬಾಹುಃ ಸುರಾಷ್ಟ್ರಾಧಿಪತಿಂ ತದಾ ॥೫೬॥

ಮಹಾಬಾಹುವಾದ ಅವನು ಅನಂತರ ಸುರಾಷ್ಟ್ರಾಧಿಪತಿಯಾದ ಕೈಶಿಕಾಚಾರ್ಯನಾದ ಆಹುತಿ ಎಂಬ ರಾಜನನ್ನು ವಶಪಡಿಸಿಕೊಂಡನು.

ಸುರಾಷ್ಟ್ರವಿಷಯಸ್ಥಃ ಸನ್ ಪ್ರೇಷಯಾಮಾಸ ರುಗ್ಮಿಣೇ ।
ರಾಜ್ಞೇ ಭೋಜಕಟಸ್ಥಾಯ ಮಹಾಮಾತ್ರಾಯ ಧೀಮತೇ ।
ಭೀಷ್ಮಕಾಯ ಸ ಧರ್ಮಾತ್ಮಾ ಸಾಕ್ಷಾದಿಂದ್ರಸಖಾಯ ವೈ ॥೫೭॥

ಧರ್ಮಾತ್ಮನಾದ ಸಹದೇವನು ಸುರಾಷ್ಟ್ರರಾಜ್ಯದಲ್ಲಿಯೇ ಇದ್ದವನಾಗಿ ಭೋಜಕಟದಲ್ಲಿ ವಾಸಿಸುತ್ತಿದ್ದ ರುಗ್ಮಿಗೂ ಮತ್ತು ಮೇಧಾವಿಯಾದ ಮಹಾವ್ರತನಾದ ಇಂದ್ರಸಖನಾದ ಭೀಷ್ಮಕನಿಗೂ ಸಹ ದೂತರನ್ನು ಕಳುಹಿಸಿದನು.

ಸ ಚಾಸ್ಯ ಸಸುತೋ ರಾಜಾ ಪ್ರತಿಜಗ್ರಾಹ ಶಾಸನಮ್ ।
ಪ್ರೀತಿಪೂರ್ವಂ ಮಹಾಬಾಹುರ್ವಾಸುದೇವಮವೇಕ್ಷ್ಯ ಚ ।
ತತಃ ಸ ರತ್ನಾನ್ಯಾದಾಯ ಪುನಃ ಪ್ರಾಯಾದ್ ಯುಧಾಂ ಪತಿಃ ॥೫೮॥

ಭೀಷ್ಮಕನಾದರೋ ಪ್ರೀತಿಪೂರ್ವಕವಾಗಿ ಕೃಷ್ಣನ ಮೇಲಿನ ಗೌರವದಿಂದ ಅವನ ಶಾಸನವನ್ನು ಸ್ವೀಕರಿಸಿ ಮಹಾಬಾಹುವಾದ ಅವನು ಕಪ್ಪವನ್ನು ಒಪ್ಪಿಸಿದನು. ಯುಧಾಂಪತಿಯಾದ ಸಹದೇವನು ಆ ರತ್ನಗಳನ್ನು ತೆಗೆದುಕೊಂಡು ಅಲ್ಲಿಂದ ಪುನಃ ಹೊರಟನು.

ತತಃ ಶೂರ್ಪಾಕರಂ ಚೈವ ಗಣಂ ಚೋಪಕೃತಾಹ್ವಯಮ್ ।
ವಶೇ ಚಕ್ರೇ ಮಹಾತೇಜಾ ದಂಡಕಾಂಶ್ಚ ಮಹಾಬಲಃ ॥೫೯॥

ಅನಂತರ ಮಹಾತೇಜಸ್ವಿಯೂ ಮಹಾಬಲನೂ ಆದ ಸಹದೇವನು ಶೂರ್ಪಾಕರವನ್ನೂ ಮತ್ತು ಉಪಕೃತ ಎಂಬ ಹೆಸರಿನ ದೇಶವನ್ನೂ ಮತ್ತು ದಂಡಕಾರಣ್ಯವನ್ನೂ ವಶಪಡಿಸಿಕೊಂಡನು.

ಸಾಗರದ್ವೀಪವಾಸಾಂಶ್ಚ ನೃಪತೀನ್ ಮ್ಲೇಚ್ಛಯೋನಿಜಾನ್ ।
ನಿಷಾದಾನ್ ಪುರುಷಾದಾಂಶ್ಚ ಕರ್ಣಪ್ರಾವರಣಾನಪಿ ॥೬೦॥

ಸಾಗರದ್ವೀಪವಾಸಿಗಳಾದ ರಾಜರನ್ನೂ ಮ್ಲೇಚ್ಛರಾಜರನ್ನೂ ನಿಷಾದರನ್ನೂ ನರಭಕ್ಷಕನಾದ ರಾಕ್ಷಸರನ್ನೂ ಕರ್ಣಪ್ರಾವರಣರನ್ನೂ ವಶಪಡಿಸಿಕೊಂಡನು.

ಯೇ ಚ ಕಾಲಮುಖಾ ನಾಮ ನರರಾಕ್ಷಸಯೋನಯಃ ।
ಕೃತ್ಸ್ನಂ ಕೋಲ್ಲಗಿರಿಂ ಚೈವ ಮುರವೀಪತ್ತನಂ ತಥಾ ॥೬೧॥

ದ್ವೀಪಂ ತಾಮ್ರಾಹ್ವಯಂ ಚೈವ ಪರ್ವತಂ ರಾಮಕಂ ತಥಾ ।
ತಿಮಿಂಗಿಲಂ ಚ ಸ ನೃಪಂ ವಶೇ ಚಕ್ರೇ ಮಹಾಮತಿಃ ॥೬೨॥

ಕಾಳಮುಖವೆಂಬ ಮನುಷ್ಯರಾಕ್ಷಸಯೋನಿಯಲ್ಲಿ ಹುಟ್ಟಿದವರನ್ನೂ ಸಮಗ್ರವಾದ ಕೊಲ್ಲಪರ್ವತವನ್ನೂ ಹಾಗೆಯೇ ಮುರವೀಪಟ್ಟಣವನ್ನೂ ತಾಮ್ರದ್ವೀಪವನ್ನೂ ರಾಮಕಪರ್ವತವನ್ನೂ ತಿಮಿಂಗಿಲನೆಂಬ ರಾಜನನ್ನೂ ಮಹಾಮತಿಯಾದ ಸಹದೇವನು ವಶಪಡಿಸಿಕೊಂಡನು.

ಏಕಪಾದಾಂಶ್ಚ ಪುರುಷಾಂಸ್ತಥಾ ಚೈವೋಷ್ಟ್ರಕಂಟಕಾನ್ ।
ನಗರೀಂ ಸಂಜಯಂತೀಂ ಚ ಪಿಂಡಕಂ ಕರಹಾಟಕಮ್ ॥೬೩॥

ಉದರೇ ವದನಂ ಯೇಷಾಂ ತಾಂಶ್ಚಾಶು ವಶಮಾನಯತ್ ।
ದೂತೈರೇವ ವಶೇ ಚಕ್ರೇ ಕರದಾಂಶ್ಚೈವ ಕಾರಯತ್ ॥೬೪॥

ಏಕಪಾದರಾದ ಪುರುಷರನ್ನೂ ಉಷ್ಟ್ರಕಂಟಕರನ್ನೂ ಸಂಜಯಂತೀ ನಗರವನ್ನೂ ಪಿಂಡಕ ಮತ್ತು ಕರಹಾಟಕ ನಗರಗಳನ್ನೂ ಉದರದಲ್ಲಿಯೇ ವದನವುಳ್ಳ (ಅಮಿತಭಕ್ಷರಾದ) ಪುರುಷರನ್ನೂ ತನ್ನ ದೂತರಿಂದಲೇ ವಶಪಡಿಸಿಕೊಂಡು ಅವರು ಕಪ್ಪವನ್ನು ಕೊಡುವಂತೆ ಮಾಡಿದನು.

ಭೃಗುಕಚ್ಛಾಂತತೋ ಧೀಮಾನ್ ದಂಡೇನಾಮಿತ್ರಕರ್ಶನಃ ।
ಬರ್ಬರಾನ್ ವಾಶರಾನನ್ಯಾನ್ ದ್ವೀಪವಾಸಾನ್ ವಶೇ ವಶೀ ॥೬೫॥

ಸಹ್ಯಾದ್ರಿಪರ್ವತ ದಕ್ಷಿಣಶೃಂಗದ ಸಮುದ್ರತೀರದಲ್ಲಿರುವ ಬರ್ಬರರನ್ನೂ ವಾಶರರನ್ನೂ ಉಳಿದ ದ್ವೀಪವಾಸಿಗಳನ್ನೂ ಸಮರ್ಥನೂ ಮೇಧಾವಿಯೂ ಶತ್ರುಕರ್ಶನನೂ ಆದ ಸಹದೇವನು ದಂಡೋಪಾಯದಿಂದ ವಶಕ್ಕೆ ತೆಗದುಕೊಂಡನು.

ಕೂಲಕಾನ್ ದರದಾಂಶ್ಚಾನ್ಯಾನ್ ಸಿಂಧೂರಾನ್ ವನವಾಸಿನಃ ।
ಅಶ್ಮಕಾನ್ ಮೂಲಕಾಂಶ್ಚೈವ ವಿದರ್ಭಾಂಶ್ಚ ಮಹಾಬಲಾನ್ ।
ದೂತೈರೇವ ವಶಂ ಚಕ್ರೇ ಕರೇ ಚ ವಿನಿವೇಶ್ಯ ಸಃ ॥೬೬॥

ಅವನು ಕೂಲಕರನ್ನೂ ದರದರನ್ನೂ ಸಿಂಧೂರರನ್ನೂ ವನವಾಸಿಗಳನ್ನೂ ಅಶ್ಮಕರನ್ನೂ ಮೂಲಕರನ್ನೂ ಮಹಾಬಲಿಷ್ಠರಾದ ವಿದರ್ಭರನ್ನೂ ತನ್ನ ದೂತರಿಂದಲೇ ವಶಪಡಿಸಿಕೊಂಡು ಕಪ್ಪವನ್ನು ಕೊಡುವಂತೆ ಮಾಡಿದನು.

ಪಾಂಡ್ಯಾಂಶ್ಚ ದ್ರಮಿಳಾಂಶ್ಚೈವ ಚೋಳಾಂಶ್ಚ ಸಹ ಕೇರಳೈಃ ।
ಸಿಂಹಲದ್ವೀಪಗಾನನ್ಯಾನ್ ದೂತೈಶ್ಚಕ್ರೇ ಮಹಾಬಲಾನ್ ॥೬೭॥

ಪಾಂಡ್ಯರನ್ನು ದ್ರಮಿಳರನ್ನು ಚೋಳರನ್ನು ಕೇರಳರನ್ನು ಮತ್ತು ಮಹಾಬಲಿಷ್ಠರಾದ ಸಿಂಹಳ ದ್ವೀಪವಾಸಿಗಳನ್ನು ತನ್ನ ದೂತರಿಂದಲೇ ವಶಕ್ಕೆ ತೆಗೆದುಕೊಂಡನು.

ತತಃ ಕುಸೃತಿನೀತಿಜ್ಞಾನ್ ದಕ್ಷಿಣಾಪಥವಾಸಿನಃ ।
ಅಜಯತ್ ಸಂಯುಗೇ ತತ್ರ ಧರ್ಮಮಾರ್ಗೇಣ ಪಾಂಡವಃ ॥೬೮॥

ಅನಂತರ ಕುಮಾರ್ಗಿಗಳಾದ ದುಷ್ಟನೀತಿಯನ್ನು ಅನುಸರಿಸುವ ದಕ್ಷಿಣಾಪಥವಾಸಿಗಳಾದ ರಾಜರುಗಳನ್ನು, ಪಾಂಡವನು ಯುದ್ಧದಲ್ಲಿ ಧರ್ಮಮಾರ್ಗದಿಂದಲೇ ಜಯಿಸಿದನು.

ಸರ್ವಸ್ವಂ ಕರಮಾದಾಯ ತೈರೇವ ಸಹಿತೋ ನೃಪಃ ।
ಉತ್ತರಂ ತೀರಮಾಸಾದ್ಯ ಸಾಗರಸ್ಯೋರ್ಮಿಮಾಲಿನಃ ॥೬೯॥

ಆಂಧ್ರಾಂಸ್ತಾಳವನಾನೋಷ್ಟ್ರಾನ್ ಕಳಿಂಗಾನವಿಕಾಂಸ್ತಥಾ ।
ಅಪರಂ ರೋಚಮಾನಂ ಚ ಯತಮಾನಂ ಪುರೋತ್ತಮೇ ।
ದೂತೈರೇವ ವಶಂ ಚಕ್ರೇ ಕರಾರ್ಥೇ ತಾನಕಾರಯತ್ ॥೭೦॥

ಸಹದೇವರಾಜನು ಅವರಿಂದ ಸರ್ವಸ್ವಕರವನ್ನು ತೆಗೆದುಕೊಂಡು ಅವರಿಂದ ಸಹಿತನಾಗಿ ಊರ್ಮಿಮಾಲೆಗಳುಳ್ಳ ಸಾಗರದ ಉತ್ತರದ ತೀರಕ್ಕೆ ಬಂದು ಆಂಧ್ರರನ್ನೂ ತಾಳವರನ್ನೂ ಓಡ್ರರನ್ನೂ ಕಳಿಂಗರನ್ನೂ ಅವಿಕರನ್ನೂ ವಶಪಡಿಸಿಕೊಂಡನು. ಅಲ್ಲದೆ ಶ್ರೇಷ್ಠವಾದ ಪಟ್ಟಣದಲ್ಲಿ ಪ್ರಯತ್ನಶೀಲನಾಗಿದ್ದ ರೋಚಮಾನ ಎಂಬ ರಾಜನನ್ನು ದೂತರಿಂದಲೇ ವಶಪಡಿಸಿಕೊಂಡು ಅವರೆಲ್ಲರೂ ಕಪ್ಪವನ್ನು ಕೊಡುವಂತೆ ಮಾಡಿದನು.

ಕಾನನದ್ವೀಪಕಾಂಶ್ಚೈವ ತರಸಾ ಜಿತ್ಯ ಚಾಹವೇ ।
ತಾಮ್ರಪರ್ಣೀಂ ತತೋ ಗತ್ವಾ ಕನ್ಯಾತೀರ್ಥಮಥಾಪಿ ವಾ ।
ದಕ್ಷಿಣಾಂ ಚ ದಿಶಂ ಸರ್ವಾಂ ವಿಜಿಗ್ಯೇ ಕುರುನಂದನಃ ॥೭೧॥

ಅನಂತರ ಕುರುನಂದನನಾದ ಸಹದೇವನು ಕಾನನದ್ವೀಪವಾಸಿಗಳನ್ನು ಯುದ್ಧದಲ್ಲಿ ಶೀಘ್ರವಾಗಿ ಗೆದ್ದು ಅಲ್ಲಿಂದ ತಾಮ್ರಪರ್ಣಿನದಿಯ ಸಮೀಪಕ್ಕೂ ಕನ್ಯಾತೀರ್ಥಕ್ಕೂ ಪ್ರಯಾಣಮಾಡಿ ಸಮಗ್ರವಾದ ದಕ್ಷಿಣದಿಕ್ಕನ್ನು ಗೆದ್ದನು.

ಸಹದೇವಸ್ತತೋ ರಾಜನ್ ಮಂತ್ರಿಭಿಃ ಸಹ ತತ್ರ ವೈ ।
ಸಂಪ್ರಧಾರ್ಯ ಮಹಾಬಾಹುಃ ಸಚಿವೈರ್ಬುದ್ಧಿಮತ್ತರೈಃ ।
ಚಿಂತಯಾಮಾಸ ಕೌರವ್ಯೋ ಭ್ರಾತುಃ ಪುತ್ರಂ ಘಟೋತ್ಕಚಮ್ ॥೭೨॥

ರಾಜನೇ! ಅನಂತರ ಮಹಾಬಾಹುವಾದ ಸಹದೇವನು ಮೇಧಾವಿಗಳಾದ ತನ್ನ ಮಂತ್ರಿಗಳ ಜೊತೆಯಲ್ಲಿ ಅಲ್ಲಿ ಮಂತ್ರಾಲೋಚನೆಯನ್ನುಮಾಡಿ ಮುಂದೇನು ಮಾಡಬೇಕೆಂದು ನಿರ್ಧರಿಸಿ ತನ್ನ ಅಣ್ಣನ ಮಗನಾದ ಘಟೋತ್ಕಚನನ್ನು ಸ್ಮರಿಸಿದನು.

ತತಶ್ಚಿಂತಿತಮಾತ್ರಸ್ತು ರಾಕ್ಷಸಃ ಪ್ರತ್ಯದೃಶ್ಯತ ।
ಅತಿದೀರ್ಘೋ ಮಹಾಬಾಹುಃ ಸರ್ವಾಭರಣಭೂಷಿತಃ ॥೭೩॥

ಸಹದೇವನು ಸ್ಮರಣೆಮಾಡಿದ ಕೂಡಲೇ ಅತಿ ದೀರ್ಘನೂ ಮಹಾಬಾಹುವೂ ಸರ್ವಾಭರಣಭೂಷಿತನೂ ಆದ ಘಟೋತ್ಕಚನು ಪ್ರತ್ಯಕ್ಷನಾದನು.

ಅಭಿವಾದ್ಯ ತತೋ ರಾಜನ್ ಸಹದೇವಂ ಘಟೋತ್ಕಚಃ ।
ಪ್ರಹ್ವಃ ಕೃತಾಂಜಲಿಸ್ತಸ್ಥೌ ಕಿಂ ಕಾರ್ಯಮಿತಿ ಚಾಬ್ರವೀತ್ ॥೭೪॥

ರಾಜನೇ! ಘಟೋತ್ಕಚನು ಸಹದೇವನಿಗೆ ನಮಸ್ಕಾರವನ್ನು ಮಾಡಿ ವಿನಯದಿಂದ ಬಾಗಿ ಕೈಗಳನ್ನು ಮುಗಿದು ನಿಂತು ಏನುಮಾಡಲಿ ಎಂದು ಕೇಳಿದನು.

ತಂ ಮೇರುಶಿಖಿರಾಕಾರಮಾಗತಂ ಪಾಂಡುನಂದನಃ ।
ಪ್ರೇಷಯಾಮಾಸ ಹೈಡಿಂಬಂ ಪೌಲಸ್ತ್ಯಾಯ ಮಹಾತ್ಮನೇ ।
ವಿಭೀಷಣಾಯ ಧರ್ಮಾತ್ಮಾ ಪ್ರೀತಿಪೂರ್ವಮರಿಂದಮಃ ॥೭೫॥

ಪಾಂಡುನಂದನನಾದ ಧರ್ಮಾತ್ಮನೂ ಅರಿಂದಮನೂ ಆದ ಸಹದೇವನು ಮೇರುಪರ್ವತದಂತೆ ಎತ್ತರವಾಗಿ ಬಂದು ನಿಂತಿದ್ದ ಹಿಡಿಂಬಿಯ ಮಗನಾದ ಘಟೋತ್ಕಚನನ್ನು ಮಹಾತ್ಮನಾದ ಪೌಲಸ್ತ್ಯವಂಶಧರನಾದ ವಿಭೀಷಣನ ಬಳಿಗೆ ಪ್ರೀತಿಪೂರ್ವಕವಾಗಿ ಕಳುಹಿಸಿದನು.

ಸ ಚಾಸ್ಯ ಪ್ರತಿಜಗ್ರಾಹ ಶಾಸನಂ ಪ್ರೀತಿಪೂರ್ವಕಮ್ ।
ತಚ್ಚ ಕಾಲಧೃತಂ ಜ್ಞಾತ್ವಾ ನಾವಮನ್ಯತ ಬುದ್ಧಿಮಾನ್ ॥೭೬॥

ವಿಭೀಷಣನಾದರೋ ಪ್ರೀತಿಪೂರ್ವಕವಾಗಿ ರಾಜಶಾಸನವನ್ನು ಸ್ವೀಕರಿಸದನು. ಮೇಧಾವಿಯಾದ ಅವನು ಬಹುಕಾಲದಿಂದ ತಾನು ಮಾಡಬೇಕೆಂದು ಯೋಚಿಸಿದ್ದ ವಿಷಯವಿದು ಎಂದು ಚಿಂತಿಸಿ ಘಟೋತ್ಕಚನಿಗೆ ಅವಮಾನವನ್ನು ಮಾಡಲಿಲ್ಲ.

ತತಃ ಸಂಪ್ರೇಷಯಾಮಾಸ ರತ್ನಾನಿ ವಿವಿಧಾನಿ ಚ ।
ಚಂದನಾನಿ ಚ ದಿವ್ಯಾನಿ ತಥಾ ಕಾಲಾಗರೂಣಿ ಚ ।
ವಾಸಾಂಸಿ ಚ ಮಹಾರ್ಹಾಣಿ ಮಣೀಂಶ್ಚ ಸುಮಹಾಧನಾನ್ ॥೭೭॥

ಅನಂತರ ವಿವಿಧವಾದ ರತ್ನಗಳನ್ನೂ ದಿವ್ಯವಾದ ಚಂದನಗಳನ್ನೂ ಕಾಲಾಗರುಗಳನ್ನೂ ಬೆಲೆಬಾಳುವ ವಸ್ತ್ರಗಳನ್ನೂ ಅನರ್ಘ್ಯವಾದ ಮಣಿಗಳನ್ನೂ ಕಳುಹಿಸಿಕೊಟ್ಟನು.

ಜನಮೇಜಯಃ

ಇಚ್ಛಾಮ್ಯಾಗಮನಂ ಶ್ರೋತುಂ ಹೈಡಿಂಬಸ್ಯ ದ್ವಿಜೋತ್ತಮ ।
ಲಂಕಾಯಾಂ ಚ ಗತಿಂ ಬ್ರಹ್ಮನ್ ಪೌಲಸ್ತ್ಯಸ್ಯ ಚ ದರ್ಶನಮ್ ।
ಕಾವೇರೀದರ್ಶನಂ ಚೈವ ಹ್ಯಾನುಪೂರ್ವ್ಯಾದ್ ವದಸ್ವ ಮೇ ॥೭೮॥

ದ್ವಿಜಶ್ರೇಷ್ಠನೇ! ಹಿಡಿಂಬೆಯ ಮಗನಾದ ಘಟೋತ್ಕಚನು ಬಂದ ರೀತಿಯನ್ನೂ ಲಂಕೆಯಲ್ಲಿ ಅವನ ಸಂಚಾರವನ್ನೂ ವಿಭೀಷಣನ ದರ್ಶನವನ್ನೂ ನಾನು ಕೇಳಬಯಸುತ್ತೇನೆ. ಬ್ರಾಹ್ಮಣ ಶ್ರೇಷ್ಠನೇ! ಕಾವೇರೀ ದರ್ಶನವನ್ನು ನನಗೆ ಕ್ರಮವಾಗಿ ತಿಳಿಸು.

ವೈಶಂಪಾಯನಃ

ಶೃಣು ರಾಜನ್ ಪುರಾವೃತ್ತಂ ಸಹದೇವಸ್ಯ ಸಾಹಸಮ್ ।
ಕಾನನದ್ವೀಪಗಾಂಶ್ಚೈವ ತರಸಾ ಜಿತ್ಯ ಆಹವೇ ।
ದಕ್ಷಿಣಾಂ ಚ ದಿಶಂ ಜಿತ್ವಾ ಚೋಳಸ್ಯ ವಿಷಯಂ ಯಯೌ ॥೭೯॥

ರಾಜನೇ! ಸಹದೇವನು ಹಿಂದೆ ಮಾಡಿದ ಸಾಹಸವನ್ನು ಕೇಳು. ಕಾನನವಾಸಿಗಳನ್ನೂ ದ್ವೀಪವಾಸಿಗಳನ್ನೂ ತನ್ನ ವೇಗದಿಂದ ಯುದ್ಧದಲ್ಲಿ ಗೆದ್ದು ದಕ್ಷಿಣದಿಕ್ಕನ್ನೆಲ್ಲಾ ಗೆದ್ದು ಸಹದೇವನು ಚೋಳರಾಜ್ಯವನ್ನೂ ಪ್ರವೇಶಿಸಿದನು.

ದದರ್ಶ ಪುಣ್ಯತೋಯಾಂ ವೈ ಕಾವೇರೀಂ ಸರಿತಾಂ ವರಾಮ್ ।
ನಾನಾಪಕ್ಷಿಗಣೈರ್ಜುಷ್ಟಾಂ ತಾಪಸೈರುಪಶೋಭಿತಾಮ್ ॥೮೦॥

ಅಲ್ಲಿ ಪುಣ್ಯಜಲವನ್ನು ಹೊಂದಿದ್ದ, ತಪಸ್ವಿಗಳಿಂದ ಅಲಂಕೃತವಾದ, ನಾನಾಪಕ್ಷಿಗಣಗಳಿಂದ ಸೇವಿತವಾದ ಶ್ರೇಷ್ಠನದಿಯಾದ ಕಾವೇರಿಯನ್ನು ನೋಡಿದನು.

ಸಾಲಲೋಧ್ರಾರ್ಜುನೈರ್ಬಿಲ್ವೈರ್ಜಂಬೂಶಾಲ್ಮಲಿಕಿಂಶುಕೈಃ ।
ಕೀಚಕೈಃ ಕುಶಕಾಶೈಶ್ಚ ಪಕ್ಷ್ಮಕೈರುಪಶೋಭಿತಾಮ್ ॥೮೧॥

ಅದು ಸಾಲ ಲೋಧ್ರ ಅರ್ಜುನ ಬಿಲ್ವ ಜಂಬೂ ಶಾಲ್ಮಲ ಕಿಂಶುಕ ಕೀಚಕ ಕುಶಕಾಶಗಳು ಪಕ್ಷ್ಮಕ ಮೊದಲಾದ ತೀರವೃಕ್ಷಗಳಿಂದ ಶೋಭಿಸುತ್ತಿದ್ದಿತು.

ಅಚ್ಛೈರ್ಜಲೈಃ ಶೋಣನಿಭಾಂ ಪಾವನಾದ್ ಗಂಗಯಾ ಸಮಾಮ್ ।
ಕದಂಭೈಃ ಸಪ್ತಪರ್ಣೈಶ್ಚ ಕಾಶ್ಮರ್ಯಾಮಲಕೈರ್ವೃತಾಮ್ ॥೮೨॥

ಸ್ವಚ್ಛಜಲಗಳಿಂದ ಕೆಳಗಿನ ಮರಳಿನಿಂದ ಕೆಂಪಾಗಿ ಕಾಣುತ್ತಿದ್ದಂತಹ, ಪಾವಿತ್ರ್ಯದಲ್ಲಿ ಗಂಗೆಗೆ ಸಮನಾದ ಕಂದಬ ಸಪ್ತಪರ್ಣ ಕಾಶ್ಮರಿ ಆಮಲಕ ಮೊದಲಾದ ತೀರವೃಕ್ಷಗಳಿಂದ ಶೋಭಿತವಾದ (ನದಿಯನ್ನು ನೋಡಿದನು.)

ನ್ಯಗ್ರೋಧೈಶ್ಚ ಮಹಾಶಾಖೈಃ ಪ್ಲಕ್ಷೈರೌದುಂಬರೈರಪಿ ।
ಶಮೀಪಲಾಶವೃಕ್ಷೈಶ್ಚ ಅಶ್ವತ್ಥೈಃ ಖದಿರೈರ್ವೃತಾಮ್ ॥೮೩॥

ಆ ನದಿಯು ದೊಡ್ಡ ಶಾಖೆಗಳುಳ್ಳ ನಗ್ರೋಧ (ಆಲ) ಪ್ಲಕ್ಷ ಔದುಂಬರ (ಅತ್ತಿ) ಶಮಿ ಪಲಾಶ. ಅಶ್ವತ್ಥ ಖದಿರ ಮೊದಲಾದ ವೃಕ್ಷಗಳಿಂದಲೂ ಅಲಂಕೃತವಾಗಿದ್ದಿತು.

ಬದರೀಭಿಶ್ಚ ಸಂಪನ್ನಾಮಶ್ವಕರ್ಣೈಶ್ಚ ಶೋಭಿತಾಮ್ ।
ಕರಂಜತಿಂತ್ರಿಣೀಕೈಶ್ಚ ತಾಳವ್ರಾತೈರಲಂಕೃತಾಮ್ ॥೮೪॥

ಅದು ಬದರೀವೃಕ್ಷಗಳಿಂದ ಸಂಪನ್ನವಾಗಿ ಅಶ್ವಕರ್ಣವೃಕ್ಷಗಳಿಂದ ಶೋಭಿತವಾಗಿ ಕರಂಜ ತಿಂತ್ರಿಣಿ ಮತ್ತು ತಾಳ ವೃಕ್ಷಗಳ ಸಮೂಹದಿಂದ ಅಲಂಕೃತವಾಗಿ ಇದ್ದಿತು.

ಶಿರೀಷೈಃ ಕುಟಜೈರ್ನಿಂಬೈರ್ಮಧೂಕೈಃ ಕ್ಷೀರಕೈರ್ವೃತಾಮ್ ।
ಪುನ್ನಾಗೈರ್ವಕುಲೈಃ ಕುಂದೈಶ್ಚಂಪಕೈಃ ಸರ್ವತೋ ವೃತಾಮ್ ॥೮೫॥

ಶಿರೀಷ ಕುಟಜ ನಿಂಬ ಮಧೂಕ ಕ್ಷೀರಕ ಪುನ್ನಾಗ ಬಕುಲ ಕುಂದ ಚಂಪಕ ಮೊದಲಾದ ವೃಕ್ಷಗಳಿಂದ ಎಲ್ಲ ಕಡೆಯಲ್ಲಿಯೂ ಪರಿವೃತವಾಗಿದ್ದಿತು.

ಪ್ರಿಯಂಗ್ವಶೋಕತಿಲಕೈರತಿಮುಕ್ತೈಶ್ಚ ಶೋಭಿತಾಮ್ ।
ಅಸನೈಃ ಕರ್ಣಿಕಾರೈಶ್ಚ ನಾಗವೃಕ್ಷೈರಲಂಕೃತಾಮ್ ॥೮೬॥

ಪ್ರಿಯಂಗು ಅಶೋಕ ತಿಲಕ ಅತಿಮುಕ್ತ ಅಸನ ಕರ್ಣಿಕಾರ ಮತ್ತು ನಾಗವೃಕ್ಷಗಳಿಂದ ಅಲಂಕೃತವಾಗಿ ಶೋಭಿತವಾಗಿದ್ದಿತು.

ಕೇತಕೀಭಿಃ ಕುರಬಕೈರ್ಜಾತಿಯೂಥಿಕಕಂದಲೈಃ ।
ಅಂಕೋಲೈಃ ಕರವೀರೈಶ್ಚ ಪುನ್ನಾಗೈಃ ಪಾಟಲೈರ್ವೃತಾಮ್ ॥೮೭॥

ಕೇತಕಿ ಕುರಬಕ ಜಾತಿ ಯೂಥಿಕ ಕಂದಲ ಅಂಕೋಲ ಕರವೀರ ಪುನ್ನಾಗ ಪಾಟಲ ಮೊದಲಾದ ಪುಷ್ಪವೃಕ್ಷಗಳಿಂದ ಅಲಂಕೃತವಾಗಿದ್ದಿತು.

ಕ್ರಮುಕೈರ್ನಾಳಿಕೇರೈಶ್ಚ ಪನಸಾಮ್ರೈಶ್ಚ ಶೋಭಿತಾಮ್ ।
ಚೂತೈಃ ಪುಂಡ್ರಕಪತ್ರೈಶ್ಚ ಕದಳ್ಯಾಢಕಸಂವೃತಾಮ್ ॥೮೮॥

ಅಡಿಕೆ ತೆಂಗು ಹಲಸು ಮಾವು ಪುಂಡ್ರಕಪತ್ರ ಕದಳಿ ಆಡಕ ಮೊದಲಾದ ವನಸ್ಪತಿಗಳಿಂದ ಶೋಭಿತವಾಗಿದ್ದಿತು.

ನೀಪೈಶ್ಚ ವೇತಸೈಃ ಕೀರ್ಣಾಂ ನಾಳಕುಂದಕುಶೈರ್ವ್ರತಾಮ್ ।
ಏವಂ ಬಹುವಿಧೈರ್ವೃಕ್ಷೈರ್ದಿವ್ಯೈರನ್ಯೈಶ್ಚ ಶೋಭಿತಾಮ್ ॥೮೯॥

ನೀಪ ವೇತಸ (ಬೆತ್ತ) ನಾಳ ಕುಂದ ಕುಶ ಮೊದಲಾದ ಬಹುವಿಧವಾದ ಮತ್ತು ಇನ್ನೂ ಅನೇಕ ಬಗೆಯಾದ ದಿವ್ಯ ವೃಕ್ಷಗಳಿಂದ ಶೋಭಿತವಾಗಿದ್ದಿತು.

ಹಂಸಕಾರಂಡವೈಃ ಕೀರ್ಣಾಂ ಕುರರೈಃ ಸಾರಸೈಃ ಶುಕೈಃ ।
ಚಕ್ರವಾಕಗಣೈರ್ಜುಷ್ಟಾಂ ಪ್ಲವೈಶ್ಚ ಜಲವಾಸಿಭಿಃ ॥೯೦॥

ಸಮುದ್ರಕಾಕೈಃ ಕ್ರೌಂಚೈಶ್ಚ ನಾದಿತಾಂ ಜಲಕುಕ್ಕುಟೈಃ ।
ಏವಂ ಖಗೈಶ್ಚ ಬಹುಭಿಃ ಸಂಘುಷ್ಟಾಂ ಜಲಚಾರಿಭಿಃ ॥೯೧॥

ಹಂಸ ಕಾರಂಡವ ಮೊದಲಾದ ಪಕ್ಷಿಗಳಿಂದ ತುಂಬಿ ಕುರರ ಸಾರಸ ಶುಕ ಚಕ್ರವಾಕ ಮೊದಲಾದ ಪಕ್ಷಿಗಳ ಮಧುರಸ್ವರದಿಂದ ತುಂಬಿದ್ದಿತು. ಜಲದಲ್ಲಿಯೇ ಇರುವ ದೋಣಿಗಳಿಂದಲೂ ತುಂಬಿದ್ದಿತು. ಸಮುದ್ರಕಾಕಗಳಿಂದಲೂ, ಕ್ರೌಂಚಪಕ್ಷಿಗಳಿಂದಲೂ, ಜಲಕುಕ್ಕುಟಪಕ್ಷಿಗಳಿಂದಲೂ ಉಂಟಾದ ನಾದದಿಂದ ತುಂಬಿದ್ದಿತು. ಹೀಗೆ ಬಹುವಿಧವಾದ ಜಲಪಕ್ಷಿಗಳ ಮಧುರನಾದದಿಂದ ಪೂರ್ಣವಾಗಿದ್ದಿತು.

ಆಶ್ರಮೈರ್ಬಹುಭಿಃ ಸಕ್ತಾಂ ಚೈತ್ಯವೃಕ್ಷೈಶ್ಚ ಶೋಭಿತಾಮ್ ।
ಸೇವಿತಾಂ ಬ್ರಾಹ್ಮಣೈಃ ಶುಭ್ರೈರ್ವೇದವೇದಾಂಗಪಾರಗೈಃ ॥೯೨॥

ನದಿಯತೀರದಲ್ಲಿ ಇದ್ದ ಅನೇಕ ಆಶ್ರಮಗಳಿಂದ ಸಂಲಗ್ನವಾಗಿ ಪೂಜಾವೃಕ್ಷಗಳಿಂದ ಶೋಭಿತವಾಗಿ ವೇದ ವೇದಾಂಗ ಪಾರಂಗತರಾದ ಶುದ್ಧರಾದ ಬ್ರಾಹ್ಮಣರಿಂದ ಸೇವಿತವಾಗಿದ್ದಿತು.

ಕ್ವಚಿತ್ ತೀರರುಹೈರ್ವೃಕ್ಷೈರ್ಮಾಲಾಭಿರಿವ ಶೋಭಿತಾಮ್ ।
ಪುಷ್ಪಗುಲ್ಮಲತೋಪೇತಾಮಂಗನಾಮಿವ ಭೂಷಣೈಃ ॥೯೩॥

ಕೆಲವುಕಡೆ ತೀರದಲ್ಲಿ ಬೆಳೆದ ವೃಕ್ಷಗಳು ಒಂದು ಮಾಲೆಯಂತೆ ನದಿಗೆ ಶೋಭೆಯನ್ನು ತರುತ್ತಿದ್ದವು. ಪುಷ್ಪಗಳು ಗುಲ್ಮಗಳು ಮತ್ತು ಲತೆಗಳಿಂದ ಸಂವೃತವಾಗಿ ಕಾವೇರಿಯು ಭೂಷಣಗಳಿಂದ ಅಲಂಕೃತವಾದ ವನಿತೆಯಂತೆ ತೋರುತ್ತಿದ್ದಿತು.

ಕ್ವಚಿತ್ ಸುಪುಷ್ಪಿತೈರ್ವೃಕ್ಷೈಃ ಕ್ವಚಿತ್ ಸೌಗಂಧಿಕೋತ್ಪಲೈಃ ।
ನಾನಾಪುಷ್ಪರಜೋಧ್ವಸ್ತಾಂ ಪ್ರಮದಾಮಿವ ಭೂಷಿತಾಮ್ ॥೯೪॥

ಕೆಲವೊಮ್ಮೆ ಪುಷ್ಪಭರಿತವೃಕ್ಷಗಳಿಂದಲೂ ಕೆಲವು ಕಡೆ ಸೌಗಂಧಿಕ ಮತ್ತು ಉತ್ಪಲಪುಷ್ಪಗಳಿಂದಲೂ ಕೆಲವು ಕಡೆ ಪುಷ್ಪದ ಕೇಸರಗಳಿಂದಲೂ ತುಂಬಿದ ಆ ನದಿಯು ಅಲಂಕೃತಳಾದ ವನಿತೆಯಂತೆ ತೋರುತ್ತಿದ್ದಿತು.

ರಮಣೀಯಾಂ ತಥಾ ಹೃದ್ಯಾಂ ವಿಹೃತಾಮಪ್ಸರೋಗಣೈಃ ।
ಮೃಷ್ಟತೀರ್ಥಾಮಕಲುಷಾಂ ಪ್ರಾಣಿನಾಂ ಜೀವನೀಂ ಶುಭಾಮ್ ॥೯೫॥

ಕಹ್ಲಾರಕುಮುದೈಃ ಫುಲ್ಲೈಃ ಕಮಲೈರುಪಶೋಭಿತಾಮ್ ।
ಅಪಾರಾಂ ಸ್ವಾದುತೋಯಾಂ ವೈ ಪುಳಿನದ್ವೀಪಶೋಭಿತಾಮ್ ॥೯೬॥

ಕಾವೇರೀಂ ತಾದೃಶೀಂ ದೃಷ್ಟ್ವಾ ಪ್ರೀತಿಮಾನ್ ಪಾಂಡವೋಽಬ್ರವೀತ್ ।
ಅಸ್ಮದ್ರಾಷ್ಟ್ರೇ ಯಥಾ ಗಂಗಾ ಕಾವೇರೀ ಚ ತಥಾ ಇಹ ॥೯೭॥

ಅಪ್ಸರೆಯರ ಗಣದಿಂದ ವಿಹರಿಸಲ್ಪಟ್ಟಿದಾಗಿ ಅದು ಕಣ್ಣಿಗೆ ರಮಣೀಯವಾಗಿಯೂ ಮನಸ್ಸಿಗೆ ಆಹ್ಲಾದಕರವಾಗಿಯೂ ಇದ್ದಿತು. ಹೊಳೆಯುವ ಪರಿಶುದ್ಧವಾದ ಅದರ ಜಲವು ಪ್ರಾಣಿಗಳಿಗೆ ಜೀವನಪ್ರದವಾಗಿದ್ದಿತು. ಅಲ್ಲದೆ ಅರಳಿದ ಕಲ್ಹಾರ ಕುಮುದ ಕಮಲ ಪುಷ್ಪಗಳಿಂದ ಶೋಭಿತವಾಗಿದ್ದಿತು. ಪಾರವೇ ಕಾಣದಿರುವ ಮಧುರವಾದ ಜಲವನ್ನುಳ್ಳ ಮಧ್ಯ ಮಧ್ಯೆ ಮರಳಿನ ಸಣ್ಣ ದ್ವೀಪಗಳಿಂದ ಶೋಭಿಸುವ ಅಂತಹ ಕಾವೇರಿಯನ್ನು ನೋಡಿ ಸಂತೋಷಗೊಂಡ ಪಾಂಡುಪುತ್ರನಾದ ಸಹದೇವನು ನಮ್ಮ ರಾಷ್ಟ್ರದಲ್ಲಿ ಹೇಗೆ ಗಂಗೆಯೋ ಇಲ್ಲಿ ಕಾವೇರಿಯು ಹಾಗೆ ಎಂದು ಹೇಳಿದನು.

ಸಹದೇವಸ್ತು ತಾಂ ತೀರ್ತ್ವಾ ನದೀಮನುಚರೈಃ ಸಹ ।
ದಕ್ಷಿಣಂ ತೀರಮಾಸಾದ್ಯ ಗಮನಾಯೋಪಚಕ್ರಮೇ ॥೯೮॥

ಸಹದೇವನು ತನ್ನ ಅನುಚರರ ಜೊತೆಯಲ್ಲಿ ಕಾವೇರಿಯನ್ನು ದಾಟಿ ದಕ್ಷಿಣತೀರವನ್ನು ತಲುಪಿ ಮುಂದೆ ಹೊರಡಲು ಉದ್ಯುಕ್ತನಾದನು.

ಆಗತಂ ಪಾಂಡವಂ ತತ್ರ ಶ್ರುತ್ವಾ ವಿಷಯವಾಸಿನಃ ।
ದರ್ಶನಾರ್ಥಂ ಯಯುಸ್ತೇ ತು ಕೌತೂಹಲಸಮನ್ವಿತಾಃ ॥೯೯॥

ದ್ರಮಿಳಾಃ ಪುರುಷಾ ರಾಜನ್ ಸ್ತ್ರಿಯಶ್ಚ ಪ್ರಿಯದರ್ಶನಾಃ ।
ಗತ್ವಾ ಪಾಂಡುಸುತಂ ತತ್ರ ದದೃಶುಸ್ತೇ ಮುದಾऽನ್ವಿತಾಃ ॥೧೦೦॥

ಪಾಂಡವನು ಆಗಮಿಸಿದುದನ್ನು ಕೇಳಿ ಆ ನಗರವಾಸಿಗಳಾದ ದ್ರಮಿಳರು ಕುತೂಹಲದಿಂದ ಕೂಡಿದವರಾಗಿ ಪುರುಷರು ಮತ್ತು ಸುಂದರಿಯರಾದ ಸ್ತ್ರೀಯರು ಅವನನ್ನು ನೋಡುವ ಸಲುವಾಗಿ ಬಂದು ಪಾಂಡುಸುತನನ್ನು ನೋಡಿ ಸಂತೋಷದಿಂದ ಭರಿತರಾದರು.

ಸುಕುಮಾರಂ ವಿಶಾಲಾಕ್ಷಂ ವ್ರಜಂತಂ ತ್ರಿದಶೋಪಮಮ್ ।
ದರ್ಶನೀಯತಮಂ ಲೋಕೇ ನೇತ್ರೈರನಿಮಿಷೈರಿವ ॥೧೦೧॥

ಆಶ್ಚರ್ಯಭೂತಂ ದದೃಶುರ್ದ್ರಮಿಳಾಸ್ತೇ ಸಮಾಗತಾಃ ।
ಮಹಾಸೇನೋಪಮಂ ದೃಷ್ಟ್ವಾ ಪೂಜಾಂ ಚಕ್ರುಶ್ಚ ತಸ್ಯ ವೈ ॥೧೦೨॥

ಸುಕುಮಾರನೂ ವಿಶಾಲನೇತ್ರನೂ ದೇವತೆಗಳಂತೆ ಮನೋಹರನೂ ಆಶ್ಚರ್ಯಭೂತನೂ ಷಣ್ಮುಖನಿಗೆ ಸದೃಶನಾಗಿರುವವನೂ ಆದ ಸಂಚರಿಸುತ್ತಿರುವ ಅವನನ್ನು ರೆಪ್ಪೆಯನ್ನು ಮುಚ್ಚದ ಕಣ್ಣುಗಳಿಂದ ನೋಡಿ ಅವನಿಗೆ ಸತ್ಕಾರವನ್ನು ಮಾಡಿದರು.

ರತ್ನೈಶ್ಚ ವಿವಿಧೈರಿಷ್ಟೈರ್ಭೋಗೈರನ್ಯೈಶ್ಚ ಸಮ್ಮತೈಃ ।
ಗೀತಮಂಗಲಯುಕ್ತಾಭಿಃ ಸ್ತುವಂತೋ ನಕುಲಾನುಜಮ್ ॥೧೦೩॥

ವಿವಿಧವಾದ ರತ್ನಗಳಿಂದಲೂ ಅವನಿಗೆ ಇಷ್ಟವಾದ ಭೋಗಗಳಿಂದಲೂ ಮತ್ತು ಅವನಿಗೆ ಪ್ರೀಯವಾದ ವಸ್ತುಗಳಿಂದಲೂ ಮಂಗಳಗೀತಸ್ತೋತ್ರಗಳಿಂದಲೂ ನಕುಲನ ತಮ್ಮನಾದ ಸಹದೇವವನ್ನು ಸತ್ಕರಿಸಿದರು.

ಸಹದೇವಸ್ತು ತಾನ್ ದೃಷ್ಟ್ವಾ ದ್ರಮಿಳಾನಾಗತಾನ್ ಮುದಾ ।
ವಿಸೃಜ್ಯ ತಾನ್ ಮಹಾರಾಜ ಪ್ರಸ್ಥಿತೋ ದಕ್ಷಿಣಾಂ ದಿಶಮ್ ॥೧೦೪॥

ಮಹಾರಾಜನೇ! ಸಹದೇವನಾದರೂ ತನ್ನನ್ನು ನೋಡಲು ಬಂದ ಆ ದ್ರಮಿಳರನ್ನು ಸಂತೋಷಗೊಂಡು ಅವರನ್ನು ಕಳುಹಿಸಿಕೊಟ್ಟು ದಕ್ಷಿಣಾಭಿಮುಖವಾಗಿ ಹೊರಟನು.

ದೂತೇನ ತರಸಾ ಚೋಳಂ ವಿಜಿತ್ಯ ದ್ರಮಿಳೇಶ್ವರಮ್ ।
ತತೋ ರತ್ನಾನ್ಯುಪಾದಾಯ ಪಾಂಡ್ಯಸ್ಯ ವಿಷಯಂ ಯಯೌ ॥೧೦೫॥

ತನ್ನ ದೂತನಿಂದ ದ್ರಮಿಳೇಶ್ವರನಾದ ಚೋಳರಾಜನನ್ನು ಗೆದ್ದು ಅವನಿಂದ ಬಹಳ ರತ್ನವನ್ನು ಸ್ವೀಕರಿಸಿ ಪಾಂಡ್ಯದೇಶಕ್ಕೆ ಹೋದನು.

ದರ್ಶನೇ ಸಹದೇವಸ್ಯ ನಚ ತೃಪ್ತಾ ನರಾಃ ಪರೇ ।
ಗಚ್ಛಂತಮನುಗಚ್ಛಂತಃ ಪ್ರೀತ್ಯಾ ಕೌತೂಹಲಾನ್ವಿತಾಃ ॥೧೦೬॥

ಸಹದೇವನ ದರ್ಶನದಿಂದ ತೃಪ್ತಿಯನ್ನು ಹೊಂದದ ಉಳಿದ ಮನುಷ್ಯರು ಕೂತೂಹಲದಿಂದ ಸಮನ್ವಿತರಾಗಿ ಅವನು ಹೋದಂತೆ ಸಂತೋಷದಿಂದ ಅವನ್ನು ಹಿಂಬಾಲಿಸಿದರು.

ತತೋ ಮಾದ್ರೀಸುತೋ ರಾಜನ್ ಮೃಗವ್ರಾತಾನ್ ವ್ಯಲೋಕಯತ್ ।
ಗಜಾನ್ ವನಚರಾನನ್ಯಾನ್ ವ್ಯಾಘ್ರಾನ್ ಕೃಷ್ಣಮೃಗಾನ್ ಬಹೂನ್ ॥೧೦೭॥

ರಾಜನೇ! ಅನಂತರ ಮಾದ್ರೀಸುತನು ಜಿಂಕೆಗಳ ಹಿಂಡನ್ನೂ ಗಜಗಳನ್ನೂ ಬೇರೆ ವನಚರಪ್ರಾಣಿಗಳನ್ನು ವ್ಯಾಘ್ರಗಳನ್ನೂ ಮತ್ತು ಅನೇಕ ಕೃಷ್ಣಮೃಗಗಳನ್ನೂ ನೋಡಿದನು.

ಶುಕಾನ್ ಮಯೂರಾನ್ ದೃಷ್ಟ್ವಾ ತು ಗೃಧ್ರಾನಾರಣ್ಯಕುಕ್ಕುಟಾನ್ ।
ತತೋ ದೇಶಂ ಸಮಾಸಾದ್ಯ ಶ್ವಶುರಸ್ಯ ಮಹೀಪತೇಃ ॥೧೦೮॥

ಪ್ರೇಷಯಾಮಾಸ ಮಾದ್ರೇಯೋ ದೂತಾನ್ ಪಾಂಡ್ಯಾಯ ವೈ ತದಾ ।
ಪ್ರತಿಜಗ್ರಾಹ ತಸ್ಯಾಜ್ಞಾಂ ಸಂಪ್ರೀತ್ಯಾ ಮಲಯಧ್ವಜಃ ॥೧೦೯॥

ಹದ್ದುಗಳನ್ನೂ ಅರಣ್ಯ ಕುಕ್ಕುಟಗಳನ್ನೂ ಹಾಗೆಯೇ ಗೃಧ್ರಗಳನ್ನೂ ಮತ್ತು ನವಿಲುಗಳನ್ನೂ ನೋಡಿ ಅಲ್ಲಿಂದ ಅರ್ಜುನನ ಮಾವನಾದ ರಾಜನ ದೇಶವನ್ನು ತಲುಪಿ

ಆ ಪಾಂಡ್ಯರಾಜನ ಬಳಿಗೆ ತನ್ನ ದೂತರನ್ನು ಕಳುಹಿಸಿದನು. ಮಾದ್ರೀಪುತ್ರನಾದ ಸಹದೇವನ ಆಜ್ಞೆಯನ್ನು ಮಲಯಧ್ವಜರಾಜನು ಸಂತೋಷದಿಂದ ಸ್ವೀಕರಿಸಿದನು.

ಭಾರ್ಯಾ ರೂಪವತೀ ಜಿಷ್ಣೋಃ ಪಾಂಡ್ಯಸ್ಯ ತನಯಾ ಶುಭಾ ।
ಚಿತ್ರಾಂಗದೇತಿ ವಿಖ್ಯಾತಾ ದ್ರಮಿಳಾ ಯೋಷಿತಾಂ ವರಾ ॥೧೧೦॥

ಆಗತಂ ಸಹದೇವಂ ತು ಸಾ ಶ್ರುತ್ವಾಽಂತಃಪುರೇ ಪಿತುಃ ।
ಪ್ರೇಷಯಾಮಾಸ ಸಂಪ್ರೀತ್ಯಾ ಪೂಜಾಂ ರತ್ನಾನಿ ವೈ ಬಹು ॥೧೧೧॥

ಅರ್ಜುನನ ಪತ್ನಿಯಾದ ಪಾಂಡ್ಯರಾಜನ ತನಯಳಾದ ಸುಂದರಿಯಾದ ವನಿತೆಯರಲ್ಲಿ ಶ್ರೇಷ್ಠಳಾದ ದ್ರಮಿಳದೇಶದಲ್ಲಿ ಪ್ರಖ್ಯಾತಳಾದ ಅರ್ಜುನ ಭಾರ್ಯೆಯಾದ ಚಿತ್ರಾಂಗದೆಯು ಸಹದೇವನು ಬಂದಿದ್ದಾನೆ ಎಂಬ ವಾರ್ತೆಯನ್ನು ತಂದೆಯ ಅಂತಃಪುರದಲ್ಲಿ ಕೇಳಿ ಸಂತೋಷದಿಂದ ಅವನಿಗೆ ಪೂಜಾಸಾಮಗ್ರಿಗಳನ್ನು ಮತ್ತು ಅನೇಕ ರತ್ನಗಳನ್ನು ಕಳುಹಿಸಿಕೊಟ್ಟಳು.

ಪಾಂಡ್ಯೋಽಪಿ ಬಹುರತ್ನಾನಿ ದೂತೈಃ ಸಹ ಮುಮೋಚ ಹ ।
ಮಣಿಮುಕ್ತಾಪ್ರವಾಳಾಂಶ್ಚ ಶಂಖಶುಕ್ತಿಯುತಾನ್ ಬಹೂನ್ ॥೧೧೨॥

ಪಾಂಡ್ಯರಾಜನೂ ಸಹ ತನ್ನ ದೂತರ ಮೂಲಕ ಅನೇಕ ರತ್ನಗಳನ್ನೂ ಮಣಿ ಮುತ್ತು ಮತ್ತು ಹವಳಗಳನ್ನೂ ಅನೇಕ ಶಂಖಶುಕ್ತಿಗಳನ್ನೂ ಕಳುಹಿಸಿಕೊಟ್ಟನು.

ತಾಂ ದೃಷ್ಟ್ವಾ ಪ್ರೀತಿಮಾನ್ ಪೂಜಾಂ ಪಾಂಡವೋಽಥ ಮುದಾ ನೃಪ ।
ಭ್ರಾತುಃ ಪುತ್ರೇ ಬಹೂನ್ ರತ್ನಾನದದಾದ್ ಬಭ್ರುವಾಹನೇ ॥೧೧೩॥

ರಾಜನೇ! ಆ ಸತ್ಕಾರವನ್ನು ಸ್ವೀಕರಿಸಿ ಸಹದೇವನು ಸಂತೋಷದಿಂದ ಕೂಡಿದವನಾಗಿ ತನ್ನ ಅಣ್ಣನ ಮಗನಾದ ಬಭ್ರುವಾಹನನಿಗೆ ಅನೇಕ ರತ್ನಗಳನ್ನು ಕೊಟ್ಟನು.

ಪಾಂಡ್ಯಂ ದ್ರಮಿಳರಾಜಾನಂ ಶ್ವಶುರಂ ಮಲಯಧ್ವಜಮ್ ।
ಸ ದೂತೈಸ್ತಂ ವಶೇ ಕೃತ್ವಾ ಮಣಲೂರೇಶ್ವರಂ ತದಾ ॥೧೧೪॥

ಸಹದೇವಸ್ತು ತಾನ್ ದೃಷ್ಟ್ವಾ ದ್ರಮಿಳಾನಾಗತಾನ್ ಮುದಾ ।
ವಿಸೃಜ್ಯ ತಾನ್ ಮಹಾರಾಜ ಪ್ರಸ್ಥಿತೋ ದಕ್ಷಿಣಾಂ ದಿಶಮ್ ॥೧೦೪॥

ಮಹಾರಾಜನೇ! ಸಹದೇವನಾದರೂ ತನ್ನನ್ನು ನೋಡಲು ಬಂದ ಆ ದ್ರಮಿಳರನ್ನು ಸಂತೋಷಗೊಂಡು ಅವರನ್ನು ಕಳುಹಿಸಿಕೊಟ್ಟು ದಕ್ಷಿಣಾಭಿಮುಖವಾಗಿ ಹೊರಟನು.

ದೂತೇನ ತರಸಾ ಚೋಳಂ ವಿಜಿತ್ಯ ದ್ರಮಿಳೇಶ್ವರಮ್ ।
ತತೋ ರತ್ನಾನ್ಯುಪಾದಾಯ ಪಾಂಡ್ಯಸ್ಯ ವಿಷಯಂ ಯಯೌ ॥೧೦೫॥

ತನ್ನ ದೂತನಿಂದ ದ್ರಮಿಳೇಶ್ವರನಾದ ಚೋಳರಾಜನನ್ನು ಗೆದ್ದು ಅವನಿಂದ ಬಹಳ ರತ್ನವನ್ನು ಸ್ವೀಕರಿಸಿ ಪಾಂಡ್ಯದೇಶಕ್ಕೆ ಹೋದನು.

ದರ್ಶನೇ ಸಹದೇವಸ್ಯ ನಚ ತೃಪ್ತಾ ನರಾಃ ಪರೇ ।
ಗಚ್ಛಂತಮನುಗಚ್ಛಂತಃ ಪ್ರೀತ್ಯಾ ಕೌತೂಹಲಾನ್ವಿತಾಃ ॥೧೦೬॥

ಸಹದೇವನ ದರ್ಶನದಿಂದ ತೃಪ್ತಿಯನ್ನು ಹೊಂದದ ಉಳಿದ ಮನುಷ್ಯರು ಕೂತೂಹಲದಿಂದ ಸಮನ್ವಿತರಾಗಿ ಅವನು ಹೋದಂತೆ ಸಂತೋಷದಿಂದ ಅವನ್ನು ಹಿಂಬಾಲಿಸಿದರು.

ತತೋ ಮಾದ್ರೀಸುತೋ ರಾಜನ್ ಮೃಗವ್ರಾತಾನ್ ವ್ಯಲೋಕಯತ್ ।
ಗಜಾನ್ ವನಚರಾನನ್ಯಾನ್ ವ್ಯಾಘ್ರಾನ್ ಕೃಷ್ಣಮೃಗಾನ್ ಬಹೂನ್ ॥೧೦೭॥

ರಾಜನೇ! ಅನಂತರ ಮಾದ್ರೀಸುತನು ಜಿಂಕೆಗಳ ಹಿಂಡನ್ನೂ ಗಜಗಳನ್ನೂ ಬೇರೆ ವನಚರಪ್ರಾಣಿಗಳನ್ನು ವ್ಯಾಘ್ರಗಳನ್ನೂ ಮತ್ತು ಅನೇಕ ಕೃಷ್ಣಮೃಗಗಳನ್ನೂ ನೋಡಿದನು.

ಶುಕಾನ್ ಮಯೂರಾನ್ ದೃಷ್ಟ್ವಾ ತು ಗೃಧ್ರಾನಾರಣ್ಯಕುಕ್ಕುಟಾನ್ ।
ತತೋ ದೇಶಂ ಸಮಾಸಾದ್ಯ ಶ್ವಶುರಸ್ಯ ಮಹೀಪತೇಃ ॥೧೦೮॥

ಪ್ರೇಷಯಾಮಾಸ ಮಾದ್ರೇಯೋ ದೂತಾನ್ ಪಾಂಡ್ಯಾಯ ವೈ ತದಾ ।
ಪ್ರತಿಜಗ್ರಾಹ ತಸ್ಯಾಜ್ಞಾಂ ಸಂಪ್ರೀತ್ಯಾ ಮಲಯಧ್ವಜಃ ॥೧೦೯॥

ಹದ್ದುಗಳನ್ನೂ ಅರಣ್ಯ ಕುಕ್ಕುಟಗಳನ್ನೂ ಹಾಗೆಯೇ ಗೃಧ್ರಗಳನ್ನೂ ಮತ್ತು ನವಿಲುಗಳನ್ನೂ ನೋಡಿ ಅಲ್ಲಿಂದ ಅರ್ಜುನನ ಮಾವನಾದ ರಾಜನ ದೇಶವನ್ನು ತಲುಪಿ

ಆ ಪಾಂಡ್ಯರಾಜನ ಬಳಿಗೆ ತನ್ನ ದೂತರನ್ನು ಕಳುಹಿಸಿದನು. ಮಾದ್ರೀಪುತ್ರನಾದ ಸಹದೇವನ ಆಜ್ಞೆಯನ್ನು ಮಲಯಧ್ವಜರಾಜನು ಸಂತೋಷದಿಂದ ಸ್ವೀಕರಿಸಿದನು.

ಭಾರ್ಯಾ ರೂಪವತೀ ಜಿಷ್ಣೋಃ ಪಾಂಡ್ಯಸ್ಯ ತನಯಾ ಶುಭಾ ।
ಚಿತ್ರಾಂಗದೇತಿ ವಿಖ್ಯಾತಾ ದ್ರಮಿಳಾ ಯೋಷಿತಾಂ ವರಾ ॥೧೧೦॥

ಆಗತಂ ಸಹದೇವಂ ತು ಸಾ ಶ್ರುತ್ವಾಽಂತಃಪುರೇ ಪಿತುಃ ।
ಪ್ರೇಷಯಾಮಾಸ ಸಂಪ್ರೀತ್ಯಾ ಪೂಜಾಂ ರತ್ನಾನಿ ವೈ ಬಹು ॥೧೧೧॥

ಅರ್ಜುನನ ಪತ್ನಿಯಾದ ಪಾಂಡ್ಯರಾಜನ ತನಯಳಾದ ಸುಂದರಿಯಾದ ವನಿತೆಯರಲ್ಲಿ ಶ್ರೇಷ್ಠಳಾದ ದ್ರಮಿಳದೇಶದಲ್ಲಿ ಪ್ರಖ್ಯಾತಳಾದ ಅರ್ಜುನ ಭಾರ್ಯೆಯಾದ ಚಿತ್ರಾಂಗದೆಯು ಸಹದೇವನು ಬಂದಿದ್ದಾನೆ ಎಂಬ ವಾರ್ತೆಯನ್ನು ತಂದೆಯ ಅಂತಃಪುರದಲ್ಲಿ ಕೇಳಿ ಸಂತೋಷದಿಂದ ಅವನಿಗೆ ಪೂಜಾಸಾಮಗ್ರಿಗಳನ್ನು ಮತ್ತು ಅನೇಕ ರತ್ನಗಳನ್ನು ಕಳುಹಿಸಿಕೊಟ್ಟಳು.

ಪಾಂಡ್ಯೋಽಪಿ ಬಹುರತ್ನಾನಿ ದೂತೈಃ ಸಹ ಮುಮೋಚ ಹ ।
ಮಣಿಮುಕ್ತಾಪ್ರವಾಳಾಂಶ್ಚ ಶಂಖಶುಕ್ತಿಯುತಾನ್ ಬಹೂನ್ ॥೧೧೨॥

ಪಾಂಡ್ಯರಾಜನೂ ಸಹ ತನ್ನ ದೂತರ ಮೂಲಕ ಅನೇಕ ರತ್ನಗಳನ್ನೂ ಮಣಿ ಮುತ್ತು ಮತ್ತು ಹವಳಗಳನ್ನೂ ಅನೇಕ ಶಂಖಶುಕ್ತಿಗಳನ್ನೂ ಕಳುಹಿಸಿಕೊಟ್ಟನು.

ತಾಂ ದೃಷ್ಟ್ವಾ ಪ್ರೀತಿಮಾನ್ ಪೂಜಾಂ ಪಾಂಡವೋಽಥ ಮುದಾ ನೃಪ ।
ಭ್ರಾತುಃ ಪುತ್ರೇ ಬಹೂನ್ ರತ್ನಾನದದಾದ್ ಬಭ್ರುವಾಹನೇ ॥೧೧೩॥

ರಾಜನೇ! ಆ ಸತ್ಕಾರವನ್ನು ಸ್ವೀಕರಿಸಿ ಸಹದೇವನು ಸಂತೋಷದಿಂದ ಕೂಡಿದವನಾಗಿ ತನ್ನ ಅಣ್ಣನ ಮಗನಾದ ಬಭ್ರುವಾಹನನಿಗೆ ಅನೇಕ ರತ್ನಗಳನ್ನು ಕೊಟ್ಟನು.

ಪಾಂಡ್ಯಂ ದ್ರಮಿಳರಾಜಾನಂ ಶ್ವಶುರಂ ಮಲಯಧ್ವಜಮ್ ।
ಸ ದೂತೈಸ್ತಂ ವಶೇ ಕೃತ್ವಾ ಮಣಲೂರೇಶ್ವರಂ ತದಾ ॥೧೧೪॥

ದ್ರಮಿಳದೇಶದ ಪಾಂಡ್ಯವಂಶದವನಾದ ರಾಜನೂ ಅರ್ಜುನನ ಮಾವನೂ ಆದ ಮಲಯಧ್ವಜನನ್ನು ಹೀಗೆ ತನ್ನ ದೂತರ ಮೂಲಕವೇ ವಶಪಡಿಸಿಕೊಂಡು ಮಣಲೂರಪುರಕ್ಕೆ ಹೊದನು.

ತತೋ ರತ್ನಾನ್ಯುಪಾದಾಯ ದ್ರಮಿಳೈರಾವೃತೋ ಯಯೌ ।
ಅಗಸ್ತ್ಯಸ್ಯಾಲಯಂ ದಿವ್ಯಂ ದೇವಲೋಕಸಮಂ ಗಿರಿಮ್ ॥೧೧೫॥

ಅಲ್ಲಿಯೂ ಅನೇಕ ರತ್ನಗಳನ್ನು ಪಡೆದು ದ್ರಮಿಳರಿಂದ ಪರಿವೃತನಾಗಿ ದೇವಲೋಕಸಮವಾದ ದಿವ್ಯವಾದ ಅಗಸ್ತ್ಯರಿಗೆ ಆಶ್ರಯವಾದ ಮಲಯಪರ್ವತವನ್ನು ತಲುಪಿದನು.

ಸ ತಂ ಪ್ರದಕ್ಷಿಣಂ ಕೃತ್ವಾ ಮಲಯಂ ಭರತರ್ಷಭ ।
ಲಂಘಯಿತ್ವಾ ತು ಮಾದ್ರೇಯಸ್ತಾಮ್ರಪರ್ಣೀಂ ನದೀಂ ಶುಭಾಮ್ ॥

ಪ್ರಸನ್ನಸಲಿಲಾಂ ದಿವ್ಯಾಂ ಸುಶೀತಾಂ ಚಂದನೋದ್ಬಹಾಮ್ ।
ಸಮುದ್ರತೀರಮಾಸಾದ್ಯ ನ್ಯವಿಶತ್ ಪಾಂಡುನಂದನಃ ॥೧೧೭॥

ಭರತರ್ಷಭನೇ! ಮಾದ್ರಿಯ ಸುತನಾದ ಸಹದೇವನು ಮಲಯಪರ್ವತಕ್ಕೆ ಪ್ರದಕ್ಷಣೆಯನ್ನುಮಾಡಿ ಅದನ್ನು ದಾಟಿ, ಪವಿತ್ರವಾದ ಶುದ್ಧವಾದ ನೀರನ್ನು ಹೊಂದಿದ್ದ ದಿವ್ಯಶೀತಲವಾಗಿದ್ದ ಶ್ರೀಗಂಧದ ಸುಗಂಧವನ್ನು ಹೊಂದಿದ್ದ ತಾಮ್ರಪರ್ಣಿ ನದಿಯನ್ನು ನೋಡಿ ಅಲ್ಲಿಂದ ಸಮುದ್ರತೀರಕ್ಕೆ ಬಂದು ಪಾಂಡುನಂದನನಾದ ಅವನು ಅಲ್ಲಿ ತಂಗಿದನು.

ಸಹದೇವಸ್ತತೋ ರಾಜನ್ ಮಂತ್ರಿಭಿಃ ಸಹ ಭಾರತ ।
ಸಂಪ್ರಧಾರ್ಯ ಮಹಾಬಾಹುಃ ಸಚಿವೈರ್ಬುದ್ಧಿಮತ್ತರೈಃ ॥೧೧೮॥

ಅನುನಾಯ್ಯ ಸ ತಾನ್ ರಾಜನ್ ಸಹದೇವಸ್ತ್ವರಾನ್ವಿತಃ ।
ಚಿಂತಯಾಮಾಸ ರಾಜೇಂದ್ರ ಭ್ರಾತುಃ ಪುತ್ರಂ ಘಟೋತ್ಕಚಮ್ ॥೧೧೯॥

ಭಾರತವಂಶದ ರಾಜನೇ! ಅನಂತ ಮಹಾಬಾಹುವಾದ ಸಹದೇವನು ಮೇಧಾವಿಗಳಾದ ಸಚಿವರ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿದನು.

ಅವರನ್ನು ಒಪ್ಪಿಸಿ ಕಾರ್ಯನಿಶ್ಚಯವನ್ನುಮಾಡಿ ತ್ವರೆಯಿಂದ ಕೂಡಿದವನಾಗಿ ತನ್ನ ಅಣ್ಣನ ಮಗನಾದ ಘಟೋತ್ಕಚನನ್ನು ಚಿಂತಿಸಿದನು.

ತತಶ್ಚಿಂತಿತಮಾತ್ರೇ ತು ರಾಕ್ಷಸಃ ಪ್ರತ್ಯದೃಶ್ಯತ ।
ಅತಿದೀರ್ಘೋ ಮಹಾಕಾಯಃ ಸರ್ವಾಭರಣಭೂಷಿತಃ ॥೧೨೦॥

ನೀಲಜೀಮೂತಸಂಕಾಶಃ ತಪ್ತಕಾಂಚನಕುಂಡಲಃ ।
ವಿಚಿತ್ರಹಾರಕೇಯೂರಃ ಕಿಂಕಿಣೀಮಣಿಭೂಷಿತಃ ॥೧೨೧॥

ಹೇಮಮಾಲೀ ಮಹಾದಂಷ್ಟ್ರಃ ಕಿರೀಟೀ ಕುಕ್ಷಿಬಂಧನಃ ।
ತಾಮ್ರಕೇಶೋ ಹರಿಶ್ಮಶ್ರುರ್ಭೀಮಾಂಗಃ ಕನಕಾಂಗದಃ ॥೧೨೨॥

ರಕ್ತಚಂದನದಿಗ್ಧಾಂಗಃ ಸೂಕ್ಷ್ಮಾಂಬರಧರೋ ಬಲೀ ।
ಜವೇನ ಸ ಯಯೌ ತತ್ರ ಚಾಲಯನ್ನಿವ ಮೇದಿನೀಮ್ ॥೧೨೩॥

ಅವನು ಚಿಂತಿಸಿದ ತಕ್ಷಣವೇ ಅತಿದೀರ್ಘನೂ ಮಹಾಕಾಯನೂ ಸರ್ವಾಭರಣಗಳಿಂದಲೂ ಭೂಷಿತನೂ ಆದ ಘಟೋತ್ಕಚರಾಕ್ಷಸನು ಪ್ರತ್ಯಕ್ಷನಾದನು. ಅವನು ನೀಲಮೇಘವರ್ಣವುಳ್ಳವನೂ ತಪ್ತಸುವರ್ಣಕಾಂತಿಯುಳ್ಳ ಕುಂಡಲವುಳ್ಳವನೂ ವಿಚಿತ್ರಹಾರ ಕೇಯೂರಗಳಿಂದಲೂ ಸಣ್ಣ ಘಂಟಾಮಣಿಗಳಿಂದಲೂ ಭೂಷಿತನಾದವನೂ ಹೇಮಮಾಲೆಯನ್ನು ಧರಿಸಿದನೂ ದೊಡ್ಡ ಕೊರೆದಾಡೆಗಳನ್ನು ಹೊಂದಿದವನೂ ಕಿರೀಟವನ್ನು ಮತ್ತು ಮೇಖಲೆಯನ್ನು ಧರಿಸಿದವನೂ ತಾಮ್ರಕೇಶನೂ ಹರಿಶ್ಮಶ್ರುವೂ ಭಯಂಕರವಾದ ಅಂಗವುಳ್ಳವನೂ ಸುವರ್ಣದ ಅಂಗದವನ್ನು ಧರಿಸಿದವನೂ ರಕ್ತಚಂದನನಿಂದ ಲೇಪಿತನಾದವನೂ ಸೂಕ್ಷ್ಮಾಂಬರಧಾರಿಯೂ ಬಲೋಪೇತನಾಗಿ ತನ್ನ ವೇಗದಿಂದ ಭೂಮಿಯನ್ನು ನಡುಗಿಸುವಂತೆ ಆ ಸ್ಥಳಕ್ಕೆ ಬಂದನು.

ತತೋ ದೃಷ್ಟ್ವಾ ಜನಾ ರಾಜನ್ ಆಯಾಂತಂ ಪರ್ವತೋಪಮಮ್ ।
ಭಯಾದ್ದ್ರಿ ದುದ್ರುವುಃ ಸರ್ವೇ ಸಿಂಹಾತ್ ಕ್ಷುದ್ರಮೃಗಾ ಯಥಾ ।
ಆಸಸಾದ ಚ ಮಾದ್ರೇಯಂ ಪುಲಸ್ತ್ಯಂ ರಾವಣೋ ಯಥಾ ॥೧೨೪॥

ರಾಜನೇ! ಆಗ ಪರ್ವತಸದೃಶನಾಗಿ ಬರುತ್ತಿರುವ ಅವನನ್ನು ನೋಡಿ ಎಲ್ಲ ಜನರೂ ಸಿಂಹಕ್ಕೆ ಹೆದರಿದ ಕ್ಷುದ್ರಮೃಗಗಳಂತೆ ಓಡಿಹೋದರು. ಅವನು ಪುಲಸ್ತ್ಯರ ಬಳಿಗೆ ರಾವಣನು ಬಂದಂತೆ ಸಹದೇವನನ್ನು ಸಮೀಪಿಸಿದನು.

ಅಭಿವಾದ್ಯ ತತೋ ರಾಜನ್ ಸಹದೇವಂ ಘಟೋತ್ಕಚಃ ।
ಪ್ರಹ್ವಃ ಕೃತಾಂಜಲಿಸ್ತಸ್ಥೌ ಕಿಂ ಕಾರ್ಯಮಿತಿ ಚಾಬ್ರವೀತ್ ॥೧೨೫॥

ರಾಜನೇ! ಅನಂತರ ಘಟೋತ್ಕಚನು ಸಹದೇವನಿಗೆ ನಮಸ್ಕರಿಸಿ ವಿನಯದಿಂದ ಬಾಗಿ ಕೈಗಳನ್ನು ಮುಗಿದುನಿಂತು ಏನು ಕಾರ್ಯ ಎಂದು ಕೇಳಿದನು.

ತಂ ಮೇರುಶಿಖಿರಾಕಾರಮಾಗತಂ ಪಾಂಡುನಂದನಃ ।
ಸಂಪರಿಷ್ವಜ್ಯ ಬಾಹುಭ್ಯಾಂ ಮೂರ್ಧ್ನ್ಯುಪಾಘ್ರಾಯ ಚಾಸಕೃತ್ ।
ಪೂಜಯಿತ್ವಾ ಸಹಾಮಾತ್ಯಃ ಪ್ರೀತೋ ವಾಕ್ಯಮುವಾಚ ಹ ॥೧೨೬॥

ಮೇರುಶಿಖರದಂತೆ ಉನ್ನತವಾಗಿದ್ದ ಆಗಮಿಸಿದ ಆ ಘಟೋತ್ಕಚನನ್ನು ಪಾಂಡುನಂದನನಾದ ಸಹದೇವನು ಬಾಹುಗಳಿಂದ ಆಲಿಂಗಿಸಿ ಶಿರಸ್ಸಿನಲ್ಲಿ ಅನೇಕ ಬಾರಿ ಆಘ್ರಾಣಿಸಿ ಅಮಾತ್ಯರ ಜೊತೆಯಲ್ಲಿ ಅವನನ್ನು ಸತ್ಕರಿಸಿ ಸಂತೋಷದಿಂದ ಅವನನ್ನು ಕುರಿತು ಹೇಳಿದನು.

ಗಚ್ಛ ಲಂಕಾಂ ಪುರೀಂ ವತ್ಸ ಕಾರಯನ್ ಮಮ ಶಾಸನಾತ್ ।
ತತ್ರ ದೃಷ್ಟ್ವಾ ಮಹಾತ್ಮಾನಂ ರಾಕ್ಷಸೇಂದ್ರಂ ವಿಭೀಷಣಮ್ ॥೧೨೭॥

ರತ್ನಾನಿ ರಾಜಸೂಯಾರ್ಥಂ ವಿವಿಧಾನಿ ಬಹೂನಿ ಚ ।
ಉಪಾದಾಯ ಚ ಸರ್ವಾಣಿ ಪ್ರತ್ಯಾಗಚ್ಛ ಮಹಾಬಲ ॥೧೨೮॥

ಮಹಾಬಲನಾದ ವತ್ಸನೇ! ನನ್ನ ಅಪ್ಪಣೆಯಂತೆ ಕಪ್ಪದ ಸಲುವಾಗಿ ಲಂಕಾಪಟ್ಟಣಕ್ಕೆ ಹೋಗಿ ಮಹಾತ್ಮನಾದ ರಾಕ್ಷಸೇಂದ್ರನಾದ ವಿಭೀಷಣನನ್ನು ನೋಡಿ ರಾಜಸೂಯಯಾಗಕ್ಕಾಗಿ ಬಹುವಿಧವಾದ ಅನೇಕ ರತ್ನಗಳನ್ನೆಲ್ಲಾ ತೆಗೆದುಕೊಂಡು ಬೇಗ ಹಿಂದಿರುಗು.

ಪಾಂಡವೇನೈವಮುಕ್ತಸ್ತು ಮುದಾ ಯುಕ್ತೋ ಘಟೋತ್ಕಚಃ ।
ತಥೇತ್ಯುಕ್ತ್ವಾ ಮಹಾರಾಜ ಪ್ರತಸ್ಥೇ ದಕ್ಷಿಣಾಂ ದಿಶಮ್ ॥೧೨೯॥

ಮಹಾರಾಜನೇ! ಸಹದೇವನಿಂದ ಹೀಗೆ ಹೇಳಲ್ಪಟ್ಟ ಘಟೋತ್ಕಚನು ಹಾಗೆಯೇ ಆಗಲಿ ಎಂದು ಹೇಳಿ ದಕ್ಷಿಣದಿಕ್ಕನ್ನು ಕುರಿತು ಹೋದನು.

ಯಯೌ ಪ್ರದಕ್ಷಿಣಂ ಕೃತ್ವಾ ಸಹದೇವಂ ಘಟೋತ್ಕಚಃ ।
ಲಂಕಾಮಭಿಮುಖೋ ರಾಜನ್ ಸಮುದ್ರಮವಲೋಕಯತ್ ॥೧೩೦॥

ಕೂರ್ಮಗ್ರಾಹಝಷಾಕೀರ್ಣಂ ನಕ್ರೈರ್ಮೀನೈಸ್ತಥಾऽಕುಲಮ್ ।
ಶುಕ್ತಿವ್ರಾತೈಃ ಸಮಾಕೀರ್ಣಂ ಶಂಖಾನಾಂ ನಿಚಯಾಕುಲಮ್ ॥೧೩೧॥

ರಾಜನೇ! ಘಟೋತ್ಕಚನು ಸಹದೇವನಿಗೆ ಪ್ರದಕ್ಷಣೆಯನ್ನು ಮಾಡಿ ಲಂಕೆಗೆ ಅಭಿಮುಖವಾಗಿ ಹೊರಟು ಆನೆ ತಿಮಿಂಗಲ ಮತ್ತು ಮೀನುಗಳಿಂದ ನಿಬಿಡವಾಗಿ ತುಂಬಿದ್ದ, ಶುಕ್ತಿಸಮೂಹಗಳಿಂದಲೂ ಶಂಖಗಳ ಸಮೂಹದಿಂದಲೂ ತುಂಬಿಕೊಂಡಿದ್ದ ಆ ಸಮುದ್ರವನ್ನು ಅವಲೋಕಿಸಿದನು.

ಸ ದೃಷ್ಟ್ವಾ ರಾಮಸೇತುಂ ಚ ಚಿಂತಯನ್ ರಾಮವಿಕ್ರಮಮ್ ।
ಪ್ರಣಮ್ಯ ತಮತಿಕ್ರಮ್ಯ ಯಾಮ್ಯಾಂ ವೇಲಾಮಲೋಕಯತ್ ।
ದದರ್ಶ ಲಂಕಾಂ ರಾಜೇಂದ್ರ ನಾಕಪೃಷ್ಠೋಪಮಾಂ ಶುಭಾಮ್॥೧೩೨॥

ರಾಜೇಂದ್ರನೇ! ರಾಮಸೇತುವನ್ನು ನೋಡಿ ರಾಮನ ಪರಾಕ್ರಮವನ್ನು ಸ್ಮರಿಸುತ್ತಾ ಆ ಸೇತುವಿಗೆ ನಮಸ್ಕರಿಸಿ ಅದನ್ನು ದಾಟಿ ದಕ್ಷಿಣದಿಕ್ಕಿನ ಕಡೆಯಲ್ಲಿ ನೋಡಿ ಸ್ವರ್ಗದಂತೆ ಶುಭವಾಗಿದ್ದ ಲಂಕಾಪಟ್ಟಣವನ್ನು ನೋಡಿದನು.

ಪ್ರಾಕಾರೇಣಾವೃತಾಂ ರಮ್ಯಾಂ ಶುಭದ್ವಾರೈಶ್ಚ ಶೋಭಿತಾಮ್ ।
ಪ್ರಾಸಾದೈರ್ಬಹುಸಾಹಸ್ರೈಃ ಶ್ವೇತರಕ್ತೈಶ್ಚ ಸಂಕುಲಾಮ್ ॥೧೩೩॥

ತಾಪನೀಯಗವಾಕ್ಷೈಶ್ಚ ಮುಕ್ತಾಜಾಲಾಂತರೇಣ ಚ ।
ಹೈಮರಾಜತಜಾಲೇನ ದಾಂತಜಾಲೈಶ್ಚ ಶೋಭಿತಾಮ್ ॥೧೩೪॥

ರಾಜನೇ! ಆಗ ಪರ್ವತಸದೃಶನಾಗಿ ಬರುತ್ತಿರುವ ಅವನನ್ನು ನೋಡಿ ಎಲ್ಲ ಜನರೂ ಸಿಂಹಕ್ಕೆ ಹೆದರಿದ ಕ್ಷುದ್ರಮೃಗಗಳಂತೆ ಓಡಿಹೋದರು. ಅವನು ಪುಲಸ್ತ್ಯರ ಬಳಿಗೆ ರಾವಣನು ಬಂದಂತೆ ಸಹದೇವನನ್ನು ಸಮೀಪಿಸಿದನು.

ಅಭಿವಾದ್ಯ ತತೋ ರಾಜನ್ ಸಹದೇವಂ ಘಟೋತ್ಕಚಃ ।
ಪ್ರಹ್ವಃ ಕೃತಾಂಜಲಿಸ್ತಸ್ಥೌ ಕಿಂ ಕಾರ್ಯಮಿತಿ ಚಾಬ್ರವೀತ್ ॥೧೨೫॥

ರಾಜನೇ! ಅನಂತರ ಘಟೋತ್ಕಚನು ಸಹದೇವನಿಗೆ ನಮಸ್ಕರಿಸಿ ವಿನಯದಿಂದ ಬಾಗಿ ಕೈಗಳನ್ನು ಮುಗಿದುನಿಂತು ಏನು ಕಾರ್ಯ ಎಂದು ಕೇಳಿದನು.

ತಂ ಮೇರುಶಿಖರಾಕಾರಮಾಗತಂ ಪಾಂಡುನಂದನಃ ।
ಸಂಪರಿಷ್ವಜ್ಯ ಬಾಹುಭ್ಯಾಂ ಮೂರ್ಧ್ನ್ಯುಪಾಘ್ರಾಯ ಚಾಸಕೃತ್ ।
ಪೂಜಯಿತ್ವಾ ಸಹಾಮಾತ್ಯಃ ಪ್ರೀತೋ ವಾಕ್ಯಮುವಾಚ ಹ ॥೧೨೬॥

ಮೇರುಶಿಖರದಂತೆ ಉನ್ನತವಾಗಿದ್ದ ಆಗಮಿಸಿದ ಆ ಘಟೋತ್ಕಚನನ್ನು ಪಾಂಡುನಂದನನಾದ ಸಹದೇವನು ಬಾಹುಗಳಿಂದ ಆಲಿಂಗಿಸಿ ಶಿರಸ್ಸಿನಲ್ಲಿ ಅನೇಕ ಬಾರಿ ಆಘ್ರಾಣಿಸಿ ಅಮಾತ್ಯರ ಜೊತೆಯಲ್ಲಿ ಅವನನ್ನು ಸತ್ಕರಿಸಿ ಸಂತೋಷದಿಂದ ಅವನನ್ನು ಕುರಿತು ಹೇಳಿದನು.

ಗಚ್ಛ ಲಂಕಾಂ ಪುರೀಂ ವತ್ಸ ಕಾರಯನ್ ಮಮ ಶಾಸನಾತ್ ।
ತತ್ರ ದೃಷ್ಟ್ವಾ ಮಹಾತ್ಮಾನಂ ರಾಕ್ಷಸೇಂದ್ರಂ ವಿಭೀಷಣಮ್ ॥೧೨೭॥

ರತ್ನಾನಿ ರಾಜಸೂಯಾರ್ಥಂ ವಿವಿಧಾನಿ ಬಹೂನಿ ಚ ।
ಉಪಾದಾಯ ಚ ಸರ್ವಾಣಿ ಪ್ರತ್ಯಾಗಚ್ಛ ಮಹಾಬಲ ॥೧೨೮॥

ಮಹಾಬಲನಾದ ವತ್ಸನೇ! ನನ್ನ ಅಪ್ಪಣೆಯಂತೆ ಕಪ್ಪದ ಸಲುವಾಗಿ ಲಂಕಾಪಟ್ಟಣಕ್ಕೆ ಹೋಗಿ ಮಹಾತ್ಮನಾದ ರಾಕ್ಷಸೇಂದ್ರನಾದ ವಿಭೀಷಣನನ್ನು ನೋಡಿ ರಾಜಸೂಯಯಾಗಕ್ಕಾಗಿ ಬಹುವಿಧವಾದ ಅನೇಕ ರತ್ನಗಳನ್ನೆಲ್ಲಾ ತೆಗೆದುಕೊಂಡು ಬೇಗ ಹಿಂದಿರುಗು.

ಪಾಂಡವೇನೈವಮುಕ್ತಸ್ತು ಮುದಾ ಯುಕ್ತೋ ಘಟೋತ್ಕಚಃ ।
ತಥೇತ್ಯುಕ್ತ್ವಾ ಮಹಾರಾಜ ಪ್ರತಸ್ಥೇ ದಕ್ಷಿಣಾಂ ದಿಶಮ್ ॥೧೨೯॥

ಮಹಾರಾಜನೇ! ಸಹದೇವನಿಂದ ಹೀಗೆ ಹೇಳಲ್ಪಟ್ಟ ಘಟೋತ್ಕಚನು ಹಾಗೆಯೇ ಆಗಲಿ ಎಂದು ಹೇಳಿ ದಕ್ಷಿಣದಿಕ್ಕನ್ನು ಕುರಿತು ಹೋದನು.

ಯಯೌ ಪ್ರದಕ್ಷಿಣಂ ಕೃತ್ವಾ ಸಹದೇವಂ ಘಟೋತ್ಕಚಃ ।
ಲಂಕಾಮಭಿಮುಖೋ ರಾಜನ್ ಸಮುದ್ರಮವಲೋಕಯತ್ ॥೧೩೦॥

ಕೂರ್ಮಗ್ರಾಹಝಷಾಕೀರ್ಣಂ ನಕ್ರೈರ್ಮೀನೈಸ್ತಥಾऽಕುಲಮ್ ।
ಶುಕ್ತಿವ್ರಾತೈಃ ಸಮಾಕೀರ್ಣಂ ಶಂಖಾನಾಂ ನಿಚಯಾಕುಲಮ್ ॥೧೩೧॥

ರಾಜನೇ! ಘಟೋತ್ಕಚನು ಸಹದೇವನಿಗೆ ಪ್ರದಕ್ಷಣೆಯನ್ನು ಮಾಡಿ ಲಂಕೆಗೆ ಅಭಿಮುಖವಾಗಿ ಹೊರಟು ಆನೆ ತಿಮಿಂಗಲ ಮತ್ತು ಮೀನುಗಳಿಂದ ನಿಬಿಡವಾಗಿ ತುಂಬಿದ್ದ, ಶುಕ್ತಿಸಮೂಹಗಳಿಂದಲೂ ಶಂಖಗಳ ಸಮೂಹದಿಂದಲೂ ತುಂಬಿಕೊಂಡಿದ್ದ ಆ ಸಮುದ್ರವನ್ನು ಅವಲೋಕಿಸಿದನು.

ಸ ದೃಷ್ಟ್ವಾ ರಾಮಸೇತುಂ ಚ ಚಿಂತಯನ್ ರಾಮವಿಕ್ರಮಮ್ ।
ಪ್ರಣಮ್ಯ ತಮತಿಕ್ರಮ್ಯ ಯಾಮ್ಯಾಂ ವೇಲಾಮಲೋಕಯತ್ ।
ದದರ್ಶ ಲಂಕಾಂ ರಾಜೇಂದ್ರ ನಾಕಪೃಷ್ಠೋಪಮಾಂ ಶುಭಾಮ್॥೧೩೨॥

ರಾಜೇಂದ್ರನೇ! ರಾಮಸೇತುವನ್ನು ನೋಡಿ ರಾಮನ ಪರಾಕ್ರಮವನ್ನು ಸ್ಮರಿಸುತ್ತಾ ಆ ಸೇತುವಿಗೆ ನಮಸ್ಕರಿಸಿ ಅದನ್ನು ದಾಟಿ ದಕ್ಷಿಣದಿಕ್ಕಿನ ಕಡೆಯಲ್ಲಿ ನೋಡಿ ಸ್ವರ್ಗದಂತೆ ಶುಭವಾಗಿದ್ದ ಲಂಕಾಪಟ್ಟಣವನ್ನು ನೋಡಿದನು.

ಪ್ರಾಕಾರೇಣಾವೃತಾಂ ರಮ್ಯಾಂ ಶುಭದ್ವಾರೈಶ್ಚ ಶೋಭಿತಾಮ್ ।
ಪ್ರಾಸಾದೈರ್ಬಹುಸಾಹಸ್ರೈಃ ಶ್ವೇತರಕ್ತೈಶ್ಚ ಸಂಕುಲಾಮ್ ॥೧೩೩॥

ತಾಪನೀಯಗವಾಕ್ಷೈಶ್ಚ ಮುಕ್ತಾಜಾಲಾಂತರೇಣ ಚ ।
ಹೈಮರಾಜತಜಾಲೇನ ದಾಂತಜಾಲೈಶ್ಚ ಶೋಭಿತಾಮ್ ॥೧೩೪॥

ಹರ್ಮ್ಯಗೋಪುರಸಂಬಾಧಾಂ ರುಗ್ಣತೋರಣಸಂಕುಲಾಮ್ ।
ದಿವ್ಯದುಂದುಭಿನಿರ್ಹ್ರಾದಾಮುದ್ಯಾನವನಶೋಭಿತಾಮ್ ॥೧೩೫॥

ಸರ್ವಕಾಲಫಲೈರ್ವೃಕ್ಷೈಃ ಪುಷ್ಪಿತೈರುಪಶೋಭಿತಾಮ್ ।
ಪುಷ್ಪಗಂಧೈಶ್ಚ ಸಂಕೀರ್ಣಾಂ ರಮಣೀಯಮಹಾಪಥಾಮ್ ॥೧೩೬॥

ನಾನಾರತ್ನೈಶ್ಚ ಸಂಪೂರ್ಣಾಮಿಂದ್ರಸ್ಯೇವಾಮರಾವತೀಮ್ ।
ವಿವೇಶ ಸ ಪುರೀಂ ಲಂಕಾಂ ರಾಕ್ಷಸೈಶ್ಚ ನಿಷೇವಿತಾಮ್ ॥೧೩೭॥

ಕೋಟೆಯ ಗೊಡೆಗಳಿಂದ ಆವೃತವಾಗಿದ್ದಂತಹ ಶುಭದ್ವಾರಗಳಿಂದ ಕೂಡಿದ್ದಂತಹ ಮನೋಹರವಾಗಿದ್ದಂತಹ ಬಿಳಿಯ ಮತ್ತು ಕೆಂಪು ಬಣ್ಣಗಳಿಂದ ಕೂಡಿದ್ದ, ಸಹಸ್ರಾರು ಪ್ರಾಸಾದಗಳಿಂದ ನಿಬಿಡವಾಗಿದ್ದಂತಹ, ಸೂರ್ಯನ ಪ್ರಕಾಶವನ್ನು ಒಳಗೆ ಬಿಡುವ ಗವಾಕ್ಷಿಗಳಿಂದಲೂ ಮುತ್ತಿನ ಗೊಂಚಲುಗಳಿಂದಲೂ ಚಿನ್ನ ಬೆಳ್ಳಿಸರಪಳಿಗಳಿಂದಲೂ ದಂತದ ಸರಪಳಿಗಳಿಂದಲೂ ಶೋಭಿತವಾದ ಮನೆಗಳನ್ನುಳ್ಳ, ಪ್ರಾಸಾದಗಳು ಮತ್ತು ಗೋಪುರಗಳಿಂದ ನಿಬಿಡವಾಂದತಹ ಚಿನ್ನದ ತೋರಣಗಳಿಂದ ನಿಬಿಡವಾದಂತಹ ದಿವ್ಯದುಂದುಭಿ ನಾದದಿಂದ ಕೂಡಿದಂತಹ ಎಲ್ಲ ಕಾಲಗಳಲ್ಲಿಯೂ ಫಲಪುಷ್ಪಗಳನ್ನು ಕೊಡುವ ವೃಕ್ಷಗಳನ್ನುಳ್ಳ ಉದ್ಯಾನವನಗಳಿಂದ ಶೋಭಿತವಾದಂತಹ ದಿವ್ಯಸೌರಭದಿಂದ ಕೂಡಿದಂತಹ ಸುಂದರವಾದ ಮಹಾಮಾರ್ಗಗಳನ್ನು ಹೊಂದಿದ್ದಂತಹ ಅನೇಕ ರತ್ನಗಳಿಂದ ಪೂರ್ಣವಾದಂತಹ ಇಂದ್ರನ ಅಮರಾವತಿಯಂತಿದ್ದಂತಹ ರಾಕ್ಷಸರಿಂದ ಸೇವಿತವಾದ ಆ ಲಂಕಾಪಟ್ಟಣವನ್ನು ಪ್ರವೇಶಿಸಿದನು.

ದದರ್ಶ ರಾಕ್ಷಸವ್ರಾತಾನ್ ಶೂಲಪ್ರಾಸಧರಾನ್ ಬಹೂನ್ ।
ನಾನಾವೇಷಧರಾನ್ ರೂಕ್ಷಾನ್ ನಾರೀಶ್ಚ ಪ್ರಿಯದರ್ಶನಾಃ ॥೧೩೮॥

ದಿವ್ಯಮಾಲ್ಯಾಂಬರಧರಾ ದಿವ್ಯಾಭರಣಭೂಷಿತಾಃ ।
ಮದರಕ್ತಾಂತನಯನಾಃ ಪೀನಶ್ರೋಣಿಪಯೋಧರಾಃ ॥೧೩೯॥

ಅವನು ಶೂಲಪ್ರಾಸಗಳನ್ನು ಧರಿಸಿದ ನಾನಾವಿಧವಾದ ವೇಶಗಳನ್ನು ಧರಿಸಿದ ಕ್ರೂರರಾದ ರಾಕ್ಷಸ ಸಮೂಹಗಳನ್ನು ದಿವ್ಯಮಾಲ್ಯಾಂಭರಗಳನ್ನೂ ಧರಿಸಿದ ದಿವ್ಯಭರಣಭೂಷಿತರಾದ ಮಧದಿಂದ ಕೆಂಪಾದ ಕಣ್ಣಂಚುಳ್ಳವರಾದ ಪೀನ ನಿತಂಬ ಮತ್ತು ಪಯೋಧರಗಳನ್ನು ಹೊಂದಿದ ಸುಂದರಿಯರಾದ ಸ್ತ್ರೀಯರನ್ನೂ ನೋಡಿದನು.

ಭೈಮಸೇನಿಂ ತತೋ ದೃಷ್ಟ್ವಾ ಹೃಷ್ಟಾಸ್ತೇ ವಿಸ್ಮಯಂ ಗತಾಃ ।
ಆಸಸಾದ ಗೃಹಂ ರಾಜ್ಞ ಇಂದ್ರಸ್ಯ ಸದನೋಪಮಮ್ ।
ಸ ದ್ವಾರಪಾಲಮಾಸಾದ್ಯ ವಾಕ್ಯಮೇತದುವಾಚ ಹ ॥೧೪೦॥

ಭೀಮಸೇನನ ಪುತ್ರನಾದ ಘಟೋತ್ಕಚನನ್ನು ನೋಡಿದ ಅವರೆಲ್ಲರೂ ಸಂತೋಷದಿಂದಲೂ ವಿಸ್ಮಯದಿಂದಲೂ ಕೂಡಿದವರಾದರು. ಅವನು ಇಂದ್ರನ ಅರಮನೆಯಂತಿದ್ದ ರಾಜನ ಅರಮನೆಯನ್ನು ತಲುಪಿ ದ್ವಾರಪಾಲಕನನ್ನು ಸಮೀಪಿಸಿ ಈ ಮಾತನ್ನು ಆಡಿದನು.

ಕುರೂಣಾಮೃಷಭೋ ರಾಜಾ ಪಾಂಡುರ್ನಾಮ ಮಹಾಬಲಃ ।
ಕನೀಯಾಂಸ್ತಸ್ಯ ದಾಯಾದಃ ಸಹದೇವ ಇತಿ ಶ್ರುತಃ ॥೧೪೧॥

ತೇನಾಹಂ ಪ್ರೇಷಿತೋ ದೂತಃ ಕರಾರ್ಥಂ ಕೌರವಸ್ಯ ಚ ।
ದ್ರಷ್ಟುಮಿಚ್ಛಾಮಿ ರಾಜೇಂದ್ರಂ ತ್ವಂ ಕ್ಷಿಪ್ರಂ ಮಾಂ ನಿವೇದಯ ॥೧೪೨॥

ಕುರುಶ್ರೇಷ್ಠನಾದ ಪಾಂಡು ಎಂಬ ಮಹಾಬಲಿಷ್ಠನಾದ ರಾಜನಿದ್ದನು. ಅವನ ಕಿರಿಯಮಗನು ಸಹದೇವನೆಂದು ಪ್ರಸಿದ್ಧನಾಗಿದ್ದಾನೆ. ಧರ್ಮರಾಜನಸಲುವಾಗಿ ಕಪ್ಪವನ್ನು ತರಲು ಅವನು ನನ್ನನ್ನು ದೂತನನ್ನಾಗಿ ಕಳುಹಿಸಿದ್ದಾನೆ. ನಾನು ರಾಜೇಂದ್ರನನ್ನು ನೋಡಲು ಬಯಸುತ್ತೇನೆ. ನೀನು ಶೀಘ್ರವಾಗಿ ನನ್ನನ್ನು ರಾಜನಿಗೆ ನಿವೇದಿಸು.

ತಸ್ಯ ತದ್ವಚನಂ ಶ್ರುತ್ವಾ ದ್ವಾರಪಾಲೋ ಮಹೀಪತೇಃ ।
ತಥೇತ್ಯುಕ್ತ್ವಾ ವಿವೇಶಾಥ ಭವನಂ ಸ ನಿವೇದಕಃ ।
ಸಾಂಜಲಿಃ ಸ ಸಮಾಚಷ್ಟ ಸರ್ವಾಂ ದೂತಗಿರಂ ತದಾ ॥೧೪೩॥

ಅವನ ಮಾತನ್ನು ಕೇಳಿ ರಾಜನ ದ್ವಾರಪಾಲಕನು ಹಾಗೆಯೇ ಆಗಲಿ ಎಂದು ಹೇಳಿ ರಾಜಭವನದ ಒಳಗೆ ಪ್ರವೇಶಿಸಿ ನಿವೇದನಕಾರ್ಯವನ್ನು ಮಾಡುವ ಅವನು ಕೈಗಳನ್ನು ಮಗಿದು ಆ ದೂತವಾಕ್ಯಗಳನ್ನೆಲ್ಲಾ ಹೇಳಿದನು.

ದ್ವಾರಪಾಲವಚಃ ಶ್ರುತ್ವಾ ರಾಕ್ಷಸೇಂದ್ರೋ ವಿಭೀಷಣಃ ।
ಉವಾಚ ವಾಕ್ಯಂ ಧರ್ಮಾತ್ಮಾ ಸಮೀಪಂ ಮೇ ಪ್ರವೇಶ್ಯತಾಮ್ ॥

ದ್ವಾರಪಾಲಕನ ಮಾತನ್ನು ಕೇಳಿದ ಧರ್ಮಾತ್ಮನಾದ ರಾಕ್ಷಸೇಂದ್ರನಾದ ವಿಭೀಷಣನು ನನ್ನ ಬಳಿಗೆ ಅವನನ್ನು ಪ್ರವೇಶಿಸು ಎಂಬ ಮಾತನ್ನು ಹೇಳಿದನು.

ಏವಮುಕ್ತಸ್ತು ರಾಜ್ಞಾ ಸ ಧರ್ಮಜ್ಞೇನ ಮಹಾತ್ಮನಾ ।
ಅಥ ನಿಷ್ಕಮ್ಯ ಸಂಭ್ರಾಂತೋ ದ್ವಾಃಸ್ಥೋ ಹೈಡಿಂಬಮಬ್ರವೀತ್ ॥೧೪೫॥

ಧರ್ಮಜ್ಞನೂ ಮಹಾತ್ಮನೂ ಆದ ವಿಭೀಷಣನಿಂದ ಹೀಗೆ ಹೇಳಲ್ಪಟ್ಟ ದ್ವಾರಪಾಲಕನು ಹೊರಗೆ ಬಂದು ಸಂಭ್ರಾಂತನಾಗಿ ಘಟೋತ್ಕಚನನ್ನು ಕುರಿತು ಹೇಳಿದನು.

ಏಹಿ ದೂತ ನೃಪಂ ದ್ರಷ್ಟುಂ ಕ್ಷಿಪ್ರಂ ಪ್ರವಿಶ ಚ ಸ್ವಯಮ್ ।
ದ್ವಾರಪಾಲವಚಃ ಶ್ರುತ್ವಾ ಪ್ರವಿವೇಶ ಘಟೋತ್ಕಚಃ ।
ಸ ಪ್ರವಿಶ್ಯ ದದರ್ಶಾಥ ರಾಕ್ಷಸೇಂದ್ರಸ್ಯ ಮಂದಿರಮ್ ॥೧೪೬॥

ದೂತನೇ ರಾಜನನ್ನು ನೋಡಲು ಬೇಗ ಬಾ. ನೀನೇ ಬೇಗ ಪ್ರವೇಶಮಾಡು. ದ್ವಾರಪಾಲಕನ ಈ ಮಾತನ್ನು ಕೇಳಿದ ಘಟೋತ್ಕಚನು ರಾಕ್ಷಸೇಂದ್ರನ ಮಂದಿರವನ್ನು ಪ್ರವೇಶಿಸಿ ಅದರ ವೈಭವವನ್ನು ನೋಡಿದನು.

ತತಃ ಕೈಲಾಸಸಂಕಾಶಂ ತಪ್ತಕಾಂಚನತೋರಣಮ್ ।
ಪ್ರಾಕಾರೇಣ ಪರಿಕ್ಷಿಪ್ತಂ ಗೋಪುರೈಶ್ಚಾಪಿ ಶೋಭಿತಮ್ ।
ಹರ್ಮ್ಯಪ್ರಾಸಾದಸಂಬಾಧಂ ನಾನಾರತ್ನಸಮನ್ವಿತಮ್ ॥೧೪೭॥

ಕಾಂಚನೈಸ್ತಾಪನೀಯೈಶ್ಚ ಸ್ಫಾಟಿಕೈ ರಾಜತೈರಪಿ ।
ವಜ್ರವೈಡೂರ್ಯಗರ್ಭೈಶ್ಚ ಸ್ತಂಭೈರ್ದೃಷ್ಟಿಮನೋಹರೈಃ ॥೧೪೮॥

ನಾನಾಧ್ವಜಪತಾಕಾಭಿಃ ಸುವರ್ಣಾಭಿಶ್ಚ ಚಿತ್ರಿತಮ್ ।
ಚಿತ್ರಮಾಲ್ಯಾವೃತಂ ರಮ್ಯಂ ತಪ್ತಕಾಂಚನವೇದಿಕಮ್ ॥೧೪೯॥

ಆಗ ಕೈಲಾಸದಂತಿದ್ದ ತಪ್ತಸುವರ್ಣತೋರಣಗಳಿಂದ ಕೂಡಿದ್ದ ಎತ್ತರವಾದ ಪ್ರಾಕಾರಗಳಿಂದ ಸುತ್ತುವರಿಯಲ್ಪಟ್ಟ, ಗೋಪುರಗಳಿಂದ ಶೋಭಿತವಾದ, ನಾನಾರತ್ನದಸಮನ್ವಿತವಾದ ಹರ್ಮ್ಯಪ್ರಾಸಾದಗಳಿಂದಲೂ ನಿಬಿಡವಾದ

ಸುವರ್ಣಮಯವಾದ ಸ್ಪಟಿಕಮಯವಾದ ಮತ್ತು ರಜತಮಯವಾದ ಕಿಟಕಿಗಳನ್ನು ಹೊಂದಿದ್ದ, ವಜ್ರವೈಡೂರ್ಯಗಳನ್ನು ಮೆಟ್ಟಿದ ನಯನಮನೋಹರವಾದ ಸ್ತಂಭಗಳಿಂದ ಕೂಡಿದ ಸುವರ್ಣಮಯವಾದ ಅನೇಕ ಧ್ವಜಪತಾಕೆಗಳಿಂದ ವಿಚಿತ್ರವಾಗಿದ್ದ ಚಿತ್ರವಾದ ಮೂಲೆಗಳಿಂದ ಅಲಂಕೃತವಾಗಿದ್ದಂತಹ ಮನೋಹರವಾಗಿದ್ದಂತಹ, ಪುಟವಿಟ್ಟ ಚಿನ್ನದ ವೇದಿಕೆಯನ್ನು ಹೊಂದಿದ್ದಂತಹ (ಆ ಅರಮನೆಯ ವೈಭವವನ್ನು ನೋಡಿದನು)

ತಾನ್ ದೃಷ್ಟ್ವಾ ತತ್ರ ಸರ್ವಾನ್ ಸ ಭೈಮಸೇನಿರ್ಮನೋರಮಾನ್ ।
ಪ್ರವಿಶನ್ನೇವ ಹೈಡಿಂಬಃ ಶುಶ್ರಾವ ಮುರಜಸ್ವನಮ್ ॥೧೫೦॥

ತಂತ್ರೀಗೀತಸಮಾಕೀರ್ಣಂ ಸಮತಾಳಮಿತಾಕ್ಷರಮ್ ।
ದಿವ್ಯದುಂದುಭಿನಿರ್ಹ್ರಾದಂ ವಾದಿತ್ರಶತಸಂಕುಲಮ್ ।
ಸ ಶ್ರುತ್ವಾ ಮಧುರಂ ಶಬ್ದಂ ಪ್ರೀತಿಮಾನಭವತ್ ತದಾ ॥೧೫೧॥

ಭೀಮಸೇನನ ಮಗನಾದ ಅವನು ಮನೋಹರವಾದ ಆ ಎಲ್ಲ ವಸ್ತುಗಳನ್ನು ನೋಡುತ್ತಾ ಒಳಗೆ ಪ್ರವೇಶಿಸುತ್ತಿದ್ದಂತೆಯೇ ಮುರಜವಾದ್ಯದ ಮಧುರವಾದ ಸ್ವರವನ್ನು ಕೇಳಿದನು. ತಂತಿಗೀತೆಗಳಿಂದ ಕೂಡಿದಂತಹ, ಸಮತಾಳದಿಂದಲೂ ಮಿತಾಕ್ಷರಗಳಿಂದಲೂ ಕೂಡಿದ ಮುರುಜಸ್ವರವನ್ನು ದಿವ್ಯದುಂದುಂಭಿನಾದವನ್ನೂ ನೂರಾರು ವಾದ್ಯಗಳ ಶಬ್ದಗಳ ಮಧುರ ಸಂಕುಲವನ್ನೂ ಕೇಳಿದ ಅವನು ಸಂತೋಷವನ್ನು ಹೊಂದಿದನು.

ತತೋ ವಿಗಾಹ್ಯ ಹೈಡಿಂಬೋ ಬಹುಕಕ್ಷ್ಯಾಂ ಮನೋರಮಾಮ್।
ಸ ದದರ್ಶ ಮಹಾತ್ಮಾನಂ ದ್ವಾಃಸ್ಥೇನ ಭರತರ್ಷಭ ॥೧೫೨॥

ತಂ ವಿಭೀಷಣಮಾಸೀನಂ ಕಾಂಚನೇ ಪರಮಾಸನೇ ।
ದಿವ್ಯೇ ಭಾಸ್ಕರಸಂಕಾಶೇ ಮುಕ್ತಾಮಣಿವಿಭೂಷಿತೇ ॥೧೫೩॥

ಭರತರ್ಷಭನೇ! ಅನಂತರ ಹಿಡಿಂಬೆಯ ಮಗನಾದ ಘಟೋತ್ಕಚನು ಮನೋಹರವಾದ ಅನೇಕ ಮಜಲುಗಳನ್ನು ದಾಟಿ ದ್ವಾರಪಾಲಕನ ಸಹಾಯದಿಂದ ದಿವ್ಯವಾದ ಸೂರ್ಯನಂತೆ ಹೊಳೆಯುವ ಮುಕ್ತಾಮಣಿಗಳಿಂದ ಅಲಂಕೃತವಾದ

ಸುವರ್ಣಮಯವಾದ ಶ್ರೇಷ್ಠವಾದ ಆಸನದಲ್ಲಿ ಕುಳಿತಿದ್ದಂತಹ ಮಹಾತ್ಮನಾದ ವಿಭೀಷಣನನ್ನು ನೋಡಿದನು.

ದಿವ್ಯಾಭರಣಚಿತ್ರಾಂಗಂ ದಿವ್ಯರೂಪಧರಂ ವಿಭುಮ್ ।
ದಿವ್ಯಮಾಲ್ಯಾಂಬರಧರಂ ದಿವ್ಯಗಂಧೋಕ್ಷಿತಂ ಶುಭಮ್ ॥೧೫೪॥

ವಿಭ್ರಾಜಮಾನಂ ವಪುಷಾ ಸೂರ್ಯವೈಶ್ವಾನರಪ್ರಭಮ್ ।
ಉಪೋಪವಿಷ್ಟಂ ಸಚಿವೈರ್ದೇವೈರಿವ ಶತಕ್ರತುಮ್ ॥೧೫೫॥

ಯಕ್ಷೈರ್ಮಹಾರಥೈರ್ದಿವ್ಯೈರ್ನಾರೀಭಿಃ ಪ್ರಿಯದರ್ಶನೈಃ ।
ಗೀತೈರ್ಮಂಗಲಯುಕ್ತಾಭಿಃ ಪೂಜ್ಯಮಾನಂ ಯಥಾವಿಧಿ ॥೧೫೬॥

ಚಾಮರೇ ವ್ಯಜನೇ ಚಾಗ್ರ್ಯೇ ಹೇಮದಂಡೇ ಮಹಾಧನೇ ।
ಗೃಹೀತೇ ವರನಾರೀಭ್ಯಾಂ ಧೂಯಮಾನೇ ಚ ಮೂರ್ಧನಿ ॥೧೫೭॥

ಅರ್ಚಿಷ್ಮಂತಂ ಶ್ರಿಯಾ ಜುಷ್ಟಂ ಕುಬೇರವರುಣೋಪಮಮ್ ।
ಧರ್ಮೇ ಚೈವ ಸ್ಥಿತಂ ನಿತ್ಯಮದ್ಭುತಂ ರಾಕ್ಷಸೇಶ್ವರಮ್ ॥೧೫೮॥

ರಾಮಮಿಕ್ಷ್ವಾಕುನಾಥಂ ವೈ ಸ್ಮರಂತಂ ಮನಸಾ ಸದಾ ।
ಪ್ರಹಸ್ತಸ್ಥೌ ಮಹಾವೀರ್ಯಃ ಶಕ್ರಂ ಚಿತ್ರರಥೋ ಯಥಾ ॥೧೫೯॥

ದಿವ್ಯಾಭರಣಗಳಿಂದ ಭೂಷಿತವಾದ ಅಂಗವುಳ್ಳವನೂ ದಿವ್ಯರೂಪವನ್ನು ಧರಿಸಿದನೂ ವಿಭುವೂ ದಿವ್ಯಮಾಲೆಗಳನ್ನು ಮತ್ತು ದಿವ್ಯವಸ್ತ್ರಗಳನ್ನು ಧರಿಸಿದವನೂ ದಿವ್ಯಗಂಧದಿಂದ ಲೇಪಿತನೂ ಶುಭನೂ ಶರೀರದಿಂದ ಹೊಳೆಯುತ್ತಾ ಸೂರ್ಯಾಗ್ನಿಗಳ ಕಾಂತಿಯುಳ್ಳವನೂ ದೇವತೆಗಳಿಂದ ಕೂಡಿದ ಇಂದ್ರನಂತೆ ಸಮೀಪದಲ್ಲಿ ಕುಳಿತ ಸಚಿವರನ್ನು ಉಳ್ಳವನೂ ಮಹಾರಥರಾದ ದಿವ್ಯಯಕ್ಷರಿಂದಲೂ ಸುಂದರಿಯರಾದ ಮಂಗಳಗೀತಯುಕ್ತರಾದ ನಾರಿಯರಿಂದಲೂ ವಿಧಿವತ್ತಾಗಿ ಪೂಜಿಸಲ್ಪಡುವವನೂ ಶ್ರೇಷ್ಠವಾದ ನಾರಿಯರಿಬ್ಬರಿಂದ ಹೇಮದಂಡವುಳ್ಳ ಬೆಲೆಬಾಳುವ ಶ್ರೇಷ್ಠವಾದ ವ್ಯಜನ ಮತ್ತು ಚಾಮರಗಳಿಂದ ತಲೆಯಮೇಲೆ ಬೀಸಲ್ಪಡುವವನೂ ಸಂಪತ್ತಿನಿಂದ ಕೂಡಿದವನೂ, ಕಾಂತಿಮಂತನೂ, ಕುಬೇರ ಮತ್ತು ವರುಣನಿಗೆ ಸದೃಶನಾದವನೂ ಯಾವಾಗಲೂ ಧರ್ಮದಲ್ಲಿ ನಿರತನಾದವನೂ, ರಾಕ್ಷಸೇಶ್ವರನೂ,

ಇಕ್ಷ್ವಾಕುವಂಶನಾಥನಾದ ರಾಮನನ್ನು ಮನಸ್ಸಿನಲ್ಲಿ ಯಾವಾಗಲೂ ಸ್ಮರಿಸುವವನೂ ಆದ ವಿಭೀಷಣನನ್ನು ನೋಡಿ ಮಹಾಪರಾಕ್ರಮಿಯಾದ ಘಟೋತ್ಕಚನು ಇಂದ್ರನ ಬಳಿ ಚಿತ್ರರಥನು ನಿಂತಂತೆ ವಿನಯದಿಂದ ಬಾಗಿನಿಂತನು.

ತಂ ದೂತಮಾಗತಂ ದೃಷ್ಟ್ವಾ ರಾಕ್ಷಸೇಂದ್ರೋ ವಿಭೀಷಣಃ ।
ಪೂಜಯಿತ್ವಾ ಯಥಾನ್ಯಾಯಂ ಸಾಂತ್ವಪೂರ್ವಂ ವಚೋಽಬ್ರವೀತ್ ॥

ರಾಕ್ಷಸೇಂದ್ರನಾದ ವಿಭೀಷಣನು ದೂತನಾಗಿ ಬಂದ ಅವನನ್ನು ನೋಡಿ ವಿಧಿವತ್ತಾಗಿ ಸತ್ಕರಿಸಿ ಸಮಾಧಾನದಿಂದ ಈ ಮಾತುಗಳನ್ನು ಆಡಿದನು.

ಕಸ್ಯ ವಂಶೇ ನು ಸಂಜಾತಃ ಕರಮಿಚ್ಛನ್ ಮಹೀಪತಿಃ ।
ತಸ್ಯಾನುಜಾನ್ ಸಮಸ್ತಾಂಶ್ಚ ಪುರಂ ದೇಶಂ ಚ ತಸ್ಯ ವೈ ॥೧೬೧॥

ತ್ವಾಂ ಚ ಕಾರ್ಯಂ ಚ ತತ್ ಸರ್ವಂ ಶ್ರೋತುಮಿಚ್ಛಾಮಿ ತತ್ತ್ವತಃ ।
ವಿಸ್ತರೇಣ ಮಮ ಬ್ರೂಹಿ ಸರ್ವಾನೇತಾನ್ ಪೃಥಕ್ ಪೃಥಕ್ ॥೧೬೨॥

ಕಪ್ಪವನ್ನು ಬಯಸುವ ರಾಜನು ಯಾವ ವಂಶದಲ್ಲಿ ಜನಿಸಿದವನು? ಅವನ ಎಲ್ಲಾ ಸಹೋದರರನ್ನೂ ರಾಜಧಾನಿಯನ್ನೂ ಮತ್ತು ದೇಶವನ್ನೂ ಮತ್ತು ನೀನು ಯಾರು ಎಂಬುದನ್ನೂ ಯಾವ ಕಾರ್ಯಕ್ಕಾಗಿ ಇಲ್ಲಿಗೆ ಬಂದಿದ್ದೀಯೆ ಎಂಬುದನ್ನೂ ನಾನು ಯಥಾರ್ಥವಾಗಿ ಕೇಳಲು ಬಯಸುತ್ತೇನೆ. ಈ ಎಲ್ಲ ವಿಷಯಗಳನ್ನೂ ನನಗೆ ಬೇರೆ ಬೇರೆಯಾಗಿ ಹೇಳು.

ಏವಮುಕ್ತಸ್ತು ಹೈಡಿಂಬಃ ಪೌಲಸ್ತ್ಯೇನ ಮಹಾತ್ಮನಾ ।
ಕೃತಾಂಜಲಿರುವಾಚಾಥ ಸಾಂತ್ವಯನ್ ರಾಕ್ಷಸಾಧಿಪಮ್ ॥೧೬೩॥

ಹಿಡಿಂಬೆಯ ಮಗನಾದ ಘಟೋತ್ಕಚನು ಪೌಲಸ್ತ್ಯಕುಲ ಸಂಜಾತನಾದ ಮಹಾತ್ಮನಾದ ವಿಭೀಷಣನಿಂದ ಹೇಳಲ್ಪಟ್ಟವನಾಗಿ ಕೈಗಳನ್ನು ಮುಗಿದು ರಾಕ್ಷಸೇಶ್ವರನನ್ನು ಕುರಿತು ಸಮಾಧಾನಪಡಿಸುತ್ತಾ ಈ ಮಾತುಗಳನ್ನು ಆಡಿದನು.

ಸೋಮಸ್ಯ ವಂಶೇ ರಾಜಾऽऽಸೀತ್ ಪಾಂಡುರ್ನಾಮ ಮಹಾರಥಃ ।
ಪಾಂಡೋಃ ಪುತ್ರಾಸ್ತು ಪಂಚಾಸನ್ ಶಕ್ರತುಲ್ಯಪರಾಕ್ರಮಾಃ ॥೧೬೪॥

ಚಂದ್ರವಂಶದಲ್ಲಿ ಮಹಾರಥನಾದ ಪಾಂಡುವೆಂಬ ರಾಜನಿದ್ದನು ಅವನಿಗೆ ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಐವರು ಪುತ್ರರಿದ್ದರು.

ತೇಷಾಂ ಜ್ಯೇಷ್ಠಸ್ತು ನಾಮ್ನಾऽಭೂದ್ ಧರ್ಮಪುತ್ರ ಇತಿ ಶ್ರುತಃ ।
ಅಜಾತಶತ್ರುರ್ಧರ್ಮಾತ್ಮಾ ಧರ್ಮೋ ವಿಗ್ರಹವಾನಿವ ॥೧೬೫॥

ಅವರಲ್ಲಿ ಹಿರಿಯವನಾದ ಯುಧಿಷ್ಠಿರನು ಧರ್ಮಪುತ್ರನೆಂದು ಪ್ರಖ್ಯಾತನಾದನು. ಅವನು ಧರ್ಮಾತ್ಮನು ಅಜಾತಶತ್ರುವು ಧರ್ಮವೇ ಶರೀರವನ್ನು ಧರಿಸಿದಂತೆ ಇದ್ದವನು.

ತತೋ ಯುಧಿಷ್ಠಿರೋ ರಾಜಾ ಪ್ರಾಪ್ಯ ರಾಜ್ಯಮಪಾಲಯತ್ ।
ಗಂಗಾಯಾ ದಕ್ಷಿಣೇ ತೀರೇ ನಗರೇ ನಾಗಸಾಹ್ವಯೇ ॥೧೬೬॥

ಆಗ ಯುಧಿಷ್ಠಿರರಾಜನು ರಾಜ್ಯವನ್ನು ಪಡೆದು ಗಂಗಾನದಿಯ ದಕ್ಷಿಣ ತೀರದಲ್ಲಿ ಹಸ್ತಿನಪುರದಲ್ಲಿ ರಾಜ್ಯವಾಳುತ್ತಿದ್ದನು.

ತದ್ದತ್ತ್ವಾ ಧೃತರಾಷ್ಟ್ರಾಯ ಶಕ್ರಪ್ರಸ್ಥಂ ಯಯೌ ತದಾ ।
ಭ್ರಾತೃಭಿಃ ಸಹ ರಾಜೇಂದ್ರ ಶಕ್ರಪ್ರಸ್ಥೇ ಪ್ರಮೋದತೇ ॥೧೬೭॥

ಅವನು ಆ ರಾಜ್ಯವನ್ನು ಧೃತರಾಷ್ಟ್ರನಿಗೆ ಕೊಟ್ಟು ಇಂದ್ರಪ್ರಸ್ಥಕ್ಕೆ ಹೊದನು. ರಾಜೇಂದ್ರನೇ! ಈಗ ಅವನು ಇಂದ್ರ ಪ್ರಸ್ಥದಲ್ಲಿಯೇ ಸುಖದಿಂದ ಇದ್ದಾನೆ.

ಗಂಗಾಯಮುನಯೋರ್ಮಧ್ಯೇ ತಾವುಭೌ ನಗರೋತ್ತಮೌ ।
ನಿತ್ಯಂ ಧರ್ಮೇ ಸ್ಥಿತೋ ರಾಜಾ ಶಕ್ರಪ್ರಸ್ಥೇ ಪ್ರಶಾಸತಿ ॥೧೬೮॥

ಆ ಎರಡು ನಗರಗಳು ಗಂಗಾಯಮುನಾನದಿಗಳ ಮಧ್ಯದಲ್ಲಿ ಇವೆ. ಯಾವಾಗಲೂ ಧರ್ಮವನ್ನೇ ಅನುಸರಿಸುವ ಯುಧಿಷ್ಠಿರನು ಇಂದ್ರಪ್ರಸ್ಥದಲ್ಲಿ ರಾಜ್ಯವಾಳುತ್ತಿದ್ದಾನೆ.

ತಸ್ಯಾನುಜೋ ಮಹಾಬಾಹುರ್ಭೀಮಸೇನ ಇತಿ ಶ್ರುತಃ ।
ಮಹಾತೇಜಾ ಮಹಾವೀರ್ಯಃ ಶಕ್ರತುಲ್ಯಪರಾಕ್ರಮಃ ॥೧೬೯॥

ಮಹಾಬಾಹುವಾದ ಅವನ ತಮ್ಮನಿಗೆ ಭೀಮಸೇನ ಎಂದು ಹೆಸರು ಅವನು ಮಹಾತೇಜಸ್ವಿಯು ಮಹಾಬಲವುಳ್ಳವನೂ ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳವನೂ ಆಗಿದ್ದಾನೆ.

ದಶನಾಗಸಹಸ್ರಾಣಾಂ ಬಲೇ ತುಲ್ಯಃ ಸ ಪಾಂಡವಃ ।
ತಸ್ಯಾನುಜೋಽರ್ಜುನೋ ನಾಮ ಮಹಾವೀರ್ಯಪರಾಕ್ರಮಃ ॥೧೭೦॥

ಪಾಂಡುಪುತ್ರನಾದ ಅವನು ಬಲದಲ್ಲಿ ಹತ್ತುಸಹಸ್ರ ಆನೆಗಳಿಗೆ ಸಮನಾಗಿದ್ದಾನೆ. ಅವನಿಗೆ ಅರ್ಜುನನೆಂಬ ಮಹಾವೀರ್ಯಪರಾಕ್ರಮಗಳುಳ್ಳ ತಮ್ಮನಿದ್ದಾನೆ.

ಸುಕುಮಾರೋ ಮಹಾಸತ್ತ್ವೋ ಲೋಕೇ ವೀರ್ಯೇಣ ವಿಶ್ರುತಃ ।
ಕಾರ್ತವೀರ್ಯಸಮೋ ವೀರ್ಯೇ ಸಾಗರಪ್ರತಿಮೋ ಬಲೇ ॥೧೭೧॥

ಅವನು ಸುಕುಮಾರನೂ ಮಹಾಸತ್ವಸಂಪನ್ನನೂ ಪರಾಕ್ರದಿಂದ ಲೋಕದಲ್ಲಿ ಪ್ರಸಿದ್ಧನೂ ಆಗಿದ್ದಾನೆ. ಅವನು ವಿಕ್ರಮದಲ್ಲಿ ಕಾರ್ತವೀರ್ಯನಿಗೆ ಸಮನೂ ಬಲದಲ್ಲಿ ಸಮುದ್ರಕ್ಕೆ ಸದೃಶನೂ ಆಗಿದ್ದಾನೆ.

ಜಾಮದಗ್ನ್ಯಸಮೋ ಹ್ಯಸ್ತ್ರೇ ಸಂಖೇ ರಾಮಸಮೋಽರ್ಜುನಃ ।
ರೂಪೇ ಶಕ್ರಸಮಃ ಪಾರ್ಥಸ್ತೇಜಸಾ ಭಾಸ್ಕರೋಪಮಃ ॥೧೭೨॥

ಕುಂತಿಯ ಮಗನಾದ ಅರ್ಜುನನು ಅಸ್ತ್ರದಲ್ಲಿ ಪರಶುರಾಮನಿಗೆ ಯುದ್ಧದಲ್ಲಿ ರಾಮನಿಗೆ ಸಮನು. ರೂಪದಲ್ಲಿ ಇಂದ್ರನಿಗೆ ಸಮನು. ತೇಜಸ್ಸಿನಲ್ಲಿ ಭಾಸ್ಕರನಿಗೆ ಸಮನಾಗಿದ್ದಾನೆ.

ದೇವದಾನವಗಂಧರ್ವೈಃ ಪಿಶಾಚೋರಗರಾಕ್ಷಸೈಃ ।
ಮಾನುಷೈಶ್ಚ ಸಮಸ್ತೈಶ್ಚ ಅಜೇಯಃ ಫಲ್ಗುನೋ ರಣೇ ॥೧೭೩॥

ಅರ್ಜುನನು ದೇವದಾನವಗಂಧರ್ವರಿಂದಲೂ ಪಿಶಾಚಸರ್ಪ- ರಾಕ್ಷಸರಿಂದಲೂ ಸಮಸ್ತರಾದ ಮನುಷ್ಯರಿಂದಲೂ ಯುದ್ಧದಲ್ಲಿ ಅಜೇಯನಾಗಿದ್ದಾನೆ.

ತೇನ ತತ್ ಖಾಂಡವಂ ದಾವಂ ತರ್ಪಿತಂ ಜಾತವೇದಸೇ ।
ಸಹಸಾ ತರ್ಪಯಿತ್ವಾ ತಂ ಶಕ್ರಂ ದೇವಗಣೈಃ ಸಹ ।
ಲಬ್ಧಾನ್ಯಸ್ತ್ರಾಣಿ ದಿವ್ಯಾನಿ ತರ್ಪಯಿತ್ವಾ ಹುತಾಶನಮ್ ॥೧೭೪॥

ಅವನು ಖಾಂಡವವನವನ್ನು ಅಗ್ನಿಗೆ ಕೊಟ್ಟು ಅಗ್ನಿಯನ್ನು ತೃಪ್ತಿಪಡಿಸಿದ್ದಾನೆ. ಅವನು ತನ್ನ ಬಲದಿಂದ ದೇವತೆಗಳ ಸಮೂಹದಿಂದ ಕೂಡಿದ ಇಂದ್ರನನ್ನು ಸಂತೋಷಪಡಿಸಿ ಅಗ್ನಿಯನ್ನು ಸಂತೋಷಪಡಿಸಿ, ದಿವ್ಯವಾದ ಅಸ್ತ್ರಗಳನ್ನು ಪಡೆದಿದ್ದಾನೆ.

ತೇನ ಲಬ್ಧಾ ಮಹಾರಾಜ ದುರ್ಲಭಾ ದೈವತೈರಪಿ ।
ವಾಸುದೇವಸ್ಯ ಭಗಿನೀ ಸುಭದ್ರಾ ನಾಮ ವಿಶ್ರುತಾ ॥೧೭೫॥

ಮಹಾರಾಜನೇ! ಅವನು ಪಡೆಯಲು ಅಸಾಧ್ಯವಾದ ವಾಸುದೇವನ ತಂಗಿಯಾದ ಸುಭದ್ರೆಯೆಂದು ಪ್ರಖ್ಯಾತಳಾದ ಸುಂದರಿಯನ್ನು ಪತ್ನಿಯನ್ನಾಗಿ ಪಡೆದಿದ್ದಾನೆ.

ಅರ್ಜುನಸ್ಯಾನುಜೋ ರಾಜನ್ ನಕುಲೇತಿ ಚ ವಿಶ್ರುತಃ ।
ದರ್ಶನೀಯತಮೋ ಲೋಕೇ ಮೂರ್ತಿಮಾನಿವ ಮನ್ಮಥಃ ॥೧೭೬॥

ರಾಜನೇ! ಅರ್ಜುನನ ತಮ್ಮನು ನಕುಲನೆಂದು ಪ್ರಖ್ಯಾತನಾಗಿದ್ದಾನೆ. ಅವನು ನೋಡಲು ಅತ್ಯಂತ ಸುಂದರ ಶರೀರವನ್ನು ಧರಿಸಿದ ಮನ್ಮಥನಂತೆ ಇದ್ದಾನೆ.

ತಸ್ಯಾನುಜೋ ಮಹಾತೇಜಾಃ ಸಹದೇವ ಇತಿ ಶ್ರುತಃ ।
ತೇನಾಹಂ ಪ್ರೇಷಿತೋ ರಾಜನ್ ಸಹದೇವೇನ ಮಾರಿಷ ॥೧೭೭॥

ಮಹಾತೇಜಸ್ವಿಯಾದ ಅವನ ತಮ್ಮನು ಸಹದೇವನೆಂಬ ಹೆಸರಿನಿಂದ ಪ್ರಖ್ಯಾತನಾಗಿದ್ದಾನೆ. ರಾಜನೇ! ನಾನು ಆ ಸಹದೇವನಿಂದ ಕಳುಹಿಸಲ್ಪಟ್ಟಿದ್ದೇನೆ.

ಅಹಂ ಘಟೋತ್ಕಚೋ ನಾಮ ಭೀಮಸೇನಸುತೋ ಬಲೀ ।
ಮಮ ಮಾತಾ ಮಹಾಭಾಗಾ ಹಿಡಿಂಬಾ ನಾಮ ರಾಕ್ಷಸೀ ।
ಪಾರ್ಥಾನಾಮುಪಕಾರಾರ್ಥಂ ಚರಾಮಿ ಪೃಥಿವೀಮಹಮ್ ॥೧೭೮॥

ನಾನು ಭೀಮಸೇನನ ಮಗನಾದ ಬಲಶಾಲಿಯಾದ ಘಟೋತ್ಕಚನೆಂಬುವನು. ನನ್ನ ತಾಯಿಯು ಮಹಾನುಭಾವಳಾದ ಹಿಡಿಂಬೆ ಎಂಬ ರಾಕ್ಷಸಿ. ಪಾಂಡವರಿಗೆ ಉಪಕಾರವನ್ನು ಮಾಡಲು ನಾನು ಭೂಮಿಯಮೇಲೆ ಸಂಚರಿಸುತ್ತಿದ್ದೇನೆ.

ಆಸೀತ್ ಪೃಥಿವ್ಯಾಃ ಸರ್ವಸ್ಯಾ ಮಹೀಪಾಲೋ ಯುಧಿಷ್ಠಿರಃ ।
ರಾಜಸೂಯಂ ಕ್ರತುಶ್ರೇಷ್ಠಮಾಹರ್ತುಮುಪಚಕ್ರಮೇ ॥೧೭೯॥

ಸಂದಿದೇಶ ಚ ಸ ಭ್ರಾತೄನ್ ಕರಾರ್ಥಂ ಸರ್ವತೋದಿಶಮ್ ।
ಉದೀಚೀಮರ್ಜುನಸ್ತೂರ್ಣಂ ಕರಾರ್ಥಂ ಸಮುಪಾಯಯೌ ॥೧೮೦॥

ಯುಧಿಷ್ಠಿರರಾಜನು ಎಲ್ಲಾ ಭೂಮಿಗೂ ಒಡೆಯನಾಗಿದ್ದನು. ಅವನು ಶ್ರೇಷ್ಠವಾದ ರಾಜಸೂಯಯಾಗವನ್ನು ಮಾಡಲು ಬಯಸಿ ತನ್ನ ತಮ್ಮಂದಿರನ್ನು ಕಪ್ಪಕಾಣಿಕೆಯ ಸಲುವಾಗಿ ಎಲ್ಲ ದಿಕ್ಕುಗಳಿಗೂ ಕಳುಹಿಸಿದ್ದಾನೆ. ಅರ್ಜುನನು ಕರಾರ್ಥವಾಗಿ ಉತ್ತರದಿಕ್ಕಿಗೆ ಜಾಗ್ರತೆಯಾಗಿ ಹೋಗಿದ್ದಾನೆ.

ಗತ್ವಾ ಶತಸಹಸ್ರಾಣಿ ಯೋಜನಾನಿ ಮಹಾಬಲಃ ।
ಜಿತ್ವಾ ಸರ್ವಾನ್ ನೃಪಾನ್ ಯುದ್ಧೇ ಹತ್ವಾ ಚ ತರಸಾ ವಶೀ ॥೧೮೧॥

ಸ್ವರ್ಗದ್ವಾರಮುಪಾಗಮ್ಯ ರತ್ನಾನ್ಯಾದಾಯ ವೈ ಭೃಶಮ್ ।
ಅಶ್ವಾಂಶ್ಚ ವಿವಿಧಾನ್ ದಿವ್ಯಾನ್ ಸರ್ವಮಾದಾಯ ಫಲ್ಗುನಃ ।
ಧನಂ ಬಹುವಿಧಂ ರಾಜನ್ ಧರ್ಮಪುತ್ರಾಯ ವೈ ದದೌ ॥೧೮೨॥

ಮಹಾಬಲನಾದ ಅವನು ನೂರುಸಾವಿರ ಯೋಜನಗಳನ್ನು ಪ್ರಯಾಣಮಾಡಿ ರಾಜರುಗಳನ್ನು ಯುದ್ಧದಲ್ಲಿ ಗೆದ್ದು, ಕೆಲವರನ್ನು ಕೊಂದು ಎಲ್ಲರನ್ನೂ ತನ್ನ ವಶಮಾಡಿಕೊಂಡು ಸ್ವರ್ಗದ್ವಾರಕ್ಕೆ ಹೋಗಿ ರತ್ನಗಳನ್ನೂ ದಿವ್ಯವಾದ ವಿವಿಧ ವಿಧವಾದ ಅಶ್ವಗಳನ್ನೂ ಮತ್ತು ಉಳಿದ ವಸ್ತುಗಳನ್ನೂ ತೆಗೆದುಕೊಂಡು ಬಂದು ಆ ಬಹುವಿಧವಾದ ಧನವನ್ನು ಯುಧಿಷ್ಠಿರನಿಗೆ ಕೊಟ್ಟಿದ್ದಾನೆ.

ಭೀಮಸೇನೋ ಹಿ ರಾಜೇಂದ್ರ ಜಿತ್ವಾ ಪ್ರಾಚೀಂ ದಿಶಂ ಬಲಾತ್।
ವಶೇ ಕೃತ್ವಾ ಮಹೀಪಾಲಾನ್ ಪಾಂಡವಾಯ ಧನಂ ದದೌ ।
ದಿಶಂ ಪ್ರತೀಚೀಂ ನಕುಲಃ ಕರಾರ್ಥಂ ಪ್ರಯಯೌ ತದಾ ॥೧೮೩॥

ರಾಜೇಂದ್ರನೇ! ಭೀಮಸೇನನು ತನ್ನ ಬಲದಿಂದ ಪೂರ್ವದಿಕ್ಕನ್ನು ಗೆದ್ದು ಎಲ್ಲ ರಾಜರುಗಳನ್ನೂ ವಶಪಡಿಸಿಕೊಂಡು ಧರ್ಮರಾಜನಿಗೆ ಧನವನ್ನು ತಂದು ಕೊಟ್ಟಿದ್ದಾನೆ. ನಕುಲನು ಕಪ್ಪದ ಸಲುವಾಗಿ ಆಗ ಪಶ್ಚಿಮದಿಕ್ಕಿಗೆ ಪ್ರಯಾಣಮಾಡಿದ್ದಾನೆ.

ಸಹದೇವೋ ದಿಶಂ ಯಾಮ್ಯಾಂ ಜಿತ್ವಾ ಸರ್ವಾನ್ ಮಹೀಕ್ಷಿತಃ ।
ಮಾಂ ಸಂದಿದೇಶ ರಾಜೇಂದ್ರ ಕರಾರ್ಥಮಿಹ ಸತ್ಕೃತಃ ॥೧೮೪॥

ರಾಜೇಂದ್ರನೇ! ಸತ್ಕೃತನಾದ ಸಹದೇವನು ದಕ್ಷಿಣದಿಕ್ಕನ್ನೂ ಅಲ್ಲಿನ ಎಲ್ಲಾ ರಾಜರುಗಳನ್ನೂ ಗೆದ್ದು ನನ್ನನ್ನು ಇಲ್ಲಿ ನಿನ್ನಬಳಿಗೆ ಕಪ್ಪವನ್ನು ತರುವ ಸಲುವಾಗಿ ಕಳುಹಿಸಿದ್ದಾನೆ.

ಪಾರ್ಥಾನಾಂ ಚರಿತಂ ತುಭ್ಯಂ ಸಂಕ್ಷೇಪಾತ್ ಸಮುದಾಹೃತಮ್।
ತಮವೇಕ್ಷ್ಯ ಮಹಾರಾಜ ಧರ್ಮರಾಜಂ ಯುಧಿಷ್ಠಿರಮ್ ॥೧೮೫॥

ಪಾವಕಂ ರಾಜಸೂಯಂ ಚ ಭಗವಂತಂ ಹರಿಂ ಪ್ರಭುಮ್ ।
ಏತಾನವೇಕ್ಷ್ಯ ಧರ್ಮಜ್ಞ ಕರಂ ತ್ವಂ ದಾತುಮರ್ಹಸಿ ॥೧೮೬॥

ಮಹಾರಾಜನೇ! ನಿನಗೆ ಪೃಥೆಯಮಕ್ಕಳಾದ ಪಾಂಡವರ ಚರಿತ್ರೆಯನ್ನು ಸಂಕ್ಷೇಪವಾಗಿ ಹೇಳಿದ್ದೇನೆ. ಧರ್ಮಜ್ಞನೇ! ಅದನ್ನು ಗಮನಿಸಿ ಧರ್ಮರಾಜನಾದ ಯುಧಿಷ್ಠರನನ್ನು ಗಮನಿಸಿ ಅಗ್ನಿಯನ್ನೂ, ರಾಜಸೂಯಯಾಗವನ್ನೂ ಭಗವಂತನಾದ ಪ್ರಭುವಾದ ಹರಿಯನ್ನೂ ಗಮನಿಸಿ ನೀನು ಕಪ್ಪವನ್ನು ಕೊಡಬೇಕೆಂದು ಬಯಸುತ್ತೇನೆ.

ವೈಶಂಪಾಯನಃ

ತೇನ ತದ್ ಭಾಷಿತಂ ಶ್ರುತ್ವಾ ರಾಕ್ಷಸೇಂದ್ರೋ ವಿಭೀಷಣಃ ।
ಪ್ರೀತಿಮಾನಭವದ್ ರಾಜನ್ ಧರ್ಮಾತ್ಮಾ ಸಚಿವೈಃ ಸಹ ॥೧೮೭॥

ರಾಜನೇ! ಘಟೋತ್ಕಚನ ಆ ಮಾತುಗಳನ್ನು ಕೇಳಿದ ಧರ್ಮಾತ್ಮನಾದ ರಾಕ್ಷಸೇಂದ್ರನಾದ ವಿಭೀಷಣನು ಸಚಿವರ ಜೊತೆಯಲ್ಲಿ ಸಂತೋಷವನ್ನು ಹೊಂದಿದನು.

ಸ ಚಾಸ್ಯ ಪ್ರತಿಜಗ್ರಾಹ ಶಾಸನಂ ಪ್ರೀತಿಪೂರ್ವಕಮ್ ।
ತಚ್ಚ ಕಾಲಕೃತಂ ಧೀಮಾನ್ ಇತ್ಯಮನ್ಯತ ಸ ಪ್ರಭುಃ ॥೧೮೮॥

ಮೇಧಾವಿಯೂ ಪ್ರಭುವೂ ಆದ ಅವನು ಘಟೋತ್ಕಚನ ಈ ಶಾಸನವನ್ನು ಪ್ರೀತಿಪೂರ್ವಕವಾಗಿ ಸ್ವೀಕರಿಸಿ ಅದು ಅಂಗೀಕೃತವಾಯಿತೆಂದೇ ಭಾವಿಸಿದನು.

ತಸ್ಮೈ ದದೌ ವಿಚಿತ್ರಾಣಿ ಕಂಬಲಾನಿ ಕುಥಾನಿ ಚ ।
ದಾಂತಕಾಂಚನಪರ್ಯಂಕಾನ್ ಮಣಿಹೇಮವಿಚಿತ್ರಿತಾನ್ ॥೧೮೯॥

ಭೂಷಣಾನಿ ವಿಚಿತ್ರಾಣಿ ಮಹಾರ್ಹಾಣಿ ಬಹೂನಿ ಚ ।
ಪ್ರವಾಳಾನಿ ಚ ಮುಕ್ತಾನಿ ಮಣೀಂಶ್ಚ ವಿವಿಧಾನ್ ಬಹೂನ್ ॥೧೯೦॥

ಕಾಂಚನಾನಿ ಚ ಭಾಂಡಾನಿ ಕಲಶಾಂಶ್ಚ ಘಟಾಂಸ್ತಥಾ ।
ಕಟಾಹಾನ್ಯಪಿ ಚಿತ್ರಾಣಿ ದ್ರೋಣ್ಯಶ್ಚೈವ ಸಹಸ್ರಶಃ ॥೧೯೧॥

ಅವನಿಗೆ ವಿಚಿತ್ರವಾದ ಕಂಬಳಿಗಳನ್ನೂ ಜಮಖಾನಗಳನ್ನೂ ದಂತದಿಂದ ಮಾಡಿದ ಮತ್ತು ಸುವರ್ಣದಿಂದ ಮಾಡಿದ ಮಣಿಗಳಿಂದ ಖಚಿತವಾದ ಮಂಚಗಳನ್ನೂ ಬೆಳೆಬಾಳುವ ಬಹುವಿಧವಾದ ವಿಚಿತ್ರವಾದ ಆಭರಣಗಳನ್ನು ಹವಳಗಳನ್ನು ಮುತ್ತುಗಳನ್ನೂ ಬಹುವಿಧವಾದ ಅನೇಕ ರತ್ನಗಳನ್ನೂ ಚಿನ್ನದ ಪಾತ್ರೆಗಳನ್ನೂ ಕಲಶಗಳನ್ನೂ ಕೊಡಗಳನ್ನೂ ವಿಚಿತ್ರವಾದ ಹಂಡೆಗಳನ್ನೂ ಸಹಸ್ರಸಂಖ್ಯೆಯಲ್ಲಿ ಕೊಪ್ಪರಿಗೆಗಳನ್ನೂ ಕೊಟ್ಟನು.

ರಾಜತಾನಿ ಚ ಭಾಂಡಾನಿ ಚಿತ್ರಾಣಿ ಚ ಬಹೂನಿ ಚ ।
ಶಸ್ತ್ರಾಣಿ ರುಗ್ಮಚಿತ್ರಾಣಿ ಮಣಿಮುಕ್ತೈರ್ವಿಚಿತ್ರಿತಾನ್ ।
ಯಜ್ಞಸ್ಯ ತೋರಣಾನ್ ಯುಕ್ತಾನ್ ದದೌ ತಾಳಾಂಶ್ಚತುರ್ದಶ ॥೧೯೨॥

ವಿಚಿತ್ರವಾದ ಅನೇಕ ರಜತಮಯ ಪಾತ್ರೆಗಳನ್ನೂ ಚಿನ್ನದಿಂದ ಅಲ್ಪಕೃತವಾಗಿದ್ದ ಅನೇಕ ಶಸ್ತ್ರಗಳನ್ನೂ ಮಣಿಗಳಿಂದಲೂ ಮುತ್ತಿನಿಂದಲೂ ಖಚಿತವಾದ್ದ ಯಜ್ಞದ ತೋರಣಗಳನ್ನೂ ಜೋಡಿಸಿದ ಹದಿನಾಲ್ಕು ತಾಳಗಳನ್ನೂ ಕೊಟ್ಟನು.

ಚಂದನಾನಿ ಚ ಮುಖ್ಯಾನಿ ರುಗ್ಮರತ್ನಾನ್ಯನೇಕಶಃ ।
ವಾಸಾಂಸಿ ಚ ಮಹಾರ್ಹಾಣಿ ಕಂಬಳಾನಿ ಬಹೂನ್ಯಪಿ ॥೧೯೩॥

ಅನ್ಯಾಂಶ್ಚ ವಿವಿಧಾನ್ ರಾಜನ್ ರತ್ನಾನಿ ಚ ಬಹೂನಿ ಚ ।
ಸ ದದೌ ಸಹದೇವಾಯ ತದಾ ರಾಜಾ ವಿಭೀಷಣಃ ॥೧೯೪॥

ಸುವರ್ಣಮಯವಾದ ಕಮಲಪುಷ್ಪಗಳನ್ನೂ ಮಣಿಭೂಷಿತವಾದ ಪಲ್ಲಕ್ಕಿಗಳನ್ನೂ ಬೆಲೆಬಾಳುವ ಕಿರೀಟಗಳನ್ನೂ ಸುವರ್ಣದ ಕುಂಡಲಗಳನ್ನೂ ಅನೇಕ ಸುವರ್ಣಮಯವಾದ ಪುಷ್ಪಗಳನ್ನೂ ಸುವರ್ಣಮಯವಾದ ಅನೇಕ ಹಾರಗಳನ್ನೂ ಚಂದ್ರನಂತಿರುವ ನೂರು ಆವೃತ್ತವುಳ್ಳ ವಿಚಿತ್ರವಾದ ಶಂಖಗಳನ್ನೂ ಚಂದನ

ಮೊದಲಾದ ಸುಗಂಧ ದ್ರವ್ಯಗಳನ್ನೂ ಅನೇಕ ಸುವರ್ಣ ಮತ್ತು ರತ್ನಗಳನ್ನೂ ಬೆಲೆಬಾಳುವ ವಸ್ತ್ರಗಳನ್ನೂ ಅನೇಕ ಕಂಬಳಿಗಳನ್ನೂ ಇನ್ನೂ ಅನೇಕ ವಿಧವಾದ ಬಹಳವಾದ ರತ್ನಗಳನ್ನೂ ಆಗ ರಾಜನಾದ ವಿಭೀಷಣನು ಸಹದೇವನಿಗೆ ಕೊಟ್ಟನು.

ವಿಭೀಷಣಂ ಚ ರಾಜಾನಮಭಿವಾದ್ಯ ಕೃತಾಂಜಲಿಃ ।
ಪ್ರದಕ್ಷಿಣಂ ಪರೀತ್ಯೈವ ನಿರ್ಜಗಾಮ ಘಟೋತ್ಕಚಃ ॥೧೯೫॥

ಘಟೋತ್ಕಚನು ರಾಜನಾದ ವಿಭೀಷಣನಿಗೆ ಪ್ರದಕ್ಷಿಣೆಮಾಡಿ ಕೈಮುಗಿದು ನಮಸ್ಕಾರವನ್ನುಮಾಡಿ ಅಲ್ಲಿಂದ ಹೊರಟುಬಂದನು.

ತಾನಿ ಸರ್ವಾಣಿ ರತ್ನಾನಿ ಅಷ್ಟಾಶೀತಿರ್ನಿಶಾಚರಾಃ ।
ಆಜಹ್ರುಃ ಸಮುದಾ ರಾಜನ್ ಹೈಡಿಂಬೇನ ತದಾ ಸಹ ।
ರತ್ನಾನ್ಯಾದಾಯ ಸರ್ವಾಣಿ ಪ್ರತಸ್ಥೇ ಸ ಘಟೋತ್ಕಚಃ ॥೧೯೬॥

ಆ ರಾಜನೇ! ಆ ರತ್ನಗಳೆಲ್ಲವನ್ನೂ, ಘಟೋತ್ಕಚನ ಜೊತೆಯಲ್ಲಿ ಎಂಬತ್ತೆಂಟು ಮಂದಿ ರಾಕ್ಷಸರು ತೆಗೆದುಕೊಂಡು ಬಂದರು. ಘಟೋತ್ಕಚನು ಅವರೆಲ್ಲರಿಂದಲೂ ಆ ಸಂಪತ್ತನ್ನು ಹೊರಿಸಿಕೊಂಡು ಅಲ್ಲಿಂದ ಹೊರಟನು.

ತತೋ ರತ್ನಾನ್ಯುಪಾದಾಯ ಹೈಡಿಂಬೋ ರಾಕ್ಷಸೈಃಸಹ ।
ಜಗಾಮ ತೂರ್ಣಂ ಲಂಕಾಯಾಃ ಸಹದೇವಪದಂ ಪ್ರತಿ ।
ಆಸೇದುಃ ಪಾಂಡವಂ ಸರ್ವೇ ಲಂಘಯಿತ್ವಾ ಮಹೋದಧಿಮ್॥೧೯೭॥

ಅನಂತರ ಘಟೋತ್ಕಚನು ರಾಕ್ಷಸರ ಜೊತೆಯಲ್ಲಿ ಆ ರತ್ನಗಳನ್ನು ತೆಗೆದುಕೊಂಡು ಲಂಕೆಯಿಂದ ಶೀಘ್ರವಾಗಿ ಹೊರಟು ಸಹದೇವನಿದ್ದ ಸ್ಥಾನಕ್ಕೆ ಬಂದನು. ಅವರೆಲ್ಲರೂ ಸಮುದ್ರವನ್ನು ದಾಟಿ ಪಾಂಡವನ ಸಮೀಪಕ್ಕೆ ಬಂದರು.

ಸಹದೇವೋ ದದರ್ಶಾಥ ರತ್ನಾಹಾರಾನ್ ನಿಶಾಚರಾನ್ ।
ಆಗತಾನ್ ಭೀಮಸಂಕಾಶಾನ್ ಹೈಡಿಂಬಂ ಚ ತಥಾ ನೃಪ ॥೧೯೮॥

ರಾಜನೇ! ಆಗ ಸಹದೇವನು ರತ್ನವನ್ನು ಹೊತ್ತು ಕೊಂಡು ಬರುತ್ತಿರುವ ಭಯಂಕರರಾದ ರಾಕ್ಷಸರನ್ನೂ ಮತ್ತು ಅವರ ಜೊತೆಯಲ್ಲಿ ಹಾಗೆಯೇ ಬರುತ್ತಿರುವ ಘಟೋತ್ಕಚನನ್ನೂ ನೋಡಿದನು.

ದ್ರಮಿಳಾ ನೈರ್ಋತಾನ್ ದೃಷ್ಟ್ವಾ ದುದ್ರುವುಸ್ತೇ ಭಯಾನ್ವಿತಾಃ ।
ಭೈಮಸೇನಿಸ್ತತೋ ಗತ್ವಾ ಮಾದ್ರೇಯಂ ಪ್ರಾಂಜಲಿಃ ಸ್ಥಿತಃ ॥೧೯೯॥

ಜೊತೆಯಲ್ಲಿಯೇ ಇದ್ದ ದ್ರಮಿಳರು ಆ ರಾಕ್ಷಸರನ್ನು ನೋಡಿ ಭಯದಿಂದ ಕೂಡಿದವರಾಗಿ ಓಡಿಹೋದರು. ಭೀಮಸೇನನ ಪುತ್ರನಾದ ಘಟೋತ್ಕಚನು ಮಾದ್ರಿಯ ಸುತನಾದ ಸಹದೇವನ ಬಳಿಗೆ ಬಂದು ಕೈಗಳನ್ನು ಮುಗಿದು ನಿಂತನು.

ಪ್ರೀತಿಮಾನಭವದ್ ದೃಷ್ಟ್ವಾ ರತ್ನೌಘಂ ತಂ ಚ ಪಾಂಡವಃ ।
ತಂ ಪರಿಷ್ವಜ್ಯ ಪಾಣಿಭ್ಯಾಂ ದೃಷ್ಟ್ವಾ ತಾನ್ ಪ್ರೀತಿಮಾನಭೂತ್ ॥೨೦೦॥

ಪಾಂಡುಪುತ್ರನಾದ ಸಹದೇವನು ಆ ರತ್ನದ ರಾಶಿಯನ್ನು ನೋಡಿ ಸಂತೋಷಗೊಂಡನು. ಘಟೋತ್ಕಚನನ್ನು ತನ್ನ ಬಾಹುಗಳಿಂದ ಆಲಿಂಗಿಸಿ ಆ ರಾಕ್ಷಸರೆಲ್ಲರನ್ನೂ ನೋಡಿ ಸಂತುಷ್ಟನಾದನು.

ವಿಸೃಜ್ಯ ದ್ರಮಿಳಾನ್ ಸರ್ವಾನ್ ಗಮನಾಯೋಪಚಕ್ರಮೇ ।
ನ್ಯವರ್ತತ ತತೋ ಧೀಮಾನ್ ಸಹದೇವೋ ನರಾಧಿಪಃ ॥೨೦೧॥

ಆ ದ್ರಮಿಳರೆಲ್ಲರನ್ನೂ ಬೀಳ್ಕೊಟ್ಟು ಅಲ್ಲಿಂದ ಹೊರಡಲು ಸಂಕಲ್ಪಿಸಿದನು. ಅನಂತರ ಮೇಧಾವಿಯೂ ನರಾಧಿಪನೂ ಆದ ಸಹದೇವನು ಅಲ್ಲಿಂದ ಹಿಂದಿರುಗಿದನು.

ಏವಂ ವಿಜಿತ್ಯ ತರಸಾ ಸಾಂತ್ವೇನ ವಿಜಯೇನ ಚ ।
ಕರದಾನ್ ಪಾರ್ಥಿವಾನ್ ಕೃತ್ವಾ ಪ್ರತ್ಯಾಗಚ್ಛದರಿಂದಮಃ ॥೨೦೨॥

ಹೀಗೆ ಶೀಘ್ರವಾಗಿ ಸಮಾಧಾನದ ಮಾತುಗಳಿಂದಲೂ ಮತ್ತು ಯುದ್ಧದಿಂದಲೂ ರಾಜರನ್ನು ಗೆದ್ದು ಅವರು ಕಪ್ಪಕಾಣಿಕೆಗಳನ್ನು ಕೊಡುವಂತೆಮಾಡಿ ಅರಿಂದಮನಾದ ಸಹದೇವನು ಹಿಂದಿರುಗಿದನು.

ರತ್ನಸಾರಮುಪಾದಾಯ ಯಯೌ ಸಹ ನಿಶಾಚರೈಃ ।
ಇಂದ್ರಪ್ರಸ್ಥಂ ವಿವೇಶಾಥ ಕಂಪಯನ್ನಿವ ಮೇದಿನೀಮ್ ॥೨೦೩॥

ಆ ರತ್ನದರಾಶಿಯನ್ನು ತೆಗೆದುಕೊಂಡು ನಿಶಾಚರರ ಜೊತೆಯಲ್ಲಿ ಭೂಮಿಯನ್ನು ನಡುಗಿಸುವವನಂತೆ ಪ್ರಯಾಣಮಾಡಿ ಇಂದ್ರಪ್ರಸ್ಥವನ್ನು ತಲುಸಿದನು.

ದೃಷ್ಟ್ವಾ ಯುಧಿಷ್ಠಿರಂ ರಾಜನ್ ಸಹದೇವಃ ಕೃತಾಂಜಲಿಃ ।
ಪ್ರಹ್ವೋऽಭಿವಾದ್ಯ ತಸ್ಥೌ ಸ ಪೂಜಿತಶ್ಚೈವ ತೇನ ವೈ ॥೨೦೪॥

ರಾಜೇಂದ್ರನೇ! ಸಹದೇವನು ಯುಧಿಷ್ಠಿರನನ್ನು ನೋಡಿ ಕೈಗಳನ್ನು ಮುಗಿದು ವಿನಯದಿಂದ ನಮಸ್ಕರಿಸಿ ನಿಂತು ಯುಧಿಷ್ಠಿರನಿಂದ ಸತ್ಕರಿಸಲ್ಪಟ್ಟನು.

ಲಂಕಾಪ್ರಾಪ್ತಾನ್ ಧನೌಘಾಂಶ್ಚ ದೃಷ್ಟ್ವಾ ತಾನ್ ದುರ್ಲಭಾನ್ ಬಹೂನ್ ।
ಪ್ರೀತಿಮಾನಭವದ್ ರಾಜಾ ವಿಸ್ಮಯಂ ಪರಮಂ ಯಯೌ ॥೨೦೫॥

ಲಂಕೆಯಿಂದ ಬಂದ ದುರ್ಲಭವಾದ ಆ ಧನರಾಶಿಯನ್ನು ನೋಡಿದ ಯುಧಿಷ್ಠಿರನು ಸಂತೋಷದಿಂದಲೂ ಮತ್ತು ಪರಮಾಶ್ಚರ್ಯದಿಂದಲೂ ಕೂಡಿದವನಾದನು.

ಧರ್ಮರಾಜಾಯ ತತ್ ಸರ್ವಂ ನಿವೇದ್ಯ ಭರತರ್ಷಭ ।
ಕೋಟೀಸಹಸ್ರಮಧಿಕಂ ಹಿರಣ್ಯಸ್ಯ ಮಹಾತ್ಮನೇ ॥೨೦೬॥

ವಿಚಿತ್ರಾಂಶ್ಚ ಮಣೇಂಶ್ಚೈವ ಗೋಜಾವಿಮಹಿಷಾಂಸ್ತಥಾ ।
ಕೃತಕರ್ಮಾ ಸುಖಂ ರಾಜನ್ನುವಾಸ ಜನಮೇಜಯ ॥೨೦೭॥

ಭರತರ್ಷಭನಾದ ಜನಮೇಜಯರಾಜನೇ! ಮಹಾತ್ಮನಾದ ಧರ್ಮರಾಜನಿಗೆ ಒಂದು ಸಹಸ್ರ ಕೋಟಿಗಿಂತಲೂ ಅಧಿಕವಾದ ಆ ಎಲ್ಲಾ ಧನರಾಶಿಯನ್ನೂ ಅರ್ಪಿಸಿ ವಿಚಿತ್ರವಾದ ಮಣಿಗಳನ್ನೂ ಗೋವು ಅಜ ಆವಿ ಮಹಿಷ ಸುವರ್ಣ ಮೊದಲಾದವುಗಳನ್ನೂ ಅರ್ಪಿಸಿ ಕೃತಕೃತ್ಯನಾಗಿ ಸುಖದಿಂದ ವಾಸಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ಸಭಾಪರ್ವಣಿ ಅಷ್ಟಾವಿಂಶೋऽಧ್ಯಾಯಃ ॥
ದಿಗ್ವಿಜಯಪರ್ವಣಿ ಚತುರ್ಥೋऽಧ್ಯಾಯಃ॥೩॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯವು ಮುಗಿಯಿತು.

★★★★★

ಇಪ್ಪತ್ತೊಂಭತ್ತನೆಯ ಅಧ್ಯಾಯ

(ನಕುಲನ ಪಶ್ಚಿಮ ದಿಗ್ವಿಜಯ)

ವೈಶಂಪಾಯನಃ

ನಕುಲಸ್ಯ ತು ವಕ್ಷ್ಯಾಮಿ ಕರ್ಮಾಣಿ ವಿಜಯಂ ತಥಾ ।
ವಾಸುದೇವಜಿತಾಮಾಶಾಂ ಯಥಾಽಸಾವಜಯತ್ ಪ್ರಭುಃ ॥೧॥

ರಾಜನೇ! ನಾನು ನಕುಲನ ದಿಗ್ವಿಜಯವನ್ನೂ ಅವನ ಸಾಹಸಕರ್ಮಗಳನ್ನೂ ಪ್ರಭುವಾದ ಅವನು ಕೃಷ್ಣನಿಂದ ಜಯಿಸಲ್ಪಟ್ಟ ಪಶ್ಚಿಮ ದಿಕ್ಕನ್ನೂ ಹೇಗೆ ಜಯಿಸಿದನು ಎಂಬುದನ್ನೂ ಹೇಳುವೆನು.

ನಿರ್ಯಾಯ ಖಾಂಡವಪ್ರಸ್ಥಾತ್ ಪ್ರತೀಚೀಂ ದಿಶಮಚ್ಯುತಃ ।
ಉದ್ದಿಶ್ಯ ಮತಿಮಾನ್ ಪ್ರಾಯಾನ್ಮಹತ್ಯಾ ಸೇನಯಾ ಸಹ ॥೨॥

ಉತ್ಸಾಹಾದಿಗುಣದಿಂದ ರಹಿತನಾಗದ ಮೇಧಾವಿಯಾದ, ನಕುಲನು ದಿಗ್ವಿಜಯವನ್ನು ಉದ್ದೇಶಿಸಿ ದೊಡ್ಡ ಸೈನ್ಯದ ಜೊತೆಯಲ್ಲಿ ಇಂದ್ರಪ್ರಸ್ಥದಿಂದ ಪಶ್ಚಿಮಾಭಿಮುಖವಾಗಿ ಹೊರಟನು.

ಸಿಂಹನಾದೇನ ಮಹತಾ ಯೌಧಾನಾಂ ಗರ್ಜಿತೇನ ಚ ।
ರಥನೇಮಿನಿನಾದೇನ ಕಂಪಯನ್ ವಸುಧಾಮಿಮಾಮ್ ॥೩॥

ದೊಡ್ಡ ಸಿಂಹನಾದಗಳಿಂದಲೂ ಸೈನಿಕರ ಗರ್ಜನೆಗಳಿಂದಲೂ ರಥಚಕ್ರದ ನಿನಾದಗಳಿಂದಲೂ ಈ ಭೂಮಿಯನ್ನು ನಡುಗಿಸುತ್ತಾ ಹೊರಟನು.

ತತೋ ಬಹುಧನಂ ರಮ್ಯಂ ಗವಾಶ್ವಬಹುಧಾನ್ಯವತ್ ।
ಕಾರ್ತಿಕೇಯಸ್ಯ ದಯಿತಂ ರೋಹೀತಕಮುಪಾದ್ರವತ್ ॥೪॥

ಅಲ್ಲಿಂದ ಷಣ್ಮುಖನಿಗೆ ಪ್ರಿಯನಾದ ಧನಪೂರ್ಣವಾದ ಗೋವುಗಳು ಮತ್ತು ಅಶ್ವಗಳು ಬಹುಧಾನ್ಯದಿಂದ ತುಂಬಿದ್ದ ರೋಹೀತಕಪರ್ವತಕ್ಕೆ ಹೋದನು.

ತತ್ರ ಯುದ್ಧಂ ಮಹದ್ ದತ್ತಂ ಶೂರೈರ್ಮತ್ತಮಯೂರಕೈಃ ।
ಮರುಭೂಮಿಂ ಸ ಕಾರ್ತ್ಸ್ನ್ಯೇನ ತಥೈವ ಬಹುಧಾನ್ಯಕಮ್ ॥೫॥

ಶೈರೀಷಕಂ ಚ ಹೈಮಂ ಚ ವಶೇ ಚಕ್ರೇ ಮಹಾದ್ಯುತಿಃ ।
ಲಿಲಿಂಧ್ರಾನ್ ವಟಧಾನಾಂಶ್ಚ ದೂತೈರೇವ ಜಿಗಾಯ ಸಃ ॥೬॥

ಅಲ್ಲಿದ್ದ ಶೂರರಾದ ಮತ್ತಮಯೂರಕರು ಅವನಿಗೆ ದೊಡ್ಡ ಯುದ್ಧವನ್ನು ಕೊಟ್ಟರು. ಹಾಗೆಯೇ ಮಹಾಕಾಂತಿಯುಕ್ತನಾದ ಅವನು, ಮುಂದೆ ನಡೆದು ಸಮಗ್ರವಾದ ಮರುಭೂಮಿಯನ್ನೂ ಬಹುಧಾನ್ಯ ದೇಶವನ್ನೂ ಶೈರೀಷಕ ಮತ್ತು ಹೈಮದೇಶಗಳನ್ನೂ ವಶಪಡಿಸಿಕೊಂಡನು. ಲಿಲಿಂಧ್ರರನ್ನೂ ಮತ್ತು ವಟಧಾನರನ್ನೂ ತನ್ನ ದೂತರಿಂದಲೇ ಜಯಿಸಿದನು.

ತ್ರಿಗರ್ತಾನಂಬಷ್ಠಾನ್ ಮಾಳವಾನ್ ಪಂಚ ಕರ್ಪಟಾನ್।
ತಥಾ ಮಧ್ಯನಿಕಾಯಾಂಶ್ಚ ಔಪಾವೃತಗಣಾನಥ ॥೭॥

ಅನಂತರ ಶಿಬಿಗಳನ್ನೂ ತ್ರಿಗರ್ತರನ್ನೂ ಅಂಬಷ್ಠರನ್ನೂ ಮಾಳವರನ್ನೂ ಪಂಚಕರ್ಪಟರನ್ನೂ ಮಧ್ಯನಿಕಾಯರನ್ನೂ ಔಪಾವೃತಗಣಗಳನ್ನೂ ಜಯಿಸಿದನು.

ಪುನಶ್ಚ ಪರಿವೃತ್ಯಾಥ ಪುಷ್ಕರಾರಣ್ಯವಾಸಿನಃ ।
ಗಣಾನುತ್ಸವಸಂಕೇತಾನ್ ಅಜಯತ್ ಪಾಂಡವರ್ಷಭಃ ॥೮॥

ಪುನಃ ಆ ಪಾಂಡವ ಶ್ರೇಷ್ಠನು ಹಿಂದಿರುಗಿ ಪುಷ್ಕರಾರಣ್ಯವಾಸಿಗಳಾದ ಉತ್ಸವ ಎಂಬ ಹೆಸರಿನ ಗಣಗಳನ್ನು ಜಯಿಸಿದನು.

ಸಿಂಧುಕೂಲಾಶ್ರಿತಾ ಯೇ ಚ ಗ್ರಾಮಣೇಯಾ ಮಹಾಬಲಾಃ ।
ಶೂದ್ರಾಭೀರಗಣಾಶ್ಚೈವ ಯೇ ಚಾಶ್ರಿತ್ಯ ಸರಸ್ವತೀಮ್ ॥೯॥

ವರ್ತಯಂತಿ ಚ ಯೇ ಮತ್ಸ್ಯೈರ್ಯೇ ಚ ಪರ್ವತವಾಸಿನಃ ।
ಕೃತ್ಸ್ನಂ ಪಂಚನದಂ ಚೈವ ಮಿತ್ರಭೋಗಂ ತಥೈವ ಚ ॥೧೦॥

ತಥಾ ಸಿಂಹನದಂ ಚೈವ ತಥೈವಾಪರಪತ್ತನಾನ್ ।
ದೂತೈರೇವ ವಶಂ ಚಕ್ರೇ ನಕುಲಃ ಕುಲನಂದನಃ ॥೧೧॥

ಸಿಂಧೂ ನದಿಯತೀರದಲ್ಲಿ ಇದ್ದ ಮಹಾಬಲರಾದ ಪಾಳೆಯಗಾರರನ್ನೂ, ಸರಸ್ವತೀ ದಡದಲ್ಲಿ ಇದ್ದ ಶೂದ್ರರ ಮತ್ತು ಬೇಡರ ಗಣಗಳನ್ನೂ ಪರ್ವತವಾಸಿಗಳಾಗಿದ್ದ ಮತ್ಸ್ಯಾಹಾರರಾದ ಗಣಗಳನ್ನೂ ಸಮಗ್ರವಾದ ಪಂಚನದ ಸ್ಥಾನವನ್ನೂ ಹಾಗೆಯೇ ಮಿತ್ರಭೋಗವನ್ನೂ ಸಿಂಹನದವನ್ನೂ ಮತ್ತು ಅಪರ ಪಟ್ಟಣಗಳನ್ನೂ ಕುಲನಂದನನಾದ ನಕುಲನು ತನ್ನ ದೂತರಿಂದಲೇ ವಶಪಡಿಸಿ ಕೊಂಡನು.

ಉತ್ತರಜ್ಯೋತಿಷಾಂಶ್ಚೈವ ತಥಾ ವೃಂದಾರಕಂ ಪುರಮ್ ।
ದ್ವಾರಪಾಲಂ ಚ ತರಸಾ ವಶೇ ಚಕ್ರೇ ಮಹಾದ್ಯುತಿಃ ॥೧೨॥

ಮಹಾದ್ಯುತಿಯಾದ ನಕುಲನು ಉತ್ತರಜ್ಯೋತಿಷವನ್ನೂ ಹಾಗೆಯೇ ವೃಂದಾರಕ ಪಟ್ಟಣವನ್ನೂ ದ್ವಾರಪಾಲಪಟ್ಟಣವನ್ನೂ ಶೀಘ್ರವಾಗಿ ವಶಪಡಿಸಿಕೊಂಡನು.

ರಾಮಠಾನ್ ಹಾರಹೂಣಾಂಶ್ಚ ಪ್ರತೀಚ್ಯಾಶ್ಚೈವ ಯೇ ನೃಪಾಃ ।
ತಾನ್ ಸರ್ವಾನ್ ಸ ವಶೇ ಚಕ್ರೇ ನಕುಲಃ ಪಾಂಡವರ್ಷಭಃ ॥೧೩॥

ಪಾಂಡವಶ್ರೇಷ್ಠನಾದ ನಕುಲನು ರಾಮಠರನ್ನೂ ಹಾರಹೂಣರನ್ನೂ ಪಶ್ಚಿಮದಿಕ್ಕಿನ ಉಳಿದೆಲ್ಲಾ ರಾಜರುಗಳನ್ನೂ ವಶಪಡಿಸಿಕೊಂಡನು.

ಅರಣಂ ಚೈವ ರೋಮಂ ಚ ಯವನಾನಾಂ ಪುರಾಣಿ ಚ ।
ಲಂಬನಾದೇಶಜಾಂಶ್ಚೈವ ಬಂಧಕಾಂಶ್ಚ ನರೋತ್ತಮ ।
ದೂತೈರೇವ ವಶಂ ಚಕ್ರೇ ಕರಂ ಚೈನಾನದಾಪಯತ್ ॥೧೪॥

ನರೋತ್ತಮನೇ! ಯವನರ ಪಟ್ಟಣಗಳಾದ ಅರಣ ಮತ್ತು ರೋಮಗಳನ್ನೂ ಲಂಬರನ್ನೂ ಮತ್ತು ಆದೇಶದ ಜನರನ್ನೂ ಮತ್ತು ಬಂಧಕರನ್ನೂ ತನ್ನ ದೂತರಿಂದಲೇ ವಶಪಡಿಸಿಕೊಂಡು ಅವರು ಕಪ್ಪವನ್ನು ಕೊಡುವಂತೆ ಮಾಡಿದನು.

ತತ್ರಸ್ಥಃ ಪ್ರೇಷಯಾಮಾಸ ವಾಸುದೇವಾಯ ಚಾಭಿಭೂಃ ।
ಸ ಚಾಸ್ಯ ಯಾದವೈಃ ಸಾರ್ಧಂ ಪ್ರತಿಜಗ್ರಾಹ ಶಾಸನಮ್ ॥೧೫॥

ಶತ್ರುಗಳನ್ನು ಪರಾಭವಗೋಳಿಸುವ ಅವನು ಅಲ್ಲಿಂದಲೇ ವಾಸುದೇವನಿಗೆ ದೂತರನ್ನು ಕಳುಹಿಸಿದನು. ಕೃಷ್ಣನಾದರೋ ಯಾದವರ ಜೊತೆಯಲ್ಲಿ ನಕುಲನಶಾಸನವನ್ನು ಸ್ವೀಕರಿಸಿದನು.

ತತಃ ಶಾಕಲಮಭ್ಯೇತ್ಯ ಮದ್ರಾಣಾಂ ಪುಟಭೇದನಮ್ ।
ಮಾತುಲಂ ಪ್ರೀತಿಪೂರ್ವೇಣ ಶಲ್ಯಂ ಚಕ್ರೇ ವಶೇ ವಶೀ ॥೧೬॥

ಅನಂತರ ಮದ್ರದೇಶದ ರಾಜಧಾನಿಯಾದ ಶಾಕಲಪಟ್ಟಣಕ್ಕೆ ಬಂದು ಸೋದರಮಾವನಾದ ಶಲ್ಯನನ್ನು ಪ್ರೀತಿಯಿಂದಲೇ ವಶಪಡಿಸಿಕೊಂಡನು.

ಸ ತೇನ ಸತ್ಕೃತೋ ರಾಜ್ಞಾ ಸತ್ಕಾರಾರ್ಹೋ ವಿಶಾಂಪತೇ ।
ರತ್ನಾನಿ ಭೂರೀಣ್ಯಾದಾಯ ಸಂಪ್ರತಸ್ಥೇ ಯುಧಾಂ ಪತಿಃ ॥೧೭॥

ರಾಜನೇ! ಸತ್ಕಾರಕ್ಕೆ ಅರ್ಹನೂ ಮತ್ತೆ ಯುಧಾಂಪತಿಯೂ ಆದ ನಕುಲನು ಶಲ್ಯರಾಜನಿಂದ ಸತ್ಕರಿಸಲ್ಪಟ್ಟು ಅವನಿಂದ ಬಹಳ ರತ್ನಗಳನ್ನು ತೆಗೆದುಕೊಂಡು ಅಲ್ಲಿಂದ ಹೊರಟನು.

ತತಃ ಸಾಗರಕುಕ್ಷಿಸ್ಥಾನ್ ಮ್ಲೇಚ್ಛಾನ್ ಪರಮದಾರುಣಾನ್ ।
ಪಲ್ಲವಾನ್ ಬರ್ಬರಾಂಶ್ಚೈವ ತಾನ್ ಸರ್ವಾನನಯದ್ ವಶಮ್ ॥೧೮॥

ಅನಂತರ ಸಾಗರದ ಮಧ್ಯವನ್ನು ಆಶ್ರಯಿಸಿದ ಮಹಾಕ್ರೂರರಾದ ಮ್ಲೇಚ್ಛರನ್ನೂ ಪಲ್ಲವರನ್ನೂ ಬರ್ಬರರನ್ನೂ ವಶಪಡಿಸಿಕೊಂಡನು.

ತತ್ರ ರತ್ನಾನ್ಯುಪಾದಾಯ ವಶೇ ಕೃತ್ವಾ ಚ ಪಾರ್ಥಿವಾನ್ ।
ನ್ಯವರ್ತತ ಕುರುಶ್ರೇಷ್ಠೋ ನಕುಲಶ್ಚಿತ್ರಮಾರ್ಗವಿತ್ ॥೧೯॥

ಕುರುಶ್ರೇಷ್ಠರಾದ ನಕುಲನು ಅಲ್ಲಿ ರಾಜರುಗಳನ್ನು ವಶಪಡಿಸಿಕೊಂಡು ರತ್ನಗಳನ್ನು ತೆಗೆದುಕೊಂಡು ಅನೇಕ ಮಾರ್ಗಗಳನ್ನು ತಿಳಿದವನಾಗಿ ಹಿಂದಿರುಗಿದನು.

ಕಳಭಾನಾಂ ಸಹಸ್ರಾಣಿ ಕೋಶಂ ತಸ್ಯ ಮಹಾತ್ಮನಃ ।
ಊಹುರ್ದಶ ಮಹಾರಾಜ ಕೃಚ್ಛ್ರಾದಿವ ಮಹಾಧನಮ್ ॥೨೦॥

ಮಹಾರಾಜನೇ! ಮಹಾತ್ಮನಾದ ಅವನು ಸಂಪಾದಿಸಿದ ಮಹಾಧನರೂಪವಾದ ಕೋಶವನ್ನು ಹತ್ತು ಸಹಸ್ರ ಆನೆಗಳು ಕಷ್ಟಪಟ್ಟು ಹೊತ್ತವು.

ಇಂದ್ರಪ್ರಸ್ಥಗತಂ ವೀರಮಭ್ಯಗಚ್ಛದ್ ಯುಧಿಷ್ಠಿರಮ್ ।
ಹೃಷ್ಟೋ ಮಾದ್ರೀಸುತಃ ಶ್ರೀಮಾನ್ ಧನಂ ತಸ್ಯೈ ನ್ಯವೇದಯತ್ ॥೨೧॥

ವೀರನಾದ ಅವನು ಇಂದ್ರಪ್ರಸ್ಥವನ್ನು ಸೇರುವವೇಳೆಗೆ ಯುಧಿಷ್ಠಿರನು ಎದುರಿಗೆ ಬಂದು ಅವನನ್ನು ಸ್ವೀಕರಿಸಿದನು. ಕಾಂತಿಯುಕ್ತನಾದ ಮಾದ್ರೀಸುತನಾದ ನಕುಲನು ಸಂತೋಷದಿಂದ ಎಲ್ಲಾ ಧನವನ್ನೂ ಅವನಿಗೆ ನಿವೇದಿಸಿದನು.

ಏವಂ ಪ್ರತೀಚೀಂ ನಕುಲೋ ದಿಶಂ ವರುಣಪಾಲಿತಾಮ್ ।
ಅಜಯದ್ ವಾಸುದೇವೇನ ನಿರ್ಜಿತಾಂ ಭರತರ್ಷಭ ॥೨೨॥

ಭರತಶ್ರೇಷ್ಠನೇ! ಹೀಗೆ ನಕುಲನು ವರುಣನಿಂದ ರಕ್ಷಿತವಾದ ಕೃಷ್ಣನಿಂದ ಜಯಿಸಲ್ಪಟ್ಟ ಪಶ್ಚಿಮದಿಕ್ಕನ್ನು ಜಯಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಏಕೋನತ್ರಿಂಶೋऽಧ್ಯಾಯಃ ॥

॥ ದಿಗ್ವಿಜಯಪರ್ವ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು.

ಇಲ್ಲಿಗೆ ದಿಗ್ವಿಜಯ ಪರ್ವವು ಮುಗಿಯಿತು.

★ ★ ★ ★

೪. ರಾಜಸೂಯ ಪರ್ವ

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ವಿಶ್ವಕರ್ಮಕೃತತ್ವಾತ್ತು ಪುರಸ್ಯಾಲ್ಪೇऽಪಿ ಚ ಸ್ಥಲೇ ।
ಅಂತರ್ಗತಾಸ್ತೇ ಗಿರಯಸ್ತದದ್ಭುತಮಿವಾಭವತ್ ॥೨೩೩॥

ಇಂದ್ರಪ್ರಸ್ಥದಲ್ಲಿ ಇರುವ ಸ್ಥಳಾವಕಾಶ ಅಲ್ಪವಾಗಿದ್ದರೂ ಆ ನಗರ ವಿಶ್ವಕರ್ಮ ನಿರ್ಮಿತವಾದ್ದರಿಂದ ಆ ಎಲ್ಲ ರತ್ನಪರ್ವತಗಳೂ ನಗರದೊಳಗೆ ಇರಲು ಶಕ್ಯವಾಯಿತು. ಇದೊಂದು ನೋಡುವವರಿಗೆ ಬಹಳ ಅದ್ಭುತವಾಗಿತ್ತು.

ತತೋ ಯಜ್ಞಃ ಪ್ರವವೃತೇ ಕೃಷ್ಣದ್ವೈಪಾಯನೇರಿತಃ ।
ಋತ್ವಿಜೋ ಮುನಯೋऽತ್ರಾಸನ್ ಸರ್ವವಿದ್ಯಾಸು ನಿಷ್ಠಿತಾಃ ॥೨೩೪॥

ಬಳಿಕ ವೇದವ್ಯಾಸರ ನೇತೃತ್ವದಲ್ಲಿ ಯಾಗ ಪ್ರಾರಂಭವಾಯಿತು. ಸರ್ವ ವಿದ್ಯಾ ನಿಷ್ಣಾತರಾದ ಮುನಿಗಳು ಈ ಯಾಗದಲ್ಲಿ ಋತ್ವಿಜರಾದರು.

ದ್ವೈಪಾಯನೋಕ್ತವಿಧಿನಾ ದೀಕ್ಷಿತಂ ಚಕ್ರಿರೇ ನೃಪಂ
ಜ್ಯೇಷ್ಠತ್ವಾದ್ ಯಾಜಮಾನಂ ತು ಪ್ರಣಿಧಾಯ ಯುಧಿಷ್ಠಿರೇ ॥೨೩೫॥

ಭೀಮಾರ್ಜುನಾದಯಃ ಸರ್ವೇ ಸಹ ತೇನ ಸಮಾಸಿರೇ ।
ಬ್ರಹ್ಮಣೇಪದಯೋಗ್ಯತ್ವಾತ್ ಕೃಷ್ಣೈಕಾ ಯಜ್ಞಪತ್ನ್ಯಭೂತ್ ॥೨೩೬॥

ಪದಯೋಗ್ಯತಯಾ ನಾನ್ಯಾಃ ಪತ್ನ್ಯಸ್ತೇಷಾಂ ಸಹಾऽಸಿರೇ ।
ಆಜ್ಞಯೈವ ಜಗದ್ಧಾತುರ್ವ್ಯಾಸಸ್ಯಾನಂತತೇಜಸಃ ॥೨೩೭॥

ಋತ್ವಿಜರು ವೇದವ್ಯಾಸರ ಆದೇಶದಂತೆ ಧರ್ಮರಾಜನನ್ನು ಯಜ್ಞದಲ್ಲಿ ದೀಕ್ಷಿತನನ್ನಾಗಿ ಮಾಡಿದರು. ಭೀಮಾರ್ಜುನಾದಿಗಳೆಲ್ಲರೂ ಯಜಮಾನತ್ವವನ್ನು ಜ್ಯೇಷ್ಠನಾದ ಪ್ರಯುಕ್ತ ಧರ್ಮರಾಜನಲ್ಲಿ ಇರಿಸಿ ತಾವು ಅವನೊಡನೆ ಕುಳಿತರು. ಸರಸ್ವತೀಪದವಿಗೆ ಯೋಗ್ಯಳಾದ್ದರಿಂದ ದ್ರೌಪದಿಯೊಬ್ಬಳೆ ಯಜಮಾನ ಪತ್ನಿಯಾಗಿ ಕುಳಿತಳು. ಪಾಂಡವರ ಬೇರೆ ಪತ್ನಿಯರು ಸರಸ್ವತೀಪದವಿಗೆ ಯೋಗ್ಯರಲ್ಲವಾದ್ದರಿಂದ ಅನಂತಶಕ್ತಿಉಳ್ಳ ಲೋಕಧಾರಕರಾದ ವೇದವ್ಯಾಸರ ಆಜ್ಞೆಯಂತೆ ಪಾಂಡವರ ಜೊತೆಗೆ ಕುಳಿತುಕೊಳ್ಳಲಿಲ್ಲ.

ಸ್ಥಲಮಪ್ಯತ್ರ ಸರ್ವಂ ಹಿ ರತ್ನಹೇಮಮಯಂ ತ್ವಭೂತ್ ।
ಕಿಮು ಪಾತ್ರಾದಿಕಂ ಸರ್ವಂ ಶಿಬಿರಾಣಿ ಚ ಸರ್ವಶಃ ॥೨೩೮॥

ಯಾಗಶಾಲೆಯಲ್ಲಿ ಎಲ್ಲ ಸ್ಥಳವೂ ಸುವರ್ಣರತ್ನಮಯವಾಗಿತ್ತು. ಯಜ್ಞಪಾತ್ರೆಗಳು ಮುಂತಾದವೂ ವಾಸಸ್ಥಳಗಳೂ ಸುವರ್ಣರತ್ನಮಯವೆಂದು ಬೇರೇನು ಹೇಳಬೇಕು?

ಆಹೂತಂ ದಿಗ್ಜಯೇ ಪಾರ್ಥೈಸ್ತದಾ ಲೋಕದ್ವಿಸಪ್ತಕಂ ।
ಸರ್ವಮತ್ರಾಗಮದ್ ಬ್ರಹ್ಮಶರ್ವಶಕ್ರಾದಿಪೂರ್ವಕಂ ॥೨೩೯॥

ದಿಗ್ವಿಜಯ ಕಾಲದಲ್ಲಿ ಭೀಮಾದಿಗಳು ಹದಿನಾಲ್ಕು ಲೋಕಗಳನ್ನೂ ಆಹ್ವಾನಿಸಿದ್ದರು. ಅದರಿಂದ ಬ್ರಹ್ಮರುದ್ರ ಇಂದ್ರ ಮುಂತಾಗಿ ಎಲ್ಲರೂ ಯಾಗಕ್ಕೆ ಬಂದರು.

ಭೀಷ್ಮೋ ದ್ರೋಣಶ್ಚ ವಿದುರೋ ಧೃತರಾಷ್ಟ್ರಃ ಸಹಾತ್ಮಜಃ ।
ಸಸ್ತ್ರೀಕಾ ಆಯಯುಸ್ತತ್ರ ಬಾಹ್ಲೀಕಶ್ಚ ಸಹಾತ್ಮಜಃ ॥೨೪೦॥

ಭೀಷ್ಮ ದ್ರೋಣ ವಿದುರ ಧೃತರಾಷ್ಟ್ರ, ಅವನ ಮಕ್ಕಳು, ಹೆಂಡಂದಿರು, ಬಾಹ್ಲೀಕ ಅವನ ಮಕ್ಕಳು ಎಲ್ಲರೂ ಅಲ್ಲಿಗೆ ಬಂದರು.

ತಥೈವ ಯಾದವಾಃ ಸರ್ವೇ ಬಲಭದ್ರಪುರೋಗಮಾಃ ।
ರುಗ್ಮಿಣೀಸತ್ಯಭಾಮಾದ್ಯಾ ಮಹಿಷ್ಯಃ ಕೇಶವಸ್ಯ ಚ ॥೨೪೧॥

ಬಲರಾಮ ಮುಂತಾದ ಎಲ್ಲ ಯಾದವರೂ ಬಂದರು. ರುಕ್ಮಿಣೀ ಸತ್ಯಭಾಮೆ ಮುಂತಾದ ಕೃಷ್ಣನ ಮಹಿಷಿಯರೂ ಬಂದರು.

ಮೂವತ್ತನೆಯ ಅಧ್ಯಾಯ

(ಕೃಷ್ಣನ ಅನುಮತಿಯನ್ನು ಪಡೆದು ಧರ್ಮರಾಜನಿಂದ ರಾಜಸೂಯಯಜ್ಞದ ಸಿದ್ಧತೆಗಳು.)

ವೈಶಂಪಾಯನಃ

ರಕ್ಷಣಾದ್ಧರ್ಮರಾಜಸ್ಯ ಸತ್ಯಸ್ಯ ಪರಿಪಾಲನಾತ್ ।
ಶತ್ರೂಣಾಂ ಕ್ಷಪಣಾಚ್ಚೈವ ಸ್ವಕರ್ಮನಿರತಾಃ ಪ್ರಜಾಃ ॥೧॥

ಧರ್ಮರಾಜನ ಪ್ರಜಾರಕ್ಷಣೆಯಿಂದಲೂ ಸತ್ಯಪರಿಪಾಲನೆಯಿಂದಲೂ ಮತ್ತು ಶತ್ರುನಾಶದಿಂದಲೂ ಎಲ್ಲ ಪ್ರಜೆಗಳೂ ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾದರು.

ಬಲೀನಾಂ ಸಮ್ಯಗಾದಾನಾದ್ ಧರ್ಮತಶ್ಚಾನುಶಾಸನಾತ್ ।
ನಿಕಾಮವರ್ಷೀ ಪರ್ಜನ್ಯಃ ಸ್ಫೀತೋ ಜನಪದೋಽಭವತ್ ॥೨॥

ಸರಿಯಾಗಿ ತೆರಿಗೆಗಳನ್ನು ತೆಗೆದು ಕೊಳ್ಳುವುದರಿಂದಲೂ ಧರ್ಮದಿಂದ ರಾಜ್ಯವಾಳುವುದರಿಂದಲೂ ಪರ್ಜನ್ಯನು ಬೇಕಾದಷ್ಟು ಮಳೆಯನ್ನು ಸುರಿಸಿದನು. ದೇಶವೆಲ್ಲವೂ ಸಮೃದ್ಧವಾಯಿತು.

ಸರ್ವಾರಂಭಾಃ ಸಂಪ್ರವೃತ್ತಾ ನೀರುಜೋ ನಿರುಪದ್ರವಾಃ ।
ಸ್ವಾದುಸಸ್ಯಾ ಚ ಪೃಥಿವೀ ಬಹುಪುಷ್ಪಫಲಾ ದ್ರುಮಾಃ ॥೩॥

ಎಲ್ಲ ಉಪಕ್ರಮಗಳೂ ಚೆನ್ನಾಗಿ ನಡೆದು ಫಲಗಾಮಿಗಳಾದವು. ಪ್ರಜೆಗಳು ರೋಗಗಳಿಂದ ಮತ್ತು ಉಪದ್ರವಗಳಿಂದ ರಹಿತರಾದರು ಭೂಮಿಯಲ್ಲಿ ರುಚಿಕರವಾದ ಧಾನ್ಯಗಳು ಬೆಳೆದವು. ವೃಕ್ಷಗಳು ಫಲಪುಷ್ಪಭರಿತವಾದವು.

ಬ್ರಾಹ್ಮಣಾ ಯಜ್ಞಸಂತಾನಾಃ ಕೃಷಿಗೋರಕ್ಷಣಂ ವಣಿಕ್ ।
ವಿಶೇಷೋತ್ಸವಮೇವೈತತ್ ಸಂಜಜ್ಞೇ ರಾಜಕರ್ಮಣಾ ॥೪॥

ಧರ್ಮರಾಜನ ಆಜ್ಞೆಯಂತೆ ಬ್ರಾಹ್ಮಣರು ಯಜ್ಞವಿಸ್ತಾರಗಳಲ್ಲಿ ತೊಡಗಿದರು. ವೈಶ್ಯರು ಕೃಷಿ ಮತ್ತು ಗೋರಕ್ಷಣೆಯಲ್ಲಿ ತೊಡಗಿದರು. ಅಲ್ಲಿ ರಾಜನ ಪ್ರಭಾವದಿಂದ ವಿಶೇಷ ಉತ್ಸವವೇ ಉಂಟಾಯಿತು.

ದಸ್ಯುಭ್ಯೋ ವಂಚಕೇಭ್ಯೋ ವಾ ಪ್ರತಿರೋಧಾತ್ ಪರಸ್ಪರಮ್ ।
ರಾಜವಲ್ಲಭತಶ್ಚೈವ ಶ್ರೂಯತೇ ನ ಮೃಷಾ ಗಿರಃ ॥೫॥

ಕಳ್ಳರಿಂದಾಗಲೀ ಅಥವಾ ವಂಚಕರಿಂದಲಾಗಲೀ ಅಥವಾ ಪ್ರಜೆಗಳ ಪರಸ್ಪರ ವಿರೋಧದಿಂದಲಾಗಲೀ ಅಥವಾ ರಾಜನ ಸಮೀಪ ಬಂಧುಗಳಿಂದಲಾಗಲೀ ಸುಳ್ಳುಮಾತುಗಳು ಕೇಳಿ ಬರುತ್ತಿರಲಿಲ್ಲ.

ಅವರ್ಷಂ ಚಾತಿವರ್ಷಂ ಚ ವ್ಯಾಧಿಪಾವಕಮೂರ್ಛನಮ್ ।
ಸರ್ವಮೇತತ್ ತದಾ ನಾಸೀದ್ ಧರ್ಮನಿತ್ಯೇ ಯುಧಿಷ್ಠಿರೇ ॥೬॥

ಯುಧಿಷ್ಠಿರನು ಯಾವಾಗಲೂ ಧರ್ಮನಿಷ್ಠನಾಗಿರಲು ಅವೃಷ್ಟಿಯಾಗಲೀ ಅತಿವೃಷ್ಟಿಯಾಗಲೀ ರೋಗಾಗ್ನಿಗಳ ಭಯವಾಗಲೀ ಯಾವುದೂ ಇರಲಿಲ್ಲ.

ಮನಸ್ತುಷ್ಟಿಂ ಪರಾಂ ಗಚ್ಛೇದ್ ಇತ್ಯೇವಂ ಮನಸಾ ನರಾಃ ।
ಸರ್ವಾತ್ಮನಾ ಪ್ರಿಯಾಣ್ಯೇವ ಕರ್ತುಂ ಸಮುಪಚಕ್ರಮುಃ ॥೭॥

ಧರ್ಮರಾಜನ ಮನಸ್ಸಿಗೆ ಸಂತೋಷವಾಗಲಿ ಎಂಬ ಅಭಿಪ್ರಾಯದಿಂದ ಎಲ್ಲಾ ರೀತಿಯಿಂದಲೂ ಪ್ರಜೆಗಳು ಅವನಿಗೆ ಪ್ರಿಯವಾದುದನ್ನೇ ಉಪಕ್ರಮಿಸಿದರು.

ಧರ್ಮ್ಯೈರ್ಧನಾಗಮೈಸ್ತಸ್ಯ ವವೃಧೇ ನಿಚಯೋ ಮಹಾನ್ ।
ಕರ್ತುಂ ಯಸ್ಯ ನ ಶಕ್ಯೇತ ಕ್ಷಯೋ ವರ್ಷಶತೈರಪಿ ॥೮॥

ಧರ್ಮಮೂಲವಾದ ಅವನ ಧನಾಗಮವು ನೂರುವರ್ಷಗಳಲ್ಲಿಯೂ ವ್ಯಯಮಾಡಲು ಸಾಧ್ಯವಿಲ್ಲದಂತೆ ದೊಡ್ಡರಾಶಿಯಾಗಿ ಬೆಳೆಯಿತು.

ಕೋಶಸ್ಯ ಸ ಪರೀಮಾಣಂ ಗೋಷ್ಠಸ್ಯ ಚ ಮಹೀಪತಿಃ ।
ವಿಜ್ಞಾಯ ರಾಜನ್ ಕೌಂತೇಯೋ ಯಜ್ಞಾಯೈವ ಮನೋ ದಧೇ ॥೯॥

ಮಹೀಪತಿಯು ತನ್ನ ಕೋಶದ ಮತ್ತು ಗೋಶಾಲೆಯ ಪರಿಮಾಣವನ್ನು ತಿಳಿದವನಾಗಿ ಕೌಂತೇಯನಾದ ಅವನು ಯಜ್ಞವನ್ನು ಮಾಡುವುದೆಂದೇ ನಿರ್ಧರಿಸಿದನು.

ಸುಹೃದಶ್ಚೈವ ತಂ ಸರ್ವೇ ಪೃಥಕ್ಚ ಸಹ ಚಾಬ್ರುವನ್ ।
ಯಜ್ಞಕಾಲಸ್ತವ ವಿಭೋ ಕ್ರಿಯತಾಮತ್ರ ಸಾಂಪ್ರತಮ್ ॥೧೦॥

ಅವನ ಎಲ್ಲಾ ಹಿತೈಷಿಗಳೂ ಒಟ್ಟಾಗಿ ಮತ್ತು ಬೇರೆಯಾಗಿ ವಿಭುವೇ! ಇದು ನಿನಗೆ ಯಜ್ಞವನ್ನುಮಾಡುವ ಕಾಲ. ಅದಕ್ಕೆ ಯೋಗ್ಯವಾದುದನ್ನು ಮಾಡು ಎಂದು ಹೇಳಿದರು.

ಅಥೈವಂ ಬ್ರುವತಾಮೇವ ತೇಷಾಮಭ್ಯಾಯಯೌ ಹರಿಃ ।
ಋಷಿಃ ಪುರಾಣೋ ವೇದಾತ್ಮಾ ದೃಶ್ಯಶ್ಚಾತ್ಮನಿ ಜಾನತಾಮ್ ॥೧೧॥

ಅವರು ಹೀಗೆ ಹೇಳುತ್ತಿದ್ದಂತೆ ಪುರಾಣಋಷಿಗಳೂ ವೇದದಲ್ಲಿಯೇ ಮನಸ್ಸುಳ್ಳವರೂ ಆತ್ಮಜ್ಞಾನಿಗಳಿಗೆ ಮಾತ್ರ ಗೋಚರಿಸುವವರೂ, ಆದ ವೇದವ್ಯಾಸರು ಅಲ್ಲಿಗೆ ಬಂದರು.

ಜಗತಸ್ತಸ್ಥುಷಾಂ ಶ್ರೇಷ್ಠಃ ಪ್ರಭವಶ್ಚಾಪ್ಯಯಶ್ಚ ಹ ।
ಭೂತಭವ್ಯಭವನ್ನಾಥಃ ಕೇಶವಃ ಕೇಶಿಸೂದನಃ ॥೧೨॥

ಪ್ರಾಕಾರಃ ಸರ್ವವೃಷ್ಣೀನಾಮಾಪತ್ಸ್ವಭಯದೋ ಗಿರಿಃ ।
ಬಲಾಧಿಕಾರೇ ನಿಕ್ಷಿಪ್ಯ ಸಮ್ಮಾನ್ಯಾನಕದುಂದುಭಿಮ್ ॥೧೩॥

ಉಚ್ಚಾವಚಮುಪಾದಾಯ ಧರ್ಮರಾಜಾಯ ಮಾಧವಃ ।
ಧನೌಘಂ ಪುರುಷವ್ಯಾಘ್ರೋ ಬಲೇನ ಮಹತಾ ವೃತಃ ॥೧೪॥

ತಂ ಧನೌಘಮಪರ್ಯಂತಂ ರತ್ನಸಾಗರಮಕ್ಷಯಮ್ ।
ಪೂರ್ಣಮಾಪೂರಯಂಸ್ತೇಷಾಂ ದ್ವಿಷಚ್ಛೋಕಾವಹೋऽಭವತ್ ।
ನಾದಯನ್ ರಥಘೋಷೇಣ ಪ್ರವಿವೇಶ ಪುರೋತ್ತಮಮ್ ॥೧೫॥

ಸ್ಥಾವರಜಂಗಮಜಗತ್ತಿನಲ್ಲಿ ಶ್ರೇಷ್ಠನಾದ, ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನಾದ, ಭೂತಭವಿಷ್ಯತ್‌ವರ್ತಮಾನ ಸಮಯಗಳಲ್ಲಿ ಇರುವ ಎಲ್ಲಾ ಜೀವರಿಗೂ ಒಡೆಯನಾದ ಎಲ್ಲಾ ವೃಷ್ಣಿಗಳಿಗೂ ಕೋಟೆಯಂತೆ ರಕ್ಷಕನಾದ, ಭಕ್ತರ ಆಪತ್ಕಾಲದಲ್ಲಿ ಪರ್ವತದಂತೆ ಅಭಯವನ್ನು ಕೊಡುವ ಕೇಶಿಸೂದನನಾದ ಕೇಶವನು ದ್ವಾರಕೆಯ ರಕ್ಷಣೆಯನ್ನೂ ಸೈನ್ಯದ ಅಧಿಕಾರವನ್ನೂ ಸತ್ಕರಿಸಿಲ್ಪಟ್ಟ ವಸುದೇವನಿಗೆ ಒಪ್ಪಿಸಿ ಶ್ರೇಷ್ಠವಾದ ಪದಾರ್ಥಗಳನ್ನು ತೆಗೆದುಕೊಂಡು ದೊಡ್ಡಸೈನ್ಯವನ್ನೂ ಧರ್ಮರಾಜನಿಗಾಗಿ ಧನರಾಶಿಯನ್ನೂ ತೆಗೆದುಕೊಂಡು ಹೊರಟು, ಪುರುಷವ್ಯಾಘ್ರನಾದ ಮಾಧವನು ಪಾಂಡವರಿಗೆ ಮೊದಲೇ ಪೂರ್ಣವಾಗಿದ್ದ ಅಕ್ಷಯವಾದ ರತ್ನಸಾಗರವನ್ನೂ ಮೇರೆಯೇ ಇಲ್ಲದ ಧನರಾಶಿಯನ್ನೂ ಇನ್ನೂ ಪೂರ್ಣಗೊಳಿಸುವವನಾಗಿ ಶತ್ರುಗಳ ಶೋಕವನ್ನು ಹೆಚ್ಚಿಸುವವನಾಗಿ ತನ್ನ ರಥಘೋಷದಿಂದ ದೊಡ್ಡ ನಾದವನ್ನು ಉಂಟುಮಾಡುತ್ತಾ, ಶ್ರೇಷ್ಠ ಪಟ್ಟಣವಾದ ಇಂದ್ರಪ್ರಸ್ಥವನ್ನು ಪ್ರವೇಶಿಸಿದನು.

ಅಸೂರ್ಯಮಿವ ಸೂರ್ಯೇಣ ನಿವಾತಮಿವ ವಾಯುನಾ ।
ಕೃಷ್ಣೇನ ಸಮುಪೇತೇನ ಜಹೃಷೇ ಭಾರತಂ ಪುರಮ್ ॥೧೬॥

ಸೂರ್ಯನಿಲ್ಲದಿದ್ದಾಗ ಸೂರ್ಯನು ಉದಯಿಸಿದಂತೆ, ವಾಯುವೇ ಇಲ್ಲದಿದ್ದಾಗ ತಂಗಾಳಿಯು ಬೀಸಿದಂತೆ, ಕೃಷ್ಣನ ಆಗಮನದಿಂದ ಆ ಭಾರತಪಟ್ಟಣವು ಸಂತೋಷಗೊಂಡಿತು.

ತಂ ಮುದಾऽಭಿಸಮಾಗಮ್ಯ ಸತ್ಕೃತ್ಯ ಚ ಯಥಾವಿಧಿ ।
ಸ ಪೃಷ್ಟ್ವಾ ಕುಶಲಂ ಚೈವ ಸುಖಾಸೀನಂ ಯುಧಿಷ್ಠಿರಃ ॥೧೭॥

ಧೌಮ್ಯದ್ವೈಪಾಯನಮುಖೈಃ ಋತ್ವಿಗ್ಭಿಃ ಪುರುಷರ್ಷಭಃ ।
ಭೀಮಾರ್ಜುನಯಮೈಶ್ಚಾಪಿ ಸಹಿತಃ ಕೃಷ್ಣಮಬ್ರವೀತ್ ॥೧೮॥

ಯುಧಿಷ್ಠರನು ಕೃಷ್ಣನನ್ನು ಸಂತೋಷದಿಂದ ಎದುರುಗೊಂಡು ವಿಧಿಪೂರ್ವಕವಾಗಿ ಸತ್ಕರಿಸಿ, ಕುಶಲ ಪ್ರಶ್ನೆಯನ್ನುಮಾಡಿ ಅನಂತರ ಅವನು ಸುಖವಾಗಿ ಕುಳಿತಿರುವಾಗ ಪುರುಷಶ್ರೇಷ್ಠನಾದ ಧರ್ಮರಾಜನು ಧೌಮ್ಯ ದ್ವೈಪಾಯನ ಮೊದಲಾದ ಋತ್ವಿಕ್‌ಗಳಿಂದಲೂ ಭೀಮಾರ್ಜುನ ನಕುಲ ಸಹದೇವರಿಂದಲೂ ಕೂಡಿದವನಾಗಿ ಕೃಷ್ಣನನ್ನು ಕುರಿತು ಹೇಳಿದನು.

ತ್ವತ್ಕೃತೇ ಪೃಥಿವೀ ಸರ್ವಾ ಮದ್ವಶೇ ಕೃಷ್ಣ ವರ್ತತೇ ।
ಧನಂ ಚ ಬಹು ವಾರ್ಷ್ಣೇಯ ತ್ವತ್ಪ್ರಸಾದಾದುಪಾರ್ಜಿತಮ್ ॥೧೯॥

ಕೃಷ್ಣನೇ! ನಿನ್ನ ನಿಮಿತ್ತದಿಂದಾಗಿ ಸಮಗ್ರವಾದ ಭೂಮಿಯು ನನ್ನ ವಶವಾಗಿದೆ. ವಾರ್ಷ್ಣೇಯನೇ! ನಿನ್ನ ಅನುಗ್ರಹದಿಂದಲೇ ಈ ಮಹಾಧನವು ಸಂಪಾದಿಸಲ್ಪಟ್ಟಿದೆ.

ಸೋಽಹಮಿಚ್ಛಾಮಿ ತತ್ ಸರ್ವಂ ವಿಧಿವದ್ ದೇವಕೀಸುತ ।
ಉಪಯೋಕ್ತುಂ ದ್ವಿಜಾಗ್ರ್ಯೇಷು ಹವ್ಯವಾಹೇ ಚ ಮಾಧವ ॥೨೦॥

ದೇವಕೀಸುತನಾದ ಮಾಧವನೇ! ನಾನು ಇದೆಲ್ಲವನ್ನೂ ವಿಧಿವತ್ತಾಗಿ ಬ್ರಾಹ್ಮಣರಲ್ಲಿ ಮತ್ತು ಅಗ್ನಿಯಲ್ಲಿ ವಿನಿಯೋಗಿಸಲು ಬಯಸುತ್ತೇನೆ.

ತದಹಂ ಯಷ್ಟುಮಿಚ್ಛಾಮಿ ದಾಶಾರ್ಹ ಸಹಿತಸ್ತ್ವಯಾ ।
ಅನುಜ್ಞೈಶ್ಚ ಮಹಾಬಾಹೋ ತ್ವಮನುಜ್ಞಾತುಮರ್ಹಸಿ ॥೨೧॥

ಆ ಕಾರಣದಿಂದ ದಾಶಾರ್ಹನೇ! ಮಹಾಬಾಹುವೇ! ನಾನು ನಿನ್ನಿಂದಲೂ ಮತ್ತು ತಮ್ಮಂದಿರಿಂದಲೂ ಸಹಿತನಾಗಿ ಯಜ್ಞವನ್ನು ಮಾಡಲು ಬಯಸುತ್ತೇನೆ. ನೀನು ಅನುಮತಿಯನ್ನು ಕೊಡಬೇಕು.

ಸ ದೀಕ್ಷಾಪಯ ಗೋವಿಂದ ತ್ವಮಾತ್ಮಾನಂ ಮಹಾಭುಜ ।
ತ್ವಯೀಷ್ಟವತಿ ದಾಶಾರ್ಹ ವಿಪಾಪ್ಮಾ ಭವಿತಾ ಹ್ಯಹಮ್ ॥೨೨॥

ಮಹಾಭುಜನಾದ ಗೋವಿಂದನೇ! ನನಗೆ ನೀನು ಯಜ್ಞದೀಕ್ಷೆಯನ್ನು ಕೊಡು ದಾಶರ್ಹಾನೇ! ನೀನು ಯಜ್ಞದೀಕ್ಷೆಯನ್ನು ಕೊಟ್ಟರೆ ನಾನು ಪಾಪರಹಿತನಾಗಿ ಪರಿಶುದ್ಧನಾಗುವೆನು.(ಅಥವಾ ನೀನೇ ಯಜ್ಞವನ್ನುಮಾಡು. ನೀನು ಯಜ್ಞವನ್ನು ಮಾಡಿದರೂ ನನ್ನ ಪಾಪವು ಪರಿಹಾರವಾಗುತ್ತದೆ.)

ತ್ವಂ ಮಾಮಭ್ಯನುಜಾನೀಹಿ ಸಹೈಭಿರನುಜೈರ್ವಿಭೋ ।
ಅನುಜ್ಞಾತಸ್ತ್ವಯಾ ಕೃಷ್ಣ ಪ್ರಾಪ್ನುಯಾಂ ಕ್ರತುಮುತ್ತಮಮ್ ॥೨೩॥

ವಿಭುವೇ! ನೀನು ನನಗೂ ಮತ್ತು ತನ್ನ ತಮ್ಮಂದಿರಿಗೂ ಅನುಮತಿಯನ್ನು ಕೊಡು. ಕೃಷ್ಣನೇ! ನಿನ್ನ ಅನುಮತಿಯಿಂದ ನಾನು ಶ್ರೇಷ್ಠವಾದ ಯಜ್ಞವನ್ನು ಆಚರಿಸುತ್ತೇನೆ.

ತಂ ಕೃಷ್ಣಃ ಪ್ರತ್ಯುವಾಚೇದಂ ಬಹೂಕ್ತ್ವಾ ಗುಣವಿಸ್ತರಮ್ ।
ತ್ವಮೇವ ರಾಜಶಾರ್ದೂಲ ಸಮ್ರಾಡರ್ಹೋ ಮಹಾಕ್ರತುಮ್ ।
ಸಂಪ್ರಾಪ್ನುಹಿ ತ್ವಯಾ ಪ್ರಾಪ್ತೇ ಕೃತಕೃತ್ಯಾಸ್ತತೋ ವಯಮ್ ॥೨೪॥

ಆಗ ಕೃಷ್ಣನು ಅವನನ್ನು ಕುರಿತು ಅವನ ವಿಸ್ತಾರವಾದ ಗುಣಗಳನ್ನು ಬಹಳವಾಗಿ ವರ್ಣಿಸಿದನು. ರಾಜಶಾರ್ದೂಲನೇ! ಸಮ್ರಾಟ್ ಪದವಿಗೆ ಅರ್ಹನಾದ ನೀನೇ ಈ ದೊಡ್ಡಯಾಗವನ್ನು ಮಾಡು. ನೀನು ಯಾಗವನ್ನು ಮಾಡಿದರೆ ನಾವೆಲ್ಲರೂ ಧನ್ಯರಾಗುತ್ತೇವೆ.

ಯಜಸ್ವಾಭೀಪ್ಸಿತಂ ಯಜ್ಞಂ ಮಯಿ ಶ್ರೇಯಸ್ಯವಸ್ಥಿತೇ ।
ನಿಯುಂಕ್ಷ್ವ ಚಾಪಿ ಮಾಂ ಕೃತ್ಯೇ ಸರ್ವಂ ಕರ್ತಾಸ್ಮಿ ತೇ ವಚಃ ॥೨೫॥

ನಾನು ನಿನ್ನ ಶ್ರೇಯಶ್ಚಿಂತಕನಾಗಿ ಇರುತ್ತಿರಲು ನಿನಗೆ ಅಭೀಷ್ಟವಾದ ಯಜ್ಞವನ್ನು ಮಾಡು. ನಾನು ಮಾಡಬೇಕಾದ ಕೆಲಸವನ್ನು ಹೇಳು. ನಿನ್ನ ಮಾತಿನಂತೆ ಎಲ್ಲವನ್ನೂ ಮಾಡುವೆನು.

ಯುಧಿಷ್ಠಿರಃ

ಸಫಲಃ ಕೃಷ್ಣ ಸಂಕಲ್ಪಃ ಸಿದ್ಧಿಶ್ಚ ನಿಯತಾ ಮಮ ।
ಯನ್ಮಮ ತ್ವಂ ಹೃಷೀಕೇಶ ಯಥೇಪ್ಸಿತಮವಸ್ಥಿತಃ ॥೨೬॥

ಕೃಷ್ಣನೇ! ಹೃಷೀಕೇಶನೇ! ನೀನು ನನಗೆ ಇಷ್ಟವಾದಂತೆ ನನ್ನ ಬಳಿಯಲ್ಲಿರುವಾಗ ನನ್ನ ಸಂಕಲ್ಪವು ಸಫಲವಾಗಿದೆ. ನನಗೆ ನಿಶ್ಚಿತವಾಗಿ ಸಿದ್ಧಿಯು ದೊರೆಯುತ್ತದೆ.

ವೈಶಂಪಾಯನಃ

ಅನುಜ್ಞಾತಸ್ತು ಕೃಷ್ಣೇನ ಪಾಂಡವೋ ಭ್ರಾತೃಭಿಃ ಸಹ ।
ಈಜಿತುಂ ರಾಜಸೂಯಾಯ ಸಾಧನಾನ್ಯುಪಚಕ್ರಮೇ ॥೨೭॥

ತಮ್ಮಂದಿರ ಜೊತೆಯಲ್ಲಿ ಕೃಷ್ಣನಿಂದ ಅನುಜ್ಞೆಯನ್ನು ಪಡೆದ ಪಾಂಡವನಾದ ಧರ್ಮರಾಜನು, ಯಜ್ಞವನ್ನು ಮಾಡಲು ರಾಜಸೂಯದ ಸಾಮಾಗ್ರಿಗಳನ್ನು ಸಂಪಾದಿಸಿಲು ಉಪಕ್ರಮಿಸಿದನು.

ತತ ಆಜ್ಞಾಪಯಾಮಾಸ ಪಾಂಡವೋಽರಿನಿಬರ್ಹಣಃ ।
ಸಹದೇವಂ ಯುಧಾಂ ಶ್ರೇಷ್ಠಂ ಮಂತ್ರಿಣಶ್ಚೈವ ಸರ್ವಶಃ ॥೨೮॥

ಆಗ ಶತ್ರುಸೂದನನಾದ ಧರ್ಮರಾಜನು ಯುದ್ಧದಲ್ಲಿ ಶ್ರೇಷ್ಠನಾದ ಸಹದೇವನಿಗೂ ಮತ್ತು ಎಲ್ಲಾ ಮಂತ್ರಿಗಳಗೂ ಆಜ್ಞೆಯನ್ನು ಮಾಡಿದನು.

ಅಸ್ಮಿನ್ ಕ್ರತೌ ಯಥೋಕ್ತಾನಿ ಯಜ್ಞಾಂಗಾನಿ ದ್ವಿಜಾತಿಭಿಃ ।
ತಥೋಪಕರಣಂ ಸರ್ವಂ ಮಂಗಲಾನಿ ಚ ಸರ್ವಶಃ ॥೨೯॥

ಅಧಿಯಜ್ಞಾರ್ಥಸಂಭಾರಾನ್ ಧೌಮ್ಯೋಕ್ತಾನ್ ಕ್ಷಿಪ್ರಮೇವ ಹಿ ।
ಸಮಾನಯಂತು ಪುರುಷಾ ಯಥಾಯೋಗಂ ಯಥಾಕ್ರಮಮ್ ॥೩೦॥

ಈ ಯಜ್ಞದಲ್ಲಿ ಬ್ರಾಹ್ಮಣರು ಹೇಳಿದಂತೆ ಯಜ್ಞಸಾಧನಗಳನ್ನೂ ಎಲ್ಲಾ ಉಪಕರಣಗಳನ್ನೂ, ಮಂಗಳ ದ್ರವ್ಯಗಳನ್ನೂ ದೊಡ್ಡಯಜ್ಞಕ್ಕೆ ಬೇಕಾದ ಧೌಮ್ಯರು ಹೇಳಿದ ಎಲ್ಲಾ ಸಂಭಾರಗಳನ್ನೂ ಶೀಘ್ರವಾಗಿ ಕ್ರಮದಿಂದ ಎಲ್ಲಾ ಪುರುಷರು ಅವರವರಿಗೆ ಸಾಧ್ಯವಾದುದನ್ನು ತರಲಿ.

ಇಂದ್ರಸೇನೋ ವಿಶೋಕಶ್ಚ ರುಗ್ಮಶ್ಚಾರ್ಜುನಸಾರಥಿಃ ।
ಶಮೀಕೋ ಧ್ವಜಸೇನಶ್ಚ ಪಂಚ ಸಾರಥಿಪುಂಗವಾಃ ।
ಅನ್ನಾದ್ಯಾಹರಣೇ ಯುಕ್ತಾಃ ಸಂತು ಮತ್ಪ್ರಿಯಕಾಮ್ಯಯಾ ॥೩೧॥

ನಮ್ಮ ಸಾರಥಿಪುಂಗವರಾದ ಇಂದ್ರಸೇನ (ಯುಧಿಷ್ಠಿರನ ಸಾರಥಿ) ವಿಶೋಕ (ಭೀಮನ ಸಾರಥಿ) ಅರ್ಜುನನ ಸಾರಥಿಯಾದ ರುಗ್ಮ ಶಮೀಕ(ನಕುಲನ ಸಾರಥಿ) ಮತ್ತು ಧ್ವಜಸೇನರು (ಸಹದೇವನಸಾರಥಿ) ನನಗೆ ಪ್ರಿಯವನ್ನು ಉಂಟುಮಾಡುವುದಕ್ಕಾಗಿ ಬ್ರಾಹ್ಮಣರಿಗೆ ಭೋಜನ ಪದಾರ್ಥಗಳನ್ನು ತರಲು ನಿಯುಕ್ತರಾಗಲಿ.

ಸರ್ವೇ ಪೇಯಾಂಶ್ಚ ಭಕ್ಷ್ಯಾಂಶ್ಚ ರಸಂ ಗಂಧಸಮನ್ವಿತಾನ್ ।
ಮನೋಹರಾನ್ ಪ್ರೀತಿಕರಾನ್ ದ್ವಿಜಾನಾಂ ಕುರುಸತ್ತಮ ॥೩೨॥

ಕುರುಶ್ರೇಷ್ಠನೇ! ಇದನ್ನು ಕೇಳಿದ ಆ ಸಾರಥಿಪುಂಗವರು ನಾವೆಲ್ಲರೂ ಬ್ರಾಹ್ಮಣರಿಗೆ ಪೇಯಗಳನ್ನೂ, ಭಕ್ಷ್ಯಗಳನ್ನೂ, ಸುಗಂಧಯುಕ್ತವಾದ ರಸಗಳನ್ನೂ, ಮನೋಹರವಾದ

ಮತ್ತು ಸಂತೋಷಕರವಾದ ಉಳಿದ ವಸ್ತುಗಳನ್ನೂ, ತರಲು ಸಿದ್ಧರಾಗಿದ್ದೇವೆ ಎಂದು ಹೇಳಿದರು.

ತದಾತ್ವಕ್ಯಸಮಕಾಲಂ ತು ಸರ್ವಂ ಕೃತಮವೇದಯತ್ ।
ಸಹದೇವೋ ಯುಧಾಂ ಶ್ರೇಷ್ಠೋ ಧರ್ಮರಾಜೇ ಮಹಾತ್ಮನೇ ॥೩೩॥

ಧರ್ಮರಾಜನು ಅಜ್ಞೆಯನ್ನು ಮಾಡಿದ ಸ್ವಲ್ಪ ಸಮಯದಲ್ಲಿಯೇ ಯುದ್ಧದಲ್ಲಿ ಶ್ರೇಷ್ಠನಾದ ಸಹದೇವನು ಮಹಾತ್ಮನಾದ ಧರ್ಮರಾಜನಿಗೆ ಎಲ್ಲವನ್ನು ಮಾಡಿದ್ದಾಗಿದೆ ಎಂದು ಹೇಳಿದನು.

ತತೋ ದ್ವೈಪಾಯನೋ ರಾಜನ್ ಋತ್ವಿಜಃ ಸಮುಪಾನಯತ್ ।
ವೇದಾನಿವ ಮಹಾಭಾಗಾನ್ ಸಾಕ್ಷಾನ್ಮೂರ್ತಿಮತೋ ದ್ವಿಜಾನ್ ॥೩೪॥

ರಾಜನೇ! ಅನಂತರ ವೇದವ್ಯಾಸರು ವೇದಗಳೇ ಶರೀರವನ್ನು ಧರಿಸಿ ಬಂದಂತಿದ್ದ ಮಹಾನುಭಾವರಾದ ಬ್ರಾಹ್ಮಣರನ್ನು ಋತ್ವಿಕ್‌ಗಳಾಗಿ ಕರೆದುಕೊಂಡು ಬಂದರು.

ಮೂರ್ತಿಮಾನ್ ಸಾಮವೇದೋಽಥ ವೇದವೇದಾಂಗಪಾರಗಃ ।
ಧನಂಜಯಾನಾಮೃಷಭಃ ಸುಸಾಮಾ ಸಾಮಗೋಽಭವತ್ ॥೩೫॥

ಯಾಜಕರಲ್ಲಿ ಶ್ರೇಷ್ಠನಾದ ವೇದವೇದಾಂಗ ಪಾರಂಗತನಾದ ಸಾಮವೇದವೇ ಶರೀರವನ್ನು ಧರಿಸಿದಂತಿದ್ದ ಸುಸಾಮ ಎಂಬ ಋಷಿಯು ಸಾಮಗನಾದನು.

ಯಾಜ್ಞವಲ್ಕ್ಯೋ ಬಭೂವಾಸ್ಯ ಬ್ರಹ್ಮಿಷ್ಠೋಽಧ್ವರ್ಯುಸತ್ತಮಃ ।
ಪೈಲೋ ಹೋತಾ ವಸೋಃ ಪುತ್ರೋ ರೈಭ್ಯೋ ಬ್ರಹ್ಮಾಽಥ ಸತ್ತಮಃ ॥೩೬॥

ಏತೇಷಾಂ ಶಿಷ್ಯವರ್ಗಾಶ್ಚ ಪುತ್ರಾಶ್ಚ ಭರತರ್ಷಭ ।
ಬಭೂವುರ್ಋತ್ವಿಜಃ ಸರ್ವೇ ವೇದವೇದಾಂಗಪಾರಗಾಃ ॥೩೭॥

ಬ್ರಹ್ಮಿಷ್ಠರಾದ ಯಾಜ್ಞವಲ್ಕ್ಯರು ಯಜ್ಞದಲ್ಲಿ ಶ್ರೇಷ್ಠರಾದ ಅಧ್ವರ್ಯುಗಳಾದರು. ಪೈಲರು ಹೋತೃಗಳಾದರು. ವಸುಪುತ್ರರಾದ ಶ್ರೇಷ್ಠತಮರಾದ ರೈಭ್ಯರು ಬ್ರಹ್ಮ ಋತ್ವಿಕ್‌ಗಳಾದರು. ಭರತರ್ಷಭನೇ! ವೇದವೇದಾಂಗಪಾರಂಗತರಾದ ಈ ಋಷಿಗಳ ಶಿಷ್ಯರು ಮತ್ತು ಪುತ್ರರೆಲ್ಲರೂ ಋತ್ವಿಕ್‌ಗಳು ಆದರು.

ಸ್ವಯಂ ಚ ಭಗವಾನ್ ವ್ಯಾಸಃ ಶಿಷ್ಯೈಃ ಸರ್ವೈಃ ಪುರಸ್ಕೃತಃ ।
ಕೃಷ್ಣದ್ವೈಪಾಯನೋ ರಾಜನ್ ಸಾದಸ್ಯಮಕರೋತ್ ಪ್ರಭುಃ ॥೩೮॥

ರಾಜನೇ! ಕೃಷ್ಣದ್ವೈಪಾಯನರಾದ ಪ್ರಭುಗಳಾದ ವೇದವ್ಯಾಸದೇವರು ತಾವೇ ಎಲ್ಲ ಶಿಷ್ಯರಿಂದಲೂ ಕೂಡಿಕೊಂಡು ಸದಸ್ಯಪದವಿಯನ್ನು ನಿರ್ವಹಿಸಿದರು.

ತೇ ಪೂಜಯಿತ್ವಾ ಪುಣ್ಯಾಹಮೀರಯಿತ್ವಾ ಮಹಾವ್ರತಾಃ ।
ಶಾಸ್ತ್ರೋಕ್ತಂ ಮಾಪಯಾಮಾಸುಃ ತದ್ದೇವಯಜನಂ ಮಹತ್ ॥೩೯॥

ಆ ಮಹಾವ್ರತರೆಲ್ಲರೂ ಆರಂಭದ ಪೂಜೆಯನ್ನು ಮಾಡಿ ಪುಣ್ಯಾಹವಾಚನವನ್ನು ಮಾಡಿ ಶಾಸ್ತ್ರೋಕ್ತರೀತಿಯಲ್ಲಿ ದೊಡ್ಡ ಯಜ್ಞಭೂಮಿಯನ್ನು ಅಳೆಸಿದರು.

ತತಶ್ಚಕ್ರುರನಾಜ್ಞಾತಾಃ ಶರಣಾನ್ಯಥ ಶಿಲ್ಪಿನಃ ।
ರತ್ನವಂತಿ ವಿಶಾಲಾನಿ ವೇಶ್ಮಾನೀವ ದಿವೌಕಸಾಮ್ ॥೪೦॥

ಅನಂತರ ಶಿಲ್ಪಿಗಳು ರಾಜನ ಆಜ್ಞೆಯನ್ನು ಕೇಳದೇ, ತಾವೇ ದೇವತೆಗಳ ಮನೆಗಳಂತಿದ್ದ ವಿಶಾಲವಾದ ರತ್ನಭರಿತವಾದ ಮನೆಗಳನ್ನು ನಿರ್ಮಾಣಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ತ್ರಿಂಶೋऽಧ್ಯಾಯಃ ॥
॥ ರಾಜಸೂಯಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಮೂವತ್ತನೆಯ ಅಧ್ಯಾಯವು ಮುಗಿಯಿತು.

★★★★★

ಮೂವತ್ತೊಂದನೆಯ ಅಧ್ಯಾಯ

(ಎಲ್ಲರ ಆಗಮನ; ಅಧಿಕಾರವ್ಯವಸ್ಥೆ; ಮತ್ತು ಯಾಗಾನುಷ್ಠಾನ.)

ವೈಶಂಪಾಯನಃ

ತತ ಆಜ್ಞಾಪಯಾಮಾಸ ಸ ರಾಜಾ ರಾಜಸತ್ತಮಃ
ಸಹದೇವಂ ತದಾ ಸದ್ಯೋ ಮಂತ್ರಿಣಃ ಕುರುಸತ್ತಮ ॥೧॥

ಕುರುಶ್ರೇಷ್ಠನೇ! ಅನಂತರ ರಾಜಶ್ರೇಷ್ಠನಾದ ಆ ಧರ್ಮರಾಜನು ತಕ್ಷಣದಲ್ಲಿಯೇ ಸಹದೇವನಿಗೂ ಮತ್ತು ಮಂತ್ರಿಗಳಿಗೂ ಆಜ್ಞೆಯನ್ನು ಮಾಡಿದನು.

ಆಮಂತ್ರಣಾರ್ಥಂ ದೂತಾಂಶ್ಚ ಪ್ರೇಷಯಸ್ವಾಶುಗಾನ್ ದ್ರುತಮ್ ।
ಉಪಶ್ರುತ್ಯ ವಚೋ ರಾಜ್ಞಃ ಸ ದೂತಾನ್ ಪ್ರಾಹಿಣೋತ್ ತದಾ ॥೨॥

ಎಲ್ಲರನ್ನು ಆಹ್ವಾನಮಾಡುವುದಕ್ಕೊಸ್ಕರ ಶೀಘ್ರವಾಗಿಹೋಗುವ ದೂತರನ್ನು ಬೇಗೆ ಕಳುಹಿಸು ಹೀಗೆ ಹೇಳಿದ ಧರ್ಮರಾಜನ ಮಾತನ್ನು ಕೇಳಿ ಸಹದೇವನು ದೂತರನ್ನು ಕಳುಹಿಸಿದನು.

ಆಮಂತ್ರಯಧ್ವಂ ರಾಷ್ಟ್ರೇಷು ಬ್ರಾಹ್ಮಣಾನ್ ಭೂಮಿಪಾನಪಿ ।
ವಿಶಶ್ಚ ಮಾನ್ಯಾನ್ ಶೂದ್ರಾಂಶ್ಚ ಸರ್ವಾನಾನಯತೇತಿ ಚ ॥೩॥

ಬೇರೆ ಬೇರೆ ರಾಷ್ಟ್ರಗಳಲ್ಲಿರುವ ಬ್ರಾಹ್ಮಣರನ್ನೂ ರಾಜರನ್ನೂ ವೈಶ್ಯರನ್ನೂ ಮಾನ್ಯರಾದ ಶೂದ್ರರನ್ನೂ ಎಲ್ಲರನ್ನೂ ಆಹ್ವಾನಿಸಿ ಕರೆದುಕೊಂಡು ಬನ್ನಿ. (ಎಂದೂ ಧರ್ಮರಾಜನು ಆಜ್ಞೆಮಾಡಿದನು.)

ತೇ ಸರ್ವಾನ್ ಪೃಥಿವೀಪಾಲಾನ್ ಪಾಂಡವೇಯಸ್ಯ ಶಾಸನಾತ್।
ಆಮಂತ್ರಯಾಂಬಭೂವುಸ್ತೇ ಪ್ರೇಷಯಾಮಾಸ ಚಾಪರಾನ್ ॥೪॥

ಆ ದೂತರೆಲ್ಲರೂ ಪಾಂಡುಪುತ್ರನಾದ ಧರ್ಮರಾಜನ ಶಾಸನದಂತೆ ಎಲ್ಲರನ್ನೂ ಆಹ್ವಾನಿಸಲು. ಸಹದೇವನು ಬೇರೆ ದೂತರನ್ನು ಬೇರೆ ಬೇರೆ ಕಡೆಗೆ ಕಳುಹಿಸಿದನು.

ದೂತಾಶ್ಚ ವಾಹನೈರ್ಜಗ್ಮು ರಾಷ್ಟ್ರಾಣಿ ಸುಬಹೂನ್ಯಪಿ ।
ತತೋ ಯುಧಿಷ್ಠಿರೋ ರಾಜಾ ಪ್ರೇಷಯಾಮಾಸ ಪಾಂಡವಮ್ । ।೫।।

ನಕುಲಂ ಹಸ್ತಿನಪುರಂ ಭೀಷ್ಮಾಯ ಭರತರ್ಷಭ ।
ಬಾಹ್ಲಿಕಾಯ ಸಪುತ್ರಾಯ ಭೂರಿಶ್ರವಸಕರ್ಣಯೋಃ ।
ಭ್ರಾತೄಣಾಂ ಚೈವ ಸರ್ವೇಷಾಂ ಯೇಽನುರಕ್ತಾ ಯುಧಿಷ್ಠಿರೇ ।।೬।।

ಭರತರ್ಷಭನೇ! ದೂತರೆಲ್ಲರೂ ವಾಹನಗಳಲ್ಲಿ ಅನೇಕ ರಾಷ್ಟ್ರಗಳಿಗೆ ಹೋದರು. ಅನಂತರ ಧರ್ಮರಾಜನು ಭೀಷ್ಮ, ಪುತ್ರಸಹಿತನಾದ ಬಾಹ್ಲಿಕ ಭೂರಿಶ್ರವಸ್ಸು, ಕರ್ಣ, ತನ್ನ ಎಲ್ಲಾ ಸೋದರರು ಮತ್ತು ತನ್ನಲ್ಲಿ ಅನುರಕ್ತರಾದವರು ಇವರುಗಳನ್ನು ಆಹ್ವಾನಮಾಡಲು ಪಾಂಡುಪುತ್ರನಾದ ನಕುಲನನ್ನು ಹಸ್ತಿನಪುರಕ್ಕೆ ಕಳುಹಿಸಿದನು.

ಸ ಗತ್ವಾ ಹಸ್ತಿನಪುರಂ ನಕುಲಃ ಸಮಿತಿಂಜಯಃ।।
ಭೀಷ್ಮಮಾಮಂತ್ರಯಾಮಾಸ ಧೃತರಾಷ್ಟ್ರಂ ಚ ಪಾಂಡವಃ ।।೭।।

ಪಾಂಡು ಪುತ್ರನಾದ ಸಮಿಂತಿಜಯನಾದ (ಯುದ್ಧದಲ್ಲಿ ಜಯಶೀಲನಾದ) ಆ ನಕುಲನು ಹಸ್ತಿನಪುರಕ್ಕೆ ಹೋಗಿ ಭೀಷ್ಮರನ್ನು ಮತ್ತು ಧೃತರಾಷ್ಟ್ರನನ್ನು ಆಮಂತ್ರಿಸಿದನು.

ತತಸ್ತೇ ತು ಯಥಾಕಾಲಂ ಕುಂತೀಪುತ್ರಂ ಯುಧಿಷ್ಠಿರಮ್ ।
ದೀಕ್ಷಯಾಂಚಕ್ರಿರೇ ವಿಪ್ರಾ ರಾಜಸೂಯಾಯ ಭಾರತ ।।೮।।

ಭಾರತನೇ! ಅನಂತರ ಬ್ರಾಹ್ಮಣರೆಲ್ಲರೂ ಯೋಗ್ಯಕಾಲದಲ್ಲಿ ಕುಂತೀ ಪುತ್ರನಾದ ಯುಧಿಷ್ಠಿರನಿಗೆ ರಾಜಸೂಯಯಾಗದ ದೀಕ್ಷೆಯನ್ನು ಮಾಡಿದರು.

ಜ್ಯೇಷ್ಠೇ ಮೂಲೇ ಅಮಾವಾಸ್ಯಾಂ ಮಹಾಜನಸಮಾವೃತಃ ।
ರೌರವಾಜಿನಸಂವೀತೋ ನವನೀತಾಕ್ತದೇಹವಾನ್ ।।೯।।

ದೀಕ್ಷಿತಃ ಸ ತು ಧರ್ಮಾತ್ಮಾ ಧರ್ಮರಾಜೋ ಯುಧಿಷ್ಠಿರಃ ।
ಜಗಾಮ ಯಜ್ಞಾಯತನಂ ವೃತೋ ವಿಪ್ರೈಃ ಸಹಸ್ರಶಃ ।।೧೦।।

ಜ್ಯೇಷ್ಠಮಾಸದಲ್ಲಿ ಅಮಾವಾಸ್ಯೆಯಂದು ಮೂಲಾನಕ್ಷತ್ರದಲ್ಲಿ ಮಹಾಜನಗಳಿಂದ ಪರಿವೃತನಾಗಿ ಕೃಷ್ಣಾಜಿನವನ್ನು ಧರಿಸಿ ನವನೀತದಿಂದ ಲೇಪಿಸಲ್ಪಟ್ಟ ಶರೀರವುಳ್ಳವನಾದ

ಧರ್ಮಾತ್ಮನಾದ ಯುಧಿಷ್ಠಿರನು ದೀಕ್ಷಿತನಾಗಿ ಸಹಸ್ರಾರು ವಿಪ್ರರಿಂದ ಪರಿವೃತನಾಗಿ ಯಜ್ಞಶಾಲೆಗೆ ಹೋದನು.

ಭ್ರಾತೃಭಿರ್ಜ್ಞಾತಿಭಿಶ್ಚೈವ ಸುಹೃದ್ಭಿಃ ಸಚಿವೈಸ್ತಥಾ ।
ಕ್ಷತ್ರಿಯೈಶ್ಚ ಮನುಷ್ಯೈ ಶ್ಚ ನಾನಾದೇಶಸಮಾಗತೈಃ ।
ಅಮಾತ್ಯೈ ಶ್ಚ ನೃಪಶ್ರೇಷ್ಠೋ ಧರ್ಮೋ ವಿಗ್ರಹವಾನಿವ ॥೧೧॥

ತಮ್ಮಂದಿರಿಂದಲೂ ದಾಯಾದಿಗಳಿಂದಲೂ ಹಿತೈಷಿಗಳಿಂದಲೂ ಸಚಿವರಿಂದಲೂ ಕ್ಷತ್ರಿಯರಿಂದಲೂ, ಮನುಷ್ಯರಿಂದಲೂ, ನಾನಾದೇಶಗಳಿಂದ ಬಂದ ಅಮಾತ್ಯರಿಂದಲೂ, ಕೂಡಿದವನಾಗಿ ನೃಪಶ್ರೇಷ್ಠನಾದ ಧರ್ಮರಾಜನು ಧರ್ಮವೇ ಮೈವೆತ್ತಂತೆ ಯಜ್ಞಶಾಲೆಯನ್ನು ಪ್ರವೇಶಿಸಿದನು.

ಆಜಗ್ಮುರ್ಬ್ರಾಹ್ಮಣಾಸ್ತತ್ರ ವಿಷಯೇಭ್ಯಸ್ತತಸ್ತತಃ ।
ಸರ್ವವಿದ್ಯಾಸು ನಿಷ್ಣಾತಾ ವೇದವೇದಾಂಗಪಾರಗಾಃ ॥೧೨॥

ಅಲ್ಲಿಗೆ ಬೇರೆ ಬೇರೆ ದೇಶಗಳಿಂದ ಎಲ್ಲ ವಿದ್ಯೆಗಳಲ್ಲಿಯೂ ನಿಷ್ಣಾತರಾದ ವೇದವೇದಾಂಗ ಪಾರಂಗತರಾದ ಬ್ರಾಹ್ಮಣರು ಬಂದರು.

ತೇಷಾಮಾವಸಥಾಂಶ್ಚಕ್ರುರ್ಧರ್ಮರಾಜಸ್ಯ ಶಾಸನಾತ್ ।
ಬಹ್ವನ್ನಾನ್ ವ್ಯಂಜನೈರ್ಯುಕ್ತಾನ್ ಸಗಣಾನಾಂ ಪೃಥಕ್ ಪೃಥಕ್ ।
ಸರ್ವರ್ತುಗುಣಸಂಪನ್ನಾನ್ ಶಿಲ್ಪಿನೋಽಥ ಸಹಸ್ರಶಃ ॥೧೩॥

ಧರ್ಮರಾಜನ ಶಾಸನದಂತೆ ಗೃಹನಿರ್ಮಾಣಶಿಲ್ಪಿಗಳು ಅವರೆಲ್ಲರಿಗೂ ಮತ್ತು ಅವರ ಪರಿವಾರಗಳಿಗೂ ಎಲ್ಲ ಋತುಗಳ ಗುಣಗಳಿಂದ ಕೂಡಿದಂತಹ ಅನ್ನ ಮತ್ತು ವ್ಯಂಜನಗಳಿಂದ ತುಂಬಿದಂತಹ ಬಿಡಾರಗಳನ್ನು ಸಹಸ್ರ ಸಂಖ್ಯೆಯಲ್ಲಿ ನಿರ್ಮಾಣಮಾಡಿದರು.

ತೇಷು ತೇ ನ್ಯವಸನ್ ರಾಜನ್ ಬ್ರಾಹ್ಮಣಾ ಭೃಶಸತ್ಕೃತಾಃ ।
ಕಥಯಂತಃ ಕಥಾ ಬಹ್ವೀಃ ಪಶ್ಯಂತೋ ನಟನರ್ತಕಾನ್ ॥೧೪॥

ರಾಜನೇ! ಅತ್ಯಂತ ಸತ್ಕೃತರಾದ ಆ ಬ್ರಾಹ್ಮಣರು ಆ ಬಿಡಾರಗಳಲ್ಲಿ ಅನೇಕ ಕಥೆಗಳನ್ನು ಹೇಳುತ್ತಾ ನೆಟ ನರ್ತಕರನ್ನು ನೋಡುತ್ತಾ ವಾಸಮಾಡಿದರು.

ಭುಂಜತಾಂ ಚಾಥ ವಿಪ್ರಾಣಾಂ ದದತಾಂ ಚ ಮಹಾತ್ಮನಾಮ್ ।
ಅನಿಶಂ ಶ್ರೂಯತೇ ಚಾತ್ರ ಮುದಿತಾನಾಂ ಮಹಾಸ್ವನಃ ॥೧೫॥

ಭೋಜನವನ್ನು ಮಾಡುವ ವಿಪ್ರರ ಮತ್ತು ದಾನವನ್ನು ಕೊಡುವ ಮಹಾತ್ಮರಾದ ಕ್ಷತ್ರಿಯರು ಸಂತೋಷಯುಕ್ತನಾದ ಮಹಾಸ್ವನವು ಅಲ್ಲಿ ಸತತವಾಗಿ ಕೇಳಿಬರುತ್ತಿತ್ತು.

ದೀಯತಾಂ ದೀಯತಾಮೇಷಾಂ ಭುಜ್ಯತಾಂ ಭುಜ್ಯತಾಮಿತಿ ।
ಏವಂಪ್ರಕಾರಾಃ ಸಂಜಲ್ಪಾಃ ಶ್ರೂಯಂತೇ ಸ್ಮಾತ್ರ ನಿತ್ಯಶಃ ॥೧೬॥

ಇವರಿಗೆ ದಾನವನ್ನು ಕೊಡಿ. ಅವರಿಗೆ ದಾನವನ್ನು ಕೊಡಿ, ಭೋಜನವನ್ನು ಮಾಡಿ, ಭೋಜನವನ್ನು ಮಾಡಿ ಎಂಬ ಈ ರೀತಿಯಾದ ಮಾತುಗಳು ಅಲ್ಲಿ ಯಾವಾಗಲೂ ಕೇಳಿ ಬರುತ್ತಿತ್ತು.

ಗವಾಯುತಸಹಸ್ರಾಣಿ ಶಯನಾನಾಂ ಶತಾನಿ ಚ ।
ರುಗ್ಮಸ್ಯ ಯೋಷಿತಾಂ ಚೈವ ಧರ್ಮರಾಜಃ ಪೃಥಗ್ ದದೌ ॥೧೭॥

ಧರ್ಮರಾಜನು ಅವರಿಗೆಲ್ಲಾ ಒಂದು ಕೋಟಿ ಗೋವುಗಳನ್ನೂ ನೂರಾರು ಶಯನಗಳನ್ನೂ, ಸುವರ್ಣ ಮತ್ತು ದಾಸಿಯರನ್ನೂ ಬೇರೆ ಬೇರೆಯಾಗಿ ಕೊಟ್ಟನು.

ಪ್ರಾವರ್ತತೈವಂ ಯಜ್ಞಃ ಸ ಪಾಂಡವಸ್ಯ ಮಹಾತ್ಮನಃ ।
ಪೃಥಿವ್ಯಾಮೇಕವೀರಸ್ಯ ಶಕ್ರಸ್ಯೇವ ತ್ರಿವಿಷ್ಟಪೇ ॥೧೮॥

ಸ್ವರ್ಗದಲ್ಲಿ ಇಂದ್ರನ ಯಾಗದಂತೆ ಪೃಥಿವಿಯಲ್ಲಿ ಮುಖ್ಯವೀರನಾದ ಮಾಹಾತ್ಮನಾದ ಪಾಂಡವನ ಯಜ್ಞವು ಈ ರೀತಿ ಜರುಗಿತು.

ತತ ಆಮಂತ್ರಿತಾ ರಾಜನ್ ರಾಜಾನಃ ಸತ್ಕೃತಾಸ್ತದಾ ।
ಪುರೇಭ್ಯಃ ಪ್ರಯಯುಃ ಸ್ವೇಭ್ಯೋ ವಿಮಾನೇಭ್ಯ ಇವಾಮರಾಃ ॥೧೯॥

ರಾಜನೇ! ಸತ್ಕರಿಸಿ, ಆಮಂತ್ರಿಸಲ್ಪಟ್ಟ ಎಲ್ಲಾ ರಾಜರೂ ಆಗ ತಮ್ಮ ತಮ್ಮ ಪಟ್ಟಣಗಳಿಂದ ವಿಮಾನಗಳಲ್ಲಿ ದೇವತೆಗಳು ಬಂದಂತೆ ಅಲ್ಲಿಗೆ ಬಂದರು.

ತೇ ವೈ ದಿಗ್ಭ್ಯಃ ಸಮಾಪೇತುಃ ಪಾರ್ಥಿವಾಸ್ತತ್ರ ಭಾರತ ।
ಸಮಾದಾಯ ಮಹಾರ್ಹಾಣಿ ರತ್ನಾನಿ ವಿವಿಧಾನಿ ಚ ॥೨೦॥

ಭಾರತನೇ! ಆ ರಾಜರು ಬೆಲೆಬಾಳುವ ವಿವಿಧವಾದ ರತ್ನಗಳನ್ನು ತೆಗೆದು ಕೊಂಡು ಬೇರೆ ಬೇರೆ ದಿಕ್ಕುಗಳಿಂದ ಅಲ್ಲಿಗೆ ಆಗಮಿಸಿದರು.

ತಚ್ಛ್ರುತ್ವಾ ಧರ್ಮರಾಜಸ್ಯ ಯಜ್ಞಂ ಯಜ್ಞವಿದಸ್ತದಾ ।
ರಾಜಾನಃ ಶತಶಸ್ತುಷ್ಟೈರ್ಮನೋಭಿರ್ಭರತರ್ಷಭ ॥೨೧॥

ಬಹು ವಿತ್ತಂ ಸಮಾದಾಯ ವಿವಿಧಾಃ ಪಾರ್ಥಿವಾ ಯಯುಃ ।
ದ್ರಷ್ಟುಕಾಮಾಃ ಸಭಾಂ ಚೈವ ಧರ್ಮರಾಜಂ ಚ ಪಾಂಡವಮ್ ॥೨೨॥

ಭರತರ್ಷಭನೇ! ಧರ್ಮರಾಜನ ಯಜ್ಞದ ವಿಷಯವನ್ನು ಕೇಳಿ ಯಜ್ಞದ ಮಹತ್ವವನ್ನು ತಿಳಿದ ರಾಜರು, ನೂರಾರು ಸಂಖ್ಯೆಯಲ್ಲಿ ಸಂತುಷ್ಟವಾದ ಮನಸ್ಸಿಂದ ಕೂಡಿದವರಾಗಿ, ವಿಧವಿಧವಾದ ಬಹುಧನವನ್ನು ತೆಗೆದುಕೊಂಡು, ಪಾಂಡವನಾದ ಧರ್ಮರಾಜನ ಸಭೆಯನ್ನೂ ಮತ್ತು ಧರ್ಮರಾಜನನ್ನೂ ನೋಡುವ ಉದ್ದೇಶದಿಂದ ಸಹ ಅಲ್ಲಿಗೆ ಬಂದರು.

ನಕುಲೋ ಹಸ್ತಿನಪುರಂ ಗತ್ವಾ ಪರಪುರಂಜಯಃ ।
ಪ್ರಯತಃ ಪ್ರಾಂಜಲಿರ್ಭೂತ್ವಾ ಭಾರತಾನಾನಯತ್ ತದಾ ॥೨೩॥

ಪರಪುರಂಜಯನಾದ ವಿನೀತನಾದ ನಕುಲನು ಹಸ್ತಿನಪುರಕ್ಕೆ ಹೋಗಿ ಕೈಗಳನ್ನು ಮುಗಿದು ಎಲ್ಲಾ ಭರತವಂಶದವರನ್ನು ಕರೆದುಕೊಂಡು ಬಂದನು.

ಭೀಷ್ಮಂ ಚ ಧೃತರಾಷ್ಟ್ರಂ ಚ ವಿದುರಂ ಚ ಮಹಾಮತಿಃ ।
ದುರ್ಯೋಧನಪುರೋಗಾಂಶ್ಚ ಭ್ರಾತೄನ್ ಸರ್ವಾನಥಾನಯತ್ ॥೨೪॥

ಮಹಾಮತಿಯಾದ ನಕುಲನು ಭೀಷ್ಮನನ್ನು ಧೃತರಾಷ್ಟ್ರನನ್ನು ವಿದುರನನ್ನು ದುರ್ಯೋಧನನೇ ಮೊದಲಾದ ಎಲ್ಲಾ ಸಹೋದರರನ್ನು ಕರೆದುಕೊಂಡು ಬಂದನು.

ಸತ್ಕೃತ್ಯಾಮಂತ್ರಿತಾಃ ಸರ್ವೇ ಕೃಪದ್ರೋಣಮುಖಾ ನೃಪಾಃ ।
ಪುರೇಭ್ಯಃ ಪ್ರಯಯುಃ ಸರ್ವೇ ಯಜ್ಞಂ ಬ್ರಹ್ಮಪುರಸ್ಸರಾಃ ॥೨೫॥

ಸತ್ಕರಿಸಿ, ಆಮಂತ್ರಿಸಲ್ಪಟ್ಟ ರಾಜರೆಲ್ಲರೂ ಬ್ರಾಹ್ಮಣರನ್ನು ಮುಂದೆಮಾಡಿಕೊಂಡು ತಮ್ಮ ತಮ್ಮ ಪಟ್ಟಣಗಳಿಂದ ಯಜ್ಞಕ್ಕೆ ಬಂದರು. ಕೃಪ ದ್ರೋಣ ಮೊದಲಾದವರೂ ಯಜ್ಞಕ್ಕೆ ಬಂದರು.

ಗಾಂಧಾರರಾಜಃ ಶಕುನಿಃ ಸುಬಲಶ್ಚ ಮಹಾಬಲಃ ।
ಅಚಲೋ ವೃಷಕಶ್ಚೈವ ಕರ್ಣಶ್ಚ ದದತಾಂ ವರಃ ॥೨೬॥

ಋತಃ ಶಲ್ಯೋ ಮದ್ರರಾಜೋ ಬಾಹ್ಲಿಕಶ್ಚ ಮಹಾಬಲಃ ।
ಸೋಮದತ್ತೋಽಥ ಕೌರವ್ಯೋ ಭೂರಿರ್ಭೂರಿಶ್ರವಾಃ ಶಲಃ ॥೨೭॥

ಅಶ್ವತ್ಥಾಮಾ ಕೃಪೋ ದ್ರೋಣಃ ಸೈಂಧವಶ್ಚ ಜಯದ್ರಥಃ ।
ಯಜ್ಞಸೇನಃ ಸಪುತ್ರಶ್ಚ ಸಾಲ್ವಶ್ಚ ವಸುಧಾಧಿಪಃ ॥೨೮॥
ಪ್ರಾಗ್ಜ್ಯೋತಿಷಶ್ಚ ನೃಪತಿರ್ಭಗದತ್ತೋ ಮಹಾಯಶಾಃ ।

ಸಹ ಸರ್ವೈಸ್ತಥಾ ಮ್ಲೇಚ್ಛೈಃ ಸಾಗರಾನೂಪವಾಸಿಭಿಃ ॥೨೯॥
ಪಾರ್ವತೀಯಾಶ್ಚ ರಾಜಾನೋ ರಾಜಾ ಚೈವ ಬೃಹದ್ಬಲಃ ।

ಪೌಂಡ್ರಕೋ ವಾಸುದೇವಶ್ಚ ವಂಗಃ ಕಾಲಿಂಗಕಸ್ತಥಾ ॥೩೦॥
ಆಕರ್ಷಾಃ ಕುಂತಲಾಶ್ಚೈವ ವಾನಪ್ರಸ್ಥಾ ವೃಕಾಸ್ತಥಾ ।

ದ್ರಾಮಿಳಾಃ ಸಿಂಹಳಾಃ ಪಾಂಡ್ಯಾ ರಾಜಾ ಕಾಶ್ಮೀರಕಸ್ತಥಾ ॥೩೧॥

ಕುಂತಿಭೋಜೋ ಮಹಾತೇಜಾಃ ಸುಭ್ರೂಶ್ಚ ಸುಮಹಾಬಲಃ ।
ಬಾಹ್ಲಿಕಾಶ್ಚಾಪರೇ ಶೂರಾ ರಾಜಾನಃ ಸರ್ವ ಏವ ಹಿ ॥೩೨॥

ವಿರಾಟಃ ಸಹ ಪುತ್ರಾಭ್ಯಾಂ ಪಾಂಚಾಲಾಶ್ಚ ಮಹಾರಥಾಃ ।
ರಾಜಾನೋ ರಾಜಪುತ್ರಾಶ್ಚ ನಾನಾಜನಪದೇಶ್ವರಾಃ ॥೩೩॥

ಶಿಶುಪಾಲೋ ಮಹಾವೀರ್ಯಃ ಸಹ ಪುತ್ರೇಣ ಭಾರತ ।
ಆಗಚ್ಛತ್ ಪಾಂಡವೇಯಸ್ಯ ಯಜ್ಞಂ ಸಂಗ್ರಾಮದುರ್ಮದಃ ॥೩೪॥

ಗಾಂಧಾರರಾಜನಾದ ಶಕುನಿ, ಮಹಾಬಲನಾದ ಅವನ ತಂದೆಯಾದ ಸುಬಲ, ಅಚಲ, ವೃಷಕ, ದಾನಶೂರನಾದ ಕರ್ಣ, ಋತ, ಮದ್ರರಾಜನಾದ ಶಲ್ಯ,

ಮಹಾಬಲನಾದ ಬಾಹ್ಲಿಕ, ಕೌರವ ವಂಶಕ್ಕೆ ಸೇರಿದ ಸೋಮದತ್ತ, ಭೂರಿ ಭೂರಿಶ್ರವ ಮತ್ತು ಶಲ, ಅಶ್ವತ್ಥಾಮ ಕೃಪಾ ದ್ರೋಣ ಸಿಂಧುದೇಶದ ಅಧಿಪತಿಯಾದ ಜಯದ್ರಥ, ಪುತ್ರನಿಂದ ಕೂಡಿದ ಯಜ್ಞಸೇನ, ಸಾಲ್ವರಾಜ, ಮಹಾಯಶಸ್ವಿಯಾದ ಪ್ರಾಗ್‌ಜ್ಯೋತಿಷ ಪಟ್ಟಣದ ರಾಜನಾದ ಭಗದತ್ತ, ಸಮುದ್ರತೀರಲ್ಲಿ ವಾಸಿಸುವ ಮ್ಲೇಚ್ಛರಿಂದ ಕೂಡಿದ ಪರ್ವತದೇಶದ ಎಲ್ಲಾ ರಾಜರುಗಳು, ಬೃಹದ್ಬಲರಾಜ, ಪೌಂಡ್ರಕವಾಸುದೇವ, ವಂಗ, ಕಳಿಂಗಾಧಿಪತಿಗಳು, ಆಕರ್ಷರು, ಕುಂತಳರು, ವಾನಪ್ರಸ್ಥರು, ವೃಕದೇಶನಿವಾಸಿಗಳು . ದ್ರಾವಿಡರು, ಸಿಂಹಳರು, ಪಾಂಡ್ಯರು, ಕಾಶ್ಮೀರರಾಜ, ಮಹಾತೇಜಸ್ವಿಯಾದ ಕುಂತಿಭೋಜ, ಬಲಶಾಲಿಯಾದ ಸುಭ್ರು, ಬಾಹ್ಲಿಕದೇಶದ ಶೂರರಾದ ಬೇರೆ ರಾಜರುಗಳು ತನ್ನ ಇಬ್ಬರು ಮಕ್ಕಳಿಂದ ಕೂಡಿದ ವಿರಾಟ ಮಹಾರಥರಾದ ಪಾಂಚಾಲರಾಜರು ಬೇರೆ ಬೇರೆ ದೇಶಗಳ ರಾಜರು ಮತ್ತು ರಾಜಪುತ್ರರು ಪುತ್ರನಿಂದ ಒಡಗೂಡಿದ ಮಹಾಬಲಶಾಲಿಯಾದ ಯುದ್ಧ ದುರ್ಮದನಾದ ಶಿಶುಪಾಲ ಇವರೆಲ್ಲರೂ ಪಾಂಡುಪುತ್ರನಾದ ಧರ್ಮರಾಜನ ಯಜ್ಞಕ್ಕೆ ಬಂದರು.

ರಾಮಶ್ಚೈವಾನಿರುದ್ಧಶ್ಚ ಬಭ್ರುಶ್ಚ ಸಹಸಾರಣಃ ।
ಗದಪ್ರದ್ಯುಮ್ನಸಾಂಬಾಶ್ಚ ಚಾರುದೇಷ್ಣಶ್ಚ ವೀರ್ಯವಾನ್ ॥೩೫॥

ಉನ್ಮುಖೋ ವಿಪೃಥುಶ್ಚೈವ ವೀರಃ ಪ್ರಾದ್ಯುಮ್ನಿರೇವ ಚ ।
ವೃಷ್ಣಯೋ ನಿಖಿಲಾಶ್ಚಾನ್ಯೇ ಸಮಾಜಗ್ಮುರ್ಮಹಾರಥಾಃ ॥೩೬॥

ಬಲರಾಮ ಅನಿರುದ್ಧ ಬಭ್ರು ಸಾರಣ ಗದ ಪ್ರದ್ಯುಮ್ನ ಸಾಂಬ ಪರಾಕ್ರಮಿಯಾದ ಚಾರುದೇಷ್ಣ ಉನ್ಮುಖ ವೀರನಾದ ವಿಪೃಥು, ಪ್ರದ್ಯುಮ್ನನ ಮಗನಾದ ಅನಿರುದ್ಧ ಈ ಎಲ್ಲಾ ಮಹಾರಥರೂ ಮತ್ತು ಉಳಿದ ವೃಷ್ಣಿಗಳೂ ಯಜ್ಞಕ್ಕೆ ಬಂದರು.

ಏತೇ ಚಾನ್ಯೇ ಚ ಬಹವೋ ರಾಜಾನೋ ಮಧ್ಯದೇಶಜಾಃ ।
ಆಜಗ್ಮುಃ ಪಾಂಡುಪುತ್ರಸ್ಯ ರಾಜಸೂಯಂ ಮಹಾಕ್ರತುಮ್ ॥೩೭॥

ಇವರು ಮತ್ತು ಮಧ್ಯದೇಶದ ಇನ್ನು ಅನೇಕರಾಜರು ಪಾಂಡುಪುತ್ರನ ಮಹಾಯಜ್ಞವನ್ನು ನೋಡಲು ಅಲ್ಲಿಗೆ ಬಂದರು.

ದದುಸ್ತೇಷಾಮಾವಸಥಾನ್ ಧರ್ಮರಾಜಸ್ಯ ಶಾಸನಾತ್ ।
ಬಹುಕಕ್ಷಾನ್ವಿತಾನ್ ರಾಜ್ಞಾಂ ದೀರ್ಘಿಕಾವೃಕ್ಷಶೋಭಿತಾನ್ ॥೩೮॥

ಧರ್ಮರಾಜನ ಶಾಸನದಂತೆ ಅವರೆಲ್ಲರಿಗೂ ಅನೇಕ ಕಕ್ಷೆಗಳಿಂದ ಕೂಡಿದ್ದ ಬಾವಿಗಳಿಂದ ಮತ್ತು ವೃಕ್ಷಗಳಿಂದ ಕೂಡಿದ್ದ ಶೋಭಿತವಾದ ಬಿಡಾರಗಳನ್ನು ಕೊಟ್ಟರು.

ತಥಾ ಧರ್ಮಾತ್ಮಜಸ್ತೇಷಾಂ ಚಕ್ರೇ ಪೂಜಾಮನುತ್ತಮಾಮ್ ।
ಸತ್ಕೃತಾಶ್ಚ ಮಹೀಪಾಲಾಃ ಸುಖಮೂಷುರ್ನರಾಧಿಪಾಃ ॥೩೯॥

ಆಗ ಧರ್ಮಾತ್ಮಜನಾದ ಯುಧಿಷ್ಠರನು ಅವರೆಲ್ಲರಿಗೂ ಶ್ರೇಷ್ಠವಾದ ಸತ್ಕಾರವನ್ನು ಮಾಡಿದನು. ಸತ್ಕೃತರಾದ ರಾಜರೆಲ್ಲರೂ ಅಲ್ಲಿ ಸುಖವಾಗಿ ವಾಸಮಾಡಿದರು.

ಕೈಲಾಸಶಿಖರಪ್ರಖ್ಯೈರ್ನಭಃಸ್ಥಲವಿಲೇಖಿಭಿಃ ।
ಸರ್ವತಃ ಸಂವೃತೈರ್ನದ್ಧೈಃ ಪ್ರಾಕಾರೈಃ ಸುಕೃತೈಃ ಸಿತೈಃ ॥೪೦॥

ಸುವರ್ಣಜಾಲವಿತತೈರ್ಮಣಿಕುಟ್ಟಿಮಭೂಷಿತೈಃ ।
ಸುಖಾರೋಹಣಸೋಪಾನೈರ್ಮಹಾಸನಪರಿಚ್ಛದೈಃ ॥೪೧॥

ಸ್ರಗ್ದಾಮಭಿರವಚ್ಛನ್ನೈರಗರೂತ್ತಮಧೂಪಿತೈಃ ।
ಹಂಸವರ್ಣೈಃ ಸುಬಹುಭಿರಾಯೋಜನಸುದರ್ಶನೈಃ ॥೪೨॥

ಅಸಂಬಾಧಸುಖಿದ್ವಾರೈಃ ಶಯನಾಸನಶೋಭಿತೈಃ ।
ಬಹುಧಾತುಪಿನದ್ಧಾಂಗೈರ್ಹಿಮವಚ್ಛಿಖರೈರಿವ ॥೪೩॥

ಕೈಲಾಸ ಶಿಖರದಂತಿರುವ ನಭೋದೇಶವನ್ನೂ ಕೊರೆಯುವಂತೆ ತೋರುವ, ಎಲ್ಲಾ ಕಡೆಗಳಲ್ಲಿಯೂ ಮುಚ್ಚಲ್ಪಟ್ಟ ಚೆನ್ನಾಗಿ ಕಟ್ಟಿದ ಬಿಳಿಯ ಪ್ರಾಕಾರಗಳಿಂದ ಕೂಡಿದ, ಚಿನ್ನದ ಸರಪಳಿಗಳನ್ನು ತೂಗುಹಾಕಿದ ಮಣಿಮಯವಾದ ಜಗುಲಿಗಳಿಂದ ಭೂಷಿತವಾದ, ಸುಖವಾಗಿ ಹತ್ತಲು ಸಾಧ್ಯವಾದ ಮೆಟ್ಟಲುಗಳಿಂದ ಕೂಡಿದ, ಶ್ರೇಷ್ಠವಾದ ಆಸನ ಮತ್ತು ಉಪಕರಣಗಳಿಂದ ಕೂಡಿದ, ಹೂವಿನ ಮಾಲೆಗಳಿಂದ ಅಲಂಕರಿಸಲ್ಪಟ್ಟ, ಸುಗಂಧದ್ರವ್ಯಗಳಿಂದ ಭೂಷಿತವಾದ, ಹಂಸದಂತೆ ಬಿಳಿಯವರ್ಣದಿಂದ ಕೂಡಿದ, ಒಂದು ಯೋಜನದೂರದಿಂದಲೂ ಎದ್ದುಕಾಣುವ

ವಿಸ್ತಾರವಾದ ಮುಂಬಾಗಿಲುಗಳಿಂದ ಕೂಡಿದ, ಪೀಠ ಮತ್ತು ಮಂಚಗಳಿಂದ ಶೋಭಿತವಾದ, ಅನೇಕ ರತ್ನಗಳಿಂದ ಗೋಡೆಗಳಲ್ಲಿ ಖಚಿತವಾದಂತಹ ಹಿಮಾಲಯದ ಶಿಖರದಂತೆತೋರುವ ಬಿಡಾರಗಳಲ್ಲಿ ಅವರೆಲ್ಲರೂ ವಾಸಿಸಿದರು.

ವಿಶ್ರಾಂತೈಸ್ತೈಸ್ತತಃ ಸರ್ವೈರ್ಭೂಮಿಪೈರ್ಭೂರಿದಕ್ಷಿಣೈಃ ।
ವೃತಂ ಸಹಸ್ರೈರ್ಬಹುಭಿರ್ಧರ್ಮರಾಜೋ ಯುಧಿಷ್ಠಿರಃ ॥೪೪॥

ಭೂರಿದಕ್ಷಿಣೆಯನ್ನು ಕೊಡುವ ಆ ಭೂಮಿಪಾಲರೆಲ್ಲರೂ ವಿಶ್ರಾಂತಿಯನ್ನು ಪಡೆದ ಮೇಲೆ ಧರ್ಮರಾಜನಾದ ಯುಧಿಷ್ಠಿರನು ಅಂತಹ ಸಹಸ್ರಾರು ರಾಜರಿಂದ ಪರಿವೃತನಾದನು.

ತತ್ ಸದಃ ಪಾರ್ಥಿವೈಃ ಕೀರ್ಣಂ ಬ್ರಾಹ್ಮಣೈಶ್ಚ ಮಹಾತ್ಮಭಿಃ ।
ಭ್ರಾಜತೇ ಸ್ಮ ಮಹಾರಾಜ ನಾಕಪೃಷ್ಠಮಿವಾಮರೈಃ ॥೪೫॥

ಮಹಾರಾಜನೇ ರಾಜರುಗಳಿಂದಲೂ ಮಹಾತ್ಮರಾದ ಬ್ರಾಹ್ಮಣರಿಂದಲೂ ನಿಬಿಡವಾಗಿ ತುಂಬಿದ ಆ ಯಜ್ಞಶಾಲೆಯು ದೇವತೆಗಳಿಂದ ನಿಬಿಡವಾಗಿ ತುಂಬಿದ ಸ್ವರ್ಗದಂತೆ ಶೋಭಿಸುತ್ತಿತ್ತು.

ತತಸ್ತಾಜ್ಞಾಪಯಾಮಾಸ ಪಾಂಡವೋಽರಿನಿಬರ್ಹಣಃ ।
ಸಹದೇವಂ ಕುರುಶ್ರೇಷ್ಠಂ ಮಂತ್ರಿಣಶ್ಚೈವ ಸರ್ವಶಃ ॥೪೬॥

ಆಗ ಶತ್ರುನಿಷೂದನನಾದ ಪಾಂಡವನಾದ ಧರ್ಮರಾಜನು ಕುರುಶ್ರೇಷ್ಠನಾದ ಸಹದೇವನನ್ನೂ, ರಾಜರನ್ನೂ ಮತ್ತು ಎಲ್ಲಾ ಮಂತ್ರಿಗಳನ್ನೂ ಕುರಿತು ಆಜ್ಞೆಯನ್ನು ಮಾಡಿದನು.

ಅಸ್ಮಿನ್ ಕ್ರತೌ ಯಥೋಕ್ತಾನಿ ಯಜ್ಞಾಂಗಾನಿ ದ್ವಿಜಾತಿಭಿಃ ।
ಅಭಿಸಂಜ್ಞಾಂಶ್ಚ ಸಂಭಾರಾನ್ ಧೌಮ್ಯೋಕ್ತಾನ್ ಭರತರ್ಷಭ ।
ಸರ್ವಮಾನಯ ತಾನ್ ಕ್ಷಿಪ್ರಂ ಸಹದೇವ ಯಥಾತಥಮ್ ॥೪೭॥

ಭರತರ್ಷಭನಾದ ಸಹದೇವನೇ! ಈ ಯಜ್ಞದಲ್ಲಿ ಬ್ರಾಹ್ಮಣರು ಹೇಳಿದಂತಹ ಯಜ್ಞಾಂಗಗಳನ್ನೂ ಧೌಮ್ಯರು ಹೇಳಿದಂತಹ ಬೇರೆ ಬೇರೆ ಹೆಸರುಗಳುಳ್ಳ ಅನೇಕ ಉಪಯುಕ್ತಪದಾರ್ಥಗಳನ್ನೂ ಸರಿಯಾಗಿ ಬೇಗ ಬೇಗ ತೆಗೆದುಕೊಂಡು ಬಾ.

ಇಂದ್ರಸೇನೋ ವಿಶೋಕಶ್ಚ ರುಕ್ಮಶ್ಚಾರ್ಜುನಸಾರಥಿಃ ।
ಶಮೀಕೋ ಧ್ವಜಸೇನಶ್ಚ ಪಂಚಸಾರಥಿಪುಂಗವಾಃ ।
ಅನ್ನಾದ್ಯೇ ವ್ಯಾಪೃತಾಃ ಸಂತು ಸಹದೇವ ತವಾಜ್ಞಯಾ ॥೪೮॥

ಉಪಾರ್ಜಿತಾನ್ ಸರ್ವಕಾಮಾನ್ ರಸಗಂಧಸಮನ್ವಿತಾನ್ ।
ಮನೋಹರಾನ್ ಪ್ರೀತಿಕರಾನ್ ಅನ್ನಾದ್ಯಾಂಶ್ಚ ಸುಸಂಸ್ಕೃತಾನ್ ॥೪೯॥

ಸಹದೇವನೇ ನಿನ್ನ ಆಜ್ಞೆಯಂತೆ ಇಂದ್ರಸೇನ ವಿಶೋಕ ಅರ್ಜುನಸಾರಥಿಯಾದ ರುಗ್ಮ ಶಮೀಕ ಧ್ವಜಸೇನ ಈ ಐದು ಜನ ಸಾರಥಿಶ್ರೇಷ್ಠರು ಬ್ರಾಹ್ಮಣರಿಗೆ ಅನ್ನಾದಿಗಳನ್ನು ಒದಗಿಸುವುದರಲ್ಲಿ ಉದ್ಯುಕ್ತರಾಗಲಿ. ಹಾಗೆಯೇ ಇಲ್ಲಿ ಉಪಾರ್ಜಿತವಾದ ಅವರಿಗೆ ಬೇಕಾದ ಮನೋಹರವೂ ಮತ್ತು ಪ್ರೀತಿಕರವೂ ಆದ ಎಲ್ಲ ವಸ್ತುಗಳನ್ನೂ ರಸಗಂಧಸಮನ್ವಿತವಾದ ಸುಸಂಕೃತವಾದ ಅನ್ನಾದಿಗಳನ್ನೂ ಕೊಡುವುದರಲ್ಲಿ ಅವರು ಉದ್ಯುಕ್ತರಾಗಲಿ.

ಪಿತಾಮಹಂ ಗುರುಂ ಚಾಥ ಪ್ರತ್ಯುದ್ಗಮ್ಯ ಯುಧಿಷ್ಠಿರಃ ।
ಅಭಿವಾದ್ಯೋಪಸಂಗೃಹ್ಯ ವಾಕ್ಯಮೇತದುವಾಚ ಹ ॥೫೦॥

ಯುಧಿಷ್ಠಿರನು ಭೀಷ್ಮರಿಗೂ ಮತ್ತು ದ್ರೋಣಾಚಾರ್ಯರಿಗೂ ಅಭಿಮುಖವಾಗಿ ನಿಂತು ಅವರಿಗೆ ನಮಸ್ಕರಿಸಿ ಅವರನ್ನು ಸ್ವಾಗತಿಸಿ ಈ ಮಾತನ್ನು ಹೇಳಿದನು.

ಭೀಷ್ಮೋ ದ್ರೌಣಿಃ ಕೃಪೋ ದ್ರೋಣೋ ದುರ್ಯೋಧನವಿವಿಂಶತೀ।
ಅಸ್ಮಿನ್ ಯಜ್ಞೇ ಭವಂತೋ ಮಾಮನುಗೃಹ್ಣಂತು ಸರ್ವಶಃ ॥೫೧॥

ಭೀಷ್ಮ ಅಶ್ವತ್ಥಾಮ ಕೃಪ ದ್ರೋಣ ದುರ್ಯೋಧನ ವಿವಿಶಂತಿ ಮೊದಲಾದ ನೀವೆಲ್ಲರೂ ಈ ಯಜ್ಞದಲ್ಲಿ ನನ್ನನ್ನು ಸರ್ವವಿಧದಲ್ಲಿಯೂ ಅನುಗ್ರಹಿಸಬೇಕು.

ಇದಂ ವಃ ಸ್ವಮಹಂ ಚೈವ ಯದಿಹಾಸ್ತಿ ಧನಂ ಮಮ ।
ಪ್ರೀಣಯಂತು ಭವಂತೋ ಮಾಂ ಯಥೇಷ್ಟಮನಿಯಂತ್ರಿತಾಃ ॥೫೨॥

ಈ ಎಲ್ಲಾ ನನ್ನ ಸಂಪತ್ತು ನಿಮ್ಮದು. ನನಗಿರುವ ಧನವೆಲ್ಲವೂ ನಿಮ್ಮದು. ನಾನು ಸಹ ನಿಮಗೆ ಸೇರಿದವನು. ಇವುಗಳನ್ನು ಯಾವ ಸಂಕೋಚವೂ ಇಲ್ಲದೆ ಉಪಯೋಗಿಸಿ ನೀವೆಲ್ಲರೂ ನನ್ನನ್ನು ಅನುಗ್ರಹಿಸಿ.

ಏವಮುಕ್ತ್ವಾ ಸ ತಾನ್ ರಾಜಾ ದೀಕ್ಷಿತಃ ಪಾಂಡವಾಗ್ರಜಃ ।
ನ್ಯಯೋಜಯದ್ ಯಥಾಯೋಗಮಧಿಕಾರೇಷ್ವನಂತರಮ್ ॥೫೩॥

ದೀಕ್ಷಿತನಾದ ಪಾಂಡವರಲ್ಲಿ ಅಗ್ರಜನಾದ ಧರ್ಮರಾಜನು ಅವರನ್ನುಕುರಿತು ಹೀಗೆ ಹೇಳಿ ಅನಂತರ ಉಳಿದವರಿಗೆ ಅವರವರಿಗೆ ಯೋಗ್ಯವಾದ ಅಧಿಕಾರವನ್ನು ಹಂಚಿದನು.

ಭಕ್ಷ್ಯಭೋಜ್ಯಾಧಿಕಾರೇಷು ಯುಯುತ್ಸುಂ ಸಮಯೋಜಯತ್ ।
ಪಾದ್ಯಾರೋಪಣಕಾರ್ಯೇ ಚ ಉಚ್ಛಿಷ್ಟಾಪನಯೇ ಪುನಃ ।
ಸಾತ್ಯಕಿಂ ಭೀಮಸೇನಂ ಚ ಮಹಾನಸವಿಚಾರಣೇ ॥೫೪॥

ಭಕ್ಷ್ಯಭೋಜ್ಯಗಳ ಮೇಲ್ವಿಚಾರಣೆಗೆ ಯುಯುತ್ಸುವನ್ನು ನೇಮಿಸಿದನು. ಪಂಕ್ತಿಗಳಲ್ಲಿ ಕೂಡಿಸುವುದಕ್ಕೆ ಮತ್ತು ಊಟಮಾಡಿದ ಪಾತ್ರೆಗಳನ್ನು ತೆಗೆಯುವುದಕ್ಕೆ ಸಾತ್ಯಕಿಯನ್ನು ನೇಮಿಸಿದನು. ಭೀಮಸೇನನಿಗೆ ಪಾಕಶಾಲೆಯ ಮೇಲ್ವಿಚಾರಣೆಯನ್ನು ವಹಿಸಿದನು.

ಭೋಜನಾವೇಕ್ಷಣೇ ಚೈವ ದುಶ್ಶಾಸನಮಯೋಜಯತ್ ।
ಪ್ರತಿಗ್ರಹೇ ಬ್ರಾಹ್ಮಣಾನಾಮಶ್ವತ್ಥಾಮಾನಮುಕ್ತವಾನ್ ॥೫೫॥

ಬ್ರಾಹ್ಮಣರ ಮತ್ತು ಉಳಿದವರ ಭೋಜನದ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ದುಶ್ಶಾಸನನನ್ನು ನೇಮಿಸಿದನು. ಬಂದ ಬ್ರಾಹ್ಮಣರನ್ನು ಸ್ವೀಕರಿಸಲು ಅಶ್ವತ್ಥಾಮನಿಗೆ ಹೇಳಿದನು.

ರಾಜ್ಞಾಂ ತು ಪ್ರತಿಪೂಜಾರ್ಥಂ ಸಂಜಯಂ ಸ ನ್ಯಯೋಜಯತ್ ।
ಕೃತಾಕೃತಪರಿಜ್ಞಾನೇ ಭೀಷ್ಮದ್ರೋಣೌ ಮಹಾಮತೀ ॥೫೬॥

ರಾಜರ ಸತ್ಕಾರಕ್ಕಾಗಿ ಸಂಜಯನನ್ನು ನೇಮಿಸಿದನು. ಕೃತಾಕೃತಕಾರ್ಯಗಳ ಮೇಲ್ವಿಚಾರಣೆಯನ್ನು ಮೇಧಾವಿಗಳಾದ ಭೀಷ್ಮ ದ್ರೋಣರಿಗೆ ಒಪ್ಪಿಸಿದನು.

ಹಿರಣ್ಯಸ್ಯ ಸುವರ್ಣಸ್ಯ ರತ್ನಾನಾಂ ಚಾನ್ವವೇಕ್ಷಣೇ ।
ದಕ್ಷಿಣಾನಾಂ ಚ ವೈ ದಾನೇ ಕೃಪಂ ರಾಜಾ ನ್ಯಯೋಜಯತ್ ।
ತಥಾನ್ಯಾನ್ ಪುರುಷವ್ಯಾಘ್ರಾಂಸ್ತಸ್ಮಿಂಸ್ತಸ್ಮಿನ್ ನ್ಯಯೋಜಯತ್ ॥೫೭॥

ಸುವರ್ಣಗಳು ರತ್ನಗಳು ಮತ್ತು ದಕ್ಷಿಣೆಗಳ ದಾನದಲ್ಲಿ ಕೃಪಾಚಾರ್ಯರನ್ನು ನೇಮಿಸಿದನು. ಹಾಗೆಯೇ ಬೇರೆ ಬೇರೆ ಪುರುಷಶ್ರೇಷ್ಠರನ್ನು ಅವರವರಿಗೆ ಯೋಗ್ಯವಾದ ಕಾರ್ಯಗಳಲ್ಲಿ ನಿಯೋಜಿಸಿದರು.

ಬಾಹ್ಲೀಕೋ ಧೃತರಾಷ್ಟ್ರಶ್ಚ ಸೋಮದತ್ತೋ ಜಯದ್ರಥಃ ।
ನಕುಲೇನ ಸಮಾಹೂತಾಃ ಸ್ವಾಮಿವತ್ ತತ್ರ ಮೇನಿರೇ ॥೫೮॥

ಬಾಹ್ಲಿಕ ಧೃತರಾಷ್ಟ್ರ ಸೋಮದತ್ತ ಜಯದ್ರಥ ಇವರು ನಕುಲನಿಂದ ಆಹ್ವಾನಿಸಲ್ಪಟ್ಟವರಾಗಿ ಅಲ್ಲಿ ತಮ್ಮನ್ನು ಒಡೆಯರಂತೆ ತಿಳಿದರು.

ಕ್ಷತ್ತಾ ಸೂಕ್ಷ್ಮವ್ಯಯಂ ಚಕ್ರೇ ಘೃತಾದಿ ಮಧುರಾದಿಕಮ್ ।
ಚರಣಕ್ಷಾಳನೇ ಕೃಷ್ಣೋ ಬ್ರಾಹ್ಮಣಾನಾಂ ಸ್ವಯಂ ಹ್ಯಭೂತ್ ।
ದುರ್ಯೋಧನಸ್ತ್ವರ್ಹಣಾನಿ ಪ್ರತಿಜಗ್ರಾಹ ಸರ್ವಶಃ ॥೫೯॥

ವಿದುರನು ಸೂಕ್ಷ್ಮವ್ಯಯದ ಮೇಲ್ವಿಚಾರಣೆಯನ್ನೂ ಘೃತಶರ್ಕರಾದಿಮೇಲ್ವಿಚಾರಣೆಯನ್ನೂ ನೋಡಿಕೊಂಡನು. ಕೃಷ್ಣನು ತಾನಾಗಿಯೇ ಬ್ರಾಹ್ಮಣರ ಪಾದಪ್ರಕ್ಷಾಲನೆಯ ಕಾರ್ಯವನ್ನು ವಹಿಸಿಕೊಂಡನು. ದುರ್ಯೋಧನನಾದರೂ ಬರುತ್ತಿದ್ದ ಕಪ್ಪಕಾಣಿಕೆಗಳನ್ನು ಸ್ವೀಕರಿಸಿವುದರಲ್ಲಿ ನಿರತನಾದನು.

ಸರ್ವಲೋಕಾಃ ಸಮಾವೃತ್ತಾಃ ಪ್ರಹೃಷ್ಟಾಸ್ತತ್ರ ಭಾರತ ।
ದ್ರಷ್ಟುಕಾಮಾಃ ಸಭಾಂ ಚೈವ ಧರ್ಮರಾಜಂ ಚ ಪಾಂಡವಮ್ ॥೬೦॥

ಭಾರತನೇ! ಎಲ್ಲ ಜನರೂ ಅಲ್ಲಿಗೆ ಸಭೆಯನ್ನೂ ಮತ್ತು ಧರ್ಮರಾಜನನ್ನೂ ನೋಡಲು ಬಂದು ಸೇರಿದರು.

ನ ಕಶ್ಚಿದವಹತ್ ತತ್ರ ಸಹಸ್ರಾವರಮರ್ಹಣಮ್ ।
ರತ್ನೈಶ್ಚ ಬಹುಭಿಸ್ತತ್ರ ಧರ್ಮರಾಜಮವರ್ಧಯನ್ ॥೬೧॥

ಯಜ್ಞಕ್ಕೆ ಬಂದ ಯಾವ ಕ್ಷತ್ರಿಯರೂ ಒಂದು ಸಹಸ್ರಕ್ಕಿಂತ ಕಡಿಮೆಯಾದ ಕಾಣಿಕೆಯನ್ನು ತರಲಿಲ್ಲ. ಅವರು ತಮ್ಮ ರತ್ನಗಳಿಂದ ಧರ್ಮರಾಜನನ್ನು ಅಭಿವೃದ್ಧಿಪಡಿಸಿದರು.

ಕಥಂ ತು ಮಮ ಕೌರವ್ಯೋ ರತ್ನದಾನೈಃ ಸಮಾಪ್ನುಯಾತ್ ।
ಯಜ್ಞಮಿತ್ಯೇವ ರಾಜಾನಃ ಸ್ಪರ್ಧಮಾನಾಃ ದದುರ್ಧನಮ್ ॥೬೨॥

ನಾನು ಕೊಡುವ ರತ್ನದಾನವು ಧರ್ಮರಾಜನಿಗೆ ಯಜ್ಞವನ್ನು ಮುಗಿಸಲು ಹೇಗೆ ಸಾಕಾಗುತ್ತದೆ ಎಂದು ಯೋಚಿಸಿ ರಾಜರು ಪರಸ್ಪರ ಸ್ಪರ್ದೆಯಿಂದ ಹೆಚ್ಚು ಧನವನ್ನು ತಂದು ಕೊಟ್ಟರು.

ಭವನೈಃ ಸವಿಮಾನಾಗ್ರೈಃ ಸೋದಕೈರ್ಬಹುಸಂವೃತೈಃ ।
ಲೋಕ್ಯೈ ರಾಜವಿಮಾನೈಶ್ಚ ಬ್ರಾಹ್ಮಣಾವಸಥೈಃ ಸಹ ॥೬೩॥

ಕೃತೈರಾವಸಥೈರ್ದಿವ್ಯೈರ್ವಿಮಾನಪ್ರತಿಮೈಸ್ತಥಾ ।
ವಿಚಿತ್ರೈ ರತ್ನವದ್ಭಿಶ್ಚ ಋದ್ಧ್ಯಾ ಪರಮಯಾ ಯುತೈಃ ॥೬೪॥

ರಾಜಭಿಶ್ಚ ಸಮಾವೃತ್ತೈರತೀವಶ್ರೀಸಮೃದ್ಧಿಭಿಃ ।
ಅಶೋಭತ ತದಾ ರಾಜನ್ ಯಜ್ಞವಾಟೋ ಮಹಾತ್ಮನಃ ॥೬೫॥

ರಾಜನೇ ಆ ಮಹಾತ್ಮನಾದ ಧರ್ಮರಾಜನ ಯಜ್ಞದ ವೇದಿಕೆ ಅನೇಕ ಉಪ್ಪರಿಗೆಗಳನ್ನು ಹೊಂದಿದ್ದ ಎಲ್ಲಾ ಕಡೆಗಳಿಂದಲೂ ನೀರಿನ ಸೌಕರ್ಯವನ್ನು ಹೊಂದಿದ್ದ ಮತ್ತು ಬ್ರಾಹ್ಮಣ ನಿವಾಸಗಳಿಂದಲೂ, ದಿವ್ಯವಾದ ವಿಮಾನಗಳಂತೆ ರಚಿಸಲ್ಪಟ್ಟ ವಿಚಿತ್ರವಾದ ರತ್ನಗಳಿಂದ ಕೂಡಿದ ಪರಮಸಮೃದ್ಧಿಯಿಂದ ಯುತವಾದ ವಿಶ್ರಾಂತಿ ಸ್ಥಾನಗಳಿಂದಲೂ, ವಿಚಿತ್ರವಾದ ರತ್ನಗಳಿಂದಕೂಡಿದ ಪರಮ ಸಮೃದ್ಧಿಗಳಿಂದಲೂ, ಅತ್ಯಂತ ಸಮೃದ್ಧಿಯನ್ನು ಹೊಂದಿದ ಅಲ್ಲಿಗೆ ಬಂದ ರಾಜರುಗಳಿಂದಲೂ, ಬಹಳವಾಗಿ ಶೋಭಿಸುತ್ತಿತ್ತು.

ಋದ್ಧ್ಯಾ ಚ ವರುಣಂ ದೇವಂ ಸ್ಪರ್ಧಮಾನೋ ಯುಧಿಷ್ಠಿರಃ ।
ಷಡಗ್ನಿನಾऽಥ ಯಜ್ಞೇನ ಸೋऽಯಜದ್ ದಕ್ಷಿಣಾವತಾ ।
ಸರ್ವಾನ್ ಜನಾನ್ ಸರ್ವಕಾಮೈಃ ಸಮೃದ್ಧೈಃ ಸಮತರ್ಪಯತ್ ॥೬೬॥

ತನ್ನ ಸಮೃದ್ಧಿಯಿಂದ ವರುಣನ ಜೊತೆಯಲ್ಲಿ ಸ್ಪರ್ಧಿಸುವಂತೆ ತೋರುತ್ತಿದ್ದ ಧರ್ಮರಾಜನು ಗಾರ್ಹಪತ್ಯ ಆಹವನೀಯ ದಕ್ಷಿಣಾಗ್ನಿ ಸಭ್ಯ ಆವಸಥ್ಯ ಮತ್ತು ವೈವಾಹಿಕ ಈ ಆರು ಅಗ್ನಿಗಳನ್ನು ಸ್ಥಾಪಿಸಿ ಭೂರಿದಕ್ಷಿಣೆಯನ್ನು ಕೊಟ್ಟು ಯಾಗವನ್ನು

ಮಾಡಿದನು. ಯಜ್ಞಕ್ಕೆ ಬಂದ ಎಲ್ಲರನ್ನೂ ಅವರ ಎಲ್ಲಾ ಕಾಮನೆಗಳನ್ನೂ ಸಮೃದ್ಧವಾಗಿ ಪೂರ್ಣಗೊಳಿಸಿ ಅವರನ್ನು ತೃಪ್ತಿಪಡಿಸಿದನು.

ಅನ್ನವಾನ್ ಬಹುಭಕ್ಷ್ಯಶ್ಚ ಭುಕ್ತವಜ್ಜನಸಂವೃತಃ ।
ರತ್ನೋಪಹಾರಕರ್ಮಣ್ಯೋ ಬಭೂವ ಸ ಮಹಾನೃಪಃ ॥೬೭॥

ಆ ಯಜ್ಞವು ಶ್ರೇಷ್ಠವಾದ ಅನ್ನದಿಂದಲೂ ಬಹುಭಕ್ಷ್ಯಗಳಿಂದಲೂ ಮತ್ತು ಭೋಜನಮಾಡಿ ಸಂತುಷ್ಟರಾದ ಜನರಿಂದಲೂ ತುಂಬಿದ್ದಿತು. ಮಹಾರಾಜನಾದ ಯುಧಿಷ್ಠಿರನು ರತ್ನಗಳನ್ನು ದಾನಕೊಡುವ ಕರ್ಮದಲ್ಲಿಯೇ ನಿರತನಾಗಿದ್ದನು.

ಇಧ್ಮಾಜ್ಯಸೋಮಾಹುತಿಭಿಃ ಮಂತ್ರಾಕ್ಷರಸಮನ್ವಿತೈಃ ।
ತಸ್ಮಿನ್ ಹಿ ತತೃಪುರ್ದೇವಾಸ್ತತೇ ಯಜ್ಞೇ ಮಹರ್ಷಿಭಿಃ ॥೬೮॥

ಮಂತ್ರಸಹಿತವಾದ ಇಧ್ಮ (ಕಟ್ಟಿಗೆ) ಆಜ್ಯ ಮತ್ತು ಸೋಮರಸದ ಆಹುತಿಗಳಿಂದ ಮಹರ್ಷಿಗಳು ವಿಸ್ತಾರವಾಗಿಮಾಡಿದ ಆ ಯಜ್ಞದಲ್ಲಿ ದೇವತೆಗಳು ತೃಪ್ತಿಯನ್ನು ಹೊಂದಿದರು.

ಯಥಾ ದೇವಾಸ್ತಥಾ ವಿಪ್ರಾ ದಕ್ಷಿಣಾಭಿರ್ಮಹಾಧನೈಃ ।
ತತೃಪುಃ ಸರ್ವವರ್ಣಾಶ್ಚ ತಸ್ಮಿನ್ ಯಜ್ಞೇ ಮುದಾನ್ವಿತಾಃ ॥೬೯॥

ದೇವತೆಗಳು ಆಹುತಿಯಿಂದ ತೃಪ್ತಿಹೊಂದಿದಂತೆ ಬ್ರಾಹ್ಮಣರು ದಕ್ಷಿಣೆಯ ರೂಪದಿಂದ ಬಂದ ಮಹಾಧನಗಳಿಂದ ತೃಪ್ತಿಹೊಂದಿದರು. ಆ ಯಜ್ಞದಲ್ಲಿ ಎಲ್ಲಾ ವರ್ಣದವರೂ ತೃಪ್ತಿಯನ್ನುಹೊಂದಿ ಸಂತೋಷದಿಂದ ಕೂಡಿದವರಾದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಏಕತ್ರಿಂಶೋಧ್ಯಾಯಃ ॥

॥ ರಾಜಸೂಯಪರ್ವಣಿ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಮೂವತ್ತೊಂದನೆಯ ಅಧ್ಯಾಯವು ಮುಗಿಯಿತು.

ಇಲ್ಲಿಗೆ ರಾಜಸೂಯಪರ್ವವು ಮುಗಿಯಿತು.

★★★★★

೫. ಅರ್ಘಾಭಿಹರಣ ಪರ್ವ

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ತತ್ರ ಸರ್ವಜಗದೇಕಸಂಗಮೇ
ತತ್ತ್ವನಿರ್ಣಯಕಥಾ ಬಭೂವಿರೇ ।
ಪ್ರಾಶ್ನಿಕೋಽತ್ರ ಪರಿಪೂರ್ಣಚಿದ್ಘನೋ
ವ್ಯಾಸ ಏವ ಭಗವಾನ್ ಬಭೂವ ಹ ॥೨೪೨॥

ಎಲ್ಲ ಲೋಕದ ಜನರೂ ಒಂದೆಡೆ ಸೇರಿದ್ದ ಆ ಯಾಗಶಾಲೆಯಲ್ಲಿ ತತ್ವನಿರ್ಣಯಕ್ಕಾಗಿ ವಿಚಾರಗೋಷ್ಠಿಗಳು ನಡೆದವು. ಆ ಗೋಷ್ಠಿಗಳಲ್ಲಿ ಪರಿಪೂರ್ಣ ಚಿದಾನಂದ ಸ್ವರೂಪರಾದ ಭಗವಾನ್ ವ್ಯಾಸರೆ ಪ್ರಾಶ್ನಿಕರಾಗಿದ್ದರು.

ತತ್ತ್ವನಿರ್ಣಯಕಥಾಸು ನಿರ್ಣಯೋ
ವಾಸುದೇವಗುಣವಿಸ್ತರೋಽಭವತ್ ।
ನಾಸ್ತಿ ತತ್ಸದೃಶ ಉತ್ತಮಃ ಕುತಃ
ಪಾರ ಏಷ ನ ತತೋಽನ್ಯ ಇತ್ಯಪಿ ॥೨೪೩॥

ತತ್ವನಿರ್ಣಯಕ್ಕಾಗಿ ನಡೆದ ಗೋಷ್ಠಿಗಳಲ್ಲಿ ಶ್ರೀಹರಿಯ ಗುಣಪೂರ್ಣತ್ವದ ಬಗ್ಗೆ ನಿರ್ಣಯವಾಯಿತು- 'ಹರಿಗೆ ಸಮಾನನೆ ಇಲ್ಲ, ಇನ್ನು ಉತ್ತಮನೆಲ್ಲಿ? ತಾರತಮ್ಯದಲ್ಲಿ ಕೊನೆಯವನು ಅವನೇ ಹೊರತು ಇನ್ನೊಬ್ಬನಿಲ್ಲ' ಎಂದು.

ಬಾದರಾಯಣಭೃಗೂತ್ತರಾಮಯೋಃ
ಶೃಣ್ವತೋಃ ಪರಮನಿರ್ಣಯೇ ಕೃತೇ ।
ಮೋದಮಾನಜನತಾಸಮಾಗಮೇऽ-
ಪೃಚ್ಛದತ್ರ ನೃಪತಿರ್ಯತವ್ರತಂ ॥೨೪೪॥

ವೇದವ್ಯಾಸ ಪರಶುರಾಮರು ಕೇಳುತ್ತಿದ್ದಂತೆ ಪರತತ್ವ ನಿರ್ಣಯ ನಡೆದಾಗ ಸಂತುಷ್ಟರಾದ ಜನರ ಗೋಷ್ಠಿಯಲ್ಲಿ ಧರ್ಮರಾಜ ಭೀಷ್ಮನನ್ನು ಕೇಳಿದ.

ಜಾನಮಾನೋऽಪಿ ನೃಪತಿಃ ಸರ್ವಪೂಜ್ಯತಮಂ ಹರಿಂ ।
ಸಂಶಯಂ ಭೂಭೃತಾಂ ಛೇತ್ತುಂ ಭೀಷ್ಮಂ ಪಪ್ರಚ್ಛ ಧರ್ಮವಿತ್ ॥೨೪೫॥

ಧರ್ಮರಾಜ ಕೃಷ್ಣನನ್ನು ಸರ್ವೋತ್ತಮ ಪೂಜ್ಯನೆನಿಸಿದ ಶ್ರೀಹರಿಯೆ ಎಂದು ತಿಳಿದಿದ್ದರೂ ರಾಜರ ಸಂಶಯವನ್ನು ಕಳೆವ ಉದ್ದೇಶದಿಂದ ಭೀಷ್ಮನಲ್ಲಿ ಪ್ರಶ್ನೆಗೈದ.

ನಾಸ್ತಿ ನಾರಾಯಣಸಮಮಿತಿ ವಾದೇನ ನಿರ್ಣಯೇ ।
ಕೃತೇ ಬ್ರಹ್ಮಾದಿಭಿರಪಿ ಕೃಷ್ಣಂ ಮರ್ತ್ಯಂ ಹಿ ಮೇನಿರೇ ॥೨೪೬॥

ನೃಪಾಸ್ತಸ್ಮಾದಯಂ ಕೃಷ್ಣೋ ನಾರಾಯಣ ಇತಿ ಸ್ಮ ಹ ।
ಸಮ್ಯಗ್ ಜ್ಞಾಪಯಿತುಂ ಧರ್ಮಸೂನುರ್ಭೀಷ್ಮಮಪೃಚ್ಛತ ॥೨೪೭॥

ಏಕೆಂದರೆ ನಾರಾಯಣನಿಗೆ ಸಮರಿಲ್ಲ ಎಂದು ಬ್ರಹ್ಮಾದಿಗಳು ವಾದದಿಂದ ನಿರ್ಣಯ ಮಾಡಿದ್ದರೂ ರಾಜರು ಇನ್ನೂ ಕೃಷ್ಣನನ್ನು ಮನುಷ್ಯನೆಂದೇ ತಿಳಿದಿದ್ದರು. ಅದರಿಂದ ಕೃಷ್ಣ ನಾರಾಯಣನೇ ಎಂದು ಅವರಿಗೆ ಚೆನ್ನಾಗಿ ಮನವರಿಕೆ ಮಾಡಿಸಲು ಧರ್ಮರಾಜ ಭೀಷ್ಮನನ್ನು ಪ್ರಶ್ನಿಸಿದ.

ಬ್ರಹ್ಮಾದಯಃಸುರಾ ಯಸ್ಮಾದ್ ದೃಶ್ಯಂತೇ ಮರ್ತ್ಯವನ್ನೃಭಿಃ ।
ನ ಚೈವಾತಿತರಾಭ್ಯಾಸೋ ನೃಣಾಮಸ್ತಿ ಮುನಿಷ್ವಪಿ ॥೨೪೮॥

ಬ್ರಹ್ಮಾದಿ ದೇವತೆಗಳು ಅಲ್ಲಿಗೆ ಮನುಷ್ಯವೇಷದಿಂದ ಬಂದಿದ್ದರಿಂದ ಮನುಷ್ಯರಿಗೆ ಮನುಷ್ಯರಂತೆಯೆ ಕಂಡರು. ಸದಾ ಅರಣ್ಯಗಳಲ್ಲಿ ಇರುವ ಮುನಿಗಳಲ್ಲಿಯೂ, ಅವರು ಹೆಚ್ಚು ಪರಿಚಿತರಾಗದ್ದರಿಂದ, ಮನುಷ್ಯರಿಗೆ ವಿಶ್ವಾಸವಿರಲಿಲ್ಲ.

ಸರ್ವಶಾಸ್ತ್ರವಿದಂ ಭೀಷ್ಮಂ ಜಾನಂತ್ಯೇತೇ ನೃಪಾ ಅಪಿ ।
ತಸ್ಮಾದ್ ಭೀಷ್ಮಮಪೃಚ್ಛತ್ ಸ ಕುಲವೃದ್ಧತ್ವತಸ್ತಥಾ ॥೨೪೯॥

ಭೀಷ್ಮ ಸರ್ವಶಾಸ್ತ್ರಗಳನ್ನು ಬಲ್ಲವನೆಂದು ಈ ರಾಜರೂ ತಿಳಿದಿದ್ದಾರೆ. ಅವನು ಮನೆತನದಲ್ಲಿ ಅತ್ಯಂತ ಹಿರಿಯನೂ ಆದ್ದರಿಂದ ಧರ್ಮರಾಜ ಅವನನ್ನೇ ಕೇಳಿದ.

ಪಿತಾಮಹಾಗ್ರ್ಯಪೂಜಾರ್ಹಃ ಕೋಽತ್ರ ಲೋಕಸಮಾಗಮೇ ।
ಬ್ರಹ್ಮಶರ್ವಾದಯಶ್ಚಾತ್ರ ಸಂತಿ ರಾಜಾನ ಏವ ಚ ॥೨೫೦॥

ತಾತ, ಎಲ್ಲ ಜನರೂ ಸೇರಿರುವ ಈ ಯಜ್ಞಮಂಟಪದಲ್ಲಿ ಅಗ್ರಪೂಜೆಗೆ ಅರ್ಹನು ಯಾರು? ಬ್ರಹ್ಮರುದ್ರಾದಿಗಳೂ ಇಲ್ಲಿ ಇದ್ದಾರೆ, ರಾಜರುಗಳೂ ಇದ್ದಾರೆ.

ಇತಿ ಪೃಷ್ಟೋಽಬ್ರವೀದ್ ಭೀಷ್ಮಃ ಕೃಷ್ಣಂ ಪೂಜ್ಯತಮಂ ಪ್ರಭುಂ ॥೨೫೧॥

ಧರ್ಮರಾಜ ಹೀಗೆ ಕೇಳಿದಾಗ ಭೀಷ್ಮನೆಂದ, 'ಪ್ರಭು ಶ್ರೀಕೃಷ್ಣನೆ ಪರಮಪೂಜ್ಯ'.

ಯದ್ಯಪ್ಯೇಕಸ್ತ್ರಿಧಾ ವಿಷ್ಣುರ್ವಸಿಷ್ಠಭೃಗುವೃಷ್ಣಿಷು ।
ಪ್ರಾದುರ್ಭೂತಸ್ತಥಾಪ್ಯೇತೇ ನೃಪಾ ಹಿ ವ್ಯಾಸರಾಮಯೋಃ ।
ವಿಪ್ರತ್ವಾನ್ನ ವಿರುಧ್ಯಂತೇ ತತ ಏವ ಚ ಯುಕ್ತತಾಂ ॥೨೫೨॥

ಮನ್ಯಂತೇ ನ ವಿರೋಧಶ್ಚ ತೇಷಾಂ ತತ್ರ ಹಿ ತಾದೃಶಃ ॥೨೫೩॥

ಒಬ್ಬನೆ ವಿಷ್ಣು ವಸಿಷ್ಠ ಭೃಗು ಮತ್ತು ವೃಷ್ಣಿ ಕುಲಗಳಲ್ಲಿ ವ್ಯಾಸ ಪರಶುರಾಮ ಕೃಷ್ಣ ಎಂದು ಮೂರು ರೂಪಗಳಿಂದ ಅವತರಿಸಿದ್ದಾನೆ. ಆದರೂ ರಾಜರು ವ್ಯಾಸ ಪರಶುರಾಮರನ್ನು ಅವರು ಬ್ರಾಹ್ಮಣರಾದ್ದರಿಂದ ವಿರೋಧಿಸುವುದಿಲ್ಲ. ಬ್ರಾಹ್ಮಣರಾದ್ದರಿಂದಲೆ ಅಗ್ರಪೂಜೆಗೆ ಅರ್ಹತೆಯನ್ನು ಒಪ್ಪುತ್ತಾರೆ. ಕೃಷ್ಣನಲ್ಲಿರುವಂತೆ ವ್ಯಾಸ ಪರಶುರಾಮರಲ್ಲಿ ಅವರಿಗೆ ವೈರವೂ ಇರುವುದಿಲ್ಲ.

ಅವಿವಾದೇ ಪ್ರಸಿದ್ಧಿಶ್ಚ ನೈವಾಸ್ಯ ಭವಿತಾ ಕ್ವಚಿತ್ ।
ತಸ್ಮಾತ್ ಕೃಷ್ಣಾಯ ದಾತವ್ಯಮಿತಿ ಭೀಷ್ಮೇಣ ಚಿಂತಿತಂ ॥೨೫೪॥

ವಿವಾದ ಉಂಟಾಗದಿದ್ದರೆ ಕೃಷ್ಣ ನಾರಾಯಣನೆನ್ನುವುದರ ಪ್ರಸಿದ್ಧಿ ಎಂದೂ ಉಂಟಾಗಲಾರದು. ಅದರಿಂದ ಕೃಷ್ಣನಿಗೇ ಅಗ್ರಪೂಜೆ ನೀಡಬೇಕೆಂದು ಭೀಷ್ಮ ಆಲೋಚಿಸಿದ.

ಕೃಷ್ಣಾಯ ದತ್ತೇ ರಾಜಾನೋ ವಿವಾದಂ ಕುರ್ಯುರಂಜಸಾ ।
ವಿವಾದೇನ ಚ ಕೀರ್ತಿಃ ಸ್ಯಾದ್ ವಾಸುದೇವಸ್ಯ ವಿಸ್ತೃತಾ ।
ತತಃ ಕೃಷ್ಣಾಯಾಗ್ರಪೂಜಾ ದತ್ತಾ ಪಾರ್ಥೈರ್ಜಗತ್ಪುರಃ ॥೨೫೫॥

ಶ್ರೀಕೃಷ್ಣನಿಗೆ ಅಗ್ರಪೂಜೆ ನೀಡಿದರೆ ರಾಜರು ಬಹಳ ಆಗ್ರಹದಿಂದ ವಿವಾದವೆಬ್ಬಿಸುತ್ತಾರೆ. ವಿವಾದದಿಂದ ಕೃಷ್ಣನ ಕೀರ್ತಿ ಹರಡುತ್ತದೆ, ಎಂದು ಭೀಷ್ಮ ಆಲೋಚಿಸಿದ. ಹೀಗೆ ವಿವಾದ ಉಂಟಾಗಲೆಂದೇ ಪಾಂಡವರೂ ಎಲ್ಲರ ಮುಂದೆ ಕೃಷ್ಣನಿಗೆ ಅಗ್ರಪೂಜೆ ನೀಡಿದರು.

ವ್ಯಾಸಭಾರ್ಗವಯೋಃ ಸಾಕ್ಷಾತ್ ತದೈಕ್ಯಾತ್ ತದನಂತರಂ ।
ಅಗ್ರ್ಯಾಂ ಪೂಜಾಂ ದದುಶ್ಚಾನ್ಯಾನ್ ಯಥಾಯೋಗ್ಯಮಪೂಜಯನ್ ॥

ಶ್ರೀಕೃಷ್ಣನಿಗೆ ಪೂಜೆ ನೀಡಿದ ಬಳಿಕ ವ್ಯಾಸ ಪರಶುರಾಮರಿಗೆ ಕೃಷ್ಣನಿಂದ ಸಾಕ್ಷಾತ್ ಅಭೇದವಿರುವುದರಿಂದ ಅಗ್ರಪೂಜೆ ನೀಡಿದರು. ಬಳಿಕ ಉಳಿದವರನ್ನು ಅವರ ಯೋಗ್ಯತೆಗೆ ಅನುಗುಣವಾಗಿ ಪೂಜಿಸಿದರು.

★ ★ ★ ★

ಮೂವತ್ತೆರಡನೆಯ ಅಧ್ಯಾಯ

(ಅಭಿಷೇಕಾರ್ಥವಾಗಿ ಬ್ರಾಹ್ಮಣರ ನಾರದರ ರಾಜರ ಆಗಮನ. ನಾರದರಿಂದ ಪೂರ್ವವೃಂತ್ತಾಂತದ ಸ್ಮರಣೆ.)

ವೈಶಂಪಾಯನಃ

ತತೋಽಭಿಷೇಚನೀಯೇಽಹ್ನಿ ಬ್ರಾಹ್ಮಣಾ ರಾಜಭಿಃ ಸಹ ।
ಅಂತರ್ವೇದಿಂ ಪ್ರವಿವಿಶುಃ ಸದಸ್ಯಾರ್ಥಂ ಮಹರ್ಷಯಃ ॥೧॥

ಅನಂತರ ದಿಕ್ಷಾಭಿಷೇಕದಿವಸದಲ್ಲಿ ಬ್ರಾಹ್ಮಣರು ಮತ್ತು ರಾಜರುಗಳು ಕೂಡಿಕೊಂಡು, ಯಜ್ಞಭೂಮಿಯಲ್ಲಿ ಬ್ರಾಹ್ಮಣರು ಕುಳಿತುಕೊಳ್ಳಲು ಕಲ್ಪಿಸಿದ ಅಲಂಕೃತವಾದ ಸ್ಥಾನವನ್ನು (ಅಂತರ್ವೇದಿಯನ್ನು) ಪ್ರವೇಶಿಸಿದರು. ಮಹರ್ಷಿಗಳು ಸಹ ಸದಸತ್ವವನ್ನು ವಹಿಸಿಕೊಳ್ಳಲು ಅಂತರ್ವೇದಿಯನ್ನು ಪ್ರವೇಶಿಸಿದರು.

ನಾರದಪ್ರಮುಖಾಸ್ತಸ್ಯಾಮಂತರ್ವೇದಿಂ ಮಹಾತ್ಮನಃ ।
ಸಮಾಸೀನಾಃ ಶುಶುಭಿರೇ ತತ್ರ ರಾಜರ್ಷಿಭಿಃ ಸಹ ॥೨॥

ಮಹಾತ್ಮನಾದ ಯುಧಿಷ್ಠಿರನ ಅಂತರ್ವೇದಿಯನ್ನು ಪ್ರವೇಶಿಸಿ ನಾರದ ಮೊದಲಾದವರು ರಾಜರ್ಷಿಗಳ ಜೊತೆಯಲ್ಲಿ ಕುಳಿತುಕೊಂಡು ಅಲ್ಲಿ ಶೋಭಿಸಿದರು.

ಸಮೇತಾ ಬ್ರಹ್ಮಭವನೇ ದೇವೈರ್ದೇವರ್ಷಯೋ ಯಥಾ ।
ಕರ್ಮಾಂತರಮುಪಾಸಂತೋ ಜಜಲ್ಪುರಮಿತೌಜಸಃ ॥೩॥

ಬ್ರಹ್ಮಸದನದಲ್ಲಿ ದೇವತೆಗಳ ಜೊತೆಯಲ್ಲಿ ದೇವರ್ಷಿಗಳು ಸೇರಿದಂತೆ ಎಲ್ಲರೂ ಅಲ್ಲಿ ಸೇರಿ, ಯಜ್ಞಾಂಗವಾದ ಬೇರೆ ಬೇರೆ ಕರ್ಮಗಳನ್ನು ಆಚರಿಸುವುದನ್ನು ನೋಡುತ್ತಾ ಅಮಿತತೇಜಸ್ವಿಗಳಾದ ಅವರು ಪರಸ್ಪರವಾಗಿ ಮಾತನಾಡಿದರು.

ಏವಮೇತನ್ನ ಚಾಪ್ಯೇವಮೇವಂ ಚೈತನ್ನ ಚಾನ್ಯಥಾ ।
ಇತ್ಯೂಚುರ್ಬಹವಸ್ತತ್ರ ವಿತಂಡಾನಾಃ ಪರಸ್ಪರಮ್ ॥೪॥

ಅಲ್ಲಿದ್ದ ಅನೇಕರು ಇದು ಹೀಗೆ ಬೇರೆ ರೀತಿಯಲ್ಲ, ಇದು ಈ ರೀತಿ ಇನ್ನೊಂದು ರೀತಿಯಲ್ಲ ಎಂದು ಪರಸ್ಪರವಾಗಿ ವಿತಂಡವಾದವನ್ನು ಮಾಡುತ್ತಾ ಕುಳಿತಿದ್ದರು.

ಕೃಶಾನರ್ಥಾಂಸ್ತಥಾ ಕೇಚಿದಕೃಶಾಂಸ್ತತ್ರ ಕುರ್ವತೇ ।
ಅಕೃಶಾಂಶ್ಚ ಕೃಶಾನ್ ಚಕ್ರುರ್ಹೇತುಭಿಃ ಶಾಸ್ತ್ರನಿಶ್ಚಿತೈಃ ॥೫॥

ಕೆಲವರು ದುರ್ಬಲವಾದ ಅರ್ಥಗಳನ್ನು ಶಾಸ್ತ್ರಸಿದ್ಧಹೇತುಗಳಿಂದ ಪುಷ್ಟೀಕರಿಸುತ್ತಿದ್ದರು. ಇನ್ನೂ ಕೆಲವರು ಪ್ರಬಲವಾದ ಅರ್ಥಗಳನ್ನು ಕೂಡ ಅದೇ ರೀತಿಯಲ್ಲಿ ದುರ್ಬಲಗೊಳಿಸುತ್ತಿದ್ದರು.

ತತ್ರ ಮೇಧಾವಿನಃ ಕೇಚಿದರ್ಥಮನ್ಯೈಃ ಪ್ರಪೂಜಿತಮ್ ।
ವಿಚಿಕ್ಷಿಪುರ್ಯಥಾ ಶ್ಯೇನಾ ನಭೋಗತಮಿವಾಮಿಷಮ್ ॥೬॥

ಸಾ ವೇದಿರ್ವೇದಸಂಪನ್ನೈರ್ಮಹರ್ಷಿದ್ವಿಜಪಾರ್ಥಿವೈಃ ।
ಆಬಭಾಸೇ ಸಮಾಕೀರ್ಣಾ ನಕ್ಷತ್ರೈರ್ದ್ಯೌರಿವಾಮಲಾ ॥೭॥

ನ ತಸ್ಯಾಃ ಸನ್ನಿಧೌ ಶೂದ್ರಃ ಕಶ್ಚಿದಾಸನ್ನ ಚಾವ್ರತಃ ।
ಅಂತರ್ವೇದ್ಯಾ ಮಹಾರಾಜ ಧರ್ಮರಾಜನಿವೇಶನೇ ॥೯॥

ಅಲ್ಲಿ ಮೇಧಾವಿಗಳಾದ ಕೆಲವರು ಆಕಾಶದಲ್ಲಿ ಹದ್ದುಗಳು ಮಾಂಸವನ್ನು ಹಾರಿಸಿದಂತೆ, ಬೇರೆಯವರು ಸಮರ್ಥಿಸಿದ ಅರ್ಥಗಳನ್ನು ನಿರಾಕರಿಸುತ್ತಿದ್ದರು. ವೇದವೇದಾಂಗಗಳಲ್ಲಿ ಪಾರಂಗತರಾದ ಮಹಾವ್ರತಧಾರಿಗಳಾದ ಇನ್ನು ಕೆಲವರು. ಧರ್ಮಾರ್ಥಸಂಯುಕ್ತವಾದ ಕಥೆಗಳನ್ನು ಹೇಳುತ್ತಾ ಸಂತೋಷಪಟ್ಟರು. ಮಹಾರಾಜನೇ, ಧರ್ಮರಾಜನು ಕುಳಿತುಕೊಳ್ಳುವ ಅಂತರ್ವೇದಿಯ ಸಮೀಪದಲ್ಲಿ ಒಬ್ಬ ಶೂದ್ರನಾಗಲೀ ಅಥವಾ ವ್ರತ ಮಾಡದವನಾಗಲೀ ಇರಲಿಲ್ಲ.

ತಾಂ ತು ಲಕ್ಷ್ಮೀವತೋ ಲಕ್ಷ್ಮೀಂ ಯಥಾಯಜ್ಞವಿಧಾನಜಾಮ್ ।
ತುತೋಷ ನಾರದಃ ಪಶ್ಯನ್ ಧರ್ಮರಾಜಸ್ಯ ಧೀಮತಃ ॥೧೦॥

ಯಜ್ಞಕ್ಕೆ ವಿಧಾನ ಮಾಡಿದ ರೀತಿಯಲ್ಲಿ ನಿರ್ಮಿಸಲ್ಪಟ್ಟ ಕಂಗೊಳಿಸುತ್ತಿರುವ, ಆ ಮೇಧಾವಿಯಾದ, ಶ್ರೀಮಂತನಾದ, ಧರ್ಮರಾಜನ ಸಂಪತ್ತನ್ನು ನೋಡಿದ ನಾರದರು ಸಂತೋಷಪಟ್ಟರು.

ಅಥ ಚಿಂತಾಂ ಸಮಾಪೇದೇ ಸ ಮುನಿರ್ಮನುಜಾಧಿಪ ।
ನಾರದಸ್ತು ತದಾ ಪಶ್ಯನ್ ಸರ್ವಕ್ಷತ್ರಸಮಾಗಮಮ್ ॥೧೧॥

ಮನುಜಾಧಿಪನೇ! ಆಗ ಎಲ್ಲಾ ಕ್ಷತ್ರಿಯರ ಸಮುದಾಯನ್ನು ನೋಡಿದ ನಾರದರು, ಧ್ಯಾನವಶರಾದರು.

ಸಸ್ಮಾರ ಚ ಪುರಾವೃತ್ತಾಂ ಕಥಾಂ ತಾಂ ಭರತರ್ಷಭ ।
ಅಂಶಾವತರಣೇ ಯೋಽಽಸೌ ಬ್ರಹ್ಮಣೋ ಭವನೇಭವತ್ ॥೧೨॥

ಭರತರ್ಷಭನೇ! ಹಿಂದೆ ಅಂಶಾವತರಣ ಕಾಲದಲ್ಲಿ ಬ್ರಹ್ಮಸದನದಲ್ಲಿ ನಡೆದ ಘಟನೆಗಳನ್ನು ಅವರು ಸ್ಮರಿಸಿದರು.

ದೇವಾನಾಂ ಸಂಭವಂ ತಂ ತು ವಿಜ್ಞಾಯ ಕುರುನಂದನ ।
ನಾರದಃ ಪುಂಡರೀಕಾಕ್ಷಂ ಸಸ್ಮಾರ ಮನಸಾ ಹರಿಮ್ ॥೧೩॥

ಕುರುನಂದನನೇ! ಆ ದೇವತೆಗಳ ಉತ್ಪತ್ತಿಯನ್ನು ತಿಳಿದ ನಾರದರು. ಮನಸ್ಸಿನಲ್ಲಿಯೇ ಪುಂಡರೀಕಾಕ್ಷನಾದ ಹರಿಯನ್ನು ಸ್ಮರಿಸಿದರು.

ಸಾಕ್ಷಾತ್ ಸ ವಿಬುಧಾರಿಘ್ನಃ ಕ್ಷಿತೌ ನಾರಾಯಣೋ ವಿಭುಃ ।
ಪ್ರತಿಜ್ಞಾಂ ಪಾಲಯನ್ ಧೀಮಾನ್ ಜಾತಃ ಪರಪುರಂಜಯಃ ॥೧೪॥

ದೇವತೆಗಳ ಶತ್ರುಗಳಾದ ಅಸುರರನ್ನು ಸಂಹಾರಮಾಡುವ ಪ್ರಭುವಾದ ಮೇಧಾವಿಯೂ ಪರಪುರಂಜಯನೂ ಆದ ನಾರಾಯಣನು ತನ್ನ ಪ್ರತಿಜ್ಞೆಯನ್ನು ಪಾಲಿಸುವವನಾಗಿ ಸಾಕ್ಷಾತ್ ತಾನೇ ಭೂಮಿಯಲ್ಲಿ ಅವತರಿಸಿದ್ದಾನೆ.

ಸಂದಿದೇಶ ಪುರಾ ಯೋಽಸೌ ವಿಬುಧಾನ್ ಭೂತಕೃತ್ ಸ್ವಯಮ್ ।
ಅನ್ಯೋನ್ಯಮಭಿನಿಘ್ನಂತಃ ಪುನರ್ಲೋಕಾನವಾಪ್ಸ್ಯಥ ॥೧೫॥

ಯಾವ ಸೃಷ್ಟಿಕರ್ತನಾದ ದೇವನು ಹಿಂದೆ ದೇವತೆಗಳನ್ನು ಕುರಿತು ನೀವು ಭೂಮಿಯಲ್ಲಿ ಅವತಾರಮಾಡಿ ಪರಸ್ಪರ ಸಂಹರಿಸಿಕೊಂಡು ಪುನಃ ನಿಮ್ಮ ನಿಮ್ಮ ಸ್ಥಾನಗಳಿಗೆ ಹಿಂದಿರುಗಿ ಎಂದು ಸಂದೇಶವನ್ನು ಕೊಟ್ಟಿದ್ದನೋ. ಅವನನ್ನು ಸ್ಮರಿಸಿದರು.

ಇತಿ ನಾರಾಯಣಃ ಶಂಭುರ್ಭಗವಾನ್ ಜಗತಃ ಪ್ರಭುಃ ।
ಆದಿಶ್ಯ ವಿಬುಧಾನ್ ಸರ್ವಾನಜಾಯತ ಯದೋಃ ಕುಲೇ ॥೧೬॥

ಸುಖನಿಧಿಯೂ ಜಗತ್‌ಪ್ರಭುವೂ ಐಶ್ವರ್ಯಸಂಪನ್ನನೂ ಆದ ನಾರಾಯಣನು ಎಲ್ಲಾ ದೇವತೆಗಳಿಗೆ ಹೀಗೆ ಆದೇಶವನ್ನು ನೀಡಿ ತಾನೂ ಸ್ವತಃ ಯದುಕುಲದಲ್ಲಿ ಜನಿಸಿದನು.

ಕ್ಷಿತಾವಂಧಕವೃಷ್ಣೀನಾಂ ವಂಶೇ ವಂಶಭೃತಾಂ ವರಃ ।
ಪರಯಾ ಶುಶುಭೇ ಲಕ್ಷ್ಮ್ಯಾ ನಕ್ಷತ್ರಾಣಾಮಿವೋಡುರಾಟ್ ॥೧೭॥

ವಂಶವರ್ಧನರಲ್ಲಿ ಶ್ರೇಷ್ಠನಾದ ಹರಿಯು ಭೂಮಿಯಲ್ಲಿ ಅಂಧಕವೃಷ್ಣಿಗಳ ವಂಶದಲ್ಲಿ ಅವತರಿಸಿ ತನ್ನ ಶ್ರೇಷ್ಠವಾದ ಕಾಂತಿಯಿಂದ ನಕ್ಷತ್ರಗಳ ಮಧ್ಯದಲ್ಲಿ ಇರುವ ಚಂದ್ರನಂತೆ ಶೋಭಿಸಿದನು.

ಯಸ್ಯ ಬಾಹುಲಂ ಸರ್ವೇ ಸುರಾಃ ಸೇಂದ್ರಾ ಉಪಾಸತೇ ।
ಸೋಯಂ ಮಾನುಷರೂಪೇಣ ಹರಿರಾಸ್ತೇ ಜನಾರ್ದನಃ ॥೧೮॥

ಇಂದ್ರಾದಿ ಎಲ್ಲಾ ದೇವತೆಗಳೂ ಯಾರ ಬಾಹುಬಲವನ್ನು ಆಶ್ರಯಿಸಿರುತ್ತಾರೋ ಅಂತಹ ಜನಾರ್ದನನಾದ ಹರಿಯು ಮನುಷ್ಯರೂಪದಲ್ಲಿ ಇದ್ದಾನೆ.

ಅಹೋ ಬತ ಮಹದ್ಭೂತಂ ಸ್ವಯಂಭೂರ್ಯದಿದಂ ಸ್ವಯಮ್ ।
ಆದಾಸ್ಯತಿ ಪುನಃ ಕ್ಷತ್ರಮೇವಂಬಲಸಮನ್ವಿತಮ್ ॥೧೯॥

ಇದು ಎಷ್ಟು ಆಶ್ಚರ್ಯ! ಎಲ್ಲರನ್ನೂ ಸೃಷ್ಟಿಸುವ ತಾನು ಸೃಷ್ಟಿಸಲ್ಪಡದಿರುವ ಹರಿಯು ಇಂತಹ ಬಲಸಂಪನ್ನವಾದ ಕ್ಷತ್ರಿಯ ಕುಲವನ್ನು ಪುನಃ ಸಂಹಾರಮಾಡುತ್ತಾನೆ.

ಇತ್ಯೇವಂ ನಾರದಶ್ಚಿಂತಾಂ ಚಿಂತಯಾಮಾಸ ಧರ್ಮವಿತ್ ।
ಹರಿಂ ನಾರಾಯಣಂ ಜ್ಞಾತ್ವಾ ಯಜ್ಞೈರಿಜ್ಯಂ ತಮೀಶ್ವರಮ್ ॥೨೦॥

ತಸ್ಮಿನ್ ಧರ್ಮವಿದಾಂ ಶ್ರೇಷ್ಠೋ ಧರ್ಮರಾಜಸ್ಯ ಧೀಮತಃ ।
ಮಹಾಧ್ವರೇ ಮಹಾಬಾಹುಃ ತಸ್ಥೌ ಸ ಬಹುಮಾನತಃ ॥೨೧॥

ಹೀಗೆ ಮೇಧಾವಿಯಾದ ಧರ್ಮರಾಜನ ಮಹಾಯಜ್ಞದ ಸಂದರ್ಭದಲ್ಲಿ ಧರ್ಮವನ್ನು ತಿಳಿದ ಮಹಾಬಾಹುವಾದ ನಾರದರು ಎಲ್ಲ ಯಜ್ಞಗಳಿಂದಲೂ ಪೂಜಿಸಲ್ಪಡುವವನಾದ ಪ್ರಭುವಾದ ನಾರಾಯಣನಾದ ಹರಿಯನ್ನು ಧ್ಯಾನಮಾಡುತ್ತಾ ಬಹುಮಾನದಿಂದ ಅಲ್ಲಿ ಕುಳಿತರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ದ್ವಾತ್ರಿಂಶೋಧ್ಯಾಯಃ॥
॥ಅರ್ಘಾಭಿಹರಣಪರ್ವಣಿ ಪ್ರಥಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಮೂವತ್ತೆರಡನೆಯ ಅಧ್ಯಾಯವು ಮುಗಿದುದು.

★★★★★

ಮೂವತ್ಮೂರನೆಯ ಅಧ್ಯಾಯ

(ಕೃಷ್ಣನ ಆಗಮನ, ಭೀಷ್ಮರ ಆಜ್ಞೆಯಂತೆ ಸಹದೇವನಿಂದ ಕೃಷ್ಣನಿಗೆ ಅಗ್ರಪೂಜೆ ಶಿಶುಪಾಲನ ನಿಂದೆ.)

ವೈಶಂಪಾಯನಃ

ತತಃ ಸಮುದಿತಾ ಮುಖ್ಯೈರ್ಗುಣೈರ್ಗುಣವತಾಂ ವರಾಃ ।
ಬಹವೋ ಭಾವಿತಾತ್ಮಾನಃ ಪೃಥಕ್ ಪೃಥಗರಿಂದಮ ॥೧॥

ಆತ್ಮಕೃತ್ಯಮಿತಿ ಜ್ಞಾತ್ವಾ ಪಾಂಚಾಲಾಸ್ತತ್ರ ಸರ್ವಶಃ ।
ಸಮೀಯುರ್ವೃಷ್ಣಯಶ್ಚೈವ ತದಾನೀಂ ಕಾರ್ಯಕಾರಿಣಃ ॥೨॥

ಅರಿಂದಮನೇ! ಅನಂತರ ಗುಣವಂತರಲ್ಲಿ ಶ್ರೇಷ್ಠರಾದ, ಶ್ರೇಷ್ಠವಾದ ಗುಣಗಳಿಂದಕೂಡಿದ, ಪರಿಶುದ್ಧವಾದ ಮನಸ್ಸುಳ್ಳ ಅನೇಕರಾಜರೂ ಪಾಂಚಾಲರೂ ವೃಷ್ಣಿಗಳೂ ಇದು ತಮ್ಮ ಕಾರ್ಯವೆಂದು ತಿಳಿದುಕೊಂಡು ಧರ್ಮರಾಜನ ಕಾರ್ಯದಲ್ಲಿ ನೆರವಾಗುವ ಸಲುವಾಗಿ ಬೇರೆ ಬೇರೆಯಾಗಿ ಅಲ್ಲಿಗೆ ಬಂದು ಸೇರಿದರು.

ಸದಾರಾಃ ಸಜನಾಮಾತ್ಯಾ ವಹಂತೋ ರತ್ನಸಂಚಯಾನ್ ।
ವಿಕೃಷ್ಟತ್ವಾಚ್ಚ ದೇಶಸ್ಯ ಗುರುಭಾರತಯೈವ ತೇ ।
ಯಯುಃ ಪ್ರಮುದಿತಾಃ ಪಶ್ಚಾದ್ ರಾಜಭಿರ್ನ ಸಮಂ ಯಯುಃ ॥೩॥

ತಮ್ಮ ಪತ್ನಿಯರಿಂದಲೂ ಬಂಧುಗಳಿಂದಲೂ ಮತ್ತು ಅಮಾತ್ಯರಿಂದಲೂ ಕೂಡಿಕೊಂಡು ರತ್ನದ ಭಾರಗಳನ್ನು ಹೊತ್ತುಕೊಂಡು ಯಜ್ಞದ ಭೂಶೋಧನೆಯ ಸಲುವಾಗಿ ಭೂಮಿಯನ್ನು ಉತ್ತಿದ್ದ ಕಾರಣದಿಂದ ಮತ್ತು ಆ ಭೂ ಪ್ರದೇಶವು ಅಲ್ಪವಾದ ಕಾರಣದಿಂದ ಮತ್ತು ದೊಡ್ಡ ಭಾರವನ್ನು ಹೊತ್ತಿದ್ದ ಕಾರಣದಿಂದಲೂ ಸಹ ಎಲ್ಲ ರಾಜರು ಜೊತೆಯಲ್ಲಿ ಸಮವಾಗಿ ಬರದೆ ವಿಲಂಬದಿಂದ ಸಂತೋಷದಿಂದ ಒಬ್ಬೊಬ್ಬರಾಗಿ ಬಂದರು.

ಭಗವಾನ್ ಸರ್ವಭೂತಾನಾಂ ಭಾಸ್ಯನ್ನಮಿತತೇಜಸಾ ।
ವಿಶನ್ನಂತರ್ಯಜ್ಞಭೂಮಿಂ ಸಿತಸ್ಯಾವರಜೋ ವಿಭುಃ ॥೪॥

ತೇಜೋರಾಶಿಮೃಷಿಂ ದೃಶ್ಯಮದೃಶ್ಯಮವಿಜಾನತಾಮ್ ।
ವಯೋತಿಗಾನಾಂ ವೃದ್ಧಾನಾಂ ಮಾರ್ಗಮಾವೃತ್ಯ ತಿಷ್ಠತಾಮ್ ॥೫॥

ಜಗತಸ್ತಸ್ಥುಷಶ್ಚೈವ ಪ್ರಭವಾಪ್ಯಯಮಚ್ಯುತಮ್ ।
ಅನಂತಮಂತಂ ಶತ್ರೂಣಾಮಮಿತ್ರಗಣಮರ್ದನಮ್ ॥೬॥

ಪ್ರಭವಂ ಸರ್ವಭೂತಾನಾಮಾಪತ್ಸ್ವಾಶ್ರಯಮಚ್ಯುತಮ್ ।
ಭವಿಷ್ಯಂ ಭಾವನಂ ಭೂತಂ ದ್ವಾರವತ್ಯಾಮರಿಂದಮಮ್ ॥೭॥

ಋಜುಂ ಚಕ್ರಾಯುಧಂ ಶೌರಿಮಮಿತ್ರಗಣಮರ್ದನಮ್ ।
ಬಲಾಧಿಕಾರಂ ನಿಕ್ಷಿಪ್ಯ ಸಮ್ಮಾನ್ಯಾನಕದುಂದುಭಿಮ್ ॥೮॥

ಬಲಶೇಷಂ ಸಮುದಿತಂ ಪರಿಗೃಹ್ಯ ಸಮಂತತಃ ।
ಸಂಪ್ರಾಯಾದ್ ಯಾದವಶ್ರೇಷ್ಠೋ ಯಜಮಾನೇ ಯುಧಿಷ್ಠಿರೇ ॥೯॥

ಉಚ್ಚಾವಚಮುಪಾದಾಯ ಧರ್ಮರಾಜಾಯ ಮಾಧವಃ ।
ಧನೌಘಂ ಪುರತಃ ಕೃತ್ವಾ ಖಾಂಡವಪ್ರಸ್ಥಮಾಯಯೌ ॥೧೦॥

ಅರಿಂದಮನಾದ ಜನಮೇಜಯನೇ! ಯಾದವಶ್ರೇಷ್ಠನಾದ ಮಾಧವನು ಆನಕದುಂದುಬಿಯನ್ನು (ವಸುದೇವನನ್ನು) ಸೇನಾ ನಾಯಕನನ್ನಾಗಿಮಾಡಿ ದ್ವಾರಾವತಿಯಲ್ಲಿ ಇರಿಸಿ ಧರ್ಮರಾಜನಿಗೆ ಅರ್ಪಿಸಬೇಕಾದ ಉಚ್ಚಾವಚರತ್ನರಾಶಿಯನ್ನು ಮುಂದೆಮಾಡಿಕೊಂಡು ಯಜ್ಞದ ಆರಂಭಕ್ಕಿಂತ ಮುಂಚೆಯೇ ಖಾಂಡವಪ್ರಸ್ಥಕ್ಕೆ ಬಂದನು. ಋಜುವೂ ಶಾಂತನೂ ಚಕ್ರಾಯುಧನು ಶೌರಿಯೂ ಸ್ಥಾವರಜಂಗಮಾತ್ಮಕವಾದ ಜಗತ್ತಿಗೆಜನ್ಮ ಸಂಹಾರದಾಯಕನೂ ಚರ್ತುವಿಧನಾಶರಹಿತನೂ ದೇಶಕಾಲಗುಣಗಳಿಂದ ಅನಂತನೂ ಶತ್ರುಸಂಹಾರಕನೂ ಆದ್ದರಿಂದಲೇ ಶತ್ರುಗಳ ಸಮೂಹವನ್ನು ಮರ್ದಿಸುವವನೂ ಎಲ್ಲ ಜೀವರಿಗೂ ಸೃಷ್ಟಿ ಕರ್ತನಾದವನೂ ಎಂದೂ ತಪ್ಪದಂತೆ ಆಪತ್ತುಗಳಲ್ಲಿ ರಕ್ಷಿಸುವವನೂ ಮುಂದೆ ಬುದ್ಧಾದಿ ಅವತಾರಗಳಿಂದ ಅವತರಿಸುವವನೂ ಈಗ ಕೃಷ್ಣಾದಿರೂಪದಿಂದ ಅವತರಿಸಿರುವವನೂ ಹಿಂದೆ ಮತ್ಸ್ಯಾದಿರೂಪದಿಂದ ಅವತರಿಸಿದವನೂ ತೇಜೋರಾಶಿಯೂ ಸರ್ವಜ್ಞನೂ ದರ್ಶನಾಯೋಗ್ಯನೂ ಆದ ಈ ಕೃಷ್ಣನನ್ನು ಈಗ ದೃಶ್ಯನಾದ ಕಾರಣದಿಂದ

ಪ್ರಾಕೃತಜನರಂತೆ ತಿಳಿಯುವ ಹೆಚ್ಚು ವಯಸ್ಸಾದ ವೃದ್ಧರನ್ನೂ ಆ ಕಾರಣದಿಂದಲೇ ದಾರಿಯನ್ನೂ ಬಿಡದೆ ನಿಂತಿರುವ ಸಜ್ಜನರನ್ನೂ ದಾಟಿ ಯುಧಿಷ್ಠಿರನು ಯಾಗವನ್ನು ಮಾಡುತ್ತಿರಲು, ದ್ವಾರಾವತಿಯಲ್ಲಿ ಶತ್ರುಸಂಹಾರಕವಾದ ಉಳಿದ ಸೈನ್ಯವನ್ನು ತೆಗೆದುಕೊಂಡು ನೇರವಾಗಿ ಯಜ್ಞಸಭೆಯನ್ನು ಬಿಟ್ಟು ಅಂತರ್ವೇದಿಯ ಕಡೆಗೆ ನಡೆದು ಬಂದನು.

ತತ್ರ ಯಜ್ಞಾಗತಾನ್ ಸರ್ವಾನ್ ಚೈದ್ಯವಕ್ರಪುರೋಗಮಾನ್ ।
ಭೂಮಿಪಾಲಗಣಾನ್ ಸರ್ವಾನ್ ಸಪ್ರಭಾನಿವ ತೋಯದಾನ್ ॥೧೧॥

ಮೇಘಕಾಯಾನ್ ನಿಃಶ್ವಸತೋ ಯೂಥಪಾನಿವ ಯೂಥಪಃ ।
ಬಲಿನಃ ಸಿಂಹಸಂಕಾಶಾನ್ ಮಹೀಮಾವೃತ್ಯ ತಿಷ್ಠತಃ ॥೧೨॥

ತತೋ ರತ್ನೌಘಸಂಬಾಧಂ ರಾಜಸಾಗರಮವ್ಯಯಮ್ ।
ನಾದಯನ್ ರಥಘೋಷೇಣಾಭ್ಯುಪಾಯಾನ್ಮಧುಸೂದನಃ ॥೧೩॥

ಅಲ್ಲಿ ಯಜ್ಞದ ಸಲುವಾಗಿ ಆಗಮಿಸಿದ ಶಿಶುಪಾಲದಂತವಕ್ರ ಮೊದಲಾದ ಮಿಂಚಿನಿಂದ ಕೂಡಿದ ಮೋಡದಂತಿರುವ ಬೃಹತ್‌ಶರೀರರಾದ ಮಹಾಗಜಗಳಂತೆ ಧೀರ್ಘವಾದ ನಿಟ್ಟುಸಿರನ್ನು ಬಿಡುತ್ತಿರುವ ಬಲಿಷ್ಠರೂ ಸಿಂಹನಿಭರೂ ಭೂಮಿಯನ್ನು ಆಕ್ರಮಿಸಿ ಕುಳಿತವರೂ ಆದ ಎಲ್ಲಾ ರಾಜರ ಸಮೂಹವನ್ನು ತನ್ನ ರಥಘೋಷದಿಂದ ಎಚ್ಚರಿಸುತ್ತಾ ಮಧುಸೂದನನು ಸಭೆಯ ಮಧ್ಯಕ್ಕೆ ಬಂದನು.

ಅಸೂರ್ಯಮಿವ ಸೂರ್ಯೇಣ ನಿವಾತಮಿವ ವಾಯುನಾ ।
ಕೃಷ್ಣೇನ ಸಮವೇತೇನ ಜಹರ್ಷೇ ಭಾರತಂ ಪುರಮ್ ॥೧೪॥

ಕೃಷ್ಣನು ಸಭೆಗೆ ಬರುತ್ತಿರಲು ಆ ಭಾರತದ ಪಟ್ಟಣವು ಸೂರ್ಯನಿಲ್ಲದ ಆಕಾಶವು ಸೂರ್ಯನು ಬಂದಂತೆ ವಾಯುವಿಲ್ಲದ ವಾತಾವರಣವು ವಾಯುವು ಬಂದಂತೆ ಸಂತೋಷದಿಂದ ಕೂಡಿತು.

ಬ್ರಾಹ್ಮಣಕ್ಷತ್ರಿಯಾಣಾಂ ಹಿ ಪೂಜಾರ್ಥಂ ಹ್ಯರ್ಥಧರ್ಮವಿತ್ ।
ಸಹದೇವೋ ವಿಶೇಷಜ್ಞೋ ಮಾದ್ರೀಪುತ್ರಃ ಕೃತೋಽಭವತ್ ॥೧೫॥

ಧರ್ಮಾರ್ಥಗಳನ್ನು ತಿಳಿದ ವಿಶೇಷಜ್ಞಾನಿಯಾದ ಮಾದ್ರೀಪುತ್ರನಾದ ಸಹದೇವನು ಆಗಮಿಸಿದ ಬ್ರಾಹ್ಮಣರ ಮತ್ತು ಕ್ಷತ್ರಿಯರ ಪೂಜಾರ್ಥವಾಗಿ ನಿಯಮಿಸಲ್ಪಟ್ಟಿದ್ದನು.

ಸ ದೃಷ್ಟ್ವಾ ವಿಷ್ಣುಮಾಯಾಂತಂ ಪ್ರತಿಪೂಜ್ಯಾಮಿತೌಜಸಮ್ ।
ಯಥಾರ್ಹಂ ಕೇಶವೇ ವೃತ್ತಿಂ ಪ್ರತ್ಯಪದ್ಯತ ಪಾಂಡವಃ ॥೧೬॥

ಪಾಂಡುಪುತ್ರನಾದ ಸಹದೇವನು ಅಮಿತಪರಾಕ್ರಮಿಯಾದ ವಿಷ್ಣುವು ಬರುತ್ತಿರುವುದನ್ನು ನೋಡಿ ಕೇಶವನಲ್ಲಿ ಯಥಾಯೋಗ್ಯವಾದ ವೃತ್ತಿಯನ್ನು ಹೊಂದಿದವನಾಗಿ ಅವನನ್ನು ಪೂಜಿಸಿ ಅವನ ಸಮೀಪದಲ್ಲಿ ನಿಂತನು.

ಜ್ಯೈಷ್ಠ್ಯಕಾನಿಷ್ಠ್ಯಸಂಯೋಗಂ ಸಂಪ್ರಧಾರ್ಯ ಗುಣಾಗುಣೈಃ ।
ಆರಿರಾಧಯಿಷುರ್ಧರ್ಮಃ ಪೂಜಯಿತ್ವಾ ದ್ವಿಜೋತ್ತಮಾನ್ ।
ಮಹದಾದಿತ್ಯಸಂಕಾಶಮಾಸನಂ ಚ ಜಗತ್ಪತೇಃ ॥೧೭॥

ಅವರವರ ಗುಣದೋಷಗಳಿಂದ ಯಾರು ಹಿರಿಯರು ಮತ್ತು ಯಾರು ಕಿರಿಯರು ಎಂದು ನಿಶ್ಚಯಿಸಿ ಅದಕ್ಕೆ ಅನುಗುಣವಾಗಿ ದ್ವಿಜಶ್ರೇಷ್ಠರನ್ನು ಆರಾಧಿಸಲು ಸಂಕಲ್ಪಿಸಿದ್ದ ಧರ್ಮರಾಜನು ಕೃಷ್ಣನನ್ನು ಪೂಜಿಸಿ ಸೂರ್ಯನಂತೆ ಬೆಳಗುತ್ತಿರುವ ಶ್ರೇಷ್ಠವಾದ ಆಸನವನ್ನು ಜಗತ್ಪತಿಗೆ ಕೊಟ್ಟನು.

ತತೋ ಭೀಷ್ಮೋSಬ್ರವೀದ್ ರಾಜನ್ ಧರ್ಮರಾಜಂ ಯುಧಿಷ್ಠಿರಮ್ ।
ಕ್ರಿಯತಾಮರ್ಹಣಂ ರಾಜ್ಞಾಂ ಯಥಾರ್ಹಮಿಹ ಭಾರತ ॥೧೮॥

ರಾಜನೇ! ಆನಂತರ ಭೀಷ್ಮನು ಧರ್ಮರಾಜನಾದ ಯುಧಿಷ್ಠಿರನನ್ನು ಕುರಿತು ಆಗಮಿಸಿರುವ ರಾಜರಿಗೆ ಅವರ ಯೋಗ್ಯತೆಗೆ ಅನುಗುಣವಾಗಿ ಪೂಜೆಯನ್ನು ಸಲ್ಲಿಸು ಎಂದು ಹೇಳಿದನು.

ಆಚಾರ್ಯಮೃತ್ವಿಜಂ ಚೈವ ಸಂಯುಕ್ತಂ ತು ಯುಧಿಷ್ಠಿರ ।
ಸ್ನಾತಕಂ ಚ ಪ್ರಿಯಂ ಚಾಹುಃ ಷಡರ್ಘ್ಯಾರ್ಹಾನ್ ನೃಪಂ ತಥಾ ॥೧೯॥

ಯುಧಿಷ್ಠಿರನೇ! ಆಚಾರ್ಯ ಋತ್ವಿಕ್, ಆ ಕಾಲದಲ್ಲಿ ಬಂದ ಅತಿಥಿ, ಸ್ನಾತಕ ಪ್ರೀತಿಪಾತ್ರ ಮತ್ತು ರಾಜ ಈ ಆರುಜನರು ಅಗ್ರಪೂಜೆಗೆ ಯೋಗ್ಯರಾದವರು ಎಂದು ಹೇಳುತ್ತಾರೆ.

ಏತಾನರ್ಹಾನಧಿಗತಾನ್ ಬಹು ಸಂವತ್ಸರೋಷಿತಾನ್ ।
ತ ಇಮೇ ಕಾಲಪೂಗಸ್ಯ ಮಹತೋಸ್ಮಾನುಪಾಗತಾಃ ॥೨೦॥

ಏಷಾಮೇಕೈಕಶೋ ರಾಜನ್ನರ್ಘ್ಯಮಾನೀಯತಾಮಿತಿ ।
ಅಥ ಚೈಷಾಂ ವರಿಷ್ಠೋ ಯಸ್ತಸ್ಯಾರ್ಘ್ಯಮುಪಕಲ್ಪ್ಯತಾಮ್ ॥೨೧॥

ಇಲ್ಲಿ ಬಂದಿರುವರೆಲ್ಲರೂ ಬಹಳ ವೃದ್ಧರಾದವರು ಮತ್ತು ಪೂಜಾರ್ಹರಾದವರು, ಅವರನ್ನು ಪೂಜಿಸು. ಇವರೆಲ್ಲರೂ ಬಹಳ ಕಾಲವಾದಮೇಲೆ ನಮ್ಮ ರಾಜ್ಯಕ್ಕೆ ಬಂದಿದ್ದಾರೆ. ಇವರಲ್ಲಿ ಪ್ರತಿಯೊಬ್ಬರಿಗೂ ಅರ್ಘ್ಯಾದಿಗಳನ್ನು ಕೊಡು ಮತ್ತು ಆಗಮಿಸಿರುವರಲ್ಲಿ ಯಾರು ಅತ್ಯಂತಶ್ರೇಷ್ಠರೋ ಅವರಿಗೆ ಮೊದಲು ಅರ್ಘ್ಯಾದಿಗಳನ್ನು ಕೊಡು.

ಯುಧಿಷ್ಠಿರಃ

ಕಸ್ಮೈ ಭವಾನ್ ಮನ್ಯತೇಽರ್ಘ್ಯಮೇಕಸ್ಮೈ ಕುರುನಂದನ ।
ಆನೀಯಮಾನಂ ಯುಕ್ತಂ ಚ ತನ್ಮೇ ಬ್ರೂಹಿ ಪಿತಾಮಹ ॥೨೨॥

ಕುರುನಂದನನೇ! ಪಿತಾಮಹನೇ! ನಾನು ಯಾರಿಗೆ ಮೊದಲು ಅರ್ಘ್ಯಾದಿಗಳನ್ನು ಕೊಟ್ಟರೆ ಅದು ಯುಕ್ತವಾಗುತ್ತದೆ ಎಂದು ನೀನು ಭಾವಿಸುತ್ತಿಯೋ ಅವರನ್ನು ಸೂಚಿಸು.

ವೈಶಂಪಾಯನಃ

ತತೋ ಭೀಷ್ಮಃ ಶಾಂತನವೋ ಬುದ್ಧ್ಯಾ ನಿಶ್ಚಿತ್ಯ ಭಾರತ ।
ವಾರ್ಷ್ಣೇಯಂ ಮನ್ಯತೇ ಕೃಷ್ಣಮರ್ಹಣೀಯಮರಿಂದಮ ॥೨೩॥

ಭಾರತನೇ! ಅರಿಂದಮನೇ! ಆಗ ಶಂತನುವಿನ ಮಗನಾದ ಭೀಷ್ಮರು ತನ್ನ ಬುದ್ಧಿಯಿಂದ ನಿಶ್ಚಯಿಸಿ ವೃಷ್ಣಿಕುಲೋತ್ಪನ್ನನಾದ ಕೃಷ್ಣನನ್ನು ಅಗ್ರಪೂಜೆಗೆ ಅರ್ಹನೆಂದು ಭಾವಿಸಿದನು.

ಭೀಷ್ಮಃ

ಏಷ ಹ್ಯೇಷಾಂ ಸಮೇತಾನಾಂ ತೇಜೋಬಲಪರಾಕ್ರಮೈಃ ।
ಮಧ್ಯೇ ತಪನ್ನಿವಾಭಾತಿ ಜ್ಯೋತಿಷಾಂ ರವಿರಂಶುಮಾನ್ ॥೨೪॥

ತೇಜೋಬಲಪರಾಕ್ರಮವುಳ್ಳ ಇಲ್ಲಿಗೆ ಆಗಮಿಸಿದ ಎಲ್ಲರ ಮಧ್ಯೆ ಈ ಕೃಷ್ಣನು ಜ್ಯೋತಿರ್ಗಣಗಳ ಮಧ್ಯೆ ತನ್ನ ಕಿರಣಗಳಿಂದ ಪ್ರಕಾಶಿಸುತ್ತಿರುವ ಸೂರ್ಯನಂತೆ ಪ್ರಕಾಶಿಸುತ್ತಿದ್ದಾನೆ.

ಅಸೂರ್ಯಮಿವ ಸೂರ್ಯೇಣ ನಿವಾತಮಿವ ವಾಯುನಾ ।
ಭಾಸಿತಂ ಹ್ಲಾದಿತಂ ಚೈವ ಕೃಷ್ಣೇನೇದಂ ಸದೋ ಹಿ ನಃ ॥೨೫॥

ಕೃಷ್ಣನು ಬಂದ ತಕ್ಷಣ ಈ ನಮ್ಮ ಸಭೆಯು ಸೂರ್ಯನಿಲ್ಲದ ಲೋಕವು ಸೂರ್ಯನು ಬಂದಂತೆ ವಾಯುವಿಲ್ಲದ ಲೋಕವು ವಾಯುವು ಬಂದಂತೆ ಪ್ರಕಾಶವನ್ನು ಮತ್ತು ಸಂತೋಷವನ್ನು ಪಡೆದಿದೆ.

ವೈಶಂಪಾಯನಃ

ತಸ್ಯೈ ಭೀಷ್ಮಾಭ್ಯನುಜ್ಞಾತಃ ಸಹದೇವಃ ಪ್ರತಾಪವಾನ್ ।
ಉಪಜಹ್ರೇ ಚ ವಿಧಿವದ್ ವಾರ್ಷ್ಣೇಯಾಯಾರ್ಘ್ಯಮುತ್ತಮಮ್ ॥೨೬॥

ಆಗ ಪ್ರತಾಪಶಾಲಿಯಾದ ಸಹದೇವನು ಭೀಷ್ಮನ ಅನುಜ್ಞೆಯನ್ನು ಪಡೆದು ವೃಷ್ಣಿಕುಲಸಮುದ್ಭೂತನಾದ ಕೃಷ್ಣನಿಗೆ ವಿಧಿಪೂರ್ವಕವಾಗಿ ಶ್ರೇಷ್ಠವಾದ ಅರ್ಘ್ಯವನ್ನು ಅರ್ಪಿಸಿದನು.

ಗಾಮರ್ಘ್ಯಂ ಮಧುಪರ್ಕಂ ಚ ಹ್ಯಾನೀಯೋಪಾಹರತ್ ತದಾ ।
ಚರಣಾವಸ್ಪೃಶನ್ನಾಮ್ನಾ ಸಹದೇವೋ ವಿಶಾಂಪತೇ ॥೨೭॥

ಎಲೈ ರಾಜನೇ! ತನ್ನ ಹೆಸರನ್ನು ಹೇಳಿ ಕೃಷ್ಣನ ಪಾದಗಳನ್ನು ಸ್ಪರ್ಶಮಾಡಿ ಸಹದೇವನು ಗೋದಾನವನ್ನು ಮಾಡಿ ಅರ್ಘ್ಯವನ್ನೂ ಮಧುಪರ್ಕವನ್ನೂ ಸಮರ್ಪಿಸಿದನು.

ಕೇಶವಶ್ಚಾಪ್ಯುಪಾಘ್ರಾಯ ಮೂರ್ಧ್ನಿ ಶಾಸ್ತ್ರವಿದಾಂ ವರಃ ।
ಸಹದೇವಮಥೋವಾಚ ಕಚ್ಚಿದ್ವಃ ಕುಶಲಂ ಗೃಹೇ ॥೨೮॥

ಶಾಸ್ತ್ರವನ್ನು ತಿಳಿದವರಲ್ಲಿ ಶ್ರೇಷ್ಠನಾದ ಕೃಷ್ಣನೂ ಸಹ ಸಹದೇವನನ್ನು ಶಿರಸ್ಸಿನಲ್ಲಿ ಆಘ್ರಾಣಿಸಿ ಮನೆಯಲ್ಲಿ ಎಲ್ಲರೂ ಕ್ಷೇಮವೇ ಎಂದು ಸಹದೇವನನ್ನು ಪ್ರಶ್ನಿಸಿದನು.

ತಾಂ ದೃಷ್ಟ್ವಾ ಕ್ಷತ್ರಿಯಾಃ ಸರ್ವೇ ಪೂಜಾಂ ಕೃಷ್ಣಸ್ಯ ಭೂಯಸೀಮ್ ।
ಸಂಪ್ರೇಕ್ಷ್ಯಾನ್ಯೋನ್ಯಮಾಸೀನಾ ಹೃದಯೈಸ್ತಾಮಧಾರಯನ್ ॥೨೯॥

ಆಗ ಅಲ್ಲಿ ಕುಳಿತಿದ್ದ ಕ್ಷತ್ರಿಯರು ಕೃಷ್ಣನಿಗೆ ಸಮರ್ಪಿಸಲ್ಪಟ್ಟ ಆ ಪೂಜೆಯನ್ನು ಗಮನಿಸಿ ಒಬ್ಬರ ಮುಖವನ್ನು ಇನ್ನೊಬ್ಬರು ನೋಡುತ್ತಾ ತಮ್ಮ ಮನಸ್ಸಿನಲ್ಲಿಯೇ ತಮ್ಮ ಭಾವನೆಗಳನ್ನು ಧರಿಸಿದರು.

ಪ್ರತಿಜಗ್ರಾಹ ತಾಂ ಕೃಷ್ಣಃ ಶಾಸ್ತ್ರದೃಷ್ಟೇನ ಕರ್ಮಣಾ ।
ಶಿಶುಪಾಲಸ್ತು ತಾಂ ಪೂಜಾಂ ವಾಸುದೇವೇ ನ ಚಕ್ಷಮೇ ॥೩೦॥

ಕೃಷ್ಣನು ಶಾಸ್ತ್ರದೃಷ್ಟಿಯಿಂದ ಮಾಡಿದ ಆ ಪೂಜೆಯನ್ನು ಸ್ವೀಕರಿಸಿದನು. ಆದರೆ ವಾಸುದೇವನಿಗೆ ಮಾಡಿದ ಆ ಪೂಜೆಯನ್ನು ನೋಡಿ ಶಿಶುಪಾಲನು ಸಹಿಸಲಿಲ್ಲ.

ಉಪಾಲಭ್ಯ ಸ ಭೀಷ್ಮಂ ಚ ಧರ್ಮರಾಜಂ ಚ ಸಂಸದಿ ।
ಅವಾಕ್ಷಿಪದ್ ವಾಸುದೇವಂ ಚೇದಿರಾಜೋ ಮಹಾಬಲಃ ॥೩೧॥

ಮಹಾಬಲನಾದ ಚೇದಿರಾಜನು ಭೀಷ್ಮರನ್ನೂ ಧರ್ಮರಾಜನನ್ನೂ ಸಭೆಯಲ್ಲಿ ನಿಂದಿಸಿ ವಾಸುದೇವನನ್ನೂ ನಿಂದಿಸಿದನು.

ತೇಷಾಮಾಕಾರಭಾವಜ್ಞಃ ಸಹದೇವೋ ನ ಚಕ್ಷಮೇ ।
ಮಾನಿನಾಂ ಬಲಿನಾಂ ರಾಜ್ಞಾಂ ಪುರಃ ಸಂದರ್ಶಿತೇ ಪದೇ ।
ಪುಷ್ಪವೃಷ್ಟಿರ್ಮಹತ್ಯಾಸೀತ್ ಸಹದೇವಸ್ಯ ಮೂರ್ಧನಿ ॥೩೨॥

ಅಲ್ಲಿ ನೆರದ ಅನೇಕರಾಜರ ಇಂಗಿತವನ್ನು ತಿಳಿದ ಸಹದೇವನು ಅದನ್ನು ನೋಡಿ ಸಹಿಸಲಿಲ್ಲ. ಧರ್ಮಿಷ್ಠರಾದ ಮತ್ತು ಬಲಿಷ್ಠರಾದ ಅಂತಹ ರಾಜರು ಎದುರಿನಲ್ಲಿ ಸಹದೇವನು ತನ್ನ ಪಾದವನ್ನು ತೋರಿಸುತ್ತಿರಲು ಅವನ ತಲೆಯಮೇಲೆ ದೊಡ್ಡ ಪುಷ್ಪವೃಷ್ಟಿಯುಂಟಾಯಿತು.

ಜನ್ಮಪ್ರಭೃತಿ ವೃಷ್ಣೀನಾಂ ಸುನೀಥಃ ಶತ್ರುರಬ್ರವೀತ್ ।
ಪ್ರಷ್ಟಾ ವಿಯೋನಿಜೋ ರಾಜಾ ಪ್ರತಿವಕ್ತಾ ನದೀಸುತಃ ॥೩೩॥

ಪ್ರತಿಗ್ರಹೀತಾ ಗೋಪಾಲಃ ಪ್ರದಾತಾ ಚ ವಿಯೋನಿಜಃ ।
ಸದಸ್ಯಾ ಮೂಕವತ್ ಸರ್ವೇ ಆಸತೇಽತ್ರ ಕಿಮುಚ್ಯತೇ ॥೩೪॥

ಹುಟ್ಟಿದಾಗಿನಿಂದಲೂ ವೃಷ್ಣಿಗಳಿಗೆ ಶತ್ರುವಾಗಿದ್ದ ಶಿಶುಪಾಲನು ಹೀಗೆ ಮಾತನಾಡಿದನು. ಪ್ರಶ್ನೆಯನ್ನು ಮಾಡುತ್ತಿರುವವನು ವಿಯೋನಿಯಲ್ಲಿ ಹುಟ್ಟಿದ ರಾಜ, ಅದಕ್ಕೆ ಉತ್ತರವನ್ನು ಕೊಡುವವನು ನದಿಯ ಪುತ್ರ, ಪೂಜೆಯನ್ನು ಸ್ವೀಕರಿಸುವವನು ದನವನ್ನು ಕಾಯುವವನು, ಪೂಜೆಯನ್ನು ಮಾಡುವವನು ಇನ್ನೊಬ್ಬ ವಿಯೋನಿಜನಾದವನು. ಎಲ್ಲಾ ಸದಸ್ಯರೂ ಮೂಕರಂತೆ ಕುಳಿತ್ತಿದ್ದಾರೆ. ಇಲ್ಲಿ ಏನು ಹೇಳಲಿ?

ಅತಿ ಪಶ್ಯಸಿ ವಾ ಸರ್ವಾನ್ ನವಾ ಪಶ್ಯಸಿ ಪಾಂಡವ ।
ಸತ್ಸ್ವೇವಾನ್ಯೇಷು ಪೂಜ್ಯೇಷು ಕೃಷ್ಣಂ ನಾರ್ಚಿತುಮರ್ಹಸಿ ॥೩೫॥

ಪಾಂಡವನೇ! ಕೃಷ್ಣನು ಎಲ್ಲರನ್ನು ಮೀರಿ ಇದ್ದಾನೆಂದು ಕಾಣುತ್ತಿದ್ದಿಯಾ? ಅಥವಾ ಉಳಿದವರು ನಿನಗೆ ಕಾಣುವುದೇ ಇಲ್ಲವೆ? ಪೂಜಾಯೋಗ್ಯರಾದ ಉಳಿದವರು ಇರುವಾಗ ನೀನು ಕೃಷ್ಣನನ್ನು ಪೂಜಿಸಬಾರದು.

ಏತೇ ಚೈವೋಭಯೇ ತಾತ ಕಾರ್ಯಸ್ಯ ತು ವಿನಾಶಕೇ ।
ಅತಿದೃಷ್ಟಿರದೃಷ್ಟಿರ್ವಾ ತಯೋಃ ಕಿಂ ತ್ವಂ ಸಮಾಸ್ಥಿತಃ ॥೩೬॥

ಪ್ರೀತಿಪಾತ್ರನೇ! ಅತಿದೃಷ್ಟಿ ಮತ್ತು ಅದೃಷ್ಟಿ ಇವೆರಡೂ ಕಾರ್ಯವಿಘಾತಕವಾದವುಗಳು ಅವುಗಳಲ್ಲಿ ನೀನು ಯಾವುದನ್ನು ಅವಲಂಬಿಸಿದ್ದೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ತ್ರಯಸ್ತ್ರಿಂಶೋಧ್ಯಾಯಃ ॥
॥ಅರ್ಘಾಭಿಹರಣಪರ್ವಣಿ ದ್ವಿತೀಯೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಮೂವತ್ಮೂರನೆಯ ಅಧ್ಯಾಯವು ಮುಗಿಯಿತು.

★ ★ ★ ★

ಮೂವತ್ತಾಮ್ಮನೆಯ ಅಧ್ಯಾಯ

(ಶಿಶುಪಾಲನಿಂದ ಕೃಷ್ಣನ ನಿಂದೆ ಮತ್ತು ಸಭಾತ್ಯಾಗ)

ಶಿಶುಪಾಲಃ

ನಾಯಮರ್ಹತಿ ವಾರ್ಷ್ಣೇಯಸ್ತಿಷ್ಠತ್ಸ್ವಿಹ ಮಹಾತ್ಮಸು ।
ಮಹೀಪತಿಷು ಕೌರವ್ಯ ರಾಜವತ್ ಪಾರ್ಥಿವಾರ್ಹಣಮ್ ॥೧॥

ಕೌರವ್ಯನೇ! ಇಲ್ಲಿ ಅನೇಕ ಮಹಾತ್ಮರಾದ ರಾಜರು ಇರುವಾಗ ರಾಜನಿಗೆ ಯೋಗ್ಯವಾದ ಅಗ್ರಪೂಜೆಗೆ ಈ ಕೃಷ್ಣನು ಅರ್ಹನಾಗುವುದಿಲ್ಲ.

ನಾಯಂ ಯುಕ್ತಃ ಸಮಾಚಾರಃ ಪಾಂಡವೇಷು ಮಹಾತ್ಮಸು ।
ಯತ್ ಕಾಮಾದ್ ದೇವಕೀಪುತ್ರಂ ಪಾಂಡವಾರ್ಚಿತುಮರ್ಹಸಿ ॥೨॥

ಪಾಂಡವನೇ! ನೀನು ಮನಸ್ಸಿಗೆ ಬಂದಂತೆ ದೇವಕೀಪುತ್ರನನ್ನು ಪೂಜಿಸಿದುದು ಮಹಾತ್ಮರಾದ ಪಾಂಡವರಿಗೆ ಯೋಗ್ಯವಾದ ಆಚರಣೆಯಲ್ಲ.

ಬಾಲಾ ಯೂಯಂ ನ ಜಾನೀಧ್ವಂ ಧರ್ಮಸೂಕ್ಷ್ಮಂ ಹಿ ಪಾಂಡವಾಃ
।ಅಯಂ ತತ್ರ ತ್ವತಿಕ್ರಾಂತ ಆಪಗೇಯೋಽಲ್ಪದರ್ಶನಃ ॥೩॥

ಪಾಂಡವರೇ! ನೀವು ಬಾಲಕರು. ನಿಮಗೆ ಧರ್ಮಸೂಕ್ಷ್ಮವು ತಿಳಿಯುವುದಿಲ್ಲ. ಇಲ್ಲಿ ಸೂಕ್ಷ್ಮಧರ್ಮವು ಅತಿಕ್ರಾಂತವಾಗಿದೆ. ಗಂಗಾಸುತನಾದ ಭೀಷ್ಮನು ಅಲ್ಪ ಜ್ಞಾನವುಳ್ಳವನು.

ತ್ವಾದೃಶೇ ಧರ್ಮಯುಕ್ತೇ ಹಿ ಕುರ್ವಾಣಃ ಪ್ರಿಯಕಾಮ್ಯಯಾ ।
ಭವತ್ಯಭ್ಯಧಿ ಕಂ ಭೀಷ್ಮ ಲೋಕೇಷ್ವವಮತಃ ಸತಾಮ್ ॥೪॥

ಧರ್ಮಯುಕ್ತನಾದ ನಿನ್ನಂತಹವನಿಂದ ತನ್ನ ಪ್ರಿಯದ ಕಾಮನೆಯಿಂದ ಭೀಷ್ಮನು ಈ ಕಾರ್ಯವನ್ನು ಮಾಡಿಸುತ್ತಿದ್ದಾನೆ. ಎಲೈ ಭೀಷ್ಮನೇ ಲೋಕದಲ್ಲಿ ಸಜ್ಜನರಿಂದ ಅವಮಾನಕ್ಕೆ ಒಳಗಾದ ಕೃಷ್ಣನನ್ನು ಯಾರಿಗಿಂತ ಶ್ರೇಷ್ಠನೆಂದು ನೀನು ಭಾವಿಸುತ್ತೀಯೆ?

ಕಥಂ ಹ್ಯರಾಜಾ ದಾಶಾರ್ಹೋ ಮಧ್ಯೇ ಸರ್ವಮಹೀಕ್ಷಿತಾಮ್ ।
ಅರ್ಹಣಾಮರ್ಹತಿ ತಥಾ ಯಥಾ ಯುಷ್ಮಾಭಿರರ್ಚಿತಃ ॥೫॥

ಸರ್ವರಾಜರ ಮಧ್ಯದಲ್ಲಿ ರಾಜನಲ್ಲದ ದಾಶಾರ್ಹನು ನೀವು ಮಾಡಿದಂತೆ ಮಾಡಿದ ಪೂಜೆಯನ್ನು ಸ್ವೀಕರಿಸಲು ಹೇಗೆ ಅರ್ಹನಾಗುತ್ತಾನೆ?

ಅಥವಾ ಮನ್ಯಸೇ ಕೃಷ್ಣಂ ಸ್ಥವಿಷ್ಠಂ ಭರತರ್ಷಭ ।
ವಸುದೇವೇ ಸ್ಥಿತೇ ವೃದ್ಧೇ ಕಥಮರ್ಹತಿ ತತ್ಸುತಃ ॥೬॥

ಭರತರ್ಷಭನೇ! ಅಥವಾ ನೀನು ಕೃಷ್ಣನನ್ನು ವೃದ್ಧನೆಂದು ತಿಳಿಯುವುದಾದರೆ ಅವನ ತಂದೆಯಾದ ವೃದ್ಧನಾದ ವಸುದೇವನು ಇರುವಾಗ ಮಗನಾದ ಕೃಷ್ಣನು ಹೇಗೆ ಪೂಜೆಗೆ ಅರ್ಹನಾಗುತ್ತಾನೆ?

ದ್ರುಪದೇ ತಿಷ್ಠತಿ ಕಥಂ ಮಾಧವೋಽರ್ಹತಿ ಪೂಜನಮ್ ॥೭॥

ಅಥವಾ ವಸುದೇವನೂ ಕೂಡ ತನ್ನ ಸುತನು ಎಂಬ ಕಾರಣದಿಂದ ಈ ಪೂಜೆಯನ್ನು ಅನುಮೋದಿಸಿಬಹುದು. ಆದರೆ ದ್ರುಪದನಿರುವಾಗ ಮಾಧವನು ಹೇಗೆ ಪೂಜೆಗೆ ಅರ್ಹನಾಗುತ್ತಾನೆ.

ಆಚಾರ್ಯಂ ಮನ್ಯಸೇ ಕೃಷ್ಣಮಥವಾ ಕುರುಪುಂಗವ ।
ದ್ರೋಣೇ ತಿಷ್ಠತಿ ವಾರ್ಷ್ಣೇಯಂ ಕಸ್ಮಾದರ್ಚಿತವಾನಸಿ ॥೮॥

ಕುರುಪುಂಗವನೇ! ಅಥವಾ ನೀನು ಕೃಷ್ಣನನ್ನು ಆಚಾರ್ಯನೆಂದು ಭಾವಿಸುವುದಾದರೆ ದ್ರೋಣರು ಇರುವಾಗ ವಾರ್ಷ್ಣೇಯನನ್ನು ಏಕೆ ಅರ್ಚಿಸಿದೆ?

ಋತ್ವಿಜಂ ಮನ್ಯಸೇ ಕೃಷ್ಣಮಥವಾ ಕುರುಪುಂಗವ ।
ದ್ವೈಪಾಯನೇ ಸ್ಥಿತೇ ವಿಪ್ರೇ ಕಥಂ ಕೃಷ್ಣೋಽರ್ಚಿತಸ್ತ್ವಯಾ ॥೯॥

ಅಥವಾ ನೀನು ಕೃಷ್ಣನನ್ನು ಋತ್ವಿಜನೆಂದು ಭಾವಿಸಿದರೆ ಎಲೈ ಕುರುಪುಂಗವನೇ! ಬ್ರಾಹ್ಮಣರಾದ ವೇದವ್ಯಾಸರು ಇರುವಾಗ ನೀನು ಹೇಗೆ ಕೃಷ್ಣನನ್ನು ಅರ್ಚಿಸಿದೆ?

ಭೀಷ್ಮೇ ಶಾಂತನವೇ ರಾಜನ್ ಸ್ಥಿತೇ ಪುರುಷಸತ್ತಮೇ ।
ಸ್ವಚ್ಛಂದಮೃತ್ಯುಕೇ ತಸ್ಮಿನ್ ಕಥಂ ಕೃಷ್ಣೋರ್ಚಿತಸ್ತ್ವಯಾ ॥೧೦॥

ರಾಜನೇ! ಪುರುಷಶ್ರೇಷ್ಠನೇ! ಸ್ವಚ್ಛಂದಮೃತ್ಯುವೂ ಶಂತನು ಪುತ್ರನೂ ಆದ ಭೀಷ್ಮನು ಇರುವಾಗ ನೀನು ಹೇಗೆ ಕೃಷ್ಣನನ್ನು ಅರ್ಚಿಸಿದೆ?

ಅಯಂ ತತ್ರ ವ್ಯತಿಕ್ರಾಂತಃ ಕರ್ಮಣಾ ಚಾಲ್ಪದರ್ಶನಃ ।
ತಾದೃಶೋಽಧರ್ಮಯುಕ್ತೋ ಹಿ ಕುರ್ವತಾ ಪ್ರಿಯಕಾಮ್ಯಯಾ ।
ಕೃಪೇ ಚ ಭರತಾಚಾರ್ಯೇ ಕಥಂ ಕೃಷ್ಣೋಽರ್ಚಿತಸ್ತ್ವಯಾ ॥೧೧॥

ಸೂಕ್ಷ್ಮವಾದ ಧರ್ಮವು ಇಲ್ಲಿ ಮೀರಲ್ಪಟ್ಟಿದೆ. ನೀನು ಅಲ್ಪದರ್ಶನನಾದವನು. ನೀನು ಕೃಷ್ಣನಿಗೆ ಪ್ರೀತಿಯನ್ನು ಉಂಟುಮಾಡುವುದಕ್ಕಾಗಿ ಕೃಷ್ಣನಿಗೆ ಪೂಜೆಯನ್ನು ಮಾಡಿದರೆ ಅದು ಅಧರ್ಮವಾಗುತ್ತದೆ. ಭಾರತಾಚಾರ್ಯರಾದ ಕೃಪರು ಇರುವಾಗ ನೀನು ಹೇಗೆ ಕೃಷ್ಣನನ್ನು ಅರ್ಚಿಸಿದೆ?

ಅಶ್ವತ್ಥಾಮ್ನಿ ಸ್ಥಿತೇ ವೀರೇ ಸರ್ವಶಸ್ತ್ರವಿಶಾರದೇ ।
ಕಥಂ ಕೃಷ್ಣಸ್ತ್ವಯಾ ರಾಜನ್ನರ್ಚಿತೋ ಯದುನಂದನಃ ।
ದ್ರುಮೇ ಕಿಂಪುರುಷಾಚಾರ್ಯೇ ಸ್ಥಿತೇ ಕೃಷ್ಣೋಽರ್ಚಿತಃ ಕಥಮ್ ॥೧೨॥

ಸರ್ವಶಸ್ತ್ರವಿಶಾರದರಾದ ವೀರರಾದ ಅಶ್ವತ್ಥಾಮರು ಇರುವಾಗ ಎಲೈ ರಾಜನೇ! ಯದುನಂದನನಾದ ಕೃಷ್ಣನನ್ನು ನೀನು ಹೇಗೆ ಅರ್ಚಿಸಿದೆ? ಕಿಂಪುರುಷಾಚಾರ್ಯರಾದ ದ್ರುಮರು ಇರುವಾಗ ನೀನು ಹೇಗೆ ಕೃಷ್ಣನನ್ನು ಅರ್ಚಿಸಿದೆ?

ಅಸ್ಮಿನ್ ಪಾರ್ಥಾದನವಮೇ ಧನುರ್ವೇದೇ ಪರಾಕ್ರಮೇ ।
ಏಕಲವ್ಯೇ ಸ್ಥಿತೇ ರಾಜನ್ ಕಥಂ ಕೃಷ್ಣಸ್ತ್ವಯಾಽರ್ಚಿತಃ ॥೧೩॥

ರಾಜನೇ! ಅರ್ಜುನನಿಗಿಂತ ಧರ್ನುವೇದದಲ್ಲಾಗಲೀ ಪರಾಕ್ರಮದಲ್ಲಲಾಗಲೀ ನ್ಯೂನನಲ್ಲದ ಈ ಏಕಲವ್ಯನು ಇರುವಾಗ ನೀನು ಹೇಗೆ ಕೃಷ್ಣನನ್ನು ಅರ್ಚಿಸಿದೆ?

ಭಗದತ್ತೇ ಮಹಾವೀರ್ಯೇ ಜಯತ್ಸೇನೇ ಚ ಮಾಗಧೇ ।
ಕಾಳಿಂಗೇ ಚ ಸ್ಥಿತೇ ರಾಜನ್ ಕಥಂ ಕೃಷ್ಣಸ್ತ್ವಯಾಽರ್ಚಿತಃ ॥೧೪॥

ಮಹಾವೀರ್ಯನಾದ ಭಗದತ್ತನೂ ಮಗಧಾಧಿಪತಿಯಾದ ಜಯತ್ಸೇನನೂ ಕಳಿಂಗರಾಜನೂ ಇರುವಾಗ ಎಲೈ ರಾಜನೇ! ನೀನು ಹೇಗೆ ಕೃಷ್ಣನನ್ನು ಅರ್ಚಿಸಿದೆ?

ಪೂರ್ವದೇಶಾಧಿಪೇ ವೀರೇ ಕೋಸಲೇಂದ್ರೇ ಬೃಹದ್ಬಲೇ ।
ವಿರಾಟೇ ಚ ಸ್ಥಿತೇ ವೀರೇ ಕಥಂ ಕೃಷ್ಣೋಽರ್ಚಿತಸ್ತ್ವಯಾ ॥೧೫॥

ಪೂರ್ವದೇಶಾಧಿಪನೂ ವೀರನೂ ಕೋಸಲೇಂದ್ರನೂ ಆದ ಬೃಹದ್ಬಲನೂ ವೀರನಾದ ವಿರಾಟನೂ ಇರುವಾಗ ನೀನು ಹೇಗೆ ಕೃಷ್ಣನನ್ನು ಅರ್ಚಿಸಿದೆ?

ದರದೇ ಚ ಮಹಾವೀರ್ಯೇ ಕಥಂ ಕೃಷ್ಣೋರ್ಚಿತಸ್ತ್ವಯಾ
ಭೀಷ್ಮಕೇ ಚ ದುರಾಧರ್ಷೇ ಪಾಂಡ್ಯೇ ಚ ಕೃತಧನ್ವನಿ ।
ನೃಪೇ ಚ ರುಗ್ಮಿಣಿ ಶ್ರೇಷ್ಠೇ ದಂತವಕ್ರೇ ಚ ಪಾರ್ಥಿವೇ
ಶಲ್ಯೇ ಮದ್ರಾಧಿಪೇ ಚೈವ ಕಥಂ ಕೃಷ್ಣಸ್ತ್ವಯಾಽರ್ಚಿತಃ ॥೧೬॥

ಮಹಾಪರಾಕ್ರಮಿಯಾದ ದರದನು ಇರುವಾಗ ನೀನು ಹೇಗೆ ಕೃಷ್ಣನನ್ನು ಅರ್ಚಿಸಿದೆ? ದುರಾಧರ್ಷನನಾದ ಭೀಷ್ಮಕನೂ ಧನ್ರ್ವವಿದ್ಯೆಪಾರಂಗತನಾದ ಪಾಂಡ್ಯರಾಜನೂ ಶ್ರೇಷ್ಠನಾದ ರುಗ್ಮಿಯೂ ದಂತವಕ್ರನೂ ಮದ್ರಾಧಿಪತಿಯಾದ ಶಲ್ಯನೂ ಇರುವಾಗ ನೀನು ಹೇಗೆ ಕೃಷ್ಣನನ್ನು ಅರ್ಚಿಸಿದೆ?

ಸುರಾಷ್ಟ್ರಾಧಿಪತೌ ವೀರೇ ಮಾಳವೇ ಚ ಸ್ಥಿತೇ ನೃಪೇ ।
ಕೃತಕ್ಷಣೇ ಚ ವೈದೇಹೇ ಸ್ಥಿತೇ ಕೃಷ್ಣೋಽರ್ಚಿತಃ ಕಥಮ್ ॥೧೭॥

ವೀರನಾದ ಸುರಾಷ್ಟ್ರಾಧಿಪತಿಯೂ ಮಾಳವಾಧಿಪತಿಯೂ ಇರುವಾಗ ವಿದೇಹಾಧಿಪತಿಯೂ ಅವಸರವನ್ನು ಪಡೆದು ಬಂದಿರುವಾಗ ನೀನು ಹೇಗೆ ಕೃಷ್ಣನನ್ನು ಅರ್ಚಿಸಿದೆ?

ಅಯಂ ಚ ಸರ್ವರಾಜ್ಞಾಂ ಯೋ ಬಲಶ್ಲಾಘೀ ಮಹಾರಥಃ ।
ಜಾಮದಗ್ನ್ಯಸ್ಯ ದಯಿತಃ ಶಿಷ್ಯೋ ವಿಪ್ರಸ್ಯ ಭಾರತ ॥೧೮॥

ಯೇನಾತ್ಮಬಲಮಾಶ್ರಿತ್ಯ ಜರಾಸಂಧೋ ಯುಧಾ ಜಿತಃ ।
ತಂ ಕರ್ಣಂ ಸಮತಿಕ್ರಮ್ಯ ಕಥಂ ಕೃಷ್ಣಸ್ತ್ವಯಾಽರ್ಚಿತಃ ॥೧೯॥

ಈ ಕರ್ಣನಾದರೂ ಮಹಾರಥನು. ತನ್ನ ಬಲವನ್ನು ಎಲ್ಲಾ ರಾಜರುಗಳ ಎದುರಿನಲ್ಲಿ ಶ್ಲಾಘಿಸುವವನು. ಎಲೈ ಭಾರತನೇ ಬ್ರಾಹ್ಮಣರಾದ ಪರಶುರಾಮರಿಗೆ

ಪ್ರಿಯಶಿಷ್ಯನಾದವನು. ಅವನು ತನ್ನ ಸ್ವಂತಬಲದಿಂದ ಜರಾಸಂಧನನ್ನು ಯುದ್ಧದಲ್ಲಿ ಜಯಿಸಿದವನು. ಅಂತಹ ಕರ್ಣನನ್ನು ಮೀರಿ ನೀನು ಹೇಗೆ ಕೃಷ್ಣನನ್ನು ಅರ್ಚಿಸಿದೆ?

ವಿಂದಾನುವಿಂದಾವಾವಂತ್ಯೌ ಕಾಂಭೋಜಶ್ಚ ಸುದಕ್ಷಿಣಃ ।
ಸ್ಥಿತೇ ಸಾಲ್ವೇ ಚ ರಾಜೇಂದ್ರೇ ಕಥಂ ಕೃಷ್ಣೋಽರ್ಚಿತಸ್ತ್ವಯಾ ॥೨೦॥

ಅವಂತಿದೇಶದ ವೀರರಾದ ವಿಂದಾನುವಿಂದರೂ ಕಾಂಬೋಜಾಧಿಪತಿಯಾದ ಸುದಕ್ಷಿಣನೂ ರಾಜೇಂದ್ರನಾದ ಸಾಲ್ವನೂ ಇರುವಾಗ ನೀನು ಹೇಗೆ ಕೃಷ್ಣನನ್ನು ಅರ್ಚಿಸಿದೆ?

ಅಸ್ಮಿನ್ ಪಾರ್ಥಸಖೇ ರಾಜನ್ ಗಂಧರ್ವಾಣಾಂ ಮಹೀಪತೌ ।
ಸ್ಥಿತೇ ಚಿತ್ರರಥೇ ವೀರೇ ಕಥಂ ಕೃಷ್ಣಸ್ತ್ವಯಾಽರ್ಚಿತಃ ॥೨೧॥

ರಾಜನೇ! ಅರ್ಜುನನ ಸಖನಾದ ಗಂಧರ್ವಾಧಿಪತಿಯಾದ ವೀರನಾದ ಚಿತ್ರರಥನು ಇರುವಾಗ ನೀನು ಹೇಗೆ ಕೃಷ್ಣನನ್ನು ಅರ್ಚಿಸಿದೆ?

ಬಾಹ್ಲೀಕಂ ಸ್ಥವಿರಂ ವೀರಂ ಕೌರವಾಣಾಂ ಮಹಾರಥಮ್ ।
ಸೌಮದತ್ತಿಂ ಮಹಾವೀರಂ ಸೋಮದತ್ತಂ ಮಹಾರಥಮ್ ॥೨೨॥

ಶಕುನಿಂ ಸೌಬಲಂ ಚೈವ ಸಿಂಧುರಾಜಂ ಮಹಾರಥಮ್ ।
ವಿತಾನವಮತಾನ್ ಕೃತ್ವಾ ಕಥಂ ಕೃಷ್ಣೋಽರ್ಚಿತಸ್ತ್ವಯಾ ॥೨೩॥

ಅತ್ಯಂತ ವೃದ್ಧನಾದ ಕುರುವಂಶದಲ್ಲಿ ಜನಿಸಿದ ಬಾಹ್ಲೀಕರಾಜ ಮಹಾವೀರನಾದ, ಸೋಮದತ್ತನಮಗನಾದ ಭೂರಿಶ್ರವ, ಮಹಾರಥನಾದ ಸೋಮದತ್ತ ಸಿಂಧುರಾಜನಾದ ಸುಬಲ ಪುತ್ರನಾದ ಮಹಾರಥನಾದ ಶಕುನಿ, ಇವರೆಲ್ಲರಿಗೂ ಅವಮಾನವನ್ನು ಮಾಡಿ ನೀನು ಕೃಷ್ಣನನ್ನು ಹೇಗೆ ಅರ್ಚಿಸಿದೆ?

ನೈವ ಋತ್ವಿಜ್ ನ ಚಾಚಾರ್ಯೋ ನ ರಾಜಾ ಮಧುಸೂದನಃ ।
ಅರ್ಚಿತಸ್ತ್ವತ್ ಕುರುಶ್ರೇಷ್ಠ ಕಿಮನ್ಯತ್ ಪ್ರಿಯಕಾಮ್ಯಯಾ ॥೨೪॥

ಮಧುಸೂಧನನು ಋತ್ವಿಜನಲ್ಲ ಆಚಾರ್ಯನಲ್ಲ ರಾಜನೂ ಅಲ್ಲ. ಕುರುಶ್ರೇಷ್ಠನೇ! ನಿನಗೆ ಪ್ರಿಯನೆಂಬ ಒಂದು ಕಾರಣವನ್ನು ಬಿಟ್ಟು ಬೇರೆಯಾವ ಕಾರಣವೂ ಇಲ್ಲದೆ ಅವನು ನಿನ್ನಿಂದ ಅರ್ಚಿಸಲ್ಪಟ್ಟಿದ್ದಾನೆ.

ಅಥವಾऽಪ್ಯರ್ಚನೀಯೋऽಯಂ ಯುಷ್ಮಾಭಿರ್ವೃಷ್ಣಿಪುಂಗವಃ ।
ಕಿಂ ರಾಜಭಿರಿಹಾನೀತೈರವಮಾನಾಯ ಭಾರತ ॥೨೫॥

ಭಾರತನೇ! ಅಥವಾ ನೀನು ಈ ವೃಷ್ಣಿಪುಂಗವನನ್ನು ಪೂಜಿಸಬೇಕೆಂಬ ಅಭಿಪ್ರಾಯವನ್ನು ಹೊಂದಿದ್ದರೆ ಎಲ್ಲಾ ರಾಜರುಗಳನ್ನೂ ಇಲ್ಲಿಗೆ ಕರೆದು ಅವರಿಗೆ ಅವಮಾನವನ್ನು ಮಾಡುವ ಅವಶ್ಯಕತೆ ಏನಿದ್ದಿತು?

ವಯಂ ತು ನ ಭಯಾದಸ್ಯ ಕೌಂತೇಯಸ್ಯ ಮಹಾತ್ಮನಃ ।
ಪ್ರಯಚ್ಛಾಮ ಕರಾನ್ ಸರ್ವೇ ನ ಲೋಭಾನ್ನ ಚ ಸಾಂತ್ವನಾತ್ ॥೨೬॥

ನಾವು ಈ ಮಹಾತ್ಮನಾದ ಕೌಂತೇಯನಾದ ಧರ್ಮರಾಜನ ಹೆದರಿಕೆಯಿಂದಲಾಗಲಿ ಅಥವಾ ಸಮಾಧಾನದ ಮಾತುಗಳಿಂದಲಾಗಲೀ ಚಿಕ್ಕಮ್ಮನ ಮಗ ಎಂಬ ಕಾರಣದಿಂದಲಾಗಲೀ ಇವನಿಗೆ (ಕೃಷ್ಣನಿಗೆ) ಪೂಜೆಯನ್ನಾಗಲೀ ಕಪ್ಪವನ್ನಾಗಲೀ ಕೊಡುವುದಿಲ್ಲ.

ಅಸ್ಯ ಧರ್ಮಪ್ರಧಾನಸ್ಯ ಪಾರ್ಥಿವತ್ವಂ ಚಿಕೀರ್ಷತಃ ।
ಕರಾನಸ್ಮೈ ಪ್ರಯಚ್ಛಾಮಃ ಸೋಯಮಸ್ಮಾನ್ ನ ಮನ್ಯತೇ ॥೨೭॥

ಧರ್ಮಪ್ರದಾನನಾದ ಯುಧಿಷ್ಠಿರನು ಸಮ್ರಾಟ್ ಆಗಬೇಕೆಂದು ಬಯಸಿ ಯಜ್ಞವನ್ನು ಮಾಡಬಯಸಿದನೆಂದು ನಾವು ಅವನಿಗೆ ಕಪ್ಪವನ್ನು ಕೊಟ್ಟಿದ್ದೇವೆ. ಅವನು ಮಾತ್ರ ನಮಗೆ ಹೀಗೆ ಅವಮಾನವನ್ನು ಮಾಡುತ್ತಿದ್ದಾನೆ.

ಕಿಮನ್ಯದವಮಾನಾದ್ಧಿ ಯದಯಂ ರಾಜಸಂಸದಿ ।
ಅಪ್ರಾಪ್ತಲಕ್ಷಣಂ ಕೃಷ್ಣಮರ್ಘ್ಯೇಣಾರ್ಚಿತವಾನಸಿ ॥೨೮॥

ಇದು ಅವಮಾನವಲ್ಲದೆ ಇನ್ನೇನು? ಏಕೆಂದರೆ ರಾಜರ ಸಭೆಯಲ್ಲಿ ಈ ಧರ್ಮರಾಜನು ಯಾವ ಲಕ್ಷಣವೂ ಇಲ್ಲದ ಕೃಷ್ಣನನ್ನು ಅರ್ಘ್ಯದಿಂದ ಪೂಜಿಸಿದ್ದಾನೆ.

ಅಕಸ್ಮಾದ್ ಧರ್ಮಪುತ್ರಸ್ಯ ಧರ್ಮಾತ್ಮೇತಿ ಯಶೋ ಗತಮ್ ।
ಕೋ ಹಿ ಧರ್ಮಚ್ಯುತೇ ಪೂಜಾಮೇವಂವೃತ್ತೇ ಪ್ರಯೋಜಯೇತ್॥೨೯॥

ಈ ದಿನ ಧರ್ಮರಾಜನ ಧರ್ಮಾತ್ಮ ಎಂಬ ಕೀರ್ತಿಯು ಇದ್ದಕ್ಕಿದಂತೆ ಹೊರಟುಹೋಯಿತು. ಯಾವನು ಧರ್ಮಚ್ಯುತನಾದ ಇಂತಹ ನಡತೆಯನ್ನು ಹೊಂದಿದ ಕೃಷ್ಣನಿಗೆ ಈ ರೀತಿಯಲ್ಲಿ ಪೂಜೆಯನ್ನು ಮಾಡುತ್ತಾನೇ?

ಯೋऽಯಂ ವೃಷ್ಣಿಕುಲೇ ಜಾತೋ ರಾಜಾನಂ ಹತವಾನ್ ಪುರಾ ।
ಜರಾಸಂಧಂ ಮಹಾತ್ಮಾನಮನ್ಯಾಯೇನ ದುರಾತ್ಮವಾನ್ ॥೩೦॥

ವೃಷ್ಣಿಕುಲದಲ್ಲಿ ಜನಿಸಿದ ಇವನು ಹಿಂದೆ ರಾಜನಾದ ಕಂಸನನ್ನು ಕೊಂದನು. ದುರಾತ್ಮನಾದ ಇವನು ಮಹಾತ್ಮನಾದ ಜರಾಸಂಧನನ್ನು ಅನ್ಯಾಯದಿಂದ ಸಂಹಾರಮಾಡಿದನು.

ಅದ್ಯ ಧರ್ಮಾತ್ಮತಾ ಚೈವ ವ್ಯಪಕೃಷ್ಟಾ ಯುಧಿಷ್ಠಿರಾತ್ ।
ಕೃಪಣತ್ವಂ ನಿವಿಷ್ಟಂ ಚ ಕೃಷ್ಣೇऽರ್ಘ್ಯಸ್ಯ ನಿವೇದನಾತ್ ॥೩೧॥

ಈ ದಿನ ಯುಧಿಷ್ಠಿರನ ಧರ್ಮಾತ್ಮತೆಯು ಹೊರಟುಹೋಯಿತು. ಕೃಷ್ಣನಿಗೆ ಅರ್ಘ್ಯವನ್ನು ಕೊಟ್ಟುದದರಿಂದ ಅವನಿಗೆ ಕಾರ್ಪಣ್ಯವು ಉಂಟಾಗಿದೆ.

ಯದಿ ಭೀತಾಶ್ಚ ಕೌಂತೇಯಾಃ ಕೃಪಣಾಶ್ಚ ತಪಸ್ವಿನಃ ।
ರಾಜ್ಞಾಂ ಹಿ ಮಧ್ಯೇ ಪೂಜಾಂ ತೇ ಕೃತವಂತೋ ಹಿ ಭೂಯಸೀಂ ।
ನನು ತ್ವಯಾ ನಿಬೋದ್ಧವ್ಯಂ ಯಾಂ ಪೂಜಾಂ ಮಾಧವಾರ್ಹಸಿ ॥೩೩॥

ಕೌಂತೇಯರು ಭೀತರೂ ಕೃಪಣರೂ ಶೋಚನೀಯರೂ ಆಗಿದ್ದಾರೆ. ರಾಜರುಗಳ ಮಧ್ಯದಲ್ಲಿ ಇಂತಹ ಶ್ರೇಷ್ಠವಾದ ಪೂಜೆಯನ್ನು ಏಕೆ ಮಾಡಬೇಕಾಗಿದ್ದಿತು? ಮಾಧವನೇ! ನಿನಗೆ ಎಂತಹ ಪೂಜೆಯು ಯೋಗ್ಯವೆಂದು ನೀನಾಗಿಯೇ ತಿಳಿಯಬೇಕಾಗಿದ್ದಿತಷ್ಟೇ ?

ಅಥವಾ ಕೃಪಣೈರೇತಾಮುಪನೀತಾಂ ಜನಾರ್ದನ ।
ಪೂಜಾಮನರ್ಹಃ ಕಸ್ಮಾತ್ ತ್ವ ಮಭ್ಯನುಜ್ಞಾತವಾನಸಿ ॥೩೪॥

ಅಥವಾ ಜನಾರ್ದನನೇ! ಇವರು ಕಾರ್ಪಣ್ಯದಿಂದ ಮಾಡಿದ ಪೂಜೆಯನ್ನು ಪೂಜೆಗೆ ಅನರ್ಹನಾದ ನೀನು ಏಕೆ ಸ್ವೀಕರಿಸಿದೆ?

ಅಯುಕ್ತಾಮಾತ್ಮನಃ ಪೂಜಾಂ ತ್ವಂ ಪುನರ್ಬಹುಮನ್ಯಸೇ ।
ಹವಿಷಃ ಪ್ರಾಪ್ಯ ವಿಷ್ಕಂದಂ ಪ್ರಾಶಿತುಂ ಶ್ವೇವ ನಿರ್ಜನೇ ॥೩೫॥

ಪಾತ್ರೆಯಿಂದ ಚೆಲ್ಲಿದ ಹವಿಸ್ಸನ್ನು ನಿರ್ಜನವಾದ ಪ್ರದೇಶದಲ್ಲಿ ನಾಯಿಯು ಸ್ವೀಕರಿಸುವಂತೆ ನಿನಗೆ ಅಯೋಗ್ಯವಾದ ಈ ಪೂಜೆಯನ್ನು ನೀನು ಬಹುಮಾನದಿಂದ ಸ್ವೀಕರಿಸಿದ್ದೀಯೆ.

ನ ತ್ವಯಂ ಪಾರ್ಥಿವೇಂದ್ರಾಣಾಮವಮಾನ್ಯ ಪ್ರಯುಜ್ಯತೇ ।
ತ್ವಾಮೇವ ಕುರವೋ ವ್ಯಕ್ತಂ ಪ್ರಲಂಭಂತೇ ಜನಾರ್ದನ ॥೩೬॥

ಜನಾರ್ದನನೇ! ರಾಜರನ್ನು ಅವಮಾನಗೊಳಿಸಿ ನಿನಗೆ ಪಾಂಡವರು ಈ ಪೂಜೆಯನ್ನು ಮಾಡುತ್ತಿದ್ದಾರೆ. ಎಂದು ತಿಳಿಯಬೇಡ. ಕುರುಗಳು ಪೂಜೆಯನ್ನು ಮಾಡಿ ನಿನಗೇ ಅವಮಾನವನ್ನು ಮಾಡಿದ್ದಾರೆ.

ಕ್ಲೀಬೇ ದಾರಕ್ರಿಯಾ ಯಾ ಸ್ಯಾದಂಧೇ ವಾ ರೂಪದರ್ಶನಮ್ ।
ಅರಾಜ್ಞೋ ರಾಜವತ್ ಪೂಜಾ ತಥಾ ತೇ ಮಧುಸೂದನ ॥೩೭॥

ಎಲೈ ಮಧುಸೂದನನೇ! ರಾಜನಲ್ಲದ ನಿನಗೆ ರಾಜನಂತೆ ಸಲ್ಲಿಸಿದ ಈ ಪೂಜೆಯು ನಪುಂಸಕನ ವಿವಾಹವಿದ್ದಂತೆ ಮತ್ತು ಕುರುಡನರೂಪದರ್ಶನವಿದ್ದಂತೆ.

ದೃಷ್ಟೋ ಯುಧಿಷ್ಠಿರೋ ರಾಜಾ ದೃಷ್ಟೋ ಭೀಷ್ಮಶ್ಚ ಯಾದೃಶಃ ।
ವಾಸುದೇವೋಽಪ್ಯಯಂ ದೃಷ್ಟಃ ಸರ್ವಮೇತದ್ ಯಥಾತಥಮ್ ॥೩೮॥

ನಾವು ರಾಜನಾದ ಯುಧಿಷ್ಠಿರನನ್ನು ನೋಡಿದ್ದೇವೆ. ಭೀಷ್ಮನು ಎಂತಹವನೆಂದು ನೋಡಿದ್ದೇವೆ. ಈ ವಾಸುದೇವನನ್ನೂ ನೋಡಿದ್ದೇವೆ. ಎಲ್ಲವೂ ಸರಿಯಾಗಿಯೇ ಇದೆ!

ವೈಶಂಪಾಯನಃ

ಇತ್ಯುಕ್ತ್ವಾ ಶಿಶುಪಾಲಸ್ತಾನುತ್ಥಾಯ ಪರಮಾಸನಾತ್ ।
ನಿರ್ಯಯೌ ಸದಸಸ್ತಸ್ಮಾತ್ ಸಹಿತೋ ರಾಜಭಿಸ್ತದಾ ॥೩೯॥

ಶಿಶುಪಾಲನು ಅವರೆಲ್ಲರನ್ನೂ ಕುರಿತು ಹೀಗೆ ಹೇಳಿ ತನ್ನ ಶ್ರೇಷ್ಠವಾದ ಆಸನದಿಂದ ಎದ್ದು ರಾಜರ ಜೊತೆಯಲ್ಲಿ ಆ ಸಭೆಯಿಂದ ಹೊರಗೆ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಚತುಸ್ತ್ರಿಂಶೋಧ್ಯಾಯಃ ॥
॥ಅರ್ಘಾಭಿಹರಣಪರ್ವಣಿ ತೃತೀಯೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಮೂವತ್ನಾಲ್ಕನೆಯ ಅಧ್ಯಾಯವು ಮುಗಿಯಿತು.

★ ★ ★ ★

ಮೂವತ್ತೈದನೆಯ ಅಧ್ಯಾಯ

(ಶಿಶುಪಾಲನನ್ನು ಸಮಾಧಾನಪಡಿಸುವ ಯುಧಿಷ್ಠಿರನನ್ನು ತಡೆದು ಭೀಷ್ಮರಿಂದ ಕೃಷ್ಣನ ಮಹಿಮೆಯ ಕಥನ ಮತ್ತು ಸಹದೇವನ ವೀರವಚನದ ಪ್ರಶಂಸೆ.)

ವೈಶಂಪಾಯನಃ

ತತೋ ಯುಧಿಷ್ಠಿರೋ ರಾಜಾ ಶಿಶುಪಾಲಮುಪಾದ್ರವತ್ ।
ಉವಾಚ ಚೈನಂ ಮಧುರಂ ಸಾಂತ್ವಪೂರ್ವಮಿದಂ ವಚಃ ॥೧॥

ಅನಂತರ ರಾಜನಾದ ಯುಧಿಷ್ಠಿರನು ಶಿಶುಪಾಲನಬಳಿಗೆ ಓಡಿಹೋಗಿ ಅವನನ್ನು ಕುರಿತು ಸಮಾಧಾನದಪೂರ್ವಕವಾದ ಈ ಮಧುರವಚನಗಳನ್ನು ಆಡಿದನು.

ನೇದಂ ಯುಕ್ತಂ ಮಹೀಪಾಲ ಯಾದೃಶಂ ವೈ ತ್ವಮುಕ್ತವಾನ್ ।
ಅಧರ್ಮಶ್ಚ ಪರೋ ರಾಜನ್ ಪಾರುಷ್ಯಂ ಚ ನಿರರ್ಥಕಮ್ ॥೨॥

ರಾಜನೇ! ನೀನು ಆಡಿದ ಮಾತುಗಳು ಯುಕ್ತವಾದುದಲ್ಲ. ರಾಜನೇ! ಇದರಿಂದ ಅಧರ್ಮವು ಉಂಟಾಗುತ್ತದೆ. ಮತ್ತು ವ್ಯರ್ಥವಾದ ವಿರೋಧವು ಉಂಟಾಗುತ್ತದೆ.

ನಹಿ ಧರ್ಮಂ ಪರಂ ಜಾತು ನಾವಬುದ್ಧ್ಯೇತ ಪಾರ್ಥಿವಃ ।
ಭೀಷ್ಮಂ ಶಾಂತನವಂ ತ್ವೇನಂ ಮಾವಮಂಸ್ಥಾ ಅತೋಽನ್ಯಥಾ ॥೩॥

ರಾಜವಂಶದಲ್ಲಿ ಜನಿಸಿದ ಭೀಷ್ಮರು ಎಂದೂ ಧರ್ಮಜ್ಞಾನಶೂನ್ಯರಲ್ಲ. ಶಂತನುವಿನ ಪುತ್ರರಾದ ಭೀಷ್ಮರನ್ನು ಹೀಗೆ ಎಂದೂ ಅವಮಾನ ಮಾಡಬೇಡ.

ಯಮಂ ಚೈನಾನ್ ಮಹೀಪಾಲಾಂಸ್ತ್ವತ್ತೋ ವೃದ್ಧತಮಾನ್ ಬಹೂನ್ ।
ಮೃಷ್ಯಂತೇ ಚಾರ್ಹಣಾಂ ಕೃಷ್ಣೇ ತದ್ವತ್ ತ್ವಂ ಕರ್ತುಮರ್ಹಸಿ ॥೪॥

ಒಂದು ಪಕ್ಷ ಅವಮಾನಮಾಡಿದರೆ ಭೀಷ್ಮನು ಯಮನಂತೆ ಆಗುತ್ತಾನೆ. ನಿನಗಿಂತ ಹಿರಿಯರಾದ ಈ ಎಲ್ಲಾ ಅನೇಕ ರಾಜರುಗಳು ಕೃಷ್ಣನಿಗೆ ಮಾಡಿದ ಅಗ್ರಪೂಜೆಯನ್ನು ಮನ್ನಿಸುತ್ತಿದ್ದಾರೆ. ನೀನೂ ಸಹ ಹಾಗೆಯೇ ಮಾಡಬೇಕು.

ವೇದ ತತ್ತ್ವೇನ ಕೃಷ್ಣಂ ಹಿ ಭೀಷ್ಮಶ್ಚೇದಿಪತೇ ಭೃಶಮ್ ।
ನ ಹ್ಯೇನಂ ತ್ವಂ ತಥಾ ವೇತ್ಥ ಯಥೈನಂ ವೇದ ಕೌರವಃ ॥೫॥

ಚೇದಿರಾಜನೇ! ಭೀಷ್ಮರು ಕೃಷ್ಣನನ್ನು ಚೆನ್ನಾಗಿ ಯಥಾವತ್ತಾಗಿ ತಿಳಿದಿದ್ದಾರೆ. ಕೌರವರಾದ ಅವರು ಕೃಷ್ಣನನ್ನು ತಿಳಿದಿರುವಂತೆ ನೀನು ತಿಳಿದಿಲ್ಲ.

ಭೀಷ್ಮಃ

ನ ಚಾಸ್ಯಾನುನಯೋ ದೇಯೋ ನಾಯಮರ್ಹತಿ ಸಾಂತ್ವನಮ್ ।
ಲೋಕವೃದ್ಧತಮೇ ಕೃಷ್ಣೇ ಯೋಽರ್ಹಣಾಂ ನಾನುಮನ್ಯತೇ ॥೬॥

ಇವನಿಗೆ ಸಮಾಧಾನದ ಮಾತುಗಳನ್ನು ಆಡಬಾರದು. ಲೋಕದಲ್ಲಿ ಶ್ರೇಷ್ಠತಮನಾದ ಕೃಷ್ಣನ ಪೂಜೆಯನ್ನು ಯಾವ ಇವನು ಸಮ್ಮತಿಸುವುದಿಲ್ಲವೋ, ಅಂತಹ ಇವನು ಸಾಂತ್ವನದ ನುಡಿಗಳಿಗೆ ಅರ್ಹನಲ್ಲ.

ಕ್ಷತ್ರಿಯಃ ಕ್ಷತ್ರಿಯಂ ಜಿತ್ವಾ ರಣೇ ರಣಕೃತಾಂ ವರಃ ।
ಯೋ ಮುಂಚತಿ ವಶೇ ಕೃತ್ವಾ ಗುರುರ್ಭವತಿ ತಸ್ಯ ಸಃ ॥೭॥

ಯುದ್ಧಮಾಡುವುದರಲ್ಲಿ ಶ್ರೇಷ್ಠನಾದ ಕ್ಷತ್ರಿಯನು ಇನ್ನೊಬ್ಬ ಕ್ಷತ್ರಿಯನನ್ನು ಯುದ್ಧದಲ್ಲಿ ಜಯಿಸಿ ವಶಪಡಿಸಿಕೊಂಡು ಅವನನ್ನು ಬಿಡುಗಡೆಮಾಡಿದರೆ ಗೆದ್ದ ಕ್ಷತ್ರಿಯನು ಇನ್ನೊಬ್ಬನಿಗೆ ಗುರುವಾಗುತ್ತಾನೆ.

ಅಸ್ಯಾಂ ಹಿ ಸಮಿತೌ ರಾಜ್ಞಾಮೇಕಮಪ್ಯಜಿತಂ ಯುಧಿ ।
ನ ಪಶ್ಯಾಮಿ ಮಹೀಪಾಲಂ ಕೃಷ್ಣೇನಾಕ್ಲಿಷ್ಟಕರ್ಮಣಾ ॥೮॥

ಈ ದೊಡ್ಡ ಸಭೆಯಲ್ಲಿ ಅನಾಯಾಸವಾಗಿ ಯುದ್ಧಮಾಡುವ ಕೃಷ್ಣನ ಜೊತೆಯಲ್ಲಿ ಯುದ್ಧಮಾಡಿ ಪರಾಭವವನ್ನು ಹೊಂದದಿರುವ ಒಬ್ಬ ರಾಜನನ್ನೂ ನಾನು ಕಾಣುತ್ತಿಲ್ಲ.

ನಹಿ ಕೇವಲಮಸ್ಮಾಕಮರ್ಚಿತವ್ಯೋ ಜನಾರ್ದನಃ ।
ತ್ರಯಾಣಾಮಪಿ ಲೋಕಾನಾಮರ್ಚನೀಯೋ ಹಿ ಚಾಚ್ಯುತಃ ॥೯॥

ಜನಾರ್ದನನನ್ನು ಕೇವಲ ನಾವು ಮಾತ್ರ ಅರ್ಚನೆಮಾಡುವುದಷ್ಟೇ ಅಲ್ಲ. ಅಚ್ಯುತನಾದ ಅವನು ಮೂರುಲೋಕದಲ್ಲಿಯೂ ಅರ್ಚನೀಯನಾದವನು.

ಕೃಷ್ಣೇನ ವಿಜಿತಾ ಯುದ್ಧೇ ಬಹವಃ ಕ್ಷತ್ರಿಯರ್ಷಭಾಃ ।
ಜಗತ್ ಸರ್ವಂ ಚ ವಾರ್ಷ್ಣೇಯೇ ನಿಖಿಲೇನ ಪ್ರತಿಷ್ಠಿತಮ್ ॥೧೦॥

ಯುದ್ಧದಲ್ಲಿ ಅನೇಕ ಕ್ಷತ್ರಿಯಶ್ರೇಷ್ಠರು ಕೃಷ್ಣನಿಂದ ನಿರ್ಜಿತರಾಗಿದ್ದಾರೆ. ಎಲ್ಲ ಜಗತ್ತೂ ಸಹ ಸಮಗ್ರವಾಗಿ ಕೃಷ್ಣನನ್ನು ಆಧರಿಸಿದೆ.

ತಸ್ಮಾತ್ ಸತ್ಸ್ವಪಿ ವೃದ್ಧೇಷು ಕೃಷ್ಣಮರ್ಚಾಮ ನೇತರಾನ್ ।
ಏವಂ ವಕ್ತುಂ ನ ಚಾರ್ಹಸ್ತ್ವಂ ಮಾ ಭೂತ್ ತೇ ಬುದ್ಧಿರೀದೃಶೀ ॥೧೧॥

ಆದ್ದರಿಂದ ಬೇರೆ ವೃದ್ಧರು ಇದ್ದರೂ ಕೃಷ್ಣನನ್ನೇ ಪೂಜಿಸುತ್ತೇವೆ. ಬೇರೆಯರನ್ನಲ್ಲ. ಆದ್ದರಿಂದ ಧರ್ಮರಾಜನೇ ನೀನು ಶಿಶುಪಾಲನನ್ನು ಕುರಿತು ಹೀಗೆ ಮಾತನಾಡುವುದು ಯೋಗ್ಯವಲ್ಲ. ನಿನಗೆ ಇಂತಹ ಬುದ್ಧಿಯು ಬರದಿರಲಿ.

ಜ್ಞಾನವೃದ್ಧಾ ಮಯಾ ರಾಜನ್ ಬಹವಃ ಪರ್ಯುಪಾಸಿತಾಃ ।
ಯಸ್ಯ ರಾಜನ್ ಪ್ರಭಾವಜ್ಞಾಃ ಪುರಾ ಸರ್ವೇ ಚ ರಕ್ಷಿತಾಃ ॥೧೨॥

ತೇಷಾಂ ಕಥಯತಾಂ ಶೌರೇರಹಂ ಗುಣವತೋ ಗುಣಾನ್ ।
ಸಮಾಗತಾನಾಮಶ್ರೌಷಂ ಬಹೂನ್ ಬಹುಮತಾನ್ ಸತಾಮ್ ॥೧೩॥

ರಾಜನೇ! ನಾನು ಜ್ಞಾನವೃದ್ಧರಾದ ಅನೇಕ ಮಹಾತ್ಮರ ಸೇವೆಯನ್ನು ಮಾಡಿದ್ದೇನೆ. ಅವರೆಲ್ಲರೂ ಹಿಂದೆ ಕೃಷ್ಣನಿಂದ ರಕ್ಷಿತರಾಗಿ ಅವನ ಪ್ರಭಾವವನ್ನು ತಿಳಿದವರು. ಅವರ

ಮಾತುಗಳಿಂದ ಗುಣವಂತನಾದ ಕೃಷ್ಣನ ಸಜ್ಜನರಿಂದ ಪ್ರಶಂಸಿಸಲ್ಪಟ್ಟ ಅನೇಕ ಗುಣಗಳನ್ನು ಅನೇಕ ಬಾರಿ ಕೇಳಿದ್ದೇನೆ.

ಕರ್ಮಾಣ್ಯಪಿ ಚ ಯಾನ್ಯಸ್ಯ ಜನ್ಮಪ್ರಭೃತಿ ಧೀಮತಃ ।
ಬಹೂನಿ ಕಥ್ಯಮಾನಾನಿ ನರೈರ್ಭೂಯಃ ಶ್ರುತಾನಿ ಮೇ ॥೧೪॥

ಮೇಧಾವಿಯಾದ ಕೃಷ್ಣನು ಜನ್ಮದಿಂದ ಆರಂಭಿಸಿ ಅವನು ಮಾಡಿದ ಅನೇಕ ಅದ್ಭುತಕಾರ್ಯಗಳನ್ನು ಅನೇಕ ನರರು ವರ್ಣಿಸುವುದನ್ನು ಸಹ ಕೇಳಿದ್ದೇನೆ.

ನ ಕೇವಲಂ ವಯಂ ಕಾಮಾತ್ ಚೇದಿರಾಜ ಜನಾರ್ದನಮ್ ।
ನ ಸಂಬಂಧಂ ಪುರಸ್ಕೃತ್ಯ ಕೃತ್ಯಾರ್ಥಂ ವಾ ಕಥಂಚನ ॥೧೫॥

ಅರ್ಚಾಮಹೇಽರ್ಚಿತಂ ಸದ್ಭಿರ್ಭುವಿ ಭೂತಸುಖಾವಹಮ್ ।
ಯಶಃ ಶೌರ್ಯಂ ಬಲಂ ಚಾಸ್ಯ ವಿಜ್ಞಾಯಾರ್ಚಾಂ ಪ್ರಯುಂಜ್ಮಹೇ ॥

ಚೇದಿರಾಜನೇ! ನಾವು ಕೇವಲ ನಮ್ಮ ಇಚ್ಛೆಯಿಂದ ಜನಾರ್ದನನನ್ನು ಪೂಜಿಸುತ್ತಿಲ್ಲ. ಅಥವಾ ನಮ್ಮ ಸಂಬಂಧದಿಂದಾಗಲೀ ಅಥವಾ ಅವನಿಂದ ಪ್ರಯೋಜನವನ್ನು ಪಡೆಯುವ ಸಲುವಾಗಿಯಾಗಲೀ ಪೂಜಿಸುತ್ತಿಲ್ಲ. ಭೂಮಿಯಲ್ಲಿ ಎಲ್ಲರಿಗೂ ಸುಖವನ್ನು ಕೊಡುವ ಅವನು ಸಜ್ಜನರಿಂದ ಅರ್ಚಿತನಾಗಿದ್ದಾನೆ ಎಂಬ ಕಾರಣದಿಂದ ನಾವು ಪೂಜಿಸುತ್ತಿದ್ದೇವೆ. ಅವನ ಕೀರ್ತಿಯನ್ನು ಶೌರ್ಯವನ್ನು, ಬಲವನ್ನು ಚೆನ್ನಾಗಿ ತಿಳಿದು ಅವನಿಗೆ ಪೂಜೆಯನ್ನು ಸಲ್ಲಿಸುತ್ತಿದ್ದೇವೆ.

ನಹಿ ಕಶ್ಚಿದಿಹಾಸ್ಮಾಭಿಃ ಬಾಲೋಽಪ್ಯಪರೀಕ್ಷಿತಃ ।
ಗುಣೈರನ್ಯಾನತಿಕ್ರಮ್ಯ ಹರಿರರ್ಚ್ಯತಮೋ ಮತಃ ॥೧೭॥

ನಾವು ಈ ಸಭೆಗೆ ಬಂದವರಲ್ಲಿ ಒಬ್ಬ ಬಾಲಕನನ್ನೂ ಕೂಡ ಪರೀಕ್ಷಿಸದೇ ಬಿಟ್ಟಿಲ್ಲ. ಹರಿಯು ತನ್ನ ಗುಣಗಳಿಂದ ಎಲ್ಲರನ್ನೂ ಮೀರಿದವನು. ಆದ್ದರಿಂದ ಅವನು ಪೂಜ್ಯತಮನಾದವನು ಎಂದು ನನ್ನ ಅಭಿಪ್ರಾಯ.

ಜ್ಞಾನವೃದ್ಧೋ ದ್ವಿಜಾತೀನಾಂ ಕ್ಷತ್ರಿಯಾಣಾಂ ಬಲಾಧಿಕಃ ।
ವೈಶ್ಯಾನಾಂ ಧಾನ್ಯಧನವಾನ್ ಶೂದ್ರಾಣಾಮೇವ ಜನ್ಮತಃ ॥೧೮॥

ಬ್ರಾಹ್ಮಣರಲ್ಲಿ ಜ್ಞಾನವೃದ್ಧನಾದವನು ಕ್ಷತ್ರಿಯರಲ್ಲಿ ಬಲಾಧಿಕನಾದವನು ವೈಶ್ಯರಲ್ಲಿ ಧನಧಾನ್ಯ ಸಂವೃದ್ಧಿಯುಳ್ಳವನು ಮತ್ತು ಶೂದ್ರರಲ್ಲಿ ಜನ್ಮದಿಂದ ಹಿರಿಯನಾದವನು ಸಹ ಪೂಜೆಗೆ ಅರ್ಹರಾಗುತ್ತಾರೆ.

ಯುಜ್ಯೇತೇ ತೌ ಚ ಕೃಷ್ಣೇ ವೈ ಹೇತೂ ದ್ಚಾವಪಿ ಸಮ್ಮತೌ ।
ವೇದವೇದಾಂಗವಿಜ್ಞಾನಂ ಬಲಂ ಚಾಸ್ಯಾಮಿತಂ ತಥಾ ।
ನೃಣಾಂ ಹಿ ಲೋಕೇ ಕಶ್ಚಾಸ್ತಿ ವಿಶಿಷ್ಟಃ ಕೇಶವಾದೃತೇ ॥೧೯॥

ಕೃಷ್ಣನಲ್ಲಿ ಪೂಜೆಗೆ ನಿಮಿತ್ತವಾದ ಜ್ಞಾನ ಬಲಗಳೆರೆಡೂ ಸಂಮತವಾಗಿವೆ. ಅವನ ವೇದವೇದಾಂಗ ವಿಜ್ಞಾನವೂ ಅವನಿಗಿರುವ ಅಪ್ರತಿಮವಾದ ಬಲವೂ ಪ್ರಸಿದ್ಧವಾಗಿದೆ. ಈ ಮನುಷ್ಯಲೋಕದಲ್ಲಿ ಕೇಶವನಿಗಿಂತ ಮಿಗಿಲಾದವನು ಯಾವನು ಇದ್ದಾನೆ?

ದಾನಂ ದಾಕ್ಷ್ಯಂ ಶ್ರುತಂ ಶೌರ್ಯಂ ಹ್ರೀಃ ಕೀರ್ತಿರ್ಬುದ್ಧಿರುತ್ತಮಾ।
ಸನ್ನತಿಃ ಶ್ರೀರ್ಧೃತಿಃ ಪುಷ್ಟಿಃ ತುಷ್ಟಿಶ್ಚ ನಿಯತಾऽಚ್ಯುತೇ ॥೨೦॥

ಅಚ್ಯುತನಲ್ಲಿ ದಾನ ದಕ್ಷತೆ ವಿದ್ಯಾ ಶೌರ್ಯ ಲಜ್ಜೆ ಕೀರ್ತಿ ಶ್ರೇಷ್ಠವಾದ ಬುದ್ಧಿ ವಿನಯ ಸಂಪತ್ತು ಧೈರ್ಯ ಪುಷ್ಟಿ ಮತ್ತು ತುಷ್ಟಿಗಳು ಯಾವಾಗಲೂ ಇವೆ.

ತಮಿಮಂ ಸರ್ವಸಂಪನ್ನಮಾಚಾರ್ಯಂ ಪಿತರಂ ಗುರುಮ್ ।
ಅರ್ಚ್ಯಮಚ್ಯುತಮರ್ಚಾಮಃ ಸರ್ವೇ ಸಮ್ಮಂತುಮರ್ಹಥ ॥೨೧॥

ಎಲ್ಲ ಸದ್ಗುಣಗಳಿಂದ ಸಂಪನ್ನನಾದ ತಂದೆಯಾದ ಗುರುವಾದ ಅರ್ಚನೀಯನಾದ ಈ ಅಚ್ಯುತನನ್ನು ನಾವು ಪೂಜಿಸುತ್ತೇವೆ. ನೀವೆಲ್ಲರೂ ಸಮ್ಮತಿಯನ್ನು ನೀಡಬೇಕು.

ಋತ್ವಿಗ್ ಗುರುಸ್ತಥಾಚಾರ್ಯಃ ಸ್ನಾತಕೋ ನೃಪತಿಃ ಪ್ರಿಯಃ ।
ಸರ್ವಮೇತದ್ ಹೃಷೀಕೇಶಃ ತಸ್ಮಾದಭ್ಯರ್ಚಿತೋऽಚ್ಯುತಃ ॥೨೨॥

ಅಚ್ಯುತನು ಋತ್ವಿಕ್ ಗುರು ಆಚಾರ್ಯ ಸ್ನಾತಕ ರಾಜ ಪ್ರಿಯ ಎಲ್ಲವೂ ಆಗಿದ್ದಾನೆ. ಆದ್ದರಿಂದ ನಮ್ಮಿಂದ ಪೂಜಿಸಲ್ಪಟ್ಟಿದ್ದಾನೆ.

ಕೃಷ್ಣ ಏವ ಹಿ ಲೋಕಾನಾಮುತ್ಪತ್ತಿರಪಿ ಚಾಪ್ಯಯಃ ।
ಕೃಷ್ಣಸ್ಯ ಹಿ ಕೃತೇ ಭೂತಮಿದಂ ವಿಶ್ವಂ ಸಮರ್ಪಿತಮ್ ॥೨೩॥

ಕೃಷ್ಣನೇ ಎಲ್ಲ ಲೋಕಗಳಿಗೂ ಸೃಷ್ಟಿಸಂಹಾರಕರ್ತನೆಂದು ಪ್ರಸಿದ್ಧವಾಗಿದೆ. ಈ ಸಮಗ್ರವಾದ ಚರಾಚರವಾದ ವಿಶ್ವವು ಕೃಷ್ಣನ ಸಲುವಾಗಿ ಇದೆ.

ಏಷ ಪ್ರಕೃತಿರವ್ಯಕ್ತಃ ಕರ್ತಾ ಚೈವ ಸನಾತನಃ ।
ಪರಶ್ಚ ಸರ್ವಭೂತೇಭ್ಯಃ ತಸ್ಮಾದರ್ಚ್ಯತಮೋऽಚ್ಯುತಃ ॥೨೪॥

ಇವನೇ ಪ್ರಕೃತಿ ಎನಿಸಿಕೊಳ್ಳುವವನು. ಅವ್ಯಕ್ತನೆನಿಸಿಕೊಳ್ಳುವವನು. ವೇದಪ್ರತಿಪಾದ್ಯನಾದವನು. ಜಗತ್ಕರ್ತವಾದವನು. ಎಲ್ಲಜೀವರಿಗಿಂತ ಶ್ರೇಷ್ಠನಾದವನು. ಆದ್ದರಿಂದ ಈ ಅಚ್ಯುತನು ಪೂಜ್ಯತಮನಾಗಿದ್ದಾನೆ.

ಭೂಮಿರ್ಮನೋ ಮಹಾನ್ ವಾಯುಃ ತೇಜೋऽಂಭಃ ಖಂ ಮಹೀ ಚ ಯಾ ।
ಚತುರ್ವಿಧಂ ಚ ಯದ್ ಭೂತಂ ಸರ್ವಂ ಕೃಷ್ಣೇ ಪ್ರತಿಷ್ಠಿತಮ್ ।
ಆದಿತ್ಯಶ್ಚಂದ್ರಮಾಶ್ಚೈವ ಸರ್ವಂ ಕೃಷ್ಣೇ ಪ್ರತಿಷ್ಠಿತಮ್ ॥೨೫॥

ಬುದ್ಧಿ ಮನಸ್ಸು ಮಹತತ್ತ್ವ ವಾಯು ತೇಜಸ್ಸು ಜಲ ಆಕಾಶ ಭೂಮಿ ಮತ್ತು ನಾಲ್ಕು ವಿಧವಾದ ಪ್ರಾಣಿಗಳು ಎಲ್ಲವೂ ಕೃಷ್ಣನಲ್ಲಿ ಪ್ರತಿಷ್ಠಿತವಾಗಿವೆ. ಸೂರ್ಯ ಚಂದ್ರಮೊದಲಾದ ಎಲ್ಲ ಜ್ಯೋತಿಗಳೂ ಕೃಷ್ಣನಲ್ಲಿ ಪ್ರತಿಷ್ಠಿತವಾಗಿವೆ.

ರಾಜಾ ಮುಖಂ ಮನುಷ್ಯಾಣಾಂ ನದೀನಾಂ ಸಾಗರೋ ಮುಖಮ್ ।
ನಕ್ಷತ್ರಾಣಾಂ ಮುಖಂ ಚಂದ್ರ ಆದಿತ್ಯಸ್ತಪತಾಂ ಮುಖಮ್ ।
ಪರ್ವತಾನಾಂ ಮುಖಂ ಮೇರು ರ್ಗರುಡಃ ಪತತಾಂ ಮುಖಮ್ ॥

ಮನುಷ್ಯರಲ್ಲಿ ರಾಜನು ಶ್ರೇಷ್ಠನಾದವನು ಜಲಾಶ್ರಯಗಳಲ್ಲಿ ಸಾಗರವು ಶ್ರೇಷ್ಠವಾದುದು. ನಕ್ಷತ್ರಗಳಲ್ಲಿ ಚಂದ್ರನು ಶ್ರೇಷ್ಠನಾದವನು. ಬೆಳಗುವ ವಸ್ತುಗಳಲ್ಲಿ ಸೂರ್ಯನು ಶ್ರೇಷ್ಠನಾದವನು. ಪರ್ವತಗಳಲ್ಲಿ ಮೇರುವು ಶ್ರೇಷ್ಠವಾದದು. ಪಕ್ಷಿಗಳಲ್ಲಿ ಗರುಡನು ಶ್ರೇಷ್ಠನಾದವನು.

ಊರ್ಧ್ವಂ ತಿರ್ಯಗಧಶ್ಚೈವ ಯಾವತೀ ಜಗತೋ ಗತಿಃ ।
ಸದೇವಕೇಷು ಲೋಕೇಷು ಭಗವಾನ್ ಕೇಶವೋ ಮುಖಮ್ ॥೨೯॥

ಮೇಲ್ಮುಖವಾಗಿ ಕೆಳಮುಖವಾಗಿ ಮತ್ತು ಅಕ್ಕ ಪಕ್ಕಗಳಲ್ಲಿ ಎಷ್ಟು ಗಮ್ಯಸ್ಥಾನಗಳಿವೆಯೋ ಅಂತಹ ದೇವತೆಗಳಿಂದ ಸಹಿತನಾದ ಎಲ್ಲಾ ಲೋಕಗಳಿಗಿಂತಲೂ ಭಗವಂತನಾದ ಕೇಶವನು ಶ್ರೇಷ್ಠನಾದವನು.

ಅಯಂ ತು ಪುರುಷೋ ಬಾಲಃ ಶಿಶುಪಾಲೋ ನ ಬುಧ್ಯತೇ ।
ಸರ್ವತ್ರ ಸರ್ವದಾ ಕೃಷ್ಣಂ ತಸ್ಮಾದೇವಂ ಪ್ರಭಾಷತೇ ॥೩೦॥

ಈ ಶಿಶುಪಾಲನು ಬಾಲಕ. ಆದ್ದರಿಂದ ಯಾವಾಗಲೂ ಎಲ್ಲ ಕಡೆಯಲ್ಲಿಯೂ ಇರುವ ಕೃಷ್ಣನ ಮಹಿಮೆಯನ್ನು ತಿಳಿಯದೆ ಹೀಗೆ ಮಾತನಾಡುತ್ತಿದ್ದಾನೆ.

ಯೋ ಹಿ ಧರ್ಮಾನ್ ವಿಚಿನುಯಾದುತ್ಕೃಷ್ಟಂ ಮತಿಮಾನ್ ನರಃ ।
ಸವೈ ಪಶ್ಯೇದ್ ಯಥಾ ಧರ್ಮಂ ನ ತಥಾ ಚೇದಿರಾಡಯಮ್ ॥೩೧॥

ವಿವೇಕಿಯಾದ ಮನುಷ್ಯನು ಉತ್ಕೃಷ್ಟವಾದ ಧರ್ಮವನ್ನು ಹುಡುಕುತ್ತಾ ಹೇಗೆ ಆ ಧರ್ಮಗಳನ್ನು ಗಮನಿಸುತ್ತಾನೆಯೋ ಹಾಗೆ ಚೇದಿರಾಜನಾದ ಶಿಶುಪಾಲನು ಗಮನಿಸುತ್ತಿಲ್ಲ.

ಸವೃದ್ಧ ಬಾಲೇಷ್ವಥವಾ ಪಾರ್ಥಿವೇಷು ಮಹತ್ಸು ವಾ ।
ಕೋ ನಾರ್ಹಂ ಮನ್ಯತೇ ಕೃಷ್ಣಂ ಕೋ ವಾಪ್ಯೇನಂ ನ ಪೂಜಯೇತ್ ॥೩೨॥

ವೃದ್ಧರೂ ಬಾಲರೂ ಮಹಾತ್ಮರೂ ಆದ ಅನೇಕ ರಾಜರು ಇರುವ ಈ ಸಭೆಯಲ್ಲಿ ಯಾವನು ಕೃಷ್ಣನನ್ನು ಪೂಜಾರ್ಹನೆಂದು ಭಾವಿಸುವುದಿಲ್ಲ? ಯಾವನು ಇವನನ್ನು ಪೂಜಿಸುವುದಿಲ್ಲ?

ಅಥೇಮಾಂ ದುಷ್ಕೃತಾಂ ಪೂಜಾಂ ಶಿಶುಪಾಲೋ ವ್ಯವಸ್ಯತಿ ।
ದುಷ್ಕೃತಾನಾಂ ಯಥಾನ್ಯಾಯಂ ತಥಾऽಯಂ ಕರ್ತುಮರ್ಹತಿ ॥೩೩॥

ಒಂದು ಪಕ್ಷ ಶಿಶುಪಾಲನು ನಾವು ಮಾಡಿದ ಪೂಜೆಯನ್ನು ದುಷ್ಕರ್ಮವೆಂದು ಭಾವಿಸಿದರೆ ದುಷ್ಕರ್ಮವನ್ನು ಮಾಡಿದವರಲ್ಲಿ ರಾಜನು ಹೇಗೆ ನಡೆದುಕೊಳ್ಳುತ್ತಾನೆಯೋ ಅದರಂತೆ ನಡೆದುಕೊಳ್ಳಲಿ.

ವೈಶಂಪಾಯನಃ

ಏವಮುಕ್ತೇ ತು ಗಾಂಗೇಯೇ ಶಿಶುಪಾಲಶ್ಚುಕೋಪ ಹ ।
ಕ್ರುದ್ಧಂ ಸುನೀಥಂ ದೃಷ್ಟ್ವಾ ತಥ ಸಹದೇವೋಽಬ್ರವೀತ್ ತದಾ ॥೩೪॥

ಭೀಷ್ಮರು ಹೀಗೆ ಹೇಳುತ್ತಿರಲು ಶಿಶುಪಾಲನು ಕೋಪಗೊಂಡನು. ಕೋಪಗೊಂಡ ಶಿಶುಪಾಲನನ್ನು ನೋಡಿ ಸಹದೇವನು ಆಗ ಹೀಗೆ ಮಾತನಾಡಿದನು.

ನೀತಿಪೂರ್ವಮಿದಂ ಸರ್ವಂ ಚೇದಿರಾಜ ಮಯಾ ಕೃತಮ್ ।
ನ ಮೇ ವಿಮತಿರಸ್ತೀಹ ಕಾರಣಂ ಚಾತ್ರ ಮೇ ಶೃಣು ॥೩೫॥

ಚೇದಿರಾಜನೇ! ನಾನು ಇದೆಲ್ಲವನ್ನೂ ನ್ಯಾಯದಿಂದಲೇ ಮಾಡಿದ್ದೇನೆ. ಈ ವಿಷಯದಲ್ಲಿ ವಿವಾದವಿಲ್ಲ. ಇದಕ್ಕೆ ಕಾರಣವನ್ನು ಕೇಳು.

ಸ ಪಾರ್ಥಿವಾನಾಂ ಸರ್ವೇಷಾಂ ಗುರುಃ ಕೃಷ್ಣೋ ಬಲೇನ ವೈ ।
ತಸ್ಮಾದಭ್ಯರ್ಚಿತೋಽಸ್ಮಾಭಿರ್ಹರಃ ಸರ್ವೈ ಸಮ್ಮಂತುಮರ್ಹಥ ॥೩೬॥

ಕೃಷ್ಣನು ತನ್ನ ಬಲದಿಂದ ಎಲ್ಲ ರಾಜರುಗಳಿಗೆ ಗುರುವಾಗಿದ್ದಾನೆ. ಪೂಜಾರ್ಹನಾದ ಅವನು ಆ ಕಾರಣದಿಂದ ನಮ್ಮಿಂದ ಪೂಜಿಸಲ್ಪಟ್ಟಿದ್ದಾನೆ. ನೀವೆಲ್ಲರೂ ಸಮ್ಮತಿಸಬೇಕು.

ಯೋ ವಾ ನ ಸಹತೇ ರಾಜ್ಞಾಂ ಕಶ್ಚಿತ್ ಸಬಲವಾಹನಃ ।
ಕ್ಷಿಪ್ರಂ ಯುದ್ಧಾಯ ನಿರ್ಯಾತು ಶಕ್ತಶ್ಚೇತ್ ಸಮಯೋ ಯುಧಿ ॥೩೭॥

ರಾಜರ ಮಧ್ಯೆ ಯಾವನು ಈ ಪೂಜೆಯನ್ನು ಸಹಿಸುವುದಿಲ್ಲವೋ ಅಂತಹವನು ಶಕ್ತಿಯಿದ್ದರೆ ತನ್ನ ಸೈನ್ಯವನ್ನು ಮತ್ತು ವಾಹನವನ್ನು ತೆಗೆದುಕೊಂಡು ಬೇಗ ಯುದ್ಧಕ್ಕೆ ಬರಲಿ ಇದು ನನ್ನ ಶರತ್ತು ಆಗಿದೆ.

ತಸ್ಯ ಮೂರ್ಧ್ನಿ ಸುಸನ್ನ್ಯಸ್ತಂ ರಾಜ್ಞಃ ಸವ್ಯಂ ಪದಂ ಮಯಾ ।
ಏವಮುಕ್ತೋ ಮಯಾ ಹೇತುರುತ್ತರಂ ಪ್ರಬ್ರವೀತು ಮೇ ॥೩೮॥

ಅಂತಹ ರಾಜನ ತಲೆಯಮೇಲೆ ನನ್ನ ಈ ಎಡಗಾಲನ್ನು ಚೆನ್ನಾಗಿ ಇಟ್ಟಿದ್ದೇನೆ. ಕೃಷ್ಣನನ್ನು ಪೂಜೆಮಾಡಲು ನಾನು ನಿಮಿತ್ತವನ್ನು ಹೇಳಿದ್ದಾಗಿದೆ. ಉತ್ತರವನ್ನು ಕೊಡುವವರು ನನಗೆ ಉತ್ತರವನ್ನು ಕೊಡಬಹುದು.

ವೈಶಂಪಾಯನಃ

ತತೋ ನ ವ್ಯಾಜಹಾರೈಷಾಂ ಕಶ್ಚಿದ್ ಬುದ್ಧಿಮತಾಂ ಸತಾಮ್ ।
ಮಾನಿನಾಂ ಬಲಿನಾಂ ರಾಜ್ಞಾಂ ಮಧ್ಯೇ ಸಂದರ್ಶಿತೇ ಪದೇ ॥೩೯॥

ಬಲಿಷ್ಠರೂ ಆತ್ಮಾಭಿಮಾನಿಗಳೂ ಮೇಧಾವಿಗಳೂ ಸಜ್ಜನರೂ ಆದ ರಾಜರುಗಳ ಮಧ್ಯದಲ್ಲಿ ಸಹದೇವನು ತನ್ನ ಪಾದವನ್ನು ತೋರಿಸುತ್ತಿರಲು ಅವರಲ್ಲಿ ಒಬ್ಬನೂ ಸಹ ಮಾತನಾಡಲಿಲ್ಲ.

ಏವಮುಕ್ತೇ ಸುನೀಥಸ್ಯ ಸಹದೇವೇನ ಕೇಶವೇ ।
ಸ್ವಭಾವರಕ್ತೇ ನಯನೇ ಕೋಪಾದ್ ರಕ್ತತರೀಕೃತೇ ॥೪೦॥

ಕೇಶವನ ವಿಷಯದಲ್ಲಿ ಸಹದೇವನು ಹೀಗೆ ಮಾತನಾಡುತ್ತಿದ್ದಾಗ ಸ್ವಭಾವದಿಂದಲೇ ಕೆಂಪಾಗಿದ್ದ ಶಿಶುಪಾಲನ ಕಣ್ಣುಗಳು ಕೋಪದಿಂದ ಮತ್ತಷ್ಟು ಕೆಂಪಾದವು.

ತಸ್ಯ ಕೋಪಂ ಸಮುದ್ಭೂತಂ ಜ್ಞಾತ್ವಾ ಭೀಷ್ಮಃ ಪ್ರತಾಪವಾನ್ ।
ಆಚಚಕ್ಷೇ ಪುನಸ್ತಸ್ಯೈ ಕೃಷ್ಣಸ್ಯೈವೋತ್ತಮಾನ್ ಗುಣಾನ್ ॥೪೧॥

ಅವನಿಗೆ ಕೋಪವು ಉಂಟಾದುದನ್ನು ನೋಡಿ ಪ್ರತಾಪಶಾಲಿಗಳಾದ ಭೀಷ್ಮರು ಪುನಃ ಅವನನ್ನು ಕುರಿತು ಕೃಷ್ಣನ ಶ್ರೇಷ್ಠವಾದ ಗುಣಗಳನ್ನು ಹೇಳಿದರು.

ಸ ಸುನೀಥಂ ಸಮಾಮಂತ್ರ್ಯ ತಾಂಶ್ಚ ಸರ್ವಾನ್ ಮಹೀಕ್ಷಿತಃ ।
ಉವಾಚ ವದತಾಂ ಶ್ರೇಷ್ಠ ಇದಂ ಮತಿಮತಾಂ ವರಃ ॥೪೨॥

ಮೇಧಾವಿಗಳಲ್ಲಿ ಶ್ರೇಷ್ಠರಾದ ಮತ್ತು ಮಾತನಾಡುವವರಲ್ಲಿ ಶ್ರೇಷ್ಠರಾದ ಆ ಭೀಷ್ಮರು ಶಿಶುಪಾಲನನ್ನೂ ಮತ್ತು ಎಲ್ಲಾ ರಾಜರನ್ನೂ ಸಮೀಪಕ್ಕೆ ಕರೆದು ಹೀಗೆ ಮಾತನಾಡಿದರು.

ಸಹದೇವೇನ ರಾಜಾನೋ ಯದುಕ್ತಂ ಕೇಶವಂ ಪ್ರತಿ ।
ತತ್ ತಥೇತಿ ವಿಜಾನೀಧ್ವಂ ಭೂಯಶ್ಚಾತ್ರ ನಿಬೋಧತ ॥೪೩॥

ಎಲೈ ರಾಜರೇ! ಸಹದೇವನು ಕೃಷ್ಣನ ವಿಷಯದಲ್ಲಿ ಏನು ಹೇಳಿದ್ದಾನೆಯೋ ಅದೆಲ್ಲವೂ ಸತ್ಯವೆಂದೇ ತಿಳಿಯಿರಿ. ಅಷ್ಟೇ ಅಲ್ಲ ಕೃಷ್ಣನ ವಿಷಯದಲ್ಲಿ ಇನ್ನೂ ಹೆಚ್ಚಾಗಿ ತಿಳಿಯ ಬೇಕಾದುದಿದೆ. ಅದನ್ನು ತಿಳಿಯಿರಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಪಂಚತ್ರಿಂಶೋಧ್ಯಾಯಃ ॥
॥ ಅರ್ಘಾಭಿಹರಣಪರ್ವಣಿ ಚತುರ್ಥೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ
ಮೂವತ್ತೈದನೆಯ ಅಧ್ಯಾಯವು ಮುಗಿಯಿತು.

★★★★★

ಮೂವತ್ತಾರನೆಯ ಅಧ್ಯಾಯ

(ಯುಧಿಷ್ಠಿರನಿಂದ ಪ್ರಾರ್ಥಿತರಾದ ಭೀಷ್ಮರಿಂದ ಕೃಷ್ಣನ ಸೃಷ್ಟ್ಯಾದಿಮಹಿಮೆಯ ವರ್ಣನೆ.)

ವೈಶಂಪಾಯನಃ

ತದಾ ಭೀಷ್ಮಸ್ಯ ತಚ್ಛ್ರುತ್ವಾ ವಚಃ ಕಾಲೇ ಯುಧಿಷ್ಠಿರಃ ।
ಉವಾಚ ಮತಿಮಾನ್ ಭೀಷ್ಮಂ ತತಃ ಕೌರವನಂದನಃ ॥೧॥

ಕೌರವನಂದನನಾದ ಮೇಧಾವಿಯಾದ ಯುಧಿಷ್ಠಿರನು ಆಗ ಭೀಷ್ಮರ ಆ ಮಾತುಗಳನ್ನು ಕೇಳಿ ಭೀಷ್ಮರನ್ನು ಕುರಿತು ಮಾತನಾಡಿದನು.

ವಿಸ್ತರೇಣಾಸ್ಯ ದೇವಸ್ಯ ಕರ್ಮಾಣೇಚ್ಛಾಮಿ ಸರ್ವಶಃ ।
ಶ್ರೋತುಂ ಭಗವತಸ್ತಾನಿ ಪ್ರಬ್ರವೀಹಿ ಪಿತಾಮಹ ॥೨॥

ಪಿತಾಮಹನೇ! ನಾನು ಈ ದೇವನ ಎಲ್ಲಾ ಕರ್ಮಗಳನ್ನು ವಿಸ್ತಾರವಾಗಿ ಕೇಳಲು ಇಚ್ಛಿಸುತ್ತೇನೆ. ಭಗವಂತನ ಆ ಎಲ್ಲಾ ಮಹಿಮೆಗಳನ್ನೂ ನನಗೆ ಚೆನ್ನಾಗಿ ಹೇಳಿ.

ಕರ್ಮಣಾಮಾನುಪೂರ್ವ್ಯಂ ಚ ಪ್ರಾದುರ್ಭಾವಾಶ್ಚ ಯೇ ವಿಭೋಃ ।
ಯಥಾ ಚ ಪ್ರಕೃತಿಃ ಕೃಷ್ಣೇ ತನ್ಮೇ ಬ್ರೂಹಿ ಪಿತಾಮಹ ॥೩॥

ಪಿತಾಮಹನೇ! ಪ್ರಭುವಾದ ಕೃಷ್ಣನ ಕರ್ಮಗಳ ಪೌರ್ವಪರ್ಯವನ್ನೂ ಪ್ರಾದುರ್ಭಾವಗಳನ್ನೂ ಮತ್ತು ಕೃಷ್ಣನ ಸ್ವಭಾವವನ್ನೂ ನನಗೆ ತಿಳಿಸಿ.

ಏವಮುಕ್ತಸ್ತದಾ ಭೀಷ್ಮಃ ಪ್ರೋವಾಚ ಪುರುಷರ್ಷಭ ।
ಯುಧಿಷ್ಠಿರಮಮಿತ್ರಘ್ನಂ ತಸ್ಮಿನ್ ಕ್ಷತ್ರಸಮಾಗಮೇ ॥೪॥

ಪುರುಷಶ್ರೇಷ್ಠನೇ! ಯುಧಿಷ್ಠಿರನಿಂದ ಹೀಗೆ ಹೇಳಲ್ಪಟ್ಟ ಭೀಷ್ಮರು ಆ ಕ್ಷತ್ರಿಯಸಮೂಹದಲ್ಲಿ ಶತ್ರುಸಂಹಾರಕನಾದ ಯುಧಿಷ್ಠಿರನನ್ನು ಕುರಿತು ಹೀಗೆ ಮಾತನಾಡಿದರು.

ಸಮಕ್ಷಂ ವಾಸುದೇವಸ್ಯ ದೇವಸ್ಯೇವ ಶತಕ್ರತೋಃ ।
ಕರ್ಮಾಣ್ಯಸುಕರಾಣ್ಯನ್ಯೈರಾಚಚಕ್ಷೇ ಜನಾಧಿಪ ॥೫॥

ಎಲೈ ಜನಾಧಿಪನೇ! ಇಂದ್ರದೇವನ ಎದುರಿನಲ್ಲಿ ಹೇಳಿದಂತೆ ವಾಸುದೇವನ ಎದುರಿನಲ್ಲಿ ಇನ್ನೊಬ್ಬರಿಂದ ಮಾಡಲು ಅಸಾಧ್ಯವಾದ ಕೃಷ್ಣನ ಕರ್ಮಗಳನ್ನು(ಭೀಷ್ಮರು) ನಿರೂಪಿಸಿದರು.

ಶೃಣ್ವತಾಂ ಪಾರ್ಥಿವಾನಾಂ ಚ ಧರ್ಮರಾಜಸ್ಯ ಚಾಂತಿಕೇ ।
ಇದಂ ಮತಿಮತಾಂ ಶ್ರೇಷ್ಠಃ ಕೃಷ್ಣಂ ಪ್ರತಿ ವಿಶಾಂಪತೇ ॥೬॥

ಎಲೈ ರಾಜನೇ! ಧರ್ಮರಾಜನ ಸಮೀಪದಲ್ಲಿ ಇನ್ನೂ ಅನೇಕ ರಾಜರು ಕೇಳುತ್ತಿರಲು ಮೇಧಾವಿಗಳಲ್ಲಿ ಶ್ರೇಷ್ಠರಾದ ಭೀಷ್ಮರು ಕೃಷ್ಣನ ವಿಷಯದಲ್ಲಿ ಹೀಗೆ ಮಾತನಾಡಿದರು.

ಸಾಮ್ನೈವಾಮಂತ್ರ್ಯ ರಾಜೇಂದ್ರಂ ಚೇದಿರಾಜಮರಿಂದಮಮ್ ।
ಭೀಮಕರ್ಮಾ ತತೋ ಭೀಷ್ಮೋ ಭೂಯಃ ಸ ಇದಮಬ್ರವೀತ್ ।
ಕುರೂಣಾಮಪಿ ರಾಜಾನಂ ಯುಧಿಷ್ಠಿರಮುವಾಚ ಹ ॥೭॥

ಶತ್ರುಸಂಹಾರಕನಾದ ರಾಜೇಂದ್ರನಾದ ಚೇದಿರಾಜನಾದ ಶಿಶುಪಾಲನನ್ನು ಒಳ್ಳೆಯ ಮಾತುಗಳಿಂದಲೇ ಆಮಂತ್ರಿಸಿ ಕುರುರಾಜನಾದ ಯುಧಿಷ್ಠಿರನನ್ನು ಆಮಂತ್ರಿಸಿ ಉಗ್ರಕರ್ಮಗಳನ್ನು ಮಾಡಿದ್ದ ಭೀಷ್ಮರು ಪುನಃ ಯುಧಿಷ್ಠಿರನನ್ನು ಕುರಿತು ಹೀಗೆ ಮಾತನಾಡಿದರು.

ವರ್ತಮಾನಾಮತೀತಾಂ ಚ ಶೃಣು ರಾಜನ್ ಯುಧಿಷ್ಠಿರ ।
ಈಶ್ವರಸ್ಯೋತ್ತಮಸ್ಯೈನಾಂ ಕರ್ಮಣಾಂ ಗಹನಾಂ ಗತಿಮ್ ॥೮॥

ಯುಧಿಷ್ಠರನೇ! ರಾಜನೇ! ಸರ್ವೋತ್ತಮನಾದ ಈಶ್ವರನ ಅತೀತವಾದ ಮತ್ತು ವರ್ತಮಾನವಾದ ಕರ್ಮಗಳ ಈ ಗಹನವಾದ ಗತಿಯನ್ನು ಕೇಳು.

ಅವ್ಯಕ್ತೋ ವ್ಯಕ್ತಲಿಂಗಸ್ಥೋ ಯ ಏಷ ಭಗವಾನ್ ಪ್ರಭುಃ ।
ಪುರಾ ನಾರಾಯಣೋ ದೇವಃ ಸ್ವಯಂಭೂಃ ಪ್ರಪಿತಾಮಹಃ ।
ಸಹಸ್ರಶೀರ್ಷಃ ಪುರುಷೋ ಧ್ರುವೋಽವ್ಯಕ್ತಃ ಸನಾತನಃ ॥೯॥

ಭಗವಂತನಾದ ಈ ಪ್ರಭುವು ಸ್ವತಃ ಅವ್ಯಕ್ತನಾದವನು. ಆದರೆ ಅವನನ್ನು ಅನುಮಾನ ಮುದ್ರೆಯಿಂದ ತಿಳಿಸಿಕೊಡುವ ಹೇತುಗಳು ವ್ಯಕ್ತವಾಗಿದೆ. ಇವನು ಹಿಂದೆ ಜಗತ್ತಿಗೆ ಪ್ರಪಿತಾಮಹನಾದ ಸ್ವಯಂಭುವಾದ ದೇವನಾದ ನಾರಾಯಣ. ಸಹಸ್ರ ಶಿರಸ್ಸುಳ್ಳವನು ಪುರುಷನಾಮಕನಾದವನು ಶಾಶ್ವತನಾದವನು ಅವ್ಯಕ್ತ ಮತ್ತು ವೇದ ಪ್ರತಿಪಾದ್ಯನಾದವನು.

ಸಹಸ್ರಾಕ್ಷಃ ಸಹಸ್ರಾಸ್ಯಃ ಸಹಸ್ರಚರಣೋ ವಿಭುಃ ।
ಸಹಸ್ರಬಾಹುಃ ಸಾಹಸ್ರೋ ದೇವೋ ನಾಮಸಹಸ್ರವಾನ್ ॥೧೦॥

ಸಹಸ್ರಕಣ್ಣುಳ್ಳವನೂ ಸಹಸ್ರಮುಖವುಳ್ಳವನೂ ಸಹಸ್ರಪಾದವುಳ್ಳವನೂ ವ್ಯಾಪ್ತನಾದವನೂ ಸಹಸ್ರಬಾಹುಗಳುಳ್ಳವನೂ ಸಹಸ್ರರೂಪಗಳುಳ್ಳವನೂ ಸಹಸ್ರನಾಮಗಳುಳ್ಳವನೂ ಆದ ದೇವನು.

ಸಹಸ್ರಮುಕುಟೋ ದೇವೋ ವಿಶ್ವರೂಪೋ ಮಹಾದ್ಯುತಿಃ ।
ಅನೇಕವರ್ಣೋ ದೇವಾದಿರವ್ಯಕ್ತಾದ್ ವೈ ಪರೇ ಸ್ಥಿತಃ ॥೧೧॥

ಸಹಸ್ರಕಿರೀಟಗಳುಳ್ಳವನು ವಿಶ್ವರೂಪವುಳ್ಳವನು ಮಹಾಕಾಂತಿಯುಳ್ಳವನು ಅನೇಕ ವರ್ಣವುಳ್ಳವನು ಎಲ್ಲಾದೇವತೆಗಳಿಗೂ ಆದಿಯಾದವನು ಅವ್ಯಕ್ತತ್ವಾಭಿಮಾನಿಯಾದ ಲಕ್ಷ್ಮೀದೇವಿಗಿಂತಲೂ ಶ್ರೇಷ್ಠನಾದ ಪ್ರಭುವು.

ಅಸೃಜತ್ ಸಲಿಲಂ ಪೂರ್ವಂ ಸ ಚ ನಾರಾಯಣಃ ಪ್ರಭುಃ ।
ತತಃ ಸ ಭಗವಾಂಸ್ತೋಯೇ ಬ್ರಹ್ಮಾಣಮಸೃಜತ್ ಸ್ವಯಮ್ ॥೧೨॥

ಆ ಪ್ರಭುವಾದ ನಾರಾಯಣನು ಮೊದಲು ಜಲವನ್ನು ಸೃಷ್ಟಿಮಾಡಿದನು. ಅನಂತರ ಆ ಭಗವಂತನು ತಾನೇ ಆ ಜಲದಲ್ಲಿ ಬ್ರಹ್ಮನನ್ನು ಸೃಷ್ಟಿಮಾಡಿದನು.

ಬ್ರಹ್ಮಾ ಚತುರ್ಮುಖೋ ಲೋಕಾನ್ ಸರ್ವಾಂಸ್ತಾನಸೃಜತ್ ಸ್ವಯಮ್ ।
ಆದಿಕಾಲೇ ಪುರಾ ಹ್ಯೇವಂ ಸರ್ವಲೋಕಸ್ಯ ಚೋದ್ಭವಃ ॥೧೩॥

ಚತುರ್ಮುಖನಾದ ಬ್ರಹ್ಮನು ಸ್ವತಃ ಸರ್ವಲೋಕಗಳನ್ನು ಸೃಜಿಸಿದನು. ಆದಿಕಾಲದಲ್ಲಿ ಹೀಗಿಯೇ ಎಲ್ಲಾ ಲೋಕಗಳ ಉದ್ಭವವಾಯಿತು.

ಪುರಾಥ ಪ್ರಳಯೇ ಪ್ರಾಪ್ತೇ ನಷ್ಟೇ ಸ್ಥಾವರಜಂಗಮೇ ।
ಬ್ರಹ್ಮಾದಿಷು ಪ್ರಲೀನೇಷು ನಷ್ಟೇ ಲೋಕೇ ಚರಾಚರೇ ॥೧೪॥

ಆಭೂತಸಂಪ್ಲವೇ ಪ್ರಾಪ್ತೇ ಪ್ರಲೀನೇ ಪ್ರಕೃತೌ ಮಹಾನ್ ।
ಏಕಸ್ತಿಷ್ಠತಿ ಸರ್ವಾತ್ಮಾ ಸ ತು ನಾರಾಯಣಃ ಪ್ರಭುಃ ।
ನಾರಾಯಣಸ್ಯ ಚಾಂಗಾನಿ ಸರ್ವದೈವಾನಿ ಭಾರತ ॥೧೫॥

ಹಿಂದೆ ಪ್ರಳಯವು ಪ್ರಾಪ್ತವಾದಾಗ ಸ್ಥಾವರಜಂಗಮಗಳು ನಷ್ಟವಾದಾಗ ಚರಾಚರವಾದ ಜಗತ್ತು ನಷ್ಟವಾದಾಗ ಬ್ರಹ್ಮಾದಿದೇವತೆಗಳು ನಷ್ಟವಾದಾಗ ಆ ಪ್ರಳಯಕಾಲದಲ್ಲಿ ಮಹತ್ತತ್ತ್ವವು ಪ್ರಕೃತಿಯಲ್ಲಿ ಲಯವನ್ನು ಹೊಂದಿದಾಗ ಸರ್ವಸ್ವಾಮಿಯಾದ ನಾರಾಯಣನೊಬ್ಬನೇ ಇದ್ದನು. ಭಾರತನೇ! ಎಲ್ಲಾ ದೇವತೆಗಳು ನಾರಾಯಣನ ಅಂಗದಿಂದ ಉತ್ಪನ್ನರಾದವರು.

ಶಿರಸ್ತಸ್ಯ ದಿವಂ ರಾಜನ್ ನಾಭಿಃ ಖಂ ಚರಣೌ ಮಹೀ ।
ಅಶ್ವಿನೌ ಕರ್ಣಯೋರ್ದೇವೌ ಚಕ್ಷುಷೀ ಶಶಿಭಾಸ್ಕರೌ ॥೧೬॥

ರಾಜನೇ! ದ್ಯುಲೋಕವು ಅವನ ಶಿರಸ್ಸು. ಅಂತರಿಕ್ಷವು ಅವನ ನಾಭಿ. ಭೂಮಿಯು ಅವನ ಪಾದಗಳು. ಅಶ್ವಿನಿದೇವತೆಗಳು ಎರಡು ಕರ್ಣಗಳಲ್ಲಿದ್ದಾರೆ. ಸೂರ್ಯ ಚಂದ್ರರು ಎರಡು ಕಣ್ಣುಗಳಲ್ಲಿ ಇದ್ದಾರೆ.

ಇಂದ್ರವೈಶ್ವಾನರೌ ದೇವೌ ಮುಖಂ ತಸ್ಯ ಮಹಾತ್ಮನಃ ।
ಅನ್ಯಾನಿ ಸರ್ವದೈವಾನಿ ತಸ್ಯಾಂಗಾನಿ ಮಹಾತ್ಮನಃ ।
ಸರ್ವಂ ವ್ಯಾಪ್ಯ ಹರಿಸ್ತಸ್ಥೌ ಸೂತ್ರೇ ಮಣಿಗಣಾ ಇವ ॥೧೭॥

ದೇವತೆಗಳಾದ ಇಂದ್ರಾಗ್ನಿಗಳು ಆ ಮಹಾತ್ಮನ ಮುಖ. ಇನ್ನು ಉಳಿದ ಎಲ್ಲಾ ದೇವತೆಗಳು ಆ ಮಹಾತ್ಮನ ಅಂಗಗಳು. ಹರಿಯು ಸೂತ್ರವು ಮಣಿಗಣಗಳನ್ನು ವ್ಯಾಪಿಸಿ ಇರುವಂತೆ ಎಲ್ಲವನ್ನೂ ವ್ಯಾಪಿಸಿದ್ದಾನೆ.

ಆಭೂತಸಂಪ್ಲವಾಂತೇಽಯಂ ದೃಷ್ಟ್ವಾ ಸರ್ವಂ ತಮೋನ್ವಿತಮ್ ।
ನಾರಾಯಣೋ ಮಹಾಯೋಗೀ ಸರ್ವಜ್ಞಃ ಪರಮಾತ್ಮವಾನ್ ।
ಬ್ರಹ್ಮಭೂತಸ್ತದಾತ್ಮಾನಂ ಬ್ರಹ್ಮಾಣಮಸೃಜತ್ ಸ್ವಯಮ್ ॥೧೮॥

ಪ್ರಳಯಕಾಲದ ಕೊನೆಯಲ್ಲಿ ಎಲ್ಲವೂ ತಮಸ್ಸಿನಿಂದ ಆವೃತವಾಗಿದ್ದನ್ನು ನೋಡಿ ಸರ್ವಜ್ಞನೂ ಮಹಾಯೋಗಿಯೂ ಶ್ರೇಷ್ಠವಾದ ಮನಸ್ಸುಳ್ಳವನೂ ಆದ ನಾರಾಯಣನು ವೇದಗಳಿಂದ ಅಭಿವ್ಯಕ್ತನಾಗಿ ವೇದಪ್ರವರ್ತಕರಾದ ಬ್ರಹ್ಮದೇವರನ್ನು ತಾನೇ ಸೃಷ್ಟಿಸಿದನು.

ಸೋಧ್ಯಕ್ಷಃ ಸರ್ವಭೂತಾನಾಂ ಪ್ರಭೂತಃ ಪ್ರಭವೋಚ್ಯುತಃ ।
ಸನತ್ಕುಮಾರಂ ರುದ್ರಂ ಚ ಸಪ್ತರ್ಷೀಂಶ್ಚ ತಪೋಧನಾನ್ ।
ಪೂರ್ವಮೇವಾಸೃಜದ್ ಬ್ರಹ್ಮಾ ತತೋ ಲೋಕಾನ್ ಪ್ರಜಾಸ್ತಥಾ ॥೧೯॥

ಮಹಾಮಹಿಮನೂ ಶ್ರೇಷ್ಠವಾದ ಜನ್ಮವುಳ್ಳವನೂ ಸದ್ಗುಣಗಳಿಂದ ಚ್ಯುತನಾಗದವನೂ ಆದ ಸರ್ವಾಧ್ಯಕ್ಷನಾದ ಚತುರ್ಮುಖಬ್ರಹ್ಮನು ಸನತ್ಕುಮಾರನನ್ನು ರುದ್ರನನ್ನು ತಪೋಧನರಾದ ಸಪ್ತ ಋಷಿಗಳನ್ನು ಮೊದಲೇ ಸೃಷ್ಟಿಸಿದನು. ಅನಂತರ ಬ್ರಹ್ಮನು ಲೋಕಗಳನ್ನೂ ಪ್ರಜೆಗಳನ್ನೂ ಸೃಷ್ಟಿಸಿದನು.

ತೇನ ತದ್ ವ್ಯಸೃಜತ್ ತತ್ರ ಪ್ರಾಪ್ತೇ ಕಾಲೇ ಯುಧಿಷ್ಠಿರ ।
ತೇಭ್ಯೋಭವನ್ಮಹಾತ್ಮಭ್ಯೋ ಬಹುಧಾ ಬ್ರಹ್ಮ ಶಾಶ್ವತಮ್ ॥೨೦॥

ಯುಧಿಷ್ಠಿರನೇ! ಪರಮಾತ್ಮನು ಬ್ರಹ್ಮನನ್ನು ನಿಮಿತ್ತಮಾಡಿಕೊಂಡು ರುದ್ರಾದಿದೇವತಾವೃಂದವನ್ನು ಆ ಯೋಗ್ಯವಾದ ಕಾಲದಲ್ಲಿ ಸೃಷ್ಟಿಸಿದನು. ಆ ಮಹಾತ್ಮರಿಂದ ವೇದವು ಅನೇಕ ರೀತಿಯಲ್ಲಿ ಪ್ರತಿಷ್ಠಿತವಾಯಿತು.

ಲೋಕಾನಾಂ ಬಹುಕೋಟ್ಯಶ್ಚ ಸಮತೀತಾಸ್ತು ಭಾರತ ।
ಆಭೂತಸಂಪ್ಲವಾಶ್ಚೈವ ಬಹುಕೋಟ್ಯೋಽಪಚಕ್ರಮುಃ ॥೨೧॥

ಭಾರತನೇ! ಅನೇಕ ಕೋಟಿಲೋಕಗಳು ಹಿಂದೆ ಆಗಿಹೋದವು. ಬಹುಕೋಟಿಪ್ರಳಯಗಳೂ ಹಿಂದೆ ಆಗಿಹೋದವು.

ಮನ್ವಂತರಂ ಯುಗಾ ರಾಜನ್ ಸಕಲ್ಪಾ ಭೂತಸಂಪ್ಲವಾಃ।
ಚಕ್ರವತ್ ಪರಿವರ್ತಂತೇ ಸರ್ವಂ ವಿಷ್ಣುಮಯಂ ಜಗತ್ ॥೨೨॥

ಎಲೈ ರಾಜನೇ! ಮನ್ವಂತರಗಳು ಯುಗಗಳು ದೈನಂದಿನ ಕಲ್ಪಗಳು ಬ್ರಹ್ಮಕಲ್ಪಗಳು ಮತ್ತು ಪ್ರಳಯಗಳು ಚಕ್ರದಂತೆ ತಿರುಗುತ್ತವೆ. ಎಲ್ಲವೂ ವಿಷ್ಣುವಿಗೆ ಅಧೀನವಾಗಿವೆ.

ಸೃಷ್ಟ್ವಾ ಚತುರ್ಮುಖಂ ದೇವಂ ದೇವೋ ನಾರಾಯಣಃ ಪ್ರಭುಃ।
ಸ ಲೋಕಾನಾಂ ಹಿತಾರ್ಥಾಯ ಕ್ಷೀರೋದೇ ವಸತಿ ಪ್ರಭುಃ ॥೨೩॥

ಪ್ರಭುವಾದ ನಾರಾಯಣದೇವನು ಚತುರ್ಮುಖದೇವನನ್ನು ಸೃಷ್ಟಿಮಾಡಿ ಲೋಕದ ಹಿತಕ್ಕೋಸ್ಕರವಾಗಿ ಕ್ಷೀರಸಾಗರದಲ್ಲಿ ವಾಸಮಾಡುತ್ತಾನೆ.

ಬ್ರಹ್ಮಾ ತು ಸರ್ವದೇವಾನಾಂ ಲೋಕಸ್ಯ ಚ ಪಿತಾಮಹಃ ।
ತತೋ ನಾರಾಯಣೋ ದೇವಃ ಸರ್ವಸ್ಯ ಪ್ರಪಿತಾಮಹಃ ॥೨೪॥

ಚತುರ್ಮುಖಬ್ರಹ್ಮನು ಎಲ್ಲ ಲೋಕಗಳಿಗೂ ಎಲ್ಲಾ ದೇವತೆಗಳಿಗೂ ಪಿತಾಮಹನಾದವನು. ಆದ್ದರಿಂದ ದೇವನಾದ ನಾರಾಯಣನು ಎಲ್ಲರಿಗೂ ಪ್ರಪಿತಾಮಹನಾದವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಷಟ್‌ತ್ರಿಂಶೋಽಧ್ಯಾಯಃ ॥
॥ ಅರ್ಘಾಭಿಹರಣಪರ್ವಣಿ ಪಂಚಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ
ಮೂವತ್ತಾರನೆಯ ಅಧ್ಯಾಯವು ಮುಗಿಯಿತು.

★★★★★

ಮೂವತ್ತೇಳನೆಯ ಅಧ್ಯಾಯ

(ಭೀಷ್ಮರಿಂದ ವಿಷ್ಣುವಿನ ಸೃಷ್ಟಿಯ ಮತ್ತು ಮಧುಕೈಟಭರ ವಧೆಯ ವರ್ಣನೆ)

ಭೀಷ್ಮಃ

ಅವ್ಯಕ್ತೋ ವ್ಯಕ್ತಲಿಂಗಸ್ಥೋ ಯ ಏಷ ಭಗವಾನ್ ಪ್ರಭುಃ ।
ನರನಾರಾಯಣಶ್ಚಕ್ಷೇ ಪ್ರಭವಾಪ್ಯಯಸಂಹಿತಃ ॥೧॥

ಸ್ವತಃ ಅವ್ಯಕ್ತನೂ ವ್ಯಕ್ತವಾದ ಲಿಂಗಗಳನ್ನು ಹೊಂದಿದವನೂ ಆದ ಪ್ರಭುವಾದ ಭಗವಂತನಾದ ಈ ನರ ನಾರಾಯಣನು ಸೃಷ್ಟಿಸ್ಥಿತಿ ಸಂಹಾರಗಳನ್ನು ಮಾಡುತ್ತಾನೆ.

ಏಷ ನಾರಾಯಣೋ ಭೂತ್ವಾ ಹರಿರಾಸೀದ್ ಯುಧಿಷ್ಠಿರ ।
ಬ್ರಹ್ಮಾ ಚ ಶಕ್ರಃ ಸೂರ್ಯಶ್ಚ ಧರ್ಮಶ್ಚೈವ ಸನಾತನಃ ॥೨॥

ಎಲೈ ಯುಧಿಷ್ಠಿರನೇ! ಶ್ರೀಹರಿಯು ಮೊದಲು ನಾರಾಯಣನೆನಿಸಿಕೊಂಡು ಅನಂತರ ಬ್ರಹ್ಮ ಇಂದ್ರ ಸೂರ್ಯ ಧರ್ಮ ಮೊದಲಾದ ರೂಪಗಳನ್ನು ಧರಿಸುತ್ತಾನೆ.

ಬಹುಶಃ ಸರ್ವಭೂತಾತ್ಮಾ ಪ್ರಾದುರ್ಭವತಿ ಕಾರ್ಯತಃ ।
ಪ್ರಾದುರ್ಭಾವಾಂಸ್ತು ವಕ್ಷ್ಯಾಮಿ ದಿವ್ಯಾನ್ ದೇವಗಣೈರ್ಯುತಾನ್ ॥೩॥

ಇವನು ವೇದಪ್ರತಿಪಾದ್ಯನಾದವನು. (ಬ್ರಹ್ಮೇಂದ್ರಾದಿದೇವತೆಗಳಲ್ಲಿ ಬ್ರಹ್ಮೇಂದ್ರಾದಿರೂಪಗಳಿಂದ ಇದ್ದು) ಇವನು ಬಹುರೂಪಗಳನ್ನು ಧರಿಸಿದವನಾಗಿರುತ್ತಾನೆ. ಸರ್ವಭೂತಸ್ವಾಮಿಯಾದ ಇವನು ಬೇರೆ ಬೇರೆ ಕಾರ್ಯಗಳ ಸಲುವಾಗಿ ಅನೇಕಬಾರಿ ಪ್ರಾದುರ್ಭವಿಸುತ್ತಾನೆ. ಅವನ ದಿವ್ಯವಾದ ದೇವತಾಗಣಗಳಿಂದ ಕೂಡಿದ ಪ್ರಾರ್ದುಭಾವಗಳನ್ನು ಹೇಳುವೆನು.

ಪೂರ್ಣೇ ಯುಗಸಹಸ್ರೇಥ ದೇವದೇವೋ ಜಗತ್ಪತಿಃ ।
ಬ್ರಹ್ಮಾಣಂ ಕಪಿಲಂ ಚೈವ ಪಾರಶ್ರೇಷ್ಠೀ ತಥೈವ ಚ ॥೪॥

ದೇವಾನ್ ಸಪ್ತ ಋಷೀಂಶ್ಚವ ಶಂಕರಂ ಚ ಮಹಾಯಶಾಃ ।
ಸನತ್ಕುಮಾರಂ ಭಗವಾನ್ ಮನುಂ ಚೈವ ಪ್ರಜಾಪತಿಮ್ ।
ಪುರಾ ಚಕ್ರೇऽಥ ದೇವಾದಿಃ ಪ್ರದೀಪ್ತಾಗ್ನಿಸಮಪ್ರಭಃ ॥೫॥

ಸಹಸ್ರಯುಗಗಳು ಪೂರ್ಣವಾದಮೇಲೆ ದೇವದೇವನೂ ಜಗತ್ಪತಿಯೂ ಮುಕ್ತರಿಗೆ ಒಡೆಯನೂ ಆದ ಇವನು ವಾಯುದೇವರನ್ನೂ ಬ್ರಹ್ಮದೇವರನ್ನೂ ಸೃಷ್ಟಿಸಿದನು. ಹಾಗೆಯೇ ಮಹಾಕೀರ್ತಿವಂತನಾದ ಭಗವಂತನಾದ ಇವನು ದೇವತೆಗಳನ್ನೂ ಸಪ್ತ ಋಷಿಗಳನ್ನೂ ಶಂಕರನನ್ನೂ ಸನತ್ಕುಮಾರರನ್ನೂ ಮತ್ತು ಪ್ರಜಾಪತಿಗಳನ್ನೂ ಸೃಷ್ಟಿಸಿದನು. ಜ್ವಲಿಸುವ ಅಗ್ನಿಯ ಪ್ರಭೆಯುಳ್ಳ, ದೇವತೆಗಳಿಗೂ ಸೃಷ್ಟಿಕರ್ತನಾದ, ಇವನು ಹಿಂದೆ ಹೀಗೆ ಮಾಡಿದನು.

ಯೇನ ಚಾರ್ಣವಮಧ್ಯಸ್ಥೆ ನಷ್ಟೇ ಸ್ಥಾವರಜಂಗಮೇ ।
ನಷ್ಟದೇವಾಸುರನರೇ ಪ್ರಣಷ್ಟೋರಗರಾಕ್ಷಸೇ ॥೬॥

ಯೋದ್ಧುಕಾಮೌ ಸುದುರ್ಧರ್ಷೌ ಭ್ರಾತರೌ ಮಧುಕೈಟಭೌ ।
ಹತೌ ಭಗವತಾ ತೇನ ತಯೋರ್ದತ್ತ್ವಾ ವರಂ ಪರಮ್ ॥೭॥

ಸ್ಥಾವರಜಂಗಮಗಳು ದೇವಾಸುರರು ಉರಗರಾಕ್ಷಸರು ನಷ್ಟವಾಗಿರುವ ಪ್ರಳಯಕಾಲದ ಕೊನೆಯಲ್ಲಿ ಪ್ರಳಯೋದಕದ ಮಧ್ಯದಲ್ಲಿ ಇದ್ದು ಮಹಾಬಲಶಾಲಿಗಳಾದ ಯುದ್ಧಾಕಾಂಕ್ಷಿಗಳಾದ ಅಣ್ಣತಮ್ಮಂದಿರಾದ ಮಧುಕೈಟಭರು ಈ ಭಗವಂತನಿಂದ ಅವರಿಗೆ ವರವನ್ನು ಕೊಟ್ಟುಕೊಲ್ಲಲ್ಪಟ್ಟರು.

ಭೂಮಿಂ ಬದ್ಧ್ವಾ ತು ತೌ ಪೂರ್ವಂ ಮೃನ್ಮಯೌ ದ್ವೌ ಮಹಾಸುರೌ ।
ಕರ್ಣಸ್ರೋತೋದ್ಭವೌ ತೌ ತು ವಿಷ್ಣೋಸ್ತಸ್ಯ ಮಹಾತ್ಮನಃ ॥೮॥

ಮಹಾರ್ಣವೇ ಪ್ರಸ್ವಪತಃ ಶೈಲರಾಜಸಮೌ ಸ್ಥಿತೌ ।
ತೌ ವಿವೇಶ ಸ್ವಯಂ ವಾಯುರ್ಬ್ರಹ್ಮಣಾ ಸಾಧು ಚೋದಿತಃ ॥೯॥

ಮಹಾತ್ಮನಾದ ವಿಷ್ಣುವಿನ ಕರ್ಣವಿವರಗಳಿಂದ ಜನಿಸಿದ ಅವರಿಬ್ಬರೂ ಅಸುರರು ಅಶ್ಮಸಾರಮಯವಾದ ಶರೀರವುಳ್ಳವರಾಗಿ ಭೂಮಿಯನ್ನು ತಮ್ಮ ಕೈಗಳಲ್ಲಿ ಬಂಧಿಸಿ ಮಹಾರ್ಣವದಲ್ಲಿ ಮಲಗಿ ನಿದ್ರಿಸಿದರು. ಅವರಿಬ್ಬರೂ ಪರ್ವತ ಪ್ರತಿಪಮರಾಗಿದ್ದರು. ಬ್ರಹ್ಮದೇವರಿಂದ ಪ್ರೇರಿಸಲ್ಪಟ್ಟ ವಾಯುದೇವರು ಅವರಿಬ್ಬರನ್ನು ಪ್ರವೇಶಿಸಿದರು.

ತೌ ದಿವಂ ಘಾದಯಿತ್ವಾ ತು ವವೃಧಾತೇ ಮಹಾಸುರೌ ।
ವಾಯುಪ್ರಾಣೌ ತು ತೌ ದೃಷ್ಟ್ವಾ ಬ್ರಹ್ಮಾ ಪರಿಮೃಶನ್ ಶನೈಃ ।
ಏಕಂ ಮೃದುತರಂ ವೇತ್ತಿ ಕಠಿನಂ ವೇತ್ತಿ ಚಾಪರಮ್ ॥೧೦॥

ಆ ಇಬ್ಬರು ಮಹಾಸುರರು ದ್ಯುಲೋಕವನ್ನು ಆವರಿಸಿಕೊಂಡು ಬೆಳೆದರು. ವಾಯುದೇವರ ಬಲದಿಂದ ಬಲಿಷ್ಠರಾಗಿದ್ದ ಅವರಿಬ್ಬರನ್ನು ಪರಾಮರ್ಶೆಮಾಡಿ ಬ್ರಹ್ಮದೇವರು ಅವರಲ್ಲಿ ಒಬ್ಬನನ್ನು ಮೃದುವೆಂದೂ ಇನ್ನೊಬ್ಬನನ್ನು ಕಠಿಣವೆಂದೂ ತಿಳಿಸಿದರು.

ನಾಮನೀ ತು ತಯೋಶ್ಚಕ್ರೇ ಸ ವಿಭುಃ ಸಲಿಲೋದ್ಭವಃ ।
ಮೃದುಸ್ತ್ವಯಂ ಮಧುರ್ನಾಮ ಕಠಿನಃ ಕೈಟಭಸ್ತ್ವಯಮ್ ।
ತೌ ದೈತ್ಯೌ ಕೃತನಾಮಾನೌ ಚೇರತುರ್ಬಲಗರ್ವಿತೌ ॥೧೧॥

ಸಲಿಲದಿಂದ ಉದ್ಭವಿಸಿದ ಪ್ರಭುಗಳಾದ ಬ್ರಹ್ಮದೇವರು ಅವರಿಗೆ ನಾಮಕರಣಗಳನ್ನು ಮಾಡಿದರು. ಮೃದುವಾದವನಿಗೆ ಮಧು ಎಂದೂ ಕಠಿಣನಾದವನಿಗೆ ಕೈಟಭನೆಂದೂ ನಾಮಕರಣಮಾಡಿದರು. ನಾಮಕರಣವನ್ನು ಮಾಡಿಕೊಂಡ ಆ ದೈತ್ಯರು ತಮ್ಮ ಬಲದಿಂದ ಗರ್ವಿಷ್ಠರಾಗಿ ಎಲ್ಲ ಕಡೆಗಳಲ್ಲಿಯೂ ತಿರುಗಾಡಿದರು.

ತೌ ಪುರಾಥ ದಿವಂ ಸರ್ವಾಂ ಪ್ರಾಪ್ತೌ ರಾಜನ್ ಮಹಾಸುರೌ ।
ಪ್ರಶಾಸ್ಯಾಥ ದಿವಂ ಸರ್ವಾಂ ಚೇರತುರ್ಮಧುಕೈಟಭೌ ॥೧೨॥

ಎಲೈ ರಾಜನೇ! ಆ ಇಬ್ಬರೂ ಮಹಾ ಅಸುರರು ಮೊದಲು ದ್ಯುಲೋಕಕ್ಕೆ ಬಂದು ದ್ಯುಲೋಕವನ್ನು ತಮ್ಮ ವಶಕ್ಕೆ ತೆಗೆದುಕೊಂಡು ದ್ಯುಲೋಕದಲ್ಲಿ ಎಲ್ಲಾ ಕಡೆಯಲ್ಲಿಯೂ ಸಂಚರಿಸಿದರು.

ಸರ್ವಮೇಕಾರ್ಣವಂ ಲೋಕಂ ಯೋದ್ಧುಕಾಮೌ ಸುನಿರ್ಭಯೌ ।
ತೌ ಗತಾವಸುರೌ ದೃಷ್ಟ್ವಾ ಬ್ರಹ್ಮಾ ಲೋಕಪಿತಾಮಹಃ ।
ಏಕಾರ್ಣವಾಂಬುನಿಚಯೇ ತತ್ರೈವಾಂತರಧೀಯತ ॥೧೩॥

ಎಲ್ಲವೂ ಏಕಾರ್ಣವವಾದ ಲೋಕವನ್ನು ನೋಡಿ ಸುನಿರ್ಭಯರೂ ಯುದ್ಧಕಾಂಕ್ಷಿಗಳೂ ಅಸುರರೂ ಆದ ಆ ಮಧುಕೈಟಭರು ತನ್ನ ಬಳಿಗೆ ಬಂದಿದ್ದನ್ನು ಗಮನಿಸಿ ಸರ್ವಲೋಕಪಿತಾಮಹರಾದ ಬ್ರಹ್ಮದೇವರು ಏಕಾರ್ಣವವಾದ ಜಲಸಮೂಹದಲ್ಲಿ(ಅಲ್ಲಿಯೇ(ಅಂತರ್ಧಾನವನ್ನು ಹೊಂದಿದರು.

ಸ ಪದ್ಮೇ ಪದ್ಮನಾಭಸ್ಯ ನಾಭಿದೇಶಾತ್ ಸಮುತ್ಥಿತೇ ।
ಆಸೀದಾದೌ ಸ್ವಯಂಜನ್ಮ ತತ್ಪಂಕಜಮಪಂಕಜಮ್ ।
ಪೂಜಯಾಮಾಸ ವಸತಿಂ ಬ್ರಹ್ಮಾ ಲೋಕಪಿತಾಮಹಃ ॥೧೪॥

ಆ ಬ್ರಹ್ಮದೇವರು ಮೊದಲು ಪದ್ಮನಾಭನ ನಾಭಿದೇಶದಿಂದ ಕೆಸರಿಲ್ಲದೆ ಹುಟ್ಟಿದ ಕಮಲದಲ್ಲಿ ಸ್ವತಃ ಜನ್ಮವನ್ನು ಪಡೆದು ಸರ್ವಲೋಕ ಪಿತಾಮಹರಾದ ಬ್ರಹ್ಮದೇವರು ತಮ್ಮ ವಾಸಸ್ಥಾನವಾದ ಆ ಪದ್ಮವನ್ನು ಪೂಜಿಸಿದರು.

ತಾವುಭೌ ಜಲಗರ್ಭಸ್ಥೌ ನಾರಾಯಣಚತುರ್ಮುಖೌ ।
ಬಹೂನ್ ವರ್ಷಾಯುತಾನಪ್ಸು ಶಯಾನೌ ನ ಚಕಂಪತುಃ ॥೧೫॥

ನಾರಾಯಣದೇವರು ಮತ್ತು ಬ್ರಹ್ಮದೇವರು ಜಲಗರ್ಭದಲ್ಲಿ ಇದ್ದವರಾಗಿ ಅನೇಕ ಸಹಸ್ರಾರು ವರ್ಷಗಳ ಕಾಲ ಅಲುಗಾಡದೆ ಮಲಗಿದ್ದರು.

ಅಥ ದೀರ್ಘಸ್ಯ ಕಾಲಸ್ಯ ತಾವುಭೌ ಮಧುಕೈಟಭೌ ।
ಆಜಗ್ಮತುಸ್ತದುದ್ದೇಶಂ ಯತ್ರ ಬ್ರಹ್ಮಾ ವ್ಯವಸ್ಥಿತಃ ॥೧೬॥

ಅನಂತರ ಬಹುಕಾಲದ ಮೇಲೆ ಆ ಇಬ್ಬರು ಮಧುಕೈಟಭರು ಎಲ್ಲಿ ಬ್ರಹ್ಮದೇವರು ಇದ್ದರೋ ಆ ಪ್ರದೇಶಕ್ಕೆ ಬಂದರು.

ತೌ ದೃಷ್ಟ್ವಾ ಲೋಕನಾಥಸ್ತು ರೋಷಾತ್ ಸಂರಕ್ತಲೋಚನಃ ।
ಉತ್ಪಪಾತಾಶು ಶಯನಾತ್ ಪದ್ಮನಾಭೋ ಮಹಾದ್ಯುತಿಃ ॥೧೭॥

ಲೋಕನಾಥನಾದ ಮಹಾದ್ಯುತಿಯಾದ ಪದ್ಮನಾಭನು ಅವರಿಬ್ಬರನ್ನು ನೋಡಿ ರೋಷದಿಂದ ಕೆಂಪಾದ ಕಣ್ಣುಳ್ಳವನಾಗಿ ತನ್ನ ಶಯನದಿಂದ ಮೇಲೆದ್ದನು.

ತದ್ಯುದ್ಧಮಭವದ್ ಘೋರಂ ತಯೋಸ್ತಸ್ಯ ಚ ವೈ ತದಾ ।
ಏಕಾರ್ಣವೇ ತದಾ ಘೋರೇ ತ್ರೈಲೋಕ್ಯೇ ಜಲತಾಂ ಗತೇ ॥೧೮॥

ಆಗ ಮೂರು ಲೋಕಗಳು ಜಲಮಯವಾಗಿ ಘೋರವಾದ ಏಕಾರ್ಣವವು ಎಲ್ಲ ಕಡೆಗಳಲ್ಲಿ ವ್ಯಾಪಿಸಿರಲು ಮಧುಕೈಟಭರಿಗೂ ಮತ್ತು ಪದ್ಮನಾಭನಿಗೂ ಘೋರವಾದ ಯುದ್ಧವಾಯಿತು.

ತದಾಭೂತ್ ತುಮುಲಂ ಯುದ್ಧಂ ವರ್ಷಸಂಘಾನ್ ಸಹಸ್ರಶಃ ।
ಯೌ ಚ ತಾವಸುರೌ ಯುದ್ಧೇ ತದಾ ಶ್ರಮಮವಾಪತುಃ ॥೧೯॥

ಅನೇಕಸಹಸ್ರವರ್ಷಗಳಕಾಲ ತುಮುಲವಾದ ಯುದ್ಧವು ನಡೆಯಿತು. ಆಗ ಆ ಅಸುರರು ಯುದ್ಧದಲ್ಲಿ ಶ್ರಮವನ್ನು ಹೊಂದಿದರು.

ಅಥ ದೀರ್ಘಸ್ಯ ಕಾಲಸ್ಯ ತೌ ದೈತ್ಯೌ ಯುದ್ಧದುರ್ಮದೌ ।
ಊಚತುಃ ಪ್ರೀತಮನಸೌ ದೇವಂ ನಾರಾಯಣಂ ಪ್ರಭುಮ್ ॥೨೦॥

ಬಹುಕಾಲದ ನಂತರ ಯುದ್ಧದುರ್ಮದರಾದ ಆ ದೈತ್ಯರು ಮನಃಸಂತೋಷದಿಂದ ಪ್ರಭುವಾದ ನಾರಾಯಣನನ್ನು ಕುರಿತು ಹೀಗೆ ಹೇಳಿದರು.

ಪ್ರೀತೌ ಸ್ಮಸ್ತವ ಯುದ್ಧೇನ ಶ್ಲಾಘ್ಯಸ್ತ್ವಂ ಮೃತ್ಯುರಾವಯೋಃ ।
ಆವಾಂ ಜಹಿ ನ ಯತ್ರೋರ್ವೀ ಸಲಿಲೇನ ಪರಿಪ್ಲುತಾ ॥೨೧॥

ನಾವು ನಿನ್ನ ಯುದ್ಧದಿಂದ ಸಂತುಷ್ಟರಾಗಿದ್ದೇವೆ. ಶ್ಲಾಘ್ಯನಾದ ನೀನು ನಮ್ಮಿಬ್ಬರಿಗೆ ಮೃತ್ಯುವಾಗಿದ್ದೀಯೆ. ಎಲ್ಲಿ ನಮ್ಮ ಮರಣಭೂಮಿಯು ಜಲದಿಂದ ಆವೃತವಾಗಿದೆಯೋ ಅಲ್ಲಿ ನಮ್ಮನ್ನು ಸಂಹರಿಸು.

ಹತೌ ಚ ತವ ಪುತ್ರತ್ವಂ ಪ್ರಾಪ್ನುಯಾವ ಸುರೋತ್ತಮ ।
ಯೋ ಹ್ಯಾವಾಂ ಯುಧಿ ನಿರ್ಜೇತಾ ತಸ್ಯಾವಾಂ ವಿಹಿತೌ ಸುತೌ ॥೨೨॥

ಸುರೋತ್ತಮನೇ! ನಿನ್ನಿಂದ ಹತರಾದಮೇಲೆ ನಾವು ನಿನ್ನ ಪುತ್ರರಾಗುತ್ತೇವೆ. ಯಾರು ನಮ್ಮನ್ನು ಯುದ್ಧದಲ್ಲಿ ಗೆಲ್ಲುತ್ತಾನೆಯೋ ಅವನಿಗೆ ನಾವು ಮಕ್ಕಳಾಗುತ್ತೇವೆ ಎಂಬ ವರವು ನಮಗಿದೆ. (ಮಧುಕೈಟಭರಿಬ್ಬರಲ್ಲೂ ವಾಯುದೇವರ ಅಂಶಗಳಿವೆ. ಮಧುಕೈಟಭರು

ಹತರಾದಮೇಲೆ ಅವರಲ್ಲಿ ಆವಿಷ್ಟರಾದ ವಾಯುದೇವರು ಪರಮಾತ್ಮನ ಪುತ್ರರಾಗಿ ಅನೇಕ ರೂಪಗಳಿಂದ ಜನಿಸುತ್ತಾರೆ.)

ತಯೋಃ ಸ ವಚನಂ ಶ್ರುತ್ವಾ ತದಾ ನಾರಾಯಣಃ ಪ್ರಭುಃ ।
ತೌ ಪ್ರಗೃಹ್ಯ ಮೃಧೇ ದೈತ್ಯೌ ದೋರ್ಭ್ಯಾಂ ತೌ ಸಮಪೀಡಯತ್ ॥೨೩॥

ಆಗ ಪ್ರಭುವಾದ ನಾರಾಯಣನು ಅವರ ಮಾತನ್ನು ಕೇಳಿ ಯುದ್ಧದಲ್ಲಿ ಅವರನ್ನು ಹಿಡಿದು ತನ್ನ ಬಾಹುಗಳಿಂದ ಪೀಡಿಸಿದನು.

ಊರುಭ್ಯಾಂ ನಿಧನಂ ಚಕ್ರೇ ತಾವುಭೌ ಮಧುಕೈಟಭೌ ।
ತೌ ಹತೌ ಚಾಪ್ಲುತೌ ತೋಯೇ ವಪುರ್ಭ್ಯಾಮೇಕತಾಂ ಗತೌ ।
ಮೇದೋ ಮುಮುಚತುರ್ದೈತ್ಯೌ ಮಜ್ಜಮಾನೌ ಜಲೋರ್ಮಿಭಿಃ॥೨೪॥

ತನ್ನ ತೊಡೆಗಳಿಂದ ಅವರನ್ನು ಪೀಡಿಸಿ ನಾರಾಯಣನು ಮಧುಕೈಟಭರನ್ನು ಸಂಹರಿಸಿದನು. ಸಂಹರಿಸಿದಮೇಲೆ ಜಲದಲ್ಲಿ ಮುಳುಗಿಸಲ್ಪಟ್ಟ ಅವರ ದೇಹಗಳು ಒಂದಕ್ಕೊಂದು ಸೇರಿಕೊಂಡು ಮೇದಸ್ಸನ್ನು ಸ್ರವಿಸಿದವು. ಆ ಮೇದಸ್ಸು ನೀರಿನ ಅಲೆಗಳಿಂದ ಎಲ್ಲ ಕಡೆಗಳಲ್ಲಿಯೂ ಹರಡಿತು.

ಮೇದಸಾ ತಜ್ಜಲಂ ವ್ಯಾಪ್ತಂ ತಾಭ್ಯಾಮಂತರ್ದಧೇ ತದಾ ।
ನಾರಾಯಣಶ್ಚ ಭಗವಾನ್ ಅಸೃಜದ್ ವಿವಿಧಾಃ ಪ್ರಜಾಃ ॥೨೫॥

ಅವರಿಬ್ಬರ ಮೇಧಸ್ಸಿನಿಂದ ಆ ಜಲವು ಎಲ್ಲ ಕಡೆಯಲ್ಲಿ ವ್ಯಾಪಿಸಲ್ಪಟ್ಟಿತು. ಆನಂತರ ಪ್ರಭುವಾದ ನಾರಾಯಣನು ಅಲ್ಲಿ ಅಂತರ್ಧಾನವನ್ನುಹೊಂದಿ ವಿವಿಧರಾದ ಪ್ರಜೆಗಳನ್ನು ಸೃಷ್ಟಿಸಿದನು.

ದೈತ್ಯಯೋರ್ಮೇದಸಾ ಛನ್ನಾ ಜಜ್ಞೇ ರಾಜನ್ ವಸುಂಧರಾ ।
ತದಾಪ್ರಭೃತಿ ಕೌಂತೇಯ ಮೇದಿನೀತಿ ಸ್ಮೃತಾ ಮಹೀ ।
ಪ್ರಭಾವಾತ್ ಪದ್ಮನಾಭಸ್ಯ ಶಾಶ್ವತೀ ಚ ಕೃತಾ ನೃಣಾಮ್ ॥೨೬॥

ರಾಜನೇ! ಭೂಮಿಯು ಆ ಇಬ್ಬರು ದೈತ್ಯರ ಮೇದಸ್ಸಿನಿಂದ ಆವರಿಸಿಲ್ಪಟ್ಟಿತು. ಆ ಕಾರಣದಿಂದ ಆ ದಿನದಿಂದ ಭೂಮಿಗೆ ಮೇದಿನಿ ಎಂದು ಹೆಸರು. ಕೌಂತೇಯನೇ

ಪದ್ಮನಾಭನ ಪ್ರಭಾವದಿಂದ ಆ ಭೂಮಿಯು ಎಲ್ಲ ಮನುಷ್ಯರು ವಾಸಿಸುವುದಕ್ಕಾಗಿ ಶಾಶ್ವತವಾಗಿ ಮಾಡಲ್ಪಟ್ಟಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಸಪ್ತತ್ರಿಂಶೋಧ್ಯಾಯಃ ॥

॥ ಅರ್ಘಾಭಿಹರಣಪರ್ವಣಿ ಷಷ್ಠೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಮೂವತ್ತೇಳನೆಯ ಅಧ್ಯಾಯವು ಮುಗಿಯಿತು.

★ ★ ★ ★

ಮೂವತ್ತೆಂಟನೆಯ ಅಧ್ಯಾಯ

(ಭೀಷ್ಮರಿಂದ ವರಾಹ ನರಸಿಂಹಾವತಾರಗಳ ವರ್ಣನೆ.)

ಭೀಷ್ಮಃ

ಪ್ರಾದುರ್ಭಾವಸಹಸ್ರಾಣಿ ಸಮತೀತಾನ್ಯನೇಕಶಃ ।
ಯಥಾಶಕ್ತಿ ತು ವಕ್ಷ್ಯಾಮಿ ಶೃಣು ತಾನ್ ಕುರುನಂದನ ॥೧॥

ಎಲೈ ಕುರುನಂದನನೇ! ಈ ಕೃಷ್ಣನಿಗೆ ಅನೇಕಸಹಸ್ರ ಅವತಾರಗಳು ಕಳೆದುಹೋಗಿದೆ. ನನ್ನ ಶಕ್ತಿಯಿದ್ದಷ್ಟು ಹೇಳುವೆನು. ನೀನು ಅವುಗಳನ್ನು ಕೇಳು.

ಪುರಾ ಕಮಲನಾಭಸ್ಯ ಸ್ವಪತಃ ಸಾಗರಾಂಭಸಿ ।
ಪುಷ್ಕರೇ ಯತ್ರ ಸಂಭೂತಾ ದೇವಾ ಋಷಿಗಣೈಃ ಸಹ ॥೨॥

ಹಿಂದೆ ಪ್ರಳಯೋದಕದಲ್ಲಿ ಮಲಗಿದ ಪದ್ಮನಾಭನ ಉದರದಿಂದ ಜನಿಸಿದ ಕಮಲದಲ್ಲಿ ದೇವತೆಗಳು ಮತ್ತು ಋಷಿಗಳು ಜನಿಸಿದರು.

ಏಷ ಪೌಷ್ಕರಿಕೋ ನಾಮ ಪ್ರಾದುರ್ಭಾವಃ ಪ್ರಕೀರ್ತಿತಃ ।
ಪುರಾಣಃ ಕಥ್ಯತೇ ಯತ್ರ ದೇವೈಃ ಶ್ರುತಿಸಮಾಹಿತಃ ॥೩॥

ಈ ಪದ್ಮನಾಭ ಪ್ರಾದುರ್ಭಾವವನ್ನು ಪುಷ್ಪರಸಂಬಂಧಿ ಪ್ರಾದುರ್ಭಾವ ಎಂದು ಕರೆಯುತ್ತಾರೆ. ಇದು ಬಹಳ ಪ್ರಾಚೀನವಾದುದು ಮತ್ತು ದೇವತೆಗಳಿಂದಲೂ ಶ್ರುತಿಗಳಿಂದಲೂ ಹೇಳಲ್ಪಟ್ಟಿದುದು.

ವಾರಾಹಸ್ತು ಶ್ರುತಿಮುಖಃ ಪ್ರಾದುರ್ಭಾವೋ ಮಹಾತ್ಮನಃ ।
ಯತ್ರ ವಿಷ್ಣುಃ ಸುರಶ್ರೇಷ್ಠೋ ವಾರಾಹಂ ರೂಪಮಾಸ್ಥಿತಃ ।
ಉಜ್ಜಹಾರ ಮಹೀಂ ತೋಯಾತ್ ಸಶೈಲವನಕಾನನಾಮ್ ॥೪॥

ವರಾಹಾವತಾರವು ಆ ಮಹಾತ್ಮನ ಶ್ರುತಿಮುಖವಾದ ಪ್ರಾರ್ದುಭಾವ. ಆ ದೇವೋತ್ತಮನಾದ ವಿಷ್ಣುವು ವರಾಹ ಅವತಾರವನ್ನು ತೆಗೆದುಕೊಂಡು ಪರ್ವತಕಾನನಗಳಿಂದ ಕೂಡಿದ ಈ ಭೂಮಿಯನ್ನು ನೀರಿನಿಂದ ಮೇಲಕ್ಕೆ ಎತ್ತಿದನು.

ವೇದಸ್ಕಂಧೋ ಯೂಪದಂಷ್ಟ್ರಃ ಕ್ರತುದಂತಶ್ಚಿತೀಮುಖಃ ।
ಅಗ್ನಿಜಿಹ್ವೋ ದರ್ಭರೋಮಾ ಬ್ರಹ್ಮಶೀರ್ಷೋ ಮಹಾತಪಾಃ ॥೫॥

ಅಹೋರಾತ್ರೇಕ್ಷಣೋ ದಿವ್ಯೋ ವೇದಾಂಗಃ ಶ್ರುತಿಭೂಷಣಃ ।
ಆಜ್ಯನಾಸಃ ಸ್ರುವತುಂಡಃ ಸಾಮಘೋಷಸ್ವನೋ ಮಹಾನ್ ॥೬॥

ಧರ್ಮಸತ್ಯಮಯಃ ಶ್ರೀಮಾನ್ ಕರ್ಮವಿಕ್ರಮಸತ್ಕೃತಃ ।
ಪ್ರಾಯಶ್ಚಿತ್ತನಖೋ ಧೀರಃ ಪಶುಜಾನುರ್ಮಹಾವೃಷಃ ॥೭॥

ಔದ್ಗಾತ್ರಹೋಮಲಿಂಗೋಽಸೌ ಪಶುಬೀಜಮಹೌಷಧಿಃ ।
ಬಾಹ್ಯಾಂತರಾತ್ಮಾ ಮಂತ್ರಾಸ್ಥಿವಿಕೃತಃ ಸೌಮ್ಯದರ್ಶನಃ ॥೮॥

ವೇದಿಸ್ಕಂಧೋ ಹವಿರ್ಗಂಧೋ ಹವ್ಯಕವ್ಯಾದಿವೇಗವಾನ್ ।
ಪ್ರಾಗ್ವಂಶಕಾಯೋ ದ್ಯುತಿಮಾನ್ ನಾನಾದೀಕ್ಷಾಭಿರಾಚಿತಃ ॥೯॥

ದಕ್ಷಿಣಾಹೃದಯೋ ಯೋಗೀ ಮಹಾಸತ್ರಮಯೋ ಮಹಾನ್ ।
ಉಪಾಕರ್ಮೋಷ್ಮರುಚಕಃ ಪ್ರವರ್ಗ್ಯಾವರ್ತಭೂಷಣಃ ।
ಜಾಯಾಪತ್ನೀಸಹಾಯೋ ವೈ ಮಣಿಶೃಂಗ ಇವೋಚ್ಛ್ರಿತಃ ॥೧೦॥

ಆ ವರಾಹ ಅವತಾರವು ವೇದಸ್ಕಂದ ಉಳ್ಳದ್ದು. ಯೂಪದಂಷ್ಟ್ರವನ್ನು ಹೊಂದಿದ್ದಾಗಿಯೂ ದಂತದಲ್ಲಿ ಕ್ರತುವನ್ನು ಹೊಂದಿದ್ದಾಗಿಯೂ ಮುಖದಲ್ಲಿ ಚಿತಿಯನ್ನು ಹೊಂದಿದ್ದಾಗಿಯೂ ಜಿಹ್ವೆಯಲ್ಲಿ ಅಗ್ನಿಯನ್ನು ಹೊಂದಿದ್ದಾಗಿಯೂ ರೋಮಗಳಲ್ಲಿ ದರ್ಭೆಗಳನ್ನು ಹೊಂದಿದ್ದಾಗಿಯೂ ಶಿರಸ್ಸಿನಲ್ಲಿ ಮಹಾತಪಸ್ವಿಯಾದ ಬ್ರಹ್ಮನನ್ನು

ಹೊಂದಿದ್ದಾಗಿಯೂ ಕಣ್ಣುಗಳಲ್ಲಿ ಅಹೋರಾತ್ರಗಳನ್ನು ಹೊಂದಿದ್ದಾಗಿಯೂ, ದಿವ್ಯವಾಗಿದ್ದಾಗಿಯೂ' ವೇದಾಂಗಗಳನ್ನೂ ಕರ್ಣ ಭೂಷಣಗಳುಳ್ಳದ್ದಾಗಿಯೂ ನಾಸಿಕೆಯಲ್ಲಿ ಆಜ್ಯವನ್ನು ಉಳ್ಳದ್ದಾಗಿಯೂ ತುಂಡದಲ್ಲಿ ಸ್ರುವವನ್ನು ಉಳ್ಳದ್ದಾಗಿಯೂ ತನ್ನ ಧ್ವನಿಯಲ್ಲಿ ಸಾಮಘೋಷವುಳ್ಳದ್ದಾಗಿಯೂ ಧರ್ಮಸತ್ಯಾತ್ಮಕವಾಗಿಯೂ ಸಂಪದ್ಯುಕ್ತವಾಗಿಯೂ ಕರ್ಮವಿಕ್ರಮ ಸಂಯುಕ್ತವಾಗಿಯೂ ಸಖಿಗಳಲ್ಲಿ ಪ್ರಾಯಶ್ಚಿತ್ತವನ್ನು ಉಳ್ಳದ್ದಾಗಿಯೂ ಜಾನುಗಳಲ್ಲಿ ಪಶುಗಳನ್ನು ಉಳ್ಳದ್ದಾಗಿಯೂ ಸರ್ವೋತ್ತಮವಾಗಿಯೂ ಇದ್ದಿತು. ಆ ವರಾಹನು ಔದ್ಗಾತ್ರಹೋಮಲಿಂಗಗಳಿಂದಲೂ ಪಶುರೂಪವಾದ ಬೀಜಮಹೌಷಧಿಗಳನ್ನು ಹೊಂದಿದ್ದಾಗಿಯೂ ಅಂತರ್ಬಹಿರ್ವ್ಯಾಪ್ತವಾಗಿಯೂ ಅಸ್ಥಿವಿಕಾರಗಳಲ್ಲಿ ಮಂತ್ರಗಳನ್ನು ಹೊಂದಿದ್ದಾಗಿಯೂ ಸೌಮ್ಯದರ್ಶನವುಳ್ಳದ್ದಾಗಿಯೂ ಸ್ಕಂಧದಲ್ಲಿ ವೇದಿಯನ್ನು ಉಳ್ಳದ್ದಾಗಿಯೂ ಗಂಧದಲ್ಲಿ ಹವಿಸ್ಸನ್ನು ಉಳ್ಳದ್ದಾಗಿಯೂ ಹವ್ಯಕವ್ಯಾದಿವೇಗವನ್ನು ಉಳ್ಳದ್ದಾಗಿಯೂ ದೇಹದಲ್ಲಿ ಪ್ರಾಗ್‌ವಂಶವನ್ನೂ ಕಾಂತಿಯನ್ನೂ ಮತ್ತು ನಾನಾ ದೀಕ್ಷೆಗಳನ್ನೂ ಉಳ್ಳದ್ದಾಗಿಯೂ ಹೃದಯದಲ್ಲಿ ದಕ್ಷಿಣೆಯನ್ನು ಉಳ್ಳದ್ದಾಗಿಯೂ ಮಹಾಸತ್ರಮಯವಾದ ಮಹಾಕೃತಿಯನ್ನು ಉಳ್ಳದ್ದಾಗಿಯೂ ಓಷ್ಮಕಾಂತಿಯಲ್ಲಿ ಉಪಾಕರ್ಮವನ್ನು ಉಳ್ಳದ್ದಾಗಿಯೂ ನಾಭಿಯಲ್ಲಿ ಪ್ರವರ್ಗವನ್ನು ಉಳ್ಳದ್ದಾಗಿಯೂ ಪತ್ನಿಯಾದ ಧರಾಸಹಿತನಾಗಿ ಮಣಿಶೃಂಗದಂತೆ ಎತ್ತರವಾಗಿದ್ದಿತು. (ಯಜ್ಞವರಾಹನ ಆಯಾ ಅಂಗಗಳಿಂದ ಯಜ್ಞಾಂಗಗಳಿಗೆ ಅಭಿಮಾನಿಗಳಾದ ಆಯಾ ದೇವತೆಗಳು ಮತ್ತು ಆಯಾ ಯಜ್ಞಾಂಗಗಳು ಜನಿಸಿದವು ಎಂದು ತಾತ್ಪರ್ಯ.)

ಏವಂ ಯಜ್ಞವರಾಹೋ ವೈ ಭೂತ್ವಾ ವಿಷ್ಣುಃ ಸನಾತನಃ ।
ಮಹೀಂ ಸಾಗರಪರ್ಯಂತಾಂ ಸಶೈಲವನಕಾನನಾಮ್ ॥೧೧॥

ಏಕಾರ್ಣವಜಲೇ ಭ್ರಷ್ಟಾಮೇಕಾರ್ಣವಗತಃ ಪ್ರಭುಃ ।
ಮಜ್ಜಿತಾಂ ಸಲಿಲೇ ತಸ್ಮಿನ್ ಸ್ವದೇವೀಂ ದಯಿತಾಂ ತದಾ ।
ಉಜ್ಜಹಾರ ವಿಷಾಣೇನ ಮಾರ್ಕಂಡೇಯಸ್ಯ ಪಶ್ಯತಃ ॥೧೨॥

ಹೀಗೆ ಸನಾತನನಾದ ವಿಷ್ಣುವು ಯಜ್ಞವರಾಹನಾಗಿ ಏಕಾರ್ಣವದಲ್ಲಿ ದಿಕ್ಕುತಪ್ಪಿದ ವನಪರ್ವತಸಹಿತವಾದ ಸಾಗರಪರ್ಯಂತವಾದ ಈ ಭೂಮಿಯನ್ನು ಎತ್ತಿದನು.

ಪ್ರಭುವಾದ ನಾರಾಯಣನು ತನ್ನ ಪತ್ನಿಯಾದ ಪ್ರಿಯಳಾದ ನೀರಿನಲ್ಲಿ ಮುಳುಗಿಹೋದ ಭೂದೇವಿಯನ್ನು ಮಾರ್ಕಂಡೇಯರು ನೋಡುತ್ತಿರುವಂತೆಯೇ ತನ್ನ ವಿಷಾಣದಿಂದ (ಕೊರೆದಾಡೆ) ಮೇಲೆಕ್ಕೆತ್ತಿದನು.

ಶೃಂಗೇಣೇಮಾಂ ಸಮುದ್ಧೃತ್ಯ ಲೋಕಾನಾಂ ಹಿತಕಾಮ್ಯಯಾ ।
ಸಹಸ್ರಶೀರ್ಷೋ ದೇವೋ ಹಿ ನಿರ್ಮಮೇ ಜಗತೀಂ ಪ್ರಭುಃ ॥೧೩॥

ಪ್ರಭುವಾದ ಸಹಸ್ರಶೀರ್ಷನಾದ ಆ ದೇವನು ತನ್ನ ಶೃಂಗದಿಂದ ಭೂಮಿಯನ್ನು ಮೇಲೆಕ್ಕೆತ್ತಿ ಲೋಕಗಳಿಗೆ ಹಿತವನ್ನು ಉಂಟುಮಾಡುವ ದೃಷ್ಟಿಯಿಂದ ಜಗತ್ತನ್ನು ನಿರ್ಮಾಣಮಾಡಿದನು.

ಏವಂ ಯಜ್ಞವರಾಹೇಣ ಭೂತಭವ್ಯಭವಾತ್ಮನಾ ।
ಉದ್ಧೃತಾ ಪೃಥಿವೀ ದೇವೀ ಸಾಗರಾಂಬುಧರಾ ಪುರಾ ।
ನಿಹತಾ ದಾನವಾಃ ಸರ್ವೇ ದೇವದೇವೇನ ವಿಷ್ಣುನಾ ॥೧೪॥

ಹೀಗೆ ಭೂತಭವ್ಯಭವತ್ಪ್ರಭುವಾದ ಯಜ್ಞವರಾಹನು ಹಿಂದೆ ಸಾಗರಪರ್ಯಂತವಾದ ಭೂಮಿಯನ್ನು ಮೇಲೆಕ್ಕೆತ್ತಿ ದೇವದೇವನಾದ ಅವನು ಎಲ್ಲ ದಾನವರನ್ನೂ ಸಂಹರಿಸಿದನು.

ವಾರಾಹಃ ಕಥಿತೋ ಹ್ಯೇಷ ನಾರಸಿಂಹಮಥೋ ಶೃಣು ।
ಯತ್ರ ಭೂತ್ವಾ ಮೃಗೇಂದ್ರೇಣ ಹಿರಣ್ಯಕಶಿಪುರ್ಹತಃ ॥೧೫॥

ಈ ವರಾಹಾವತಾರವನ್ನು ಹೇಳಿದೆನು. ಇನ್ನು ನರಸಿಂಹಾವತಾರವನ್ನು ಕೇಳು. ಅಲ್ಲಿ ವಿಷ್ಣುವು ಮೃಗೇಂದ್ರರೂಪವನ್ನು ಧರಿಸಿ ಹಿರಣ್ಯಕಶ್ಯಿಪುವನ್ನು ಸಂಹರಿಸಿದನು.

ದೈತ್ಯೇಂದ್ರೋ ಬಲವಾನ್ ರಾಜನ್ ಸುರಾರಿರ್ಬಲಗರ್ವಿತಃ ।
ಹಿರಣ್ಯಕಶಿಪುರ್ನಾಮ ಆಸೀತ್ ತ್ರೈಲೋಕ್ಯಕಂಟಕಃ ॥೧೬॥

ಎಲೈ ರಾಜನೇ! ದೇವತೆಗಳಿಗೆ ಶತ್ರುವಾದ ತ್ರಿಲೋಕಕಂಟಕನಾದ ಬಲಿಷ್ಠನಾದ ಮತ್ತು ಬಲಗರ್ವಿತನಾದ ಹಿರಣ್ಯಕಶ್ಯಿಪು ಎಂಬ ದೈತ್ಯೇಂದ್ರನು ಇದ್ದನು.

ದೈತ್ಯಾನಾಮಾದಿಪುರುಷೋ ವೀರ್ಯೇಣಾಪ್ರತಿಮೋ ಬಲೀ ।
ಪ್ರವಿಶ್ಯ ಸ ವನಂ ರಾಜನ್ ಚಕಾರ ತಪ ಉತ್ತಮಮ್ ॥೧೭॥

ಅವನು ದೈತ್ಯರಿಗೆ ಮೂಲಪುರುಷನಾದವನು. ಬಲಪರಾಕ್ರಮದಲ್ಲಿ ಅಸದೃಶನಾದವನು. ರಾಜನೇ! ಅವನು ವನಕ್ಕೆ ಹೋಗಿ ಶ್ರೇಷ್ಠವಾದ ತಪಸ್ಸನ್ನು ಆಚರಿಸಿದನು.

ದಶವರ್ಷಸಹಸ್ರಾಣಿ ಶತಾನಿ ದಶ ಪಂಚ ಚ ।
ಜಪೋಪವಾಸೈಸ್ತಸ್ಯಾಸೀತ್ ಸ್ಥಾಣುರ್ಮೌನವ್ರತೋಽಭವತ್ ॥೧೮॥

ಹನ್ನೊಂದು ಸಾವಿರದ ಐನೂರು ವರ್ಷಗಳ ಕಾಲ ಅವನ ತಪಸ್ಸು ಜಪ ಉಪವಾಸಗಳಿಂದ ಕಳೆಯಿತು. ಅವನು ಮರದಬುಡದಂತೆ ಮೌನವ್ರತವನ್ನು ಧರಿಸಿದ್ದನು.

ತತೋ ದಮಶಮಾಭ್ಯಾಂ ಚ ಬ್ರಹ್ಮಚರ್ಯೇಣ ಚಾನಘ ।
ಬ್ರಹ್ಮಾ ಪ್ರೀತಮನಾಸ್ತಸ್ಯ ತಪಸಾ ನಿಯಮೇನ ಚ ॥೧೯॥

ಆಗ ಎಲೈ ನಿರ್ದೋಷನಾದ ರಾಜನೇ! ಅವನ ಬ್ರಹ್ಮಚರ್ಯದಿಂದಲೂ ಶಮದಮಾದಿಗಳಿಂದಲೂ ತಪಸ್ಸು ಮತ್ತು ನಿಯಮಗಳಿಂದಲೂ ಬ್ರಹ್ಮದೇವರು ಅವನಿಗೆ ಪ್ರಸನ್ನರಾದರು.

ತತಃ ಸ್ವಯಂಭೂರ್ಭಗವಾನ್ ಸ್ವಯಮಾಗಮ್ಯ ಭೂಪತೇ ।
ವಿಮಾನೇನಾರ್ಕವರ್ಣೇನ ಹಂಸಯುಕ್ತೇನ ಭಾಸ್ವತಾ ॥೨೦॥

ಆದಿತ್ಯೈರ್ವಸುಭಿಃ ಸಾಧ್ಯೈರ್ಮರುದ್ಭಿರ್ದೈವತೈಃ ಸಹ ।
ರುದ್ರೈರ್ವಿಶ್ವಸಹಾಯೈಶ್ಚ ಯಕ್ಷರಾಕ್ಷಸಕಿನ್ನರೈಃ ॥೨೧॥

ದಿಶಾಭಿರ್ವಿದಿಶಾಭಿಶ್ಚ ನದೀಭಿಃ ಸಾಗರೈಃ ಸಹ ।
ನಕ್ಷತ್ರೈಶ್ಚ ಮೂಹೂರ್ತೈಶ್ಚ ಖೇಚರೈಶ್ಚಾಪರೈರ್ಗ್ರಹೈಃ ॥೨೨॥

ದೇವರ್ಷಿಭಿಸ್ತಪೋಯುಕ್ತೈಃ ಸಿದ್ಧೈಃ ಸಪ್ತರ್ಷಿಭಿಸ್ತಥಾ ।
ರಾಜರ್ಷಿಭಿಃ ಪುಣ್ಯತಮೈರ್ಗಂಧರ್ವೈರಪ್ಸರೋಗಣೈಃ ॥೨೩॥

ಚರಾಚರಗುರುಃ ಶ್ರೀಮಾನ್ ವೃತಃ ಸರ್ವೈಃ ಸುರೈಸ್ತಥಾ ।
ಬ್ರಹ್ಮಾ ಬ್ರಹ್ಮವಿದಾಂ ಶ್ರೇಷ್ಠೋ ದೈತ್ಯಮಾಗಮ್ಯ ಚಾಬ್ರವೀತ್ ॥೨೪॥

ಎಲೈರಾಜನೇ! ಅನಂತರ ಸಾಕ್ಷಾತ್ ದೇವರಿಂದ ಜನಿಸಿದ ಪೂಜ್ಯರಾದ ಬ್ರಹ್ಮದೇವರ ಹಂಸಯುಕ್ತವಾದ ಶುಭ್ರವಾದ ಸೂರ್ಯವರ್ಣವನ್ನು ಹೊಂದಿದ್ದ ವಿಮಾನದಲ್ಲಿ ಆದಿತ್ಯರಿಂದಲೂ ವಸುಗಳಿಂದಲೂ ಸಾಧ್ಯರಿಂದಲೂ ಮರುತ್‌ಗಳಿಂದಲೂ ರುದ್ರರಿಂದಲೂ ವಿಶ್ವೇದೇವತೆಗಳಿಂದಲೂ ಯಕ್ಷರಾಕ್ಷಸಕಿನ್ನರರಿಂದಲೂ ದಿಗ್‌ದೇವತೆಗಳಿಂದಲೂ ವಿದಿಗ್‌ದೇವತೆಗಳಿಂದಲೂ ನದಿಗಳಿಂದಲೂ ಸಾಗರಗಳಿಂದಲೂ ನಕ್ಷತ್ರಗಳಿಂದಲೂ ಮೂಹೂರ್ತಗಳಿಂದಲೂ ಖೇಚರರಿಂದಲೂ ಉಳಿದ ಗ್ರಹಗಳಿಂದಲೂ, ತಪೋಯುಕ್ತರಾದ ದೇವರ್ಷಿಗಳಿಂದಲೂ ಪುಣ್ಯತಮ ರಾಜರ್ಷಿಗಳಿಂದಲೂ ಅಪ್ಸರೋಗಣಗಳಿಂದಲೂ ಮತ್ತು ಉಳಿದ ಎಲ್ಲಾ ದೇವತೆಗಳಿಂದಲೂ ಯುಕ್ತರಾಗಿ ಚರಾಚರಗುರುವೂ ಸಂಪತ್ತುದ್ಯುಕ್ತರೂ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರೂ ಆದ ಅವರು ಆ ದೈತ್ಯನ ಸಮೀಪಕ್ಕೆ ಬಂದು ಹೀಗೆ ಮಾತನಾಡಿದರು.

ಪ್ರೀತೋಸ್ಮಿ ತವ ಭಕ್ತಸ್ಯ ತಪಸಾಽನೇನ ಸುವ್ರತ ।
ವರಂ ವರಯ ಭದ್ರಂ ತೇ ಯಥೇಷ್ಟಂ ಕಾಮಮಾಪ್ನುಹಿ ॥೨೫॥

ಎಲೈ ಸುವ್ರತನೇ! ಭಕ್ತನಾದ ನಿನ್ನ ತಪಸ್ಸಿಗೆ ನಾನು ಮೆಚ್ಚಿದ್ದೇನೆ. ನಿನಗೆ ಮಂಗಳವಾಗಲಿ ಬೇಕಾದ ವರವನ್ನು ಕೇಳು. ನನ್ನಿಂದ ಬೇಕಾದ ಕಾಮವನ್ನು ಪಡೆ.

ನ ದೇವಾಸುರಗಂಧರ್ವಾ ನ ಯಕ್ಷೋರಗರಾಕ್ಷಸಾಃ ।
ನ ಮಾನುಷಾಃ ಪಿಶಾಚಾಶ್ಚ ಹನ್ಯುರ್ಮಾಂ ದೇವಸತ್ತಮ ॥೨೬॥

ಋಷಯೋ ವಾ ನ ಮಾಂ ಶಾಪೈಃ ಕ್ರುದ್ಧಾ ಲೋಕಪಿತಾಮಹ ।
ಶಪೇಯುಸ್ತಪಸಾ ಯುಕ್ತಾ ವರ ಏಷ ವೃತೋ ಮಯಾ ॥೨೭॥

ನ ಶಸ್ತ್ರೇಣ ನಚಾಸ್ತ್ರೇಣ ಗಿರಿಣಾ ಪಾದಪೇನ ವಾ ।
ನ ಶುಷ್ಕೇಣ ನ ಚಾರ್ದ್ರೇಣ ಸ್ಯಾನ್ನ ವಾಽನ್ಯೇನ ಮೇ ವಧಃ ॥೨೮॥

ನಾಕಾಶೇ ವಾ ನವಾ ಭೂಮೌ ರಾತ್ರೌ ವಾ ದಿವಸೇಪಿ ವಾ ।
ನಾಂತರ್ವಾ ನ ಬಹಿರ್ವಾಪಿ ಸ್ಯಾದ್ ವಧೋ ಮೇ ಪಿತಾಮಹ ॥೨೯॥

ಪಶುಭಿರ್ವಾ ಮೃಗೈರ್ನ ಸ್ಯಾತ್ ಪಕ್ಷಿಭಿರ್ವಾ ಸರೀಸೃಪೈಃ ।
ದದಾಸಿ ಚೇದ್ ವರಾನೇತಾನ್ ದೇವದೇವ ವೃಣೋಮ್ಯಹಮ್ ॥೩೦॥

ಎಲೈ ದೇವಶ್ರೇಷ್ಠನೇ! ದೇವಾಸುರಗಂಧರ್ವರಾಗಲೀ ಯಕ್ಷರಾಕ್ಷಸಸರ್ಪಗಳಾಗಲೀ ಮನುಷ್ಯಪಿಶಾಚಗಳಾಗಲೀ ನನ್ನನ್ನು ಕೊಲ್ಲಬಾರದು. ಲೋಕಪಿತಾಮಹನೇ! ಕ್ರುದ್ಧರಾದ ತಪೋಯುಕ್ತರಾದ ಋಷಿಗಳು ನನಗೆ ಶಾಪವನ್ನು ಕೊಡಬಾರದು. ಇದು ನಾನು ಬೇಡುವ ವ್ರತ. ಅಸ್ತ್ರದಿಂದಲಾಗಲೀ ಶಸ್ತ್ರದಿಂದಲಾಗಲೀ ಪರ್ವತದಿಂದಲಾಗಲೀ ವೃಕ್ಷದಿಂದಲಾಗಲೀ ನನಗೆ ಮರಣವು ಉಂಟಾಗಬಾರದು. ಆಕಾಶದಲ್ಲಿಯಾಗಲೀ ಭೂಮಿಯಲ್ಲಿಯಾಗಲೀ ರಾತ್ರಿಯಲ್ಲಾಗಲೀ ಹಗಲಿನಲ್ಲಾಯಾಗಲೀ ಒಳಗಾಗಲೀ ಹೊರಗಾಗಲೀ ನನಗೆ ಮರಣವು ಉಂಟಾಗಬಾರದು. ಎಲೈ ಪಿತಾಮಹನೇ! ಪಶುಗಳಿಂದಲಾಗಲೀ ಮೃಗಗಳಿಂದಲಾಗಲೀ ಪಕ್ಷಿಗಳಿಂದಲಾಗಲೀ ಸರ್ಪಗಳಿಂದಲಾಗಲೀ ನನಗೆ ಮೃತ್ಯು ಉಂಟಾಗಬಾರದು. ದೇವದೇವನೆ ನೀನು ನನಗೆ ವರವನ್ನು ಕೊಡುವುದಾದರೆ ನಾನು ಈ ವರಗಳನ್ನು ಬೇಡುತ್ತೇನೆ.

ಬ್ರಹ್ಮಾ

ಏತೇ ದಿವ್ಯಾ ವರಾಸ್ತಾತ ಮಯಾ ದತ್ತಾಸ್ತವಾದ್ಭುತಾಃ ।
ಸರ್ವಕಾಮವರಾಂಸ್ತಾತ ಪ್ರಾಪ್ಸ್ಯಸೇ ತ್ವಂ ನ ಸಂಶಯಃ ॥೩೧॥

ಪ್ರೀತಿಪಾತ್ರನೇ! ಈ ಅದ್ಭುತವಾದ ಮತ್ತು ದಿವ್ಯವಾದ ವರಗಳನ್ನು ನಾನು ನಿನಗೆ ಕೊಟ್ಟಿದ್ದೇನೆ. ನೀನು ಎಲ್ಲಾ ಭೋಗಗಳನ್ನು ಅನುಭವಿಸುವಿ. ಇದರಲ್ಲಿ ಸಂಶಯವಿಲ್ಲ.

ಏವಮುಕ್ತ್ವಾ ಸ ಭಗವಾನ್ ಜಗಾಮಾಕಾಶಮೇವ ಹ ।
ರರಾಜ ಬ್ರಹ್ಮಲೋಕಸ್ಥೋ ಬ್ರಹ್ಮರ್ಷಿಗಣಸೇವಿತಃ ॥೩೨॥

ಹೀಗೆ ಹೇಳಿ ಆ ಪೂಜ್ಯರಾದ ಬ್ರಹ್ಮದೇವರು ಆಕಾಶಮಾರ್ಗದಿಂದ ಪ್ರಯಾಣಮಾಡಿ ಬ್ರಹ್ಮರ್ಷಿಗಣ ಸೇವಿತರಾಗಿ ಬ್ರಹ್ಮಲೋಕದಲ್ಲಿ ವಿರಾಜಿಸಿದರು.

ತತೋ ದೇವಾಶ್ಚ ನಾಗಾಶ್ಚ ಗಂಧರ್ವಾ ಮುನಯಸ್ತಥಾ ।
ವರಪ್ರದಾನಂ ಶ್ರುತ್ವೈವ ತೇ ಬ್ರಹ್ಮಾಣಮುಪಸ್ಥಿತಾಃ ॥೩೩॥

ಅನಂತರ ದೇವತೆಗಳೂ ನಾಗಗಳೂ ಗಂಧರ್ವರೂ ಋಷಿಗಳೂ ಆ ವರಪ್ರದಾನವನ್ನು ಕೇಳಿ ಬ್ರಹ್ಮದೇವರ ಸಮೀಪಕ್ಕೆ ಹೋದರು.

ದೇವಾಃ

ವರೇಣಾನೇನ ಭಗವನ್ ಬಾಧಿಷ್ಯತಿ ಚ ನೋಽಸುರಃ ।
ತತ್ ಪ್ರಸೀದಸ್ವ ಭಗವನ್ ವಧೋಽಸ್ಯ ಪ್ರವಿಚಿಂತ್ಯತಾಮ್ ॥೩೪॥

ಪೂಜ್ಯರೇ! ಈ ವರದಿಂದ ಆ ಅಸುರನು ನಮ್ಮೆಲ್ಲರನ್ನೂ ಬಾಧಿಸುತ್ತಾನೆ. ಪೂಜ್ಯರೇ! ನಮ್ಮ ಮೇಲೆ ಪ್ರಸನ್ನರಾಗಿ ಅವನ ವಧೋಪಾಯವನ್ನು ಚಿಂತಿಸಿ.

ಭೀಷ್ಮಃ

ಭಗವಾನ್ ಸರ್ವಭೂತಾನಾಂ ಸ್ವಯಂಭೂರಾದಿಕೃದ್ ವಿಭುಃ ।
ಸೃಷ್ಟ್ವಾ ಚ ಹವ್ಯಕವ್ಯಾನಾಮವ್ಯಕ್ತಪ್ರಕೃತಿರ್ಧ್ರುವಮ್ ॥೩೫॥

ತತೋ ಲೋಕಹಿತಂ ವಾಕ್ಯಂ ಶ್ರುತ್ವಾ ದೇವಃ ಪ್ರಜಾಪತಿಃ ।
ಪ್ರೋವಾಚ ಭಗವಾನ್ ವಾಕ್ಯಂ ಸರ್ವದೇವಗಣಾಂಸ್ತದಾ ॥೩೬॥

ಪೂಜ್ಯನೂ ಎಲ್ಲಾ ಪ್ರಾಣಿಗಳ ಸೃಷ್ಟಿಕರ್ತನೂ ಪರಮಾತ್ಮನಿಂದ ಜನಿಸಿದವನೂ. ಹವ್ಯಕವ್ಯಾದಿಗಳನ್ನು ಸೃಷ್ಟಿಸುವವನೂ ಅವ್ಯಕ್ತದಿಂದ ಜನಿಸಿದವನೂ ಶಾಶ್ವತನೂ ಪ್ರಜಾಪತಿಯೂ ಆದ ಬ್ರಹ್ಮನು ಲೋಕಹಿತಕರವಾದ ಈ ವಾಕ್ಯವನ್ನು ಕೇಳಿ ಎಲ್ಲಾ ದೇವಗಣಗಳನ್ನು ಕುರಿತು ಹೀಗೆ ಮಾತನಾಡಿದನು.

ಅವಶ್ಯಂ ತ್ರಿದಶಾಸ್ತೇನ ಪ್ರಾಪ್ತವ್ಯಂ ತಪಸಃ ಫಮ್ ।
ತಪಸೋಽಂತೇಸ್ಯ ಭಗವಾನ್ ವಧಂ ಕೃಷ್ಣಃ ಕರಿಷ್ಯತಿ ॥೩೭॥

ಎಲೈ ದೇವತೆಗಳೇ! ಹಿರಣ್ಯಕಶ್ಯಪುವು ಅವಶ್ಯವಾಗಿ ತನ್ನ ತಪಸ್ಸಿನ ಫಲವನ್ನು ಪಡೆಯಲೇಬೇಕು. ಅವನ ತಪಸ್ಸಿನ ಫಲವು ಮುಗಿದ ಮೇಲೆ ಭಗವಂತನಾದ ಕೃಷ್ಣನು ಅವನನ್ನು ಸಂಹರಿಸುವನು.

ಏತಚ್ಛ್ರುತ್ವಾ ಸುರಾಃ ಸರ್ವೇ ಬ್ರಹ್ಮಣಾ ತಸ್ಯ ವೈ ವಧಮ್ ।
ಸ್ವಾನಿ ಸ್ಥಾನಾನಿ ದಿವ್ಯಾನಿ ಜಗ್ಮುಸ್ತೇ ವೈ ಮುದಾನ್ವಿತಾಃ ॥೩೮॥

ಎಲ್ಲ ದೇವತೆಗಳೂ ಬ್ರಹ್ಮದೇವರಿಂದ ಅವನ ವಧೆಯ ವಿಷಯದಲ್ಲಿ ಈ ಮಾತನ್ನು ಕೇಳಿ ಸಂತೋಷಗೊಂಡವರಾಗಿ ತಮ್ಮ ತಮ್ಮ ದಿವ್ಯಸ್ಥಾನಗಳನ್ನು ಕುರಿತು ಪ್ರಯಾಣ ಮಾಡಿದರು.

ಲಬ್ಧಮಾತ್ರೇ ವರೇ ಚಾಪಿ ಸರ್ವಾಃ ಸೋಽಬಾಧತ ಪ್ರಜಾಃ ।
ಹಿರಣ್ಯಕಶಿಪುರ್ದೈತ್ಯೋ ವರದಾನೇನ ದರ್ಪಿತಃ ॥೩೯॥

ವರವನ್ನು ಪಡೆದ ಕೂಡಲೇ ವರದಾನದಿಂದ ದರ್ಪವನ್ನು ಹೊಂದಿದ ದೈತ್ಯನಾದ ಹಿರಣ್ಯಕಶ್ಯಿಪುವು. ಎಲ್ಲಾ ಪ್ರಜೆಗಳನ್ನೂ ಬಾಧಿಸಿದನು.

ರಾಜ್ಯಂ ಚಕಾರ ದೈತ್ಯೇಂದ್ರೋ ದೈತ್ಯಸಂಘೈಃ ಸಮಾವೃತಃ ।
ಸಪ್ತ ದ್ವೀಪಾನ್ ವಶೇ ಚಕ್ರೇ ಲೋಕಾನ್ ಲೋಕಾಂತರಾನ್ ಬಲಾತ್॥೪೦॥

ದಿವ್ಯಭೋಗಾನ್ ಸಮಸ್ತಾನ್ ವೈ ಲೋಕೇ ಸರ್ವಾನವಾಪ ಸಃ ।
ದೇವಾಸ್ತ್ರಿಭುವನಸ್ಥಾಂಸ್ತು ಪರಾಜಿತ್ಯ ಮಹಾಸುರಃ ॥೪೧॥

ದೈತ್ಯೇಂದ್ರನಾದ ಅವನು ದೈತ್ಯಸಮೂಹಗಳಿಂದ ಯುಕ್ತನಾಗಿ ರಾಜ್ಯವನ್ನು ನಡೆಸಿದನು. ಏಳು ದ್ವೀಪಗಳನ್ನು ಲೋಕಗಳನ್ನು ಮತ್ತು ಲೋಕಾಂತರಗಳನ್ನು ತನ್ನ ಬಲದಿಂದ ವಶಪಡಿಸಿಕೊಂಡನು. ಮಹಾಸುರನಾದ ಅವನು ಮೂರು ಲೋಕಗಳಲ್ಲಿದ್ದ ದೇವತೆಗಳನ್ನು ಪರಾಭವಗೊಳಿಸಿ ದಿವ್ಯವಾದ ಎಲ್ಲಾ ಭೋಗಗಳನ್ನು ಪಡೆದನು.

ತ್ರೈಲೋಕ್ಯಂ ವಶಮಾನೀಯ ಸ್ವರ್ಗೇ ವಸತಿ ದಾನವಃ ।
ಯದಾ ವರಮದೋನ್ಮತ್ತೋ ನ್ಯವಸದ್ ದಾನವೋ ದಿವಿ ॥೪೨॥

ಮೂರು ಲೋಕಗಳನ್ನು ವಶಪಡಿಸಿಕೊಂಡು ಆ ದಾನವನು ಸ್ವರ್ಗಲೋಕದಲ್ಲಿ ವಾಸಮಾಡಿದನು. ಹೀಗೆ ವರದಿಂದ ಮದೋನ್ಮತ್ತನಾದ ಕಾರಣ ಆ ದಾನವನು ಸ್ವರ್ಗಲೋಕದಲ್ಲಿ (ಇಂದ್ರನ ಅರಮನೆಯಲ್ಲಿ) ವಾಸಮಾಡಿದನು.

ಅಥ ಲೋಕಾನ್ ಸಮಸ್ತಾಂಶ್ಚ ವಿಜಿತ್ಯ ಸ ಮಹಾಬಲಃ ।
ಭವೇಯಮಹಮೇವೇಂದ್ರಃ ಸೋಮೋಗ್ನಿರ್ಮಾರುತೋ ರವಿಃ ॥೪೩॥

ಸಲಿಲಂ ಚಾಂತರಿಕ್ಷಂ ಚ ನಕ್ಷತ್ರಾಣಿ ದಿಶೋ ದಶ ।
ಅಹಂ ಕ್ರೋಧಶ್ಚ ಕಾಮಶ್ಚ ವರುಣೋ ವಸವೋ ಯಮಃ ॥೪೪॥

ಧನದಶ್ಚ ಧನಾಧ್ಯಕ್ಷೋ ಯಕ್ಷಃ ಕಿಂಪುರುಷಾಧಿಪಃ ।
ಏತೇ ಭವೇಯಮಿತ್ಯುಕ್ತ್ವಾ ಸ್ವಯಂ ಭೂತ್ವಾ ಬಲಾನ್ವಿತಃ ।
ತೇಷಾಂ ಗೃಹೀತ್ವಾ ಸ್ಥಾನಾನಿ ತೇಷಾಂ ಕಾರ್ಯಾಣ್ಯವಾಪ ಸಃ ॥೪೫॥

ಅನಂತರ ಮಹಾಬಲನಾದ ಅವನು ಎಲ್ಲಾ ಲೋಕಗಳನ್ನೂ ಗೆದ್ದು ನಾನೇ ಇಂದ್ರನಾಗುತ್ತೇನೆ. ಚಂದ್ರನಾಗುತ್ತೇನೆ. ಅಗ್ನಿ ಮಾರುತ ರವಿ ಜಲ ಅಂತರಿಕ್ಷ ನಕ್ಷತ್ರ ದಿಕ್ಕುಗಳು ಎಲ್ಲವೂ ಆಗುತ್ತೇನೆ. ಕ್ರೋಧ ಕಾಮ ವರುಣ ವಸುಗಳು ಯಮ ಧನಾಧ್ಯಕ್ಷನಾದ ಕುಬೇರ ಕಿಂಪುರುಷಾಧಿಪತಿಯಾದ ಯಕ್ಷ ಎಲ್ಲವೂ ನಾನೇ ಆಗುತ್ತೇನೆ ಎಂದು ತನ್ನ ತಪೋಬಲದಿಂದ ಎಲ್ಲಾ ಪದವಿಯನ್ನೂ ಆಕ್ರಮಿಸಿ, ಆ ದೇವತೆಗಳ ಸ್ಥಾನವನ್ನು ಕಸಿದುಕೊಂಡು ಅವರೆಲ್ಲರ ಕಾರ್ಯಸಾಮರ್ಥ್ಯವನ್ನು ತಾನೇ ಹೊಂದಿದನು.

ಏವಮಾದೀನಿ ಕರ್ಮಾಣಿ ಕೃತ್ವಾ ದೈತ್ಯಪತಿರ್ಬಲೀ ।
ಆಶ್ರಮೇಷು ಮಹಾಭಾಗಾನ್ ಮುನೀನ್ ವೈ ಸಂಶಿತವ್ರತಾನ್ ॥೪೬॥

ಸತ್ಯಧರ್ಮಪರಾನ್ ದಾಂತಾನ್ ಪುರಾ ಧರ್ಷಿತವಾನ್ ಸ್ಮ ಸಃ ।
ಯಜ್ಞೀಯಾನ್ ಕೃತವಾನ್ ದೈತ್ಯಾನ್ ನಯಜ್ಞೀಯಾಶ್ಚ ದೇವತಾಃ ॥೪೭॥

ಬಲಿಷ್ಠನಾದ ದೈತ್ಯಾಧಿಪತಿಯಾದ ಅವನು ಇಂತಹ ಕರ್ಮಗಳನ್ನೆಲ್ಲಾ ಮಾಡಿ ತಪೋವನದಲ್ಲಿ ಇದ್ದ ವ್ರತಧಾರಿಗಳಾದ ಸತ್ಯಧರ್ಮಪರಾಯಣರಾದ ಶ್ರಮದಮಾದಿಸಂಪನ್ನರಾದ ಮಹಾನುಭಾವರನ್ನು ಅವಮಾನಗೊಳಿಸಿದನು. ದೈತ್ಯರನ್ನು ಯಜ್ಞಭಾಗಾರ್ಹರನ್ನಾಗಿ ಮಾಡಿ ದೇವತೆಗಳನ್ನು ಯಜ್ಞಭಾಗದಿಂದ ಚ್ಯುತಿಗೊಳಿಸಿದನು.

ಯತ್ರ ಯತ್ರ ಸುರಾ ಜಗ್ಮುಃ ತತ್ರ ತತ್ರ ವ್ರಜತ್ಯುತ ।
ಸ್ಥಾನಾನಿ ದೇವತಾನಾಂ ತು ಹೃತ್ವಾ ರಾಜ್ಯಮಪಾಲಯತ್ ॥೪೮॥

ದೇವತೆಗಳು ಎಲೆಲ್ಲಿ ಹೋಗುತ್ತಾರೆಯೋ ಅಲ್ಲೆಲ್ಲಾ ಅವರನ್ನು ಹಿಂಬಾಲಿಸಿ ಅವರ ಸ್ಥಾನಗಳನ್ನು ಕಿತ್ತುಕೊಂಡು ರಾಜ್ಯವನ್ನು ಆಳಿದನು.

ಪಂಚಕೋಟ್ಯಶ್ಚ ವರ್ಷಾಣಿ ನಿಯುತಾನ್ಯೇಕಷಷ್ಟಿ ಚ ।
ಷಷ್ಟಿಶ್ಚೈವ ಸಹಸ್ರಾಣಾಂ ಜಗ್ಮುಸ್ತಸ್ಯ ದುರಾತ್ಮನಃ ।
ಏತದ್ವರ್ಷಂ ಸ ದೈತ್ಯೇಂದ್ರೋ ಭೋಗೈಶ್ವರ್ಯಮವಾಪ ಹ ॥೪೯॥

ಆ ದೈತ್ಯೇಂದ್ರನು ಐದುಕೋಟಿ ಅರವತ್ತೊಂದುಲಕ್ಷ ಅರವತ್ತುಸಾವಿರ ವರ್ಷಗಳ ಕಾಲದವರೆಗೆ ಹೀಗೆ ದುರಾತ್ಮನಾಗಿ ಎಲ್ಲಾ ಭೋಗೈಶ್ವರ್ಯವನ್ನೂ ಹೊಂದಿದನು.

ತೇನಾತಿಬಾಧ್ಯಮಾನಾಸ್ತೇ ದೈತ್ಯೇಂದ್ರೇಣ ಬಲೀಯಸಾ ।
ಬ್ರಹ್ಮಲೋಕಂ ಸುರಾ ಜಗ್ಮುಃ ಸರ್ವೇ ಶಕ್ರಪುರೋಗಮಾಃ ।
ಪಿತಾಮಹಂ ಸಮಾಸಾದ್ಯ ಖಿನ್ನಾಃ ಪ್ರಾಂಜಲಯೋಬ್ರುವನ್ ॥೫೦॥

ಹೀಗೆ ಪ್ರಭುಲನಾದ ಆ ದೈತ್ಯೇಂದ್ರನಿಂದ ಬಹಳ ಪೀಡೆಗೆ ಒಳಗಾದ ಇಂದ್ರನೇ ಮೊದಲಾದ ದೇವತೆಗಳೆಲ್ಲರೂ ಬ್ರಹ್ಮಲೋಕಕ್ಕೆ ಹೋಗಿ ಬ್ರಹ್ಮದೇವರನ್ನು ಸಮೀಪಿಸಿ ಕೈಗಳನ್ನು ಮುಗಿದು ಖೇದದಿಂದ ಈ ಮಾತುಗಳನ್ನು ಆಡಿದರು.

ಭಗವನ್ ಭೂತಭವ್ಯೇಶ ತ್ರಾಯಸ್ವ ನ ಇಹಾಗತಾನ್ ।
ಭಯಂ ದಿತಿಸುತಾದ್ ಘೋರಂ ಭವತ್ಯದ್ಯ ದಿವಾನಿಶಮ್ ॥೫೧॥

ಪೂಜ್ಯನಾದ ಭೂತ ಭವ್ಯ ಪ್ರಭುವಾದ ಬ್ರಹ್ಮನೇ ಇಲ್ಲಿಗೆ ಬಂದಿರುವ ನಮ್ಮನ್ನು ರಕ್ಷಿಸು. ನಮಗೆ ದಿತಿಯಮಗನಾದ ಹಿರಣ್ಯಪಶ್ಯಿಪುವಿನಿಂದ ಹಗಲೂ ರಾತ್ರಿಯೂ ಘೋರವಾದ ಭಯವುಂಟಾಗಿದೆ.

ಭಗವನ್ ಸರ್ವಭೂತಾನಾಂ ಸ್ವಯಂಭೂರಾದಿಕೃದ್ ವಿಭುಃ ।
ಸೃಷ್ಟಾ ತ್ವಂ ಹವ್ಯಕವ್ಯಾನಾಮವ್ಯಕ್ತಃ ಪ್ರಕೃತಿರ್ಧ್ರುವಃ ॥೫೨॥

ಪೂಜ್ಯನೇ! ನೀನು ಪರಮಾತ್ಮನಿಂದ ಜನಿಸಿದವನು. ಸೃಷ್ಟಿಯನ್ನು ಮಾಡುವವನು. ಸಾಮರ್ಥ್ಯವಿಶೇಷವನ್ನು ಹೊಂದಿರುವವನು. ಹವ್ಯಕವ್ಯಗಳನ್ನು ಸೃಷ್ಟಿಮಾಡುವವನು. ನೀನು ಅವ್ಯಕ್ತನಾದವನು. ಮೂಲಕಾರಣನಾದವನು. ಮತ್ತು ಶಾಶ್ವತನಾದವನು.

ಬ್ರಹ್ಮಾ

ಶ್ರೂಯತಾಂ ಪರಮಂ ದೈವಂ ದುರ್ವಿಜ್ಞೇಯಂ ಮಯಾಪಿ ಚ ।
ನಾರಾಯಣಸ್ತು ಪುರುಷೋ ವಿಶ್ವರೂಪೋ ಮಹಾದ್ಯುತಿಃ ॥೫೩॥

ಎಲ್ಲರೂ ನನ್ನ ಮಾತನ್ನು ಕೇಳಿ. ವಿಶ್ವರೂಪನಾದ ಮಹಾದ್ಯುತಿಯನ್ನು ಹೊಂದಿದ ಮಹಾಪುರುಷನಾದ ದೇವನಾದ ನಾರಾಯಣನು ನನಗೂ ತಿಳಿಯಲು ಅಸಾಧ್ಯನಾದವನು.

ಅವ್ಯಕ್ತಃ ಸರ್ವಭೂತಾನಾಮಚಿಂತ್ಯೋ ವಿಭುರವ್ಯಯಃ ।
ಮಮಾಪಿ ಸ ತು ಯುಷ್ಮಾಕಂ ವ್ಯಸನೇ ಪರಮಾ ಗತಿಃ ॥೫೪॥

ಅವನು ಎಲ್ಲಾ ಜೀವರಿಗೂ ಅವ್ಯಕ್ತವಾದ ಸ್ವಭಾವವುಳ್ಳವನು. ಅಚಿಂತ್ಯನಾದವನು. ವ್ಯಾಪ್ತನಾದವನು. ನಾಶರಹಿತನಾದವನು, ನಿಮಗೆ ಹೇಗೋ, ಹಾಗೆಯೇ ಎಲ್ಲಾ ರೀತಿಯವ್ಯಸನಗಳಲ್ಲಿ ನನಗೂ ಸಹ ಅವನೇ ಪರಮಗತಿಯಾದವನು.

ನಾರಾಯಣಃ ಪರೋಽವ್ಯಕ್ತಾದ್ ಅಹಮವ್ಯಕ್ತಸಂಭವಃ ।
ಮತ್ತೋ ಜಜ್ಞುಃ ಪ್ರಜಾ ಲೋಕಾಃ ಸರ್ವೇ ದೇವಾಸುರಾಶ್ಚ ತೇ ॥೫೫॥

ನಾರಾಯಣನು ಪ್ರಕೃತಿಗಿಂತ ಉತ್ತಮನಾದವನು. ನಾನು ಪ್ರಕೃತಿಯಿಂದ ಜನಿಸಿದವನು. ನನ್ನಿಂದ ಎಲ್ಲಾ ಪ್ರಜೆಗಳೂ ಲೋಕಗಳೂ ದೇವತೆಗಳೂ ಮತ್ತು ಆ ಅಸುರರೂ ಜನಿಸಿದ್ದಾರೆ.

ದೇವಾ ಯಥಾಹಂ ಯುಷ್ಮಾಕಂ ತಥಾ ನಾರಾಯಣೋ ಮಮ ।
ಪಿತಾಮಹೋಽಹಂ ಸರ್ವಸ್ಯ ಸ ವಿಷ್ಣುಃ ಪ್ರಪಿತಾಮಹಃ ॥೫೬॥

ದೇವತೆಗಳೇ! ನಾನು ನಿಮಗೆ ಹೇಗೋ ನನಗೆ ನಾರಾಯಣನು ಹಾಗೆ ಇದ್ದಾನೆ. ನಾನು ಎಲ್ಲ ಜಗತ್ತಿಗೆ ಪಿತಾಮಹ. ಆ ನಾರಾಯಣನು ಪ್ರಪಿತಾಮಹ.

ನಿಶ್ಚಯಂ ವಿಬುಧಾ ದೈತ್ಯಂ ವಿಷ್ಣುಸ್ತಂ ಸಂಹರಿಷ್ಯತಿ ।
ತಸ್ಯ ನಾಸ್ತಿ ನಶಕ್ಯಂ ಚ ತಸ್ಮಾದ್ ವ್ರಜತ ಮಾಚಿರಮ್ ॥೫೭॥

ಎಲೈ ವಿಬುಧರೇ! ನಿಶ್ಚಯವಾಗಿ ವಿಷ್ಣುವು ಆ ದೈತ್ಯನನ್ನು ಸಂಹರಿಸುವನು. ಅವನಿಗೆ ಅಸಾಧ್ಯವಾದುದು ಯಾವುದೂ ಇಲ್ಲ. ಆದ್ದರಿಂದ ಶೀಘ್ರವಾಗಿ ನಿಮ್ಮ ಸ್ಥಾನಗಳಿಗೆ ಹಿಂದಿರುಗಿ.

ಭೀಷ್ಮಃ

ಪಿತಾಮಹವಚಃ ಶ್ರುತ್ವಾ ಸರ್ವೇ ತೇ ಭರತರ್ಷಭ ।
ವಿಬುಧಾ ಬ್ರಹ್ಮಣಾ ಸಾರ್ಧಂ ಜಗ್ಮುಃ ಕ್ಷೀರೋದಧಿಂ ಪ್ರತಿ ॥೫೮॥

ಆದಿತ್ಯಾ ಮರುತಃ ಸಾಧ್ಯಾ ವಿಶ್ವೇ ಚ ವಸವಸ್ತದಾ ।
ರುದ್ರಾ ಮಹರ್ಷಯಶ್ಚೈವ ಅಶ್ವಿನೌ ಚ ಸುರೂಪಿಣೌ ॥೫೯॥

ಅನ್ಯೇ ಚ ದಿವ್ಯಾ ಯೇ ರಾಜನ್ ತೇ ಸರ್ವೇ ಸಗಣಾಃ ಸುರಾಃ ।
ಚತುರ್ಮುಖಂ ಪುರಸ್ಕೃತ್ಯ ಶ್ವೇತದ್ವೀಪಮುಪಾಗತಾಃ ॥೬೦॥

ಭರತರ್ಷಭನೇ! ಬ್ರಹ್ಮದೇವರಮಾತನ್ನು ಕೇಳಿ ಆ ಎಲ್ಲಾದೇವತೆಗಳು ಬ್ರಹ್ಮದೇವರ ಜೊತೆಯಲ್ಲಿ ಕ್ಷೀರಸಮುದ್ರಕ್ಕೆ ಹೋದರು. ಆದಿತ್ಯರು ಮರುತ್‌ಗಳು ಸಾಧ್ಯರು ವಿಶ್ವೇದೇವತೆಗಳು ವಸುಗಳು ರುದ್ರರು ರೂಪವಂತರಾದ ಅಶ್ವಿನಿದೇವತೆಗಳು ಮಹರ್ಷಿಗಳು ಉಳಿದ ಎಲ್ಲ ತಮ್ಮ ತಮ್ಮ ಗಣಗಳಿಂದ ಕೂಡಿದ ದಿವ್ಯಚೇತನರು ಚತುರ್ಮುಖನನ್ನು ಮುಂದೆಮಾಡಿಕೊಂಡು ಶ್ವೇತದ್ವೀಪವನ್ನು ತಲುಪಿದರು.

ಗತ್ವಾ ಕ್ಷೀರಸಮುದ್ರೇ ತಂ ಶಾಶ್ವತಂ ಪರಮಾಂ ಗತಿಮ್ ।
ಅನಂತಶಯನಂ ದೇವಮನಂತಾದಿತ್ಯತೇಜಸಮ್ ।
ಶರಣ್ಯಂ ತ್ರಿದಶಾ ವಿಷ್ಣುಮುಪತಸ್ಥುಃ ಸನಾತನಮ್ ॥೬೧॥

ಅವರೆಲ್ಲರೂ ಕ್ಷೀರಸಮುದ್ರಕ್ಕೆ ಹೋಗಿ ಅಲ್ಲಿ ಶೇಷನ ಮೇಲೆ ಪವಡಿಸಿರುವ ಅನಂತರ ಸೂರ್ಯತೇಜಸ್ಸುಳ್ಳ ಶಾಶ್ವತನಾದ ಪರಮಾಶ್ರಯನಾದ ಶರಣ್ಯನಾದ ದೇವನಾದ ವೇದಪ್ರತಿಪಾದ್ಯನಾದ ವಿಷ್ಣುವನ್ನು ಎಲ್ಲಾ ದೇವತೆಗಳು ಸ್ತೋತ್ರಮಾಡಿದರು.

ದೇವಂ ಬ್ರಹ್ಮಮಯಂ ಯಜ್ಞಂ ಬ್ರಹ್ಮೇಂದ್ರೇಶಂ ಮಹಾಬಲಮ್ ।
ಭೂತಂ ಭವ್ಯಂ ಭವಿಷ್ಯಂ ಚ ಪ್ರಭುಂ ಲೋಕನಮಸ್ಕೃತಮ್ ।
ನಾರಾಯಣಂ ವಿಭುಂ ದೇವಂ ಶರಣ್ಯಂ ಶರಣಂ ಗತಾಃ ॥೬೨॥

ವೇದಪ್ರತಿಪಾದ್ಯನಾದ ಯಜ್ಞನೆಂದು ಕರೆಸಿಕೊಳ್ಳಲ್ಪಡುವ, ಬ್ರಹ್ಮೇಂದ್ರಾದಿಗಳಿಗೆ ಒಡೆಯನಾದ, ಮಹಾಬಲವನ್ನು ಹೊಂದಿದ, ಭೂತ ಭವ್ಯ ಭವಿಷತ್‌ಕಾಲಗಳಲ್ಲಿ ಇರುವ, ಲೋಕಸಮಸ್ಕೃತನಾದ ಪ್ರಭುವಾದ ವಿಭುವಾದ ನಾರಾಯಣನಿಗೆ ಎಲ್ಲಾ ದೇವತೆಗಳೂ ಶರಣಾದರು.

ದೇವಾಃ

ತ್ರಾಯಸ್ವ ನೋऽದ್ಯ ದೇವೇಶ ಹಿರಣ್ಯಕಶಿಪೋರ್ವಧಾತ್ ।
ತ್ವಂ ಹಿ ನಃ ಪರಮೋ ಧಾತಾ ಬ್ರಹ್ಮಾದೀನಾಂ ಸುರೋತ್ತಮ ॥೬೩॥

ದೇವೇಶನೇ! ಹಿರಣ್ಯಕಶ್ಯಪುವಿನ ಸಂಹಾರವನ್ನು ಮಾಡಿ, ಈ ದಿನ ನಮ್ಮೆಲ್ಲರನ್ನೂ ರಕ್ಷಿಸು. ಸುರೋತ್ತಮನೇ! ನೀನೇ ಬ್ರಹ್ಮಾದಿಗಳಾದ ನಮ್ಮೆಲ್ಲರನ್ನೂ ನಮ್ಮ ನಮ್ಮ ಸ್ಥಾನದಲ್ಲಿ ಇಟ್ಟು ಪೊಷಿಸುವವನು.

ಪ್ರೋತ್ಫುಲ್ಲಾಂಬುಜಪತ್ರಾಕ್ಷ ಶತ್ರುಪಕ್ಷಭಯಂಕರ ।
ಕ್ಷಯಾಯ ದಿತಿವಂಶಸ್ಯ ಶರಣ್ಯಸ್ತ್ವಂ ಭವಿಷ್ಯಸಿ ॥೬೪॥

ಅರಳಿದ ಕಮಲದದಳದಂತೆ ಕಣ್ಣುಳ್ಳವನೇ! ಶತ್ರುಪಕ್ಷ ಭಯಂಕರನೇ! ದಿತಿವಂಶದ ನಾಶವನ್ನು ಉದ್ದೇಶಿಸಿ ಬಂದಿರುವ ನಮಗೆ ನೀನು ಶರಣ್ಯನಾಗಬೇಕು.

ಭೀಷ್ಮಃ

ತದ್ ದೇವಾನಾಂ ವಚಃ ಶ್ರುತ್ವಾ ತದಾ ವಿಷ್ಣುಃ ಶುಚಿಶ್ರವಾಃ ।
ಅದೃಶ್ಯಃ ಸರ್ವಭೂತಾನಾಂ ವಕ್ತುಮೇವೋಪಚಕ್ರಮೇ ॥೬೫॥

ದೇವತೆಗಳ ಆ ವಚನಗಳನ್ನು ಕೇಳಿ ಶುಚಿಶ್ರವನಾದ ಆ ವಿಷ್ಣುವು ಆಗ ಅದೃಶ್ಯನಾಗಿಯೇ ಮಾತನಾಡಲು ಉಪಕ್ರಮಿಸಿದನು.

ಭಯಂ ತ್ಯಜಧ್ವಮಮರಾ ಅಭಯಂ ವೋ ದದಾಮ್ಯಹಮ್ ।
ತಥೈವ ತ್ರಿದಿವಂ ದೇವಾಃ ಪ್ರತಿಪದ್ಯತ ಮಾಚಿರಮ್ ॥೬೬॥

ಏಷೋಹಂ ಸಗಣಂ ದೈತ್ಯಂ ವರದಾನೇನ ದರ್ಪಿತಮ್ ।
ಅವಧ್ಯಮಮರೇಂದ್ರಾಣಾಂ ದಾನವೇಂದ್ರಂ ನಿಹನ್ಮ್ಯಹಮ್ ॥೬೭॥

ದೇವತೆಗಳೇ ಭಯವನ್ನು ತ್ಯಜಿಸಿ. ನಾನು ಅಭಯವನ್ನು ನೀಡುತ್ತಿದ್ದೇನೆ. ನೀವು ಹಾಗೆಯೇ ಶೀಘ್ರವಾಗಿ ಸ್ವರ್ಗಲೋಕಕ್ಕೆ ಹಿಂದಿರುಗಿ. ನಾನು ವರದಾನದಿಂದ ದರ್ಪಿಷ್ಠನಾಗಿರುವ ದೇವತೆಗಳಿಂದ ಅವಧ್ಯನಾದ ದೈತ್ಯೇಂದ್ರನಾದ ಆ ಹಿರಣ್ಯಕಶ್ಯಿಪುವನ್ನು ಅವನ ಪರಿವಾರದ ಜೊತೆಯಲ್ಲಿ ಸಂಹರಿಸುತ್ತೇನೆ.

ಬ್ರಹ್ಮಾ

ಭಗವನ್ ಭೂತಭವ್ಯೇಶ ಖಿನ್ನಾ ಹ್ಯೇತೇ ಭೃಶಂ ಸುರಾಃ ।
ತಸ್ಮಾತ್ತ್ವಂ ಜಹಿ ದೈತ್ಯೇಂದ್ರಂ ಕ್ಷಿಪ್ರಂ ಕಾಲೋಸ್ಯ ಮಾಚಿರಮ್ ॥೬೮॥

ಭೂತಭವ್ಯೇಶನಾದ ಭಗವಂತನೇ! ಈ ದೇವತೆಗಳೆಲ್ಲರೂ ಬಹಳ ಖಿನ್ನರಾಗಿದ್ದಾರೆ. ಆದ್ದರಿಂದ ತಡಮಾಡದೆ ನೀನು ಆ ದೈತ್ಯೇಂದ್ರನನ್ನು ಬೇಗ ಸಂಹರಿಸು.

ಶ್ರೀವಿಷ್ಣುಃ

ಕ್ಷಿಪ್ರಮೇವ ಕರಿಷ್ಯಾಮಿ ತ್ವರಯಾ ದೈತ್ಯನಾಶನಮ್ ।
ತಸ್ಮಾತ್ ತ್ವಂ ವಿಬುಧಾಶ್ಚೈವ ಪ್ರತಿಪದ್ಯತ ವೈ ದಿವಮ್ ॥೬೯॥

ನಾನು ಆ ದೈತ್ಯನ ನಾಶವನ್ನು ಶೀಘ್ರವಾಗಿಯೇ ಮಾಡುವೆನು. ಆದ್ದರಿಂದ ನೀನೂ ಎಲ್ಲಾ ದೇವತೆಗಳೂ ನಿಮ್ಮ ನಿಮ್ಮ ಲೋಕಗಳಿಗೆ ಹಿಂದಿರುಗಿ.

ಭೀಷ್ಮಃ

ಏವಮುಕ್ತ್ವಾ ಸ ಭಗವಾನ್ ವಿಸೃಜ್ಯ ತ್ರಿದಿವೇಶ್ವರಾನ್ ।
ನರಸ್ಯಾರ್ಧತನುಂ ಕೃತ್ವಾ ಸಿಂಹಸ್ಯಾರ್ಧತನುಂ ತಥಾ ॥೭೦॥

ನಾರಸಿಂಹೇನ ವಪುಷಾ ಪಾಣಿಂ ನಿಷ್ಪಿಷ್ಯ ಪಾಣಿನಾ ।
ಭೀಮರೂಪೋ ಮಹಾತೇಜೋ ವ್ಯಾದಿತಾಸ್ಯ ಇವಾಂತಕಃ ।
ಹಿರಣ್ಯಕಶಿಪುಂ ರಾಜನ್ ಜಗಾಮ ಹರಿರೀಶ್ವರಃ ॥೭೧॥

ಎಲೈ ರಾಜನೇ! ಆ ಭಗವಂತನು ಹೀಗೆ ಹೇಳಿ ದೇವತೆಗಳನ್ನು ಕಳುಹಿಸಿಕೊಟ್ಟು ಸಿಂಹದಂತಿರುವ ಅರ್ದಶರೀರವನ್ನೂ ಮನುಷ್ಯನಂತಿರುವ ಅರ್ಧಶರೀರವನ್ನೂ ಸ್ವೀಕರಿಸಿ ನರಸಿಂಹರೂಪವನ್ನು ಧರಿಸಿ ಕೈಯಿಂದ ಕೈಯನ್ನು ಉಜ್ಜುತ್ತಾ ಭಯಂಕರರೂಪ ಉಳ್ಳವನೂ ಮಹಾತೇಜಸ್ಸುಳ್ಳವನೂ, ಯಮನಂತೆ ಬಾಯಿಯನ್ನು ತೆರೆದವನೂ ಆಗಿ ಈಶ್ವರನಾದ ಹರಿಯು ಹಿರಣ್ಯಕಶ್ಯಿಪುವಿನ ಸಮೀಪಕ್ಕೆ ಬಂದನು.

ದೈತ್ಯಾಃ ಸಮಾಗತಂ ದೃಷ್ಟ್ವಾ ನಾರಸಿಂಹಂ ಮಹಾಬಲಮ್ ।
ವವರ್ಷುಃ ಶಸ್ತ್ರವರ್ಷಾಂಶ್ಚ ಸುಸಂಕ್ರುದ್ಧಾಸ್ತದಾ ಹರಿಮ್ ॥೭೨॥

ಸಮಾಗತನಾದ ಮಹಾಬಲನಾದ ನರಸಿಂಹನನ್ನು ನೋಡಿ ದೈತ್ಯರು ಬಹಳ ಕೋಪವುಳ್ಳವರಾಗಿ ಅವನ ಮೇಲೆ ಶಸ್ತ್ರಗಳ ಮಳೆಯನ್ನು ಕರೆದರು.

ತೈಃ ಸೃಷ್ಟಾನ್ ಸರ್ವಶಸ್ತ್ರಾಣಿ ಭಕ್ಷಯಾಮಾಸ ವೈ ಹರಿಃ ।
ಜಘಾನ ಚ ರಣೇ ದೈತ್ಯಾನ್ ಸಹಸ್ರಾಣಿ ಬಹೂನ್ಯಪಿ ॥೭೩॥

ಹರಿಯು ಅವರು ಪ್ರಯೋಗಿಸಿದ ಬಾಣಗಳನ್ನು ಮತ್ತು ಶಸ್ತ್ರಗಳನ್ನು ನುಂಗಿಬಿಟ್ಟನು. ಯುದ್ಧದಲ್ಲಿ ಅನೇಕ ಸಹಸ್ರದೈತ್ಯರನ್ನು ಸಂಹರಿಸಿದನು.

ತಾನ್ ನಿಹತ್ಯೈವ ದೈತೇಯಾನ್ ಸರ್ವಾನ್ ಕ್ರುದ್ಧಾನ್ ಮಹಾಬಲಾನ್ ।
ಅಭ್ಯಧಾವತ್ ಸುಸಂಕ್ರುದ್ಧೋ ದೈತ್ಯೇಂದ್ರಂ ಬಲಗರ್ವಿತಮ್ ॥೭೪॥

ಆ ಮಹಾಬಲಿಷ್ಠರಾದ ಕ್ರುದ್ಧರಾದ ಎಲ್ಲಾ ದೈತ್ಯರನ್ನೂ ಸಂಹರಿಸಿ ತಾನೂ ಹೆಚ್ಚು ಕೋಪವುಳ್ಳವನಾಗಿ ಬಲಗರ್ವಿತನಾದ ದೈತ್ಯೇಂದ್ರನಾದ ಹಿರಣ್ಯಕಶ್ಯಿಪುನ ಕಡೆಗೆ ಧಾವಿಸಿದನು.

ಜೀಮೂತಘನಸಂಕಾಶೋ ಜೀಮೂತಘನನಿಸ್ವನಃ ।
ಜೀಮೂತ ಇವ ದೀಪ್ತಾಕ್ಷೋ ಜೀಮೂತ ಇವ ವೇಗವಾನ್ ।
ದೇವಾರಿರ್ದಿತಿಜೋ ದುಷ್ಟೋ ನೃಸಿಂಹಂ ಸಮುಪಾದ್ರವತ್ ॥೭೫॥

ಘನವಾದ ಮೇಘದ ಕಾಂತಿಯನ್ನು ಹೊಂದಿದ್ದಂತಹ ಮೇಘಗಂಭೀರನಾದವುಳ್ಳ ಮೇಘದಂತೆ ದೀಪ್ತವಾದಂತಹ ಕಣ್ಣುಳ್ಳ, ಮೇಘದಂತೆ ವರ್ಣವುಳ್ಳ ದೇವಶತ್ರುವಾದ ದುಷ್ಟನಾದ ದಿತಿಪುತ್ರನಾದ ಹಿರಣ್ಯಕಶ್ಯಿಪುವು ನರಸಿಂಹನ ಕಡೆಗೆ ಧಾವಿಸಿದನು.

ದೈತ್ಯಂ ಸೋತಿಬಲಂ ದೃಪ್ತಂ ಸಮಶಾರ್ದೂಲವಿಕ್ರಮಃ ।
ದೃಪ್ತೈರ್ದೈತ್ಯಗಣೈರ್ಗುಪ್ತಂ ಖರೈರ್ನಖಮುಖೈರುತ ॥೭೬॥

ಶಾರ್ದೂಲವಿಕ್ರಮವುಳ್ಳ ನರಸಿಂಹನು ಅತಿಬಲಿಷ್ಠನಾದ ದರ್ಪದಿಂದ ಕೂಡಿದ ದೈತ್ಯರಿಂದ ರಕ್ಷಿತನಾದ ದೈತ್ಯರಿಂದಲೂ ನಖಾದಿ ಅನೇಕ ಆಯುಧಗಳಿಂದಲೂ ರಕ್ಷಿತನಾದ ದರ್ಪದಿಂದಕೂಡಿದ ದೈತ್ಯನಕಡೆಗೆ ಧಾವಿಸಿದನು.

ತತಃ ಕೃತ್ವಾ ತು ಯುದ್ಧಂ ವೈ ತೇನ ದೈತ್ಯೇನ ವೈ ಹರಿಃ ।
ಸಂಧ್ಯಾಕಾಲೇ ಮಹಾತೇಜಾ ಭವನಾಂತೇ ತ್ವರಾನ್ವಿತಃ ॥೭೭॥

ಊರೌ ನಿಧಾಯ ದೈತ್ಯೇಂದ್ರಂ ನಿರ್ಬಿಭೇದ ನಖೈಸ್ತದಾ ।
ಮಹಾಬಲಂ ಮಹಾವೀರ್ಯಂ ವರದಾನೇನ ದರ್ಪಿತಮ್ ।
ದೈತ್ಯಶ್ರೇಷ್ಠಂ ಸುರಶ್ರೇಷ್ಠೋ ಜಘಾನ ತರಸಾ ಹರಿಃ ॥೭೮॥

ಅನಂತರ ಆ ಹರಿಯು ಆ ದೈತ್ಯನ ಜೊತೆಯಲ್ಲಿ ಯುದ್ಧವನ್ನು ಮಾಡಿ ಸಾಯಂಕಾಲವಾಗುತ್ತಿರಲು ಮಹಾತೇಜಸ್ವಿಯಾದ ಅವನು ತ್ವರೆಯಿಂದ ಕೂಡಿದವನಾಗಿ ಮನೆಯಕೊನೆಭಾಗದಲ್ಲಿ (ಹೊಸ್ತಿಲಿನ ಮೇಲೆ) ಕುಳಿತು ತನ್ನ ತೊಡೆಯಮೇಲೆ ದೈತ್ಯೇಂದ್ರನನ್ನು ಹಾಕಿಕೊಂಡು ತನ್ನ ಉಗುರುಗಳಿಂದ ಅವನನ್ನು ಸೀಳಿಹಾಕಿದನು. ಸುರಶ್ರೇಷ್ಠನಾದ ಹರಿಯು ವರದಾನದಿಂದ ದರ್ಪಿತನಾದ ಮಹಾಬಲವೀರ್ಯಗಳುಳ್ಳ ದೈತ್ಯಶ್ರೇಷ್ಠನನ್ನು ಸಂಹರಿಸಿದನು.

ಹಿರಣ್ಯಕಶಿಪುಂ ಹತ್ವಾ ಸರ್ವದೈತ್ಯಾಂಶ್ಚ ವೈ ತದಾ ।
ವಿಬುಧಾನಾಂ ಪ್ರಜಾನಾಂ ಚ ಹಿತಂ ಕೃತ್ವಾ ಮಹಾದ್ಯುತಿಃ ।
ಪ್ರಮುಮೋದ ಹರಿರ್ದೇವಃ ಸ್ಥಾಪ್ಯ ಧರ್ಮಂ ತದಾ ಭುವಿ ॥೭೯॥

ಹರಿಯು ಆಗ ಹಿರಣ್ಯಕಶ್ಯವುವನ್ನು ಸಂಹರಿಸಿ ಉಳಿದ ಎಲ್ಲಾ ದೈತ್ಯರನ್ನೂ ಸಂಹರಿಸಿ ದೇವತೆಗಳಿಗೂ ಮತ್ತು ಉಳಿದ ಪ್ರಜೆಗಳಿಗೂ ಹಿತವನ್ನು ಮಾಡಿ ಮಹಾದ್ಯುತಿಯುಳ್ಳ ದೇವನಾದ ಅವನು ಭೂಮಿಯಲ್ಲಿ ಧರ್ಮವನ್ನು ಸ್ಥಾಪಿಸಿ ಆನಂದಿಸಿದನು.

ಏಷ ತೇ ನಾರಸಿಂಹೋತ್ರ ಕಥಿತಃ ಪಾಂಡುನಂದನ ।
ಶೃಣು ತ್ವಂ ವಾಮನಂ ನಾಮ ಪ್ರಾದುರ್ಭಾವಂ ಮಹಾತ್ಮನಃ ॥೮೦॥

ಪಾಂಡುನಂದನನೇ! ಇದು ನಾನು ನಿನಗೆ ಹೇಳಿದ ನರಸಿಂಹದೇವರ ಕಥೆ. ಮಹಾತ್ಮನಾದ ಅವನ ವಾಮನ ಅವತಾರವನ್ನು ಹೇಳುತ್ತೇನೆ ಕೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಅಷ್ಟತ್ರಿಂಶೋಧ್ಯಾಯಃ ॥
॥ ಅರ್ಘಾಭಿಹರಣಪರ್ವಣಿ ಸಪ್ತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಮೂವತ್ತೆಂಟನೆಯ ಅಧ್ಯಾಯವು ಮುಗಿಯಿತು.

★★★★★

ಮೂವತ್ತೊಂಭತ್ತನೆಯ ಅಧ್ಯಾಯ

(ವಾಮನಾವತಾರ ಕಥನ)

ಭೀಷ್ಮಃ

ಪುರಾ ತ್ರೇತಾಯುಗೇ ರಾಜನ್ ಬಲಿರ್ವೈರೋಚನೋಽಭವತ್ ।
ದೈತ್ಯಾನಾಂ ಪಾರ್ಥಿವೋ ವೀರೋ ಬಲೇನಾಪ್ರತಿಮೋ ಬಲೀ ॥೧॥

ರಾಜನೇ! ಹಿಂದೆ ತ್ರೇತಾಯುಗದಲ್ಲಿ ವಿರೋಚನನ ಮಗನಾದ ಬಲಿಯು ಬಲದಲ್ಲಿ ಅಪ್ರತಿಮನಾಗಿ ದೈತ್ಯರಿಗೆ ಅಧಿಪತಿಯಾಗಿ ಭೂಮಿಯಲ್ಲಿ ಇದ್ದನು.

ತದಾ ಬಲಿರ್ಮಹಾರಾಜ ದೈತ್ಯಸಂಘೈಃ ಸಮಾವೃತಃ ।
ವಿಜಿತ್ಯ ತರಸಾ ಶಕ್ರಮಿಂದ್ರಸ್ಥಾನಮವಾಪ ಸಃ ॥೨॥

ಎಲೈ ಮಹಾರಾಜನೇ! ಆಗ ದೈತ್ಯಸಮೂಹದಿಂದ ಆವೃತನಾದ ಬಲಿಯು ತನ್ನ ಸಾಮರ್ಥ್ಯದಿಂದ ಇಂದ್ರನನ್ನು ಸೋಲಿಸಿ ಇಂದ್ರನಸ್ಥಾನವನ್ನು ಆಕ್ರಮಿಸಿದನು.

ತೇನ ವಿತ್ರಾಸಿತಾ ದೇವಾ ಬಲಿನಾऽऽಖಂಡಲಾದಯಃ ।
ಬ್ರಹ್ಮಾಣಂ ವೈ ಪುರಸ್ಕೃತ್ಯ ಗತ್ವಾ ಕ್ಷೀರೋದಧಿಂ ತದಾ ॥೩॥

ಆ ಬಲಿಗೆ ಹೆದರಿದ ಇಂದ್ರಾದಿದೇವತೆಗಳು ಬ್ರಹ್ಮದೇವರನ್ನು ಮುಂದೆಮಾಡಿಕೊಂಡು ಕ್ಷೀರಸಮುದ್ರಕ್ಕೆ ಹೋದರು.

ತುಷ್ಟುವುಃ ಸಹಿತಾಃ ಸರ್ವೇ ದೇವಂ ನಾರಾಯಣಂ ಪ್ರಭುಮ್ ।
ಸ ತೇಷಾಂ ದರ್ಶನಂ ಚಕ್ರೇ ವಿಬುಧಾನಾಂ ಹರಿಃ ಸ್ತುತಃ ॥೪॥

ಅವರೆಲ್ಲರೂ ಒಟ್ಟುಗೂಡಿ ಪ್ರಭುವಾದ ದೇವನಾದ ನಾರಾಯಣನನ್ನು ಸ್ತೋತ್ರಮಾಡಿದರು. ಸ್ತೋತ್ರಮಾಡಲ್ಪಟ್ಟ ಹರಿಯು ಆ ದೇವತೆಗಳಿಗೆ ತನ್ನ ದರ್ಶನವನ್ನು ನೀಡಿದನು.

ಪ್ರಸಾದಜಂ ಹ್ಯಸ್ಯ ವಿಭೋರದಿತ್ಯಾಂ ಜನ್ಮ ಉಚ್ಯತೇ ।
ಅದಿತೇರಪಿ ಪುತ್ರತ್ವಮೇತ್ಯ ಯಾದವನಂದನಃ ।
ಏಷ ವಿಷ್ಣುರಿತಿ ಖ್ಯಾತ ಇಂದ್ರಾದವರಜೋಭವತ್ ॥೫॥

ದೇವತೆಗಳ ಮೇಲಿನ ಅವನ ಅನುಗ್ರಹದ ಕಾರ್ಯವೇ ಅದಿತಿಯಲ್ಲಿ ಅವನ ಅವತಾರ ಎಂದು ಹೇಳಲಾಗುತ್ತದೆ. ಈ ಯಾದವನಂದನನಾದ ಕೃಷ್ಣನು ವಿಷ್ಣು ಎಂಬ ನಾಮದಿಂದ ಪ್ರಸಿದ್ಧನಾಗಿ ಅದಿತಿಯ ಪುತ್ರನಾಗಿ ಜನಿಸಿ ಇಂದ್ರನ ತಮ್ಮನಾದನು.

ತಸ್ಮಿನ್ನೇವ ಚ ಕಾಲೇ ತು ದೈತ್ಯೇಂದ್ರೋ ವೀರ್ಯವಾನ್ ಬಲಿಃ ।
ಅಶ್ವಮೇಧಂ ಕ್ರತುಶ್ರೇಷ್ಠಮಾಹರ್ತುಮುಪಚಕ್ರಮೇ ॥೬॥

ಅದೇ ಕಾಲದಲ್ಲಿಯೇ ದೈತ್ಯೇಂದ್ರನೂ ಪರಾಕ್ರಮಶಾಲಿಯೂ ಆದ ಬಲಿಯು ಶ್ರೇಷ್ಠವಾದ ಅಶ್ವಮೇಧಯಾಗವನ್ನು ಮಾಡಲು ಉಪಕ್ರಮಿಸಿದನು.

ವರ್ತಮಾನೇ ತದಾ ಯಜ್ಞೇ ದೈತ್ಯೇಂದ್ರಸ್ಯ ಯುಧಿಷ್ಠಿರ ।
ಸ ವಿಷ್ಣುರ್ವಾಮನೋ ಭೂತ್ವಾ ಪ್ರಚ್ಛನ್ನೋ ಬ್ರಹ್ಮವೇಷಧೃಕ್ ॥೭॥

ಮುಂಡೋ ಯಜ್ಞೋಪವೀತೀ ಚ ಕೃಷ್ಣಾಜಿನಧರಃ ಶಿಖೀ ।
ಪಾಲಾಶದಂಡಂ ಸಂಗೃಹ್ಯ ವಾಮನೋऽದ್ಭುತದರ್ಶನಃ ॥೮॥

ಪ್ರವಿಶ್ಯ ಸ ಬಲೇರ್ಯಜ್ಞೇ ವರ್ತಮಾನೇ ತು ದಕ್ಷಿಣಾಮ್ ।
ದೇಹೀತ್ಯುವಾಚ ದೈತ್ಯೇಂದ್ರಂ ವಿಕ್ರಮಾಂಸ್ತ್ರೀಣಿ ವೈ ಮಮ ॥೯॥

ಯುಧಿಷ್ಠಿರನೇ! ದೈತ್ಯೇಂದ್ರನಾದ ಬಲಿಯ ಯಜ್ಞವು ನಡೆಯುತ್ತಿರುವಾಗ ವಿಷ್ಣುವು ಬ್ರಾಹ್ಮಣವೇಶದಿಂದ ಪ್ರಚ್ಛನ್ನನಾಗಿ ವಾಮನನಾಗಿ ಯಜ್ಞೋಪವೀತವನ್ನು ಧರಿಸಿ ಶಿಖೆಯನ್ನು ಧರಿಸಿದವನಾಗಿ ಕೈಯಲ್ಲಿ ಕುಲಾಶದಂಡವನ್ನು ಹಿಡಿದು ಅದ್ಭುತಸೌಂದರ್ಯವನ್ನು ಧರಿಸಿದವನಾಗಿ ಬಲಿಯ ಯಜ್ಞವು ನಡೆಯುತ್ತಿರುವ ಯಜ್ಞಶಾಲೆಯನ್ನು ಪ್ರವೇಶಿಸಿ ದಕ್ಷಿಣಾರೂಪವಾಗಿ ಈ ನನ್ನ ಹೆಜ್ಜೆಯಿಂದ ಅಳೆದ ಮೂರು ಹೆಚ್ಚೆ ಭೂಮಿಯನ್ನು ನನಗೆ ಕೊಡು ಎಂದು ಕೇಳಿದನು.

ದೀಯತಾಂ ತ್ರಿಪದೀಮಾತ್ರಮಿತ್ಯಯಾಚನ್ಮಹಾಸುರಮ್ ।
ಸ ತಥೇತಿ ಪ್ರತಿಶ್ರುತ್ಯ ಪ್ರದದೌ ವಿಷ್ಣವೇ ತದಾ ॥೧೦॥

ನನಗೆ ಮೂರು ಹೆಜ್ಜೆ ಭೂಮಿಯನ್ನು ಮಾತ್ರ ಕೊಡು ಎಂದು ವಾಮನನು ಆ ಮಹಾಸುರನನ್ನು ಕೇಳಿದನು. ಬಲಿಯು ಕೊಡುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡಿ ವಿಷ್ಣುವಿಗೆ ಕೊಟ್ಟನು.

ತತೋ ಲಬ್ಧ್ವಾ ಹರಿರ್ಭೂಮಿಂ ಜೃಂಭಯಾಮಾಸ ವೈ ಭೃಶಮ್।
ಸ ಶಿಶುಃ ಸದಿವಂ ಖಂ ಚ ಪೃಥಿವೀಂ ಚ ವಿಶಾಂಪತೇ ॥೧೧॥

ಹರಿಯು ಬಲಿಯಿಂದ ಭೂಮಿದಾನದ ವಾಗ್ದಾನವನ್ನು ಪಡೆದು ತನ್ನ ದೇಹವನ್ನು ಜೃಂಭಿಸಿದನು. (ದೊಡ್ಡಪರಿಮಾಣವುಳ್ಳದ್ದಾಗಿ ಮಾಡಿದನು.) ಎಲೈ ರಾಜನೇ! ಶಿಶುವಾದ ಅವನು ಪರರನ್ನು ಪರಾಭವಗೊಳಿಸುವವನು ಆದ ಅವನು ಭೂಮಿಯನ್ನೂ ಸ್ವರ್ಗಲೋಕಸಹಿತವಾದ ಆಕಾಶವನ್ನೂ ಈ ಎಲ್ಲವನ್ನೂ ಮೂರು ಹೆಜ್ಜೆಗಳಿಂದ ಆಕ್ರಮಿಸಿದನು.

ತ್ರಿಭಿರ್ವಿಕ್ರಮಣೈರೇತತ್ ಸರ್ವಮಾಕ್ರಮತಾಭಿಭೂಃ ।
ಬಲೇರ್ಬಲವತೋ ಯಜ್ಞೇ ಬಲಿನಾ ವಿಷ್ಣುನಾ ಪುರಾ ।
ವಿಕ್ರಮೈಸ್ತ್ರಿಭಿರಕ್ಷೋಭ್ಯಾಃ ಕ್ಷೋಭಿತಾಸ್ತೇ ಮಹಾಸುರಾಃ ॥೧೨॥

ಬಲಿಷ್ಠನಾದ ಬಲಿಯ ಯಜ್ಞದಲ್ಲಿ ಹಿಂದೆ ಬಲಿಷ್ಠನಾದ ವಿಷ್ಣುನಿಂದ ಮೂರು ಹೆಜ್ಜೆ ಭೂಮಿಯದಾನದ ನೆಪದಿಂದ ಅಕ್ಷೋಭ್ಯರಾದ ಆ ಮಹಾಸುರರೆಲ್ಲರೂ ಕ್ಷೋಭೆಗೊಂಡರು.

ವಿಪ್ರಚಿತ್ತಿಮುಖಾಃ ಕ್ರುದ್ಧಾಃ ಸರ್ವಸಂಘಾ ಮಹಾಸುರಾಃ ।
ನಾನಾವಕ್ತ್ರಾ ಮಹಾಕಾಯಾ ನಾನಾವೇಷಧರಾ ನೃಪ ॥೧೩॥

ನಾನಾಪ್ರಹರಣಾ ರೌದ್ರಾ ನಾನಾಮಾಲ್ಯಾನುಲೇಪನಾಃ ।
ಸ್ವಾನ್ಯಾಯುಧಾನಿ ಸಂಗೃಹ್ಯ ಪ್ರದೀಪ್ತಾ ಇವ ತೇಜಸಾ ।
ಕ್ರಮಮಾಣಂ ಹರಿಂ ತತ್ರ ಉಪಾವರ್ತಂತ ಭಾರತ ॥೧೪॥

ಎಲೈ ಭಾರತನೇ! ಅನೇಕಮುಖಗಳನ್ನು ಹೊಂದಿದ್ದ ಮಹಾಶರೀರಗಳನ್ನು ಹೊಂದಿದ್ದ ನಾನಾವೇಷಗಳನ್ನು ಧರಿಸಿದ್ದ ನಾನಾಮಾಲ್ಯಗಳನ್ನೂ ಅನುಲೇಪಗಳನ್ನೂ ಧರಿಸಿದ್ದ ವಿಪ್ರಚಿತ್ತಿ ಮೊದಲಾದ ಎಲ್ಲಾ ಮಹಾಸುರರ ಸಂಘಗಳೂ ಕೋಪಗೊಂಡು ನಾನಾ ಆಯುಧಗಳನ್ನು ಧರಿಸಿದವರಾಗಿ ತಮ್ಮ ತಮ್ಮ ಆಯುಧಗಳನ್ನು ಹಿಡಿದವರಾಗಿ ತೇಜಸ್ಸಿನಿಂದ ಬೆಳಗುತ್ತಾ ಮೂರು ಹೆಜ್ಜೆ ಭೂಮಿಯನ್ನು ಅಳೆಯುತ್ತಿರುವ ಹರಿಯನ್ನು ಸಮೀಪಿಸಿದರು.

ಪ್ರಮಥ್ಯ ಸರ್ವಾನ್ ದೈತೇಯಾನ್ ಪಾದಹಸ್ತತಳೈಸ್ತು ತಾನ್ ।
ರೂಪಂ ಕೃತ್ವಾ ಮಹಾಭೀಮಂ ಜಹಾರಾಶು ಸ ಮೇದಿನೀಮ್ ॥೧೫॥

ವಾಮನನಾದರೋ ಮಹಾಭಯಂಕರವಾದ ದೊಡ್ಡರೂಪವನ್ನು ತೆಗೆದುಕೊಂಡು ತನ್ನ ಪಾದದಿಂದಲೂ ಹಸ್ತತಳದಿಂದಲೂ ಆ ದೈತ್ಯರೆಲ್ಲರನ್ನೂ ಪರಾಭವಗೊಳಿಸಿ ಶೀಘ್ರವಾಗಿ ಭೂಮಿಯನ್ನು ಅಪಹರಿಸಿದನು.

ಸಂಪ್ರಾಪ್ಯ ದಿವಮಾಕಾಶಮಾದಿತ್ಯಸದನೇ ಸ್ಥಿತಃ ।
ಅತ್ಯರೋಚತ ಭೂತಾತ್ಮಾ ಭಾಸ್ಕರಂ ಸ್ವೇನ ತೇಜಸಾ ॥೧೬॥

ಬೃಹತ್ ಶರೀರವನ್ನುತೆಗೆದುಕೊಂಡ ಅವನು ಆಕಾಶದಲ್ಲಿ ಸ್ವರ್ಗಲೋಕದವರೆಗೂ ವೃದ್ಧಿಯನ್ನು ಹೊಂದಿ ಸೂರ್ಯನ ಸದನದಲ್ಲಿ ಇರುವವನಾಗಿ ಭೂತಾತ್ಮನಾದ ಅವನು ತನ್ನ ತೇಜಸ್ಸಿನಿಂದ ಸೂರ್ಯನನ್ನು ಮೀರಿಸಿದನು.

ಪ್ರಕಾಶಯನ್ ದಿಶಃ ಸರ್ವಾಃ ಪ್ರದಿಶಶ್ಚ ಮಹಾಯಶಾಃ ।
ಶುಶುಭೇ ಸ ಮಹಾಬಾಹುಃ ಸರ್ವಲೋಕಾನ್ ಪ್ರಕಾಶಯನ್ ॥೧೭॥

ಮಹಾಬಾಹುವು ಮಹಾ ಕೀರ್ತಿವಂತನಾದ ಅವನು ತನ್ನ ತೇಜಸ್ಸಿನಿಂದ ಎಲ್ಲಾ ದಿಕ್ಕುಗಳನ್ನು ಮತ್ತು ಎಲ್ಲಾ ಲೋಕಗಳನ್ನು ಬೆಳಗುತ್ತಾ ಶೋಭಿಸಿದನು.

ತಸ್ಯ ವಿಕ್ರಮತೋ ಭೂಮಿಂ ಚಂದ್ರಾದಿತ್ಯೌ ಸ್ತನಾಂತರೌ ।
ನಭಃ ಪ್ರಕ್ರಮಮಾಣಸ್ಯ ನಾಭ್ಯಾಂ ಕಿಲ ತದಾ ಸ್ಥಿತೌ ॥೧೮॥

ಹೀಗೆ ಭೂಮಿಯನ್ನು ಅಳೆಯುತ್ತಿರುವ ತ್ರಿವಿಕ್ರಮನಾದ ವಾಮನನಿಗೆ ಚಂದ್ರಸೂರ್ಯರು ಸ್ಥನಗಳ ಮಧ್ಯದಲ್ಲಿ ಕಾಣಿಸುತ್ತಿದ್ದರು. ಕ್ರಮಿಸುವ ಅವನ ನಾಭಿಯಲ್ಲಿ ಆಗ ಅಂತರಿಕ್ಷಲೋಕವು ಕಾಣುತ್ತಿತ್ತು.

ಸುವರಾಕ್ರಮಮಾಣಸ್ಯ ಜಾನುಭ್ಯಾಂ ತೌ ವ್ಯವಸ್ಥಿತೌ ।
ವಿಷ್ಣೋರಮಿತವೀರ್ಯಸ್ಯ ವದಂತ್ಯೇವಂ ದ್ವಿಜಾತಯಃ ॥೧೯॥

ಹೀಗೆ ಆಕ್ರಮಿಸುತ್ತಿದ್ದ ಅವನ ಜಾನುಗಳಲ್ಲಿ ಸುವರ್ಲೋಕವು ಆಶ್ರಿತವಾಗಿದ್ದಿತು. ಬ್ರಾಹ್ಮಣರು ಅಮಿತ ವೀರ್ಯನಾದ ವಿಷ್ಣುವಿನ ಇಂತಹ ಪರಾಕ್ರಮವನ್ನು ಹೀಗೆ ಹೇಳುತ್ತಾರೆ.

ಅಥಾಸಾದ್ಯ ಕಪಾಲಂ ಸ ಅಂಡಸ್ಯ ತು ಯುಧಿಷ್ಠಿರ ।
ತಚ್ಚಿದ್ರಾತ್ ಸ್ಯಂದಿನೀ ತಸ್ಯ ಪಾದಾದ್ ಭ್ರಷ್ಟಾ ತು ನಿಮ್ನಗಾ ।
ಸಸಾರ ಸಾಗರಂ ಸಾಽಽಶು ಪಾವನೀ ಸಾಗರಂಗಮಾ ॥೨೦॥

ಯುಧಿಷ್ಠಿರನೇ! ಅನಂತರ ಅವನು ಬ್ರಹ್ಮಾಂಡದ ಕಪಾಲದವರೆಗೂ ತಲುಪಿ ಅಲ್ಲಿ ತನ್ನ ಅಂಗುಷ್ಠನಖದಿಂದ ಉಂಟಾದ ಛಿದ್ರದಿಂದ ಗಂಗೆಯನ್ನು ಹರಿಸಿದನು. ಅವಳು ಪವಿತ್ರಳಾಗಿ ಬೇಗ ಹರಿದು ಸಾಗರವನ್ನು ಸೇರಿದಳು.

ಜಹಾರ ಮೇದಿನೀಂ ಸರ್ವಾನ್ ಹತ್ವಾ ದಾನವಪುಂಗವಾನ್ ।
ಆಸುರೀಂ ಶ್ರಿಯಮಾಹೃತ್ಯ ತ್ರೀನ್ ಲೋಕಾನ್ ಸ ಜನಾರ್ದನಃ ।
ಸಪುತ್ರದಾರಾನಸುರಾನ್ ಪಾತಾಳೇ ಸಂನ್ಯಪಾತಯನ್ ॥೨೧॥

ಬಲಿಷ್ಠನಾದ ಬಲಿಯ ಯಜ್ಞದಲ್ಲಿ ಹಿಂದೆ ಬಲಿಷ್ಠನಾದ ವಿಷ್ಣುನಿಂದ ಮೂರು ಹೆಜ್ಜೆ ಭೂಮಿಯದಾನದ ನೆಪದಿಂದ ಅಕ್ಷೋಭ್ಯರಾದ ಆ ಮಹಾಸುರರೆಲ್ಲರೂ ಕ್ಷೋಭೆಗೊಂಡರು.

ವಿಪ್ರಚಿತ್ತಿಮುಖಾಃ ಕ್ರುದ್ಧಾಃ ಸರ್ವಸಂಘಾ ಮಹಾಸುರಾಃ ।
ನಾನಾವಕ್ತ್ರಾ ಮಹಾಕಾಯಾ ನಾನಾವೇಷಧರಾ ನೃಪ ॥೧೩॥

ನಾನಾಪ್ರಹರಣಾ ರೌದ್ರಾ ನಾನಾಮಾಲ್ಯಾನುಲೇಪನಾಃ ।
ಸ್ವಾನ್ಯಾಯುಧಾನಿ ಸಂಗೃಹ್ಯ ಪ್ರದೀಪ್ತಾ ಇವ ತೇಜಸಾ ।
ಕ್ರಮಮಾಣಂ ಹರಿಂ ತತ್ರ ಉಪಾವರ್ತಂತ ಭಾರತ ॥೧೪॥

ಎಲೈ ಭಾರತನೇ! ಅನೇಕಮುಖಗಳನ್ನು ಹೊಂದಿದ್ದ ಮಹಾಶರೀರಗಳನ್ನು ಹೊಂದಿದ್ದ ನಾನಾವೇಷಗಳನ್ನು ಧರಿಸಿದ್ದ ನಾನಾಮಾಲ್ಯಗಳನ್ನೂ ಅನುಲೇಪಗಳನ್ನೂ ಧರಿಸಿದ್ದ ವಿಪ್ರಚಿತ್ತಿ ಮೊದಲಾದ ಎಲ್ಲಾ ಮಹಾಸುರರ ಸಂಘಗಳೂ ಕೋಪಗೊಂಡು ನಾನಾ ಆಯುಧಗಳನ್ನು ಧರಿಸಿದವರಾಗಿ ತಮ್ಮ ತಮ್ಮ ಆಯುಧಗಳನ್ನು ಹಿಡಿದವರಾಗಿ ತೇಜಸ್ಸಿನಿಂದ ಬೆಳಗುತ್ತಾ ಮೂರು ಹೆಜ್ಜೆ ಭೂಮಿಯನ್ನು ಅಳೆಯುತ್ತಿರುವ ಹರಿಯನ್ನು ಸಮೀಪಿಸಿದರು.

ಪ್ರಮಥ್ಯ ಸರ್ವಾನ್ ದೈತೇಯಾನ್ ಪಾದಹಸ್ತತಳೈಸ್ತು ತಾನ್ ।
ರೂಪಂ ಕೃತ್ವಾ ಮಹಾಭೀಮಂ ಜಹಾರಾಶು ಸ ಮೇದಿನೀಮ್ ॥೧೫॥

ವಾಮನನಾದರೋ ಮಹಾಭಯಂಕರವಾದ ದೊಡ್ಡರೂಪವನ್ನು ತೆಗೆದುಕೊಂಡು ತನ್ನ ಪಾದದಿಂದಲೂ ಹಸ್ತತಳದಿಂದಲೂ ಆ ದೈತ್ಯರೆಲ್ಲರನ್ನೂ ಪರಾಭವಗೊಳಿಸಿ ಶೀಘ್ರವಾಗಿ ಭೂಮಿಯನ್ನು ಅಪಹರಿಸಿದನು.

ಸಂಪ್ರಾಪ್ಯ ದಿವಮಾಕಾಶಮಾದಿತ್ಯಸದನೇ ಸ್ಥಿತಃ ।
ಅತ್ಯರೋಚತ ಭೂತಾತ್ಮಾ ಭಾಸ್ಕರಂ ಸ್ವೇನ ತೇಜಸಾ ॥೧೬॥

ಬೃಹತ್‌ಶರೀರವನ್ನುತೆಗೆದುಕೊಂಡ ಅವನು ಆಕಾಶದಲ್ಲಿ ಸ್ವರ್ಗಲೋಕದವರೆಗೂ ವೃದ್ಧಿಯನ್ನು ಹೊಂದಿ ಸೂರ್ಯನ ಸದನದಲ್ಲಿ ಇರುವವನಾಗಿ ಭೂತಾತ್ಮನಾದ ಅವನು ತನ್ನ ತೇಜಸ್ಸಿನಿಂದ ಸೂರ್ಯನನ್ನು ಮೀರಿಸಿದನು.

ಪ್ರಕಾಶಯನ್ ದಿಶಃ ಸರ್ವಾಃ ಪ್ರದಿಶಶ್ಚ ಮಹಾಯಶಾಃ ।
ಶುಶುಭೇ ಸ ಮಹಾಬಾಹುಃ ಸರ್ವಲೋಕಾನ್ ಪ್ರಕಾಶಯನ್ ॥೧೭॥

ಮಹಾಬಾಹುವು ಮಹಾ ಕೀರ್ತಿವಂತನಾದ ಅವನು ತನ್ನ ತೇಜಸ್ಸಿನಿಂದ ಎಲ್ಲಾ ದಿಕ್ಕುಗಳನ್ನು ಮತ್ತು ಎಲ್ಲಾ ಲೋಕಗಳನ್ನು ಬೆಳಗುತ್ತಾ ಶೋಭಿಸಿದನು.

ತಸ್ಯ ವಿಕ್ರಮತೋ ಭೂಮಿಂ ಚಂದ್ರಾದಿತ್ಯೌ ಸ್ತನಾಂತರೌ ।
ನಭಃ ಪ್ರಕ್ರಮಮಾಣಸ್ಯ ನಾಭ್ಯಾಂ ಕಿಲ ತದಾ ಸ್ಥಿತೌ ॥೧೮॥

ಹೀಗೆ ಭೂಮಿಯನ್ನು ಅಳೆಯುತ್ತಿರುವ ತ್ರಿವಿಕ್ರಮನಾದ ವಾಮನನಿಗೆ ಚಂದ್ರಸೂರ್ಯರು ಸ್ಥನಗಳ ಮಧ್ಯದಲ್ಲಿ ಕಾಣಿಸುತ್ತಿದ್ದರು. ಕ್ರಮಿಸುವ ಅವನ ನಾಭಿಯಲ್ಲಿ ಆಗ ಅಂತರಿಕ್ಷಲೋಕವು ಕಾಣುತ್ತಿತ್ತು.

ಸುವರಾಕ್ರಮಮಾಣಸ್ಯ ಜಾನುಭ್ಯಾಂ ತೌ ವ್ಯವಸ್ಥಿತೌ ।
ವಿಷ್ಣೋರಮಿತವೀರ್ಯಸ್ಯ ವದಂತ್ಯೇವಂ ದ್ವಿಜಾತಯಃ ॥೧೯॥

ಹೀಗೆ ಆಕ್ರಮಿಸುತ್ತಿದ್ದ ಅವನ ಜಾನುಗಳಲ್ಲಿ ಸುವರ್ಲೋಕವು ಆಶ್ರಿತವಾಗಿದ್ದಿತು. ಬ್ರಾಹ್ಮಣರು ಅಮಿತ ವೀರ್ಯನಾದ ವಿಷ್ಣುವಿನ ಇಂತಹ ಪರಾಕ್ರಮವನ್ನು ಹೀಗೆ ಹೇಳುತ್ತಾರೆ.

ಅಥಾಸಾದ್ಯ ಕಪಾಲಂ ಸ ಅಂಡಸ್ಯ ತು ಯುಧಿಷ್ಠಿರ ।
ತಚ್ಛಿದ್ರಾತ್ ಸ್ಯಂದಿನೀ ತಸ್ಯ ಪಾದಾದ್ ಭ್ರಷ್ಟಾ ತು ನಿಮ್ನಗಾ ।
ಸಸಾರ ಸಾಗರಂ ಸಾऽऽಶು ಪಾವನೀ ಸಾಗರಂಗಮಾ ॥೨೦॥

ಯುಧಿಷ್ಠಿರನೇ! ಅನಂತರ ಅವನು ಬ್ರಹ್ಮಾಂಡದ ಕಪಾಲದವರೆಗೂ ತಲುಪಿ ಅಲ್ಲಿ ತನ್ನ ಅಂಗುಷ್ಠನಖದಿಂದ ಉಂಟಾದ ಛಿದ್ರದಿಂದ ಗಂಗೆಯನ್ನು ಹರಿಸಿದನು. ಅವಳು ಪವಿತ್ರಳಾಗಿ ಬೇಗ ಹರಿದು ಸಾಗರವನ್ನು ಸೇರಿದಳು.

ಜಹಾರ ಮೇದಿನೀಂ ಸರ್ವಾನ್ ಹತ್ವಾ ದಾನವಪುಂಗವಾನ್ ।
ಆಸುರೀಂ ಶ್ರಿಯಮಾಹೃತ್ಯ ತ್ರೀನ್ ಲೋಕಾನ್ ಸ ಜನಾರ್ದನಃ ।
ಸಪುತ್ರದಾರಾನಸುರಾನ್ ಪಾತಾಳೇ ಸಂನ್ಯಪಾತಯನ್ ॥೨೧॥

ಎಲ್ಲಾ ದಾನವಪುಂಗವರನ್ನೂ ಸಂಹರಿಸಿ ಭೂಮಿಯನ್ನೂ ಅವರ ಆಸುರೀಸಂಪತ್ತನ್ನೂ ಮತ್ತು ಮೂರು ಲೋಕಗಳನ್ನೂ ಅವರಿಂದ ಅಪಹರಿಸಿ ಜನಾರ್ದನನು ಪತ್ನಿಪುತ್ರಸಹಿತರಾದ ಆ ಅಸುರರನ್ನು ಪಾತಾಳಲೋಕದಲ್ಲಿ ಕೆಡವಿದನು.

ನಮುಚಿಃ ಶಂಬರಶ್ಚೈವ ಪ್ರಹ್ಲಾದಶ್ಚ ಮಹಾಮನಾಃ ।
ಪಾದವಾತಾಭಿನಿರ್ಧೂತಾಃ ಪಾತಾಳೇ ವಿನಿಪಾತಿತಾಃ ॥೨೨॥

ನಮುಚಿ ಶಂಬರ ಧೈರ್ಯಶಾಲಿಯಾದ ಪ್ರಹ್ಲಾದ ಇವರು ವಾಮನನ (ತ್ರಿವಿಕ್ರಮನ) ಪಾದವಾಯುವಿನ ವೇಗದಿಂದ ಪಾತಾಳಲೋಕದಲ್ಲಿ ಬೀಳಿಸಲ್ಪಟ್ಟರು.

ಮಹಾಭೂತಾನಿ ಭೂತಾತ್ಮಾ ಸವಿಶೇಷಾಣಿ ವೈ ಹರಿಃ ।
ಕಾಲಂ ಚ ಸಕಲಂ ರಾಜನ್ ಗಾತ್ರಭೂತಾನ್ಯದರ್ಶಯತ್ ॥೨೩॥

ಸರ್ವಭೂತಾತ್ಮನಾದ ಹರಿಯು ಶಬ್ದಾದಿವಿಶೇಷಗುಣಯುಕ್ತವಾದ ಪಂಚಮಹಾಭೂತಗಳನ್ನೂ ಸಕಲವಾದ ಕಾಲವನ್ನೂ ತನ್ನ ದೇಹದಲ್ಲಿ ತೋರಿಸಿದನು.

ತಸ್ಯ ಗಾತ್ರೇ ಜಗತ್ ಸರ್ವಮಾನೀತಮಿವ ದೃಶ್ಯತೇ ।
ನ ಕಿಂಚಿದಸ್ತಿ ಲೋಕೇಷು ಯದನಾತ್ತಂ ಮಹಾತ್ಮನಾ ॥೨೪॥

ಅವನ ಶರೀರದಲ್ಲಿ ಜಗತ್ತೆಲ್ಲವೂ ತಂದು ಸ್ಥಾಪಿಸಲ್ಪಟ್ಟಂತೆ ತೋರುತಿತ್ತು. ಆ ಮಹಾತ್ಮನ ದೇಹದಲ್ಲಿ ವಸ್ತುವು ಇಲ್ಲದಿರುವ ಜಗತ್ತಿನಲ್ಲಿ ಯಾವುದೂ ಇರಲಿಲ್ಲ.

ತದ್ಧಿ ರೂಪಮುಪೇಂದ್ರಸ್ಯ ದೇವದಾನವಮಾನವಾಃ ।
ದೃಷ್ಟ್ವಾ ಸಂಮುಮುಹುಃ ಸರ್ವೇ ವಿಷ್ಣುತೇಜೋऽಭಿಪೀಡಿತಾಃ ॥೨೫॥

ಬಲಿರ್ಬದ್ಧೋऽಭಿಮಾನೀ ಚ ಯಜ್ಞವಾಟೇ ಮಹಾತ್ಮನಾ ।
ವೈರೋಚನಕುಲಂ ಸರ್ವಂ ಪಾತಾಳೇ ವಿನಿವೇಶಿತಮ್ ॥೨೬॥

ಉಪೇಂದ್ರನ ಆ ರೂಪವನ್ನು ನೋಡಿ ವಿಷ್ಣುತೇಜಸ್ಸಿನಿಂದ ಪರಾಭೂತರಾಗಿ ದೇವದಾನವಮಾನವರೆಲ್ಲರೂ ಮೋಹಕ್ಕೆ ಒಳಗಾದರು. ಯಜಮಾನನಾದ ಬಲಿಯು ಯಜ್ಞಶಾಲೆಯಲ್ಲಿ ಮಹಾತ್ಮನಾದ ಹರಿಯಿಂದ ಬಂಧಿಸಲ್ಪಟ್ಟನು. ವೈರೋಚನನ ಕುಲವೆಲ್ಲವೂ ಪಾತಾಳಲೋಕದಲ್ಲಿ ಸ್ಥಾಪಿಸಲ್ಪಟ್ಟಿತು.

ಏವಂವಿಧಾನಿ ಕರ್ಮಾಣಿ ಕೃತ್ವಾ ಗರುಡವಾಹನಃ ।
ನ ವಿಸ್ಮಯಮುಪಾಗಚ್ಛತ್ ಪಾರಮೇಷ್ಠ್ಯೇನ ತೇಜಸಾ ॥೨೭॥

ಗರುಡವಾಹನನಾದ ಹರಿಯು ಇಂತಹ ಅದ್ಭುತಕರ್ಮಗಳನ್ನು ಮಾಡಿದರೂ ತನ್ನ ಐಶ್ವರ್ಯದಿಂದಲಾಗಲೀ ಪರಾಕ್ರಮದಿಂದಲಾಗಲೀ ವಿಸ್ಮಯವನ್ನು ಹೊಂದಲಿಲ್ಲ. (ಅಹಂಕಾರವನ್ನು ಹೊಂದಲಿಲ್ಲ)

ಸ ಸರ್ವಮಮರೈಶ್ವರ್ಯಂ ಸಂಪ್ರದಾಯ ಶಚೀಪತೇಃ ।
ತ್ರೈಲೋಕ್ಯಂ ಚ ದದೌ ಶಕ್ರೇ ವಿಷ್ಣುರ್ದಾನವಸೂದನಃ ॥೨೮॥

ದಾನವಶತ್ರುವಾದ ವಿಷ್ಣುವು ಬಲಿಯು ಅಪಹರಿಸಿದ್ದ ದೇವತೆಗಳ ಐಶ್ವರ್ಯವೆಲ್ಲವನ್ನೂ ಮತ್ತು ತ್ರಿಲೋಕಾಧಿಪತ್ಯವನ್ನೂ ಪುನಃ ಶಚೀಪತಿಯಾದ ಶಕ್ರನಿಗೆ ಕೊಟ್ಟನು.

ಏಷ ತೇ ವಾಮನೋ ನಾಮ ಪ್ರಾದುರ್ಭಾವೋ ಮಹಾತ್ಮನಃ ।
ವೇದವಿದ್ಭಿರ್ದ್ವಿಜೈರೇತತ್ ಕಥ್ಯತೇ ವೈಷ್ಣವಂ ಯಶಃ ।
ಮಾನುಷೇಷು ಯಥಾ ವಿಷ್ಣುಃ ಪ್ರಾದುರ್ಭೂತಸ್ತಥಾ ಶೃಣು ॥೨೯॥

ಇದು ಆ ಮಹಾತ್ಮನ ವಾಮನಾವತಾರದ ಕಥೆ. ವೇದಜ್ಞರಾದ ಬ್ರಾಹ್ಮಣರು ಈ ವೈಷ್ಣವ ಮಹಿಮೆಯನ್ನು ಕೊಂಡಾಡುತ್ತಾರೆ. ಮನುಷ್ಯಲೋಕದಲ್ಲಿ ವಿಷ್ಣುವು ಅವತಾರಮಾಡಿದ ರೀತಿಯ ಕಥೆಯನ್ನು ಹೇಳುತ್ತೇನೆ ಕೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಏಕೋನಚತ್ವಾರಿಂಶೋಧ್ಯಾಯಃ ॥
॥ ಅರ್ಘಾಭಿಹರಣಪರ್ವಣಿ ಅಷ್ಟಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಮೂವತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು.

★★★★★

ನಲವತ್ತನೆಯ ಅಧ್ಯಾಯ

(ದತ್ತಾತ್ರೇಯ ಅವತಾರ ಕಥನ.)

ಭೀಷ್ಮಃ

ವಿಷ್ಣೋಃ ಪುನರ್ಮಹಾರಾಜ ಪ್ರಾದುರ್ಭಾವೋ ಮಹಾತ್ಮನಃ ।
ದತ್ತಾತ್ರೇಯ ಇತಿ ಖ್ಯಾತ ಋಷಿರಾಸೀನ್ಮಹಾಯಶಾಃ ॥೧॥

ಮಹಾರಾಜನೇ! ವಿಷ್ಣುವಿನ ಇನ್ನೊಂದು ಪ್ರಾದುರ್ಭಾವ ದತ್ತಾತ್ರೇಯನೆಂಬುದು. ಹೀಗೆ ಅವನು ಮಹಾಕೀರ್ತಿವಂತನಾದ ಋಷಿಯಾಗಿ ಪ್ರಖ್ಯಾತನಾಗಿದ್ದಾನೆ.

ತೇನ ನಷ್ಟೇಷು ವೇದೇಷು ಕ್ರಿಯಾಸು ಚ ಮಖೇಷು ಚ ।
ಚಾತುರ್ವರ್ಣ್ಯೇ ಚ ಸಂಕೀರ್ಣೇ ಧರ್ಮೇ ಶಿಥಿಲತಾಂ ಗತೇ ॥೨॥

ಅಭಿವರ್ತತಿ ಚಾಧರ್ಮೇ ಸತ್ಯೇ ನಷ್ಟೇ ಸ್ಥಿತೇಽನೃತೇ ।
ಪ್ರಜಾಸು ಕ್ಷೀಯಮಾಣಾಸು ಧರ್ಮೇ ಚಾಕುಲತಾಂ ಗತೇ ॥೩॥

ಸಯಜ್ಞಾಃ ಸಕ್ರಿಯಾ ವೇದಾಃ ಪ್ರತ್ಯಾನೀತಾ ಹಿ ತೇನ ವೈ ।
ಚಾತುರ್ವರ್ಣ್ಯಮಸಂಕೀರ್ಣಂ ಕೃತಂ ತೇನ ಮಹಾತ್ಮನಾ ॥೪॥

ಲೋಕದಲ್ಲಿ ವೇದಗಳು ನಷ್ಟವಾಗಿ ಸತ್ಕರ್ಮಗಳೂ ಯಜ್ಞಗಳೂ ನಷ್ಟವಾಗಿ ಚಾತುರ್ವರ್ಣ್ಯವ್ಯವಸ್ಥೆಯು ಕಲುಷಿತಗೊಂಡು ಧರ್ಮವು ಶೈಥಿಲ್ಯವನ್ನು ಹೊಂದುತ್ತಿರಲು ಅಧರ್ಮವು ಅಭಿವೃದ್ಧಿಯನ್ನು ಹೊಂದುತ್ತಿರಲು ಸತ್ಯವು ನಷ್ಟವಾಗಿರಲು ಅನೃತವು ಬೇರೂರಿರಲು ಪ್ರಜೆಗಳು ನಾಶವನ್ನು ಹೊಂದುತ್ತಿರಲು ಧರ್ಮವು ವ್ಯಾಕುಲವಾಗಲು ದತ್ತಾತ್ರೇಯನು ಯಜ್ಞಗಳನ್ನೂ ಸತ್ಕರ್ಮಗಳನ್ನೂ ವೇದಗಳನ್ನೂ ಚಾತುರ್ವರ್ಣ್ಯ- ವ್ಯವಸ್ಥೆಗಳನ್ನು ಮರಳಿತಂದು ಆ ಮಹಾತ್ಮನಾದವನು ಧರ್ಮವು ಅಸಂಕೀರ್ಣವಾಗಿರುವಂತೆ ಮಾಡಿದನು.

ಸ ಏಷ ವೈ ಯದಾ ಪ್ರಾದಾದ್ ಹೈಹಯಾಧಿಪತೇರ್ವರಮ್ ।
ತಂ ಹೈಹಯಾನಾಮಧಿಪಸ್ತ ರ್ಜುನೋಽಭಿಪ್ರಸಾದಯತ್ ॥೫॥

ಅಂತಹ ಇವನು ಹೈಹಯಾಧಿಪತಿಯಾದ ಅರ್ಜುನನಿಗೆ ವರನನ್ನು ಕೊಟ್ಟಾಗ ಆ ಅಧಿಪತಿಯಾದ ಅರ್ಜುನನು ಅವನನ್ನು ಪ್ರಸನ್ನೀಕರಿಸಿಕೊಂಡನು.

ವನೇ ಪರ್ಯಚರತ್ ಸಮ್ಯಕ್ ಶಿಶ್ರೂಷುರನಸೂಯಕಃ ।
ನಿರ್ಮಮೋ ನಿರಹಂಕಾರೋ ದೀರ್ಘಕಾಲಮತೋಷಯತ್ ॥೬॥

ತಪೋವನದಲ್ಲಿ ಅಸೂಯೆಯನ್ನು ತೊರೆದು ಮಮತೆ ಮತ್ತು ಅಹಂಕಾರವನ್ನು ತೊರೆದು ಬಹುಕಾಲದವರೆಗೆ ದತ್ತಾತ್ರೇಯನ ಸೇವೆಯನ್ನು ಮಾಡಿ ಅವನನ್ನು ಸಂತೋಷಪಡಿಸಿದನು.

ಆರಾಧ್ಯ ದತ್ತಾತ್ರೇಯಂ ತಮಗೃಹ್ಣಾತ್ ಸ ವರಾನಿಮಾನ್ ।
ಆಪ್ತಾದಾಪ್ತತರಾನ್ ವಿಪ್ರಾದ್ ವಿದ್ವಾನ್ ವಿದ್ವನ್ನಿಷೇವಿತಾತ್ ॥೭॥

ಮೇಧಾವಿಯಾದ ಅವನು ದತ್ತಾತ್ರೇಯನ ಆರಾಧನೆಯನ್ನು ಮಾಡಿ ಆಪ್ತರಿಗಿಂತಲೂ ಆಪ್ತನಾದ ಬ್ರಾಹ್ಮಣರೂಪದಲ್ಲಿರುವ ಜ್ಞಾನಿಗಳಿಂದ ಸೇವಿತನಾದ ಅವನಿಂದ ಈ ವರಗಳನ್ನು ಪಡೆದನು.

ಋತೇऽಮರತ್ವಂ ವಿಪ್ರೇಣ ದತ್ತಾತ್ರೇಯೇಣ ಧೀಮತಾ ।
ವರೈಶ್ಚತುರ್ಭಿಃ ಪ್ರವೃತ ಇಮಾಂಸ್ತತ್ರಾಭ್ಯನಂದತ ॥೮॥

ಮೇಧಾವಿಯಾದ ವಿಪ್ರನಾದ ದತ್ತಾತ್ರೇಯನು ಅಮರತ್ವವನ್ನು ಬಿಟ್ಟು ಬೇರೆ ಯಾವುದಾದರೂ ನಾಲ್ಕು ವರಗಳನ್ನು ಕೇಳು ಎಂದು ಹೇಳಿದಾಗ ಅರ್ಜುನನು ಈ ನಾಲ್ಕು ವರಗಳನ್ನು ಅಭಿನಂದಿಸಿ ಕೇಳಿದನು.

ಶ್ರೀಮಾನ್ ಮನಸ್ವೀ ಬಲವಾನ್ ಸತ್ಯವಾಗನಸೂಯಕಃ ।
ಸಹಸ್ರಬಾಹುರ್ಭೂಯಾಸಮೇಷ ಮೇ ಪ್ರಥಮೋ ವರಃ ॥೯॥

ನಾನು ಕಾಂತಿಯುಕ್ತನೂ ಧೈರ್ಯಶಾಲಿಯೂ ಬಲಿಷ್ಠನೂ ಸತ್ಯವಚನನೂ ಅಸೂಯಾರಹಿತನೂ ಸಹಸ್ರಬಾಹುವುಳ್ಳವನೂ ಆಗಬೇಕು. ಇದು ನನ್ನ ಮೊದಲನೆಯ ವರ.

ಜರಾಯುಜಾಂಡಜಂ ಸರ್ವಂ ಸರ್ವಂ ಚೈವ ಚರಾಚರಮ್ ।
ಪ್ರಶಾಸ್ತುಮಿಚ್ಛೇ ಧರ್ಮೇಣ ದ್ವಿತೀಯಸ್ತ್ವೇಷ ಮೇ ವರಃ ॥೧೦॥

ನಾನು ಎಲ್ಲಾ ಜರಾಯುಜ ಮತ್ತು ಅಂಡಜಗಳನ್ನೂ ಎಲ್ಲಾ ಚರಾಚರಪ್ರಾಣಿಗಳನ್ನೂ ಧರ್ಮದಿಂದ ಆಳಲು ಇಚ್ಛಿಸುತ್ತೇನೆ. ಇದು ನನ್ನ ಎರಡನೆಯ ವರ.

ಪಿತೄನ್ ದೇವಾನೃಷೀನ್ ವಿಪ್ರಾನ್ ಯಜೇಯಂ ವಿಪುಲೈರ್ಮಖೈಃ ।
ಅಮಿತ್ರಾನ್ ನಿಶಿತೈರ್ಬಾಣೈರ್ಘಾತಯೇಯಂ ರಣಾಜಿರೇ ।
ದತ್ತಾತ್ರೇಯೇಹ ಭಗವನ್ ತೃತೀಯೋ ವರ ಏಷ ಮೇ ॥೧೧॥

ನಾನು ಪಿತೃಗಳನ್ನೂ ದೇವತೆಗಳನ್ನೂ ಋಷಿಗಳನ್ನೂ ಬ್ರಾಹ್ಮಣರನ್ನೂ ವಿಸ್ತಾರವಾದ ಯಜ್ಞಗಳಿಂದ ಯಾಗಮಾಡಿ ಸಂತೋಷಪಡಿಸಬೇಕು. ಯುದ್ಧದಲ್ಲಿ ಶತ್ರುಗಳನ್ನು ನಿಶಿತವಾದ ಬಾಣಗಳಿಂದ ಸಂಹರಿಸಬೇಕು. ಪೂಜ್ಯನಾದ ದತ್ತಾತ್ರೇಯನೇ! ಇದು ನನ್ನ ಮೂರನೆಯ ವರ.

ಯಸ್ಯ ನಾಸೀನ್ನ ಭವಿತಾ ನ ಚಾಸ್ತಿ ಸದೃಶಃ ಪುಮಾನ್ ।
ಇಹ ವಾ ದಿವಿ ವಾ ಲೋಕೇ ಸ ಮೇ ಹಂತಾ ಭವೇದಿತಿ ॥೧೨॥

ಈ ಲೋಕದಲ್ಲಿಯಾಗಲೀ ದೇವಲೋಕದಲ್ಲಿಯಾಗಲೀ ಯಾವನಿಗೆ ಸಮಾನನಾದ ಪುರುಷನು ಹಿಂದೆ ಇರಲಿಲ್ಲವೋ ಈಗ ಇಲ್ಲವೋ ಮುಂದೆ ಬರುವುದಿಲ್ಲವೋ ಅಂತಹವನು ನನಗೆ ಹಂತಕನಾಗಬೇಕು.

ಸೋರ್ಜುನಃ ಕೃತವೀರ್ಯಸ್ಯ ವರಃ ಪುತ್ರೋಽಭವದ್ ಭುವಿ ।
ಸ ಸಹಸ್ರಂ ಸಹಸ್ರಾಣಾಂ ಮಾಹಿಷ್ಮತ್ಯಾಮವರ್ಧತ ॥೧೩॥

ಆ ಅರ್ಜುನನು ಭೂಮಿಯಲ್ಲಿ ಕೃತವೀರ್ಯನ ಶ್ರೇಷ್ಠ ಮಗನಾಗಿ ಜನಿಸಿದ್ದನು. ಅವನು ಮಾಹಿಷ್ಮತಿಯಲ್ಲಿ ಒಂದು ಲಕ್ಷ ವರ್ಷಗಳಕಾಲ ಹೀಗೆ ಅಭಿವೃದ್ಧಿಯನ್ನು ಪಡೆದು ಜೀವಿಸಿದನು.

ಪೃಥಿವೀಮಖಿಲಾಂ ಜಿತ್ವಾ ದ್ವೀಪಾಂಶ್ಚಾಪಿ ಸಮುದ್ರಿಣಃ ।
ನಭಸೀವ ಜ್ವಲನ್ ಸೂರ್ಯಃ ಪುಣ್ಯೈಃ ಕರ್ಮಭಿರರ್ಜುನಃ ॥೧೪॥

ಭೂಮಿಯೆಲ್ಲವನ್ನೂ ಗೆದ್ದು ಸಮುದ್ರದ ಎಲ್ಲಾ ದ್ವೀಪಗಳನ್ನೂ ಗೆದ್ದು ಸೂರ್ಯನು ಆಕಾಶದಲ್ಲಿ ಹೊಳೆಯುವಂತೆ ತನ್ನ ಪುಣ್ಯಕರ್ಮಗಳಿಂದ ಅರ್ಜುನನು ಶೋಭಿಸಿದನು.

ಇಂದ್ರದ್ವೀಪಂ ಕಶೇರುಂ ಚ ತಾಮ್ರಪರ್ಣೀಂ ಗಭಸ್ತಿಮತ್ ।
ಗಾಂಧರ್ವಂ ವಾರುಣಂ ದ್ವೀಪಂ ಸೌಮ್ಯಮಾಕ್ಷಮಿತಿ ಪ್ರಭುಃ ।
ಪೂರ್ವೈರಜಿತಪೂರ್ವಾಂಶ್ಚ ದ್ವೀಪಾನಜಯದರ್ಜುನಃ ॥೧೫॥

ಇಂದ್ರದ್ವೀಪ ಕಶೇರು ತಾಮ್ರಪರ್ಣಿ ಗಭಸ್ಥಿಮತ್ ಗಾಂಧರ್ವದ್ವೀಪ ವಾರುಣದ್ವೀಪ ಸೌಮ್ಯದ್ವೀಪ ಅಕ್ಷದ್ವೀಪಗಳನ್ನು ಅವನುಗೆದ್ದು ಹಿಂದೆ ಯಾರೂ ಗೆಲ್ಲದಿದ್ದ ಎಲ್ಲಾ ದ್ವೀಪಗಳನ್ನೂ ಜಯಿಸಿದನು.

ಸೌವರ್ಣಂ ಸರ್ವಮಪ್ಯಾಸೀದ್ ವಿಮಾನವರಮುತ್ತಮಮ್ ।
ಚತುರ್ಧಾ ವ್ಯಭಜದ್ ರಾಷ್ಟ್ರಂ ತದ್ ವಿಭಜ್ಯಾನ್ವಪಾಲಯತ್ ॥೧೭॥

ಅವನ ಅನೇಕ ಅಂತಸ್ಥಿನ ಅರಮನೆಯು ಎಲ್ಲವೂ ಸುವರ್ಣಮಯವಾಗಿದ್ದಿತು. ಅವನು ತನ್ನ ರಾಷ್ಟ್ರವನ್ನು ನಾಲ್ಕು ಭಾಗಗಳಾನ್ನಾಗಿಮಾಡಿ ಅದನ್ನು ರಕ್ಷಿಸಿದನು.

ಏಕಾಂಶೇನಾಭರತ್ ಸೇನಾಮೇಕಾಂಶೇನಾವಸದ್ ಗೃಹಾನ್ ।
ಯಸ್ತು ತಸ್ಯ ತೃತೀಯೋಽಭೂದ್ ರಾಜಾಽಸೀಜ್ಜನಸಂಗ್ರಹೇ ।
ಆಪ್ತಃ ಪರಮಕಲ್ಯಾಣಃ ತೇನ ಯಜ್ಞಾನಕಲ್ಪಯತ್ ॥೧೮॥

(ಅವನು ತಾನೂ ನಾಲ್ಕು ಶರೀರಗಳನ್ನು ತೆಗೆದುಕೊಂಡನು) ಒಂದು ಅಂಶದಿಂದ ಸೈನ್ಯವನ್ನು ಪೋಷಿಸಿದನು. ಇನ್ನೊಂದು ಅಂಶದಿಂದ ಮನೆಯಲ್ಲಿ ವಾಸಿಸುತ್ತಿದ್ದನು. ಮೂರನೆಯ ಅಂಶದಿಂದ ಅವನು ಜನಸಮುದಾಯಕ್ಕೆ ರಾಜನಾಗಿ ಮೆರೆದು ಪರಮ ಶುಭಗಳನ್ನು ಮೆರೆದು ಯಜ್ಞಗಳನ್ನು ಆಚರಿಸುತ್ತಿದ್ದನು.

ಯೇ ದಸ್ಯವೋ ಗ್ರಾಮಚರಾ ಅರಣ್ಯೇ ಚ ವಸಂತಿ ಯೇ ।
ಚತುರ್ಥೇನ ಚ ಸೋಽಂಶೇನ ತಾನ್ ಸರ್ವಾನ್ ಪ್ರತ್ಯಷೇಧಯತ್ ॥೧೯॥

ಗ್ರಾಮದಲ್ಲಿ ಮತ್ತು ಅರಣ್ಯದಲ್ಲಿ ವಾಸಿಸುವ ದಸ್ಯುಗಳೆಲ್ಲರನ್ನೂ ತನ್ನ ನಾಲ್ಕನೆಯ ಅಂಶದಿಂದ ನಿಗ್ರಹಿಸಿದನು.

ಸರ್ವೇಭ್ಯಶ್ಚಾಂತವಾಸಿಭ್ಯಃ ಕಾರ್ತವೀರ್ಯೋಹರದ್ ಬಲಿಮ್ ।
ದ್ವಾರಾಣಿ ನಾಪಿಧೀಯಂತ ಪುರೇಷು ನಗರೇಷು ಚ ॥೨೦॥

ಎಲ್ಲಾ ಸಾಮಂತರಿಂದಲೂ ಕಾರ್ತವೀರ್ಯನು ಕಪ್ಪಕಾಣಿಕೆಗಳನ್ನು ಸ್ವೀಕರಿಸುತ್ತಿದ್ದನು. ಅವನ ರಾಜಧಾನಿಯಲ್ಲಾಗಲೀ ಉಳಿದನಗರಗಳಲ್ಲಾಗಲೀ ಯಾರೂ ರಾತ್ರಿಯ ವೇಳೆಯಲ್ಲಿ ಬಾಗಿಲನ್ನು ಮುಚ್ಚುತ್ತಿರಲಿಲ್ಲ.

ಸ ಏವ ರಾಷ್ಟ್ರಪಾಲೋಽಭೂತ್ ಸ್ತ್ರೀಪಾಲೋಽಭವದರ್ಜುನಃ।
ಸ ಏವಾಸೀದಜಾಪಾಲಃ ಸ ಗೋಪಾಲೋ ವಿಶಾಂಪತೇ ॥೨೧॥

ಎಲೈ ರಾಜನೇ! ಅರ್ಜುನನು ತಾನೇ ರಾಷ್ಟ್ರಪಾಲನಾಗಿದ್ದನು. ಸ್ತ್ರೀಪಾಲನಾಗಿದ್ದನು. ಗೋಪಾಲನಾಗಿದ್ದನು. ಆಡು ಮತ್ತು ಕುರಿಗಳನ್ನು ಪಾಲಿಸುವವನಾಗಿದ್ದನು.

ಸ ಸ್ಮಾರಣ್ಯೇ ಮನುಷ್ಯಾಣಾಂ ರಾಜಾ ಕ್ಷೇತ್ರಾಣಿ ರಕ್ಷತಿ ।
ಇದಂ ತು ಕಾರ್ತವೀರ್ಯಸ್ಯ ಬಭೂವಾಸದೃಶಂ ಜನೈಃ ॥೨೨॥

ಅವನು ತಾನೇ ಕಾಡಿನಲ್ಲಿ ಮನುಷ್ಯರ ಹೊಲಗಳನ್ನು ರಕ್ಷಿಸುತ್ತಿದ್ದನು. ಈ ಮುಂದೆ ಹೇಳುವ ವಿಷಯವು ಜನರಿಂದ ಎಂದೂ ಕೇಳಲ್ಪಡದ ಕಾರ್ತವೀರ್ಯನ ಮಹಾಮಹಿಮೆಯಾಗಿದ್ದಿತು.

ನ ಪೂರ್ವೇ ನಾಪರೇ ತಸ್ಯ ಗಮಿಷ್ಯಂತಿ ಗತಿಂ ನೃಪಾಃ ।
ಯದರ್ಣವೇ ಪ್ರಯಾತಸ್ಯ ವಸ್ತ್ರಂ ನ ಪರಿಷಿಚ್ಯತೇ ॥೨೩॥

ಹಿಂದಿನ ಯಾವ ರಾಜರಾಗಲೀ ಮುಂದೆ ಬರುವ ಯಾವ ರಾಜರಾಗಲೀ ಕಾರ್ತವೀರ್ಯಾರ್ಜುನನ ಈ ಮಹಿಮೆಯನ್ನು ಪಡೆಯುವುದಿಲ್ಲ. ಅವನು ಸಮುದ್ರದಲ್ಲಿ ನಡೆದುಹೊದರೆ ಅವನ ವಸ್ತ್ರವು ಒದ್ದೆಯಾಗುತ್ತಿರಲಿಲ್ಲ.

ಶತಂ ವರ್ಷಸಹಸ್ರಾಣಾಮನುಶಿಷ್ಯಾರ್ಜುನೋ ಮಹೀಮ್ ।
ದತ್ತಾತ್ರೇಯಪ್ರಸಾದೇನ ಏವಂ ರಾಜ್ಯಂ ಚಕಾರ ಸಃ ॥೨೪॥

ದತ್ತಾತ್ರೇಯನ ಅನುಗ್ರಹದಿಂದ ಅರ್ಜುನನು ಭೂಮಿಯನ್ನು ಒಂದು ಲಕ್ಷವರ್ಷಗಳ ಕಾಲ ಶಾಸಿಸಿ ರಾಜ್ಯವನ್ನು ಆಳಿದನು

ಏವಂ ಬಹೂನಿ ಕರ್ಮಾಣಿ ಚಕ್ರೇ ಲೋಕಹಿತಾಯ ಸಃ ।
ದತ್ತಾತ್ರೇಯ ಇತಿ ಖ್ಯಾತಃ ಪ್ರಾದುರ್ಭಾವೋ ಹ್ಯಯಂ ಹರೇಃ
ಕಥಿತೋ ಭರತಶ್ರೇಷ್ಠ ಶೃಣು ಭೂಯೋ ಮಹಾತ್ಮನಃ ॥೨೫॥

ದತ್ತಾತ್ರೇಯನೆಂದು ಪ್ರಸಿದ್ಧನಾದ ಈ ಹರಿಯ ಅವತಾರವು ಹೀಗೆ ಲೋಕಹಿತವಾದ ಅನೇಕ ಕರ್ಮವನ್ನು ಮಾಡಿತು. ಭರತಶ್ರೇಷ್ಠನೇ! ನಾನು ನಿನಗೆ ಅದನ್ನು ಹೇಳಿದ್ದೇನೆ. ಆ ಮಹಾತ್ಮನ ಮುಂದಿನ ಅವತಾರಗಳನ್ನು ಕೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಚತ್ವಾರಿಂಶೋಧ್ಯಾಯಃ ॥
॥ ಅರ್ಘಾಭಿಹರಣಪರ್ವಣಿ ನವಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ನಲವತ್ತನೆಯ ಅಧ್ಯಾಯವು ಮುಗಿಯಿತು.

★★★★★

ನಲವತ್ತೊಂದನೆಯ ಅಧ್ಯಾಯ

(ಪರಶುರಾಮಾವತಾರ ಕಥನ)

ಭೀಷ್ಮಃ

ಯಥಾ ಭೃಗುಕುಲೇ ಜನ್ಮ ಯದರ್ಥಂ ಚ ಮಹಾತ್ಮನಃ ।
ಜಾಮದಗ್ನ್ಯ ಇತಿ ಖ್ಯಾತಃ ಪ್ರಾದುರ್ಭಾವಸ್ತು ವೈಷ್ಣವಃ ॥೧॥

ಮಹಾತ್ಮನಾದ ವಿಷ್ಣುವಿನ ಜಾಮದಗ್ನ್ಯ ಅಥವಾ ಪರಶುರಾಮನೆಂದು ಪ್ರಸಿದ್ಧನಾದ ಅವತಾರವು ಭೃಗುಕುಲದಲ್ಲಿ ಹೇಗೆ ಮತ್ತು ಏತಕ್ಕೆ ಆಯಿತು ಎಂದು ಹೇಳುತ್ತೇನೆ ಕೇಳು.

ಜಮದಗ್ನಿಸುತೋ ರಾಜನ್ ರಾಮೋ ನಾಮ ಸ ವೀರ್ಯವಾನ್ ।
ತಂ ಕಾರ್ತವೀರ್ಯಂ ರಾಜಾನಂ ಹೇಹಯಾನಾಮರಿಂದಮಮ್ ।
ರಥಸ್ಥಂ ಪಾರ್ಥಿವಂ ರಾಮಃ ಪಾತಯಿತ್ವಾऽವಧೀದ್ ರಣೇ ॥೨॥

ರಾಜನೇ! ಜಮದಗ್ನಿಗಳ ಮಗನಾದ ಪರಾಕ್ರಮಶಾಲಿಯಾದ ರಾಮ ಎಂಬ ಹೆಸರಿನ ವಿಷ್ಣುವಿನ ಅವತಾರವಾಯಿತು. ರಾಮನು ಹೇಹಯ ಕುಲದ ಅಧಿಪತಿಯಾದ ಶತ್ರುಸೂದನನಾದ ಕಾರ್ತವೀರ್ಯನ ಮಗನಾದ ಅರ್ಜುನನನ್ನು ರಥದಿಂದ ಕೆಳಕ್ಕೆ ಉರುಳಿಸಿ ಯುದ್ಧದಲ್ಲಿ ಸಂಹಾರ ಮಾಡಿದನು.

ಹೇಹಯಾಂತಕರೋ ರಾಜನ್ ಸ ರಾಮೋ ಬಲಿನಾಂ ವರಃ ।
ಕಾರ್ತವೀರ್ಯೋ ಮಹಾವೀರ್ಯೋ ಬಲೇನಾಪ್ರತಿಮಸ್ತಥಾ ।
ರಾಮೇಣ ಜಾಮದಗ್ನ್ಯೇನ ಹತೋ ವಿಷಮಮಾಚರನ್ ॥೩॥

ರಾಜನೇ! ಹೇಹಯರಾಜನಾದ ಅರ್ಜುನನನ್ನು ವಿನಾಶಮಾಡಿದ ರಾಮನು ಬಲಿಷ್ಠರಲ್ಲಿ ಶ್ರೇಷ್ಠನಾದವನು. ಕೃತವೀರ್ಯನ ಮಗನಾದ ಮಹಾಪರಾಕ್ರಮಿಯಾದ ಬಲದಿಂದ ಅಸದೃಶನಾದ ಅರ್ಜುನನೂ ಸಹ ವಿರೋಧವನ್ನು ಮಾಡಿ ರಾಮನಿಂದ ಹತನಾದನು.

ಜಂಭಸ್ಯ ಯಜ್ಞಹಂತಾ ಸ ಋತ್ವಿಜಂ ಚೈವ ಸಂಸ್ತರೇ ।
ಜಂಭಸ್ಯ ಮೂರ್ಧ್ನಿ ಭೇತ್ತಾ ಚ ಹಂತಾ ಚ ಶತದುಂದುಭೇಃ ॥೪॥

ಸ ಏಷ ಕೃಷ್ಣೋ ಗೋವಿಂದೋ ಜಾತೋ ಭೃಗುಷು ವೀರ್ಯವಾನ್ ।
ಸಹಸ್ರಬಾಹುಮುದ್ಧರ್ತುಂ ಸಹಸ್ರಜಿತಮಾಹವೇ ॥೫॥

ಜಂಭಾಸುರನ ಯಜ್ಞವನ್ನು ಮತ್ತು ಋತ್ವಿಕ್‌ಗಳನ್ನು ಯಜ್ಞಶಾಲೆಯಲ್ಲಿ ನಾಶಮಾಡಿದವನೂ, ಜಂಭಾಸುರನ ಶಿರಸ್ಸನ್ನು ಸೀಳಿದವನೂ ಶತದುಂದುಭಿ ಎಂಬ ಅಸುರನನ್ನು ಸಂಹಾರಮಾಡಿದವನೂ ಆದ, ಈ ಗೋವಿಂದನಾದ ಕೃಷ್ಣನೇ ಪರಾಕ್ರಮಶಾಲಿಯಾಗಿ ಭೃಗುಕುಲದಲ್ಲಿ ಅವತಾರ ಮಾಡಿ ಯುದ್ಧದಲ್ಲಿ ಸಹಸ್ರ ಬಾರಿ ಜಯಶಾಲಿಯಾದ ಸಹಸ್ರ ಬಾಹುವಾದ ಅರ್ಜುನನನ್ನು ಉನ್ಮೂಲನಮಾಡಿದನು.

ಕ್ಷತ್ರಿಯಾಣಾಂ ಚತುಷ್ಷಷ್ಟಿಮಯುತಾನಾಂ ಮಹಾಯಶಾಃ ।
ಸರಸ್ವತ್ಯಾಂ ಸಮೇತಾನಿ ಏಷ ವೈ ಧನುಷಾऽರ್ದಯತ್ ॥೬॥

ಮಹಾಕೀರ್ತಿಶಾಲಿಯಾದ ಶ್ರೀಕೃಷ್ಣನು ಅರವತ್ತುನಾಲ್ಕು ದಶಸಹಸ್ರ ಕ್ಷತ್ರಿಯರನ್ನು ಸರಸ್ವತೀ ನದಿಯದಡದಲ್ಲಿ ಎದುರಿಸಿ ತನ್ನ ಧನುಸ್ಸಿನಿಂದ ಸಂಹರಿಸಿದನು.

ಬ್ರಹ್ಮದ್ವಿಷಾಂ ವಧೇ ತಸ್ಮಿನ್ ಸಹಸ್ರಾಣಿ ಚತುರ್ದಶ ।
ಪುನರ್ಜಗ್ರಾಹ ಶೂರಾಣಾಮಂತಂ ಚಕ್ರೇ ನರರ್ಷಭಃ ॥೭॥

ಪುರುಷಶ್ರೇಷ್ಠನಾದ ಕೃಷ್ಣನು ಬ್ರಹ್ಮದ್ವೇಷಿಗಳನ್ನು ವಧೆ ಮಾಡುವ ಆ ಸಂದರ್ಭದಲ್ಲಿ ಪುನಃ ಹದಿನಾಲ್ಕು ಸಾವಿರ ಶೂರರ ಜೊತೆಯಲ್ಲಿ ಸಂಗ್ರಾಮವನ್ನು ಮಾಡಿ ಆವರನ್ನು ನಾಶಮಾಡಿದನು.

ತತೋ ದಂಷ್ಟ್ರಾಃ ಸಹಸ್ರಸ್ಯ ಭಂಕ್ತ್ವಾ ಪೂರ್ವಮರಿಂದಮಃ ।
ಸಹಸ್ರಂ ಮುಸಲೇನಾಹನ್ ಸಹಸ್ರಮುದಕೃಂತತ ॥೮॥

ಅನಂತರ ಪುನಃ ಅರಿಂದಮನಾದ ಕೃಷ್ಣನು ಮೊದಲು ಸಹಸ್ರ ಸಂಖ್ಯೆಯ ಶೂರರ ಹಲ್ಲುಗಳನ್ನು ಮುರಿದು ಮುಸಲದಿಂದ ಸಹಸ್ರರನ್ನು ಘಾತಿಸಿ ಸಹಸ್ರರನ್ನು ಸಂಹರಿಸಿದನು.

ಚತುರ್ದಶ ಸಹಸ್ರಾಣಿ ಕಣಧೂಮಮಪಾಯಯತ್ ।
ಶಿಷ್ಟಾನ್ ಬ್ರಹ್ಮದ್ವಿಷೋ ಜಿತ್ವಾ ತತೋಽಸ್ನಾಯತ ಭಾರ್ಗವಃ ॥೯॥

ಪರಶುರಾಮನು ಇನ್ನು ಉಳಿದ್ದ ಹದಿನಾಲ್ಕು ಸಹಸ್ರ ಸಂಖ್ಯೆಯ ಬ್ರಹ್ಮದ್ವೇಷಿಗಳನ್ನು ಗೆದ್ದು ಅವರಿಗೆ ಸುಡುಮಣ್ಣನ್ನು ತಿನ್ನಿಸಿ ಅನಂತರ ಸ್ನಾನವನ್ನು ಮಾಡಿದನು.

ರಾಮ ರಾಮೇತ್ಯಭಿಕ್ರುಷ್ಟೈರ್ಬ್ರಾಹ್ಮಣೈಃ ಕ್ಷತ್ರಿಯಾರ್ದಿತೈಃ ।
ನ್ಯಘ್ನದ್ ದಶಸಹಸ್ರಾಣಿ ರಾಮಃ ಪರಶುನಾಽಭಿಭೂಃ ॥೧೦॥

ಕ್ಷತ್ರಿಯಪೀಡೆಗೆ ಒಳಗಾದ ಬ್ರಾಹ್ಮಣರಿಂದ ರಾಮ ರಾಮ ಎಂದು ಕರೆಯಲ್ಪಟ್ಟವನಾಗಿ ಶತ್ರುಪರಾಭವಕಾರಕನಾದ ರಾಮನು ತನ್ನ ಪರಶುವಿನಿಂದ ಹತ್ತು ಸಹಸ್ರ ಕ್ಷತ್ರಿಯರನ್ನು ಸಂಹರಿಸಿದನು.

ನ ಹ್ಯಮೃಷ್ಯತ ತಾಂ ವಾಚಮಾರ್ತ್ಯೇರ್ಭೃಶಮುದೀರಿತಾಮ್ ।
ಭೃಗೋ ರಾಮಾಭಿಧಾವೇತಿ ಯದಾಕ್ರಂದನ್ ದ್ವಿಜಾತಯಃ ॥೧೧॥

ಭಾರ್ಗಕುಲೋತ್ಪನ್ನನಾದ ರಾಮನೇ! ನಮ್ಮ ಸಹಾಯಕ್ಕಾಗಿ ಓಡಿ ಬಾ. ಎಂಬ ಆರ್ತರಾದವರ ಆಕ್ರಂದನದ ಮಾತುಗಳನ್ನು ಕೇಳಿ ಅದನ್ನು ಅವನು ಎಂದೂ ಸಹಿಸುತ್ತಿರಲಿಲ್ಲ.

ಕಾಶ್ಮೀರಾನ್ ದರದಾನ್ ಕುಂತೀನ್ ಕ್ಷುದ್ರಕಾನ್ ಮಾಳವಾನ್‌ಶಕಾನ್ ।
ಚೇದಿಕಾಶಿಕರೂಶಾಂಶ್ಚ ಋಷಿಕಾನ್ ಕ್ರಥಕೈಶಿಕಾನ್ ॥೧೨॥

ಅಂಗಾನ್ ವಂಗಾನ್ ಕಳಿಂಗಾಂಶ್ಚ ಮಾಗಧಾನ್ ಕಾಶಿಕೋಸಲಾನ್
ರಾತ್ಸಾಯಣಾನ್ ವೀತಿಹೋತ್ರಾನ್ ಕಿರಾತಾನ್ ಮಾರ್ತಿಕಾವತಾನ್ ॥

ಏತಾನನ್ಯಾಂಶ್ಚ ರಾಜನ್ಯಾನ್ ದೇಶೇ ದೇಶೇ ಸಹಸ್ರಶಃ ।
ನಿಕೃತ್ಯ ನಿಶಿತೈರ್ಬಾಣೈಃ ಸಂಪ್ರದಾಯ ವಿವಸ್ವತೇ ॥೧೪॥

ಕೀರ್ತ್ಯಾ ಕ್ಷತ್ರಿಯಕೋಟೀಭಿರ್ಮೇರುಮಂದರಭೂಷಣಾ ।
ತ್ರಿಃ ಸಪ್ತಕೃತ್ವಃ ಪೃಥಿವೀ ತೇನ ನಿಃಕ್ಷತ್ರಿಯಾ ಕೃತಾ ॥೧೫॥

ಕಾಶ್ಮೀರರೂ ದರದರೂ ಕುಂತಿಗಳೂ ಕ್ಷುದ್ರಕರೂ ಮಾಳವರೂ ಶಕರೂ ಚೇದಿಗಳೂ ಕಾಶಿಗಳೂ ಕರೂಷರೂ ಋಷಿಕರೂ ಕ್ರಥಕೈಶಿಕರೂ ಅಂಗರೂ ವಂಗರೂ ಕಳಿಂಗರೂ ಮಾಗಧರೂ ಕಾಶಿಕೋಸಲರೂ ರಾತ್ಸಾಯಣರೂ ವೀತಿಹೋತ್ರರೂ ಕಿರಾತರೂ ಮಗಧದೇಶದವರೂ ಇವರನ್ನೂ ಮತ್ತು ಬೇರೆ ದೇಶದ ಸಹಸ್ರಾರು ರಾಜರುಗಳನ್ನು ಹರಿತವಾದ ಬಾಣಗಳಿಂದ ಸಂಹರಿಸಿ ಯಮುನಿಗೆ ಅರ್ಪಿಸಿದನು. ಮೇರುಮಂದರಭೂಷಿತವಾದ ಕೋಟಿಕೋಟಿ ಕ್ಷತ್ರಿಯರಿಂದ ತುಂಬಿದ್ದ ಭೂಮಿಯನ್ನು ಇಪ್ಪತ್ತೊಂದು ಬಾರಿ ಭೂ ಪ್ರದಕ್ಷಿಣೆಯನ್ನು ಮಾಡಿ ಕ್ಷತ್ರಿಯರು ಇಲ್ಲದಂತೆ ಮಾಡಿದನು.

ಕೃತ್ವಾ ನಿಃಕ್ಷತ್ರಿಯಾಂ ಚೈವ ಭಾರ್ಗವಃ ಸ ಮಹಾಯಶಾಃ ।
ಇಂದ್ರಗೋಪಕವರ್ಣಸ್ಯ ಜೀವಂಜೀವನಿಭಸ್ಯ ಚ ॥೧೬॥

ಪೂರಯಿತ್ವಾ ಚ ಸರಿತಃ ಕ್ಷತಜಸ್ಯ ಸರಾಂಸಿ ಚ ।
ಸರ್ವಾನಷ್ಟಾದಶ ದ್ವೀಪಾನ್ ವಶಮಾನೀಯ ಭಾರ್ಗವಃ ॥೧೭॥

ಸೋಽಶ್ವಮೇಧಸಹಸ್ರಾಣಿ ವಾಜಪೇಯಶತಾನಿ ಚ ।
ಇಷ್ಟ್ವಾ ಸಾಗರಪರ್ಯಂತಾಂ ಕಾಶ್ಯಪಾಯ ಮಹೀಂ ದದೌ ।
ತಸ್ಯಾಗ್ರೇಣಾನುಪರ್ಯೇತಿ ಭೂಮಿಂ ಕೃತ್ವಾ ವಿಪಾಂಸುಲಾಮ್ ॥೧೮॥

ಮಹಾಕೀರ್ತಿವಂತನಾದ ಭಾರ್ಗವರಾಮನು ಕ್ಷತ್ರಿಯ ಕುಲವನ್ನು ಸಂಹರಿಸಿ ನದಿಗಳನ್ನು ಮತ್ತು ಸರೋವರಗಳನ್ನು ಇಂದ್ರಗೋಪದಂತೆ ಅಥವಾ ಚಕೋರದಂತೆ ಕೆಂಪಾದ ರಕ್ತಗಳಿಂದ ತುಂಬಿ ಭಾರ್ಗವನು ಹದಿನೆಂಟು ದ್ವೀಪಗಳನ್ನು ವಶಪಡಿಸಿಕೊಂಡು ಸಹಸ್ರಅಶ್ವಮೇಧ- ಯಾಗಗಳನ್ನೂ ನೂರು ವಾಜಪೇಯಯಾಗಗಳನ್ನೂ ಆಚರಿಸಿ ಸಾಗರ ಪರ್ಯಂತ ಭೂಮಿಯನ್ನು ದುಷ್ಟ ಜನರಿಂದ ರಹಿತವನ್ನಾಗಿ ಮಾಡಿ, ಅನಂತರ ಯಜ್ಞ ದಕ್ಷಿಣೆಯಾಗಿ ಆ ಭೂಮಿಯನ್ನು ಕಾಶ್ಯಪರಿಗೆ ಕೊಟ್ಟನು.

ತತಃ ಕಾಲಕೃತಾಂ ಸತ್ಯಾಂ ಭಾರ್ಗವಸ್ಯ ಮಹಾತ್ಮನಃ ।
ಗಾಥಾಮಪ್ಯತ್ರ ಗಾಯಂತಿ ಯೇ ಪುರಾಣವಿದೋ ಜನಾಃ ॥೨೦॥

ಆ ಕಾರಣದಿಂದ ಪುರಾಣವನ್ನು ತಿಳಿದ ಜನರು ಎಲ್ಲಾ ಕಾಲದಲ್ಲಿಯೂ ಶಾಶ್ವತವಾಗಿ ನಿಲ್ಲುವ ಮಹಾತ್ಮನಾದ ಭಾರ್ಗವನ ಗಾಥೆಯನ್ನು ಹಾಡುತ್ತಾರೆ.

ವೇದಿಮಷ್ಟಾದಶೋತ್ಸಂಧಾಂ ಹಿರಣ್ಯಸ್ಯಾತಿಪೌರುಷೀಮ್ ।
ರಾಮೇಣ ಜಾಮದಗ್ನ್ಯೇನ ಪ್ರತಿಜಗ್ರಾಹ ಕಾಶ್ಯಪಃ ॥೨೧॥

ಸಪ್ತ ದ್ವೀಪಗಳೂ ಸಪ್ತ ಸಮುದ್ರಗಳೂ ಮೇರುಪರ್ವತ ಕಾಂಚನಭೂಮಿ ವಜ್ರಲೇಪ ಲೋಕಾಲೋಕಪರ್ವತ ಹೀಗೆ ಹದಿನೆಂಟು ಉತ್ಕೃಷ್ಟವಾದ ಸಂಧಿಗಳನ್ನು ಹೊಂದಿರುವ ಅಲಂಕೃತವಾದ ಭೂಮಿಯನ್ನು ಜಮದಗ್ನಿಯ ಸುತನಾದ ರಾಮನಿಂದ ಕಾಶ್ಯಪರು ಸ್ವೀಕರಿಸಿದರು.

ಏವಮಿಷ್ಟ್ವಾ ಮಹಾಬಾಹುಃ ಕ್ರತುಭಿರ್ಭೂರಿದಕ್ಷಿಣೈಃ ।
ಅನ್ಯದ್ವರ್ಷಶತಂ ರಾಮಃ ಸೌಭಂ ಸಾಲ್ವಮಯೋಧಯತ್ ॥೨೨॥

ಮಹಾಬಾಹುವಾದ ರಾಮನು ಭೂರಿದಕ್ಷಣೆಯುಳ್ಳ ಅನೇಕ ಯಾಗಗಳನ್ನು ಆಚರಿಸಿ ಇನ್ನೂ ನೂರು ವರ್ಷಗಳ ಕಾಲ ಸೌಭ ಪತಿಯಾದ ಸಾಲ್ವನ ಜೊತೆಯಲ್ಲಿ ಯುದ್ಧಮಾಡಿದನು.

ತತಃ ಸ ಭೃಗುಶಾರ್ದೂಲಸ್ತಂ ಸೌಭಂ ಯೋಧಯನ್ ಪ್ರಭುಃ ।
ಸುಬಂಧುರಂ ರಥಂ ರಾಜನ್ನಾಸ್ಥಾಯ ಭರತರ್ಷಭ ।
ನಗ್ನಿಕಾನಾಂ ಕುಮಾರೀಣಾಂ ಗಾಯಂತೀನಾಮುಪಾಶೃಣೋತ್ ॥೨೩॥

ಭರತರ್ಷಭನೇ! ಸುಂದರವಾದ ರಥವನ್ನು ಏರಿ ಸೌಭನ (ಸಾಲ್ವನ) ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿದ್ದ ಪ್ರಭುವಾದ ಭೃಗುಶಾರ್ದೂಲನಾದ ರಾಮನು ಚಿಕ್ಕ ಕನ್ಯೆಯರ ಗಾಯನವನ್ನು ಕೇಳಿದನು.

ರಾಮ ರಾಮ ಮಹಾಬಾಹೋ ಭೃಗೂಣಾಂ ಕೀರ್ತಿವರ್ಧನ ।
ತ್ಯಜ ಶಸ್ತ್ರಾಣಿ ಸರ್ವಾಣಿ ನ ತ್ವಂ ಸೌಭಂ ವಧಿಷ್ಯಸಿ ॥೨೪॥

ಭೃಗುವಂಶದ ಕೀರ್ತಿವರ್ಧನನಾದ ಮಹಾಬಾಹುವಾದ ಎಲೈ ರಾಮನೇ! ನಿನ್ನ ಎಲ್ಲಾ ಶಸ್ತ್ರಗಳನ್ನೂ ತ್ಯಜಿಸು ನೀನು ಸೌಭನನ್ನು ಕೊಲ್ಲುವವನಲ್ಲ.

ಚಕ್ರಹಸ್ತೋ ಗದಾಪಾಣಿರ್ದೀನಾನಾಮಭಯಂಕರಃ ।
ಯುಧಿ ಪ್ರದ್ಯುಮ್ನಸಾಂಬಾಭ್ಯಾಂ ಕೃಷ್ಣಃ ಸೌಭಂ ವಧಿಷ್ಯತಿ ॥೨೫॥

ಚಕ್ರಧರನೂ ಗದಾಪಾಣಿಯೂ ದೀನರಿಗೆ ಅಭಯಂಕರನೂ ಆದ ಕೃಷ್ಣನು ಪ್ರದ್ಯುಮ್ನ ಸಾಂಬರ ಜೊತೆಯಲ್ಲಿ ಯುದ್ಧದಲ್ಲಿ ಸೌಭನನ್ನು ಸಂಹರಿಸುವನು.

ತಚ್ಛ್ರುತ್ವಾ ಪುರುಷವ್ಯಾಘ್ರಸ್ತತ ಏವ ವನಂ ಯಯೌ ।
ನ್ಯಸ್ಯ ಸರ್ವಾಣಿ ಶಸ್ತ್ರಾಣಿ ಕಾಲಾಕಾಂಕ್ಷೀ ಮಹಾಯಶಾಃ ॥೨೬॥

ಆ ಗಾಯನವನ್ನು ಕೇಳಿದ ಕೀರ್ತಿವಂತನಾದ ಪುರುಷವ್ಯಾಘ್ರನಾದ ರಾಮನು ಎಲ್ಲಾ ಶಸ್ತ್ರಗಳನ್ನೂ ಎಸೆದು ಕಾಲವನ್ನು ನೀರಿಕ್ಷಿಸುತ್ತಾ ತಪೋವನಕ್ಕೆ ನಡೆದನು.

ರಥಂ ಸರ್ವಾಯುಧಂ ಚೈವ ಶರಾನ್ ಪರಶುಮೇವ ಚ ।
ಧನೂಂಷ್ಯಪ್ಸು ಪ್ರತಿಷ್ಠಾಪ್ಯ ರಾಜಂಸ್ತೇಪೇ ಪರಂತಪಃ ॥೨೭॥

ರಾಜನೇ! ಪರಂತಪನಾದ ಪರಶುರಾಮನು ತನ್ನ ರಥವನ್ನೂ ಎಲ್ಲಾ ಆಯುಧಗಳನ್ನೂ ಬಾಣಗಳನ್ನೂ ಪರುಶುವನ್ನೂ ಧನುಸ್ಸುಗಳನ್ನೂ ನೀರಿನಲ್ಲಿ ಮುಳುಗಿಸಿ ತಪಸ್ಸನ್ನು ಮಾಡಿದನು.

ಹ್ರಿಯಂ ಪ್ರಜ್ಞಾಂ ಶ್ರಿಯಂ ಕೀರ್ತಿಂ ಲಕ್ಷ್ಮೀಂ ಚಾಮಿತ್ರಕರ್ಶನಃ ।
ಪಂಚಾಧಿಷ್ಠಾಯ ಧರ್ಮಾತ್ಮಾ ತಂ ರಥಂ ವಿಸಸರ್ಜ ಹ ॥೨೮॥

ಶತ್ರುಕರ್ಶನನಾದ ಮತ್ತು ಧರ್ಮಾತ್ಮನಾದ ರಾಮನು ಲಜ್ಜೆಯನ್ನೂ ಪ್ರಜ್ಞೆಯನ್ನೂ ಕಾಂತಿಯನ್ನೂ ಕೀರ್ತಿಯನ್ನೂ ಮತ್ತು ಲಕ್ಷ್ಮಿಯನ್ನೂ ಆಶ್ರಯಿಸಿ ರಥವನ್ನು ವಿಸರ್ಜನೆ ಮಾಡಿದನು.

ಆದಿಕಾಲೇ ಪ್ರವೃತ್ತಂ ಹಿ ವಿಭಜನ್ ಕಾಲಮೀಶ್ವರಃ ।
ನಾಹಂಸೀಚ್ಛ್ರದ್ಧಯಾ ಸೌಭಂ ನ ಹ್ಯಶಕ್ತೋ ಮಹಾಯಶಾಃ ॥೨೯॥

ಈಶ್ವರನಾದ ಅವನು ಸ್ವಲ್ಪ ಸಮಯದವರೆಗೆ ತಪಸ್ಸು ಮೊದಲಾದ ಸತ್ಕರ್ಮಗಳನ್ನು ವಿಶೇಷವಾಗಿ ಆಚರಿಸಿದನು. ಕನ್ಯೆಯರಮಾತಿನ ಮೇಲಿನ ಶ್ರದ್ಧೆಯಿಂದ ಸೌಭನನ್ನು ಸಂಹರಿಸಲಿಲ್ಲ. ಮಹಾಕೀರ್ತಿಶಾಲಿಯಾದ ಅವನು ಸೌಭನನ್ನು ಸಂಹರಿಸಲು ಅಶಕ್ತನೇನೂ ಅಲ್ಲ.

ಜಾಮದಗ್ನ್ಯ ಇತಿ ಖ್ಯಾತೋ ಯಸ್ತ ಸ್ಸೌ ಭಗವಾನೃಷಿಃ ।
ಸೋಽಸ್ಯ ಭಾಗಸ್ತಪಸ್ತೇಪೇ ಭಾರ್ಗವೋ ಲೋಕವಿಶ್ರುತಃ ॥೩೦॥

ಜಾಮದಗ್ನ್ಯ ಎಂಬ ಹೆಸರಿನಿಂದ ಪ್ರಸಿದ್ಧನಾದ ಭಗವಂತನಾದ ಋಷಿಯು ಈ ಕೃಷ್ಣನ ಸ್ವರೂಪಭೂತವಾದ ಅಂಶ. ಲೋಕ ವಿಶ್ರುತನಾದ ಭಾರ್ಗವರಾಮನು ತಪಸ್ಸನ್ನು ಆಚರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಏಕಚತ್ವಾರಿಂಶೋಧ್ಯಾಯಃ ॥
॥ ಅರ್ಘಾಭಿಹರಣಪರ್ವಣಿ ದಶಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★★★★★

ನಲವತ್ತೆರಡನೆಯ ಅಧ್ಯಾಯ

(ರಾಮಾವತಾರ ಕಥನ)

ಭೀಷ್ಮಃ

ಶೃಣು ರಾಜಂಸ್ತಥಾ ವಿಷ್ಣೋಃ ಪ್ರಾದುರ್ಭಾವಂ ಮಹಾತ್ಮನಃ ।
ಚತುರ್ವಿಂಶೇ ಯುಗೇ ಚಾಪಿ ಮಾರ್ಕಂಡೇಯಪುರಸ್ಸರಃ ॥೧॥

ತಿಥೌ ನಾವಮಿಕೇ ಜಜ್ಞೇ ತಥಾ ದಶರಥಾದಪಿ ।
ಕೃತ್ವಾತ್ಮಾನಂ ಮಹಾಬಾಹುಶ್ಚತುರ್ಧಾ ವಿಷ್ಣುರವ್ಯಯಃ ॥೨॥

ರಾಜನೇ! ಮಹಾತ್ಮನಾದ ವಿಷ್ಣುವಿನ ಪ್ರಾದುರ್ಭಾವವನ್ನು ಕೇಳು. ಇಪ್ಪತ್ತನಾಲ್ಕನೆಯ ಯುಗದಲ್ಲಿ ಮಾರ್ಕಂಡೇಯರ ಎದುರಿನಲ್ಲಿ ನವಮಿ ತಿಥಿಯಂದು ಮಹಾಬಾಹುವೂ ಶಾಶ್ವತನೂ ಆದ ವಿಷ್ಣುವು ನಾಲ್ಕುರೂಪಗಳನ್ನು ಧರಿಸಿದವನಾಗಿ ದಶರಥನಿಂದ ಜನಿಸಿದನು. ಸನಾತನನಾದ ವಿಷ್ಣುವು ದಶರಥನನ್ನೂ ಅನುಗ್ರಹವನ್ನೂ ಮಾಡುವುದಕ್ಕಾಗಿ ರಾಕ್ಷಸರ ನಾಶಕ್ಕಾಗಿ ಮತ್ತು ದೇವಕಾರ್ಯದ ಸಲುವಾಗಿ ಅಲ್ಲಿ ಅವತಾರಮಾಡಿದನು.

ಲೋಕೇ ರಾಮ ಇತಿ ಖ್ಯಾತಃ ತೇಜಸಾ ಭಾಸ್ಕರೋಪಮಃ ।
ಪ್ರಸಾದನಾರ್ಥಂ ಲೋಕಸ್ಯ ವಿಷ್ಣುಸ್ಸನಾತನಃ ।
ಕರ್ಮಾರ್ಥಮೇವ ಕೌಂತೇಯ ಜಜ್ಞೇ ತತ್ರ ಮಹಾಯಶಾಃ ॥೩॥

ಎಲೈ ಕೌಂತೇಯನೇ! ಅವನು ಲೋಕದಲ್ಲಿ ರಾಮನೆಂಬ ಹೆಸರಿನಿಂದ ಪ್ರಖ್ಯಾತನಾಗಿ ತೇಜಸ್ಸಿನಲ್ಲಿ ಸೂರ್ಯನಿಗೆ ಸದೃಶನಾಗಿದ್ದನು. ಲೋಕಕ್ಕೆ ಸಂತೋಷವನ್ನು ಕೊಡುವ ಸಲುವಾಗಿ ಮತ್ತು ದೇವಕಾರ್ಯದ ಸಲುವಾಗಿ ಸನಾತನನಾದ ಕೀರ್ತಿಶಾಲಿಯಾದ ವಿಷ್ಣುವು ರಾಮನಾಗಿ ಅವತರಿಸಿದನು.

ತಮಪ್ಯಾಹುರ್ಮನುಷ್ಯೇಂದ್ರಂ ಸರ್ವಭೂತಪತೇಸ್ತನುಮ್ ।
ಯಜ್ಞವಿಘ್ನಂ ತದಾ ಕೃತ್ವಾ ವಿಶ್ವಾಮಿತ್ರಸ್ಯ ಭಾರತ ।
ಸುಬಾಹುರ್ನಿಹತಸ್ತೇನ ಮಾರೀಚಸ್ತಾಡಿತೋ ಭೃಶಮ್ ॥೪॥

ಮನುಷ್ಯೇಂದ್ರನಾದ ಅವನನ್ನೂ ಸಹ ಸರ್ವಜೀವೇಶ್ವರನಾದ ವಿಷ್ಣುವಿನ ಸ್ವರೂಪಾಂಶವೆಂದೇ ಹೇಳುತ್ತಾರೆ. ಎಲೈ ಭಾರತನೇ! ಆಗ ವಿಶ್ವಾಮಿತ್ರರ ಯಜ್ಞಕ್ಕೆ ವಿಘ್ನವನ್ನು ಮಾಡಿ ಸುಬಾಹುವು ಅವನಿಂದ ಹತನಾದನು. ಮಾರೀಚನು ಅವನ ಬಾಣಗಳ ಹೊಡೆತಕ್ಕೆ ಸಿಲುಕಿದನು.

ತಸ್ಮೈ ದತ್ತಾನಿ ಶಸ್ತ್ರಾಣಿ ವಿಶ್ವಾಮಿತ್ರೇಣ ಧೀಮತಾ ।
ವಧಾರ್ಥಂ ದೇವಶತ್ರೂಣಾಂ ದುರ್ವಾರಾಣಿ ಸುರೈರಪಿ ॥೫॥

ಮೇಧಾವಿಗಳಾದ ವಿಶ್ವಾಮಿತ್ರರು ದೇವಶತ್ರುಗಳನ್ನು ಸಂಹರಿಸುವ ಸಲುವಾಗಿ ದೇವತೆಗಳೂ ಪರಿಹಾರಮಾಡಲು ಸಾಧ್ಯವಿಲ್ಲದಂತಹ ಶಸ್ತ್ರಗಳನ್ನು ಅವನಿಗೆ ಕೊಟ್ಟರು.

ವರ್ತಮಾನೇ ತದಾ ಯಜ್ಞೇ ಜನಕಸ್ಯ ಮಹಾತ್ಮನಃ ।
ಭಗ್ನಂ ಮಾಹೇಶ್ವರಂ ಚಾಪಂ ಕ್ರೀಡತಾ ಲೀಲಯಾ ಪರಮ್ ॥೬॥

ಮಹಾತ್ಮನಾದ ಜನಕನ ಯಜ್ಞವು ನಡೆಯುತ್ತಿರಲು ರಾಮನು ಕೇವಲ ಲೀಲೆಯಿಂದ ಆಟವಾಡುತ್ತಾ ಶಿವಧನುಸ್ಸನ್ನು ಮುರಿದನು.

ಕಸ್ಯಚಿತ್ತ್ವಥ ಕಾಲಸ್ಯ ಪಿತ್ರಾ ತತ್ರಾಭಿಚೋದಿತಃ ।
ಕೈಕೇಯ್ಯಾಃ ಪ್ರಿಯಮನ್ವಿಚ್ಛನ್ ವನಮಭ್ಯವಪದ್ಯತ ॥೭॥

ಸ್ವಲ್ಪ ಸಮಯದ ನಂತರ ಕೈಕೇಯಿಯ ಹಿತವನ್ನು ಬಯಿಸಿದ ತಂದೆಯಿಂದ ಪ್ರೇರಿಸಲ್ಪಟ್ಟವನಾಗಿ ವನವನ್ನು ಪ್ರವೇಶಿಸಿದನು.

ಯಃ ಸಮಾಃ ಸರ್ವಧರ್ಮಜ್ಞಃ ಚತುರ್ದಶ ವನೇ ವಸನ್ ।
ಲಕ್ಷ್ಮಣಾನುಚರೋ ರಾಮಃ ಸರ್ವಭೂತಹಿತೇ ರತಃ ।
ಚತುರ್ದಶ ವನೇ ತಪ್ತ್ವಾ ತಪೋ ವರ್ಷಾಣಿ ಭಾರತ ॥೮॥

ಎಲೈ ಭಾರತನೇ! ಸರ್ವಧರ್ಮಜ್ಞನಾದ ಅವನು ಹದಿನಾಲ್ಕು ವರ್ಷಗಳಕಾಲ ಲಕ್ಷ್ಮಣನಿಂದ ಹಿಂಬಾಲಿಸಲ್ಪಟ್ಟು ಸರ್ವಭೂತಹಿತರತನಾಗಿ ವನದಲ್ಲಿ ಸಂಚರಿಸುತ್ತಾ ತಪಸ್ಸನ್ನು ಆಚರಿಸಿದನು.

ರೂಪಿಣೀ ಯಸ್ಯ ಪಾರ್ಶ್ವಸ್ಥಾ ಸೀತೇತ್ಯಭಿಹಿತಾ ಜನೈಃ ।
ಪೂರ್ವೋಚಿತತ್ವಾತ್ ಸಾ ಲಕ್ಷ್ಮೀರ್ಭರ್ತಾರಮನುಶೋಚತೀ ।
ಜನಸ್ಥಾನೇ ವಸನ್ ಕಾರ್ಯಂ ತ್ರಿದಶಾನಾಂ ಚಕಾರ ಸಃ ॥೯॥

ಸೌಂದರ್ಯವತಿಯಾದ ಅವನ ಪಾರ್ಶ್ವದಲ್ಲಿ ಜನರಿಂದ ಸೀತಾ ಎಂಬ ನಾಮದಿಂದ ಅಭಿವಿಖ್ಯಾತಳಾದ ಅನಾದಿಕಾಲದಿಂದಲೂ ಅವನಿಗೆ ಯೋಗ್ಯಳಾದ ಪತ್ನಿಯಾದ ಲಕ್ಷ್ಮಿಯು ತನ್ನ ಪತಿಯನ್ನು ಹಿಂಬಾಲಿಸಿ ಕಲ್ಲು ಮುಳ್ಳುಗಳ ಮೇಲೆ ನಡೆದು ಶೋಕವನ್ನು ಪ್ರದರ್ಶಿಸಿದಳು. ರಾಮನು ಜನಸ್ಥಾನದಲ್ಲಿ ವಾಸಮಾಡುತ್ತಾ ದೇವತೆಗಳ ಕಾರ್ಯವನ್ನು ಮಾಡಿದನು.

ಮಾರೀಚಂ ದೂಷಣಂ ಹತ್ವಾ ಖರಂ ತ್ರಿಶಿರಸಂ ತಥಾ ।
ಚತುರ್ದಶ ಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಮ್ ।
ಜಘಾನ ರಾಮೋ ಧರ್ಮಾತ್ಮಾ ಪ್ರಜಾನಾಂ ಹಿತಕಾಮ್ಯಯಾ ॥೧೦॥

ಧರ್ಮಾತ್ಮನಾದ ರಾಮನು ಪ್ರಜೆಗಳ ಹಿತವನ್ನು ಬಯಸಿ ಮಾರೀಚನನ್ನೂ ದೂಷಣನನ್ನೂ ಖರನನ್ನೂ ತ್ರಿಶಿರಸನನ್ನೂ ಸಂಹರಿಸಿ ಹದಿನಾಲ್ಕು ಸಹಸ್ರ ಸಂಖ್ಯೆಯಲ್ಲಿದ್ದ ಉಗ್ರಕರ್ಮಿಗಳಾದ ರಾಕ್ಷಸರನ್ನು ಸಂಹರಿಸಿದನು.

ವಿರಾಧಂ ಚ ಕಬಂಧಂ ಚ ರಾಕ್ಷಸೌ ಘೋರದರ್ಶನೌ ।
ಜಘಾನ ಚ ತದಾ ರಾಮೋ ಗಂಧರ್ವೌ ಶಾಪವಿಕ್ಷತೌ ॥೧೧॥

ಆಗ ರಾಮನು ಶಾಪಕ್ಕೆ ಒಳಗಾಗಿ ರಾಕ್ಷಸಯೋನಿಯಲ್ಲಿ ಜನಿಸಿ ಭಯಂಕರ ಆಕೃತಿಯನ್ನು ಹೊಂದಿದ್ದ ವಿರಾಧ ಮತ್ತು ಕಬಂಧ ಎಂಬ ಇಬ್ಬರು ಗಂಧರ್ವರನ್ನು ಸಂಹರಿಸಿದನು.

ಸ ರಾವಣಸ್ಯ ಭಗಿನೀಂ ನಾಸಾಚ್ಛೇದಮಕಾರಯತ್ ।
ಭಾರ್ಯಾವಿಯೋಗಂ ತಂ ಪ್ರಾಪ್ಯ ಮೃಗಯನ್ ವಿಚರದ್ ವನಮ್ ॥೧೨॥

ಅವನು ರಾವಣನ ತಂಗಿಗೆ ಲಕ್ಷ್ಮಣನಿಂದ ನಾಸಾಛೇದವನ್ನು ಮಾಡಿಸಿದನು. ಅನಂತರ ಭಾರ್ಯೆಯ ವಿಯೋಗವನ್ನು ಹೊಂದಿ ಸೀತೆಯನ್ನು ಹುಡುಕುತ್ತಾ ವನದಲ್ಲಿ ಸಂಚರಿಸಿದನು.

ತತಸ್ತಮೃಶ್ಯಮೂಕಂ ಸ ಗತ್ವಾ ಪಂಪಾಮತೀತ್ಯ ಚ ।
ಸುಗ್ರೀವಂ ಮಾರುತಿಂ ದೃಷ್ಟ್ವಾ ಚಕ್ರೇ ಮೈತ್ರೀಂ ತಯೋಃ ಸ ವೈ ॥೧೩॥

ಅನಂತರ ಅವನು ಪ್ರಸಿದ್ಧವಾದ ಋಷ್ಯಮೂಕ ಪರ್ವತಕ್ಕೆ ಹೋಗಿ ಪಂಪಾಸರೋವರವನ್ನು ದಾಟಿ ಸುಗ್ರೀವನನ್ನು ಮತ್ತು ಹನುಮಂತನನ್ನು ನೋಡಿ ಅವರ ಜೊತೆಯಲ್ಲಿ ಸ್ನೇಹವನ್ನು ಮಾಡಿದನು.

ಅಥ ಗತ್ವಾ ಸ ಕಿಷ್ಕಿಂಧಾಂ ಸುಗ್ರೀವೇಣ ತದಾ ಸಹ ।
ನಿಹತ್ಯ ವಾಲಿನಂ ಯುದ್ಧೇ ವಾನರೇಂದ್ರಂ ಮಹಾಬಲಮ್ ।
ಅಭ್ಯಷಿಂಚತ್ ತದಾ ರಾಮಃ ಸುಗ್ರೀವಂ ವಾನರೇಶ್ವರಮ್ ॥೧೪॥

ರಾಮನು ಅನಂತರ ಸುಗ್ರೀವನ ಜೊತೆಯಲ್ಲಿ ಕಿಷ್ಕಿಂಧಕ್ಕೆ ಹೋಗಿ ವಾನರೇಂದ್ರನೂ, ಮಹಾಬಲನೂ ಆದ ವಾಲಿಯನ್ನು ಯುದ್ಧದಲ್ಲಿ ಕೊಂದು ಸುಗ್ರೀವನನ್ನು ವಾನರಾಧಿಪತಿಯಾಗಿ ಅಭಿಷೇಕ ಮಾಡಿದನು.

ತತಃ ಸ ವೀರ್ಯವಾನ್ ರಾಜನ್ ತ್ವರಯಾ ವೈ ಸಮುತ್ಸುಕಃ ।
ವಿಚಿತ್ಯ ವಾಯುಪುತ್ರೇಣ ಲಂಕಾದೇಶಂ ನಿವೇದಿತಮ್ ॥೧೫॥

ಸೇತುಂ ಬದ್ಧ್ವಾ ಸಮುದ್ರಸ್ಯ ವಾನರೈಃ ಸಹಿತಸ್ತದಾ ।
ಸೀತಾಯಾಃ ಪದಮನ್ವಿಚ್ಛನ್ ರಾಮೋ ಲಂಕಾಂ ವಿವೇಶ ಹ ॥೧೬॥

ರಾಜನೇ! ಅನಂತರ ಪರಾಕ್ರಮಶಾಲಿಯಾದ ರಾಮನು ತ್ವರೆಯಿಂದಲೂ ಔತ್ಸುಕ್ಯದಿಂದಲೂ ಕೂಡಿದವನಾಗಿ ವಾಯುಪುತ್ರನಾದ ಹನುಮಂತನಿಂದ ಹುಡುಕಿ ನಿವೇದಿಸಿಲ್ಪಟ್ಟ ಲಂಕಾದೇಶವನ್ನು ಕುರಿತು ಪ್ರಯಾಣವನ್ನು ಮಾಡಲು ವಾನರರ ಸಹಾಯದಿಂದ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ಸೀತೆಯ ಸ್ಥಾನವನ್ನು ಹುಡುಕುತ್ತಾ ಲಂಕೆಯನ್ನು ಪ್ರವೇಶಿಸಿದನು.

ದೇವೋರಗಗಣಾನಾಂ ಹಿ ಯಕ್ಷರಾಕ್ಷಸಪಕ್ಷಿಣಾಮ್ ।
ತತ್ರಾವಧ್ಯಂ ರಾಕ್ಷಸೇಂದ್ರಂ ರಾವಣಂ ಯುಧಿ ದುರ್ಜಯಮ್ ॥೧೭॥

ಗುಪ್ತಂ ರಾಕ್ಷಸಕೋಟೀಭಿರ್ಭಿನ್ನಾಂಜನಚಯೋಪಮಮ್ ।
ದುರ್ನಿರೀಕ್ಷ್ಯಂ ಸುರಗಣೈರ್ವರದಾನೇನ ದರ್ಪಿತಮ್ ।
ಜಘಾನ ಸಚಿವೈಃ ಸಾರ್ಧಂ ಸಾನ್ವಯಂ ರಾವಣಂ ರಣೇ ॥೧೮॥

ದೇವೋರಗಸಮೂಹಗಳಿಂದಲೂ ಯಕ್ಷರಾಕ್ಷಸಪಕ್ಷಿಗಳಿಂದಲೂ ಅವಧ್ಯನಾದಂತಹ, ಯುದ್ಧದಲ್ಲಿ ದುರ್ಜಯನಾದಂತಹ, ಕೋಟಿರಾಕ್ಷಸರಿಂದ ಗುಪ್ತನಾಗಿದ್ದಂತಹ, ಕಾಡಿಗೆಯಂತಹ ಕಪ್ಪು ಬಣ್ಣದಿಂದ ಕೂಡಿದ್ದಂತಹ, ನೋಡಲು ಅಸಾಧ್ಯವಾದಂತಹ, ದೇವತೆಗಳ ವರದಿಂದ ದರ್ಪಿಷ್ಠನಾದಂತಹ, ರಾವಣನನ್ನು ಅವನ ಸಚಿವರ ಮತ್ತು ವಂಶದವರ ಜೊತೆಯಲ್ಲಿ ಯುದ್ಧದಲ್ಲಿ ಸಂಹರಿಸಿದನು.

ತ್ರೈಲೋಕ್ಯಕಂಟಕಂ ವೀರಂ ಮಹಾಕಾಯಂ ಮಹಾಬಲಮ್ ।
ರಾವಣಂ ಸಗಣಂ ಹತ್ವಾ ರಾಮೋ ಭೂತಪತಿಃ ಪುರಾ ॥೧೯॥

ಲಂಕಾಯಾಂ ತಂ ಮಹಾತ್ಮಾನಂ ರಾಕ್ಷಸೇಂದ್ರಂ ವಿಭೀಷಣಮ್ ।
ಅಭಿಷಿಚ್ಯ ಚ ತತ್ರೈವ ಅಮರತ್ವಂ ದದೌ ತದಾ ॥೨೦॥

ತ್ರೈಲೋಕ್ಯಕಂಟಕನೂ ಮಹಾಕಾಯನೂ ಮಹಾಬಲನೂ ವೀರನೂ ಆದ ರಾವಣನನ್ನು ಭೂತಪತಿಯಾದ ರಾಮನು ಅವನ ಪರಿವಾರದಸಹಿತವಾಗಿ ಸಂಹರಿಸಿ ಲಂಕೆಯಲ್ಲಿ ಮಹಾತ್ಮನಾದ ರಾಕ್ಷಸೇಂದ್ರನಾದ ವಿಭೀಷಣನಿಗೆ ಅಬಿಷೇಕವನ್ನು ಮಾಡಿ ಆಗ ಅವನಿಗೆ ಅಮರತ್ವವನ್ನು ಕೊಟ್ಟನು.

ಆರುಹ್ಯ ಪುಷ್ಪಕಂ ರಾಮಃ ಸೀತಾಮಾದಾಯ ಪಾಂಡವ ।
ಸಬಲಃ ಸ್ವಪುರಂ ಗತ್ವಾ ಧರ್ಮರಾಜ್ಯಮಪಾಲಯತ್ ॥೨೧॥

ಎಲೈ ಪಾಂಡವನೇ! ರಾಮನು ಸೀತೆಯನ್ನು ಕರೆದುಕೊಂಡು ಪುಷ್ಪಕ ವಿಮಾನವನ್ನು ಏರಿ ತನ್ನ ಸೈನ್ಯದೊಂದಿಗೆ ತನ್ನ ಪಟ್ಟಣವಾದ ಅಯೋದ್ಯಗೆ ಹಿಂತಿರುಗಿ ಧರ್ಮದಿಂದ ರಾಜ್ಯವನ್ನು ಪಾಲಿಸಿದನು.

ದಾನವೋ ಲವಣೋ ನಾಮ ಮಧೋಃ ಪುತ್ರೋ ಮಹಾಬಲಃ ।
ಶತ್ರುಘ್ನೇನ ಹತೋ ರಾಜನ್ ತತೋ ರಾಮಸ್ಯ ಶಾಸನಾತ್ ॥೨೨॥

ರಾಜನೇ! ರಾಮನ ಶಾಸನದಂತೆ ಮಧುವಿನ ಮಗನಾದ ಮಹಾಬಲನಾದ ಲವಣಾಸುರನು ಶತ್ರುಘ್ನನಿಂದ ಕೊಲ್ಲಲ್ಪಟ್ಟನು.

ಏವಂ ಬಹೂನಿ ಕರ್ಮಾಣಿ ಕೃತ್ವಾ ಲೋಕಹಿತಾಯ ಸಃ ।
ರಾಜ್ಯಂ ಚಕಾರ ವಿಧಿವದ್ ರಾಮೋ ಧರ್ಮಭೃತಾಂ ವರಃ ॥೨೩॥

ಹೀಗೆ ಲೋಕಹಿತಕ್ಕಾಗಿ ಅನೇಕವಿಧವಾದ ಕರ್ಮಗಳನ್ನು ಮಾಡಿ ಧರ್ಮಿಷ್ಠರಲ್ಲಿ ಶ್ರೇಷ್ಠನಾದ ರಾಮನು ವಿಧಿ ಪೂರ್ವಕವಾಗಿ ರಾಜ್ಯವನ್ನು ಆಳಿದನು.

ದಶಾಶ್ವಮೇಧಾನಾಜಹ್ರೇ ಜಾರುಧ್ಯಾಂ ಸ ನಿರರ್ಗಲಾನ್ ॥೨೪॥

ಸರಯೂತೀರವಾದ ಜಾರುಧಿ ಎಂಬ ಪ್ರದೇಶದಲ್ಲಿ ನಿರಾತಂಕವಾದ ಹತ್ತು ಅಶ್ವಮೇಧಯಾಗಗಳನ್ನು ಮಾಡಿದನು.

ನಾಶ್ರೂಯನ್ತಾಶುಭಾ ವಾಚೋ ನಾತ್ಯಯಃ ಪ್ರಾಣಿನಾಂ ತದಾ ।
ನ ವಿತ್ತಜಂ ಭಯಂ ಚಾಸೀದ್ ರಾಮೇ ರಾಜ್ಯಂ ಪ್ರಶಾಸತಿ ॥೨೫॥

ರಾಮನು ರಾಜ್ಯವನ್ನು ಆಳುತ್ತಿರುವಾಗ ಕೆಟ್ಟ ಮಾತುಗಳು ಎಲ್ಲಿಯೂ ಕೇಳಿ ಬರುತ್ತಿರಲಿಲ್ಲ. ಅನಾವಶ್ಯಕವಾಗಿ ಪ್ರಾಣಿಗಳ ಸಂಹಾರವಾಗುತ್ತಿರಲಿಲ್ಲ. ಯಾರಿಗೂ ಧನ ನಿಮಿತ್ತವಾದ ಭಯವು ಇರಲಿಲ್ಲ.

ಪ್ರಾಣಿನಾಂ ಚ ಭಯಂ ನಾಸೀತ್ ಜಲಾನಲವಿಧಾನಜಮ್ ।
ಪರ್ಯದೇವನ್ ನ ವಿಧವಾ ನಾಭಾರ್ಯಃ ಕಶ್ಚನಾಭವತ್ ।
ಸರ್ವಮಾಸೀತ್ ತದಾ ತೃಪ್ತಂ ರಾಮೇ ರಾಜ್ಯಂ ಪ್ರಶಾಸತಿ ॥೨೬॥

ರಾಮನು ರಾಜ್ಯವನ್ನು ಆಳುತ್ತಿರುವಾಗ ಪ್ರಾಣಿಗಳಿಗೆ ಭಯವಾಗಲೀ ಜಲಭಯವಾಗಲೀ ಅಥವಾ ಅಗ್ನಿಭಯವಾಗಲೀ ಇರಲಿಲ್ಲ. ದೇವರಿಲ್ಲದ ಮನೆಯೂ ಇರಲಿಲ್ಲ. ಪ್ರಲಾಪಮಾಡುವಂತಹ ವಿಧವೆಯರು ಇರಲಿಲ್ಲ. ಪತ್ನಿಹೀನರಾದವರೂ ಇರಲಿಲ್ಲ. ಎಲ್ಲರೂ ತೃಪ್ತರಾಗಿದ್ದರು.

ನ ಸಂಕರಕರಾ ವರ್ಣಾ ನಾಕೃಷ್ಟಾಕರಕೋ ಜನಃ ।
ನ ಚ ಸ್ಮ ವೃದ್ಧಾ ಬಾಲಾನಾಂ ಪ್ರೇತಕಾರ್ಯಾಣಿ ಕುರ್ವತೇ ॥೨೭॥

ವರ್ಣಸಂಕರವನ್ನು ಮಾಡುವವರು ಇರಲಿಲ್ಲ. ವ್ಯವಸಾಯವನ್ನು ಮಾಡದಿದ್ದವನಿಂದ ಧಾನ್ಯವನ್ನು ಸಂಗ್ರಹಿಸುವವರು ಇರಲಿಲ್ಲ. ವೃದ್ಧರಾದವರು ತಮಗಿಂತ ಚಿಕ್ಕವರಿಗೆ ಪ್ರೇತಕಾರ್ಯಗಳನ್ನು ಮಾಡುತ್ತಿರಲಿಲ್ಲ.

ವಿಶಃ ಪರ್ಯಚರನ್ ಕ್ಷತ್ರಂ ಕ್ಷತ್ರಂ ನಾಪೀಡಯದ್ ದ್ವಿಜಃ ।
ನರಾ ನಾತ್ಯಚರನ್ ಭಾರ್ಯಾ ಭಾರ್ಯಾ ನಾತ್ಯಚರನ್ ಪತೀನ್ ।
ನಾಸೀದಪಕೃಷಿಯೋರ್ಗೇ ರಾಮೇ ರಾಜ್ಯಂ ಪ್ರಶಾಸತಿ ॥೨೮॥

ರಾಮನು ರಾಜ್ಯವನ್ನು ಆಳುತ್ತಿರುವಾಗ ವೈಶ್ಯರು ಕ್ಷತ್ರಿಯರ ಸೇವೆಯನ್ನು ಮಾಡುತ್ತಿದ್ದರು. ಕ್ಷತ್ರಿಯರು ಬ್ರಾಹ್ಮಣರನ್ನು ಪೀಡಿಸುತ್ತಿರಲಿಲ್ಲ. ಪುರುಷರು ತಮ್ಮ ಪತ್ನಿಯರನ್ನು ಮೀರಿ ನಡೆಯುತ್ತಿರಲಿಲ್ಲ. ಸ್ತ್ರೀಯರೂ ಸಹ ತಮ್ಮ ಪತಿಗಳನ್ನು ಮೀರಿ ನಡೆಯುತ್ತಿರಲಿಲ್ಲ. ಯೋಗಾಭ್ಯಾಸರಲ್ಲಿ ನಿರತರಾಗದವರು ಇರಲಿಲ್ಲ.

ಆಸನ್ ವರ್ಷಸಹಸ್ರಾಣಿ ತಥಾ ಪುತ್ರಸಹಸ್ರಿಣಃ ।
ಅರೋಗಾಃ ಪ್ರಾಣಿನಶ್ಚಾಸನ್ ರಾಮೇ ರಾಜ್ಯಂ ಪ್ರಶಾಸತಿ ॥೨೯॥

ರಾಮನು ರಾಜ್ಯವನ್ನು ಆಳುತ್ತಿರಲು ಎಲ್ಲರೂ ಸಹಸ್ರವರ್ಷ ಬದುಕಿರುತ್ತಿದ್ದರು. ಸಹಸ್ರ ಪುತ್ರರನ್ನು ಹೊಂದಿ ಎಲ್ಲರೂ ರೋಗರಹಿತರಾಗಿ ಇರುತ್ತಿದ್ದರು. ಪ್ರಾಣಿಗಳೂ ರೋಗರಹಿತವಾಗಿದ್ದವು.

ಋಷೀಣಾಂ ದೇವತಾನಾಂ ಚ ಮನುಷ್ಯಾಣಾಂ ತಥೈವ ಚ ।
ಪೃಥಿವ್ಯಾಂ ಸಹವಾಸೋऽಭೂದ್ ರಾಮೇ ರಾಜ್ಯಂ ಪ್ರಶಾಸತಿ ॥೩೦॥

ರಾಮನು ರಾಜ್ಯವಾಳುತ್ತಿರಲು ಭೂಲೋಕದಲ್ಲಿ ಋಷಿಗಳಿಗೆ ದೇವತೆಗಳಿಗೆ ಮತ್ತು ಮನುಷ್ಯರಿಗೆ ಒಟ್ಟಿಗೆ ವಾಸವು ಉಂಟಾಯಿತು.

ಸರ್ವೇ ಹ್ಯಾಸಂಸ್ಪೃಷ್ಟರೂಪಾಸ್ತದಾ ತಸ್ಮಿನ್ ವಿಶಾಂಪತೇ ।
ಧರ್ಮೇಣ ಪೃಥಿವೀಂ ಸರ್ವಾಮನುಶಾಸತಿ ಭೂಮಿಪೇ ॥೩೧॥

ಎಲೈ ರಾಜನೇ! ಭೂಪಾಲನಾದ ರಾಮನು ಧರ್ಮದಿಂದ ಭೂಮಿಯನ್ನು ಆಳುತ್ತಿರಲು ಎಲ್ಲರೂ ತೃಪ್ತರಾಗಿದ್ದರು.

ತತಸ್ತಪಶ್ಚಾಭವತಾಂ ಧರ್ಮೋ ಧರ್ಮಭೃತಾಂ ವರ ।
ಪೃಥಿವ್ಯಾಂ ಧಾರ್ಮಿಕೇ ತಸ್ಮಿನ್ ರಾಮೇ ರಾಜ್ಯಂ ಪ್ರಶಾಸತಿ ॥೩೨॥

ಎಲೈ ರಾಜನೇ! ಧರ್ಮಿಷ್ಠರಲ್ಲಿಶ್ರೇಷ್ಠನಾದವನೇ! ಧಾರ್ಮಿಕನಾದ ಆ ರಾಮನು ರಾಜ್ಯವನ್ನು ಆಳುತ್ತಿರಲು ತಪಸ್ಸು ಮತ್ತು ಧರ್ಮಗಳು ಭೂಮಿಯಲ್ಲಿ ಅಭಿವೃದ್ಧಿಯನ್ನು ಹೊಂದಿದವು.

ನಾಧರ್ಮಿಷ್ಠೋ ನರಃ ಕಶ್ಚಿದ್ ಬಭೂವ ಪ್ರಾಣಿನಾಂ ಕ್ವಚಿತ್ ।
ಪ್ರಾಣಾಪಾನೌ ಸಮೌ ಹ್ಯಾಸ್ತಾಂ ರಾಮೇ ರಾಜ್ಯಂ ಪ್ರಶಾಸತಿ ॥೩೩॥

ರಾಮನು ರಾಜ್ಯವನ್ನು ಆಳುತ್ತಿರಲು ಅಧರ್ಮಿಷ್ಠನಾದ ಮನುಷ್ಯನು ಒಬ್ಬನೂ ಒರಲಿಲ್ಲ. ಪ್ರಾಣಿಗಳಿಗೂ ಪ್ರಾಣಾಪಾನಗಳು ಸಮವಾಗಿ ಸಂಚರಿಸುತ್ತಿದ್ದವು.

ಗಾಥಾಮಪ್ಯತ್ರ ಗಾಯಂತಿ ಯೇ ಪುರಾಣವಿದೋ ಜನಾಃ ।
ಶ್ಯಾಮೋ ಯುವಾ ಲೋಹಿತಾಕ್ಷೋ ಮಾತಂಗಾನಾಮಿವರ್ಷಭಃ ।
ಆಜಾನುಬಾಹುಃ ಸುಮುಖಿಃ ಸಿಂಹಸ್ಕಂಧೋ ಮಹಾಬಲಃ ॥೩೪॥

ದಶವರ್ಷಸಹಸ್ರಾಣಿ ದಶವರ್ಷಶತಾನಿ ಚ ।
ರಾಜ್ಯಂ ಭೋಗಂ ಚ ಸಂಪ್ರಾಪ್ಯ ಶಶಾಸ ಪೃಥಿವೀಮಿಮಾಮ್ ॥೩೫॥

ಪುರಾಣವನ್ನು ತಿಳಿದ ಜನರು ಈ ವಿಷಯದಲ್ಲಿ ಒಂದು ಗೀತೆಯನ್ನು ಹಾಡುತ್ತಾರೆ. ಶ್ಯಾಮನೂ ಯುವಕನೂ ಲೋಹಿತಾಕ್ಷನೂ ಗಜೇಂದ್ರಗಮನನೂ ಆಜಾನುಬಾಹುವೂ ಸುಂದರ ಮುಖವುಳ್ಳವನೂ ಸಿಂಹಸ್ಕಂಧನೂ ಮಹಾಬಲನೂ ಆದ ರಾಮನು ರಾಜ್ಯವನ್ನೂ ಭೋಗವನ್ನೂ ಪಡೆದು ಹನ್ನೊಂದು ಸಾವಿರ ವರ್ಷಗಳಕಾಲ ಈ ಭೂಮಿಯನ್ನು ಆಳಿದನು. (ಎಂಬ ಗೀತೆಯನ್ನು ಹಾಡುತ್ತಾರೆ.)

ರಾಮೋ ರಾಮೋ ರಾಮ ಇತಿ ಪ್ರಜಾನಾಮಭವನ್ ಕಥಾಃ ।
ರಾಮಭೂತಂ ಜಗದಭೂತ್ ರಾಮೇ ರಾಜ್ಯಂ ಪ್ರಶಾಸತಿ ॥೩೬॥

ಪ್ರಜೆಗಳ ಎಲ್ಲಾ ಕಥೆಗಳು ರಾಮ ರಾಮ ರಾಮ ಎಂದೇ ಇರುತ್ತಿದ್ದವು. ರಾಮನು ರಾಜ್ಯವಾಳುತ್ತಿರುವಾಗ ಜಗತ್ತೆಲ್ಲವೂ ರಾಮ ಮಯವಾಯಿತು.

ಋಗ್ಯಜುಸ್ಸಾಮಹೀನಾಶ್ಚ ನ ತದಾऽऽಸನ್ ದ್ವಿಜಾತಯಃ ।
ಉಷಿತ್ವಾ ದಂಡಕೇ ಕಾರ್ಯಂ ತ್ರಿದಶಾನಾಂ ಚಕಾರ ಸಃ ॥೩೭॥

ಆಗ ಋಗ್‌ವೇದಸಾಮವೇದಹೀನರಾದ ಬ್ರಾಹ್ಮಣರು ಯಾರೂ ಇರಲಿಲ್ಲ. ರಾಮನು ದಂಡಕಾರಣ್ಯದಲ್ಲಿ ವಾಸಿಸಿ ದೇವತೆಗಳ ಕಾರ್ಯವನ್ನು ಎಸಗಿದನು.

ಪೂರ್ವಾಪಕಾರಿಣಂ ಸಂಖೇ ಪೌಲಸ್ತ್ಯಂ ಮನುಜರ್ಷಭಃ ।
ದೇವಗಂಧರ್ವನಾಗಾನಾಮರಿಂ ಸ ನಿಜಘಾನ ಹ ।
ಸತ್ವವಾನ್ ಗುಣಸಂಪನ್ನೋ ದೀಪ್ಯಮಾನಃ ಸ್ವತೇಜಸಾ ॥೩೮॥

ಸತ್ವಶಾಲಿಯೂ ಗುಣಸಂಪನ್ನನೂ ತನ್ನ ತೇಜಸ್ಸಿನಿಂದ ಬೆಳಗುವವನೂ ಮನುಜರ್ಷಭನೂ ಆದ ರಾಮನು ದೇವಗಂಧರ್ವನಾಗಗಳ ಶತ್ರುವಾಗಿದ್ದ ತನಗೆ ಮೊದಲು ಅಪಕಾರವನ್ನು ಮಾಡಿದ್ದಂತಹ ಪೌಲಸ್ತ್ಯನಾದ ರಾವಣನನ್ನು ಯುದ್ಧದಲ್ಲಿ ಸಂಹರಿಸಿದನು.

ಏವಮೇವ ಮಹಾಬಾಹುರಿಕ್ಷ್ವಾಕುಕುಲವರ್ಧನಃ ।
ರಾವಣಂ ಸಗಣಂ ಹತ್ವಾ ದಿವಮಾಕ್ರಮತಾಭಿಭೂಃ ।
ಇತಿ ದಾಶರಥೇಃ ಖ್ಯಾತಃ ಪ್ರಾದುರ್ಭಾವೋ ಮಹಾತ್ಮನಃ ॥೩೯॥

ಹೀಗೆ ಇಕ್ಷ್ವಾಕು ಕುಲವರ್ಧನನಾದ ಮಹಾಬಾಹುವಾದ ರಾಮನು ಪರಿವಾರಹಿತನಾದ ರಾವಣನನ್ನು ಸಂಹರಿಸಿ ತನ್ನ ಲೋಕಕ್ಕೆ ಹೊರಟು ಹೋದನು. ಇದು ಮಹಾತ್ಮನಾದ ದಶರಥನಮಗನಾದ ರಾಮನ ಅವತಾರದ ಕಥೆ.

ತತಃ ಕೃಷ್ಣೋ ಮಹಾಬಾಹುರ್ಭೀತಾನಾಮಭಯಂಕರಃ ।
ಅಷ್ಟಾವಿಂಶೇ ಯುಗೇ ರಾಜನ್ ಜಜ್ಞೇ ಶ್ರೀವತ್ಸಲಕ್ಷಣಃ ॥೪೦॥

ಎಲೈ ರಾಜನೇ! ಅನಂತರ ಭೀತರಿಗೆ ಅಭಯವನ್ನು ಕೊಡುವ ಮಹಾಬಾಹುವಾದ ಕೃಷ್ಣನು ಇಪ್ಪತ್ತೆಂಟನೆಯ ಯುಗದಲ್ಲಿ ಶ್ರೀವತ್ಸಾದಿ ಚಿನ್ಹೆಯನ್ನು ಧರಿಸಿ ಅವತರಿಸಿದನು.

ಪೇಶಲಶ್ಚ ವದಾನ್ಯಶ್ಚ ಲೋಕೇ ಬಹುಮತೋ ನೃಪು ।
ಸ್ಮೃತಿಮಾನ್ ದೇಶಕಾಲಜ್ಞಃ ಶಂಖಚಕ್ರಗದಾಸಿಧೃತ್ ॥೪೧॥

ವಾಸುದೇವ ಇತಿ ಖ್ಯಾತೋ ಲೋಕಾನಾಂ ಹಿತಕೃತ್ ಸದಾ ।
ವೃಷ್ಣೀನಾಂ ಚ ಕುಲೇ ಜಾತೋ ಭೂಮೇಃ ಪ್ರಿಯಚಿಕೀರ್ಷಯಾ ॥೪೨॥

ಸುಂದರನೂ ಉದಾರನೂ ಲೋಕದಲ್ಲಿ ನರರಿಂದ ಬಹುಮಾನಿಸಲ್ಪಟ್ಟವನೂ ವಿದ್ಯೆಯುಳ್ಳವನೂ ದೇಶಕಾಲಗಳನ್ನು ತಿಳಿದವನೂ ಶಂಖಚಕ್ರಗದಾಖಡ್ಗಗಳನ್ನು ಧರಿಸಿದವನೂ ಆದ ಅವನು. ಲೋಕಕ್ಕೆ ಹಿತವನ್ನು ಮಾಡುವ ಸಲುವಾಗಿ ಮತ್ತು ಭೂಮಿಗೆ ಹಿತವನ್ನು ಮಾಡುವ ಸಲುವಾಗಿ ವೃಷ್ಣಿಗಳ ಕುಲದಲ್ಲಿ ಜನಿಸಿ ವಾಸುದೇವ ಎಂಬ ಹೆಸರಿನಿಂದ ಪ್ರಖ್ಯಾತನಾದನು.

ಸ ನೃಣಾಮಭಯಂ ದಾತಾ ಮಧುಹೇತಿ ಸ ವಿಶ್ರುತಃ ।
ಸಶಕ್ರೋಽರ್ಜುನರಾಮಾಭ್ಯಾಂ ಕೀಲಸ್ಥಾನಾನ್ಯಸೂದಯತ್ ॥೪೩॥

ಮನುಷ್ಯರಿಗೆ ಅಭಯವನ್ನು ಕೊಡುವ ಮಧುಸೂದನನೆಂದು ಪ್ರಖ್ಯಾತನಾದ ಅವನು ಇಂದ್ರನ ಜೊತೆಯಲ್ಲಿ ಕೂಡಿಕೊಂಡು ಅರ್ಜುನ ಮತ್ತು ಬಲರಾಮರ ಜೊತೆಯಲ್ಲಿ ಮುಖ್ಯವಾದ ಅಧರ್ಮಸ್ಥಾನರಾದ ಅಸುರರನ್ನು ಸಂಹರಿಸಿದನು.

ಕಂಸಾದೀನ್ ನಿಜಘಾನಾಜೌ ದೈತ್ಯಾನ್ ಮಾನುಷವಿಗ್ರಹಾನ್ ।
ಅಯಂ ಲೋಕಹಿತಾರ್ಥಾಯ ಪ್ರಾದುರ್ಭಾವೋ ಮಹಾತ್ಮನಃ ॥೪೪॥

ಮನುಷ್ಯ ವೇಷವನ್ನು ಧರಿಸಿದ್ದ ಕಂಸಾದಿ ದೈತ್ಯರನ್ನು ಯುದ್ಧದಲ್ಲಿ ಸಂಹರಿಸಿದನು. ಇದು ಲೋಕಹಿತಕ್ಕಾಗಿ ಮಾಡಿದ ಆ ಮಹಾತ್ಮನ ಅವತಾರ.

ಕಲ್ಕೀ ವಿಷ್ಣುಯಶೋನಾಮ್ನೋ ಭೂಯಶ್ಚೋತ್ಪತ್ಸ್ಯತೇ ಹರಿಃ ।
ಕಲೇರ್ಯುಗಾಂತೇ ಸಂಪ್ರಾಪ್ತೇ ಧರ್ಮೇ ಶಿಥಿಲತಾಂ ಗತೇ ॥೪೫॥

ಕಲಿಯುಗದ ಕೊನೆಯಲ್ಲಿ ಧರ್ಮವು ಶೈಥಿಲ್ಯವನ್ನು ಹೊಂದಿರಲು ಹರಿಯು ಕಲ್ಕಿನಾಮಕನಾಗಿ ವಿಷ್ಣುಯಶಸ್ಸೆಂಬ ಬ್ರಾಹ್ಮಣನ ಮನೆಯಲ್ಲಿ ಮುಂದೆ ಅವತರಿಸುವನು.

ಪಾಷಂಡಿನಾಂ ಗಣಂ ಸರ್ವಂ ವಧಾರ್ಥಂ ಭರತರ್ಷಭ ।
ಧರ್ಮಸ್ಯ ಚ ವಿವೃದ್ಧ್ಯರ್ಥಂ ವಿಪ್ರಾಣಾಂ ಹಿತಕಾಮ್ಯಯಾ ॥೪೬॥

ಭರತ ಶ್ರೇಷ್ಠನೇ! ಪಾಷಂಡಿಗಣಗಳ ಸಂಹಾರಕ್ಕಾಗಿ ಧರ್ಮದ ಅಭಿವೃದ್ಧಿಗಾಗಿ ಮತ್ತು ಬ್ರಾಹ್ಮಣರಿಗೆ ಹಿತವನ್ನು ಮಾಡುವುದಕ್ಕಾಗಿ ಅವನು ಅವತರಿಸುವನು.

ಏತೇ ಚಾನ್ಯೇ ಚ ಬಹವೋ ದಿವ್ಯಾ ದೇವಗಣೈರ್ಯುತಾಃ ।
ಪ್ರಾದುರ್ಭಾವಾಃ ಪುರಾಣೇಷು ಗೀಯಂತೇ ಬ್ರಹ್ಮವಾದಿಭಿಃ ॥೪೭॥

ಇವೂ ಮತ್ತು ಇನ್ನೂ ಅನೇಕ ದೇವಗಣಗಳಿಂದ ಸಹಿತವಾದ ದಿವ್ಯವಾದ ಅವತಾರಗಳೂ ಬ್ರಹ್ಮವಾದಿಗಳಿಂದ ಪುರಾಣಗಳಲ್ಲಿ ಗಾನಮಾಡಲ್ಪಡುತ್ತವೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ದ್ವಿಚತ್ವಾರಿಂಶೋಧ್ಯಾಯಃ ॥
॥ ಅರ್ಘಾಭಿಹರಣಪರ್ವಣಿ ಏಕಾದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ನಲವತ್ತೆರಡನೆಯ ಅಧ್ಯಾಯವು ಮುಗಿಯಿತು.

★★★★★

ನಲವತ್ಮೂರನೆಯ ಅಧ್ಯಾಯ

(ಕೃಷ್ಣಾವತಾರಕ್ಕಾಗಿ ಭೂದೇವಿಯ ಪ್ರಾರ್ಥನೆ)

ವೈಶಂಪಾಯನಃ

ಏವಮುಕ್ತೋಥ ಕೌಂತೇಯಃ ತತಃ ಕೌರವನಂದನ ।
ಆಬಭಾಷೇ ಪುನರ್ಭೀಷ್ಮಂ ಧರ್ಮರಾಜೋ ಯುಧಿಷ್ಠಿರಃ ॥೧॥

ಕೌರವನಂದನನೇ! ಭೀಷ್ಮರಿಂದ ಹೀಗೆ ಹೇಳಲ್ಪಟ್ಟ ಧರ್ಮರಾಜನು ಪುನಃ ಭೀಷ್ಮರನ್ನು ಕುರಿತು ಮಾತನಾಡಿದನು.

ಭೂಯ ಏವ ಮನುಷ್ಯೇಂದ್ರ ಉಪೇಂದ್ರಸ್ಯ ಯಶಸ್ವಿನಃ ।
ಜನ್ಮ ವೃಷ್ಣಿಷು ವಿಜ್ಞಾತುಮಿಚ್ಛಾಮಿ ವದತಾಂ ವರ ॥೨॥

ಮನುಷ್ಯಶ್ರೇಷ್ಠನೇ! ಮಾತನಾಡುವರಲ್ಲಿ ಶ್ರೇಷ್ಠನೇ! ಕೀರ್ತಿಶಾಲಿಯಾದ ಉಪೇಂದ್ರನು ವೃಷ್ಣಿಕುಲದಲ್ಲಿ ಅವತಾರಮಾಡಿದ ಕಥೆಯನ್ನು ಪುನಃ ಕೇಳಲು ಬಯಸುತ್ತೇನೆ.

ಯಥೈವ ಭಗವಾನ್ ಜಾತಃ ಕ್ಷಿತಾವಿಹ ಜನಾರ್ದನಃ ।
ಮಾಧವೇಷು ಮಹಾಬುದ್ಧಿಸ್ತನ್ಮೇ ಬ್ರೂಹಿ ಪಿತಾಮಹ ॥೩॥

ಪಿತಾಮಹನೇ! ಭಗವಂತನಾದ ಮಹಾಮೇಧಾವಿಯಾದ ಜನಾರ್ದನನು ಈ ಭೂಮಿಯಲ್ಲಿ ಮಧುಕುಲದಲ್ಲಿ ಹೇಗೆ ಅವತರಿಸಿದನೆಂದು ನನಗೆ ಹೇಳು.

ಯದರ್ಥಂ ಚ ಮಹಾತೇಜಾ ಗಾಸ್ತು ಗೋವೃಷಭೇಕ್ಷಣಃ ।
ರರಕ್ಷ ಕಂಸಸ್ಯ ವಧಾಲ್ಲೋಕಾನಾಮಭಿರಕ್ಷಿತಾ ॥೪॥

ವೃಷಭೇಕ್ಷಣನಾದ, ಕಂಸನ ವಧೆಯನ್ನು ಮಾಡಿ ಲೋಕಗಳನ್ನು ರಕ್ಷಿಸಿದವನೂ ಮಹಾತೇಜಸ್ವಿಯೂ ಆದ ಅವನು ಗೋವುಗಳನ್ನು ಏಕೆ ರಕ್ಷಣೆಮಾಡಿದನು?

ಕ್ರೀಡತಾ ಚೈವ ಯದ್ಬಾಲ್ಯೇ ಗೋವಿಂದೇನ ವಿಚೇಷ್ಟಿತಮ್ ।
ತದಾ ಮತಿಮತಾಂ ಶ್ರೇಷ್ಠ ತನ್ಮೇ ಬ್ರೂಹಿ ಪಿತಾಮಹ ॥೫॥

ಪಿತಾಮಹನೇ! ಮೇಧಾವಿಗಳಲ್ಲಿ ಶ್ರೇಷ್ಠನಾದವನೇ! ಗೋವಿಂದನು ಬಾಲಕ್ರೀಡೆಗಳನ್ನು ಆಡುತ್ತಾ ಮಾಡಿದ ಕಾರ್ಯಗಳನ್ನು ನನಗೆ ಹೇಳು.

ಏವಮುಕ್ತಸ್ತತೋ ಭೀಷ್ಮಃ ಕೇಶವಸ್ಯ ಮಹಾತ್ಮನಃ ।
ಮಾಧವೇಷು ಯಥಾ ಜನ್ಮ ಕಥಯಾಮಾಸ ವೀರ್ಯವಾನ್ ॥೬॥

ಹೀಗೆ ಕೇಳಲ್ಪಟ್ಟ ಪರಾಕ್ರಮಶಾಲಿಯಾದ ಭೀಷ್ಮನು ಮಹಾತ್ಮನಾದ ಕೇಶವನು ಮಧುಕುಲದಲ್ಲಿ ಹೇಗೆ ಅವತರಿಸಿದನೆಂದು ಹೇಳಿದನು.

ಭೀಷ್ಮಃ

ಹಂತ ತೇ ಕಥಯಿಷ್ಯಾಮಿ ಯುಧಿಷ್ಠಿರ ಯಥಾತಥಮ್ ।
ಯತೋ ನಾರಾಯಣಸ್ಯೇಹ ಜನ್ಮ ವೃಷ್ಣಿಷು ಕೌರವ ॥೭॥

ಯುಧಿಷ್ಠಿರನೇ! ಕೌರವನೇ! ನಾರಾಯಣನು ವೃಷ್ಣಿಕುಲದಲ್ಲಿ ಹೇಗೆ ಅವತಾರಮಾಡಿದನೆಂದು ಸಂತೋಷದಿಂದ ಯಥಾರ್ಥವಾಗಿ ಹೇಳುವೆನು.

ಪುರಾ ಲೋಕೇ ಮಹಾರಾಜ ವರ್ತಮಾನೇ ಕೃತೇ ಯುಗೇ ।
ಆಸೀತ್ ತ್ರೈಲೋಕ್ಯವಿಖ್ಯಾತಃ ಸಂಗ್ರಾಮಸ್ತಾರಕಾಮಯಃ ॥೮॥

ಮಹಾರಾಜನೇ! ಹಿಂದೆ ಕೃತಯುಗದಲ್ಲಿ ಮೂರು ಲೋಕಗಳಿಲ್ಲಿಯೂ ಪ್ರಖ್ಯಾತವಾದ ತಾರಕಾಮಯವಾದ ದೇವಾಸುರ ಸಂಗ್ರಾಮವು ನಡೆಯಿತು.

ವಿರೋಚನೋ ಮಯಸ್ತಾರೋ ವರಾಹಃ ಶ್ವೇತ ಏವ ಚ ।
ಲಂಬಃ ಕಿಶೋರಃ ಸ್ವರ್ಭಾನುರರಿಷ್ಟೋऽಥ ಕ್ಷರಶ್ಚ ವೈ ॥೯॥

ಏತೇ ಚಾನ್ಯೇ ಚ ಬಹವೋ ದೈತ್ಯಸಂಘಾಃ ಸಹಸ್ರಶಃ ।
ನಾನಾಶಸ್ತ್ರಧರಾ ರಾಜನ್ ನಾನಾಭೂಷಣವಾಹನಾಃ ।
ದೇವತಾನಾಮಭಿಮುಖಾಃ ತಸ್ಥುರ್ದೈತೇಯದಾನವಾಃ ॥೧೦॥

ಎಲೈ ರಾಜನೇ! ವಿರೋಚನ ಮಯ ತಾರ ವರಾಹ ಶ್ವೇತ ಲಂಭ ಕಿಶೋರ ರಾಹು ಅರಿಷ್ಟ ಕ್ಷರ ಇವರೇ ಮೊದಲಾದ ದೈತ್ಯಸಮೂಹಗಳು ಸಹಸ್ರಸಂಖ್ಯೆಯಲ್ಲಿ ನಾನಾಭೂಷಣಗಳಿಂದ ಭೂಷಿತರಾಗಿ ನಾನಾವಾಹನಗಳನ್ನು ಸ್ವೀಕರಿಸಿ ನಾನಾ ಶಸ್ತ್ರಗಳನ್ನು ಹಿಡಿದು ದೇವತೆಗಳಿಗೆ ಅಭಿಮುಖವಾಗಿ ಯುದ್ಧದಲ್ಲಿ ನಿಂತರು.

ದೇವಾಸ್ತು ಯುಧ್ಯಮಾನಾಸ್ತೇ ದಾನವಾನಭಿಯೂ ರಣೇ ।
ಆದಿತ್ಯಾ ವಸವೋ ರುದ್ರಾಃ ಸಾಧ್ಯಾ ವಿಶ್ವೇ ಮರುದ್ಗಣಾಃ ।
ಇಂದ್ರೋ ಯಮಶ್ಚ ಚಂದ್ರಶ್ಚ ವರುಣೋऽಥ ಧನೇಶ್ವರಃ ॥೧೧॥

ಅಶ್ವಿನೌ ಚ ಮಹಾವೀರ್ಯೌ ಯೇ ಚಾನ್ಯೇ ದೇವತಾಗಣಾಃ ।
ಚಕ್ರುರ್ಯುದ್ಧಂ ಮಹಾಘೋರಂ ದಾನವೈಶ್ಚ ಯಥಾಬಲಮ್ ॥೧೨॥

ದೇವತೆಗಳು ದಾನವರ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಾ ಅವರು ದಾನವರಿಗೆ ಅಭಿಮುಖವಾಗಿ ಆಕ್ರಮಿಸಿದರು. ಆದಿತ್ಯರು ವಸುಗಳು ರುದ್ರರು ಸಾಧರು ವಿಶ್ವೇದೇವತೆಗಳು ಮರುದ್ಗಣಗಳು ಇಂದ್ರ ಯಮ ಚಂದ್ರ ವರುಣ ಕುಬೇರ ಪರಾಕ್ರಮಶಾಲಿಗಳಾದ ಅಶ್ವಿನೀ ದೇವತೆಗಳು ಮತ್ತು ಉಳಿದ ದೇವತಾಗಣಗಳೂ ಸಹ ದಾನವರ ಜೊತೆಯಲ್ಲಿ ತಮ್ಮ ತಮ್ಮ ಶಕ್ತಿಗೆ ಅನುಗುಣವಾಗಿ ಘೋರವಾದ ಯುದ್ಧವನ್ನು ಮಾಡಿದವು.

ಯುಧ್ಯಮಾನಾಃ ಸಮೀಯುಶ್ಚ ದೇವಾ ದೈತೇಯದಾನವೈಃ ।
ತದ್ಯುದ್ಧಮಭವದ್ ಘೋರಂ ದೇವದಾನವಸಂಕುಲಮ್ ॥೧೩॥

ದೇವತೆಗಳು ಮತ್ತು ದೈತ್ಯದಾನವರು ಯುದ್ಧವನ್ನು ಮಾಡುತ್ತಾ ಪರಸ್ಪರ ಸಂಧಿಸಿದರು. ದೇವದಾನವ ಕ್ಷಯಕ್ಕೆ ಕಾರಣವಾದ ಘೋರವಾದ ಆ ಯುದ್ಧವು ನಡೆಯಿತು.

ತಾಭ್ಯಾಂ ಬಲಾಭ್ಯಾಂ ಸಂಜಜ್ಞೇ ತುಮುಲೋ ವಿಗ್ರಹಸ್ತದಾ ।
ತೀಕ್ಷ್ಣೈಃ ಶಸ್ತ್ರೈಃ ಕಿರಂತೋऽಥ ಅಭ್ಯಯುರ್ದೇವದಾನವಾಃ ॥೧೪॥

ಆ ಎರಡು ಸೈನ್ಯಗಳ ನಡುವೆ ಆಗ ಘೋರವಾದ ಯುದ್ಧವು ನಡೆಯಿತು. ದೇವತೆಗಳು ಮತ್ತು ದಾನವರು ತೀಕ್ಷ್ಣವಾದ ಆಯುಧಗಳನ್ನು ಪ್ರಯೋಗಿಸುತ್ತಾ ಒಬ್ಬರ ಮೇಲೆ ಒಬ್ಬರು ಮುಂದುವರೆದರು.

ಘ್ನಂತಿ ದೇವಾನ್ ಸಗಂಧರ್ವಾನ್ ಸಯಕ್ಷೋರಗಚಾರಣಾನ್ ।
ದುದ್ರುವುಃ ಸಂಪರಿಶ್ರಾಂತಾಃ ಕ್ಷೀಣಪ್ರಹರಣಾ ರಣೇ ॥೧೫॥

ದಾನವರು ದೇವತೆಗಳನ್ನೂ ಗಂಧರ್ವರನ್ನೂ ಯಕ್ಷರನ್ನೂ ಚಾರಣರನ್ನೂ ಸಂಹರಿಸುತ್ತಿರಲು ಯುದ್ಧದಲ್ಲಿ ತಮ್ಮ ಆಯುಧಗಳನ್ನೆಲ್ಲಾ ಬರಿದುಮಾಡಿಕೊಂಡು ದಣಿದ ದೇವತೆಗಳು ಓಡಿ ಹೋದರು.

ತೇ ವಧ್ಯಮಾನಾ ದೈತೇಯೈರ್ದೇವಸಂಘಾಸ್ತದಾ ರಣೇ ।
ತ್ರಾತಾರಂ ಮನಸಾ ಜಗ್ಮುರ್ದೇವಂ ನಾರಾಯಣಂ ಪ್ರಭುಮ್ ॥೧೬॥

ದೈತ್ಯದಾನವರಿಂದ ಯುದ್ಧದಲ್ಲಿ ಹೀಗೆ ಪ್ರಹಾರಗಳಿಗೆ ಸಿಕ್ಕಿದ ದೇವತೆಗಳು ಸ್ವಾಮಿಯಾದ ದೇವನಾದ ನಾರಾಯಣನನ್ನು ರಕ್ಷಣೆಗಾಗಿ ಮನಸ್ಸಿನಲ್ಲಿ ಸ್ಮರಿಸಿದರು.

ಏತಸ್ಮಿನ್ನಂತರೇ ತತ್ರ ಜಗಾಮ ಹರಿರೀಶ್ವರಃ ।
ದೀಪಯನ್ ಜ್ಯೋತಿಷಾ ಭೂಮಿಂ ಶಂಖಚಕ್ರಗದಾಧರಃ ॥೧೭॥

ಈ ಮಧ್ಯದಲ್ಲಿ ಪ್ರಭುವಾದ ಶಂಖಚಕ್ರಗದಾಧರನಾದ ಸರ್ವೇಶ್ವರನಾದ ಹರಿಯು ತನ್ನ ಕಾಂತಿಯಿಂದ ಭೂಮಿಯನ್ನು ಬೆಳಗುತ್ತಾ ಅಲ್ಲಿಗೆ ಬಂದನು.

ತಮಾಗತಂ ಸುಪರ್ಣಸ್ಥಂ ವಿಷ್ಣುಂ ಲೋಕನಮಸ್ಕೃತಮ್ ।
ದೃಷ್ಟ್ವಾ ಮುದಾ ಯುತಾಃ ಸರ್ವೇ ಭಯಂ ತ್ಯಜ್ಯ ರಣೇ ಸುರಾಃ।
ಚಕ್ರುರ್ಯುದ್ಧಂ ಪುನಃ ಸರ್ವೇ ದೇವಾ ದೈತೇಯದಾನವೈಃ ॥೧೮॥

ಲೋಕನಮಸ್ಕೃತನಾದ ವಿಷ್ಣುವು ಗರುಡಾರೂಢನಾಗಿ ಅಲ್ಲಿಗೆ ಬಂದುದನ್ನು ನೋಡಿದ ದೇವತೆಗಳು ಸಂತೋಷದಿಂದ ಯುಕ್ತರಾಗಿ ಎಲ್ಲರೂ ಭಯವನ್ನು ಪರಿತ್ಯಾಗ ಮಾಡಿ ದೈತ್ಯದಾನವರ ಜೊತೆಯಲ್ಲಿ ಪುನಃ ಯುದ್ಧವನ್ನು ಮಾಡಿದರು.

ತದ್ಯುದ್ಧಮಭವದ್ ಘೋರಮಚಿಂತ್ಯಂ ರೋಮಹರ್ಷಣಮ್ ।
ಜಘ್ನುರ್ದೈತ್ಯಾನ್ ರಣೇ ದೇವಾಃ ಸರ್ವೇ ಶಕ್ರಪುರೋಗಮಾಃ ।
ತೇ ವಧ್ಯಮಾನಾ ವಿಬುಧೈರ್ದುದ್ರುವುರ್ದೈತ್ಯದಾನವಾಃ ॥೧೯॥

ಆ ಯುದ್ಧವು ಅಚಿಂತ್ಯವೂ ಮತ್ತು ರೋಮಾಂಚಕಾರಿಯೂ ಮತ್ತು ಘೋರವೂ ಆಗಿದ್ದಿತು. ಇಂದ್ರನೇ ಮೊದಲಾದ ಎಲ್ಲಾ ದೇವತೆಗಳೂ ಯುದ್ಧದಲ್ಲಿ ದೈತ್ಯರನ್ನು ಸಂಹರಿಸಿದರು ದೇವತೆಗಳ ಪ್ರಹಾರಕ್ಕೆ ಒಳಗಾದ ದೈತ್ಯದಾನವರು ಯುದ್ಧ ಭೂಮಿಯಿಂದ ಓಡಿ ಹೋದರು.

ವಿದ್ರುತಾನ್ ದಾನವಾನ್ ದೃಷ್ಟ್ವಾ ತದಾ ಭಾರತ ಸಂಯುಗೇ ।
ಕಾಲನೇಮಿರಿತಿ ಖ್ಯಾತೋ ದಾನವಃ ಪ್ರತ್ಯದೃಶ್ಯತ ॥೨೦॥

ಎಲೈ ಭಾರತನೇ! ಯುದ್ಧದಲ್ಲಿ ದಾನವರು ಪಲಾಯನ ಮಾಡುತ್ತಿರುವುದನ್ನು ನೋಡಿದ ಕಾಲನೇಮಿಯೆಂಬ ದಾನವನು ಆಗ ದೇವತೆಗಳ ಎದುರಿಗೆ ಕಾಣಿಸಿಕೊಂಡನು.

ಶತಪ್ರಹರಣೋ ಘೋರಃ ಶತಬಾಹುಃ ಶತಾನನಃ ।
ಶತಶೀರ್ಷಃ ಸ್ಥಿತಃ ಶ್ರೀಮಾನ್ ಶತಶೃಂಗ ಇವಾಚಲಃ ॥೨೧॥

ನೂರು ಶಿರಸ್ಸುಗಳನ್ನುಳ್ಳ ನೂರು ಮುಖಗಳನ್ನುಳ್ಳ ನೂರು ಬಾಹುಗಳಲ್ಲಿ ನೂರು ಆಯುಧಗಳನ್ನು ಧರಿಸಿದ ಘೋರನಾದ ಕಾಂತಿಯುಕ್ತನಾದ ಅವನು ನೂರು ಶಿಖರವುಳ್ಳ ಪರ್ವತದಂತೆ ಬಂದು ನಿಂತನು.

ಭಾಸ್ಕರಾಕಾರಮಕುಟಃ ಶಿಂಜಿತಾಭರಣಾಂಗದಃ ।
ಧೂಮ್ರಕೇಶೋ ಹರಿಶ್ಮಶ್ರುರ್ನಿರ್ದಗ್ಧೋಷ್ಠಪುಟಾನನಃ ॥೨೨॥

ತ್ರೈಲೋಕ್ಯಾಂತರವಿಸ್ತಾರೀ ಧಾರಯನ್ ವಿಪುಲಂ ವಪುಃ ।
ತರ್ಜಯನ್ ವೈ ರಣೇ ದೇವಾನ್ ಧಾದಯನ್ ವೈ ದಿಶೋ ದಶ।
ಅಭ್ಯಧಾವತ್ ಸುಸಂಕ್ರುದ್ಧೋ ವ್ಯಾದಿತಾಸ್ಯ ಇವಾಂತಕಃ ॥೨೩॥

ಸೂರ್ಯನಂತೆ ಹೊಳೆಯುವ ಕಿರೀಟವನ್ನು ಧರಿಸಿ ಆಭರಣಗಳ ಮತ್ತು ಅಂಗದಗಳ ಶಿಂಜನ ಧ್ವನಿಯಿಂದ ಯುಕ್ತನಾಗಿ ಧೂಮ್ರಕೇಶನೂ ಹರಿತವರ್ಣದ ಶ್ಮಶ್ರುವು ಆದ ಅವನು ಹಲ್ಲುಳ್ಳವನೂ ಮುಡಿಗಳನ್ನು ಕಚ್ಚಿ ಮೂರು ಲೋಕಮಧ್ಯದಲ್ಲಿ ವ್ಯಾಪಿಸಿದ ವಿಸ್ತಾರವಾದ ದೇಹವನ್ನು ಧರಿಸಿ ಯುದ್ಧದಲ್ಲಿ ದೇವತೆಗಳನ್ನು ಹೆದರಿಸುತ್ತಾ, ಹತ್ತು ದಿಕ್ಕುಗಳನ್ನು ಆವರಿಸಿ ಬಾಯಿಯನ್ನು ತೆರೆದುಕೊಂಡು ಬಂದ ಯಮನಂತೆ ಬಹಳ ಸಿಟ್ಟಿನಿಂದ ದೇವತೆಗಳ ಕಡೆಗೆ ಧಾವಿಸಿದನು.

ತತ್ರ ಶಸ್ತ್ರಪ್ರತಾಪೈಶ್ಚ ದೇವಾನ್ ಧರ್ಷಿತವಾನ್ ರಣೇ ।
ಅಥಾಭ್ಯಯುಃ ಸುರಾನ್ ಸರ್ವಾನ್ ಪುನಸ್ತೇ ದೈತ್ಯದಾನವಾಃ ।
ಆಪೀಡಯನ್ ರಣೇ ಕ್ರುದ್ಧಾಸ್ತತೋ ದೇವಾನ್ ಯುಧಿಷ್ಠಿರ ॥೨೪॥

ಎಲೈ ಯುಧಿಷ್ಠಿರನೇ! ಅವನು ಯುದ್ಧದಲ್ಲಿ ತನ್ನ ಶಸ್ತ್ರ ಪ್ರಭಾವದಿಂದ ದೇವತೆಗಳನ್ನು ಪರಾಭವಗೊಳಿಸಿದನು. ಆಗ ಮೊದಲು ಓಡಿ ಹೋಗಿದ್ದ ದೈತ್ಯ ದಾನವರೆಲ್ಲರೂ ಪುನಃ ಹಿಂತಿರುಗಿ ಬಂದು ಯುದ್ಧದಲ್ಲಿ ಎಲ್ಲ ದೇವತೆಗಳನ್ನೂ ಪೀಡಿಸಲು ಪ್ರಾರಂಭಿಸಿದರು.

ತೇ ವಧ್ಯಮಾನಾ ವಿಬುಧಾಃ ಸಮರೇ ಕಾಲನೇಮಿನಾ ।
ದೈತ್ಯೈಶ್ಚೈವ ಮಹಾರಾಜ ದುದ್ರುವುಃ ಸಹಿತಾ ದಿಶಃ ॥೨೫॥

ಮಹಾರಾಜನೇ! ಕಾಲನೇಮಿಯಿಂದಲೂ ಉಳಿದ ದೈತ್ಯರಿಂದಲೂ ಯುದ್ಧದಲ್ಲಿ ಪೀಡಿಸಲ್ಪಟ್ಟ ದೇವತೆಗಳೆಲ್ಲರೂ ದಿಕ್ಕು ದಿಕ್ಕುಗಳಿಗೆ ಓಡಿ ಹೋದರು.

ವಿದ್ರುತಾನ್ ವಿಬುಧಾನ್ ದೃಷ್ಟ್ವಾ ಕಾಲನೇಮಿರ್ಮಹಾಸುರಃ ।
ಇಂದ್ರಂ ಯಮಂ ಚ ವರುಣಂ ವಾಯುಂ ಚ ಧನದಂ ರವಿಮ್ ।
ಏತಾಂಶ್ಚಾನ್ಯಾನ್ ಬಲಾಜ್ಜಿತ್ವಾ ತೇಷಾಂ ಕಾರ್ಯಾಣ್ಯವಾಪ ಸಃ ॥೨೬॥

ದೇವತೆಗಳು ಓಡಿ ಹೋಗುತ್ತಿರುವುದನ್ನು ನೋಡಿದ ಮಹಾಸುರನಾದ ಕಾಲನೇಮಿಯು ಇಂದ್ರ ಯಮ ವರುಣ ವಾಯು ಕುಬೇರ ಸೂರ್ಯ ಇವರನ್ನೂ ಮತ್ತು ಉಳಿದ ದೇವತೆಗಳನ್ನೂ ತನ್ನ ಬಲದಿಂದ ಗೆದ್ದು ಅವರ ಕಾರ್ಯಗಳನ್ನೂ ಮಹಿಮೆಗಳನ್ನೂ ಪಡೆದನು.

ತಾನ್ ಸರ್ವಾಂಸ್ತರಸಾ ಜಿತ್ವಾ ಕಾಲನೇಮಿರ್ಮಹಾಸುರಃ ।
ದದರ್ಶ ಸಮರೇ ವಿಷ್ಣುಂ ಸುಪರ್ಣಸ್ಥಂ ಮಹಾದ್ಯುತಿಮ್ ॥೨೭॥

ಮಹಾಸುರನಾದ ಕಾಲನೇಮಿಯು ಅವರೆಲ್ಲರನ್ನೂ ಶೀಘ್ರವಾಗಿ ಜಯಿಸಿ ಗರುಡಾರೂಢನಾದ ಮಹಾ ಕಾಂತಿಯುಕ್ತನಾದ ವಿಷ್ಣುವನ್ನು ಯುದ್ಧದಲ್ಲಿ ನೋಡಿದನು.

ತಂ ದೃಷ್ಟ್ವಾ ಕ್ರೋಧತಾಮ್ರಾಕ್ಷಃ ತರ್ಜಯನ್ನಭ್ಯಯಾತ್ ತದಾ ।
ಸ ಬಾಹುಶತಮುದ್ಯಮ್ಯ ಸರ್ವಾಸ್ತ್ರಗ್ರಹಣಂ ರಣೇ ।
ರೋಷಾದ್ ಭಾರತ ದೈತ್ಯೇಂದ್ರೋ ವಿಷ್ಣೋರುರಸಿ ಪಾತಯತ್ ॥೨೮॥

ಭಾರತನೇ! ಅವನನ್ನು ನೋಡಿ ಕೆಂಪಾದಕಣ್ಣುಳ್ಳ ಕಾಲನೇಮಿಯು ಅವನನ್ನು ಹೆದರಿಸುತ್ತಾ ಎದುರಿಗೆ ಬಂದು ಎಲ್ಲಾ ಅಸ್ತ್ರಗಳನ್ನೂ ಧರಿಸಿದ್ದ ತನ್ನ ನೂರು ಬಾಹುಗಳನ್ನೂ ಎತ್ತಿ ರೋಷದಿಂದ ಎದೆಯಲ್ಲಿ ಹೊಡೆದನು.

ದೈತ್ಯಾಶ್ಚ ದಾನವಾಶ್ಚೈವ ಸರ್ವೇ ಮಯಪುರೋಗಮಾಃ ।
ಸ್ವಾನ್ಯಾಯುಧಾನಿ ಸಂಗೃಹ್ಯ ಸರ್ವೇ ವಿಷ್ಣುಮುಪಾದ್ರವನ್ ॥೨೯॥

ಮಯನೇ ಮೊದಲಾದ ಎಲ್ಲಾ ದೈತ್ಯರೂ ಮತ್ತು ದಾನವರೂ ತಮ್ಮ ತಮ್ಮ ಆಯುಧಗಳನ್ನು ತೆಗೆದುಕೊಂಡು ವಿಷ್ಣುವಿನ ಕಡೆಗೆ ಧಾವಿಸಿ ಬಂದರು.

ಸ ತಾಡ್ಯಮಾನೋಽತಿಬಲೈರ್ದೈತ್ಯೈಃ ಸರ್ವಾಯುಧೋದ್ಯತೈಃ ।
ನ ಚಚಾಲ ಹರಿರ್ಯುದ್ಧೇ ಕಂಪ್ಯಮಾನ ಇವಾಚಲಃ ॥೩೦॥

ಎಲ್ಲಾ ಆಯುಧಗಳನ್ನು ಹಿಡಿದ ಅತಿ ಬಲಿಷ್ಠರಾದ ದೈತ್ಯರಿಂದ ಯುದ್ಧದಲ್ಲಿ ಪ್ರಹಾರಗಳಿಗೆ ಒಳಗಾದ ವಿಷ್ಣುವು ಅಲುಗಾಡಿಸಲು ಪ್ರಯತ್ನಿಸಿದ ಪರ್ವತದಂತೆ ಅಲುಗಾಡದೆ ನಿಂತನು.

ಪುನರುದ್ಯಮ್ಯ ಸಂಕ್ರುದ್ಧಃ ಕಾಲನೇಮಿರ್ದೃಢಾಂ ಗದಾಮ್ ।
ಜಘಾನ ಸಂಯುಗೇ ರಾಜಂಸ್ತಂ ವಿಷ್ಣುಂ ಗರುಡಂ ಚ ವೈ ॥೩೧॥

ರಾಜನೇ! ಕೋಪಗೊಂಡ ಕಾಲನೇಮಿಯು ಪುನಃ ದೃಢವಾದ ಗದೆಯನ್ನು ಎತ್ತಿ ವಿಷ್ಣುವನ್ನು ಮತ್ತು ಗರುಡನನ್ನು ಸಹ ಅದರಿಂದ ಹೊಡೆದನು.

ಸ ದೃಷ್ಟ್ವಾ ಗರುಡಂ ಶ್ರಾಂತಂ ಚಕ್ರಮುದ್ಯಮ್ಯ ವೈ ಹರಿಃ ।
ಶತಂ ಶಿರಾಂಸಿ ಬಾಹೂಂಶ್ಚ ಸೋಽಚ್ಛಿನತ್ ಕಾಲನೇಮಿನಃ ।
ಜಘಾನಾನ್ಯಾಂಶ್ಚ ತಾನ್ ಸರ್ವಾನ್ ಸಮರೇ ದೈತ್ಯದಾನವಾನ್ ॥೩೨॥

ಗರುಡನು ದಣಿದುದನ್ನು ನೋಡಿ ಹರಿಯು ತನ್ನ ಸುದರ್ಶನ ಚಕ್ರದಿಂದ ಕಾಲನೇಮಿಯ ನೂರು ಶಿರಸ್ಸುಗಳನ್ನೂ ಬಾಹುಗಳನ್ನೂ ಕತ್ತರಿಸಿ ಯುದ್ಧದಲ್ಲಿ ಉಳಿದೆಲ್ಲಾ ದೈತ್ಯದಾನವರನ್ನೂ ಸಂಹರಿಸಿದನು.

ತಸ್ಮಿನ್ ರಾಜನ್ ರಣೇ ದೈತ್ಯಾಃ ತ್ರಯ ಏವ ವಿನಿಃಸೃತಾಃ ।
ವಿರೋಚನೋ ಮಯಶ್ಚೈವ ಸ್ವರ್ಭಾನುಶ್ಚ ಮಹಾಸುರಾಃ ॥೩೩॥

ರಾಜನೇ! ಆ ಯುದ್ಧದಲ್ಲಿ ಮಹಾಸುರರಾದ ವಿರೋಚನ ಮಯ ಮತ್ತು ರಾಹು ಈ ಮೂವರು ಮಾತ್ರ ಉಳಿದು ಹೊರಗೆ ಬಂದರು.

ಸರ್ವಾನಶೇಷಾನ್ ಹತ್ವಾ ತು ವಿಷ್ಣುರ್ವೈ ದೈತ್ಯದಾನವಾನ್ ।
ವಿಬುಧಾನಾಮೃಷೀಣಾಂ ಚ ಸ್ವಂಸ್ವಂ ಸ್ಥಾನಾನಿ ವೈ ದದೌ ॥೩೪॥

ವಿಷ್ಣುವು ಎಲ್ಲಾ ದೈತ್ಯದಾನವರನ್ನೂ ನಿಶ್ಶೇಷವಾಗಿ ಸಂಹರಿಸಿ ದೇವತೆಗಳಿಗೂ ಮತ್ತು ಋಷಿಗಳಿಗೂ ಅವರವರ ಸ್ಥಾನಗಳನ್ನು ಕೊಟ್ಟನು.

ದತ್ತ್ವಾ ಸುರಾಣಾಂ ಸುಪ್ರೀತಿಂ ಪ್ರಾಪ್ಯ ಸರ್ವಾಣಿ ಭಾರತ ।
ಜಗಾಮ ಬ್ರಹ್ಮಣಾ ಸಾರ್ಧಂ ಬ್ರಹ್ಮಲೋಕಂ ತದಾ ಹರಿಃ ॥೩೫॥

ಎಲೈ ಭಾರತನೇ! ಸ್ಥಾನಗಳನ್ನು ಕೊಟ್ಟ ದೇವತೆಗಳ ಪ್ರೀತಿಯನ್ನು ಪಡೆದು ಎಲ್ಲರನ್ನೂ ಅವರವರ ಸ್ಥಾನಗಳಿಗೆ ತಲುಪಿಸಿ ಹರಿಯು ಆಗ ಬ್ರಹ್ಮದೇವರ ಜೊತೆಯಲ್ಲಿ ಬ್ರಹ್ಮ ಲೋಕಕ್ಕೆ ಹೋದನು.

ಬ್ರಹ್ಮಲೋಕಂ ಪ್ರವಿಶ್ಯಾಥ ಯತ್ರ ನಾರಾಯಣಃ ಪ್ರಭುಃ ।
ಪೌರಾಣಂ ಬ್ರಹ್ಮಸದನಂ ದಿವ್ಯಂ ನಾರಾಯಾಣಾಶ್ರಯಮ್ ॥೩೬॥

ಸ ಪ್ರವಿಶ್ಯ ತದಾ ದೇವಃ ಸ್ತೂಯಮಾನೋ ಮಹರ್ಷಿಭಿಃ ।
ಸಹಸ್ರಶೀರ್ಷೋ ಭೂತ್ವಾ ವೈ ಶಯನಾಯೋಪಚಕ್ರಮೇ ॥೩೭॥

ಪ್ರಭುವಾದ ನಾರಾಯಣನು ಅನಂತರ ಬ್ರಹ್ಮಲೋಕವನ್ನು ಪ್ರವೇಶಿಸಿ ಪ್ರಾಚೀನವಾದ ದಿವ್ಯವಾದ ನಾರಾಯಣಾಶ್ರಯವಾದ ಬ್ರಹ್ಮಸದನವನ್ನು ಪ್ರವೇಶಿಸಿ ಮಹರ್ಷಿಗಳಿಂದ ಸ್ತೋತ್ರಮಾಡಲ್ಪಟ್ಟವನಾಗಿ ಸಹಸ್ರಶೀರ್ಷಗಳನ್ನು ಧರಿಸಿ ಶಯನವನ್ನು ಮಾಡಲು ಉಪಕ್ರಮಿಸಿದನು.

ಆದಿದೇವಃ ಪುರಾಣಾತ್ಮಾ ನಿದ್ರಾವಶಮುಪಾಗತಃ ।
ಶೇತೇ ಸುಖಂ ಸದಾ ವಿಷ್ಣುರ್ಮೋಹಯನ್ ಜಗದವ್ಯಯಃ ॥೩೮॥

ಆದಿದೇವನೂ ಪುರಾಣಪುರುಷನೂ ಅವ್ಯಯನೂ ಆದ ವಿಷ್ಣುನಿದ್ರಾವಶನಾಗಿ ಸುಖದಿಂದ ಅಲ್ಲಿ ಮಲಗಿ ಜಗತ್ತನ್ನು ಮೋಹಿಸಿದನು.

ಜಗ್ಮುಸ್ತಸ್ಯಾಥ ವರ್ಷಾಣಿ ಶಯಾನಸ್ಯ ಮಹಾತ್ಮನಃ ।
ಷಟ್ತ್ರಿಂಶಚ್ಛತಸಾಹಸ್ರಂ ಮಾನುಷೇಣೇಹ ಸಂಖ್ಯಯಾ ।
ಜಗ್ಮುಃ ಕೃತಯುಗತ್ರೇತಾ ದ್ವಾಪರಾಂತೇ ಬುಬೋಧ ಸಃ ॥೩೯॥

ಆ ಮಹಾತ್ಮನು ಅಲ್ಲಿ ಹಾಗೆ ಮಲಗಿರಲು ಮನುಷ್ಯಮಾನದಿಂದ ಮುನ್ನೂರ ಅರವತ್ತು ಶತಸಹಸ್ರವರ್ಷಗಳು ಕಳೆದವು. ಕೃತಯುಗ ಮತ್ತು ತ್ರೇತಾಯುಗಗಳು ಕಳೆದು ದ್ವಾಪರಯುಗದ ಕೊನೆಯಲ್ಲಿ ಅವನು ಎಚ್ಚರಗೊಂಡನು.

ಬ್ರಹ್ಮಾದಿಭಿಃ ಸುರೈಶ್ಚಾಪಿ ಸ್ತೂಯಮಾನೋ ಮಹರ್ಷಿಭಿಃ ।
ಉತ್ಥಾಯ ಶಯನಾದ್ ವಿಷ್ಣುರ್ಬ್ರಹ್ಮಣಾ ವಿಬುಧೈಃ ಸಹ ।
ದೇವಾನಾಂ ಚ ಹಿತಾರ್ಥಾಯ ಯಯೌ ದೇವಸಭಾಂ ಪ್ರತಿ ॥೪೦॥

ಬ್ರಹ್ಮಾದಿದೇವತೆಗಳಿಂದಲೂ ಮಹರ್ಷಿಗಳಿಂದಲೂ ಸ್ತೋತ್ರಮಾಡಲ್ಪಟ್ಟ ವಿಷ್ಣುವು ತನ್ನ ಶಯನದಿಂದ ಮೇಲೆದ್ದು ದೇವತೆಗಳ ಹಿತಕ್ಕೋಸ್ಕರವಾಗಿಯೇ ಬ್ರಹ್ಮದೇವರು ಮತ್ತು ದೇವತೆಗಳಿಂದ ಕೂಡಿಕೊಂಡು ದೇವಸಭೆಯ ಕಡೆಗೆ ಹೊರಟನು.

ಮೇರೋಃ ಶಿಖರವಿನ್ಯಸ್ತಾಂ ಜ್ವಲಂತೀಂ ತಾಂ ಸಭಾಂ ಶುಭಾಂ ।
ವಿವಿಶುಸ್ತಾಂ ಸುರಾಃ ಸರ್ವೇ ಬ್ರಹ್ಮಣಾ ಸಹ ಭಾರತ ॥೪೧॥

ಎಲೈ ಭಾರತನೇ! ಮೇರುವಿನ ಶಿಖರದಲ್ಲಿರುವ ಪ್ರಕಾಶಮಾನವಾದ ಪವಿತ್ರವಾದ ಆ ಸಭೆಯನ್ನು ಎಲ್ಲಾ ದೇವತೆಗಳೂ ಬ್ರಹ್ಮದೇವರ ಜೊತೆಯಲ್ಲಿ ಪ್ರವೇಶಿಸಿದರು.

ಜಗ್ಮುಸ್ತತ್ರ ನಿಷೇದುಸ್ತೇ ಸಾ ನಿಶ್ಶಬ್ದಮಭೂತ್ ತದಾ ।
ತತ್ರ ಭೂಮಿರುವಾಚಾಥ ಖೇದಾತ್ ಕರುಣಭಾಷಿಣೀ ॥೪೨॥

ಎಲ್ಲರೂ ಹೋಗಿ ಅಲ್ಲಿ ಕುಳಿತುಕೊಳ್ಳುತ್ತಿರಲು ಆಗ ಆ ಸ್ಥಳವು ನಿಶ್ಶಬ್ದವಾಯಿತು. ಆನಂತರ ಭೂಮಿಯು ದುಃಖದಿಂದ ಕರುಣಾಜನಕವಾದ ಮಾತುಗಳನ್ನು ಆಡಿದಳು.

ರಾಜ್ಞಾಂ ಬಲೈರ್ಬಲವತಾಂ ಖಿನ್ನಾಸ್ಮಿ ಭೃಶಪೀಡಿತಾ ।
ನಿತ್ಯಂ ಭಾರಪರಿಶ್ರಾಂತಾ ದುಃಖಾಜ್ಜೀವಾಮಿ ವೈ ಸುರಾಃ ॥೪೩॥

ಎಲೈ ದೇವತೆಗಳೇ! ಬಲಿಷ್ಠರಾದ ರಾಜರ ಸೈನ್ಯಗಳಿಂದ ಬಹಳ ಪೀಡಿತಳಾಗಿ ಖಿನ್ನಳಾಗಿದ್ದೇನೆ. ಅವರ ಭಾರದಿಂದ ನಿತ್ಯವೂ ದಣಿದು ದುಃಖದಿಂದ ಜೀವಿಸುತ್ತಿದ್ದೇನೆ.

ಪುರೇ ಪುರೇ ಚ ನೃಪತಿಃ ಕೋಟಿಸಂಖ್ಯೈರ್ಗಣೈರ್ವೃತಃ ।
ರಾಷ್ಟ್ರೇ ರಾಷ್ಟ್ರೇ ಚ ಶತಶೋ ಗ್ರಾಮಾಃ ಕುಲಸಹಸ್ರಿಣಃ ॥೪೪॥

ಒಂದೊಂದು ಪಟ್ಟಣದಲ್ಲಿಯೂ ಪ್ರತಿಯೊಬ್ಬರಾಜನೂ ಕೋಟಿಸಂಖ್ಯೆ ಸೈನ್ಯವನ್ನು ಹೊಂದಿದ್ದಾನೆ. ಒಂದೊಂದು ರಾಷ್ಟ್ರದಲ್ಲಿಯೂ ನೂರಾರು ಗ್ರಾಮಗಳಿವೆ ಒಂದೊಂದು ಗ್ರಾಮದಲ್ಲಿಯೂ ಸಹಸ್ರಾರು ಕುಲಗಳಿವೆ.

ಭೂಮಿಪಾನಾಂ ಸಹಸ್ರೈಶ್ಚ ತೇಷಾಂ ಚ ಬಲಿನಾಂ ಬಲೈಃ ।
ಗ್ರಾಮಾಯುತೈಶ್ಚ ರಾಷ್ಟ್ರೈಶ್ಚಾಪ್ಯಹಂ ನಿರ್ವಿವರೀಕೃತಾ ।
ಕೇಚಿದ್ ದೈತ್ಯೇಷು ಚೋತ್ಪನ್ನಾ ಕೇಚಿದ್ ರಾಕ್ಷಸಯೋನಿಷು ॥೪೫॥

ಸಹಸ್ರಾರು ರಾಜರುಗಳಿಂದಲೂ ಬಲಿಷ್ಠರಾದ ಅವರ ಸೈನ್ಯಗಳಿಂದಲೂ ಹತ್ತಾರು ಸಹಸ್ರ ಸಂಖ್ಯೆಯಲ್ಲಿರುವ ಗ್ರಾಮಗಳಿಂದಲೂ ಮತ್ತು ರಾಷ್ಟ್ರಗಳಿಂದಲೂ ನಾನು ನಿಬಿಡವಾಗಿ ತುಂಬಿ ಹೋಗಿದ್ದೇನೆ. ಕೆಲವರು ದೈತ್ಯಕುಲದಲ್ಲಿಯೂ ಇನ್ನೂ ಕೆಲವರು ರಾಕ್ಷಸಕುಲಗಳಲ್ಲಿಯೂ ಜನಿಸಿದ್ದಾರೆ.

ದೈತ್ಯೈಶ್ಚ ಬಾಧ್ಯಮಾನಾಸ್ತಾಃ ಪ್ರಜಾ ನಿತ್ಯಂ ದುರಾತ್ಮಭಿಃ ।
ತಸ್ಮಾದ್ ಧಾರಯಿತುಂ ಶಕ್ಯಾ ನ ಶಕ್ಷ್ಯಾಮಿ ಜನಾನಹಮ್ ॥೪೬॥

ಪ್ರಜೆಗಳು ದುರಾತ್ಮರಾದ ಅಂತಹ ದೈತ್ಯರಿಂದಲೂ ರಾಕ್ಷಸರಿಂದಲೂ ಪೀಡಿಸಲ್ಪಡುತ್ತಿದ್ದಾರೆ. ಆದ್ದರಿಂದ ನಾನು ನನ್ನ ಸಾಮರ್ಥ್ಯದಿಂದ ಇಷ್ಟು ಜನರನ್ನು ಧರಿಸಲು ಸಾಧ್ಯವಾಗುತ್ತಿಲ್ಲ.

ಭೀಷ್ಮಃ

ಭೂಮೇಸ್ತದ್ವಚನಂ ಶ್ರುತ್ವಾ ದೇವೋ ನಾರಾಯಣಸ್ತದಾ ।
ವ್ಯಾದಿಶ್ಯ ತಾನ್ ಸುರಾನ್ ಸರ್ವಾನ್ ಕ್ಷಿತೌ ವಸ್ತುಂ ಮನೋ ದಧೇ ॥೪೭॥

ಭೂಮಿಯು ಆ ವಚನವನ್ನು ಕೇಳಿದ ದೇವನಾದ ನಾರಾಯಣನು ಆಗ ಎಲ್ಲಾ ದೇವತೆಗಳಿಗೂ ಆದೇಶವನ್ನು ನೀಡಿ ತಾನೂ ಭೂಮಿಯಲ್ಲಿ ಅವತರಿಸಲು ನಿರ್ಧರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ತ್ರಿಚತ್ವಾರಿಂಶೋಧ್ಯಾಯಃ ॥
॥ ಅರ್ಘಾಭಿಹರಣಪರ್ವಣಿ ದ್ವಾದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ನಲವತ್ಮೂರನೆಯ ಅಧ್ಯಾಯವು ಮುಗಿಯಿತು.

★ ★ ★ ★

ನಲವತ್ನಾಲ್ಕನೆಯ ಅಧ್ಯಾಯ

(ವಿಷ್ಣುವಿನಿಂದ ಭೂಮಿಯಲ್ಲಿ ಅವತಾರಮಾಡಲು ದೇವತೆಗಳಿಗೆ ಪ್ರೇರಣೆ)

ಭೀಷ್ಮಃ

ಯಚ್ಚಕ್ರೇ ಭಗವಾನ್ ವಿಷ್ಣುರ್ವಸುದೇವಕುಲೋದ್ವಹಃ ।
ತತ್ ತೇಽಹಂ ನೃಪ ವಕ್ಷ್ಯಾಮಿ ಶೃಣು ಸರ್ವಮಶೇಷತಃ ।
ವಾಸುದೇವಸ್ಯ ಮಾಹಾತ್ಮ್ಯಂ ಚರಿತಂ ಚ ಮಹಾದ್ಯುತೇಃ ॥೧॥

ಎಲೈ ರಾಜನೇ! ವಸುದೇವಕುಲೋದ್ವಹನಾದ ಭಗವಂತನಾದ ವಿಷ್ಣುವು ಮಾಡುದುದೆಲ್ಲವನ್ನೂ ನಿನಗೆ ವಿಸ್ತಾರವಾಗಿ ಹೇಳುವೆನು ಕೇಳು. ಮಹಾದ್ಯುತಿಯಾದ ವಾಸುದೇವನ ಮಹಿಮೆಯನ್ನೂ ಅವನ ಚರಿತ್ರೆಯನ್ನೂ ಕೇಳು.

ಹಿತಾರ್ಥಂ ಸುರಮರ್ತ್ಯಾನಾಂ ಲೋಕಾನಾಂ ಹಿ ಹಿತಾಯ ಚ ।
ಯದಾ ದಿವಿ ವಿಭುಸ್ತಾತ ನ ರೇಮೇ ಭಗವಾನಸೌ ॥೨॥

ತತೋ ವ್ಯಾದಿಶ್ಯ ಭೂತಾನಿ ಭುವಿ ಭೌಮಸುಖಾವಹಃ ।
ನಿಗ್ರಹಾರ್ಥಾಯ ದೈತ್ಯಾನಾಂ ಚೋದಯಾಮಾಸ ವೈ ತದಾ ॥೩॥

ಮರುತಶ್ಚ ವಸೂಂಶ್ಚೈವ ಸೂರ್ಯಾಚಂದ್ರಮಸಾವುಭೌ ।
ಗಂಧರ್ವಾಪ್ಸರಸಶ್ಚೈವ ರುದ್ರಾದಿತ್ಯಾಂಸ್ತಥಾಽಶ್ವಿನೌ ॥೪॥

ದೇವತೆಗಳ ಮತ್ತು ಮನುಷ್ಯರ ಮತ್ತು ಲೋಕದ ಹಿತದ ಸಲುವಾಗಿ ಸ್ವರ್ಗದಲ್ಲಿದ್ದು ಸಮಾಧಾನಗೊಳ್ಳದ ಈ ವಿಭುವಾದ ಭಗವಂತನು ಭೂಮಿಯಲ್ಲಿ ಎಲ್ಲರ ಸುಖವನ್ನು ಉಂಟುಮಾಡುವುದಕ್ಕಾಗಿ ಮತ್ತು ದೈತ್ಯರ ನಿಗ್ರಹಕ್ಕಾಗಿ ಮರುತ್ತುಗಳು ವಸುಗಳು ಸೂರ್ಯಚಂದ್ರರು ಗಂದರ್ವರು ಅಪ್ಸರೆಯರು ರುದ್ರರು ಆದಿತ್ಯರು ಅಶ್ವಿನಿಗಳು ಮೊದಲಾದ ಎಲ್ಲಾ ದೇವತೆಗಳಿಗೂ ಆದೇಶವನ್ನು ನೀಡಿದನು.

ಜಾಯಧ್ವಂ ಮಾನುಷೇ ಲೋಕೇ ಸರ್ವಲೋಕಮಹೇಶ್ವರಾಃ ।
ಜಂಗಮಾನಿ ವಿಶಾಲಾಕ್ಷೋ ಹ್ಯಾತ್ಮಾನಂ ಹ್ಯಾತ್ಮನಾಽಸೃಜತ್ ॥೫॥

ಸರ್ವಲೋಕ ಮಹೇಶ್ವರನಾದ ನೀವು ಮನುಷ್ಯಲೋಕದಲ್ಲಿ ಜಂಗಮ ಯೋನಿಗಳಲ್ಲಿ ಅವತಾರವನ್ನು ಮಾಡಿ ಎಂದು ಹೇಳಿ ವಿಶಾಲಾಕ್ಷನಾದ ಅವನು ತನ್ನನ್ನೇ ತಾನು ಮನುಷ್ಯಲೋಕದಲ್ಲಿ ಸೃಷ್ಟಿಸಿಕೊಂಡನು.

ಜಾಯತಾಮಿತಿ ಗೋವಿಂದಃ ತಿರ್ಯಗ್ಯೋನಿಗತೈರಪಿ ।
ತಾನಿ ಸರ್ವಾಣಿ ಸರ್ವಜ್ಞಃ ಸೋಽಜಾಯತ ಯದೋಃ ಕ್ಷಯೇ ।
ಆಜ್ಞಾಪಯಿತ್ವಾ ರತ್ಯರ್ಥಮಜಾಯತ ಯದೋಃ ಕುಲೇ ॥೬॥

ಗೋವಿಂದನು ನೀವು ತಿರ್ಯಗ್ಯೋನಿಗಳಲ್ಲಿ ಸಹ ಅವತಾರಮಾಡಿ ಎಂದು ಅವರೆಲ್ಲರಿಗೂ ಆದೇಶವನ್ನು ನೀಡಿ ಸರ್ವಜ್ಞನಾದ ಅವನು ತನ್ನಲ್ಲಿಯೇ ತಾನು ವಿಹಾರಮಾಡಲು ಯದುಕುಲದಲ್ಲಿ ಜನಿಸಿದನು.

ಆತ್ಮಾನಮಾತ್ಮನಾ ತಾತ ಕೃತ್ವಾ ಬಹುವಿಧಂ ಹರಿಃ ।
ರತ್ಯರ್ಥಮಿಹ ಗಾಸ್ತಾಸ್ತು ರರಕ್ಷ ಪುರುಷೋತ್ತಮಃ ॥೭॥

ಪುರುಷೋತ್ತಮನಾದ ಹರಿಯಾದ ಅವನು ತನ್ನನ್ನೇ ತಾನು ಅನೇಕ ರೂಪಗಳಿಂದ ಸೃಷ್ಟಿಸಿಕೊಂಡು ಸ್ವರಮಣನಾದ ಅವನು ಲೀಲೆಯಿಂದ ವಿಹಾರವನ್ನು ಮಾಡುತ್ತಾ ಇಲ್ಲಿ ಗೋವುಗಳನ್ನು ರಕ್ಷಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಚತುಶ್ಚತ್ವಾರಿಂಶೋಧ್ಯಾಯಃ ॥
॥ ಅರ್ಘಾಭಿಹರಣಪರ್ವಣಿ ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ
ನಲವತ್ನಾಲ್ಕನೆಯ ಅಧ್ಯಾಯವು ಮುಗಿಯಿತು.

★★★★★

ನಲವತ್ತೈದನೆಯ ಅಧ್ಯಾಯ

(ಕೃಷ್ಣಾವತಾರ ಮತ್ತು ಕೃಷ್ಣ ಬಲರಾಮರ ಬಾಲಲೀಲೆಗಳು)

ಭೀಷ್ಮಃ

ಅಜಾತಶತ್ರೋ ಜಾತಸ್ತು ಯಥೇಷ್ಟಂ ಭುವಿ ಭಾರತ ।
ಕಥ್ಯಮಾನಂ ಮಯಾ ತಾತ ನಿಬೋಧ ಭರತರ್ಷಭ ॥೧॥

ಭರತರ್ಷಭನಾದ ಪ್ರೀತಿಪಾತ್ರನೇ! ಎಲೈ ಅಜಾತಶತ್ರುವೇ! ತನ್ನ ಇಚ್ಛೆಯಿಂದ ಭೂಮಿಯಲ್ಲಿ ಅವತರಿಸಿದ ಹರಿಯ ಲೀಲೆಗಳನ್ನು ಹೇಳುತ್ತೇನೆ ಕೇಳು.

ಸಾಗರಃ ಸಮಕಂಪಂತ ಮುದಾ ಚೇಲುಶ್ಚ ಪರ್ವತಾಃ ।
ಜಜ್ವಲುಶ್ಚಾಗ್ನಯಃ ಶಾಂತಾ ಜಾಯಮಾನೇ ಮಹಾತ್ಮನಿ ॥೨॥

ಮಹಾತ್ಮನಾದ ಅವನು ಅವತರಿಸಿದಾಗ ಸಂತೋಷದಿಂದ ಸಮುದ್ರಗಳು ಉಕ್ಕಿದವು. ಪರ್ವತಗಳು ಚಲಿಸಿದವು. ಶಾಂತವಾದ ಅಗ್ನಿಗಳು ಉರಿಯಲು ಆರಂಭಿಸಿದವು.

ಶಿವಾಃ ಸಂಪ್ರವವುರ್ವಾತಾಃ ಪ್ರಶಾಂತಮಭವದ್ ರಜಃ ।
ಜ್ಯೋತೀಂಷಿ ಸಂಪ್ರಕಾಶಂತೇ ಜಾಯಮಾನೇ ಜನಾರ್ದನೇ ॥೩॥

ಸುಖಸ್ಪರ್ಶವುಳ್ಳ ವಾಯುವು ಎಲ್ಲ ಕಡೆಗಳಲ್ಲಿಯೂ ಬೀಸಿತು. ಧೂಳು ಅಡಗಿತು. ಜನಾರ್ದನನು ಅವತರಿಸಿದಾಗ ಜ್ಯೋರ್ತಿಗಣಗಳೆಲ್ಲವೂ ಪ್ರಕಾಶಿಸಿದವು.

ದೇವದುಂದುಭಯಶ್ಚಾಪಿ ಸಸ್ವನುರ್ಭೃಶಮಂಬರೇ ।
ಅಭ್ಯವರ್ಷಂಸ್ತದಾऽऽಗಮ್ಯ ದೇವತಾಃ ಪುಷ್ಪವೃಷ್ಟಿಭಿಃ ॥೪॥

ಆಕಾಶದಲ್ಲಿ ದೇವದುಂದುಭಿಗಳು ಬಹಳವಾಗಿ ಮೊಳಗಿದವು. ಆಗ ದೇವತೆಗಳು ಬಂದು ಪುಷ್ಪವೃಷ್ಟಿಯನ್ನು ಕರೆದರು.

ಗೀರ್ಭಿರ್ಮಂಗಳಯುಕ್ತಾಭಿರಸ್ತುವನ್ ಮಧುಸೂದನಮ್ ।
ಉಪತಸ್ಥುಸ್ತದಾ ಪ್ರೀತಾಃ ಪ್ರಾದುರ್ಭಾವೇ ಮಹರ್ಷಯಃ ॥೫॥

ದೇವತೆಗಳು ಮಂಗಳಯುಕ್ತವಾದ ವಾಣಿಯಿಂದ ಮಧುಸೂದನನನ್ನು ಸ್ತೋತ್ರಮಾಡಿದರು. ಮಹರ್ಷಿಗಳೂ ಸಹ ಕೃಷ್ಣಾವತಾರ ಕಾಲದಲ್ಲಿ ಸಂತೋಷದಿಂದ ಅವನನ್ನು ಸ್ತೋತ್ರಮಾಡಿದರು.

ತತಸ್ತಾನಭಿಸಂಪ್ರೇಕ್ಷ್ಯ ನಾರದಪ್ರಮುಖಾನೃಷೀನ್ ।
ಉಪಾವೃತ್ಯಾನುಜಗ್ಮುರ್ಗಾಂ ಗಂಧರ್ವಾಪ್ಸರಸಾಂ ಗಣಾಃ ॥೬॥

ಆಗ ನಾರದ ಮೊದಲಾದ ಋಷಿಗಳನ್ನು ನೋಡಿ ಗಂಧರ್ವ ಮತ್ತು ಅಪ್ಸರೆಯರ ಗಣಗಳು ಅವರನ್ನು ಹಿಂಬಾಲಿಸಿ ಭೂಮಿಗೆ ಬಂದವು.

ಉಪತಸ್ಥೇ ಚ ಗೋವಿಂದಂ ಸಹಸ್ರಾಕ್ಷಃ ಶಚೀಪತಿಃ ।
ಅಭ್ಯಭಾಷತ ತೇಜಸ್ವೀ ಮಹರ್ಷೀನ್ ಪೂಜಯಂಸ್ತದಾ ॥೭॥

ಸಹಸ್ರಾಕ್ಷನಾದ ಶಚೀಪತಿಯು ಗೋವಿಂದನನ್ನು ಸ್ತೋತ್ರಮಾಡಿ ತೇಜಸ್ವಿಯಾದ ಅವನು ಮಹರ್ಷಿಗಳನ್ನು ಗೌರವಿಸಿ ಮಾತನಾಡಿದನು.

ಕೃತ್ವಾ ತು ದೇವಕಾರ್ಯಾಣಿ ಕೃತ್ವಾ ಲೋಕಹಿತಾನಿ ಚ ।
ಸ್ವಲೋಕಂ ಲೋಕಕೃದ್ ದೇವಃ ಪುನರ್ಗಚ್ಛತಿ ತೇಜಸಾ ॥೮॥

ಸೃಷ್ಟಿಕರ್ತನಾದ ದೇವನು ದೇವಕಾರ್ಯಗಳನ್ನು ಮತ್ತು ಲೋಕಹಿತವಾದ ಕಾರ್ಯಗಳನ್ನು ತನ್ನ ಸಾಮರ್ಥ್ಯದಿಂದ ನೆರವೇರಿಸಿ ಪುನಃ ತನ್ನ ಲೋಕಕ್ಕೆ ಹಿಂದಿರುಗುತ್ತಾನೆ.

ಭೀಷ್ಮಃ

ಇತ್ಯುಕ್ತ್ವಾ ಋಷಿಭಿಃ ಸಾರ್ಧಂ ಜಗಾಮ ತ್ರಿದಿವಂ ಪುನಃ ।
ಅಭ್ಯನುಜ್ಞಾಯ ತಾನ್ ಸರ್ವಾನ್ ಛಾದಯನ್ ಪ್ರಕೃತಿಂ ಪರಾಮ್ ॥೯॥

ಇಂದ್ರನು ಹೀಗೆ ಹೇಳಿ ತನ್ನ ನಿಜರೂಪವನ್ನು ಮರೆಸಿಕೊಂಡು ಅವರೆಲ್ಲರ ಅನುಜ್ಞೆಯನ್ನು ಪಡೆದು ಋಷಿಗಳ ಜೊತೆಯಲ್ಲಿ ಪುನಃ ಸ್ವರ್ಗಕ್ಕೆ ಹೋದನು.

ವಸುದೇವಸ್ತತೋ ಜಾತಂ ಬಾಲಮಾದಿತ್ಯಸನ್ನಿಭಮ್ ।
ನಂದಗೋಪಕುಲೇ ರಾಜನ್ ಭಯಾತ್ ಪ್ರಚ್ಛಾದಯದ್ಧರಿಮ್ ।
ನಂದಗೋಪಕುಲೇ ಕೃಷ್ಣ ಉವಾಸ ಬಹುಲಾಃ ಸಮಾಃ ॥೧೦॥

ಅನಂತರ ವಸುದೇವನು ಆಗತಾನೆ ಜನಿಸಿದ ಸೂರ್ಯತೇಜಸ್ಸಳ್ಳ ತನ್ನ ಮಗನನ್ನು ಕಂಸನ ಭಯದಿಂದ ನಂದಗೋಪಕುಲಕ್ಕೆ ಕರೆದುಕೊಂಡು ಹೋಗಿ ಆಚ್ಛಾದಿಸಿದನು. ಎಲೈ ರಾಜನೇ! ಕೃಷ್ಣನು ನಂದಗೋಪ ಕುಲದಲ್ಲಿ ಅನೇಕ ವರ್ಷಗಳ ಕಾಲ ವಾಸಮಾಡಿದನು.

ತತಃ ಕದಾಚಿತ್ ಸುಪ್ತಂ ತಂ ಶಕಟಸ್ಯ ತ್ವಧಃ ಶಿಶುಮ್ ।
ಯಶೋದಾ ಸಂಪರಿತ್ಯಜ್ಯ ಜಗಾಮ ಯಮುನಾಂ ನದೀಮ್ ॥೧೧॥

ಅನಂತರ ಒಮ್ಮೆ ಯಶೋದೆಯು ಮಲಗಿ ನಿದ್ರಿಸುತ್ತಿದ್ದ ಶಿಶುವನ್ನು
ಒಂದು ಗಾಡಿಯ ಕೆಳಗೆ ಮಲಗಿಸಿ ಯಮುನಾ ನದಿಗೆ ಹೋದಳು.

ಶಿಶುಲೀಲಾಂ ತತಃ ಕುರ್ವನ್ ಸ್ವಹಸ್ತಚರಣೌ ಕ್ಷಿಪನ್ ।
ರುರೋದ ಮಧುರಂ ಕೃಷ್ಣಃ ಪಾದಮೂರ್ಧ್ವಂ ಪ್ರಸಾರಯನ್ ॥೧೨॥

ಆಗ ಕೃಷ್ಣನು ಶಿಶುಲೀಲೆಯನ್ನು ಮಾಡುತ್ತಾ ಹಸ್ತ ಮತ್ತು ಚರಣಗಳನ್ನು ಮೇಲಕ್ಕೆ ಚಾಚುತ್ತಾ ತನ್ನ ಪಾದವನ್ನು ಮೇಲ್ಮುಖವಾಗಿ ನೀಡಿ ಮಧುರವಾಗಿ ರೋದಿಸಿದನು.

ಪಾದಾಂಗುಷ್ಠೇನ ಶಕಟಂ ತಾಡಯನ್ನಥ ಕೇಶವಃ ।
ತತ್ರಾಥೈಕೇನ ಪಾದೇನ ಪಾತಯಿತ್ವಾ ತಥಾ ಶಿಶುಃ ।
ನ್ಯುಬ್ಜಃ ಪಯೋಧರಾಕಾಂಕ್ಷೀ ಚಕಾರ ಚ ರುರೋದ ಚ । ॥೧೩॥

ಕೇಶವನು ಚಾಚಿದ ತನ್ನ ಪಾದದ ಅಂಗುಷ್ಠದಿಂದ ಶಕಟವನ್ನು ಒದ್ದು ಉರುಳಿಸಿ ಬೋರಲಾಗಿ ಬಿದ್ದುಸ್ತನ್ಯಾಕಾಂಕ್ಷಿಯಾಗಿ ಅಳಲು ತೊಡಗಿದನು.

ಪಾತಿತಂ ಶಕಟಂ ದೃಷ್ಟ್ವಾ ಭಿನ್ನಭಾಂಡಘಟೀಘಟಮ್ ।
ಜನಾಸ್ತೇ ಶಿಶುನಾ ತೇನ ವಿಸ್ಮಯಂ ಪರಮಂ ಯಯುಃ ।
ಪ್ರತ್ಯಕ್ಷಂ ಶೂರಸೇನಾನ್ಯಂ ದೃಶ್ಯತೇ ಮಹದದ್ಭುತಮ್ । ॥೧೪॥

ಗಾಡಿಯಲ್ಲಿ ಇದ್ದ ಪಾತ್ರೆಗಳ ಜೊತೆಯಲ್ಲಿ ಮುರಿದು ಬಿದ್ದ ಶಕಟವನ್ನು ನೋಡಿ ಜನರು ಶಿಶುವಿನ ಆ ಕರ್ಮದಿಂದ ಪರಮಾಶ್ಚರ್ಯವನ್ನು ಹೊಂದಿದರು. ಶೂರಸೇನಾನಿಯಾದ ಕಂಸನ ದೈತ್ಯಪ್ರೇಷಣರೂಪವಾದ ದುಷ್ಕರ್ಮವು ಪ್ರತ್ಯಕ್ಷವಾಗಿ ಕಾಣುತಿತ್ತು.

ಶಯಾನೇನ ಹತಃ ಪಕ್ಷೀ ಶಿಶುನಾ ತಿಗ್ಮತೇಜಸಾ ।
ಪೂತನಾ ಚಾಪಿ ನಿಹತಾ ಮಹಾಕಾಯಾ ಮಹಾಸ್ತನೀ ॥೧೫॥

ಕಂಸನ ಪಕ್ಷವನ್ನು ಆಶ್ರಯಿಸಿದ ಬಕಾಸುರನು ಕ್ರೂರಪರಾಕ್ರಮವುಳ್ಳ ಶಿಶುವಿನಿಂದ ಸಂಹರಿಸಲ್ಪಟ್ಟನು. ದೊಡ್ಡ ದೇಹವನ್ನೂ ದೊಡ್ಡ ಸ್ತನಗಳನ್ನೂ ಹೊಂದಿದ್ದ ಪೂತನಿಯೂ ಕೃಷ್ಣನಿಂದ ಕೊಲ್ಲಲ್ಪಟ್ಟಳು.

ತತಃ ಕಾಲೇ ಮಹಾರಾಜ ಸಂಸಕ್ತೌ ರಾಮಕೇಶವೌ ।
ಕೃಷ್ಣಃ ಸಂಕರ್ಷಣಶ್ಚೋಭೌ ರಿಂಗಿಣೌ ಸಮಪದ್ಯತಾಮ್ ॥೧೬॥

ಮಹಾರಾಜನೇ! ಅನಂತರ ಸ್ವಲ್ಪ ಸಮಯದಲ್ಲಿ ಕೃಷ್ಣ ಬಲರಾಮರಿಬ್ಬರೂ ಒಬ್ಬರ ಜೊತೆಯಲ್ಲಿ ಒಬ್ಬರು ಕೂಡಿಕೊಂಡು ಅಂಬೆಗಾಲಿಡಲು ಪ್ರಾರಂಭಿಸಿದರು.

ಅನ್ಯೋನ್ಯಕಿರಣಗ್ರಸ್ತೌ ಚಂದ್ರಸೂರ್ಯಾವಿವಾಂಬರೇ ।
ವಿಸರ್ಪತಾಂ ಚ ಸರ್ವತ್ರ ಸರ್ವಭೋಗಭುಜೌ ತದಾ ॥೧೭॥

ಅವರಿಬ್ಬರೂ ಆಕಾಶದಲ್ಲಿ ಪರಸ್ಪರವಾಗಿ ತಮ್ಮ ಕಿರಣಗಳಿಂದ ಗ್ರಸ್ತರಾದ ಚಂದ್ರ ಸೂರ್ಯರಂತೆ ಎಲ್ಲ ಕಡೆಯಲ್ಲಿಯೂ ಹರಿದಾಡುತ್ತಾ ಸರ್ವ ಭೋಗಗಳನ್ನೂ ಭೋಗಿಸಿದರು.

ರೇಜತುಃ ಪಾಂಸುದಿಗ್ಧಾಂಗೌ ರಾಮಕೃಷ್ಣೌ ತದಾ ನೃಪ ।
ಕ್ವಚಿಚ್ಚ ಜಾನುಭಿರ್ಘ್ನಂತೌ ಕ್ರೀಡಮಾನೌ ಕ್ವಚಿದ್ವನೇ ।
ಪಿಬಂತೌ ದಧಿಕುಲ್ಯಾಶ್ಚ ಮಥ್ಯಮಾನೇ ಚ ಭಾರತ ॥೧೮॥

ಎಲೈ ರಾಜನೇ! ರಾಮಕೃಷ್ಣರು ಆಗ ಮೈಯೆಲ್ಲಾ ಧೂಳಿನಿಂದ ಆವೃತವಾಗಿ ಶೋಭಿಸಿದರು. ಒಮ್ಮೊಮ್ಮೆ ಮಂಡಿಗಳ ಮೇಲೆ ನಿಂತು ಬಿಡಾರದ ಸಮೀಪದ ವನದಲ್ಲಿ

ಆಡುತ್ತಿದ್ದರು. ಎಲೈ ಭಾರತನೇ! ಮೊಸರನ್ನು ಕಡೆಯುವಾಗ ಬಹಳವಾದ ಮೊಸರನ್ನು ಕುಡಿಯುತ್ತಿದ್ದರು.

ತತ್ರಾಥ ಬಾಲೋ ಗೋವಿಂದೋ ನವನೀತಂ ತದಾ ಕ್ಷಯಮ್ ।
ಗ್ರಸಮಾನಸ್ತು ತತ್ರಾಯಂ ಗೋಪೀಭಿರ್ದದೃಶೇ ತದಾ ।
ದಾಮ್ನಾಥೋಲೂಖಲೇ ಕೃಷ್ಣೋ ಗೋಪಸ್ತ್ರೀಭಿಶ್ಚ ಬಂಧಿತಃ ॥೧೯॥

ಆಗ ಒಮ್ಮೆ ಮನೆಯಲ್ಲಿ ನವನೀತವನ್ನು ಕದಿಯುತ್ತಿದ್ದ ಗೋವಿಂದನು ಗೋಪಿಯರಿಂದ ನೋಡಲ್ಪಟ್ಟನು. ಆಗ ಗೋಪಸ್ತ್ರೀಯರು ಅವನನ್ನು ಹಗ್ಗದಿಂದ ಒಂದು ಒರಳಿಗೆ ಕಟ್ಟಿಹಾಕಿದರು.

ತದಾऽಥ ಶಿಶುನಾ ತೇನ ಕರ್ಷತ್ಯೈವಾರ್ಜುನಾವುಭೌ ।
ಸಮೂಲವಿಟಪೌ ಭಗ್ನೌ ತದದ್ಭುತಮಿವಾಭವತ್ ॥೨೦॥

ಆಗ ಶಿಶುವಾದ ಕೃಷ್ಣನು ಒರಳನ್ನು ಎಳೆಯುತ್ತಾ ಮುಂದೆಸಾಗಿ ಅಕ್ಕ ಪಕ್ಕದಲ್ಲಿ ಬೆಳೆದಿದ್ದ ಎರಡು ಮಹಾ ಅರ್ಜುನ ವೃಕ್ಷಗಳನ್ನು ಬೇರುಸಹಿತವಾಗಿ ಬೀಳಿಸಿದನು. ಆ ದೃಶ್ಯವು ಅದ್ಭುತವಾಗಿದ್ದಿತು.

ತತಸ್ತೌ ಬಾಲ್ಯಮುತ್ತೀರ್ಣೌ ಕೃಷ್ಣಸಂಕರ್ಷಣಾವುಭೌ ।
ತಸ್ಮಿನ್ನೇವ ವ್ರಜಸ್ಥಾನೇ ಸಪ್ತವರ್ಷೌ ಬಭೂವತುಃ ॥೨೧॥

ಅನಂತರ ಕೃಷ್ಣ ಬಲರಾಮರು ಬಾಲ್ಯವನ್ನು ಕಳೆದು ಏಳು ವರ್ಷದವರಾಗಿ ಅದೇ ನಂದಗೋಕುಲಸ್ಥಾನದಲ್ಲಿ ಆಡುತ್ತಿದ್ದರು.

ನೀಲಪೀತಾಂಬರಧರೌ ಪೀತಶ್ವೇತಾನುಲೇಪನೌ ।
ಬಭೂವತುರ್ವತ್ಸಪಾಲೌ ಕಾಕಪಕ್ಷಧರಾವುಭೌ ॥೨೨॥

ಕೃಷ್ಣನು ಪೀತಾಂಬರವನ್ನೂ ಬಲರಾಮನು ನೀಲಾಂಬರವನ್ನೂ ಧರಿಸಿದವರಾಗಿ ಹಳದಿಯ ಮತ್ತು ಬಿಳಿಯ ಲೇಪನವನ್ನು ಉಳ್ಳವರಾಗಿ ಇಬ್ಬರೂ ತಲೆಯ ಕೂದಲುಗಳನ್ನು ಬಾಚಿಕೊಂಡು ವತ್ಸಪಾಲಕರಾದರು.

ಪಣವಾದ್ಯಂ ಶ್ರುತಿಸುಖಂ ವಾದಯಂತೌ ವರಾನನೌ ।
ಶುಶುಭಾತೇ ವನಗತೌ ದ್ವಿಶೀರ್ಷಾವಿವ ಪನ್ನಗೌ ॥೨೩॥

ಸುಂದರವಾದ ಮುಖವುಳ್ಳ ಅವರಿಬ್ಬರೂ ಕಾಡಿನಲ್ಲಿ ಪಣವಾದಿ ವಾದ್ಯಗಳನ್ನು ಮಧುರವಾಗಿ ಬಾರಿಸುತ್ತಾ ಎರಡು ಶಿರಸ್ಸುಳ್ಳ ಸರ್ಪಗಳಂತೆ ಕಂಗೊಳಿಸಿದರು.

ಮಯೂರಾಂಗಜಕರ್ಣೌ ತೌ ಪಲ್ಲವಾಪೀಡಧಾರಿಣೌ ।
ವನಮಾಲಾಪರಿಕ್ಷಿಪ್ತೌ ಸಾಲಪೋತಾವಿವೋದ್ಗತೌ ॥೨೪॥

ಕಿವಿಗಳಲ್ಲಿ ನವಿಲುಗರಿಗಳನ್ನು ಇಟ್ಟುಕೊಂಡು ಚಿಗುರುಗಳನ್ನು ಉಷ್ಣೀಷದಂತೆ (ರುಮಾಲಿನಂತೆ) ಧರಿಸಿಕೊಂಡು ವನಮಾಲೆಯನ್ನು ಧರಿಸಿ ಇಬ್ಬರೂ ಎಳೆಯ ಸಾಲ ವೃಕ್ಷಗಳಂತೆ ಎದ್ದು ಶೋಭಿಸುತ್ತಿದ್ದರು.

ಅರವಿಂದಕೃತಾಪೀಡೌ ರಜ್ಜುಯಜ್ಞೋಪವೀತಿನೌ ।
ಸಶಿಕ್ಯತುಂಬುರುಕರೌ ವೀರೌ ಗೋಪವೇಣುಪ್ರವಾದಕೌ ॥೨೫॥

ಅರವಿಂದ ಪುಷ್ಪಗಳನ್ನು ತಲೆಯಲ್ಲಿ ಧರಿಸಿ ಹಗ್ಗದಿಂದವಮಾಡಿದ ಯಜ್ಞೋಪವೀತಧಾರಿಗಳಾಗಿ ಕೈಯಲ್ಲಿ ನೆಲುವುಗಳನ್ನು ಮತ್ತು ದಾರುವಾದ್ಯವಿಶೇಷವಾದ ತುಂಬುರುವನ್ನು ಧರಿಸಿ ಗೋಪಾಲಕರು ನುಡಿಸುವ ಕೊಳಲನ್ನು ನುಡಿಸುತ್ತಿದ್ದರು.

ಕ್ವಚಿದ್ ಹಸಂತಾವನ್ಯೋನ್ಯಂ ಕ್ರೀಡಮಾನೌ ಕ್ವಚಿದ್ವನೇ ।
ಪರ್ಣಶಯ್ಯಾಸು ಸಂಸುಪ್ತೌ ಕ್ವಚಿನ್ನಿದ್ರಾಂತರೈಷಿಣೌ ॥೨೬॥

ಒಮ್ಮೊಮ್ಮೆ ಪರಸ್ಪರವಾಗಿ ನಗುತ್ತಾ ಒಮ್ಮೊಮ್ಮೆ ಕಾಡಿನಲ್ಲಿ ಕ್ರೀಡೆಯಾಡುತ್ತಾ ಎಲೆಗಳಿಂದ ಮಾಡಿದ ಹಾಸಿಗೆಯಲ್ಲಿ ಮಲಗಿ ಒಮ್ಮೊಮ್ಮೆ ನಿದ್ರೆಯನ್ನು ಬಯಸುತ್ತಿದ್ದರು.

ತೌ ವತ್ಸಾನ್ ಪಾಲಯಂತೌ ಹಿ ಶೋಭಯಂತೌ ಮಹದ್ವನಮ್ ।
ಚುಂಬಯಂತೌ ರಮೇತೇ ಸ್ಮ ರಾಜನ್ನೇವಂ ತದಾ ಶುಭೌ ॥೨೭॥

ರಾಜನೇ! ಅವರಿಬ್ಬರೂ ಆ ದೊಡ್ಡ ವನವನ್ನು ಶೋಭಿಸುತ್ತಾ ಕರುಗಳವನ್ನು ರಕ್ಷಿಸುತ್ತಾ ಪರಸ್ಪರವಾಗಿ ಚುಂಬಿಸುತ್ತಾ ಸಂತೋಷಪಟ್ಟರು.

ತತೋ ಬೃಂದಾವನಂ ಗತ್ವಾ ವಸುದೇವಸುತಾವುಭೌ ।
ಗೋಕುಲಂ ತತ್ರ ಕೌಂತೇಯ ಚಾರಯಂತೌ ವಿಜಹ್ರತುಃ ॥೨೮॥

ಕೌಂತೇಯನೇ! ಅನಂತರ ವಸುದೇವನ ಮಕ್ಕಳಾದ ಅವರಿಬ್ಬರೂ ವೃಂದಾವನಕ್ಕೆ ಹೋಗಿ ಅಲ್ಲಿ ಗೋವುಗಳನ್ನು ರಕ್ಷಿಸುತ್ತಾ ವಿಹಾರವನ್ನು ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಪಂಚಚತ್ವಾರಿಂಶೋಧ್ಯಾಯಃ ॥
॥ ಅರ್ಘಾಭಿಹರಣಪರ್ವಣಿ ಚತುರ್ದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ನಲವತ್ತೈದನೆಯ ಅಧ್ಯಾಯವು ಮುಗಿಯಿತು.

★★★★★

ನಲವತ್ತಾರನೆಯ ಅಧ್ಯಾಯ

(ಕಾಲಿಯ ದಮನ, ಕಂಸಾದಿ ಹನನ)

ಭೀಷ್ಮಃ

ತತಃ ಕದಾಚಿದ್ ಗೋವಿಂದೋ ಜ್ಯೇಷ್ಠಂ ಸಂಕರ್ಷಣಂ ವಿನಾ ।
ಚಚಾರ ತದ್ವನಂ ರಮ್ಯಂ ಸಸುರೂಪೋ ವರಾನನಃ ॥೧॥

ಅನಂತರ ಒಮ್ಮೆ ಸುರೂಪವುಳ್ಳ ಸುಂದರಮುಖವುಳ್ಳ ಗೋವಿಂದನು ಅಣ್ಣನಾದ ಸಂಕರ್ಷಣನನ್ನು ಬಿಟ್ಟು ರಮ್ಯವಾದ ಕಾಡಿನಲ್ಲಿ ಸಂಚರಿಸಿದನು.

ಕಾಕಪಕ್ಷಧರಃ ಶ್ರೀಮಾನ್ ಶ್ಯಾಮಃ ಪದ್ಮನಿಭೇಕ್ಷಣಃ ।
ಶ್ರೀವತ್ಸೇನೋರಸಾ ಯುಕ್ತಃ ಶಶಾಂಕ ಇವ ಲಕ್ಷ್ಮಣಾ ॥೨॥

ರಜ್ಜುಯಜ್ಞೋಪವೀತೀ ಸ ಪೀತಾಂಬರಧರೋ ಯುವಾ ।
ಶ್ವೇತಚಂದನದಿಗ್ಧಾಂಗೋ ನೀಲಕುಂಚಿತಮೂರ್ಧಜಃ ॥೩॥

ರಾಜತಾ ಬರ್ಹಿಪತ್ರೇಣ ಮಂದಮಾರುತಕಂಪಿನಾ ।
ಕ್ವಚಿದ್ಗಾಯನ್ ಕ್ವಚಿತ್ ಕ್ರೀಡನ್ ಕ್ವಚಿನ್ನೃತ್ಯನ್ ಕ್ವಚಿದ್ಧಸನ್ ॥೪॥

ಗೋಪವೇಷಃ ಸುಮಧುರಂ ಗಾಯನ್ ವೇಣುಂ ಚ ವಾದಯನ್ ।
ಪ್ರಹ್ಲಾದನಾರ್ಥಂ ಚ ಗವಾಂ ಕ್ವಚಿದ್ ವನಗತೋ ಯುವಾ ॥೫॥

ಗೋಕುಲೇ ಮೇಘಕಾಲೇ ತು ಚಚಾರ ದ್ಯುತಿಮಾನ್ ಪ್ರಭುಃ ।
ಬಹುರಮ್ಯೇಷು ದೇಶೇಷು ವನಸ್ಯ ವನರಾಜಿಷು ॥೬॥

ತಲೆಯ ಮೇಲಿನ ಕೂದಲುಗಳನ್ನು ಬಾಚಿ ಕಾಂತಿಯುಕ್ತನಾದ ಶ್ಯಾಮವರ್ಣೋಪೇತನಾದ ಪದ್ಮನೇತ್ರನಾದ ಅವನು ಶ್ರೀವತ್ಸದಿಂದ ಕೂಡಿದವನಾಗಿ ಚಿನ್ಹೆಯುಳ್ಳ ಚಂದ್ರನಂತೆ ಶೋಭಿಸಿದನು. ದಾರದಿಂದ ಮಾಡಿದ ಯಜ್ಞೋಪವೀತವನ್ನು ಧರಿಸಿ ಪೀತಾಂಬರಧಾರಿಯಾಗಿ ಶ್ವೇತ ಚಂದನವನ್ನು ಲೇಪಿಸಿಕೊಂಡವನಾಗಿ ಕಪ್ಪಾದ ಗುಂಗುರು ಕೂದಲುಗಳನ್ನು ಹೊಂದಿದ್ದ ಅವನು ಮಂದಮಾರುತಕ್ಕೆ ಅಲುಗಾಡುವ ನವಿಲುಗರಿಯಿಂದ ಶೋಭಿಸುತ್ತಾ, ಒಮ್ಮೆ ಹಾಡುತ್ತಾ ಒಮ್ಮೆ ಆಡುತ್ತಾ ಒಮ್ಮೆ

ಕುಣಿಯುತ್ತಾ ಒಮ್ಮೆ ನಗುತ್ತಾ ಗೋಪವೇಷವನ್ನು ಧರಿಸಿ ಸುಮಧುರವಾಗಿ ಗಾನವಮಾಡುತ್ತಾ ವೇಣುವನ್ನು ವಾದನವಮಾಡುತ್ತಾ ಗೋವುಗಳನ್ನು ಸಂತೋಷಗೊಳಿಸುತ್ತಾ, (ಹೀಗೆಲ್ಲಾ ಮಾಡುತ್ತಾ) ವನಗತನಾಗಿ ಮಳೆಗಾಲದಲ್ಲಿ ಕಾಂತಿಯುಕ್ತನಾದ ಆ ಪ್ರಭುವು ಸುಂದರವಾದ ವನ ರಾಜಿಗಳಲ್ಲಿ ಗೋವುಗಳ ಮಧ್ಯದಲ್ಲಿ ಸಂಚರಿಸಿದನು.

ತಾಸು ಕೃಷ್ಣೋ ಮುದಾ ಯುಕ್ತಃ ಕ್ರೀಡಯನ್ ಭರತರ್ಷಭ ।
ಸ ಕದಾಚಿದ್ ವನೇ ತಸ್ಮಿನ್ ಗೋಭಿಃ ಸಹ ಪರಿವ್ರಜನ್ ॥೭॥

ಭಾಂಡೀರಂ ನಾಮ ದೃಷ್ಟ್ವಾಽಥ ನ್ಯಗ್ರೋಧಂ ಕೇಶವೋ ಮಹಾನ್।
ತಚ್ಛಾಯಾಯಾಂ ನಿವಾಸಾಯ ಮತಿಂ ಚಕ್ರೇ ತದಾ ಪ್ರಭುಃ ॥೮॥

ಎಲೈ ಭರತರ್ಷಭನೇ! ಕೃಷ್ಣನು ಸಂತೋಷದಿಂದ ಅಂತಹ ವನರಾಜಿಗಳಲ್ಲಿ ನಲಿಯುತ್ತಾ ಇತ್ತ ಒಮ್ಮೆ ಗೋವುಗಳ ಜೊತೆಯಲ್ಲಿ ಮುಂದೆ ಸಾಗುತ್ತಾ ಭಾಂಡೀರವೆಂಬ ಒಂದು ದೊಡ್ಡ ವಟವೃಕ್ಷವನ್ನು ನೋಡಿ ಅದರ ನೆರಳಿನಲ್ಲಿ ವಾಸಮಾಡಲು ಇಚ್ಛಿಸಿದನು.

ಸ ತತ್ರ ವಯಸಾ ತುಲ್ಯೈರ್ವತ್ಸಪಾಲೈಸ್ತದಾऽನಘ ।
ರೇಮೇ ಸ ದಿವಸಾನ್ ಕೃಷ್ಣಃ ಪುರಾ ಸ್ವರ್ಗಪುರೇ ಯಥಾ ॥೯॥

ಎಲೈ ಅನಘನೇ! ಅಲ್ಲಿ ಕೃಷ್ಣನು ತನ್ನ ಸಮಾನ ವಯಸ್ಸಿನ ವತ್ಸಪಾಲಕರ ಜೊತೆಯಲ್ಲಿ ಕೂಡಿ ಹಗಲಿನ ಸಮಯದಲ್ಲಿ ಅನೇಕ ದಿವಸಗಳ ಕಾಲ ಸ್ವರ್ಗದಲ್ಲಿ ಆನಂದಿಸುವಂತೆ ಆನಂದಿಸಿದನು.

ತಂ ಕ್ರೀಡಮಾನಂ ಗೋಪಾಲಾಃ ಕೃಷ್ಣಂ ಭಾಂಡೀರವಾಸಿನಃ ।
ರಮಯಂತಿ ಸ್ಮ ಬಹವೋ ಮಾನ್ಯೈಃ ಕ್ರೀಡನಕೈಸ್ತದಾ ॥೧೦॥

ಹೀಗೆ ಆಟವಾಡುತ್ತಿದ್ದ ಕೃಷ್ಣನಿಗೆ ಭಾಂಡೀರವಾಸಿಗಳಾದ ಉಳಿದ ಗೋಪಾಲರೆಲ್ಲರೂ ಆನೇಕ ಶ್ರೇಷ್ಠವಾದ ಕ್ರೀಡಾಸಾಮಗ್ರಿಗಳನ್ನು ತಂದುಕೊಟ್ಟು ಸಂತೋಷಪಡಿಸಿದರು.

ಅನ್ಯೇ ಸ್ಮ ಪರಿಗಾಯಂತಿ ಗೋಪಾ ಮುದಿತಮಾನಸಾಃ ।
ಗೋಪಾಲಾಃ ಕೃಷ್ಣಮೇವಾನ್ಯೇ ಗಾಯಂತಿ ಸ್ಮ ವನಪ್ರಿಯಾಃ ॥೧೧॥

ಇನ್ನು ಕೆಲವು ಗೋಪಾಲಕರು ಸಂತೋಷದಿಂದ ಕೂಡಿದ ಮನಸ್ಸುಳ್ಳವರಾಗಿ ಗಾನಮಾಡುತ್ತಿದ್ದರು. ವನಪ್ರಿಯರಾದ ಇನ್ನು ಕೆಲವು ಗೋಪಾಲಕರು ಕೃಷ್ಣನನ್ನೇ ಗಾನಮಾಡುತ್ತಿದ್ದರು.

ತೇಷಾಂ ಸಂಗಾಯತಾಮೇವ ವಾದಯಾಮಾಸ ಕೇಶವಃ ।
ಪುನರ್ವಾದ್ಯಾಂತರೇ ವೇಣುಂ ತುಂಬವೀಣಾಂ ಚ ತತ್ರ ವೈ ।
ಏವಂ ಕ್ರೀಡಾಂತನಿರತೈರ್ಗೋಪಾಲೈರ್ವಿಜಹಾರ ಸಃ ॥೧೨॥

ಅವರು ಹೀಗೆ ಗಾನಮಾಡುತ್ತಿರಲು ಕೃಷ್ಣನು ಆ ಗಾನಕ್ಕೆ ಅನುಕೂಲವಾಗಿ ಬೇರೆ ಬೇರೆ ವಾದ್ಯಗಳನ್ನೂ ವೇಣುವನ್ನೂ ಸೋರೆಯ ಬುರುಡೆಯಿಂದ ಮಾಡಿದ ವೀಣೆಯನ್ನೂ ನುಡಿಸಿದನು. ಹೀಗೆ ಕ್ರೀಡಾನಿರತರಾದ ಗೋಪಾಲಕರ ಜೊತೆಯಲ್ಲಿ ಅವನು ವಿಹರಿಸಿದನು.

ತೇನ ಬಾಲೇನ ಕೌಂತೇಯ ಕೃತಂ ಲೋಕಹಿತಂ ತದಾ ।
ಪಶ್ಯತಾಂ ಸರ್ವಭೂತಾನಾಂ ವಾಸುದೇವೇನ ಭಾರತ ॥೧೩॥

ಎಲೈ ಕೌಂತೇಯನೇ! ಭಾರೆನೇ! ಹೀಗೆ ಆಟವಾಡುತ್ತಿದ್ದ ಕೃಷ್ಣನು ಎಲ್ಲರ ಎದುರಿನಲ್ಲಿ ಲೋಕಹಿತವಾದ ಒಂದು ಕಾರ್ಯವನ್ನು ಮಾಡಿದನು.

ಹ್ರದೇ ನೀಪವನೇ ತಾತ ಕ್ರೀಡಿತಂ ನಾಗಮೂರ್ಧನಿ ।
ಶಾಸಯಿತ್ವಾ ತು ಕಾಲೀಯಂ ಸರ್ವಲೋಕಸ್ಯ ಪಶ್ಯತಃ ।
ವಿಜಹಾರ ತತಃ ಕೃಷ್ಣೋ ಬಲದೇವಸಹಾಯವಾನ್ ॥೧೪॥

ಯಮುನಾ ನದಿಯ ತೀರದ ನೀಪವನದ ಸಮೀಪದಲ್ಲಿ ಯಮುನೆಯ ಹ್ರದದಲ್ಲಿ ಕಾಲಿಯ ಸರ್ಪನ ಜೊತೆ ಆಟವಾಡಿ ಎಲ್ಲರ ಕಣ್ಣೆದುರಿಗೆ ಅವನನ್ನು ಶಿಕ್ಷಿಸಿದನು. ಅನಂತರ ಕೃಷ್ಣನು ಬಲದೇವನ ಜೊತೆಯಲ್ಲಿ ವಿಹರಿಸಿದನು.

ಧೇನುಕೋ ದಾರುಣೋ ದೈತ್ಯೋ ರಾಜನ್ ರಾಸಭವಿಗ್ರಹಃ ।
ತದಾ ತಾಳವನೇ ರಾಜನ್ ಬಲದೇವೇನ ವೈ ಹತಃ ॥೧೫॥

ಎಲೈ ರಾಜನೇ! ಅನಂತರ ರಾಸಭದೇಹವನ್ನು ಧರಿಸಿದ ಧೇನುಕನೆಂಬ ಘೋರನಾದ ರಾಕ್ಷಸನು ಬಲದೇವನಿಂದ ತಾಳವನದಲ್ಲಿ ಸಂಹರಿಸಲ್ಪಟ್ಟನು.

ತತಃ ಕೃಷ್ಣೋ ಮಹಾತೇಜಾಸ್ತದಾ ಗತ್ವಾ ತು ಗೋವ್ರಜಮ್ ।
ಗಿರಿಯಜ್ಞಂ ತಮೇವೈಷ ಪ್ರಕೃತಂ ಗೋಪದಾರಕೈಃ ।
ಬುಭುಜೇ ಪಾಯಸಂ ಶೌರಿರೀಶ್ವರಃ ಸರ್ವಭೂತಕೃತ್ ॥೧೬॥

ಅನಂತರ ಮಹಾತೇಜಸ್ವಿಯಾದ ಕೃಷ್ಣನು ಗೋವ್ರಜಕ್ಕೆ ಹೋಗಿ ಗೋಪದಾರಕರು ಪ್ರವರ್ತಿಸಿದ ಗಿರಿಯಜ್ಞವನ್ನು ಮಾಡಿ ಶೌರಿಯಾ ಈಶ್ವರನೂ ಸರ್ವಭೂತ ಕರ್ತನೂ ಆದ ಅವನು ಪಾಯಸವನ್ನು ಊಟಮಾಡಿದನು.

ತಂ ನತ್ವಾ ಗೋಪಕಾಃ ಸರ್ವೇ ಕೃಷ್ಣಮೇವ ಸಮರ್ಚಯನ್ ।
ಪೂಜ್ಯಮಾನಸ್ತತೋ ಗೋಪೈರ್ದಿವ್ಯಂ ವಪುರಧಾರಯತ್ ॥೧೭॥

ಗೋಪಾಲಕರೆಲ್ಲರೂ ಕೃಷ್ಣನನ್ನು ನಮಸ್ಕರಿಸಿ ಅವನಿಗೆ ಅರ್ಚನೆಯನ್ನು ಸಲ್ಲಿಸಿದರು. ಗೋಪಾಲಕರಿಂದ ಪೂಜಿಸಲ್ಪಟ್ಟ ಕೃಷ್ಣನು ಅನಂತರ ದಿವ್ಯದೇಹವನ್ನು ಧರಿಸಿದನು.

ಧೃತೋ ಗೋವರ್ಧನೋ ನಾಮ ಸಪ್ತಾಹಂ ವರ್ಷತೋ ಮಹಾನ್।
ಶಿಶುನಾ ವಾಸುದೇವೇನ ಗವಾರ್ಥಮರಿಮರ್ದನ ॥೧೮॥

ಎಲೈ ಶತ್ರು ಮರ್ದನನೇ! ಇಂದ್ರನು ಮಳೆಯನ್ನು ಸುರಿಸಿದಾಗ ಶಿಶುವಾದ ವಾಸುದೇವನು ಗೋವರ್ಧನವೆಂಬ ಮಹಾಪರ್ವತವನ್ನು ಏಳು ದಿನಗಳ ಕಾಲ ಎತ್ತಿ ಹಿಡಿದನು.

ಕ್ರೀಡಮಾನಸ್ತದಾ ಕೃಷ್ಣಃ ಕೃತವಾನ್ ಕರ್ಮ ದುಷ್ಕರಮ್ ।
ತದದ್ಭುತಮಿವಾತ್ರಾಸೀತ್ ಸರ್ವಲೋಕಸ್ಯ ಭಾರತ ॥೧೯॥

ಆಗ ಕೃಷ್ಣನು ಲೀಲೆಯಿಂದಲೇ ಅನಾಯಾಸವಾಗಿ ಆ ದುಷ್ಕರಕರ್ಮವನ್ನು ಮಾಡಿದನು. ಭಾರತನೇ ಎಲ್ಲರ ಕಣ್ಣೆದುರಿಗೆ ಮಾಡಿದ ಆ ಅಸಾಧಾರಣಕರ್ಮವು ಅದ್ಭುತವಾಗಿದ್ದಿತು.

ದೇವದೇವಃ ಕ್ಷಿತಿಂ ಗತ್ವಾ ಕೃಷ್ಣಂ ದೃಷ್ಟ್ವಾ ಮುದಾನ್ವಿತಃ ।
ಗೋವಿಂದ ಇತಿ ತಂ ಹ್ಯುಕ್ತ್ವಾ ಅಭಿಷಿಂಚತ್ ಪುರಂದರಃ ।
ಇತ್ಯುಕ್ತ್ವಾ ಽಽಶ್ಲಿಷ್ಯ ಗೋವಿಂದಂ ಪುರುಹೂತೋಽಭ್ಯಯಾದ್ದಿವಮ್ ॥

ದೇವದೇವನಾದ ಇಂದ್ರನು ಭೂಮಿಗೆ ಬಂದು ಕೃಷ್ಣನನ್ನು ನೋಡಿ ಸಂತೋಷದಿಂದ ಗೋವಿಂದನೆಂದು ನಾಮಕರಣವನ್ನು ಮಾಡಿ ಅವನಿಗೆ ಅಭಿಷೇಕವನ್ನು ಮಾಡಿ, ಗೋವಿಂದನೆಂದು ಅವನನ್ನು ಕರೆದು ಆಲಿಂಗಿಸಿ ಸ್ವರ್ಗಕ್ಕೆ ಹಿಂದಿರುಗಿದನು.

ಅಥಾರಿಷ್ಟ ಇತಿ ಖ್ಯಾತಂ ದೈತ್ಯಂ ವೃಷಭವಿಗ್ರಹಮ್ ।
ಜಘಾನ ತರಸಾ ಕೃಷ್ಣಃ ಪಶೂನಾಂ ಹಿತಕಾಮ್ಯಯಾ ॥೨೧॥

ಅನಂತರ ಪಶುಗಳಿಗೆ ಹಿತವನ್ನುಮಾಡುವ ಇಚ್ಛೆಯುಳ್ಳವನಾಗಿ ಕೃಷ್ಣನು ವೃಷಭರೂಪವನ್ನು ಧರಿಸಿದ ಅರಿಷ್ಟ ಎಂಬ ದೈತ್ಯನನ್ನು ತನ್ನ ಸಾಮರ್ಥ್ಯದಿಂದ ಸಂಹರಿಸಿದನು.

ಕೇಶಿಂ ನಾಮ ತತೋ ರಾಜನ್ ದೈತೇಯಂ ಹಯವಿಗ್ರಹಮ್ ।
ತಥಾ ವನಗತಂ ಪಾರ್ಥ ಗಜಾಯುತಬಲಂ ಹಯಮ್ ॥೨೨॥

ಪ್ರಹಿತಂ ಭೋಜಪುತ್ರೇಣ ಜಘಾನ ಮಧುಸೂದನಃ ।
ಕಂಸಮಲ್ಲಂ ಚ ಚಾಣೂರಂ ನಿಜಘಾನ ಮಹಾಸುರಮ್ ॥೨೩॥

ಎಲೈ ರಾಜನೇ! ಅನಂತರ ಕುದುರೆಯ ರೂಪವನ್ನು ಧರಿಸಿದ ಹತ್ತು ಸಾವಿರ ಆನೆಯ ಬಲವುಳ್ಳ ಭೋಜಪುತ್ರನಾದ ಕಂಸನಿಂದ ಕಾಡಿಗೆ ಕಳುಹಿಸಲ್ಪಟ್ಟ ಕೇಶಿಯೆಂಬ ದೈತ್ಯನನ್ನು ಮಧುಸೂದನನು ಸಂಹರಿಸಿದನು. ಕಂಸನ ಮಲ್ಲನಾದ ಚಾಣೂರನೆಂಬ ಮಹಾಸುರನನ್ನು ಸಂಹರಿಸಿದನು.

ಸುದಾಮಾನಮಮಿತ್ರಘ್ನಂ ಸರ್ವಸೈನ್ಯಪುರಸ್ಕೃತಮ್ ।
ಮೃಗರೂಪೇಣ ಗೋವಿಂದಸ್ತ್ರಾಸಯಾಮಾಸ ಭಾರತ ॥೨೪॥

ಎಲೈ ಭಾರತನೇ! ಸರ್ವಸೈನ್ಯ ಪುರಸ್ಕೃತನಾದ ಸುದಾಮ ಎಂಬ ಶತ್ರುಸಂಹಾರಕನಾದ ಕಂಸನ ಭೃತ್ಯನನ್ನು ಗೋವಿಂದನು ಸಿಂಹದ ರೂಪವನ್ನು ಧರಿಸಿ ಪೀಡಿಸಿದನು.

ಬಲದೇವೇನ ಚಾಯತ್ತಃ ಸಮಾಜೇ ಮುಷ್ಟಿಕೋ ಹತಃ ।
ತ್ರಾಸಿತಶ್ಚ ತದಾ ಕಂಸಃ ಸ ಹಿ ಕೃಷ್ಣೇನ ಭಾರತ ॥೨೫॥

ಧನುರುತ್ಸವ ಸಂದರ್ಭದಲ್ಲಿ ಬಲದೇವನ ಜೊತೆಯಲ್ಲಿ ಸೆಣಸಿದ ಮುಷ್ಟಿಕನು ಬಲದೇವನಿಂದ ಹತನಾದನು. ಎಲೈ ಭಾರತನೇ! ಆಗ ಕೃಷ್ಣನಿಂದ ಕಂಸನು ಮಹಾಭಯಕ್ಕೆ ಒಳಗಾದನು.

ಐರಾವತಂ ಯುಯುತ್ಸಂತಂ ಮಾತಂಗಾನಾಮಿವರ್ಷಭಮ್ ।
ಕೃಷ್ಣಃ ಕುವಲಯಾಪೀಡಂ ಹತವಾಂಸ್ತಸ್ಯ ಪಶ್ಯತಃ ॥೨೬॥

ಐರಾವತದಂತೆ ಗಜರಾಜನಂತಿದ್ದ ತನ್ನನ್ನು ಕೊಲ್ಲಲು ಬಂದ ಕುವಲಯಾಪೀಡ ಎಂಬ ಗಜವನ್ನು ಕಂಸನ ಕಣ್ಣೆದುರಿಗೇ ಸಂಹರಿಸಿದನು.

ಹತ್ವಾ ಕಂಸಮಮಿತ್ರಘ್ನಃ ಸರ್ವೇಷಾಂ ಪಶ್ಯತಾಂ ತದಾ ।
ಅಭಿಷಿಚ್ಯೋಗ್ರಸೇನಂ ತಂ ಪಿತ್ರೋಃ ಪಾದಾನವಂದತ ॥೨೭॥

ಎಲ್ಲರ ಕಣ್ಣೆದುರಿನಲ್ಲಿ ಅಮಿತ್ರಘ್ನನಾದ ಕೃಷ್ಣನು ಕಂಸನನ್ನು ಸಂಹರಿಸಿ ಉಗ್ರಸೇನನಿಗೆ ಪಟ್ಟವನ್ನು ಕಟ್ಟಿ ದೇವಕಿ ವಸುದೇವರ ಪಾದಗಳಿಗೆ ನಮಸ್ಕರಿಸಿದನು.

ಏವಮಾದೀನಿ ಕರ್ಮಾಣಿ ಕೃತವಾನ್ ವೈ ಜನಾರ್ದನಃ ।
ಉವಾಸ ಕತಿಚಿತ್ ತತ್ರ ದಿನಾನಿ ಸಹಲಾಯುಧಃ ॥೨೯॥

ಜನಾರ್ದನನು ಇವೇ ಮೊದಲಾದ ಕರ್ಮಗಳನ್ನು ಮಾಡುತ್ತಾ ಬಲರಾಮನ ಜೊತೆಯಲ್ಲಿ ಕೆಲವು ಸಮಯದವರೆಗೆ ಅಲ್ಲಿ ವಾಸಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಷಟ್ಚತ್ವಾರಿಂಶೋಧ್ಯಾಯಃ ॥
॥ ಅರ್ಘಾಭಿಹರಣಪರ್ವಣಿ ಪಂಚದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ನಲವತ್ತಾರನೆಯ ಅಧ್ಯಾಯವು ಮುಗಿಯಿತು.

★ ★ ★ ★

ನಲವತ್ತೇಳನೆಯ ಅಧ್ಯಾಯ

(ಕೃಷ್ಣ ಬಲರಾಮರ ವಿದ್ಯಾಭ್ಯಾಸ ಗುರುದಕ್ಷಿಣೆ ಮತ್ತು ಪುನಃ ಕಂಸವಧೆಯ ಕಥನ)

ಭೀಷ್ಮಃ

ತತಸ್ತೌ ಜಗ್ಮತುಸ್ತಾತ ಗುರುಂ ಸಾಂದೀಪಿನಿಂ ಪುನಃ ।
ಗುರುಶುಶ್ರೂಷಯಾ ಯುಕ್ತೌ ಧರ್ಮಜ್ಞೌ ಧರ್ಮಚಾರಿಣೌ ॥೧॥

ಪ್ರೀತಿಪಾತ್ರನೇ! ಅನಂತರ ಅವರು ಧರ್ಮಜ್ಞರಾದ ಸಾಂದೀಪಿನಿ ಗುರುಗಳ ಬಳಿಗೆ ಹೋಗಿ ಗುರುಶುಶ್ರೂಷೆಯನ್ನು ಮಾಡುತ್ತಾ ಧರ್ಮಚಾರಿಗಳಾದರು.

ವ್ರತಮುಗ್ರಂ ಮಹಾತ್ಮಾನೌ ವಿಚರಂತಾವವಂತಿಷು ।
ಅಹೋರಾತ್ರೈಶ್ಚತುಷ್ಷಷ್ಟ್ಯಾ ಷಡಂಗಂ ವೇದಮಾಪತುಃ ॥೨॥

ಮಹಾತ್ಮರಾದ ಅವರಿಬ್ಬರೂ ಅವಂತಿದೇಶದಲ್ಲಿ ಉಗ್ರವಾದ ವ್ರತವನ್ನು ಆಚರಿಸುತ್ತಾ ಅರವತ್ತನಾಲ್ಕು ಅಹೋರಾತ್ರಿಗಳಲ್ಲಿ ಷಡಂಗಸಹಿತವಾದ ವೇದವನ್ನು ಅಧ್ಯಯನ ಮಾಡಿದರು.

ಲೇಖ್ಯಂ ಚ ಗಣಿತಂ ಚೋಭೌ ಪ್ರಾಪ್ನುತಾಂ ಯದುನಂದನೌ ।
ಗಾಂಧರ್ವವೇದಂ ಚಿತ್ರಂ ಚ ಸಕಲಂ ಸಮವಾಪತುಃ ॥೩॥

ಯದುನಂದನರಾದ ಅವರಿಬ್ಬರೂ ಬರವಣಿಗೆಯನ್ನೂ ಗಣಿತವನ್ನೂ ಸಂಗೀತವಿದ್ಯೆಯನ್ನೂ ಚಿತ್ರಕಲೆಯನ್ನೂ ಜೊತೆಯಲ್ಲಿಯೇ ಕಲಿತರು.

ಹಸ್ತಿಶಿಕ್ಷಾಶ್ವಶಿಕ್ಷಾಂ ಚ ದ್ವಾದಶಾಹೇನ ಚಾಪತುಃ ।
ತಾವುಭೌ ಜಗ್ಮತುರ್ವೀರೌ ಗುರುಂ ಸಾಂದೀಪಿನಿಂ ಪುನಃ ।
ಧನುರ್ವೇದಚಿಕೀರ್ಷಾರ್ಥಂ ಸರ್ವಜ್ಞೌ ಧರ್ಮಚಾರಿಣೌ ॥೪॥

ಹಸ್ತಶಿಕ್ಷಾ ಗಜಶಿಕ್ಷಾ ವಿದ್ಯೆಯನ್ನೂ ಅಶ್ವಶಿಕ್ಷಾ ವಿದ್ಯೆಯನ್ನೂ ಕಲಿತು ಪುನಃ ಸರ್ವಜ್ಞರಾದ ಧರ್ಮಚಾರಿಗಳಾದ ಅವರು ಗುರುಗಳಾದ ಸಾಂದೀಪಿನಿಗಳ ಬಳಿಗೆ ಧನುರ್ವಿದ್ಯೆಯನ್ನು ಕಲಿಯಲು ಬಂದರು.

ತಾವಿಷ್ವಸ್ತ್ರವರಾಚಾರ್ಯಮಭಿಗಮ್ಯ ಪ್ರಣಮ್ಯ ಚ ।
ತೇನ ತೌ ಸತ್ಕೃತೌ ರಾಜನ್ ವಿಚರಂತಾವವಂತಿಷು ॥೫॥

ಪಂಚಾಶದ್ಭಿರಹೋರಾತ್ರೈರ್ದಶಾಂಗಂ ಸುಪ್ರತಿಷ್ಠಿತಮ್ ।
ಸರಹಸ್ಯಂ ಧನುರ್ವೇದಂ ಸಕಲಂ ತಾವವಾಪ್ನುತಾಮ್ ॥೬॥

ಅವರಿಬ್ಬರೂ ಧನುರ್ವೇದ ಪರಮಾಚಾರ್ಯರಾದ ಸಾಂದೀಪಿನಿಗಳನ್ನು ಸಮೀಪಿಸಿ ನಮಸ್ಕರಿಸಿದರು. ರಾಜನೇ! ಅವರಿಂದ ಸತ್ಕೃತರಾದ ಅವರಿಬ್ಬರೂ ಅವಂತಿದೇಶದಲ್ಲಿ ಸಂಚರಿಸುತ್ತಾ ಐವತ್ತು ದಿನಗಳಲ್ಲಿ ದಶಾಂಗಗಳಿಂದ ಕೂಡಿದ ಸುಪ್ರತಿಷ್ಠಿತವಾದ ರಹಸ್ಯ ಸಹಿತವಾದ ಸಕಲವಾದ ಧನುರ್ವೇದವನ್ನು ಕಲಿತರು.

ದೃಷ್ಟ್ವಾ ಕೃತಾರ್ಥೌ ವಿಪ್ರೇಂದ್ರೋ ಗುರ್ವರ್ಥೇ ತಾವಚೋದಯತ್ ।
ಅಯಾಚತಾರ್ಥಂ ಗೋವಿಂದಂ ತತಃ ಸಾಂದೀಪಿನಿರ್ವಿಭುಮ್ ॥೭॥

ವಿಪ್ರೇಂದ್ರರಾದ ಸಾಂದೀಪಿನಿಗಳು ಕೃತಾರ್ಥರಾದ ಅವರನ್ನು ನೋಡಿ ಗುರುದಕ್ಷಿಣೆಯ ಸಲುವಾಗಿ ಅವರನ್ನು ಕೇಳಿದರು. ಆಗ ಸಾಂದೀಪಿನಿಗಳು ಪ್ರಭುವಾದ ಗೋವಿಂದನನ್ನು ತಮಗೆ ಅಭಿಮತವಾದ ಅರ್ಥವನ್ನು ಯಾಚಿಸಿದರು.

ಮಮ ಪುತ್ರಃ ಸಮುದ್ರೇಸ್ಮಿಂಸ್ತಿಮಿನಾ ಚಾಪವಾಹಿತಃ ।
ಪುತ್ರಮಾನಯ ಭದ್ರಂ ತೇ ಭಕ್ಷಿತಂ ತಿಮಿನಾ ಮಮ ॥೮॥

ನಿನಗೆ ಮಂಗಳವಾಗಲಿ, ನನ್ನ ಪುತ್ರನು ಈ ಸಮುದ್ರದಲ್ಲಿ ಒಂದು ತಿಮಿಂಗಿಲದಿಂದ ಅಪಹರಿಸಿ ಭಕ್ಷಿಸಲ್ಪಟ್ಟನು. ಅವನನ್ನು ತಂದುಕೊಡು.

ಭೀಷ್ಮಃ

ಆರ್ತಾಯ ಗುರವೇ ತತ್ರ ಪ್ರತಿಶುಶ್ರಾವ ದುಷ್ಕರಮ್ ।
ಅಶಕ್ಯಂ ಸರ್ವಭೂತೇಷು ಕರ್ತುಮನ್ಯೇನ ಕೇನಚಿತ್ ॥೯॥

ಗೋವಿಂದನು ಆರ್ತರಾದ ಗುರುಗಳಿಗೆ ಬೇರೆ ಯಾವ ವ್ಯಕ್ತಿಯೂ ಮಾಡಲು ಅಸಾಧ್ಯವಾದ ದುಷ್ಕರವಾದ ಕರ್ಮವನ್ನು ಮಾಡುವ ವಾಗ್ದಾನವನ್ನು ಮಾಡಿದನು.

ಯಶ್ಚ ಸಾಂದೀಪಿನೇಃ ಪುತ್ರಂ ಜಘಾನ ಭರತರ್ಷಭ ।
ಸೋಽಸುರಃ ಸಮರೇ ತಾಭ್ಯಾಂ ಸಮುದ್ರೇ ವಿನಿಪಾತಿತಃ ॥೧೦॥

ಎಲೈ ಭರತರ್ಷಭನೇ! ಯಾವ ಅಸುರನು ಸಾಂದೀಪಿನಿಯ ಪುತ್ರನನ್ನು ಕೊಂದಿದ್ದನೋ ಅವನನ್ನು ಅವರಿಬ್ಬರೂ ಸಮುದ್ರದಲ್ಲಿ ಸೋಲಿಸಿ ಸಂಹರಿಸಿದರು.

ತತಃ ಸಾಂದೀಪಿನೇಃ ಪುತ್ರಃ ಪ್ರಸಾದಾದಮಿತೌಜಸಃ ।
ದೀರ್ಘಕಾಲಂ ಕೃತಃ ಪ್ರೇತಂ ಪುನರಾಸೀಚ್ಛರೀರವಾನ್ ॥೧೧॥

ಆಗ ಅಮಿತಪರಾಕ್ರಮಿಯಾದ ಕೃಷ್ಣನ ಅನುಗ್ರಹದಿಂದ ದೀರ್ಘಕಾಲದ ಹಿಂದೆ ಮೃತನಾಗಿದ್ದ ಸಾಂದೀಪಿನಿಗಳ ಪುತ್ರನು ಪುನಃ ಶರೀರವನ್ನು ಧರಿಸಿ ಬಂದನು.

ತದಶಕ್ಯಮಚಿಂತ್ಯಂ ಚ ದೃಷ್ಟ್ವಾ ಸುಮಹದದ್ಭುತಮ್ ।
ಸರ್ವೇಷಾಮೇವ ಭೂತಾನಾಂ ವಿಸ್ಮಯಃ ಸಮಜಾಯತ ॥೧೨॥

ಇಂತಹ ಅಸಾಧ್ಯವಾದ, ಯೋಚನೆಯನ್ನೂ ಮಾಡಲು ಶಕ್ಯವಲ್ಲದ, ಮಹಾ ಅದ್ಭುತವಾದ ಕರ್ಮವನ್ನು ನೋಡಿದ ಎಲ್ಲರಿಗೂ ವಿಸ್ಮಯ ಉಂಟಾಯಿತು.

ಐಶ್ವರ್ಯಾಣಿ ಚ ಸರ್ವಾಣಿ ಗವಾಶ್ವಂ ಚ ಧನಾನಿ ಚ ।
ಸರ್ವಂ ತದುಪಜಹ್ರಾತೇ ಗುರವೇ ರಾಮಕೇಶವೌ ।
ತತಸ್ತಂ ಪುತ್ರಮಾದಾಯ ದದೌ ಚ ಗುರವೇ ಪ್ರಭುಃ ॥೧೩॥

ಬಲರಾಮಕೇಶವರು ಸಮಗ್ರವಾದ ಐಶ್ವರ್ಯವನ್ನೂ ಗೋಸಂಪತ್ತು ಮತ್ತು ಅಶ್ವಸಂಪತ್ತುಗಳನ್ನೂ ತೆಗೆದುಕೊಂಡು ಗುರುಪುತ್ರನನ್ನು ಕರೆದುಕೊಂಡು ಬಂದು ಗುರುಗಳಿಗೆ ಒಪ್ಪಿಸಿದರು.

ತಂ ದೃಷ್ಟ್ವಾ ಪುತ್ರಮಾಯಾಂತಂ ಸಾಂದೀಪಿನಿಪುರೇ ಜನಾಃ ।
ಅಶಕ್ಯಮೇತತ್ ಸರ್ವೇಷಾಮಚಿಂತ್ಯಮಿತಿ ಮೇನಿರೇ ॥೧೬॥

ಗದಾಪರಿಘಯುದ್ಧೇ ಚ ಸರ್ವಾಸ್ತ್ರೇಷು ಚ ಕೇಶವಃ ।
ಪರಮಾಂ ಮುಖ್ಯತಾಂ ಪ್ರಾಪ್ತಃ ಸರ್ವಲೋಕೇಷು ವಿಶ್ರುತಃ ॥೧೭॥

ಅವನನ್ನು ನೋಡಿದ ಅವಂತಿಪುರದ ಜನರು ಇದು ಯಾರಿಗೂ ಸಾಧ್ಯವಾಗದಿರುವುದು ಮತ್ತು ನಂಬಲೂ ಅಶಕ್ಯವಾದಂತಹುದು ಎಂದು ತಿಳಿದರು. ಕೇಶವನು ಗದಾಯುದ್ಧ ಪರಿಘಯುದ್ಧಗಳಲ್ಲಿಯೂ ಸರ್ವಾಸ್ತ್ರಗಳಲ್ಲಿಯೂ ಪರಮ ಶ್ರೇಷ್ಠತೆಯನ್ನು ಹೊಂದಿ ಸರ್ವಲೋಕಗಳಲ್ಲಿಯೂ ವಿಶ್ರುತನಾದನು.

ತತಃ ಕದಾಚಿತ್ ಕೌಂತೇಯ ರಾಮಕೃಷ್ಣೌ ವನಂ ಗತೌ ।
ಚಾರಯಂತೌ ಪ್ರವೃದ್ಧಾನಿ ಗೋಧನಾನಿ ಶುಭಾನನೌ ॥೧೮॥

ವಿಹರಂತೌ ಮುದಾ ಯುಕ್ತೌ ವೀಕ್ಷಮಾಣೌ ವನಾನಿ ಚ ।
ಕ್ಷ್ವೇಳಯಂತೌ ಪ್ರಗಾಯಂತೌ ವಿಚಿನ್ವಂತೌ ಚ ಪಾದಪಾನ್ ॥೧೯॥

ನಾಮಭಿರ್ವ್ಯಾಹರಂತೌ ಚ ವತ್ಸಾನ್ ಗಾಶ್ಚ ಪರಂತಪೌ ।
ಚೇರತುರ್ಲೋಕಸಿದ್ಧಾಭಿಃ ಕ್ರೀಡಾಭಿರಪರಾಜಿತೌ ॥೨೦॥

ಎಲೈ ಕೌಂತೇಯನೇ! ಒಮ್ಮೆ ಸುಂದರರಾದ ರಾಮಕೃಷ್ಣರು ಪ್ರವೃದ್ಧವಾದ ಗೋಸಂಪತ್ತನ್ನು ಕರೆದುಕೊಂಡು ಮೇಯಿಸುತ್ತಾ ವನಕ್ಕೆ ಹೋದರು. ಸಂತೋಷದಿಂದ ಕೂಡಿದ ಅವರು ವನದ ಸೌಂದರ್ಯವನ್ನು ವೀಕ್ಷಿಸುತ್ತಾ ಮೃಗಗಳ ಗರ್ಜನೆಯನ್ನು ಮಾಡುತ್ತಾ ಗಾನವನ್ನು ಮಾಡುತ್ತಾ ವೃಕ್ಷಗಳನ್ನು ಹುಡುಕುತ್ತಾ ಹಸುಗಳನ್ನು ಮತ್ತು ಕರುಗಳನ್ನು ಅವುಗಳ ಹೆಸರಿನಿಂದ ಕರೆಯುತ್ತಾ ಪರಂತಪರೂ ಅಪರಾಜಿತರೂ ಆದ ಅವರು ಲೋಕಸಿದ್ಧವಾದ ಕ್ರೀಡೆಗಳನ್ನು ಮಾಡುತ್ತಾ ಸಂಚರಿಸಿದರು. (ಕೃಷ್ಣದೇವರ ಬಾಲಲೀಲೆಗಳಿಗೆ ಮನಸೋತ ಭೀಷ್ಮರು ಪುನಃ ಹಿಂದಿನ ಕಥೆಯನ್ನು ಮೆಲುಕುಹಾಕಿ ನಿರೂಪಿಸುತ್ತಾರೆ ಎಂದು ಲಕ್ಷಾಲಂಕಾರಕಾರರು ಇಲ್ಲಿ ತಿಳಿಸಿದ್ದಾರೆ.)

ತೌ ದೇವೌ ಮಾನುಷೀಂ ದೀಕ್ಷಾಂ ವಹಂತೌ ಸುರಪೂಜಿತೌ ।
ತಜ್ಜಾತಿಗುಣಯುಕ್ತಾಭಿಃ ಕ್ರೀಡಾಭಿಶ್ಚೇರತುರ್ವನಮ್ ।
ಏವಂ ಬಾಲ್ಯೇಽಪಿ ಗೋಪಾಲೈಃ ಕ್ರೀಡಾಭಿಸ್ತೌ ವಿಜಹ್ರತುಃ ॥೨೧॥

ಮನುಷ್ಯವೇಷವನ್ನು ಧರಿಸಿದ ದೇವತೆಗಳಿಂದ ಪೂಜಿತರಾದ ಆ ಇಬ್ಬರ ದೇವಶ್ರೇಷ್ಠರು ಮನುಷ್ಯಜಾತಿಗೆ ಯೋಗ್ಯವಾದ ಕ್ರೀಡೆಗಳಿಂದ ಮತ್ತು ಗುಣಗಳಿಂದ ಕಾಡಿನಲ್ಲಿ ಸಂಚರಿಸಿದರು. ಹೀಗೆ ಬಾಲ್ಯದಲ್ಲಿಯೂ ಅವರಿಬ್ಬರೂ ಗೋಪಾಲಕರ ಜೊತೆಯಲ್ಲಿ ಕ್ರೀಡೆಗಳನ್ನು ಆಡುತ್ತಾ ವಿಹರಿಸಿದರು.

ಕಶ್ಚ ನಾರಾಯಣಾದನ್ಯಃ ಸರ್ವರತ್ನವಿಭೂಷಿತಮ್ ।
ರಥಮಾದಿತ್ಯಸಂಕಾಶಮಾತಿಷ್ಠೇನ ಶಚೀಪತೇಃ ॥೨೨॥

ಧರ್ಮರಾಜನೇ! ನಾರಾಯಣನಲ್ಲದೆ ಬೇರೆ ಯಾರು ಸರ್ವರತ್ನವಿಭೂಷಿತವಾದ ಸೂರ್ಯಪ್ರಕಾಶವನ್ನು ಹೊಂದಿರುವ ಇಂದ್ರನ ರಥವನ್ನು ಏರುತ್ತಾನೆ?

ಕಸ್ಯ ಚಾಪ್ರತಿಮೋ ಯಂತಾ ವಜ್ರಪಾಣೇಃ ಪ್ರಿಯಃ ಸಖಾ ।
ಮಾತಲಿಃ ಸಂಗೃಹೀತೀ ಸ್ಯಾದನ್ಯತ್ರ ಪುರುಷೋತ್ತಮಾತ್ ॥೨೩॥

ಪುರುಷೋತ್ತಮನನ್ನು ಬಿಟ್ಟು ಬೇರೆ ಯಾರಿಗೆ ವಜ್ರಪಾಣಿಯಾದ ಇಂದ್ರನ ಪ್ರಿಯಸಖನೂ ಸಾರಥಿಯೂ ಅಸದೃಶನೂ ಆದ ಮಾತಲಿಯು ರಶ್ಮಿಗಳನ್ನು ಹಿಡಿಯುತ್ತಾನೆ?

ಭೋಜರಾಜತನೂಜೋಽಪಿ ಕಂಸಸ್ತಾತ ಯುಧಿಷ್ಠಿರ ।
ಅಸಜ್ಞಾನೇ ಬಲೇ ವೀರ್ಯೇ ಕಾರ್ತವೀರ್ಯಸಮೋಽಭವತ್ ॥೨೪॥

ಎಲೈ ಯುಧಿಷ್ಠಿರನೇ! ಭೋಜರಾಜನ ಮಗನಾದ ಕಂಸನೂ ಸಹ ಅಸಜ್ಞಾನದಲ್ಲಿಯೂ ಬಲದಲ್ಲಿಯೂ ಪರಾಕ್ರಮದಲ್ಲಿಯೂ ಕಾರ್ತವೀರ್ಯನಿಗೆ ಸಮನಾಗಿದ್ದನು.

ತಸ್ಯ ಭೋಜಪತೇಃ ಪುತ್ರಾದ್ ಭೋಜರಾಜನ್ಯವರ್ಧನಾತ್ ।
ಉದ್ವಿಜಂತೇ ಸ್ಮ ರಾಜಾನಃ ಸುಪರ್ಣಾದಿವ ಪನ್ನಗಾಃ ॥೨೫॥

ಭೋಜಕುಲವರ್ಧನನಾದ ಭೋಜರಾಜನ ಪುತ್ರನಾದ ಆ ಕಂಸನಿಗೆ ಉಳಿದ ರಾಜರು ಸರ್ಪಗಳು ಗರುಡನಿಗೆ ಹೆದರುವಂತೆ ಹೆದರಿ ನಡುಗುತ್ತಿದ್ದರು.

ಚಿತ್ರಕಾರ್ಮುಕನಿಸ್ತ್ರಿಂಶವಿಮಲಪ್ರಾಸಯೋಧಿನಃ ।
ಶತಂ ಶತಸಹಸ್ರಾಣಿ ಪದಾತೀನಾಂ ತು ಭಾರತ ॥೨೬॥

ಅಷ್ಟೌ ಶತಸಹಸ್ರಾಣಿ ಶೂರಾಣಾಮನಿವರ್ತಿನಾಮ್ ।
ಅಭವನ್ ಭೋಜರಾಜಸ್ಯ ಜಾಂಬೂನದಮಯಧ್ವಜಾಃ ॥೨೭॥

ಎಲೈ ಭಾರತನೇ! ಕಂಸನಿಗೆ ವಿಚಿತ್ರವಾದ ಖಡ್ಗ ವಿಮಲವಾದ ಪ್ರಾಸಗಳಿಂದ ಹೋರಾಡುವ ಒಂದು ಕೋಟಿ ಪದಾತಿಗಳಿದ್ದರು. ಭೋಜರಾಜನಿಗೆ ಯುದ್ಧದಿಂದ ಹಿಮ್ಮೆಟ್ಟದಿರುವ ಶೂರರಾದ ಎಂಟುನೂರುಸಹಸ್ರ ಸೈನಿಕರು ಸುವರ್ಣಮಯವಾದ ಧ್ವಜವುಳ್ಳವರಾಗಿದ್ದರು.

ಸ್ಫುರತ್ಕಾಂಚನಕಕ್ಷ್ಯಾಸ್ತು ಗಜಾಸ್ತಸ್ಯ ಯುಧಿಷ್ಠಿರ ।
ತಾವಂತ್ಯೇವ ಸಹಸ್ರಾಣಿ ಗಜಾನಾಮನಿವರ್ತಿನಾಮ್ ॥೨೮॥

ಎಲೈ ಯುಧಿಷ್ಠಿರನೇ! ಹೊಳೆಯುವ ಚಿನ್ನದ ಕಕ್ಷೆಗಳನ್ನು ಉಳ್ಳ ಯುದ್ಧದಿಂದ ಹಿಮ್ಮೆಟ್ಟದಿರುವ ಗಜಗಳು ಅವನ ಬಳಿ ಎಂಟುನೂರುಸಹಸ್ರ ಸಂಖ್ಯೆಯಲ್ಲಿ ಇದ್ದವು.

ತೇ ಚ ಪರ್ವತಸಂಕಾಶಾಃ ಚಿತ್ರಧ್ವಜಪತಾಕಿನಃ ।
ಬಭೂವುರ್ಭೋಜರಾಜಸ್ಯ ನಿತ್ಯಂ ಪ್ರಮುದಿತಾ ಗಜಾಃ ॥೨೯॥

ಆ ಭೋಜರಾಜನ ಗಜಗಳೆಲ್ಲವೂ ಪರ್ವತದಂತೆ ಎತ್ತರವಾಗಿದ್ದು ಚಿತ್ರಧ್ವಜಪತಾಕೆಗಳಿಂದ ಕೂಡಿದ್ದು ಯಾವಾಗಲೂ ಸಂತೋಷದಿಂದಿದ್ದವು.

ಸ್ವಲಂಕೃತಾನಾಂ ಶೀಘ್ರಾಣಾಂ ಕರೇಣೂನಾಂ ಯುಧಿಷ್ಠಿರ ।
ಅಭವದ್ ಭೋಜರಾಜಸ್ಯ ದ್ವಿಸ್ತಾವದ್ಧಿ ಮಹದ್ಬಲಮ್ ॥೩೦॥

ಎಲೈ ಯುಧಿಷ್ಠಿರನೇ! ಭೋಜರಾಜನ ಬಳಿ ಆ ಆನೆಗಳ ಎರಡರಷ್ಟು ಅಲಂಕೃತವಾದ ಶೀಘ್ರಗಾಮಿಗಳಾದ ಮರಿ ಆನೆಗಳ ದೊಡ್ಡ ಬಲವಿದ್ದಿತು.

ಷೋಡಶಾಶ್ವಸಹಸ್ರಾಣಿ ಕಿಂಶುಕಾಭಾನಿ ತಸ್ಯ ವೈ ।
ಅಪರಸ್ತು ಮಹಾವ್ಯೂಹಃ ಕಿಶೋರಾಣಾಂ ಯುಧಿಷ್ಠಿರ ।
ಆರೋಹವರಸಂಪನ್ನೋ ದುರ್ಧರ್ಷಃ ಕೇನಚಿದ್ ಬಲಾತ್ ॥೩೧॥

ಯುಧಿಷ್ಠಿರನೇ! ಅವನ ಬಳಿ ಮುತ್ತುಗದಂತೆ ಕೆಂಪು ಬಣ್ಣವುಳ್ಳ ಹದಿನಾರು ಸಾವಿರ ಅಶ್ವಗಳು ಇದ್ದವು. ಅದಲ್ಲದೆ ಇನ್ನೂ ಚಿಕ್ಕ ವಯಸ್ಸಿನ ಒಳ್ಳೆಯ ಜೀನುಗಳನ್ನು ಹೊಂದಿದ್ದ ಯಾರಿಗೂ ಜಗ್ಗದಂತಹ ಚಿಕ್ಕ ವಯಸ್ಸಿನ ಅಶ್ವಗಳ ಮಹಾಯೂಥಗಳೂ ಇದ್ದವು.

ಕಶ್ಚ ನಾರಾಯಣಾದನ್ಯಃ ಸರ್ವರತ್ನವಿಭೂಷಿತಮ್ ।
ರಥಮಾದಿತ್ಯಸಂಕಾಶಮಾತಿಷ್ಠೇನ ಶಚೀಪತೇಃ ॥೨೨॥

ಧರ್ಮರಾಜನೇ! ನಾರಾಯಣನಲ್ಲದೆ ಬೇರೆ ಯಾರು ಸರ್ವರತ್ನವಿಭೂಷಿತವಾದ ಸೂರ್ಯಪ್ರಕಾಶವನ್ನು ಹೊಂದಿರುವ ಇಂದ್ರನ ರಥವನ್ನು ಏರುತ್ತಾನೆ?

ಕಸ್ಯ ಚಾಪ್ರತಿಮೋ ಯಂತಾ ವಜ್ರಪಾಣೇಃ ಪ್ರಿಯಃ ಸಖಾ ।
ಮಾತಲಿಃ ಸಂಗೃಹೀತೇ ಸ್ಯಾದನ್ಯತ್ರ ಪುರುಷೋತ್ತಮಾತ್ ॥೨೩॥

ಪುರುಷೋತ್ತಮನನ್ನು ಬಿಟ್ಟು ಬೇರೆ ಯಾರಿಗೆ ವಜ್ರಪಾಣಿಯಾದ ಇಂದ್ರನ ಪ್ರಿಯಸಖನೂ ಸಾರಥಿಯೂ ಅಸದೃಶನೂ ಆದ ಮಾತಲಿಯು ರಶ್ಮಿಗಳನ್ನು ಹಿಡಿಯುತ್ತಾನೆ?

ಭೋಜರಾಜತನೂಜೋಽಪಿ ಕಂಸಸ್ತಾತ ಯುಧಿಷ್ಠಿರ ।
ಅಸಜ್ಞಾನೇ ಬಲೇ ವೀರ್ಯೇ ಕಾರ್ತವೀರ್ಯಸಮೋಽಭವತ್ ॥೨೪॥

ಎಲೈ ಯುಧಿಷ್ಠಿರನೇ! ಭೋಜರಾಜನ ಮಗನಾದ ಕಂಸನೂ ಸಹ ಅಸಜ್ಞಾನದಲ್ಲಿಯೂ ಬಲದಲ್ಲಿಯೂ ಪರಾಕ್ರಮದಲ್ಲಿಯೂ ಕಾರ್ತವೀರ್ಯನಿಗೆ ಸಮನಾಗಿದ್ದನು.

ತಸ್ಯ ಭೋಜಪತೇಃ ಪುತ್ರಾದ್ ಭೋಜರಾಜನ್ಯವರ್ಧನಾತ್ ।
ಉದ್ವಿಜಂತೇ ಸ್ಮ ರಾಜಾನಃ ಸುಪರ್ಣಾದಿವ ಪನ್ನಗಾಃ ॥೨೫॥

ಭೋಜಕುಲವರ್ಧನನಾದ ಭೋಜರಾಜನ ಪುತ್ರನಾದ ಆ ಕಂಸನಿಗೆ ಉಳಿದ ರಾಜರು ಸರ್ಪಗಳು ಗರುಡನಿಗೆ ಹೆದರುವಂತೆ ಹೆದರಿ ನಡುಗುತ್ತಿದ್ದರು.

ಚಿತ್ರಕಾರ್ಮುಕನಿಸ್ತ್ರಿಂಶವಿಮಲಪ್ರಾಸಯೋಧಿನಃ ।
ಶತಂ ಶತಸಹಸ್ರಾಣಿ ಪದಾತೀನಾಂ ತು ಭಾರತ ॥೨೬॥

ಅಷ್ಟೌ ಶತಸಹಸ್ರಾಣಿ ಶೂರಾಣಾಮನಿವರ್ತಿನಾಮ್ ।
ಅಭವನ್ ಭೋಜರಾಜಸ್ಯ ಜಾಂಬೂನದಮಯಧ್ವಜಾಃ ॥೨೭॥

ಎಲೈ ಭಾರತನೇ! ಕಂಸನಿಗೆ ವಿಚಿತ್ರವಾದ ಖಡ್ಗ ವಿಮಲವಾದ ಪ್ರಾಸಗಳಿಂದ ಹೋರಾಡುವ ಒಂದು ಕೋಟಿ ಪದಾತಿಗಳಿದ್ದರು. ಭೋಜರಾಜನಿಗೆ ಯುದ್ಧದಿಂದ ಹಿಮ್ಮೆಟ್ಟದಿರುವ ಶೂರರಾದ ಎಂಟುನೂರುಸಹಸ್ರ ಸೈನಿಕರು ಸುವರ್ಣಮಯವಾದ ಧ್ವಜವುಳ್ಳವರಾಗಿದ್ದರು.

ಸ್ಫುರತ್ಕಾಂಚನಕಕ್ಷ್ಯಾಸ್ತು ಗಜಾಸ್ತಸ್ಯ ಯುಧಿಷ್ಠಿರ ।
ತಾವಂತ್ಯೇವ ಸಹಸ್ರಾಣಿ ಗಜಾನಾಮನಿವರ್ತಿನಾಮ್ ॥೨೮॥

ಎಲೈ ಯುಧಿಷ್ಠಿರನೇ! ಹೊಳೆಯುವ ಚಿನ್ನದ ಕಕ್ಷೆಗಳನ್ನು ಉಳ್ಳ ಯುದ್ಧದಿಂದ ಹಿಮ್ಮೆಟ್ಟದಿರುವ ಗಜಗಳು ಅವನ ಬಳಿ ಎಂಟುನೂರುಸಹಸ್ರ ಸಂಖ್ಯೆಯಲ್ಲಿ ಇದ್ದವು.

ತೇ ಚ ಪರ್ವತಸಂಕಾಶಾಃ ಚಿತ್ರಧ್ವಜಪತಾಕಿನಃ ।
ಬಭೂವುರ್ಭೋಜರಾಜಸ್ಯ ನಿತ್ಯಂ ಪ್ರಮುದಿತಾ ಗಜಾಃ ॥೨೯॥

ಆ ಭೋಜರಾಜನ ಗಜಗಳೆಲ್ಲವೂ ಪರ್ವತದಂತೆ ಎತ್ತರವಾಗಿದ್ದು ಚಿತ್ರಧ್ವಜಪತಾಕೆಗಳಿಂದ ಕೂಡಿದ್ದು ಯಾವಾಗಲೂ ಸಂತೋಷದಿಂದಿದ್ದವು.

ಸ್ವಲಂಕೃತಾನಾಂ ಶೀಘ್ರಾಣಾಂ ಕರೇಣೂನಾಂ ಯುಧಿಷ್ಠಿರ ।
ಅಭವದ್ ಭೋಜರಾಜಸ್ಯ ದ್ವಿಸ್ತಾವದ್ಧಿ ಮಹದ್ಬಲಮ್ ॥೩೦॥

ಎಲೈ ಯುಧಿಷ್ಠಿರನೇ! ಭೋಜರಾಜನ ಬಳಿ ಆ ಆನೆಗಳ ಎರಡರಷ್ಟು ಅಲಂಕೃತವಾದ ಶೀಘ್ರಗಾಮಿಗಳಾದ ಮರಿ ಆನೆಗಳ ದೊಡ್ಡ ಬಲವಿದ್ದಿತು.

ಷೋಡಶಾಶ್ವಸಹಸ್ರಾಣಿ ಕಿಂಶುಕಾಭಾನಿ ತಸ್ಯ ವೈ ।
ಅಪರಸ್ತು ಮಹಾವ್ಯೂಹಃ ಕಿಶೋರಾಣಾಂ ಯುಧಿಷ್ಠಿರ ।
ಆರೋಹವರಸಂಪನ್ನೋ ದುರ್ಧರ್ಷಃ ಕೇನಚಿದ್ ಬಲಾತ್ ॥೩೧॥

ಯುಧಿಷ್ಠಿರನೇ! ಅವನ ಬಳಿ ಮುತ್ತುಗದಂತೆ ಕೆಂಪು ಬಣ್ಣವುಳ್ಳ ಹದಿನಾರು ಸಾವಿರ ಅಶ್ವಗಳು ಇದ್ದವು. ಅದಲ್ಲದೆ ಇನ್ನೂ ಚಿಕ್ಕ ವಯಸ್ಸಿನ ಒಳ್ಳೆಯ ಜೀನುಗಳನ್ನು ಹೊಂದಿದ್ದ ಯಾರಿಗೂ ಜಗ್ಗದಂತಹ ಚಿಕ್ಕ ವಯಸ್ಸಿನ ಅಶ್ವಗಳ ಮಹಾಯೂಥಗಳೂ ಇದ್ದವು.

ಸ ಚ ಷೋಡಶಸಾಹಸ್ರಃ ಕಂಸಭ್ರಾತೃಪುರಸ್ಸರಃ ।
ಸುನಾಮಾ ಸದೃಶಸ್ತೇನ ಸ ಕಂಸಂ ಪರ್ಯಪಾಲಯತ್ ॥೩೨॥

ಇನ್ನೊಂದು ಹದಿನಾರು ಸಾವಿರ ಕುದುರೆಗಳ ದಂಡು ಕಂಸನ ತಮ್ಮನನ್ನು ನಾಯಕನನ್ನಾಗಿ ಹೊಂದಿ ಅವನಿಗೆ ಸದೃಶವಾಗಿದ್ದು ಒಳ್ಳೆಯ ಹೆಸರನ್ನು ಹೊಂದಿ ಕಂಸನನ್ನು ರಕ್ಷಿಸುತ್ತಿದ್ದವು.

ಯ ಆಸನ್ ಸರ್ವವರ್ಣಾಸ್ತು ಹಯಾಸ್ತಸ್ಯ ಯುಧಿಷ್ಠಿರ ।
ಸಗಣೋ ಮಿಶ್ರಕೋ ನಾಮ ಷಷ್ಟಿಸಾಹಸ್ರ ಉಚ್ಯತೇ ॥೩೩॥

ಎಲೈ ಯುಧಿಷ್ಠಿರನೇ! ಬೇರೆ ಬೇರೆ ಬಣ್ಣಗಳ ಕುದುರೆಗಳ ಮಿಶ್ರಕವೆಂಬ ಗಣದಲ್ಲಿ ಅರವತ್ತು ಸಾವಿರ ಕುದುರೆಗಳು ಇದ್ದವು.

ಕಂಸರೋಷಮಹಾವೇಗಾಂ ಧ್ವಜಾನೂಪಮಹಾದ್ರುಮಾಮ್ ।
ಮತ್ತದ್ವಿಪಮಹಾಗ್ರಾಹಾಂ ವೈವಸ್ವತವಶಾನುಗಾಮ್ ॥೩೪॥

ಶಸ್ತ್ರಜಾಲಮಹಾಫೇನಾಂ ಸಾದಿವೇಗಮಹಾಜಲಾಮ್ ।
ಗದಾಪರಿಘಪಾಠೀನಾಂ ನಾನಾಕವಚಶೈವಲಾಮ್ ॥೩೫॥

ರಥನಾಗಮಹಾವರ್ತಾಂ ನಾನಾರುಧಿರಕರ್ದಮಾಮ್ ।
ಚಿತ್ರಕಾರ್ಮ್ಮುಕಕಲ್ಲೋಲಾಂ ರಥಾಶ್ವಕಲಿಲಹ್ರದಾಮ್ ॥೩೬॥

ಮಹಾಮೃಧನದೀಂ ಘೋರಾಂ ಯೋಧಾವರ್ತನಿಸ್ವನಾಮ್ ।
ಕೋನ್ಯೋ ನಾರಾಯಣಾದೇಕಃ ಕಂಸಹಂತಾ ಯುಧಿಷ್ಠಿರ ॥೩೭॥

ಎಲೈ ಯುಧಿಷ್ಠಿರನೇ! ಕಂಸನ ರೋಷವೆಂಬ ಮಹಾವೇಗದಿಂದ ಕೂಡಿದ, ಧ್ವಜಗಳೆಂಬ ತೀರವೃಕ್ಷಗಳಿಂದ ಕೂಡಿದ, ಮದ್ದಾನೆಗಳೆಂಬ ಮಹಾ ತಿಮಿಂಗಿಲಗಳಿಂದ ಕೂಡಿದ, ವೈವಸ್ವತನಾದ ಯಮನನ್ನು ಅನುಸರಿಸುವ ಹೊಳೆಯುವ ಶಸ್ತ್ರಗಳೆಂಬ ದೊಡ್ಡ ನೊರೆಯನ್ನು ಹೊಂದಿದ, ಪದಾತಿಗಳ ವೇಗವೆಂಬ ಜಲವನ್ನು ಹೊಂದಿದ, ಗದಾ ಪರಿಘಗಳೆಂಬ ಮೀನುಗಳನ್ನು ಹೊಂದಿದ, ನಾನಾ ಕವಚಗಳೆಂಬ ಪಾಚಿಯನ್ನು ಹೊಂದಿದ, ರಥ ಗಜಗಳೆಂಬ ಮಹಾ ಸುಳಿಗಳನ್ನು ಹೊಂದಿದ, ನಾನಾ ಬಗೆಯ

ರಕ್ತವೆಂಬ ಕೆಸರನ್ನು ಹೊಂದಿದ, ವಿಚಿತ್ರ ಧನುಸ್ಸು ಎಂಬ ಅಲೆಯನ್ನು ಹೊಂದಿದ, ರಥಾಶ್ವಗಳೆಂಬ ತುಂಬಿದ ಮಡುಗಳನ್ನು ಹೊಂದಿದ, ಯೋಧರೆಂಬ ಸುಳಿಗಳನ್ನು ಹೊಂದಿದ್ದ, ಘೋರವಾಗಿ ಭೋ೯ಗರೆಯುವ ಮಹಾಯುದ್ಧವೆಂಬ ಆ ನದಿಯಲ್ಲಿ ನಾರಾಯಣನಲ್ಲದೆ ಇನ್ನೊಬ್ಬನು ಯಾವನು ತಾನೆ ಕಂಸನನ್ನು ಕೊಲ್ಲುವವನು?

ಏಷ ಶಕ್ರರಥೇ ತಿಷ್ಠನ್ ತಾನ್ಯನೀಕಾನಿ ಭಾರತ ।
ವ್ಯಧಮದ್ ಭೋಜಪುತ್ರಸ್ಯ ಮಹಾಭ್ರಾಣೀವ ಮಾರುತಃ ॥೩೮॥

ಭಾರತನೇ! ಈ ಕೃಷ್ಣನು ಇಂದ್ರನ ರಥದಲ್ಲಿ ಕುಳಿತು ಬಿರುಗಾಳಿಯು ಮೋಡವನ್ನು ಚದುರಿಸುವಂತೆ ಭೋಜಪುತ್ರನ ಆ ಎಲ್ಲಾ ಸೈನ್ಯವನ್ನು ನಾಶಮಾಡಿದನು.

ತಂ ಸಭಾಸ್ಥಂ ಸಹಾಮಾತ್ಯಂ ಕಂಸಂ ಹತ್ವಾ ಸಹಾನ್ವಯಮ್ ।
ಮಾನಯಾಮಾಸ ದಾಶಾರ್ಹೋ ದೇವಕೀಂ ಸಸುಹೃದ್ಗಣಾಮ್ ॥೩೯॥

ಸಭೆಯಲ್ಲಿ ಅಮಾತ್ಯರ ಜೊತೆಯಲ್ಲಿ ಕುಳಿತಿದ್ದ ಆ ಕಂಸನನ್ನು ಅವನ ಪರಿವಾರ ಸಹಿತವಾಗಿ ಸಂಹರಿಸಿ ದಾಶಾರ್ಹನಾದ ಕೃಷ್ಣನು ದೇವಕಿಯನ್ನೂ ತನ್ನ ಬಂದು ಜನರನ್ನೂ ಗೌರವಿಸಿದನು.

ಯಶೋದಾಂ ರೋಹಿಣೀಂ ಚೈವ ಅಭಿವಾದ್ಯ ಪುನಃ ಪುನಃ ।
ಉಗ್ರಸೇನಂ ಚ ರಾಜಾನಮ್ ಅಭಿಷಿಚ್ಯ ಜನಾರ್ದನಃ ।
ಅರ್ಚಿತೋ ಯದುಮುಖ್ಯೈಸ್ತು ಭಗವಾನ್ ವಾಸವಾನುಜಃ ॥೪೦॥

ಯಶೋದೆ ಮತ್ತು ರೋಹಿಣಿಯರಿಗೆ ಪುನಃ ಪುನಃ ನಮಸ್ಕಾರವನ್ನು ಮಾಡಿ ಜನಾರ್ದನನು ಉಗ್ರಸೇನನಿಗೆ ರಾಜ್ಯದಲ್ಲಿ ಪಟ್ಟಾಭಿಷೇಕವನ್ನು ಮಾಡಿದನು. ಇಂದ್ರನ ತಮ್ಮನಾದ ಉಪೇಂದ್ರನಾದ ಭಗವಂತನಾದ ಕೃಷ್ಣನು ಯಾದವಶ್ರೇಷ್ಠರಿಂದ ಅರ್ಚಿಸಲ್ಪಟ್ಟನು.

ತತಃ ಪಾರ್ಥಿವಮಾಯಾಂತಂ ಸಹಿತಂ ಸರ್ವರಾಜಭಿಃ ।
ಸರಸ್ವತ್ಯಾಂ ಜರಾಸಂಧಮಜಯತ್ ಪುರುಷೋತ್ತಮಃ ॥೪೧॥

ಅನಂತರ ಪುರುಷೋತ್ತಮನಾದ ಕೃಷ್ಣನು ಎಲ್ಲ ರಾಜರುಗಳ ಜೊತೆಯಲ್ಲಿ ದಂಡೆತ್ತಿ ಜರಾಸಂಧನನ್ನು ಸರಸ್ವತೀನದಿಯ ತೀರದಲ್ಲಿ ಸೋಲಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಸಪ್ತಚತ್ವಾರಿಂಶೋಧ್ಯಾಯಃ ॥
॥ಅರ್ಘಾಭಿಹರಣಪರ್ವಣಿ ಷಷ್ಠಾದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ನಲವತ್ತೇಳನೆಯ ಅಧ್ಯಾಯವು ಮುಗಿಯಿತು.

★★★★★

ನಲವತ್ತೆಂಟನೆಯ ಅಧ್ಯಾಯ.

(ನರಕಾಸುರನ ಸಂಹಾರ. ದ್ವಾರಕೆಗೆ ಇಂದ್ರನ ಆಗಮನ)

ಭೀಷ್ಮಃ

ಶೂರಸೇನಪುರಂ ತ್ಯಕ್ತ್ವಾ ಸರ್ವಯಾದವನಂದನಃ ।
ದ್ವಾರಕಾಂ ಭಗವಾನ್ ಕೃಷ್ಣಃ ಸಮಪದ್ಯತ ಕೇಶವಃ ॥೧॥

ಸರ್ವಯಾದವನಂದನನಾದ ಕೇಶವನು ಮಧುರಾಪಟ್ಟಣವನ್ನು ಬಿಟ್ಟು ದ್ವಾರಕಾಪಟ್ಟಣವನ್ನು ಬಂದು ಸೇರಿದನು.

ಪ್ರತ್ಯಪದ್ಯತ ಯಾನಾನಿ ರತ್ನಾನಿ ಚ ಬಹೂನಿ ಚ ।
ಯಥಾರ್ಹಂ ಪುಂಡರೀಕಾಕ್ಷೋ ನೈರೃತಾನ್ ಪ್ರತ್ಯಪಾದಯನ್ ॥೨॥

ಪುಂಡರೀಕಾಕ್ಷನಾದ ಭಗವಂತನಾದ ಕೃಷ್ಣನು ಅನೇಕ ಯಾನಗಳನ್ನು ರತ್ನಗಳನ್ನೂ ತೆಗೆದುಕೊಂಡು ಯಥಾಯೋಗ್ಯವಾಗಿ ನೈಋತರಿಂದ ಅವುಗಳನ್ನು ಹೊರಿಸಿ ದ್ವಾರಕೆಗೆ ಕಳುಹಿಸಿದನು.

ತತ್ರ ವಿಘ್ನಂ ಚರಂತಿ ಸ್ಮ ದೈತೇಯಾಃ ಸಹ ದಾನವೈಃ ।
ತಾನ್ ಜಘಾನ ಮಹಾಬಾಹುರ್ವರದೃಪ್ತಾನ್ ಮಹಾಸುರಾನ್ ॥೩॥

ಆಗ ದೈತೇಯರು ಮತ್ತು ದಾನವರು ಅದಕ್ಕೆ ವಿಘ್ನವನ್ನು ಮಾಡಿದರು. ಮಹಾಬಾಹುವಾದ ಕೃಷ್ಣನು, ವರದಿಂದ ಗರ್ವಿಷ್ಠರಾದ ಆ ಮಹಾಸುರರನ್ನು ಸಂಹರಿಸಿದನು.

ಸ ವಿಘ್ನಮಕರೋತ್ ತತ್ರ ನರಕೋ ನಾಮ ನೈರೃತಃ ।
ತ್ರಾಸನಃ ಸುರಸಂಘಾನಾಂ ವಿದಿತೋ ನಃ ಪ್ರಭಾವತಃ ॥೪॥

ಆಗ ದೇವತಾಗಣಕ್ಕೆ ಉದ್ವೇಗವನ್ನು ಉಂಟುಮಾಡುವ ನರಕಾಸುರನು ಸಹ ವಿಘ್ನವನ್ನು ಮಾಡಿದನು. ಅವನ ಪ್ರಭಾವವು ನಮಗೆ ತಿಳಿದೇ ಇದೆ.

ಸ ಭೂಮ್ಯಾಂ ಮೂರ್ಧ್ನಿಲಿಂಗಸ್ಥಃ ಸರ್ವದೇವಾಸುರಾಂತಕಃ ।
ಮಾನುಷಾಣಾಮೃಷೀಣಾಂ ಚ ಪ್ರತೀಪಮಕರೋತ್ ತದಾ ॥೫॥

ಸರ್ವದೇವಾಸುರಾಂತಕನಾದ ಅವನು ತನ್ನ ತಲೆಯ ಮೇಲೆ ಲಿಂಗವನ್ನು ಧರಿಸಿ ಭೂಮಿಯಲ್ಲಿದ್ದ ಮನುಷ್ಯರಿಗೂ ಮತ್ತು ಋಷಿಗಳಿಗೂ ಅಪಕಾರವನ್ನು ಮಾಡಿದನು.

ತ್ವಷ್ಟುರ್ದುಹಿತರಂ ಭೌಮಃ ಕಶೇರುಮಗಮತ್ ತದಾ ।
ಗಜರೂಪೇಣ ಜಗ್ರಾಹ ರುಚಿರಾಂಗೀಂ ಚತುರ್ದಶೀಮ್ ॥೬॥

ಭೂಮಿಯ ಪುತ್ರನಾದ ಅವನು ತ್ವಷ್ಟೃವಿನ ಮಗಳಾದ ಸುಂದರಿಯಾದ ಹದಿನಾಲ್ಕು ವರ್ಷ ವಯಸ್ಸಿನ ಕಶೇರುವನ್ನು ಗಜ ರೂಪವನ್ನು ಧರಿಸಿ ಹೋಗಿ ಅವಳನ್ನು ಹಿಡಿದು ಕೊಂಡನು.

ಪ್ರಮಥ್ಯ ಚ ಜಹಾರೈತಾಂ ಹೃತ್ವಾ ಚ ನರಕೋಽಬ್ರವೀತ್ ।
ನಷ್ಟಶೋಕಭಯಾಬಾಧಃ ಪ್ರಾಗ್ಜ್ಯೋತಿಷಗತಸ್ತದಾ ॥೭॥

ತನ್ನ ಬಲದಿಂದ ಅವಳನ್ನು ಅಪಹರಿಸಿ ಶೋಕ ಭಯ ಪೀಡೆಗಳಿಂದ ರಹಿತನಾದ ಅವನು ಪ್ರಾಗ್ಜ್ಯೋತಿಷಪಟ್ಟಣಕ್ಕೆ ಬಂದು ಅವಳನ್ನು ಕುರಿತು ಹೀಗೆ ಹೇಳಿದನು.

ಯಾನಿ ದೇವಮನುಷ್ಯೇಷು ರತ್ನಾನಿ ವಿವಿಧಾನಿ ಚ ।
ಬಿಭರ್ತಿ ಚ ಮಹೀ ಕೃತ್ಸ್ನಾ ಸಾಗರೇಷು ಚ ಯದ್ ವಸು ॥೮॥

ಅದ್ಯಪ್ರಭೃತಿ ತದ್ ದೇವಿ ಸಹಿತಾಃ ಸರ್ವನೈರೃತಾಃ ।
ತವೈವೋಪಹರಿಷ್ಯಂತಿ ದೈತ್ಯಾಶ್ಚ ಸಹ ದಾನವೈಃ ॥೯॥

ದೇವತೆಗಳಲ್ಲಿ ಮತ್ತು ಮನುಷ್ಯರಲ್ಲಿ ಎಷ್ಟೆಷ್ಟು ವಿಧವಾದ ರತ್ನಗಳಿವೆಯೋ ಭೂಮಿ ಮತ್ತು ಸಾಗರಗಳು ಎಷ್ಟು ರತ್ನಗಳನ್ನು ಹೊತ್ತಿವೆಯೋ ಎಲೌ ದೇವಿಯೇ! ಈ ದಿನದಿಂದ ಪ್ರಾರಂಭಿಸಿ ಅವೆಲ್ಲವನ್ನೂ ಎಲ್ಲಾ ನೈರೃತರೂ ದೈತ್ಯರೂ ಮತ್ತು ದಾನವರೂ ನಿನಗೆ ತಂದು ಒಪ್ಪಿಸುತ್ತಾರೆ.

ಭೀಷ್ಮಃ

ಏವಮುತ್ತಮರತ್ನಾನಿ ಬಹೂನಿ ವಿವಿಧಾನಿ ಚ ।
ಸ ಜಹಾರ ತದಾ ಭೌಮಃ ಸ್ತ್ರೀರತ್ನಾನಿ ಚ ಭಾರತ ।
ಗಂಧರ್ವಾಣಾಂ ಚ ಯಾಃ ಕನ್ಯಾ ಜಹಾರ ನರಕೋ ಬಲಾತ್ ॥೧೦॥

ಹೀಗೆ ಅನೇಕ ವಿಧವಾದ ಉತ್ತಮರತ್ನಗಳನ್ನೂ ಸ್ತ್ರೀರತ್ನಗಳನ್ನೂ ಆ ನರಕಾಸುರನು ಅಪಹರಿಸಿದನು. ಎಲೈ ಭಾರತನೇ! ನರಕಾಸುರನು ಗಂದರ್ವರ ಕನ್ಯೆಯರನ್ನೂ ತನ್ನ ಸಾಮರ್ಥ್ಯದಿಂದ ಅಪಹರಿಸಿದನು.

ಯಾಶ್ಚ ದೇವಮನುಷ್ಯಾಣಾಂ ಸಪ್ತ(ಸರ್ವೇ) ಚಾಪ್ಸರಸಾಂ ಗಣಾಃ ।
ಚತುರ್ದಶಸಹಸ್ರಾಣಿ ಚೈಕವಿಂಶಚ್ಛತಾನಿ ಚ ।
ಏಕವೇಣೀಧರಾಃ ಸರ್ವಾಃ ಸತಾಂ ಮಾರ್ಗಮನುವ್ರತಾಃ ॥೧೧॥

ತಾಸಾಮಂತಃಪುರಂ ಭೌಮೋಽಕಾರಯನ್ಮಣಿಪರ್ವತೇ ।
ಔದಕಾಯಾಮದೀನಾತ್ಮಾ ಮುರಸ್ಯ ವಿಷಯಂ ಪ್ರತಿ ॥೧೨॥

ದೇವತೆಗಳ ಮನುಷ್ಯರ ಮತ್ತು ಅಪ್ಸರೆಯರ ಏಳು ಗಣಗಳಿಗೆ ಸೇರಿದ ಹದಿನಾರು ಸಾವಿರ ನೂರು ಮಂದಿ ಸಜ್ಜನರ ಮಾರ್ಗವನ್ನು ಅನುಸರಿಸಿದ ಏಕವೇಣೀಧರರಾದ ಕನ್ಯೆಯರನ್ನು ಅಪಹರಿಸಿ ಅವರಿಗೆ ಮುರನ ರಾಜ್ಯದ ಬಳಿ ಉದಕದಿಂದ ಆವೃತವಾದ ಮಣಿಪರ್ವತದಲ್ಲಿ ನರಕಾಸುರನು ಅಂತಃಪುರವನ್ನು ಕಲ್ಪಿಸಿದನು.

ತಾಶ್ಚ ಪ್ರಾಗ್ಜ್ಯೋತಿಷೋ ರಾಜಾ ಮುರಸ್ಯ ದಶ ಚಾತ್ಮಜಾಃ ।
ನೈರೃತಾಶ್ಚ ಯಥಾ ಮುಖ್ಯಾ ಬೋಧಯಂತ ಉಪಾಸತೇ ॥೧೩॥

ಪ್ರಾಗ್ಜ್ಯೋತಿಷ ರಾಜನಾದ ನರಕನೂ ಮುರನ ಹತ್ತು ಮಂದಿ ಮಕ್ಕಳೂ ನೈರೃತರಲ್ಲಿ ಪ್ರಧಾನರಾದವರೂ ಅವರಿಗೆ ನರಕನ ವಶವಾಗುವಂತೆ ಬುದ್ಧಿಯನ್ನು ಹೇಳುತ್ತಾ ಅವರ ಸಮೀಪದಲ್ಲಿ ಇದ್ದರು.

ಸ ಏಷ ತಪಸಶ್ಚಾರೇ ವರದೃಪ್ತೋ ಮಹಾಸುರಃ ।
ಅದಿತಿಂ ಧರ್ಷಯಾಮಾಸ ಕುಂಡಲಾರ್ಥಂ ಯುಧಿಷ್ಠಿರ ॥೧೪॥

ಎಲೈ ಯುಧಿಷ್ಠಿರನೇ! ಆ ಮಹಾಸುರನು ತನ್ನ ತಪಸ್ಸಿನ ಅವಸಾನದಲ್ಲಿ ವರದಿಂದ ದೃಪ್ತನಾಗಿ ಕುಂಡಲಗಳ ಸಲುವಾಗಿ ಅದಿತಿದೇವಿಯನ್ನು ಅವಮಾನ ಗೊಳಿಸಿದನು.

ನ ಚಾಸುರಗಣೈಃ ಸರ್ವೈಃ ಸಹಿತೈಃ ಕರ್ಮ ತತ್ ಪುರಾ ।
ಕೃತಪೂರ್ವಂ ಮಹಾಘೋರಂ ಯದಕಾರ್ಷೀನ್ಮಹಾಸುರಃ ॥೧೫॥

ಮಹಾಸುರನಾದ ಅವನು ಹಿಂದೆ ಸಮಸ್ತ ಅಸುರರು ಸೇರಿ ಮಾಡದಂತಹ ಮಹಾಘೋರವಾದ ಕರ್ಮವನ್ನು ಎಸಗಿದನು.

ಯಂ ಮಹೀ ಸುಷುವೇ ದೇವೀ ಯಸ್ಯ ಪ್ರಾಗ್ಜ್ಯೋತಿಷಂ ಪುರಮ್ ।
ವಿಷಯಾಂತಪಾಲಾಶ್ಚತ್ವಾರೋ ಯಸ್ಯಾಸನ್ ಯುದ್ಧದುರ್ಮದಾಃ ॥೧೬॥

ಭೂದೇವಿಯ ಮಗನಾಗಿ ಜನಿಸಿದ ಅವನ ಪಟ್ಟಣವು ಪ್ರಾಗ್ಜ್ಯೋತಿಷವಾಗಿದ್ದಿತು. ಅವನ ರಾಜ್ಯಕ್ಕೆ ಯುದ್ಧ ದುರ್ಮದರಾದ ನಾಲ್ವರು ಅಂತಪಾಲರಿದ್ದರು.

ಆದೇವಯಾನಮಾವೃತ್ಯ ಪಂಥಾನಂ ಪರ್ಯವಸ್ಥಿತಾಃ ।
ತ್ರಾಸನಾಃ ಸರ್ವಭೂತಾನಾಂ ವಿರೂಪೈ ರಾಕ್ಷಸೈಃ ಸಹ ॥೧೭॥

ಅವರು ದೇವವಿಮಾನಪರ್ಯಂತವಾದ ಮಾರ್ಗವನ್ನು ಆಕ್ರಮಿಸಿ, ವಿರೂಪರಾದ ರಾಕ್ಷಸರ ಜೊತೆಯಲ್ಲಿ ಎಲ್ಲರಿಗೂ ಭಯವನ್ನು ಉಂಟುಮಾಡುತ್ತಾ ಪ್ರತಿಷ್ಠಿತರಾಗಿದ್ದರು.

ಹಯಗ್ರೀವೋ ನಿಸುಂಭಶ್ಚ ಘೋರಃ ಪಂಚಜನಸ್ತಥಾ ।
ಮುರಃ ಪುತ್ರಸಹಸ್ರೈಶ್ಚ ವರದೃಪ್ತೋ ಮಹಾಸುರಃ ॥೧೮॥

ಹಯಗ್ರೀವ ನಿಸುಂಭ ಘೋರನಾದ ಪಂಚಜನ ಮತ್ತು ವರದರ್ಪಿತನಾದ ಸಹಸ್ರ ಪುತ್ರರಿಂದ ಕೂಡಿದ ಮಹಾಸುರನಾದ ಮುರ ಇವರು ಅವನ ನಾಲ್ವರು ಅಂತಪಾಲರು.

ತದ್ವಧಾರ್ಥಂ ಮಹಾಬಾಹುರೇಷ ಚಕ್ರಗದಾಸಿಧೃತ್ ।
ಜಾತೋ ವೃಷ್ಣಿಷು ದೇವಕ್ಯಾಂ ವಸುದೇವಾತ್ ಜನಾರ್ದನಃ ॥೧೯॥

ಮಹಾಬಾಹುವಾದ ಚಕ್ರಗದಾಖಡ್ಗಧಾರಿಯಾದ ಜನಾರ್ದನನು ನರಕಾಸುರನ ವಧೆಯ ಸಲುವಾಗಿ ವೃಷ್ಣಿಕುಲದಲ್ಲಿ ವಸುದೇವನಿಂದ ದೇವಕಿಯಲ್ಲಿ ಅವತರಿಸಿದನು.

ತಸ್ಯಾಸ್ಯ ಪುರುಷೇಂದ್ರಸ್ಯ ಲೋಕಪ್ರಥಿತತೇಜಸಃ ।
ನಿವಾಸೋ ದ್ವಾರಕಾ ತಾತ ವಿದಿತೋ ವಃ ಪ್ರಧಾನತಃ ॥೨೦॥

ಅಂತಹ ಲೋಕವಿಖ್ಯಾತಪರಾಕ್ರಮವುಳ್ಳ ಪುರುಷಶ್ರೇಷ್ಠನಾದ ಈ ಕೃಷ್ಣನ ನಿವಾಸವು ದ್ವಾರಕಾಪಟ್ಟಣವೆಂದು ನಿಮಗೆ ಪ್ರಧಾನವಾಗಿ ತಿಳಿದಿದೆ.

ಅತೀವ ಹಿ ಪುರೀ ರಮ್ಯಾ ದ್ವಾರಕಾ ವಾಸವಕ್ಷಯಾತ್ ।
ಅತಿವೈರಾಜ್ಯಮಪ್ಯದ್ಧಾ ಪ್ರತ್ಯಕ್ಷಂ ತೇ ಯುಧಿಷ್ಠಿರ ॥೨೧॥

ಎಲೈ ಯುಧಿಷ್ಠಿರನೇ! ದ್ವಾರಕೆಯು ಇಂದ್ರನ ಅಮರಾವತಿಗಿಂತಲೂ ಅಥವಾ ಪಾತಾಳ ಲೋಕಕ್ಕಿಂತಲೂ ಬಹಳ ಸುಂದರವಾಗಿದೆ ಎಂಬ ವಿಷಯವು ನಿನಗೆ ಪ್ರತ್ಯಕ್ಷವಾಗಿ ತಿಳಿದಿದೆ.

ತಸ್ಮಿನ್ ದೇವಪುರಪ್ರಖ್ಯೇ ಸಾ ಸಭಾ ವೃಷ್ಣಿಸಂಶ್ರಯಾ ।
ಸುಧರ್ಮೇತ್ಯಭಿವಿಖ್ಯಾತಾ ಯೋಜನಾಯತವಿಸ್ತೃತಾ ॥೨೨॥

ದೇವಪುರಿಯಂತಿರುವ ಆ ಪಟ್ಟಣದಲ್ಲಿ ವೃಷ್ಣಿಗಳಿಗೆ ಆಶ್ರಯವಾದ ಒಂದು ಯೋಜನ ಉದ್ದ ಮತ್ತು ಆಗಲವನ್ನು ಹೊಂದಿರುವ ಸುಧರ್ಮಾ ಎಂದು ಪ್ರಖ್ಯಾತವಾದ ಸಭೆಯಿದೆ.

ತತ್ರ ವೃಷ್ಣ್ಯಂಧಕಾಃ ಸರ್ವೇ ರಾಮಕೃಷ್ಣಪುರೋಗಮಾಃ ।
ಲೋಕಯಾತ್ರಾಮಿಮಾಂ ಕೃತ್ಸ್ನಾಂ ಪರಿರಕ್ಷಂತ ಆಸತೇ ॥೨೩॥

ಅಲ್ಲಿ ರಾಮಕೃಷ್ಣರನ್ನು ಮುಂದೆ ಮಾಡಿಕೊಂಡು ವೃಷ್ಣ್ಯಂಧಕರೆಲ್ಲರೂ ಈ ಸಮಗ್ರವಾದ ಲೋಕವನ್ನು ರಕ್ಷಣೆ ಮಾಡುತ್ತಾ ಇರುತ್ತಾರೆ.

ತತ್ರಾಸೀನೇಷು ಸರ್ವೇಷು ಕದಾಚಿದ್ ಭರತರ್ಷಭ ।
ದಿವ್ಯಗಂಧಾ ವವುರ್ವಾತಾಃ ಕುಸುಮಾನಾಂ ಚ ವೃಷ್ಟಯಃ ॥೨೪॥

ಎಲೈ ಭಾರತಶ್ರೇಷ್ಠನೇ! ಒಮ್ಮೆ ಎಲ್ಲರೂ ಅಲ್ಲಿ ಕುಳಿತಿರುವಾಗ ದಿವ್ಯಗಂಧವುಳ್ಳ ವಾಯುವು ಬೀಸಿತು. ಮತ್ತು ಪುಷ್ಪ ವೃಷ್ಟಿಯಾಯಿತು.

ತತಃ ಸೂರ್ಯಸಹಸ್ರಾಭಸ್ತೇಜೋರಾಶಿರ್ಮಹಾದ್ಭುತಃ ।
ಮುಹೂರ್ತಮಂತರಿಕ್ಷೇಭೂತ್ ತತೋ ಭೂಮೌ ಪ್ರತಿಷ್ಠಿತಃ ॥೨೫॥

ಅನಂತರ ಸಹಸ್ರಸೂರ್ಯಕಾಂತಿಯುಳ್ಳ ತೇಜೋರಾಶಿಯಂತಿದ್ದ ಮಹಾದ್ಭುತನಾದ ಪುರುಷನು ಒಂದು ಮುಹೂರ್ತಕಾಲ ಅಂತರಿಕ್ಷದಲ್ಲಿ ಇದ್ದು ಅನಂತರ ಭೂಮಿಗೆ ಇಳಿದನು.

ಮಧ್ಯೇ ತು ತೇಜಸಸ್ತಸ್ಯ ಪಾಂಡರಂ ಗಜಮಾಸ್ಥಿತಃ ।
ವೃತೋ ದೇವಗಣೈಃ ಸರ್ವೈರ್ವಾಸವಃ ಪ್ರತ್ಯದೃಶ್ಯತ ॥೨೬॥

ಆ ತೇಜೋರಾಶಿಯ ಮಧ್ಯೆ ಪಾಂಡುವರ್ಣದ ಗಜವನ್ನು ಏರಿದ್ದ ಎಲ್ಲಾ ದೇವತೆಗಣಗಳಿಂದ ಸುತ್ತುವರಿಯಲ್ಪಟ್ಟ ಇಂದ್ರನು ಪ್ರತ್ಯಕ್ಷನಾದನು.

ರಾಮಕೃಷ್ಣೌ ಚ ರಾಜಾ ಚ ವೃಷ್ಣ್ಯಂಧಕಗಣೈಃ ಸಹ ।
ಉತ್ಥಾಯ ಸಹಸಾ ತಸ್ಮೈ ನಮಸ್ಕಾರಮಕುರ್ವತ ॥೨೭॥

ರಾಮಕೃಷ್ಣರೂ ಮತ್ತು ಉಗ್ರಸೇನನೂ ವೃಷ್ಣ್ಯಂಧಕರ ಸಮೂಹದ ಜೊತೆಯಲ್ಲಿ ತಕ್ಷಣ ಎದ್ದು ಅವನಿಗೆ ನಮಸ್ಕಾರವನ್ನು ಮಾಡಿದರು.

ಸೋಽವತೀರ್ಯ ಗಜಾತ್ ತೂರ್ಣಂ ಪರಿಷ್ವಜ್ಯ ಜನಾರ್ದನಮ್ ।
ಸಸ್ವಜೇ ಬಲದೇವಂ ಚ ರಾಜಾನಂ ಚ ತಥಾऽऽಹುಕಮ್ ॥೨೮॥

ಅವನು ಬೇಗ ಆನೆಯಿಂದ ಕೆಳಗಿಳಿದು ಜನಾರ್ದನನನ್ನು ಬಲದೇವನನ್ನು ಮತ್ತು ಆಹುಕರಾಜನನ್ನು ಆಲಿಂಗಿಸಿದನು.

ವಸುದೇವೋದ್ಧವೌ ಚೈವ ವಿಕದ್ರುಂ ಚ ಮಹಾಮತಿಮ್ ।
ಪ್ರದ್ಯುಮ್ನಸಾಂಬನಿಶಠಾನನಿರುದ್ಧಂ ಸಸಾತ್ಯಕಿಮ್ ॥೨೯॥

ತದ್ವಧಾರ್ಥಂ ಮಹಾಬಾಹುರೇಷ ಚಕ್ರಗದಾಸಿಧೃತ್ ।
ಜಾತೋ ವೃಷ್ಣಿಷು ದೇವಕ್ಯಾಂ ವಸುದೇವಾತ್ ಜನಾರ್ದನಃ ॥೧೯॥

ಮಹಾಬಾಹುವಾದ ಚಕ್ರಗದಾಖಡ್ಗಧಾರಿಯಾದ ಜನಾರ್ದನನು ನರಕಾಸುರನ ವಧೆಯ ಸಲುವಾಗಿ ವೃಷ್ಣಿಕುಲದಲ್ಲಿ ವಸುದೇವನಿಂದ ದೇವಕಿಯಲ್ಲಿ ಅವತರಿಸಿದನು.

ತಸ್ಯಾಸ್ಯ ಪುರುಷೇಂದ್ರಸ್ಯ ಲೋಕಪ್ರಥಿತತೇಜಸಃ ।
ನಿವಾಸೋ ದ್ವಾರಕಾ ತಾತ ವಿದಿತೋ ವಃ ಪ್ರಧಾನತಃ ॥೨೦॥

ಅಂತಹ ಲೋಕವಿಖ್ಯಾತಪರಾಕ್ರಮವುಳ್ಳ ಪುರುಷಶ್ರೇಷ್ಠನಾದ ಈ ಕೃಷ್ಣನ ನಿವಾಸವು ದ್ವಾರಕಾಪಟ್ಟಣವೆಂದು ನಿಮಗೆ ಪ್ರಧಾನವಾಗಿ ತಿಳಿದಿದೆ.

ಅತೀವ ಹಿ ಪುರೀ ರಮ್ಯಾ ದ್ವಾರಕಾ ವಾಸವಕ್ಷಯಾತ್ ।
ಅತಿವೈರಾಜ್ಯಮಪ್ಯದ್ಧಾ ಪ್ರತ್ಯಕ್ಷಂ ತೇ ಯುಧಿಷ್ಠಿರ ॥೨೧॥

ಎಲೈ ಯುಧಿಷ್ಠಿರನೇ! ದ್ವಾರಕೆಯು ಇಂದ್ರನ ಅಮರಾವತಿಗಿಂತಲೂ ಅಥವಾ ಪಾತಾಳ ಲೋಕಕ್ಕಿಂತಲೂ ಬಹಳ ಸುಂದರವಾಗಿದೆ ಎಂಬ ವಿಷಯವು ನಿನಗೆ ಪ್ರತ್ಯಕ್ಷವಾಗಿ ತಿಳಿದಿದೆ.

ತಸ್ಮಿನ್ ದೇವಪುರಪ್ರಖ್ಯೇ ಸಾ ಸಭಾ ವೃಷ್ಣಿಸಂಶ್ರಯಾ ।
ಸುಧರ್ಮೇತ್ಯಭಿವಿಖ್ಯಾತಾ ಯೋಜನಾಯತವಿಸ್ತೃತಾ ॥೨೨॥

ದೇವಪುರಿಯಂತಿರುವ ಆ ಪಟ್ಟಣದಲ್ಲಿ ವೃಷ್ಣಿಗಳಿಗೆ ಆಶ್ರಯವಾದ ಒಂದು ಯೋಜನ ಉದ್ದ ಮತ್ತು ಆಗಲವನ್ನು ಹೊಂದಿರುವ ಸುಧರ್ಮಾ ಎಂದು ಪ್ರಖ್ಯಾತವಾದ ಸಭೆಯಿದೆ.

ತತ್ರ ವೃಷ್ಣ್ಯಂಧಕಾಃ ಸರ್ವೇ ರಾಮಕೃಷ್ಣಪುರೋಗಮಾಃ ।
ಲೋಕಯಾತ್ರಾಮಿಮಾಂ ಕೃತ್ಸ್ನಾಂ ಪರಿರಕ್ಷಂತ ಆಸತೇ ॥೨೩॥

ಅಲ್ಲಿ ರಾಮಕೃಷ್ಣರನ್ನು ಮುಂದೆ ಮಾಡಿಕೊಂಡು ವೃಷ್ಣ್ಯಂಧಕರೆಲ್ಲರೂ ಈ ಸಮಗ್ರವಾದ ಲೋಕವನ್ನು ರಕ್ಷಣೆ ಮಾಡುತ್ತಾ ಇರುತ್ತಾರೆ.

ತತ್ರಾಸೀನೇಷು ಸರ್ವೇಷು ಕದಾಚಿದ್ ಭರತರ್ಷಭ ।
ದಿವ್ಯಗಂಧಾ ವವುರ್ವಾತಾಃ ಕುಸುಮಾನಾಂ ಚ ವೃಷ್ಟಯಃ ॥೨೪॥

ಎಲೈ ಭಾರತಶ್ರೇಷ್ಠನೇ! ಒಮ್ಮೆ ಎಲ್ಲರೂ ಅಲ್ಲಿ ಕುಳಿತಿರುವಾಗ ದಿವ್ಯಗಂಧವುಳ್ಳ ವಾಯುವು ಬೀಸಿತು. ಮತ್ತು ಪುಷ್ಪ ವೃಷ್ಟಿಯಾಯಿತು.

ತತಃ ಸೂರ್ಯಸಹಸ್ರಾಭಸ್ತೇಜೋರಾಶಿರ್ಮಹಾದ್ಭುತಃ ।
ಮುಹೂರ್ತಮಂತರಿಕ್ಷೇಭೂತ್ ತತೋ ಭೂಮೌ ಪ್ರತಿಷ್ಠಿತಃ ॥೨೫॥

ಅನಂತರ ಸಹಸ್ರಸೂರ್ಯಕಾಂತಿಯುಳ್ಳ ತೇಜೋರಾಶಿಯಂತಿದ್ದ ಮಹಾದ್ಭುತನಾದ ಪುರುಷನು ಒಂದು ಮುಹೂರ್ತಕಾಲ ಅಂತರಿಕ್ಷದಲ್ಲಿ ಇದ್ದು ಅನಂತರ ಭೂಮಿಗೆ ಇಳಿದನು.

ಮಧ್ಯೇ ತು ತೇಜಸಸ್ತಸ್ಯ ಪಾಂಡರಂ ಗಜಮಾಸ್ಥಿತಃ ।
ವೃತೋ ದೇವಗಣೈಃ ಸರ್ವೈರ್ವಾಸವಃ ಪ್ರತ್ಯದೃಶ್ಯತ ॥೨೬॥

ಆ ತೇಜೋರಾಶಿಯ ಮಧ್ಯೆ ಪಾಂಡುವರ್ಣದ ಗಜವನ್ನು ಏರಿದ್ದ ಎಲ್ಲಾ ದೇವತೆಗಣಗಳಿಂದ ಸುತ್ತುವರಿಯಲ್ಪಟ್ಟ ಇಂದ್ರನು ಪ್ರತ್ಯಕ್ಷನಾದನು.

ರಾಮಕೃಷ್ಣೌ ಚ ರಾಜಾ ಚ ವೃಷ್ಣ್ಯಂಧಕಗಣೈಃ ಸಹ ।
ಉತ್ಥಾಯ ಸಹಸಾ ತಸ್ಮೈ ನಮಸ್ಕಾರಮಕುರ್ವತ ॥೨೭॥

ರಾಮಕೃಷ್ಣರೂ ಮತ್ತು ಉಗ್ರಸೇನನೂ ವೃಷ್ಣ್ಯಂಧಕರ ಸಮೂಹದ ಜೊತೆಯಲ್ಲಿ ತಕ್ಷಣ ಎದ್ದು ಅವನಿಗೆ ನಮಸ್ಕಾರವನ್ನು ಮಾಡಿದರು.

ಸೋಽವತೀರ್ಯ ಗಜಾತ್ ತೂರ್ಣಂ ಪರಿಷ್ವಜ್ಯ ಜನಾರ್ದನಮ್ ।
ಸಸ್ವಜೇ ಬಲದೇವಂ ಚ ರಾಜಾನಂ ಚ ತಥಾऽऽಹುಕಮ್ ॥೨೮॥

ಅವನು ಬೇಗ ಆನೆಯಿಂದ ಕೆಳಗಿಳಿದು ಜನಾರ್ದನನನ್ನು ಬಲದೇವನನ್ನು ಮತ್ತು ಆಹುಕರಾಜನನ್ನು ಆಲಿಂಗಿಸಿದನು.

ವಸುದೇವೋದ್ಧವೌ ಚೈವ ವಿಕದ್ರುಂ ಚ ಮಹಾಮತಿಮ್ ।
ಪ್ರದ್ಯುಮ್ನಸಾಂಬನಿಶಠಾನನಿರುದ್ಧಂ ಸಸಾತ್ಯಕಿಮ್ ॥೨೯॥

ಗದಂ ಸಾರಣಮಕ್ರೂರಂ ಭಾನೂಲ್ಕಮವಿಡೂರಥಾನ್ ।
ಕೃತವರ್ಮಂ ಚಾರುದೇಷ್ಣಂ ದಾಶಾರ್ಹಾಣಾಂ ಪುರೋಗಮಾನ್ ॥೩೦॥

ಪರಿಷ್ವಜ್ಯ ಚ ದೃಷ್ಟ್ವಾ ಚ ಭಗವಾನ್ ಪಾಕಶಾಸನಃ ।
ಪ್ರಗೃಹ್ಯ ಪೂಜಾಂ ತೈರ್ದತ್ತಾಮುವಾಚಾವನತಾನನಃ ॥೩೧॥

ಪೂಜ್ಯನಾದ ಪಾಕಶಾಸನನಾದ ಇಂದ್ರನು ವಸುದೇವ ಉದ್ದವರನ್ನೂ ಮಹಾಮತಿಯಾದ ವಿಕದ್ರುವನ್ನೂ ಪ್ರದ್ಯುಮ್ನ ಸಾಂಬ ನಿಶಠ ಅನಿರುದ್ಧ ಮತ್ತು ಸಾತ್ಯಕಿಗಳನ್ನೂ ಮತ್ತು ಇನ್ನೂ ಅನೇಕ ದಾಶಾರ್ಹಪ್ರ ಮುಖರನ್ನೂ ನೋಡಿ ಅವರನ್ನು ಆಲಿಂಗಿಸಿ ಅವರಿಂದ ಸತ್ಕಾರವನ್ನು ಸ್ವೀಕರಿಸಿ ಅವರು ಕೊಟ್ಟ ಆಸನದಲ್ಲಿ ಕುಳಿತು ತಲೆಯನ್ನು ತಗ್ಗಿಸಿ ಮಾತನಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಅಷ್ಟಾಚತ್ವಾರಿಂಶೋಧ್ಯಾಯಃ ॥
॥ ಅರ್ಘಾಭಿಹರಣಪರ್ವಣಿ ಸಪ್ತದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ನಲವತ್ತೆಂಟನೆಯ ಅಧ್ಯಾಯವು ಮುಗಿಯಿತು.

★ ★ ★ ★

ನಲವತ್ತೊಂಭತ್ತನೆಯ ಅಧ್ಯಾಯ

(ಇಂದ್ರನಪ್ರಾರ್ಥನೆಯಂತೆ ನರಕಾಸುರನ ವಧೆ)

ಇಂದ್ರಃ

ಅದಿತ್ಯಾ ಚೋದಿತಃ ಕೃಷ್ಣ ತವ ಮಾತ್ಯಾಽಹಮಾಗತಃ ।
ಕುಂಡಲೇಽಪಹೃತೇ ತಾತ ಭೌಮೇನ ನರಕೇಣ ಚ ॥೧॥

ಕೃಷ್ಣನೇ! ನಿನ್ನ ತಾಯಿಯಾದ ಅದಿತಿಯಿಂದ ಪ್ರೇರಿಸಲ್ಪಟ್ಟವನಾಗಿ ನಾನು ಇಲ್ಲಿಗೆ ಬಂದಿದ್ದೇನೆ. ಪ್ರೀತಿಪಾತ್ರನೇ! ಭೂಮಿಯ ಪುತ್ರನಾದ ನರಕಾಸುರನು ಅದಿತಿಯ ಕುಂಡಲಗಳನ್ನು ಅಪಹರಿಸಿದ್ದಾನೆ.

ಭೀಷ್ಮಃ

ತಮುವಾಚ ಮಹಾಬಾಹುಃ ಪ್ರೀಯಮಾಣೋ ಜನಾರ್ದನಃ ।
ನಿಹತ್ಯ ನರಕಂ ಭೌಮಮಾಹರಿಷ್ಯಾಮಿ ಕುಂಡಲೇ ॥೨॥

ಮಹಾಬಾಹುವಾದ ಜನಾರ್ದನನು ಸಂತೋಷದಿಂದ ಅವನನ್ನು ಕುರಿತು ಮಾತನಾಡಿದನು. ಭೂಮಿಸುತನಾದ ನರಕಾಸುರನನ್ನು ಸಂಹರಿಸಿ ಕುಂಡಲಗಳನ್ನು ಹಿಂದೆ ತರುವೆನು.

ಏವಮುಕ್ತ್ವಾ ತು ಗೋವಿಂದೋ ರಾಮಮೇವಾಭ್ಯಭಾಷತ ।
ಪ್ರದ್ಯುಮ್ನಮನಿರುದ್ಧಂ ಚ ಸಾಂಬಂ ಚಾಪ್ರತಿಮಂ ಬಲೇ ॥೩॥

ಏತಾಂಶ್ಚೋಕ್ತ್ವಾ ತದಾ ತತ್ರ ವಾಸುದೇವೋ ಮಹಾಯಶಾಃ ।
ಅಥಾರುಹ್ಯ ಸುಪರ್ಣಂ ವೈ ಶಂಕಚಕ್ರಗದಾಸಿಧೃತ್ ।
ಯಯೌ ತದಾ ಹೃಷೀಕೇಶೋ ದೇವಾನಾಂ ಹಿತಕಾಮ್ಯಯಾ ॥೪॥

ಗೋವಿಂದನು ಅವನನ್ನು ಕುರಿತು ಹೀಗೆ ಹೇಳಿ ಬಲರಾಮನನ್ನು ಕುರಿತು ಪ್ರದ್ಯುಮ್ನ ಅನಿರುದ್ಧ ಮತ್ತು ಸಾಂಬ ಅಪ್ರತಿಮ ಬಲವುಳ್ಳವರಾಗಿದ್ದಾರೆ ಎಂದು (ತನ್ನ ಅನುಪಸ್ಥಿತಿಯಲ್ಲಿ ರಕ್ಷಣೆಗೆ ಸಮರ್ಥರೆಂದು) ಅವರನ್ನು ಹೇಳಿ, ಮಹಾಕೀರ್ತಿಶಾಲಿಯಾದ ಹೃಷೀಕೇಶನಾದ ವಾಸುದೇವನು ಶಂಖ ಚಕ್ರ ಗದಾ ಖಡ್ಗಗಳನ್ನು ಧರಿಸಿ ಗರುಡನನ್ನೇರಿ ದೇವತೆಗಳಿಗೆ ಹಿತವನ್ನು ಉಂಟುಮಾಡುವ ಸಲುವಾಗಿ ಅಲ್ಲಿಂದ ಹೊರಟನು.

ತಂ ಪ್ರಯಾಂತಮಮಿತ್ರಘ್ನಂ ದೇವಾಃ ಸಹಪುರಂದರಾಃ ।
ಪೃಷ್ಠತೋಽನುಯಯುಃ ಪ್ರೀತಾಃ ಸ್ತುವಂತೋ ವಿಷ್ಣುಮಚ್ಯುತಮ್ ॥೫॥

ಇಂದ್ರಾದಿದೇವತೆಗಳು ಹಾಗೆ ಹೊರಟ ಶತ್ರುಸಂಹಾರಕನಾದ ಕೃಷ್ಣನನ್ನು ಹಿಂದಿನಿಂದ ಹಿಂಬಾಲಿಸಿ ಅಚ್ಯುತನಾದ ವಿಷ್ಣುವನ್ನು ಸಂತೋಷದಿಂದ ಸ್ತೋತ್ರಮಾಡಿದರು.

ಉಗ್ರಾನ್ ರಕ್ಷೋಗಣಾನ್ ತತ್ರ ನರಕಸ್ಯ ಮಹಾಸುರಾನ್ ।
ಕ್ಷುರಾಂತಾನ್ ಮೌರವಾನ್ ಪಾಶಾನ್ ಷಟ್ಸಹಸ್ರಾನ್ ದದರ್ಶ ಸಃ ॥೬॥

ನರಕಾಸುರನ ಅನುಯಾಯಿಗಳಾದ ಘೋರರಾದ ರಾಕ್ಷಸಸಮೂಹವನ್ನೂ ಅಸುರರ ಸಮೂಹವನ್ನೂ ಕೃಷ್ಣನು ಕತ್ತಿಯ ಅಲುಗಿನಂತೆ ಹರಿತವಾದ ಆರು ಸಾವಿರ ಪಾಶಗಳನ್ನು ನೋಡಿದನು.

ಸಂಛಿದ್ಯ ಪಾಶಾಂಸ್ತ ಸ್ತ್ವೇಣ ಮುರಂ ಹತ್ವಾ ಸಹಾನ್ವಯಮ್ ।
ಶಿಲಾಸಂಘಾನತಿಕ್ರಮ್ಯ ನಿಸುಂಭಮವಪೋಥಯತ್ ॥೭॥

ತನ್ನ ಅಸ್ತ್ರದಿಂದ ಆ ಪಾಶಗಳನ್ನು ಛೇದಿಸಿ ಮುರನನ್ನೂ ಅವನ ಅನುಯಾಯಿಗಳನ್ನೂ ಸಂಹರಿಸಿ ಶಿಲಾ ಸಮೂಹಗಳನ್ನು ದಾಟಿ ನಿಸುಂಭನನ್ನು ಸಂಹರಿಸಿದನು.

ಯಃ ಸಹಸ್ರಸಮಾಸ್ತ್ವೇಕಃ ಸರ್ವಾನ್ ದೇವಾನಯೋಧಯತ್ ।
ತಂ ಜಘಾನ ಮಹಾವೀರ್ಯಂ ಹಯಗ್ರೀವಂ ಮಹಾಬಲಮ್ ॥೮॥

ಯಾವ ಹಯಗ್ರೀವಾಸುರನು ಎಲ್ಲಾ ದೇವತೆಗಳ ಜೊತೆಯಲ್ಲಿ ಒಬ್ಬನೇ ಸಹಸ್ರವರ್ಷಗಳವರೆಗೆ ಯುದ್ಧವನ್ನು ಮಾಡಿದ್ದನೋ ಅಂತಹ ಮಹಾಬಲಿಷ್ಠನೂ ಮಹಾಪರಾಕ್ರಮಿಯೂ ಆದ ಅವನನ್ನು ಸಂಹರಿಸಿದನು.

ಅಪಾರತೇಜಾ ದುರ್ಧರ್ಷಃ ಸರ್ವಯಾದವನಂದನಃ ।
ಮಧ್ಯೇ ಲೋಹಿತಗಂಗಾಯಾಂ ಭಗವಾನ್ ದೇವಕೀಸುತಃ ॥೯॥

ಔದಕಾಯಾಂ ವಿರೂಪಾಕ್ಷಂ ಜಘಾನ ಮಧುಸೂದನಃ ।
ಪಂಚಪಂಚಜನಾನ್ ಘೋರಾನ್ ನರಕಸ್ಯ ಮಹಾಸುರಾನ್ ॥೧೦॥

ಅಪಾರತೇಜಸ್ಸುಳ್ಳವನೂ ದುರ್ಧರ್ಷನೂ ಸರ್ವಯಾದವನಂದನನೂ ದೇವಕೀಸುತನೂ ಆದ ಭಗವಂತನಾದ ಮಧುಸೂದನನು ಲೋಹಿತ ಗಂಗೆಯ ಮಧ್ಯದಲ್ಲಿ ಇರುವ ಪಟ್ಟಣದಲ್ಲಿ ವಿರೂಪಾಕ್ಷನನ್ನು ಸಂಹರಿಸಿ ನರಕಾಸುರನ ಬೆಂಬಲಿಗರಾದ ಪಂಚಜನರೆಂಬ ಐವರು ಮಹಾಸುರರನ್ನು ಸಂಹರಿಸಿದನು.

ತತಃ ಪ್ರಾಗ್ಜ್ಯೋತಿಷಂ ನಾಮ ದೀಪ್ಯಮಾನಮಿವ ಶ್ರಿಯಾ ।
ಪುರಮಾಸಾದಯಾಮಾಸ ತತ್ರ ಯುದ್ಧಮವರ್ತತ ॥೧೧॥

ಅನಂತರ ಕಾಂತಿಯಿಂದ ಕಂಗೊಳಿಸುತ್ತಿರುವ ಪ್ರಾಗ್ಜ್ಯೋತಿಷ ಪುರವನ್ನು ಪ್ರವೇಶಿಸಿದನು. ಅಲ್ಲಿ ಯುದ್ಧವು ಮುಂದುವರೆಯಿತು.

ಮಹದ್ ದೈವಾಸುರಂ ಯುದ್ಧಂ ಯದ್ ವೃತ್ತಂ ಭರತರ್ಷಭ ।
ಯುದ್ಧಂ ತತ್ ಸ್ಯಾತ್ ಸಮಂ ತೇನ ಲೋಕವಿಸ್ಮಯಕಾರಕಮ್ ॥೧೨॥

ಭರತರ್ಷಭನೇ! ಅಲ್ಲಿ ಯಾವ ಯುದ್ಧವು ನಡೆಯಿತೋ ಅದು ಹಿಂದೆ ದೇವಾಸುರರ ಮಧ್ಯೆನಡೆದ ಲೋಕ ವಿಸ್ಮಯಕಾರಕವಾದ ಯುದ್ಧಕ್ಕೆ ಸಮವಾಗಿದ್ದಿತು.

ಚಕ್ರಲಾಂಗಲಸಂಛಿನ್ನಾಃ ಶಕ್ತಿಖಡ್ಗಹತಾಸ್ತದಾ ।
ವಿನೇಶುರ್ದಾನವಾಸ್ತತ್ರ ಸಮಾಸಾದ್ಯ ಜನಾರ್ದನಮ್ ॥೧೩॥

ಅಲ್ಲಿ ಜನಾರ್ದನನ್ನು ಎದುರಿಸಿದ ದಾನವರು ಚಕ್ರಲಾಂಗಲಗಳಿಂದ ಛಿನ್ನರಾಗಿ ಶಕ್ತಿಖಡ್ಗಗಳಿಂದ ಹತರಾಗಿ ನಾಶವನ್ನು ಹೊಂದಿದರು.

ಅಷ್ಟೌ ಶತಸಹಸ್ರಾಣಿ ದಾನವಾನಾಂ ಪರಂತಪ ।
ನಿಹತ್ಯ ಪುರುಷವ್ಯಾಘ್ರಃ ಪಾತಾಳವಿವರಂ ಯಯೌ ॥೧೪॥

ಪರಂತಪನೇ! ಪುರುಷಶ್ರೇಷ್ಠರಾದ ಕೃಷ್ಣನು ಎಂಟು ಲಕ್ಷದಾನವರನ್ನು ಸಂಹರಿಸಿ ಅಲ್ಲಿಂದ ಪಾತಾಳವಿವರಕ್ಕೆ ಹೋದನು.

ತ್ರಾಸನಂ ಸುರಸಂಘಾನಾಂ ನರಕಂ ಪುರುಷೋತ್ತಮಃ ।
ಯೋಧಯತ್ಯತಿತೇಜಸ್ವೀ ಮಧುವನ್ಮಧುಸೂದನಃ ॥೧೫॥

ಪುರುಷೋತ್ತಮನಾದ ಅತಿತೇಜಸ್ವಿಯಾದ ಮಧುಸೂದನನು ಸರ್ವದೇವ ಸಮೂಹಕ್ಕೂ ಭಯವನ್ನು ಉಂಟುಮಾಡಿದ್ದ ನರಕಾಸುರನ ಜೊತೆಯಲ್ಲಿ ಮಗುವಿನ ಜೊತೆಯಲ್ಲಿ ಯುದ್ಧಮಾಡಿದಂತೆ ಅನಾಯಾಸವಾಗಿ ಯುದ್ಧಮಾಡಿದನು.

ತದ್ಯುದ್ಧಮಭವದ್ ಘೋರಂ ತೇನ ಭೌಮೇನ ಭಾರತ ।
ಕುಂಡಲಾರ್ಥೇ ಸುರೇಶಸ್ಯ ನರಕೇಣ ಮಹಾತ್ಮನಃ ॥೧೬॥

ಎಲೈ ಭಾರತನೇ! ಕುಂಡಲಗಳ ಸಲುವಾಗಿ ಮಹಾತ್ಮನಾದ ದೇವೇಶನಾದ ಕೃಷ್ಣನಿಗೂ ಭೂಮಿಪುತ್ರನಾದ ನರಕನಿಗೂ ಘೋರವಾದ ಯುದ್ಧವು ಉಂಟಾಯಿತು.

ಮುಹೂರ್ತಂ ಲಾಳಯಿತ್ವಾಽಥ ನರಕಂ ಮಧುಸೂದನಃ ।
ಪ್ರವೃತ್ತಚಕ್ರಂ ಚಕ್ರೇಣ ಪ್ರಮಮಾಥ ಬಲಾದ್ ಬಲೀ ॥೧೭॥

ಅಬಿವೃದ್ಧಿಹೊಂದಿದ ಸೈನ್ಯದಿಂದ ಕೂಡಿದ ನರಕನ ಜೊತೆಯಲ್ಲಿ ಬಲಿಷ್ಠನಾದ ಮಧುಸೂದನನು ಒಂದು ಮುಹೂರ್ತಕಾಲ ಆಟವಾಡಿ ಅನಂತರ ಸುದರ್ಶನ ಚಕ್ರದಿಂದ ಅವನನ್ನು ಸಂಹರಿಸಿದನು.

ಚಕ್ರಪ್ರಮಥಿತಂ ತಸ್ಯ ಪಪಾತ ಸಹಸಾ ಭುವಿ ।
ಉತ್ತಮಾಂಗಂ ಹತಾಂಗಸ್ಯ ವೃತ್ರೇ ವಜ್ರಹತೇ ಯಥಾ ॥೧೮॥

ಚಕ್ರದಿಂದ ಕತ್ತರಿಸ್ಪಟ್ಟ ಅವನ ತಲೆಯು ವಜ್ರಾಯುಧದಿಂದ ವೃತ್ರನು ಹತನಾದಾಗ ವೃತ್ರನ ತಲೆಯು ಭೂಮಿಯ ಮೇಲೆ ಬಿದ್ದಂತೆ, ತಕ್ಷಣದಲ್ಲಿ ಭೂಮಿಯ ಮೇಲೆ ಬಿದ್ದಿತು.

ಭೂಮಿಸ್ತು ಪತಿತಂ ದೃಷ್ಟ್ವಾ ಸುತಂ ಪ್ರಾದಾಚ್ಚ ಕುಂಡಲೇ ।
ಪ್ರದಾಯ ಚ ಮಹಾಬಾಹುಮಿದಂ ವಚನಮಬ್ರವೀತ್ ॥೧೯॥

ಭೂಮಿಯಾದರೋ ನರಕಾಸುರನು ಸಂಹೃತನಾದುದನ್ನು ನೋಡಿ ಕೃಷ್ಣನಿಗೆ ಅವನ ಮಗನಾದ ಭಗದತ್ತನನ್ನೂ ಮತ್ತು ಕರ್ಣಕುಂಡಲಗಳನ್ನೂ ಒಪ್ಪಿಸಿ ಆ ಮಹಾಬಾಹುವನ್ನು ಕುರಿತು ಹೀಗೆ ಮಾತನಾಡಿದಳು.

ಭೂಮಿಃ

ಸೃಷ್ಟಸ್ತ್ವಯೈವ ಮಧುಮನ್ ತ್ವಯೈವ ನಿಹತಃ ಸುತಃ ।
ಯಥೇಚ್ಛಸಿ ತಥಾ ಕ್ರೀಡನ್ ಪ್ರಜಾಸ್ತಸ್ಯಾನುಪಾಯ ॥೨೦॥

ಎಲೈ ಮಧುಕುಲಧಾರಿಯೇ! ನರಕಾಸುರನನ್ನು ನೀನೇ ಸೃಷ್ಟಿಸಿದ್ದಿ. ಈಗ ನೀನೇ ಸಂಹಾರ ಮಾಡಿದ್ದೀಯೆ. ನಿನಗೆ ಇಚ್ಛೆ ಬಂದಂತೆ ಲೀಲೆಯನ್ನುಮಾಡುತ್ತಾ ಅವನ ಮಕ್ಕಳನ್ನು ರಕ್ಷಿಸು.

ಶ್ರೀವಾಸುದೇವಃ

ದೇವಾನಾಂ ಚ ಮುನೀನಾಂ ಚ ಪಿತೃಣಾಂ ಚ ಮಹಾತ್ಮನಾಮ್ ।
ಉದ್ವೇಜನೀಯೋ ಭೂತಾನಾಂ ಬ್ರಹ್ಮದ್ವಿಟ್ ಪುರುಷಾಧಮಃ ॥೨೧॥

ನರಕಾಸುರನು ಬ್ರಹ್ಮದ್ವೇಷಿಯೂ ಪುರುಷಾಧಮನೂ ಆಗಿ ದೇವತೆಗಳಿಗೂ ಮಹಾತ್ಮರಾದ ಋಷಿಗಳಿಗೂ ಪಿತೃಗಳಿಗೂ ಮತ್ತು ಎಲ್ಲಾ ಪ್ರಾಣಿಗಳಿಗೂ ಹೆದರಿಕೆಯನ್ನು ಉಂಟುಮಾಡಿದ್ದನು.

ಲೋಕದ್ವಿಷ್ಟಃ ಸುತಸ್ತುಭ್ಯಂ ದೇವಾರಿರ್ಲೋಕಕಂಟಕಃ ।
ಸರ್ವಲೋಕನಮಸ್ಕಾರ್ಯಾಮದಿತಿಂ ಬಾಧಯದ್ ಬಲೀ ।
ಕುಂಡಲೇ ದರ್ಪಸಂಪೂರ್ಣಃ ತತೋ ಮೇ ನಿಹತಃ ಸುತಃ ॥೨೨॥

ಎಲ್ಲಾ ಲೋಕದ್ವೇಷಕ್ಕೆ ಪಾತ್ರನಾದ ನಿನ್ನ ಪುತ್ರನು ದೇವತೆಗಳ ಶತ್ರುವೂ ಲೋಕಕಂಟಕನೂ ಆಗಿದ್ದನು. ಸರ್ವಲೋಕದಿಂದ ನಮಸ್ಕರಾರ್ಹಳಾದ ಅದಿತಿಯನ್ನು ತನ್ನ ಬಲದಿಂದ ಪೀಡಿಸಿ ದರ್ಪದಿಂದ ಅವಳ ಕುಂಡಲಗಳನ್ನು ಅಪಹರಿಸಿದನು. ಆದ್ದರಿಂದ ನಾನು ಅವನನ್ನು ಸಂಹರಿಸಿದೆ.

ನೈವ ಮನ್ಯುಸ್ತ್ವಯಾ ಕಾರ್ಯೋ ಯತ್ ಕೃತಂ ಮಯಿ ಭಾಮಿನಿ ।
ಮತ್ಪ್ರಭಾವಾಚ್ಚ ತೇ ಪುತ್ರೋ ಲಬ್ಧವಾನ್ ಗತಿಮುತ್ತಮಾಮ್ ।
ತಸ್ಮಾದ್ ಗಚ್ಛ ಮಹಾಭಾಗೇ ಭಾರಾವತರಣಂ ಕೃತಮ್ ॥೨೩॥

ಭಾಮಿನಿಯೇ! ನಾನು ಮಾಡಿದ ಕಾರ್ಯದಿಂದ ನನ್ನಮೇಲೆ ಕೋಪಗೊಳ್ಳಬೇಡ. ನನ್ನ ಪ್ರಭಾವದಿಂದ ನಿನ್ನ ಪುತ್ರನು ಉತ್ತಮಗತಿಯನ್ನು ಪಡೆದಿದ್ದಾನೆ. ಮಹಾನುಭಾವಳೇ! ನೀನು ಇಲ್ಲಿಂದ ಹೋಗು ನಾನು ಭೂಭಾರವನ್ನು ಇಳಿಸಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಏಕೋನ ಪಂಚಾಶೋಧ್ಯಾಯಃ॥
॥ ಅರ್ಘಾಭಿಹರಣಪರ್ವಣಿ ಅಷ್ಟಾದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ನಲವತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು.

★★★★★

ಐವತ್ತನೆಯ ಅಧ್ಯಾಯ

(ಪ್ರಾಗ್ಜ್ಯೋತಿಷ ಪುರದಲ್ಲಿ ಇದ್ದ ರತ್ನಾದಿಗಳನ್ನು ಸಂಗ್ರಹಿಸಿ ಸ್ವರ್ಗದಲ್ಲಿ ಅದಿತಿಗೆ ಕುಂಡಲಗಳನ್ನು ಕೊಟ್ಟು ಕೃಷ್ಣನ ದ್ವಾರಕಾ ಪ್ರಾಪ್ತಿ)

ಭೀಷ್ಮಃ

ನಿಹತ್ಯ ನರಕಂ ಭೌಮಂ ವಾಸವೇನ ಪುರಸ್ಕೃತಃ ।
ಸಹಿತೋ ಲೋಕಪಾಲೈಶ್ಚ ದದರ್ಶ ನರಕಾಲಯಮ್ ॥೧॥

ಇಂದ್ರನಿಂದ ಪೂಜಿಸಿಲ್ಪಟ್ಟ ಕೃಷ್ಣನು ಭೂಮಿಯ ಪುತ್ರನಾದ ನರಕಾಸುರನನ್ನು ಸಂಹರಿಸಿ ಲೋಕಪಾಲಕರ ಜೊತೆಯಲ್ಲಿ ಕೂಡಿದವನಾಗಿ ನರಕಾಸುರನ ಮನೆಯಲ್ಲಿ ನೋಡಿದನು.

ಅಥಾಸ್ಯ ಗೃಹಮಾಸಾದ್ಯ ನರಕಸ್ಯ ಮಹಾತ್ಮನಃ ।
ದದರ್ಶ ಧನಮಕ್ಷಯ್ಯಂ ರತ್ನಾನಿ ವಿವಿಧಾನಿ ಚ ॥೨॥

ಆಗ ಮಹಾತ್ಮನಾದ ನರಕಾಸುರನ ಮನೆಯನ್ನು ಸೇರಿ ಅಲ್ಲಿ ಅಕ್ಷಯವಾದ ಧನವನ್ನೂ ವಿವಿಧ ರತ್ನಗಳನ್ನೂ ನೋಡಿದನು.

ಮಣಿಮುಕ್ತಾಪ್ರವಾಳಾನಿ ವೈಡೂರ್ಯವಿಕೃತಾನಿ ಚ ।
ವಿಸ್ತಾರಕಲ್ಪಾರ್ಕಮಣೀನ್ ವಿಮಲಸ್ಫಾಟಿಕಾನಪಿ ॥೩॥

ಜಾಂಬೂನದಮಯಾನ್ಯೇವ ಶಾತಕುಂಭಮಯಾನಿ ಚ ।
ಪ್ರದೀಪ್ತಜ್ವಲನಾಭಾನಿ ಶೀತರಶ್ಮಿಪ್ರಭಾಣಿ ಚ ।
ಹಿರಣ್ಯವರ್ಣಂ ರುಚಿರಂ ಶ್ವೇತಮಭ್ಯಂತರಂ ಗೃಹಮ್ ॥೪॥

ಮಣಿಮುಕ್ತಪ್ರವಾಳವನ್ನೂ ವೈಡೂರ್ಯವಿಕಾರಗಳನ್ನೂ ವಿಸ್ತಾರವಾದ ಸೂರ್ಯಕಾಂತಿಮಣಿಗಳನ್ನೂ ವಿಮಲಸ್ಫಟಿಕಗಳನ್ನೂ ಸುವರ್ಣಮಯವಾದ ಮಣಿಗಳನ್ನೂ ಜ್ವಲಿಸುವ ಅಗ್ನಿವರ್ಣದ ಮಣಿಗಳನ್ನೂ ಶೀತರಶ್ಮಿ ಮತ್ತು ಕಾಂತಿಯನ್ನೂ ಹೊಂದಿದ್ದ ಮಣಿಗಳನ್ನೂ ಹಿರಣ್ಯವರ್ಣದಿಂದ ಕೂಡಿದ್ದ ಶ್ವೇತವಾದ ಸುಂದರವಾದ ಅಂತರ ಗೃಹವನ್ನೂ ನೋಡಿದನು.

ಯದಕ್ಷಯಂ ಗೃಹೇ ದೃಷ್ಟಂ ನರಕಸ್ಯ ಧನಂ ಬಹು ।
ನಹಿ ರಾಜ್ಞಃ ಕುಬೇರಸ್ಯ ತಾವದ್ಧನಸಮುಚ್ಛ್ರಯಮ್ ।
ದೃಷ್ಟಪೂರ್ವಂ ಪುರೇ ಸಾಕ್ಷಾನ್ಮಹೇಂದ್ರಸದನೇಷ್ವಪಿ ॥೫॥

ನರಕಾಸುರನ ಗೃಹದಲ್ಲಿ ಎಂತಹ ಬಹುವಾದ ಅಕ್ಷಯವಾದ ಧನವಿದ್ದಿತೋ ಅಂತಹ ಧನರಾಶಿಯನ್ನು ಕುಬೇರನ ಮನೆಯಲ್ಲಿಯೂ ನೊಡಲು ಸಾಧ್ಯವಿರಲಿಲ್ಲ. ಅಥವಾ ಸ್ವರ್ಗದಲ್ಲೇ ಆಗಲೀ ಮಹೇಂದ್ರನ ಭವನದಲ್ಲಿಯಾಗಲೀ ಹಿಂದೆ ಯಾರೂ ಅಂತಹ ಧನರಾಶಿಯನ್ನು ನೋಡಿರಲಿಲ್ಲ.

ಹತೇ ಭೌಮೇ ನಿಸುಂಭೇ ಚ ವಾಸವಃ ಸಗಣೋಽಬ್ರವೀತ್ ।
ದಾಶಾರ್ಹಪತಿಮಾಸೀನಮಾಹೃತ್ಯ ಮಣಿಕುಂಡಲೇ ॥೬॥

ನರಕ ಮತ್ತು ನಿಸುಂಭರು ಹತರಾಗುತ್ತಿರಲು ಇಂದ್ರನು ತನ್ನ ಪರಿವಾರಸಹಿತನಾಗಿ ದಾಶಾರ್ಹಪತಿಯಾದ ಕೃಷ್ಣನ ಬಳಿಗೆ ಬಂದು ಮಣಿಕುಂಡಲಗಳನ್ನು ಸಮರ್ಪಿಸಿ ಮಾತನಾಡಿದನು.

ಹೇಮಸೂತ್ರಾ ಮಹಾಕಕ್ಷ್ಯಾಃ ತೋಮರೈರ್ವಿರ್ಯಶಾಲಿನಃ ।
ಭೀಮರೂಪಾಶ್ಚ ಮಾತಂಗಾಃ ಪ್ರವಾಳವಿಕೃತಾಃ ಕುಥಾಃ ॥೭॥

ವಿಮಲಾನಿ ಪತಾಕಾನಿ ವಾಸಾಂಸಿ ವಿವಿಧಾನಿ ಚ ।
ತೇ ಚ ವಿಂಶತಿಸಾಹಸ್ರಾ ದ್ವಿಸ್ತಾವತ್ಯಃ ಕರೇಣವಃ ॥೮॥

ಅಷ್ಟೌ ಶತಸಹಸ್ರಾಣಿ ದೇಶಜಾಶ್ಚೋತ್ತಮಾ ಹಯಾಃ ।
ಗೋಭಿಶ್ಚ ವಿಕೃತೈರ್ಯಾನ್ಯೈಃ ಕಾಮಂ ತವ ಜನಾರ್ದನ ॥೯॥

ಹೇಮಸೂತ್ರಗಳನ್ನೂ ಮಹಾಕಕ್ಷೆಗಳನ್ನೂ ತೋಮರಗಳನ್ನೂ ಧರಿಸಿದ ಭಯಂಕರವಾದ ಆಕಾರವುಳ್ಳ ಹವಳದಿಂದಮಾಡಿದ ರತ್ನಗಂಬಳಿಗಳನ್ನುಳ್ಳ ಪರಾಕ್ರಮಶಾಲಿಗಳಾದ ಗಜಗಳು, ವಿಮಲವಾದ ಪತಾಕೆಗಳು, ವಿಧವಿಧವಾದ ವಸ್ತ್ರಗಳು, ಇವುಗಳನ್ನು ಹೊಂದಿದ ಇಪ್ಪತ್ತು ಸಾವಿರ ಆನೆಗಳು ಅವುಗಳ ಎರಡರಷ್ಟು ಮರಿಯಾನೆಗಳು, ಒಳ್ಳೆಯ ದೇಶದಲ್ಲಿ ಜನಿಸಿದ ಉತ್ತಮವಾದ ಎಂಟುಲಕ್ಷ ಅಶ್ವಗಳು,

ಯಾನವನ್ನು ಹೊರಲು ಸಮರ್ಥವಾದ ಬಲಿಷ್ಠವಾದ ಅನೇಕ ವೃಷಭಗಳು ಜನಾರ್ದನನೇ! ಎಲ್ಲವೂ ನಿನಗೆ ಸೇರಿದವು.

ಆವಿಕಾನಿ ಚ ಸೂಕ್ಷ್ಮಾಣಿ ಶಯನಾವಸಥಾನಿ ಚ ।
ಕಾಮವ್ಯಾಹಾರಿಣಶ್ಚಾಪಿ ಪಕ್ಷಿಣಃ ಪ್ರಿಯದರ್ಶನಾತ್ ॥೧೦॥

ಚಂದನಾಗರುಮುಖ್ಯಾನಿ ಯಾನಾನಿ ವಿವಿಧಾನಿ ಚ ।
ತಚ್ಚ ತೇ ಪ್ರಾಪಯಿಷ್ಯಾಮಿ ವೃಷ್ಣ್ಯಾವಾಸಮರಿಂದಮ ॥೧೧॥

ಎಲೈ ಅರಿಂದಮನೇ! ಸೂಕ್ಷ್ಮವಾದ ಕಂಬಳಿಗಳು ಶಯನಗಳು ಆಸನಗಳು, ಪ್ರೀತಿಪಾತ್ರರು ಬಂದ ತಕ್ಷಣ ಒಳ್ಳೆಯ ಮಾತುಗಳನ್ನು ಆಡುವ ಪಕ್ಷಿಗಳು, ಚಂದನ ಅಗರು ಮೊದಲಾದ ಸುಗಂಧ ದ್ರವ್ಯಗಳು ವಿವಿಧ ಯಾನಗಳು ಈ ಎಲ್ಲವನ್ನೂ ನಾನು ನಿನ್ನ ದ್ವಾರಕಾ ಪಟ್ಟಣಕ್ಕೆ ತಲುಪಿಸುತ್ತೇನೆ.

ವಸು ಯತ್ ತ್ರಿಷು ಲೋಕೇಷು ಧರ್ಮೇಣೈವಾರ್ಜಿತಂ ಮಯಾ ।
ದೇವಗಂಧರ್ವರತ್ನಾನಿ ದೈತೇಯಾಸುರಜಾನಿ ಚ ।
ಯಾನಿ ಸಂತೀಹ ರತ್ನಾನಿ ನರಕಸ್ಯ ನಿವೇಶನೇ ॥೧೨॥

ಮೂರು ಲೋಕಗಳಲ್ಲಿ ನಾನು ಧರ್ಮದಿಂದ ಸಂಪಾದಿಸಿದ ಯಾವ ಸಂಪತ್ತಿದೆಯೋ ಮತ್ತು ಎಷ್ಟು ದೇವಗಂದರ್ವರತ್ನಗಳಿವೆಯೋ ದೈತೇಯಾಸುರರಿಗೆ ಸಂಬಂಧಿಸಿದ ರತ್ನಗಳಿವೆಯೋ ಮತ್ತು ನರಕಾಸುರನ ಮನೆಯಲ್ಲಿ ಯಾವ ರತ್ನಗಳಿವೆಯೋ ಅವೆಲ್ಲವನ್ನೂ ನಿನಗೆ ತಲುಪಿಸುತ್ತೇನೆ.

ಭೀಷ್ಮಃ

ಏತತ್ ತು ಗರುಡೇ ಸರ್ವಂ ಕ್ಷಿಪ್ರಮಾರೋಪ್ಯ ವಾಸವಃ ।
ದಾಶಾರ್ಹಪತಿನಾ ಸಾರ್ಧಮುಪಾಯಾನ್ಮಣಿಪರ್ವತಮ್ ॥೧೩॥

ಇವೆಲ್ಲವನ್ನೂ ಶೀಘ್ರವಾಗಿ ಗರುಡನ ಮೇಲೆ ಏರಿಸಿ ಇಂದ್ರನು ದಾಶಾರ್ಹಪತಿಯಾದ ಕೃಷ್ಣನ ಜೊತೆಯಲ್ಲಿ ಮಣಿಪರ್ವತದ ಸಮೀಪಕ್ಕೆ ಬಂದನು.

ತತ್ರ ಪುಣ್ಯಾ ವವುರ್ವಾತಾಃ ಪ್ರಭಾಶ್ಚಿತ್ರಾಃ ಸಮುಜ್ಜ್ವಲಾಃ ।
ಪ್ರೇಕ್ಷತಾಂ ಸುರಸಂಘಾನಾಂ ವಿಸ್ಮಯಃ ಸಮಪದ್ಯತ ॥೧೪॥

ಅಲ್ಲಿ ಪುಣ್ಯವಾದ ವಾಯುವು ಸಂಚರಿಸುತ್ತಿತ್ತು. ಉಜ್ವಲವಾದ ವಿಚಿತ್ರವಾದ ಪ್ರಭೆಯು ಇದ್ದಿತು. ಅದನ್ನು ನೋಡಿದ ದೇವತೆಗಳ ಸಮೂಹಕ್ಕೆ ವಿಸ್ಮಯ ಉಂಟಾಯಿತು.

ತ್ರಿದಶಾ ಋಷಯಶ್ಚೈವ ಚಂದ್ರಾದಿತ್ಯೌ ಯಥಾ ದಿವಿ ।
ಪ್ರಭಯಾ ತಸ್ಯ ಶೈಲಸ್ಯ ನಿರ್ವಿಶೇಷಮಿವಾಭವತ್ ॥೧೫॥

ಚಂದ್ರಾದಿತ್ಯರ ಪ್ರಭೆಯಿಂದ ಸ್ವರ್ಗಲೋಕದಲ್ಲಿ ದೇವತೆಗಳು ಮತ್ತು ಋಷಿಗಳು ಹೀಗೆ ಕಂಗೊಳಿಸುತ್ತಾರೆಯೋ ಅದರಂತೆ ಆ ಮಣಿ ಪರ್ವತದ ಪ್ರಭೆಯು ಭೂಮಿಯಲ್ಲಿ ಚಂದ್ರಸೂರ್ಯರ ಪ್ರಭೆಗೆ ಸಮಾನವಾಗಿದ್ದಿತು.

ಅನುಜ್ಞಾತಸ್ತು ರಾಮೇಣ ಕೇಶವೋ ವಾಸವೇನ ಚ ।
ಪ್ರೀಯಮಾಣೋ ಮಹಾಬಾಹುರ್ವಿವೇಶ ಮಣಿಪರ್ವತಮ್ ॥೧೬॥

ಬಲರಾಮನಿಂದಲೂ ಇಂದ್ರನಿಂದಲೂ ಅನುಜ್ಞಾತನಾದ ಮಹಾಬಾಹುವಾದ ಕೇಶವನು ಸಂತೋಷದಿಂದ ಮಣಿಪರ್ವತವನ್ನು ಪ್ರವೇಶಿಸಿದನು.

ತತ್ರ ವೈಡೂರ್ಯವರ್ಣಾನಿ ದದರ್ಶ ಮಧುಸೂದನಃ ।
ಗಂಧರ್ವಾಸುರನಾಗಾನಾಂ ಪ್ರಿಯಾ ದುಹಿತರಸ್ತದಾ ॥೧೭॥

ಮಧುಸೂದನನು ಅಲ್ಲಿ ವೈಡೂರ್ಯವರ್ಣೋಪೇತರಾದ ಗಂಧರ್ವಾಸುರನಾಗರ ಪ್ರಿಯ ಪುತ್ರಿಯರನ್ನು ನೋಡಿದನು.

ತ್ರಿವಿಷ್ಟಪಸಮೇ ದೇಶೇ ತಿಷ್ಠಂತಮಪರಾಜಿತಮ್ ।
ಪರಿವವ್ರುರ್ಮಹಾಬಾಹುಮೇಕವೇಣೀಧರಾಃ ಸ್ತ್ರಿಯಃ ॥೧೮॥

ಏಕವೇಣೀಧರರಾದ ಆ ಸ್ತ್ರೀಯರೆಲ್ಲರೂ ಸ್ವರ್ಗಕ್ಕೆ ಸದೃಶವಾದ ದೇಶದಲ್ಲಿ ನಿಂತಿದ್ದ ಅಪರಾಜಿತನಾದ ಮಹಾಬಾಹುವಾದ ಕೃಷ್ಣನನ್ನು ಸುತ್ತುವರಿದರು.

ಸರ್ವಾಃ ಕಾಷಾಯವಾಸಿನ್ಯಃ ಸರ್ವಾಶ್ಚ ನಿಯತೇಂದ್ರಿಯಾಃ ।
ವ್ರತಸಂತಾಪಜಃ ಶೋಕೋ ನಾತ್ರ ಕಾಂಜಿದಪೀಡಯತ್ ॥೧೯॥

ಅವರೆಲ್ಲರೂ ಕಾಷಾಯ ವಸ್ತ್ರಗಳನ್ನು ಧರಿಸಿ ಇಂದ್ರಿಯ ನಿಯಮಗಳನ್ನು ಪಾಲಿಸುವವರಾಗಿದ್ದರು. ಅವರಲ್ಲಿ ಯಾರಿಗೂ ವ್ರತದ ತಾಪದಿಂದ ಉಂಟಾದ ಶೋಕವು ಇರಲಿಲ್ಲ.

ಅರಜಾಂಸಿ ಚ ವಾಸಾಂಸಿ ಬಿಭ್ರತ್ಯಃ ಕೌಶಿಕಾನ್ಯಪಿ ।
ಸಮೇತ್ಯ ಯದುಸಿಂಹಸ್ಯ ಚಕ್ರುರ್ಹಾರಾಂಜಲಿಂ ಸ್ತ್ರಿಯಃ ॥೨೦॥

ಶುಭ್ರವಾದ ರೇಷ್ಮೆವಸ್ತ್ರಗಳನ್ನು ಧರಿಸಿದ ಆ ಸ್ತ್ರೀಯರು ಯದುಸಿಂಹನಾದ ಕೃಷ್ಣನ ಬಳಿಗೆ ಬಂದು ಆನಂದಾಶ್ರುಪೂರ್ವಕವಾಗಿ ಅವನಿಗೆ ಕೈಗಳನ್ನು ಮುಗಿದರು.

ಊಚುಶ್ಚೈನಂ ಹೃಷೀಕೇಶಂ ಸರ್ವಾಸ್ತಾಃ ಕಮಲೇಕ್ಷಣಾಃ ।
ನಾರದೇನ ಸಮಾಖ್ಯಾತಮಸ್ಮಾಕಂ ಪುರುಷೋತ್ತಮ ।
ಆಗಮಿಷ್ಯತಿ ಗೋವಿಂದಃ ಸುರಕಾರ್ಯಾರ್ಥಸಿದ್ಧಯೇ ॥೨೧॥

ಸೋಽಸುರಂ ನರಕಂ ಹತ್ವಾ ನಿಸುಂಭಂ ಮುರಮೇವ ಚ ।
ಭೌಮಂ ಚ ಸಪರೀವಾರಂ ಹಯಗ್ರೀವಂ ಚ ದಾನವಮ್ ।
ತಥಾ ಪಂಚಜನಂ ಚೈವ ಪ್ರಾಪ್ಸ್ಯತೇ ಧನಮಕ್ಷಯಮ್ ॥೨೨॥

ಸೋಽಚಿರೇಣೈವ ಕಾಲೇನ ಯುಷ್ಮದ್ಭರ್ತಾ ಭವಿಷ್ಯತಿ ।
ಏವಮುಕ್ತ್ವಾಽಗಮದ್ ಧೀಮಾನ್ ದೇವರ್ಷಿರ್ನಾರದಸ್ತದಾ ॥೨೩॥

ಆ ಎಲ್ಲಾ ಕಮಲನೇತ್ರೆಯರು ಹೃಷೀಕೇಶವನನ್ನು ಕುರಿತು ಹೀಗೆ ಮಾತನಾಡಿದರು. ಪುರುಷೋತ್ತಮನೇ! ನಮಗೆ ನಾರದರು ಹೀಗೆ ಹೇಳಿದ್ದಾರೆ. ದೇವತಾಕಾರ್ಯಸಿದ್ಧಿಗಾಗಿ ಗೋವಿಂದನು ಇಲ್ಲಿಗೆ ಬರುವನು ಅವನು ನರಕಾಸುರನನ್ನೂ ನಿಸುಂಭನನ್ನೂ ಮುರನನ್ನೂ ನರಕಾಸುರನ ಪರಿವಾರವನ್ನೂ ಹಯಗ್ರೀವಾಸುರನನ್ನೂ ಪಂಚಜನನನ್ನೂ ಸಂಹರಿಸಿ ಅಕ್ಷಯವಾದ ಧನವನ್ನು ಪಡೆದು ನಿಮ್ಮ ಪತಿಯಾಗುವನು. ಹೀಗೆ ಮೇಧಾವಿಗಳಾದ ದೇವರ್ಷಿಗಳಾದ ನಾರದರು ನಮಗೆ ಹೇಳಿ ಹೊರಟು ಹೋದರು.

ತ್ವಾಂ ಚಿಂತಯಾನಾಃ ಸತತಂ ತಪೋ ಘೋರಮುಪಾಸ್ಮಹೇ ।
ಕಾಲೇಽತೀತೇ ಮಹಾಬಾಹುಂ ಕದಾ ದ್ರಕ್ಷ್ಯಾಮ ಮಾಧವಮ್ ॥೨೪॥

ನಾವು ಕಾಲವು ಕಳೆದು ಹೋಗುತ್ತಿರಲು ಮಹಾಬಾಹುವಾದ ಮಾಧವನನ್ನು ಯಾವಾಗ ನೋಡುವೆವು ಎಂದು ಚಿಂತಿಸುತ್ತಾ ನಾವು ಯಾವಾಗಲೂ ಘೋರವಾದ ತಪಸ್ಸನ್ನು ಆಚರಿಸುತ್ತಿದ್ದೇವೆ.

ಇತ್ಯೇವಂ ಹೃದಿ ಸಂಕಲ್ಪಂ ಕೃತ್ವಾ ಪುರುಷಸತ್ತಮ ।
ತಪಶ್ಚರಾಮ ಸತತಂ ರಕ್ಷ್ಯಮಾಣಾ ಹಿ ದಾನವೈಃ ॥೨೫॥

ಪುರುಷ ಶ್ರೇಷ್ಠನೇ! ನಮ್ಮ ಮನಸ್ಸಿನಲ್ಲಿ ಹೀಗೆ ಸಂಕಲ್ಪವನ್ನು ಮಾಡಿ ದಾನವರಿಂದ ರಕ್ಷಿಸಲ್ಪಟ್ಟು ಯಾವಾಗಲೂ ಹೀಗೆ ತಪಸ್ಸನ್ನು ಆಚರಿಸುತ್ತಿದ್ದೇವೆ.

ತತೋಽಸ್ಮತ್ಪ್ರಿಯಕಾಮಾರ್ಥಂ ಭಗವಾನ್ ಮಾರುತಃ ಸ್ವಯಮ್ ।
ಯಥೋಕ್ತಂ ನಾರದೇನಾಥ ನಚಿರಾತ್ ತದ್ ಭವಿಷ್ಯತಿ ॥೨೬॥

ಅನಂತರ ನಮಗೆ ಹಿತವನ್ನು ಉಂಟುಮಾಡುವ ಸಲುವಾಗಿ ವಾಯುದೇವರೂ ಸಹ ಸ್ವತಃ ಬಂದು ನಾರದರು ಏನು ಹೇಳಿದರೋ ಅದು ಶೀಘ್ರವಾಗಿಯೇ ನೆರವೇರುವುದು ಎಂದು ಹೇಳಿದರು.

ತಾಸಾಂ ಪರಮನಾರೀಣಾಮೃಷಭಾಕ್ಷಂ ಪುರಸ್ಕೃತಮ್ ।
ದದೃಶುರ್ದೇವಗಂಧರ್ವಾ ಗೃಷ್ಟೀನಾಮಿವ ಗೋಪತಿಮ್ ॥೨೭॥

ಸಣ್ಣ ಪ್ರಾಯದ ಹಸುಗಳ ಮುಂದೆ ವೃಷಭವು ನಿಂತಂತೆ ಆ ಸುಂದರಿಯರ ಮುಂದೆ ವೃಷಭಾಕ್ಷನಾದ ಕೃಷ್ಣನು ನಿಂತಿರುವುದನ್ನು ದೇವ ಗಂಧರ್ವರು ನೋಡಿದರು.

ತಸ್ಯ ಚಂದ್ರೋಪಮಂ ವಕ್ತ್ರಮುದೀಕ್ಷ್ಯ ಮುದಿತೇಂದ್ರಿಯಾಃ ।
ಸಂಪ್ರಹೃಷ್ಟಾ ಮಹಾಬಾಹುಮಿದಂ ವಚನಮಬ್ರುವನ್ ॥೨೮॥

ಅವನ ಚಂದ್ರಸದೃಶವಾದ ಮುಖವನ್ನು ನೋಡಿ ಸಂತೋಷಗೊಂಡ ಆ ಕನ್ಯೆಯರು ಆ ಮಹಾಬಾಹುವನ್ನು ಕುರಿತು ಸಂತೋಷದಿಂದ ಈ ಮಾತುಗಳನ್ನು ಆಡಿದರು.

ಸತ್ಯಂ ಬತ ಪುರಾ ವಾಯುರಿದಮಸ್ಮಾನಿಹಾಬ್ರವೀತ್ ।
ಸರ್ವಭೂತಕೃತಜ್ಞಶ್ಚ ಮಹರ್ಷಿರಪಿ ನಾರದಃ ॥೨೯॥

ನಮಗೆ ಈ ಸ್ಥಳದಲ್ಲಿ ಹಿಂದೆ ವಾಯುದೇವರು ಏನು ಹೇಳಿದರೋ ಸರ್ವ ಪ್ರಾಣಿಗಳಿಗೆ ಉಪಕಾರಕರಾದ ಮಹರ್ಷಿಗಳಾದ ನಾರದರು ಏನು ಹೇಳಿದರೋ ಎಲ್ಲವೂ ಸತ್ಯವಷ್ಟೇ ?

ವಿಷ್ಣುರ್ನಾರಾಯಣೋ ದೇವಃ ಶಂಖಚಕ್ರಗದಾಸಿಧೃತ್ ।
ಸ ಭೌಮಂ ನರಕಂ ಹತ್ವಾ ಭರ್ತಾ ವೋ ಭವಿತಾ ತ್ವಿಹ ॥೩೦॥

ಶಂಖ ಚಕ್ರ ಗದಾ ಖಡ್ಗಧಾರಿಯಾದ ದೇವನಾದ ನಾರಾಯಣನಾದ ವಿಷ್ಣುವು ಭೂಮಿಯ ಪುತ್ರನಾದ ನರಕನನ್ನು ಸಂಹರಿಸಿ ನಿಮಗೆ ಪತಿಯಾಗುವನು.

ದಿಷ್ಟ್ಯಾ ತಸ್ಯರ್ಷಿಮುಖ್ಯಸ್ಯ ನಾರದಸ್ಯ ಮಹಾತ್ಮನಃ ।
ವಚನಾದೇವ ಸತ್ಯಂ ನೋ ಭರ್ತಾ ಭವಿತುಮರ್ಹತಿ ॥೩೧॥

ನಮ್ಮ ಪುಣ್ಯದಿಂದ ಆ ಮಹಾತ್ಮರಾದ ಋಷಿಶ್ರೇಷ್ಠರಾದ ನಾರದರ ವಚನದಂತೆ ಸತ್ಯವಾಗಿ ನೀನು ನಮಗೆ ಪತಿಯಾಗಬೇಕು.

ಯತ್ ಪ್ರಿಯಂ ಬತ ಪಶ್ಯಾಮ ವಕ್ತ್ರಂ ಚಂದ್ರೋಪಮಂ ತು ತೇ ।
ದರ್ಶನೇನ ಕೃತಾರ್ಥಾಃ ಸ್ಮೋ ವಯಮದ್ಯ ಮಹಾತ್ಮನಃ ॥೩೨॥

ಮಹಾತ್ಮನಾದ ನಿನ್ನ ಸುಂದರವಾದ ಮುಖವನ್ನು ನೋಡುವುದರಿಂದಲೇ ನಾವು ಈ ದಿನ ಕೃತಾರ್ಥರಾಗಿದ್ದೇವೆ.

ಭೀಷ್ಮಃ

ಉವಾಚ ಸ ಯದುಶ್ರೇಷ್ಠಃ ಸರ್ವಾಸ್ತಾ ಜಾತಮನ್ಮಥಾಃ ।
ಯಥಾ ಬ್ರೂತ ವಿಶಾಲಾಕ್ಷ್ಯಸ್ತತ್ ಸರ್ವಂ ವೋ ಭವಿಷ್ಯತಿ ॥೩೩॥

ಆಗ ಯದುಶ್ರೇಷ್ಠನಾದ ಕೃಷ್ಣನು ಕಾಮಾವಿಷ್ಟರಾದ ಅವರೆಲ್ಲರನ್ನೂ ಕುರಿತು ವಿಶಾಲಾಕ್ಷಿಯರೇ ನೀವು ಏನು ಹೇಳುತ್ತಿದ್ದೀರೋ ಹಾಗೆಯೇ ಎಲ್ಲವೂ ಆಗುವುದು ಎಂದು ಹೇಳಿದನು.

ತಾನಿ ಸರ್ವಾಣಿ ರತ್ನಾನಿ ಗಮಯಿತ್ವಾಽಥ ಕಿಂಕರೈಃ ।
ಸ್ತ್ರಿಯಶ್ಚ ಗಮಯಿತ್ವಾಽಥ ದೇವರ್ಷಿನೃಪಕನ್ಯಕಾಃ ॥೩೪॥

ಕೃಷ್ಣನು ಅಲ್ಲಿದ್ದ ಎಲ್ಲಾ ರತ್ನಗಳನ್ನೂ ಕಿಂಕರರ ಮೂಲಕ ಕಳುಹಿಸಿಕೊಟ್ಟು ದೇವರ್ಷಿನೃಪಕನ್ಯೆಯರನ್ನೂ ಸಹ ಪಲ್ಲಕ್ಕಿಗಳಲ್ಲಿ ಕಳುಹಿಸಿಕೊಟ್ಟನು.

ವೈನತೇಯಭುಜೇ ಕೃಷ್ಣೋ ಮಣಿಪರ್ವತಮುತ್ತಮಮ್ ।
ಕ್ಷಿಪ್ರಮಾರೋಪಯಾಂಚಕ್ರೇ ಭಗವಾನ್ ದೇವಕೀಸುತಃ ॥೩೫॥

ಅನಂತರ ದೇವಕೀಸುತನಾದ ಭಗವಂತನಾದ ಕೃಷ್ಣನು ಶ್ರೇಷ್ಠವಾದ ಮಣಿ ಪರ್ವತವನ್ನು ಗರುಡನ ಹೆಗಲಿನ ಮೇಲೆ ಬೇಗ ಏರಿಸಿದನು.

ಸಪಕ್ಷಿಗಣಮಾತಂಗಂ ಸವ್ಯಾಳಮೃಗಪನ್ನಗಮ್ ।
ಶಾಖಾಮೃಗಗಣೈರ್ಜುಷ್ಟಂ ಸಪ್ರಸ್ತರಶಿಲಾತಳಮ್ ॥೩೬॥

ನ್ಯಂಕುಭಿಶ್ಚ ವರಾಹೈಶ್ಚ ರುರುಭಿಶ್ಚ ನಿಷೇವಿತಮ್ ।
ಸಪ್ರಪಾತಮಹಾಸಾನುಂ ವಿಚಿತ್ರಶಿಖಿಸಂಕುಲಮ್ ॥೩೭॥

ತಂ ಮಹೇಂದ್ರಾನುಜಃ ಶೌರಿಃ ಚಕಾರ ಗರುಡೋಪರಿ ।
ಪಶ್ಯತಾಂ ಸರ್ವಭೂತಾನಾಮುತ್ಪಾಟ್ಯ ಮಣಿಪರ್ವತಮ್ ॥೩೮॥

ಪಕ್ಷಿಗಣಗಳಿಂದಲೂ ಗಜಗಳಿಂದಲೂ ಸಹಿತವಾಗಿದ್ದ, ರುರುಮೃಗ ಮತ್ತು ಸರ್ಪಗಳಿಂದ ಸಹಿತವಾಗಿದ್ದ, ಕಪಿಗಳಿಂದ ಸಮೂಹದಿಂದ ಸಹಿತವಾಗಿದ್ದಂತಹ, ದೊಡ್ಡ ದೊಡ್ಡ ಶಿಲಾತಳಗಳಿಂದ ಕೂಡಿದ್ದಂತಹ, ಕೃಷ್ಣಸಾರ ಮೃಗಗಳು ವರಾಹಗಳು ಮತ್ತು ರುರು ಮೃಗಗಳಿಂದ ಸೇವಿತವಾದಂತಹ, ವಿಚಿತ್ರವಾದ ನವಿಲುಗಳಿಂದ ನಿಬಿಡವಾಗಿದ್ದಂತಹ, ಜಲಪಾತದಿಂದ ಕೂಡಿದ್ದಂತಹ, ಆ ಮಹಾ ಶೃಂಗವನ್ನು ಎಲ್ಲರೂ ನೋಡುತ್ತಿರುವಂತೆಯೇ ವಾಸವಾನುಜನಾದ ಶೌರಿಯಾದ ಕೃಷ್ಣನು ಕಿತ್ತು ಗರುಡನ ಮೇಲೆ ಮಣಿಪರ್ವತವನ್ನು ಏರಿಸಿದನು.

ಉಪೇಂದ್ರಂ ಬಲದೇವಂ ಚ ವಾಸವಂ ಚ ಮಹಾಬಲಮ್ ।
ತಂ ಚ ರತ್ನೌಘಮತುಳಂ ಪರ್ವತಂ ಚ ಮಹಾಬಲಃ ।
ವರುಣಸ್ಯಾಮೃತಂ ದಿವ್ಯಂ ಛತ್ರಂ ಚಂದ್ರೋಪಮಂ ಶುಭಮ್ ॥೩೯॥

ಮಹಾಬಲನಾದ ಗರುಡನು ಮಹಾಬಲನಾದ ಕೃಷ್ಣನನ್ನೂ ಮಹಾಬಲನಾದ ಬಲರಾಮನನ್ನೂ ಆ ಅಸದೃಶವಾದ ರತ್ನರಾಶಿಯನ್ನೂ ಮಣಿಪರ್ವತವನ್ನೂ ಚಂದ್ರನಂತೆ ಶುಭ್ರವರ್ಣದಿಂದ ಕೂಡಿದ ದಿವ್ಯವಾದ ವರುಣನ ಅಮೃತ ಸ್ರಾವಿಯಾದ ಛತ್ರವನ್ನೂ ತನ್ನ ಹೆಗಲಿನ ಮೇಲೆ ಧರಿಸಿದನು.

ಸ್ವಪಕ್ಷಬಲವಿಕ್ಷೇಪೈರ್ಮಹಾದ್ರಿಶಿಖರೋಪಮೈಃ ।
ದಿಕ್ಷು ಸರ್ವಾಸು ಸಂರಾವಂ ಸ ಚಕ್ರೇ ಗರುಡೋ ವಹನ್ ॥೪೦॥

ಅವರೆಲ್ಲರನ್ನೂ ಹೊತ್ತುಕೊಂಡು ಹೋಗುತ್ತಾ ಗರುಡನು ದೊಡ್ಡ ಪರ್ವತದ ಶಿಖರಗಳಿಂತಿದ್ದ ತನ್ನ ರೆಕ್ಕೆಗಳ ಬಲಿಷ್ಠವಾದ ವಿಕ್ಷೇಪಗಳಿಂದ ಎಲ್ಲಾ ದಿಕ್ಕುಗಳಲ್ಲಿಯೂ ದೊಡ್ಡದಾದ ಶಬ್ದವನ್ನು ಉಂಟುಮಾಡುತ್ತಾ ಹೊರಟನು.

ಆರುಹನ್ ಪರ್ವತಾಗ್ರಾಣಿ ಪಾದಪಾಂಶ್ಚ ಸಮುತ್ಕ್ಷಿಪನ್ ।
ಸಂಜಹಾರ ಮಹಾಭ್ರಾಣಿ ವೈಶ್ವಾನರಪಥಂ ಗತಃ ॥೪೧॥

ಅವನು ಪರ್ವತ ಶಿಖರಗಳನ್ನು ಹತ್ತುತ್ತಾ ತನ್ನ ವೇಗದಿಂದ ವೃಕ್ಷಗಳನ್ನು ಉರುಳಿಸುತ್ತಾ ಮಹಾ ಮೇಘಗಳನ್ನು ಚದುರಿಸುತ್ತಾ ವೈಶ್ವಾನರ ಮಾರ್ಗವನ್ನು ತಲುಪಿದನು.

ಗ್ರಹನಕ್ಷತ್ರತಾರಾಣಾಂ ಸಪ್ತರ್ಷಿಗಣತೇಜಸಾಮ್ ।
ಪ್ರಭಾಜಾಲಮತಿಕ್ರಮ್ಯ ಚಂದ್ರಸೂರ್ಯಪಥಂ ಗತಃ ॥೪೨॥

ಗ್ರಹ ನಕ್ಷತ್ರ ತಾರೆಗಳನ್ನು ದಾಟಿ ತೇಜೋಮಯವಾದ ಸಪ್ತರ್ಷಿಗಳನ್ನು ದಾಟಿ ಪ್ರಭಾಜಾಲಗಳನ್ನು ದಾಟಿ ಸೂರ್ಯ ಚಂದ್ರ ಪಥವನ್ನು ಸೇರಿದನು.

ಮೇರೋಃ ಶಿಖರಮಾಸಾದ್ಯ ಮಧ್ಯಮಂ ಮಧುಸೂದನಃ ।
ದೇವಸ್ಥಾನಾನಿ ಸರ್ವಾಣಿ ದದರ್ಶ ಭರತರ್ಷಭ ॥೪೩॥

ಎಲೈ ಭರತಶ್ರೇಷ್ಠನೇ! ಆಗ ಮಧುಸೂದನನು ಮೇರುಪರ್ವತದ ಶಿಖರವನ್ನು ತಲುಪಿ ಅದರ ಮಧ್ಯಭಾಗದಲ್ಲಿದ್ದ ಎಲ್ಲಾ ದೇವತಾ ನಿಲಯಗಳನ್ನೂ ನೋಡಿದನು.

ವಿಶ್ವೇಷಾಂ ಮರುತಾಂ ಚೈವ ಸಾಧ್ಯಾನಾಂ ಚ ಯುಧಿಷ್ಠಿರ ।
ಭ್ರಾಜಮಾನಾನ್ಯತಿಕ್ರಮ್ಯ ಅಶ್ವಿನೋಶ್ಚ ಪರಂತಪ ॥೪೪॥

ಪ್ರಾಪ್ಯ ಪುಣ್ಯತಮಂ ಸ್ಥಾನಂ ದೇವಲೋಕಮರಿಂದಮಃ ।
ಶಕ್ರಸದ್ಮ ಸಮಾಸಾದ್ಯ ಚಾವರುಹ್ಯ ಜನಾರ್ದನಃ ॥೪೫॥

ಸೋಭಿವಾದ್ಯಾದಿತೇಃ ಪಾದಾವರ್ಚಿತಃ ಸರ್ವದೈವತೈಃ ।
ಬ್ರಹ್ಮದಕ್ಷಪುರೋಗೈಶ್ಚ ಪ್ರಜಾಪತಿಭಿರೇವ ಚ ॥೪೬॥

ಅದಿತೇಃ ಕುಂಡಲೇ ದಿವ್ಯೇ ದದಾವಥ ತದಾ ವಿಭುಃ ।
ರತ್ನಾನಿ ಚ ಪರಾರ್ಘ್ಯಾಣಿ ರಾಮೇಣ ಸಹ ಕೇಶವಃ ॥೪೭॥

ಎಲೈ ಯುಧಿಷ್ಠಿರನೇ! ಪರಂತಪನೇ! ವಿಶ್ವೇದೇವತೆಗಳ ಮರುತ್‌ಗಳ ಸಾಧ್ಯರ ಅಶ್ವಿನಿಗಳ ಪ್ರಕಾಶಮಾನವಾದ ಸ್ಥಾನಗಳನ್ನು ಅತಿಕ್ರಮಿಸಿ ಪುಣ್ಯತಮವಾದ ಪ್ರದೇಶಗಳ ದೇವಲೋಕಗಳನ್ನು ತಲುಪಿ ಅಲ್ಲಿ ಅರಿಂದಮನಾದ ಕೃಷ್ಣನು ಇಂದ್ರನ ಮನೆಯನ್ನು ತಲುಪಿ ಗರುಡನಿಂದ ಇಳಿದು ಎಲ್ಲಾ ದೇವತೆಗಳ ಜೊತೆಯಲ್ಲಿಯೂ ಬ್ರಹ್ಮ ದಕ್ಷಪ್ರಜಾಪತಿ ಮೊದಲಾದವರ ಜೊತೆಯಲ್ಲಿಯೂ ಅದಿತಿಗೆ ನಮಸ್ಕರಿಸಿ ವಿಭುವಾದ ಅವನು ಆಗ ಅದಿತಿಗೆ ದಿವ್ಯವಾದ ಕುಂಡಲಗಳನ್ನು ಕೊಟ್ಟನು. ಬಲರಾಮನ ಜೊತೆಯಲ್ಲಿ ಕೇಶವನು ಅನರ್ಘ್ಯವಾದ ರತ್ನಗಳನ್ನು ಅದಿತಿಗೆ ಕೊಟ್ಟನು.

ಪ್ರತಿಗೃಹ್ಯ ಚ ತತ್ ಸರ್ವಮದಿತಿರ್ವಾಸವಾನುಜಮ್ ।
ಪೂಜಯಾಮಾಸ ದಾಶಾರ್ಹಂ ರಾಮಂ ಚ ವಿಗತಜ್ವರಾ ॥೪೮॥

ಅದಿತಿಯು ಅವೆಲ್ಲವನ್ನೂ ಸ್ವೀಕರಿಸಿ ಮನಸ್ಸಿನ ಶೋಕವನ್ನು ತೊರೆದು ವಾಸವಾನುಜನಾದ ದಾಶಾರ್ಹನಾದ ಕೃಷ್ಣನನ್ನು ಮತ್ತು ರಾಮನನ್ನು ಸತ್ಕರಿಸಿದಳು.

ಶಚೀ ಮಹೇಂದ್ರಮಹಿಷೀ ಕೃಷ್ಣಸ್ಯ ಮಹಿಷೀಂ ತದಾ ।
ಸತ್ಯಭಾಮಾಂ ತು ಸಂಗೃಹ್ಯ ಅದಿತ್ಯೈ ವೈ ನ್ಯವೇದಯತ್ ॥೪೯॥

ಮಹೇಂದ್ರನ ರಾಣಿಯಾದ ಶಚೀದೇವಿಯು ಕೃಷ್ಣನ ರಾಣಿಯಾದ ಸತ್ಯಭಾಮೆಯನ್ನು ಕರೆದುಕೊಂಡು ಹೋಗಿ ಅದಿತಿಗೆ ನಿವೇದಿಸಿದಳು.

ಸಾ ತಸ್ಯಾಃ ಸತ್ಯಭಾಮಾಯಾಃ ಕೃಷ್ಣಪ್ರಿಯಚಿಕೀರ್ಷಯಾ ।
ವರಂ ಪ್ರಾದಾದ್ ದೇವಮಾತಾ ಸತ್ಯಾಯೈ ವಿಗತಜ್ವರಾ ॥೫೦॥

ಕೃಷ್ಣನಿಗೆ ಪ್ರಿಯವನ್ನು ಮಾಡುವ ಇಚ್ಛೆಯಿಂದ ದೇವಮಾತೆಯಾದ ಅದಿತಿಯು ಮನಸ್ಸಿನ ದುಗುಡಗಳನ್ನು ತೊರೆದು ಸತ್ಯಭಾಮೆಗೆ ವರವನ್ನು ನೀಡಿದಳು.

ಜರಾಂ ನ ಯಾಸ್ಯಸಿ ಶುಭೇ ಯಾವದ್ವೈ ಕೃಷ್ಣಮಾನುಷಮ್ ।
ಸರ್ವಗಂಧಗುಣೋಪೇತಾ ಭವಿಷ್ಯಸಿ ವರಾನನೇ ॥೫೧॥

ಶೋಭನಳಾದವಳೇ! ಕೃಷ್ಣನು ಭೂಮಿಯಲ್ಲಿರುವವರೆಗೆ ನೀನು ಮುಪ್ಪನ್ನು ಹೊಂದುವುದಿಲ್ಲ. ಸುಂದರಮುಖಿಯೇ, ನೀನು ಶ್ರೇಷ್ಠವಾದ ಗಂಧಗಳಿಂದ ಕೂಡಿರುವಳಾಗುತ್ತೀಯೆ.

ಭೀಷ್ಮಃ

ವಿಹೃತ್ಯ ಸತ್ಯಭಾಮಾ ವೈ ಪೌಲೋಮ್ಯಾ ಚ ಸುಮಧ್ಯಮಾ ।
ಶಚ್ಯಾ ಚ ಸಮನುಜ್ಞಾತಾ ಯಯೌ ಕೃಷ್ಣನಿವೇಶನಮ್ ॥೫೨॥

ಸುಂದರಿಯಾದ ಸತ್ಯಭಾಮೆಯು ಶಚೀದೇವಿಯ ಜೊತೆಯಲ್ಲಿ ವಿಹರಿಸಿ ಶಚಿಯ ಅನುಮತಿಯನ್ನು ಪಡೆದು ಕೃಷ್ಣನ ಮಂದಿರಕ್ಕೆ ಹಿಂದಿರುಗಿದಳು.

ಸಂಪೂಜ್ಯಮಾನಸ್ತ್ರಿದಶೈರ್ಮಹರ್ಷಿಗಣಸೇವಿತಃ ।
ದ್ವಾರಕಾಂ ಪ್ರಯಯೌ ಕೃಷ್ಣೋ ದೇವಲೋಕಾದರಿಂದಮಃ ॥೫೩॥

ಅರಿಂದಮನಾದ ಕೃಷ್ಣನು ದೇವತೆಗಳಿಂದ ಪೂಜಿತನಾಗಿ ಮಹರ್ಷಿಗಣ ಸೇವಿತನಾಗಿ ದೇವಲೋಕದಿಂದ ಹೊರಟು ಪುನಃ ದ್ವಾರಕೆಗೆ ಬಂದನು.

ಸೋಽವಪದ್ಯ ಮಹಾಬಾಹುರ್ದೀರ್ಘಮಧ್ವಾನಮಚ್ಯುತಃ ।
ವರ್ಧಮಾನಪುರದ್ವಾರಮಾಸಸಾದ ಪುರೋತ್ತಮಮ್ ॥೫೪॥

ಮಹಾಬಾಹುವಾದ ಅಚ್ಯುತನು ದೀರ್ಘವಾದ ಮಾರ್ಗವನ್ನು ಕ್ರಮಿಸಿ ಪುರಶ್ರೇಷ್ಠವಾದ ದ್ವಾರಕಾ ಪಟ್ಟಣದ ವರ್ಧಮಾನಪುರ ದ್ವಾರವನ್ನು (ಕೋಟೆಯ ಹೆಬ್ಬಾಗಿಲನ್ನು) ತಲುಪಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಪಂಚಾಶೋಧ್ಯಾಯಃ ॥

॥ ಅರ್ಘಾಭಿಹರಣಪರ್ವಣಿ ಏಕೋನವಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಐವತ್ತನೆಯ ಅಧ್ಯಾಯವು ಮುಗಿಯಿತು.

ಐವತ್ತೊಂದನೆಯ ಅಧ್ಯಾಯ

(ದ್ವಾರಕೆಯಲ್ಲಿ ರುಗ್ಮಿಣ್ಯಾದಿಗಳ ಪ್ರಾಸಾದಗಳ ವರ್ಣನೆ)

ಭೀಷ್ಮಃ

ತಾಂ ಪುರೀಂ ದ್ವಾರಕಾಂ ದೃಷ್ಟ್ವಾ ವಿಭುರ್ನಾರಾಯಣೋ ಹರಿಃ ।
ಹೃಷ್ಟಃ ಸರ್ವಾರ್ಥಸಂಪನ್ನಃ ಪ್ರವೇಷ್ಟುಮುಪಚಕ್ರಮೇ ॥೧॥

ವಿಭುವಾದ ನಾರಾಯಣನಾದ ಹರಿಯು ಸರ್ವ ಸಂಪದ್ಯುಕ್ತವಾದ ಆ ದ್ವಾರಕ ಪಟ್ಟಣವನ್ನು ನೋಡಿ ಸಂತೋಷದಿಂದ ಪ್ರವೇಶಿಸಲು ಉದ್ಯುಕ್ತನಾದನು.

ಸೋಽಪಶ್ಯದ್ ವೃಕ್ಷಷಂಡಾಂಶ್ಚ ರಮ್ಯಾನಾರಾಮಜಾನ್ ಬಹೂನ್ ।
ಸಮಂತತೋ ದ್ವಾರವತ್ಯಾಂ ನಾನಾಪುಷ್ಪಫಲಾಶ್ರಿತಾನ್ ॥೨॥

ಅವನು ದ್ವಾರಾವತಿಯ ಸುತ್ತಲೂ ಸುಂದರವಾದ ಉದ್ಯಾನಗಳಲ್ಲಿ ಬೆಳೆದಿರುವ ಫಲಪುಷ್ಪಭರಿತವಾದ ಅನೇಕ ವೃಕ್ಷಗಳನ್ನು ನೋಡಿದನು.

ಅರ್ಕಚಂದ್ರಪ್ರತೀಕಾಶೈರ್ಮೇರುಕೂಟನಿಭೈರ್ಗೃಹೈಃ ।
ದ್ವಾರಕಾಮಾಚಿತಾಂ ರಮ್ಯೈಃ ಸುಕೃತಾಂ ವಿಶ್ವಕರ್ಮಣಾ ॥೩॥

ಪದ್ಮಷಂಡಾಕುಲಾಭಿಶ್ಚ ಹಂಸಸೇವಿತವಾರಿಭಿಃ ।
ಗಂಗಾಸಿಂಧುಪ್ರಕಾಶಾಭಿಃ ಪರಿಖಾಭಿರಲಂಕೃತಾಮ್ ॥೪॥

ಪ್ರಾಕಾರೇಣಾಭ್ರವರ್ಣೇನ ಪಾಂಡರೇಣ ವಿರಾಜಿತಾ ।
ದಿವೋ ನೂರ್ಧ್ನಿ ನಿವಿಷ್ಟೇನ ದ್ಯೌರಿವಾಭ್ರಪರಿಚ್ಛದಾ ॥೫॥

ನಂದನಪ್ರತಿಮೈಶ್ಚಾಪಿ ಮಿಶ್ರಕಪ್ರತಿಮೈರ್ವನೈಃ ।
ತತ್ರಾಸೌ ವಿಹಿತಾ ಸಾಕ್ಷಾನ್ನಗರೀ ವಿಶ್ವಕರ್ಮಣಾ ॥೬॥

ಕಾಂಚನೈರ್ಮಣಿಸೋಪಾನೈರುಪೇತಾ ಜನಹರ್ಷಿಣೀ ।
ಗೀತಘೋಷಮಹಾಘೋಷೈಃ ಪ್ರಾಸಾದಗೃಹಚತ್ವರೈಃ ॥೭॥

ವಿಶ್ವಕರ್ಮನಿಂದ ರಚಿಸಲ್ಪಟ್ಟ ಸೂರ್ಯಚಂದ್ರರ ಪ್ರಕಾಶವುಳ್ಳ, ಮೇರು ಶೃಂಗಗಳಂತೆ ಶೋಭಿಸುತ್ತಿರುವ ಗೃಹಗಳಿಂದ ಸುಂದರವಾಗಿ ಪೂರ್ಣವಾಗಿ ತುಂಬಲ್ಪಟ್ಟ, ಆ ದ್ವಾರಕಾಪಟ್ಟಣವನ್ನು ಪದ್ಮರಥಗಳಿಂದ ತುಂಬಿದ ಹಂಸ ಸೇವಿತವಾದ ಜಲವುಳ್ಳ ಗಂಗೆಯಂತೆ ಸಿಂಧುವಿನಂತೆ ಶೋಭಿಸುವ, ಕಂದರಗಳಿಂದ ಅಲಂಕೃತವಾದಂತಹ ಶ್ವೇತವರ್ಣದ ಮೋಡದಂತೆ ಪ್ರಕಾಶಿಸುವ ಕೋಟೆಯ ಗೊಡೆಯಿಂದ ಕೂಡಿದಂತಹ, ತನ್ನ ಮೇಲೆ ಇರುವ ಬಿಳಿಯ ಮೋಡದಿಂದ ಸ್ವರ್ಗಲೋಕದ ಮೇಲಿಟ್ಟ ಬಿಳಿಯ ಮೋಡದ ಹೊದಿಕೆಯಂತಹದನ್ನುಳ್ಳ, ನಂದನವನದಂತಿರುವ ಅನೇಕ ವೃಕ್ಷಗಳ ಸಮೂಹದಿಂದ ಸುತ್ತುವರಿಯಲ್ಪಟ್ಟ, ಸುವರ್ಣಮಯವಾದ ಮತ್ತು ಮಣಿಮಯವಾದ ಸೋಪಾನಗಳಿಂದ ಕೂಡಿದಂತಹ, ಪ್ರಾಸಾದಗಳು ಗೃಹಗಳು ಮತ್ತು ಚತ್ವರಗಳಿಂದ ಕೂಡಿದಂತಹ ಸಂಗೀತಘೋಷದಿಂದಲೂ ವಾದ್ಯಘೋಷದಿಂದಲೂ ಕೂಡಿದ್ದಂತಹ ಸಕಲಜನ-ಮನೋಹರ್ಷದಾಯಕವಾದ ಆ ನಗರಿಯು ವಿಶ್ವಕರ್ಮನಿಂದ ಅಲ್ಲಿ ನಿರ್ಮಿಸಲ್ಪಟ್ಟಿದ್ದಿತು.

ತಸ್ಮಿನ್ ಪುರವರಶ್ರೇಷ್ಠೇ ದಾಶಾರ್ಹಾಣಾಂ ಯಶಸ್ವಿನಾಮ್ ।
ವೇಶ್ಮಾನಿ ಜಹೃಷೇ ದೃಷ್ಟ್ವಾ ಭಗವಾನ್ ಪಾಕಶಾಸನಃ ॥೮॥

ಪೂಜ್ಯನಾದ ಇಂದ್ರನೂ ಸಹ ಆ ಶ್ರೇಷ್ಠವಾದ ಪಟ್ಟಣದಲ್ಲಿ ಇದ್ದ ಕೀರ್ತಿಶಾಲಿಗಳಾದ ದಾಶಾರ್ಹರ ಗೃಹಗಳನ್ನು ನೋಡಿ ಸಂತೋಷಪಟ್ಟನು.

ಸಮುಚ್ಛ್ರಿತಪತಾಕಾನಿ ಪರಿಪ್ಲವನಿಭಾನಿ ಚ ।
ಕಾಂಚನಾಗ್ರಾಣಿ ಭಾಸ್ವಂತಿ ಮೇರುಕೂಟನಿಭಾನಿ ಚ ॥೯॥

ಆ ಗೃಹಗಳು ಉನ್ನತವಾದ ಮೋಡದಂತೆ ಶೋಭಿಸುವ ಪತಾಕೆಗಳಿಂದಲೂ ಮೇರುಕೂಟದಂತೆ ಶೋಭಿಸುವ ಎತ್ತರವಾದ ಭಾಗಗಳಿಂದಲೂ ಪ್ರಕಾಶಮಾನವಾಗಿದ್ದವು.

ಸುಧಾಪಾಂಡರಶೃಂಗೈಶ್ಚ ಶಾತಕುಂಭಪರಿಚ್ಛದೈಃ ।
ರತ್ನಾನುಗುಹಾಶೃಂಗೈಃ ಸರ್ವರತ್ನವಿಭೂಷಿತೈಃ ॥೧೦॥

ಸಹಮ್ಯೈ೯ಃ ಸಾರ್ಧಚಂದ್ರೈಶ್ಚ ಸನಿರ್ಯೂಹೈಃ ಸದಂತುರೈಃ ।
ಸಯಂತ್ರಗೃಹಸಂಬಾಧೈಃ ಸಧಾತುಭಿರಿವಾದ್ರಿಭಿಃ ॥೧೧॥

ಮಣಿಕಾಂಚನಭೌಮೈಶ್ಚ ಸುಧಾಮೃಷ್ಟತಳೈಸ್ತಥಾ ।
ಜಾಂಬೂನದಮಯೈರ್ದ್ವಾರೈರ್ವೈಡೂರ್ಯವಿಕೃತಾರ್ಗಳೈಃ ॥೧೨॥

ಸರ್ವರ್ತುಸುಖಸಂಸ್ಪರ್ಶೈರ್ಮಹಾರ್ಹಾಧನಪರಿಚ್ಛದೈಃ ।
ರಮ್ಯಮಾನಗೃಹಶೃಂಗೈರ್ವಿಚಿತ್ರೈರಿವ ಪರ್ವತೈಃ ॥೧೩॥

ಪಂಚವರ್ಣಸುವರ್ಣೈಶ್ಚ ಪುಷ್ಪವೃಷ್ಟಿಸಮಪ್ರಭೈಃ ।
ತುಲ್ಯಪರ್ಜನ್ಯನಿರ್ಘೋಷೈರ್ನಾನಾವರ್ಣೈರಿವಾಂಬುದೈಃ ॥೧೪॥

ಮಹೇಂದ್ರಶಿಖರಪ್ರಖ್ಯೈರ್ವಿಹಿತೈರ್ವಿಶ್ವಕರ್ಮಣಾ ।
ಆಲಿಖದ್ಭಿರಿವಾಕಾಶಮತಿಚಂದ್ರಾರ್ಕಭಾಸ್ವರೈಃ ॥೧೫॥

ಅಮೃತದಂತೆ ಬಿಳಿಯಾದ ಶೃಂಗಗಳಿಂದಲೂ, ಸುವರ್ಣಮಯವಾದ ಛಾವಣಿಗಳಿಂದಲೂ, ರತ್ನ ಶಿಖರ ಮತ್ತು ಗುಹಾ, ಶೃಂಗಗಳಿಂದಲೂ, ಸರ್ವರತ್ನಗಳಿಂದ ವಿಭೂಷಿತವಾಗಿದ್ದಂತಹ ಅರ್ಧಚಂದ್ರಾಕಾರವಾಗಿ ನಿರ್ಮಿಸಿದ ಅನೇಕ ಅಂತಸ್ತಿನ ಗೃಹಗಳಿಂದಲೂ, ಧೂಪದ ಹೊಗೆಗಳಿಂದಲೂ, ಉನ್ನತವಾದ ಗಜಗಳಿಂದಕೂಡಿದ ಧಾತುವಿಶ್ರಿತವಾದ ಪರ್ವತಗಳಂತೆ ಶೋಭಿಸುವ ಯಂತ್ರಸಹಿತವಾದ ನಿಬಿಡವಾದ ಗೃಹಗಳಿಂದಲೂ, ಮಣಿಗಳು ಸುವರ್ಣ ಮತ್ತು ಭೂಮಿಯ ರತ್ನಗಳಿಂದ ಚೆನ್ನಾಗಿ ಸಾರಿಸಿದ ತಳಪ್ರದೇಶಗಳಿಂದಲೂ, ಸುವರ್ಣಮಯವಾದ ದ್ವಾರಗಳಿಂದಲೂ, ವೈಡೂರ್ಯದಿಂದ ಮಾಡಿದ ಅರ್ಗಲಗಳಿಂದಲೂ, ಎಲ್ಲಾ ಋತುಗಳಲ್ಲಿಯೂ ಸುಖಸ್ಪರ್ಶವನ್ನು ಕೊಡುವ ಅನರ್ಘ್ಯವಾದ ಪರಿಚ್ಛದ ಸಾಮಗ್ರಿಗಳಿಂದಲೂ, ವಿಚಿತ್ರವಾದ ಪರ್ವತಗಳಂತೆ ಕಾಣುವ ಸುಂದರವಾದ ಗೃಹಶೃಂಗಗಳಿಂದಲೂ, ಪುಷ್ಪವೃಷ್ಟಿಗೆ ಸಮಾನವಾದ ಪ್ರಭೆಯುಳ್ಳ ಪಂಚವರ್ಣದ ಸುವರ್ಣಗಳಿಂದಲೂ, ಪರ್ಜನ್ಯ ಘೋಷದಿಂದ ಕೂಡಿದ ನಾನಾವರ್ಣಗಳಿಂದ ಕೂಡಿದ ಮೇಘಗಳಂತೆ ಶೋಭಿಸುವ, ವಿಶ್ವಕರ್ಮನಿರ್ಮಿತವಾದ, ಮಹೇಂದ್ರ ಪರ್ವತದ ಶಿಖರದಂತಿರುವ ಆಕಾಶವನ್ನೇ,

ಮುಟ್ಟುವಂತೆ ತೋರುವ, ಸೂರ್ಯ ಚಂದ್ರ ಸಮಾನಕಾಂತಿಯುಳ್ಳ ಗೃಹಗಳಿಂದ, ಆ ಪಟ್ಟಣವು ಪೂರ್ಣವಾಗಿದ್ದಿತು.

ತೈರ್ದಾಶಾರ್ಹಮಹಾಭಾಗೈರ್ಬಭಾಸೇ ಭವನಂ ಹ್ರದೈಃ ।
ಚಂಡನಾಗಾಕುಲೈಘೋರ್ರೈರ್ಹ್ರದೈರ್ಭೋಗವತೀ ಯಥಾ ॥೧೬॥

ಮಹಾನುಭಾವರಾದ ದಾಶಾರ್ಹರ ಆ ಭವನಗಳಿಗೆ ಸಮೀಪದಲ್ಲಿ ಇದ್ದ ಸರೋವರಗಳು ಅನೇಕ ಸರ್ಪಗಳಿಂದ ತುಂಬಿದ್ದು ಸರ್ಪಗಳಿಂದ ತುಂಬಿದ್ದ ಘೋರವಾದ ಭೋಗವತಿಪಟ್ಟಣದಂತೆ ಇದ್ದಿತು.

ಕೃಷ್ಣಧ್ವಜೋಪವಾಹ್ಯೈಶ್ಚ ದಾಶಾರ್ಹಾಯುಧರೋಹಿತೈಃ ।
ವೃಷ್ಣಿಮತ್ತಮಯೂರೈಶ್ಚ ಸ್ತ್ರೀಸಹಸ್ರಪ್ರಜಾಕುಲೈಃ ॥೧೭॥

ವಾಸುದೇವೇಂದ್ರಪರ್ಜನ್ಯೈರ್ಗೃಹಮೇಧೈರಲಂಕೃತಾ ।
ದದೃಶೇ ದ್ವಾರಕಾऽತೀವ ಮೇಘೈರ್ದ್ಯೌರಿವ ಸಂವೃತಾ ॥೧೮॥

ಕೃಷ್ಣನೆಂಬ ಉನ್ನತ ಧ್ವಜವನ್ನು ಹೊತ್ತ ಆನೆಗಳಿಂದಲೂ, ದಾಶಾರ್ಹರೆಂಬ ಆಯುಧಧಾರಿಗಳಾದ ಅಶ್ವಗಳಿಂದಲೂ, ವೃಷ್ಣಿಗಳೆಂಬ ಮತ್ತಮಯೂರಗಳಿಂದಲೂ ಸ್ತ್ರೀಸಹಸ್ರಪ್ರಜೆಗಳಿಂದಲೂ, ವಾಸುದೇವ ಇಂದ್ರ ಪರ್ಜನ್ಯರ ಅಲಂಕೃತವಾದ ಗೃಹ ವಸ್ತುಗಳಿಂದಲೂ, ಆ ದ್ವಾರಕಾ ಪಟ್ಟಣವು ಮೇಘಗಳಿಂದ ಆಚ್ಛಾದಿತವಾದ ಆಕಾಶದಂತೆ ಶೋಭಿಸಿತು.

ಸಾಕ್ಷಾದ್ಭಗವತೋ ವೇಶ್ಮ ವಿಹಿತಂ ವಿಶ್ವಕರ್ಮಣಾ ।
ದದೃಶುರ್ದೇವದೇವಸ್ಯ ಚತುರ್ಯೋಜನಮಾಯತಮ್ ॥೧೯॥

ವಿಶ್ವಕರ್ಮನಿಂದ ಸಾಕ್ಷಾತ್ ನಿರ್ಮಿಸಲ್ಪಟ್ಟ ಚರ್ತುಯೋಜನ ವಿಸ್ತಾರವಾದ ದೇವದೇವನಾದ ಭಗವಂತನ ಗೃಹವನ್ನು ಅಲ್ಲಿನೋಡಿದರು.

ತಾವದೇವ ಚ ವಿಸ್ತೀರ್ಣಮಪ್ರಮೇಯಂ ಮಹಾಧನೈಃ ।
ಪ್ರಾಸಾದವರಸಂಪನ್ನಂ ಯುಕ್ತಂ ಜಗತಿಪರ್ವತೈಃ ॥೨೦॥

ಯಂ ಚಕಾರ ಮಹಾಬಾಹುಸ್ತ್ವಷ್ಟಾ ವಾಸವಚೋದಿತಃ ।
ಪ್ರಾಸಾದಂ ಹೇಮನಾಭಸ್ಯ ಸರ್ವತೋ ಯೋಜನಾಯತಮ್ ॥೨೧॥

ಮೇರೋರಿವ ಗಿರೇಃ ಶೃಂಗಮುಚ್ಛ್ರಿತಂ ಕಾಂಚನಾಯುತಮ್ ।
ರುಗ್ಮಿಣ್ಯಾಃ ಪ್ರವರೋ ವಾಸೋ ನಿರ್ಮಿತಃ ಸುಮಹಾತ್ಮನಾ ॥೨೨॥

ಸತ್ಯಭಾಮಾ ಪುನರ್ಯೇಶ್ಮ ಸದಾ ವಸತಿ ಪಾಂಡರಮ್ ।
ವಿಚಿತ್ರಮಣಿಸೋಪಾನಂ ಯಂ ವಿದುಃ ಶೀತವಾನಿತಿ ॥೨೩॥

ವಿಮಲಾದಿತ್ಯವರ್ಣಾಭಿಃ ಪತಾಕಾಭಿರಲಂಕೃತಮ್ ।
ವ್ಯಕ್ತಬದ್ಧಂ ವನೋದ್ದೇಶೈಃ ಚತುರ್ದಿಶಿ ಮಹಾಧ್ವಜಮ್ ॥೨೪॥

ಅಷ್ಟೇ ವಿಸ್ತಾರವಾದ, ಮಹಾಧನಗಳಿಂದ ಕೂಡಿ ತಿಳಿಯಲು ಅಸಾಧ್ಯವಾದ, ಮಣಿಮಯಪರ್ವತಗಳಿಂದ ಯುಕ್ತವಾದ ಅನೇಕ ಪ್ರಾಸಾದಗಳಿಂದ ಕೂಡಿದ, ಯಾವ ಪ್ರಾಸಾದವನ್ನು ಇಂದ್ರನ ಅಪ್ಪಣೆಯಂತೆ ಮಹಾಬಾಹುವಾದ ತ್ವಷ್ಟೃವು ತಾನೇ ನಿರ್ಮಿಸಿದನೋ, ಅಂತಹ ಪದ್ಮನಾಭನ ಮನೆಯ ಸುತ್ತಲೂ ಸುವರ್ಣಮಯವಾದ ಮೇರು(ಸಮೀಪದಲ್ಲಿ) ಪರ್ವತದಂತೆ ಉನ್ನತವಾದ ಸುವರ್ಣಮಯವಾದ ರುಗ್ಮಿಣಿಯ ಶ್ರೇಷ್ಠವಾದ ವಾಸಸ್ಥಾನವು ಅದೇ ಮಹಾತ್ಮನಿಂದ ನಿರ್ಮಿಸಲ್ಪಟ್ಟಿತು. ಸತ್ಯಭಾಮೆಯಾದರೂ ಶೀತವಾನ್ ಎಂಬ ಹೆಸರಿನಿಂದ ಪ್ರಖ್ಯಾತವಾದ ಶ್ವೇತವರ್ಣದಿಂದ ಕೂಡಿದ, ವಿಚಿತ್ರಮಣಿಮಯವಾದ ಸೋಪಾನವನ್ನು ಹೊಂದಿದ, ಸ್ವಚ್ಛವಾದ ಸೂರ್ಯನ ವರ್ಣಗಳಂತೆ ಶೋಭಿಸುವ ಪತಾಕೆಗಳಿಂದ ಅಲಂಕೃತವಾದ, ನಾಲ್ಕು ದಿಕ್ಕುಗಳಲ್ಲಿಯೂ ಸ್ಪಷ್ಟವಾದ ವನಗಳಿಂದ ಕೂಡಿರುವ, ಮಹಾಧ್ವಜವುಳ್ಳ ಗೃಹದಲ್ಲಿ ವಾಸಿಸುತ್ತಾಳೆ.

ಸ ಚ ಪ್ರಾಸಾದಮುಖ್ಯೋಽತ್ರ ಜಾಂಬವತ್ಯಾ ವಿಭೂಷಿತಃ ।
ಪ್ರಭಯಾ ಭೂಷಣೈಶ್ಚಿತ್ರೈಃ ತ್ರೈಲೋಕ್ಯಮಿವ ಭಾಸಯನ್ ॥೨೫॥

ಜಾಂಬವತಿಯ ಶ್ರೇಷ್ಠವಾದ ಪ್ರಾಸಾದವು ಪ್ರಭೆಯಿಂದಲೂ ವಿಚಿತ್ರವಾದ ಭೂಷಣಗಳಿಂದಲೂ ವಿಭೂಷಿತವಾಗಿ ಮೂರು ಲೋಕಗಳನ್ನೂ ಪ್ರಕಾಶಿಸುವಂತೆ ಹೊಳೆಯುತ್ತಿದ್ದಿತು.

ಯಸ್ತು ಪಾಂಡರವರ್ಣಾಭಸ್ತಯೋರಂತರಮಾಶ್ರಿತಃ ।
ವಿಶ್ವಕರ್ಮಾಕರೋದೇನಂ ಕೈಲಾಸಶಿಖರೋಪಮಮ್ ॥೨೬॥

ಜಾಂಬೂನದಪ್ರದೀಪ್ತಾಗ್ರಃ ಪ್ರದೀಪ್ತಜ್ವಲನೋಪಮಃ ।
ಸಾಗರಪ್ರತಿಮೋಽತಿಷ್ಠನ್ಮೇರುರಿತ್ಯಭಿವಿಶ್ರುತಃ ॥೨೭॥

ತಸ್ಮಿನ್ ಗಾಂಧಾರರಾಜಸ್ಯ ದುಹಿತಾ ಕುಲಪಾವನೀ ।
ಸುಕೇಶೀ ನಾಮ ವಿಖ್ಯಾತಾ ಕೇಶವೇನ ನಿವೇಶಿತಾ ॥೨೮॥

ಅವೆರಡರ ಮಧ್ಯದಲ್ಲಿರುವ, ಕೈಲಾಸಶಿಖರದಂತಿರುವ, ಶ್ವೇತವರ್ಣದಿಂದ ಕೂಡಿದ, ಸುವರ್ಣಮಯವಾದ ಅಗ್ರಭಾಗವನ್ನು ಹೊಂದಿರುವ, ಜ್ವಲಿಸುವ ಅಗ್ನಿಯ ಕಾಂತಿಯನ್ನು ಹೊಂದಿರುವ, ಸಾಗರದಂತೆ ವಿಸ್ತಾರವಾದ ಮೇರು, ಎಂಬ ಹೆಸರಿನಿಂದ ಪ್ರಖ್ಯಾತವಾದ, ವಿಶ್ವಕರ್ಮನಿಂದ ರಚಿತವಾದ ಗೃಹವು ಯಾವುದು ಇದೆಯೋ ಅದರಲ್ಲಿ ಕೇಶವನು ಕುಲಪಾವನೆಯಾದ ಗಂಧಾರರಾಜನ ಮಗಳಾದ ಸುಕೇಶೀ ಎಂಬ ಹೆಸರಿನಿಂದ ಪ್ರಖ್ಯಾತಳಾದ ತನ್ನ ಪತ್ನಿಯನ್ನು ಇರಿಸಿದ್ದನು.

ಪದ್ಮಕೂಟ ಇತಿ ಖ್ಯಾತಃ ಪದ್ಮವರ್ಣೋ ಮಹಾಪ್ರಭಃ ।
ಸುಪ್ರಭಾಯಾ ಮಹಾಬಾಹೋ ಆವಾಸಃ ಪರಮೋಚ್ಚ್ರಿತಃ ॥೨೯॥

ಎಲೈ ಮಹಾಬಾಹುವೇ! ಪದ್ಮಕಾಂತಿಯನ್ನುಳ್ಳ ಮಹಾಪ್ರಭೆಯನ್ನುಳ್ಳ ಅತ್ಯಂತ ಎತ್ತರವಾದ ಪದ್ಮಕೂಟ ಎಂಬ ಹೆಸರಿನ ಗೃಹವು ಸುಪ್ರಭೆಯ ಆವಾಸಸ್ಥಾನವಾಗಿದ್ದಿತು.

ಯಸ್ತು ಪಾಂಡರವರ್ಣಾಭಸ್ತಯೋರಂತರಮಾಶ್ರಿತಃ ।
ಯಸ್ತು ಸೂರ್ಯಪ್ರಭೋ ನಾಮ ಪ್ರಾಸಾದವರ ಉಚ್ಯತೇ ।
ಲಕ್ಷಣಾಯಾಃ ಕುರುಶ್ರೇಷ್ಠ ಸ ದತ್ತಃ ಶಾರ್ಙ್ಗಧನ್ವನಾ ॥೩೦॥

ಕುರುಶ್ರೇಷ್ಠನೇ! ಅವೆರಡರ ಮಧ್ಯದಲ್ಲಿರುವ ಶ್ವೇತವರ್ಣದಿಂದ ಕೂಡಿದ ಸೂರ್ಯಪ್ರಭಾ ಎಂಬ ಹೆಸರಿನ ಶ್ರೇಷ್ಠವಾದ ಪ್ರಾಸಾದವು ಶಾರ್ಙ್ಗಧಾರಿಯಾದ ಕೃಷ್ಣನಿಂದ ಲಕ್ಷಣೆಗೆ ಕೊಡಲ್ಪಟ್ಟಿತು.

ವೈಡೂರ್ಯವರವರ್ಣಾಭಃ ಪ್ರಾಸಾದೋ ಹರಿತಪ್ರಭಃ ।
ಸೇತುಜಾಲಾಭಿರತ್ಯೈವ ತತ್ಯೈವ ಚ ನಿವೇಶಿತಾ ॥೩೧॥

ಯಂ ವಿದುಃ ಸರ್ವಭೂತಾನಿ ಹರಿರಿತ್ಯೇವ ಭಾರತ ।
ಸ ವಾಸೋ ಮಿತ್ರವಿಂದಾಯಾ ದೇವರ್ಷಿಗಣಪೂಜಿತಃ ।
ಮಹಿಷ್ಯಾ ವಾಸುದೇವಸ್ಯ ಭೂಷಣಂ ಸರ್ವವೇಶ್ಮನಾಮ್ ॥೩೨॥

ಶ್ರೇಷ್ಠವಾದ ವೈಡೂರ್ಯದ ಕಾಂತಿಯನ್ನು ಹೊಂದಿ ಹರಿತವರ್ಣೋಪೇತವಾಗಿದ್ದ ಶ್ವೇತವರ್ಣದ ಜಾಲಕಗಳಿಂದ ಸುತ್ತಲೂ ಪೂರ್ಣವಾಗಿದ್ದಾಗಿ ಹರಿ ಎಂಬ ಹೆಸರಿನಿಂದ ಪ್ರಖ್ಯಾತವಾದ, ದೇವರ್ಷಿಪೂಜಿತವಾದ ವಾಸಸ್ಥಾನವನ್ನು ಮಿತ್ರವಿಂದೆಯ ಗೃಹವೆಂದು ಹೇಳುತ್ತಾರೆ. ವಾಸುದೇವನ ಮಹಿಷಿಯಾದ ಮಿತ್ರವಿಂದೆಯ ಆ ಗೃಹವು ಎಲ್ಲಾ ಗೃಹಗಳಿಗೂ ಭೂಷಣಪ್ರಾಯವಾಗಿದೆ.

ಯಸ್ತು ಪ್ರಾಸಾದಮುಖ್ಯೋಽತ್ರ ವಿಹಿತಃ ಸರ್ವಶಿಲ್ಪಿಭಿಃ ।
ಅತೀವ ರಮ್ಯಃ ಸೋಽಪ್ಯತ್ರ ಪ್ರಹಸನ್ನಿವ ತಿಷ್ಠತಿ ॥೩೩॥

ಸುದತ್ತಾಯಾಃ ಸುವಾಸಸ್ತು ಪೂಜಿತಃ ಸರ್ವಶಿಲ್ಪಿಭಿಃ ।
ಮಹಿಷ್ಯಾ ವಾಸುದೇವಸ್ಯ ಕೇತುಮಾನಿತಿ ವಿಶ್ರುತಃ ॥೩೪॥

ಎಲ್ಲಾ ಶಿಲ್ಪಿಗಳಿಂದಲೂ ನಿರ್ಮಿಸಲ್ಪಟ್ಟ ಅತ್ಯಂತ ಸುಂದರವಾದ ಮಂದಹಾಸವನ್ನು ಬೀರುತ್ತಿರುವಂತೆ ಕಾಣುವ ಶ್ರೇಷ್ಠವಾದ ಪ್ರಾಸಾದವು ಕೇತುಮಾನ್ ಎಂಬ ಹೆಸರಿನಿಂದ ವಿಖ್ಯಾತವಾಗಿದ್ದಾಗಿ ಸರ್ವ ಶಿಲ್ಪಿಗಳಿಂದ ಪೂಜಿತವಾಗಿದ್ದಾಗಿ ವಾಸುದೇವನ ಮಹಿಷಿಯಾದ ಸುದತ್ತೆಯ ಅವಾಸಸ್ಥಾನವಾಗಿದೆ.

ಪ್ರಾಸಾದೋ ವಿರಜೋ ನಾಮ ವಿರಜಸ್ಕೋ ಮಹಾತ್ಮನಃ ।
ಉಪಸ್ಥಾನಗೃಹಂ ತಾತ ಕೇಶವಸ್ಯ ಮಹಾತ್ಮನಃ ॥೩೫॥

ಯಸ್ತು ಪ್ರಾಸಾದಮುಖ್ಯೋಽತ್ರ ಯಂ ತ್ವಷ್ಟಾ ವ್ಯದಧಾತ್ ಸ್ವಯಂ ।
ಯೋಜನಾಯತವಿಷ್ಕಂಭಂ ಸರ್ವರತ್ನಮಯಂ ವಿಭೋಃ ॥೩೬॥

ತೇಷಾಂ ತು ವಿಹಿತಾಃ ಸರ್ವೇ ರುಗ್ಮದಂಡಾಃ ಪತಾಕಿನಃ ।
ಸದನೇ ವಾಸುದೇವಸ್ಯ ಮಾರ್ಗಸಂಜನನಾ ಧ್ವಜಾಃ ।
ಘಂಟಾಜಾಲಾನಿ ತತ್ರೈವ ಸರ್ವೇಷಾಂ ಚ ನಿವೇಶಿತಾಃ ॥೩೭॥

ಪ್ರೀತಿಪಾತ್ರನೇ! ವಿರಜಾ ಎಂಬ ಆ ಶ್ರೇಷ್ಠವಾದ ಪ್ರಾಸಾದವನ್ನು ತ್ವಷ್ಟೃವು ಒಂದು ಯೋಜನ ವಿಸ್ತಾರ ಉಳ್ಳದ್ದನ್ನಾಗಿ ಮಾಡಿ ಪ್ರಭುವಿನ ಸಲುವಾಗಿ ಸರ್ವ ರತ್ನ ಮಯವನ್ನಾಗಿ ಮಾಡಿ ತಾನೇ ನಿರ್ಮಿಸಿದನು. ಅದು ಕೃಷ್ಣನ ಪೂಜಾಗೃಹ. ಆ ಎಲ್ಲಾ ಪ್ರಾಸಾದಗಳಲ್ಲಿಯೂ ರುಗ್ಮದಂಡಗಳು ಮತ್ತು ಪತಾಕೆಗಳು ಇದ್ದುವಾಸುದೇವನ ಗೃಹದ ಮೇಲೆ ಮಾರ್ಗ ಸೂಚಿಯಂತಿರುವ ಧ್ವಜಗಳು ಇವೆ. ಆ ಎಲ್ಲಾ ಪ್ರಾಸಾದಗಳಲ್ಲಿಯೂ ಅನೇಕಾನೇಕ ಘಂಟೆಗಳು ಇಡಲ್ಪಟ್ಟಿವೆ.

ಆಹೃತ್ಯ ಯದುಸಿಂಹೇನ ವೈಜಯಂತೋಽಚಲೋ ಮಹಾನ್ ॥೩೮॥

ಯದುಸಿಂಹನಾದ ಕೃಷ್ಣನು ದೊಡ್ಡದಾದ ವೈಜಯಂತ ಪರ್ವತವನ್ನು ತಂದು ಅಲ್ಲಿ ಇರಿಸಿದ್ದಾನೆ.

ಹಂಸಕೂಟಸ್ಯ ಯಚ್ಛೃಂಗಂ ಇಂದ್ರದ್ಯುಮ್ನಸರೋ ಮಹತ್ ।
ಷಷ್ಟಿತಾಳಸಮುತ್ಸೇಧಮರ್ಧಯೋಜನವಿಸ್ತೃತಮ್ ॥೩೯॥

ಸಕಿನ್ನರಮಹಾನಾದಂ ತದಪ್ಯಮಿತತೇಜಸಃ ।
ಪಶ್ಯತಾಂ ಸರ್ವಭೂತಾನಾಂ ತ್ರಿಷು ಲೋಕೇಷು ವಿಶ್ರುತಮ್ ॥೪೦॥

ಹಂಸಕೂಡ ಪರ್ವತದ ಅರವತ್ತು ತಾಳ ಎತ್ತರ ಮತ್ತು ಅರ್ಧಯೋಜನ ವಿಸ್ತಾರವಾದ ಶೃಂಗವನ್ನೂ, ಅದರ ಜೊತೆಯಲ್ಲಿರುವ ಕಿನ್ನರರ ಮಹಾನಾದದಿಂದ ತುಂಬಿದ ಇಂದ್ರದ್ಯುಮ್ನ ಸರೋವರವನ್ನೂ ತಂದು ಅಲ್ಲಿ ಸ್ಥಾಪಿಸಿದ್ದಾನೆ. ಮೂರು ಲೋಕದಲ್ಲೂ ವಿಶ್ರುತವಾದ ಅವುಗಳನ್ನು ನೋಡುವ ಜನರಿಗೆ ಅವು ಸಂತೋಷವನ್ನು ಉಂಟುಮಾಡುತ್ತವೆ.

ಆದಿತ್ಯಪಥಗಂ ಯತ್ ತನ್ಮೇರೋಃ ಶಿಖಿರಮುತ್ತಮಮ್ ।
ಜಾಂಬೂನದಮಯಂ ದಿವ್ಯಂ ತ್ರಿಷು ಲೋಕೇಷು ವಿಶ್ರುತಮ್ ॥೪೧॥

ತದಪ್ಯುತ್ಪಾಟ್ಯ ಕೃಷ್ಣೇನ ಸ್ವಂ ನಿವೇಶನಮಾಹೃತಮ್ ।
ಭ್ರಾಜಮಾನಂ ಪುರಾ ತತ್ರ ಸರ್ವೌಷಧಿವಿದೀಪಿತಮ್ ॥೪೨॥

ಆದಿತ್ಯಮಾರ್ಗದಲ್ಲಿರುವ ಸುವರ್ಣಮಯವಾದ ದಿವ್ಯವಾದ ಮೂರು ಲೋಕದಲ್ಲೂ ಪ್ರಸಿದ್ಧವಾದ ಮೇರುಪರ್ವತದ ಶಿಖರವನ್ನು ಕಿತ್ತು ಕೃಷ್ಣನು ತನ್ನ ನಿವೇಶನದ ಬಳಿ ಸ್ಥಾಪಿಸಿದ್ದಾನೆ. ಅದು ಮೊದಲು ಮೇರುಪರ್ವತದಲ್ಲಿ ಸರ್ವ ಔಷದಿಗಳಿಂದಲೂ ಪ್ರಕಾಶಮಾನವಾಗಿ ಶೋಭಿಸುತ್ತಿದ್ದಿತು.

ಯಮಿಂದ್ರಭವನಾಚ್ಚೌರಿರಾಜಹಾರ ಪರಂತಪಃ ।
ಪಾರಿಜಾತಃ ಸ ತತ್ರೈವ ಕೇಶವೇನ ನಿವೇಶಿತಃ ॥೪೩॥

ಪರಂತಪನಾದ ಶೌರಿಯು ಇಂದ್ರಭವನದಿಂದ ಯಾವ ಪಾರಿಜಾತವೃಕ್ಷವನ್ನು ತಂದನೋ ಅದೂ ಸಹ ಅಲ್ಲಿಯೇ ಇಡಲ್ಪಟ್ಟಿದ್ದಿತು.

ಪಂಚಹಸ್ತಶತೈರ್ಯುಕ್ತೋ ವಿಮಾನೈಶ್ಚ ಹಿರಣ್ಮಯೈಃ ।
ವಿಹಿತಾ ವಾಸುದೇವೇನ ಬ್ರಹ್ಮಸ್ಥಲಮಹಾದ್ರುಮಾಃ ॥೪೪॥

ವಾಸುದೇವನು ಐನೂರು ಹಸ್ತ ವಿಸ್ತಾರವಾದ ಸುವರ್ಣಮಯವಾದ ವಿಮಾನಗಳಿಂದ ಶೋಭಿಸುವ ಬ್ರಹ್ಮಸ್ಥಳ ಮಹಾದ್ರುಮಗಳನ್ನು ಅಲ್ಲಿ ಇರಿಸಿದ್ದಾನೆ.

ಸಾಲತಾಲಾಶ್ವಕರ್ಣಾಶ್ಚ ಶತಶಾಖಾಶ್ಚ ರೋಹಿಣಾಃ ।
ಭಲ್ಲಾತಕಕಪಿತ್ಥಾಶ್ಚ ಇಂದ್ರವೃಕ್ಷಾಶ್ಚ ಚಂಪಕಾಃ ।
ಖರ್ಜೂರಾಮ್ರಾತಕಾಶ್ಚೈವ ಸಮಂತಾತ್ ಪರಿರೋಪಿತಾಃ ॥೪೫॥

ಸಾಲ ತಾಲ ಅಶ್ವಕರ್ಣ ಶತಶಾಖವುಳ್ಳ ವಟವೃಕ್ಷಗಳು. ಭಲ್ಲಾತಕ ಕಪಿತ್ಥ ಇಂದ್ರವೃಕ್ಷ ಚಂಪಕ ಖರ್ಜೂರ ಆಮ್ರಾತಕ ಈ ಎಲ್ಲಾ ವೃಕ್ಷಗಳು ಸುತ್ತಲೂ ನೆಡಲ್ಪಟ್ಟಿವೆ.

ಪದ್ಮಾಕುಲಜಲೋಪೇತಾ ರಕ್ತಸೌಗಂಧಿಕೋತ್ಪಲಾಃ ।
ಮಣಿಮೌಕ್ತಾತ್ಮವಾಲೂಕಾಃ ಪುಷ್ಕರಿಣ್ಯಃ ಸರಾಂಸಿ ಚ ॥೪೬॥

ಅಲ್ಲಿನ ಸರೋವರಗಳೆಲ್ಲವೂ ಪದ್ಮಗಳಿಂದ ಅಲುಗಾಡುವ ನೀರಿನಿಂದ ಕೂಡಿದ್ದು ರಕ್ತಸೌಂಗಧಿಕ ಮತ್ತು ಉತ್ಪಲಗಳಿಂದ ಕೂಡಿದ್ದು ಮಣಿಮಯವಾದ ಮತ್ತು ಮುಕ್ತಮಯವಾದ ಮರಳುಗಳನ್ನು ಹೊಂದಿರುವವುಗಳಾಗಿವೆ.

ಯೇ ಚ ಹೈಮವತಾ ವೃಕ್ಷಾ ಯೇ ಚ ನಂದನಜಾಸ್ತಥಾ ।
ಆಹೃತ್ಯ ಯದುಸಿಂಹೇನ ತೇಪಿ ತತ್ರ ನಿವೇಶಿತಾಃ ॥೪೭॥

ಯದುಸಿಂಹನಾದ ಕೃಷ್ಣನು ಹಿಮಾಲಯಪರ್ವತದ ವೃಕ್ಷಗಳನ್ನೂ ನಂದನವನದ ವೃಕ್ಷಗಳನ್ನೂ ತಂದು ಅಲ್ಲಿ ನೆಟ್ಟಿದ್ದಾನೆ.

ರಕ್ತಪೀತಾರುಣಪ್ರಖ್ಯಾಃ ಸಿತಪುಷ್ಪಾಶ್ಚ ಪಾದಪಾಃ ।
ಸರ್ವರ್ತುಫಲಪೂರ್ಣಾಸ್ತೇ ತೇನ ಕಾನನಸಿಂಧುಷು ॥೪೮॥

ಸಹಸ್ರಪತ್ರಪದ್ಮಾಕ್ಷಾ ಮಂದಾರಾಶ್ಚ ಸಹಸ್ರಶಃ ।
ಅಶೋಕಾಃ ಕರ್ಣಿಕಾರಾಶ್ಚ ತಿಲಕಾ ನಾಗಮಲ್ಲಿಕಾಃ ॥೪೯॥

ಕುರವಾ ನಾಗಪುಷ್ಪಾಶ್ಚ ಚಂಪಕಾಸ್ತಣಗುಲ್ಮಕಾಃ ।
ಸಪ್ತಪರ್ಣಾಃ ಕದಂಬಾಶ್ಚ ನೀಪಾಃ ಕುರವಕಾಸ್ತಥಾ ॥೫೦॥

ಕೇತಕಾಃ ಕೇಸರಾಶ್ಚೈವ ಹಿಂತಾಳತಳತಾಳಕಾಃ ।
ತಾಳಾಃ ಪ್ರಿಯಂಗುವಕುಳಾಃ ಪಿಂಡಿಕಾ ಬೀಜಪೂರಕಾಃ ॥೫೧॥

ದ್ರಾಕ್ಷಾಮಲಕಖರ್ಜೂರಾ ಮೃದ್ವೀಕಾ ಜಂಬುಕಾಸ್ತಥಾ ।
ಆಮ್ರಾಃ ಪನಸವೃಕ್ಷಾಶ್ಚ ಅಂಕೋಲಾಸ್ತಿಲತಿಂದುಕಾಃ ॥೫೨॥

ಲಿಕುಚಾಮ್ರಾತಕಾಶ್ಚೈವ ಕ್ಷೀರಿಕಾ ಕಂಟಕೀ ತಥಾ ।
ನಾಲಿಕೇರೇಂಗುದಾಶ್ಚೈವ ಉಕ್ರೋಶಕವನಾನಿ ಚ ।
ವನಾನಿ ಚ ಕದಲ್ಯಾಶ್ಚ ಜಾತಿಮಲ್ಲಿಕಪಾಟಲಾಃ ॥೫೩॥

ಭಾಲ್ಲಾತಕಕಪಿತ್ಥಾಶ್ಚ ತೈತಿಲಾ ಬಂಧುಜೀವಿಕಾಃ ।
ಪ್ರಿಯಂಗ್ವಶೋಕಕಾಶ್ಮರ್ಯಃ ಪ್ರಾಚೀನಾಶ್ಚೈವ ಸರ್ವಶಃ ॥೫೪॥

ಪ್ರಿಯಂಗುಬದರೀಭಿಶ್ಚ ಯವೈಃ ಸ್ಪಂದನಚಂದನೈಃ ।
ಶಮೀಬಿಲ್ವಪಲಾಶೈಶ್ಚ ಪಾಟಲಾವಟಪಿಪ್ಪಲೈಃ । ॥೫೫॥

ಉದುಂಬರೈಶ್ಚ ದ್ವಿದಲೈಃ ಪಾಲಾಂಗೈಃ ಪಾರಿಭದ್ರಕೈಃ ।
ಇಂದ್ರವೃಕ್ಷಾರ್ಜುನೈಶ್ಚೈವ ಭಲ್ಲಾತೈರಶ್ವಸಾಹ್ವಯೈಃ ॥೫೬॥

ಸರ್ಜೈಸ್ತಾಂಬೂಲವಲ್ಲೀಭಿರ್ಲವಂಗೈಃ ಕ್ರಮುಕೈಸ್ತಥಾ ।
ವಂಶೈಶ್ಚ ವಿವಿಧೈಸ್ತತ್ರ ಸಮಂತಾತ್ ಪರಿರೋಪಿತೈಃ ॥೫೭॥

ಯೇ ಚ ನಂದನಜಾ ವೃಕ್ಷಾ ಯೇ ಚ ಚೈತ್ರರಥೇ ವನೇ ।
ಸರ್ವೇ ತೇ ಯದುನಾಥೇನ ಸಮಂತಾತ್ ಪರಿರೋಪಿತಾಃ ॥೫೮॥

ಕೆಂಪು ಬಿಳಿ ಮತ್ತು ಅರುಣ ಬಣ್ಣಗಳಿಂದ ಕೂಡಿದ ಬಿಳಿಯ ಪುಷ್ಪಗಳಿಂದಲೂ ಎಲ್ಲಾ ಋತುಗಳಲ್ಲಿ ಬಿಡುವ ಫಲಗಳಿಂದಲೂ ಪೂರ್ಣವಾದ, ಕಾನನದಲ್ಲಿಯೂ ಮತ್ತು ನದೀತೀರಗಳಲ್ಲಿಯೂ ಬೆಳೆಯುವ, ಮರಗಳು ಸಹಸ್ರಪತ್ರ , ಪದ್ಮಾಕ್ಷ ಸಹಸ್ರಾರು ಮಂದಾರವೃಕ್ಷಗಳು ಅಶೋಕ ಕರ್ಣಿಕಾರ ತಿಲಕ ನಾಗಮಲ್ಲಿಕಾ ಕುರವ ನಾಗಪುಷ್ಪ ಚಂಪಕ ತೃಣಗುಲ್ಮಕ ಸಪ್ತವರ್ಣ ಕದಂಬ ನೀಪ ಕುರವಕ ಕೇತನ ಕೇಸರ ಹಿಂತಾಳ ತಳತಾಳ ತಾಳ ಪ್ರಿಯಂಗು ಬಕುಳಾ ಪಿಂಡಿಕಾ ಬೀಜಪೂರಕ ದ್ರಾಕ್ಷಾ ಆಮಲಕ ಖರ್ಜೂರ ಮೃದ್ವೀಕ ಜಂಬುಕ, ಆಮ್ರ ಪನಸ ಅಂಕೋಲ ತಿಲತಿಂದುಕ ಲಿಕುಚ ಆಮ್ರಾತಕ ಕ್ಷೀರಿಕ ಕಂಟಲಿ ನಾರೀಕೇಲ ಇಂಬುದ ಉತ್ಕೋಶಕ ಇವುಗಳಿಂದ ಕೂಡಿದ ಅನೇಕ ಒಳ್ಳೆಯ ವನಗಳು ಅಲ್ಲಿವೆ. ಜಾತಿ ಮಲ್ಲಿಕಾ ಪಾಟಲ ಮೊದಲಾದ ಪುಷ್ಪ ವೃಕ್ಷಗಳು ಭಲ್ಲಾತಕ ಕಪಿತ್ಥ ತೈತಿಲ ಬಂಧುಜೀವಿಕಾ ಪ್ರಿಯಂಗು ಅಶೋಕ ಕಾಶ್ಮರ್ಯ ಈ ಎಲ್ಲಾ ವೃಕ್ಷಗಳೂ ಬದರಿ ಯವ ಚಂದನ ಸ್ಪಂದನ ಶಮೀ ಬಿಲ್ವ ಪಲಾಶ ಪಾಟಲ ವಟ ಪಿಪ್ಪಲ ಉದುಂಬರ ದ್ವಿದಳ ಪಾಲಾಂಗ ಪಾರಿಭದ್ರಕ ಇಂದ್ರವೃಕ್ಷ ಅರ್ಜುನ ಭಲ್ಲರ ಅಶ್ವವೃಕ್ಷ ಸರ್ಜ ತಾಂಬೂಲಲತೆಗಳು, ಲವಂಗ ಅಡಿಕೆಮರಗಳು ಬಿದಿರು ದ್ವಿದ ಈ ಮರಗಳು ಎಲ್ಲಾ ಕಡೆಯಲ್ಲಿಯೂ ನೆಡಲ್ಪಟ್ಟ ಆ ಪಟ್ಟಣವು ಪೂರ್ಣವಾಗಿದೆ. ನಂದನವನದ ವೃಕ್ಷಗಳೂ ಚೈತ್ರರಥದ ವನದ ವೃಕ್ಷಗಳೂ ಕೃಷ್ಣನಿಂದ ತಂದು ಅಲ್ಲಿ ನೆಡಲ್ಪಟ್ಟಿವೆ.

ಕುಮುದೋತ್ಪಲಪೂರ್ಣಾಶ್ಚ ವಾಪ್ಯಃ ಕೂಪಾಃ ಸಹಸ್ರಶಃ ।
ಸಮಾಕುಲಮಹಾವಾಪ್ಯಃ ಪೀತಲೋಹಿತಾವಾಲುಕಾಃ ॥೫೯॥

ಅಲ್ಲಿ ಸಹಸ್ರಾರು ಸಂಖ್ಯೆಯಲ್ಲಿರುವ ವಾಪಿಗಳು ಮತ್ತು ಕೂಪಗಳು ಕುಮುದ ಮತ್ತು ಉತ್ಪಲ ಪುಷ್ಪಗಳಿಂದ ಪೂರ್ಣವಾಗಿದೆ. ಅಲ್ಲಿ ಅನೇಕ ಮಹಾವಾಪಿಗಳು ಇವೆ. ಅವು ಹಳದಿಯ ಮತ್ತು ಕೆಂಪು ಮರಳುಗಳಿಂದ ಕೂಡಿವೆ.

ತಸ್ಮಿನ್ ಗೃಹವನೇ ನದ್ಯಃ ಪ್ರಸನ್ನಸಲಿಲಾಶಯಾಃ ।
ಫುಲ್ಲೋತ್ಪಲಜಲೋಪೇತಾ ನಾನಾದ್ರುಮಸಮಾಕುಲಾಃ ॥೬೦॥

ಗೃಹಕ್ಕೆ ಸೇರಿದ ಆ ವನಗಳಲ್ಲಿ ಪ್ರಸನ್ನವಾದ ಸಲಿಲವಿರುವ ನದಿಗಳು ಅರಳಿದ ಉತ್ಪಲದ ಸುಗಂಧದ ಜಲವನ್ನು ಹೊತ್ತು ನಾನಾ ದ್ರುಮಗಳಿಂದ ನಿಬಿಡವಾದ ಪ್ರದೇಶಗಳಲ್ಲಿ ಹರಿಯುತ್ತವೆ.

ತಸ್ಮಿನ್ ಗೃಹವರೇ ನದ್ಯೋ ಮಣಿಶರ್ಕರವಾಲುಕಾಃ ।
ಮತ್ತಬರ್ಹಿಣಸಂಘಾಶ್ಚ ಕೋಕಿಲಾಶ್ಚ ಮದೋದ್ಧತಾಃ ।
ಬಭೂವುಃ ಪರಮೋಪೇತಾಃ ಸರ್ವೇ ಜಗತಿಪರ್ವತಾಃ ॥೬೧॥

ಆ ಶ್ರೇಷ್ಠವಾದ ಮನೆಗಳಲ್ಲಿ ಹರಿಯುವ ನದಿಗಳಲ್ಲಿ ಮಣಿಮಯವಾದ ಸಣ್ಣ ಮರಳುಗಳ ತೀರಗಳಿವೆ. ಅಲ್ಲಿ ಮತ್ತಮಯೂರಗಳ ಸಮೂಹಗಳು ಮದಿಸಿದ ಕೋಗಿಲೆಗಳು ಸಂತೋಷದಿಂದ ಕೂಡಿವೆ. ಅಲ್ಲಿ ಮಣಿಮಯವಾದ ಸಣ್ಣ ಸಣ್ಣ ಪರ್ವತಗಳೂ ಇವೆ.

ತತ್ರೈವ ಗಜಯೂಥಾನಿ ತತ್ರ ಗೋಮಹಿಷಾಸ್ತಥಾ ।
ನಿವಾಸಾಶ್ಚ ಕೃತಾಸ್ತತ್ರ ವರಾಹಮೃಗಪಕ್ಷಿಣಾಮ್ ॥೬೨॥

ಅಲ್ಲಿ ಗಜಯೂಥಗಳೂ ಗೋಮಹಿಷಗಳೂ ಇವೆ. ವರಾಹಮೃಗಪಕ್ಷಿಗಳಿಗೆ ಅಲ್ಲಿ ವಾಸಸ್ಥಾನವನ್ನು ಕಲ್ಪಿಸಲಾಗಿದೆ.

ವಿಶ್ವಕರ್ಮಕೃತಃ ಶೈಲಃ ಪ್ರಾಕಾರಸ್ತಸ್ಯ ವೇಶ್ಮನಃ ।
ವ್ಯಕ್ತಕಿಷ್ಕುಶತೋದ್ಯಾಮಃ ಸುಧಾಕರಸಮಪ್ರಭಃ ॥೬೩॥

ಆ ವಾಸುದೇವನ ಗೃಹಕ್ಕೆ ವಿಶ್ವಕರ್ಮನು ನಿರ್ಮಿಸಿದ ಪ್ರಾಕಾರವು ನೂರು ಕಿಷ್ಕುಗಳಷ್ಟು ವಿಸ್ತಾರವಾಗಿದ್ದು ಚಂದ್ರನ ಕಾಂತಿಯನ್ನು ಹೊಂದಿದೆ.

ತೇನ ತೇ ಚ ಮಹಾಶೈಲಾಃ ಸರಿತಶ್ಚ ಸರಾಂಸಿ ಚ ।
ಪರಿಕ್ಷಿಪ್ತಾನಿ ಹರ್ಮ್ಯಸ್ಯ ವನಾನ್ಯುಪವನಾನಿ ಚ ॥೬೪॥

ಆ ಗೃಹಗಳ ಸುತ್ತಲೂ ಮಹಾಶೈಲಗಳು ಸರಿತ್ತುಗಳು ಸರೋವರಗಳು ವನಗಳು ಮತ್ತು ಉಪವನಗಳು ಕೃಷ್ಣನಿಂದ ನಿವಿಷ್ಟವಾಗಿವೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಏಕಪಂಚಾಶೋऽಧ್ಯಾಯಃ ॥
॥ಅರ್ಘಾಭಿಹರಣಪರ್ವಣಿ ವಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಐವತ್ತೊಂದನೆಯ ಅಧ್ಯಾಯವು ಮುಗಿಯಿತು.

★★★★★

ಐವತ್ತೆರಡನೆಯ ಅಧ್ಯಾಯ

(ಕೃಷ್ಣನ ದ್ವಾರಕಾಪ್ರವೇಶ)

ಭೀಷ್ಮಃ

ಏವಂ ತಚ್ಚಿಲ್ಪಿವರ್ಯೇಣ ವಿಹಿತಂ ವಿಶ್ವಕರ್ಮಣಾ ।
ಪ್ರವಿಶನ್ನೇವ ಗೋವಿಂದೋ ದದರ್ಶ ಪರಿತೋ ಮುಹುಃ ॥೧॥

ಗೋವಿಂದನು ದ್ವಾರಕೆಯನ್ನು ಪ್ರವೇಶಿಸುತ್ತಲೇ ಶಿಲ್ಪಿವರ್ಯನಾದ ವಿಶ್ವಕರ್ಮನಿಂದ ನಿರ್ಮಿತವಾದ ಆ ಪಟ್ಟಣದ ಕಡೆಗೆ ಸುತ್ತಲೂ ದೃಷ್ಟಿಯನ್ನು ಹರಿಸಿದನು.

ಮುಮುದೇ ವಿಶ್ವಕರ್ಮಾಣಂ ಪ್ರಾಂಜಲಿಂ ಪ್ರಣತಾನನಮ್ ।
ಇಂದ್ರಃ ಸಹಾಮರೈಃ ಶ್ರೀಮಾನ್ ತತ್ರ ತತ್ರ ವಿಲೋಕಯನ್ ॥೨॥

ಇಂದ್ರನು ಅಮರರ ಜೊತೆಯಲ್ಲಿ ಅಲ್ಲಿಲ್ಲಿ ನೋಡುತ್ತಾ ಕೈಗಳನ್ನು ಮಗಿದು ತಲೆಯನ್ನು ತಗ್ಗಿಸಿ ನಿಂತಿದ್ದ ವಿಶ್ವಕರ್ಮನನ್ನು ನೋಡಿ ಆನಂದಿಸಿದನು.

ಏವಮಾಲೋಕಯಾಂಚಕ್ರುರ್ದ್ವಾರಕಾಮೃಷಭಾಸ್ತ್ರಯಃ ।
ಉಪೇಂದ್ರಬಲದೇವೌ ಚ ವಾಸವಶ್ಚ ಮಹಾಯಶಾಃ ॥೩॥

ಹೀಗೆ ಮಹಾಕೀರ್ತಿಶಾಲಿಗಳಾದ ಮತ್ತು ಶ್ರೇಷ್ಠರಾದ ಕೃಷ್ಣ ಬಲರಾಮ ಮತ್ತು ಇಂದ್ರರು ದ್ವಾರಕಾ ಪಟ್ಟಣವನ್ನು ಆಲೋಕಿಸಿದರು.

ತತಸ್ತಂ ಪಾಂಡರಂ ಶೌರಿರ್ಮೂರ್ಧ್ನಿ ತಿಷ್ಠನ್ ಗರುತ್ಮತಃ ।
ಪ್ರೀತಃ ಶಂಖಮುಪಾಧ್ಮಾಸೀದ್ ವಿದ್ವಿಷಾಂ ರೋಮಹರ್ಷಣಮ್ ॥೪॥

ಅನಂತರ ಶೌರಿಯು ಗರುಡನ ಹೆಗಲಿನ ಮೇಲೆಯೇ ಕುಳಿತು ಶತ್ರುಗಳಿಗೆ ರೋಮಾಂಚನಕಾರಿಯಾದ ತನ್ನ ಪಾಂಡರವಾದ ಶಂಖವನ್ನು ಸಂತೋಷದಿಂದ ಊದಿದನು.

ತಸ್ಯ ಶಂಖಸ್ಯ ಶಬ್ದೇನ ಸಾಗರಶ್ಚುಕ್ಷುಭೇ ಭೃಶಮ್ ।
ರರಾಸ ಚ ನಭಃ ಸರ್ವಂ ತಚ್ಚಿತ್ರಮಭವತ್ ತದಾ ॥೫॥

ಆ ಶಂಖದ ನಾದದಿಂದ ಸಾಗರವು ಉಕ್ಕೇರಿತು. ಆಕಾಶವು ನಲಿಯಿತು. ಅದೆಲ್ಲವೂ ಆಶ್ಚರ್ಯಕರವಾಗಿದ್ದಿತು.

ಪಾಂಚಜನ್ಯಸ್ಯ ನಿರ್ಘೋಷಂ ನಿಶಮ್ಯ ಕುಕುರಾಂಧಕಾಃ ।
ವಿಶೋಕಾಃ ಸಮಪದ್ಯಂತ ಗರುಡಸ್ಯ ಚ ದರ್ಶನಾತ್ ॥೬॥

ಕುಕುರಾಂಧಕರು ಗರುಡನ ದರ್ಶನದಿಂದಲೂ ಮತ್ತು ಪಾಂಚಜನ್ಯದ ಘೋಷದಿಂದಲೂ ಶೋಕರಹಿತರಾದರು.

ಶಂಖಚಕ್ರಗದಾಪಾಣಿಂ ಸುಪರ್ಣಸ್ಯೋಪರಿ ಸ್ಥಿತಮ್ ।
ದೃಷ್ಟ್ವಾ ಜಹೃಷಿರೇ ಭೌಮಾ ಭಾಸ್ಕರೋದಯತೇಜಸಮ್ ॥೭॥

ಅವರು ಭೂಮಿಯಲ್ಲಿನಿಂತು ಜನರು ಉದಯಿಸುವ ಸೂರ್ಯನನ್ನು ನೋಡಿ ಸಂತೋಷಪಡುವಂತೆ ಕಾಂತಿಯುಳ್ಳ ಶಂಖಚಕ್ರಗದಾಪಾಣಿಯಾದ ಗರುಡಾರೂಢನಾದ ಕೃಷ್ಣನನ್ನು ನೋಡಿ ಸಂತೋಷಪಟ್ಟರು.

ತತಸ್ತೂರ್ಯಪ್ರಣಾದಶ್ಚ ಭೇರೀಣಾಂ ಚ ಮಹಾಸ್ವನಃ ।
ಸಿಂಹನಾದಶ್ಚ ಸಂಜಜ್ಞೇ ಸರ್ವೇಷಾಂ ಪುರವಾಸಿನಾಮ್ ॥೮೪॥

ಅನಂತರ ಎಲ್ಲಾ ಪುರವಾಸಿಗಳೂ ತುರ್ಯನಾದಗಳನ್ನೂ ಭೇರಿಯ ಸ್ವನಗಳನ್ನೂ ಮತ್ತು ಸಿಂಹನಾದಗಳನ್ನೂ ಮಾಡಿದರು.

ತತಸ್ತೇ ಸರ್ವದಾಶಾರ್ಹಾಃ ಸರ್ವೇ ಚ ಕುಕುರಾಂಧಕಾಃ ।
ಪ್ರೀಯಮಾಣಾಃ ಸಮಾಜಗ್ಮುರಾಲೋಕ್ಯ ಮಧುಸೂದನಮ್ ॥೮೦॥

ಅನಂತರ ಮಧುಸೂದನನನ್ನು ನೋಡಿ ಎಲ್ಲಾ ದಾಶಾರ್ಹರೂ ಎಲ್ಲಾ ಕುಕುರಾಂಧಕರೂ ಸಂತೋಷದಿಂದ ಅವನ ಕಡೆಗೆ ಬಂದರು.

ವಸುದೇವಂ ಪುರಸೃತ್ಯ ವೇಣುಶಂಖಿರವೈಃ ಸಹ ।
ಉಗ್ರಸೇನೋ ಯಯೌ ರಾಜಾ ವಾಸುದೇವನಿವೇಶನಾತ್ ॥೮೧॥

ಉಗ್ರಸೇನಮಹಾರಾಜನೂ ವಸುದೇವನನ್ನು ಮುಂದೆಮಾಡಿಕೊಂಡು ವೇಣುಶಂಖನಾದಗಳಿಂದ ಕೂಡಿದವನಾಗಿ ವಾಸುದೇವನ ಗೃಹವನ್ನು ಕುರಿತು ಹೊರಟನು.

ಆನಂದಿತಂ ಪರ್ಯಚರನ್ ಸ್ವೇಷು ವೇಶ್ಮಸು ದೇವಕೀ ।
ರೋಹಿಣೀ ಚ ಯಯೌ ದೇಶಮಾಹುಕಸ್ಯ ಚ ಯಾಃ ಸ್ತ್ರಿಯಃ ॥೮೨॥

ದೇವಕಿಯು ಆನಂದಪೂರ್ಣನಾಗಿದ್ದ ಕೃಷ್ಣನನ್ನು ತನ್ನ ಮನೆಯಲ್ಲಿ ಪರಿಚರಿಸಿದಳು. ರೋಹಿಣಿಯು ಮತ್ತು ಆಹುಕನ ಉಳಿದ ಸ್ತ್ರೀಯರು ಆ ದೇಶಕ್ಕೆ ಪ್ರಾಪ್ತರಾಗಿ ಬಂದರು.

ಹತಾ ಬ್ರಹ್ಮದ್ವಿಷಃ ಸರ್ವೇ ಜಯಂತ್ಯಂಧಕವೃಷ್ಣಯಃ ।
ಏವಮುಕ್ತಃ ಸಹ ಸ್ತ್ರೀಭಿರಕ್ಷತೈರ್ಮಧುಸೂದನಃ ॥೮೩॥

ಬ್ರಹ್ಮದ್ವೇಷಿಗಳೆಲ್ಲರೂ ಹತರಾದರು ಅಂಧಕವೃಷ್ಣಿಗಳು ಉತ್ಕೃಷ್ಟರಾಗಿದ್ದಾರೆ ಎಂದು ಹೇಳುತ್ತಾ ಸ್ತ್ರೀಯರು ಮಧುಸೂದನನ ತಲೆಯ ಮೇಲೆ ಅಕ್ಷತೆಯನ್ನು ಹಾಕಿದರು.

ತತಃ ಶೌರಿಃ ಸುಪರ್ಣೇನ ಸ್ವಂ ನಿವೇಶನಮಭ್ಯಯಾತ್ ।
ಚಕಾರಾಥ ಯಥೋದ್ದೇಶಮೀಶ್ವರೋ ಮಣಿಪರ್ವತಮ್ ॥೧೪॥

ಅನಂತರ ಶೌರಿಯು ಗರುಡಾರೂಢನಾಗಿಯೇ ತನ್ನ ನಿವೇಶನಕ್ಕೆ ಹೋಗಿ ಆ ಮಣಿ ಪರ್ವತವನ್ನು ಯೋಗ್ಯವಾದ ಸ್ಥಳದಲ್ಲಿ ಸ್ಥಾಪಿಸಿದನು.

ತತೋ ಧನಾನಿ ರತ್ನಾನಿ ಸತ್ಯಾಂ ಚ ಮಧುಸೂದನಃ ।
ನಿಧಾಯ ಪುಂಡರೀಕಾಕ್ಷಃ ಪಿತುರ್ದರ್ಶನಲಾಲಸಃ ॥೧೫॥

ತತಃ ಸಾಂದೀಪಿನಂ ಪೂರ್ವಂ ಬ್ರಹ್ಮಾಚಾರ್ಯಂ ಚ ಭಾರತ ।
ವವಂದೇ ಪೃಥುತಾಮ್ರಾಕ್ಷಃ ಪ್ರೀಯಮಾಣೋ ಮಹಾಮನಾಃ ॥೧೬॥

ಅನಂತರ ಪುಂಡರೀಕಾಕ್ಷನಾದ ಮಧುಸೂದನನು ಧನವನ್ನೂ ರತ್ನಗಳನ್ನೂ ಸತ್ಯಭಾಮೆಯನ್ನೂ ಯೋಗ್ಯಸ್ಥಾನದಲ್ಲಿ ಇರಿಸಿ ತಂದೆಯನ್ನು ನೋಡುವ ಲಾಲಸೆಯಿಂದ ಹೊರಟನು. ಭಾರತನೇ! ಆಗ ಮೊದಲು ವಿಪ್ರಾಚಾರ್ಯರಾದ ಸಾಂದೀಪಿನಿಗಳಿಗೆ ಮಹಾಮನಸ್ಸುಳ್ಳವನೂ ವಿಶಾಲಾಕ್ಷನೂ ಆದ ಅವನು ಸಂತೋಷದಿಂದ ನಮಸ್ಕರಿಸಿದನು.

ತಥಾಶ್ರುಪರಿಪೂರ್ಣಾಕ್ಷಮಾನಂದಾಗತಚೇತಸಾ ।
ವವಂದೇ ಸಹ ರಾಮೇಣ ಪಿತರಂ ವಾಸವಾನುಜಃ ॥೧೭॥

ಹಾಗೆಯೇ ಆನಂದದಿಂದ ನೀರು ತುಂಬಿದ ಕಣ್ಣುಳ್ಳ ತನ್ನ ತಂದೆಯನ್ನು ವಾಸವಾನುಜನಾದ ಕೃಷ್ಣನು ಬಲರಾಮನ ಜೊತೆಯಲ್ಲಿ ನಮಸ್ಕರಿಸಿದನು.

ಯಥಾಶ್ರೇಷ್ಠಮುಪಾಗಮ್ಯ ಸಾತ್ವತಾನ್ ಯದುನಂದನಃ ।
ಸರ್ವೇಷಾಂ ನಾಮ ಜಗ್ರಾಹ ದಾಶಾರ್ಹಾಣಾಂ ಮಧುಕ್ಷಯಃ ॥೧೮॥

ಅನಂತರ ಯದುನಂದನನಾದ ಮಧುಸೂದನನು ಎಲ್ಲಾ ಸಾತ್ವತರನ್ನು ಅವರ ಶ್ರೇಷ್ಠತೆಗೆ ಅನುಗುಣವಾಗಿ ಸಂಧಿಸಿ ಎಲ್ಲರ ಹೆಸರನ್ನೂ ಹೇಳಿದನು.

ತತಃ ಸರ್ವಾಣಿ ವಿತ್ತಾನಿ ಸರ್ವರತ್ನಮಯಾನಿ ಚ ।
ವ್ಯಭಜತ್ ತಾನಿ ತೇಭ್ಯೋಥ ಸರ್ವೇಭ್ಯೋ ಯದುನಂದನಃ ॥೧೯॥

ಅನಂತರ ಯದುನಂದನನಾದ ಕೃಷ್ಣನು ತಾನು ತಂದ ಎಲ್ಲ ಧನವನ್ನು ಎಲ್ಲಾ ರತ್ನಗಳನ್ನೂ ಅವರೆಲ್ಲರಿಗೂ ಹಂಚಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ದ್ವಿಪಂಚಾಶೋಧ್ಯಾಯಃ ॥

॥ ಅರ್ಘಾಭಿಹರಣಪರ್ವಣಿ ಏಕವಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಐವತ್ತೆರಡನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

★★★★★

ಐವತ್ಮೂರನೆಯ ಅಧ್ಯಾಯ

(ಎಲ್ಲರ ಅನುಮತಿಯನ್ನು ಪಡೆದು ದ್ವಾರಕೆಯಿಂದ ಇಂದ್ರನ ನಿರ್ಗಮನ)

ಭೀಷ್ಮಃ

ಸಾ ಕೇಶವಮಹಾಮಾತ್ರೈರ್ಮಹೇಂದ್ರಪ್ರಮುಖೈಃ ಸಭಾ ।
ಶುಶುಭೇ ವೃಷ್ಣಿಶಾರ್ದೂಲೈಃ ಸಿಂಹೈರಿವ ಗಿರೇರ್ಗುಹಾ ॥೧॥

ಕೇಶವನ ಮಹಾಮಾತ್ರರಿಂದಲೂ ಮಹೇಂದ್ರ ಮೊದಲಾದವರಿಂದಲೂ ವೃಷ್ಣಿಶಾರ್ದೂಲರಿಂದಲೂ ತುಂಬಿದ ಆ ಸಭೆಯು ಸಿಂಹಗಳಿಂದ ತುಂಬಿದ ಪರ್ವತದ ಗುಹೆಯಂತೆ ಶೋಭಿಸಿತು.

ಅಥಾಸನಗತಾನ್ ಸರ್ವಾನುವಾಚ ವಿಬುಧಾಧಿಪಃ ।
ಶುಭಯಾ ಹರ್ಷಯನ್ ವಾಚಾ ಮಹೇಂದ್ರಸ್ತಾನ್ ಮಹಾಯಶಾಃ ।
ಕುಕುರಾಂಧಕಮುಖ್ಯಾಂಶ್ಚ ತಂ ಚ ರಾಜಾನಮಾಹುಕಮ್ ॥೨॥

ಅನಂತರ ದೇವಾಧಿಪತಿಯಾದ ಮಹಾಕೀರ್ತಿಶಾಲಿಯಾದ ಇಂದ್ರನು ತನ್ನ ಶುಭವಾದ ಮಾತಿನಿಂದ ಎಲ್ಲರನ್ನೂ ಸಂತೋಷಪಡಿಸುತ್ತಾ ಆಸನಗಳನ್ನು ಅಲಂಕರಿಸಿದ್ದ ಕುಕುರರು ಅಂಧಕಶ್ರೇಷ್ಠರು ಆಹುಕರಾಜ ಮೊದಲಾದ ಎಲ್ಲರನ್ನೂ ಕುರಿತು ಮಾತನಾಡಿದನು.

ಯದರ್ಥಂ ಜನ್ಮ ಕೃಷ್ಣಸ್ಯ ಮಾನುಷೇಷು ಮಹಾತ್ಮನಃ ।
ಯತ್ ಕೃತಂ ವಾಸುದೇವೇನ ತದ್ ವಕ್ಷ್ಯಾಮಿ ಸಮಾಸತಃ ॥೩॥

ಮಹಾತ್ಮನಾದ ವಾಸುದೇವನು ಮನುಷ್ಯಲೋಕದಲ್ಲಿ ಅವತಾರವನ್ನು ಮಾಡುವುದಕ್ಕೆ ಕಾರಣವನ್ನೂ ಮನುಷ್ಯಲೋಕದಲ್ಲಿ ಅವನು ಮಾಡಿದ ಮಹಾ ಕಾರ್ಯವನ್ನೂ ಸಂಕ್ಷೇಪವಾಗಿ ಹೇಳುವೆನು.

ಅಯಂ ಶತಸಹಸ್ರಾಣಿ ದಾನವಾನಾಮರಿಂದಮಃ ।
ನಿಹತ್ಯ ಪುಂಡರೀಕಾಕ್ಷಃ ಪಾತಾಳವಿವರಂ ಯಯೌ ॥೪॥

ಅರಿಂದಮನಾದ ಪುಂಡರೀಕಾಕ್ಷನಾದ ಈ ಕೃಷ್ಣನು ಒಂದುಲಕ್ಷ ದಾನವರನ್ನು ಸಂಹರಿಸಿ ಪಾತಾಳಲೋಕಕ್ಕೆ ಹೋದನು.

ಯತ್ತೈರಧಿಗತಂ ಪೂರ್ವೈಃ ಪ್ರಹ್ಲಾದಬಲಿಶಂಬರೈಃ ।
ತದಿದಂ ಶೌರಿಣಾ ವಿತ್ತಂ ಪ್ರಾಪಿತಂ ಭವತಾಮಿಹ ॥೫॥

ಹಿಂದೆ ಪ್ರಹ್ಲಾದ ಬಲಿ ಶಂಬರರಿಂದ ಯಾವ ಸಂಪತ್ತು ಪ್ರಾಪ್ತವಾಗಿದ್ದಿತೋ ಆ ಸಂಪತ್ತನ್ನು ಶೌರಿಯು ಇಲ್ಲಿ ನಿಮಗೆ ತಲುಪಿಸಿದ್ದಾನೆ.

ಸಪಾಶಂ ಮುರಮಾಕ್ರಮ್ಯ ಪಾಂಜಜನ್ಯಂ ತು ಧೀಮತಾ ।
ಶಿಲಾಸಂಘಾನತಿಕ್ರಮ್ಯ ನಿಸುಂಭಃ ಸಗಣೋ ಹತಃ ॥೬॥

ಮೇಧಾವಿಯಾದ ಕೃಷ್ಣನು ಪಂಚಜನಪುತ್ರನಾದ ಮುರನನ್ನೂ ಅವನ ಪಾಶಗಳನ್ನು ಅರೆಕ್ರಮಿಸಿ ಶಿಲಾಸಮೂಹವನ್ನು ದಾಟಿ ಪರಿವಾರಸಹಿತನಾದ ನಿಸುಂಭನನ್ನೂ ಸಂಹಾರಮಾಡಿದನು.

ಹಯಗ್ರೀವಶ್ಚ ವಿಕ್ರಾಂತೋ ದಾನವೋ ನಿಹತೋ ಬಲೀ ।
ಮಥಿತಶ್ಚ ಮೃಧೇ ಭೌಮಃ ಕುಂಡಲೇ ಚಾಹೃತೇ ಪುನಃ ।
ಪ್ರಾಪ್ತಂ ಚ ದಿವಿ ದೇವೇಷು ಕೇಶವೇನ ಮಹದ್ಯಶಃ ॥೭॥

ಬಲಿಷ್ಠನಾದ ವಿಕ್ರಮಶಾಲಿಯಾದ ಹಯಗ್ರೀವದಾನವನನ್ನು ಸಂಹಾರ ಮಾಡಿದನು. ಯುದ್ಧದಲ್ಲಿ ನರಕಾಸುರನನ್ನು ಸಂಹರಿಸಿ ಅದಿತಿಯ ಕುಂಡಲಗಳನ್ನು

ಹಿಂದಕ್ಕೆ ತಂದು ಕೇಶವನು ಸ್ವರ್ಗಲೋಕದಲ್ಲಿ ದೇವತೆಗಳ ದೃಷ್ಟಿಯಿಂದಲೂ ಮಹಾ ಕೀರ್ತಿಯನ್ನು ಪಡೆದಿದ್ದಾನೆ.

ವೀತಶೋಕಭಯಾಬಾಧಾಃ ಕೃಷ್ಣಬಾಹುಬಲಾಶ್ರಯಾಃ ।
ಯಜಂತು ವಿವಿಧೈಃ ಸೋಮೈರ್ಮಖೈರಂಧಕವೃಷ್ಣಯಃ ॥೮॥

ಅಂಧಕವೃಷ್ಣಿಗಳಾದ ನೀವು ಕೃಷ್ಣನ ಬಾಹುಬಲವನ್ನು ಆಶ್ರಯಿಸಿ ಎಲ್ಲಾ ಶೋಕ ಭಯ ಮತ್ತು ಪೀಡೆಗಳನ್ನು ತೊರೆದು ಅನೇಕ ಸೋಮಯಜ್ಞಗಳನ್ನು ಆಚರಿಸಿ,

ಪುನರ್ಬಾಣವಧೇ ಶೌರಿಮಾದಿತ್ಯಾ ವಸುಭಿಃ ಸಹ ।
ಮನ್ಮುಖಾऽಭಿಗಮಿಷ್ಯಂತಿ ಸಾಧ್ಯಾಶ್ಚ ಮಧುಸೂದನಮ್ ॥೯॥

ಶೌರಿಯಾದ ಮಧುಸೂದನನು ಮುಂದೆ ಬಾಣಾಸುರನನ್ನು ಸಂಹಾರಮಾಡುವಾಗ ನನ್ನನ್ನು ಮುಂದೆ ಮಾಡಿಕೊಂಡು ಆದಿತ್ಯರು ವಸುಗಳು ಸಾಧ್ಯರು ಎಲ್ಲರೂ ಭೂಮಿಗೆ ಬರುವರು.

ಭೀಷ್ಮಃ

ಏವಮುಕ್ತ್ವಾ ತತಃ ಸರ್ವಾನಾಮಂತ್ರ್ಯ ಕುಕುರಾಂಧಕಾನ್ ।
ಸಸ್ವಜೇ ರಾಮಕೃಷ್ಣೌ ಚ ವಸುದೇವಂ ಚ ವಾಸವಃ ॥೧೦॥

ಇಂದ್ರನು ಹೀಗೆ ಹೇಳಿ ಕುಕುರಾಂಧಕರೆಲ್ಲರ ಅನುಮತಿಯನ್ನು ಪಡೆದು ರಾಮಕೃಷ್ಣರನ್ನೂ ವಸುದೇವನನ್ನೂ ಆಲಿಂಗಿಸಿದನು.

ಪ್ರದ್ಯುಮ್ನಸಾಂಬನಿಶಠಾನ್ ಅನಿರುದ್ಧಂ ಚ ಸಾರಣಮ್ ।
ಬಭ್ರುಂ ಝಿಲ್ಲಿಂ ಗದಂ ಭಾನುಂ ಚಾರುದೇಷ್ಣಂ ಚ ವೃತ್ರಹಾ ॥೧೧॥

ಸತ್ಕೃತ್ಯ ಸಾರಣಾಕ್ರೂರೌ ಪುನರಾಭಾಷ್ಯ ಸಾತ್ಯಕಿಮ್ ।
ಸಸ್ವಜೇ ವೃಷ್ಣಿರಾಜಾನಮಾಹುಕಂ ಕುಕುರಾಧಿಪಮ್ ॥೧೨॥

ಪ್ರದ್ಯುಮ್ನ ಸಾಂಬ ನಿಶಠರನ್ನೂ ಅನಿರುದ್ಧ ಸಾರಣರನ್ನೂ ಬಭ್ರು ಝಿಲ್ಲಿ ಗದಾ ಭಾನು ಚಾರುದೇಷ್ಣ ಇವರುಗಳನ್ನೂ ಸತ್ಕರಿಸಿ ಇಂದ್ರನು ಸಾರಣಾಕ್ರೂರರ ಜೊತೆಯಲ್ಲಿ

ಮತ್ತು ಸಾತ್ಯಕಿಯ ಜೊತೆಯಲ್ಲಿ ಪುನಃ ಮಾತನಾಡಿ ಕುಕುರಾಧಿಪತಿಯಾದ ವೃಷ್ಣಿರಾಜನಾದ ಆಹುಕನನ್ನು ಆಲಿಂಗಿಸಿದನು.

ಭೋಜಂ ಚ ಕೃತವರ್ಮಾಣಮನ್ಯಾಂಶ್ಚಾಂಧಕವೃಷ್ಣಿಷು ।
ಆಮಂತ್ರ್ಯ ದೇವಪ್ರವರೋ ವಾಸವೋ ವಾಸವಾನುಜಮ್ ॥೧೩॥

ತತಃ ಶ್ವೇತಾಚಲಪ್ರಖ್ಯಂ ಗಜಮೈರಾವತಂ ಪ್ರಭುಃ ।
ಪಶ್ಯತಾಂ ಸರ್ವಭೂತಾನಾಮಾರುರೋಹ ಶಚೀಪತಿಃ ॥೧೪॥

ದೇವಶ್ರೇಷ್ಠನಾದ ಇಂದ್ರನು ಭೋಜವಂಶಕ್ಕೆ ಸೇರಿದ ಕೃತವರ್ಮನನ್ನೂ ಉಳಿದ ಅಂಧಕ ವೃಷ್ಣಿಗಳನ್ನೂ ಕೃಷ್ಣನನ್ನೂ ಪ್ರಾರ್ಥಿಸಿ ಅವರ ಅನುಮತಿಯನ್ನು ಪಡೆದು ಎಲ್ಲ ಜನರೂ ನೋಡುತ್ತಿರುವಂತೆ ಶಚೀಪತಿಯಾದ ಪ್ರಭುವಾದ ಅವನು ಶ್ವೇತಪರ್ವತದಂತೆ ಇದ್ದ ಐರಾವತ ಗಜವನ್ನು ಏರಿದನು.

ಪೃಥಿವೀಂ ಚಾಂತರಿಕ್ಷಂ ಚ ದಿವಂ ಚ ವರವಾರಣಮ್ ।
ಮುಖಾಡಂಬರನಿರ್ಘೋಷೈಃ ಪೂರಯಂತಮಿವಾಸಕೃತ್ ॥೧೫॥

ಹೈಮಯಂತ್ರಮಹಾಕಕ್ಷ್ಯಂ ಹಿರಣ್ಮಯವಿಷಾಣಿನಮ್ ।
ಮನೋಹರಕುಥಾಸ್ತೀರ್ಣಂ ಸರ್ವರತ್ನವಿಭೂಷಿತಮ್ ॥೧೬॥

ಅನೇಕಶತರತ್ನಾಭಿಃ ಪತಾಕಾಭಿರಲಙ್ಕೃತಮ್ ।
ನಿತ್ಯಸ್ರುತಮದಸ್ರಾವಂ ಕ್ಷರಂತಮಿವ ತೋಯದಮ್ ॥೧೭॥

ದಿಶಾಗಜಂ ಮಹಾಮಾತ್ರಂ ಕಾಂಚನಸ್ರಜಮಾಸ್ಥಿತಃ ।
ಪ್ರಬಭೌ ಮಂದರಾಗ್ರಸ್ಥಃ ಪ್ರತಪನ್ ಭಾನುಮಾನಿವ ॥೧೮॥

ತನ್ನ ಮುಖದ ನಿರ್ಘೋಷಗಳಿಂದ ಭೂಮಿಯನ್ನೂ ಅಂತರಿಕ್ಷವನ್ನೂ ಸ್ವರ್ಗವನ್ನೂ ಪುನಃ ಪುನಃ ತುಂಬುತ್ತಿದ್ದಂತಹ, ಹೇಮ ಯಂತ್ರಗಳಿಂದಲೂ ಮಹಾ ಕಕ್ಷೆಗಳಿಂದಲೂ ಕೂಡಿದ್ದಂತಹ, ಹಿರಣ್ಮಯವಾದ ದಂತಗಳನ್ನು ಹೊಂದಿದ್ದಂತಹ, ಸುಂದರವಾದ ರತ್ನಗಂಬಳಿಯ ಆಸನವುಳ್ಳ, ಸರ್ವರತ್ನ ವಿಭೂಷಿತವಾದ, ನೂರಾರು ರತ್ನಗಳಿರುವ ಪತಾಕೆಗಳಿಂದ ಅಲಂಕೃತವಾದಂತಹ, ಮಳೆಯನ್ನು ಸುರಿಸುವ

ಮೋಡದಂತೆ ಯಾವಾಗಲೂ ಮದಜಲವನ್ನು ಸುರಿಸುವ, ಸುವರ್ಣಮಾಲೆಗಳನ್ನು ಧರಿಸಿ ಮಹಾಮಾತ್ರದಿಂದ ಕೂಡಿದ, ಶ್ರೇಷ್ಠವಾದ ಆ ದಿಗ್ಗಜವನ್ನು ಏರಿ ಇಂದ್ರನು ಮಂದರ ಪರ್ವತದ ಶಿಖರದಲ್ಲಿ ಪ್ರಕಾಶಿಸುವ ಸೂರ್ಯನಂತೆ ಶೋಭಿಸಿದನು.

ತತೋ ವಜ್ರಮಯಂ ಭೀಮಂ ಪ್ರಗೃಹ್ಯ ಪರಮಾಂಕುಶಮ್ ।
ಯಯೌ ಬಲವತಾ ಸಾರ್ಧಂ ಪಾವಕೇನ ಶಚೀಪತಿಃ ॥೧೯॥

ಅನಂತರ ಶಚೀಪತಿಯು ವಜ್ರಮಯವಾದ ಭಯಂಕರವಾದ ಶ್ರೇಷ್ಠವಾದ ಅಂಕುಶವನ್ನು ಹಿಡಿದು ಬಲಿಷ್ಠನಾದ ಅಗ್ನಿಯ ಜೊತೆಯಲ್ಲಿ ಅಲ್ಲಿಂದ ಹೊರಟನು.

ತಂ ಕರೇಣುಗಜವ್ರಾತೈರ್ವಿಮಾನೈಶ್ಚ ಮರುದ್ಗಣಾಃ ।
ಪೃಷ್ಠತೋಽನುಯಯುಃ ಪ್ರೀತಾಃ ಕುಬೇರವರುಣಗ್ರಹಾಃ ॥೨೦॥

ಮರುದ್ಗಣಗಳು ಕುಬೇರ ವರುಣ ಮತ್ತು ಉಳಿದ ಗ್ರಹಗಳು ಕರೇಣುಗಳ ಸಮೂಹವನ್ನು ಏರಿ ಗಜಗಳ ಸಮೂಹವನ್ನು ಏರಿ ವಿಮಾನಗಳನ್ನು ಏರಿ ಸಂತೋಷದಿಂದ ಅವನ ಹಿಂದೆ ಹೊರಟರು.

ಸ ವಾಯುಪಥಮಾಸ್ಥಾಯ ವೈಶ್ವಾನರಪಥಂ ಗತಃ ।
ಪ್ರಾಪ್ಯ ಸೂರ್ಯಪಥಂ ದೇವಸ್ತತ್ರೈವಾಂತರಧೀಯತ ॥೨೧॥

ಇಂದ್ರನು ವಾಯುಪಥವನ್ನು ಸೇರಿ ಅಲ್ಲಿಂದ ಅಗ್ನಿಪಥವನ್ನು ತಲುಪಿ ಅಲ್ಲಿಂದ ಸೂರ್ಯಪಥವನ್ನು ಸೇರಿ ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ತ್ರಿಪಂಚಾಶೋಽಧ್ಯಾಯಃ ॥

॥ ಅರ್ಘಾಭಿಹರಣಪರ್ವಣಿ ದ್ವಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಐವತ್ಮೂರನೆಯ ಅಧ್ಯಾಯವು ಮುಗಿಯಿತು.

★★★★★

ಐವತ್ತಾ ಲ್ಕನೆಯ ಅಧ್ಯಾಯ

(ತಾಯಿಯರಿಗೆ ನಮಸ್ಕರಿಸಿ ಕೃಷ್ಣನ ಸ್ವಗೃಹಪ್ರವೇಶ)

ಭೀಷ್ಮಃ

ತತಃ ಸರ್ವದಶಾರ್ಹಾಣಾಮಾಹುಕಸ್ಯ ಚ ಯಾಃ ಸ್ತ್ರಿಯಃ ।
ನಂದಗೋಪಸ್ಯ ಮಹಿಷೀ ಯಶೋದಾ ಲೋಕವಿಶ್ರುತಾ ॥೧॥

ರೇವತೀ ಚ ಮಹಾಭಾಗಾ ರುಗ್ಮಿಣೀ ಚ ಪತಿವ್ರತಾ ।
ಸತ್ಯಾ ಜಾಂಬವತೀ ಚೋಭೇ ಗಾಂಧಾರೀ ಶಿಶುಮಾಪಿ ಯಾ ॥೨॥

ವಿಶೋಕಾ ಲಕ್ಷಣಾ ಚಾಪಿ ಸುಮಿತ್ರಾ ಕೇತುಮಾ ತಥಾ ।
ವಾಸುದೇವಮಹಿಷ್ಯೋಽನ್ಯಾಃ ಶ್ರಿಯಾ ಸಾರ್ಧಂ ಯಯುಸ್ತದಾ ॥೩॥

ಅನಂತರ ಎಲ್ಲಾ ದಾಶಾರ್ಹ ಸ್ತ್ರೀಯರು, ಆ ಕುಲಪತ್ನಿಯರು, ನಂದಗೋಪನ ಪತ್ನಿಯಾದ ಲೋಕ ವಿಖ್ಯಾತೆಯಾದ ಯಶೋದೆ ಮತ್ತು ಮಹಾನುಭಾವಳಾದ ರೇವತಿಯು, ಪತಿವ್ರತೆಯಾದ ರುಗ್ಮಿಣಿ ಸತ್ಯಭಾಮೆ ಜಾಂಬುವತಿಯರು, ಗಾಂಧಾರಿ ಶಿಶುಮೆಯರು, ವಿಶೋಕಾ ಲಕ್ಷಣಾ ಸುಮಿತ್ರಾ ಕೇತುಮಾ ಮೊದಲಾದ ಉಳಿದ ಕೃಷ್ಣ ಪತ್ನಿಯರು, ಕೃಷ್ಣನಿದ್ದ ಕಡೆಗೆ ಬಂದರು. (ಈ ಗಾಂಧಾರಿಯು ಧೃತರಾಷ್ಟ್ರನ ಪತ್ನಿಯಲ್ಲ. ಗಾಂಧಾರದೇಶದ ಇನ್ನೊಬ್ಬಕನ್ಯೆ)

ವಿಭೂತಿಂ ದ್ರಷ್ಟುಮನಸಃ ಕೇಶವಸ್ಯ ಮಹಾತ್ಮನಃ ।
ಪ್ರೀಯಮಾಣಾಃ ಸಭಾಂ ಜಗ್ಮುರಾಲೋಕಯಿತುಮಚ್ಯುತಮ್ ॥೪॥

ಮಹಾತ್ಮನಾದ ಕೇಶವನ ಐಶ್ವರ್ಯವನ್ನು ನೋಡುವ ಮನಸ್ಸುಳ್ಳವರಾಗಿ ಸಂತೋಷದಿಂದ ಕೃಷ್ಣನನ್ನು ನೋಡುವ ಸಲುವಾಗಿ ಎಲ್ಲರೂ ಸಭೆಗೆ ಬಂದರು.

ದೇವಕೀ ಸಪ್ತದೇವೀನಾಂ ರೋಹಿಣೀ ಚ ಪುರಸ್ಕೃತಾ ।
ದದೃಶುರ್ದೇವಮಾಸೀನಂ ಕೃಷ್ಣಂ ಹಲಭೃತಾ ಸಹ ॥೫॥

ವಸುದೇವನ ಪತ್ನಿಯರಾದ ಸಪ್ತದೇವಿಯರು ದೇವಕಿಯನ್ನು ರೋಹಿಣಿಯನ್ನು ಮುಂದೆ ಮಾಡಿಕೊಂಡು ಬಲರಾಮನ ಜೊತೆಯಲ್ಲಿ ಕುಳಿತಿದ್ದ ಕೃಷ್ಣನನ್ನು ನೋಡಿದರು.

ತೌ ತು ಪೂರ್ವಮತಿಕ್ರಮ್ಯ ರೋಹಿಣೀಮಭಿವಾದ್ಯ ಚ ।
ಅಭಿವಾದಯತಾಂ ದೇವೌ ದೇವಕೀಂ ರಾಮಕೇಶವೌ ॥೬॥

ಬಲರಾಮಕೇಶವರು ಎದ್ದು ರೋಹಿಣಿಯನ್ನು ಮೊದಲು ಅಭಿವಂದಿಸಿ ಅನಂತರ ದೇವಕಿಗೆ ನಮಸ್ಕರಿಸಿದರು.

ರೋಹಿಣೀಂ ಸಪ್ತದೇವೀನಾಂ ಯಥಾಶ್ರೇಷ್ಠಂ ಚ ಮಾತರಃ ।
ವವಂದೇ ಸಹ ರಾಮೇಣ ಭಗವಾನ್ ವಾಸವಾನುಜಃ ॥೭॥

ತನ್ನ ತಾಯಂದಿರಾದ ರೋಹಿಣಿ ಮೊದಲಾದ ಸಪ್ತದೇವಿಯರನ್ನು ಅವರ ಜ್ಯೇಷ್ಠತೆಗೆ ಅನುಗುಣವಾಗಿ ಬಲರಾಮನ ಜೊತೆಯಲ್ಲಿ ವಾಸವಾನುಜನಾದ ಕೃಷ್ಣನು ನಮಸ್ಕರಿಸಿದನು.

ಅಥಾಸನವರಂ ಪ್ರಾಪ್ಯ ವೃಷ್ಣಿದಾರಪುರಸ್ಕೃತಾ ।
ಉಭಾವಂಕಗತೌ ಚಕ್ರೇ ದೇವಕೀ ರಾಮಕೇಶವೌ ॥೮॥

ಅನಂತರ ವೃಷ್ಣಿಸ್ತ್ರೀಯರನ್ನು ಮುಂದೆಮಾಡಿಕೊಂಡು ದೇವಕಿಯು ಶ್ರೇಷ್ಠವಾದ ಆಸನದಲ್ಲಿ ಕುಳಿತು ಕೃಷ್ಣಬಲರಾಮರನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡಳು.

ಸಾ ತಾಭ್ಯಾಮೃಷಭಾಕ್ಷಾಭ್ಯಾಂ ಪುತ್ರಾಭ್ಯಾಂ ಶುಶುಭೇऽಧಿಕಮ್ ।
ದೇವಕೀ ದೇವಮಾತೇವ ಮಿತ್ರೇಣ ವರುಣೇನ ಚ ॥೯॥

ಅವರಿಬ್ಬರನ್ನೂ ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡ ದೇವಕಿಯು ಮಿತ್ರ ವರುಣರನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡ ದೇವಮಾತೆಯಾದ ಅದಿತಿಯಂತೆ ಅಧಿಕವಾಗಿ ಶೋಭಿಸಿದಳು.

ತತಃ ಪ್ರಾಪ್ತಾ ಯಶೋದಾಯಾ ದುಹಿತಾ ವೈ ಕ್ಷಣೇನ ಹಿ ।
ಜಾಜ್ವಲ್ಯಮಾನಾ ವಪುಷಾ ಪ್ರಭಯಾऽತೀವ ಭಾರತ ॥೧೦॥

ಏಕಾನಂಗೇತಿ ಯಾಮಾಹುಃ ಕನ್ಯಾಂ ತಾಂ ಕಾಮರೂಪಿಣೀಮ್ ।
ಯತ್ಕೃತೇ ಸಗಣಂ ಕಂಸಂ ಜಘಾನ ಪುರುಷೋತ್ತಮಃ ॥೧೧॥

ಎಲೈ ಭಾರತನೇ! ಅನಂತರ ಆ ಕ್ಷಣದಲ್ಲಿ ಯಶೋದೆಯ ಪುತ್ರಿಯು ಪ್ರಕಾಶಮಾನವಾದ ತನ್ನ ದೇಹ ಕಾಂತಿಯಿಂದ ಬಹಳವಾಗಿ ಕಂಗೊಳಿಸುತ್ತಾ, ಅಲ್ಲಿಗೆ ಬಂದಳು ಯಾರ ಸಲುವಾಗಿ ಪುರುಷೋತ್ತಮನಾದ ಕೃಷ್ಣನು ಕಂಸನನ್ನು ಅವನ ಪರಿವಾರದ ಸಹಿತವಾಗಿ ಸಂಹರಿಸಿದನೋ ಅಂತಹ ಕಾಮರೂಪಿಣಿಯಾದ ಏಕಾನಂಗಾ ಎಂಬ ಹೆಸರಿನಿಂದ ಕರೆಸಿಕೊಳ್ಳುವ ಯಶೋದೆಯ ಪುತ್ರಿಯು ಅಲ್ಲಿಗೆ ಬಂದಳು.

ತತಃ ಸ ಭಗವಾನ್ ರಾಮಸ್ತಾಮುಪಾಕ್ರಮ್ಯ ಭಾಮಿನೀಮ್ ।
ಮೂರ್ಧ್ನ್ಯುಪಾಘ್ರಾಯ ಸವ್ಯೇನ ಪರಿಜಗ್ರಾಹ ಪಾಣಿನಾ ॥೧೨॥

ಆಗ ಪೂಜ್ಯನಾದ ಬಲರಾಮನು ಅವಳ ಸಮೀಪಕ್ಕೆ ಹೋಗಿ ಅವಳನ್ನು ಶಿರಸ್ಸಿನಲ್ಲಿ ಆಘ್ರಾಣಿಸಿ ಅವಳ ಬಲಬಾಗದಲ್ಲಿ ನಿಂತು ತನ್ನ ಎಡಗೈಯಿಂದ ಅವಳ ಕೈಯನ್ನು ಹಿಡಿದುಕೊಂಡನು.

ತಾಂ ಚ ತತ್ರೋಪಚಂಕ್ರಮ್ಯ ಪ್ರಿಯಾಮಿವ ಸಖೀಂ ಸಮಾಮ್ ।
ದಕ್ಷಿಣೇನ ಕರಾಗ್ರೇಣ ಪರಿಜಗ್ರಾಹ ಮಾಧವಃ ॥೧೩॥

ಮಾಧವನೂ ಸಹ ತನಗೆ ಸಮಾನಳಾದ ಪ್ರಿಯಳಾದ ಸ್ನೇಹಿತೆಯಂತಿದ್ದ ಅವಳ ಬಳಿಗೆ ಹೋಗಿ ಅವಳ ಎಡಬಾಗದಲ್ಲಿ ನಿಂತು ತನ್ನ ಶ್ರೇಷ್ಠವಾದ ದಕ್ಷಿಣ ಕರದಿಂದ ಅವಳನ್ನು ಹಿಡಿದುಕೊಂಡನು.

ದದೃಶುಸ್ತಾಂ ಸಭಾಮಧ್ಯೇ ಭಗಿನೀಂ ರಾಮಕೃಷ್ಣಯೋಃ ।
ರುಗ್ಮಪದ್ಮಶಯಾಂ ಪದ್ಮಾಂ ಶ್ರೀಮಿವೋತ್ತಮನಾಗಯೋಃ ॥೧೪॥

ಸಭಾಮಧ್ಯದಲ್ಲಿ ರಾಮಕೃಷ್ಣರ ಮಧ್ಯದಲ್ಲಿ ಇದ್ದ ಅವರ ತಂಗಿಯನ್ನು ಎರಡು ಗಜಗಳ ಮಧ್ಯದಲ್ಲಿ ಸುವರ್ಣಮಯವಾದ ಪದ್ಮದಲ್ಲಿರುವ ಲಕ್ಷ್ಮಿಯಂತೆ ಕಂಗೊಳಿಸುವುದನ್ನು ಎಲ್ಲರೂ ನೋಡಿದರು.

ಅಥಾಕ್ಷತಮಹಾವೃಷ್ಟ್ಯಾ ಲಾಜಪುಷ್ಪಘೃತೈರಪಿ ।
ವೃಷ್ಣಯೋಽವಾಕಿರನ್ ಪ್ರೀತಾಃ ಸಂಕರ್ಷಣಜನಾರ್ದನೌ ॥೧೫॥

ಅನಂತರ ಎಲ್ಲಾ ವೃಷ್ಣಿಗಳು ಸಂಕರ್ಷಣ ಮತ್ತು ಜನಾರ್ದನನ ತಲೆಯಮೇಲೆ ಸಂತೋಷದಿಂದ ಲಾಜ ಪುಷ್ಪ ಮತ್ತು ಘೃತಗಳ ಮಹಾವೃಷ್ಟಿಯನ್ನು ಕರೆದರು.

ಸಬಾಲಾಃ ಸಹವೃದ್ಧಾಶ್ಚ ಯೇ ಜ್ಞಾತಿಕುಲಬಾಂಧವಾಃ ।
ಉಪೋಪವಿವಿಶುಃ ಪ್ರೀತಾ ವೃಷ್ಣಯೋ ಮಧುಸೂದನಮ್ ॥೧೬॥

ಬಾಲಕರು ಮತ್ತು ವೃದ್ಧರಿಂದ ಸಹಿತರಾದ ದಾಯಾದಿಗಳು ಮತ್ತು ಕುಲಬಾಂಧವರಾದ ವೃಷ್ಣಿಗಳೆಲ್ಲರೂ ಸಂತೋಷದಿಂದ ಮಧುಸೂದನನ ಸಮೀಪದಲ್ಲಿ ಕುಳಿತರು.

ಪೂಜ್ಯಮಾನೋ ಮಹಾಬಾಹುಃ ಪೌರಾಣಾಂ ರತಿವರ್ಧನಃ ।
ವಿವೇಶ ಪುರುಷವ್ಯಾಘ್ರಃ ಸ್ವವೇಶ್ಮ ಮಧುಸೂದನಃ ॥೧೭॥

ಎಲ್ಲರಿಂದಲೂ ಪೂಜಿಸಲ್ಪಟ್ಟ ಪೌರರ ಸಂತೋಷವರ್ಧಕನಾದ ಮಹಾಬಾಹುವಾದ ಪುರುಷವ್ಯಾಘ್ರನಾದ ಮಧುಸೂದನನು ಅನಂತರ ತನ್ನ ಮನೆಯನ್ನು ಪ್ರವೇಶಿಸಿದನು.

ರುಗ್ಮಿಣ್ಯಾ ಸಹಿತೋ ದೇವ್ಯಾ ಪ್ರಮುಮೋದ ಸುಖೀ ಸುಖಮ್ ।
ಅನಂತರಂ ಚ ಸತ್ಯಾಯಾ ಜಾಂಬವತ್ಯಾಶ್ಚ ಭಾರತ ॥೧೮॥

ಎಲೈ ಭಾರತನೇ! ರುಗ್ಮಿಣಿಯಿಂದ ಸಹಿತನಾಗಿ ಸುಖಪೂರ್ಣನಾದ ಅವನು ಆನಂದಿಸಿದನು. ಆನಂತರ ಸತ್ಯಭಾಮೆಯ ಜೊತೆಯಲ್ಲಿಯೂ ಜಾಂಬವಂತಿಯ ಜೊತೆಯಲ್ಲಿಯೂ ಸಂತೋಷಪಟ್ಟನು.

ಸರ್ವಾಸಾಂ ಚ ಯದುಶ್ರೇಷ್ಠಃ ಸರ್ವಕಾಲವಿಹಾರವಾನ್ ।
ಜಗಾಮ ಚ ಹೃಷೀಕೇಶೋ ರುಗ್ಮಿಣ್ಯಾಃ ಸ ನಿವೇಶನಮ್ ॥೧೯॥

ತನ್ನ ಎಲ್ಲಾ ಪತ್ನಿಯರಿಗೂ ಎಲ್ಲಾ ಕಾಲದಲ್ಲಿಯೂ ಸಂತೋಷವನ್ನು ಕೊಡುವ ಯದುಶ್ರೇಷ್ಠನಾದ ಹೃಷಿಕೇಶನು ಎಲ್ಲರನ್ನೂ ಸಂತೋಷಪಡಿಸಿ ರುಗ್ಮಿಣಿಯ ಗೃಹಕ್ಕೆ ಬಂದನು.

ಏಷ ತಾತ ಮಹಾಬಾಹೋ ವಿಜಯಃ ಶಾರ್ಙ್ಗಧನ್ವನಃ ।
ಏತದರ್ಥಂ ಚ ಜನ್ಮಾಹುರ್ಮಾನುಷೇಷು ಮಹಾತ್ಮನಃ ॥೨೦॥

ಪ್ರೀತಿಪಾತ್ರನಾದ ಮಹಾಬಾಹುವೇ! ಇದು ಶಾರ್ಙ್ಗಧಾರಿಯಾದ ಕೃಷ್ಣನ ವಿಜಯ. ಮಹಾತ್ಮನಾದ ಅವನು ಈ ಕಾರ್ಯಗಳಿಗಾಗಿ ಮನುಷ್ಯಲೋಕದಲ್ಲಿ ಅವತಾರ ಮಾಡಿರುವನೆಂದು ಜ್ಞಾನಿಗಳು ಹೇಳುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಚತುಃಪಂಚಾಶೋಧ್ಯಾಯಃ ॥

॥ ಅರ್ಘಾಭಿಹರಣಪರ್ವಣಿ ತ್ರಯೋವಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ
ಐವತ್ತಾ ನ್ನಲ್ಕನೆಯ ಅಧ್ಯಾಯವು ಮುಗಿಯಿತು.

★★★★★

ಐವತ್ತೈದನೆಯ ಅಧ್ಯಾಯ

(ಬಾಣನನ್ನು ಯುದ್ಧದಲ್ಲಿ ಸೋಲಿಸಿ ಅನಿರುದ್ಧನನ್ನು ಬಿಡಿಸಿ ಕೃಷ್ಣನ ಪ್ರತಿನಿವೃತ್ತಿ)

ಭೀಷ್ಮಃ

ದ್ವಾರಕಾಯಾಂ ತತಃ ಕೃಷ್ಣಃ ಸ್ವದಾರೇಷು ದಿವಾನಿಶಮ್ ।
ಸುಖಂ ಲಬ್ಧ್ವಾ ಮಹಾರಾಜ ಪ್ರಮುಮೋದ ಮಹಾಯಶಾಃ ॥೧॥

ಅನಂತರ ಮಹಾಕೀರ್ತಿಶಾಲಿಯಾದ ಕೃಷ್ಣನು ದ್ವಾರಕೆಯಲ್ಲಿ ತನ್ನ ಪತ್ನಿಯರ ಜೊತೆಯಲ್ಲಿ ಹಗಲೂ ರಾತ್ರಿಯೂ ಸುಖವನ್ನು ಪಡೆದು ಆನಂದಿಸಿದನು.

ಪೌತ್ರಸ್ಯ ಕಾರಣಾಚ್ಚಕ್ರೇ ವಿಬುಧಾನಾಂ ಪ್ರಿಯಂ ತದಾ ।
ಸವಾಸವೈಃ ಸುರೈಃ ಸರ್ವೈರ್ದುಸ್ತರಂ ಭರತರ್ಷಭ ॥೨॥

ಭರತರ್ಷಭನೇ! ತನ್ನ ಪೌತ್ರನ ಕಾರಣದಿಂದಾಗಿ ಇಂದ್ರಾದಿ ದೇವತೆಗಳಿಂದ ಮಾಡಲು ಅಸಾಧ್ಯವಾದ ದೇವತೆಗಳಿಗೆ ಪ್ರಿಯವಾದ ಒಂದು ಕಾರ್ಯವನ್ನು ಮಾಡಿದನು.

ಬಾಣೋ ನಾಮಾಭವದ್ ರಾಜಾ ಬಲೇರ್ಜ್ಯೇಷ್ಠಸುತೋ ಬಲೀ ।
ವೀರ್ಯವಾನ್ ಭರತಶ್ರೇಷ್ಠ ಸ ಚ ಬಾಹುಸಹಸ್ರವಾನ್ ॥೩॥

ಎಲೈ ಭರತಶ್ರೇಷ್ಠನೇ! ಬಲಿಯ ಜ್ಯೇಷ್ಠಸುತನಾದ ಬಾಣನೆಂಬ ರಾಜನಿದ್ದನು. ಅವನು ಬಲಿಷ್ಠನೂ ಪರಾಕ್ರಮಶಾಲಿಯೂ ಸಹಸ್ರ ಬಾಹುಗಳನ್ನು ಹೊಂದಿದವನೂ ಆಗಿದ್ದನು.

ತತಸ್ತೇಪೇ ತಪಸ್ತೀವ್ರಂ ಸತ್ಯೇನ ಮನಸಾ ನೃಪ ।
ರುದ್ರಮಾರಾಧಯಾಮಾಸ ಸ ಚ ಬಾಣಃ ಸಮಾ ಬಹು ।
ತಸ್ಮೈ ಬಹುವರಾ ದತ್ತಾಃ ಶಂಕರೇಣ ಮಹಾತ್ಮನಾ ॥೪॥

ಎಲೈ ರಾಜನೇ! ಅವನು ಶುದ್ಧವಾದ ಮನಸ್ಸಿನಿಂದ ತೀವ್ರವಾದ ತಪಸ್ಸನ್ನು ಬಹುವರ್ಷಗಳವರೆಗೆ ಆಚರಿಸಿ ರುದ್ರನನ್ನು ಸಂತೋಷಪಡಿಸಿದನು. ಮಹಾತ್ಮನಾದ ಶಂಕರನು ಬಾಣನಿಗೆ ಅನೇಕ ವರಗಳನ್ನು ದಯಪಾಲಿಸಿದನು.

ತಾಂಶ್ಚ ಲಬ್ಧ್ವಾ ವರಾನ್ ಬಾಣೋ ದುರ್ಲಭಾನಸುರೋ ಭುವಿ ।
ಸ ಶೋಣಿತಪುರೇ ರಾಜ್ಯಂ ಚಕಾರಾಪ್ರತಿಮೋ ಬಲೀ ।
ತ್ರಾಸಿತಾಶ್ಚ ಸುರಾಃ ಸರ್ವೇ ತೇನ ಬಾಣೇನ ಪಾಂಡವ ॥೫॥

ಬಾಣಾಸುರನು ಭೂಮಿಯಲ್ಲಿ ದುರ್ಲಭವಾದ ಆ ವರಗಳನ್ನು ಪಡೆದು ಬಲಿಷ್ಠನೂ ಅಸದೃಶನೂ ಆಗಿ ಶೋಣಿತಪುರವನ್ನು ರಾಜಧಾನಿಯಾಗಿ ಮಾಡಿಕೊಂಡು ರಾಜ್ಯವನ್ನು ಆಳಿದನು. ಎಲೈ ಪಾಂಡವನೇ! ಆ ಬಾಣನು ಎಲ್ಲಾ ದೇವತೆಗಳಿಗೂ ಹೆದರಿಕೆಯನ್ನು ಉಂಟುಮಾಡಿದನು.

ವಿಜಿತ್ಯ ವಿಬುಧಾನ್ ಸರ್ವಾನ್ ಸೇಂದ್ರಾನ್ ಬಾಣಃ ಸಮಾ ಬಹು ।
ಅಶಾಸತ ಮಹದ್ರಾಜ್ಯಂ ಕುಬೇರ ಇವ ಭಾರತ ॥೬॥

ಎಲೈ ಭಾರತನೇ! ಆ ಬಾಣನು ಇಂದ್ರನೇ ಮೊದಲಾದ ಎಲ್ಲಾ ದೇವತೆಗಳನ್ನೂ ಗೆದ್ದು ಅನೇಕ ವರ್ಷಗಳ ಕಾಲ ಕುಬೇರನಂತೆ ದೊಡ್ಡ ರಾಜ್ಯವನ್ನು ಆಳಿದನು.

ತತೋ ರಾಜನ್ನುಷಾ ನಾಮ ಬಾಣಸ್ಯ ದುಹಿತಾ ತಥಾ ।
ರೂಪೇಣಾಪ್ರತಿಮಾ ಲೋಕೇ ಮೇನಕಾಯಾಃ ಸುತಾ ಯಥಾ ॥೭॥

ಎಲೈ ರಾಜನೇ! ಆ ಬಾಣನಿಗೆ ಮೇನಕೆಯ ಮಗಳಾದ ಪಾರ್ವತಿಯಂತೆ ಸುಂದರಿಯಾದ ರೂಪದಲ್ಲಿ ಅಸದೃಶಳಾದ ಉಷಾ ಎಂಬ ಹೆಸರಿನ ಒಬ್ಬ ಮಗಳಿದ್ದಳು.

ಅಥೋಪಾಯೇನ ಕೌಂತೇಯ ಅನಿರುದ್ಧೋ ಮಹಾದ್ಯುತಿಃ ।
ಪ್ರಾದ್ಯುಮ್ನಿಸ್ತಾಮುಷಾಂ ಪ್ರಾಪ್ಯ ಪ್ರಚ್ಛನ್ನಃ ಪ್ರಮುಮೋದ ಹ ॥೮೪॥

ಎಲೈ ಕೌಂತೇಯನೇ! ಪ್ರದ್ಯುಮ್ನನ ಮಗನಾದ ಅನಿರುದ್ಧನು ಹೇಗೋ ಉಪಾಯದಿಂದ ಆ ಉಷೆಯನ್ನು ಪಡೆದು ಯಾರಿಗೂ ತಿಳಿಯದಂತೆ ಅವಳ ಜೊತೆಯಲ್ಲಿ ಸಂತೋಷದಿಂದ ಇದ್ದನು.

ಏತಸ್ಮಿನ್ನೇವ ಕಾಲೇ ತು ನಾರದೋ ಮುನಿಪುಂಗವಃ ।
ದ್ವಾರಕಾಂ ಪ್ರಾಪ್ಯ ಕೌಂತೇಯ ಕೃಷ್ಣಂ ದೃಷ್ಟ್ವಾ ವಚೋಽಬ್ರವೀತ್ ॥

ಆ ಕಾಲಕ್ಕೆ ಸರಿಯಾಗಿ ಮುನಿಶ್ರೇಷ್ಠರಾದ ನಾರದರು ದ್ವಾರಕೆಗೆ ಬಂದು ಕೃಷ್ಣನನ್ನು ನೋಡಿ ಈ ಮಾತುಗಳನ್ನು ಹೇಳಿದರು.

ಕೃಷ್ಣ ಕೃಷ್ಣ ಮಹಾಬಾಹೋ ಯದೂನಾಂ ಕೀರ್ತಿವರ್ಧನ ।
ತ್ವತ್ಪೌತ್ರೋ ಬಾಧ್ಯಮಾನೋಽಥ ಬಾಣೇನಾಮಿತತೇಜಸಾ ।
ಕೃಚ್ಛ್ರಂ ಪ್ರಾಪ್ತೋಽನಿರುದ್ಧೋ ವೈ ಶೇತೇ ಕನ್ಯಾಪುರೇ ಸದಾ ॥೧೦೦॥

ಮಹಾಬಾಹುವಾದ ಯದುವಂಶಕೀರ್ತಿವರ್ಧನನಾದ ಎಲೈ ಕೃಷ್ಣನೇ! ನಿನ್ನ ಪೌತ್ರನು ಅಮಿತ ಪರಾಕ್ರಮಿಯಾದ ಬಾಣನಿಂದ ಪೀಡೆಗೆ ಒಳಗಾಗಿ ಕಷ್ಟವನ್ನು ಹೊಂದಿದವನಾಗಿ ಕನ್ಯಾಂತಃಪುರದಲ್ಲಿ ಸದಾ ವಾಸಮಾಡುತ್ತಿದ್ದಾನೆ.

ಭೀಷ್ಮಃ

ಏತದುಕ್ತ್ವಾ ಸುರಾರ್ಷಿರ್ವೈ ಬಾಣಸ್ಯಾಥ ಪುರಂ ಯಯೌ ।
ನಾರದಸ್ಯ ವಚಃ ಶ್ರುತ್ವಾ ತತೋ ರಾಜನ್ ಜನಾರ್ದನಃ ॥೧೦೧॥

ಆಹೂಯ ಬಲದೇವಂ ವೈ ಪ್ರದ್ಯುಮ್ನಂ ಚ ಮಹಾದ್ಯುತಿಃ ।
ಆರುರೋಹ ಗರುತ್ಮಂತಂ ತಾಭ್ಯಾಂ ಸಹ ಜನಾರ್ದನಃ ॥೧೦೨॥

ಸುರ ಋಷಿಗಳಾದ ನಾರದರು ಹೀಗೆ ಹೇಳಿ ಅನಂತರ ಬಾಣನ ಪುರಕ್ಕೆ ಹೊರಟರು. ನಾರದರ ಮಾತನ್ನು ಕೇಳಿ ಜನಾರ್ದನನು ಬಲದೇವನನ್ನೂ ಪ್ರದ್ಯುಮ್ನನನ್ನೂ ಕರೆದು ಮಹಾಕಾಂತಿಯುಕ್ತನಾದ ಅವನು ಅವರಿಬ್ಬರ ಜೊತೆಯಲ್ಲಿ ಗರುಡನನ್ನು ಏರಿದನು.

ತತಃ ಸುಪರ್ಣಮಾರುಹ್ಯ ತ್ರಯಸ್ತೇ ಪುರುಷರ್ಷಭಾಃ ।
ಜಗ್ಮುಃ ಕ್ರುದ್ಧಾ ಮಹಾವೀರ್ಯಾ ಬಾಣಸ್ಯ ನಗರಂ ಪ್ರತಿ ॥೧೩॥

ಅನಂತರ ಪುರುಷಶ್ರೇಷ್ಠರಾದ ಮಹಾಪರಾಕ್ರಮಿಗಳಾದ ಕ್ರುದ್ಧರಾದ ಆ ಮೂವರೂ ಸಹ ಗರುಡನನ್ನು ಏರಿ ಬಾಣಾಸುರನ ನಗರದ ಕಡೆಗೆ ಹೊರಟರು.

ಅಥಾಸಾದ್ಯ ಮಹಾರಾಜ ತತ್ಪುರೀಂ ದದೃಶುಶ್ಚ ತೇ ।
ತಾಮ್ರಪ್ರಾಕಾರಸಂವೀತಾಂ ರೂಪ್ಯದ್ವಾರೈಶ್ಚ ಶೋಭಿತಾಮ್ ॥೧೪॥

ಹೇಮಪ್ರಾಸಾದಸಂಬಾಧಾಂ ಮುಕ್ತಾಮಣಿವಿಚಿತ್ರಿತಾಮ್ ।
ಉದ್ಯಾನವನಸಂಪನ್ನಾಂ ನೃತ್ತಗೀತೈಶ್ಚ ಶೋಭಿತಾಮ್ ॥೧೫॥

ಎಲೈ ಮಹಾರಾಜನೇ! ಅನಂತರ ಬಾಣನ ಪುರವನ್ನು ತಲುಪಿ ಅವರು ತಾಮ್ರದ ಪ್ರಾಕಾರದಿಂದ ಗುಪ್ತವಾಗಿದ್ದಂತಹ ರಜತದ್ವಾರಗಳಿಂದ ಶೋಭಿತವಾಗಿದ್ದಂತಹ ಸುವರ್ಣಾಲಂಕೃತವಾಗಿದ್ದಂತಹ ಮತ್ತು ಮುಕ್ತಾಮಣಿಗಳಿಂದ ವಿಭೂಷಿತವಾದ ಪ್ರಾಸಾದಗಳಿಂದ ನಿಬಿಡವಾಗಿದ್ದಂತಹ ಉದ್ಯಾನವನಗಳಿಂದ ಸಂಪನ್ನವಾಗಿ ನೃತ್ಯಗೀತೆಗಳಿಂದ ಶೋಭಿಸುತ್ತಿದ್ದಂತಹ ಆ ಪಟ್ಟಣವನ್ನು ನೋಡಿದರು.

ತಾಂ ಪುರೀಂ ಸ್ವರ್ಗಸಂಕಾಶಾಂ ಹೃಷ್ಟಪುಷ್ಟಜನಾಕುಲಾಮ್ ।
ದೃಷ್ಟ್ವಾ ಮುದಾ ಯುತಾಂ ಹೈಮಾಂ ವಿಸ್ಮಯಂ ಪರಮಂ ಯಯುಃ ॥

ಅವರು ಸ್ವರ್ಗದಂತೆ ಶೋಭಿಸುತ್ತಿರುವ ಹೃಷ್ಟಪುಷ್ಟಜನಾಕೀರ್ಣವಾದ ಸಂತೋಷದಿಂದ ತುಂಬಿದ ಸ್ವರ್ಣಮಯವಾದ ಆ ಪಟ್ಟಣವನ್ನು ನೋಡಿ ಪರಮಾಶ್ಚರ್ಯವನ್ನು ಹೊಂದಿದರು.

ತಸ್ಯ ಬಾಣಪುರಸ್ಯಾಸನ್ ದ್ವಾರಸ್ಥಾ ದೇವತಾಃ ಸದಾ ।
ಮಹೇಶ್ವರೋ ಗುಹಶ್ಚೈವ ಭದ್ರಕಾಳೀ ಚ ಪಾವಕಃ ।
ಏತಾ ವೈ ದೇವತಾ ರಾಜನ್ ರರಕ್ಷುಸ್ತಾಂ ಪುರೀಂ ಸದಾ ॥೧೭॥

ಆ ಬಾಣನ ಪಟ್ಟಣದಲ್ಲಿ ದ್ವಾರಪಾಲಕರಾಗಿ ರುದ್ರ ಷಣ್ಮುಖ ಭದ್ರಕಾಳೀ ಮತ್ತು ಅಗ್ನಿ ಈ ದೇವತೆಗಳು ಯಾವಾಗಲೂ ಇರುತ್ತಿದ್ದರು. ರಾಜನೇ! ಈ ದೇವತೆಗಳು ಯಾವಾಗಲೂ ಅವನ ಪಟ್ಟಣವನ್ನು ರಕ್ಷಿಸುತ್ತಿದ್ದರು.

ಅಥ ಕೃಷ್ಣೋ ಬಲಾಜ್ಜಿತ್ವಾ ದ್ವಾರಪಾಲಾನ್ ಯುಧಿಷ್ಠಿರ ।
ಸ ಸಂಕ್ರುದ್ಧೋ ಮಹಾತೇಜಾಃ ಶಂಖಚಕ್ರಗದಾಸಿಧೃಕ್ ।
ಆಸಸಾದೋತ್ತರದ್ವಾರಂ ಶಂಕರೇಣಾಭಿರಕ್ಷಿತಮ್ ॥೧೮॥

ಎಲೈ ಯುಧಿಷ್ಠಿರನೇ! ಅನಂತರ ಶಂಖ ಚಕ್ರ ಗದಾ ಖಡ್ಗಧಾರಿಯಾದ ಕೃಷ್ಣನು ತನ್ನ ಬಲದಿಂದ ಷಣ್ಮುಖ ಭದ್ರಕಾಳಿ ಮತ್ತು ಅಗ್ನಿಗಳನ್ನು ಗೆದ್ದು ಮಹಾತೇಜಸ್ವಿಯಾದ ಅವನು ಕ್ರೋಧದಿಂದ ಕೂಡಿದವನಾಗಿ ಶಂಕರನಿಂದ ರಕ್ಷಿತವಾದ ಉತ್ತರ ದ್ವಾರವನ್ನು ತಲುಪಿದನು.

ತತ್ರ ತಸ್ಥೌ ಮಹಾತೇಜಾಃ ಶೂಲಪಾಣಿರ್ಮಹೇಶ್ವರಃ ।
ಪಿನಾಕಂ ಸಶರಂ ಗೃಹ್ಯ ಬಾಣಸ್ಯ ಹಿತಕಾಮ್ಯಯಾ ।
ಜ್ಞಾತ್ವಾ ತಮಾಗತಂ ಕೃಷ್ಣಂ ವ್ಯಾದಿತಾಸ್ಯಮಿವಾಂತಕಮ್ ॥೧೯॥

ಬಾಯಿತೆಗೆದ ಮೃತ್ಯುವಿನಂತೆ ಕೃಷ್ಣನು ಸಮಾಗತನಾದುದನ್ನು ತಿಳಿದು ಮಹಾತೇಜಸ್ವಿಯಾದ ಶೂಲಪಾಣಿಯಾದ ಶಂಕರನು ಬಾಣನಿಗೆ ಹಿತವನ್ನು ಉಂಟುಮಾಡುವ ಇಚ್ಛೆಯಿಂದ ಪಿನಾಕವನ್ನೂ ಮತ್ತು ಬಾಣವನ್ನೂ ಕೈಯಲ್ಲಿ ಹಿಡಿದು ನಿಂತನು.

ತತಸ್ತೌ ಚಕ್ರತುರ್ಯುದ್ಧಂ ವಾಸುದೇವಮಹೇಶ್ವರೌ ।
ತದ್ಯುದ್ಧಮಭವದ್ ಘೋರಮಚಿಂತ್ಯಂ ರೋಮಹರ್ಷಣಮ್ ॥೨೦॥

ಆಗ ಕೃಷ್ಣ ಮತ್ತು ಮಹೇಶ್ವರರು ಯುದ್ಧವನ್ನು ಮಾಡಿದರು. ಆ ಯುದ್ಧವು ಅಚಿಂತ್ಯವೂ ಘೋರವೂ ಮತ್ತು ರೋಮಾಂಚನಕಾರಿಯೂ ಆಗಿದ್ದಿತು.

ಅನ್ಯೋನ್ಯಂ ತೌ ತತಕ್ಷಾತೇ ಅನ್ಯೋನ್ಯಜಯಕಾಂಕ್ಷಿಣೌ।
ದಿವ್ಯಾನ್ಯಸ್ತ್ರಾಣಿ ತೌ ದೇವೌ ಕ್ರುದ್ಧೌ ಮುಮುಚತುಸ್ತದಾ ॥೨೧॥

ಪರಸ್ಪರಜಯಾಕಾಂಕ್ಷಿಗಳಾದ ಅವರು ಪರಸ್ಪರವಾಗಿ ಘಾತಿಸಿದರು. ಆ ಇಬ್ಬರು ದೇವತೆಗಳೂ ಕೋಪದಿಂದ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿದರು.

ತತಃ ಕೃಷ್ಣೋ ರಣಂ ಕೃತ್ವಾ ಮುಹೂರ್ತಂ ಶೂಲಪಾಣಿನಾ ।
ವಿಜಿತ್ಯ ತಂ ಮಹಾದೇವಂ ತತೋ ಯುದ್ಧೇ ಜನಾರ್ದನಃ ।
ಅನ್ಯಾಂಶ್ಚ ಜಿತ್ವಾ ದ್ವಾರಸ್ಥಾನ್ ಪ್ರವಿವೇಶ ಪುರೋತ್ತಮಮ್ ॥೨೨॥

ಆಗ ಕೃಷ್ಣನು ಒಂದು ಮುಹೂರ್ತಕಾಲ ಶೂಲಪಾಣಿಯ ಜೊತೆಯಲ್ಲಿ ಯುದ್ಧವನ್ನು ಮಾಡಿ ಮಹಾದೇವನನ್ನು ಯುದ್ಧದಲ್ಲಿ ಗೆದ್ದು ಉಳಿದ ದ್ವಾರಪಾಲಕರನ್ನೂ ಗೆದ್ದು ಪಟ್ಟಣವನ್ನು ಪ್ರವೇಶಿಸಿದನು.

ಪ್ರವಿಶ್ಯ ಬಾಣಮಾಸಾದ್ಯ ಸ ತತ್ರಾಥ ಜನಾರ್ದನಃ ।
ಚಕ್ರೇ ಯುದ್ಧಂ ಮಹಾಕ್ರುದ್ಧಸ್ತೇನ ಬಾಣೇನ ಪಾಂಡವ ॥೨೩॥

ಎಲೈ ಪಾಂಡವನೇ! ಜನಾರ್ದನನು ಪಟ್ಟಣವನ್ನು ಪ್ರವೇಶಿಸಿ ಬಾಣಸುರನನ್ನು ಸಮೀಪಿಸಿ ಮಹಾಕ್ರೋಧದಿಂದ ಕೂಡಿದವನಾಗಿ ಅವನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಬಾಣೋಪಿ ಸರ್ವಶಸ್ತ್ರಾಣಿ ಶಿತಾನಿ ಭರತರ್ಷಭ ।
ಸುಸಂಕ್ರುದ್ಧಸ್ತದಾ ಯುದ್ಧೇ ಪಾತಯಾಮಾಸ ಕೇಶವೇ ॥೨೪॥

ಭರತರ್ಷಭನೇ! ಬಾಣನೂ ಸಹ ಬಹಳ ಕೋಪಗೊಂಡವನಾಗಿ ಯುದ್ಧದಲ್ಲಿ ಎಲ್ಲಾ ನಿಶಿತವಾದ ಅಸ್ತ್ರಗಳನ್ನೂ ಕೃಷ್ಣನ ಮೇಲೆ ಪ್ರಯೋಗಿಸಿದನು.

ಪುನರುದ್ಯಮ್ಯ ಶಸ್ತ್ರಾಣಾಂ ಸಹಸ್ರಂ ಸರ್ವಬಾಹುಭಿಃ ।
ಮುಮೋಚ ಬಾಣಃ ಸಂಕ್ರುದ್ಧಃ ಕೃಷ್ಣಂ ಪ್ರತಿ ರಣಾಜಿರೇ ॥೨೫॥

ಬಾಣನು ಪುನಃ ಮಹಾಪ್ರಯತ್ನವನ್ನು ಮಾಡಿ ತನ್ನ ಸಹಸ್ರಬಾಹುಗಳಲ್ಲಿ ಸಹಸ್ರ ಶಸ್ತ್ರಗಳನ್ನು ಹಿಡಿದು ಯುದ್ಧದಲ್ಲಿ ಕೋಪದಿಂದ ಕೃಷ್ಣನ ಮೇಲೆ ಆವುಗಳನ್ನು ಪ್ರಯೋಗಿಸಿದನು.

ತತಃ ಕೃಷ್ಣಸ್ತು ಸಂಛಾದ್ಯ ತಾನಿ ಸರ್ವಾಣಿ ಭಾರತ ।
ಕೃತ್ವಾ ಮುಹೂರ್ತಂ ಬಾಣೇನ ಯುದ್ಧಂ ರಾಜನ್ನಥೋತ್ಸಜಃ ॥೨೬॥

ಚಕ್ರಮುದ್ಯಮ್ಯ ರೋಷಾದ್ ವೈ ದಿವ್ಯಂ ಶಸ್ತ್ರೋತ್ತಮಂ ತತಃ ।
ಸಹಸ್ರಬಾಹೂಂಶ್ಚಿಚ್ಛೇದ ಬಾಣಸ್ಯಾಮಿತತೇಜಸಃ ॥೨೭॥

ಎಲೈ ಭಾರತನೇ! ಆಗ ಕೃಷ್ಣನು ಆ ಎಲ್ಲಾ ಶಸ್ತ್ರಗಳನ್ನು ಛೇದಿಸಿ ಒಂದು ಮುಹೂರ್ತಕಾಲ ಬಾಣನ ಜೊತೆಯಲ್ಲಿ ಯುದ್ಧವನ್ನುಮಾಡಿ ಅನಂತರ ರೋಷದಿಂದ ಶ್ರೇಷ್ಠವಾದ ತನ್ನ ದಿವ್ಯವಾದ ಚಕ್ರವನ್ನು ಎತ್ತಿ ಅಮಿತಪರಾಕ್ರಮಿಯಾದ ಬಾಣನ ಸಹಸ್ರ ಬಾಹುಗಳನ್ನು ಅದರಿಂದ ಕತ್ತರಿಸಿದನು.

ತತೋ ಬಾಣೋ ಮಹಾರಾಜ ಕೃಷ್ಣೇನ ಭೃಶಪೀಡಿತಃ ।
ಛಿನ್ನಬಾಹುಃ ಪಪಾತಾಶು ವಿಶಾಖ ಇವ ಪಾದಪಃ ॥೨೮॥

ಮಹಾರಾಜನೇ! ಆಗ ಬಾಣನು ಕೃಷ್ಣನಿಂದ ಬಹಳ ಪೀಡಿತನಾಗಿ ಎಲ್ಲಾ ಬಾಹುಗಳನ್ನೂ ಕಳೆದುಕೊಂಡು ಕೊಂಬೆಗಳೇ ಇಲ್ಲದ ವೃಕ್ಷದಂತೆ ಭೂಮಿಯ ಮೇಲೆ ಬಿದ್ದನು.

ಸ ಪಾತಯಿತ್ವಾ ಬಾಲೇಯಂ ಬಾಣಂ ಕೃಷ್ಣಸ್ತ್ವರಾನ್ವಿತಃ ।
ಪ್ರಾದ್ಯುಮ್ನಿಂ ಮೋಕ್ಷಯಾಮಾಸ ಕ್ಷಿಪ್ರಂ ಕಾರಾಗೃಹೇ ತದಾ ॥೨೯॥

ಕೃಷ್ಣನು ಯುದ್ಧದಲ್ಲಿ ಬಲಿಯ ಮಗನಾದ ಬಾಣನನ್ನು ಕೆಡವಿ ತ್ವರೆಯಿಂದ ಕೂಡಿ ಕಾರಾಗೃಹಕ್ಕೆ ಹೋಗಿ ಶೀಘ್ರವಾಗಿ ಪ್ರದ್ಯುಮ್ನನ ಮಗನಾದ ಅನಿರುದ್ಧನನ್ನು ಬಿಡಿಸಿದನು.

ಮೋಕ್ಷಯಿತ್ವಾಽಥ ಗೋವಿಂದಃ ಪ್ರಾದ್ಯುಮ್ನಿಂ ಸಹ ಭಾರ್ಯಯಾ ।
ಬಾಣಸ್ಯ ಸರ್ವರತ್ನಾನಿ ಅಸಂಖ್ಯಾನಿ ಜಹಾರ ಸಃ ॥೩೦॥

ಗೋವಿಂದನು ಅನಿರುದ್ಧನನ್ನು ಅವನ ಪತ್ನಿಯ ಜೊತೆಯಲ್ಲಿ ಬಿಡುಗಡೆಮಾಡಿ ಬಾಣನ ಅಸಂಖ್ಯ ರತ್ನಗಳನ್ನು ತೆಗೆದುಕೊಂಡನು.

ಗೋಧನಾನಿ ಚ ಸರ್ವಸ್ವಂ ಸ ಬಾಣಸ್ಯಾಲಯೇ ಬಲಾತ್ ।
ಜಹಾರ ಚ ಹೃಷೀಕೇಶೋ ಯದೂನಾಂ ಕುಲವರ್ಧನಃ ॥೩೧॥

ಯದುಗಳ ಕುಲವರ್ಧನನಾದ ಹೃಷೀಕೇಶನು ಬಾಣನ ಮನೆಯಲ್ಲಿರುವ ಗೋಧನವನ್ನೂ ಸರ್ವಸಂಪತ್ತನ್ನೂ ತನ್ನ ಸಾಮರ್ಥ್ಯದಿಂದ ತೆಗೆದುಕೊಂಡನು.

ತತಃ ಸ ಸರ್ವರತ್ನಾನಿ ಚಾಹೃತ್ಯ ಮಧುಸೂದನಃ ।
ಕ್ಷಿಪ್ರಮಾರೋಪಯಾಂಚಕ್ರೇ ಸರ್ವಸ್ವಂ ಗರುಡೋಪರಿ ॥೩೨॥

ಅನಂತರ ಮಧುಸೂದನನು ಬಾಣನ ಸರ್ವ ಸಂಪತ್ತನ್ನೂ ತೆಗೆದುಕೊಂಡು ಶೀಘ್ರವಾಗಿ ಅವೆಲ್ಲವನ್ನೂ ಗರುಡನ ಮೇಲೆ ಏರಿಸಿದನು.

ತ್ವರಯಾऽಥ ಸ ಕೌಂತೇಯ ಬಲದೇವಂ ಮಹಾಬಲಮ್ ।
ಪ್ರಾದ್ಯುಮ್ನಿಂ ಚ ಮಹಾವೀರ್ಯಮನಿರುದ್ಧಂ ಮಹಾದ್ಯುತಿಮ್ ।
ಉಷಾಂ ಚ ಸುದತೀಂ ರಾಜನ್ ಭೃತ್ಯದಾಸೀಗಣೈಃ ಸಹ ॥೩೩॥

ಸರ್ವಾನೇತಾನ್ ಸಮಾರೋಪ್ಯ ಗರುಡೋಪರಿ ವೀರ್ಯವಾನ್ ।
ಮುದಾ ಯುಕ್ತೋ ಮಹಾತೇಜಾಃ ಪೀತಾಂಬರಧರೋ ಬಲೀ ॥೩೪॥

ದಿವ್ಯಾಭರಣಚಿತ್ರಾಂಗಃ ಶಂಖಚಕ್ರಗದಾಸಿಧೃಕ್ ।
ಆರುರೋಹ ಗರುತ್ಮಂತ ಮುದಯಂ ಭಾಸ್ಕರೋ ಯಥಾ ॥೩೫॥

ಕೌಂತೇಯನೇ! ಅನಂತರ ಪೀತಾಂಬರಧಾರಿಯಾದ ಬಲಿಷ್ಠನಾದ ಮಹಾತೇಜಸ್ವಿಯಾದ ಪರಾಕ್ರಮಶಾಲಿಯಾದ ಕೃಷ್ಣನು ದಿವ್ಯಾಭರಣಗಳಿಂದ ಅಲಂಕೃತನಾಗಿ ಶಂಖ ಚಕ್ರ ಗದಾ ಖಡ್ಗಧಾರಿಯಾಗಿ ಮಹಾಬಲನಾದ ಬಲರಾಮನನ್ನೂ ಮಹಾಪರಾಕ್ರಮಿಯಾದ ಮಹಾಕಾಂತಿವಂತನಾದ ಪ್ರದ್ಯುಮ್ನನ ಮಗನಾದ ಅನಿರುದ್ಧನನ್ನೂ ಸುಂದರಿಯಾದ ಉಷೆಯನ್ನೂ ಅವಳ ದಾಸದಾಸಿಗಣವೆಲ್ಲವನ್ನೂ ಗರುಡನ ಮೇಲೆ ಏರಿಸಿ ತಾನೂ ಸಹ ಭಾಸ್ಕರನು ಉದಯಗಿರಿಯನ್ನು ಏರಿದಂತೆ ಗರುಡನ ಮೇಲೆ ಏರಿದನು.

ಅಥಾರುಹ್ಯ ಸುಪರ್ಣಂ ಸ ಪ್ರಯಯೌ ದ್ವಾರಕಾಂ ಪ್ರತಿ ।
ಪ್ರವಿಶ್ಯ ಸ್ವಪುರಂ ಕೃಷ್ಣೋ ಯಾದವೈಃ ಸಹಿತಸ್ತತಃ ।
ಪ್ರಮುಮೋದ ತದಾ ರಾಜನ್ ಸ್ವರ್ಗಸ್ಥೋ ವಾಸವೋ ಯಥಾ ॥೩೬॥

ಕೃಷ್ಣನು ಗರುಡನನ್ನು ಏರಿ ದ್ವಾರಕೆಯನ್ನು ಕುರಿತು ಹೊರಟು ದ್ವಾರಕೆಯನ್ನು ಪ್ರವೇಶಿಸಿ ಎಲ್ಲಾ ಯಾದವರಿಂದಲೂ ಸಹಿತನಾಗಿ ಸ್ವರ್ಗದಲ್ಲಿ ಇರುವ ಇಂದ್ರನಂತೆ ಆನಂದಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಪಂಚಪಂಚಾಶೋऽಧ್ಯಾಯಃ ॥
॥ ಅರ್ಘಾಭಿಹರಣಪರ್ವಣಿ ಚತುರ್ವಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಐವತ್ತೈದನೆಯ ಅಧ್ಯಾಯವು ಮುಗಿಯಿತು.

★★★★

ಐವತ್ತಾರನೆಯ ಅಧ್ಯಾಯ

(ಭೀಷ್ಮರಿಂದ ಕೃಷ್ಣನ ವಿಜಯವನ್ನು ಹೇಳಿ ಉಪಸಂಹಾರ)

ಭೀಷ್ಮಃ

ಸೂದಿತಾ ಮೌರವಾಃ ಪಾಶಾ ನಿಸುಂಭನರಕೌ ಹತೌ ।
ಕೃತಕ್ಷೇಮಃ ಪುನಃ ಪಂಥಾಃ ಪುರಂ ಪ್ರಾಗ್ಜ್ಯೋತಿಷಂ ಪ್ರತಿ ॥೧॥

ಮೌರವಪಾಶಗಳು ಕೃಷ್ಣನಿಂದ ನಾಶಮಾಡಲ್ಪಟ್ಟವು. ನಿಸುಂಭ ಮತ್ತು ನರಕರು ಸಂಹಾರಮಾಡಲ್ಪಟ್ಟರು. ಪ್ರಾಗ್ಜ್ಯೋತಿಷಪಟ್ಟಣದ ಮಾರ್ಗವು ಕ್ಷೇಮವಾಗಿ ಮಾಡಲ್ಪಟ್ಟಿತು.

ಶೌರಿಣಾ ಪೃಥಿವೀಪಾಲಾಃ ತ್ರಾಸಿತಾ ಭರತರ್ಷಭ ।
ಧನುಷಶ್ಚ ಪ್ರಣಾದೇನ ಪಾಂಚಜನ್ಯಸ್ವನೇನ ಚ ॥೨॥

ಎಲೈ ಭರತಶ್ರೇಷ್ಠನೇ! ಕೃಷ್ಣನ ಧನುಸ್ಸಿನ ಠೇಂಕಾರದಿಂದಲೂ ಮತ್ತು ಪಾಂಚಜನ್ಯದ ನಾದದಿಂದಲೂ ರಾಜರು ಹೆದರಿಹೋದರು.

ಮೇಘಪ್ರಖ್ಯೈರನೀಕೈಶ್ಚ ದಾಕ್ಷಿಣಾತ್ಯಾಭಿಸಂವೃತಮ್ ।
ರುಗ್ಮಿಣಂ ತ್ರಾಸಯಾಮಾಸ ಕೇಶವೋ ಭರತರ್ಷಭ ॥೩॥

ಎಲೈ ಭರತರ್ಷಭನೇ! ಮೇಘ ಸದೃಶವಾದ ದಾಕ್ಷಿಣಾತ್ಯ ಸೈನ್ಯಗಳಿಂದ ಕೂಡಿದ ರುಗ್ಮಿಯನ್ನು ಕೇಶವನು ಹೆದರಿ ನಡುಗುವಂತೆ ಮಾಡಿದನು.

ತತಃ ಪರ್ಜನ್ಯಘೋಷೇಣ ರಥೇನಾದಿತ್ಯವರ್ಚಸಾ ।
ಉವಾಹ ಮಹಿಷೀಂ ಭೋಜ್ಯಾಮೇಷ ಚಕ್ರಗದಾಧರಃ ॥೪॥

ಅನಂತರ ಚಕ್ರಗದಾಧರನಾದ ಇವನು ಪರ್ಜನ್ಯಘೋಷವಿದ್ದ ಆದಿತ್ಯಕಾಂತಿಯಿದ್ದ ರಥದಲ್ಲಿ ಸಾಗಿ ಭೋಜಕುಲ ರಾಜಕುಮಾರಿಯಾದ ರುಗ್ಮಿಣಿಯನ್ನು ವಿವಾಹವಾದನು.

ಆರಥ್ಯಾಮಾಹೃತಕ್ರೋಧಃ ಶಿಶುಪಾಲಶ್ಚ ನಿರ್ಜಿತಃ ।
ವಕ್ರಶ್ಚ ಸಹ ಶೈಬ್ಯೇನ ಶತಧನ್ವಾ ಚ ಕ್ಷತ್ರಿಯಃ ॥೫॥

ರಾಜಮಾರ್ಗದಲ್ಲಿ ಕ್ರೋಧಗೊಂಡವನಾಗಿ ಶಿಶುಪಾಲನನ್ನು ಸೋಲಿಸಿದನು. ದಂತವಕ್ರನೂ ಶೈಬ್ಯನೂ ಕ್ಷತ್ರಿಯನಾದ ಶತಧನ್ವನೂ ಅವನಿಂದ ನಿರ್ಜಿತರಾದರು.

ಇಂದ್ರದ್ಯುಮ್ನೋ ಹತಃ ಕೋಪಾದ್ ಯವನಶ್ಚ ಕಶೇರುಮಾನ್ ।
ಹತಃ ಸೌಭಪತಿಶ್ಚೈಷ ಸಾಲ್ವಶ್ಚ ಕೃತಧನ್ವಿನಾ ॥೬॥

ಅವನ ಕೋಪದಿಂದ ಇಂದ್ರದ್ಯುಮ್ನನು ಹತನಾದನು. ಯವನ ಕಶೇರುಮಾನ್ ಅವರೂ ಸಹ ಹತರಾದರು. ಸೌಭಪತಿಯಾದ ಸಾಲ್ವನೂ ಧನುರ್ವಿದ್ಯಾ ಪಾರಂಗತನಾದ ಕೃಷ್ಣನಿಂದ ಕೊಲ್ಲಲ್ಪಟ್ಟನು.

ಪರ್ವತಾನಾಂ ಸಹಸ್ರಂ ಚ ಚಕ್ರೇಣ ಪುರುಷೋತ್ತಮಃ ।
ವಿಭಜ್ಯ ಪುಂಡರೀಕಾಕ್ಷೋ ದ್ಯುಮತ್ಸೇನಮಯೋಧಯತ್ ॥೭॥

ಪುರುಷೋತ್ತಮನಾದ ಇವನು ತನ್ನ ಚಕ್ರದಿಂದ ಸಹಸ್ರಪರ್ವತಗಳನ್ನು ಸೀಳಿ ದ್ಯುಮತ್ಸೇನನ ಜೊತೆಯಲ್ಲಿ ಯುದ್ಧವನ್ನು ಮಾಡಿ ಸೋಲಿಸಿದನು.

ಮಹೇಂದ್ರಶಿಖರೇ ಚೈವ ನಿಮೇಷಾಂತರಚಾರಿಣೌ ।
ಜಗ್ರಾಹ ಭರತಶ್ರೇಷ್ಠ ರಾವಣಸ್ಯಾಭಿತಶ್ಚರೌ ॥೮॥

ಎಲೈ ಭರತಶ್ರೇಷ್ಠನೇ! ಪುಂಡರೀಕಾಕ್ಷನಾದ ಇವನು ಮಹೇಂದ್ರ ಪರ್ವತದಲ್ಲಿ ಕಣ್ಣುರೆಪ್ಪೆ ಮುಚ್ಚಿ ಬಿಡುವುದರಲ್ಲಿ ಬಹಳ ದೂರ ಹೋಗುವ ಮೈಂದ ವಿವಿದರೆಂಬ ವಾನರರನ್ನು ಸೋಲಿಸಿದನು.

ಇರಾವತ್ಯಾಮುಭೌ ವೀರಾವಗ್ನಿಸೂರ್ಯಸಮೌ ಬಲೇ ।
ಗೋಪತಿಸ್ತಾಳಕೇತುಶ್ಚ ನಿಹತೌ ಶಾರ್ಙ್ಗಧನ್ವನಾ ॥೯॥

ಶಾರ್ಙ್ಗಧಾರಿಯಾದ ಇವನು ಇರಾವತಿಯ ಸಮೀಪದಲ್ಲಿ ಅಗ್ನಿಸೂರ್ಯಸಮಾನ ಬಲವುಳ್ಳ ವೀರರಾದ ಗೋಪತಿ ಮತ್ತು ತಾಳಕೇತು ರಾಜರನ್ನು ಸಂಹರಿಸಿದನು.

ಅಕ್ಷಪ್ರಪತನೇ ಚೈವ ನೇಮಿಹಂಸಪದೇಷು ಚ ।
ಉಭೌ ತಾವಪಿ ಕೃಷ್ಣೇನ ಸ್ವರಾಷ್ಟ್ರೇ ವಿನಿಪಾತಿತೌ ॥೧೦॥

ಅಕ್ಷಪ್ರಪತನದೇಶದಲ್ಲಿಯೂ ನೇಮಿಹಂಸದೇಶದಲ್ಲಿಯೂ ಇದ್ದ ರಾಜರು ಅವರ ರಾಜ್ಯದಲ್ಲಿಯೇ ಕೃಷ್ಣನಿಂದ ಸಂಹರಿಸಲ್ಪಟ್ಟರು.

ದಗ್ಧಾ ವಾರಾಣಸೀ ತಾತ ಕೇಶವೇನ ಮಹಾತ್ಮನಾ ।
ಸಾನುಬಂಧಃ ಸರಾಷ್ಟ್ರಶ್ಚ ಕಾಶೀನಾಮೃಷಭೋ ಹತಃ ॥೧೧॥

ಪ್ರೀತಿಪಾತ್ರನೇ! ವಾರಾಣಸಿಯು ಮಹಾತ್ಮನಾದ ಕೃಷ್ಣನ ಚಕ್ರದಿಂದ ದಗ್ಧವಾಯಿತು. ಕಾಶಿಯ ರಾಜನು ತನ್ನ ರಾಷ್ಟ್ರ ಮತ್ತು ಪರಿವಾರದೊಂದಿಗೆ ಹತನಾದನು.

ಪ್ರಾಗ್ಜ್ಯೋತಿಷಪುರಂ ಶ್ರೇಷ್ಠಮಸುರೈರ್ಬಹುಭಿರ್ವೃತಮ್ ।
ಪ್ರಾಪ್ಯ ಲೋಹಿತಕೂಟಾನಿ ಕೃಷ್ಣೇನ ವರುಣೋ ಜಿತಃ ।
ಅಜೇಯೋ ದುಷ್ಪ್ರಧರ್ಷಶ್ಚ ಲೋಕಪಾಲೋ ಮಹಾದ್ಯುತಿಃ ॥೧೨॥

ಅನೇಕ ಅಸುರರಿಂದ ಆವೃತವಾದ ಪ್ರಾಗ್ಜ್ಯೋತಿಷಪಟ್ಟಣಕ್ಕೆ ಹೋಗಿ ಸುವರ್ಣಮಯವಾದ ಗಿರಿ ಶೃಂಗಗಳನ್ನು ತಲುಪಿ ಕೃಷ್ಣನು ದುಷ್ಪ್ರಧರ್ಷನೂ ಲೋಕಪಾಲನೂ ಅಜೇಯನೂ ಮಹಾದ್ಯುತಿಯೂದ ವರುಣನನ್ನು ಸೋಲಿಸಿದನು.

ಇಂದ್ರದ್ವೀಪೋ ಮಹೇಂದ್ರೇಣ ಗುಪ್ತೋ ಮಘವತಾ ಸ್ವಯಮ್ ।
ಪಾರಿಜಾತೋ ಹೃತಃ ಪಾರ್ಥ ಕೇಶವೇನ ಮಹಾತ್ಮನಾ ॥೧೩॥

ಇಂದ್ರನಿಂದ ಗುಪ್ತವಾದ ಇಂದ್ರದ್ವೀಪರಾಜನನ್ನು ಸೋಲಿಸಿದನು. ಮಹಾತ್ಮನಾದ ಕೇಶವನು ಇಂದ್ರನ ವನದಿಂದ ಪಾರಿಜಾತನನ್ನು ಅಪಹರಿಸಿದನು.

ಪಾಂಡ್ಯಂ ಪೌಂಡ್ರ್ಯಂ ಚ ಮಾತ್ಸ್ಯಂ ಚ ಕಳಿಂಗಂ ಚ ಜನಾರ್ದನಃ ।
ಜಘಾನ ಸಹಿತಾನ್ ಸರ್ವಾನಂಗರಾಜಂ ಚ ಮಾಧವಃ ॥೧೪॥

ಜನಾರ್ದನನು ಪಾಂಡ್ಯ ಪೌಂಡ್ರ ಮತ್ಸ್ಯ ಕಳಿಂಗ ದೇಶದ ರಾಜರುಗಳನ್ನು ಸಂಹರಿಸಿದನು. ಮಾಧವನು ಎಲ್ಲರೂ ಜೊತೆಯಲ್ಲಿ ಯುದ್ಧಕ್ಕೆ ಬಂದಾಗ ಅಂಗರಾಜನನ್ನು ಸಂಹರಿಸಿದನು.

ಏಷ ಚೈಕಶತಂ ಹತ್ವಾ ರಥೇನ ಕ್ಷತ್ರಪುಂಗವಾನ್ ।
ಗಾಂಧಾರೀಮವಹತ್ ಕೃಷ್ಣೋ ಮಹಿಷೀಂ ಯಾದವರ್ಷಭಃ ॥೧೫॥

ಈ ಯಾದವರ್ಷಭನು ನೂರೊಂದು ಜನ ಕ್ಷತ್ರಿಯಶ್ರೇಷ್ಠರನ್ನು ಏಕ ರಥದಲ್ಲಿ ಯುದ್ಧಮಾಡಿ ಸೋಲಿಸಿ ಗಾಂಧಾರದೇಶದ ರಾಜಕುಮಾರಿಯಾದ ಗಾಂಧಾರಿಯನ್ನು ವಿವಾಹವಾದನು.

ಏಷ ಗಾಂಡೀವಧನ್ವಾನಂ ಕ್ರೀಡಾರ್ಥಂ ಮಧುಸೂದನಃ ।
ಜಿಗಾಯ ಭರತಶ್ರೇಷ್ಠ ಕುಂತ್ಯಾಶ್ಚ ಪ್ರಮುಖೇ ವಿಭುಃ ॥೧೬॥

ಎಲೈ ಭರತಶ್ರೇಷ್ಠನೇ! ಮಧುಸೂದನನು ಕ್ರೀಡಾರ್ಥವಾಗಿ ಕುಂತಿಯ ಎದುರಿನಲ್ಲಿ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಿ ಅರ್ಜುನನನ್ನು ಸೋಲಿಸಿದನು.

ದ್ರೋಣಂ ದ್ರೌಣಿಂ ಕೃಪಂ ಕರ್ಣಂ ಭೀಮಸೇನಂ ಸುಯೋಧನಮ್।
ವಕ್ರಾನುಯಾನೇ ಸಹಿತಾನ್ ಜಿಗಾಯ ಭರತರ್ಷಭ ॥೧೭॥

ಎಲೈ ಭರತರ್ಷಭನೇ! ದ್ರೋಣ ಅಶ್ವತ್ಥಾಮ ಕೃಪ ಕರ್ಣ ಭೀಮಸೇನ ಸುಯೋಧನ ಎಲ್ಲರೂ ರೈವತ ಪರ್ವತದಲ್ಲಿ ತಮ್ಮ ತಮ್ಮ ರಥದಲ್ಲಿ ವಕ್ರಗತಿಗಳಲ್ಲಿ ತನ್ನ ಜೊತೆ ಯುದ್ಧಕ್ಕೆ ಬಂದಾಗ ಅವರೆಲ್ಲರನ್ನೂ ಸೋಲಿಸಿದನು.

ಬಭ್ರೋಶ್ಚ ಪ್ರಿಯಮನ್ವಿಚ್ಛನ್ನೇಷ ಚಕ್ರಗದಾಧರಃ ।
ವೇಣುದಾರಿವೃತಾಂ ಭಾರ್ಯಾಂ ಪ್ರಮಮಾಥ ಯುಧಿಷ್ಠಿರ ॥೧೮॥

ಎಲೈ ಯುಧಿಷ್ಠಿರನೇ! ಚಕ್ರಗದಾಧರನಾದ ಇವನು ಬಭ್ರು ಎಂಬ ಯಾದವನಿಗೆ ಪ್ರಿಯವನ್ನು ಉಂಟುಮಾಡಲು ವೇಣುದಾರಿ ಎಂಬ ಕ್ಷತ್ರಿಯನಿಗೆ ಕೊಡಬೇಕೆಂದು ಸಂಕಲ್ಪಿಸಿದ್ದ ಕನ್ಯೆಯನ್ನು ಅಪಹರಿಸಿದನು.

ಪರ್ಯಾಪ್ತಾಂ ಪೃಥಿವೀಂ ಸರ್ವಾಂ ಸಾಶ್ವಾಂ ಸರಥಕುಂಜರಾಮ್ ।
ವೇಣುದಾರಿವಶೇ ಯುಕ್ತಾಂ ಜಿಗಾಯ ಮಧುಸೂದನಃ ॥೧೯॥

ಮಧುಸೂದನನಾದ ಇವನು ವೇಣುದಾರಿಯ ವಶದಲ್ಲಿದ್ದ ಸಮಗ್ರವಾದ ಭೂಮಿಯನನ್ನು ಅಶ್ವರಥಕುಂಜರಗಳನ್ನೂ ಗೆದ್ದನು.

ಅವಾಪ್ಯ ತಪಸಾ ವೀರ್ಯಂ ಬಲಮೋಜಶ್ಚ ಭಾರತ ।
ತ್ರಾಸಿತಾಃ ಸಗಣಾಃ ಸರ್ವೇ ಬಾಣೇನ ವಿಬುಧಾಧಿಪಾಃ ॥೨೦॥

ಭಾರತನೇ! ಬಾಣನು ತಪಸ್ಸಿನ ಬಲದಿಂದ ಶೌರ್ಯಬಲ ಸಹನ ಶಕ್ತಿಗಳನ್ನು ಪಡೆದು ಎಲ್ಲಾ ದೇವಾಧಿಪರಿಗೂ ಅವರ ಪರಿವಾರಕ್ಕೂ ಭಯವನ್ನು ಉಂಟುಮಾಡಿದ್ದನು.

ವಜ್ರಾಶನಿಗದಾಪಾಶೈಃ ತ್ರಾಸಯದ್ಬಿರನೇಕಶಃ ।
ತಸ್ಯ ನಾಸೀದ್ ರಣೇ ಮೃತ್ಯುರ್ದೇವೈರಪಿ ಸವಾಸವೈಃ ॥೨೧॥

ಇಂದ್ರ ಮೊದಲಾದವರು ತಮ್ಮ ವಜ್ರಾಯುಧ ಅಶನಿ ಗದಾ ಪಾಶ ಮೊದಲಾದ ಆಯುಧಗಳಿಂದ ಹೆದರಿಸಿದರೂ ಅವನಿಗೆ ಯುದ್ಧದಲ್ಲಿ ಯಾರಿಂದಲೂ ಮೃತ್ಯುವು ಇರಲಿಲ್ಲ.

ಸೋಽಭಿಭೂತಶ್ಚ ಕೃಷ್ಣೇನ ನಿಹತಶ್ಚ ಮಹಾತ್ಮನಾ ।
ಛಿತ್ತ್ವಾ ಬಾಹುಸಹಸ್ರಂ ತದ್ ಗೋವಿಂದೇನ ಮಹಾತ್ಮನಾ ॥೨೨॥

ಅಂತಹ ಬಾಣನನ್ನು ಮಹಾತ್ಮನಾದ ಕೃಷ್ಣನು ಅವನ ಸಹಸ್ರಬಾಹುಗಳನ್ನು ಕತ್ತರಿಸಿ ಅವನನ್ನು ಸೋಲಿಸಿದನು.

ಏಷ ಕ್ರೀಡನ್ ಮಹಾಬಾಹುಃ ಕಂಸಂ ಚ ಮಧುಸೂದನಃ ।
ಪೈತಕಂ ಚಾತಿರೋಮಾಣಂ ನಿಜಘಾನ ಜನಾರ್ದನಃ ॥೨೩॥

ಈ ಮಹಾಬಾಹುವಾದ ಜನಾರ್ದನನಾದ ಮಧುಸೂದನನು ಲೀಲೆಯಿಂದಲೇ ಕಂಸನನ್ನೂ ಪೈಠಕನನ್ನೂ ಅತಿಲೋಮನನ್ನೂ ಸಂಹರಿಸಿದನು.

ಜಂಭಮೈರಾವತಂ ಚೈವ ವಿರೂಪಂ ಚ ಮಹಾಯಶಾಃ ।
ಜಘಾನ ಭರತಶ್ರೇಷ್ಠ ಶಂಬರಂ ಚಾರಿಮರ್ದನಮ್ ॥೨೪॥

ಎಲೈ ಭರತಶ್ರೇಷ್ಠನೇ! ಮಹಾಕೀರ್ತಿಶಾಲಿಯಾದ ಇವನು ಜಂಭನನ್ನು ಐರಾವತನನ್ನು ವಿರೂಪನನ್ನು ಮತ್ತು ಶತ್ರು ಮರ್ದನನಾದ ಶಂಬರನನ್ನು ಸಂಹರಿಸಿದನು.

ಏಷ ಭೋಗವತೀಂ ಗತ್ವಾ ವಾಸುಕಿಂ ಭರತರ್ಷಭ ।
ನಿರ್ಜಿತ್ಯ ಪುಂಡರೀಕಾಕ್ಷೋ ರೌಹಿಣೇಯಮಮೋಚಯತ್ ॥೨೫॥

ಭರತರ್ಷಭನೇ! ಪುಂಡರೀಕಾಕ್ಷನಾದ ಇವನು ನಾಗಲೋಕವಾದ ಭೋಗವತಿಗೆ ಹೋಗಿ ವಾಸುಕಿಯನ್ನು ಜಯಿಸಿ ರೋಹಿಣಿಯ ಪುತ್ರನನ್ನು ಬಿಡಿಸಿಕೊಂಡು ಬಂದನು.

ಏವಂ ಬಹೂನಿ ಕರ್ಮಾಣಿ ಶಿಶುರೇವ ಜನಾರ್ದನಃ ।
ಕೃತವಾನ್ ಪುಂಡರೀಕಾಕ್ಷಃ ಸಂಕರ್ಷಣಸಹಾಯವಾನ್ ॥೨೬॥

ಹೀಗೆ ಪುಂಡರೀಕಾಕ್ಷನಾದ ಜನಾರ್ದನನು ಸಂಕರ್ಷಣನ ಜೊತೆಯಲ್ಲಿ ಶಿಶುವಾಗಿದ್ದಾಗಲೇ ಅನೇಕ ಅದ್ಭುತಕರ್ಮಗಳನ್ನು ಮಾಡಿದನು.

ಏವಮೇಷೋಽಸುರಾಣಾಂ ಚ ಸುರಾಣಾಮಪಿ ಸರ್ವಶಃ ।
ಭಯಾಭಯಕರಃ ಕೃಷ್ಣಃ ಸರ್ವಲೋಕೇಶ್ವರಃ ಪ್ರಭುಃ ॥೨೭॥

ಹೀಗೆ ಅಸುರರಿಗೆ ಭಯವನ್ನೂ ಸುರರಿಗೆ ಅಭಯವನನ್ನೂ ಕೊಡುವ ಈ ಕೃಷ್ಣನು ಸರ್ವಲೋಕೇಶ್ವರನಾದ ಪ್ರಭುವು.

ಏವಮೇವ ಮಹಾಬಾಹುಃ ಶಾಸ್ತಾ ಸರ್ವದುರಾತ್ಮನಾಮ್ ।
ಕೃತ್ವಾ ದೇವಾರ್ಥಮಮಿತಂ ಸ್ವಸ್ಥಾನಂ ಪ್ರತಿಪತ್ಸ್ಯತೇ ॥೨೮॥

ಮಹಾಬಾಹುವಾದ ಇವನು ಇದೇ ರೀತಿಯಲ್ಲಿ ಎಲ್ಲಾ ದುಷ್ಟರನ್ನು ಶಿಕ್ಷಿಸುತ್ತಾನೆ. ಅಪಾರವಾದ ದೇವಕಾರ್ಯವನ್ನು ಸಾಧಿಸಿ ಪುನಃ ಸ್ವಸ್ಥಾನವನ್ನು ಹೋಗಿ ಸೇರುವನು.

ಏಷ ಭೋಗವತೀಂ ಪುಣ್ಯಾಂ ಋಷೀಕಾಂತಾಂ ಮಹಾಯಶಾಃ ।
ದ್ವಾರಕಾಮಾತ್ಮಸಾತ್ ಕೃತ್ವಾ ಸಾಗರಂ ಗಮಯಿಷ್ಯತಿ ॥೨೯॥

ಮಹಾಕೀರ್ತಿಶಾಲಿಯಾದ ಇವನು ಋಷೀಕದವರೆಗೂ ಹಬ್ಬಿರುವ ಸಮಸ್ತ ಭೋಗಸಂಪನ್ನವಾದ ದ್ವಾರಕೆಯನ್ನು ತನ್ನ ವಶಕ್ಕೆ ತೆಗೆದುಕೊಂಡು ಸಮುದ್ರವನ್ನು ದೂರಕ್ಕೆ ತಳ್ಳುವನು.

ಬಹುರಮ್ಯವತೀಂ ಪುಣ್ಯಾಂ ಚೈತ್ಯಯೂಪವತೀಂ ಶುಭಾಮ್ ।
ದ್ವಾರಕಾಂ ವರುಣಾವಾಸಂ ಪ್ರವೇಕ್ಷ್ಯತಿ ಸಕಾನನಾಮ್ ॥೩೦॥

ಅನೇಕ ರತ್ನಗಳಿಂದ ಕೂಡಿರುವ ಪವಿತ್ರವಾದ ಚೈತ್ಯಯೂಪಗಳಿಂದ ಅಂಕಿತವಾದ ಮಂಗಳಪ್ರದವಾದ ವರುಣನ ಆವಾಸವಾದ ಕಾನನಗಳಿಂದ ಕೂಡಿರುವ ದ್ವಾರಕೆಯನ್ನು ಪ್ರವೇಶಿಸುವನು.

ತಾಂ ಸೂರ್ಯಸದನಪ್ರಖ್ಯಾಂ ಮನೋಜ್ಞಾಂ ಶಾರ್ಙ್ಗಧನ್ವನಾ ।
ವಿಸೃಷ್ಟಾಂ ವಾಸುದೇವೇನ ಸಾಗರಃ ಪ್ಲಾವಯಿಷ್ಯತಿ ॥೩೧॥

ಸೂರ್ಯನ ಅರಮನೆಯಂತೆ ಇರುವ ಮನೋಹರವಾದ ಆ ಪಟ್ಟಣವನ್ನು ವಾಸುದೇವನು ತ್ಯಜಿಸಿದ ಮೇಲೆ ಸಾಗರವು ಅದನ್ನು ಕೊಚ್ಚಿಹಾಕುತ್ತದೆ.

ಸುರಾಸುರಮನುಷ್ಯೇಷು ನಾಭೂನ್ನ ಭವಿತಾ ಕ್ವಚಿತ್ ।
ಯಸ್ತಾಮಧ್ಯವಸದ್ ರಾಜಾ ಅನ್ಯತ್ರ ಮಧುಸೂದನಾತ್ ॥೩೨॥

ಮಧುಸೂದನನೊಬ್ಬನನ್ನು ಬಿಟ್ಟು ಆ ದ್ವಾರಕೆಯಲ್ಲಿ ವಾಸಮಾಡಿದವರು ಸುರಾಸುರಮನುಷ್ಯರಲ್ಲಿ ಹಿಂದೆ ಯಾರೂ ಇರಲಿಲ್ಲ. ಮತ್ತೆ ಮುಂದೆ ಯಾರೂ ಬರುವುದಿಲ್ಲ.

ಭ್ರಾಜಮಾನಾಸ್ತು ಬಹವೋ ವೃಷ್ಣ್ಯಂಧಕಮಹಾರಥಾಃ ।
ತಜ್ಜುಷ್ಟಂ ಪ್ರತಿಪತ್ಸ್ಯಂತೇ ನಾಕಪೃಷ್ಠಂ ಗತಾಸವಃ ॥೩೩॥

ಪ್ರಕಾಶಮಾನರಾದ ಅನೇಕ ವೃಷ್ಣ್ಯಂಧಕಮಹಾರಥರು ದೇಹತ್ಯಾಗವನ್ನು ಮಾಡಿದ ಮೇಲೆ ಕೃಷ್ಣನಿಂದ ಸೇವಿಸಲ್ಪಟ್ಟ ಸ್ವರ್ಗವನ್ನು ಪಡೆಯುವರು.

ಏವಮೇಷ ದಶಾರ್ಹಾಣಾಂ ವಿಧಾಯ ವಿಧಿನಾ ವಿಧಿಮ್ ।
ವಿಷ್ಣುರ್ನಾರಾಯಣಃ ಸೋಮಃ ಸೂರ್ಯಶ್ಚ ಸವಿತಾ ಸ್ವಯಮ್ ॥೩೪॥

ವಿಷ್ಣುವೂ ನಾರಾಯಣನೂ ಆದ ಇವನು ಹೀಗೆ ಎಲ್ಲಾ ದಾಶಾರ್ಹರಿಗೂ ವಿಧಿ ಪೂರ್ವಕವಾಗಿ ಸಮಸ್ತ ಸೌಕರ್ಯಗಳನ್ನು ಮಾಡಿ ಸೋಮನೂ ಸೂರ್ಯನೂ ಸವಿತೃವೂ ತಾನೇ ಆದನು. (ಸೋಮ ಸೂರ್ಯಾದಿನಾಮಕನಾಗಿ ತಾನೇ ಅವರವರ ವ್ಯಾಪಾರಗಳನ್ನು ಮಾಡಿ ಅವರಿಂದ ಮಾಡಿಸುವನು.)

ಅಪ್ರಮೇಯೋಽನಿಯೋಜ್ಯಶ್ಚ ತತ್ರ (ಸ್ವಯಂ) ಕಾಮಗಮೋ ವಶೀ ।
ಮೋದತೇ ಭಗವಾನ್ ಭೂತೈರ್ಬಾಲಃ ಕ್ರೀಡನಕೈರಿವ ॥೩೫॥

ಇವನ ಮಹಿಮೆಯನ್ನು ಯಾರೂ ತಿಳಿಯಲು ಸಾಧ್ಯವಿಲ್ಲ. ಇವನು ಯಾರಿಗೂ ವಶನಾಗುವವನಲ್ಲ ಇವನು ತನ್ನ ಇಚ್ಛೆಬಂದ ಕಡೆಗೆ ಹೋಗುವವನು. ಸರ್ವವನ್ನೂ ತನ್ನ ಅಧೀನದಲ್ಲಿ ಇಟ್ಟುಕೊಳ್ಳುವವನು. ಅಂತಹ ಭಗವಂತನಾದ ಇವನು ಮಕ್ಕಳು ಆಟದ ಸಾಮಾನುಗಳ ಜೊತೆಯಲ್ಲಿ ಆಡುವಂತೆ ಜೀವರ ಜೊತೆಯಲ್ಲಿ ಆಟವಾಡುತ್ತಾನೆ.

ನೈಷ ಗರ್ಭತ್ವಮಾಪೇದೇ ನ ಯೋನ್ಯಾಮಾವಸತ್ ಪ್ರಭುಃ ।
ಆತ್ಮನಸ್ತೇಜಸಾ ಕೃಷ್ಣಃ ಸರ್ವೇಷಾಂ ಕುರುತೇ ಗತಿಮ್ ॥೩೫॥

ಇವನು ಗರ್ಭವಾಸವನ್ನು ಅನುಭವಿಸಲಿಲ್ಲ. ಪ್ರಭುವಾದ ಇವನು ಯೋನಿಯ ಮೂಲಕ ಹೊರಗೆ ಬರಲಿಲ್ಲ. ಕೃಷ್ಣನು ತನ್ನ ಸಾಮರ್ಥ್ಯದಿಂದಲೇ ಎಲ್ಲರಿಗೂ ಗತಿಯನ್ನು ನೀಡುತ್ತಾನೆ.

ಯಥಾ ಬುದ್ಬುದ ಉತ್ಥಾಯ ತತ್ರೈವ ಪ್ರವಿಲೀಯತೇ ।
ಚರಾಚರಾಣಿ ಭೂತಾನಿ ತಥಾ ನಾರಾಯಣೇ ಸದಾ ॥೩೬॥

ಹೇಗೆ ನೀರಿನಲ್ಲಿ ಬುದ್ಬುದವು ಉಂಟಾಗಿ ಅಲ್ಲಿಯೇ ಲಯವುವನ್ನು ಹೊಂದುತ್ತದೆಯೋ ಅದರಂತೆ ಚರಾಚರವಾದ ಸರ್ವಭೂತಗಳು ನಾರಾಯಣನಿಂದ ಉತ್ಪತ್ತಿಯನ್ನು ಹೊಂದಿ ಅಲ್ಲಿಯೇ ಲಯವನ್ನು ಹೊಂದುತ್ತವೆ.

ನ ಪ್ರಮಾತುಂ ಮಹಾಬಾಹುಃ ಶಕ್ಯೋಽಯಂ ಮಧುಸೂದನಃ ।
ಪರೋ ಹಿ ಪರಮಸ್ತಸ್ಮಾದ್ ವಿಶ್ವರೂಪಾನ್ನ ವಿದ್ಯತೇ ॥೩೭॥

ಎಲೈ ಭಾರತನೇ! ಮಹಾಬಾಹುವಾದ ಕೇಶವನನ್ನು (ಮಧುಸೂದನನನ್ನು) ಯಾರೂ ಸಂಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲ. ಅವನು ಸರ್ವೋತ್ತಮೋತ್ತಮನಾದವನು. ವಿಶ್ವರೂಪಿಯಾದ ಅವನಿಗಿಂತ ಶ್ರೇಷ್ಠವಾದುದು ಯಾವುದೂ ಇಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಷಟ್‌ಪಂಚಾಶೋಧ್ಯಾಯಃ ॥
॥ ಅರ್ಘಾಭಿಹರಣಪರ್ವಣಿ ಪಂಚವಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಐವತ್ತಾರನೆಯ ಅಧ್ಯಾಯವು ಮುಗಿಯಿತು.

★★★★

ಐವತ್ತೇಳನೆಯ ಅಧ್ಯಾಯ

(ಸಹದೇವನಿಂದ ಕೃಷ್ಣನಿಗೆ ಅಗ್ರಪೂಜೆಯ ಸಮರ್ಥನೆ. ವೀರವಚನ. ಶಿಶುಪಾಲನ ಕ್ರೋಧ)

ವೈಶಂಪಾಯನಃ

ಏವಮುಕ್ತ್ವಾ ತತೋ ಭೀಷ್ಮೋ ವಿರರಾಮ ಮಹಾಯಶಾಃ ।
ವ್ಯಾಜಹಾರೋತ್ತರಂ ತತ್ರ ಸಹದೇವೋಽರ್ಥ ತತ್ತ್ವವಿತ್ ॥೧॥

ಮಹಾಕೀರ್ತಿವಂತರಾದ ಭೀಷ್ಮರು ಇಷ್ಟು ಮಾತುಗಳನ್ನಾಡಿ ಮೌನವನ್ನು ಧರಿಸಿದರು. ಆಗ ಅಲ್ಲಿ ಅರ್ಥತತ್ತ್ವಜ್ಞಾನವುಳ್ಳ ಸಹದೇವನು ಉತ್ತರವನ್ನು ಕೊಟ್ಟನು.

ಕೇಶವಂ ಕೇಶಿಹಂತಾರಮಪ್ರಮೇಯಮರಿಂದಮಮ್ ।
ಸರ್ವಲೋಕೇಶ್ವರಂ ಕೃಷ್ಣಂ ವಿಜ್ಞಾಯ ಪುರುಷೋತ್ತಮಮ್ ॥೨॥

ತಮಿಮಂ ಸರ್ವಸಂಪನ್ನಮಾಚಾರ್ಯಂ ಪಿತರಂ ಗುರುಮ್ ।
ಅರ್ಚ್ಯಮರ್ಚಿತಮಸ್ಮಾಭಿಃ ಸರ್ವೇ ಸಮ್ಮಂತುಮರ್ಹಥ ॥೩॥

ಕೃಷ್ಣನು ನಾರಾಯಣನೆಂದೂ ಕೇಶಿಸಂಹಾರಕನೆಂದೂ ಅಪ್ರಮೇಯನೆಂದೂ ಅರಿಂದಮನೆಂದೂ ಪುರುಷೋತ್ತಮನೆಂದೂ ಸರ್ವಲೋಕೇಶ್ವರನೆಂದೂ ತಿಳಿದು ಸರ್ವಗುಣಸಂಪನ್ನನಾದ ಆಚಾರ್ಯನೂ ಪಿತೃವೂ ಗುರುವೂ ಅರ್ಚ್ಯತಮನೂ ಆದ ಇವನನ್ನು ನಾವು ಪೂಜಿಸಿದ್ದೇವೆ. ನೀವೆಲ್ಲರೂ ಇದಕ್ಕೆ ಸಮ್ಮತಿಯನ್ನು ನೀಡಿ.

ಯೋ ವಾ ನ ಸಹತೇ ರಾಜ್ಞಾಂ ಕಶ್ಚಿತ್ ಸಬಲವಾಹನಃ ।
ಕ್ಷಿಪ್ರಂ ಯುದ್ಧಾಯ ನಿರ್ಯಾತು ಶಕ್ತಶ್ಚೇದತ್ರ ಮೇ ಯುಧಿ ॥೪॥

ಯಾವರಾಜನು ಇದನ್ನು ಸಹಿಸುವುದಿಲ್ಲವೋ ಅವನು ಶಕ್ತಿಯಿದ್ದವನಾದರೆ ತನ್ನ ಬಲವಾಹನಗಳ ಸಹಿತವಾಗಿ ತಕ್ಷಣ ನನ್ನ ಜೊತೆ ಯುದ್ಧಕ್ಕೆ ಬರಲಿ.

ಪೂಜ್ಯಮಾನಂ ಮಯಾ ಯೋ ವಃ ಕೃಷ್ಣಂ ನ ಸಹತೇ ನೃಪಾಃ ।
ತಸ್ಯ ಮೂರ್ಧ್ನಿ ಸುಸನ್ನ್ಯಸ್ತಂ ರಾಜ್ಞಃ ಸವ್ಯಂ ಪದಂ ಮಯಾ ।
ಏವಮುಕ್ತೇ ಮಯಾ ಸಮ್ಯಗ್ ಉತ್ತರಂ ಪ್ರಬ್ರವೀತು ಸಃ ॥೫॥

ಎಲೈ ರಾಜರೇ! ನಾನು ಕೃಷ್ಣನಿಗೆ ಪೂಜೆಮಾಡಿದುದನ್ನು ನಿಮ್ಮಲ್ಲಿ ಯಾವನು ಸಹಿಸುವುದ್ದಿಲವೋ ಆ ರಾಜನ ತಲೆಯ ಮೇಲೆ ನನ್ನ ಎಡಗಾಲನ್ನು ಭದ್ರವಾಗಿ ಊರಿದ್ದೇನೆ. ನಾನು ಹೀಗೆ ಹೇಳಿದ ಮೇಲೆ ಅವನು ಉತ್ತರವನ್ನು ನೀಡಲಿ.

ವೈಶಂಪಾಯನಃ

ತತೋ ನ ವ್ಯಾಜಹಾರೈಷಾಂ ಕಶ್ಚಿದ್ ಬುದ್ಧಿಮತಾಂ ಸತಾಮ್ ।
ಮಾನಿನಾಂ ಬಲಿನಾಂ ರಾಜ್ಞಾಂ ಮಧ್ಯೇ ಸಂದರ್ಶಿತೇ ಪದೇ ॥೬॥

ಹೀಗೆ ಆತ್ಮಾಭಿಮಾನಿಗಳೂ ಬಲಿಷ್ಠರೂ ಆದ ರಾಜರ ಮಧ್ಯದಲ್ಲಿ ಸಹದೇವನು ತನ್ನ ಪಾದವನ್ನು ತೋರಿಸುತ್ತಿರಲು ವಿವೇಕಿಗಳೂ ಮತ್ತು ಸಜ್ಜನರೂ ಆದ ರಾಜರ ಮಧ್ಯದಲ್ಲಿ ಯಾವನೂ ಮಾತನಾಡಲಿಲ್ಲ.

ತತೋऽಪತತ್ ಪುಷ್ಪವೃಷ್ಟಿಃ ಸಹದೇವಸ್ಯ ಮೂರ್ಧನಿ ।
ಅದೃಶ್ಯದೇಹಾ ವಾಚಶ್ಚ ಸಾಧುಸಾಧ್ವಿತಿ ಚಾಬ್ರುವನ್ ॥೭॥

ಆಗ ಸಹದೇವನ ಶಿರಸ್ಸಿನ ಮೇಲೆ ಪುಷ್ಪವೃಷ್ಟಿಯುಂಟಾಯಿತು. ಅಶರೀರವಾಣಿಯು ಸಾಧು ಸಾಧು ಎಂದು ಅವನನ್ನು ಪ್ರಶಂಸೆಮಾಡಿತು.

ಆವಿಧ್ಯದಜಿನಂ ಹೃಷ್ಟೋ ಭವಿಷ್ಯದ್‌ಭೂತಜಲ್ಪಕಃ ।
ಸರ್ವಸಂಶಯನಿರ್ಮೋಕ್ತಾ ನಾರದಃ ಸರ್ವಧರ್ಮವಿತ್ ॥೮॥

ಭೂತ ಭವಿಷ್ಯತ್‌ಗಳನ್ನು ಹೇಳುವ ಸರ್ವಸಂಶಯಗಳನ್ನು ಛೇದನೆಮಾಡುವ ಸರ್ವಧರ್ಮಗಳನ್ನು ತಿಳಿದ ನಾರದರು ಸಂತೋಷದಿಂದ ತಮ್ಮ ಕೃಷ್ಣಾಜಿನವನ್ನು ಕೊಡವುತ್ತಾ ಕುಣಿದಾಡಿದರು.

ಉವಾಚಾಖಿಲಭೂತಾನಾಂ ಮಧ್ಯೇ ಸ್ಪಷ್ಟತರಂ ವಚಃ ।
ಕೃಷ್ಣಂ ಕಮಲಪತ್ರಾಕ್ಷಂ ನಾರ್ಚಯಿಷ್ಯಂತಿ ಯೇ ನರಾಃ ।
ಜೀವನ್‌ಮೃತಾಸ್ತು ತೇ ಜ್ಞೇಯಾ ನ ಸಂಭಾಷ್ಯಾಃ ಕದಾಚನ ॥೯॥

ಎಲ್ಲಾ ರಾಜರುಗಳ ಮಧ್ಯದಲ್ಲಿ ಅತ್ಯಂತ ಸ್ಪಷ್ಟವಾದ ಮಾತುಗಳನ್ನು ಆಡಿದರು. ಯಾವ ಮನುಷ್ಯರು ಕಮಲ ಪತ್ರಾಕ್ಷನಾದ ಕೃಷ್ಣನನ್ನು ಪೂಜಿಸುವುದಿಲ್ಲವೋ ಅವರನ್ನು ಜೀವನ್‌ಮೃತನೆಂದು ತಿಳಿಯಬೇಕು. ಅವನ ಜೊತೆಯಲ್ಲಿ ಎಂದೂ ಸಂಭಾಷಣೆಯನ್ನು ಮಾಡಬಾರದು.

ವೈಶಂಪಾಯನಃ

ತತ್ರಾಹೂತಾಗತಾಃ ಸರ್ವೇ ಸುನೀಥಪ್ರಮುಖಾ ನೃಪಾಃ ।
ಪ್ರತ್ಯದೃಶ್ಯಂತ ಸಂಕ್ರುದ್ಧಾ ವಿವರ್ಣಾಃ ಕ್ರೋಧಮೂರ್ಚ್ಛಿತಾಃ ॥೧೦॥

ಅಲ್ಲಿಗೆ ಆಹ್ವಾನಿಸಲ್ಪಟ್ಟು ಆಗಮಿಸಿದ್ದ ಶಿಶುಪಾಲ ಮೊದಲಾದ ರಾಜರೆಲ್ಲರೂ ಕೋಪದಿಂದ ಮೂರ್ಚ್ಛಿತರಾಗಿ ಮುಖದ ಕಾಂತಿಯನ್ನು ಕಳೆದುಕೊಂಡು ತೋರಿದರು.

ಯುಧಿಷ್ಠಿರಾಭಿಷೇಕಂ ಚ ಕೃಷ್ಣೇ ಪೂಜಾಂ ಚ ತಾದೃಶೀಮ್ ।
ವ್ಯಬ್ರುವಂಸ್ತತ್ರ ರಾಜಾನೋ ನಿರ್ವೇದಾದಾತ್ಮನಿಶ್ಚಯಾತ್ ॥೧೧॥

ಕೆಲವುರಾಜರು ತಮ್ಮ ನಿಶ್ಚಯದಂತೆ ಯುಧಿಷ್ಠಿರನ ಯಜ್ಞಾಭಿಷೇಕವನ್ನೂ ಕೃಷ್ಣನಿಗೆಮಾಡಿದ ಅಂತಹ ಅಗ್ರಪೂಜೆಯನ್ನೂ ನಿಂದಿಸಿದರು.

ಸುಹೃದ್ಭಿರ್ವಾರ್ಯಮಾಣಾನಾಂ ತೇಷಾಂ ಹಿ ವಪುರಾಬಭೌ ।
ಆಮಿಷಾದಪಕೃಷ್ಟಾನಾಂ ಸಿಂಹಾನಾಮಿವ ಗರ್ಜ್ಜತಾಮ್ ॥೧೨॥

ಅವರ ವಿಶ್ವಾಸಪಾತ್ರರು ಬೇಡವೆಂದು ನಿಷೇಧಮಾಡುತ್ತಿದ್ದರೂ ಅವರು ಹಿಂದೆ ಸರಿಯದೆ ಅವರ ದೇಹಗಳು ಮಾಂಸದಿಂದ ಹಿಂದಕ್ಕೆ ಎಳೆದ ಕಾರಣದಿಂದ ಗರ್ಜಿಸುವ ಸಿಂಹಗಳಂತೆ ತೋರಿದವು.

ತಂ ಬಲೌಘಮಪರ್ಯಂತಂ ರಾಜಸಾಗರಮವ್ಯಯಮ್ ।
ಕುರ್ವಾಣಂ ಸಮಯಂ ಕೃಷ್ಣೋ ಯುದ್ಧಾಯ ಬುಬುಧೇ ತದಾ ॥೧೩॥

ಆ ರಾಜಸಾಗರವು ಅಪರ್ಯಂತವಾದ ಸೈನ್ಯದಿಂದಕೂಡಿದ್ದಾಗಿ ಯುದ್ಧಕ್ಕೆ ಸನ್ನದ್ಧವಾಗುತ್ತಿದೆ ಎಂದು ಕೃಷ್ಣನು ತಿಳಿದನು.

ಪೂಜಯಿತ್ವಾ ತು ಪೂಜಾರ್ಹಾಂ ಬ್ರಹ್ಮಕ್ಷತ್ರಂ ವಿಶೇಷತಃ ।
ಸಹದೇವೋ ವಿಶೇಷಜ್ಞಃ ಸಮಾಪಯತ ಕರ್ಮ ತತ್ ॥೧೪॥

ಸಹದೇವನು ಪೂಜಾರ್ಹರಾದ ಬ್ರಾಹ್ಮಣರನ್ನೂ ಮತ್ತು ಕ್ಷತ್ರಿಯರನ್ನೂ ಅವರವರ ಯೋಗ್ಯತೆಯಂತೆ ಪೂಜಿಸಿ ಆ ಪೂಜಾಕರ್ಮವನ್ನು ಸಮಾಪ್ತಿಗೊಳಿಸಿದನು.

ತಸ್ಮಿನ್ನಭ್ಯರ್ಚಿತೇ ಕೃಷ್ಣೇ ಸುನೀಥಃ ಶತ್ರುಸೂದನಃ ।
ಅತಿತಾಮ್ರೇಕ್ಷಣಃ ಕ್ರೋಧಾದುವಾಚ ಮನುಜಾಧಿಪಾನ್ ॥೧೫॥

ಅವನು ಕೃಷ್ಣನನ್ನು ಪೂಜಿಸುತ್ತಿರಲು ಶತ್ರುಸೂದನನಾದ ಶಿಶುಪಾಲನು ಕ್ರೋಧದಿಂದ ಕೆಂಪಾದ ಕಣ್ಣುಳ್ಳವನಾಗಿ ರಾಜರನ್ನು ಕುರಿತು ಮಾತನಾಡಿದನು.

ಹಿತಃ ಸೇನಾಪತಿರ್ವೋ ಽಹಂ ಮರ್ಷಯಧ್ವಂ ಕಿಮೀದೃಶಮ್ ।
ಯುಧಿ ತಿಷ್ಠಾಮ ಸನ್ನಹ್ಯ ಸಮೇತಾನ್ ವೃಷ್ಣಿಪಾಂಡವಾನ್ ॥೧೬॥

ನಾನು ನಿಮ್ಮೆಲ್ಲರಿಗೆ ಸೇನಾಪತಿಯಾಗಿದ್ದೇನೆ. ಇಂತಹ ಕರ್ಮವನ್ನು ನೀವು ಹೇಗೆ ಸಹಿಸುತ್ತಿದ್ದೀರಿ? ನಾವೆಲ್ಲರೂ ಯುದ್ಧದಲ್ಲಿ ಸನ್ನದ್ಧರಾಗಿ ವೃಷ್ಣಿಗಳನ್ನೂ ಮತ್ತು ಪಾಂಡವರನ್ನೂ ಒಟ್ಟಿಗೆ ಎದುರಿಸೋಣ.

ವೈಶಂಪಾಯನಃ

ತದಾ ಸರ್ವಾನ್ ಸಮುತ್ಸಾದ್ಯ ನೃಪತೀಂಶ್ಚೇದಿಪುಂಗವಃ ।
ಯಜ್ಞೋಪಘಾತಂ ಪಾರ್ಥಾನಾಮಮನ್ತ್ರಯತ ರಾಜಭಿಃ ॥೧೭॥

ಆಗ ಚೇದಿರಾಜನಾದ ಶಿಶುಪಾಲನು ಎಲ್ಲರಾಜರನ್ನು ಹೀಗೆ ಭರ್ತ್ಸನೆಯನ್ನು ಮಾಡಿ, ಆ ರಾಜರ ಜೊತೆಯಲ್ಲಿ ಯುಧಿಷ್ಠಿರನ ಯಾಗಕ್ಕೆ ವಿಘ್ನವನ್ನು ಉಂಟುಮಾಡುವ ವಿಷಯದಲ್ಲಿ ಮಂತ್ರಾಲೋಚನೆಯನ್ನು ನಡೆಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಸಪ್ತಪಂಚಾಶೋಧ್ಯಾಯಃ ॥
॥ ಅರ್ಘಾಭಿಹರಣಪರ್ವಣಿ ಷಡ್ ವಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಐವತ್ತೇಳನೆಯ ಅಧ್ಯಾಯವು ಮುಗಿಯಿತು.

★★★★

ಐವತ್ತೆಂಟನೆಯ ಅಧ್ಯಾಯ

(ಧರ್ಮರಾಜನ ಭಯದ ವಚನಗಳು ಮತ್ತು ಭೀಷ್ಮರ ಸಮಾಧಾನ)

ವೈಶಂಪಾಯನಃ

ತತಃ ಸಾಗರಸಂಕಾಶಂ ದೃಷ್ಟ್ವಾ ನೃಪತಿಸಾಗರಮ್ ।
ರೋಷಾತ್ ಪ್ರಚಲಿತಂ ಸರ್ವಮಿದಮಾಹ ಯುಧಿಷ್ಠಿರಃ ॥೧॥

ಭೀಷ್ಮಂ ಮತಿಮತಾಂ ಶ್ರೇಷ್ಠಂ ವೃದ್ಧಂ ಕುರುಪಿತಾಮಹಮ್ ।
ಪ್ರಜಾಪತಿಂ ಬೃಹತ್ತೇಜಾಃ ಶತಕ್ರತುರಿವಾರಿಹನ್ ॥೨॥

ಎಲೈ ಶತ್ರುಸೂದನನೇ! ಆಗ ಸಾಗರದಂತೆ ಇದ್ದ ಆ ರಾಜಸಾಗರವೆಲ್ಲವೂ ರೋಷದಿಂದ ಪ್ರಚಲಿತವಾದುದನ್ನು ನೋಡಿ ಯುಧಿಷ್ಠಿರನು ಕುರುಪಿತಾಮಹನಾದ ಮೇಧಾವಿಗಳಲ್ಲಿ ಶ್ರೇಷ್ಠನಾದ ಭೀಷ್ಮನನ್ನು ಕುರಿತು ಮಹಾ ಪರಾಕ್ರಮಿಯಾದ ಇಂದ್ರನು ಬ್ರಹ್ಮನನ್ನು ಕೇಳುವಂತೆ ಈ ಮಾತುಗಳನ್ನು ಆಡಿದನು.

ಅಸೌ ರೋಷಾತ್ ಪ್ರಚಲಿತೋ ಮಹಾನ್ ನೃಪತಿಸಾಗರಃ ।
ಅತ್ರ ಯತ್ ಪ್ರತಿವಕ್ತವ್ಯಂ ತನ್ಮೇ ಬ್ರೂಹಿ ಪಿತಾಮಹ ॥೩॥

ಪಿತಾಮಹನೇ! ಈ ನೃಪಸಾಗರವು ರೋಷದಿಂದ ಪ್ರಚಲಿತವಾಗಿದೆ. ಈಗ ನಾನು ಏನುಮಾಡಬೇಕೆಂದು ಹೇಳು.

ಯಜ್ಞಸ್ಯ ಚ ನ ವಿಘ್ನಃ ಸ್ಯಾತ್ ಪ್ರಜಾನಾಂ ಚ ಹಿತಂ ಭವೇತ್ ।
ಯಥಾ ಸರ್ವತ್ರ ತತ್ಸರ್ವಂ ಬ್ರೂಹಿ ಮಹ್ಯಂ ಪಿತಾಮಹ ॥೪॥

ಪಿತಾಮಹನೇ! ಯಜ್ಞಕ್ಕೆ ವಿಘ್ನವು ಬರಬಾರದು ಪ್ರಜೆಗಳಿಗೂ ಹಿತ ಉಂಟಾಗಬೇಕು. ಏನುಮಾಡಿದರೆ ಹಾಗಾಗುತ್ತದೆ ಎಂದು ನನಗೆ ಹೇಳು.

ವೈಶಂಪಾಯನಃ

ಇತ್ಯುಕ್ತವತಿ ಧರ್ಮಿಷ್ಠೇ ಧರ್ಮರಾಜೇ ಯುಧಿಷ್ಠಿರೇ ।
ಉವಾಚೇದಂ ವಚಸ್ತದಾ ಭೀಷ್ಮಃ ಕುರುಪಿತಾಮಹಃ ॥೫॥

ಧರ್ಮಿಷ್ಠನಾದ ಯುಧಿಷ್ಠಿರನು ಹೀಗೆ ಮಾತನಾಡುತ್ತಿರಲು ಕುರುಪಿತಾಮಹರಾದ ಭೀಷ್ಮರು ಹೀಗೆ ಮಾತನಾಡಿದರು.

ಮಾ ಭೈಸ್ತ್ವಂ ಕುರುಶಾರ್ದೂಲ ಶ್ವಾ ಸಿಂಹಂ ಹಂತುಮರ್ಹತಿ ।
ಶಿವಃ ಪಂಥಾಸ್ತು ಭೀಮೋಽತ್ರ ಮಯಾ ಪೂರ್ವತರಂ ವೃತಃ ॥೬॥

ಕುರುಶಾರ್ದೂಲನೇ! ನೀನು ಭಯಪಡಬೇಡ. ನಾಯಿಯು ಸಿಂಹವನ್ನು ಕೊಲ್ಲಲು ಇಚ್ಛಿಸುತ್ತಿದೆ. ಈ ಮಾರ್ಗವು ಮಂಗಳಕರವಾಗಲಿ. ನಾನು ಈ ಭಯಂಕರವಾದ ಮಾರ್ಗವನ್ನು ಮೊದಲೇ ಆರಿಸಿದ್ದೇನೆ.

ಪ್ರಸುಪ್ತೇ ಹಿ ಯಥಾ ಸಿಂಹೇ ಶ್ವಾನಸ್ತಾತ ಸಮಾಗತಾಃ ।
ಭಷೇಯುಃ ಸಹಿತಾಃ ಸರ್ವೇ ತಥೈವ ವಸುಧಾಧಿಪಾಃ ॥೭॥

ಎಲೈ ಪ್ರೀತಿಪಾತ್ರನೇ! ಸಿಂಹವು ಮಲಗಿರುವಾಗ ನಾಯಿಗಳು ಸಮೀಪಕ್ಕೆ ಬಂದು ಎಲ್ಲವೂ ಒಟ್ಟಾಗಿ ಹೇಗೆ ಬೊಗುಳುತ್ತವೆಯೋ ಹಾಗೆ ಈ ಎಲ್ಲಾ ರಾಜರೂ ನಡೆದುಕೊಳ್ಳುತ್ತಿದ್ದಾರೆ.

ವೃಷ್ಣಿಸಿಂಹಸ್ಯ ಸುಪ್ತಸ್ಯ ತಥೈಮೇಽಭಿಮುಖಾಃ ಸ್ಥಿತಾಃ ।
ಭಷಂತೇ ಮೃಗಸಂಕಾಶಾ ಶ್ವಾನಃ ಸಿಂಹಸ್ಯ ಸನ್ನಿಧೌ ॥೮॥

ನಿದ್ರಿಸುತ್ತಿರುವ ವೃಷ್ಣಿಸಿಂಹನ ಎದುರಿಗೆ ಮೃಗಗಳಿಂತಿರುವ ಈ ಎಲ್ಲಾ ರಾಜರೂ ನಿಂತು ಸಿಂಹದ ಸನ್ನಿಧಿಯಲ್ಲಿ ನಾಯಿಗಳಂತೆ ಬೊಗುಳುತ್ತಿದ್ದಾರೆ.

ನ ಹಿ ಸಂಬುಧ್ಯತೇಯಾವತ್ ಸುಪ್ತಃ ಸಿಂಹ ಇವಾಚ್ಯುತಃ ।
ತದಿದಂ ಜ್ಞಾತಪೂರ್ವಂ ಹಿ ತವ ಸಂಸ್ತೋತುಮಿಚ್ಛತಃ ॥೯॥

ಸಿಂಹದಂತಿರುವ ಅಚ್ಯುತನು ಎಲ್ಲಿಯವರೆಗೆ ಎಚ್ಚರಗೊಳ್ಳುವುದಿಲ್ಲವೋ ಅಲ್ಲಿಯವರೆಗೆ ಬೊಗುಳುತ್ತಾರೆ. ನೀನು ಸ್ತೋತ್ರಮಾಡಲು ಬಯಸಿದಾಗಲೇ ನನಗೆ ಈ ವಿಷಯವು ತಿಳಿದಿದ್ದಿತು.

ತೇನ ಸಿಂಹೀಕರೋತ್ಯೇಷ ಅಸಿಂಹಶ್ಚೇದಿಪುಂಗವಃ ।
ಪಾರ್ಥಿವಾನ್ ಪಾರ್ಥಿವಾಧ್ಯಕ್ಷಃ ಶಿಶುಪಾಲೋಽಲ್ಪಚೇತನಃ ।
ಸರ್ವಾನ್ ಸರ್ವಾತ್ಮನಾ ತಾತ ನೇತುಕಾಮೋ ಯಮಕ್ಷಯಮ್ ॥೧೦॥

ಈ ಚೇದಿರಾಜನು ಅಲ್ಪಬುದ್ಧಿಯುಳ್ಳವನು ಪಾರ್ಥಿವಾಧ್ಯಕ್ಷನಾದ ಇವನು ಸಿಂಹಗಳಲ್ಲದ ಈ ರಾಜರನ್ನು ಸಿಂಹವನ್ನಾಗಿ ಮಾಡಲು ಹೊರಟಿದ್ದಾನೆ. ಪ್ರೀತಿಪಾತ್ರನೇ! ಇವನು ನಿಶ್ಚಯವಾಗಿ ಎಲ್ಲರನ್ನೂ ಯಮಲೋಕಕ್ಕೆ ಕರೆದುಕೊಂಡು ಹೋಗಲು ಬಯಸಿದ್ದಾನೆ.

ನೂನಮೇತತ್ ಸಮಾದಾತುಂ ಪುನರಿಚ್ಛತ್ಯಧೋಕ್ಷಜಃ ।
ಯದತ್ರ ಶಿಶುಪಾಲಸ್ಥಂ ತೇಜಸ್ತಿಷ್ಠತಿ ಭಾರತ ॥೧೧॥

ಎಲೈ ಭಾರತನೇ! ನಿಶ್ಚಿತವಾಗಿ ಅಧೋಕ್ಷಜನು ಶಿಶುಪಾಲನಲ್ಲಿ ಇದ್ದ ತನ್ನ ತೇಜಸ್ಸನ್ನು ಹಿಂದಕ್ಕೆ ತೆಗೆದುಕೊಳ್ಳಲು ಇಚ್ಛಿಸುತ್ತಾನೆ.

ವಿಪ್ಲುತಾ ಚಾಸ್ಯ ಭದ್ರಂ ತೇ ಬುದ್ಧಿರ್ಬುದ್ಧಿಮತಾಂ ವರ ।
ಚೇದಿರಾಜಸ್ಯ ಕೌಂತೇಯ ಸರ್ವೇಷಾಂ ಚ ಮಹೀಕ್ಷಿತಾಮ್ ॥೧೨॥

ಕೌಂತೇಯನೇ! ಈ ಚೇದಿರಾಜನ ಬುದ್ಧಿಯೂ ಮತ್ತು ಈ ಎಲ್ಲಾ ರಾಜರ ಬುದ್ಧಿಯು ವಿಪ್ಲವವನ್ನು ಹೊಂದಿದೆಯಷ್ಟೇ ಮೇಧಾವಿಗಳಲ್ಲಿ ಶ್ರೇಷ್ಠನಾದವನೇ! ನಿನಗೆ ಮಂಗಳವಾಗಲಿ.

ಆದಾತುಂ ಪುಂಡರೀಕಾಕ್ಷ ಏಷ ಇಚ್ಛತಿ ಯಂ ಯದಾ ।
ತಸ್ಯ ವಿಪ್ಲವತೇ ಬುದ್ಧಿರೇವಂ ಚೇದಿಪತೇರ್ಯಥಾ ॥೧೩॥

ಈ ಪುಂಡರೀಕಾಕ್ಷನು ಯಾವಾಗ ಯಾರನ್ನು ಹಿಂದೆತೆಗೆದುಕೊಳ್ಳಲು ಬಯಸುತ್ತಾನೆಯೋ ಆಗ ಅವನ ಬುದ್ಧಿಯು ಶಿಶುಪಾಲನ ಬುದ್ಧಿಯಂತೆ ವಿಪ್ಲವಕ್ಕೆ ಒಳಗಾಗುತ್ತದೆ.

ಚತುರ್ವಿಧಾನಾಂ ಭೂತಾನಾಂ ತ್ರಿಷು ಲೋಕೇಷು ಮಾಧವಃ ।
ಪ್ರಭವಶ್ಚೈವ ಭೂತಾನಾಂ ನಿಧನಂ ಚ ಯುಧಿಷ್ಠಿರ ॥೧೪॥

ಎಲೈ ಯುಧಿಷ್ಠಿರನೇ! ಮೂರು ಲೋಕಗಳಲ್ಲಿರುವ ನಾಲ್ಕು ವಿಧವಾದ ಪ್ರಾಣಿಗಳಿಗೂ ಕೃಷ್ಣನು ಉತ್ಪತ್ತಿ ಕರ್ತ ಮತ್ತು ಸಂಹಾರ ಕರ್ತನಾಗಿದ್ದಾನೆ.

ವೈಶಂಪಾಯನಃ

ಇತಿ ತಸ್ಯ ವಚಃ ಶ್ರುತ್ವಾ ತಥಾ ಚೇದಿಪತಿರ್ನೃಪಃ ।
ಭೀಷ್ಮಂ ರೂಕ್ಷಾಕ್ಷರಾ ವಾಚಃ ಶ್ರಾವಯಾಮಾಸ ಭಾರತ ॥೧೫॥

ಎಲೈ ಭಾರತನೇ! ಚೇದಿಪತಿಯಾದ ಶಿಶುಪಾಲನು ಹೀಗೆ ಭೀಷ್ಮನ ಮಾತುಗಳನ್ನು ಕೇಳಿ ಭೀಷ್ಮನನ್ನು ಕುರಿತು ಕ್ರೂರವಾದ ಮಾತುಗಳನ್ನು ಆಡಲು ಪ್ರಾರಂಭಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಅಷ್ಟಪಂಚಾಶೋऽಧ್ಯಾಯಃ ॥
॥ ಅರ್ಘಾಭಿಹರಣಪರ್ವಣಿ ಸಪ್ತವಿಂಶೋಧ್ಯಾಯಃ ॥

॥ ಅರ್ಘಾಭಿಹರಣಪರ್ವ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಐವತ್ತೆಂಟನೆಯ ಅಧ್ಯಾಯವು ಮುಗಿಯಿತು.

ಇಲ್ಲಿಗೆ ಅರ್ಘಾಭಿಹರಣಪರ್ವವು ಮುಗಿಯಿತು.

★★★★

೬. ಶಿಶುಪಾಲವಧಪರ್ವ

ಐವತ್ತೊಂಭತ್ತನೆಯ ಅಧ್ಯಾಯ

(ಶಿಶುಪಾಲನಿಂದ ಪರಿಹಾಸಪೂರ್ವಕವಾಗಿ ಭೀಷ್ಮರ ನಿಂದೆ)

ಶಿಶುಪಾಲಃ

ವಿಭೀಷಿಕಾಭಿರ್ಬಹ್ವೀಭಿರ್ಭೀಷಯನ್ ಭೀಷ್ಮ ಪಾರ್ಥಿವಾನ್ ।
ನ ಹ್ಯಪತ್ರಪಸೇ ಕಸ್ಮಾದ್ ವೃದ್ಧಃ ಸನ್ ಕುಲಪಾಂಸನಃ ॥೧॥

ಭೀಷ್ಮನೇ! ವೃದ್ಧನು ಕುಲನಾಶಕನೂ ಆದ ನೀನು ಬಹಳ ಬೆದರಿಕೆಯಮಾತಿನಿಂದ ಎಲ್ಲ ರಾಜರನ್ನು ಹೆದರಿಸುತ್ತಾ ಏಕೆ ನಾಚಿಕೆಗೊಳ್ಳುವುದಿಲ್ಲ?

ಯುಕ್ತಮೇತತ್ ತೃತೀಯಾಯಾಂ ಪ್ರಕೃತೌ ತಿಷ್ಠತಾ ತ್ವಯಾ ।
ವಕ್ತುಂ ವಚನಸಂಪನ್ನಸ್ತ್ವಂ ಹಿ ಸರ್ವಕುರೂತ್ತಮಃ ॥೨॥

ವಾರ್ಧಕ್ಯದಲ್ಲಿ ಇರುವ ನಿನಗೆ ಹೀಗೆ ಮಾತನಾಡುವುದು ಯುಕ್ತವಾಗಿಯೇ ಇದೆ. ನೀನು ವಚನ ಸಂಪನ್ನನಾದವನು ಮತ್ತು ಸರ್ವಕುರುಗಳಲ್ಲಿ ಶ್ರೇಷ್ಠನಾದವನು

ನಾವಿ ನೌರಿವ ಸಂಬದ್ಧಾ ಯಥಾಽಂಧೋ ವಾಂಽಧಮನ್ವಿಯಾತ್ ।
ತಥಾಭೂತಾ ಹಿ ಕೌರವ್ಯಾ ಭೀಷ್ಮ ಏಷಾಂ ತ್ವಮಗ್ರಣೀಃ ॥೩॥

ಎಲೈ ಭೀಷ್ಮನೇ! ಯಾವ ಕೌರವರಿಗೆ ನೀನು ನಾಯಕನಾಗಿದ್ದಿಯೋ ಅಂತಹ ಕೌರವರ ಸ್ಥಿತಿ ಹಡಗಿನೊಳಗೆ ಇಟ್ಟ ಹಡಗಿನಂತೆ ಅಥವಾ ಅಂಧನನ್ನು ಹಿಂಬಾಲಿಸಿದ ಅಂಧನಂತೆ.

ಅಪಿ ವೃದ್ಧಸ್ಯ ಮೂರ್ಖಸ್ಯ ಕೇಶವಂ ಸ್ತೋತುಮಿಚ್ಛತಃ ।
ಕಥಂ ಭೀಷ್ಮ ನ ತೇ ಜಿಹ್ವಾ ಶತಧಾ ವಿಪ್ರಶೀರ್ಯತೇ ॥೪॥

ವೃದ್ಧನೂ ಮೂರ್ಖನೂ ಆದ ನಿನಗೆ ಕೃಷ್ಣನನ್ನು ಸ್ತೋತ್ರಮಾಡಲು ಬಯಸಿದಾಗ ನಿನ್ನ ನಾಲಿಗೆಯು ಏಕೆ ನೂರು ಸೀಳುಗಳಾಗಿ ಬಿರಿದು ಹೋಗುವುದಿಲ್ಲ!

ಯತ್ರ ಕುತ್ಸಾ ಪ್ರಯೋಕ್ತವ್ಯಾ ಭೀಷ್ಮ ಬಾಲೇತರೇ ನರೇ ।
ತಮಿಮಂ ಜ್ಞಾನವೃದ್ಧಃ ಸನ್ ಗೋಪಂ ಸಂಸ್ತೋತುಮಿಚ್ಛಸಿ ॥೫॥

ಭೀಷ್ಮನೇ! ಬಾಲ್ಯವನ್ನು ದಾಟಿದ ಯಾವ ಪುರುಷನ ಬಗ್ಗೆ ನಿಂದಾವಚನಗಳನ್ನು ಪ್ರಯೋಗಿಸಬೇಕೋ ಅಂತಹ ಈ ಗೋಪಾಲಕನನ್ನು ಜ್ಞಾನವೃದ್ಧನಾದ ನೀನು ಸ್ತೋತ್ರಮಾಡಲು ಬಯಸುತ್ತೀಯೆ!

ಪೂತನಾಘಾತಪೂರ್ವಾಣಿ ಕರ್ಮಾಣ್ಯಸ್ಯ ವಿಶೇಷತಃ ।
ತ್ವಯಾ ಪ್ರಶಂಸತಾऽಸ್ಮಾಕಂ ಭೂಯಃ ಸಂಚಲಿತಂ ಮನಃ ॥೬॥

ಇವನ ಪೂತನಾ ಹನನಾದಿಕರ್ಮಗಳನ್ನು ವಿಶೇಷವಾಗಿ ನೀನು ಪ್ರಶಂಸೆಮಾಡುವಾಗ ನನ್ನ ಮನಸ್ಸಿಗೆ ಬಹಳ ಕ್ಲೇಶ ಉಂಟಾಯಿತು!

ಯದ್ಯನೇನ ಹತೋ ಬಾಲ್ಯೇ ಶಕುನಿಶ್ಚಿತ್ರಮತ್ರ ಕಿಮ್ ।
ತೌ ಚಾಶ್ವವೃಷಭೌ ಭೀಷ್ಮ ಯೌ ನ ಯುದ್ಧವಿಶಾರದೌ ॥೭॥

ಇವನು ಬಾಲ್ಯದಲ್ಲಿ ಒಂದು ಪಕ್ಷಿಯನ್ನು ಕೊಂದಿದ್ದರೆ ಅದರಲ್ಲಿ ಆಶ್ಚರ್ಯವೇನು? ಅಥವಾ ಯುದ್ಧವಿಶಾರದರಲ್ಲಿದ ಅಶ್ವವನ್ನೂ ವೃಷಭವನ್ನೂ ಕೊಂದರೆ ಎಲೈ ಭೀಷ್ಮನೇ! ಅದರಲ್ಲಿ ಆಶ್ಚರ್ಯವೇನು?

ಚೇತನಾರಹಿತಂ ಕಾಷ್ಠಂ ಯದ್ಯನೇನ ವಿನಾಶಿತಮ್ ।
ಪಾದೇನ ಶಕಟಂ ಭೀಷ್ಮ ತತ್ರ ಕಿಂ ಕೃತಮದ್ಭುತಮ್ ॥೮॥

ಭೀಷ್ಮನೇ! ಜಡವಾದ ಕಾಷ್ಠವನ್ನು ಪಾದದಿಂದ ಶಕಟವನ್ನು ದೂರ ಚಿಮ್ಮಿದರೆ ಅದರಲ್ಲಿ ಏನು ಅದ್ಭುತವನ್ನು ಮಾಡಿದಂತಾಯಿತು?

ಅರ್ಕಪ್ರಮಾಣೌ ತೌ ವೃಕ್ಷೌ ಯದ್ಯನೇನ ನಿಪಾತಿತೌ ।
ನಾಗಶ್ಚ ಪಾತಿತೋಽನೇನ ತತ್ರ ಕಿಂ ವಿಸ್ಮಿತಂ ಜಗತ್ ॥೯॥

ಎಕ್ಕದ ಗಿಡದಷ್ಟು ಎತ್ತರವಾಗಿರುವ ಎರಡು ಮರಗಳು ಇವನಿಂದ ಬೀಳಿಸಲ್ಪಟ್ಟರೆ ಅಥವಾ ಆನೆಯು ಇವನಿಂದ ಬೀಳಿಸಲ್ಪಟ್ಟರೆ ಅದಕ್ಕೆ ಜಗತ್ತು ಏಕೆ ವಿಸ್ಮಯವನ್ನು ಹೊಂದಬೇಕು?

ವಲ್ಮೀಕಮಾತ್ರಂ ಸಪ್ತಾಹಂ ಧಾರಿತೋ ಯದ್ಯನೇನ ಸಃ ।
ತತೋ ಗೋವರ್ಧನೋ ಭೀಷ್ಮ ನನು ತೇ ವಿಸ್ಮಿತಂ ಮನಃ ॥೧೦॥

ಎಲೈ ಭೀಷ್ಮನೇ! ಒಂದು ಹುತ್ತದಷ್ಟು ಎತ್ತರವಾದ ಗೋವರ್ಧನ ಪರ್ವತವನ್ನು ಇವನು ಏಳು ದಿನಗಳ ಕಾಲ ಎತ್ತಿ ಹಿಡಿದರೆ ನಿನ್ನ ಮನಸ್ಸಿಗೆ ಬಹಳ ವಿಸ್ಮಯವಾಯಿತಷ್ಟೇ ?

ಭುಕ್ತಮೇತೇನ ಬಹ್ವನ್ನಂ ಕ್ರೀಡಿತಂ ನಾಗಮೂರ್ಧನಿ ।
ಇತಿ ತೇ ಭೀಷ್ಮ ಶೃಣ್ವಂತಃ ಪರಂ ವೈ ವಿಸ್ಮಯಂ ಗತಾಃ ।
ಮತಿಮಂತೋ ನ ಶಂಸಂತಿ ಸಜ್ಜನಾ ಧರ್ಮಿಣಃ ಸದಾ ॥೧೧॥

ಇವನು ಬಹಳ ಅನ್ನವನ್ನು ಭುಂಜಿಸಿದ್ದಾನೆ. ಸರ್ಪದ ತಲೆಯ ಮೇಲೆ ಆಡಿದ್ದಾನೆ ಎಂಬ ನಿನ್ನ ಮಾತನ್ನು ಕೇಳಿ ಎಲೈ ಭೀಷ್ಮನೇ! ಎಲ್ಲರಿಗೂ ಬಹಳ ವಿಸ್ಮಯವಾಯಿತು. ಧರ್ಮಶೀಲರಾದ ಸಜ್ಜನರು ಬಹಳ ಅನ್ನವನ್ನು ಭುಂಜಿಸುವವನನ್ನು ಎಂದೂ ಪ್ರಶಂಸೆಮಾಡುವುದಿಲ್ಲವಷ್ಟೇ ?

ಯದನ್ನೇನ ಚ ಧರ್ಮಜ್ಞ ಭುಕ್ತಮನ್ನಂ ಬಲೀಯಸಾ ।
ಸ ಚಾನೇನ ಹತಃ ಕಂಸಃ ಕಿಂ ಪಾಪಮಧಿಕಂ ತತಃ ॥೧೨॥

ಅದೂ ಅಲ್ಲದೆ ಎಲೈ ಧರ್ಮಜ್ಞನೇ! ಯಾವ ಕಂಸನ ಅನ್ನವನ್ನು ಇವನು ತಿಂದು ಜೀವಿಸಿದನೋ ಬಲಿಷ್ಠನಾದ ಇವನು ಅಂತಹ ಕಂಸನನ್ನೇ ಕೊಂದನು. ಅದಕ್ಕಿಂತ ಹೆಚ್ಚಿನ ಪಾಪವು ಏನಿದೆ?

ನ ತೇ ಶ್ರುತಮಿದಂ ಭೀಷ್ಮ ಪುರಾ ಕಥಯತಾಂ ಸತಾಮ್ ।
ಯದ್ ವಕ್ಷ್ಯೇ ತ್ವಾಮಧರ್ಮಜ್ಞಂ ವಾಕ್ಯಂ ಕುರುಕುಲಾಧಮ ॥೧೩॥

ಸ್ತ್ರೀಷು ಗೋಷು ನ ಚಾಸ್ತ್ರಾಣಿ ಪಾತಯೇದ್ ಬ್ರಾಹ್ಮಣೇಷು ಚ ।
ಯಸ್ಯ ಚಾನ್ನಾನಿ ಭುಂಜೀತ ಯಶ್ಚ ಸ್ಯಾಚ್ಛರಣಂ ಗತಃ ॥೧೪॥

ಇತಿ ಸಂತೋಽನುಶಂಸಂತಿ ಸಜ್ಜನಾ ಧರ್ಮಿಣಃ ಸದಾ ।
ಭೀಷ್ಮ ಯತ್ ಕಥಿತಂ ಸರ್ವಂ ವಿತಥಂ ತ್ವಯಿ ದೃಶ್ಯತೇ ॥೧೫॥

ಭೀಷ್ಮನೇ ಹಿಂದೆ ಸಜ್ಜನರ ಬಾಯಿಯಿಂದ ನೀನು ಈ ಮಾತುಗಳನ್ನು ಕೇಳಿಲ್ಲವೆ? ಕುರುಕುಲಾಧಮನೇ! ಅಧರ್ಮಜ್ಞನಾದ ನಿನ್ನನ್ನು ಕುರಿತು ನಾನು ಹೇಳುವ ಮಾತುಗಳನ್ನು ಕೇಳು. ಸ್ತ್ರೀಯರ ಮೇಲೂ ಗೋವುಗಳ ಮೇಲೂ ಬ್ರಾಹ್ಮಣರ ಮೇಲೂ ಅಸ್ತ್ರವನ್ನು ಪ್ರಯೋಗಿಸಬಾರದು. ಯಾರ ಅನ್ನವನ್ನು ತಿಂದು ಜೀವಿಸುತ್ತಾನೆಯೋ ಮತ್ತು ಯಾವನು ಆಶ್ರಯದಾತ- ನಾಗಿದ್ದಾನೆಯೋ ಅವನ ಮೇಲೂ ಅಸ್ತ್ರ ಪ್ರಯೋಗವನ್ನು ಮಾಡಬಾರದು. ಹೀಗೆ ಧರ್ಮಿಷ್ಠರಾದ ಸಜ್ಜನರು ಯಾವಾಗಲೂ ಅನುಶಾಸನವನ್ನು ಮಾಡುತ್ತಾರೆ. ಭೀಷ್ಮನೇ! ನೀನು ಹೇಳುವುದೆಲ್ಲವೂ ನಿನ್ನಲ್ಲಿ ಸುಳ್ಳಾಗಿಯೇ ತೋರುತ್ತಿವೆ.

ಜ್ಞಾನವೃದ್ಧಂ ಚ ವೃದ್ಧಂ ಚ ಭೂಯಾಂಸಂ ಕೇಶವಂ ಮಮ ।
ಅಜಾನತ ಇವಾಖ್ಯಾಸಿ ತ್ವಂ ಸ್ತುವನ್ ಕುರುಸತ್ತಮಃ ॥೧೬॥

ಕುರುಸತ್ತಮನಾದ ನೀನು ನಾನು ತಿಳಿಯದ ವ್ಯಕ್ತಿಯಂತೆ ಕೃಷ್ಣನನ್ನು ಸ್ತೋತ್ರಮಾಡುತ್ತಾ ಅವನನ್ನು ಜ್ಞಾನ ವೃದ್ಧನೆಂದೂ ಶ್ರೇಷ್ಠಗುಣವುಳ್ಳವನೆಂದೂ ಹೇಳುತ್ತಿದ್ದೀಯೆ!

ಗೋಘ್ನಃ ಸ್ತ್ರೀಘ್ನಶ್ಚ ಸನ್ ಭೀಷ್ಮ ಕಥಂ ಸಂಸ್ತವಮರ್ಹತಿ ।
ಅಸೌ ಮತಿಮತಾಂ ಶ್ರೇಷ್ಠೋ ಯ ಏಷ ಜಗತಃ ಪತಿಃ ॥೧೭॥

ಎಲೈ ಭೀಷ್ಮನೇ! ಗೋಹತ್ಯವನ್ನು ಮಾಡಿದವನು ಮತ್ತು ಸ್ತ್ರೀ ಹತ್ಯವನ್ನು ಮಾಡಿದವನು ಹೇಗೆ ಸ್ತೋತ್ರಕ್ಕೆ ಯೋಗ್ಯನಾಗುತ್ತಾನೆ? ಇವನು ಮೇಧಾವಿಗಳಲ್ಲಿ ಶ್ರೇಷ್ಠನಾದವನು ಮತ್ತು ಜಗತ್ತಿಗೆ ಪ್ರಭುವಾದವನು!

ಆತ್ಮಾನಮಾತ್ಮನಾऽऽಧಾತುಂ ಯದಿ ಶಕ್ತೋ ಜನಾರ್ದನಃ ।
ಅಕಾಮಯಂತಂ ತಂ ಸಾಧು ಕಥಂ ಸಾಧ್ವಿತಿ ಪಶ್ಯಸಿ ॥೧೮॥

ಜನಾರ್ದನನು ತನ್ನ ಮನಸ್ಸನ್ನು ತಾನೇ ಸಮಾದಾನ ಮಾಡಿಕೊಳ್ಳಲು ಇಚ್ಛಿಸದೆ ದುಷ್ಕರ್ಮಗಳನ್ನೇ ಮಾಡುವವನನ್ನು ನೀನು ಹೇಗೆ ಸಜ್ಜನ ಎಂದು ನೋಡುತ್ತಿಯೆ?

ನ ಗಾಥಾ ಗಾಥಿನಂ ಶಾಸ್ತಿ ಪತತೀತಿ ನ ಕಾರಣಮ್ ।
ಪ್ರಕೃತಿಂ ಯಾಂತಿ ಭೂತಾನಿ ಕುಳಿಂಗಶಕುನಿರ್ಯಥಾ ॥೧೯॥

ಹಾಡುವ ಗೀತೆಗಳು ಹಾಡುವವನಿಗೆ ಶಿಕ್ಷೆಯನ್ನು ಕೊಡುವುದಿಲ್ಲ. ಪ್ರಶಂಸಾತ್ಮಕವಾದ ಗೀತೆಯನ್ನು ಹಾಡುತ್ತಾನೆ ಎಂಬ ಕಾರಣದಿಂದ ಸ್ತೋತ್ರಮಾಡಲ್ಪಟ್ಟ ವ್ಯಕ್ತಿಯಲ್ಲಿ ಗುಣವೂ ಬರುವುದಿಲ್ಲ. ಎಲ್ಲಾ ಪುರುಷರೂ ಕುಳಿಂಗ ಪಕ್ಷಿಯಂತೆ ಅವರವರ ಸ್ವಭಾವವನ್ನೇ ಅನುಸರಿಸುತ್ತಾರೆ. ಸ್ತೋತ್ರದಿಂದ ಶ್ರೇಷ್ಠರೂ ಆಗುವುದಿಲ್ಲ. ನಿಂದೆಯಿಂದ ನೀಚರೂ ಆಗುವುದಿಲ್ಲ.

ನೂನಂ ಪ್ರಕೃತಿರಪ್ಯೇಷಾ ಜಘನ್ಯಾ ನಾತ್ರ ಸಂಶಯಃ ।
ಅಥ ಪಾಪೀಯಸೀ ಚೈಷಾಂ ಪಾಂಡವಾನಾಮಪೀಷ್ಯತೇ ।
ಯೇಷಾಮರ್ಚ್ಯತಮಃ ಕೃಷ್ಣಃ ತ್ವಂ ಚ ಯೇಷಾಂ ಪ್ರದರ್ಶಕಃ ॥೨೦॥

ನಿಶ್ಚಯವಾಗಿ ಈ ನಿನ್ನ ಪ್ರಕೃತಿಯು (ಸ್ವಭಾವವು) ಅತ್ಯಂತ ನೀಚವಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಅದೂ ಅಲ್ಲದೆ ಪಾಂಡವರಿಗೆ ಕೃಷ್ಣನು ಅತ್ಯಂತ ಪೂಜ್ಯನೂ ಮತ್ತು ನೀನು ಮಾರ್ಗದರ್ಶಕನೂ ಆಗಿದ್ದೀರಿ ಅಂತಹ ಪಾಂಡವರ ಪ್ರಕೃತಿಯೂ ಸಹ ಅತ್ಯಂತ ಪಾಪಿಷ್ಠವಾಗಿದೆ ಎಂದು ತೋರುತ್ತಿದೆ!

ಧರ್ಮ್ಯವಾನಿತ್ಯಧರ್ಮಜ್ಞಂ ಪತತೀತಿ ನ ಕಾರಣಮ್ ।
ಕೋ ಹಿ ಧರ್ಮಿಣಮಾತ್ಮಾನಂ ಜಾನನ್ ಜ್ಞಾನವತಾಂ ವರಃ ।
ಕುರ್ಯಾದ್ ಯಥಾ ತ್ವಯಾ ಭೀಷ್ಮ ಕೃತಂ ಧರ್ಮಮವೇಕ್ಷತಾ ॥೨೧॥

ಅಧರ್ಮಜ್ಞನನ್ನು ಧರ್ಮಿಷ್ಠ ಎಂದು ಹೊಗಳಿದರೆ ಅವನು ಆ ಕಾರಣದಿಂದ ಧರ್ಮಿಷ್ಠನಾಗುವುದಿಲ್ಲ. ಎಲೈ ಭೀಷ್ಮನೇ! ತನ್ನನ್ನು ಧರ್ಮಿಷ್ಠನೆಂದು ಜ್ಞಾನಿಗಳಲ್ಲಿ

ಶ್ರೇಷ್ಠನೆಂದು ತಿಳಿದ ಧರ್ಮದೃಷ್ಟಿ ಇದ್ದಯಾವನು ನೀನು ಮಾಡಿದಂತೆ ಮಾಡಲು ಸಾಧ್ಯ ?

ಅನ್ಯಕಾಮಾ ಹಿ ಧರ್ಮಜ್ಞ ಕನ್ಯಕಾ ಪ್ರಾಜ್ಞಮಾನಿನಾ ।
ಗೃಹೀತಪಾಣಿರ್ಧರ್ಮೇಣ ರಾಜ್ಞಾ ಸಾಲ್ವೇನ ಧೀಮತಾ ।
ಅಂಬಾ ನಾಮಾಥ ಭದ್ರಂ ತೇ ಕಥಂ ಚಾಪಹೃತಾ ತ್ವಯಾ ॥೨೨॥

ಎಲೈ ಧರ್ಮಜ್ಞನೇ! ಮೇಧಾವಿಯಾದ ಸಾಲ್ವನಿಂದ ಧರ್ಮದಿಂದ ಪಾಣಿಗ್ರಹಣಮಾಡಿಕೊಳ್ಳಲ್ಪಟ್ಟ ಸಾಲ್ವನ ಮೇಲೆ ಪ್ರೀತಿಯನ್ನು ಹೊಂದಿದ್ದ ಅಂಬಾ ಎಂಬ ಕನ್ಯೆಯನ್ನು ಪ್ರಾಜ್ಞಮಾನಿಯಾದ ನೀನು ಹೇಗೆ ಅಪಹರಿಸಿದೆ? ನಿನಗೆ ಮಂಗಳವಾಗಲಿ!

ಯಾಂ ತ್ವಯಾಽಪಹೃತಾಂ ಭೀಷ್ಮ ಕನ್ಯಾಂ ನೇಷಿತವಾನ್ ನೃಪಃ ।
ಭ್ರಾತಾ ವಿಚಿತ್ರವೀರ್ಯಸ್ತೇ ಸತಾಂ ಧರ್ಮಮನುಸ್ಮರನ್ ॥೨೩॥

ಎಲೈ ಭೀಷ್ಮನೇ! ನಿನ್ನ ತಮ್ಮನಾದ ವಿಚಿತ್ರವೀರ್ಯನು ಸಜ್ಜನರ ಧರ್ಮವನ್ನು ಅನುಸರಿಸುತ್ತಾ ನೀನು ಅಪಹರಿಸಿದ ಕನ್ಯೆಯನ್ನು ವಿವಾಹಮಾಡಿಕೊಳ್ಳಲು ಬಯಸಲಿಲ್ಲ.

ದಾರೇಷು ಯಸ್ಯ ಚಾನ್ಯೇನ ಮಿಷತಃ ಪ್ರಾಜ್ಞಮಾನಿನಃ ।
ಉತ್ಪಾದಿತಾನ್ಯಪತ್ಯಾನಿ ಸಜ್ಜನಾಚರಿತೇ ಪಥಿ ॥೨೪॥

ನಿನ್ನನ್ನು ಪ್ರಾಜ್ಞನೆಂದು ತಿಳಿದುಕೊಂಡಿರುವ ನಿನ್ನ ಕಣ್ಣೆದುರಿಗೆ ನಿನ್ನ ತಮ್ಮನ ಪತ್ನಿಯರಲ್ಲಿ ಬೇರೆಯವರಿಂದ ಸಜ್ಜನರು ಆಚರಿಸುವ ಮಾರ್ಗದಿಂದ ಪುತ್ರರು ಉತ್ಪಾದಿಸಲ್ಪಟ್ಟರು!

ಕೋ ಹಿ ಧರ್ಮೋಽಸ್ತಿ ತೇ ಭೀಷ್ಮ ಬ್ರಹ್ಮಚರ್ಯಮಿದಂ ವೃಥಾ ।
ಯದ್ ಧಾರಯಸಿ ಮೋಹಾತ್ತ್ವಂ ಕ್ಲೀಬತ್ವಾಚ್ಚ ನ ಸಂಶಯಃ ॥೨೫॥

ಭೀಷ್ಮ! ನಿನ್ನಲ್ಲಿ ಯಾವ ಧರ್ಮವಿದೆ? ನಿನ್ನ ಬ್ರಹ್ಮಚರ್ಯವು ವ್ಯಾರ್ಥವಾದುದು. ನೀನು ನಪುಂಸಕನಾದ ಕಾರಣದಿಂದಲೂ ಬ್ರಹ್ಮಚರ್ಯವನ್ನು ಧರಿಸಿದ್ದೀಯೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ನ ತ್ವಹಂ ತವ ಧರ್ಮಜ್ಞ ಪಶ್ಯಾಮಿ ವಿನಯಂ ಕ್ವಚಿತ್ ।
ನಹಿ ತೇ ಸೇವಿತಾ ವೃದ್ಧಾ ಯ ಏವಂ ಧರ್ಮಮಬ್ರವೀತ್ ॥೨೬॥

ಇಷ್ಟಂ ದತ್ತಮಧೀತಂ ಚ ಯಜ್ಞಾಶ್ಚ ಬಹುದಕ್ಷಿಣಾಃ ।
ಸರ್ವಮೇತದಪತ್ಯಸ್ಯ ಕಲಾಂ ನಾರ್ಹತಿ ಷೋಡಶೀಮ್ ॥೨೭॥

ಎಲೈ ಧರ್ಮಜ್ಞನೇ! ನಾನು ನಿನ್ನಲ್ಲಿ ಯಾವ ವಿಶೇಷವಾದ ನೀತಿಯನ್ನೂ(ಶಿಕ್ಷಣವನ್ನೂ) ಕಾಣುತ್ತಿಲ್ಲ. ಹೀಗೆ ಧರ್ಮವನ್ನು ನುಡಿಯುವ ನೀನು ಯಾವ ವೃದ್ಧರನ್ನೂ ಸೇವಿಸಿಲ್ಲ ಎಂಬುದು ಸ್ಪಷ್ಟವಾಗಿದೆ. ತಟಾಕಾದಿ ನಿರ್ಮಾಣಗಳು, ದಾನಾದಿಗಳು ಅಧ್ಯಯನಗಳು ಬಹುದಕ್ಷಿಣೆಯುಳ್ಳ ಯಜ್ಞಗಳು ಇವೆಲ್ಲವೂ ಒಬ್ಬ ಪುತ್ರನ ಹದಿನಾರನೆ ಒಂದು ಭಾಗದಷ್ಟು ಫಲವನ್ನು ಕೊಡಲಾರವು.

ವ್ರತೋಪವಾಸೈರ್ಬಹುಭಿಃ ಕೃತಂ ಭವತಿ ಭೀಷ್ಮ ಯತ್ ।
ಸರ್ವಂ ತದನಪತ್ಯಸ್ಯ ಮೋಘಂ ಭವತಿ ನಿಶ್ಚಯಃ ॥೨೮॥

ಎಲೈ ಭೀಷ್ಮನೇ! ಅನೇಕ ವ್ರತ ಉಪವಾಸಗಳಿಂದ ಮಾಡಿದ ತಪಸ್ಸೆಲ್ಲವೂ ಮಕ್ಕಳಿಲ್ಲದೆ ಇದ್ದರೆ ವ್ಯರ್ಥವಾಗುವುದು ಎಂಬ ವಿಷಯದಲ್ಲಿ ಸಂಶಯವಿಲ್ಲ.

ಸೋಽನಪತ್ಯಶ್ಚ ವೃದ್ಧಶ್ಚ ಮಿಥ್ಯಾಧರ್ಮಾನುಶಾಸನಾತ್ ।
ಹಂಸವತ್ ತ್ವಮಪೀದಾನೀಂ ಜ್ಞಾತಿಭ್ಯೋ ಹ್ಯಾಪ್ನುಯಾ ಭಯಮ್ ॥

ಅಂತಹ ಪುತ್ರಹೀನನಾದ ವೃದ್ಧನಾದ ಮಿಥ್ಯಾಧರ್ಮವನ್ನು ಉಪದೇಶಿಸುವ ನೀನು ನಿನ್ನ ರಾಗಾದಿಗಳಿಂದ ಹಂಸದಂತೆ ಭಯಕ್ಕೆ ಒಳಗಾಗುತ್ತೀಯೆ.

ಏವಂ ಹಿ ಕಥಯಂತ್ಯನ್ಯೇ ನರಾ ಧರ್ಮವಿದಃ ಪುರಾ ।
ಭೀಷ್ಮ ಯತ್ ತದಹಂ ಸಮ್ಯಗ್ ವಕ್ಷ್ಯಾಮಿ ಭವತೇ ಶೃಣು ॥೩೦॥

ಧರ್ಮವನ್ನು ತಿಳಿದ ಪುರಾಣವಕ್ತೃಗಳಾದ ಜನರು ಇಂತಹ ಒಂದು ಕಥೆಯನ್ನು ಹೇಳುತ್ತಾರೆ. ಎಲೈ ಭೀಷ್ಮನೇ! ಅದನ್ನು ನಾನು ನಿನಗೆ ಹೇಳುತ್ತೇನೆ. ಸರಿಯಾಗಿ ಕೇಳು.

ವೃದ್ಧಃ ಕಿಲ ಸಮುದ್ರಾಂತೇ ಕಶ್ಚಿದ್ಧಂಸೋಽಭವತ್ ಪುರಾ ।
ಧರ್ಮವಾಗನ್ಯಥಾವೃತ್ತಃ ಪಕ್ಷಿಣಸ್ತ್ವನುಶಾಸ್ತಿ ಚ ॥೩೧॥

ಸಮುದ್ರತೀರದಲ್ಲಿ ಹಿಂದೆ ಒಂದು ವೃದ್ಧವಾದ ಹಂಸವಿದ್ದಿತು. ಅದು ಧರ್ಮವನ್ನು ಉಪದೇಶಮಾಡುತ್ತಿತ್ತು. ಆದರೆ ಧರ್ಮವನ್ನು ಆಚರಿಸುತ್ತಿರಲಿಲ್ಲ. ಉಳಿದ ಪಕ್ಷಿಗಳಿಗೆ ಧರ್ಮದ ಉಪದೇಶವನ್ನು ಮಾತ್ರ ಮಾಡುತ್ತಿತ್ತು.

ಧರ್ಮಂ ಚರತ ಮಾಧರ್ಮಮಿತಿ ತಸ್ಯ ವಚಃ ಕಿಲ ।
ಪಕ್ಷಿಣಃ ಶುಶ್ರುವುರ್ಭೀಷ್ಮ ಸತತಂ ಧರ್ಮವಾದಿನಃ ॥೩೩॥

ಧರ್ಮವನ್ನುಮಾಡಿ ಅಧರ್ಮವನ್ನು ಬಿಡಿ ಎಂಬುದು ಆ ಹಂಸದ ಮಾತಾಗಿತ್ತು. ಎಲೈ ಭೀಷ್ಮನೇ! ಧರ್ಮವಾದಿಗಳಾದ ಉಳಿದ ಪಕ್ಷಿಗಳೆಲ್ಲವೂ ಆ ಹಂಸದ ಮಾತನ್ನು ಸತತವಾಗಿ ಕೇಳಿದವು.

ಹಂಸಸ್ಯ ತದ್ವಚಃ ಶ್ರುತ್ವಾ ಮುದಿತಾಃ ಸರ್ವಪಕ್ಷಿಣಃ ।
ಊಚುಶ್ಚೈನಂ ಖಿಗಾ ಹಂಸಂ ಪರಿವಾರ್ಯ ಚ ಸರ್ವಶಃ ॥೩೪॥

ಹಂಸದ ಆ ಮಾತನ್ನು ಕೇಳಿ ಸಂತೋಷಗೊಂಡ ಎಲ್ಲಾ ಪಕ್ಷಿಗಳು ಆ ಹಂಸವನ್ನು ಸುತ್ತುವರಿದು ಅದನ್ನು ಕುರಿತು ಹೇಳಿದವು.

ಕಥಯಸ್ವ ಭವಾನ್ ಧರ್ಮಂ ಪಕ್ಷಿಣಾಂ ತತ್ ಸಮಾಸತಃ ।
ಕೋ ಹಿ ನಾಮ ದ್ವಿಜಶ್ರೇಷ್ಠ ಬ್ರೂಹಿ ನೋ ಧರ್ಮ ಉತ್ತಮಃ ॥೩೫॥

ಪಕ್ಷಿಗಳಿಗೆ ಯಾವುದು ಧರ್ಮ ಎಂಬುದನ್ನು ಸಂಕ್ಷೇಪವಾಗಿ ಹೇಳು. ಎಲೈ ಪಕ್ಷಿಶ್ರೇಷ್ಠನೇ! ಆ ಧರ್ಮಗಳಲ್ಲಿ ನಮಗೆ ಉತ್ತಮವಾದುದು ಯಾವುದು ಎಂದು ಹೇಳು.

ಹಂಸಃ

ಪ್ರಜಾಸ್ವಹಿಂಸಾ ಧರ್ಮೋ ವೈ ಹಿಂಸಾऽಧರ್ಮಃ ಖಿಗಪ್ರಜಾಃ ।
ಏತದೇವಾನುಬೋದ್ಧವ್ಯಂ ಧರ್ಮಾಧರ್ಮಃ ಸಮಾಸತಃ ॥೩೬॥

ಎಲೈ ಪ್ರಜೆಗಳೇ! ಅಹಿಂಸೆಯೇ ಧರ್ಮ. ಎಲೈ ಪಕ್ಷಿಪ್ರಜೆಗಳೇ! ಹಿಂಸೆಯು ನಿಶ್ಚಯವಾಗಿ ಅಧರ್ಮ. ಇದು ಸಂಕ್ಷೇಪವಾಗಿ ಧರ್ಮಾ ಧರ್ಮಗಳ ಸಾರವೆಂದು ತಿಳಿಯಬೇಕು.

ಶಿಶುಪಾಲಃ

ವೃದ್ಧಹಂಸವಚಃ ಶ್ರುತ್ವಾ ಪಕ್ಷಿಣಸ್ತೇ ಸುಸಂಹಿತಾಃ ।
ಊಚುಶ್ಚ ಧರ್ಮಲುಬ್ಧಾಸ್ತೇ ಸ್ಮಯಮಾನಾ ಇವಾಂಡಜಾಃ ॥೩೭॥

ವೃದ್ಧ ಹಂಸದ ಮಾತುಗಳನ್ನು ಕೇಳಿ ಧರ್ಮಕಾಮವುಳ್ಳ ಆ ಪಕ್ಷಿಗಳೆಲ್ಲವೂ ಒಟ್ಟಿಗೆ ಸೇರಿ ನಗುತ್ತಾ ಮಾತನಾಡಿದವು.

ಧರ್ಮಂ ಯಃ ಕುರುತೇ ನಿತ್ಯಂ ಲೋಕೇ ಧೀರತರೋಽಂಡಜಃ ।
ಸ ಯತ್ರ ಗಚ್ಛೇದ್ಧರ್ಮಾತ್ಮಾ ತನ್ನೋ ಬ್ರೂಹೀಹ ತತ್ತ್ವತಃ ॥೩೮॥

ಯಾವ ಪಕ್ಷಿಯು ನಿತ್ಯವೂ ಲೋಕದಲ್ಲಿ ಧರ್ಮವನ್ನು ಆಚರಿಸುತ್ತದೆಯೋ ಧರ್ಮಾತ್ಮನಾದ ಆ ಪಕ್ಷಿಯು ಎಲ್ಲಿಗೆ ಹೋಗುತ್ತಾರೆ ಎಂಬುದನ್ನು ಯಥಾರ್ಥವಾಗಿ ಹೇಳು.

ಹಂಸಃ

ಧರ್ಮಂ ಯಃ ಕುರುತೇ ನಿತ್ಯಂ ಲೋಕೇ ಸದ್ವೃತ್ತಿಮಾಸ್ಥಿತಃ ।
ಸ ಗಚ್ಛೇತ್ ಸ್ವರ್ಗಲೋಕಾಂಸ್ತು ತಥಾ ವೈ ನಿಯತಂ ಖಗಾಃ ॥೩೯॥

ಎಲೈ ಪಕ್ಷಿಗಳೇ! ಯಾರು ಲೋಕದಲ್ಲಿ ಸದ್ವೃತ್ತಿಯನ್ನು ಆಶ್ರಯಿಸಿ ಧರ್ಮವನ್ನೇ ಆಚರಿಸುತ್ತಾರೋ ಅವರು ನಿಶ್ಚಯವಾಗಿ ಸ್ವರ್ಗಲೋಕವನ್ನು ಹೊಂದುತ್ತಾರೆ.

ಪಕ್ಷಿಣಃ

ಜ್ಞಾತ್ವಾ ಹಿ ಧರ್ಮಾಧರ್ಮೌ ತೌ ನಿತ್ಯಂ ಲೋಕೇ ದ್ವಿಜೋತ್ತಮ ।
ದುರ್ಲಭಂ ಸ್ವರ್ಗಲೋಕಂ ತು ತಂ ಕಸ್ಮಾತ್ ತ್ವಂ ನ ಗಚ್ಛಸಿ ॥೪೦॥

ಎಲೈ ಪಕ್ಷಿಶ್ರೇಷ್ಠನೇ! ಯಾವಾಗಲೂ ಧರ್ಮಾಧರ್ಮಗಳನ್ನು ಚನ್ನಾಗಿ ತಿಳಿದ ನೀನು ದುರ್ಲಭವಾದ ಸ್ವರ್ಗಲೋಕಕ್ಕೆ ಏಕೆ ಹೊಗುತ್ತಿಲ್ಲ?

ಹಂಸಃ

ಬಾಲಾ ಯೂಯಂ ನ ಜಾನೀಧ್ವಂ ಧರ್ಮಸೂಕ್ಷ್ಮಂ ವಿಹಂಗಮಾಃ ।
ಧರ್ಮಂ ಯಃ ಕುರುತೇ ಲೋಕೇ ಸತತಂ ಶುಭಬುದ್ಧಿಮಾನ್ ।
ಸ ಚಾಯುಷೋಽಂತೇ ಸ್ವಂ ದೇಹಂ ತ್ಯಕ್ತ್ವಾ ಸ್ವರ್ಗಂ ತು ಗಚ್ಛತಿ॥೪೧॥

ಎಲೈ ಪಕ್ಷಿಗಳೇ! ನೀವೆಲ್ಲರೂ ಬಾಲರು, ಧರ್ಮಸೂಕ್ಷ್ಮವನ್ನು ತಿಳಿಯುವುದಿಲ್ಲ. ಸದ್‌ಬುದ್ಧಿಯುಳ್ಳ ಯಾವನು ಸತತವಾಗಿ ಲೋಕದಲ್ಲಿ ಧರ್ಮವನ್ನು ಆಚರಿಸುತ್ತಾನೆಯೋ ಅವನು ಆಯುಸ್ಸು ಮುಗಿದ ಮೇಲೆ ತನ್ನ ದೇಹವನ್ನು ಬಿಟ್ಟು ಸ್ವರ್ಗಕ್ಕೆ ಹೋಗುತ್ತಾನೆ.

ತಥಾऽಹಮಪಿ ಚ ತ್ಯಕ್ತ್ವಾ ಕಾಲೇ ದೇಹಂ ಮಮ ದ್ವಿಜಾಃ ।
ಸ್ವರ್ಗಲೋಕಂ ಗಮಿಷ್ಯಾಮಿ ಇಯಂ ಧರ್ಮಸ್ಯ ವೈ ಗತಿಃ ॥೪೨॥

ಎಲೈ ಪಕ್ಷಿಗಳೇ! ಹಾಗೆ ನಾನೂ ಸಹ ಯೋಗ್ಯವಾದ ಕಾಲದಲ್ಲಿ ನನ್ನ ದೇಹವನ್ನು ತ್ಯಜಿಸಿ ಸ್ವರ್ಗಕ್ಕೆ ಹೋಗುವೆನು. ಇದು ಧರ್ಮದ ನಿಶ್ಚಿತವಾದ ಗತಿ.

ಏವಂ ಧರ್ಮಕಥಾಂ ಚಕ್ರೇ ಸ ಹಂಸಃ ಪಕ್ಷಿಣಾಂ ಭೃಶಮ್ ।
ಪಕ್ಷಿಣಃ ಶುಶ್ರುವುರ್ಭೀಷ್ಮ ಸತತಂ ಧರ್ಮಮೇವ ತೇ ॥೪೩॥

ಎಲೈ ಭೀಷ್ಮನೇ! ಆ ಹಂಸವು ಪಕ್ಷಿಗಳ ಎದುರಿನಲ್ಲಿ ಹೀಗೆ ಧರ್ಮದ ಕಥೆಯನ್ನು ಬಹಳವಾಗಿ ಹೇಳಿತು ಆ ಪಕ್ಷಿಗಳೆಲ್ಲವೂ ಸತತವಾಗಿ ಆ ಧರ್ಮವನ್ನು ಕೇಳಿದವು.

ಆಜಹ್ರುಸ್ತತ್ರ ತೇ ಭಕ್ಷ್ಯಂ ಸಮುದ್ರಜಲಚಾರಿಣಃ ।
ಅಂಡಜಾ ಭೀಷ್ಮ ತಸ್ಯಾಂತೇ ಧರ್ಮಸ್ಥೋऽಯಮಿತಿ ಸ್ಥಿತಾಃ ॥೪೪॥

ಎಲೈ ಭೀಷ್ಮನೇ! ಸಮುದ್ರಜಲಚಾರಿಗಳಾದ ಆ ಪಕ್ಷಿಗಳೆಲ್ಲವೂ ಆ ಹಂಸಕ್ಕೆ ಭಕ್ಷ್ಯವನ್ನು ತಂದು ಕೊಟ್ಟವು. ಎಲ್ಲಾ ಪಕ್ಷಿಗಳೂ ಇವನು ಧರ್ಮಿಷ್ಠನು ಎಂದು ತಿಳಿದು ಆ ಹಂಸದ ಬಳಿಯಲ್ಲಿ ಇದ್ದವು.

ತಸ್ಯ ಚೈವ ಸಮಭ್ಯಾಶೇ ನಿಕ್ಷಿಪ್ಯಾಂಡಾನಿ ಸರ್ವಶಃ ।
ಸಮುದ್ರಾಂಭಸಿ ಮೋದಂತೇ ಚರಂತೋ ಭೀಷ್ಮ ಪಕ್ಷಿಣಃ ॥೪೫॥

ಎಲೈ ಭೀಷ್ಮನೇ! ಉಳಿದ ಪಕ್ಷಿಗಳು ಆ ವೃದ್ಧ ಹಂಸದ ಬಳಿಯಲ್ಲಿ ತಮ್ಮೆಲ್ಲರ ಮೊಟ್ಟೆಗಳನ್ನು ಇಟ್ಟು ಸಮುದ್ರತೀರದಲ್ಲಿ ಸಂಚರಿಸುತ್ತಾ ಸಂತೋಷದಿಂದ ಇದ್ದವು.

ತೇಷಾಮಂಡಾನಿ ಸರ್ವೇಷಾಂ ಭಕ್ಷಯಾಮಾಸ ಪಾಪಕೃತ್ ।
ಸ ಹಂಸಃ ಸಂಪ್ರಮತ್ತಾನಾಮಪ್ರಮತ್ತಃ ಸ್ವಕರ್ಮಣಿ ॥೪೬॥

ಪಾಪಿಷ್ಠವಾದ ಆ ವೃದ್ಧ ಹಂಸವು ಉಳಿದೆಲ್ಲಾ ಪಕ್ಷಿಗಳ ಮೊಟ್ಟೆಗಳನ್ನು ತಿಂದು ಬಿಟ್ಟಿತು. ಉಳಿದೆಲ್ಲಾ ಪಕ್ಷಿಗಳು ಪ್ರಮಾದಕ್ಕೆ ಒಳಗಾಗಿರಲು ವೃದ್ಧಹಂಸವು ತನ್ನ ಸ್ವಾರ್ಥದ ಬಗ್ಗೆ ಪ್ರಮಾದವನ್ನು ಹೊಂದದೆ ಎಲ್ಲಾ ಮೊಟ್ಟೆಗಳನ್ನು ಭಕ್ಷಿಸಿತು.

ತತಃ ಪ್ರಕ್ಷೀಯಮಾಣೇಷು ತೇಷ್ವಂಡೇಷ್ವಂಡಜೋಽಪರಃ ।
ಅಶಂಕತ ಮಹಾಪ್ರಾಜ್ಞಃ ತಂ ಕದಾಚಿದ್ ದದರ್ಶ ಸಃ ॥೪೭॥

ಅನಂತರ ತಮ್ಮ ಮೊಟ್ಟೆಗಳು ಕ್ರಮೇಣ ಕ್ಷೀಣವಾಗುತ್ತಿರಲು ಮಹಾಮೇಧಾವಿಯಾದ ಇನ್ನೊಂದು ಪಕ್ಷಿಯು ವೃದ್ಧಹಂಸದ ಮೇಲೆ ಶಂಕೆಯನ್ನು ಮಾಡುತ್ತಾ ಒಮ್ಮೆ ಅದರ ದುಷ್ಕರ್ಮವನ್ನು ನೋಡಿತು.

ತತಶ್ಚ ಕಥಯಾಮಾಸ ದೃಷ್ಟ್ವಾ ಹಂಸಸ್ಯ ಕಿಲ್ಬಿಷಮ್ ।
ತೇಷಾಂ ಪರಮದುಃಖಾರ್ತಃ ಸ ಪಕ್ಷೀ ಸರ್ವಪಕ್ಷಿಣಾಮ್ ॥೪೮॥

ಪರಮದುಃಖಾರ್ತವಾದ ಆ ಹಕ್ಕಿಯು ಉಳಿದ ಎಲ್ಲಾ ಪಕ್ಷಿಗಳನ್ನು ಕುರಿತು ತಾನು ನೋಡಿದ ವೃದ್ಧಹಂಸದ ದುಷ್ಕರ್ಮವನ್ನು ತಿಳಿಸಿತು.

ತತಃ ಪ್ರತ್ಯಕ್ಷತೋ ದೃಷ್ಟ್ವಾ ಪಕ್ಷಿಣಸ್ತೇ ಸಮಾಗತಾಃ ।
ನಿಜಘ್ನುಸ್ತಂ ತದಾ ಹಂಸಂ ಮಿಥ್ಯಾವೃತ್ತಂ ಕುರೂದ್ವಹ ॥೪೯॥

ಎಲೈ ಕುರೂದ್ವಹನೇ ಆಗ ಉಳಿದ ಪಕ್ಷಿಗಳೆಲ್ಲವೂ ಬಂದು ವೃದ್ಧ ಹಂಸದ ದುಷ್ಕರ್ಮವನ್ನು ಪ್ರತ್ಯಕ್ಷವಾಗಿ ನೋಡಿ ಮಿಥ್ಯಾಚಾರವುಳ್ಳ ಆ ಹಂಸವನ್ನು ಕೊಂದುಬಿಟ್ಟವು.

ತೇ ತ್ವಾಂ ಹಂಸಸಧರ್ಮಾಣಂ ಸಮೀಪೇ ವಸುಧಾಧಿಪಾಃ ।
ನಿಹನ್ಯುರ್ಭೀಷ್ಮ ಸಂಕ್ರುದ್ಧಾಃ ಪಕ್ಷಿಣಸ್ತಮಿವಾಂಡಜಮ್ ॥೫೦॥

ಎಲೈ ಭೀಷ್ಮನೇ! ವೃದ್ಧ ಹಂಸನನ್ನು ಉಳಿದ ಹಂಸಗಳು ಕೊಂದಂತೆ ಆ ಹಂಸಕ್ಕೆ ಸಮಾನವಾದ ಧರ್ಮವನ್ನು ಹೊಂದಿರುವ ನಿನ್ನನ್ನು ಸಮೀಪದಲ್ಲಿರುವ ರಾಜರೆಲ್ಲರೂ ಸೇರಿ ಕೊಲ್ಲುವರು.

ಗಾಥಾಮಪ್ಯತ್ರ ಗಾಯಂತಿ ಯೇ ಪುರಾಣವಿದೋ ಜನಾಃ ।
ಭೀಷ್ಮ ಯಾಂ ತಾಂ ಚ ತೇ ಸಮ್ಯಕ್ ಕಥಯಿಷ್ಯಾಮಿ ಭಾರತ ॥೫೧॥

ಅಂತರಾತ್ಮನಿ ಹೃದ್ಯಶ್ಚ ರೋಷೀ ಪತ್ರರಥೋ ಮುಖೇ ।
ಅಂಡಭಕ್ಷಣಕರ್ಮೈತತ್ ತವ ವಾಚಮತೀಯತೇ ॥೫೨॥

ಎಲೈ ಭೀಷ್ಮನೇ! ಪುರಾಣವನ್ನು ತಿಳಿದ ಜನರು ಈ ವಿಷಯದಲ್ಲಿ ಒಂದು ಗಾದೆಯನ್ನು ಹಾಡುತ್ತಾರೆ. ಎಲೈ ಭಾರತನೇ! ನಾನು ನಿನಗೆ ಅದನ್ನು ಹೇಳುವೆನು. ಸರಿಯಾಗಿ ಕೇಳು, ಹೃದಯದಲ್ಲಿ ರೋಷ ಮುಖದಲ್ಲಿ ಮುಗುಳ್‌ನಗೆ ಮೊಟ್ಟೆಗಳನ್ನು ತಿನ್ನುವ ಈ ನಿನ್ನ ಕರ್ಮವು ಮಾತುಗಳನ್ನು ಮೀರಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಏಕೋನಷಷ್ಟಿತಮೋಧ್ಯಾಯಃ ॥
॥ ಶಿಶುಪಾಲವಧಪರ್ವಣಿ ಪ್ರಥಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಐವತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು.

★★★★

ಅರವತ್ತನೆಯ ಅಧ್ಯಾಯ

(ಶಿಶುಪಾಲನ ವಾಕ್ಯವನ್ನು ಕೇಳಿ ಭೀಮನ ಕೋಪ. ಭೀಷ್ಮನಿಂದ ಭೀಮನ ಸಾಂತ್ವನ)

ಶಿಶುಪಾಲಃ

ತ್ವಾಮಹಂ ಹಂಸಧರ್ಮಾಣಂ ಯೇ ಚಾನ್ಯೇ ವಸುಧಾಧಿಪಾಃ ।
ನಿಹನ್ಮ ಭೀಷ್ಮ ಸಂಕ್ರುದ್ಧಾಃ ಪಕ್ಷಿಣಸ್ತಮಿವಾಂಡಜಮ್ ॥೧॥

ಎಲೈ ಭೀಷ್ಮನೇ! ಆ ಹಂಸದ ಸಮಾನ ಧರ್ಮವುಳ್ಳ ನಿನ್ನನ್ನು ಉಳಿದ ಪಕ್ಷಿಗಳು ಆ ಹಂಸವನ್ನು ಕೊಂದಂತೆ ನಾನೂ ಮತ್ತು ಎಲ್ಲಾ ರಾಜರೂ ಕ್ರುದ್ಧರಾಗಿ ಕೊಲ್ಲುವೆವು.

ಕೇಶವೇನ ಕೃತಂ ಯತ್ತಜ್ಜರಾಸಂಧವಧೇ ತದಾ ।
ಭೀಮಸೇನಾರ್ಜುನಾಭ್ಯಾಂ ಚ ಕಸ್ತತ್ ಸಾಧ್ವಿತಿ ಪಶ್ಯತಿ ॥೨॥

ಜರಾಸಂಧವಧೆಯ ಸಂದರ್ಭದಲ್ಲಿ ಭೀಮಾರ್ಜುನರ ಜೊತೆಯಲ್ಲಿ ಕೇಶವನು ಮಾಡಿದ ಕಾರ್ಯವನ್ನು ಯಾರು ಸಾಧುಕಾರ್ಯ ಎಂದು ಹೇಳುತ್ತಾರೆ?

ಅದ್ವಾರೇಣ ಪ್ರವಿಷ್ಟೇನ ಛದ್ಮನಾ ಬ್ರಹ್ಮವಾದಿನಾ ।
ದೃಷ್ಟಃ ಪ್ರಭಾವಃ ಕೃಷ್ಣೇನ ಜರಾಸಂಧಸ್ಯ ಧೀಮತಃ ॥೩॥

ಅದ್ವಾರದಿಂದ ಪ್ರವೇಶಿಸಿ ಬ್ರಾಹ್ಮಣರ ಛದ್ಮವೇಷವನ್ನು ಧರಿಸಿ (ಕೇಶವನು ಆ ಕಾರ್ಯವನ್ನು ಮಾಡಿದನು.) ಮೇಧಾವಿಯಾದ ಜರಾಸಂಧನ ಪ್ರಭಾವವು ಕೃಷ್ಣನಿಗೆ ತಿಳಿದೇ ಇದ್ದಿತು.

ಯೇನ ಧರ್ಮಾತ್ಮನಾऽऽತ್ಮಾನಂ ಬ್ರಾಹ್ಮಣ್ಯಮಭಿಜಾನತಾ ।
ಇಷಿತಂ ಪಾದ್ಯಮಗ್ರೇ ತದ್ ದಾತುಮಸ್ಮೈ ದುರಾತ್ಮನೇ ॥೪॥

ತನನ್ನು ಬ್ರಾಹ್ಮಣಪ್ರಿಯನೆಂದು ತಿಳಿದಿದ್ದ ಧರ್ಮಾತ್ಮನಾದ ಜರಾಸಂಧನು ಬ್ರಾಹ್ಮಣವೇಷದಲ್ಲಿ ಹೋದ ಈ ದುರಾತ್ಮನಿಗೆ ಪಾದ್ಯವನ್ನು ಕೊಡಲು ಇಚ್ಛಿಸಿದನು.

ಭುಜ್ಯತಾಮಿತಿ ತೇನೋಕ್ತಾಃ ಕೃಷ್ಣಭೀಮಧನಂಜಯಾಃ ।
ಜರಾಸಂಧೇನ ಕೌರವ್ಯ ಕೃಷ್ಣೇನ ವಿಕೃತಂ ಕೃತಮ್ ।
ಸ ಚಾಯಂ ಜಗತಃ ಕರ್ತಾ ಯಥೈನಂ ಭೀಷ್ಮ ಮನ್ಯಸೇ ॥೫॥

ಭೋಜನವನ್ನು ಮಾಡಿ ಎಂದು ಜರಾಸಂಧನಿಂದ ಕೃಷ್ಣ ಭೀಮ ಧನಂಜಯರು ಹೇಳಲ್ಪಟ್ಟರು. ಎಲೈ ಕೌರವ್ಯನೇ! ಕೃಷ್ಣನು ಅವೆಲ್ಲವನ್ನೂ ನಿರಾಕರಿಸಿದನು. ಎಲೈ ಭೀಷ್ಮನೇ! ನೀನು ತಿಳಿದಂತೆ ಅಂತಹ ಇವನು ಜಗತ್ತಿಗೆ ಕರ್ತ!

ಸ ಕಸ್ಮಾತ್ ಬ್ರಾಹ್ಮಣಂ ಸಮ್ಯಗ್ ಆತ್ಮಾನಮವಗಚ್ಛತಿ ॥೬॥

ಅವನು ಏಕೆ ತನ್ನನ್ನು ಬ್ರಾಹ್ಮಣನೆಂದು ತಿಳಿಯುತ್ತಾನೆ?

ಸ ಮೇ ಬಹುಮತೋ ರಾಜಾ ಜರಾಸಂಧೋ ಮಹಾಬಲಃ ।
ಯೋऽನೇನ ಯುದ್ಧಂ ನೇಯೇಷ ಗೋಪಾಲ ಇತಿ ಸಂಯುಗೇ ॥೭॥

ಆ ಮಹಾಮಹಿಮನಾದ ಜರಾಸಂಧನು ನನ್ನ ಗೌರವಕ್ಕೆ ಪಾತ್ರನಾದವನು. ಅವನು ಇವನು ಗೋಪಾಲನು ಎಂಬ ಕಾರಣದಿಂದ ಇವನ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸಲಿಲ್ಲ.

ಇದಂ ಚಾಶ್ಚರ್ಯಭೂತಂ ಮೇ ಯದಿಮೇ ಪಾಂಡವಾಸ್ತ್ವಯಾ ।
ಅಪಕೃಷ್ಟಾಃ ಸತಾಂ ಮಾರ್ಗಾನ್ನಮ್ಯಂತೇ ತಚ್ಚ ಸಾಧ್ವಿತಿ ॥೪॥

ಈ ಪಾಂಡವರು ನಿನ್ನಿಂದ ಧರ್ಮಮಾರ್ಗದಿಂದ ಚ್ಯುತರಾಗಿ ಅದನ್ನು ಸಾಧುಮಾರ್ಗವೆಂದು ತಿಳಿದು ಕೊಂಡಿದ್ದಾರೆ ಎಂಬುದು ನನಗೆ ಪರಮಾಶ್ಚರ್ಯಕರವಾದುದು.

ಅಥವಾ ನೈತದಾಶ್ಚರ್ಯಂ ಯೇಷಾಂ ತ್ವಮಸಿ ಭಾರತ ।
ಸ್ತ್ರೀಸಧರ್ಮಾऽಪವಿದ್ಧಶ್ಚ ಸರ್ವಾರ್ಥಾನಾಂ ಪ್ರದರ್ಶಕಃ ॥೯॥

ಅಥವಾ ಭಾರತನೇ! ಸ್ತ್ರೀಸಮಾನ ಧರ್ಮನಾದವನೂ ಎಲ್ಲರಿಂದಲೂ ತಿರಸ್ಕರಿಸಲ್ಪಟ್ಟವದ್ದ ಆದ ನೀನು ಯಾರಿಗೆ ಸರ್ವವಿಷಯಗಳಲ್ಲಿ ಮಾರ್ಗದರ್ಶಕನಾಗಿದ್ದೀಯೋ ಅಂತಹ ಪಾಂಡವರ ವಿಷಯದಲ್ಲಿ ಇದು ಆಶ್ಚರ್ಯವೇನಲ್ಲ.

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ರೂಕ್ಷಾದ್ ರೂಕ್ಷತರಂ ಬಹು ।
ಚುಕೋಪ ಬಲಿನಾಂ ಶ್ರೇಷ್ಠೋ ಭೀಮಸೇನಃ ಪ್ರತಾಪವಾನ್ ॥೧೦॥

ಅವನ ಅತ್ಯುಗ್ರವಾದ ಇಂತಹ ಮಾತುಗಳನ್ನು ಕೇಳಿ ಬಲಿಷ್ಠನಾದ ಪ್ರತಾಪಶಾಲಿಯಾದ ಭೀಮಸೇನನು ಕೋಪಗೊಂಡನು.

ತಸ್ಯ ಪದ್ಮಪ್ರತೀಕಾಶೇ ಸ್ವಭಾವಾಯತವಿಸ್ಮತೇ ।
ಭೂಯಃ ಕೋಪಾತ್ ಸುಸಂರಕ್ತೇ ಸಂಬಭೂವತುರಕ್ಷಿಣೀ ॥೧೧॥

ಅವನ ಪದ್ಮದಂತಹ ಮುಖದಲ್ಲಿ ಸ್ವಾಭಾವಿಕವಾಗಿಯೇ ವಿಸ್ತಾರವಾದ ಅವನ ಕಣ್ಣುಗಳು ಕೋಪದಿಂದ ಇನ್ನೂ ಹೆಚ್ಚಾಗಿ ಕೆಂಪಾದವು.

ತ್ರಿಶಿಖಾಂ ಭ್ರುಕುಟೀಂ ಚಾಸ್ಯ ದದೃಶುಃ ಸರ್ವಪಾರ್ಥಿವಾಃ ।
ಲಲಾಟಸ್ಥಾಂ ತ್ರಿಕೂಟಸ್ಥಾಂ ಗಂಗಾಂ ತ್ರಿಪಥಗಾಮಿವ ॥೧೨॥

ಅವನು ಸಿಟ್ಟಿನಿಂದ ಹುಬ್ಬನ್ನು ಮೂರು ಗಂಟುಕಟ್ಟಿದ್ದನ್ನು ಎಲ್ಲಾ ರಾಜರೂ ನೋಡಿದರು. ಅವನ ಹಣೆಯಲ್ಲಿದ್ದ ಆ ಮೂರು ಗಂಟುಗಳ ಒಂದು ಸಮೂಹವು ಮೂರು ಮಾರ್ಗಗಳಲ್ಲಿ ಹರಿಯುವ ಗಂಗೆಯನ್ನು ಹೋಲುತಿತ್ತು.

ದಂತಾನ್ ಸಂದಶತಶ್ಚಾಸ್ಯ ಕೋಪಾದ್ ದದೃಶುರಾನನಮ್ ।
ಯುಗಾಂತೇ ಸರ್ವಭೂತಾನಿ ಕಾಲಸ್ಯೇವ ದಿಧಕ್ಷತಃ ॥೧೩॥

ಕೋಪದಿಂದ ಹಲ್ಲುಗಳನ್ನು ಕಡಿಯುತ್ತಿದ್ದ ಅವನನ್ನು ಮತ್ತು ಅವನ ಮುಖವನ್ನು ಎಲ್ಲಾ ರಾಜರೂ ಯುಗಾಂತರದಲ್ಲಿ ಎಲ್ಲಾ ಪ್ರಾಣಿಗಳನ್ನು ಸುಡುವ ಯಮನಿಗೆ ಸಮಾನವಾಗಿ ನೋಡಿದರು.

ಉತ್ಪತಂತಂ ತು ವೇಗೇನ ಜಗ್ರಾಹೈನಂ ಮನಸ್ವಿನಮ್ ।
ಭೀಷ್ಮ ಏವ ಮಹಾಬಾಹುರ್ಮಹಾಸೇನಮಿವೇಶ್ವರಃ ॥೧೪॥

ತನ್ನ ಸ್ಥಳದಿಂದ ಶಿಶುಪಾಲನ ಕಡೆಗೆ ಹಾರುತ್ತಿದ್ದ ಧೈರ್ಯಶಾಲಿಯಾದ ಭೀಮಸೇನನನ್ನು ಮಹಾಬಾಹುವಾದ ಭೀಷ್ಮನೇ ಷಣ್ಮುಖನನ್ನು ಈಶ್ವರನು ತಡೆದಂತೆ ತಡೆದು ಹಿಡಿದುಕೊಂಡನು.

ತಸ್ಯ ಭೀಮಸ್ಯ ಭೀಷ್ಮೇಣ ವಾರ್ಯಮಾಣಸ್ಯ ಭಾರತ ।
ಗುರೋರ್ಬಹುವಿಧೈರ್ವಾಕ್ಯೈಃ ಕ್ರೋಧಃ ಪ್ರಶಮನಂ ಯಯೌ ॥೧೫॥

ಎಲೈ ಭಾರತನೇ! ಭೀಷ್ಮರು ಭೀಮನನ್ನು ಹಾಗೆ ತಡೆದು ಬಹುವಿಧವಾದ ಸಮಾಧಾನದ ವಾರ್ತೆಗಳನ್ನು ಹೇಳುತ್ತಿರಲು ಹಿರಿಯರಾದ ಅವರ ಮಾತಿನಿಂದ ಭೀಮನ ಕೋಪವು ಅಡಗಿತು.

ನಾತಿಚಕ್ರಾಮ ಭೀಷ್ಮಸ್ಯ ಸ ಹಿ ವಾಕ್ಯಮರಿಂದಮಃ ।
ಸಮುದ್ಭೂತೋ ಘನಾಪಾಯೇ ವೇಲಾಮಿವ ಮಹೋದಧಿಃ ॥೧೬॥

ಮಳೆಗಾಲದಲ್ಲಿ ಉದ್ಧಟವಾಗಿದ್ದ ಸಮುದ್ರವು, ಮಳೆಗಾಲ ಮುಗಿದ ಮೇಲೆ ದಡವನ್ನು ದಾಟದೆ ಹಿಂದೆ ಸರಿಯುವಂತೆ, ಅರಿಂದಮನಾದ ಭೀಮನು ಭೀಷ್ಮರ ಮಾತುಗಳನ್ನು ಮೀರದೆ ಹಿಂದೆ ಸರಿದನು.

ಶಿಶುಪಾಲಸ್ತು ಸಂಕ್ರುದ್ಧೇ ಭೀಮಸೇನೇ ಪರಂತಪೇ ।
ನಾಕಂಪತ ಮಹಾವೀರ್ಯ್ಯಃ ಪೌರುಷೇ ಮತಿಮಾಸ್ಥಿತಃ ॥೧೭॥

ಪರಂತಪನಾದ ಭೀಮಸೇನನು ಹೀಗೆ ಕೋಪಗೊಳ್ಳುತ್ತಿರಲು ಮಹಾಪರಾಕ್ರಮಿಯಾದ ಶಿಶುಪಾಲನೂ ಸಹ ಪುರುಷಪ್ರಯತ್ನದಲ್ಲೇ ನಿಶ್ಚಯವುಳ್ಳವನಾಗಿ ಅಲುಗಾಡಲಿಲ್ಲ.

ಉತ್ಪತನ್ನಾತ್ಮವೇಗೇನ ಪುನಃ ಪುನರರಿಂದಮಃ ।
ನ ಸ ತಂ ಚಿಂತಯಾಮಾಸ ಸಿಂಹಃ ಕ್ಷುದ್ರಮೃಗಂ ಯಥಾ ।
ಪ್ರಹಸಂಶ್ಚಾಬ್ರವೀದ್ ವಾಕ್ಯಂ ಚೇದಿರಾಜಃ ಪ್ರತಾಪವಾನ್ ॥೧೮॥

ಅರಿಂದಮನಾದ ಶಿಶುಪಾಲನು ಮತ್ತೆ ಮತ್ತೆ ತನ್ನ ಆಸನದಿಂದ ಮೇಲೆ ನೆಗೆಯುತ್ತಾ ಸಿಂಹವು ಕ್ಷುದ್ರಮೃಗವನ್ನು ಹೇಗೆ ಪರಿಗಣಿಸುವುದಿಲ್ಲವೋ ಹಾಗೆ ಭೀಮಸೇನನನ್ನು ಪರಿಗಣಿಸಲಿಲ್ಲ. ಅಷ್ಟೇ ಅಲ್ಲದೆ ಪ್ರತಾಪಶಾಲಿಯಾದ ಶಿಶುಪಾಲನು ನಗುತ್ತಾ ಮಾತನಾಡಿದನು.

ಭೀಮಸೇನಮುವಾಚೇದಂ ಭೀಷ್ಮೋ ಮತಿಮತಾಂ ವರಃ ।
ನೈಷಾ ಚೇದಿಪತೇರ್ಬುದ್ಧಿರ್ಯಯಾ ತ್ವಾಹ್ವಯತೇಚ್ಯುತಮ್ ।
ಭೀಮಸೇನ ಮಹಾಬಾಹೋ ಕೃಷ್ಣಸ್ಯೈವ ವಿನಿಶ್ಚಯಃ ॥೧೯॥

ಮೇಧಾವಿಗಳಲ್ಲಿ ಶ್ರೇಷ್ಠನಾದ ಭೀಷ್ಮನು ಭೀಮಸೇನನ್ನುದ್ದೇಶಿಸಿ ಮಾತನಾಡಿದನು. ಮಹಾಬಾಹುವಾದ ಭೀಮಸೇನನೇ! ಬಲದಿಂದ ಚ್ಯುತನಾಗದ ನಿನ್ನನ್ನು ಕರೆಯುತ್ತಿರುವ ಈ ಶಿಶುಪಾಲನ ಯೋಚನೆಯು ಸರಿಯಾಗಿಲ್ಲ. ಅವನು ಕೃಷ್ಣನಿಂದಲೇ ವಧ್ಯನಾಗುವನೆಂದು ನಿಶ್ಚಯವಾಗಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಷಷ್ಟಿತಮೋಧ್ಯಾಯಃ ॥
॥ ಶಿಶುಪಾಲವಧಪರ್ವಣಿ ದ್ವಿತೀಯೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಅರವತ್ತನೆಯ ಅಧ್ಯಾಯವು ಮುಗಿಯಿತು.

★ ★ ★ ★

ಅರವತ್ತೊಂದನೆಯ ಅಧ್ಯಾಯ

(ಶಿಶುಪಾಲನು ಭೀಮಸೇನನನ್ನು ಆಹ್ವಾನಿಸಲು ಭೀಷ್ಮರಿಂದ ಕಾರಣ ನಿರೂಪಣೆ)

ಭೀಷ್ಮಃ

ಚೇದಿರಾಜಕುಲೇ ಜಾತಃ ತ್ರ್ಯಕ್ಷ ಏಷ ಚತುರ್ಭುಜಃ ।
ರಾಸಭಾರಾವಸದೃಶಂ ರುರಾವ ಚ ನನಾದ ಚ ॥೧॥

ಚೇದಿರಾಜಕುಲದಲ್ಲಿ ಹುಟ್ಟಿದ ಇವನು ಮೂರು ಕಣ್ಣುಗಳಿಂದಲೂ ನಾಲ್ಕು ಭುಜಗಳಿಂದ ಕೂಡಿದವನಾಗಿದ್ದು ಹುಟ್ಟಿದ ಕೂಡಲೇ ಕತ್ತೆಯಂತೆ ಘೋರವಾಗಿ ಕೂಗಿದನು.

ತೇನ ಶಬ್ದೇನ ವಿತ್ರಸ್ತೌ ಪಿತರೌ ಸಹಬಾಂಧವೌ ।
ವೈಕೃತಂ ತಚ್ಚ ತೌ ದೃಷ್ಟ್ವಾ ತ್ಯಾಗಾಯಾಕುರುತಾಂ ಮತಿಮ್ ॥೨॥

ಆ ಶಬ್ದದಿಂದ ಹೆದರಿ ತಂದೆತಾಯಿಗಳೂ ಮತ್ತು ಎಲ್ಲಾ ಬಂಧುಗಳೂ ಅವನ ದೇಹದ ವಿಕಾರವನ್ನು ನೋಡಿ ಅವನನ್ನು ಪರಿತ್ಯಾಗಮಾಡಲು ನಿರ್ಧರಿಸಿದರು.

ತತಃ ಸಭಾರ್ಯಾಂ ತು ನೃಪಂ ಸಾಮಾತ್ಯಂ ಸಪುರೋಹಿತಮ್ ।
ಚಿಂತಾಸಮ್ಮೂಢಹೃದಯಂ ವಾಗುವಾಚಾಶರೀರಿಣೀ ॥೩॥

ಆಗ ಪುರೋಹಿತರು ಅಮಾತ್ಯರು ಮತ್ತು ಪತ್ನಿಯ ಜೊತೆಯಲ್ಲಿ ಚಿಂತಾಕ್ರಾಂತನಾಗಿ ಕುಳಿತು ಮೂಢಹೃದಯನಾಗಿದ್ದ ರಾಜನನ್ನು ಕುರಿತು ಅಶರೀರವಾಣಿಯಾಯಿತು.

ಏಷ ತೇ ನೃಪತೇ ಪುತ್ರಃ ಶ್ರೀಮಾನ್ ಜಾತೋ ಮಹಾಬಲಃ ।
ತಸ್ಮಾದಸ್ಮಾನ್ನ ಭೇತವ್ಯಮವ್ಯಗ್ರಂ ಪಾಲ್ಯತಾಂ ಶಿಶುಃ ॥೪॥

ಎಲೈ ರಾಜನೇ! ಈ ನಿನ್ನ ಮಗನು ಮಹಾಬಲಿಷ್ಠನೂ ಕಾಂತಿಯುಕ್ತನೂ ಆಗಿ ಜನಿಸಿದ್ದಾನೆ. ಇವನಿಂದ ಹೆದರಬೇಕಾದ ಅಗತ್ಯವಿಲ್ಲ ಎಚ್ಚರಿಕೆಯಿಂದ ಈ ಮಗುವನ್ನು ಪಾಲಿಸು.

ನ ಚೈವೈತಸ್ಯ ಮೃತ್ಯುಸ್ತ್ವಂ ನ ಕಾಲಃ ಪ್ರತ್ಯುಪಸ್ಥಿತಃ ।
ಏತಸ್ಯ ಮೃತ್ಯುರುತ್ಪನ್ನಃ ಶಸ್ತ್ರೇಣೈನಂ ವಧಿಷ್ಯತಿ ॥೫॥

ನೀನು ಇವನಿಗೆ ಮೃತ್ಯುವಲ್ಲ. ಇವನ ಮೃತ್ಯುಕಾಲವು ಈಗ ಸಮೀಪಿಸಿಲ್ಲ. ಇವನಿಗೆ ಮೃತ್ಯುವು ಬೇರೆಕಡೆಯಲ್ಲಿ ಉತ್ಪನ್ನನಾಗಿದ್ದಾನೆ. ಅವನು ಇವನನ್ನು ಶಸ್ತ್ರದಿಂದ ಸಂಹರಿಸುವನು.

ತಚ್ಚುತ್ವೋದಾಹೃತಂ ವಾಕ್ಯಂ ಭೂತೇನಾಂತರ್ಹಿತೇನ ಸಾ ।
ಪುತ್ರಸ್ನೇಹಾಭಿಸಂತಪ್ತಾ ಜನನೀ ವಾಕ್ಯಮಬ್ರವೀತ್ ॥೬॥

ಯೇನೇದಮೀರಿತಂ ವಾಕ್ಯಂ ಮಮೇಮಂ ತನಯಂ ಪ್ರತಿ ।
ಪ್ರಾಂಜಲಿಸ್ತಂ ನಮಸ್ಯಾಮಿ ಬ್ರವೀತು ಸ ಪುನರ್ವಚಃ ॥೭॥

ಮಹದ್ಬಲಂ ಮಹದ್ಭೂತಮಿತ್ಯುಕ್ತ್ವಾ ಪುನರುತ್ತರಮ್ ।
ಶ್ರೋತುಮಿಚ್ಛಾಮಿ ತತ್ತ್ವೇನ ಕೋಽಸ್ಯ ಮೃತ್ಯುರ್ಭವಿಷ್ಯತಿ ॥೮॥

ಆ ವಾಕ್ಯವನ್ನು ಕೇಳಿದ ಪುತ್ರಸ್ನೇಹಾಭಿತಪ್ತಳಾದ ತಾಯಿಯು ಅದೃಶ್ಯವಾದ ಆ ಭೂತವನ್ನು ಕುರಿತು ಯಾವ ಭೂತವು ನನ್ನ ಮಗನ ವಿಷಯದಲ್ಲಿ ಈ ರೀತಿಯಲ್ಲಿ ಮಾತನಾಡಿತೋ ಅದನ್ನು ಮಹಾಬಲಿಷ್ಠವೆಂದು ಮಹಾ ಭೂತವೆಂದು ಹೇಳಿ ಕೈಗಳನ್ನು ಮುಗಿದು ನಮಸ್ಕಾರವನ್ನು ಮಾಡುತ್ತೇನೆ. ಇವನಿಗೆ ಯಾರು ಮೃತ್ಯುವೆಂದು ಯಥಾರ್ಥವಾಗಿ ತಿಳಿಯಲು ಬಯಸುತ್ತೇನೆ. ಆ ಭೂತವು ಪುನಃ ಮಾತನಾಡಿ ಇದಕ್ಕೆ ಉತ್ತರವನ್ನು ಹೇಳಲಿ.

ತತಸ್ತೈಃ ಖೇಚರೈಃ ಪೃಷ್ಟೈರುತ್ತರಂ ಸಮುದಾಹೃತಮ್ ।
ಯೇನೋತ್ಸಂಗೃಗೃಹೀತಸ್ಯ ಭುಜಾವಭ್ಯಧಿಕಾವುಭೌ ।
ಭವಿಷ್ಯತಸ್ತು ಸಂಭಗ್ನೌ ಸೋಽಸ್ಯ ಮೃತ್ಯುರ್ಭವಿಷ್ಯತಿ ॥೯॥

ಆಗ ಹೀಗೆ ಕೇಳಲ್ಪಟ್ಟ ಆ ಖೇಚರದಿಂದ ಹೀಗೆ ಉತ್ತರವು ಹೇಳಲ್ಪಟ್ಟಿತು. ಈ ಶಿಶುವನ್ನು ಯಾರ ತೊಡೆಯ ಮೇಲೆ ಹಾಕಿದಾಗ ಅವನ ಅಧಿಕವಾದ ಎರಡು ಭುಜಗಳು ಬಿದ್ದು ಹೋಗುತ್ತವೆಯೋ ಅವನು ಈ ಶಿಶುವಿನ ಮೃತ್ಯುವಾಗುವನು.

ಯಸ್ಯೋತ್ಸಂಗಗೃಹೀತಸ್ಯ ತಥೈವಾಕ್ಷಿ ಲಲಾಟಜಮ್ ।
ನಿಮಜ್ಜಿಷ್ಯತಿ ಸಂಸ್ಪೃಷ್ಟೇ ಸೋಽಸ್ಯ ಮೃತ್ಯುರ್ಭವಿಷ್ಯತಿ ॥೧೦॥

ಹಾಗೆಯೇ ಯಾರ ತೊಡಯ ಮೇಲೆ ಹಾಕಿದಾಗ ಹಣೆಯಲ್ಲಿರುವ ಇವನ ಕಣ್ಣು ಅವನ ಸ್ಪರ್ಶಮಾಡಿದ ತಕ್ಷಣ ಮುಳುಗಿ ಹೋಗುವುದೋ ಅವನು ಈ ಶಿಶುವಿನ ಮೃತ್ಯುವಾಗುವನು.

ತ್ರ್ಯಕ್ಷಂ ಚತುರ್ಭುಜಂ ಶ್ರುತ್ವಾ ಏತಚ್ಚ ಸಮುದಾಹೃತಮ್ ।
ಧರಣ್ಯಾಂ ಪಾರ್ಥಿವಾಃ ಸರ್ವೇ ತತ್ರಾಜಗ್ಮುರ್ದಿದೃಕ್ಷವಃ ॥೧೧॥

ಶಿಶುವು ಮೂರು ಕಣ್ಣುಗಳು ಮತ್ತು ನಾಲ್ಕು ಭುಜಗಳಿಂದ ಕೂಡಿದೆ ಎಂದು ಕೇಳಿದ ಭೂಮಿಯಲ್ಲಿದ್ದ ಎಲ್ಲ ರಾಜರೂ ಮಗುವನ್ನು ನೋಡಲು ಬಯಸಿ ಅಲ್ಲಿಗೆ ಬಂದರು.

ತಾನ್ ಪೂಜಯಿತ್ವಾ ಸಂಪ್ರಾಪ್ತಾನ್ ಯಥಾರ್ಹಂ ಸ ಮಹೀಪತಿಃ ।
ಏಕೈಕಸ್ಯ ನೃಪಸ್ಯಾಂಕೇ ಪುತ್ರಮಾರೋಪಯತ್ ತತಃ ॥೧೨॥

ಆ ರಾಜನು ಬಂದವರನ್ನು ಯಥಾ ಯೋಗ್ಯವಾಗಿ ಪೂಜಿಸಿ ಪ್ರತಿಯೊಬ್ಬರ ತೊಡೆಯ ಮೇಲೆ ಆ ಶಿಶುವನ್ನು ಇಟ್ಟನು.

ಏವಂ ರಾಜಸಹಸ್ರಾಣಾಂ ಪೃಥಗೇನಂ ಯಥಾಕ್ರಮಮ್ ।
ಶಿಶುರಂಕೇ ಸಮಾರೂಢೋ ನ ತತ್ ಪ್ರಾಪ ನಿದರ್ಶನಮ್ ॥೧೩॥

ಹೀಗೆ ಸಹಸ್ರಾರು ರಾಜರ ತೊಡೆಯ ಮೇಲೆ ಕ್ರಮವಾಗಿ ಬೇರೆ ಬೇರೆಯಾಗಿ ಮಗುವನ್ನು ಇಟ್ಟಾಗಲೂ ಆ ಭೂತವು ಹೇಳಿದಂತೆ ಏನೂ ಆಗಲಿಲ್ಲ.

ಏತದೇವ ತು ಸಂಶ್ರುತ್ಯ ದ್ವಾರವತ್ಯಾಂ ಮಹಾಬಲೌ ।
ತತಶ್ಚೇದಿಪುರಂ ಪ್ರಾಪ್ತೌ ಸಂಕರ್ಷಣಜನಾರ್ದನೌ ।
ಯಾದವೌ ಯಾದವೀಂ ದ್ರಷ್ಟುಂ ಸ್ವಸಾರಂ ತಾಂ ಪಿತುಸ್ತತಃ ॥೧೪॥

ಈ ವಾರ್ತೆಯನ್ನು ಕೇಳಿ ದ್ವಾರಾವತಿಯಲ್ಲಿದ್ದ ಮಹಾಬಲಿಷ್ಠರಾದ ಕೃಷ್ಣ ಬಲರಾಮರು ತಮ್ಮ ಸೊದರತ್ತೆಯಾದ ಆ ಯಾದವಿಯನ್ನು ನೋಡುವ ದೃಷ್ಟಿಯಿಂದ ಚೇದಿಪುರಕ್ಕೆ ಬಂದರು.

ತೌ ದಾಮಘೋಷಂ ರಾಜಾನಮಭಿವಾದ್ಯ ಯಥಾಕ್ರಮಮ್ ।
ಅಭಿವಾದ್ಯ ಯಥಾನ್ಯಾಯಂ ಯಥಾಶ್ರೈಷ್ಠ್ಯಂ ನೃಪಾಂಶ್ಚ ತಾನ್ ।
ಕುಶಲಾನಾಮಯಂ ಪೃಷ್ಟ್ವಾ ನಿಷಣ್ಣೌ ರಾಮಕೇಶವೌ ॥೧೫॥

ಅವರು ದಾಮಘೋಷರಾಜನಿಗೆ ನಮಸ್ಕರಿಸಿ ಉಳಿದ ರಾಜರುಗಳಿಗೂ ಅವರ ಶ್ರೇಷ್ಠತೆಯ ಕ್ರಮದಲ್ಲಿ ನಮಸ್ಕರಿಸಿ ಕುಶಲ ಪ್ರಶ್ನೆಯನ್ನು ಮಾಡಿ ಕುಳಿತು ಕೊಂಡರು. (ದಮಘೋಷನೇ ದಾಮಘೋಷನೆಂದು ಹೇಳಲ್ಪಡುತ್ತಾನೆ)

ಅಭ್ಯರ್ಚಿತೌ ತದಾ ವೀರೌ ಪ್ರೀತ್ಯಾ ಚಾಭ್ಯಧಿಕಂ ತತಃ ।
ಪುತ್ರಂ ದಾಮೋದರೋತ್ಸಂಗೇ ದೇವೀ ಸನ್ನ್ಯದಧಾತ್ ಸ್ವಯಮ್ ॥೧೬॥

ವೀರರಾದ ರಾಮಕೇಶವರು ಆಗ ಪ್ರೀತಿಯಿಂದ ಸತ್ಕರಿಸಲ್ಪಟ್ಟರು. ದಾಮಘೋಷ ಪತ್ನಿಯು ತಾನೇ ಶಿಶುವನ್ನು ಕೃಷ್ಣನ ತೊಡೆಯ ಮೇಲೆ ಇಟ್ಟಳು.

ನ್ಯಸ್ತಮಾತ್ರಸ್ಯ ತಸ್ಯಾಂಕೇ ಭುಜಾವಭ್ಯಧಿಕೌ ತದಾ ।
ಪೇತತುಸ್ತಚ್ಚ ನಯನಂ ನಿಮಮಜ್ಜ ಲಲಾಟಜಮ್ ॥೧೭॥

ತೊಡೆಯ ಮೇಲೆ ಮಗುವನ್ನು ಇಟ್ಟ ತಕ್ಷಣವೇ ಮಗುವಿನ ಅಧಿಕ ಭುಜಗಳು ಉದುರಿ ಹೋದವು ಮತ್ತು ಹಣೆಯಲ್ಲಿದ್ದ ಕಣ್ಣೂ ಸಹ ಇಂಗಿಹೋಯಿತು.

ತದ್ ದೃಷ್ಟ್ವಾ ವ್ಯಥಿತಾ ತ್ರಸ್ತಾ ವರಂ ಕೃಷ್ಣಮಯಾಚತ ।
ದದಸ್ವ ಮೇ ವರಂ ಕೃಷ್ಣ ಭಯಾರ್ತಾಯೈ ಮಹಾಭುಜ ।
ತ್ವಂ ಹ್ಯಾರ್ತಾನಾಂ ಸಮಾಶ್ವಾಸೋ ಭೀತಾನಾಮಭಯಂಕರಃ ॥೧೮॥

ಅದನ್ನು ನೋಡಿ ಭಯಗ್ರಸ್ತಳಾದ ಅವಳು ಕೃಷ್ಣನನ್ನು ವರವನ್ನು ಯಾಚಿಸಿದಳು ಮಹಾಭುಜನಾದ ಕೃಷ್ಣನೇ ನೀನು ಆರ್ತರನ್ನು ಸಮಾಧಾನ ಮಾಡುವವನು. ಭೀತರಿಗೆ ಅಭಯವನ್ನು ಕೊಡುವವನು ಭಯಾರ್ತಳಾದ ನನಗೆ ವರವನ್ನು ಕೊಡು.

ಏವಮುಕ್ತಸ್ತತಃ ಕೃಷ್ಣಃ ಸೋಬ್ರವೀದ್ ಯದುನಂದನಃ ।
ಮಾಭೈಸ್ತ್ವಂ ದೇವಿ ಧರ್ಮಜ್ಞೇ ನ ಮತ್ತೋಽಸ್ತಿ ಭಯಂ ತವ ॥೧೯॥

ಅವಳು ಹೀಗೆ ಹೇಳಿದಾಗ ಯದುನಂದನನಾದ ಕೃಷ್ಣನು ಅವಳನ್ನು ಕುರಿತು ಧರ್ಮಜ್ಞೆಯಾದ ದೇವಿಯೇ ಹೆದರಬೇಡ. ನನ್ನಿಂದ ನಿನಗೆ ಭಯವಿಲ್ಲ ಎಂದು ಹೇಳಿದನು.

ಕ್ಷಮಸ್ವ ಶಿಶುಪಾಲಸ್ಯ ಅಪರಾಧಂ ಮಹಾಭುಜ ।
ಇತ್ಯುಕ್ತಃ ಪುಂಡರೀಕಾಕ್ಷಃ ಪ್ರತ್ಯುವಾಚ ಮಹಾಬಲಃ ॥೨೦॥

ಮಹಾಭುಜನೇ! ಈ ಶಿಶುಪಾಲನ ಅಪರಾಧಗಳನ್ನು ಕ್ಷಮಿಸು ಎಂದು ಹೇಳಿದಾಗ ಮಹಾಬಲನಾದ ಪುಂಡರೀಕಾಕ್ಷನು ಉತ್ತರವನ್ನು ಕೊಟ್ಟನು.

ಅಪರಾಧಶತಂ ಕ್ಷಾಮ್ಯಂ ಸ ಮಯಾ ವೈ ಪಿತೃಷ್ವಸಃ ।
ಪುತ್ರಸ್ಯ ತೇ ವಧಾರ್ಹಾಣಾಂ ಮಾ ತ್ವಂ ಶೋಕೇ ಮನಃ ಕೃಥಾಃ ॥೨೧॥

ಸೊದರತ್ತೆಯೇ! ನಾನು ವಧೆಗೆ ಯೋಗ್ಯವಾದ ನಿನ್ನ ಮಗನ ನೂರು ಅಪರಾಧಗಳನ್ನು ಕ್ಷಮಿಸುವೆನು. ನೀನು ಮನಸ್ಸಿನಲ್ಲಿ ದುಃಖವನ್ನು ಮಾಡಬೇಡ.

ಭೀಷ್ಮಃ

ಏವಮೇತತ್ ಪುರಾವೃತ್ತಂ ಶಿಶಾವಸ್ಮಿನ್ ವೃಕೋದರ ।
ಸ ಜಾನನ್ನಾತ್ಮನೋ ಮೃತ್ಯುಂ ಕೃಷ್ಣಂ ಯದುಮುಖಾವಹಮ್ ।
ತೇನ ತ್ವಾಮಾಹ್ವಯಚ್ಚೈದ್ಯೋ ಗೋವಿಂದವರದರ್ಪಿತಃ ॥೨೨॥

ಭೀಮಸೇನನೇ! ಇವನು ಶಿಶುವಾಗಿದ್ದಾಗ ಈ ಘಟನೆಯು ನಡೆಯಿತು. ಯದುಕುಲ ಸುಖಾವಹನನಾದ ಕೃಷ್ಣನು ತನ್ನ ಮೃತ್ಯುವೆಂದು ತಿಳಿದಿರುವ ಇವನು ಕೃಷ್ಣನ ವರದಿಂದ ದರ್ಪಿತನಾಗಿ ನಿನ್ನನ್ನು ಆಹ್ವಾನಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಏಕಷಷ್ಟಿತಮೋಧ್ಯಾಯಃ ॥
॥ ಶಿಶುಪಾಲವಧಪರ್ವಣಿ ತೃತೀಯೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ
ಅರವತ್ತೊಂದನೆಯ ಅಧ್ಯಾಯವು ಮುಗಿಯಿತು.

★ ★ ★ ★

ಅರವತ್ತೆರಡನೆಯ ಅಧ್ಯಾಯ

(ಶಿಶುಪಾಲನಿಂದ ಭೀಷ್ಮನಿಂದೆ. ಭೀಷ್ಮರ ಪ್ರತ್ಯುತ್ತರ)

ಭೀಷ್ಮಃ

ನೈಷಾ ಚೇದಿಪತೇರ್ಬುದ್ಧಿರ್ಯಥಾ ತ್ವಾಽಹ್ವಯತೇಽಚ್ಯುತಮ್ ।
ನೂನಮೇಷ ಜಗತ್ಕರ್ತುಃ ಕೃಷ್ಣಸ್ಯೈವ ವಿನಿಶ್ಚಯಃ ॥೧॥

ಎಲೈ ಭೀಮನೇ! ಬಲದಿಂದ ಚ್ಯುತನಾಗದ ನಿನ್ನನ್ನು ಶಿಶುಪಾಲನು ಆಹ್ವಾನಿಸುತ್ತಿರುವ ಅವನ ಬುದ್ಧಿಯು ಸರಿಯಾದುದಲ್ಲ. ಅವನು ಜಗತ್ ಸ್ವಾಮಿಯಾದ ಕೃಷ್ಣನ ಭಾಗವೆಂದು ನಿಶ್ಚಯವಾಗಿದೆ.

ಕೋ ಹಿ ಮಾಂ ಭೀಮಸೇನಾನ್ಯಃ ಕ್ಷೇಪ್ತುಮರ್ಹತಿ ಪಾರ್ಥಿವಃ ।
ಕ್ಷಿತಾವೇವಂ ಪರೀತಾತ್ಮಾ ಯಥಾಽಯಂ ಕುಲಪಾಂಸನಃ ॥೨॥

ಏಷ ಹ್ಯಸ್ಯ ಮಹಾಬಾಹುಃ ತೇಜೋಂಶಶ್ಚ ಹರೇರ್ಧ್ರುವಮ್ ।
ತಮೇವ ಪುನರಾದಾತುಂ ಕುರುತೇಽತ್ರ ಮತಿಂ ಹರಿಃ ॥೩॥

ಭೀಮಸೇನನೇ! ಭೂಮಿಯಲ್ಲಿ ಈ ಕುಲಪಾಂಸನನಂತೆ ಮೃತ್ಯುಗ್ರಸ್ತವಾದ ಒಬ್ಬ ವ್ಯಕ್ತಿಯನ್ನು ಬಿಟ್ಟು ಬೇರೆ ಯಾವ ರಾಜನು ನನ್ನನ್ನು ಹೀಗೆ ನಿಂದಿಸಲು ಸಾಧ್ಯ ? ಈ ಮಹಾಬಾಹುವಾದ ಶಿಶುಪಾಲನು ನಿಶ್ಚಯವಾಗಿ ಹರಿಯ ತೇಜೋಂಶದಿಂದ ಯುಕ್ತನಾದವನು. ಹರಿಯು ಅವನಲ್ಲಿರುವ ತನ್ನ ಅಂಶವನ್ನು ಪುನಃ ಹಿಂದೆ ತೆಗೆದುಕೊಳ್ಳಲು ಮನಸ್ಸುಮಾಡಿದ್ದಾನೆ.

ತೇನೈವಂ ಕುರುಶಾರ್ದೂಲ ಶಾರ್ದೂಲ ಇವ ಚೇದಿರಾಟ್ ।
ಗರ್ಜತ್ಯತೀವ ದುರ್ಬುದ್ಧಿಃ ಸರ್ವಾನಸ್ಮಾನಚಿಂತಯನ್ ॥೪॥

ಕುರುಶಾರ್ದೂಲನೇ! ಆ ಕಾರಣದಿಂದ ಈ ಚೇದಿರಾಜನಾದ ಶಿಶುಪಾಲನು ದುರ್ಬುದ್ಧಿಯುಳ್ಳವನಾಗಿ ನಮ್ಮಲ್ಲಿ ಯಾರನ್ನೂ ಪರಿಗಣಿಸದೆ ಹುಲಿಯಂತೆ ಗರ್ಜಿಸುತ್ತಿದ್ದಾನೆ.

ವೈಶಂಪಾಯನಃ

ತತೋ ನ ಮಮೃಷೇ ಚೈದ್ಯಃ ತದ್ ಭೀಷ್ಮವಚನಂ ಪುನಃ ।
ಉವಾಚೈನಂ ಸುಸಂಕ್ರುದ್ಧಃ ಸ ಭೀಷ್ಮಂ ಪುನರುತ್ತರಮ್ ॥೫॥

ಆಗ ಆ ಭೀಷ್ಮರ ವಚನಗಳನ್ನು ಕೇಳಿ ಶಿಶುಪಾಲನು ಸಹಿಸಲಿಲ್ಲ. ಸುಸಂಕ್ರುದ್ಧನಾಗಿ ಭೀಷ್ಮರನ್ನುಕುರಿತು ಪುನಃ ಉತ್ತರವನ್ನು ನೀಡಿದನು.

ದ್ವಿಷತಾಂ ನೋಽಸ್ತು ಭೀಷ್ಮೈಷಃ ಪ್ರಭಾವಃ ಕೇಶವಸ್ಯ ಯಃ ।
ಅಸ್ಯ ಸ್ತವಂ ಚ ವಕ್ತಾ ತ್ವಂ ವಂದಿವತ್ ಸತತೋತ್ಥಿತಃ ॥೬॥

ಭೀಷ್ಮನೇ ನೀನು ಕೃಷ್ಣನಿಗೆ ಹೊಗಳುವ ಮಹಿಮೆಯೆಲ್ಲವೂ ಅವನ ದ್ವೇಷಿಗಳಾದ ನಮಗೆ ಸಲ್ಲಬೇಕಾದುದು. ನೀನು ಬಂದಿಯಂತೆ ಯಾವಾಗಲೂ ಅವನ ಸ್ತೋತ್ರವನ್ನು ಮಾಡಿತ್ತಿದ್ದೀಯೆ.

ಸಂಸ್ತವಾಯ ಮನೋ ಭೀಷ್ಮ ಪರೇಷಾಂ ರಮತೇ ಸದಾ ।
ಯದೀಮಾನ್ ಸ್ತೌಷಿ ರಾಜ್ಞಸ್ತ್ವಮಿಮಂ ಹಿತ್ವಾ ಜನಾರ್ದನಮ್ ॥೭॥

ಭೀಷ್ಮನೇ! ನಿನ್ನ ಮನಸ್ಸು ಯಾವಾಗಲೂ ಇನ್ನೊಬ್ಬರನ್ನು ಸ್ತೋತ್ರಮಾಡಲು ಹಾತೊರೆಯುವುದಾದರೆ ಜನಾರ್ದನನನ್ನು ಬಿಟ್ಟು ಈ ರಾಜರುಗಳನ್ನು ಸ್ತೋತ್ರಮಾಡು.

ವರದಂ ಸ್ತುಹಿ ಬಾಹ್ಲೀಕಮಿಮಂ ಪಾರ್ಥಿವಸತ್ತಮಮ್ ।
ಜಾಯಮಾನೇನ ಯೇನೇಯಮಭವದ್ ದಾರಿತಾ ಮಹೀ ॥೮॥

ಪಾರ್ಥಿವಶ್ರೇಷ್ಠನಾದ ವರಪ್ರದನಾದ ಈ ಬಾಹ್ಲೀಕರಾಜನನ್ನು ಸ್ತೋತ್ರಮಾಡು. ಇವನು ಹುಟ್ಟಿದಾಗ ಭೂಮಿಯು ಬಿರಿದು ಹೋಯಿತು.

ಸರ್ವಾಂಗವಿಷಯಾಧ್ಯಕ್ಷಂ ಸಹಸ್ರಾಕ್ಷಸಮಂ ಬಲೇ ।
ಸ್ತುಹಿ ಕರ್ಣಮಿಮಂ ಭೀಷ್ಮ ಮಹಾಚಾಪವಿಕರ್ಷಣಮ್ ॥೯॥

ಸಮಗ್ರವಾದ ಅಂಗರಾಜ್ಯಕ್ಕೆ ಅಧಿಪತಿಯಾದ ಬಲದಲ್ಲಿ ಇಂದ್ರನಿಗೆ ಸಮನಾದ ಮಹಾಧನುರ್ಧಾರಿಯಾದ ಈ ಕರ್ಣನನ್ನು ಸ್ತೋತ್ರಮಾಡು.

ಯಸ್ಯ ತೇ ಕುಂಡಲೇ ದಿವ್ಯೇ ಸಹಜೇ ಚ ದದೌ ತದಾ ।
ಕವಚಂ ಸಹಜಂ ಚಾಂಗೇ ಬಾಲಾರ್ಕಸದೃಶಪ್ರಭಮ್ ॥೧೦॥

ಎಲೈ ಭೀಷ್ಮನೇ! ಅವನು ತನ್ನ ದಿವ್ಯವಾದ ಸಹಜವಾದ ಕುಂಡಲಗಳನ್ನು ಬಾಲಸೂರ್ಯನಂತೆ ಹೊಳೆಯುವ ತನ್ನ ದೇಹದಲ್ಲಿ ಚರ್ಮದಂತೆ ಸಹಜವಾಗಿದ್ದ ಕವಚವನ್ನು ಸಹ ದಾನಮಾಡಿದನಷ್ಟೇ ?

ದ್ರೋಣಂ ದ್ರೌಣಿಂ ಚ ಸಾಧು ತ್ವಂ ಪಿತಾಪುತ್ರೌ ಮಹಾರಥೌ ।
ಸ್ತುಹಿ ಸ್ತುತ್ಯಾವಿಮೌ ಭೀಷ್ಮ ಸತತಂ ದ್ವಿಜಸತ್ತಮೌ ॥೧೧॥

ಭೀಷ್ಮನೇ! ಮಹಾರಥರಾದ ದ್ವಿಜಶ್ರೇಷ್ಠರಾದ ಸ್ತೋತ್ರಕ್ಕೆ ಅರ್ಹರಾದ ತಂದೆ ಮಕ್ಕಳಾದ ದ್ರೋಣ ಮತ್ತು ಅಶ್ವತ್ಥಾಮರನ್ನು ಚೆನ್ನಾಗಿ ಸ್ತೋತ್ರಮಾಡು.

ಯಯೋರನ್ಯತರೋ ಭೀಷ್ಮ ಸಂಕ್ರುದ್ಧಃ ಸಚರಾಚರಾಮ್ ।
ಇಮಾಂ ವಸುಮತೀಂ ಕುರ್ಯಾನ್ನಿಶ್ಶೇಷಾಮಿತಿ ಮೇ ಮತಿಃ ॥೧೨॥

ಎಲೈ ಭೀಷ್ಮನೇ ಅವರಲ್ಲಿ ಒಬ್ಬನೂ ಸಹ ಕ್ರುದ್ಧನಾದರೆ ಚರಾಚರವಾದ ಈ ಭೂಮಿಯನ್ನು ನಿಶ್ಶೇಷವಾಗಿ ಮಾಡುತ್ತಾನೆಂದು ನನ್ನ ನಿಶ್ಚಯ.

ದ್ರೋಣಸ್ಯ ಹಿ ಸಮಂ ಯುದ್ಧೇ ನ ಪಶ್ಯಾಮಿ ಧನುರ್ಧರಮ್ ।
ಪೃಥಿವ್ಯಾಂ ಸಾಗರಾಂತಾಯಾಂ ಯೋ ವೈ ಪ್ರೀತಿಕರೋ ಭವೇತ್ ॥

ದ್ರೋಣರಿಗೆ ಸಮರಾದ ಸಂತೋಷವನ್ನು ಉಂಟುಮಾಡುವ ಧನ್ರ್ಧಾರಿಗಳು ಸಾಗರಾಂತವಾದ ಪೃಥಿವಿಯಲ್ಲಿ ಯಾರೂ ನನಗೆ ಕಾಣುವುದಿಲ್ಲ.

ದುರ್ಯೋಧನಂ ಚ ರಾಜೇಂದ್ರಮತಿಕ್ರಮ್ಯ ಮಹಾಭುಜಮ್ ।
ಜಯದ್ರಥಂ ಚ ರಾಜಾನಂ ಕೃತಾಸ್ತ್ರಂ ದೃಢಧನ್ವಿನಮ್ ॥೧೪॥

ದ್ರುಮಂ ಕಿಂಪುರುಷಾಚಾರ್ಯಂ ಲೋಕೇ ಪ್ರಥಿತವಿಕ್ರಮಮ್ ।
ಅತಿಕ್ರಮ್ಯ ಮಹಾವೀರ್ಯಂ ಮಾಧವಂ ಕಿಂ ಪ್ರಶಂಸಸಿ ॥೧೫॥

ಎಲೈ ಭೀಷ್ಮನೇ! ನೀನು ಮಹಾಭುಜನಾದ ರಾಜೇಂದ್ರನಾದ ದುರ್ಯೋಧನನ್ನು ಅತಿಕ್ರಮಿಸಿ, ಅಸ್ತ್ರಜ್ಞನೂ ಶ್ರೇಷ್ಠ ಧನ್ರ್ಧಾರಿಯೂ ಆದ ಜಯದ್ರಥನನ್ನು ಆಕ್ರಮಿಸಿ,

ಲೋಕದಲ್ಲಿ ಪ್ರಖ್ಯಾತವಾದ ಪರಾಕ್ರಮವುಳ್ಳ ಕಿಂಪುರುಷಾಚಾರ್ಯನಾದ ದ್ರುಮನನ್ನು ಅತಿಕ್ರಮಿಸಿ, ಮಾಧವನನ್ನು ಮಹಾಶೌರ್ಯವುಳ್ಳವನೆಂದು ಏಕೆ ಪ್ರಸಂಶಿಸುತ್ತಿದ್ದೀಯೇ?

ವೃದ್ಧಂ ಚ ಭಾರತಾಚಾರ್ಯಂ ಕೃಪಂ ವೈ ಶಾರದಂ ಶುಭಮ್ ।
ಅತಿಕ್ರಮ್ಯ ಮಹಾವೀರ್ಯಂ ಕಿಂ ಪ್ರಶಂಸಸಿ ಮಾಧವಮ್ ॥೧೬॥

ವಿಶಾರದರಾದ ಮಂಗಳಸ್ವರೂಪರಾದ ಭಾರತಾಚಾರ್ಯರಾದ ಮಹಾಪರಾಕ್ರಮಿಗಳಾದ ಕೃಪರನ್ನು ಅತಿಕ್ರಮಿಸಿ, ಏಕೆ ಮಾಧವನನ್ನು ಪ್ರಶಂಸಿಸುತ್ತಿದ್ದೀಯೆ?

ಭೀಷ್ಮಕಂ ಚ ಮಹಾವೀರ್ಯಂ ದಂತವಕ್ರಂ ಚ ಭೂಮಿಪಮ್ ।
ಅತಿಕ್ರಮ್ಯ ಮಹಾವೀರ್ಯಂ ಕಿಂ ಪ್ರಶಂಸಸಿ ಮಾಧವಮ್ ॥೧೭॥

ಮಹಾಪರಾಕ್ರಮಿಯಾದ ಭೀಷ್ಮಕನನ್ನೂ ದಂತವಕ್ರ ರಾಜನನ್ನೂ ಮೀರಿ ಕೃಷ್ಣನನ್ನು ಮಹಾಪರಾಕ್ರಮಿ ಎಂದು ಏಕೆ ಪ್ರಶಂಸಿಸುತ್ತಿದ್ದೀಯೆ?

ಭಗದತ್ತಂ ಯೂಪಕೇತುಂ ಜಯತ್ಸೇನಂ ಚ ಮಾಗಧಮ್ ।
ಶಲ್ಯಪ್ರಭೃತಿಕಾನ್ ಹಿ ತ್ವಂ ನ ಸ್ತೌಷಿ ವಸುಧಾಧಿಪಾನ್ ॥೧೮॥

ನೀನು ಭಗದತ್ತ ಯೂಪಕೇತು ಮಗಧರಾಜನಾದ ಜಯತ್ಸೇನ ಶಲ್ಯ ಮೊದಲಾದ ರಾಜರುಗಳನ್ನು ಸ್ತೋತ್ರಮಾಡುವುದಿಲ್ಲ!

ಸ್ತವಾಯ ಯದಿ ತೇ ಬುರ್ದ್ಧಿರ್ತ್ತತೇ ಭೀಷ್ಮ ಸರ್ವದಾ ।
ಕಿಂ ಹ್ಯಶಕ್ಯಂ ತ್ವಯಾ ಕರ್ತುಂ ಯದ್ವೃದ್ಧಾನಾಂ ಮಯಾ ನೃಪ ॥೧೯॥

ಎಲೈ ಭೀಷ್ಮನೇ! ನಿನಗೆ ಇನ್ನೊಬ್ಬರನ್ನು ಸ್ತೋತ್ರಮಾಡುವ ಬುದ್ಧಿಯಿದ್ದರೆ ನಾನು ಏನು ಮಾಡಲು ಸಾಧ್ಯ? ನೀನು ವೃದ್ಧರಿಗೆ ಮಾಡಿದ ಅವಮಾನವಾದ ರೂಪಕಾರ್ಯವನ್ನು ನಾನು ಎಂದೂ ಮಾಡಲಾರೆ.

ಪುರಾ ಕಥಯತಾಂ ನೂನಂ ನ ಶ್ರುತಂ ಧರ್ಮವಾದಿನಾಮ್ ।
ಆತ್ಮನಿಂದಾऽऽತ್ಮಪೂಜಾ ಚ ಪರನಿಂದಾ ಪರಸ್ತವಃ ।
ಅನಾಚರಿತಮಾರ್ಯಾಣಾಮಿತಿ ತೇ ಭೀಷ್ಮ ನ ಶ್ರುತಮ್ ॥೨೦॥

ಭೀಷ್ಮನೇ! ಧರ್ಮಿಷ್ಠರು ಆಡುವ ಮಾತುಗಳನ್ನು ನೀನು ಹಿಂದೆ ಕೇಳಲಿಲ್ಲವೆಂದು ಭಾವಿಸುತ್ತೇನೆ. ಆತ್ಮನಿಂದೆ ಆತ್ಮಪೂಜೆ ಪರನಿಂದೆ ಮತ್ತು ಪರಸ್ತೋತ್ರ ಇದನ್ನು ಉತ್ತಮ ಗುಣವುಳ್ಳವರು ಮಾಡಬಾರದು ಎಂಬ ಮಾತನ್ನು ನೀನು ಕೇಳಲಿಲ್ಲ!

ಇತಿಸತ್ವಮಿಮಂ ಶಶ್ವದ್ ಗೋಪಂ ಸಂಸ್ತೋತುಮಿಚ್ಛಸಿ ।
ಕೇಶವಂ ತಚ್ಚ ತೇ ಭೀಷ್ಮ ನ ಕಿಂಚಿದಪಿ ಮನ್ಯಸೇ ॥೨೧॥

ಭೀಷ್ಮನೇ ಇಂತಹ ಗುಣವುಳ್ಳ ಗೋಪಾಲನಾದ ಕೃಷ್ಣನನ್ನು ನೀನು ಯಾವಾಗಲೂ ಸ್ತೋತ್ರಮಾಡಲು ಇಚ್ಛಿಸುತ್ತೀಯೆ ಆದರಿಂದ ನಿನ್ನ ಮನಸ್ಸಿಗೆ ಏನೂ ಬೇಸರವಾಗುವುದಿಲ್ಲ.

ಕಥಂ ಭೋಜಸ್ಯ ಪುರುಷೇ ವತ್ಸಪಾಲೇ ದುರಾತ್ಮನಿ ।
ಸಮಾವೇಶಯತೇ ಸರ್ವಂ ಜಗತ್ ಕಥನಕಾಮ್ಯಯಾ ॥೨೨॥

ನೀನು ಭೋಜರಾಜನ ರಾಜ್ಯದಲ್ಲಿ ಒಬ್ಬ ಸಾಮಾನ್ಯಪುರುಷನಾದ ದುರಾತ್ಮನಾದ ಕೇವಲ ವತ್ಸಪಾಲನಾದ ಅವನನ್ನು ಸ್ತೋತ್ರಮಾಡಬೇಕು ಎಂಬ ಇಚ್ಛೆಯಿಂದ ಸಮಸ್ತ ಜಗತ್ತು ಅವನನ್ನು ಆದರಿಸಿದೆ ಎಂದು ಹೇಗೆ ಹೇಳುತ್ತೀಯೇ?

ನ ಚೈಷಾಂ ನ ಚ ತೇ ಭಕ್ತಿಃ ಪ್ರಕೃತಿಂ ಯಾತಿ ಭಾರತ ।
ತೇನೈವಂ ವಂದಿವತ್ ಸ್ತೌಷಿ ಶ್ರುತಮನ್ಯೇನ ನಶ್ರುತಮ್ ॥೨೩॥

ಎಲೈ ಭಾರತನೇ! ನೀನು ಕೃಷ್ಣನಲ್ಲಿ ಮಾಡುವ ಸ್ತೋತ್ರವಾಗಲಿ ಅಥವಾ ಪಾಂಡವರು ಕೃಷ್ಣನಲ್ಲಿ ಮಾಡುವ ಭಕ್ತಿಯಾಗಲೀ ಯಾವುದೂ ವಸ್ತುಸ್ಥಿತಿಗೆ ಅನುಗುಣವಾಗಿಲ್ಲ. ನೀನು ಅವನಲ್ಲಿ ಹೇಳುವ ಗುಣಗಳು ನಿನ್ನಿಂದ ಮಾತ್ರ ಶ್ರುತವಾಗಿದೆ. ಬೇರೆ ಯಾರಿಂದಲೂ ಶ್ರುತವಾಗಿಲ್ಲ.

ನ ಗಾಥಾ ಗಾಥಿನಂ ಶಾಸ್ತಿ ಬಹು ಚೇದಪಿ ಗಾಯತಿ ।
ಪ್ರಕೃತಿಂ ಯಾಂತಿ ಭೂತಾನಿ ಕುಳಿಂಗಶಕುನಿರ್ಯಥಾ ॥೨೪॥

ಸ್ತೋತ್ರ ಗೀತೆಗಳು ಸ್ತೋತ್ರಮಾಡುವವನ್ನಾಗಲೀ ಅಥವಾ ಸ್ತೋತ್ರಕ್ಕೆ ವಿಷಯವಾದವನನ್ನಾಗಲೀ ಶಿಕ್ಷೆಯನ್ನು ಮಾಡುವುದಿಲ್ಲ. ಎಂದರೆ ಉಚ್ಚನನ್ನಾಗಿ ಅಥವಾ

ಲೋಕದಲ್ಲಿ ಪ್ರಖ್ಯಾತವಾದ ಪರಾಕ್ರಮವುಳ್ಳ ಕಿಂಪುರುಷಾಚಾರ್ಯನಾದ ದ್ರುಮನನ್ನು ಅತಿಕ್ರಮಿಸಿ, ಮಾಧವನನ್ನು ಮಹಾಶೌರ್ಯವುಳ್ಳವನೆಂದು ಏಕೆ ಪ್ರಸಂಶಿಸುತ್ತಿದ್ದೀಯೇ?

ವೃದ್ಧಂ ಚ ಭಾರತಾಚಾರ್ಯಂ ಕೃಪಂ ವೈ ಶಾರದಂ ಶುಭಮ್ ।
ಅತಿಕ್ರಮ್ಯ ಮಹಾವೀರ್ಯಂ ಕಿಂ ಪ್ರಶಂಸಸಿ ಮಾಧವಮ್ ॥೧೬॥

ವಿಶಾರದರಾದ ಮಂಗಳಸ್ವರೂಪರಾದ ಭಾರತಾಚಾರ್ಯರಾದ ಮಹಾಪರಾಕ್ರಮಿಗಳಾದ ಕೃಪರನ್ನು ಅತಿಕ್ರಮಿಸಿ, ಏಕೆ ಮಾಧವನನ್ನು ಪ್ರಶಂಸಿಸುತ್ತಿದ್ದೀಯೆ?

ಭೀಷ್ಮಕಂ ಚ ಮಹಾವೀರ್ಯಂ ದಂತವಕ್ರಂ ಚ ಭೂಮಿಪಮ್ ।
ಅತಿಕ್ರಮ್ಯ ಮಹಾವೀರ್ಯಂ ಕಿಂ ಪ್ರಶಂಸಸಿ ಮಾಧವಮ್ ॥೧೭॥

ಮಹಾಪರಾಕ್ರಮಿಯಾದ ಭೀಷ್ಮಕನನ್ನೂ ದಂತವಕ್ರ ರಾಜನನ್ನೂ ಮೀರಿ ಕೃಷ್ಣನನ್ನು ಮಹಾಪರಾಕ್ರಮಿ ಎಂದು ಏಕೆ ಪ್ರಶಂಸಿಸುತ್ತಿದ್ದೀಯೆ?

ಭಗದತ್ತಂ ಯೂಪಕೇತುಂ ಜಯತ್ಸೇನಂ ಚ ಮಾಗಧಮ್ ।
ಶಲ್ಯಪ್ರಭೃತಿಕಾನ್ ಹಿ ತ್ವಂ ನ ಸ್ತೌಷಿ ವಸುಧಾಧಿಪಾನ್ ॥೧೮॥

ನೀನು ಭಗದತ್ತ ಯೂಪಕೇತು ಮಗಧರಾಜನಾದ ಜಯತ್ಸೇನ ಶಲ್ಯ ಮೊದಲಾದ ರಾಜರುಗಳನ್ನು ಸ್ತೋತ್ರಮಾಡುವುದಿಲ್ಲ!

ಸ್ತವಾಯ ಯದಿ ತೇ ಬುದ್ಧಿರ್ತ್ತತೇ ಭೀಷ್ಮ ಸರ್ವದಾ ।
ಕಿಂ ಹ್ಯಶಕ್ಯಂ ತ್ವಯಾ ಕರ್ತುಂ ಯದ್ವೃದ್ಧಾನಾಂ ಮಯಾ ನೃಪ ॥೧೯॥

ಎಲೈ ಭೀಷ್ಮನೇ! ನಿನಗೆ ಇನ್ನೊಬ್ಬರನ್ನು ಸ್ತೋತ್ರಮಾಡುವ ಬುದ್ಧಿಯಿದ್ದರೆ ನಾನು ಏನು ಮಾಡಲು ಸಾಧ್ಯ? ನೀನು ವೃದ್ಧರಿಗೆ ಮಾಡಿದ ಅವಮಾನವಾದ ರೂಪಕಾರ್ಯವನ್ನು ನಾನು ಎಂದೂ ಮಾಡಲಾರೆ.

ಪುರಾ ಕಥಯತಾಂ ನೂನಂ ನ ಶ್ರುತಂ ಧರ್ಮವಾದಿನಾಮ್ ।
ಆತ್ಮನಿಂದಾऽऽತ್ಮಪೂಜಾ ಚ ಪರನಿಂದಾ ಪರಸ್ತವಃ ।
ಅನಾಚರಿತಮಾರ್ಯಾಣಾಮಿತಿ ತೇ ಭೀಷ್ಮ ನ ಶ್ರುತಮ್ ॥೨೦॥

ಭೀಷ್ಮನೇ! ಧರ್ಮಿಷ್ಠರು ಆಡುವ ಮಾತುಗಳನ್ನು ನೀನು ಹಿಂದೆ ಕೇಳಲಿಲ್ಲವೆಂದು ಭಾವಿಸುತ್ತೇನೆ. ಆತ್ಮನಿಂದೆ ಆತ್ಮಪೂಜೆ ಪರನಿಂದೆ ಮತ್ತು ಪರಸ್ತೋತ್ರ ಇದನ್ನು ಉತ್ತಮ ಗುಣವುಳ್ಳವರು ಮಾಡಬಾರದು ಎಂಬ ಮಾತನ್ನು ನೀನು ಕೇಳಲಿಲ್ಲ!

ಇತಿಸತ್ವಮಿಮಂ ಶಶ್ವದ್ ಗೋಪಂ ಸಂಸ್ತೋತುಮಿಚ್ಛಸಿ ।
ಕೇಶವಂ ತಚ್ಚ ತೇ ಭೀಷ್ಮ ನ ಕಿಂಚಿದಪಿ ಮನ್ಯಸೇ ॥೨೧॥

ಭೀಷ್ಮನೇ ಇಂತಹ ಗುಣವುಳ್ಳ ಗೋಪಾಲನಾದ ಕೃಷ್ಣನನ್ನು ನೀನು ಯಾವಾಗಲೂ ಸ್ತೋತ್ರಮಾಡಲು ಇಚ್ಛಿಸುತ್ತೀಯೆ ಆದರಿಂದ ನಿನ್ನ ಮನಸ್ಸಿಗೆ ಏನೂ ಬೇಸರವಾಗುವುದಿಲ್ಲ.

ಕಥಂ ಭೋಜಸ್ಯ ಪುರುಷೇ ವತ್ಸಪಾಲೇ ದುರಾತ್ಮನಿ ।
ಸಮಾವೇಶಯತೇ ಸರ್ವಂ ಜಗತ್ ಕಥನಕಾಮ್ಯಯಾ ॥೨೨॥

ನೀನು ಭೋಜರಾಜನ ರಾಜ್ಯದಲ್ಲಿ ಒಬ್ಬ ಸಾಮಾನ್ಯಪುರುಷನಾದ ದುರಾತ್ಮನಾದ ಕೇವಲ ವತ್ಸಪಾಲನಾದ ಅವನನ್ನು ಸ್ತೋತ್ರಮಾಡಬೇಕು ಎಂಬ ಇಚ್ಛೆಯಿಂದ ಸಮಸ್ತ ಜಗತ್ತು ಅವನನ್ನು ಆದರಿಸಿದೆ ಎಂದು ಹೇಗೆ ಹೇಳುತ್ತೀಯೇ?

ನ ಚೈಷಾಂ ನ ಚ ತೇ ಭಕ್ತಿಃ ಪ್ರಕೃತಿಂ ಯಾತಿ ಭಾರತ ।
ತೇನೈವಂ ವಂದಿವತ್ ಸ್ತೌಷಿ ಶ್ರುತಮನ್ಯೇನ ನಶ್ರುತಮ್ ॥೨೩॥

ಎಲೈ ಭಾರತನೇ! ನೀನು ಕೃಷ್ಣನಲ್ಲಿ ಮಾಡುವ ಸ್ತೋತ್ರವಾಗಲಿ ಅಥವಾ ಪಾಂಡವರು ಕೃಷ್ಣನಲ್ಲಿ ಮಾಡುವ ಭಕ್ತಿಯಾಗಲೀ ಯಾವುದೂ ವಸ್ತುಸ್ಥಿತಿಗೆ ಅನುಗುಣವಾಗಿಲ್ಲ. ನೀನು ಅವನಲ್ಲಿ ಹೇಳುವ ಗುಣಗಳು ನಿನ್ನಿಂದ ಮಾತ್ರ ಶ್ರುತವಾಗಿದೆ. ಬೇರೆ ಯಾರಿಂದಲೂ ಶ್ರುತವಾಗಿಲ್ಲ.

ನ ಗಾಥಾ ಗಾಥಿನಂ ಶಾಸ್ತಿ ಬಹು ಚೇದಪಿ ಗಾಯತಿ ।
ಪ್ರಕೃತಿಂ ಯಾಂತಿ ಭೂತಾನಿ ಕುಳಿಂಗಶಕುನಿರ್ಯಥಾ ॥೨೪॥

ಸ್ತೋತ್ರ ಗೀತೆಗಳು ಸ್ತೋತ್ರಮಾಡುವವನ್ನಾಗಲೀ ಅಥವಾ ಸ್ತೋತ್ರಕ್ಕೆ ವಿಷಯವಾದವನನ್ನಾಗಲೀ ಶಿಕ್ಷೆಯನ್ನು ಮಾಡುವುದಿಲ್ಲ. ಎಂದರೆ ಉಚ್ಚನನ್ನಾಗಿ ಅಥವಾ

ನೀಚನನ್ನಾಗಿ ಮಾಡುವುದಿಲ್ಲ. ಎಲ್ಲರೂ ಕುಳಿಂಗಪಕ್ಷಿಯಂತೆ ತಮ್ಮ ತಮ್ಮ ಸ್ವಭಾವಕ್ಕೆ ಅನುಗುಣವಾಗಿ ಇರುತ್ತಾರೆ.

ಕುಳಿಂಗಶಕುನಿರ್ನಾಮ ಪಾರ್ಶ್ವೇ ಹಿಮವತಃ ಪರೇ ।
ಭೀಷ್ಮ ತಸ್ಯಾಸ್ಸದಾ ವಾಚಃ ಶ್ರೂಯಂತೇಽರ್ಥವಿಗರ್ಹಿತಾಃ ॥೨೫॥

ಎಲೈ ಭೀಷ್ಮನೇ! ಹಿಮಾಲಯದ ಪಾರ್ಶ್ವದಲ್ಲಿ ಒಂದು ಕುಳಿಂಗಪಕ್ಷಿ ಇದ್ದಿತು. ಅದು ಯಾವಾಗಲೂ ಅರ್ಥಹೀನವಾದ ಮಾತುಗಳನ್ನು ಆಡುತ್ತಿದ್ದಿತು.

ಮಾ ಸಾಹಸಮಿತೀದಂ ಸಾ ಸತತಂ ವದತೇ ಕಿಲ ।
ಸಾಹಸಂ ಚಾತ್ಮನಾ ಭೀಮ ಕುರ್ವತೀ ನಾವಬುಧ್ಯತೇ ॥೨೬॥

ಸಾಹಸಕಾರ್ಯವನ್ನು ಮಾಡಬೇಡಿ ಎಂದು ಅದು ಯಾವಾಗಲೂ ಹೇಳುತ್ತಿತ್ತು. ಭೀಷ್ಮನೇ! ತಾನು ಮಾತ್ರ ಅದು ಯಾವಾಗಲೂ ಸಾಹಸ ಕಾರ್ಯವನ್ನು (ಸಾಹಸ ಕಾರ್ಯ ಎಂದರೆ ಪರಿಣಾಮವನ್ನು ಆಲೋಚಿಸದೆ ತಕ್ಷಣದಲ್ಲಿ ಮಾಡುವ ಒಂದು ಬುದ್ಧಿಶೂನ್ಯವಾದ ದುಷ್ಪರಿಣಾಮವನ್ನು ಮಾಡುವ ಕಾರ್ಯ) ಯಾವಾಗಲೂ ಮಾಡುತ್ತಾ ತಾನು ಮಾಡುವ ಸಾಹಸಕಾರ್ಯವನ್ನು ತಾನೇ ತಿಳಿಯುತ್ತಿರಲಿಲ್ಲ.

ಸಾ ಹಿ ಮಾಂಸಾರ್ಗಳಂ ಭೀಷ್ಮ ಮುಖಾತ್ ಸಿಂಹಸ್ಯ ಖಾದತಃ.।
ದಂತಾಂತರವಿಲಗ್ನಂ ಯತ್ ತದಾದತ್ತೇಽಲ್ಪಚೇತನಾ ।
ಇಚ್ಛತಃ ಸಾ ಹಿ ಸಿಂಹಸ್ಯ ಭೀಷ್ಮ ಜೀವತ್ಯಸಂಶಯಮ್ ॥೨೭॥

ಭೀಷ್ಮನೇ! ಅದು ಸಿಂಹವು ತಿನ್ನುವ ಮಾಂಸದ ಮುದ್ದೆಯನ್ನು ಅದರ ದಂತದ ಮಧ್ಯದಿಂದ ಮಂದ ಬುದ್ಧಿಯಿಂದ ಕಿತ್ತುಕೊಂಡು ತಿನ್ನಲು ಪ್ರಯತ್ನಿಸುತ್ತಿತ್ತು. ಭೀಷ್ಮನೇ! ಸಿಂಹವು ಬಯಸಿದರೆ ಒಂದು ಕ್ಷಣದಲ್ಲಿ ಆ ಪಕ್ಷಿಯು ನಿಸ್ಸಂಶಯವಾಗಿ ಇರುವುದಿಲ್ಲವಷ್ಟೇ!

ತದ್ವತ್ ತ್ವಮಪ್ಯಧರ್ಮಜ್ಞ ಸದಾ ವಾಚಃ ಪ್ರಭಾಷಸೇ ।
ಇಚ್ಛತಾಂ ಪಾರ್ಥಿವೇಂದ್ರಾಣಾಂ ಭೀಷ್ಮ ಜೀವಸ್ಯಸಂಶಯಃ ।
ಲೋಕವಿದ್ವಿಷ್ಟಕರ್ಮಾ ಹಿ ನಾನ್ಯೋಽಸ್ತಿ ಭವತಃ ಸಮಃ ॥೨೮॥

ಭೀಷ್ಮನೇ! ಅಧರ್ಮಜ್ಞನಾದ ನೀನು ಆ ಕುಳಿಂದ ಪಕ್ಷಿಯಂತೆ ಮಾತನಾಡುತ್ತಿದ್ದೀಯೆ. ನೀನು ಬದುಕಿರಲಿ ಎಂಬ ಇಚ್ಛೆಯಿಂದ, ರಾಜರಾದ ನಾವು ಸುಮ್ಮನಿರುವ ಕಾರಣದಿಂದ ನೀನು ಬದುಕಿದ್ದೀಯೆ ಈ ವಿಷಯದಲ್ಲಿ ಸಂಶಯವಿಲ್ಲ. ಎಲ್ಲರ ದ್ವೇಷಕ್ಕೆ ಒಳಗಾಗುವ ಕರ್ಮವನ್ನು ಮಾಡುವವನು ನಿನ್ನಿಂತಹವನು ಇನ್ನೊಬ್ಬನಿಲ್ಲ.

ವೈಶಂಪಾಯನಃ

ಇತಿ ಚೇದಿಪತೇಃ ಶ್ರುತ್ವಾ ಭೀಷ್ಮೋಽಸ್ಯ ಕಟುಕಂ ವಚಃ ।
ಉವಾಚ ವಚನಂ ಧೀಮಾನ್ ಚೇದಿರಾಜಸ್ಯ ಶೃಣ್ವತಃ ॥೨೯॥

ಭೀಷ್ಮರು ಹೀಗೆ ಶಿಶುಪಾಲನ ಕಟುಮಾತುಗಳನ್ನು ಕೇಳಿ ಮೇಧಾವಿಯಾದ ಅವರು ಶಿಶುಪಾಲನು ಕೇಳುವಂತೆ ಮಾತನಾಡಿದರು.

ಇಚ್ಛತಾಂ ಕಿಲ ನಾಮಾಹಂ ಜೀವಾಮ್ಯೇಷಾಂ ಮಹೀಕ್ಷಿತಾಮ್ ।
ಯೋಽಹಂ ನ ಗಣಯಾಮ್ಯೇತಾನ್ ತೃಣವತ್ ಸರ್ವಪಾರ್ಥಿವಾನ್ ॥೩೦॥

ನಿಮ್ಮಂತಹ ರಾಜರ ಇಚ್ಛೆಯಿಂದ ನಾನು ಬದುಕಿದ್ದೇನಷ್ಟೇ! ನಾನು ರಾಜರಾದ ನಿಮ್ಮೆಲ್ಲರನ್ನು ಒಂದು ಹುಲ್ಲು ಕಡ್ಡಿಗೂ ಸಮನಾಗಿ ಎಣಿಸುವುದಿಲ್ಲ.

ಏವಮುಕ್ತೇ ತು ಭೀಷ್ಮೇಣ ತತಃ ಸಂಚುಕ್ರುಶುರ್ನೃಪಾಃ ।
ಕೇಚಿಜ್ಜಹೃಷಿರೇ ತತ್ರ ಕೇಚಿದ್ ಭೀಷ್ಮಂ ಜಗರ್ಹಿರೇ ।
ಕೇಚಿದೂಚುರ್ಮಹೇಷ್ವಾಸಾಃ ಶ್ರುತ್ವಾ ಭೀಷ್ಮಸ್ಯ ತದ್ವಚಃ ॥೩೧॥

ಭೀಷ್ಮನು ಹೀಗೆ ಹೇಳುತ್ತಿರಲು ಕೆಲವು ರಾಜರು ಕಿರುಚಿದರು. ಅವರಲ್ಲಿ ಕೆಲವರು ಸಂತೋಷಪಟ್ಟರು. ಇನ್ನು ಕೆಲವರು ಭೀಷ್ಮನನ್ನು ನಿಂದಿಸಿದರು. ಇನ್ನು ಕೆಲವು ಧನುರ್ಧಾರಿಗಳಾದ ರಾಜರು ಭೀಷ್ಮರ ಮಾತನ್ನು ಕೇಳಿ ಹೀಗೆ ಮಾತನಾಡಿದರು.

ಪಾಪೋಽವಲಿಪ್ತೋ ವೃದ್ಧಶ್ಚ ನಾಯಂ ಭೀಷ್ಮೋಽರ್ಹತಿ ಕ್ಷಮಾಂ ।
ಹನ್ಯತಾಂ ದುರ್ಮತಿರ್ಭೀಷ್ಮಃ ಪಶುವತ್ ಸಾಧ್ವಸಂ ನೃಪೈಃ ।
ಸಮೇತ್ಯ ಸರ್ವೈಃ ಪಾಪಾತ್ಮಾ ದಹ್ಯತಾಂ ಚಾಸ್ತ್ರವಹ್ನಿನಾ ॥೩೨॥

ಪಾಪಿಯೂ ಗರ್ವಿಷ್ಠನೂ ವೃದ್ಧನೂ ಆದ ಈ ಭೀಷ್ಮನು ಎಂದೂ ನಮ್ಮ ಕ್ಷಮೆಗೆ ಅರ್ಹನಲ್ಲ. ಈ ದುರ್ಮತಿಯಾದ ಭೀಷ್ಮನನ್ನು ಪಶುವಿನಂತೆ ಎಲ್ಲ ರಾಜರು ಸೇರಿ ಕೊಂದು ಬಿಡಿ ಅಥವಾ ಎಲ್ಲರಾಜರೂ ತಮ್ಮ ಅಸ್ತ್ರಾಗ್ನಿಯಿಂದ ಪಾಪಾತ್ಮನಾದ ಈ ಭೀಷ್ಮನನ್ನು ಸುಟ್ಟುಬಿಡಲಿ.

ಇತಿ ತೇಷಾಂ ವಚಃ ಶ್ರುತ್ವಾ ವೃದ್ಧಃ ಕುರುಪಿತಾಮಹಃ ।
ಉವಾಚ ಮತಿಮಾನ್ ಭೀಷ್ಮಃ ತಾನೇವಂ ವಸುಧಾಧಿಪಾನ್ ॥೩೩॥

ಹೀಗೆ ಅವರು ಆಡಿದ ಮಾತುಗಳನ್ನು ಕೇಳಿದ ಕುರುಪಿತಾಮಹನಾದ ಮೇಧಾವಿಗಳೂದ ಭೀಷ್ಮರು ಆ ರಾಜರನ್ನು ಕುರಿತು ಹೀಗೆ ಮಾತನಾಡಿದರು.

ಉಕ್ತಸ್ಯೋಕ್ತಸ್ಯ ಚೈವಾಂತಂ ನಾಹಂ ಸಮುಪಲಕ್ಷಯೇ ।
ಯತ್ತು ವಕ್ಷ್ಯಾಮಿ ತತ್ ಸರ್ವಂ ಶೃಣುಧ್ವಂ ವಸುಧಾಧಿಪಾಃ ॥೩೪॥

ನಿಮ್ಮಲ್ಲಿ ಒಬ್ಬರೂ ಏನನ್ನು ಮಾತಾಡಿದರೂ ಅದನ್ನು ಪರ್ಯವಸಾನ ಮಾಡುವಸಾಮರ್ಥ್ಯವನ್ನು ನಾನು ಯಾರಲ್ಲೂ ಕಾಣುತ್ತಿಲ್ಲ. ಆದರೆ ಎಲೈ ರಾಜರೇ! ನಾನು ಹೇಳುವ ಮಾತನ್ನು ನೀವೆಲ್ಲರೂ ಕೇಳಿ.

ಪಶುವದ್ ಘಾತನಂ ವಾ ಮೇ ದಹನಂ ವಾ ಶರಾಗ್ನಿನಾ ।
ಕ್ರಿಯತಾಂ ಮೂರ್ಧ್ನಿವೋ ನ್ಯಸ್ತಂ ಮಯೇದಂ ಸಕಲಂ ಪದಮ್ ॥

ನೀವು ನನ್ನನ್ನು ಪಶುವಿನಂತಾದರೂ ಕೊಲ್ಲಿ ಅಥವಾ ಬಾಣಾಗ್ನಿಯಿಂದಲಾದರೂ ದಹಿಸಿ. ನಾನು ಮಾತ್ರ ನಿಮ್ಮೆಲ್ಲರ ತಲೆಯ ಮೇಲೆ ಈ ನನ್ನ ಪಾದಗಳನ್ನು ಇಟ್ಟಿದ್ದೇನೆ.

ಏಷ ತಿಷ್ಠತಿ ಗೋವಿಂದಃ ಪೂಜಿತೋಸ್ಮಾಭಿರೀಶ್ವರಃ ।
ಯಸ್ಯ ಚ ತ್ವರತೇ ಬುದ್ಧಿರ್ಮರಣಾಯ ತು ವೋ ನೃಪಾಃ ॥೩೬॥

ಕೃಷ್ಣ ಆಹ್ವಯತಾಮದ್ಯ ಯುದ್ಧೇ ಚಕ್ರಗದಾಧರಃ ।
ಯಾದವಸ್ಯೈವ ದೇವಸ್ಯ ದೇಹಂ ವಿಶತು ಪಾತಿತಃ ॥೩೭॥

ಪ್ರಭುವಾದ ಈ ಕೃಷ್ಣನನ್ನು ನಾವು ಪೂಜಿಸಿದ್ದೇವೆ. ನಿಮ್ಮಲ್ಲಿ ಯಾವ ರಾಜರಿಗೆ ಬೇಗ ಮರಣವನ್ನು ಹೊಂದಲು ತವಕವಿದೆಯೋ ಅಂತಹವರು ಚಕ್ರಗದಾಧರನಾದ

ಕೃಷ್ಣನನ್ನು ಆಹ್ವಾನಿಸಿ. ಅವನಿಂದ ಹೊಡೆದು ಉರುಳಿಸಲ್ಪಟ್ಟು ಯಾದವ ಕೃಷ್ಣನಾದ ಆ ದೇವ ದೇಹವನ್ನೇ ಪ್ರವೇಶಿಸುತ್ತಾನೆ. (ಪ್ರವೇಶಿಸಲಿ)

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ದ್ವಿಷಷ್ಟಿತಮೋಧ್ಯಾಯಃ ॥
॥ ಶಿಶುಪಾಲವಧಪರ್ವಣಿ ಚತುರ್ಥೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ
ಅರವತ್ತೆರಡನೆಯ ಅಧ್ಯಾಯವು ಮುಗಿಯಿತು.

★ ★ ★ ★

ಅರವತ್ಮೂರನೆಯ ಅಧ್ಯಾಯ

(ಶಿಶುಪಾಲನಿಂದ ಕೃಷ್ಣನ ನಿಂದೆ, ಶಿಶುಪಾಲನನ್ನು ಕೊಲ್ಲಲು ಕೃಷ್ಣನ ನಿರ್ಧಾರ)

ವೈಶಂಪಾಯನಃ

ವಚಃ ಶ್ರುತ್ವೈವ ಭೀಷ್ಮಸ್ಯ ಚೇದಿರಾಡುರುವಿಕ್ರಮಃ ।
ಯುಯುತ್ಸುರ್ವಾಸುದೇವೇನ ವಾಸುದೇವಮುವಾಚ ಹ ॥೧॥

ಭೀಷ್ಮನ ಮಾತುಗಳನ್ನು ಕೇಳಿದ ಮಹಾವರಾಕ್ರಮಶಾಲಿಯಾದ ಶಿಶುಪಾಲನು ಕೃಷ್ಣನ ಜೊತೆಯಲ್ಲಿ ಯುದ್ಧಮಾಡಲು ಬಯಸಿ ಕೃಷ್ಣನನ್ನು ಕುರಿತು ಮಾತನಾಡಿದನು.

ಆಹ್ವಯೇ ತ್ವಾಂ ರಣಾಯೈಹಿ ಮಯಾ ಸಹ ಜನಾರ್ದನ ।
ಯಾವದದ್ಯ ನಿಹನ್ಮಿ ತ್ವಾಂ ಸಹಿತಂ ಸರ್ವಪಾಂಡವೈಃ ॥೨॥

ಸ ಚ ಭೀಷ್ಮೋಪಿ ಮೇ ವಧ್ಯಃ ಪಾಂಡವಾಃ ಸರ್ವರಾಜಭಿಃ ।
ನೃಪತೀನ್ ಸಮತಿಕ್ರಮ್ಯ ಯೈರರಾಜಾ ತ್ವಮರ್ಚಿತಃ ॥೩॥

ಜನಾರ್ದನನೇ ನನ್ನ ಜೊತೆಯಲ್ಲಿ ಯುದ್ಧಕ್ಕೆ ನಿನ್ನನ್ನು ಆಹ್ವಾನಿಸುತ್ತಿದ್ದೇನೆ. ಯುದ್ಧಕ್ಕೆ ಬಾ. ಈ ದಿನ ನಿನ್ನನ್ನು ಕೊಲ್ಲುತ್ತೇನೆ. ಆ ಭೀಷ್ಮನು ಸಹ ನನಗೆ ವಧ್ಯನಾದವನೇ. ಯಾವ ಪಾಂಡವರು ಎಲ್ಲಾ ರಾಜರನ್ನೂ ಅತಿಕ್ರಮಿಸಿ ನಿನ್ನನ್ನು ಪೂಜಿಸಿದರೋ ಆ ಪಾಂಡವರೂ ಸಹ ಎಲ್ಲಾ ರಾಜರಿಂದ ಕೊಲ್ಲಲ್ಪಡಬೇಕು.

ಯೇ ತ್ವಾಂ ಗೋಪಮರಾಜಾನಂ ಬಾಲ್ಯಾದರ್ಚಂತಿ ದುರ್ಮತಿಮ್।
ಅನರ್ಹಮರ್ಹವತ್ ಕೃಷ್ಣ ವಧ್ಯಾಸ್ತ ಇತಿ ಮೇ ಮತಿಃ ॥೪॥

ಕೃಷ್ಣನೇ! ಯಾರು ದುರ್ಮತಿಯಾದ, ಗೋಪಾಲಕನಾದ, ರಾಜನಲ್ಲದ, ಸ್ತೋತ್ರಕ್ಕೆ ಅನರ್ಹನಾದ ನಿನ್ನನ್ನು ಸ್ತೋತ್ರಕ್ಕೆ ಅರ್ಹನಾದವನಂತೆ ಬಾಲ್ಯದಿಂದಲೂ ಅರ್ಚಿಸುತ್ತಿದ್ದಾರೆಯೋ ಅಂತಹ ಪಾಂಡವರು ವಧೆಗೆ ಅರ್ಹರಾದವರು ಎಂದು ನನ್ನ ಅಭಿಪ್ರಾಯ.

ಇತ್ಯುಕ್ತ್ವಾ ರಾಜಶಾರ್ದೂಲಃ ಶಾರ್ದೂಲ ಇವ ನಾದಯನ್ ।
ಪಶ್ಯತಾಂ ಭೂಮಿಪಾಲಾನಾಂ ಶಿಶುಪಾಲಃ ಪ್ರತಾಪವಾನ್ ॥೫॥

ಸ ರಣಾಯೈವ ಸಂಕ್ರುದ್ಧಃ ಸನ್ನದ್ಧಃ ಸರ್ವರಾಜಭಿಃ ।
ಸುನೀಥಃ ಪ್ರಯಯೌ ಕ್ಷಿಪ್ರಂ ಪಾರ್ಥಯಜ್ಞಜಿಘಾಂಸಯಾ ॥೬॥

ಹೀಗೆ ಹೇಳಿ ಪ್ರತಾಪಶಾಲಿಯಾದ ರಾಜಶ್ರೇಷ್ಠನಾದ ಶಿಶುಪಾಲನು ಎಲ್ಲಾ ರಾಜರೂ ನೋಡುತ್ತಿರುವಂತೆ ಹುಲಿಯಂತೆ ಗರ್ಜಿಸುತ್ತಾ ಅನೇಕ ರಾಜರುಗಳ ಜೊತೆಯಲ್ಲಿ ಸೇರಿ ಕ್ರೋಧದಿಂದ ಯುದ್ಧಕ್ಕೆ ಸಿದ್ಧನಾಗಿ ಧರ್ಮರಾಜನ ಯಜ್ಞವನ್ನು ನಾಶಮಾಡುವ ಉದ್ದೇಶದಿಂದ ಶೀಘ್ರವಾಗಿ ಯುದ್ಧಕ್ಕೆ ಹೊರಟನು.

ತತಶ್ಚಕ್ರಗದಾಪಾಣಿಃ ಕೇಶವಃ ಕೇಶಿಹಾ ಹರಿಃ ।
ಸಧ್ವಜಂ ರಥಮಾಸ್ಥಾಯ ಯುದ್ಧಾಯ ಸಮುಪಸ್ಥಿತಃ ॥೭॥

ಆಗ ಕೇಶಿಸೂದನನಾದ ಕೇಶವನಾದ ಹರಿಯು ಚಕ್ರಗದಾಪಾಣಿಯಾಗಿ ಧ್ವಜವುಳ್ಳ ತನ್ನ ರಥವನ್ನು ಏರಿ ಯುದ್ಧಕ್ಕೆ ಸಿದ್ಧನಾದನು.

ಸ ರಥಸ್ಯ ಸ್ವನೇನೈವ ಕೋಪಿತಾನ್ ಸರ್ವಪಾರ್ಥಿವಾನ್ ।
ಆಸಸಾದ ರಥೇ ಕೃಷ್ಣಃ ಸಜಿತ್ಯೈಕರಥೇ ಸ್ಥಿತಃ ॥೮॥

ತನ್ನ ರಥದ ಘೋಷದಿಂದಲೇ ಸಿಟ್ಟುಗೊಂಡು ಎಲ್ಲಾ ರಾಜರ ಸಮೀಪಕ್ಕೆ ಕೃಷ್ಣನು ಸುಸಜ್ಜಿತವಾದ ಒಂದೇ ರಥದಲ್ಲಿ ಕುಳಿತು ಮುಂದೆ ಹೋದನು.

ತತಃ ಪುಷ್ಕರಪತ್ರಾಕ್ಷಂ ಗರುಡಧ್ವಜಮಚ್ಯುತಮ್ ।
ದಿವಾಕರಮಿವೋದ್ಯಂತಂ ದದೃಶುಃ ಸರ್ವಪಾರ್ಥಿವಾಃ ॥೯॥

ಆಗ ಕಮಲನಯನನೂ ಗರುಡಧ್ವಜನೂ ಆದ ಅಚ್ಯುತನು ಉದಯಿಸುವ ಸೂರ್ಯನಂತೆ ಶೋಭಿಸುವುದನ್ನು ಎಲ್ಲಾ ರಾಜರೂ ನೋಡಿದರು.

ದೃಷ್ಟ್ವಾ ಕೃಷ್ಣಮಥಾಯಾಂತಂ ಪ್ರತಪಂತಮಿವೌಜಸಾ ।
ಸ್ಥಿತಂ ಪುಷ್ಪರಥೇ ದಿವ್ಯೇ ಪುಷ್ಪಕೇತುಮಿವಾಪರಮ್ ।
ಯಥಾರ್ಹಂ ಕೇಶವೇ ವೃತ್ತಿಮವಶಾಃ ಪ್ರತಿಪೇದಿರೇ ॥೧೦॥

ಪುಷ್ಪರಥದಲ್ಲಿ ಕುಳಿತ ಮನ್ಮಥನಂತೆ ತನ್ನ ಪರಾಕ್ರಮದಿಂದ ಬೆಳಗುತ್ತಾ ಸಮೀಪಿಸುತ್ತಿರುವ ಕೃಷ್ಣನನ್ನು ನೋಡಿ ರಾಜರು ಅವರವರ ಯೋಗ್ಯತೆಗೆ ತಕ್ಕಂತೆ ಮನೋಭಾವವನ್ನು ಹೊಂದಿದರು.

ತಾನುವಾಚ ಮಹಾಬಾಹುರ್ಮಹಾಸುರನಿಬರ್ಹಣಃ ।
ವೃಷ್ಣಿವೀರಸ್ತದಾ ರಾಜನ್ ಸಾಂತ್ವಯನ್ ಪರವೀರಹಾ ॥೧೧॥

ಎಲೈ ರಾಜನೇ! ಮಹಾಸುರವಿನಾಶಕನೂ ಪರವೀರವಿನಾಶಕನೂ ಆದ ಆ ವೃಷ್ಣಿವೀರನು ಆ ರಾಜರುಗಳನ್ನು ಸಮಾಧಾನ ಪಡಿಸುತ್ತಾ ಅವರನ್ನು ಕುರಿತು ಮಾತನಾಡಿದನು.

ಅಪೇತ ಸಬಲಾಃ ಸರ್ವ ಆಶ್ವಸ್ತಾ ಮಮ ಶಾಸನಾತ್ ।
ಅದುಷ್ಟಾನ್ ದೂಷಯೇತ್ ಪಾಪ ಏಷ ವೈ ಸರ್ವಪಾರ್ಥಿವಾನ್॥೧೨॥

ನನ್ನ ಮಾತಿನಲ್ಲಿ ವಿಶ್ವಾಸವಿಟ್ಟು ನನ್ನ ಶಾಸನದಂತೆ ರಾಜರೆಲ್ಲರೂ ನಿಮ್ಮ ಸೈನ್ಯದೊಂದಿಗೆ ದೂರ ಸರಿಯಿರಿ. ಈ ಪಾಪಿಯು ಸಜ್ಜನರಾದ ಎಲ್ಲಾ ರಾಜರನ್ನೂ ದೂಷಿಸುವವನು.

ಏಷ ನಃ ಶತ್ರುರತ್ಯಂತಮೇಷ ವೃಷ್ಣಿವಿಮರ್ದನಃ ।
ಸಾತ್ವತಾನಾಂ ನೃಶಂಸಾತ್ಮಾ ವೈರಂ ಚರತಿ ಶಾಶ್ವತಮ್ ॥೧೩॥

ಇವನು ನಮಗೆ ಮಹಾಶತ್ರು. ಇವನು ವೃಷ್ಣಿಕುಲವನ್ನು ಹಿಂಸಿಸಿದವನು. ಕ್ರೂರ ಸ್ವಭಾವದವನಾಗಿ ಸಾತ್ವತರ ಮೇಲೆ ಯಾವಾಗಲೂ ವೈರವನ್ನು ಸಾಧಿಸುತ್ತಾನೆ.

ಪ್ರಾಗ್ಜ್ಯೋತಿಷಪುರಂ ಯಾತಾನಸ್ಮಾನ್ ಜ್ಞಾತ್ವಾ ನೃಶಂಸಕೃತ್ ।
ಅದಹದ್ ದ್ವಾರಕಾಮೇಷ ಸ್ವಸ್ರೀಯಃ ಸನ್ ನರಾಧಿಪಾಃ ॥೧೪॥

ಎಲೈ ರಾಜರೇ! ನನ್ನ ತಂದೆಯ ತಂಗಿಯ ಮಗನಾದ ಈ ಕ್ರೂರಕರ್ಮಿಯು ನಾನು ಪ್ರಾಗ್ಜ್ಯೋತಿಷಪಟ್ಟಣಕ್ಕೆಹೋದುದನ್ನು ತಿಳಿದು ದ್ವಾರಕೆಗೆ ಬಂದು ದ್ವಾರಕಾ ಪಟ್ಟಣಕ್ಕೆ ಬೆಂಕಿಯನ್ನು ಹಚ್ಚಿದನು.

ಕ್ರೀಡತೋ ಭೋಜರಾಜನ್ಯಾನ್ ಏಷ ರೈವತಕೇ ಗಿರೌ ।
ಗತ್ವಾ ಹತ್ವಾ ಚ ಬಧ್ವಾ ಚ ಸ್ವಪುರಂ ತಾನಥಾನಯತ್ ॥೧೫॥

ಅಶ್ವಮೇಧೇ ಹಯಂ ಮೇಧ್ಯಮುತ್ಸೃಷ್ಟಂ ರಕ್ಷಿಭಿರ್ವೃತಮ್ ।
ಅಪಾಹರತ್ ಪಾಪಬುದ್ಧಿಃ ಪಿತುರ್ಯಜ್ಞಜಿಘಾಂಸಯಾ ॥೧೬॥

ಇವನು ರೈವತಕಪರ್ವತದಲ್ಲಿ ವಿಹಾರಮಾಡುತ್ತಿದ್ದ ಭೋಜರಾಜ ಕುಲದ ಸಮೀಪಕ್ಕೆ ಹೋಗಿ ಅವರಲ್ಲಿ ಕೆಲವರನ್ನು ಕೊಂದು ಇನ್ನು ಕೆಲವರನ್ನು ಬಂಧಿಸಿ ತನ್ನ ಪಟ್ಟಣಕ್ಕೆ ಕರೆದುಕೊಂಡು ಹೋದನು. ನನ್ನ ತಂದೆಯು ಅಶ್ವಮೇಧಯಾಗವನ್ನು ಅಶ್ವವನ್ನು ಬಿಟ್ಟಿರಲು ಈ ಪಾಪಬುದ್ಧಿಯು ರಕ್ಷಕರಿಂದ ರಕ್ಷಿಸಲ್ಪಟ್ಟ ಆ ಕುದುರೆಯನ್ನು ನನ್ನ ತಂದೆಯ ಯಜ್ಞಕ್ಕೆ ವಿಘ್ನವನ್ನು ಉಂಟುಮಾಡುವ ಉದ್ದೇಶದಿಂದ ಅಪಹರಿಸಿದನು.

ಸೌವೀರಾತ್ ಪ್ರತಿಪತ್ತೌ ಚ ಬಭ್ರೋರೇಷ ಯಶಸ್ವಿನಃ ।
ಭಾರ್ಯಾಮಪಾಹರತ್ ಪಾಪಾಮಕಾಮಾಂ ಧರ್ಮತೋ ಗತಾಮ್ ॥೧೭॥

ಸೌವೀರ ದೇಶದಿಂದ ದ್ವಾರಕೆಗೆ ನಾನು ಹಿಂತಿರುಗುವಷ್ಟರಲ್ಲಿ ಇವನು ಬಭ್ರು ಎಂಬ ಕೀರ್ತಿಶಾಲಿಯಾದ ಯಾದವನನ್ನು ಧರ್ಮದಿಂದ ವರಿಸಿದ್ದಂತಹ ಅವನ ಭಾರ್ಯೆಯನ್ನು ಅವಳಿಗೆ ಇಚ್ಛೆ ಇಲ್ಲದಿದ್ದರೂ ಅಪಹರಿಸಿದನು.

ಏಷ ಮಾಯಾಪ್ರತಿಚ್ಛನ್ನಃ ಕರೂಶಾಧೀಶ ತಪಸ್ವಿನೀಮ್ ।
ಜಹಾರ ಭಾರ್ಯಾಂ ವೈಶಾಲೀಂ ಮಾತುಲಸ್ಯ ನೃಶಂಸಕೃತ್ ॥೧೮॥

ಕ್ರೂರ ಕರ್ಮಿಯಾದ ಇವನು ಮಾಯಾವೇಷವನ್ನು ಧರಿಸಿ ದಂತವಕ್ರನ ಸಲುವಾಗಿ ವಿಶಾಲರಾಜನ ಮಗಳಾದ ವೈಶಾಲಿಯನ್ನು ವಸುದೇವನಿಗೆ ಅಪಕಾರವನ್ನು ಮಾಡಿ ಅಪಹರಿಸಿದನು.

ವೃಷ್ಣಿದಾರಾನ್ ವಿಲುಪ್ಯೈಷ ಹತ್ವಾ ಚ ಕುಕುರಾಂಧಕಾನ್ ।
ಪಾಪಬುದ್ಧಿರುಪಾತಿಷ್ಠತ್ ಸ ಪ್ರವಿಶ್ಯ ಸಸಂಭ್ರಮಮ್ ॥೧೯॥

ಈ ಪಾಪಬುದ್ಧಿಯು ವೃಷ್ಣಿಗಳ ಭಾರ್ಯೆಯರನ್ನು ಚಲ್ಲಾಪಿಲ್ಲಿಗೊಳಿಸಿ ಕುಕುರಾಂಧಕರನ್ನು ಸಂಹರಿಸಿ ಸಂಭ್ರಮದಿಂದ ದ್ವಾರಕೆಗೆ ಪ್ರವೇಶಿಸಿ ಅಲ್ಲಿಯೇ ಇದ್ದನು.

ವಿಶಾಲರಾಜ್ಞೋ ದುಹಿತಾಂ ಮಮ ಪಿತ್ರಾ ವೃತಾಂ ಸತೀಮ್ ।
ಅನೇನ ಕೃತ್ವಾ ಸಂಧಾನಂ ಕರೂಶೇನ ಜಿಹೀರ್ಷಯಾ ॥೨೦॥

ವಿಶಾಲರಾಜನ ಮಗಳಾದ ವೈಶಾಲಿಯು ನನ್ನ ತಂದೆಗೆ ವಾಗ್‌ದತ್ತಳಾಗಿದ್ದಳು. ಈ ಶಿಶುಪಾಲನು ದಂತವಕ್ರನ ಸಲುವಾಗಿ ವಿಶಾಲರಾಜನ ಜೊತೆಯಲ್ಲಿ ಸಂಧಾನವನ್ನು ಮಾಡಿಕೊಂಡು ಅವಳನ್ನು ಅಪಹರಿಸಿದನು.

ಜರಾಸಂಧಂ ಸಮಾಶ್ರಿತ್ಯ ಕೃತವಾನ್ ವಿಪ್ರಿಯಾಣಿ ಮೇ ।
ತಾನಿ ಸರ್ವಾಣಿ ಸಂಖ್ಯಾತುಂ ನ ಶಕ್ನೋಮಿ ಧರಾಧಿಪಾಃ ॥೨೧॥

ಎಲ್ಲೆ ರಾಜರೇ! ಇವನು ಜರಾಸಂಧನನ್ನು ಆಶ್ರಯಿಸಿ ನನಗೆ ಅನೇಕ ವಿರೋಧಗಳನ್ನು ಮಾಡಿದನು. ಅವೆಲ್ಲವನ್ನೂ ನಾನು ಎಣಿಸಿ ಮುಗಿಸಲು ಸಾಧ್ಯವಿಲ್ಲ.

ಏವಮೇತದಪರ್ಯಂತಮೇಷ ವೃಷ್ಣಿಷು ಕಿಲ್ಬಿಷಮ್ ।
ಅಸ್ಮಾಕಮಯಮಾರಂಭಾಂಶ್ಚಕಾರ ಪರಮಾನೃಜುಃ ॥೨೨॥

ಹೀಗೆ ಇವನು ವೃಷ್ಣಿಗಳಿಗೆ ಕೊನೆಯೇ ಇಲ್ಲದಷ್ಟು ಕೇಡನ್ನು ಬಗೆದಿದ್ದಾನೆ. ಪರಮ ವಕ್ರನಾದ ಇವನು ನಮಗೆ ವಿರೋಧಮಾಡುವ ಸಲುವಾಗಿ ಅನೇಕ ಪ್ರಯತ್ನಗಳನ್ನು ಮಾಡಿದ್ದಾನೆ.

ಶತಂ ಕ್ಷಂತವ್ಯಮಸ್ಮಾಭಿರ್ವಧಾರ್ಹಾಣಾಂ ಕಿಲಾಗಸಾಮ್ ।
ಬದ್ಧೋಽಸ್ಮಿ ಸಮಯೈಸ್ತೈರ್ಮಾತುಲೇಯೋಽಸ್ಯ ಸಂಗರೇ ॥೨೩॥

ಇವನು ಮಾಡಿದ ವಧಾರ್ಹವಾದ ಅಪರಾಧಗಳಲ್ಲಿ ನೂರು ಅಪರಾಧಗಳನ್ನು ನಾನು ಕ್ಷಮಿಸಬೇಕಾಗಿದೆ. ಈ ಸಂಗ್ರಾಮದಲ್ಲಿ ಅವನ ಸೋದರಮಾವನಾದ ನಾನು ಅವನ ತಾಯಿಗೆ ಕೊಟ್ಟ ಘೋರವಾದ ವಾಗ್‌ದಾನಗಳಿಂದ ಬದ್ಧನಾಗಿದ್ದೇನೆ.

ತತ್ ತಥಾ ಶತಮಸ್ಮಾಕಂ ಕ್ಷಾಂತಂ ಕ್ಷಯಕರಂ ಮಯಾ ।
ದ್ವೌ ತು ಮೇ ವಧಕಾಲೇಽಸ್ಮಿನ್ ನ ಕ್ಷಂತವ್ಯೌ ಕಥಂಚನ ॥೨೪॥

ಹಾಗೆಯೇ ನಾನು ಇವನ ನೂರು ಅಪರಾಧಗಳನ್ನು ಕ್ಷಮಿಸಿದ್ದೇನೆ. ಆದರೆ ಅವನ ವಧಕಾಲವು ಸಂಪ್ರಾಪ್ತವಾಗಿರುವ ಈ ಕಾಲದಲ್ಲಿ ಅವನ ಎರಡು ಅಪರಾಧಗಳನ್ನು ಯಾವ ರೀತಿಯಲ್ಲಿಯೂ ಕ್ಷಮಿಸುವುದಿಲ್ಲ.

ಯಜ್ಞವಿಘ್ನಕರಂ ಹನ್ಯಾಂ ಪಾಂಡವಾನಾಂ ಚ ದುರ್ಹೃದಮ್ ।
ಇತಿ ಮೇ ವರ್ತತೇ ಭಾವಸ್ತಮತೀಯಾಂ ಕಥಂ ನ್ವಹಮ್ ॥೨೫॥

ಯಜ್ಞಕ್ಕೆ ವಿಘ್ನವನ್ನು ಮಾಡಿದವನನ್ನು ಕೊಲ್ಲುವೆನು. ಪಾಂಡವರಿಗೆ ವಿಪ್ರಿಯವನ್ನು ಬಯಸಿದವರನ್ನು ಕೊಲ್ಲುವೆನು. ಎಂದು ನನ್ನ ಎರಡು ಪ್ರತಿಜ್ಞೆಗಳಿವೆ. ನಾನು ಆ ಪ್ರತಿಜ್ಞೆಗಳನ್ನು ಹೇಗೆ ಮೀರಲಿ?

ಪಿತೃಷ್ವಸುಃ ಕೃತೇ ದುಃಖಂ ಸುಮಹನ್ಮರ್ಷಯಾಮ್ಯಹಮ್ ।
ದಿಷ್ಟ್ಯಾ ತ್ವಿದಂ ಸರ್ವರಾಜ್ಞಾಂ ಸನ್ನಿಧಾವದ್ಯ ವರ್ತತೇ ॥೨೬॥

ನನ್ನ ಸೋದರತ್ತೆಯ ಸಲುವಾಗಿ ನಾನು ಇವನಿಂದ ಉಂಟಾದ ಇಷ್ಟು ದೊಡ್ಡ ದುಃಖಗಳನ್ನು ಸಹಿಸಿದ್ದೇನೆ. ಅದೃಷ್ಟವಶದಿಂದ ಈ ದಿನ ನಡೆಯುತ್ತಿರುವ ಘಟನೆಯಲ್ಲವೂ ಎಲ್ಲಾ ರಾಜರ ಸನ್ನಿಧಿಯಲ್ಲೇ ನಡೆದಿದೆ.

ಪಶ್ಯಂತಿ ಹಿ ಭವಂತೋಸ್ಯ ಮಯ್ಯತೀವ ವ್ಯತಿಕ್ರಮಮ್ ।
ಕೃತಾನಿ ತು ಪರೋಕ್ಷಂ ಮೇ ಯಾನಿ ತಾನಿ ನಿಬೋಧತ ॥೨೭॥

ನೀವೆಲ್ಲರೂ ನನಗೆ ಇವನು ಹೇಗೆ ಅವಮಾನವನ್ನು ಮಾಡುತ್ತಿದ್ದಾನೆ ಎಂಬುದನ್ನು ಸ್ವತಃ ನೋಡುತ್ತಿದ್ದೀರಿ. ನನಗೆ ಪರೋಕ್ಷವಾಗಿ ಮಾಡಿದ ಅವಮಾನಗಳನ್ನು ತಿಳಿಯಿರಿ.

ಇಮಂ ತ್ವದ್ಯ ನ ಶಕ್ಷ್ಯಾಮಿ ಕ್ಷಂತುಮಸ್ಯ ವ್ಯತಿಕ್ರಮಮ್ ।
ಅವಲೇಪಾದ್ ವಧಾರ್ಹಸ್ಯ ಸಮಗ್ರೇ ರಾಜಮಂಡಲೇ ॥೨೮॥

ಈ ದಿನ ಮಾತ್ರ ನಾನು ಸಮಗ್ರವಾದ ರಾಜಮಂಡಲದಲ್ಲಿ ವಧಾರ್ಹನಾಗಿ ಗರ್ವಿಷ್ಠನಾದ ಇವನು ಮಾಡಿದ ಅಪಚಾರವನ್ನು ಕ್ಷಮಿಸಲು ಸಾಧ್ಯವಾಗುವುದಿಲ್ಲ.

ರುಗ್ಮಿಣ್ಯಾಮಸ್ಯ ಮೂಢಸ್ಯ ಪ್ರಾರ್ಥನಾSSಸೀನ್ಮುಮೂರ್ಷತಃ ।
ನ ಚೈನಾಂ ಪ್ರಾಪ್ತವಾನ್ ಮೂಢಃ ಶೂದ್ರೋ ವೇದಶ್ರುತಿಂ ಯಥಾ ॥೨೯॥

ಮರಣವನ್ನು ಬಯಸಿದ ಈ ಮೂಢನು ರುಗ್ಮಿಣಿಯನ್ನು ಆಶಿಸುತ್ತಿದ್ದನು. ಆದರೆ ಶೂದ್ರನು ವೇದ ಶ್ರುತಿಯನ್ನು ಹೊಂದದಿರುವಂತೆ ಇವನು ಅವಳನ್ನು ಹೊಂದಲಿಲ್ಲ.

ವೈಶಂಪಾಯನಃ

ಏವಮಾದಿ ತತಃ ಸರ್ವೇ ವಿಸ್ತರೇಣ ನರಾಧಿಪಾಃ ।
ಗರ್ಹಣಂ ಶಿಶುಪಾಲಸ್ಯ ವಾಸುದೇವೇನ ವಿಶ್ರುತಾಃ ।
ವಾಸುದೇವವಚಃ ಶ್ರುತ್ವಾ ಚೇದಿರಾಜಮಗರ್ಹಯನ್ ॥೩೧॥

ಆಗ ಎಲ್ಲಾ ನರಾಧಿಪರೂ ಕೃಷ್ಣನು ಎಲ್ಲಾ ರೀತಿಯಲ್ಲಿ ಮಾಡಿದ ಶಿಶುಪಾಲನ ದೋಷಾವಿಷ್ಕಾರವನ್ನು ಕೇಳಿ ಶಿಶುಪಾಲನನ್ನು ನಿಂದಿಸಿದರು.

ತಸ್ಯ ತದ್ವಚನಂ ಶ್ರುತ್ವಾ ಶಿಶುಪಾಲಃ ಪ್ರತಾಪವಾನ್ ।
ಜಹಾಸ ಸ್ವನವದ್ಧಾಸಂ ಸಂಪ್ರಹಸ್ಯೈನಮೂಚಿವಾನ್ ॥೩೨॥

ಕೃಷ್ಣನ ಆ ವಚನಗಳನ್ನು ಕೇಳಿ ಪ್ರತಾಪಶಾಲಿಯಾದ ಶಿಶುಪಾಲನು ಗಟ್ಟಿಯಾಗಿ ವಿಕಟಾಟ್ಟಹಾಸದಿಂದ ನಕ್ಕು ಅವನನ್ನು ಕುರಿತು ಹೇಳಿದನು.

ಮತ್ಪೂರ್ವಾಂ ರುಗ್ಮಿಣೀಂ ಕೃಷ್ಣ ಸಂಸತ್ಸು ಪರಿಕೀರ್ತಯನ್ ।
ವಿಶೇಷತಃ ಪಾರ್ಥಿವೇಷು ವ್ರೀಡಾಂ ನ ಕುರುಷೇ ಕಥಮ್ ॥೩೩॥

ಕೃಷ್ಣನೇ! ಸಭೆಯಲ್ಲಿ ಅದರಲ್ಲೂ ರಾಜರಿರುವ ಸಭೆಯಲ್ಲಿ ರುಗ್ಮಿಣಿಗೆ ನನ್ನ ಸಂಬಂಧವನ್ನು ಹೇಳುತ್ತಿರುವ ನಿನಗೆ ಏಕೆ ನಾಚಿಕೆಯಾಗುವುದಿಲ್ಲ?

ಇವನು ಮಾಡಿದ ವಧಾರ್ಹವಾದ ಅಪರಾಧಗಳಲ್ಲಿ ನೂರು ಅಪರಾಧಗಳನ್ನು ನಾನು ಕ್ಷಮಿಸಬೇಕಾಗಿದೆ. ಈ ಸಂಗ್ರಾಮದಲ್ಲಿ ಅವನ ಸೋದರಮಾವನಾದ ನಾನು ಅವನ ತಾಯಿಗೆ ಕೊಟ್ಟ ಘೋರವಾದ ವಾಗ್‌ದಾನಗಳಿಂದ ಬದ್ಧನಾಗಿದ್ದೇನೆ.

ತತ್ ತಥಾ ಶತಮಸ್ಮಾಕಂ ಕ್ಷಾಂತಂ ಕ್ಷಯಕರಂ ಮಯಾ ।
ದ್ವೌ ತು ಮೇ ವಧಕಾಲೇಽಸ್ಮಿನ್ ನ ಕ್ಷಂತವ್ಯೌ ಕಥಂಚನ ॥೨೪॥

ಹಾಗೆಯೇ ನಾನು ಇವನ ನೂರು ಅಪರಾಧಗಳನ್ನು ಕ್ಷಮಿಸಿದ್ದೇನೆ. ಆದರೆ ಅವನ ವಧಕಾಲವು ಸಂಪ್ರಾಪ್ತವಾಗಿರುವ ಈ ಕಾಲದಲ್ಲಿ ಅವನ ಎರಡು ಅಪರಾಧಗಳನ್ನು ಯಾವ ರೀತಿಯಲ್ಲಿಯೂ ಕ್ಷಮಿಸುವುದಿಲ್ಲ.

ಯಜ್ಞವಿಘ್ನಕರಂ ಹನ್ಯಾಂ ಪಾಂಡವಾನಾಂ ಚ ದುರ್ಹೃದಮ್ ।
ಇತಿ ಮೇ ವರ್ತತೇ ಭಾವಸ್ತಮತೀಯಾಂ ಕಥಂ ನ್ವಹಮ್ ॥೨೫॥

ಯಜ್ಞಕ್ಕೆ ವಿಘ್ನವನ್ನು ಮಾಡಿದವನನ್ನು ಕೊಲ್ಲುವೆನು. ಪಾಂಡವರಿಗೆ ವಿಪ್ರಿಯವನ್ನು ಬಯಸಿದವರನ್ನು ಕೊಲ್ಲುವೆನು. ಎಂದು ನನ್ನ ಎರಡು ಪ್ರತಿಜ್ಞೆಗಳಿವೆ. ನಾನು ಆ ಪ್ರತಿಜ್ಞೆಗಳನ್ನು ಹೇಗೆ ಮೀರಲಿ?

ಪಿತೃಷ್ವಸುಃ ಕೃತೇ ದುಃಖಂ ಸುಮಹನ್ಮರ್ಷಯಾಮ್ಯಹಮ್ ।
ದಿಷ್ಟ್ಯಾ ತ್ವಿದಂ ಸರ್ವರಾಜ್ಞಾಂ ಸನ್ನಿಧಾವದ್ಯ ವರ್ತತೇ ॥೨೬॥

ನನ್ನ ಸೋದರತ್ತೆಯ ಸಲುವಾಗಿ ನಾನು ಇವನಿಂದ ಉಂಟಾದ ಇಷ್ಟು ದೊಡ್ಡ ದುಃಖಗಳನ್ನು ಸಹಿಸಿದ್ದೇನೆ. ಅದೃಷ್ಟವಶದಿಂದ ಈ ದಿನ ನಡೆಯುತ್ತಿರುವ ಘಟನೆಯಲ್ಲವೂ ಎಲ್ಲಾ ರಾಜರ ಸನ್ನಿಧಿಯಲ್ಲೇ ನಡೆದಿದೆ.

ಪಶ್ಯಂತಿ ಹಿ ಭವಂತೋಸ್ಯ ಮಯ್ಯತೀವ ವ್ಯತಿಕ್ರಮಮ್ ।
ಕೃತಾನಿ ತು ಪರೋಕ್ಷಂ ಮೇ ಯಾನಿ ತಾನಿ ನಿಬೋಧತ ॥೨೭॥

ನೀವೆಲ್ಲರೂ ನನಗೆ ಇವನು ಹೇಗೆ ಅವಮಾನವನ್ನು ಮಾಡುತ್ತಿದ್ದಾನೆ ಎಂಬುದನ್ನು ಸ್ವತಃ ನೋಡುತ್ತಿದ್ದೀರಿ. ನನಗೆ ಪರೋಕ್ಷವಾಗಿ ಮಾಡಿದ ಅವಮಾನಗಳನ್ನು ತಿಳಿಯಿರಿ.

ಇಮಂ ತ್ವದ್ಯ ನ ಶಕ್ಷ್ಯಾಮಿ ಕ್ಷಂತುಮಸ್ಯ ವ್ಯತಿಕ್ರಮಮ್ ।
ಅವಲೇಪಾದ್ ವಧಾರ್ಹಸ್ಯ ಸಮಗ್ರೇ ರಾಜಮಂಡಲೇ ॥೨೮॥

ಈ ದಿನ ಮಾತ್ರ ನಾನು ಸಮಗ್ರವಾದ ರಾಜಮಂಡಲದಲ್ಲಿ ವಧಾರ್ಹನಾಗಿ ಗರ್ವಿಷ್ಠನಾದ ಇವನು ಮಾಡಿದ ಅಪಚಾರವನ್ನು ಕ್ಷಮಿಸಲು ಸಾಧ್ಯವಾಗುವುದಿಲ್ಲ.

ರುಗ್ಮಿಣ್ಯಾಮಸ್ಯ ಮೂಢಸ್ಯ ಪ್ರಾರ್ಥನಾऽऽಸೀನ್ಮಮೂರ್ಷತಃ ।
ನ ಚೈನಾಂ ಪ್ರಾಪ್ತವಾನ್ ಮೂಢಃ ಶೂದ್ರೋ ವೇದಶ್ರುತಿಂ ಯಥಾ ॥೨೯॥

ಮರಣವನ್ನು ಬಯಸಿದ ಈ ಮೂಢನು ರುಗ್ಮಿಣಿಯನ್ನು ಆಶಿಸುತ್ತಿದ್ದನು. ಆದರೆ ಶೂದ್ರನು ವೇದ ಶ್ರುತಿಯನ್ನು ಹೊಂದದಿರುವಂತೆ ಇವನು ಅವಳನ್ನು ಹೊಂದಲಿಲ್ಲ.

ವೈಶಂಪಾಯನಃ

ಏವಮಾದಿ ತತಃ ಸರ್ವೇ ವಿಸ್ತರೇಣ ನರಾಧಿಪಾಃ ।
ಗರ್ಹಣಂ ಶಿಶುಪಾಲಸ್ಯ ವಾಸುದೇವೇನ ವಿಶ್ರುತಾಃ ।
ವಾಸುದೇವವಚಃ ಶ್ರುತ್ವಾ ಚೇದಿರಾಜಮಗರ್ಹಯನ್ ॥೩೧॥

ಆಗ ಎಲ್ಲಾ ನರಾಧಿಪರೂ ಕೃಷ್ಣನು ಎಲ್ಲಾ ರೀತಿಯಲ್ಲಿ ಮಾಡಿದ ಶಿಶುಪಾಲನ ದೋಷಾವಿಷ್ಕಾರವನ್ನು ಕೇಳಿ ಶಿಶುಪಾಲನನ್ನು ನಿಂದಿಸಿದರು.

ತಸ್ಯ ತದ್ವಚನಂ ಶ್ರುತ್ವಾ ಶಿಶುಪಾಲಃ ಪ್ರತಾಪವಾನ್ ।
ಜಹಾಸ ಸ್ವನವದ್ಧಾಸಂ ಸಂಪ್ರಹಸ್ಯೈನಮೂಚಿವಾನ್ ॥೩೨॥

ಕೃಷ್ಣನ ಆ ವಚನಗಳನ್ನು ಕೇಳಿ ಪ್ರತಾಪಶಾಲಿಯಾದ ಶಿಶುಪಾಲನು ಗಟ್ಟಿಯಾಗಿ ವಿಕಟಾಟ್ಟಹಾಸದಿಂದ ನಕ್ಕು ಅವನನ್ನು ಕುರಿತು ಹೇಳಿದನು.

ಮತ್ಪೂರ್ವಾಂ ರುಗ್ಮಿಣೀಂ ಕೃಷ್ಣ ಸಂಸತ್ಸು ಪರಿಕೀರ್ತಯನ್ ।
ವಿಶೇಷತಃ ಪಾರ್ಥಿವೇಷು ವ್ರೀಡಾಂ ನ ಕುರುಷೇ ಕಥಮ್ ॥೩೩॥

ಕೃಷ್ಣನೇ! ಸಭೆಯಲ್ಲಿ ಅದರಲ್ಲೂ ರಾಜರಿರುವ ಸಭೆಯಲ್ಲಿ ರುಗ್ಮಿಣಿಗೆ ನನ್ನ ಸಂಬಂಧವನ್ನು ಹೇಳುತ್ತಿರುವ ನಿನಗೆ ಏಕೆ ನಾಚಿಕೆಯಾಗುವುದಿಲ್ಲ?

ಮನ್ಯಮಾನೋ ಹಿ ಕಃ ಸತ್ಸು ಪುರುಷಃ ಪರಿಕೀರ್ತಯೇತ್ ।
ಅನ್ಯಪೂರ್ವಾಂ ಸ್ತ್ರಿಯಂ ಜಾತು ತ್ವದನ್ಯೋ ಮಧುಸೂದನ ॥೩೪॥

ಮಧುಸೂದನನೇ! ತನ್ನನ್ನು ಆತ್ಮಾಭಿಮಾನಿ ಎಂದು ತಿಳಿದ ಯಾವ ಸತ್‌ಪುರುಷನು ಸಭೆಯಲ್ಲಿ ತನ್ನ ಭಾರ್ಯೆಗೆ ಇನ್ನೊಬ್ಬನ ಸಂಬಂಧವನ್ನು ಉಲ್ಲೇಖಿಸುತ್ತಾನೆ?

ಕ್ಷಮ ವಾ ಯದಿ ತೇ ಶ್ರದ್ಧಾ ಮಾ ವಾ ಕೃಷ್ಣ ಮಮ ಕ್ಷಮ ।
ಕ್ರುದ್ಧಾದ್ ವಾऽಪಿ ಪ್ರಮತ್ತಾದ್ ವಾ ಕಿಂ ಮೇ ತ್ವತ್ತೋ ಭವಿಷ್ಯತಿ॥೩೫॥

ಕೃಷ್ಣನೇ! ನೀನು ಬೇಕಾದರೆ ನನ್ನನ್ನು ಕ್ಷಮಿಸು ಇಲ್ಲದಿದ್ದರೆ ಬಿಡು. ನಿನ್ನ ಕೋಪದಿಂದಲಾಗಲೀ ಅಥವಾ ನಿನ್ನ ಪ್ರಸನ್ನತೆಯಿಂದಲಾಗಲೀ ನನಗೆ ಏನೂ ಆಗುವುದಿಲ್ಲ.

ತಥಾ ಬ್ರುವತ ಏವಾಸ್ಯ ಭಗವಾನ್ ಮಧುಸೂದನಃ ।
ಮನಸಾऽಚಿಂತಯಚ್ಚಕ್ರಂ ದೈತ್ಯಸೈನ್ಯನಿಷೂದನಮ್ ॥೩೬॥

ಶಿಶುಪಾಲನು ಹಾಗೆ ಹೇಳುತ್ತಿರುವಂತೆಯೇ ಭಗವಂತನಾದ ಮಧುಸೂದನನು ದೈತ್ಯ ಸೈನ್ಯಸಂಹಾರಕನಾದ ತನ್ನ ಚಕ್ರವನ್ನು ಮನಸ್ಸಿನಲ್ಲಿ ಸ್ಮರಿಸಿದನು.

ಏತಸ್ಮಿನ್ನೇವ ಕಾಲೇ ತು ಚಕ್ರೇ ಹಸ್ತಗತೇ ಸತಿ ।
ಉವಾಚ ಭಗವಾನುಚ್ಚೈರ್ವಾಕ್ಯಂ ವಾಕ್ಯವಿಶಾರದಃ ॥೩೭॥

ಆ ಕಾಲದಲ್ಲಿ ಚಕ್ರವು ತನ್ನ ಹಸ್ತಗತವಾಗುತ್ತಿರಲು ವಾಕ್ಯವಿಶಾರದನಾದ ಕೃಷ್ಣನು ಸಭೆಯಲ್ಲಿ ಗಟ್ಟಿಯಾಗಿ ಮಾತನಾಡಿದನು.

ಶೃಣ್ವಂತು ಮೇ ಮಹೀಪಾಲಾ ಯೇನೈತನ್ನಿಂದಿತಂ ಮಯಾ ।
ಅಪರಾಧಶತಂ ಕ್ಷಮ್ಯಂ ಮಾತುಲಸ್ಯೈವ ಯಾಚತೇ ॥೩೮॥

ಎಲ್ಲಾ ಮಹಿಪಾಲರೂ ನನ್ನ ಮಾತನ್ನು ಕೇಳಿ. ನಾನು ಯಾಚಿಸುವ ನನ್ನ ಸೋದರಮಾವನ ಸಲುವಾಗಿ ಇವನು ಮಾಡಿದ ನೂರು ಅಪರಾಧಗಳನ್ನು ಮತ್ತು ನಿಂದನೆಗಳನ್ನು ಕ್ಷಮಿಸಿದ್ದೇನೆ.

ದತ್ತಂ ಮಯಾ ಯಾಚಿತಾನಿ ತಾನಿ ಪೂರ್ಣಾನಿ ಪಾರ್ಥಿವಾಃ ।
ಅಧುನಾ ತಂ ವಧಿಷ್ಯಾಮಿ ಪಶ್ಯತಾಂ ವೋ ಮಹೀಕ್ಷಿತಾಮ್ ॥೩೯॥

ಎಲೈ ರಾಜರೇ! ಅವನು ಕೇಳಿದ ನೂರು ವರಗಳು ಇಂದಿಗೆ ಪೂರ್ಣವಾದವು. ಈ ದಿನ ರಾಜರಾದ ನೀವೆಲ್ಲರೂ ನೋಡುತ್ತಿರುವಂತೆಯೇ ಅವನನ್ನು ಸಂಹರಿಸುವೆನು.

ವಾಸುದೇವವಚಃ ಶ್ರುತ್ವಾ ಪ್ರಾದ್ರವನ್ ಸರ್ವಪಾರ್ಥಿವಾಃ ।
ವಿಹಾಯ ಪರಮಕ್ರುದ್ಧಂ ಚೇದಿರಾಜಂ ಚಮೂಮುಖೇ ॥೪೦॥

ಕೃಷ್ಣನ ಮಾತುಗಳನ್ನು ಕೇಳಿ ಎಲ್ಲಾ ರಾಜರೂ ಪರಮಕ್ರುದ್ಧನಾದ ಶಿಶುಪಾಲನೋಬ್ಬನನ್ನೇ ಸೈನ್ಯ ಮುಖದಲ್ಲಿ ಬಿಟ್ಟು ಓಡಿ ಹೋದರು.

ಸ ತಾಂಸ್ತು ಪ್ರದ್ರುತಾನ್ ಸರ್ವಾನ್ ಸಂವೀಕ್ಷ್ಯ ವಸುಧಾಧಿಪಾನ್ ।
ತದಾ ತದ್ವೃಷ್ಣಿವೀರೇಣ ತ್ರಾಸಿತಾನುರುವಿಕ್ರಮಾನ್ ॥೪೧॥

ಕೃಷ್ಣತೇಜೋಹತಾನ್ ಸರ್ವಾನ್ ಸಮೀಕ್ಷ್ಯ ವಸುಧಾಧಿಪಾನ್ ।
ಶಿಶುಪಾಲೋ ರಥೇನೈಕಃ ಪ್ರತ್ಯುಪಾಯಾತ್ ಸ ಕೇಶವಮ್ ॥೪೨॥

ಶಿಶುಪಾಲನು ಪರಾಕ್ರಮಶಾಲಿಗಳಾದ ಎಲ್ಲಾ ರಾಜರುಗಳು ಈ ವೀರನಾದ ಕೃಷ್ಣನಿಗೆ ಹೆದರಿ ಓಡಿಹೋಗುವುದನ್ನು ನೋಡಿ ಆ ಎಲ್ಲಾ ರಾಜರೂ ಕೃಷ್ಣನ ಪರಾಕ್ರಮದಿಂದ ನಷ್ಟರಾಗಿದ್ದಾರೆ ಎಂದು ಗಮನಿಸಿ, ತಾನೇ ಒಂದು ರಥವನ್ನು ಏರಿ ಯುದ್ಧವನ್ನು ಮಾಡಲು ಕೃಷ್ಣನನ್ನು ಸಮೀಪಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ತ್ರಿಷಷ್ಟಿತಮೋಧ್ಯಾಯಃ ॥
॥ ಶಿಶುಪಾಲವಧಪರ್ವಣಿ ಪಂಚಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ
ಅರವತ್ಮೂರನೆಯ ಅಧ್ಯಾಯವು ಮುಗಿಯಿತು.

★★★★★

ಅರವತ್ತಾ ಲ್ಕನೆಯ ಅಧ್ಯಾಯ

(ಶಿಶುಪಾಲನಿಗೆ ಉಂಟಾದ ಅಪಶಕುನಗಳು ಮತ್ತು ನಾರದರಿಂದ ವಿಸ್ತಾರವಾದ ಅಪಶಕುನಗಳ ಕಥನ)

ವೈಶಂಪಾಯನಃ

ತತೋ ಯುದ್ಧಾಯ ಸನ್ನದ್ಧಂ ಚೇದಿರಾಜಂ ಯುಧಿಷ್ಠಿರಃ ।
ದೃಷ್ಟ್ವಾ ಮತಿಮತಾಂ ಶ್ರೇಷ್ಠ ನಾರದಂ ಸಮುವಾಚ ಹ ॥೧॥

ಎಲೈ ಮೇಧಾವಿಗಳಲ್ಲಿ ಶ್ರೇಷ್ಠನಾದವನೇ! ಯುಧಿಷ್ಠಿರನು ಯುದ್ಧಕ್ಕೆ ಸಿದ್ಧನಾದ ಶಿಶುಪಾಲನನ್ನು ನೋಡಿ ನಾರದರನ್ನು ಕುರಿತು ಮಾತನಾಡಿದನು.

ಅಂತರಿಕ್ಷೇ ಚ ಭೂಮೌ ಚ ನ ತೇಸ್ತ್ಯವಿದಿತಂ ಕ್ವಚಿತ್ ।
ಯಾನಿ ರಾಜವಿನಾಶಾಯ ಭೌಮಾನಿ ಚ ಖಗಾನಿ ಚ ॥೨॥

ನಿಮಿತ್ತಾನೀಹ ಜಾಯಂತೇ ಉತ್ಪಾತಾಶ್ಚ ಪೃಥಗ್ವಿಧಾಃ ।
ಏತದಿಚ್ಛಾಮಿ ಕಾರ್ತ್ಸ್ನ್ಯೇನ ಶ್ರೋತುಂ ತತ್ತ್ವತೋ ಮಹಾಮುನೇ ॥೩॥

ಎಲೈ ಮಹರ್ಷಿಯೇ! ಅಂತರಿಕ್ಷದಲ್ಲೇ ಆಗಲಿ ಭೂಮಿಯಲ್ಲೇ ಆಗಲಿ ನಿಮಗೆ ತಿಳಿಯದುದು ಯಾವುದೂ ಇಲ್ಲ. ರಾಜನ ವಿನಾಶವನ್ನು ಸೂಚಿಸುವ ಅನೇಕ ವಿಧವಾದ ಯಾವ ಯಾವ ಉತ್ಪಾತಗಳು ಭೂಮಿಯಲ್ಲಿಯೂ ಮತ್ತು ಅಂತರಿಕ್ಷದಲ್ಲೂ ಉಂಟಾಗುತ್ತವೆಯೋ ಅವುಗಳ ವಿಸ್ತಾರವನ್ನು ನಾನು ಕೇಳಲು ಬಯಸುತ್ತೇನೆ.

ಇತ್ಯೇವಂ ಮತಿಮಾನ್ ವಿಪ್ರಃ ಕುರುರಾಜಸ್ಯ ಧೀಮತಃ ।
ಪೃಚ್ಛತಃ ಸರ್ವಮವ್ಯಗ್ರಮಾಚಚಕ್ಷೇ ಮಹಾಯಶಾಃ ॥೪॥

ಹೀಗೆ ಮೇಧಾವಿಯಾದ ಮಹಾಕೀರ್ತಿಶಾಲಿಯಾದ ಕುರುರಾಜನೂ ಆದ ಯುಧಿಷ್ಠಿರನು ಪ್ರಶ್ನೆಯನ್ನು ಮಾಡಿದಾಗ ಮೇಧಾವಿಗಳಾದ ಮಹಕೀರ್ತಿಶಾಲಿಗಳಾದ ನಾರದರು ಎಲ್ಲವನ್ನೂ ಸಾವಧಾನವಾಗಿ ಹೇಳಿದರು.

ಪರಾಕ್ರಮಂ ಚ ಮಾರ್ಗಂ ಚ ಸನ್ನಿಪಾತಂ ಸಮುಚ್ಚ್ರಯಮ್ ।
ಆರೋಹಣಂ ಕುರುಶ್ರೇಷ್ಠ ಅನ್ಯೋನ್ಯಪ್ರತಿಸರ್ಪಣಮ್ ॥೫॥

ರಶ್ಮೀನಾಂ ವ್ಯತಿಸಂಸರ್ಗಂ ವ್ಯಾಯಾಮಂ ಚೈವ ಪೀಡನಮ್ ।
ದರ್ಶನಾದರ್ಶನಾನಾಂ ಚೈವಾದರ್ಶನಂ ದರ್ಶನಂ ತಥಾ ॥೬॥

ಹಾನಿಂ ವೃದ್ಧಿಂ ಚ ಹ್ರಾಸಂ ಚ ವರ್ಣಸ್ಥಾನಂ ಬಲಾಬಲಮ್ ।
ಸರ್ವಮೇತತ್ ಪರೀಕ್ಷೇತ ಗ್ರಹಾಣಾಂ ಗ್ರಹಕೋವಿದಃ ॥೭॥

ಭೌಮಾಃ ಪೂರ್ವಂ ಪ್ರವರ್ತಂತೇ ಖೇಚರಾಶ್ಚ ತತಃ ಪರಮ್ ।
ಉತ್ಪಾದ್ಯಂತೇ ಚ ಲೋಕೇಸ್ಮಿನ್ನುತ್ಪಾತಾ ದೇವನಿರ್ಮಿತಾಃ ॥೮॥

ಎಲೈ ಕುರುಶ್ರೇಷ್ಠನೇ! ಗ್ರಹಕೋವಿದನಾದವನು ಇವುಗಳನ್ನೆಲ್ಲಾ ಗಮನಿಸಬೇಕು. ಒಂದು ಗ್ರಹದ ದೆಸೆಯು ಮುಗಿಯದಿರುವಾಗಲೇ ಇನ್ನೊಂದು ಗ್ರಹದದೆಸೆಯ ಆರಂಭ, ಋಜುಗತಿ ಮತ್ತು ವಕ್ರಗತಿಗಳು, ಒಂದೇ ರಾಶಿಯಲ್ಲಿ ಐದಾರು ಗ್ರಹಗಳು ಸೇರುವುದು, ಕೇಂದ್ರ ತ್ರಿಕೋಣಸ್ಥಾನಗಳು, ನೀಚಸ್ಥಾನದಿಂದ ಉಚ್ಚಸ್ಥಾನಕ್ಕೆ ಏರುವುದು, ಗ್ರಹಯುದ್ಧ, ಒಂದೇ ರಾಶಿಯಲ್ಲಿ ನೀಚೋಚ್ಚಗ್ರಹಗಳ ಮೇಳನ, ವಿಲಂಬದಿಂದ ಫಲವನ್ನು ಕೊಡುವುದು, ತಕ್ಷಣದಲ್ಲೇ ದುಷ್ಫಲವನ್ನು ಕೊಡುವುದು, ಕಣ್ಣಿಗೆ ಕಾಣಬೇಕಾದ ಬೃಹಸ್ಪತ್ಯಾದಿಗಳ ಮೌಢ್ಯ, ಕಣ್ಣಿಗೆ ಕಾಣದಿರುವ ರಾಹು ಮೊದಲಾದ ಗ್ರಹಗಳ ದರ್ಶನ, (ಗ್ರಹಣ ಸಮಯದಲ್ಲಿ ಹಾನಿರೂಪವಾದ ಫಲವನ್ನು ಕೊಡುವುದು.) ವೃದ್ಧಿರೂಪವಾದ ಫಲವನ್ನು ಕೊಡುವುದು, ಅಲ್ಪ ಫಲವನ್ನು ಕೊಡುವುದು, ಬೃಹಸ್ಪತಿಯ ಉನ್ನತಿಯಿಂದ ಬ್ರಾಹ್ಮಣರ ಉನ್ನತಿ, ಅಂಗಾರಕನ ಸುಸ್ಥಿತಿಯಿಂದ ಕ್ಷತ್ರಿಯರ ಸುಸ್ಥಿತಿ, ಶನ್ಯಾದಿ ಗ್ರಹಗಳ ಒಳ್ಳೆಯ ಸ್ಥಿತಿಯಿಂದ ವೈಶ್ಯ ಶೂದ್ರರಿಗೆ ಒಳ್ಳೆಯ ಫಲ, ಉಪರಾಗಗಳು ಶ್ವೇತವರ್ಣದಿಂದ ಕೂಡಿದ್ದರೆ ಬ್ರಾಹ್ಮಣರಿಗೆ ಫಲ, ರಕ್ತವರ್ಣದಿಂದ ಕೂಡಿದ್ದರೆ ಕ್ಷತ್ರಿಯರಿಗೆ ಫಲ, ಹಳದಿಯ ಬಣ್ಣದಿಂದ ಕೂಡಿದ್ದರೆ ವೈಶ್ಯರಿಗೆ ಫಲ, ಕೆಂಪು ಬಣ್ಣದಿಂದ ಕೂಡಿದ್ದರೆ ಶೂದ್ರಾದಿಗಳಿಗೆ ಫಲ, ಕೆಲವು ಗ್ರಹಗಳಿಗೆ ಶ್ವೇತವರ್ಣದ ಪುಷ್ಪ ವಸ್ತ್ರಗಳು, ಕೆಲವು ಗ್ರಹಗಳಿಗೆ ರಕ್ತವರ್ಣದ ವಸ್ತು ಪುಷ್ಪಾದಿಗಳು, ಕೆಲವು ಗ್ರಹಗಳಿಗೆ ಪೀತವರ್ಣದ ವಸ್ತು ಪುಷ್ಪಗಳು, ಕೆಲವು ಗ್ರಹಗಳಿಗೆ ಕಪ್ಪುಬಣ್ಣ ಪುಷ್ಪಾದಿಗಳು, (ಇವೆಲ್ಲವೂ ವರ್ಣಸ್ಥಾನಗಳೆಂದು ಕರೆಯಲ್ಪಡುತ್ತವೆ.) ಗ್ರಹಗಳ ಪ್ರಾಬಲ್ಯ ಮತ್ತು ದೌರ್ಬಲ್ಯ (ಇವುಗಳೆಲ್ಲವನ್ನೂ ಗ್ರಹಕೋವಿದನು ವಿಚಾರ ಮಾಡಬೇಕು.) ಭೂಮಿಯಲ್ಲಿನ ಅಪಶಕುನಗಳು ಮೊದಲು ಉಂಟಾಗುತ್ತವೆ. ಅನಂತರ

ಅಂತರಿಕ್ಷದಲ್ಲಿ ಅಪಶಕುನಗಳು ಉಂಟಾಗುತ್ತವೆ. ದೇವನಿರ್ಮಿತವಾದ ಈ ಅಪಶಕುನಗಳು ಲೋಕದಲ್ಲಿ ಇದ್ದಕ್ಕಿದ್ದಂತೆ ಉಂಟಾಗುವುದರಿಂದ ಅವುಗಳಿಗೆಲ್ಲಾ ಉತ್ಪಾತಗಳು ಎಂದು ಹೆಸರು.

ಯದಾ ತು ಸರ್ವಭೂತಾನಾಂ ಛಾಯಾ ನ ಪರಿವರ್ತತೇ ।
ಅಪರಾಹ್ಣ ಗತೇ ಸೂರ್ಯೇ ತತ್ ಪರಾಭವಲಕ್ಷಣಮ್ ॥೯॥

ಸೂರ್ಯನು ಅಪರಾಹ್ನದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ತಿರುಗಿದಾಗ ಎಲ್ಲಾ ಪ್ರಾಣಿಗಳ ಛಾಯೆಯೂ ತಿರುಗದಿದ್ದರೆ ಅದನ್ನು ಪರಾಭವದ ಸೂಚನೆಯೆಂದು ತಿಳಿಯಬೇಕು.

ಅಚ್ಛಾಯೇ ವಿಮಲಚ್ಛಾಯಾ ಪ್ರತಿಚ್ಛಾಯಾ ಚ ದೃಶ್ಯತೇ ।
ಯತ್ರ ಚೈತ್ಯಕವೃಕ್ಷಾಣಾಂ ತತ್ರ ವಿದ್ಯಾನ್ಮಹದ್‌ಭಯಮ್ ॥೧೦॥

ದೇವಾಲಯದ ವೃಕ್ಷಗಳಲ್ಲಿ ಅಯೋಗ್ಯ ಸ್ಥಳದಲ್ಲಿ ಸ್ವಚ್ಛ ಛಾಯೆಯು ಅಥವಾ ವೃಕ್ಷದ ಛಾಯೆಯನ್ನು ಬಿಟ್ಟು ಸೂರ್ಯಾದಿಗಳ ಛಾಯೆಯು ಎಲ್ಲಿ ಕಾಣುತ್ತದೆಯೋ ಅಲ್ಲಿ ಮಹಾ ಭಯವು ಉಂಟಾಗುವುದು.

ಶೀರ್ಣಪರ್ಣಪ್ರವಾಳಾಶ್ಚ ಶುಷ್ಕಪರ್ಣಾಶ್ಚ ಚೈತ್ಯಗಾಃ ।
ಅಪಭ್ರಷ್ಟಪ್ರವಾಳಾಶ್ಚ ತತ್ರ ಭಾವಂ ವಿನಿರ್ದಿಶೇತ್ ॥೧೧॥

ಸ್ನಿಗ್ಧಪತ್ರಪ್ರವಾಳಾಶ್ಚ ದೃಶ್ಯಂತೇ ಯತ್ರ ಚೈತ್ಯಗಾಃ ।
ಹ್ರೀಯಮಾಣಾಶ್ಚ ವೃಕ್ಷಾಶ್ಚ ಭಾವಸ್ತತ್ರ ನ ಸಂಶಯಃ ॥೧೨॥

ಎಲ್ಲಿ ದೇವಾಲಯದ ವೃಕ್ಷದಲ್ಲಿ ಉದುರಿದ ಎಲೆಗಳು ಚಿಗುರುಗಳಂತೆ ಇರುತ್ತವೆಯೋ, ಮರದಲ್ಲಿ ಇರುವ ಎಲೆಗಳು ಚಿಗುರಿನ ಲಕ್ಷಣವನ್ನು ಕಳೆದುಕೊಂಡು ಒಣಗಿದ ಎಲೆಗಳಂತೆ ಕಾಣುತ್ತವೆಯೋ, ಅದನ್ನು ಉತ್ಪಾತವೆಂದು ತಿಳಿಯಬೇಕು. ಎಲ್ಲಿ ಒಣಗುತ್ತಿರುವ ದೇವಾಲಯದ ವೃಕ್ಷಗಳಲ್ಲಿ ಇದ್ದಕ್ಕಿದ್ದಂತೆಯೇ ಚಿಗುರು ಮತ್ತು ಎಲೆಗಳು ಕಂಡು ಬರುತ್ತವೆಯೋ, ಕ್ಷಯವನ್ನು ಹೊಂದುತ್ತಿರುವ ಅಂತಹ ವೃಕ್ಷಗಳಲ್ಲಿಯೂ ಎಲ್ಲಿ ಚಿಗುರು ಮತ್ತು ಎಲೆಗಳು ಬರುತ್ತವೆಯೋ ಅಲ್ಲಿಯೂ ಸಹ ಅಪಶಕುನ ಎಂದು ನಿಸ್ಸಂಶಯವಾಗಿ ತಿಳಿಯ ಬೇಕು.

ಪುಷ್ಪೇ ಪುಷ್ಪಂ ಪ್ರಜಾಯೇತ ಫಲೇ ವಾ ಫಲಮಾಶ್ರಿತಮ್ ।
ರಾಜಾ ವಾ ರಾಜಪುತ್ರೋ ವಾ ಮರಣಾಯೋಪಪದ್ಯತೇ ॥೧೩॥

ಪುಷ್ಪದಲ್ಲಿ ಇನ್ನೊಂದು ಪುಷ್ಪವು ಉಂಟಾದರೆ ಅಥವಾ ಫಲದಲ್ಲಿ ಇನ್ನೊಂದು ಫಲವು ಆಶ್ರಿತವಾಗಿದ್ದರೆ, ರಾಜನಾಗಲೀ ಅಥವಾ ಪುತ್ರನಾಗಲೀ ಮರಣವನ್ನು ಹೊಂದುವನು.

ಪ್ರಾವೃಟ್‌ಶರದಿ ಹೇಮಂತೇ ವಸಂತೇ ವಾಪಿ ಸರ್ವಶಃ ।
ಅಕಾಲಜಂ ಪುಷ್ಪಫಲಂ ರಾಷ್ಟ್ರಕ್ಷೋಭಂ ವಿನಿರ್ದಿಶೇತ್ ॥೧೪॥

ಮಳೆಗಾಲದಲ್ಲಿಯಾಗಲೀ ಶರತ್‌ಕಾಲದಲ್ಲಿಯಾಗಲೀ ಹೇಮಂತ ಅಥವಾ ವಸಂತಕಾಲದಲ್ಲಿಯಾಗಲೀ ಎಲ್ಲಾ ವೃಕ್ಷಗಳಲ್ಲಿಯೂ ಅಕಾಲಿಕ ಪುಷ್ಪಗಳು ತೋರಿ ಬಂದರೆ ಆಗ ರಾಷ್ಟ್ರಕ್ಷೋಭೆಯನ್ನು ಹೇಳಬೇಕು.

ವನಸ್ಪತಿಃ ಪೂಜ್ಯಮಾನಃ ಪೂಜಿತೋಽಪೂಜಿತೋಪಿ ವಾ ।
ಯದಾ ಭಜ್ಯೇತ ವಾತೇನ ಭಿದ್ಯತೇಽಶನಿತೋಪಿ ವಾ ॥೧೫॥

ಅಗ್ನಿವಾಯುಭಯಂ ವಿದ್ಯಾತ್ ಶ್ರೇಷ್ಠೋ ವಾತ್ರ ವಿನಶ್ಯತಿ ।
ದಿಶಃ ಸರ್ವಾಶ್ಚ ದೀಪ್ಯಂತೇ ಜಾಯಂತೇ ರಾಜವಿಭ್ರಮಾಃ ॥೧೬॥

ಪೂಜಿಸಲ್ಪಡುವ ಅಥವಾ ಪೂಜಿಸಬೇಕೆಂದು ಸಂಕಲ್ಪಿಸಲ್ಪಟ್ಟ ದೇವಾಲಯದ ವೃಕ್ಷವು ಬಿರುಗಾಳಿಯಿಂದಾಗಲೀ ಅಥವಾ ಸಿಡಿಲಿನಿಂದಲಾಗಲೀ ಬಿದ್ದರೆ ಅಥವಾ ಮುರಿದರೆ ಆಗ ಅಗ್ನಿ ಅಥವಾ ವಾಯುವಿನ ಭಯವು ಉಂಟಾಗುತ್ತದೆ ಎಂದು ತಿಳಿಯಬೇಕು. ಅಥವಾ ಅಲ್ಲಿ ಶ್ರೇಷ್ಠನಾದವನು ಒಬ್ಬನು ಮರಣವನ್ನು ಹೊಂದುವನು ಎಲ್ಲಾ ದಿಕ್ಕುಗಳು ಉರಿಯುವಂತೆ ತೋರಿದರೆ ಅಲ್ಲಿ ರಾಜವಿಭ್ರಮವು ಉಂಟಾಗುತ್ತದೆ.

ಛಿದ್ಯಮಾನೋ ಯದಾ ವೃಕ್ಷೋ ವಿನದೇಚ್ಚಾಪಿ ಪಾತಿತಃ ।
ಸಹ ರಾಷ್ಟ್ರಂ ಚ ಪತಿತಂ ನ ತಂ ವೃಕ್ಷಂ ನಿಪಾತಯೇತ್ ॥೧೭॥

ಅಥೈನಂ ಛೇದಯೇತ್ ಕಶ್ಚಿತ್ ಪ್ರತಿರುದ್ಧಂ ವನಸ್ಪತಿಮ್ ।
ಛೇತ್ತಾ ಛೇತ್ತಾ ಪತಿಶ್ಚೈವ ಕ್ಷಿಪ್ರಮೇವ ವಿನಶ್ಯತಿ ॥೧೮॥

ಕಡಿಯಲ್ಪಡುತ್ತಿರುವ ವೃಕ್ಷವು ದೊಡ್ಡ ಶಬ್ದವನ್ನು ಮಾಡುತ್ತಿದ್ದರೆ ಅಥವಾ ಕಡಿದ ಮೇಲೆ ವೃಕ್ಷವು ಶಬ್ದವನ್ನು ಮಾಡುವುದಿದ್ದರೆ ಅಲ್ಲಿ ರಾಷ್ಟ್ರವೇ ಪತನವನ್ನು ಹೊಂದುತ್ತದೆ. ಬೀಳುತ್ತಾ ಅದು ಇನ್ನೊಂದು ಮರವನ್ನಾಗಲಿ ಶಿಲೆಯನ್ನಾಗಲಿ ಆಶ್ರಯಿಸಿ ಹಾಗೆಯೇ ವಾಲಿಕೊಂಡಿದ್ದರೆ ಅದನ್ನು ಕಡಿಯ ಬಾರದು. ಅದನ್ನು ಕಡಿದರೆ ಅಥವಾ ಸೀಳಿದರೆ ಆ ವೃಕ್ಷದ ಸ್ವಾಮಿಯೂ, ವೃಕ್ಷವನ್ನು ಕಡಿಯುವವನೂ ತಕ್ಷಣದಲ್ಲಿಯೇ ನಾಶವನ್ನು ಹೊಂದುವನು.

ದೇವತಾನಾಂ ಚ ಪತನಂ ಮಂಡಪಾನಾಂ ಚ ಕೃಂತನಮ್।
ಅಚಲಾನಾಂ ಚ ಕಮ್ಪಶ್ಚ ತತ್ ಪರಾಭವಕ್ಷಣಮ್ ॥೧೯॥

ಉತ್ಸವದಲ್ಲಿ ತೆಗೆದುಕೊಂಡು ಹೋಗುತ್ತಿರುವ ದೇವತಾ ಪ್ರತಿಮೆಗಳ ಪತನವಾದರೆ ಮಂಟಪಗಳನ್ನು ಬೀಳಿಸಿದರೆ ಅಥವಾ ಪ್ರತಿಷ್ಠಿತವಾದ ದೇವತಾ ಪ್ರತಿಮೆಗಳು ಅಲ್ಲಾಡಿದರೆ ಅದನ್ನು ಪರಾಭವ ಸೂಚನೆ ಎಂದು ತಿಳಿಯಬೇಕು.

ನಿಶಿ ಚೇಂದ್ರಧನುರ್ದೃಷ್ಟಂ ತತೋಪಿ ಚ ಮಹದ್‌ಭಯಮ್ ।
ತದ್‌ದ್ರಷ್ಟುರೇವ ಭೀತಿಃ ಸ್ಯಾನ್ನಾನ್ಯೇಷಾಂ ಭರತರ್ಷಭ ।
ರಾತ್ರಾವಿಂದ್ರಧನುರ್ದೃಷ್ಟ್ವಾ ತದ್ರಾಷ್ಟ್ರಂ ಪರಿವರ್ಜಯೇತ್ ॥೨೦॥

ರಾತ್ರಿಯ ವೇಳೆಯಲ್ಲಿ ಕಾಮನ ಬಿಲ್ಲನ್ನು ನೋಡಿದರೂ ಮಹಾಭಯವು ಇದೆ ಎಂದು ತಿಳಿಯಬೇಕು. ಭರತಶ್ರೇಷ್ಠನೇ! ಈ ಅಪಶಕುನದ ಫಲವು ಅದನ್ನು ನೋಡುವವನಿಗೆ ಮಾತ್ರ ಆಗುತ್ತದೆ. ಇನ್ನೊಬ್ಬರಿಗೆ ಆಗುವುದಿಲ್ಲ. ರಾತ್ರಿಯಲ್ಲಿ ಕಾಮನಬಿಲ್ಲನ್ನು ನೋಡಿದರೆ ಆ ರಾಷ್ಟ್ರವನ್ನು ಪರಿತ್ಯಾಗಮಾಡಬೇಕು.

ದೇವತಾ ಯತ್ರ ನೃತ್ಯಂತಿ ನದಂತಿ ಚ ಹಸಂತಿ ಚ ।
ಉನ್ಮೀಲಂತಿ ನಿಮೀಲಂತಿ ರಾಷ್ಟ್ರಕ್ಷೋಭಂ ವಿನಿರ್ದಿಶೇತ್ ॥೨೧॥

ದೇವಾಲಯದಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಪ್ರತಿಮೆಗಳು ನರ್ತನವನ್ನು ಮಾಡಿದರೆ ಗರ್ಜನೆಯನ್ನು ಮಾಡಿದರೆ ದೊಡ್ಡದಾಗಿ ನಕ್ಕರೆ ಕಣ್ಣಿನ ರೆಪ್ಪೆಗಳನ್ನು ಮುಚ್ಚಿದರೆ ಅಥವಾ ತೆಗೆದರೆ ರಾಷ್ಟ್ರಕ್ಷೋಭೆಯು ಉಂಟಾಗುವುದೆಂದು ತಿಳಿಯಬೇಕು.

ಶಿಲಾ ಯತ್ರ ಪ್ರಸಿಂಚಿಂತಿ ಸ್ನೇಹಾಂಶ್ಚೋದಕಸಂಭವಾನ್ ।
ಅನ್ಯದ್ ವಾರಿಭಯಂ ಕಿಂಚಿತ್ ತದ್ ಭಯಸ್ಯ ನಿದರ್ಶನಮ್ ॥೨೨॥

ಮ್ರಿಯತೇ ವಾ ಮಹಾಮಾತ್ರೋ ರಾಜಾ ಸಪರಿವಾರಕಃ ।
ಪುರಸ್ಯ ವಾ ಭವೇದ್ ವ್ಯಾಧೀ ರಾಷ್ಟ್ರೇ ದೇಶೇ ಚ ವಿಭ್ರಮಃ ॥೨೩॥

ಎಲ್ಲಿ ಶಿಲೆಗಳು ಉದಕದಂತಹ ಅಂಟಾದ ದ್ರವವನ್ನು ಸ್ರವಿಸುತ್ತವೆಯೋ ಅಥವಾ ಭಯವನ್ನು ಉಂಟುಮಾಡುವ ಕೆಂಪಾದ ನೊರೆಗಳನ್ನು ಸುರಿಸುತ್ತವೆಯೋ ಅಲ್ಲಿಯೂ ಸದ್ಯದಲ್ಲಿಯೇ ಭಯವನ್ನು ಹೇಳಬೇಕು. ಆಗ ರಾಜನು ತನ್ನ ಪರಿವಾರದಿಂದ ಮೃತನಾಗುವನು. ಅಥವಾ ಮಹಾಮಾತ್ರನು ಮೃತನಾಗುವನು. ರಾಜಧಾನಿಯಲ್ಲಿ ವ್ಯಾಧಿಯು ಉಂಟಾಗುವುದು. ರಾಷ್ಟ್ರದಲ್ಲಿಯೂ ಮತ್ತು ದೇಶದಲ್ಲಿಯೂ ವಿಭ್ರಮವು ಉಂಟಾಗುವುದು.

ದೇವತಾನಾಂ ಯದಾऽऽವಾಸೇ ರಾಜ್ಞಾಂ ವಾ ಯತ್ರ ವೇಶ್ಮನಿ ।
ಭಾಂಡಾಗಾರಾಯುಧಾಗಾರೇ ನಿವಿಶೇತ ಯದಾ ಮಧು ॥೨೪॥

ಸರ್ವಂ ತದ್ ದಾಹಯೇತ್ ಸ್ಥಾನಂ ಹನ್ಯಮಾನಂ ಬಲೀಯಸಾ ।
ಆಗಂತುಕಂ ಭಯಂ ತತ್ರ ಭವೇದಿತ್ಯೇವ ನಿರ್ದಿಶೇತ್ ॥೨೫॥

ದೇವಾಲಯದಲ್ಲಿಯಾಗಲಿ ಅಥವಾ ಅರಮನೆಯಲ್ಲಿಯಾಗಲಿ ಆಯುಧಗಾರದಲ್ಲಿ ಅಥವಾ ಪಾತ್ರೆಗಳನ್ನು ಇಡುವ ಸ್ಥಳದಲ್ಲಿ ಜೇನುಗೂಡು ಕಟ್ಟಿದರೆ ಆ ದೇಶವು ಬಲಿಷ್ಠನಾದ ರಾಜನ ಆಕ್ರಮಣಕ್ಕೆ ಒಳಗಾಗಿ ಆ ಪ್ರದೇಶವೆಲ್ಲವನ್ನು ಸುಟ್ಟು ಬಿಡುತ್ತದೆ. ಅಲ್ಲಿ ಆಗಂತುಕವಾದ ಭಯವಿದೆ ಎಂದು ತಿಳಿಯಬೇಕು.

ಪಾದಪಶ್ಚೈವ ಯೋ ಯತ್ರ ರಕ್ತಂ ಸ್ರವತಿ ಶೋಣಿತಮ್ ।
ದಂತಾಗ್ರಾತ್ ಕುಂಜರೋ ವಾಪಿ ಶೃಂಗಾದ್ವಾ ವೃಷಭಸ್ತಥಾ ॥೨೬॥

ಪಾದಪಾದ್ ರಾಷ್ಟ್ರವಿಭ್ರಂಶಃ ಕುಂಜರಾದ್ ರಾಜವಿಭ್ರಮಃ ।
ಗೋಬ್ರಾಹ್ಮಣವಿನಾಶಃ ಸ್ಯಾದ್ ವೃಷಭಸ್ಯೇತಿ ನಿರ್ದಿಶೇತ್ ॥೨೭॥

ಎಲ್ಲಿ ವೃಕ್ಷಗಳು ರಕ್ತದಂತೆ ಕೆಂಪಾದ ದ್ರವವನ್ನು ಸ್ರವಿಸುತ್ತವೆಯೋ ಅಥವಾ ಆನೆಗಳು ತಮ್ಮ ದಂತಾಗ್ರದಿಂದ ಅಥವಾ ವೃಷಭಗಳು ತಮ್ಮ ಕೊಂಬಿನ ತುದಿಯಿಂದ ಅಂತಹ

ದ್ರವವನ್ನು ಸ್ರವಿಸುತ್ತವೆಯೋ ಅಲ್ಲಿ ವೃಕ್ಷಗಳ ಸ್ರಾವದಿಂದ ರಾಷ್ಟ್ರವಿಭ್ರನೂಂಶವನ್ನು ಗಜಗಳ ಸ್ರಾವದಿಂದ ರಾಜನ ವಿಭ್ರಶಮವನ್ನೂ(ಉನ್ಮಾದವನ್ನೂ) ವೃಷಭಸ್ರಾವದಿಂದ ಗೋಬ್ರಾಹ್ಮಣವಿನಾಶವನ್ನೂ ನಿರ್ದೇಶಮಾಡಬೇಕು.

ಛತ್ರಂ ನರಪತೇರ್ಯಸ್ಯ ನಿಪತೇತ್ ಪೃಥಿವೀತಳೇ ।
ಸರಾಷ್ಟ್ರೋ ನೃಪತೀ ರಾಜನ್ ಕ್ಷಿಪ್ರಮೇವ ವಿನಶ್ಯತಿ ॥೨೮॥

ಎಲೈ! ರಾಜನೇ! ಎಲ್ಲಿ ಮೆರವಣಿಗೆಯಲ್ಲಿ ಹೋಗುತ್ತಿರುವ ರಾಜನ ಛತ್ರವು ಭೂಮಿಯಲ್ಲಿ ಬೀಳುತ್ತದೆಯೋ ಅಲ್ಲಿ ಆ ರಾಷ್ಟ್ರವು ಮತ್ತು ರಾಜನು ತಕ್ಷಣದಲ್ಲಿಯೇ ನಾಶವನ್ನು ಹೊಂದುವರು ಎಂದು ತಿಳಿಯಬೇಕು.

ದೇವಾಗಾರೇಷು ವಾ ಯತ್ರ ರಾಜ್ಞೋ ವಾ ಯತ್ರ ವೇಶ್ಮನಿ ।
ವಿಕೃತಂ ಯದಿ ದೃಶ್ಯೇತ ನಾಗಾವಾಸೇಷು ವಾ ಪುನಃ ॥೨೯॥

ತಸ್ಯ ದೇಶಸ್ಯ ಪೀಡಾ ಸ್ಯಾದ್ ರಾಜ್ಞೋ ಜನಪದಸ್ಯ ವಾ ।
ಅನಾವೃಷ್ಟಿಭಯಂ ಘೋರಂ ದುರ್ಭಿಕ್ಷಮಿತಿ ನಿರ್ದಿಶೇತ್ ॥೩೦॥

ದೇವಾಲಯಗಳಲ್ಲಾಗಲೀ ಅರಮನೆಗಳಲ್ಲಾಗಲೀ ಅಥವಾ ನಾಗವನಗಳಲ್ಲಾಗಲೀ ರಾವಣಹಸ್ತಾಕಾರದ ಒಂದು ದೊಡ್ಡ ಮಣ್ಣಿನ ವಿಕಾರವು ಉದ್ಭವವಾದರೆ ಆ ದೇಶಕ್ಕಾಗಲೀ ರಾಜನಿಗಾಗಲೀ ಅಥವಾ ಜನಪದಕ್ಕೆ ಆಗಲೀ ಪೀಡೆಯು ಉಂಟಾಗುತ್ತದೆ. ಅಲ್ಲಿ ಅನಾವೃಷ್ಟಿಯೂ ಘೋರವಾದ ದುರ್ಭಿಕ್ಷೆಯೂ ಉಂಟಾಗುವುದೆಂದು ತಿಳಿಯಬೇಕು.

ಬಾಹುಭಂಗೀ ಚ ದೇವಾನಾಂ ಗೃಹಸ್ಥಾನಾಂ ಭಯಂ ಭವೇತ್ ।
ಭಗ್ನೇ ಪ್ರಹರಣೇ ವಿದ್ಯಾತ್ ಸೇನಾಪತಿವಿನಾಶನಮ್ ॥೩೧॥

ದೇವಾಲಯದ ಪ್ರತಿಮೆಗಳ ಬಾಹುಭಂಗವಾದರೆ ಗೃಹಸ್ಥರಿಗೆ ಭಯವನ್ನು ಹೇಳಬೇಕು. ದೇವಾಲಯದ ಪ್ರತಿಮೆಗಳ ಆಯುಧಗಳ ಭಂಗವಾದರೆ ಸೇನಾಪತಿಯ ವಿನಾಶವನ್ನು ತಿಳಿಯಬೇಕು.

ಆಗಂತುಕಾ ತು ಪ್ರತಿಮಾ ಸ್ಥಾನಂ ಯತ್ರ ನ ವಿಂದತಿ ।
ಅಭ್ಯಂತರೇಣ ಷಣ್ಮಾಸಾದ್ ರಾಜಾ ತ್ಯಜತಿ ತತ್ಪುರಮ್ ॥೩೨॥

ರಾಜಧಾನಿಗೆ ಹೊಸದಾಗಿ ಬಂದ ದೇವತಾಪ್ರತಿಮೆಯು ಆರು ತಿಂಗಳ ಒಳಗೆ ಪ್ರತಿಷ್ಠೆಗೆ ಯೋಗ್ಯವಾದ ಒಂದುಸ್ಥಾನವನ್ನು ಪಡೆಯದಿದ್ದರೆ ರಾಜನು ರಾಜಧಾನಿಯನ್ನು ತ್ಯಜಿಸಬೇಕು ಎಂದು ತಿಳಿಯಬೇಕು.

ವಿದೀರ್ಯತೇ ಮಹೀ ಯತ್ರ ವಿನದತ್ಯಪಿ ಪಾರ್ಥಿವ ।
ತತ್ರ ರಾಜಾ ಚ ಭೃತ್ಯಾಶ್ಚ ತಚ್ಚ ರಾಷ್ಟ್ರಂ ವಿನಶ್ಯತಿ ॥೩೩॥

ಎಲೈ ರಾಜನೇ! ಎಲ್ಲಿ ಭೂಮಿಯು ಬಿರಿಯುತ್ತದೆಯೋ ಅಥವಾ ಗುಡುಗುತ್ತದೆಯೋ ಅಲ್ಲಿ ರಾಜನೂ ರಾಜಭೃತ್ಯರೂ ಮತ್ತು ರಾಷ್ಟ್ರವೂ ವಿನಾಶವನ್ನು ಹೊಂದುತ್ತವೆಯೆಂದು ತಿಳಿಯಬೇಕು.

ಶ್ರೇಣೀಪದಾನ್ ವಾ ಸರ್ಪಾನ್ ವಾ ಡುಂಡುಭಾನಥ ದೀಪಕಾನ್ ।
ಮಂಡೂಕೋ ಗ್ರಸತೇ ಯತ್ರ ತತ್ರ ರಾಜಾ ವಿನಶ್ಯತಿ ॥೩೪॥

ಕಪ್ಪೆಯು ಝರಿಗಳನ್ನಾಗಲೀ ಸರ್ಪಗಳನ್ನಾಗಲೀ ಅಥವಾ ವಿಷರಹಿತವಾದ ಸಣ್ಣ ಸರ್ಪಗಳನ್ನಾಗಲೀ ಅಥವಾ ದೀಪದ ಹುಳುಗಳನ್ನಾಗಲೀ ನುಂಗಿದರೆ ಅಲ್ಲಿ ರಾಜನು ವಿನಾಶವನ್ನು ಹೊಂದುವನು.

ಅಭಿನ್ನಂ ವಾಪ್ಯಪಕ್ವಂ ವಾ ಯತ್ರಾನ್ನಮುಪಚೀಯತೇ ।
ಜೀವಂತೇ ವಾ ಮ್ರಿಯಂತೇ ವಾ ತದನ್ನಂ ನೋಪಭುಂಜತೇ ॥೩೫॥

ಅಡಿಗೆಯನ್ನು ಮಾಡಲು ಪಾತ್ರೆಯಲ್ಲಿ ಹಾಕಿದ ಅಕ್ಕಿಯು ಪಕ್ವವಾಗದೆ ಹಾಗೆಯೇ ಉಕ್ಕಿದರೆ ಅಥವಾ ಪಕ್ವವಾಗದೆ ಕೈಯಲ್ಲಿ ಮುಟ್ಟಿದಾಗ ಹಿಟ್ಟಾದರೆ ಆ ಅನ್ನವನ್ನು ಉಪಯೋಗಿಸಬಾರದು. (ಇದನ್ನು ಒಂದು ಪರಾಭವ ಲಕ್ಷಣವೆಂದು ತಿಳಿಯಬೇಕು.)

ಉದಪಾನೇ ಚ ಯತ್ರಾಪೋ ವಿವರ್ಧಂತೇ ಯುಧಿಷ್ಠಿರ ।
ಸ್ಥಾವರೇಷು ಪ್ರವರ್ತಂತೇ ನಿರ್ಗಚ್ಛೇಯುಃ ಪುನಸ್ತತಃ ॥೩೬॥

ಯುಧಿಷ್ಠಿರನೇ! ಭಾವಿಯಲ್ಲಿರುವ ನೀರು ಉಕ್ಕಿ ಬಂದು ಭೂಮಿಯಲ್ಲಿ ಹರಿದರೆ ಅದನ್ನು ಪರಾಭವಲಕ್ಷಣವೆಂದು ತಿಳಿಯಬೇಕು.

ಅಪಾದಂ ವಾ ತ್ರಿಪಾದಂ ವಾ ದ್ವಿಶೀರ್ಷಂ ವಾ ಚತುರ್ಭುಜಮ್ ।
ಸ್ತ್ರಿಯೋ ಯತ್ರ ಪ್ರಸೂಯಂತೇ ಬ್ರೂಯಾತ್ ತತ್ರ ಪರಾಭವಮ್ ॥

ಎಲ್ಲಿ ಸ್ತ್ರೀಯರು ಪಾದಗಳೇ ಇಲ್ಲದಿರುವ ಅಥವಾ ಮೂರುಪಾದಗಳುಳ್ಳ ಅಥವಾ ನಾಲ್ಕು ಮೂರು ಪಾದಗಳುಳ್ಳ ಅಥವಾ ಎರಡು ತಲೆಗಳುಳ್ಳ ಅಥವಾ ನಾಲ್ಕು ಬಾಹುಗಳುಳ್ಳ ಶಿಶುಗಳನ್ನು ಪ್ರಸವಿಸುತ್ತಾರೋ ಅಲ್ಲಿಯೂ ಪರಾಭವವನ್ನು ಹೇಳಬೇಕು.

ಹಸ್ತಿನೀ ಮಹಿಷೀ ಗೌರ್ವಾ ಖರೋಷ್ಟ್ರಮಥ ಸೂಕರಃ ।
ಈದೃಶಾನಿ ಪ್ರಸೂಯಂತೇ ವಿದ್ಯಾತ್ ತತ್ರ ಪರಾಭವಮ್ ॥೩೮॥

ಆನೆಯಾಗಲೀ ಎಮ್ಮೆಯಾಗಲೀ ಹಸುವಾಗಲೀ ಕತ್ತೆಯಾಗಲೀ ಒಂಟೆಯಾಗಲೀ ಅಥವಾ ಹಂದಿಯಾಗಲೀ ಇಂತಹ ಮರಿಗಳನ್ನು ಹಾಕಿದರೆ ಆಗಲೂ ಪರಾಭವವೆಂದು ತಿಳಿಯಬೇಕು.

ಅಜೈಡಕಾಃ ಸ್ತ್ರಿಯೋ ಗಾವೋ ವಯಾಂಸ್ಯನ್ಯೇ ಚ ಯೋನಯಃ ।
ವಿಕೃತಾನಿ ಪ್ರಜಾಯಂತೇ ಯತ್ರ ತತ್ರ ಪರಾಭವಃ ॥೩೯॥

ಆಡುಗಳು ಕುರಿಗಳು ಸ್ತ್ರೀಯರು ಗೋವುಗಳು ಪಕ್ಷಿಗಳು ಮತ್ತು ಉಳಿದ ಪ್ರಾಣಿಗಳು ಇಂತಹ ವಿಕೃತವಾದ ಮರಿಗಳಿಗೆ ಜನ್ಮವನ್ನಿತ್ತರೆ ಅಲ್ಲಿ ಪರಾಭವವನ್ನು ತಿಳಿಯಬೇಕು.

ನದೀ ಯತ್ರ ಪ್ರತಿಸ್ರೋತಾ ಆವಹೇತ್ ಕಲುಷೋದಕಮ್ ।
ದಿಶಶ್ಚ ನ ಪ್ರಕಾಶಂತೇ ತತ್ ಪರಾಭವಲಕ್ಷಣಮ್ ॥೪೦॥

ಹರಿಯುವ ನದಿಯಲ್ಲಿ ಪ್ರವಾಹಕ್ಕೆ ಎದುರಾಗಿ ಒಂದು ಕೆಟ್ಟ ನೀರಿನ ಪ್ರವಾಹವು ಉಂಟಾದರೆ ಮತ್ತು ದಿಕ್ಕುಗಳೆಲ್ಲವೂ ಮಂಕಾದರೆ ಅದನ್ನು ಪರಾಭವ ಎಂದು ತಿಳಿಯಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಚತುಃಷಷ್ಟಿತಮೋಧ್ಯಾಯಃ ॥
॥ ಶಿಶುಪಾಲವಧಪರ್ವಣಿ ಷಷ್ಠೋಧ್ಯಾಯಃ ॥

ಅರವತ್ತಾ ್ನಲ್ಕನೆಯ ಅಧ್ಯಾಯವು ಮುಗಿಯಿತು.

★★★★★

ಅರವತ್ತೈದನೆಯ ಅಧ್ಯಾಯ

(ನಾರದರಿಂದ ಕೃಷ್ಣನು ಸೃಷ್ಟಿಸಿದ ದುರ್ನಿಮಿತ್ತಗಳ ಪ್ರದರ್ಶನ)

ನಾರದಃ

ಏತಾನಿ ಚ ನಿಮಿತ್ತಾನಿ ಯಾನಿ ಚಾನ್ಯಾನಿ ಭಾರತ ।
ಕೇಶವಾದ್ ದೇವಕಿಪುತ್ರಾಜ್ಜಾಯಂತೇ ವೈ ಖಗಾನಿ ಚ ॥೧॥

ಎಲೈ ಭಾರತನೇ! ಇಂತಹ ದುರ್ನಿಮಿತ್ತಗಳು ಭೂಮಿಯಲ್ಲಿಮತ್ತು ಅಂತರಿಕ್ಷದಲ್ಲಿ ದೇವಕೀ ಪುತ್ರನಾದ ಕೇಶವನಿಂದ ಸೃಷ್ಟಿಸಲ್ಪಡುತ್ತವೆ.

ಚಂದ್ರಾದಿತ್ಯೌ ಗ್ರಹಾಶ್ಚೈವ ನಕ್ಷತ್ರಾಣಿ ಚ ಭಾರತ ।
ವಾಯುರಗ್ನಿಸ್ತಥೈವಾಪಃ ಪೃಥಿವೀ ಚ ಜನಾರ್ದನಾತ್ ॥೨॥

ಭಾರತನೇ! ಚಂದ್ರಸೂರ್ಯರು ಗ್ರಹಗಳು ನಕ್ಷತ್ರಗಳು ವಾಯು ಅಗ್ನಿ ಜಲ ಪೃಥಿವೀ ಇವೆಲ್ಲವೂ ಜನಾರ್ದನನಿಂದ ಉಂಟಾಗುತ್ತವೆ.

ಯಸ್ಯ ದೇಶಸ್ಯ ಹಾನಿಂ ವಾ ವೃದ್ಧಿಂ ವಾ ಕರ್ತುಮಿಚ್ಛತಿ ।
ತಸ್ಮಿನ್ ದೇಶೇ ನಿಮಿತ್ತಾನಿ ತಾನಿ ತಾನಿ ಕರೋತ್ಯಯಮ್ ॥೩॥

ಇವನು ಯಾವ ದೇಶಕ್ಕೆ ಹಾನಿಯನ್ನಾಗಲೀ ಅಥವಾ ವೃದ್ಧಿಯನ್ನಾಗಲೀ ಉಂಟುಮಾಡಲು ಬಯಸುತ್ತಾನೆಯೋ ಆ ದೇಶದಲ್ಲಿ ಅಂತಹ ನಿಮಿತ್ತಗಳನ್ನು ಸೃಷ್ಟಿಮಾಡುತ್ತಾನೆ.

ಯೋಽಸೌ ಚೇದಿಪತೇಸ್ತಾತ ವಿನಾಶಃ ಸಮುಪಸ್ಥಿತಃ ।
ನಿವೇದಯತಿ ಗೋವಿಂದಸ್ತದುಪಾಯೈರ್ನ ಸಂಶಯಃ ॥೪॥

ಪ್ರೀತಿಪಾತ್ರನೇ! ಚೇದಿಪತಿಯಾದ ಶಿಶುಪಾಲನ ಮರಣವು ಸನ್ನಿಹಿತವಾಗಿದೆ. ಅದನ್ನು ಗೋವಿಂದನು ಅನೇಕ ಉಪಾಯಗಳಿಂ ಸೂಚನೆ ಮಾಡಿದ್ದಾನೆ. ಇದರಲ್ಲಿ ಸಂಶಯವಿಲ್ಲ.

ಇಯಂ ಪ್ರಚಲಿತಾ ಭೂಮಿರಶಿವಂ ವಾಂತಿ ಮಾರುತಾಃ ।
ರಾಹುಶ್ಚಾಭ್ಯಪತತ್ ಸೋಮಮಪರ್ವಣಿ ವಿಶಾಂಪತೇ ॥೫॥

ಸನಿರ್ಘಾತಾಃ ಪತಂತ್ಯುಲ್ಕಾಸ್ತಮಃ ಸಂಜಾಯತೇ ಭೃಶಮ್ ।
ಚೇದಿರಾಜವಿನಾಶಾಯ ಹರಿರೇಷ ವಿಜೃಂಭತೇ ॥೬॥

ಭೂಮಿಯು ನಡುಗುತ್ತಿದೆ. ವಾಯುವು ಅಮಂಗಳವಾಗಿ ಬೀಸುತ್ತಿದೆ. ರಾಜನೇ! ರಾಹುವು ಚಂದ್ರನನ್ನು ಪರ್ವಕಾಲದವಲ್ಲದಿದ್ದರೂ ಹಿಡಿಯುತ್ತಿದ್ದಾನೆ. ಮಹಾಶಬ್ದದೊಡನೆ ಉಲ್ಕಾಪಾತಗಳು ಸಂಭವಿಸುತ್ತಿವೆ. ಎಲ್ಲಾ ಕಡೆಗಳಲ್ಲಿಯೂ ಕತ್ತಲು ಹಬ್ಬುತ್ತಿದೆ. ಶಿಶುಪಾಲನ ವಿನಾಶಕ್ಕೊಸ್ಕರ ಹರಿಯೇ ಹೀಗೆ ವಿಜೃಂಭಿಸುತ್ತಿದ್ದಾನೆ.

ವೈಶಂಪಾಯನಃ

ಏವಮುಕ್ತ್ವಾ ತು ಭಗವಾನ್ ನಾರದೋ ವಿರರಾಮ ಹ ॥೭॥

ಹೀಗೆ ಹೇಳಿ ಪೂಜ್ಯರಾದ ನಾರದರು ಸುಮ್ಮನಾದರು.

ಸಭಾಯಾಂ ಪುರುಷಸಿಂಹಾಭ್ಯಾಂ ತಸ್ಮಿನ್ ಯುದ್ಧೇ ಉಪಸ್ಥಿತೇ ।
ದದೃಶುರ್ಭೂಮಿಪಾಲಾಸ್ತೇ ಘೋರಾನುತ್ಪಾತಕಾನ್ ಬಹೂನ್ ॥೮॥

ಪುರುಷ ಸಿಂಹನಾದ ಶಿಶುಪಾಲ ಮತ್ತು ಕೃಷ್ಣರಿಗೆ ಘೋರವಾದ ಯುದ್ಧವು ಸನ್ನಿಹಿತವಾಗುತ್ತಿರಲು ಸಭೆಯಲ್ಲಿದ್ದ ರಾಜರು ಅನೇಕ ಘೋರವಾದ ದುರ್ನಿಮಿತ್ತವನ್ನು ನೋಡಿದರು.

ತತ್ರ ತೈರ್ದೃಶ್ಯಮಾನಾನಾಂ ದಿಕ್ಷು ಸರ್ವಾಸು ಭಾರತ ।
ಅಶ್ರೂಯಂತ ತದಾ ರಾಜನ್ ಶಿವಾನಾಮಶಿವಾ ಗಿರಃ ॥೯॥

ಎಲೈ ಭಾರತನೇ! ಅವರು ಎಲ್ಲಾ ದಿಕ್ಕುಗಳಲ್ಲಿಯೂ ಇಂತಹ ಅಪಶಕುನವನ್ನು ನೋಡುತ್ತಿರುವಂತೆಯೇ ನರಿಗಳ ಅಮಂಗಳವಾದ ರೋದನ ಧ್ವನಿಯು ಕೇಳಿ ಬಂದಿತು.

ರರಾಸ ಚ ಮಹೀ ಕೃತ್ಸ್ನಾ ಸವೃಕ್ಷಪುರಪರ್ವತಾ ।
ಅಪರ್ವಣಿ ಚ ಮಧ್ಯಾಹ್ನೇ ಸೂರ್ಯಂ ಸ್ವರ್ಭಾನುರಗ್ರಸತ್ ॥೧೦॥

ಕಾನನಪಟ್ಟಣ ಮತ್ತು ಪರ್ವತಗಳಿಂದ ಕೂಡಿದ ಸಮಗ್ರವಾದ ಭೂಮಿಯು ಹೆದರಿ ಹೋಯಿತು. ಪರ್ವಕಾಲವಲ್ಲದೆ (ಅಮವಾಸ್ಯೆಯಲ್ಲದೆ) ಮಧ್ಯಾಹ್ನದ ಸಮಯದಲ್ಲಿ ರಾಹುವು ಸೂರ್ಯನನ್ನು ಹಿಡಿದನು.

ಧ್ವಜಾಗ್ರೇ ಚೇದಿರಾಜಸ್ಯ ಸರ್ವರತ್ನಪರಿಷ್ಕೃತೇ ।
ಅಪತತ್ ಖಾಚ್ಚ್ಯುತೋ ಗೃಧ್ರಸ್ತೀಕ್ಷ್ಣತುಂಡಃ ಪರಂತಪ ॥೧೧॥

ಪರಂತಪನೇ! ಚೇದಿರಾಜನ ಸರ್ವರತ್ನ ವಿಭೂಷಿತವಾದ ಧ್ವಜದ ಮೇಲು ಭಾಗದಲ್ಲಿ ತೀಕ್ಷ್ಣವಾದ ಕೊಕ್ಕುಳ್ಳ ಒಂದು ಹದ್ದು ಅಂತರಿಕ್ಷದಿಂದ ಎರಗಿತು.

ಆರಣ್ಯೈಃ ಸಹ ಸಂಹೃಷ್ಟಾ ಗ್ರಾಮ್ಯಾಶ್ಚ ಮೃಗಪಕ್ಷಿಣಃ ।
ಚುಕ್ರುಶುರ್ಭೈರವಂ ತತ್ರ ತಸ್ಮಿನ್ ಯುದ್ಧೇ ಉಪಸ್ಥಿತೇ ॥೧೨॥

ಆ ಯುದ್ಧವು ಉಪಸ್ಥಿತವಾಗುತ್ತಿರಲು ಸಂತೋಷಗೊಂಡ ಕಾಡುಮೃಗಗಳು ಮತ್ತು ಗ್ರಾಮವಾಸಿಗಳಾದ ಮೃಗಪಕ್ಷಿಗಳು ಭೈರವನಾದವನ್ನು ಮಾಡಿದವು.

ಏವಮಾದೀನಿ ಘೋರಾಣಿ ಭೌಮಾನಿ ಚ ಖಗಾನಿ ಚ ।
ಔತ್ಪಾತಿಕಾನ್ಯದೃಶ್ಯಂತ ಸಂಕ್ರುದ್ಧೇ ಶಾರ್ಙ್ಗಧನ್ವನಿ ॥೧೩॥

ಶಾರ್ಙ್ಗಧಾರಿಯಾದ ಕೃಷ್ಣನು ಕೋಪಗೋಳ್ಳುತ್ತಿರಲು ಭೂಮಿಯಲ್ಲೂ ಮತ್ತು ಅಂತರಿಕ್ಷದಲ್ಲೂ ಇಂತಹ ಘೋರವಾದ ಅಪಶಕುನಗಳು ಕಂಡು ಬಂದವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಪಂಚಷಷ್ಟಿತಮೋಧ್ಯಾಯಃ ॥
॥ ಶಿಶುಪಾಲವಧಪರ್ವಣಿ ಸಪ್ತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ
ಅರವತ್ತೈದನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ಅಗ್ರ್ಯೋಪಹಾರಮುಪಯಾಪಿತ ಏವ ಕೃಷ್ಣೇ
ಕೋಪಾದನಿಂದದಮುಮಾಶು ಚ ಚೇದಿರಾಜಃ ।
ಶ್ರುತ್ವೈವ ತತ್ ಪವನಜೋಽಭಿಯಯೌ ನೃಪಂ ತಂ
ಹಂತುಂ ಜಗದ್ಗುರುವಿನಿಂದಕಮೃದ್ಧಮನ್ಯುಃ ॥೨೫೭॥

ಶ್ರೀಕೃಷ್ಣನಿಗೆ ಅಗ್ರಪೂಜೆ ಮಾಡಿದೊಡನೆ ಶಿಶುಪಾಲ ಕೋಪದಿಂದ ಅವನನ್ನು ನಿಂದಿಸಿದ. ಅದನ್ನು ಕೇಳಿದೊಡನೆ ಭೀಮ ಬಹಳ ಕುಪಿತನಾಗಿ ಜಗದ್ಗುರು ನಿಂದಕನಾದ ಆ ರಾಜನನ್ನು ಕೊಲ್ಲಲು ಹೊರಟ.

ದೂರೇಽಪಿ ಕೇಶವನಿಂದನಕಾರಿಜಿಹ್ವಾ-
ಮುಚ್ಛೇತ್ಸ್ಯ ಇತ್ಯುರುತರಾಸ್ಯ ಸದಾ ಪ್ರತಿಜ್ಞಾ ।
ಭೀಮಸ್ಯ ತಂ ತು ಜಗೃಹೇ ಸರಿದಾತ್ಮಜೋಽಥ
ಸಂಪ್ರೋಚ್ಯ ಕೇಶವವಚೋ ನಿಜಯೋರ್ವಧಾಯ ॥೨೫೮॥

ಪರೋಕ್ಷದಲ್ಲಿಯಾದರೂ ಕೂಡ ಕೇಶವನನ್ನು ನಿಂದಿಸುವ ನಾಲಿಗೆಯನ್ನು ಕತ್ತರಿಸುವೆನೆಂಬುದು ಸದಾ ಭೀಮನ ಮಹಾಪ್ರತಿಜ್ಞೆ. ಆದರೆ ಶ್ರೀಹರಿ ತನ್ನವರ ವಧೆಗೆ ಕೊಟ್ಟ ಮಾತನ್ನು ಹೇಳಿ ಭೀಷ್ಮ ಭೀಮನನ್ನು ತಡೆದ.

ಮಯ್ಯೇವ ವಧ್ಯಾಮಿತಿ ತಾವಾಹ ಯತ್ ಕೇಶವಃ ಪುರಾ ।
ತಚ್ಛ್ರುತ್ವಾ ಭೀಮಸೇನೋಽಪಿ ಸ್ಥಿತೋ ಭೀಷ್ಮಕರಗ್ರಹಾತ್ ॥೨೫೯॥

'ಮೂರು ಜನ್ಮಗಳಲ್ಲಿಯೂ ನನ್ನಿಂದಲೆ ನೀವು ಹತರಾಗುವಿರೆಂದು ಶ್ರೀಹರಿ ಹಿಂದೆಯೆ ಅವರಿಗೆ ವರ ನೀಡಿದ್ದ' ಎಂದು ಭೀಷ್ಮ ಹೇಳಿದುದ್ದನ್ನು ಕೇಳಿ ಭೀಮ, ಶತ್ರುಗಳಿಗೆ ಭಯಂಕರನಾಗಿದ್ದರೂ, ಭೀಷ್ಮ ತನ್ನ ಕೈಹಿಡಿದು ತಡೆದನೆಂದು, ತಡೆದು ನಿಂತ.

ಜಾನನ್ನಪಿ ಹರೇರಿಷ್ಟಂ ಸ್ವಕರ್ತವ್ಯತಯೋತ್ಥಿತಃ ।
ಭೀಮ ಏತಾವದುಚಿತಮಿತಿ ಮತ್ವಾ ಸ್ಥಿತಃ ಪುನಃ ॥೨೬೦॥

ಶ್ರೀಹರಿಯ ಸಂಕಲ್ಪವನ್ನು ಭೀಮ ತಿಳಿದವನೇ ಆಗಿದ್ದರೂ ತನ್ನ ಕರ್ತವ್ಯವೆಂದು ಎದ್ದಿದ್ದ. ಬಳಿಕ ಇಷ್ಟು ಸಾಕೆಂದುಕೊಂಡು ಸುಮ್ಮನಾದ.

ದೇವಸಂಘಭವಿನಾಂ ಮಹಾನಭೂತ್
ಈಕ್ಷ್ಯ ತೋಷ ಇಹ ಕೇಶವೇऽಧಿಕಾಂ ।
ಅರ್ಚನಾಂ ಯ ಇಹ ಮಾನುಷೋ ಜನೋ
ಮಧ್ಯ ಏವ ಸ ತು ಸಂಸ್ಥಿತೋऽಭವತ್ ॥೨೬೧॥

ಆಸುರಾ ಇಹ ಸುಯೋಧನಾದಯ-
ಸ್ತತ್ರ ತೇ ವಿಮನಸೋ ಬಭೂವಿರೇ ।
ದುರ್ವಚೋಭಿರಧಿಕಂ ಚ ಚೇದಿಪಃ
ಕೃಷ್ಣಮಾರ್ಚ್ಛದುರುಸದ್ಗುಣಾರ್ಣವಂ ॥೨೬೨॥

ಶ್ರೀಕೃಷ್ಣನಿಗೆ ಹೆಚ್ಚಿನ ಸತ್ಕಾರ ನಡೆದುದನ್ನು ಕಂಡು ದೈವೀಪ್ರಕೃತಿಯ ಉತ್ತಮ ಚೇತನರಿಗೆ ಮಹಾ ಆನಂದವಾಯಿತು. ಮನುಷ್ಯ ಸ್ವಭಾವದ ಜನರು ತಟಸ್ಥರಾಗಿದ್ದರು. ಆಸುರ ಸ್ವಭಾವದ ದುರ್ಯೋಧನಾದಿಗಳು ಮನಸ್ಸಿನಲ್ಲಿ ಕೊರಗಿದರು. ಶಿಶುಪಾಲ ಮಹಾಸದ್ಗುಣಗಳ ಸಾಗರನಾದ ಶ್ರೀಕೃಷ್ಣನಲ್ಲಿ ಕೆಟ್ಟ ಮಾತುಗಳಿಂದ ಬಹಳ ದೋಷಾರೋಪಣಗೈದ.

ಸಮಾಹ್ವಯಚ್ಚ ಕೇಶವಂ ಯುಧೇ ತಮಾಶು ಕೇಶವಃ ।
ನಿವಾರ್ಯ ತಸ್ಯ ಸಾಯಕಾನ್ ಜಘಾನ ಚಾರಿಣಾ ಪ್ರಭುಃ ॥೨೬೩॥

ಶಿಶುಪಾಲ ಶ್ರೀಕೃಷ್ಣನನ್ನು ಯುದ್ಧಕ್ಕೆ ಕರೆದ. ಸರ್ವಶಕ್ತನಾದ ಕೃಷ್ಣ ಅವನ ಬಾಣಗಳನ್ನು ತಡೆದು ಸುದರ್ಶನ ಚಕ್ರದಿಂದ ಅವನನ್ನು ತರಿದ.

ನಿಕೃತ್ಯಮಾನಕಂಧರಃ ಸ ಭಕ್ತಿಮಾನಭೂದ್ಧರೌ ।
ತಮಾಶ್ರಿತಶ್ಚ ಯೋऽಸುರೋ ಮಹಾತಮಃ ಪ್ರಪೇದಿವಾನ್ ॥೨೬೪॥

ಜಯಃ ಪ್ರವಿಶ್ಯ ಕೇಶವಂ ಪುನಶ್ಚ ಪಾರ್ಷದೋऽಭವತ್ ।
ಅಸೌ ಚ ಪಾಂಡವಕ್ರತುಃ ಪ್ರವರ್ತಿತೋ ಯಥೋದಿತಃ ॥೨೬೫॥

ಶಿರಶ್ಛೇದವಾಗುತ್ತಿದ್ದಂತೆ ಶಿಶುಪಾಲ ಕೃಷ್ಣನಲ್ಲಿ ಭಕ್ತಿ ಭರಿತನಾದ. ಅವನಲ್ಲಿ ಸೇರಿಕೊಂಡಿದ್ದ ಅಸುರ ಮಹಾತಮಸ್ಸನ್ನು ಹೊಂದಿದ. ಜಯ ಕೃಷ್ಣನನ್ನು ಪ್ರವೇಶಿಸಿ ಕೃಷ್ಣ ಪರಂಧಾಮಕ್ಕೆ ತೆರಳಿದಾಗ ಅಲ್ಲಿ ದ್ವಾರಪಾಲಕನಾದ. ಪಾಂಡವರು ಯಾಗವನ್ನು ವಿಧ್ಯುಕ್ತವಾಗಿ ಮುಂದುವರಿಸಿದರು.

★ ★ ★ ★

ಅರವತ್ತಾರನೆಯ ಅಧ್ಯಾಯ

(ಕೃಷ್ಣ ಮತ್ತು ಶಿಶುಪಾಲರ ಯುದ್ಧ, ಶಿಶುಪಾಲವಧೆ)

ವೈಶಂಪಾಯನಃ

ಮಹದ್ ವಿಷ್ಫಾರಯನ್ ರಾಜಾ ತತಶ್ಚೇದಿಪತಿರ್ಧನುಃ ।
ಅಭಿಯಾಸ್ಯನ್ ಹೃಷೀಕೇಶಮುವಾಚ ಮಧುಸೂದನಮ್ ॥೧॥

ಅನಂತರ ಚೇದಿಪತಿಯಾದ ಶಿಶುಪಾಲರಾಜನು ದೊಡ್ಡ ಧನುಸ್ಸನ್ನು ಬಗ್ಗಿಸುತ್ತಾ ಮಧುಸೂದನನ ಕಡೆಗೆ ಧಾವಿಸುತ್ತಾ ಹೃಷಿಕೇಶನನ್ನು ಕುರಿತು ಹೇಳಿದನು.

ಏಕಸ್ತ್ವಮಸಿ ಮೇ ಶತ್ರುಸ್ತತ್ ತ್ವಾಂ ಹತ್ವಾऽದ್ಯ ಮಾಧವ ।
ತತಃ ಸಾಗರಪರ್ಯಂತಾಂ ಪಾಲಯಿಷ್ಯಾಮಿ ಮೇದಿನೀಮ್ ॥೨॥

ಮಾಧವನೇ! ನೀನು ನನಗೆ ಮುಖ್ಯವಾದ ಶತ್ರು. ಈ ದಿನ ನಿನ್ನನ್ನು ಕೊಂದು ಸಾಗರ ಪರ್ಯಂತ ಭೂಮಿಯನ್ನು ಆಳುವೆನು.

ದ್ವೈರಥಂ ಕಾಂಕ್ಷಿತಂ ಯನ್ಮೇ ತದಿದಂ ಪರ್ಯುಪಸ್ಥಿತಮ್ ।
ಚಿರಸ್ಯ ಬತ ಮೇ ದಿಷ್ಟ್ಯಾ ವಾಸುದೇವ ಸಹ ತ್ವಯಾ ।
ಅದ್ಯ ತ್ವಾಂ ನಿಹನಿಷ್ಯೇऽಹಂ ಭೀಷ್ಮಂ ಚ ಸಹ ಪಾಂಡವೈಃ ॥೩॥

ಬಹಳ ದಿನದಿಂದ ಬಯಸಿದ ದ್ವಂದ್ವಯುದ್ಧವು ನಿನ್ನ ಜೊತೆಯಲ್ಲಿ ಈ ದಿನ ಪ್ರಾಪ್ತವಾಯಿತು. ಇದು ನನ್ನ ಸುಯೋಗ. ಈ ದಿನ ನಾನು ನಿನ್ನನ್ನೂ ಭೀಷ್ಮನನ್ನೂ ಮತ್ತು ಪಾಂಡವರನ್ನೂ ಕೊಲ್ಲುವೆನು.

ಏವಮುಕ್ತ್ವಾ ಸ ತಂ ಬಾಣೈರ್ನಿಶಿತೈರಾತ್ತತೇಜನೈಃ ।
ವಿವ್ಯಾಧ ಯುಧಿ ತೀಕ್ಷ್ಣಾಗ್ರೈಶ್ಚೇದಿರಾಡ್ ಯದುಪುಂಗವಮ್ ॥೪॥

ಹೀಗೆ ಹೇಳಿ ಶಿಶುಪಾಲನು ಸಾಣೆಹಿಡಿದು ಹರಿತಮಾಡಿದ ಬಾಣಗಳಿಂದ ಯುದ್ಧದಲ್ಲಿ ಯದುಪುಂಗವನನ್ನು ಪೀಡಿಸಿದನು.

ಕಂಕಪತ್ರಚ್ಛದಾ ಬಾಣಾಃ ಚೇದಿರಾಜಧನುಶ್ಚ್ಯುತಾಃ ।
ವಿವಿಶುಸ್ತೇ ತದಾ ಕೃಷ್ಣಂ ಭುಜಂಗಾ ಇವ ಪರ್ವತಮ್ ॥೫॥

ಚೇದಿರಾಜನ ಬಿಲ್ಲಿನಿಂದ ಹೊರಟ ಕಂಕಪತ್ರವುಳ್ಳ ಬಾಣಗಳು ಸರ್ಪಗಳು ಪರ್ವತವನ್ನು ಪ್ರವೇಶಿಸುವಂತೆ ಕೃಷ್ಣನ ದೇಹವನ್ನು ಪ್ರವೇಶಿಸಿದವು.

ನಾದದಾನಸ್ಯ ಚೈದ್ಯಸ್ಯ ಶರಾನಭ್ಯಸ್ಯತೋಪಿ ವಾ ।
ದದೃಶುಸ್ತೇ ವಿವರಂ ಕೇಚಿದ್ ಗತಿಂ ವಾಯೋರಿವಾಂಬರೇ ॥೬॥

ಅವರಲ್ಲಿ ಯಾರೂ ಶಿಶುಪಾಲನು ಬತ್ತಳಿಕೆಯಿಂದ ಬಾಣಗಳನ್ನು ತೆಗೆಯುವುದಕ್ಕೂ ಧನುಸ್ಸಿನಿಂದ ಬಾಣವನ್ನು ಬಿಡುವುದಕ್ಕೂ ಮಧ್ಯೆ ಆಕಾಶದಲ್ಲಿ ವಾಯುವಿನ ಗತಿಯು ಹೇಗೆ ಕಾಣುವುದಿಲ್ಲವೋ ಹಾಗೆ ಅಂತರವನ್ನೇ ಕಾಣಲಿಲ್ಲ.

ಚೇದಿರಾಜಮಹಾಮೇಘಃ ಶರಜಾಲಾಂಬುಮಾಂಸ್ತದಾ ।
ಅಭ್ಯವರ್ಷದ್ ಹೃಷೀಕೇಶಂ ಪಯೋದ ಇವ ಪರ್ವತಮ್ ॥೭॥

ಮೇಘವು ಪರ್ವತದ ಮೇಲೆ ಮಳೆಗರೆದಂತೆ ಶರಜಾಲವೆಂಬ ನೀರಿನಿಂದ ಕೂಡಿದ್ದ ಶಿಶುಪಾಲನೆಂಬ ಮಹಾ ಮೇಘವು ಹೃಷೀಕೇಶನ ಮೇಲೆ ಬಾಣದ ಮಳೆಯನ್ನು ಸುರಿಸಿತು.

ತತಃ ಶಾರ್ಙ್ಗಮಮಿತ್ರಘ್ನಂ ಕೃತ್ವಾ ಸಶರಮಚ್ಯುತಃ ।
ಆಬಭಾಷೇ ಮಹಾಬಾಹುಃ ಸುನೀಥಂ ಪರವೀರಹಾ ॥೮॥

ಆಗ ಪರವೀರನಾಶಕನಾದ ಮಹಾಬಾಹುವಾದ ಅಚ್ಯುತನು ಶತ್ರುನಾಶಕವಾದ ತನ್ನ ಶಾರ್ಙ್ಗಧನುಸ್ಸಿಗೆ ಬಾಣವನ್ನು ಹೂಡಿ ಶಿಶುಪಾಲನನ್ನು ಕುರಿತು ಮಾತನಾಡಿದನು.

ಅಯಂ ತ್ವಾಂ ಮಾಮಕೋ ಬಾಣಃ ಚೇದಿರಾಜಂ ಮಹಾಸುರಮ್ ।
ಭೇತ್ತುಮರ್ಹತಿ ವೇಗೇನ ಮಹಾಶನಿರಿವಾಚಲಮ್ ॥೯॥

ಈ ನನ್ನ ಬಾಣವು ಮಹಾಸುರನು ಚೇದಿರಾಜನೂ ಆದ ನಿನ್ನನ್ನು ದೊಡ್ಡಸಿಡಿಲು ಪರ್ವತವನ್ನು ಭೇದಿಸಿದಂತೆ ತನ್ನ ವೇಗದಿಂದ ಭೇದಿಸುತ್ತದೆ.

ವೈಶಂಪಾಯನಃ

ಏವಂ ಬ್ರುವತಿ ಗೋವಿಂದೇ ತತಶ್ಚೇದಿಪತಿಃ ಪುನಃ ।
ಮುಮೋಚ ನಿಶಿತಾನನ್ಯಾನ್ ಕೃಷ್ಣಂ ಪ್ರತಿ ಶರಾನ್ ಬಹೂನ್ ॥೧೦॥

ಗೋವಿಂದನು ಹೀಗೆ ಹೇಳುತ್ತಿರಲು ಚೇದಿಪತಿಯಾದ ಶಿಶುಪಾಲನು ಪುನಃ ಕೃಷ್ಣನ ಮೇಲೆ ಹರಿತವಾದ ಅನೇಕ ಬಾಣಗಳನ್ನು ಪ್ರಯೋಗಿಸಿದನು.

ಅಥ ಬಾಣಾರ್ದಿತಃ ಕೃಷ್ಣಃ ಶಾರ್ಙ್ಗಮಾಯಮ್ಯ ದೀಪ್ತಿಮಾನ್ ।
ಮುಮೋಚ ನಿಶಿತಾನ್ ಬಾಣಾನ್ ಶತಶೋಽಥ ಸಹಸ್ರಶಃ ॥೧೧॥

ಆಗ ಬಾಣದ ಪೀಡೆಗೆ ಒಳಗಾದ ಕಾಂತಿವಂತನಾದ ಕೃಷ್ಣನು ಶಾರ್ಙ್ಗಧನುಸ್ಸನ್ನು ಬಗ್ಗಿಸಿ ನೂರದ ಸಾವಿರದ ಸಂಖ್ಯೆಯಲ್ಲಿ ಹರಿತವಾದ ಬಾಣಗಳನ್ನು ಪ್ರಯೋಗಿಸಿದನು.

ತಾನ್ ಶರಾಂಸ್ತು ಸ ಚಿಚ್ಛೇದ ಶರವರ್ಷೇಣ ಚೇದಿರಾಟ್ ।
ಷಡ್ಭಿಶ್ಚಾನ್ಯೈಸ್ತಥಾ ಬಾಣೈರ್ಯುಯುಧೇ ಚೇದಿಪುಂಗವಃ ॥೧೨॥

ಚೇದಿರಾಜನು ಆ ಶರವರ್ಷವನ್ನು ತನ್ನ ಬಾಣಗಳಿಂದ ತತ್ತರಿಸಿದನು. ಚೇದಿಪುಂಗವನಾದ ಅವನು ಪುನಃ ಆರು ಬಾಣಗಳನ್ನು ತೆಗೆದುಕೊಂಡು ಕೃಷ್ಣನ ಜೊತೆಯಲ್ಲಿ ಯುದ್ಧಮಾಡಿದನು.

ತತೋಽಸ್ತ್ರಂ ಸಹಸಾ ಕೃಷ್ಣಃ ಪ್ರಮುಮೋಚ ಜಗತ್ಪತಿಃ ।
ಅಸ್ತ್ರೇಣೈವ ಮಹಾವೀರ್ಯೋ ನಾಶಯಾಮಾಸ ಚೇದಿರಾಟ್ ॥೧೩॥

ಅನಂತರ ಜಗತ್ಪತಿಯಾದ ಕೃಷ್ಣನು ಇದ್ದಕ್ಕಿದ್ದಂತೆಯೇ ಅಸ್ತ್ರಪ್ರಯೋಗವನ್ನು ಮಾಡಿದನು. ಮಹಾವರಾಕ್ರಮಶಾಲಿಯಾದ ಶಿಶುಪಾಲನು ಸಹ ಅಸ್ತ್ರದಿಂದಲೇ ಅದನ್ನು ಉಪಶಮ ಗೊಳಿಸಿದನು.

ತತಃ ಶತಸಹಸ್ರೇಣ ಶರಾಣಾಂ ನತಪರ್ವಣಾಮ್ ।
ಸರ್ವತಃ ಸಮವಾಕೀರ್ಯ ಶೌರಿಂ ದಾಮೋದರಂ ತದಾ ॥೧೪॥

ನನಾದ ಬಲವಾನ್ ಕ್ರುದ್ಧಃ ಶಿಶುಪಾಲಃ ಪ್ರತಾಪವಾನ್ ।
ಇದಂ ಚೋವಾಚ ಸಂಕ್ರುದ್ಧಃ ಕೇಶವಂ ಪರವೀರಹಾ ॥೧೫॥

ಅದ್ಯ ತೇ ಮಾಮಕಾ ಬಾಣಾ ನೇಷ್ಯಂತಿ ತವ ಸಂಯುಗೇ ।
ಹತ್ವಾ ತ್ವಾಂ ಸಸುತಾಮಾತ್ಯಂ ಪಾಂಡವಾಂಶ್ಚ ತಪಸ್ವಿನಃ ॥೧೬॥

ಅನಂತರ ಬಾಗಿದ ತುದಿಗಳುಳ್ಳ ಒಂದು ಲಕ್ಷಬಾಣಗಳಿಂದ ಶಿಶುಪಾಲನು ದಾಮೋದರನನ್ನು ಪೀಡಿಸಿ ಪ್ರತಾಪಶಾಲಿಯೂ ಕ್ರುದ್ಧನೂ ಬಲಿಷ್ಠನೂ ಆದ ಅವನು ಮಹಾನಾದವನ್ನು ಮಾಡಿದನು. ಬಹಳ ಕೋಪಕ್ಕೆ ಒಳಗಾಗಿ ಪರವೀರ ಘಾತಕನಾದ ಅವನು ಕೇಶವನನ್ನು ಕುರಿತು ಹೀಗೆ ಮಾತನಾಡಿದನು. ಈ ದಿನ ನನ್ನ ಬಾಣಗಳು ಪುತ್ರಾ ಮಾತ್ಯರಿಂದ ಕೂಡಿದ ನಿನ್ನನ್ನು ಮತ್ತು ಶೋಚನೀಯರಾದ ಪಾಂಡವರನ್ನು ಯುದ್ಧದಲ್ಲಿ ಕೊಂದು ಯಮಲೋಕಕ್ಕೆ ಕಳುಹಿಸುತ್ತದೆ.

ಅನೃಣ್ಯಮದ್ಯ ಯಾಸ್ಯಾಮಿ ಜರಾಸಂಧಸ್ಯ ಧೀಮತಃ ।
ಕಂಸಸ್ಯ ಕೇಶಿನಶ್ಚೈವ ನರಕಸ್ಯ ತಥೈವ ಚ ॥೧೭॥

ಈ ದಿನ ನಾನು ಮೇಧಾವಿಯಾದ ಜರಾಸಂಧನ ಕಂಸನ ಕೇಶಿಯ ಮತ್ತು ನರಕಾಸುರನ ಋಣವನ್ನು ತೀರಿಸುವೆನು.

ಇತ್ಯುಕ್ತ್ವಾ ಕ್ರೋಧತಾಮ್ರಾಕ್ಷಃ ಶಿಶುಪಾಲೋ ಜನಾರ್ದನಮ್ ।
ಅದೃಶ್ಯಃ ಶರವರ್ಷೇಣ ಸರ್ವತಃ ಸಮವಾಕಿರತ್ ॥೧೮॥

ಹೀಗೆ ಹೇಳಿ ಕ್ರೋಧದಿಂದ ಕೆಂಪಾದ ಕಣ್ಣುಳ್ಳ ಆ ಶಿಶುಪಾಲನು ಅದೃಶ್ಯನಾಗಿ ಕೃಷ್ಣನ ಮೇಲೆ ಎಲ್ಲ ದಿಕ್ಕುಗಳಲ್ಲಿಯೂ ಬಾಣಗಳ ಮಳೆಯನ್ನು ಕರೆದನು.

ತತೋಽಸ್ತ್ರೇಣೈವ ಭಗವಾನಕೃಂತತ ಶರಾನ್ ಬಹೂನ್ ।
ನಿಷೃತ್ಯ ಚ ಶರಾನ್ ಸರ್ವಾನಂತರ್ಧಾಮಥ ಚಕ್ರತುಃ ।
ಅಂತರ್ಧಾನಗತೌ ವೀರೌ ಶುಶುಭಾತೇ ಮಹಾಬಲೌ ॥೧೯॥

ಆಗ ಭಗವಂತನಾದ ಕೃಷ್ಣನು ತನ್ನ ಅಸ್ತ್ರದಿಂದಲೇ ಬಾಣಗಳನ್ನು ನಾಶಮಾಡಿದನು. ಪರಸ್ಪರ ಬಾಣಗಳನ್ನು ನಾಶಮಾಡಿದ ಮೇಲೆ ಮಹಾಬಲಿಷ್ಠರಾದ ಆ ಇಬ್ಬರು ವೀರರು ಅಂತರ್ಧಾನವನ್ನು ಹೊಂದಿ ಶೋಭಿಸಿದರು.

ಸಾಧುಸಾಧ್ವಿತಿ ಭೂತಾನಿ ಪೂಜಯಾಮಾಸುರಂಬರೇ ।
ನ ದೃಷ್ಟಪೂರ್ವಮಸ್ಮಾಭಿರ್ಯುದ್ಧಮೇತಾದೃಶಂ ಪುರಾ ॥೨೦॥

ಅಂತರಿಕ್ಷದಲ್ಲಿ ಇದ್ದ ಭೂತಗಳು ಸಾಧು ಸಾಧು ಎಂದು ಹೇಳುತ್ತಾ ಇಬ್ಬರನ್ನೂ ಪ್ರಶಂಸಿಸಿದರು. ಇಂತಹ ಯುದ್ಧವನ್ನು ನಾವು ಹಿಂದೆ ನೋಡಲಿಲ್ಲ ಎಂದು ಹೇಳಿದರು.

ತತಃ ಕೃಷ್ಣಂ ಜಘಾನಾಶು ಶಿಶುಪಾಲೋ ಮಹಾಬಲಃ ।
ಕೃಷ್ಣೋಽಪಿ ಬಾಣೈರ್ವಿವ್ಯಾಧ ಪಂಚಭಿರ್ಯುಧಿ ದುರ್ಮದಮ್ ।
ತತಃ ಸುನೀಥಃ ಸಪ್ತತ್ಯಾ ನಾರಾಚೈರರ್ದಯದ್ ಬಲೀ ॥೨೧॥

ಅನಂತರ ಮಹಾಬಲನಾದ ಶಿಶುಪಾಲನು ಕೃಷ್ಣನನ್ನು ಬಾಣಗಳಿಂದ ಹೊಡೆದನು. ಕೃಷ್ಣನೂ ಸಹ ಯುದ್ಧದಲ್ಲಿ ದುರ್ಮದವನ್ನು ಹೊಂದಿದ್ದ ಶಿಶುಪಾಲನಿಗೆ ಐದು ಬಾಣಗಳನ್ನು ಪ್ರಯೋಗಮಾಡಿ ಅವನನ್ನು ಪೀಡಿಸಿದನು. ಅನಂತರ ಬಲಿಷ್ಠನಾದ ಶಿಶುಪಾಲನು ಎಪ್ಪತ್ತು ಬಾಣಗಳನ್ನು ಒಟ್ಟಿಗೆ ಪ್ರಯೋಗಿಸಿದನು.

ತತೋಽತಿವಿದ್ಧಃ ಕೃಷ್ಣೇನ ಸುನೀಥಃ ಕ್ರೋಧಮೂರ್ಚ್ಛಿತಃ ।
ವಿವ್ಯಾಧ ನಿಶಿತೈರ್ಬಾಣೈರ್ವಾಸುದೇವಂ ಸ್ತನಾಂತರೇ ।
ಪುನಃ ಕೃಷ್ಣಃ ತ್ರಿಭಿರ್ವಿದ್ಧ್ವಾ ನನಾದಾವಸರೇ ನೃಪ ॥೨೨॥

ಅನಂತ ಕೃಷ್ಣನಿಂದ ಬಹಳವಾದ ಪ್ರಹಾರವನ್ನು ತಿಂದ ಶಿಶುಪಾಲನು ಕ್ರೋಧ ಮೂರ್ಛಿತನಾಗಿ ಕೃಷ್ಣನನ್ನು ಸ್ತನಗಳ ಮಧ್ಯದಲ್ಲಿ ಬಾಣಪ್ರಯೋಗವನ್ನು ಮಾಡಿ ಪೀಡಿಸಿದನು. ಎಲೈ ರಾಜನೇ! ಕೃಷ್ಣನು ಪುನಃ ಮೂರು ಬಾಣಗಳಿಂದ ಶಿಶುಪಾಲನನ್ನು ಪೀಡಿಸಿ ಅಟ್ಟಹಾಸವನ್ನು ಮಾಡಿದನು.

ತತೋತಿದಾರುಣಂ ಯುದ್ಧಂ ಸಹಸಾ ಚಕ್ರತುಃ ಶರೈಃ ।
ತೌ ನಖೈರಿವ ಶಾರ್ದೂಲೌ ದಂತೈರಿವ ಗಜೋತ್ತಮೌ ॥೨೩॥

ದಂಷ್ಟ್ರಾಭಿರಿವ ಪಂಚಾಸ್ಯೌ ತುಂಡಕೈರಿವ ಕುಕ್ಕುಟೌ ।
ದಾರಯೇತಾಂ ಶರೈಸ್ತೀಕ್ಷ್ಣೈರನ್ಯೋನ್ಯಂ ಯುಧಿ ತಾವುಭೌ ।
ತತೋ ಮುಮುಚತುಃ ಕ್ರುದ್ಧೌ ಶರವರ್ಷಮನುತ್ತಮಮ್ ॥೨೪॥

ಅನಂತರ ಅವರಿಬ್ಬರೂ ಶಾರ್ದೂಲಗಳು ನಖದಿಂದ ಹೋರಾಡಿ ದಂತೆ ಶ್ರೇಷ್ಠವಾದ ಗಜಗಳು ದಂತಗಳಿಂದ ಯುದ್ಧಹೂಡಿದಂತೆ, ಎರಡು ಸಿಂಹಗಳು ಕೊರೆದಾಡೆಗಳಿಂದ ಯುದ್ಧಮಾಡಿದಂತೆ, ಕೋಳಿಗಳು ಕೊಕ್ಕಿನಿಂದ ಯುದ್ಧಮಾಡಿದಂತೆ, ಪರಸ್ಪರವಾಗಿ ಇದ್ದಕ್ಕಿದ್ದಂತಯೇ ಅತಿ ಘೋರವಾದ ಯುದ್ಧವನ್ನು ಮಾಡಿದರು. ಹೀಗೆ ಪರಸ್ಪರವಾಗಿ ಒಬ್ಬರನೊಬ್ಬರು ಘಾಸಿಗೊಳಿಸಿ ಅನಂತರ ಇಬ್ಬರೂ ತಮ್ಮ ಪ್ರತಿಪಕ್ಷದ ಮೇಲೆ ಶ್ರೇಷ್ಠವಾದ ಬಾಣದ ಮಳೆಯನ್ನು ಕರೆದರು.

ಶರೈರೇವ ಶತಂ ಜಿತ್ವಾ ಮಹಾಸುರಸುರೋತ್ತಮೌ ।
ಚಕ್ರಾತೇಸ್ತ್ರಮಯಂ ಯುದ್ಧಂ ಘೋರಂ ತದತಿಮಾನುಷಮ್ ॥೨೫॥

ಆಗ್ನೇಯಮಸ್ತ್ರಂ ಮುಮುಚೇ ಶಿಶುಪಾಲಃ ಪ್ರತಾಪವಾನ್ ।
ವಾರುಣೇನಾಸ್ತ್ರಯೋಗೇನ ನಾಶಯಾಮಾಸ ಕೇಶವಃ ॥೨೬॥

ಮಹಾಸುರನಾದ ಶಿಶುಪಾಲನು ಮತ್ತು ಸುರೋತ್ತಮನಾದ ಕೃಷ್ಣನು ಒಬ್ಬರ ಬಾಣಗಳನ್ನು ಇನ್ನೊಬ್ಬರು ಬಾಣಗಳಿಂದ ಕತ್ತರಿಸುತ್ತಲೇ ಅತಿಮಾನುಷವಾದ ಘೋರವಾದ ಅಸ್ತ್ರ ಯುದ್ಧವನ್ನು ಮಾಡಿದರು. ಶಿಶುಪಾಲನು ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದನು. ಕೇಶವನು ವಾರುಣಾಸ್ತ್ರವನ್ನು ಪ್ರಯೋಗಿಸಿ ಅದನ್ನು ನಾಶಗೊಳಿಸಿದನು.

ಕೌಬೇರಮಸ್ತ್ರಂ ಸಹಸಾ ಚೇದಿರಾಟ್ ಪ್ರಮುಮೋಚ ಹ ।
ಕೌಬೇರೇಣೈವ ಚಾಸ್ತ್ರೇಣ ನಾಶಯತ್ ಜಗತಃ ಪ್ರಭುಃ ॥೨೭॥

ತಕ್ಷಣ ಶಿಶುಪಾಲನು ಕುಬೇರಾಸ್ತ್ರವನ್ನು ಪ್ರಯೋಗಿಸಿದನು. ಜಗತ್ಪತಿಯಾದ ಕೃಷ್ಣನು ಕುಬೇರಾಸ್ತ್ರದಿಂದಲೇ ಅದನ್ನು ನಾಶಮಾಡಿದನು.

ಯಾಮ್ಯಮಸ್ತ್ರಂ ಮಹಾಕ್ರುದ್ಧೋ ಮುಮುಚೇ ಕಾಲಮೋಹಿತಃ ।
ಯಾಮ್ಯೇನೈವಾಸ್ತ್ರಯೋಗೇನ ಯಾಮ್ಯಮಸ್ತ್ರಂ ವ್ಯನಾಶಯತ್ ॥೨೭॥

ಬಹಳ ಕೋಪಗೊಂಡ ಶಿಶುಪಾಲನು ಕಾಲಮೋಹಿತನಾಗಿ ಯಮಾಸ್ತ್ರವನ್ನು ಪ್ರಯೋಗಮಾಡಿದನು. ಕೃಷ್ಣನು ಯಮಾಸ್ತ್ರಪ್ರಯೋಗದಿಂದಲೇ ಅದನ್ನು ನಾಶಗೊಳಿಸಿದನು.

ಗಾಂಧರ್ವೇಣ ಚ ಗಾಂಧರ್ವಂ ಮಾನವಂ ಮಾನವೇನ ಚ ।
ವಾಯವ್ಯೇನ ಚ ವಾಯವ್ಯಂ ರೌದ್ರಂ ರೌದ್ರೇಣ ಚಾಭಿಭೂಃ ॥೨೮॥

ಐಂದ್ರಮೈಂದ್ರೇಣ ಭಗವಾನ್ ವೈಷ್ಣವೇನ ಚ ವೈಷ್ಣವಮ್ ।
ಏವಮಸ್ತ್ರಾಣಿ ಕುರ್ವಾಣೌ ಯುಯುಧಾತೇ ಮಹಾರಥೌ ॥೨೯॥

ಗಾಂಧರ್ವಾಸ್ತ್ರದಿಂದ ಗಾಂಧರ್ವಾಸ್ತ್ರವನ್ನೂ ಮಾನವಾಸ್ತ್ರದಿಂದ ಮಾನವಾಸ್ತ್ರವನ್ನೂ ವಾಯವ್ಯಾಸ್ತ್ರದಿಂದ ವಾಯವ್ಯಾಸ್ತ್ರವನ್ನೂ ಪಾಶುಪತಾಸ್ತ್ರದಿಂದ ಪಾಶುಪತಾಸ್ತ್ರವನ್ನೂ ಇಂದ್ರಾಸ್ತ್ರದಿಂದ ಇಂದ್ರಾಸ್ತ್ರವನ್ನೂ ವೈಷ್ಣವಾಸ್ತ್ರದಿಂದ ವೈಷ್ಣವಾಸ್ತ್ರವನ್ನೂ ಹೀಗೆ ಮಹಾರಥರಾದ ಅವರು ಪರಸ್ಪರವಾಗಿ ಅಸ್ತ್ರಗಳನ್ನು ಪ್ರಯೋಗಿಸುತ್ತಾ ಯುದ್ಧವನ್ನುಮಾಡಿದರು.

ತತೋ ಮಾಯಾಂ ವಿಕುರ್ವಾಣೋ ದಮಘೋಷಸುತೋ ಬಲೀ ।
ಗದಾಮುಸಲವರ್ಷಂ ಚ ಶಕ್ತಿತೋಮರಸಾಯಕಾನ್ ॥೩೦॥

ಪರಶ್ವಧಮುಸುಂಡೀಶ್ಚ ಪಾತಯಾಮಾಸ ಚೇದಿರಾಟ್ ।
ಅಮೋಘಾಸ್ತ್ರೇಣ ಭಗವಾನ್ ನಾಶಯಾಮಾಸ ಕೇಶವಃ ॥೩೧॥

ಅನಂತರ ದಮಘೋಷಸುತನಾದ ಬಲಿಷ್ಠನಾದ ಶಿಶುಪಾಲನು ಮಾಯಾಯುದ್ಧವನ್ನುಮಾಡಿ ಕೃಷ್ಣನ ಮೇಲೆ ಗದಾಮುಸಲಗಳ ಮಳೆಯನ್ನೂ ಶಕ್ತಿ ತೋಮರ ಮತ್ತು ಬಾಣಗಳನ್ನೂ ಪರಶು ಮತ್ತು ಮುಸುಂಡಿಗಳನ್ನೂ ಬೀಳಿಸಿದನು. ಭಗವಂತನಾದ ಕೇಶವನು ಅಮೋಘಾಸ್ತ್ರದಿಂದ ಅವೆಲ್ಲವನ್ನೂ ನಾಶಮಾಡಿದನು.

ಶಿಲಾವರ್ಷಂ ಮಹಾಘೋರಂ ಪಾತಯಾಮಾಸ ಕೇಶವೇ ।
ವಜ್ರಾಸ್ತ್ರೇಣಾಭಿಸಂಕ್ರುದ್ಧಃ ಚೂರ್ಣಮೇವಾಕರೋತ್ ಪ್ರಭುಃ ॥೩೨॥

ಶಿಶುಪಾಲನು ಮಹಾಘೋರವಾದ ಶಿಲಾವಸ್ತ್ರವನ್ನು ಕೇಶವನ ಮೇಲೆ ಪ್ರಯೋಗಿಸಿದನು. ಅವನಿಗಿಂತ ಹೆಚ್ಚು ಕೋಪಗೊಂಡ ಪ್ರಭುವಾದ ಕೃಷ್ಣನು ವಜ್ರಾಸ್ತ್ರದಿಂದ ಅದನ್ನು ಪುಡಿ ಪುಡಿಮಾಡಿದನು.

ಜಲವರ್ಷಂ ತತೋ ಘೋರಂ ವ್ಯಸೃಜಚ್ಚೇದಿಪುಂಗವಃ ।
ವಾಯವ್ಯಾಸ್ತ್ರೇಣ ಭಗವಾನ್ ವ್ಯಾಕ್ಷಿಪಚ್ಛತಶೋ ಹರಿಃ ॥೩೩॥

ಅನಂತರ ಚೇದಿಪುಂಗವನಾದ ಶಿಶುಪಾಲನು ವಾರುಣಾಸ್ತ್ರದಿಂದ ಘೋರವಾದ ಜಲವರ್ಷವನ್ನು ಸೃಷ್ಟಿಸಿದನು. ಭಗವಂತನಾದ ಹರಿಯು ವಾಯವ್ಯಾಸ್ತ್ರದಿಂದ ಅದನ್ನು ಸಾವಿರಾರು ಕಣಗಳನ್ನಾಗಿ ಹಾರಿಸಿಬಿಟ್ಟನು.

ನಿಹತ್ಯ ಸರ್ವಮಾಯಾಂ ವೈ ಸುನೀಥಸ್ಯ ಜನಾರ್ದನಃ ।
ಸ ಮುಹೂರ್ತಂ ಚಕಾರಾಶು ದ್ವಂದ್ವಯುದ್ಧಂ ಮಹಾರಥಃ ॥೩೪॥

ಮಹಾರಥನಾದ ಜನಾರ್ದನನು ಶಿಶುಪಾಲನ ಎಲ್ಲಾ ಮಾಯೆಗಳನ್ನೂ ಸಂಹರಿಸಿ ಒಂದು ಮುಹೂರ್ತಕಾಲ ಅವನ ಜೊತೆಯಲ್ಲಿ ದ್ವಂದ್ವಯುದ್ಧವನ್ನು ಮಾಡಿದನು.

ಬಾಣಯುದ್ಧಂ ಚ ಕುರ್ವಾಣೋ ಭರ್ತ್ಸಯಾಮಾಸ ಚೇದಿರಾಟ್ ।
ದಮಘೋಷಸುತೋ ಧೃಷ್ಟಮುವಾಚ ಮಧುಪುಂಗವಮ್ ॥೩೫॥

ಅನಂತರ ದಮಘೋಷಸುತನಾದ ಚೇದಿರಾಜನಾದ ಶಿಶುಪಾಲನು ಪುನಃ ಬಾಣಯುದ್ಧವನ್ನು ಮಾಡುತ್ತಾ ಮಧುಪುಂಗವನಾದ ಕೃಷ್ಣನನ್ನು ಉದ್ಧತವಾದ ವಾಕ್ಯದಿಂದ ಹೀಯಾಳಿಸಿದನು.

ಅದ್ಯ ಕೃಷ್ಣಮಕೃಷ್ಣಂ ಹಿ ಕುರ್ವಂತು ಮಮ ಸಾಯಕಾಃ ।
ಇತ್ಯೇವಮುಕ್ತ್ವಾ ದುಷ್ಟಾತ್ಮಾ ಶರವರ್ಷಂ ಜನಾರ್ದನೇ ।
ಮುಮೋಚ ಪುರುಷವ್ಯಾಘ್ರೋ ಘೋರಮಾಸ್ಥಾಯ ತದ್ವಪುಃ ॥೩೬॥

ಈ ದಿನ ನನ್ನ ಬಾಣಗಳು ಕೃಷ್ಣನನ್ನು ಅಕೃಷ್ಣನನ್ನಾಗಿ ಮಾಡಲಿ (ಇಲ್ಲದಿರುವಂತೆ ಮಾಡಲಿ) ಹೀಗೆ ಹೇಳಿ ದುಷ್ಟನೂ ಪುರುಷವ್ಯಾಘ್ರನೂ ಆದ ಶಿಶುಪಾಲನು ಘೋರವಾದ ದೇಹವನ್ನು ತೆಗೆದುಕೊಂಡು ಕೃಷ್ಣನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ಶರಸಂಕೃತ್ತಗಾತ್ರಸ್ತು ಕ್ಷಣೇನ ಯದುಪುಂಗವಃ ।
ರುಧಿರಂ ಪರಿಸುಸ್ರಾವ ಸೋಽತೀವ ಪುರುಷೋತ್ತಮಃ ॥೩೭॥

ಯದುಪುಂಗವನಾದರೂ ಬಾಣಗಳಿಂದ ಗಾಯಹೊಂಡ ಶರೀರವುಳ್ಳವನಾಗಿ ಪುರುಷೋತ್ತಮನಾದ ಅವನು ತನ್ನ ಅವಯವಗಳಿಂದ ಬಹಳ ರಕ್ತವನ್ನು ಸುರಿಸಿದನು.

ನ ಯಂತಾ ನ ರಥೋ ವಾಪಿ ನ ಚಾಶ್ವಾಃ ಪವನೋಪಮಾಃ ।
ದೃಶ್ಯಂತೇ ಶರಸಂಛನ್ನಾ ಆವಿಗ್ನಮಭವಜ್ಜಗತ್ ।
ಕೇಶವಂ ತದವಸ್ಥಂ ತು ದೃಷ್ಟ್ವಾ ಭೂತಾನಿ ಚುಕ್ರುಶುಃ ॥೩೮॥

ಕೇಶವನ ರಥವಾಗಲೀ ಸಾರಥಿಯಾಗಲೀ ವಾಯುವೇಗವುಳ್ಳ ಅಶ್ವಗಳಾಗಲೀ ಎಲ್ಲವೂ ಬಾಣಗಳ ಮಳೆಯಲ್ಲಿ ಮುಳುಗಿಹೋಗಿ ಯಾವುದೂ ಕಾಣುತ್ತಿರಲಿಲ್ಲ. ಜಗತ್ತೆಲ್ಲವೂ ಉದ್ವೇಗಕ್ಕೆ ಒಳಗಾಯಿತು. ಕೇಶವನು ಅಂತಹ ಅವಸ್ಥೆಯನ್ನು ಹೊಂದಿದುದನ್ನು ನೋಡಿ ಎಲ್ಲ ಭೂತಗಳು ಕಿರುಚಿದವು.

ದಾರುಕಸ್ತು ತದಾ ಪ್ರಾಹ ಕೇಶವಂ ಪರವೀರಹಾ ।
ನೇದೃಶೋ ದೃಷ್ಟಪೂರ್ವೋ ಹಿ ಸಂಗ್ರಾಮೋ ಯಾದೃಶೋ ಮಯಾ ॥೩೯॥

ಪರವೀರನಾಶಕನಾದ ದಾರುಕನು ಆಗ ಕೇಶವನನ್ನು ಕುರಿತು ಇದಕ್ಕೆ ಸದೃಶವಾದ ಯುದ್ಧವನ್ನು ನಾನು ಹಿಂದೆ ಎಂದೂ ನೋಡಿರಲಿಲ್ಲ ಎಂದು ಹೇಳಿದನು.

ಸ್ಥಾತವ್ಯಮಿತಿ ತಿಷ್ಠಾಮಿ ತ್ವತ್ಪ್ರಸಾದೇನ ಮಾಧವ ।
ಅನ್ಯಥಾ ನ ಚ ಮೇ ಪ್ರಾಣಾ ಧಾರಯೇಯುರ್ಜನಾರ್ದನ ॥೪೦॥

ಮಾಧವನೇ! ನಾನು ಇಲ್ಲಿ ಇರಬೇಕು ಎಂಬ ಸಂಕಲ್ಪದಿಂದ ಮಾತ್ರ ನಿನ್ನ ಅನುಗ್ರಹದಿಂದ ಇದ್ದೇನೆ. ಜನಾರ್ದನನೇ! ಇಲ್ಲದಿದ್ದರೆ ಈ ವೇಳೆಗಾಗಲ ನನ್ನ ಪ್ರಾಣಗಳು ಉಳಿಯುತ್ತಿರಲಿಲ್ಲ.

ಇತಿ ಸಂಚಿಂತ್ಯಗೋವಿಂದ ಕ್ಷಿಪ್ರಮೇವ ವಧಂ ಕುರು ।
ಏವಮುಕ್ತಸ್ತು ಸೂತೇನ ಕೇಶವೋ ವಾಕ್ಯಮಬ್ರವೀತ್ ॥೪೧॥

ಗೋವಿಂದನೇ! ಇದನ್ನು ಯೋಚಿಸಿ ಶೀಘ್ರವಾಗಿ ಅವನ ವಧೆಯನ್ನು ಮಾಡು ಹೀಗೆ ಸೂತನಿಂದ ಹೇಳಲ್ಪಟ್ಟವನಾಗಿ ಕೇಶವನು ಮಾತನಾಡಿದನು.

ಏಷ ಹ್ಯತಿಬಲೋ ದೈತ್ಯೋ ಹಿರಣ್ಯಕಶಿಪುಃ ಪುರಾ ।
ರಿಪುಃ ಸುರಾಣಾಂ ದೈತೇಯೋ ವರದಾನೇನ ಗರ್ವಿತಃ ॥೪೨॥

ಇವನು ಹಿಂದೆ ದಿತಿಯ ಮಗನಾಗಿ ಹಿರಣ್ಯಕಶಿವು ಎಂಬ ಹೆಸರಿನಿಂದ ಅತ್ಯಂತ ಬಲಿಷ್ಠನಾಗಿದ್ದನು. ವರದಾನದಿಂದ ದರ್ಪಿತನಾಗಿದ್ದ ಈ ದಿತಿಪುತ್ರನು ದೇವತೆಗಳಿಗೆ ಶತ್ರುವಾದನು.

ಅಥಾಸೀದ್ ರಾವಣೋ ನಾಮ ರಕ್ಷೇಂದ್ರೋ ಹ್ಯೇಷ ವೀರ್ಯವಾನ್ ।
ಗಿರೀಶವರವೀರ್ಯೇಣ ಬಲಂ ನಾಗಣಯನ್ಮಮ ॥೪೩॥

ಅನಂತರ ಇವನೇ ಅತಿ ಪರಾಕ್ರಮಶಾಲಿಯಾದ ರಾಕ್ಷಸೇಂದ್ರನಾದ ರಾವಣನಾದನು. ಆಗ ರುದ್ರದೇವರ ವರದ ಬಲದಿಂದ ಅವನು ನನ್ನ ಸಾಮರ್ಥ್ಯವನ್ನು ಏಣಿಸಲೇ ಇಲ್ಲ.

ಅಸ್ಯಾಹಂ ಮೃತ್ಯುರ್ಭವಿತಾ ಕಾಲೇ ಕಾಲೇ ದುರಾತ್ಮನಃ ।
ನ ಭೇತವ್ಯಂ ತ್ವಯಾ ಸೂತ ನೈಷು ಚಿನ್ಮಯಿ ತಸ್ಥಿರೇ ॥೪೪॥

ಈ ದುರಾತ್ಮನಿಗೆ ನಾನು ಕಾಲಕಾಲಕ್ಕೆ ಮೃತ್ಯವಾಗುವೆನು. ಸೂತನೇ ಹೆದರಬೇಡ ಯಾವ ಬಾಣಗಳೂ ನನ್ನನ್ನು ಪ್ರವೇಶಿಸಿಲ್ಲ. (ಅಸುರಜನಮೋನಾರ್ಥವಾಗಿ ಮಾತ್ರ ಶರವಿದ್ಧನಂತೆ ತೋರಿಸಿಕೊಂಡು ರಕ್ತವನ್ನು ಸುರಿಸಿದ್ದೇನೆ.)

ಇತ್ಯೇವಮುಕ್ತ್ವಾ ಭಗವಾನ್ ನನರ್ದ ಗರುಡಧ್ವಜಃ ।
ಪಾಂಚಜನ್ಯಂ ಮಹಾಶಂಖಂ ಪೂರಯಾಮಾಸ ಕೇಶವಃ ॥೪೫॥

ಹೀಗೆ ಗರುಡಧ್ವಜನಾದ ಕೇಶವನು ಸಿಂಹನಾದವನ್ನು ಮಾಡಿ ತನ್ನ ಪಾಂಚಜನ್ಯ ಮಹಾ ಶಂಖವನ್ನು ಊದಿದನು.

ಸಮ್ಮೋಹಯಿತ್ವಾ ಭಗವಾನಥ ಚಕ್ರಂ ಸಮಾದದೇ ।
ಚಿಚ್ಛೇದ ಚ ಸುನೀಥಸ್ಯ ಶಿರಶ್ಚೈದ್ಯಸ್ಯ ಪಶ್ಯತಃ ।
ಸ ಪಪಾತ ಮಹಾಬಾಹುರ್ವಜ್ರಾಹತ ಇವಾಚಲಃ ॥೪೬॥

ಭಗವಂತನು ಶಿಶುಪಾಲನಿಗೆ ಸಮ್ಮೋಹವನ್ನು ಉಂಟುಮಾಡಿ ತನ್ನ ಕೈಗೆ ಚಕ್ರವನ್ನು ತೆಗೆದುಕೊಂಡು ಶಿಶುಪಾಲನ ತಲೆಯನ್ನು ಕತ್ತರಿಸಿದನು. ಶಿಶುಪಾಲನು ವಜ್ರದಿಂದ ಛೇದಿಸಲ್ಪಟ್ಟ ಪರ್ವತದಂತೆ ಭೂಮಿಗೆ ಬಿದ್ದನು.

ತತಶ್ಚೇದಿಪತೇರ್ದೇಹಾತ್ ತೇಜೋಗ್ರ್ಯಂ ದದೃಶುರ್ನೃಪಾಃ ।
ಉತ್ಪತಂತಂ ತದಾ ರಾಜನ್ ಸುವೋಂತಾದಿವ ಭಾಸ್ಕರಮ್ ॥೪೭॥

ಎಲೈ ರಾಜನೇ! ಆಗ ರಾಜರು ಶಿಶುಪಾಲನ ದೇಹದಿಂದ ಹೊರಟ ಶ್ರೇಷ್ಠವಾದ ಜ್ಯೋತಿಯನ್ನು ಸ್ವರ್ಗದಿಂದ ಉದಯಿಸುವ ಸೂರ್ಯನು ಮೇಲೇರುವಂತೆ ಶಿಶುಪಾಲನ ದೇಹದಿಂದ ಹೊರಬಂದುದನ್ನು ನೋಡಿದರು.

ತತಃ ಕಮಲಪತ್ರಾಕ್ಷಂ ಕೃಷ್ಣಂ ಲೋಕನಮಸ್ಕೃತಮ್ ।
ಉಪಾವರ್ತತ ತತ್ತೇಜೋ ವಿವೇಶ ಚ ಜನಾಧಿಪ ॥೪೮॥

ಜನಾಧಿಪನೇ! ಅನಂತರ ಆ ತೇಜಸ್ಸು ಲೋಕನಮಸ್ಕೃತನಾದ ಕಮಲನಯನನಾದ ಕೃಷ್ಣನ ಬಳಿಗೆ ಬಂದು ಪ್ರವೇಶಿಸಿತು.

ತದದ್ಭುತಂ ಚ ದದೃಶುಃ ಸರ್ವ ಏವ ಮಹೀಕ್ಷಿತಃ ।
ಯದ್ ವಿವೇಶ ಮಹಾಬಾಹುಂ ತತ್ ತೇಜಃ ಪುರುಷೋತ್ತಮಮ್ ॥

ಆ ತೇಜಸ್ಸು ಮಹಾಬಾಹುವಾದ ಪುರುಷೋತ್ತಮನನ್ನು ಪ್ರವೇಶಿಸಿದ ಅದ್ಭುತ ದೃಶ್ಯವನ್ನು ಎಲ್ಲಾ ರಾಜರೂ ನೋಡಿದರು.

ಅನಭ್ರಂ ಚ ವವರ್ಷೇ ದ್ಯೌಃ ಪಪಾತ ಜ್ವಲಿತಾऽಶನಿಃ ।
ಕೃಷ್ಣೇನ ನಿಹತೇ ಚೈದ್ಯೇ ಚಚಾಲ ಚ ವಸುಂಧರಾ ॥೫೦॥

ತತಃ ಸರ್ವೇ ಮಹೀಪಾಲಾ ನಾಬ್ರುವಂಸ್ತತ್ರ ಕಿಂಚನ ।
ತದಾ ಸಂಕ್ರುದ್ಧಮನಸಃ ಪ್ರೇಕ್ಷಮಾಣಾಃ ಪರಸ್ಪರಮ್ ॥೫೧॥

ಕೃಷ್ಣನು ಶಿಶುಪಾಲನನ್ನು ಸಂಹರಿಸುತ್ತಿರಲು ಆಕಾಶದಲ್ಲಿ ಮೋಡವಿಲ್ಲದೆ ಮಳೆಯು ಉಂಟಾಯಿತು. ಉರಿಯುತ್ತಿರುವ ಸಿಡಿಲುಗಳು ಮೂಡಿ ಬಂದವು. ಭೂಮಿಯೂ

ಸಹ ನಡುಗಿತು. ಆಗ ಆ ರಾಜರೆಲ್ಲರೂ ಕೋಪಗೊಂಡ ಮನಸ್ಸಳ್ಳವರಾಗಿ ಒಬ್ಬರನ್ನೊಬ್ಬರು ನೋಡುತ್ತಾಏನೂ ಮಾತನಾಡದೆ ನಿಂತರು.

ಹಸ್ಪೈರ್ಹಸ್ತಾಗ್ರಮಪರೇ ಪ್ರತ್ಯಪಿಂಕ್ಷನ್ನಮರ್ಷಣಾಃ ।
ಅಪರೇ ದಶನೈರೋಷ್ಠಂ ದದಂಶುಃ ಕ್ರೋಧಮೂರ್ಚ್ಛಿತಾಃ ॥೫೨॥

ಕ್ರೋಧಗೊಂಡ ಇನ್ನು ಕೆಲವರು ತಮ್ಮ ಕೈಗಳಿಂದ ಕೈಗಳನ್ನು ಹೊಸಕಿದರು. ಇನ್ನು ಕೆಲವರು ಕ್ರೋಧ ಮೂರ್ಚ್ಛಿತರಾಗಿ ಹಲ್ಲುಗಳಿಂದ ತಮ್ಮ ತುಟಿಗಳನ್ನು ಕಡಿದರು.

ರಹಸ್ತು ಕೇಚಿದ್ ವಾರ್ಷ್ಣೇಯಂ ಪ್ರಶಶಂಸುರ್ಮಹಾರಥಾಃ ।
ಕೇಚಿದೇವ ತು ಸಂಕ್ರುದ್ಧಾ ಮಧ್ಯಸ್ಥಾಸ್ತ್ವಪರೇऽಭವನ್ ॥೫೩॥

ಇನ್ನು ಕೆಲವು ಮಹಾರಥರು ರಹಸ್ಯವಾಗಿಯೇ ಕೃಷ್ಣನನ್ನು ಸ್ತೋತ್ರಮಾಡಿದರು. ಕೆಲವರು ಮಾತ್ರ ಕೋಪಗೊಂಡರು. ಇನ್ನು ಕೆಲವು ಮಂದಿ ತಟಸ್ಥರಾಗಿದ್ದರು.

ಯೇ ದೇವಗಂಧರ್ವಗಣಾ ರಾಜಾನೋ ಭುವಿ ವಿಶ್ರುತಾಃ ।
ತೇ ಪ್ರಣಾಮಂ ಹೃಷೀಕೇಶೇ ಪ್ರಕುರ್ವಂತಿ ಮಹಾತ್ಮನಿ ॥೫೪॥

ದೇವಗಂಧರ್ವಗಣಗಳಿಂದ ಬಂದು ಭೂಮಿಯಲ್ಲಿಪ್ರಖ್ಯಾತರಾದ ರಾಜರೆಲ್ಲರೂ ಮಹಾತ್ಮನಾದ ಹೃಷಿಕೇಶನಿಗೆ ಪ್ರಣಾಮವನ್ನು ಮಾಡಿದರು.

ಯೇ ತ್ವಾಸುರಗಣಾಃ ಪಕ್ಷಾಃ ಸಂಭೂತಾಃ ಕ್ಷತ್ರಿಯಾ ಇಹ ।
ತೇ ನಿಂದಂತಿ ಹೃಷೀಕೇಶಂ ದುರಾತ್ಮಾನೋ ಗತಾಯುಷಃ ॥೫೫॥

ಯಾವ ಕ್ಷತ್ರಿಯರು ಅಸುರರ ಗಣದಿಂದ ಬಂದು ಅಸುರರ ಪಕ್ಷವನ್ನು ಹಿಡಿದಿದ್ದರೋ ಮುಮೂರ್ಷುಗಳಾದ ಆ ದುರಾತ್ಮರು ಹೃಷೀಕೇಶನನ್ನು ನಿಂದಿಸಿದರು.

ಪ್ರಜಾಪತಿಗಣಾ ಯೇ ತು ಮಧ್ಯಸ್ಥಾಶ್ಚ ಮಹಾತ್ಮನಾಮ್ ।
ಬ್ರಹ್ಮರ್ಷಯಶ್ಚ ಸಿದ್ಧಾಶ್ಚ ಗಂಧರ್ವೋರಗಚಾರಣಾಃ ।
ತೇ ವೈ ಸ್ತುವಂತಿ ಗೋವಿಂದಂ ಸ್ತೋತ್ರೈಶ್ಚ ಗುಣಸಂಯುತೈಃ ॥೫೬॥

ಬ್ರಹ್ಮ ಮೊದಲಾದ ಪ್ರಜಾಪತಿಗಳ ಸಮೂಹವು ಮಹಾತ್ಮನಾದ ಕೃಷ್ಣನ ವಿಷಯದಲ್ಲಿ ಮಧ್ಯಸ್ಥರಾಗಿದ್ದರು. ಬ್ರಹ್ಮರ್ಷಿಗಳು ಸಿದ್ಧರು ಗಂಧರ್ವೋರಗ ಚಾರಣರು ಗೋವಿಂದನನ್ನು ಗುಣಯುಕ್ತವಾದ ಸ್ತೋತ್ರಗಳಿಂದ ಸ್ತೋತ್ರಮಾಡಿದರು.

ಪರಸ್ಪರಂ ಚ ನೃತ್ಯಂತಿ ಗೀತೇನ ವಿವಿಧೇನ ಚ ।
ಉಪತಿಷ್ಠಂತಿ ಗೋವಿಂದಂ ಪ್ರೀತಿಯುಕ್ತಾ ಮಹಾತ್ಮನಿ ॥೫೭॥

ಮಹಾತ್ಮನಾದ ಗೋವಿಂದನಲ್ಲಿ ಪ್ರೀತಿಯುಳ್ಳವರಾಗಿ ಅನೇಕ ಗೀತೆಗಳನ್ನು ಹಾಡುತ್ತಾ ನೃತ್ಯವನ್ನು ಮಾಡುತ್ತಾ ಕೃಷ್ಣನನ್ನು ಸ್ತೋತ್ರಮಾಡಿದರು.

ಪ್ರಹೃಷ್ಟಾಃ ಕೇಶವಂ ಜಗ್ಮುಃ ಪ್ರಶಶಂಸುರ್ಮಹರ್ಷಯಃ ।
ಬ್ರಾಹ್ಮಣಾಶ್ಚಾಪಿ ಸುಪ್ರೀತಾಃ ಪಾರ್ಥಿವಾಶ್ಚ ಮಹಾಬಲಾಃ ॥೫೮॥

ಸಂತೋಷಗೊಂಡ ಮಹರ್ಷಿಗಳು ಕೃಷ್ಣನ ಬಳಿಗೆ ಹೋಗಿ ಸ್ತೋತ್ರಮಾಡಿದರು. ಸುಪ್ರೀತರಾದ ಬ್ರಾಹ್ಮಣರು ಮಹಾಬಲರಾದ ಅನೇಕ ರಾಜರೂ ಸಹ ಹಾಗೆಯೇ ಮಾಡಿದರು.

ಪಾಂಡವಸ್ತ ಬ್ರವೀದ್ ಭ್ರಾತೄನ್ ಸಂಸ್ಕಾರೇಣ ಮಹೀಪತಿಮ್ ।
ದಮಘೋಷಾತ್ಮಜಂ ಶೂರಂ ಸಂಸ್ಕಾರಯತ ಮಾಚಿರಮ್ ॥೫೯॥

ಪಾಂಡು ಪುತ್ರನಾದ ಧರ್ಮರಾಜನು ತಮ್ಮಂದಿರನ್ನು ಕುರಿತು ದಮಘೋಷನಾದ ಶಿಶುಪಾಲನಿಗೆ ಬೇಗ ಅಂತ್ಯ ಸಂಸ್ಕಾರವನ್ನು ಮಾಡಿ ಎಂದು ಹೇಳಿದನು.

ಕುರುರಾಜವಚಃ ಶ್ರುತ್ವಾ ಭ್ರಾತರಸ್ತೇ ತ್ವರಾನ್ವಿತಾಃ ।
ತಥಾ ತತ್ ಕೃತವಂತಸ್ತೇ ಭ್ರಾತುರ್ವೈ ಶಾಸನಂ ತದಾ ॥೬೦॥

ಕುರುರಾಜನಾದ ಧರ್ಮರಾಜನ ಮಾತನ್ನು ಕೇಳಿದ ಆ ತಮ್ಮಂದಿರು ತ್ವರೆಯಿಂದ ಕೂಡಿದವರಾಗಿ ತಮ್ಮ ಅಣ್ಣನ ಶಾಸನವನ್ನು ನೆರವೇರಿಸಿದರು.

ಚೇದೀನಾಮಾಧಿಪತ್ಯೇ ಚ ಪುತ್ರಮಸ್ಯ ಮಹೀಪತೇಃ ।
ಅಭ್ಯಷಿಂಚತ್ ತದಾ ಪಾರ್ಥಃ ಸಹಿತೈರ್ವಸುಧಾಧಿಪೈಃ ॥೬೧॥

ಕುಂತಿಯ ಪುತ್ರನಾದ ಯುಧಿಷ್ಠಿರನು ಆಗ ಉಳಿದ ರಾಜರುಗಳ ಜೊತೆಯಲ್ಲಿ ಸೇರಿಕೊಂಡು ಶಿಶುಪಾಲನ ಪುತ್ರನಿಗೆ ಚೇದಿರಾಜ್ಯದಲ್ಲಿ ಪಟ್ಟಭಿಷೇಕವನ್ನು ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಷಟ್‌ಪಂಚಷಷ್ಟಿತಮೋಧ್ಯಾಯಃ ॥
॥ ಶಿಶುಪಾಲವಧಪರ್ವಣಿ ಅಷ್ಟಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ
ಅರವತ್ತಾರನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ಸುವರ್ಣರತ್ನಭಾರಕಾನ್ ಬಹೂನ್‌ನೃಪಾ ಉಪಾನಯನ್ ।
ಉಪಾಯನೇ ಸುಯೋಧನಂ ನೃಪೋಽದಿಶದ್ ಗ್ರಹೇಽಸ್ಯ ಚ ॥೨೬॥

ಕಪ್ಪಕಾಣಿಕೆಯಾಗಿ ಬಹಳ ಸುವರ್ಣರತ್ನಗಳ ಭಾರಗಳನ್ನು ರಾಜರು ತಂದಿತ್ತರು. ಅವುಗಳನ್ನು ತೆಗೆದಿಟ್ಟುಕೊಳ್ಳುವ ಕಾರ್ಯದಲ್ಲಿ ದುರ್ಯೋಧನನನ್ನು ಧರ್ಮರಾಜ ನೇಮಿಸಿದ್ದ.

ಅಭೋಜಯಂಸ್ತಥಾ ದ್ವಿಜಾನ್ ಯಥೇಷ್ಟಭಕ್ಷ್ಯಭೋಜ್ಯಕೈಃ ।
ಸುವರ್ಣರತ್ನಭಾರಕಾನ್ ಬಹೂಂಶ್ಚ ದಕ್ಷಿಣಾ ದದುಃ ॥೨೬೭॥

ಬ್ರಾಹ್ಮಣರಿಗೆ ಯಥೇಚ್ಛ ಭಕ್ಷ್ಯಭೋಜ್ಯಗಳನ್ನು ಪಾಂಡವರು ಉಣಬಡಿಸಿದರು. ಸುವರ್ಣರತ್ನಗಳ ಬಹುಭಾರಗಳನ್ನು ದಕ್ಷಿಣೆಯಾಗಿ ನೀಡಿದರು.

ಯದಿಷ್ಟಮಾಸ ಯಸ್ಯ ಚ ಪ್ರದತ್ತಮೇವ ಪಾಂಡವೈಃ ।
ಸಮಸ್ತಮತ್ರ ಸರ್ವಶೋಽಥ ಸಸ್ನುರುದ್ಧೃತಾ ಮುದಾ ॥೨೬೮॥

ಯಾರಿಗೆ ಏನು ಬೇಕು ಅದೆಲ್ಲವನ್ನೂ ಪಾಂಡವರು ನೀಡಿದರು. ಯಾಗದ ಕೊನೆಯಲ್ಲಿ ಎಲ್ಲರೂ ಆನಂದತುಂದಿಲರಾಗಿ ಅವಭೃಥಸ್ನಾನ ಮಾಡಿದರು.

ನದತ್ಸುರೋರುದುಂದುಭಿಪ್ರಗೀತದೇವಗಾಯಕಾಃ ।
ಪ್ರನೃತ್ತದಿವ್ಯಯೋಷಿತಃ ಸುರಾಪಗಾಂ ವ್ಯಗಾಹಯನ್ ॥೨೬೯॥

ಗಂಧರ್ವರು ದೊಡ್ಡ ದೇವದುಂದುಭಿ ನಾದಗಳೊಂದಿಗೆ ಉತ್ಕೃಷ್ಟವಾದ ಗಾನ ಮಾಡಿದರು. ಅಪ್ಸರೆಯರು ಉತ್ಕೃಷ್ಟ ನಾಟ್ಯ ಮಾಡಿದರು. ಹೀಗೆ ವೈಭವದಿಂದ ಪಾಂಡವರು ಗಂಗಾನದಿಯಲ್ಲಿ ಇಳಿದು ಅವಗಾಹನ ಸ್ನಾನ ಮಾಡಿದರು.

ಸಮಸ್ತರಾಜಸಂಯುತಾ ವಿಗಾಹ್ಯ ಜಾಹ್ನವೀಜಲೇ ।
ಪುರಂ ಯಯುಃ ಪುನಶ್ಚ ತೇ ಸುಸದ್ಮ ಚಾಗಮನ್ ಸುರಾಃ ॥೨೭೦॥

ಪಾಂಡವರು ಎಲ್ಲ ರಾಜರೊಂದಿಗೆ ಗಂಗಾಜಲದಲ್ಲಿ ಮುಳುಗಿ ಸ್ನಾನಮಾಡಿ ತಿರುಗಿ ತಮ್ಮ ಪಟ್ಟಣಕ್ಕೆ ತೆರಳಿದರು. ದೇವತೆಗಳೂ ತಮ್ಮ ಲೋಕಗಳಿಗೆ ಹಿಂತಿರುಗಿದರು.

★★★★★

ಅರವತ್ತೇಳನೆಯ ಅಧ್ಯಾಯ

(ರಾಜಸೂಯಯಾಗದ ವಿಸ್ತಾರವಾದ ವರ್ಣನೆ)

ವೈಶಂಪಾಯನಃ

ತತಃ ಪ್ರವವೃತೇ ಯಜ್ಞೋ ಧರ್ಮರಾಜಸ್ಯ ಧೀಮತಃ ।
ಶಾಂತವಿಘ್ನಾರ್ಹಣಕ್ಷೋಭೋ ಮಹರ್ಷಿಗಣಸಂಕುಲಃ ॥೧॥

ಯಜ್ಞವಿಘ್ನರೂಪವಾಗಿ ಶಿಶುಪಾಲನಿಗೆ ಉಂಟಾದ ಕ್ಷೋಭೆಯು ಶಾಂತವಾದನಂತರ ಮಹರ್ಷಿಗಣ ನಿಬಿಡವಾದ ಮೇಧಾವಿಯಾದ ಧರ್ಮರಾಜನ ಯಜ್ಞವು ನಡೆಯಿತು.

ತಸ್ಮಿನ್ ಯಜ್ಞೇ ಪ್ರವೃತ್ತೇ ತು ವಾಗೀಶಾ ಹೇತುವಾದಿನಃ ।
ಹೇತುವಾದಾನ್ ಬಹೂನ್ ಪ್ರಾಹುಃ ಪರಸ್ಪರಜಿಗೀಷವಃ ॥೨॥

ಆ ಯಜ್ಞವು ನಡೆಯುತ್ತಿರಲು ವಿದ್ಯಾಧೀಶರಾದ ತರ್ಕಶಾಸ್ತ್ರಕುಶಲರಾದ ಅನೇಕ ವಿದ್ವಾಂಸರು ಪರಸ್ಪರ ಗೆಲ್ಲುವ ಆಸೆಯಿಂದ ಅನೇಕ ತರ್ಕವಾದಗಳನ್ನು ಮಂಡಿಸಿದರು.

ದದೃಶುಸ್ತಂ ನೃಪತಯೋ ಯಜ್ಞಸ್ಯ ವಿಧಿಮುತ್ತಮಮ್ ।
ಉಪೇಂದ್ರಸ್ಯೇವ ವಿಹಿತಂ ಸಹದೇವೇನ ಭಾರತ ॥೩॥

ಎಲೈ ರಾಜನೇ! ದೇವತೆಗಳಿಂದ ಸಹಿತನಾದ ಇಂದ್ರನು ಉಪೇಂದ್ರನ ಯಾಗಕ್ಕೆ ನೆರವೇರಿಸಿದ ವಿಧಿಗಳಂತೆ ಸಹದೇವನು ಮಾಡಿದ ಆ ಯಜ್ಞದ ಶ್ರೇಷ್ಠವಾದ ವಿಧಿಗಳನ್ನು ರಾಜರೆಲ್ಲರೂ ನೋಡಿದರು.

ದದೃಶುಸ್ತೋರಣಾನ್ಯತ್ರ ಹೇಮತಾಳಮಯಾನಿ ಚ ।
ದೀಪ್ತಭಾಸ್ಕರತುಲ್ಯಾನಿ ಪ್ರದೀಪ್ತಾನೀವ ತೇಜಸಾ ।
ಸ ಯಜ್ಞಸ್ತೋರಣೈಸ್ತೈಶ್ಚ ಗ್ರಹೈರ್ದ್ಯೌರಿವ ಸಂಬಭೌ ॥೪॥

ಹೇಮತಾಳಮಯವಾದ ತೋರಣಗಳು ಪ್ರಕಾಶಿಸುವ ಸೂರ್ಯನಂತೆ ತಮ್ಮ ತೇಜಸ್ಸಿನಿಂದ ಬೆಳಗುತ್ತಿದ್ದುದನ್ನು ಎಲ್ಲರೂ ನೋಡಿದರು. ಆಕಾಶವು ಗ್ರಹಗಳಿಂದ ಶೋಭಿಸುವಂತೆ ಅಂತಹ ತೋರಣಗಳಿಂದ ಆ ಯಜ್ಞವು ಶೋಭಿಸಿತು.

ಶಯ್ಯಾಸನವಿಹಾರಾಂಶ್ಚ ಸುಬಹೂನ್ ರತ್ನಸಂಯುತಾನ್ ।
ಘಟಾನ್ ಪಾತ್ರೀಕಟಾಹಾಂಶ್ಚ ಕಲಶಾಂಶ್ಚ ಸಮಂತತಃ ।
ನ ತೇ ಕಿಂಚಿದಸೌವರ್ಣಮಪಶ್ಯಂಸ್ತತ್ರ ಪಾರ್ಥಿವಾಃ ॥೫॥

ಶಯ್ಯಾಸನಗಳು ಅನೇಕ ವಿಹಾರ ಪದಾರ್ಥಗಳು ರತ್ನಸಂಯುತವಾದ ಘಟಗಳು ಪಾತ್ರೆಗಳು ಕಡಾಯಿಗಳು ಹೀಗೆ ಎಲ್ಲಾ ಕಡೆಗಳಲ್ಲಿಯೂ ರಾಜರು ಸುವರ್ಣಮಯವಲ್ಲದ ಒಂದು ವಸ್ತುವನ್ನೂ ಅಲ್ಲಿ ಕಾಣಲಿಲ್ಲ.

ತದ್ಯಜ್ಞೇ ನ್ಯವಸನ್ ರಾಜನ್ ಬ್ರಾಹ್ಮಣಾ ಭೃಶಸತ್ಕೃತಾಃ ।
ಕಥಯಂತಃ ಕಥಾಂ ಬಹ್ವೀಂ ಪಶ್ಯಂತೋ ನಟನರ್ತಕಾನ್ ॥೬॥

ರಾಜನೇ! ಆ ಯಜ್ಞದಲ್ಲಿ ಬಹಳ ಸತ್ಕೃತರಾದ ಬ್ರಾಹ್ಮಣರು ಅನೇಕ ಕಥೆಗಳನ್ನು ಹೇಳುತ್ತಾ ನಟನರ್ತಕರನ್ನು ನೋಡುತ್ತಾ ವಾಸಮಾಡಿದರು.

ಭುಂಜತಾಂ ಚೈವ ವಿಪ್ರಾಣಾಂ ಸ್ವಾದು ಭೋಜ್ಯಂ ಪೃಥಗ್ವಿಧಮ್ ।
ಅನಿಶಂ ಶ್ರೂಯತೇ ತತ್ರ ಮುದಿತಾನಾಂ ಮಹಾಸ್ವನಃ ॥೭॥

ಅಲ್ಲಿ ರುಚಿಕರವಾದ ಅನೇಕ ವಿಧವಾದ ಪದಾರ್ಥಗಳನ್ನು ಯಾವಾಗಲೂ ಭುಂಜಿಸುವ ಬ್ರಾಹ್ಮಣರ ಸಂತೋಷದ ಶಬ್ದವು ಯಾವಾಗಲೂ ಕೇಳಿ ಬರುತ್ತಿತ್ತು.

ದೀಯತಾಂ ದೀಯತಾಮೇಷಾಂ ಭುಜ್ಯತಾಂ ಭುಜ್ಯತಾಮಿತಿ ।
ಏವಂಪ್ರಕಾರಾಃ ಸಂಜಲ್ಪಾಃ ಶ್ರೂಯಂತೇ ಸ್ಮಾತ್ರ ನಿತ್ಯಶಃ ॥೮॥

ಓದನಾನಾಂ ವಿಕಾರಾಣಿ ಸ್ವಾದೂನಿ ವಿವಿಧಾನಿ ಚ ।
ಭೋಜನಾನಿ ಚ ಭಕ್ಷ್ಯಾಣಿ ಪೇಯಾನಿ ಮಧುರಾಣಿ ಚ ।
ದದುರ್ದ್ವಿಜಾನಾಂ ಸತತಂ ರಾಜಪ್ರೇಷ್ಯಾ ಮಹಾಧ್ವರೇ ॥೯॥

ಇವರಿಗೆ ದಾನವನ್ನು ಮಾಡಿ ಇವರಿಗೆ ದಾನಮಾಡಿ ಇವರಿಗೆ ಭೋಜನವನ್ನು ಕೊಡಿ ಇವರಿಗೆ ಭೋಜನವನ್ನು ಕೊಡಿ ಎಂಬ ಈ ಪ್ರಕಾರವಾದ ಮಾತುಗಳು ಅಲ್ಲಿ ಯಾವಾಗಲೂ ಕೇಳಿಬರುತ್ತಿದ್ದವು. ಆ ಮಹಾಯಜ್ಞದಲ್ಲಿ ರಾಜಸೇವಕರು ಬ್ರಾಹ್ಮಣರಿಗೆ ವಿಧವಿಧವಾದ ರುಚಿಕರವಾದ ಅನ್ನದ ವಿಕಾರಗಳನ್ನೂ ಭಕ್ಷ್ಯ ಭೊಜ್ಯಗಳನ್ನೂ ಮಧುರವಾದ ಪೇಯಗಳನ್ನೂ ಸತತವಾಗಿ ನೀಡಿದರು.

ಪೂರ್ಣೇ ಶತಸಹಸ್ರೇ ತು ವಿಪ್ರಾಣಾಂ ಭುಂಜತಾಂ ತದಾ ।
ಸ್ಥಾಪಿತಾ ತತ್ರ ಸಂಜ್ಞಾऽಭೂಚ್ಛಂಖೋಧ್ಮಾಯತ ನಿತ್ಯಶಃ ॥೧೦॥

ಒಂದು ಲಕ್ಷ ಬ್ರಾಹ್ಮಣರ ಭೋಜನವಾದ ಸಂಕೇತಕ್ಕಾಗಿ ಸ್ಥಾಪಿಸಲ್ಪಟ್ಟ ಶಂಖದ ನಾದವು ಯಾವಾಗಲೂ ಕೇಳಿಬರುತಿತ್ತು.

ಮುಹುರ್ಮುಹುಃ ಪ್ರಣಾದಸ್ತು ತಸ್ಯ ಶಂಖಸ್ಯ ಭಾರತ ।
ಉತ್ತಮಂ ಶಂಖಶಬ್ದಂ ತಂ ಶ್ರುತ್ವಾ ವಿಸ್ಮಯಮಾಗಮನ್ ॥೧೧॥

ಎಲೈ ಭಾರತನೇ! ಮತ್ತೆ ಮತ್ತೆ ಕೇಳಿ ಬರುತ್ತಿದ್ದ ಶಂಖದ ಆ ಶಬ್ದವನ್ನು ಕೇಳಿ ಎಲ್ಲರೂ ವಿಸ್ಮಯ ಗೊಂಡರು.

ಏವಂ ಪ್ರವೃತ್ತೇ ಯಜ್ಞೇ ತು ತುಷ್ಟಪುಷ್ಟಜನಾಯುತೇ ।
ಅನ್ನಸ್ಯ ಬಹುಶೋ ರಾಜನ್ನುತ್ಸೇಧಾಃ ಪರ್ವತೋಪಮಾಃ ।
ದಧಿಕುಲ್ಯಾಶ್ಚ ದದೃಶುಃ ಸರ್ಪಿಷಶ್ಚ ಹ್ರದಾನ್ ಜನಾಃ ॥೧೨॥

ಎಲೈ ರಾಜನೇ! ಸಂತುಷ್ಟರಾದ ಮತ್ತು ಪುಷ್ಟರಾದ ಜನಗಳಿಂದ ಪೂರ್ಣವಾದ ಆ ಯಜ್ಞವು ಹೀಗೆ ನಡೆಯುತ್ತಿರಲು ಜನರು ಅನ್ನದ ಪರ್ವತೋಪಮವಾದ ದೊಡ್ಡ ದೊಡ್ಡ ರಾಶಿಗಳನ್ನೂ ಮೊಸರಿನ ಸರೋವರಗಳನ್ನೂ ಘೃತದ ಸರೋವರಗಳನ್ನೂ ನೋಡಿದರು.

ಜಂಬೂದ್ವೀಪಶ್ಚ ಸಕಲೋ ನಾನಾಜನಸಮನ್ವಿತಃ ।
ರಾಜನ್ನದೃಶ್ಯತೈಕಸ್ಥೋ ರಾಜ್ಞಸ್ತಸ್ಮಿನ್ ಮಹಾಕ್ರತೌ ॥೧೩॥

ಎಲೈ ರಾಜನೇ! ಆ ರಾಜನ ಮಹಾಯಜ್ಞದಲ್ಲಿ ಅನೇಕ ಜನರಿಂದ ಕೂಡಿದ ಸಮಗ್ರವಾದ ಜಂಬೂದ್ವೀಪವೇ ಅಲ್ಲಿ ಬಂದು ಇರುವಂತೆ ಕಾಣುತ್ತಿತ್ತು.

ತತ್ರ ರಾಜಸಹಸ್ರಾಣಿ ಪುರುಷಾಣಾಂ ತತಸ್ತತಃ ।
ಗೃಹೀತ್ವಾ ಧನಮಾಜಗ್ಮುಃ ತಸ್ಯ ರಾಜ್ಞೋ ಮಹಾಕ್ರತೌ ॥೧೪॥

ಆ ರಾಜನ ಮಹಾಯಾಗದಲ್ಲಿ ಸಹಸ್ರಾರು ರಾಜರು ತಮ್ಮ ಪುರುಷರಿಂದ ಧನವನ್ನು ತೆಗೆದುಕೊಂಡು ಅನೇಕ ಕಡೆಗಳಿಂದ ಅಲ್ಲಿಗೆ ಬಂದರು.

ರಾಜಾನಃ ಸ್ರಗ್ವಿಣಸ್ತತ್ರ ಸುಮೃಷ್ಟಮಣಿಕುಂಡಲಾಃ ।
ತಾನ್ ಪರ್ಯವೀವಿಷನ್ ವಿಪ್ರಾನ್ ಶತಶೋಥ ಸಹಸ್ರಶಃ ॥೧೫॥

ಮಾಲೆಗಳನ್ನು ಧರಿಸಿದ ಕರ್ಣಕುಂಡಲಾದಿ ಸುವರ್ಣಾಭರಣಗಳನ್ನು ಧರಿಸಿದ ರಾಜರು ನೂರು ಸಂಖ್ಯೆಯಲ್ಲಿ ಅಥವಾ ಸಾವಿರ ಸಂಖ್ಯೆಯಲ್ಲಿ ನೆರೆದ ಬ್ರಾಹ್ಮಣರಿಗೆ ಭೋಜನವನ್ನು ಬಡಿಸುತ್ತಿದ್ದರು.

ವಿವಿಧಾನ್ಯನ್ನಪಾನಾನಿ ಲೇಹ್ಯಾನಿ ವಿವಿಧಾನಿ ಚ ।
ತೇಷಾಂ ನೃಪೋಪಭೋಗ್ಯಾನಿ ಬ್ರಾಹ್ಮಣಾನಾಂ ದದುಃ ಸ್ಮ ತೇ ॥೧೬॥

ಅವರು ಬ್ರಾಹ್ಮಣರಿಗೆ ರಾಜೋಪಭೋಗ್ಯವಾದ ಅನ್ನ ಪಾನಗಳನ್ನೂ ವಿವಿಧವಾದ ಲೇಹ್ಯ ಪದಾರ್ಥಗಳನ್ನೂ ಕೊಡುತ್ತಿದ್ದರು.

ನಾನಾವಿಧಾನಿ ಭಕ್ಷ್ಯಾಣಿ ಸ್ವಾದುಪುಷ್ಪಫಲಾನಿ ಚ ।
ಗುಡಾನಿ ಸ್ವಾದುಕ್ಷೌದ್ರಾಣಿ ದದುಸ್ತೇ ಬ್ರಾಹ್ಮಣೇಷ್ವಿಹ ॥೧೭॥

ಅವರು ಬ್ರಾಹ್ಮಣರಿಗೆ ನಾನಾ ವಿಧವಾದ ಭಕ್ಷ್ಯಗಳನ್ನೂ ಮಧುರವಾದ ಪುಷ್ಪ ಫಲಗಳನ್ನೂ ಗುಡ ಶರ್ಕರ ಮತ್ತು ಮಧುಗಳನ್ನು ಕೊಡುತ್ತಿದ್ದರು.

ಏತಾನಿ ಸತತಂ ಭುಕ್ತ್ವಾ ತಸ್ಮಿನ್ ಯಜ್ಞೇ ದ್ವಿಜಾತಯಃ ।
ಪರಾಂ ಪ್ರೀತಿಂ ಯಯುಃ ಸರ್ವೇ ಮೋದಮಾನಾಸ್ತದಾ ಭೃಶಮ್ ॥

ಆ ಬ್ರಾಹ್ಮಣರೆಲ್ಲರೂ ಆ ಯಜ್ಞದಲ್ಲಿ ಸತತವಾಗಿ ಹೀಗೆ ಭೋಜನವನ್ನು ಮಾಡಿ ಬಹಳ ಸಂತೋಷಪಡುತ್ತಾ ಧರ್ಮರಾಜನ ಮೇಲೆ ಬಹಳ ಪ್ರೀತಿಯನ್ನು ಹೊಂದಿದರು.

ಏವಂ ಸಮುದಿತಂ ಸರ್ವಂ ಬಹುಶೋಭಾಸಮನ್ವಿತಮ್ ।
ಯಜ್ಞವಾಟಂ ನೃಪಾ ದೃಷ್ಟ್ವಾ ವಿಸ್ಮಯಂ ಪರಮಂ ಯಯುಃ ॥೧೯॥

ಹೀಗೆ ಅನೇಕ ಶೋಭೆಗಳಿಂದ ಯುಕ್ತವಾದ ಸಮುದ್ರಿಕ್ತವಾದ ಆ ಯಜ್ಞಶಾಲೆಯನ್ನು ನೋಡಿದ ರಾಜರು ಪರಮ ವಿಸ್ಮಯವನ್ನು ಹೊಂದಿದರು.

ಋತ್ವಿಜಶ್ಚ ಯಥಾಶಾಸ್ತ್ರಂ ರಾಜಸೂಯಂ ಮಹಾಕ್ರತುಮ್ ।
ಪಾಂಡವಸ್ಯ ಯಥಾಕಾಲಂ ಜುಹುವುಃ ಸರ್ವಯಾಜಕಾಃ ।
ಪರ್ಯಪೃಚ್ಛಂಶ್ಚ ಧರ್ಮಜ್ಞಾ ವಿಧಿವಚ್ಚಾಸ್ತ್ರಶಿಕ್ಷಿತಾಃ ॥೨೦॥

ಎಲ್ಲಾ ಯಾಗಗಳ ವಿಧಾನವನ್ನು ತಿಳಿದ ಋತ್ವಿಜರು ಪಾಂಡವನ ರಾಜಸೂಯಮಹಾಯಾಗವನ್ನು ಕಾಲಕ್ಕೆ ಅನುಗುಣವಾಗಿ ಮತ್ತು ಶಾಸ್ತ್ರಕ್ಕೆ ಅನುಗುಣವಾಗಿ ನೆರವೇರಿಸಿದರು. ವಿಧಿವತ್ತಾಗಿ ಶಾಸ್ತ್ರಕ್ಕೆ ಅನುಗುಣವಾಗಿ ಧರ್ಮಜ್ಞರು ಅಲ್ಲಿ ಪ್ರಶ್ನೆಗಳನ್ನು ಕೇಳಿ ಉತ್ತರವನ್ನು ಪಡೆಯುತ್ತಿದ್ದರು.

ವ್ಯಾಸಧೌಮ್ಯಾದಯಃ ಸರ್ವೇ ವಿಧಿವತ್ ಷೋಡಶರ್ತ್ವಿಜಃ ।
ಸ್ವಸ್ವಕರ್ಮಾಣಿ ಚಕ್ರುಸ್ತೇ ಪಾಂಡವಸ್ಯ ಮಹಾಕ್ರತೌ ॥೨೧॥

ವ್ಯಾಸ ಧೌಮ್ಯ ಮೊದಲಾದ ಹದಿನಾರು ಜನ ಋತ್ವಿಜರೆಲ್ಲರೂ ಪಾಂಡವನ ಮಹಾ ಯಾಗದಲ್ಲಿ ತಮ್ಮ ತಮ್ಮ ಕರ್ಮಗಳನ್ನು ವಿಧಿವತ್ತಾಗಿ ಮಾಡಿದರು.

ನಾಷಡಂಗವಿದತ್ರಾಸೀತ್ ಸದಸ್ಯೋ ನಾಬಹುಶ್ರುತಃ ।
ನಾವ್ರತೋ ನಾನುಪಾಧ್ಯಾಯೋ ನ ಪಾಪೋ ನಾಕ್ಷಮೋ ದ್ವಿಜಃ ॥೨೨॥

ಅಲ್ಲಿ ನೆರೆದ ಸದಸ್ಯರಲ್ಲಿ ಷಡಂಗಜ್ಞಾನವಿಲ್ಲದವರಾಗಲೀ ಬಹುಶ್ರುತರಲ್ಲದವರಾಗಲೀ ವ್ರತವನ್ನು ಧರಿಸದವರಾಗಲೀ ಉಪಾದ್ಯಾಯರಾಗದವರಾಗಲೀ ಪಾಪಿಗಳಾಗಲೀ ಸಹನೆಯಿಲ್ಲದ ಬ್ರಾಹ್ಮಣರಾಗಲೀ ಯಾರೂ ಇರಲಿಲ್ಲ.

ನ ತತ್ರ ಕೃಪಣಃ ಕಶ್ಚಿದ್ ದರಿದ್ರೋ ನ ಬಭೂವ ಹ ।
ಕ್ಷುಧಿತೋ ದುಃಖಿತೋ ವಾಪಿ ಪ್ರಾಕೃತೋ ವಾಪಿ ಮಾನುಷಃ ॥೨೩॥

ಆಲ್ಲಿ ದರಿದ್ರನಾಗಲೀ ಕೃಪಣನಾಗಲಿ ಕ್ಷುದ್ರನಾಗಲೀ ದುಃಖಿತನಾಗಲೀ ಅಥವಾ ಒಬ್ಬ ಸಾಮಾನ್ಯಪುರುಷನಾಗಲೀ ಇರಲಿಲ್ಲ.

ಸಂಸ್ತರೇ ಕುಶಲಾಶ್ಚಾಪಿ ಸರ್ವಕರ್ಮಾಣಿ ಯಾಜಕಾಃ ।
ದಿವಸೇ ದಿವಸೇ ಚಕ್ರುರ್ಯಥಾಶಾಸ್ತ್ರಾರ್ಥಚಕ್ಷುಷಃ ॥೨೪॥

ಪುರೋಹಿತರು ಯಾಗ ಕರ್ಮಗಳಲ್ಲಿ ಕುಶಲರಾಗಿ ಶಾಸ್ತ್ರದಲ್ಲಿ ಹೇಳಿದ ವಿಧಾನವನ್ನು ಕರ್ಮಗಳನ್ನು ಅನುಸರಿಸಿ ಮಾಡಿದರು.

ಬ್ರಾಹ್ಮಣಾ ವೇದಶಾಸ್ತ್ರಜ್ಞಾಃ ಕಥಾಶ್ಚಕ್ರುಶ್ಚ ಸುವ್ರತಾಃ ।
ರೇಮಿರೇ ಚ ಕಥಾಂತೇ ತು ಭುಕ್ತ್ವಾ ಪೀತ್ವಾ ಯಥೇಷ್ಟತಃ ॥೨೫॥

ಸುವ್ರತರಾದ ವೇದಶಾಸ್ತ್ರಜ್ಞರಾದ ಬ್ರಾಹ್ಮಣರು ಒಳ್ಳೆಯ ವಾದಗಳನ್ನು ಮಾಡಿ ಅನಂತರ ಯಥೇಷ್ಟವಾಗಿ ಭೋಜನವನ್ನೂ ಪಾನವನ್ನೂ ಮಾಡಿ ಸಂತೋಷ ಪಟ್ಟರು.

ಸಾ ವೇದಿರ್ವೇದಸಂಪನ್ನೈರ್ದೇವದ್ವಿಜಮಹರ್ಷಿಭಿಃ ।
ಆಬಭಾಸೇ ತದಾ ಕೀರ್ಣಾ ನಕ್ಷತ್ರೈರ್ದ್ಯೌರಿವಾಮಲಾ ॥೨೬॥

ವೇದಸಂಪನ್ನರಾದ ದೇವತೆಗಳಿಂದಲೂ ಬ್ರಾಹ್ಮಣರಿಂದಲೂ ಮಹರ್ಷಿಗಳಿಂದಲೂ ನಿಬಿಡವಾಗಿ ತುಂಬಿದ ಆ ವೇದಿಕೆಯು ಅಂತರಿಕ್ಷವು ನಕ್ಷತ್ರಗಳಿಂದ ಶೋಭಿಸಿದಂತೆ ಬಹುವಾಗಿ ಶೋಭಿಸುತ್ತಿದ್ದಿತು.

ತತೋ ವೈ ಹೇಮಯೂಪಾಂಶ್ಚ ಸರ್ವರತ್ನಸಮಾಚಿತಾನ್ ।
ಶೋಭಾರ್ಥಂ ಕಾರಯಾಮಾಸ ಸಹದೇವೋ ಮಹಾಮತಿಃ ॥೨೭॥

ಅಲ್ಲಿ ಮಹಾಮೇಧಾವಿಯಾದ ಸಹದೇವನು ಸೌಂದರ್ಯವನ್ನು ಹೆಚ್ಚಿಸುವ ಸಲುವಾಗಿ ರತ್ನಗಳನ್ನು ಮೆಟ್ಟಿದ ಸುವರ್ಣಮಯವಾದ ಯೂಪಗಳನ್ನು ಮಾಡಿಸಿದನು.

ದದೃಶುಸ್ತೋರಣಾನ್ಯತ್ರ ಹೇಮತಾಳಮಯಾನಿ ಚ ।
ಸ ಯಜ್ಞಸ್ತೋರಣೈಸ್ತೈಶ್ಚ ಗ್ರಹೈರ್ದ್ಯೌರಿವ ಸಂಬಭೌ ॥೨೮॥

ಅಲ್ಲಿ ಜನರು ಹೇಮತಾಳಮಯವಾದ ತೋರಣಗಳನ್ನು ನೋಡಿದನು. ಆಕಾಶವು ಗ್ರಹಗಳಿಂದ ಶೋಭಿಸುವಂತೆ ಆ ಯಜ್ಞಶಾಲೆಯು ಅಂತಹ ತೋರಣಗಳಿಂದ ಶೋಭಿಸಿತು.

ತಾಳಾನಾಂ ತೋರಣೈರ್ಹೈಮೈರ್ದಾಂತೈರಿವ ದಿಶಾಗಜೈಃ ।
ದಿಕ್ಷು ಸರ್ವಾಸು ವಿನ್ಯಸ್ತೈಃ ತೇಜೋಭಿರ್ಭಾಸ್ಕರೈರ್ಯಥಾ ।
ಸಕಿರೀಟೈರ್ನರೈಶ್ಚೈವ ಶುಶುಭೇ ತತ್ ಸದಸ್ತದಾ ॥೨೯॥

ದೈವೈರನ್ಯೈಶ್ಚ ಯಕ್ಷೈಶ್ಚ ಉರಗೈರ್ದಿವ್ಯಮಾನುಷೈಃ ।
ವಿದ್ಯಾಧರಗಣೈಃ ಕೀರ್ಣೈಃ ಪಾಂಡವಸ್ಯ ಮಹಾತ್ಮನಃ ॥೩೦॥

ಆ ಯಜ್ಞಸಭೆಯು ದಿಗ್ಗಜಗಳ ದಂತದಿಂದ ಮಾಡಿರುವಂತೆ ತೋರುವ ಸುವರ್ಣಮಯವಾದ ತಾಳ ತೋರಣಗಳಿಂದಲೂ ಎಲ್ಲಾ ಕಡೆಗಳಲ್ಲಿಯೂ ಇಡಲ್ಪಟ್ಟ ಸೂರ್ಯನಂತೆ ಪ್ರಕಾಶಿಸುವ ಸುವರ್ಣಮಯವಾದ ತಾಳ ಸುವರ್ಣಗಳಿಂದಲೂ, ಕಿರೀಟಗಳನ್ನು ಧರಿಸಿದ ರಾಜರಿಂದಲೂ ಶೋಭಿಸಿತು. ಮಹಾತ್ಮನಾದ ಪಾಂಡವನ ಆ ಸಭೆಯು ನಿಬಿಡವಾಗಿ ತುಂಬಿದ ದೇವತೆಗಳಿಂದಲೂ ಯಕ್ಷರಿಂದಲೂ ಉರಗಗಳಿಂದಲೂ ದಿವ್ಯಮನುಷ್ಯರಿಂದಲೂ ಮತ್ತು ವಿದ್ಯಾಧರ ಗಣಗಳಿಂದಲೂ ಕೂಡಿದುದಾಗಿ ಶೋಭಿಸಿತು.

ಸ ರಾಜಸೂಯಃ ಶುಶುಭೇ ಧರ್ಮರಾಜಸ್ಯ ಧೀಮತಃ ।
ಗಂಧರ್ವಗಣಸಂಕೀರ್ಣಃ ಶೋಭಿತೋಪ್ಸರಸಾಂ ಗಣೈಃ ।
ಸ ಕಿಂಪುರುಷಗೀತೈಶ್ಚ ಕಿನ್ನರೈರುಪಶೋಭಿತಃ ॥೩೧॥

ಗಂಧರ್ವಗಣಗಳಿಂದ ನಿಬಿಡವಾಗಿ ತುಂಬಿದ, ಅಪ್ಸರೆಯರ ಗಣಗಳಿಂದಲೂ ನಿಬಿಡವಾಗಿ ಶೋಭಿತವಾದ, ಕಿನ್ನರರಿಂದಲೂ ಶೋಭಿತವಾದಂತಹ,

ಕಿಂಪುರುಷಗಾನದಿಂದಲೂ ಶೋಭಿತವಾದ, ಮೇಧಾವಿಯಾದ ಆ ಧರ್ಮರಾಜನ ರಾಜಸೂಯಯಾಗವು ಬಹಳ ಶೋಭಿಸಿತು.

ನಾರದಶ್ಚ ಜಗೌ ತತ್ರ ತುಂಬುರುಶ್ಚ ಮಹಾದ್ಯುತಿಃ ।
ವಿಶ್ವಾವಸುಶ್ಚಿತ್ರಸೇನಸ್ತಥಾನ್ಯೇ ಗೀತಕೋವಿದಾಃ ।
ರಮಯಂತಿ ಸ್ಮ ತಾನ್ ಸರ್ವಾನ್ ಯಜ್ಞಕರ್ಮಾಂತರೇಷ್ವಥ ॥೩೨॥

ಅಲ್ಲಿ ನಾರದರು ಮಹಾದ್ಯುತಿಗಳಾದ ತುಂಬುರರು ಸಹ ಗಾನವನ್ನು ಮಾಡಿದರು. ವಿಶ್ವಾವಸು ಚಿತ್ರಸೇನ ಮೊದಲಾದ ಗಾನವಿಶಾರರಾದವರೆಲ್ಲರೂ ಯಜ್ಞಕರ್ಮಗಳ ಮಧ್ಯದಲ್ಲಿ ಅಲ್ಲಿ ನೆರೆದ ಎಲ್ಲರನ್ನೂ ತಮ್ಮ ಸಂಗೀತದಿಂದ ಸಂತೋಷ ಪಡಿಸುತ್ತಿದ್ದರು.

ತತ್ರ ಚಾಪ್ಸರಸಃ ಸರ್ವಾಃ ಸುಂದರ್ಯಃ ಪ್ರಿಯದರ್ಶನಾಃ ।
ನನೃತುಶ್ಚ ಜಗುಶ್ಚಾತ್ರ ನಿತ್ಯಂ ಕರ್ಮಾಂತರೇಷ್ವಥ ॥೩೩॥

ಅಲ್ಲಿ ಸುಂದರಿಯರೂ ಮನೋಹರರೂ ಆದ ಎಲ್ಲಾ ಅಪ್ಸರೆಯರು ಕರ್ಮಗಳ ಮಧ್ಯದಲ್ಲಿ ಯಾವಾಗಲೂ ಗಾನವನ್ನೂ ಮತ್ತು ನರ್ತನವನ್ನೂ ಮಾಡುತ್ತಿದ್ದರು.

ಇತಿಹಾಸಪುರಾಣಾನಿ ಆಖ್ಯಾನಾನಿ ಚ ಸರ್ವಶಃ ।
ಊಚುರ್ವೈ ಶಬ್ದಶಾಸ್ತ್ರಜ್ಞಾ ನಿತ್ಯಂ ಕರ್ಮಾಂತರೇಷು ತೇ ॥೩೪॥

ಶಬ್ದಶಾಸ್ತ್ರವನ್ನು ತಿಳಿದ ಬ್ರಾಹ್ಮಣರು ಕರ್ಮಗಳ ಮಧ್ಯದಲ್ಲಿ ಅಲ್ಲಿ ಯಾವಾಗಲೂ ಇತಿಹಾಸಪುರಾಣಗಳನ್ನೂ ಶ್ರೇಷ್ಠವಾದ ಕತೆಗಳನ್ನೂ ಹೇಳುತ್ತಿದ್ದರು.

ಭೇರ್ಯಶ್ಚ ಮುರಜಾಶ್ಚೈವ ಮಡ್ಡುಕಾ ಗೋಮುಖಾಶ್ಚ ಯೇ ।
ಶೃಂಗವರ್ಣಾಂಬುಜಾಶ್ಚೈವ ಶ್ರೂಯಂತೇ ಸ್ಮ ಸಹಸ್ರಶಃ ॥೩೫॥

ಭೇರಿ ಮುರಜ ಮಡ್ಡುಕ ಗೋಮುಖ ಶೃಂಗವರ್ಣ ಶಂಖ ಮೊದಲಾದ ಸಹಸ್ರಾರು ವಾದ್ಯ ವಿಶೇಷಗಳಿಂದ ಶಬ್ದವು ಸತತವಾಗಿ ಕೇಳಿಬರುತ್ತಿತ್ತು.

ಲೋಕೇಸ್ಮಿನ್ ಸರ್ವವಿಪ್ರಾಶ್ಚ ವೈಶ್ಯಾಃ ಶೂದ್ರಾಶ್ಚ ಸರ್ವಶಃ ।
ಸರ್ವೇ ಮ್ಲೇಚ್ಛಾಃ ಸರ್ವವರ್ಣಾ ಆದಿಮಧ್ಯಾಂತಜಾಸ್ತಥಾ ॥೩೬॥

ಈ ಲೋಕದಲ್ಲಿ ಇದ್ದ ಎಲ್ಲಾ ಬ್ರಾಹ್ಮಣರು ವೈಶ್ಯರು ಶೂದ್ರರು ಮ್ಲೇಚ್ಛರು ಸರ್ವವರ್ಣದವರು ಅಂತ್ಯಜರು ಮಧ್ಯಜರು ಆದಿವರ್ಣದಿಂದ ಉತ್ಪನ್ನವಾದವರು ಎಲ್ಲರೂ ಅಲ್ಲಿಸೇರಿದ್ದರು.

ನಾನಾದೇಶ ಸಮುತ್ಥೈಶ್ಚ ನಾನಾಜಾತಿಭಿರಾಗತೈಃ ।
ಪರ್ಯಾಪ್ತ ಇವ ಲೋಕೋಽಯಂ ಯುಧಿಷ್ಠಿರನಿವೇಶನೇ ॥೩೭॥

ಅನೇಕ ದೇಶಗಳಿಂದ ಬಂದ ಅನೇಕ ಜಾತಿಗಳ ಆ ಜನರಿಂದ ಯುಧಿಷ್ಠಿರನ ನಿವೇಶನವು ತುಂಬಿ ಹೋದಂತೆ ಆಯಿತು.

ಭೀಷ್ಮದ್ರೋಣಾದಯಃ ಸರ್ವೇ ಕುರವಃ ಸಸುಯೋಧನಾಃ ।
ವೃಷ್ಣಯಶ್ಚ ಸಮಗ್ರಾಶ್ಚ ಪಾಂಚಾಲಾಶ್ಚಾಪಿ ಸರ್ವಶಃ ।
ಯಜ್ಞೇಽಸ್ಮಿನ್ ಸರ್ವಕರ್ಮಾಣಿ ಚಕ್ರುರ್ದಾಸಾ ಇವ ಕ್ರತೌ ॥೩೮॥

ಈ ಯಜ್ಞದಲ್ಲಿ ಭೀಷ್ಮ ದ್ರೋಣಾದಿಗಳು ಸುಯೋಧನಸಹಿತರಾದ ಎಲ್ಲಾ ಕುರುಗಳು ಎಲ್ಲಾವೃಷ್ಣಿಗಳು ಎಲ್ಲಾಪಾಂಚಾಲರು ಸಹ ದಾಸರಂತೆ ಎಲ್ಲಾಕರ್ಮಗಳನ್ನೂ ಮಾಡಿದರು.

ಏವಂ ಪ್ರವೃತ್ತೋ ಯಜ್ಞೋಽಸೌ ಧರ್ಮರಾಜಸ್ಯ ಧೀಮತಃ ।
ಶುಶುಭೇ ಚ ಮಹಾಬಾಹೋ ಸೋಮಸ್ಯೇವ ಕ್ರತುರ್ಯಥಾ ॥೩೯॥

ಎಲೈ ಮಹಾಬಾಹುವೇ! ಹೀಗೆ ಪ್ರವೃತ್ತವಾದ ಮೇಧಾವಿಯಾದ ಧರ್ಮರಾಜನ ಈ ಯಜ್ಞವು ಚಂದ್ರನ ಯಜ್ಞದಂತೆ ಬಹಳವಾಗಿ ಶೋಭಿಸಿತು.

ವಸ್ತ್ರಾಣಿ ಕಂಬಳಾಂಶ್ಚೈವ ಪ್ರಾವಾರಾಂಶ್ಚೈವ ಸರ್ವಶಃ ।
ನಿಷ್ಕಹೇಮಜಭಾಂಡಾನಿ ಭೂಷಣಾನಿ ಚ ಸರ್ವಶಃ ।
ಪ್ರದದೌ ತತ್ರ ವಿಪ್ರಾಣಾಂ ಧರ್ಮರಾಜೋ ಯುಧಿಷ್ಠಿರಃ ॥೪೦॥

ಧರ್ಮರಾಜನಾದ ಯುಧಿಷ್ಠಿರನು ಬ್ರಾಹ್ಮಣರಿಗೆ ವಸ್ತ್ರಗಳನ್ನು ಕಂಬಳಿಗಳನ್ನು ಉತ್ತರೀಯಗಳನ್ನು, ನಿಷ್ಕಗಳನ್ನು, ಸುವರ್ಣಪಾತ್ರೆಗಳನ್ನು ಮತ್ತು ಅನೇಕ ಭೂಷಣಗಳನ್ನು ದಾನಮಾಡಿದನು.

ಯಾನಿ ತತ್ರ ಮಹೀಪಾಲೈರ್ಲಬ್ಧವಾನ್ ಸ ಧನಾನಿ ಚ ।
ತಾನಿ ರತ್ನಾನಿ ಸರ್ವಾಣಿ ವಿಪ್ರಾಣಾಂ ಪ್ರದದೌ ತದಾ ॥೪೧॥

ಅವನು ರಾಜರಿಂದ ಎಷ್ಟು ಧನವನ್ನು ಪಡೆದಿದ್ದನೋ ಆ ಎಲ್ಲಾ ರತ್ನಗಳನ್ನೂ ಆ ಕಾಲದಲ್ಲಿ ವಿಪ್ರರಿಗೆ ದಾನವನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಸಪ್ತಪಷ್ಟಿತಮೋಧ್ಯಾಯಃ ॥
॥ ಶಿಶುಪಾಲವಧಪರ್ವಣಿ ನವಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಅರವತ್ತೇಳನೆಯ ಅಧ್ಯಾಯವು ಮುಗಿಯಿತು.

★★★★★

ಅರವತ್ತೆಂಟನೆಯಅಧ್ಯಾಯ

(ರಾಜಸೂಯ ಸಮಾಪ್ತಿ. ಕೆಲವರನ್ನು ಬಿಟ್ಟು ಉಳಿದವರೆಲ್ಲರಿಂದ ತಮ್ಮ ತಮ್ಮ ಪಟ್ಟಣಕ್ಕೆ ಪ್ರಯಾಣ.)

ವೈಶಂಪಾಯನಃ

ತತಃ ಸ ಕುರುರಾಜಸ್ಯ ತದಾ ಸರ್ವಸಮೃದ್ಧಿಮಾನ್ ।
ಯಜ್ಞಃ ಪ್ರೀತಿಕರೋ ರಾಜನ್ ಸಂಬಭೌ ವಿಪುಲೋತ್ಸವಃ ॥೧॥

ಎಲೈ ರಾಜನೇ! ಅನಂತರ ಸರ್ವಸಮೃದ್ಧಿಯಿಂದ ಕೂಡಿದ ವಿಪುಲವಾದ ಉತ್ಸವದಿಂದ ಕೂಡಿದ ಸಂತೋಷಕರವಾದ ಕುರುರಾಜನಾದ ಆ ಧರ್ಮರಾಜನ ಯಾಗವು ಸಂಪನ್ನವಾಯಿತು.

ಶಾಂತವಿಘ್ನಸಮಾರಂಭಃ ಪ್ರಭೂತಧನಧಾನ್ಯವಾನ್ ।
ಅನ್ನವಾಂಶ್ಚಾಪಿ ನಿರ್ವೃತ್ತಃ ಕೇಶವೇನಾಭಿರಕ್ಷಿತಃ ॥೨॥

ಕೇಶವನಿಂದ ಅಭಿರಕ್ಷಿತವಾದ ಆ ಯಾಗವು ಉಂಟಾದ ವಿಘ್ನಗಳನ್ನು ಪರಿಹಾರಮಾಡಿಕೊಂಡು ಪ್ರಭೂತವಾದ ಧನಧಾನ್ಯವುಳ್ಳದ್ದಾಗಿ ಪ್ರಭೂತವಾದ ಅನ್ನದಾನವನ್ನು ಉಳ್ಳದ್ದಾಗಿ ಸಂಪನ್ನವಾಯಿತು.

ಈ ಲೋಕದಲ್ಲಿ ಇದ್ದ ಎಲ್ಲಾ ಬ್ರಾಹ್ಮಣರು ವೈಶ್ಯರು ಶೂದ್ರರು ಮ್ಲೇಚ್ಛರು ಸರ್ವವರ್ಣದವರು ಅಂತ್ಯಜರು ಮಧ್ಯಜರು ಆದಿವರ್ಣದಿಂದ ಉತ್ಪನ್ನವಾದವರು ಎಲ್ಲರೂ ಅಲ್ಲಿ ಸೇರಿದ್ದರು.

ನಾನಾದೇಶ ಸಮುತ್ಥೈಶ್ಚ ನಾನಾಜಾತಿಭಿರಾಗತೈಃ ।
ಪರ್ಯಾಪ್ತ ಇವ ಲೋಕೋಽಯಂ ಯುಧಿಷ್ಠಿರನಿವೇಶನೇ ॥೩೭॥

ಅನೇಕ ದೇಶಗಳಿಂದ ಬಂದ ಅನೇಕ ಜಾತಿಗಳ ಆ ಜನರಿಂದ ಯುಧಿಷ್ಠಿರನ ನಿವೇಶನವು ತುಂಬಿ ಹೋದಂತೆ ಆಯಿತು.

ಭೀಷ್ಮದ್ರೋಣಾದಯಃ ಸರ್ವೇ ಕುರವಃ ಸಸುಯೋಧನಾಃ ।
ವೃಷ್ಣಯಶ್ಚ ಸಮಗ್ರಾಶ್ಚ ಪಾಂಚಾಲಾಶ್ಚಾಪಿ ಸರ್ವಶಃ ।
ಯಜ್ಞೇಽಸ್ಮಿನ್ ಸರ್ವಕರ್ಮಾಣಿ ಚಕ್ರುರ್ದಾಸಾ ಇವ ಕ್ರತೌ ॥೩೮॥

ಈ ಯಜ್ಞದಲ್ಲಿ ಭೀಷ್ಮ ದ್ರೋಣಾದಿಗಳು ಸುಯೋಧನಸಹಿತರಾದ ಎಲ್ಲಾ ಕುರುಗಳು ಎಲ್ಲಾ ವೃಷ್ಣಿಗಳು ಎಲ್ಲಾ ಪಾಂಚಾಲರು ಸಹ ದಾಸರಂತೆ ಎಲ್ಲಾ ಕರ್ಮಗಳನ್ನೂ ಮಾಡಿದರು.

ಏವಂ ಪ್ರವೃತ್ತೋ ಯಜ್ಞೋಽಸೌ ಧರ್ಮರಾಜಸ್ಯ ಧೀಮತಃ ।
ಶುಶುಭೇ ಚ ಮಹಾಬಾಹೋ ಸೋಮಸ್ಯೇವ ಕ್ರತುರ್ಯಥಾ ॥೩೯॥

ಎಲೈ ಮಹಾಬಾಹುವೇ! ಹೀಗೆ ಪ್ರವೃತ್ತವಾದ ಮೇಧಾವಿಯಾದ ಧರ್ಮರಾಜನ ಈ ಯಜ್ಞವು ಚಂದ್ರನ ಯಜ್ಞದಂತೆ ಬಹಳವಾಗಿ ಶೋಭಿಸಿತು.

ವಸ್ತ್ರಾಣಿ ಕಂಬಳಾಂಶ್ಚೈವ ಪ್ರಾವಾರಾಂಶ್ಚೈವ ಸರ್ವಶಃ ।
ನಿಷ್ಕಹೇಮಜಭಾಂಡಾನಿ ಭೂಷಣಾನಿ ಚ ಸರ್ವಶಃ ।
ಪ್ರದದೌ ತತ್ರ ವಿಪ್ರಾಣಾಂ ಧರ್ಮರಾಜೋ ಯುಧಿಷ್ಠಿರಃ ॥೪೦॥

ಧರ್ಮರಾಜನಾದ ಯುಧಿಷ್ಠಿರನು ಬ್ರಾಹ್ಮಣರಿಗೆ ವಸ್ತ್ರಗಳನ್ನು ಕಂಬಳಿಗಳನ್ನು ಉತ್ತರೀಯಗಳನ್ನು, ನಿಷ್ಕಗಳನ್ನು, ಸುವರ್ಣಪಾತ್ರೆಗಳನ್ನು ಮತ್ತು ಅನೇಕ ಭೂಷಣಗಳನ್ನು ದಾನಮಾಡಿದನು.

ಯಾನಿ ತತ್ರ ಮಹೀಪಾಲೈರ್ಲಬ್ಧವಾನ್ ಸ ಧನಾನಿ ಚ ।
ತಾನಿ ರತ್ನಾನಿ ಸರ್ವಾಣಿ ವಿಪ್ರಾಣಾಂ ಪ್ರದದೌ ತದಾ ॥೪೧॥

ಅವನು ರಾಜರಿಂದ ಎಷ್ಟು ಧನವನ್ನು ಪಡೆದಿದ್ದನೋ ಆ ಎಲ್ಲಾ ರತ್ನಗಳನ್ನೂ ಆ ಕಾಲದಲ್ಲಿ ವಿಪ್ರರಿಗೆ ದಾನವನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಸಪ್ತಷಷ್ಟಿತಮೋಧ್ಯಾಯಃ ॥
॥ ಶಿಶುಪಾಲವಧಪರ್ವಣಿ ನವಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಅರವತ್ತೇಳನೆಯ ಅಧ್ಯಾಯವು ಮುಗಿಯಿತು.

★★★★★

ಅರವತ್ತೆಂಟನೆಯಅಧ್ಯಾಯ

(ರಾಜಸೂಯ ಸಮಾಪ್ತಿ. ಕೆಲವರನ್ನು ಬಿಟ್ಟು ಉಳಿದವರೆಲ್ಲರಿಂದ ತಮ್ಮ ತಮ್ಮ ಪಟ್ಟಣಕ್ಕೆ ಪ್ರಯಾಣ.)

ವೈಶಂಪಾಯನಃ

ತತಃ ಸ ಕುರುರಾಜಸ್ಯ ತದಾ ಸರ್ವಸಮೃದ್ಧಿಮಾನ್ ।
ಯಜ್ಞಃ ಪ್ರೀತಿಕರೋ ರಾಜನ್ ಸಂಬಭೌ ವಿಪುಲೋತ್ಸವಃ ॥೧॥

ಎಲೈ ರಾಜನೇ! ಅನಂತರ ಸರ್ವಸಮೃದ್ಧಿಯಿಂದ ಕೂಡಿದ ವಿಪುಲವಾದ ಉತ್ಸವದಿಂದ ಕೂಡಿದ ಸಂತೋಷಕರವಾದ ಕುರುರಾಜನಾದ ಆ ಧರ್ಮರಾಜನ ಯಾಗವು ಸಂಪನ್ನವಾಯಿತು.

ಶಾಂತವಿಘ್ನಸಮಾರಂಭಃ ಪ್ರಭೂತಧನಧಾನ್ಯವಾನ್ ।
ಅನ್ನವಾಂಶ್ಚಾಪಿ ನಿರ್ವೃತ್ತಃ ಕೇಶವೇನಾಭಿರಕ್ಷಿತಃ ॥೨॥

ಕೇಶವನಿಂದ ಅಭಿರಕ್ಷಿತವಾದ ಆ ಯಾಗವು ಉಂಟಾದ ವಿಘ್ನಗಳನ್ನು ಪರಿಹಾರಮಾಡಿಕೊಂಡು ಪ್ರಭೂತವಾದ ಧನಧಾನ್ಯವುಳ್ಳದ್ದಾಗಿ ಪ್ರಭೂತವಾದ ಅನ್ನದಾನವನ್ನು ಉಳ್ಳದ್ದಾಗಿ ಸಂಪನ್ನವಾಯಿತು.

ತಸ್ಯ ಯಜ್ಞಂ ಮಹಾಬಾಹುರಾಸಮಾಪ್ತೇರ್ಜನಾರ್ದನಃ ।
ರರಕ್ಷ ಭಗವಾನ್ ಶೌರಿಃ ಶಂಖಚಕ್ರಗದಾಧರಃ ।
ಸಮಾಪಯಾಮಾಸ ತದಾ ರಾಜಸೂಯಂ ಯಥಾವಿಧಿ ॥೩॥

ಶಂಖಚಕ್ರಗದಾಧರನಾದ ಭಗವಂತನಾದ ಮಹಾಬಾಹುವಾದ ಶೌರಿಯು ಆ ಯಜ್ಞವನ್ನು ಕೊನೆಯವರೆಗೂ ರಕ್ಷಣೆಮಾಡಿದನು. ಜನಾರ್ದನನು ಕೊನೆಗೆ ವಿಧಿವತ್ತಾಗಿ ಆ ರಾಜಸೂಯಯಾಗವನ್ನು ಸಮಾಪ್ತಿಗೊಳಿಸಿದನು.

ಕೋಟೀಃ ಸಹಸ್ರಂ ಪ್ರದದೌ ಬ್ರಾಹ್ಮಣಾನಾಂ ಮಹಾತ್ಮನಾಮ್ ।
ನ ಕರಿಷ್ಯತಿ ತಂ ಲೋಕೇ ಕಶ್ಚಿದನ್ಯೋ ಮಹೀಪತಿಃ ।
ಯಾಚಕಾಃ ಸರ್ವಕಾಮೈಶ್ಚ ಸತತಂ ತತೃಪುರ್ಧನೈಃ ॥೪॥

ಧರ್ಮರಾಜನು ಮಹಾತ್ಮರಾದ ಬ್ರಾಹ್ಮಣರಿಗೆ ಸಹಸ್ರಕೋಟಿ ಧನವನ್ನು ದಾನಮಾಡಿದನು ಅಂತಹ ಯಾಗವನ್ನು ಲೋಕದಲ್ಲಿ ಇನ್ನೊಬ್ಬ ಯಾವ ರಾಜನೂ ಮಾಡುವುದಿಲ್ಲ. ಯಾಚಕರೆಲ್ಲರೂ ಧನಗಳಿಂದಲೂ ಮತ್ತು ಎಲ್ಲಾ ಕಾಮಗಳಿಂದಲೂ ಯಾವಾಗಲೂ ತೃಪ್ತರಾದರು.

ತತಶ್ಚಾವಭೃಥಸ್ನಾತಃ ಸ ರಾಜಾ ಪಾಂಡುನಂದನಃ ।
ವ್ಯಾಸಂ ಧೌಮ್ಯಂ ಚ ನಿಯತೋ ನಾರದಂ ಚ ಮಹಾಮುನಿಮ್ ॥

ಸುಮಂತುಂ ಜೈಮಿನಿಂ ಪೈಲಂ ವೈಶಂಪಾಯನಮೇವ ಚ ।
ಯಾಜ್ಞವಲ್ಕ್ಯಂ ಕಠಂ ಚೈವ ಕಲಾಪಂ ಚ ಮಹೌಜಸಮ್ ।
ಸರ್ವಾಂಶ್ಚ ವಿಪ್ರಪ್ರವರಾನ್ ಪೂಜಯಾಮಾಸ ಸತ್ಕೃತಾನ್ ॥೬॥

ಅನಂತರ ಪಾಂಡುನಂದನನಾದ ಆ ರಾಜನು ಅವಭೃತಸ್ನಾನವನ್ನು ಮಾಡಿ ನಿಯಮ ಬದ್ಧನಾಗಿ ವ್ಯಾಸರು ಧೌಮ್ಯರು ಮಹರ್ಷಿಗಳಾದ ನಾರದರು ಸುಮಂತು ಜೈಮಿನಿ ಪೈಲ ವೈಶಂಪಾಯನ ಯಾಜ್ಞವಲ್ಕ್ಯ ಕಠ ಮಹಾತೇಜಸ್ವಿಯಾದ ಕಲಾಪ ಮತ್ತು ಎಲ್ಲಾ ಜೇಷ್ಠ ಬ್ರಾಹ್ಮಣರನ್ನೂ ಸತ್ಕರಿಸಿ ಪೂಜಿಸಿದನು.

ಯುಧಿಷ್ಠಿರಃ

ಭೀಮಪ್ರಭಾವಾತ್ ಪ್ರಾಪ್ತೋಽಯಂ ರಾಜಸೂಯೋ ಮಹಾಕ್ರತುಃ।
ಜನಾರ್ದನಪ್ರಭಾವಾಚ್ಚ ಸಂಪೂರ್ಣೋ ಮೇ ಮನೋರಥಃ ॥೭॥

ಈ ರಾಜಸೂಯಮಹಾಯಾಗವು ಭೀಮಸೇನನ ಮಹಾಸಾಮರ್ಥ್ಯದಿಂದಲೂ ಕೃಷ್ಣನ ಪ್ರಭಾವದಿಂದಲೂ ಪೂರ್ಣಗೊಂಡು ನನ್ನ ಮನೋರಥವು ಪೂರ್ಣವಾಯಿತು.

ವೈಶಂಪಾಯನಃ

ಅಥ ಯಜ್ಞಂ ಸಮಾಪ್ಯಾಂತೇ ಪೂಜಯಾಮಾಸ ಮಾಧವಮ್ ।
ಬಲದೇವಂ ಚ ದೇವೇಶಂ ಭೀಷ್ಮಾದ್ಯಾಂಶ್ಚ ಕುರೂತ್ತಮಾನ್ ॥೮॥

ಅನಂತರ ಯಜ್ಞವನ್ನು ಸಮಾಪ್ತಿಗೊಳಿಸಿ ಮಾಧವನನ್ನೂ ದೇವೇಶನಾದ ಬಲರಾಮನನ್ನೂ ಕುರೂತ್ತಮನಾದ ಭೀಷ್ಮನನ್ನೂ ಪೂಜಿಸಿದನು.

ತತಸ್ತ್ವವಭೃಥಸ್ನಾತಂ ಧರ್ಮರಾಜಂ ಯುಧಿಷ್ಠಿರಮ್ ।
ಸಮಸ್ತಂ ಪಾರ್ಥಿವಂ ಕ್ಷತ್ರಮುಪಗಮ್ಯೇದಮಬ್ರವೀತ್ ॥೯॥

ಆಗ ಅವಭೃಥಸ್ನಾನವನ್ನು ಮಾಡಿದ ಧರ್ಮರಾಜನಾದ ಯುಧಿಷ್ಠಿರನ ಬಳಿಗೆ ಭೂಮಿಯ ಮೇಲೆ ಇರುವ ಸಮಸ್ತ ಕ್ಷತ್ರಿಯ ಸಮೂಹವು ಬಂದು ಹೀಗೆ ಹೇಳಿತು.

ದಿಷ್ಟ್ಯಾ ವರ್ಧಸಿ ಧರ್ಮಜ್ಞ ಸಾಮ್ರಾಜ್ಯಂ ಪ್ರಾಪ್ತವಾನ್ ವಿಭೋ ।
ಅಜಮೀಢಾಜಮೀಢಾನಾಂ ಯಶಃ ಸಂವರ್ಧಿತಂ ತ್ವಯಾ ।
ಕರ್ಮಣೈತೇನ ರಾಜೇಂದ್ರ ಧರ್ಮಶ್ಚ ಸುಮಹಾನ್ ವೃತಃ ॥೧೦॥

ಧರ್ಮಜ್ಞನೇ! ದೇವರದಯೆಯಿಂದ ನೀನು ಅಭಿವೃದ್ಧಿಯನ್ನು ಹೊಂದಿದ್ದೀಯೆ ವಿಭುವೇ! ನೀನು ಚಕ್ರವರ್ತಿ ಪದವಿಯನ್ನು ಪಡೆದಿದ್ದೀಯೆ, ಎಲೈ ಅಜಮೀಢನೇ! ನಿನ್ನಿಂದ ಅಜಮೀಢವಂಶದ ಯಶಸ್ಸು ವಿಸ್ತಾರವಾಯಿತು. ರಾಜೇಂದ್ರನೇ! ಈ ಕರ್ಮದಿಂದ ಮಹಾ ಧರ್ಮವನ್ನು ಸಂಪಾಸಿದ್ದೀಯೆ.

ಆಪೃಚ್ಛಾಮೋ ನರವ್ಯಾಘ್ರ ಸರ್ವಕಾಮೈಶ್ಚ ಪೂಜಿತಾಃ ।
ಸ್ವರಾಷ್ಟ್ರಾಣಿ ಗಮಿಷ್ಯಾಮಸ್ತದನುಜ್ಞಾತುಮರ್ಹಸಿ ॥೧೧॥

ನರವ್ಯಾಘ್ರನೇ! ನಾವು ಎಲ್ಲಾ ಕಾಮಗಳಿಂದಲೂ ಪೂಜಿಸಲ್ಪಟ್ಟಿದ್ದೇವೆ. ನಿನ್ನ ಅನುಮತಿಯನ್ನು ಕೇಳುತ್ತಿದ್ದೇವೆ. ನಮ್ಮ ನಮ್ಮ ರಾಷ್ಟ್ರಗಳಿಗೆ ಹೋಗುವೆವು. ಅದಕ್ಕೆ ನೀನು ಅನುಮತಿಯನ್ನು ಕೊಡಬೇಕು.

ವೈಶಂಪಾಯನಃ

ಶ್ರುತ್ವಾ ತು ವಚನಂ ರಾಜ್ಞಾಂ ಧರ್ಮರಾಜೋ ಯುಧಿಷ್ಠಿರಃ ।
ಯಥಾರ್ಹಂ ಪೂಜ್ಯ ನೃಪತೀನ್ ಭ್ರಾತೄನ್ ಸರ್ವಾನುವಾಚ ಹ ॥೧೨॥

ರಾಜರ ಮಾತುಗಳನ್ನು ಕೇಳಿದ ಧರ್ಮರಾಜನಾದ ಯುಧಿಷ್ಠಿರನು ಯಥಾಯೋಗ್ಯವಾಗಿ ರಾಜರನ್ನೆಲ್ಲಾ ಸತ್ಕರಿಸಿ ತಮ್ಮ ತಮ್ಮಂದಿರನ್ನು ಕುರಿತು ಹೇಳಿದನು.

ರಾಜಾನಃ ಸರ್ವ ಏವೈತೇ ಪ್ರೀತ್ಯಾಽಸ್ಮಾನ್ ಸಮುಪಾಗತಾಃ ।
ಪ್ರಸ್ಥಿತಾಃ ಸ್ವಾನಿ ರಾಷ್ಟ್ರಾಣಿ ಮಾಮಾಪೃಚ್ಛ್ಯ ಪರಂತಪಾಃ
ತೇಽನುವ್ರಜತ ಭದ್ರಂ ವೋ ವಿಷಯಾಂತಂ ನೃಪೋತ್ತಮಾನ್ ॥೧೩॥

ನಮ್ಮ ಮೇಲೆ ಪ್ರೀತಿಯಿಂದ ಬಂದ ಈ ರಾಜರೆಲ್ಲರೂ ನನ್ನ ಅನುಮತಿಯನ್ನು ಪಡೆದು ತಮ್ಮ ತಮ್ಮ ರಾಷ್ಟ್ರಗಳಿಗೆ ಹೊರಟಿದ್ದಾರೆ. ಎಲೈ ಪರಂತಪರೇ! ನಿಮಗೆ ಮಂಗಳವಾಗಲಿ. ನಮ್ಮ ರಾಜಧಾನಿಯು ಮುಗಿಯುವರೆಗೂ ಈ ರಾಜ ಶ್ರೇಷ್ಠರನ್ನು ಹಿಂಬಾಲಿಸಿ ಹೋಗಿ.

ಭ್ರಾತುರ್ವಚನಮಾಜ್ಞಾಯ ಪಾಂಡವಾ ಧರ್ಮಚಾರಿಣಃ ।
ಯಥಾರ್ಹಂ ನೃಪಮುಖ್ಯಾಂಶ್ಚ ತದೈಕೈಕಮನುವ್ರಜನ್ ॥೧೪॥

ಅಣ್ಣನ ಮಾತನ್ನು ಕೇಳಿದ ಧರ್ಮಚಾರಿಗಳಾದ ಪಾಂಡವರೆಲ್ಲರೂ ರಾಜರುಗಳಲ್ಲಿ ಮುಖ್ಯರಾದವರನ್ನು ಯಥಾಯೋಗ್ಯವಾಗಿ ಒಬ್ಬೊಬ್ಬರನ್ನು ಒಬ್ಬೊಬ್ಬರು ಅನುಸರಿಸಿ ನಡೆದರು.

ಧನಂಜಯೋ ಜಯತ್ಸೇನಂ ಸಹಾಮಾತ್ಯಂ ಸಬಾಂಧವಮ್ ।
ಧೃತರಾಷ್ಟ್ರಂ ಚ ಭೀಷ್ಮಂ ಚ ವಿದುರಂ ಚ ಮಹಾಮತಿಮ್ ॥೧೫॥

ಅಮಾತ್ಯರಿಂದಲೂ ಮತ್ತು ಬಂಧುಗಳಿಂದಲೂ ಸಹಿತನಾದ ಜಯತ್ಸೇನ ಧೃತರಾಷ್ಟ್ರ ಭೀಮ ಮಹಾಮತಿಯಾದ ವಿದುರ ಇವರ ಹಿಂದೆ ಧನಂಜಯನು ಹೋದನು.

ಸಂಜಯಂ ಚ ಮಹಾತ್ಮಾನಂ ಭೀಮಸೇನಃ ಪ್ರತಾಪವಾನ್ ।
ದ್ರೋಣಂ ದ್ರೋಣಾಯನಿಂ ಚೈವ ಸಾಮಾತ್ಯಂ ಸಸುಹೃದ್ಗಣಮ್ ॥೧೬॥

ಪ್ರತಾಪಶಾಲಿಯಾದ ಭೀಮಸೇನನು ಮಹಾತ್ಮನಾದ ಸಂಜಯ, ದ್ರೋಣ, ಮಂತ್ರಿಗಳಿಂದಲೂ ಸುಹೃದ್ಗಣದಿಂದಲೂ ಕೂಡಿದ ಅಶ್ವತ್ಥಾಮ ಇವರನ್ನು ಹಿಂಬಾಲಿಸಿದನು.

ಕೃಪಂ ಚ ಬಾಹ್ಲಿಕಂ ಚೈವ ಸಹದೇವೋ ಮಹಾಮತಿಃ ।
ಶಲ್ಯಂ ಚ ಸಸುತಂ ವೀರಂ ಸಾತ್ಯಕಿಃ ಪರವೀರಹಾ ॥೧೭॥

ಮಹಾಮತಿಯಾದ ಸಹದೇವನು ಕೃಪ ಮತ್ತು ಬಾಹ್ಲಿಕರ ಹಿಂದೆ ನಡೆದನು. ಪರವೀರನಾಶಕನಾದ ಸಾತ್ಯಕಿಯು ವೀರನಾದ ಶಲ್ಯನನ್ನು ಮತ್ತು ಅವನ ಮಕ್ಕಳನ್ನು ಹಿಂಬಾಲಿಸಿದನು.

ಭಗದತ್ತಂ ಚ ರಾಜಾನಂ ಕೌಸಲಂ ಚ ಬೃಹದ್ಬಲಮ್ ।
ವಿರಾಟಂ ಚಾನ್ವಯಾತ್ ತೂರ್ಣಂ ಧೃಷ್ಟದ್ಯುಮ್ನಃ ಪ್ರತಾಪವಾನ್ ॥೧೮॥

ಪ್ರತಾಪಶಾಲಿಯಾದ ಧೃಷ್ಟದ್ಯುಮ್ನನು ಭಗದತ್ತರಾಜನನ್ನು ಕೋಸಲರಾಜನಾದ ಬೃಹದ್ಬಲನನ್ನು ಮತ್ತು ವಿರಾಟರಾಜನನ್ನು ಶೀಘ್ರವಾಗಿ ಹಿಂಬಾಲಿಸಿದನು.

ದಾಕ್ಷಿಣಾತ್ಯಾಂಶ್ಚ ಸರ್ವಾಂಶ್ಚ ಹೈಡಿಂಬಃ ಸಮನುವ್ರಜತ್ ।
ದ್ರೌಪದೇಯಾಃ ಸಸೌಭದ್ರಾಃ ಪಾರ್ವತೇಯಾನ್ ಮಹೀಪತೀನ್ ॥೧೯॥

ಹಿಡಿಂಬೆಯ ಮಗನಾದ ಘಟೋತ್ಕಚನು ದಕ್ಷಿಣದೇಶದ ಎಲ್ಲಾ ರಾಜರನ್ನು ಹಿಂಬಾಲಿಸಿದನು. ಅಭಿಮನ್ಯು ಮತ್ತು ದ್ರೌಪದಿಯ ಮಕ್ಕಳಾದ ಪಂಚಪಾಂಡವರು ಪರ್ವತದೇಶದ ರಾಜರನ್ನು ಹಿಂಬಾಲಿಸಿದರು.

ಅನ್ವಗಚ್ಛಂಸ್ತಥೈವಾನ್ಯಾನ್ ಪಾರ್ಥಿವಾನ್ ಕುರವೋಽಪರೇ ।
ಏವಂ ನೃಪಾಃ ಪೂಜಿತಾಸ್ತೇ ಜಗ್ಮುರ್ವಿಪ್ರಾಶ್ಚ ಸರ್ವಶಃ ॥೨೦॥

ಉಳಿದ ಕುರುಗಳು ಹಿಂದೆ ನಡೆದರು ಹೀಗೆ ಎಲ್ಲಾ ರಾಜರು ಮತ್ತು ಬ್ರಾಹ್ಮಣರು ಪೂಜಿಸಲ್ಪಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೊರಟರು.

ಗತೇಷು ಪಾರ್ಥಿವೇಂದ್ರೇಷು ಸರ್ವೇಷು ಭರತರ್ಷಭ ।
ಯುಧಿಷ್ಠಿರಃ ಸಹಾಮಾತ್ಯಃ ಪ್ರವಿವೇಶ ಪುರೋತ್ತಮಮ್ ॥೨೧॥

ಎಲೈ ಭರತರ್ಷಭನೇ! ಎಲ್ಲಾ ರಾಜಶ್ರೇಷ್ಠರು ಅಲ್ಲಿಂದ ಹೊರಟ ಮೇಲೆ ಯುಧಿಷ್ಠಿರನು ತನ್ನ ಮಂತ್ರಿಗಳ ಜೊತೆಯಲ್ಲಿ ಶ್ರೇಷ್ಠವಾದ ತನ್ನ ಪಟ್ಟಣವನ್ನು ಪ್ರವೇಶಿಸಿದನು.

ಕೃತಾರ್ಥಂ ಪಾಂಡವಂ ದೃಷ್ಟ್ವಾ ಸಿಂಹಾಸನಗತಂ ನೃಪಮ್ ।
ರೋಚಮಾನಂ ಮಹೇಂದ್ರಾಭಂ ವಾಸುದೇವೋಽಬ್ರವೀದ್ ಬಲೀ ॥೨೨॥

ಕೃತಾರ್ಥನಾಗಿ ಶ್ರೇಷ್ಠವಾದ ಸಿಂಹಾಸನದಲ್ಲಿ ಕುಳಿತು ಮಹೇಂದ್ರನಂತೆ ಕಂಗೊಳಿಸುತ್ತಿರುವ ಧರ್ಮರಾಜನನ್ನು ಕುರಿತು ಬಲಿಷ್ಠನಾದ ವಾಸುದೇವನು ಹೀಗೆ ಮಾತನಾಡಿದನು.

ಆಪೃಚ್ಛೇ ತ್ವಾಂ ಗಮಿಷ್ಯಾಮಿ ದ್ವಾರಕಾಂ ಕುರುನಂದನ ।
ರಾಜಸೂಯಂ ಕ್ರತುಶ್ರೇಷ್ಠಂ ದಿಷ್ಟ್ಯಾ ತ್ವಂ ಪ್ರಾಪ್ತವಾನಸಿ ॥೨೩॥

ಎಲೈ ಕುರುನಂದನನೇ! ನಾನು ನಿನ್ನ ಅನುಮತಿಯನ್ನು ಪಡೆದು ದ್ವಾರಕೆಗೆ ಹೋಗುವೆನು. ನೀನು ದೇವರ ದಯೆಯಿಂದ ಶ್ರೇಷ್ಠವಾದ ರಾಜಸೂಯಯಾಗವನ್ನು ಆಚರಿಸಿದ್ದೀಯೆ.

ತಮುವಾಚೈವಮುಕ್ತಸ್ತು ಧರ್ಮರಾಣ್ಮಧುಸೂದನಮ್ ।
ತವ ಪ್ರಸಾದಾದ್ ಗೋವಿಂದ ಪ್ರಾಪ್ತವಾನಸ್ಮಿ ವೈ ಕ್ರತುಮ್ ॥೨೪॥

ಸಮಸ್ತಂ ಪಾರ್ಥಿವಂ ಕ್ಷತ್ರಂ ತತ್ತ್ವತ್ಪ್ರಸಾದಾದ್ ವಶಾನುಗಮ್ ।
ಉಪಾದಾಯ ಬಲಿಂ ಮುಖ್ಯಂ ಮಾಮೇವಂ ಸಮುಪಸ್ಥಿತಮ್ ॥೨೫॥

ಹೀಗೆ ಹೇಳಲ್ಪಟ್ಟ ಧರ್ಮರಾಜನು ಮಧುಸೂದನನನ್ನು ಕುರಿತು ಹೀಗೆ ಹೇಳಿದನು. ಗೋವಿಂದನೇ ನಿನ್ನ ಅನುಗ್ರಹದಿಂದಲೇ ನಾನು ಈ ಯಾಗವನ್ನು ನೆರವೇರಿಸಿದ್ದೇನೆ. ನಿನ್ನ ಅನುಗ್ರಹದಿಂದಲೇ ಸಮಸ್ತವಾದ ಕ್ಷತ್ರಿಯ ಕುಲವು ಶ್ರೇಷ್ಠವಾದ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ನನ್ನ ಸಮೀಪಕ್ಕೆ ಬಂದು ನನಗೆ ಅಧೀನವಾಗಿದೆ.

ತೇ ವಯಂ ತ್ವಾಮೃತೇ ವೀರ ನ ರಂಸ್ಯಾಮಃ ಕಥಂಚನ ।
ಅವಶ್ಯಂ ಚಾಪಿ ಗಂತವ್ಯಾ ತ್ವಯಾ ದ್ವಾರವತೀ ಪುರೀ ॥೨೬॥

ಎಲೈ ವೀರನೇ! ಅಂತಹ ನಾವು ನೀನಿಲ್ಲದೆ ಎಂದೂ ಸಂತೋಷದಿಂದ ಇರುವುದಿಲ್ಲ. ಆದರೆ ನೀನೂ ಸಹ ಅವಶ್ಯವಾಗಿ ದ್ವಾರವತಿಗೆ ಹೋಗಲೇ ಬೇಕು.

ಏವಮುಕ್ತಸ್ತು ಗೋವಿಂದೋ ಯುಧಿಷ್ಠಿರಸಹಾಯವಾನ್ ।
ಅಭಿಗಮ್ಯಾಬ್ರವೀತ್ ಪ್ರೀತಃ ಪೃಥಾಂ ಪೃಥುಯಶಾ ಭುವಿ ॥೨೭॥

ಧರ್ಮರಾಜನು ಹೀಗೆ ಹೇಳುತ್ತಿರಲು ಭೂಮಿಯಲ್ಲಿ ಅಪಾರವಾದ ಕೀರ್ತಿಯನ್ನು ಹೊಂದಿದ್ದ ಗೋವಿಂದನು ಧರ್ಮರಾಜನ ಜೊತೆಯಲ್ಲಿ ಕುಂತಿಯ ಸಮೀಪಕ್ಕೆ ಹೋಗಿ ಹೀಗೆ ಮಾತನಾಡಿದನು.

ಸ್ವಾರಾಜ್ಯಂ ಸಮನುಪ್ರಾಪ್ತಃ ಪುತ್ರಸ್ತೇಽದ್ಯ ಪಿತೃಷ್ವಸಃ ।
ಸಿದ್ಧಾರ್ಥಾ ವಸುಮಂತಶ್ಚ ಸಾ ತ್ವಂ ಪ್ರೀತಿಮವಾಪ್ನುಹಿ ।
ಅನುಜ್ಞಾತಸ್ತ್ವಯಾ ಚಾಹಂ ದ್ವಾರಕಾಂ ಗಂತುಮುತ್ಸಹೇ ॥೨೮॥

ಎಲೌ ಸೋದರತ್ತೆಯೇ! ಈ ದಿನ ನಿನ್ನ ಮಗನು ಚಕ್ರವರ್ತಿಯ ಪದವಿಯನ್ನು ಪಡೆದಿದ್ದಾನೆ. ನಿನ್ನ ಮಕ್ಕಳೆಲ್ಲರೂ ಕೃತಕೃತ್ಯರೂ ಶ್ರೀಮಂತರೂ ಆಗಿದ್ದಾರೆ. ನೀನು ಸಂತೋಷವನ್ನು ಹೊಂದು. ನಿನ್ನ ಅನುಮತಿಯನ್ನು ಪಡೆದು ನಾನು ದ್ವಾರಕೆಗೆ ಹೋಗಲು ಬಯಸುತ್ತೇನೆ.

ಏವಮುಕ್ತ್ವಾ ತತಃ ಶೌರಿರ್ಭಗಿನೀಂ ವೈ ಪಿತುಸ್ತದಾ ।
ಸುಭದ್ರಾಂ ದ್ರೌಪದೀಂ ಚೈವ ಸಭಾಜಯತ ಕೇಶವಃ ॥೨೯॥

ಹೀಗೆ ಹೇಳಿ ಶೌರಿಯಾದ ಕೇಶವನು ತನ್ನ ಸೊದರತ್ತೆಯಾದ ಕುಂತಿಯನ್ನೂ ಸುಭದ್ರೆಯನ್ನೂ ಮತ್ತು ದ್ರೌಪದಿಯನ್ನು ಸತ್ಕರಿಸಿದನು.

ನಿಷ್ಕ್ರಮ್ಯಾಂತಃಪುರಾಚ್ಚೈವ ಯುಧಿಷ್ಠಿರಸಹಾಯವಾನ್ ।
ಸ್ನಾತಶ್ಚ ಕೃತಜಪ್ಯಶ್ಚ ಬ್ರಾಹ್ಮಣಾನ್ ಸ್ವಸ್ತಿ ವಾಚ್ಯ ಸಃ ।
ಯೋಜಯಿತ್ವಾ ಮಹಾಬಾಹುರ್ದಾರುಕಃ ಪ್ರತ್ಯುಪಸ್ಥಿತಃ ॥೩೦॥

ಯುಧಿಷ್ಠಿರನ ಜೊತೆಯಲ್ಲಿ ಅಂತಃಪುರದಿಂದ ಹೊರಗೆ ಬಂದು ಸ್ನಾನವನ್ನು ಮಾಡಿ ಜಪವನ್ನು ಮುಗಿಸಿ ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಪಡೆಯುವಷ್ಟರಲ್ಲಿ ಮಹಾಬಾಹುವಾದ ದಾರುಕನು ರಥವನ್ನು ಹೂಡಿ ಸಿದ್ಧನಾದನು.

ಉಪಸ್ಥಿತಂ ರಥಂ ದೃಷ್ಟ್ವಾ ತಾರ್ಕ್ಷ್ಯಪ್ರವರಕೇತನಮ್ ।
ಯುಧಿಷ್ಠಿರಕಿರೀಟಿಭ್ಯಾಂ ದತ್ತಹಸ್ತೋ ಯಯೌ ರಥಮ್ ॥೩೧॥

ಗರಡಧ್ವಜವುಳ್ಳ ರಥವು ಸನ್ನದ್ಧವಾಗಿರುವುದನ್ನು ನೋಡಿದ ಕೃಷ್ಣನು ಧರ್ಮರಾಜ ಮತ್ತು ಅರ್ಜುನರಿಂದ ಹಸ್ತಲಾಘವವನ್ನು ಪಡೆದು ರಥದ ಸಮೀಪಕ್ಕೆ ಬಂದನು.

ಪ್ರದಕ್ಷಿಣಮುಪಾವೃತ್ಯ ಸಮಾರುಹ್ಯ ಮಹಾಮನಾಃ ।
ದಾರುಕಸ್ಯ ಕರಂ ಗೃಹ್ಯ ತತ್ರೋಚ್ಚತಳಮಾವಿಶತ್ ॥೩೨॥

ಮಹಾಮನನಾದ ಅವನು ರಥಕ್ಕೆ ಪ್ರದಕ್ಷಿಣೆಯನ್ನು ಮಾಡಿ ದಾರುಕನ ಕೈಯನ್ನು ಹಿಡಿದು ರಥವನ್ನು ಏರಿ ಅಲ್ಲಿ ಉನ್ನತಸ್ಥಾನದಲ್ಲಿ ಕುಳಿತನು.

ಪ್ರತಸ್ಥೇ ಪುಂಡರೀಕಾಕ್ಷಸ್ತತೋ ದ್ವಾರವತೀಂ ಪುರೀಮ್ ।
ಸಾತ್ಯಕಿಃ ಕೃತವರ್ಮಾ ಚ ರಥಮಾರುಹ್ಯ ಸತ್ವರೌ ।
ವೀಜಯಾಮಾಸುತಸ್ತತ್ರ ಚಾಮರಾಭ್ಯಾಂ ಹರಿಂ ತಥಾ ॥೩೩॥

ಅನಂತರ ಪುಂಡರೀಕಾಕ್ಷನು ದ್ವಾರವತಿಗೆ ಹೊರಟನು. ಸಾತ್ಯಕಿ ಮತ್ತು ಕೃತವರ್ಮರು ಬೇಗ ರಥವನ್ನು ಏರಿ ಇಂದ್ರನಿಗೆ ಬೀಸಿದಂತೆ ಎರಡು ಕಡೆಗಳಿಂದಲೂ ಚಾಮರವನ್ನು ಬೀಸಿದರು.

ಬಲದೇವಶ್ಚ ದೇವೇಶೋ ಯಾದವಾಶ್ಚ ಸಹಸ್ರಶಃ ।
ಪ್ರಯಯೂ ರಾಜವತ್ ಸರ್ವೇ ಧರ್ಮಪುತ್ರೇಣ ಪೂಜಿತಾಃ ॥೩೪॥

ದೇವೇಶನಾದ ಬಲರಾಮನು ಮತ್ತು ಸಹಸ್ರಾರು ಯಾದವರು ರಾಜರಂತೆ ಎಲ್ಲರೂ ಧರ್ಮರಾಜನಿಂದ ಪೂಜಿಸಲ್ಪಟ್ಟು ಅಲ್ಲಿಂದ ಹೊರಟರು.

ತತಃ ಸಸಂಭ್ರಮಂ ರಾಜಾ ಹಿತ್ವಾ ಸೌವರ್ಣಮಾಸನಮ್ ।
ತತಃ ಪದ್ಭ್ಯಾಮನುಪ್ರಾಪ್ತೋ ಧರ್ಮಪುತ್ರೋ ಯುಧಿಷ್ಠಿರಃ ।
ಭ್ರಾತೃಭಿಃ ಸಹಿತಃ ಶ್ರೀಮಾನ್ ವಾಸುದೇವಂ ಮಹಾಬಲಮ್ ॥೩೫॥

ಆಗ ಕಾಂತಿಯುಕ್ತನಾದ ಧರ್ಮಪುತ್ರನಾದ ಧರ್ಮರಾಜನು ತನ್ನ ಸುವರ್ಣಾಸನವನ್ನು ಮತ್ತು ಉಳಿದ ವೈಭವಗಳನ್ನು ಬೇಗ ಬಿಟ್ಟು ತಮ್ಮಂದಿರ ಜೊತೆಯಲ್ಲಿ ಕಾಲ್ನಡಿಗೆಯಲ್ಲೇ ಮಹಾಬಲನಾದ ವಾಸುದೇವನನ್ನು ಹಿಂಬಾಲಿಸಿದನು.

ತತೋ ಮುಹೂರ್ತಂ ಸಂಗೃಹ್ಯ ಸ್ಯಂದನಪ್ರವರಂ ಹರಿಃ ।
ಅಬ್ರವೀತ್ ಪುಂಡರೀಕಾಕ್ಷಃ ಕುಂತೀಪುತ್ರಂ ಯುಧಿಷ್ಠಿರಮ್ ॥೩೬॥

ಆಗ ಪುಂಡರೀಕಾಕ್ಷನಾದ ಹರಿಯು ಒಂದು ಮುಹೂರ್ತಕಾಲ ರಥವನ್ನು ನಿಲ್ಲಿಸಿ ಕುಂತಿ ಪುತ್ರನಾದ ಯುಧಿಷ್ಠಿರನನ್ನು ಕುರಿತು ಹೀಗೆ ಹೇಳಿದನು.

ಅಪ್ರಮತ್ತಃ ಸ್ಥಿತೋ ನಿತ್ಯಂ ಪ್ರಜಾಃ ಪಾಹಿ ಮಹಾಮತೇ ।
ಪರ್ಜನ್ಯಮಿವ ಭೂತಾನಿ ಮಹಾದ್ರುಮಮಿವಾಂಡಜಾಃ ।
ಬಾಂಧವಾಸ್ತ್ವೋಪಜೀವಂತು ಸಹಸ್ರಾಕ್ಷಮಿವಾಮರಾಃ ॥೩೭॥

ಮಹಾಮತಿಯೇ! ಯಾವಾಗಲೂ ಎಚ್ಚರಿಕೆಯಿಂದಿದ್ದು ಪ್ರಜೆಗಳನ್ನು ರಕ್ಷಿಸು. ಎಲ್ಲಾ ಜೀವರು ಪರ್ಜನ್ಯನನ್ನು ಆಶ್ರಯಿಸಿದಂತೆ ಪಕ್ಷಿಗಳು ಮಹಾವೃಕ್ಷವನ್ನು ಆಶ್ರಯಿಸಿದಂತೆ ದೇವತೆಗಳು ಇಂದ್ರನನ್ನು ಆಶ್ರಯಿಸಿದಂತೆ ನಿನ್ನ ಎಲ್ಲಾ ಬಂಧುಗಳು ನಿನ್ನನ್ನು ಆಶ್ರಯಿಸಲಿ.

ವೈಶಂಪಾಯನಃ

ಕೃತ್ವಾ ಪರಸ್ಪರೇಣೈವಂ ಸಂವಿದಂ ಕೃಷ್ಣಪಾಂಡವೌ ।
ಅನ್ಯೋನ್ಯಂ ಸಮನುಜ್ಞಾಯ ಜಗ್ಮತುಃ ಸ್ವಗೃಹಾನ್ ಪ್ರತಿ ॥೩೮॥

ಹೀಗೆ ಪರಸ್ಪರವಾಗಿ ಸಂಭಾಷಣೆಯನ್ನು ಮಾಡಿ ಕೃಷ್ಣ ಮತ್ತು ಧರ್ಮರಾಜರು ಪರಸ್ಪರ ಅನುಮತಿಯನ್ನು ಪಡೆದು ತಮ್ಮ ತಮ್ಮ ಮನೆಗಳಿಗೆ ಹೊರಟರು.

ಪುನರ್ದ್ವಾರವತೀಂ ಕೃಷ್ಣಃ ಸಾತ್ವತಪ್ರವರೋ ನೃಪ ।
ಯುಧಿಷ್ಠಿರೋ ಮಹಾರಾಜಃ ಪ್ರವಿವೇಶ ಪುರಂ ಸ್ವಕಮ್ ॥೩೯॥

ಎಲೈ ರಾಜನೇ! ಸಾತ್ವತಪ್ರವರನಾದ ಕೃಷ್ಣನು ಪುನಃ ದ್ವಾರಾವತಿಗೆ ಹೊರಟನು. ಯುಧಿಷ್ಠಿರಮಹಾರಾಜನು ತನ್ನ ಪಟ್ಟಣವನ್ನು ಪ್ರವೇಶಿಸಿದನು.

ದುರ್ಯೋಧನೋ ಮಹಾರಾಜ ಶಕುನಿಶ್ಚಾಪಿ ಸೌಬಲಃ ।
ಸೂತಪುತ್ರಶ್ಚ ರಾಧೇಯಃ ಸಹ ದುಶ್ಶಾಸನಾದಿಭಿಃ ॥೪೦॥

ಸರ್ವಕಾಮಗುಣೋಪೇತೈರರ್ಚ್ಯಮಾನಾಸ್ತು ಭಾರತ ।
ಸಭಾಯಾಂ ರಮಣೀಯಾಯಾಮವಸಂಸ್ತತ್ರ ಪಾಂಡವೈಃ ॥೪೧॥

ಮಹಾರಾಜನೇ! ದುರ್ಯೋಧನ ಸುಬಲಪುತ್ರನಾದ ಶಕುನಿ ಸೂತಪುತ್ರನಾದ ಕರ್ಣ ಇವರು ದುಶ್ಶಾಸನಾದಿಗಳ ಜೊತೆಯಲ್ಲಿ ಧರ್ಮರಾಜನಿಂದ ಎಲ್ಲಾ ರೀತಿಯಲ್ಲಿಯೂ ಪೂಜಿಸಲ್ಪಟ್ಟು ಆ ರಮಣೀಯವಾದ ಸಭೆಯಲ್ಲಿ ಪಾಂಡವರ ಜೊತೆಯಲ್ಲಿ ಸ್ವಲ್ಪಕಾಲ ವಾಸವನ್ನು ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಅಷ್ಟಷಷ್ಟಿತಮೋಧ್ಯಾಯಃ ॥

॥ ಶಿಶುಪಾಲವಧಪರ್ವ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ
ಅರವತ್ತೆಂಟನೆಯ ಅಧ್ಯಾಯವು ಮುಗಿಯಿತು.

ಇಲ್ಲಿಗೆ ಶಿಶುಪಾಲವಧಪರ್ವವು ಮುಗಿಯಿತು.

★★★★★

೭. ದ್ಯೂತಪರ್ವ

ಐರವತ್ತೊಂಭತ್ತನೆಯ ಅಧ್ಯಾಯ

(ವ್ಯಾಸರ ಮುಖದಿಂದ ಅಪಶಕುನಗಳ ಫಲವನ್ನು ಕೇಳಿದ ಧರ್ಮರಾಜನ ಸಂಕಲ್ಪ.)

ವೈಶಂಪಾಯನಃ

ಅನುಸಂಸಾದ್ಯ ನೃಪತೀನ್ ಪಾಂಡವಾಃ ಪಾಂಡವಾಗ್ರಜಮ್ ।
ಅನುಜಗ್ಮುರ್ಮಹೇಷ್ವಾಸಾ ಧರ್ಮರಾಜಂ ಯುಧಿಷ್ಠಿರಮ್ ॥೧॥

ರಾಜರನ್ನು ಕಳುಹಿಸಿಕೊಟ್ಟು ಮಹಾಧರ್ನುಧಾರಿಗಳಾದ ಪಾಂಡವರು ತಮ್ಮ ಅಣ್ಣನಾದ ಧರ್ಮರಾಜನಾದ ಯುಧಿಷ್ಠಿರನನ್ನು ಹಿಂಬಾಲಿಸಿದರು.

ಸೋಽನುಮೇನೇ ಮಹಾಬಾಹುರ್ಭ್ರಾತೄಂಶ್ಚ ಸುಹೃದಸ್ತಥಾ ।
ಶಿಷ್ಯೈಃ ಪರಿವೃತೋ ವ್ಯಾಸಃ ಪುರಸ್ತಾತ್ ಸಮಪದ್ಯತ ॥೨॥

ಮಹಾಬಾಹುವಾದ ಧರ್ಮನು ತಮ್ಮಂದಿರನ್ನೂ ಮತ್ತು ಸ್ನೇಹಿತರನ್ನೂ ಅನುಮೋದಿಸಿದನು. ಅಷ್ಟರಲ್ಲಿ ಶಿಷ್ಯರಿ/ಂದ ಪರಿವೃತರಾದ ವ್ಯಾಸರು ಎದುರಿಗೆ ಬಂದರು.

ಸೋಭ್ಯುತ್ಥಾಯಾಸನಾತ್ ತೂರ್ಣಂ ಭ್ರಾತೃಭಿಃ ಪರಿವಾರಿತಃ ।
ಪಾದ್ಯೇನಾಸನದಾನೇನ ಪಿತಾಮಹಮಪೂಜಯತ್ ॥೩॥

ಸಹೋದರರಿಂದ ಸ್ತುತ್ತುವರಿಯಲ್ಪಟ್ಟ ಅವನು ಬೇಗ ತನ್ನ ಆಸನದಿಂದ ಎದ್ದು ಪಾದ್ಯವನ್ನೂ ಆಸನವನ್ನೂ ಕೊಟ್ಟು ಪಿತಾಮಹರನ್ನು ಪೂಜಿಸಿದನು.

ಅಥೋಪವಿಶ್ಯ ಭಗವಾನ್ ಕಾಂಚನೇ ಪರಮಾಸನೇ ।
ಆಸ್ಯತಾಮಿತಿ ಚೋವಾಚ ಧರ್ಮರಾಜಂ ಯುಧಿಷ್ಠಿರಮ್ ॥೪॥

ಅನಂತರ ಪೂಜ್ಯರಾದ ವ್ಯಾಸರು ಸುವರ್ಣಮಯವಾದ ಶ್ರೇಷ್ಠವಾದ ಆಸನದಲ್ಲಿ ಕುಳಿತು ಧರ್ಮರಾಜನನ್ನು ಉದ್ದೇಶಿಸಿ ಪ್ರೀತಿಪೂರ್ವಕವಾಗಿ ಹೇಳಿದರು.

ಅಥೋಪವಿಷ್ಟಂ ರಾಜಾನಂ ಭ್ರಾತೃಭಿಃ ಪರಿವಾರಿತಮ್ ।
ಉವಾಚ ಭಗವಾನ್ ವ್ಯಾಸಸ್ತತ್ತದಾವ್ಯವಿಶಾರದಃ ॥೫॥

ಅನಂತರ ವಾಕ್ಯವಿಶಾರದರಾದ ವ್ಯಾಸರು ತಮ್ಮಂದಿರ ಜೊತೆಯಲ್ಲಿ ಕುಳಿತಿದ್ದ ಧರ್ಮರಾಜನನ್ನು ಕುರಿತು ಹೀಗೆ ಮಾತನಾಡಿದರು.

ಕೌಂತೇಯ ವರ್ಧಸೇ ದಿಷ್ಟ್ಯಾ ಸಾಮ್ರಾಜ್ಯಂ ಪ್ರಾಪ್ಯ ದುರ್ಲಭಮ್ ।
ಪಾಲಿತಾಃ ಕುರವಃ ಸರ್ವೇ ತ್ವಯಾ ಕುರುಕುಲೋದ್ವಹ ।
ಆಪೃಚ್ಛೇ ತ್ವಾಂ ಗಮಿಷ್ಯಾಮಿ ಪೂಜಿತೋಸ್ಮಿ ವಿಶಾಂಪತೇ ॥೬॥

ಕೌಂತೇಯನೇ! ದೇವರ ದಯೆಯಿಂದ ದುರ್ಲಭವಾದ ಸಾಮ್ರಾಜ್ಯವನ್ನು ಪಡೆದು ನೀನು ಅಭಿವೃದ್ಧಿಯನ್ನು ಹೊಂದಿದ್ದೀಯೆ ಕುರುಕುಲೋದ್ಭವನೇ! ನಿನ್ನಿಂದ ಎಲ್ಲಾ ಕುರುಗಳೂ ರಕ್ಷಿಸಲ್ಪಟ್ಟಿದ್ದಾರೆ. ರಾಜನೇ! ನೀನು ನನಗೆ ಪೂಜೆಯನ್ನು ಸಲ್ಲಿಸಿದ್ದೀಯೆ. ಹೊರಡಲು ನಿನ್ನ ಸಮ್ಮತಿಯನ್ನು ಕೇಳುತ್ತಿದ್ದೇನೆ.

ಏವಮುಕ್ತಸ್ತು ಕೃಷ್ಣೇನ ಧರ್ಮರಾಜೋ ಯುಧಿಷ್ಠಿರಃ ।
ಅಭಿವಾದ್ಯೋಪಸಂಗೃಹ್ಯ ಪಿತಾಮಹಮಥಾಬ್ರವೀತ್ ॥೭॥

ಹೀಗೆ ವ್ಯಾಸರಿಂದ ಹೇಳಲ್ಪಟ್ಟ ಧರ್ಮರಾಜನಾದ ಯುಧಿಷ್ಠಿರನು ಅವರಿಗೆ ನಮಸ್ಕರಿಸಿ ಸಮೀಪಕ್ಕೆ ಬಂದು ಪಿತಾಮಹರಾದ ಅವರನ್ನು ಕುರಿತು ಮಾತನಾಡಿದನು.

ಸಂಶಯೋ ದ್ವಿಪದಾಂ ಶ್ರೇಷ್ಠ ಮಮೋತ್ಪನ್ನಃ ಸುದುರ್ವಚಃ ।
ತಸ್ಯೇಹ ನಾನ್ಯೋ ವಕ್ತಾಸ್ತಿ ತ್ವಾಮೃತೇ ದ್ವಿಜಪುಂಗವ ॥೮॥

ಜ್ಞಾನಿಶ್ರೇಷ್ಠರಾದ ವ್ಯಾಸರೇ! ನನಗೆ ಉತ್ತರಕೊಡಲು ದುಸ್ಸಾಧ್ಯವಾದ ಒಂದು ಸಂಶಯವು ಉಂಟಾಗಿದೆ. ದ್ವಿಜಪುಂಗವರೇ! ನಿಮ್ಮನ್ನು ಬಿಟ್ಟು ಅದಕ್ಕೆ ಪರಿಹಾರವನ್ನು ಹೇಳುವವರು ಯಾರೂ ಇಲ್ಲ.

ಉತ್ಪಾತಾಂಸ್ತ್ರಿವಿಧಾನಾಹ ನಾರದೋ ಭಗವಾನೃಷಿಃ ।
ದಿವ್ಯಾಂಶ್ಚೈವಾಂತರಿಕ್ಷಾಂಶ್ಚ ಪಾರ್ಥಿವಾಂಶ್ಚ ಪಿತಾಮಹ ॥೯॥

ಪಿತಾಮಹರೇ! ಪೂಜ್ಯರಾದ ನಾರದಋಷಿಗಳು ದಿವ್ಯ ಆಂತರಿಕ್ಷ ಮತ್ತು ಪಾರ್ಥಿವ ಎಂಬ ಮೂರು ವಿಧವಾದ ಉತ್ಪಾತಗಳನ್ನು ಹೇಳಿದರು.

ಸುಮಹಚ್ಚ ಫಲಂ ತೇಷಾಂ ಭವಿತೇತಿ ನ ಸಂಶಯಃ ।
ಅಪಿ ಚೈದ್ಯಸ್ಯ ಪತನಾಚ್ಛಾಂತಮೌತ್ಪಾತಿಕಂ ಭವೇತ್ ॥೧೦॥

ರಾಜ್ಞಸ್ತದ್ವಚನಂ ಶ್ರುತ್ವಾ ಪರಾಶರಸುತಃ ಪ್ರಭುಃ ।
ಕೃಷ್ಣದ್ವೈಪಾಯನೋ ವ್ಯಾಸ ಇದಂ ವಚನಮಬ್ರವೀತ್ ॥೧೧॥

ಅವುಗಳಿಗೆ ನಿಸ್ಸಂಶಯವಾಗಿ ಮಹಾಫಲವು ಉಂಟಾಗುವುದೆಂದು ತಿಳಿಸಿದರು. ಉಂಟಾದ ಅಪಶಕುನಗಳೆಲ್ಲವೂ ಶಿಶುಪಾಲನ ವಧೆಯಿಂದ ಶಾಂತವಾಗಿವೆಯಷ್ಟೇ ? ರಾಜನೇ! ಆ ಮಾತುಗಳನ್ನು ಕೇಳಿದ ಪರಾಶರರ ಪುತ್ರರಾದ ಕೃಷ್ಣದ್ವೈಪಾಯನರಾದ ವ್ಯಾಸರು ಈ ಮಾತುಗಳನ್ನು ಆಡಿದರು.

ಚತುರ್ದಶ ಸಮಾ ರಾಜನ್ನುತ್ಪಾತಾನಾಂ ಮಹತ್ ಫಲಮ್ ।
ಸರ್ವಕ್ಷತ್ರವಿನಾಶಾಯ ಭವಿಷ್ಯತಿ ವಿಶಾಂಪತೇ ॥೧೨॥

ಎಲೈ ರಾಜನೇ! ಈ ಉತ್ಪಾತಗಳ ಫಲವು ಹದಿನಾಲ್ಕು ವರ್ಷಗಳ ಕಾಲ ಉಂಟಾಗುತ್ತದೆ. ಅದರಿಂದ ಸರ್ವಕ್ಷತ್ರಿಯರ ವಿನಾಶವು ಉಂಟಾಗುತ್ತದೆ.

ತ್ವಾಮೇವ ಕಾರಣಂ ಕೃತ್ವಾ ಕಾಲೇನ ಭರತರ್ಷಭ ।
ಸಮೇತಂ ಪಾರ್ಥಿವಂ ಕ್ಷತ್ರಂ ಕ್ಷಯಂ ಯಾಸ್ಯತಿ ಪಾಂಡವ ।
ದುರ್ಯೋಧನಾಪರಾಧೇನ ಭೀಮಾರ್ಜುನಬಲೇನ ಚ ॥೧೩॥

ಎಲೈ ಭರತಶ್ರೇಷ್ಠನಾದ ಪಾಂಡವನೇ! ನಿನ್ನನ್ನೇ ನಿಮಿತ್ತವಾಗಿ ಮಾಡಿಕೊಂಡು ಎಲ್ಲಾ ಕ್ಷತ್ರಿಯರೂ ಒಟ್ಟಿಗೆ ಸೇರಿ ದುರ್ಯೋಧನನ ಅಪರಾಧದಿಂದಲೂ ಭೀಮಾರ್ಜುನರ ಬಲದಿಂದ ನಾಶವನ್ನು ಹೊಂದುವರು.

ಸ್ವಪ್ನಂ ದ್ರಕ್ಷ್ಯಸಿ ರಾಜೇಂದ್ರ ತಸ್ಮಿನ್ ಕಾಲ ಉಪಸ್ಥಿತೇ ।
ತತ್ ತೇಹಂ ಸಂಪ್ರವಕ್ಷ್ಯಾಮಿ ತನ್ನಿಬೋಧ ಯುಧಿಷ್ಠಿರ ॥೧೪॥

ಯುಧಿಷ್ಠಿರನೇ! ಆ ಕಾಲವು ಪ್ರಾಪ್ತವಾದಾಗ ನೀನು ಒಂದು ಸ್ವಪ್ನವನ್ನು ನೋಡುವಿ. ನಾನು ಅದನ್ನು ನಿನಗೆ ಹೇಳುವೆನು.

ಯದಾ ದ್ರಕ್ಷ್ಯಸಿ ರಾಜೇಂದ್ರ ಕ್ಷಪಾಂತೇ ಗೋವೃಷಧ್ವಜಮ್ ।
ನೀಲಕಂಠಂ ಭವಂ ಸ್ಥಾಣುಂ ತ್ರಿಪುರಾಂತಕರಂ ಹರಮ್ ॥೧೫॥

ಉಗ್ರಂ ರುದ್ರಂ ಪಶುಪತಿಂ ಮಹಾದೇವಮುಮಾಪತಿಮ್ ।
ಶಿವಂ ಶರ್ವಂ ಭವಂ ಶೂಲಿಂ ಪಿನಾಕಿಂ ಕೃತ್ತಿವಾಸಸಮ್ ॥೧೬॥

ಕೈಲಾಸಕೂಟಪ್ರತಿಮೇ ವೃಷಭೇ ನಿಷ್ಠಿತಂ ಶಿವಮ್ ।
ನಿರೀಕ್ಷಮಾಣಂ ಸತತಂ ಪಿತೃರಾಜಾಶ್ರಿತಾಂ ದಿಶಮ್ ॥೧೭॥

ಯದೈವಮೀದೃಶಂ ಸ್ವಪ್ನಂ ದ್ರಷ್ಟಾ ಹ್ಯಸಿ ವಿಶಾಂಪತೇ ।
ಮಾ ಚ ತೇಭೂದ್ ವೃಥಾ ರಾಜನ್ ಕಾಲೋ ಹಿ ದುರತಿಕ್ರಮಃ ॥೧೮॥

ರಾಜೇಂದ್ರನೇ! ಬೆಳಗಿನ ಜಾವದ ವೇಳೆಯಲ್ಲಿ ಸ್ವಪ್ನದಲ್ಲಿ ನೀಲಕಂಠನೂ ಭವನೂ ಸ್ಥಾಣುವೂ ತ್ರಿಪುರಸಂಹಾರಕನೂ ಹರನೂ ಉಗ್ರನೂ ರುದ್ರನೂ ಪಶುಪತಿಯೂ ಮಹಾದೇವನೂ ಶಿವನೂ ಶರ್ವನೂ ಭವನೂ ಶೂಲಿಯೂ ಪಿನಾಕಿಯೂ ಕೃತ್ತಿವಾಸನೂ ಕೈಲಾಸವಾಸಿಯೂ ಆದ ಉಮಾಪತಿಯು ದಕ್ಷಿಣದಿಕ್ಕನ್ನು ನೋಡುತ್ತಾ ಪ್ರಯಾಣಮಾಡುವುದನ್ನು ಕಾಣುತ್ತೀಯೆ ರಾಜನೇ! ನೀನು ಯಾವಾಗ ಇಂತಹ ಸ್ವಪ್ನವನ್ನು ನೋಡುವೆಯೋ ಆಗ ಮನಸ್ಸಿನಲ್ಲಿ ವ್ಯಥೆಪಡಬೇಡ. ರಾಜನೇ ಕಾಲವನ್ನು ಯಾರೂ ಮೀರಲಾರರಷ್ಟೇ.

ಸ್ವಸ್ತಿ ತೇಽಸ್ತು ಗಮಿಷ್ಯಾಮಿ ಕೈಲಾಸಂ ಪರ್ವತಂ ಪ್ರತಿ ।
ಅಪ್ರಮತ್ತಃ ಸ್ಥಿತೋ ದಾಂತಃ ಪೃಥಿವೀಂ ಪರಿಪಾಲಯ ॥೧೯॥

ನಿನಗೆ ಮಂಗಳವಾಗಲೀ. ನಾನು ಕೈಲಾಸಪರ್ವತಕ್ಕೆ ಹೋಗುವೆನು. ಇಂದ್ರಿಯ ನಿಗ್ರಹವುಳ್ಳವನಾಗಿ ಎಚ್ಚರಿಕೆಯಿಂದ ಭೂಮಿಯನ್ನು ರಕ್ಷಿಸು.

ಏವಮುಕ್ತ್ವಾ ತು ಭಗವಾನ್ ಕೈಲಾಸಂ ಪರ್ವತಂ ಯಯೌ ।
ಕೃಷ್ಣದ್ವೈಪಾಯನೋ ವ್ಯಾಸಃ ಸಹ ಶಿಷ್ಯೈಃ ಸಹಾನುಗಃ ॥೨೦॥

ಹೀಗೆ ಹೇಳಿ ಪೂಜ್ಯರಾದ ಕೃಷ್ಣದ್ವೈಪಾಯನರಾದ ವ್ಯಾಸರು ಶಿಷ್ಯರ ಮತ್ತು ಅನುಚರರ ಜೊತೆಯಲ್ಲಿ ಕೈಲಾಸ ಪರ್ವತಕ್ಕೆ ಹೋದರು.

ಗತೇ ಪಿತಾಮಹೇ ರಾಜಾ ಚಿಂತಾಶೋಕಸಮನ್ವಿತಃ ।
ನಿಃಶ್ವಸನ್ನುಷ್ಣಮಸಕೃತ್ ತಮೇವಾರ್ಥಂ ವ್ಯಚಿಂತಯತ್ ॥೨೧॥

ಪಿತಾಮಹರಾದ ವ್ಯಾಸರು ಹೊರಟುಹೋದಮೇಲೆ ರಾಜನು ಚಿಂತಾಶೋಕಸಮನ್ವಿತನಾಗಿ ಬಿಸಿಯಾದ ನಿಟ್ಟುಸಿರನ್ನು ಬಿಡುತ್ತಾ ಅದೇ ವಿಷಯವನ್ನು ಚಿಂತಿಸಿದನು.

ಕಥಂ ನು ದೈವಂ ಶಕ್ಯೇತ ಪೌರುಷೇಣ ಪ್ರಬಾಧಿತುಮ್ ।
ಅವಶ್ಯಮೇವ ಭವಿತಾ ಯದುಕ್ತಂ ಪರಮರ್ಷಿಣಾ ॥೨೨॥

ಪುರುಷ ಪ್ರಯತ್ನದಿಂದ ದೈವನಿಯಮವನ್ನು ಬಾಧಿಸಲು ಹೇಗೆ ಸಾಧ್ಯ? ಪರಮರ್ಷಿಗಳಾದ ವ್ಯಾಸರು ಏನು ಹೇಳಿದರೋ ಅವೆಲ್ಲವೂ ಅವಶ್ಯವಾಗಿ ನಡೆದೇ ತೀರುತ್ತವೆ.

ತತೋಽಬ್ರವೀನ್ಮಹಾತೇಜಾಃ ಸರ್ವಾನ್ ಭ್ರಾತೄನ್ ಯುಧಿಷ್ಠಿರಃ ।
ಶ್ರುತಂ ವೈ ಪುರುಷವ್ಯಾಘ್ರಾ ಯಥಾ ದ್ವೈಪಾಯನೋಬ್ರವೀತ್ ॥೨೩॥

ಅನಂತರ ಮಹಾತೇಜಸ್ವಿಯಾದ ಯುಧಿಷ್ಠಿರನು ತನ್ನ ಎಲ್ಲಾ ತಮ್ಮಂದಿರನ್ನೂ ಕುರಿತು ಪುರುಷವ್ಯಾಘ್ರರೇ! ದ್ವೈಪಾಯನರು ಹೇಳಿದ ಮಾತುಗಳನ್ನು ನೀವೆಲ್ಲರೂ ಕೇಳಿದ್ದೀರಷ್ಟೇ ಎಂದು ಹೇಳಿದನು.

ತಸ್ಯ ತದ್ವಚನಂ ಶ್ರುತ್ವಾ ಮರಣೇ ನಿಶ್ಚಿತಾ ಮತಿಃ ।
ಸರ್ವಕ್ಷತ್ರಸ್ಯ ನಿಧನೇ ಯದ್ಯಹಂ ಹೇತುರೀಪ್ಸಿತಃ ॥೨೪॥

ಕಾಲೇನ ನಿರ್ಮಿತಸ್ತಾತಾಃ ಕೋ ಮಮಾಥೋರ್ಽಸ್ತಿ ಜೀವತಃ ।
ಏವಂ ಬ್ರುವಂತಂ ರಾಜಾನಂ ಫಲ್ಗುನಃ ಪ್ರತ್ಯಭಾಷತ ॥೨೫॥

ಅವರ ಆ ಮಾತನ್ನು ಕೇಳಿ ನನಗೆ ಮರಣವನ್ನು ಹೊಂದಬೇಕು ಎಂಬ ನಿಶ್ಚಯ ಉಂಟಾಯಿತು. ಎಲ್ಲಾಕ್ಷತ್ರಿಯ ವಿನಾಶಕ್ಕೆ ನಾನು ಕಾರಣನೆಂದು ದೈವನಿಯತಿ ಇದ್ದರೆ, ನಾನು ಬದುಕಿರುವುದರಲ್ಲಿ ಏನು ಪ್ರಯೋಜನ? ಹೀಗೆ ರಾಜನು ಮಾತನಾಡುತ್ತಿರಲು ಅರ್ಜುನನು ಉತ್ತರವನ್ನು ನೀಡಿದನು.

ಮಾ ರಾಜನ್ ಕಶ್ಮಲಂ ಘೋರಂ ಪ್ರವಿಶೇದ್ ಬುದ್ಧಿನಾಶನಮ್ ।
ಸಂಪ್ರಧಾರ್ಯ ಮಹಾರಾಜ ಯತ್ ಕ್ಷಮಂ ತತ್ ಸಮಾಚರ ॥೨೬॥

ರಾಜನೇ! ಘೋರವಾದ ವಿವೇಕವನ್ನು ನಾಶಮಾಡುವ ಬುದ್ಧಿಯ ಕಾಲುಷ್ಯವನ್ನು ಹೊಂದಬೇಡ. ಮಹಾರಾಜನೇ! ಈ ಸಂದರ್ಭದಲ್ಲಿ ಏನುಮಾಡುವುದು ಸೂಕ್ತವೆಂದು ನಿರ್ಧರಿಸಿ ಅದರಂತೆ ಮಾಡು.

ತತೋಬ್ರವೀತ್ ಸತ್ಯಧೃತಿರ್ಭ್ರಾತೄನ್ ಸರ್ವಾನ್ ಯುಧಿಷ್ಠಿರಃ ।
ದ್ವೈಪಾಯನಸ್ಯ ವಚನಂ ತತ್ಕೈವ ಸಮಚಿಂತಯನ್ ॥೨೭॥

ಆಗ ಸತ್ಯವಂತನೂ ಧೈರ್ಯಶಾಲಿಯೂ ಆದ ಯುಧಿಷ್ಠಿರನು ದ್ವೈಪಾಯನರ ಮಾತುಗಳನ್ನೇ ಸ್ಮರಿಸುತ್ತಾ ತನ್ನ ಎಲ್ಲಾ ತಮ್ಮಂದಿರನ್ನು ಕುರಿತು ಹೇಳಿದನು.

ಅದ್ಯಪ್ರಭೃತಿ ಭದ್ರಂ ವಃ ಪ್ರತಿಜ್ಞಾಂ ಮೇ ನಿಬೋಧತ ।
ಚತುರ್ದಶಸಮಾಸ್ತಾತಾಃ ಕೋ ಮಮಾಥೋರ್ಽಸ್ತಿ ಜೀವತಃ ॥೨೮॥

ನಿಮಗೆಲ್ಲರಿಗೂ ಮಂಗಳವಾಗಲಿ ಇಂದಿನಿಂದ ನನ್ನ ಪ್ರತಿಜ್ಞೆಯನ್ನು ನೀವು ಗಮನದಲ್ಲಿ ಇಡಿ. ಇನ್ನು ಹದಿನಾಲ್ಕು ವರ್ಷ ನಾನು ಬದುಕಿರುವುದರಲ್ಲಿ ಏನು ಪ್ರಯೋಜನವಿದೆ?

ನ ಪ್ರವಕ್ಷ್ಯಾಮಿ ಪರುಷಾನ್ ಭ್ರಾತೄನನ್ಯಾಂಶ್ಚ ಪಾರ್ಥಿವಾನ್ ।
ಸ್ಥಿತೋ ನಿದೇಶೇ ಜ್ಞಾತೀನಾಂ ಯೋಕ್ಷ್ಯೇ ತತ್ಸಮುದಾಹರನ್ ॥೨೯॥

ತಮ್ಮಂದಿರಿಗಾಗಲೀ ಅಥವಾ ಬೇರೆ ರಾಜರಿಗಾಗಲೀ ನಾನು ಯಾವ ಒರಟಾದ ಮಾತನ್ನೂ ಆಡುವುದಿಲ್ಲ. ಬಾಂಧವರ ನಿದೇಶವನ್ನು ಪಾಲಿಸುತ್ತಾ ಅವರು ಹೇಳಿದಂತೆ ನಡೆದು ಕೊಳ್ಳುವೆನು.

ಏವಂ ಮೇ ವರ್ತಮಾನಸ್ಯ ಸ್ವಕೀಯೇಷ್ವಿತರೇಷು ಚ ।
ಭೇದೋ ನ ಭವಿತಾ ಲೋಕೇ ಭೇದಮೂಲೋ ಹಿ ವಿಗ್ರಹಃ ॥೩೦॥

ನಾನು ಸ್ವಕೀಯರ ವಿಷಯದಲ್ಲೂ ಮತ್ತು ಇತರರ ವಿಷಯದಲ್ಲೂ ಹೀಗೆ ನಡೆದುಕೊಂಡರೆ ವಿರೋಧವು ಉಂಟಾಗುವುದಿಲ್ಲ. ಲೋಕದಲ್ಲಿ ವಿರೋಧವೇ ಕಲಹಕ್ಕೆ ಮೂಲವಾಗಿದೆ.

ವಿಗ್ರಹಂ ದೂರತೋ ರಕ್ಷನ್ ಪ್ರಿಯಾಣ್ಯೇವ ಸಮಾಚರನ್ ।
ವಾಚ್ಯತಾಂ ನ ಗಮಿಷ್ಯಾಮಿ ಲೋಕೇಷು ಮನುಜರ್ಷಭಾಃ ॥೩೧॥

ಎಲೈ ಮನುಜಶ್ರೇಷ್ಠರೇ! ನಾನು ವಿರೋಧವನ್ನು ದೂರದಲ್ಲಿಯೇ ಪರಿಹರಿಸಿ ಎಲ್ಲರಿಗೂ ಪ್ರಿಯವನ್ನೇ ಆಚರಿಸುತ್ತಾ ಎಂದೂ ನಿಂದನೀಯನಾಗುವುದಿಲ್ಲ.

ಭ್ರಾತುಜ್ಯೇಷ್ಠಸ್ಯ ವಚನಂ ಪಾಂಡವಾಃ ಸನ್ನಿಶಮ್ಯ ತತ್ ।
ತಮೇವ ಸಮವರ್ತಂತ ಧರ್ಮರಾಜಹಿತೇ ರತಾಃ ॥೩೨॥

ಅಣ್ಣನ ಮಾತುಗಳನ್ನು ಕೇಳಿದ ಪಾಂಡವರು ಧರ್ಮರಾಜನ ಹಿತದಲ್ಲಿ ರತರಾಗಿ ಅವನ ಮಾತಿನಂತೆಯೇ ನಡೆದು ಕೊಂಡರು.

ಸಂಸತ್ಸು ಸಮಯಂ ಕೃತ್ವಾ ಧರ್ಮರಾಡ್ ಭ್ರಾತೃಭಿಃ ಸಹ ।
ಪಿತೄಂಸ್ತರ್ಪ್ಯ ಯಥಾನ್ಯಾಯಂ ದೇವತಾಶ್ಚ ವಿಶಾಂಪತೇ ॥೩೩॥

ವೈಶಂಪಾಯನಃ

ಕೃತಮಂಗಲಕಲ್ಯಾಣೋ ಭ್ರಾತೃಭಿಃ ಪರಿವಾರಿತಃ ।
ಗತೇಷು ಕ್ಷತ್ರಿಯೇಂದ್ರೇಷು ಸರ್ವೇಷು ಭರತರ್ಷಭ ।
ಯುಧಿಷ್ಠಿರಃ ಸಹಾಮಾತ್ಯಃ ಪ್ರವಿವೇಶ ಪುರೋತ್ತಮಮ್ ॥೩೪॥

ಎಲೈ ರಾಜನೇ! ಧರ್ಮರಾಜನು ಸಭೆಯಲ್ಲಿ ತಮ್ಮಂದಿರ ಜೊತೆಯಲ್ಲಿ ಹೀಗೆ ಪ್ರತಿಜ್ಞೆಯನ್ನುಮಾಡಿ ವಿಧಿಪೂರ್ವಕವಾಗಿ ಪಿತೃಗಳಿಗೂ ದೇವತೆಗಳಿಗೂ ತರ್ಪಣವನ್ನು ಕೊಟ್ಟು ಯಥೋಚಿತವಾದ ಮಂಗಳಗಳನ್ನು ಆಚರಿಸಿಕೊಂಡು ತಮ್ಮಂದಿರಿಂದಲೂ ಅಮಾತ್ಯರಿಂದಲೂ ಪರಿವೃತನಾಗಿ ಎಲ್ಲಾ ಕ್ಷತ್ರಿಯರು ಹೊರಟು ಹೋದಮೇಲೆ ತನ್ನ ಪಟ್ಟಣಕ್ಕೆ ಹಿಂತಿರುಗಿದನು.

ದುರ್ಯೋಧನೋ ಮಹಾರಾಜ ಶಕುನಿಶ್ಚಾಪಿ ಸೌಬಲಃ ।
ಸಭಾಯಾಂ ರಮಣೀಯಾಯಾಂ ತತ್ರೈವಾಸ್ತಾಂ ನರಾಧಿಪ ॥೩೫॥

ಎಲೈ ಮಹಾರಾಜನೇ! ದುರ್ಯೋಧನನೂ ಸುಬಲ ಪುತ್ರನಾದ ಶಕುನಿಯೂ ಆ ಮನೋಹರವಾದ ಸಭೆಯಲ್ಲಿ ಅಲ್ಲಿಯೇ ಇದ್ದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಏಕೋನಸಪ್ತತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ಪ್ರಥಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ
ಅರವತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ಗತೇಷು ಸರ್ವರಾಜಸು ಸ್ವಕಾಂ ಪುರಂ ಸ್ವಕೇಷು ಚ ।
ಸಭೀಷ್ಮಕೇಷು ಸರ್ವಶಃ ಸಹಾಂಬಿಕೇಯಕೇಷು ಚ ॥೨೭೧॥

ವಿಚಿತ್ರರತ್ನನಿರ್ಮಿತೇ ರವಿಪ್ರಭೇ ಸಭಾತಳೇ ।
ಸಕೇಶವೋ ವರಾಸನೇ ವಿವೇಶ ಧರ್ಮನಂದನಃ ॥೨೭೨॥

ಎಲ್ಲ ರಾಜರು ತಮ್ಮ ತಮ್ಮ ಪಟ್ಟಣಗಳಿಗೆ ತೆರಳಿದಾಗ ಭೀಷ್ಮ ಧೃತರಾಷ್ಟ್ರರೊಂದಿಗೆ ತಮ್ಮವರೆಲ್ಲರೂ ಹಸ್ತಿನಾವತಿಗೆ ಹೊರಟು ಹೋದಾಗ ಧರ್ಮರಾಜ ವಿಚಿತ್ರರತ್ನ ನಿರ್ಮಿತವಾದ ಸೂರ್ಯನಂತೆ ಬೆಳಗುವ ಸಭಾಂಗಣದಲ್ಲಿ ಕೃಷ್ಣನೊಂದಿಗೆ ಕುಳಿತ.

ತಥೈವ ರುಗ್ಮಿಣೀಮುಖಾಃ ಪರಿಗ್ರಹಾ ರಮೇಶಿತುಃ ।
ತಥೈವ ಭೀಮಫಲ್ಗುನಾವುಪಾವಿಶನ್ ಹರೇರುಪ ॥೨೭೩॥

ಸಹೈವ ವಾಯುಸೂನುನಾ ತಥೈವ ಪಾರ್ಷತಾತ್ಮಜಾ ।
ಉಪೈವ ರುಗ್ಮಿಣೀಂ ಶುಭಾ ತಥೈವ ಸತ್ಯಭಾಮಿನೀಂ ॥೨೭೪॥

ರುಕ್ಮಿಣಿ ಮೊದಲಾದ ಕೃಷ್ಣಪತ್ನಿಯರೂ ಭೀಮಾರ್ಜುನರೂ ಕೃಷ್ಣ ಸಮೀಪದಲ್ಲಿ ಕುಳಿತರು. ಭೀಮನೊಂದಿಗೆ ದ್ರೌಪದಿ ರುಕ್ಮಿಣೀಸತ್ಯಭಾಮೆಯರ ಸಮೀಪದಲ್ಲಿ ಕುಳಿತಳು.

ಯಮೌ ಚ ಪಾರ್ಷತಾದಯೋ ಧನಂಜಯಾಂತಿಕೇऽವಿಶನ್ ।
ತಥೈವ ರಾಮಸಾತ್ಯಕೀ ಸಮೀಪ ಏವ ಭೂಭೃತಃ ॥೨೭೫॥

ಸಮಾಸತಾಂ ತು ಸಾ ಸಭಾ ವ್ಯರೋಚತಾಧಿಕಂ ತದಾ ।
ಯಥಾ ಸಭಾ ಸ್ವಯಂಭುವಃ ಸಮಾಸ್ಥಿತಾ ಚ ವಿಷ್ಣುನಾ ॥೨೭೬॥

ನಕುಲ ಸಹದೇವರೂ ಧೃಷ್ಟದ್ಯುಮ್ನಾದಿಗಳೂ ಅರ್ಜುನನ ಬಳಿಯಲ್ಲಿ ಕುಳಿತರು. ಬಲರಾಮ ಸಾತ್ಯಕಿಗಳು ಧರ್ಮರಾಜನ ಬಳಿ ಕುಳಿತರು. ಆ ಸಭೆ ವಿಷ್ಣುವಿನಿಂದ ಅಲಂಕೃತವಾದ ಬ್ರಹ್ಮನ ಸಭೆಯಂತೆ ಬಹಳ ಶೋಭಿಸಿತು.

ವಿಚಿತ್ರಹೇಮಮಾಲಿನಃ ಶುಭಾಂಬರಾಶ್ಚ ತೇऽಧಿಕಂ ।
ಸ್ಫುರತ್ಕಿರೀಟಕುಂಡಲಾ ವಿರೇಜುರತ್ರ ತೇ ನೃಪಾಃ ॥೨೭೭॥

ಶುಭವಸ್ತ್ರಗಳನ್ನು ಉಟ್ಟು ಹೊಳೆವ ಕಿರೀಟ ಕುಂಡಲಗಳನ್ನೂ ವಿಚಿತ್ರ ಸುವರ್ಣ ಮಾಲೆಗಳನ್ನೂ ಧರಿಸಿದ್ದ ರಾಜರು ಅಲ್ಲಿ ಶೋಭಿಸಿದರು.

ವಿಶೇಷತೋ ಜನಾರ್ದನಃ ಸಭಾರ್ಯಕೋ ಜಗತ್ಪ್ರಭುಃ ।
ಯಥಾ ದಿವೌಕಸಾಂ ಸದಸ್ಯನಂತಸದ್ಗುಣಾರ್ಣವಃ ॥೨೭೮॥

ದೇವತೆಗಳ ಸಭೆಯಲ್ಲಿ ಅನಂತ ಸದ್ಗುಣ ಸಮುದ್ರನಾದ ಜಗದೊಡೆಯನಾದ ವಿಷ್ಣುವಿನಂತೆ ಈ ಸಭೆಯಲ್ಲಿ ವಿಶೇಷವಾಗಿ ಶ್ರೀಕೃಷ್ಣ ಸಪತ್ನೀಕನಾಗಿ ಶೋಭಿಸಿದ.

ಉಪಾಸಿರೇ ಚ ತಾನ್ ನೃಪಾಃ ಸಮಸ್ತಶಃ ಸುಹೃದ್ಗಣಾಃ ।
ತದಾ ಜಗಾಮ ಖಡ್ಗಭೃತ್ ಸಹಾನುಜಃ ಸುಯೋಧನಃ ॥೨೭೯॥

ಎಲ್ಲ ರಾಜರೂ ಸ್ನೇಹಿತರ ಸಮೂಹಗಳೂ ಕೃಷ್ಣನನ್ನು ಆರಾಧಿಸಿದರು. ಅದೇ ಕಾಲದಲ್ಲಿ ಅಲ್ಲಿಗೆ ಖಡ್ಗಧಾರಿಯಾದ ದುರ್ಯೋಧನ ತಮ್ಮನೊಂದಿಗೆ ಬಂದ.

ದ್ವಾರಂ ಸಭಾಯಾ ಹರಿನೀಲರಶ್ಮಿ-
ವ್ಯೂಢಂ ನ ಜಾನನ್ ಸ ವಿಹಾಯ ಭಿತ್ತಿಂ ।
ಅಭ್ಯಂತರಾಣಾಂ ದೃಶಿ ನೋ ವಿಘಾತಿನೀಂ
ಸಂ ಸ್ಫಾಟಿಕಾಮಾಶು ದೃಢಂ ಚುಚುಂಬೇ ॥೨೮೦॥

ಸಭಾಂಗಣ ದ್ವಾರ ಇಂದ್ರ ನೀಲಮಣಿ ಪ್ರಕಾಶದಿಂದ ಆಚ್ಛಾದಿತವಾಗಿದ್ದುದರಿಂದ ತಿಳಿಯದೆ ಅದನ್ನು ಬಿಟ್ಟು ಒಳಗಿರುವವರು ಹೊರಗೆ ಕಾಣುವಂತೆ ಪಾರದರ್ಶಕನಾಗಿದ್ದ ಸ್ಫಟಿಕದ ಗೋಡೆಗೆ ಗಟ್ಟಿಯಾಗಿ ಮುಖವನ್ನು ತಾಗಿಸಿಕೊಂಡ.

ಪ್ರವೇಶಯೇತಾಂ ಚ ಯಮೌ ತಮಾಶು
ಸಭಾಂ ಭುಜೌ ಗೃಹ್ಯ ನೃಪೋಪದಿಷ್ಟೌ ।
ತತ್ರೋಪವಿಶ್ಯ ಕ್ಷಣಮನ್ಯತೋಽಗಾ-
ದಮೃಷ್ಯಮಾಣಃ ಶ್ರಿಯಮೇಷು ದಿವ್ಯಾಂ ॥೨೮೧॥

ಧರ್ಮರಾಜನ ಆಜ್ಞೆಯಂತೆ ನಕುಲ ಸಹದೇವರು ಬೇಗನೆ ಬಂದು ದುರ್ಯೋಧನನ ಕೈಗಳನ್ನು ಹಿಡಿದು 'ಇದು ಬಾಗಿಲು, ಇದು ಬಾಗಿಲು' ಎಂದು ಹೇಳುತ್ತ ಸಭಾಂಗಣದೊಳಗೆ ಕರೆತಂದು ಕುಳ್ಳಿರಿಸಿದರು. ಅಲ್ಲಿ ಆತ ಒಂದು ಕ್ಷಣ ಕುಳಿತು ಪಾಂಡವರಲ್ಲಿರುವ ಆ ದಿವ್ಯ ಸಂಪತ್ತನ್ನು ನೋಡಿ ಸಹಿಸಲಾಗದೆ ಬೇರೆ ಕಡೆಗೆ ನಡೆದ.

ತತೇಂದ್ರನೀಲಭುವಿ ರತ್ನಮಯಾನಿ ದೃಷ್ಟ್ವಾ
ಪದ್ಮಾನಿ ನೀರಮನಸಾ ಜಗೃಹೇ ಸ್ವವಸ್ತ್ರಂ ।
ರತ್ನೋರುದೀಧಿತಿನಿಗೂಢಜಲಂ ಸ್ಥಲಂ ಚ
ಮತ್ವಾ ಪಪಾತ ಸಹಿತೋಽವರಜೈರ್ಜಲೌಘೇ ॥೨೮೨॥

ದುರ್ಯೋಧನ ಅಲ್ಲಿ ಇಂದ್ರ ನೀಲಮಣಿಯ ನೆಲದಲ್ಲಿ ರತ್ನಮಯವಾದ ಪದ್ಮಗಳನ್ನು ಕಂಡು ನೀರೆಂಬ ಭ್ರಾಂತಿಯಿಂದ ಉಟ್ಟಬಟ್ಟೆಯನ್ನು ಮೇಲೆತ್ತಿಕೊಂಡ. ರತ್ನಗಳ ಮಹಾಪ್ರಕಾಶದಿಂದ ಆಚ್ಛಾದಿತವಾದ ನೀರನ್ನು ನೆಲವೆಂದು ಭ್ರಮಿಸಿ ತಮ್ಮಂದಿರೊಂದಿಗೆ ಆಳವಾದ ಆ ನೀರಲ್ಲಿ ಬಿದ್ದ.

ತಂ ಪ್ರಾಹಸದ್ ಭಗವತಾ ಕ್ಷಿತಿಭಾರನಾಶ-
ಹೇತೋಃ ಸುಸೂಚಿತ ಉರುಸ್ವರತೋಽತ್ರ ಭೀಮಃ ।
ಪಾಂಚಾಲರಾಜಸುತಯಾ ಚ ಸಮಂ ತಥಾನ್ಯೈಃ
ಸ್ವೀಯೈಸ್ತಥಾನು ಜಹಸುರ್ಭಗವನ್ಮಹಿಷ್ಯಃ ॥೨೮೩॥

ಭೂ ಭಾರ ನಾಶಕ್ಕಾಗಿ ಭಗವಾನ್ ಶ್ರೀಕೃಷ್ಣ ನಗಲು ಸನ್ನೆ ಮಾಡಿದ್ದನು ತಿಳಿದ ಭೀಮ ದೊಡ್ಡ ಧ್ವನಿಯಿಂದ ನಕ್ಕುಬಿಟ್ಟ. ಜೊತೆಗೆ ದ್ರೌಪದಿಯೂ ನಕ್ಕಳು. ಧೃಷ್ಟದ್ಯುಮ್ನ ಮುಂತಾದ ಇತರ ಬಂಧುಗಳೂ ಕೃಷ್ಣನ ಪತ್ನಿಯರೂ ನಕ್ಕರು.

ಮಂದಸ್ಮಿತೇನ ವಿಲಸದ್ವದನೇಂದುಬಿಂಬೋ
ನಾರಾಯಣಸ್ತು ಮುಖವೀಕ್ಷ್ಯ ಮರುತ್ಸುತಸ್ಯ ।
ನೋವಾಚ ಕಿಂಚಿದಥ ಧರ್ಮಸುತೋ ನಿವಾರ್ಯ
ಪ್ರಾಸ್ಥಾಪಯದ್ ವಸನಮಾಲ್ಯವಿಲೇಪನಾನಿ ॥೨೮೪॥

ಹೊಳೆಯುವ ಚಂದ್ರನಂಥ ಮುಖವುಳ್ಳ ಶ್ರೀಕೃಷ್ಣ ಮುಗುಳು ನಗುನಗುತ್ತ ಭೀಮ ಮುಖ ನೋಡಿದ. ಏನೂ ಹೇಳಲಿಲ್ಲ. ಧರ್ಮರಾಜ ಎಲ್ಲರನ್ನೂ ತಡೆದ, ನಗಬೇಡಿರಿ ಎಂದ. ದುರ್ಯೋಧನ ಮುಂತಾದವರಿಗೆ ಬಟ್ಟೆ ಹೂಮಾಲೆ ಗಂಧಗಳನ್ನು ಕಳಿಸಿಕೊಟ್ಟ.

ಕೃಷ್ಣಾವೃಕೋದರಗತಂ ಬಹಳಂ ನಿಧಾಯ
ಕ್ರೋಧಂ ಯಯೌ ಸಶಕುನಿರ್ಧೃತರಾಷ್ಟ್ರಪುತ್ರಃ ।
ಸಂಬ್ರೀಳಿತೋ ನೃಪತಿದತ್ತವರಾಂಬರಾದೀನ್
ನ್ಯಕೃತ್ಯ ಮಾರ್ಗಗತ ಆಹ ಸ ಮಾತುಲಂ ಸ್ವಂ ॥೨೮೫॥

ದುರ್ಯೋಧನ ಶಕುನಿಗಳು ನಾಚಿ ಧರ್ಮರಾಜ ಕಳಿಸಿಕೊಟ್ಟ ಒಳ್ಳೆಯ ಬಟ್ಟೆ ಮುಂತಾದುವನ್ನು ತಿರಸ್ಕರಿಸಿ ದ್ರೌಪದೀಭೀಮರ ಬಗ್ಗೆ ಹೆಚ್ಚಿನ ಕ್ರೋಧವನ್ನು

ಮನಸ್ಸಿನಲ್ಲಿಟ್ಟುಕೊಂಡು ಹಸ್ತಿನಾವತಿಗೆ ಹೊರಟು ಹೋದರು. ದಾರಿಯಲ್ಲಿ ದುರ್ಯೋಧನ ಶಕುನಿಗೆ ಹೇಳಿದ.

ಯೌ ಮಾಮಹಸತಾಂ ಕೃಷ್ಣಾಭೀಮೌ ಕೃಷ್ಣಸ್ಯ ಸನ್ನಿಧೌ ।
ತಯೋರಕೃತ್ವಾ ಸಂತಾಪಂ ನಾಹಂ ಜೀವಿತುಮುತ್ಸಹೇ ॥೨೪೬॥

'ಕೃಷ್ಣನ ಇದಿರಿನಲ್ಲಿ ದ್ರೌಪದಿ ಭೀಮರು ನನ್ನನ್ನು ನೋಡಿ ಹಾಸ್ಯ ಮಾಡಿದರು. ಅವರಿಗೆ ಸಂತಾಪ ಉಂಟುಮಾಡದೆ ನಾನು ಬದುಕಿರಲಾರೆ'.

ಯದಿ ಮೇ ಶಕ್ತಿರತ್ರ ಸ್ಯಾದ್ ಘಾತಯೇಯಂ ವೃಕೋದರಂ ।
ಅಗ್ರಪೂಜಾಂ ಚ ಕೃಷ್ಣಸ್ಯ ವಿಲುಂಪೇಯಂ ನ ಸಂಶಯಃ ॥೨೪೭॥

ನನಗೆ ಶಕ್ತಿ ಇರುತ್ತಿದ್ದರೆ ಆಗಲೆ ಭೀಮನನ್ನು ಕೊಲ್ಲುತ್ತಿದ್ದೆ. ಕೃಷ್ಣನಿಗೆ ಅಗ್ರಪೂಜೆಯಾಗುವುದನ್ನೂ ತಪ್ಪಿಸುತ್ತಿದ್ದೆ. ಇದರಲ್ಲಿ ಸಂಶಯವಿಲ್ಲ.

ಈದೃಶಂ ಪಾಂಡವೈಶ್ವರ್ಯಂ ದೃಷ್ಟ್ವಾ ಕೋ ನಾಮ ಜೀವಿತಂ ।
ಇಚ್ಛೇತ ಕರದಾ ಯೇಷಾಂ ವೈಶ್ಯವತ್ ಸರ್ವಭೂಮಿಪಾಃ ॥೨೪೮॥

ಪಾಂಡವರಿಗೆ ಎಲ್ಲ ರಾಜರೂ ವೈಶ್ಯರಂತೆ ಕರ ನೀಡುತ್ತಿದ್ದಾರೆ. ಅವರ ಈ ಐಶ್ವರ್ಯವನ್ನು ಕಂಡು ಯಾರು ತಾನೆ ಬದುಕಿರಲು ಬಯಸಿಯಾನು?

ಇತ್ಯುಕ್ತಃ ಶಕುನಿರ್ವೈರಂ ದೃಢೀಕರ್ತುಂ ವಚೋಽಬ್ರವೀತ್ ।
ಕಿಂ ತೇ ವೈರೇಣ ರಾಜೇಂದ್ರ ಬಲಿಭಿರ್ಭ್ರಾತೃಭಿಃ ಪುನಃ ॥೨೪೯॥

ದುರ್ಯೋಧನ ಹೀಗೆ ಹೇಳಿದಾಗ ಶಕುನಿ ಅವನ ದ್ವೇಷಭಾವನೆಯನ್ನು ಇನ್ನಷ್ಟು ದೃಢಪಡಿಸಲು ಹೇಳಿದ- 'ಮಹಾರಾಜ, ನಿನ್ನ ಸೋದರರು ಬಲಶಾಲಿಗಳು. ಅವರೊಡನೆ ವೈರ ಮಾಡಿ ಏನು ಪ್ರಯೋಜನ?'

ಅನುಜೀವಸ್ವ ತಾನ್ ವೀರಾನ್ ಗುಣಜ್ಯೇಷ್ಠಾನ್ ಬಲಾಧಿಕಾನ್ ।
ಇತೀರಿತೋಽತಿಸಂವೃದ್ಧಕೋಪ ಆಹ ಸುಯೋಧನಃ ॥೨೯೦॥

ಪಾಂಡವರು ಗುಣದಲ್ಲಿಯೂ ಮೇಲು ಬಲದಲ್ಲಿಯೂ ಮೇಲು. ವೀರರಾದ ಅವರನ್ನು ಅನುಸರಿಸಿ ಬದುಕಿರು' ಶಕುನಿ ಹೀಗೆ ಹೇಳಿದಾಗ ದುರ್ಯೋಧನ ಅತಿಯಾಗಿ ಕೆರಳಿದ. ಕೋಪದಿಂದ ನುಡಿದ.

ಯದಿ ತೇಷಾಂ ತದೈಶ್ವರ್ಯಂ ನ ಮಾಂ ಗಚ್ಛೇದಶೇಷತಃ ।
ಸರ್ವಥಾ ನೈವ ಜೀವೇಯಮಿತಿ ಸತ್ಯಂ ಬ್ರವೀಮಿ ತೇ ॥೨೯೧॥

'ಪಾಂಡವರ ಆ ಸಂಪತ್ತು ಪೂರ್ತಿಯಾಗಿ ನನ್ನ ವಶಕ್ಕೆ ಬಾರದಿದ್ದಲ್ಲಿ ನಾನು ಸರ್ವಥಾ ಬದುಕಿರಲಾರೆ. ನಾನು ನಿನಗೆ ನಿಜವನ್ನೇ ಹೇಳುತ್ತಿದ್ದೇನೆ'.

ನ ಚ ಬಾಹುಬಲಾಚ್ಚಕ್ಯ ಆದಾತುಂ ತಾಂ ಶ್ರಿಯಂ ಕ್ವಚಿತ್ ।
ನೇಂದ್ರೋಽಪಿ ಸಮರೇ ಶಕ್ತಸ್ತಾನ್ ಜೇತುಂ ಕಿಮು ಮಾನುಷಾಃ ॥

'ಬಾಹುಬಲದಿಂದ ಆ ಸಂಪತ್ತನ್ನು ಕಸಿಯಲು ಎಂದೂ ಶಕ್ಯವಿಲ್ಲ. ಇಂದ್ರನೂ ಯುದ್ಧದಲ್ಲಿ ಅವರನ್ನು ಗೆಲ್ಲಲಾರ. ಇನ್ನು ಮನುಷ್ಯರ ಬಗ್ಗೆ ಏನು ಹೇಳಬೇಕು?'

ಇತೀರಿತಃ ಪಾಪತಮ ಆಹ ಗಾಂಧಾರಕೋ ನೃಪಃ ।
ಪಾಪಾನಾಮಖಿಲಾನಾಂ ಚ ಪ್ರಧಾನಂ ಚಕ್ರವರ್ತಿನಾಂ ॥೨೯೩॥

ದುರ್ಯೋಧನ ಹೀಗೆ ಹೇಳಿದಾಗ ಪಾಪಿ ಚಕ್ರವರ್ತಿಗಳೆಲ್ಲರಲ್ಲಿ ಮುಖ್ಯನಾದ ಆ ದುರ್ಯೋಧನನಿಗೆ ಮಹಾಪಾಪಿಯಾದ ಗಾಂಧಾರರಾಜ ಶಕುನಿ ನುಡಿದ.

ಯಾಂತಾಂ ಶ್ರಿಯಂ ಪ್ರದೀಪ್ತಾಂ ತ್ವಂ ಪಾಂಡವೇಷು ಪ್ರಪಶ್ಯಸಿ ।
ತಾಮಕ್ಲೇಶತ ಆದಾಸ್ಯೇ ಕ್ರೀಡನ್ನಕ್ಷೈಸ್ತ್ವದಂತಿಕೇ ॥೨೯೪॥

'ಯಾವ ಯಾವ ಸಂಪತ್ತು ಪಾಂಡವರಲ್ಲಿ ಬೆಳಗುವುದನ್ನು ನೀನು ಕಾಣುತ್ತಿರುವೆಯೋ ಅದನ್ನು ನಾನು ಕ್ಲೇಶವಿಲ್ಲದೆ ಜೂಜಾಡುತ್ತಲೇ ನಿನ್ನ ಬಳಿಗೆ ಸೆಳೆದು ತರುವೆನು'.

ಇತೀರಿತಃ ಪ್ರಸನ್ನಧೀಃ ಸುಯೋಧನೋ ಬಭೂವ ಹ ।
ಪ್ರಜಗ್ಮತುಶ್ಚ ತಾವುಭೌ ವಿಚಿತ್ರವೀರ್ಯಜಂ ನೃಪಂ ॥೨೯೫॥

ಶಕುನಿ ಹೀಗೆ ಹೇಳಿದಾಗ ದುರ್ಯೋಧನನ ಮನಸ್ಸು ಪ್ರಸನ್ನವಾಯಿತು. ಅವರಿಬ್ಬರೂ ರಾಜಾ ಧೃತರಾಷ್ಟ್ರನ ಬಳಿಗೆ ಹೋದರು.

★ ★ ★ ★

ಎಪ್ಪತ್ತನೆಯ ಅಧ್ಯಾಯ

(ಸಭೆಯಲ್ಲಿ ದುರ್ಯೋಧನ ಹೊಂದಿದ ದುರವಸ್ಥೆ, ದ್ರೌಪದಿ ಮೊದಲಾದವರ ಹಾಸ್ಯ, ದುರ್ಯೋಧನನ ಅಸೂಯೆ ಮತ್ತು ಶಕುನಿಯ ದುರ್ಮಂತ್ರಣ.)

ವೈಶಂಪಾಯನಃ

ವಸನ್ ದುರ್ಯೋಧನಸ್ತಸ್ಯಾಂ ಸಭಾಯಾಂ ಭರತರ್ಷಭ ।
ಶನೈರ್ದದರ್ಶ ತಾಂ ಸರ್ವಾಂ ಸಭಾಂ ಶಕುನಿನಾ ಸಹ ॥೧॥

ಭರತರ್ಷಭನೇ! ದುರ್ಯೋಧನನು ಆ ಸಭೆಯಲ್ಲಿ ವಾಸಮಾಡುತ್ತಾ ಶಕುನಿಯ ಜೊತೆಯಲ್ಲಿ ನಿಧಾನವಾಗಿ ಆ ಸಭೆಯನ್ನೆಲ್ಲಾ ನೋಡಿದನು.

ತಸ್ಯಾಂ ದಿವ್ಯಾನಭಿಪ್ರಾಯಾನ್ ದದರ್ಶ ಕುರುನಂದನಃ ।
ಅದೃಷ್ಟಪೂರ್ವಾ ಯೇ ತೇನ ನಗರೇ ನಾಗಸಾಹ್ವಯೇ ॥೨॥

ಕುರುನಂದನನಾದ ಅವನು ಹಸ್ತಿನಾವತಿಯಲ್ಲಿ ನೋಡದಿದ್ದ ದಿವ್ಯವಾದ ಸನ್ನಿವೇಶಗಳನ್ನು ಆ ಸಭೆಯಲ್ಲಿ ನೋಡಿದನು.

ಸ ಕದಾಚಿತ್ ಸಭಾಮಧ್ಯೇ ಧಾರ್ತರಾಷ್ಟ್ರೋ ಮಹೀಪತಿಃ ।
ಸ್ಫಾಟಿಕಂ ಸ್ಥಲಮಾಸಾದ್ಯ ಜಲಮಿತ್ಯಭಿಶಂಕಯಾ ॥೩॥

ಸ್ವವಸ್ತ್ರೋತ್ಕರ್ಷಣಂ ರಾಜನ್ ಕೃತವಾನ್ ಬುದ್ಧಿಮೋಹಿತಃ ।
ದುರ್ಮನಾ ವಿಮುಖಶ್ಚಾಪಿ ಪರಿಚಕ್ರಾಮ ತಾಂ ಸಭಾಮ್ ॥೪॥

ಒಮ್ಮೆ ಆ ಸಭಾಮಧ್ಯದಲ್ಲಿ ರಾಜನಾದ ದುರ್ಯೋಧನನು ಸ್ಫಟಿಕಮಯವಾದ ಭೂಮಿಯನ್ನು ನೋಡಿ ಜಲವೆಂದು ತಿಳಿದು ಬುದ್ಧಿಮೋಹಿತನಾಗಿ ತನ್ನ ವಸ್ತ್ರಗಳನ್ನು ಮೇಲೆತ್ತಿ ಕೊಂಡನು. ರಾಜನೇ! ಅವನು ಬೇಸರಗೊಂಡು ಹಾಗೆಯೇ ಅವಮಾನಗೊಂಡು ಆ ಸಭೆಯಲ್ಲಿ ಪುನಃ ತಿರುಗಾಡಿದನು.

ತತ್ರ ಸ್ಫಾಟಿಕತೋಯಾಂ ವೈ ಸ್ಫಾಟಿಕಾಂಬುಜಶೋಭಿತಾಮ್ ।
ವಾಪೀಂ ಮತ್ವಾ ಸ್ಥಲಮಿತಿ ಸವಾಸಾಃ ಪ್ರಾಪತಜ್ಜಲೇ ॥೫॥

ಅಲ್ಲಿ ಸ್ಪಟಿಕದಂತೆ ಶುದ್ಧವಾದ ಜಲವುಳ್ಳ ಮತ್ತು ಸ್ಪಟಿಕಮಯವಾದ ಕಮಲಗಳಿಂದ ಶೋಭಿತವಾದ ಭಾವಿಯನ್ನು ನೆಲವೆಂದು ತಿಳಿದು ವಸ್ತ್ರಸಹಿತನಾಗಿ ನೀರಿನಲ್ಲಿ ಬಿದ್ದನು.

ಜಲೇ ನಿಪತಿತಂ ದೃಷ್ಟ್ವಾ ಕಿಂಕರಾ ಜಹಸುರ್ಭೃಶಮ್ ।
ತಸ್ಯ ಚಾನ್ಯಾನಿ ವಾಸಾಂಸಿ ಪ್ರದದೂ ರಾಜಶಾಸನಾತ್ ॥೬॥

ನೀರಿನಲ್ಲಿ ಬಿದ್ದ ಅವನನ್ನು ನೋಡಿ ಧರ್ಮರಾಜನ ಕಿಂಕರರು ಗಟ್ಟಿಯಾಗಿ ನಕ್ಕರು. ಮತ್ತು ರಾಜಶಾಸನದಂತೆ ಅವನಿಗೆ ಬೇರೆ ವಸ್ತ್ರಗಳನ್ನು ತಂದು ಕೊಟ್ಟರು.

ತಂ ವೈ ತಥಾಗತಂ ತತ್ರ ದ್ರೌಪದೀ ಭೀಮ ಏವ ಚ ।
ಅರ್ಜುನಶ್ಚ ಯಮೌ ಸರ್ವೇ ದೃಷ್ಟ್ವಾ ಚ ಪ್ರಾಹಸಂಸ್ತದಾ ॥೭॥

ಆ ಅವಸ್ಥೆಯಲ್ಲಿದ್ದ ಅವನನ್ನು ನೋಡಿ ಆಗ ದ್ರೌಪದಿಯೂ ಭೀನಸೇನನೂ ಅರ್ಜುನನೂ ಮತ್ತು ನಕುಲ ಸಹದೇವರು ಎಲ್ಲರೂ ನಕ್ಕರು.

ನಾಮರ್ಷಯತ್ ತತಸ್ತೇಷಾಮಪಹಾಸಮಮರ್ಷಣಃ ।
ಆಕಾರಂ ರಕ್ಷಮಾಣಸ್ತು ನ ಸ ತಾನ್ ಸಮುದೈಕ್ಷತ ॥೮॥

ಕ್ರೋಧಶೀಲನಾದ ದುರ್ಯೋಧನನು ಅವರು ಮಾಡಿದ ಅಪಹಾಸವನ್ನು ಸಹಿಸಲಿಲ್ಲ. ತನ್ನ ಅಸಮಾಧಾನವನ್ನು ತೋರಗೊಡದೆ ಅವನು ಆವರ ಕಡೆಗೆ ನೋಡದೆ ಮುಂದೆ ನಡೆದನು.

ಪುನರ್ವಸನಮುತ್ಕ್ಷಿಪ್ಯ ಪ್ರತರಿಷ್ಯನ್ನಿವ ಸ್ಥಲಮ್ ।
ಆರುರೋಹ ತತಃ ಸರ್ವೇ ಜಹಸುಶ್ಚ ಪುನರ್ಜನಾಃ ॥೯॥

ಪುನಃ ವಸ್ತ್ರವನ್ನು ಮೇಲೆತ್ತಿಕೊಂಡು ನೀರನ್ನು ದಾಟುವವಂತೆ ನೆಲವನ್ನು ಹತ್ತಿದನು. ಅದನ್ನು ನೋಡಿ ಪುನಃ ಎಲ್ಲರೂ ನಕ್ಕರು.

ದ್ವಾರಂ ಚ ಪಿಹಿತಾಕಾರಂ ಸ್ಫಾಟಿಕಂ ಪ್ರೇಕ್ಷ್ಯ ಭೂಮಿಪಃ ।
ಪ್ರವಿಶನ್ನಾಹತೋ ಮೂರ್ಧ್ನಿ ವ್ಯಾಘೂರ್ಣಿತ ಇವ ಸ್ಥಿತಃ ॥೧೦॥

ರಾಜನಾದ ಅವನು ಸ್ಪಟಿಕಮಯವಾದ ಮುಚ್ಚಿದ ಬಾಗಿಲನ್ನು (ತೆರೆದಿದೆ ಎಂದು ತಿಳಿದು ಪ್ರವೇಶಿಸುತ್ತಾ) ತಲೆಯಿಂದ ಡಿಕ್ಕಿಯನ್ನು ಹೊಡೆದು ಅಲ್ಲೋಲ ಕಲ್ಲೋಲವಾಗಿ ನಿಂತನು.

ತದ್ ವೃತ್ತಮಪರಂ ದ್ವಾರಂ ಸ್ಫಾಟಿಕೋರುಕವಾಟಕಮ್ ।
ವಿಘಟ್ಟಯನ್ ಕರಾಭ್ಯಾಂ ತು ನಿಷ್ಕ್ರಮ್ಯಾಗ್ರೇ ಪಪಾತ ಹ ॥೧೧॥

ಸ್ಪಟಿಕ ಕವಾಟವಿದ್ದ ಇನ್ನೊಂದು ವೃತ್ತಾಕಾರದ ದ್ವಾರವನ್ನು ಎರಡೂ ಕೈಗಳಿಂದ ಗಟ್ಟಿಯಾಗಿ ತಳ್ಳುತ್ತಾ ಹೊರಗೆ ಬಂದು ಮುಂದೆ ಬಿದ್ದನು.

ದ್ವಾರಂ ಚ ವಿಕೃತಾಕಾರಂ ಲಲಾಟೇನ ಸಮಾಹನತ್ ।
ಸಂವೃತಂ ಚೇತಿ ಮನ್ವಾನೋ ದ್ವಾರದೇಶಾದಪಾಗಮತ್ ॥೧೨॥

ಮುಚ್ಚಿರುವಂತೆ ಕಾಣದಿದ್ದ ಬಾಗಿಲನ್ನು ಪ್ರವೇಶಿಸಲು ಹೋಗಿ ಹಣೆಯಿಂದ ಗಟ್ಟಿಸಿದನು. ಬಾಗಿಲು ಮುಚ್ಚಿದೆ ಎಂದು ಇನ್ನೊಂದೆಡೆ ದ್ವಾರದೇಶದಿಂದ ಹೊರಗೆ ಬಿದ್ದನು.

ಏವಂ ಪ್ರಲಂಭಾನ್ ವಿವಿಧಾನ್ ಪ್ರಾಪ್ಯ ತತ್ರ ವಿಶಾಂಪತೇ ।
ಪಾಂಡವೈರನನುಜ್ಞಾತಸ್ತತೋ ದುರ್ಯೋಧನೋ ನೃಪಃ ॥೧೩॥

ಅಪ್ರಹೃಷ್ಟೇನ ಮನಸಾ ರಾಜಸೂಯೇ ಮಹಾಕ್ರತೌ ।
ಪ್ರೇಕ್ಷ್ಯ ತಾಮಭ್ಯುದ್ಯತಾಮೃದ್ಧಿಂ ಜಗಾಮ ಗಜಸಾಹ್ವಯಮ್ ॥೧೪॥

ಎಲೈ ರಾಜನೇ! ಹೀಗೆ ರಾಜನಾದ ದುರ್ಯೋಧನನು ಆ ಸಭೆಯಲ್ಲಿ ಅನೇಕ ವಂಚನೆಗಳಿಗೆ ತುತ್ತಾಗಿ ಪಾಂಡವರ ಅನುಮತಿಯನ್ನು ಪಡೆಯದೆಯೇ ಸಂತೋಷಗೊಳ್ಳದ ಮನಸ್ಸಿನಿಂದ ರಾಜಸೂಯ ಮಹಾಯಾಗದಲ್ಲಿ ಅವರ ಅದ್ಭುತವಾದ ಸಮೃದ್ಧಿಯನ್ನು ನೋಡುತ್ತಾ ಹಸ್ತಿನಾವತಿಗೆ ಹೊರಟನು.

ನತುಷ್ಟೋ ಧರ್ಮರಾಜಸ್ಯ ಯಜ್ಞಮಾಸಾದ್ಯ ತಂ ತದಾ ।
ಜಗಾಮ ಸ್ವಗೃಹಂ ತ್ವನ್ಯದ್ ಋತೇ ದುರ್ಯೋಧನಸ್ತದಾ ॥೧೫॥

ಆಗ ದುರ್ಯೋಧನನು ಯಜ್ಞಕ್ಕೆ ಬಂದು ಸಂತೋಷಗೋಳ್ಳದೆ ಹಿಂದಿರುಗುತ್ತಾ ತನ್ನ ಸ್ವಗೃಹಕ್ಕೆ ಹೋಗುವುದನ್ನು ಬಿಟ್ಟು ಇನ್ನೊಂದು ಮನೆಗೆ ಹೋದನು.

ದೃಷ್ಟ್ವಾ ಯಜ್ಞವಿಭೂತಿಂ ತಾಂ ಪಾಂಡವಾನಾಂ ಮಹಸ್ವಿನಾಮ್ ।
ಪಾಂಡವಶ್ರೀಪ್ರತಪ್ತಸ್ಯ ಧ್ಯಾನಮ್ಲಾನಸ್ಯ ಗಚ್ಛತಃ ।
ದುರ್ಯೋಧನಸ್ಯ ನೃಪತೇ ಪಾಪಾ ಮತಿರಜಾಯತ ॥೧೬॥

ಎಲೈ ರಾಜನೇ! ತೇಜಸ್ವಿಗಳಾದ ಪಾಂಡವರ ಯಜ್ಞದ ವೈಭವವನ್ನು ನೋಡಿ ಪಾಂಡವರ ಐಶ್ವರ್ಯವನ್ನು ನೋಡಿ ಪ್ರತಪ್ತನಾಗಿ ಅದನ್ನೇ ಯೋಚಿಸುತ್ತಾ ಬಾಡಿದ ಮುಖವುಳ್ಳ ದುರ್ಯೋಧನನಿಗೆ ದುಷ್ಟ ಬುದ್ಧಿಯುಂಟಾಯಿತು.

ಪಾರ್ಥಾನ್ ಸುಮನಸೋ ದೃಷ್ಟ್ವಾ ಪಾರ್ಥಿವಾಂಶ್ಚ ವಶಾನುಗಾನ್ ।
ಕೃತ್ಸ್ನಂ ಚಾಪಿ ಹಿತಂ ಲೋಕಮಾಕುಮಾರಂ ಕುರೂದ್ವಹ ।
ದುರ್ಯೋಧನಃ ಪಾಪಬುದ್ಧಿಃ ಪರ್ಯತಪ್ಯತ ಮನ್ಯುನಾ ॥೧೭॥

ಎಲೈ ಕುರೂದ್ವಹನೇ! ಸಂತೋಷಗೊಂಡ ಪಾಂಡವರಿಗೆ ಎಲ್ಲಾ ರಾಜರೂ ವಶರಾಗಿರುವುದನ್ನೂ ಬಾಲರಿಂದ ಹಿಡಿದು ಎಲ್ಲಾ ಜನರೂ ಅವರಿಗೆ ಹಿತರಾಗಿರುವುದನ್ನೂ ನೋಡಿದ ಪಾಪಬುದ್ಧಿಯುಳ್ಳ ದುರ್ಯೋಧನನು ಸಿಟ್ಟಿನಿಂದ ಪರಿತಪಿಸಿದನು.

ಸ ತು ಗಚ್ಛನ್ನನೇಕಾಗ್ರಃ ಸಭಾಮೇವಾನುಚಿಂತಯನ್ ।
ಶ್ರಿಯಂ ಚ ತಾಮನುಪಮಾಂ ಧರ್ಮರಾಜಸ್ಯ ಧೀಮತಃ ॥೧೮॥

ಪ್ರಮತ್ತೋ ಧೃತರಾಷ್ಟ್ರಸ್ಯ ಪುತ್ರೋ ದುರ್ಯೋಧನಸ್ತದಾ ।
ನಾಭ್ಯಭಾಷತ್ ಸುಬಲಜಂ ಭಾಷ್ಯಮಾಣಃ ಪುನಃ ಪುನಃ ॥೧೯॥

ಏಕಾಗ್ರತೆಯಿಲ್ಲದ ಮನಸ್ಸಿನಿಂದ ಆ ಸಭೆಯನ್ನೇ ಯೋಚಿಸಿ ಹೋಗುತ್ತಾ ಮೇಧಾವಿಯಾದ ಧರ್ಮರಾಜನ ಅಸದೃಶವಾದ ಸಂಪತ್ತನ್ನು ಚಿಂತಿಸುತ್ತಾ ಧೃತರಾಷ್ಟ್ರನ ಪುತ್ರನಾದ ಪ್ರಮತ್ತನಾದ ದುರ್ಯೋಧನನು ಆಗ ಶಕುನಿಯು ಪುನಃ ಪುನಃ ಎಷ್ಟು ಬಾರಿ ಮಾತನಾಡಿದರೂ ಮಾತನಾಡಿಸಿಲಿಲ್ಲ.

ತಂ ತು ದುರ್ಮನಸಂ ದೃಷ್ಟ್ವಾ ಶಕುನಿಃ ಪ್ರತ್ಯಭಾಷತ ।
ದುರ್ಯೋಧನ ಕುತೋಮೂಲಂ ನಿಃಶ್ವಸ್ನಿವ ಗಚ್ಛಸಿ ॥೨೦॥

ಅವನು ಮನಃಖೇದದಿಂದ ಕೂಡಿರುವುದನ್ನು ನೋಡಿದ ಶಕುನಿಯು ದುರ್ಯೋಧನನೇ! ಏನು ಕಾರಣದಿಂದ ನೀನು ನಿಟ್ಟುಸಿರನ್ನು ಬಿಡುವವನಂತೆ ನಡೆಯುತ್ತಿದ್ದೀಯೆ ಎಂದು ಕೇಳಿದನು.

ದುರ್ಯೋಧನಃ

ದೃಷ್ಟ್ವೇಮಾಂ ಪೃಥಿವೀಂ ಸರ್ವಾಂ ಯುಧಿಷ್ಠಿರವಶೇ ಸ್ಥಿತಾಮ್ ।
ಜಿತಾಮಸ್ತ್ರಪ್ರತಾಪೇನ ಶ್ವೇತಾಶ್ವಸ್ಯ ಮಹಾತ್ಮನಃ ॥೨೧॥

ತಂ ಚ ಯಜ್ಞಂ ತಥಾರೂಪಂ ದೃಷ್ಟ್ವಾ ಪಾರ್ಥಸ್ಯ ಮಾತುಲ ।
ಯಥಾ ಶಕ್ರಸ್ಯ ದೇವಾನಾಮೀಶ್ವರಸ್ಯ ತಥಾವಿಧಮ್ ॥೨೨॥

ಅಮರ್ಷೇಣ ಸುಸಂಪೂರ್ಣೋ ದಹ್ಯಮಾನೋ ದಿವಾನಿಶಮ್ ।
ಶುಷ್ಯತೇ ಹೃದಯಂ ಮೇऽದ್ಯ ಗ್ರೀಷ್ಮೇ ತೋಯಮಿವಾಲ್ಪಕಮ್ ॥೨೩॥

ಸೋದರಮಾವನೇ! ಶ್ವೇತಾಶ್ವನಾದ ಮಹಾತ್ಮನಾದ ಅರ್ಜುನನ ಅಸ್ತ್ರಪ್ರತಾಪದಿಂದ ಸಮಸ್ತವಾದ ಪೃಥಿವಿಯು ಜಿತವಾಗಿ ಯುಧಿಷ್ಠಿರನ ವಶವಾಗಿರುವುದನ್ನು ನೋಡಿ, ಧರ್ಮರಾಜನ ಯಜ್ಞವು ದೇವತೆಗಳ ಒಡೆಯನಾದ ಇಂದ್ರನ ಯಜ್ಞದಂತೆ ಆ ರೀತಿಯಲ್ಲಿ ಇದ್ದುದನ್ನು ನೋಡಿ, ಕ್ರೋಧ ಮತ್ತು ಅಸಮಾಧಾನಗಳಿಂದ ಪೂರ್ಣವಾಗಿ ತುಂಬಿ ಹಗಲೂ ರಾತ್ರಿಯೂ ಬೆಯ್ಯುತ್ತಿದ್ದೇನೆ. ಈ ದಿನ ನನ್ನ ಮನಸ್ಸು ಗ್ರೀಷ್ಮಕಾಲದಲ್ಲಿ ಅಲ್ಪವಾದ ನೀರು ಒಣಗಿ ಹೋಗುವಂತೆ ಒಣಗುತ್ತಿದೆ.

ಪಶ್ಯ ಸಾತ್ವತಮುಖ್ಯೇನ ಶಿಶುಪಾಲೋ ನಿಪಾತಿತಃ ।
ನ ಚ ತತ್ರ ಪುಮಾನಾಸೀತ್ ಕಶ್ಚಿತ್ ತಸ್ಯ ಪದಾನುಗಃ ॥೨೪॥

ಕ್ಷಾಂತಂ ತತೋऽಪರಾಧಂ ನ ಕ್ಷೋಭಿತಂ ಕರ್ತುಮರ್ಹಸಿ ।
ವಾಸುದೇವೇನ ತತ್ ಕರ್ಮ ಯಥಾऽಯುಕ್ತಂ ತಥಾಕೃತಮ್ ।
ಸಿದ್ಧಿಂ ಚ ಪಾಂಡವೇಯಾನಾಂ ಪ್ರಭಾವೇಣ ಮಹಾತ್ಮನಾಮ್ ॥೨೫॥

ತಥಾ ಹಿ ರತ್ನಾನ್ಯಾದಾಯ ವಿವಿಧಾನಿ ನರಾಧಿಪಾಃ ।
ಉಪಾತಿಷ್ಠಂತ ಕೌಂತೇಯಂ ವೈಶ್ಯಾ ಇವ ಕರಪ್ರದಾಃ ॥೨೬॥

ನೋಡು ಸಾತ್ವತಶ್ರೇಷ್ಠನಾದ ಕೃಷ್ಣನಿಂದ ಶಿಶುಪಾಲನು ಉರುಳಿಸಲ್ಪಟ್ಟನು. ಶಿಶುಪಾಲನಿಗೆ ಬೆಂಬಲವನ್ನು ಕೊಡುವ ಒಬ್ಬ ವ್ಯಕ್ತಿಯೂ ಅಲ್ಲಿ ಇರಲಿಲ್ಲ. ಶಿಶುಪಾಲವಧೆಯ ರೂಪವಾದ ಅಪರಾಧವನ್ನು ಎಂದೂ ನೀನು ಕ್ಷಮಿಸಬಾರದು. ಕೃಷ್ಣನು ಅಂತಹ ಅಯುಕ್ತವಾದ ಕರ್ಮವನ್ನು ಮಾಡಿದನು. ಮಹಾತ್ಮರಾದ ಪಾಂಡವರ ಪ್ರಭಾವದಿಂದ ಉಂಟಾದ ಸಿದ್ಧಿಯನ್ನು ಸಹ ಸಹಿಸಬಾರದು. ರಾಜರು ಕರವನ್ನು ಕೊಡುವ ವೈಶ್ಯರಂತೆ ವಿವಿಧ ರತ್ನಗಳನ್ನು ತೆಗೆದುಕೊಂಡು ಬಂದು ಧರ್ಮರಾಜನನ್ನು ಸಮೀಪಿಸಿ ಅರ್ಪಿಸಿದರು.

ತಂ ತಥಾ ಜ್ವಲಿತಾಂ ದೃಷ್ಟ್ವಾ ಶ್ರಿಯಂ ಮಾತುಲ ಪಾಂಡವೇ ।
ಅಮರ್ಷವಶಮಾಪನ್ನೋ ದಹ್ಯೇಯಮತಥೋಚಿತಃ ॥೨೭॥

ಸೋದರಮಾವನೇ! ಪಾಂಡವರ ಅಂತಹ ಉಜ್ವಲವಾದ ಸಂಪತ್ತನ್ನುನೋಡಿ ಕ್ರೋಧದಿಂದ ಕೂಡಿದವನಾಗಿ ತಡೆಯಲಾಗದೆ ನಾನು ಬೆಂದು ಹೋಗುತ್ತಿದ್ದೇನೆ.

ಏವಂ ಸ ನಿಶ್ಚಯಂ ಕೃತ್ವಾ ತತೋ ವಚನಮಬ್ರವೀತ್ ।
ಪುನರ್ಗಾಂಧಾರನೃಪತಿಂ ದಹ್ಯಮಾನ ಇವಾಗ್ನಿನಾ ॥೨೮॥

ಅವನು ಹೀಗೆ ನಿಶ್ಚಯವನ್ನು ಮಾಡಿ ಬೆಂಕಿಯಲ್ಲಿ ಬೆಂದು ಹೋಗುತ್ತಿರುವವನಂತೆ ಗಾಂಧಾರರಾಜನಾದ ಶಕುನಿಯನ್ನು ಕುರಿತು (ಹೀಗೆ) ಮಾತನಾಡಿದನು.

ಸೋಽಹಮಗ್ನಿಂ ಪ್ರವೇಕ್ಷ್ಯಾಮಿ ಭಕ್ಷಯಿಷ್ಯಾಮಿ ವಾ ವಿಷಮ್ ।
ಅಪೋ ವಾಽಪಿ ಪ್ರವೇಕ್ಷ್ಯಾಮಿ ನಹಿ ಶಕ್ಷ್ಯಾಮಿ ಜೀವಿತುಮ್ ॥೨೯॥

ಅಂತಹ ನಾನು ಅಗ್ನಿಪ್ರವೇಶವನ್ನು ಮಾಡುವೆನು. ಅಥವಾ ವಿಷವನ್ನು ಭಕ್ಷಿಸುವೆನು. ನೀರನ್ನಾದರೂ ಪ್ರವೇಶಿಸುವೆನು. ನಾನು ಬದುಕಿರಲಾರೆ.

ಕೋ ಹಿ ನಾಮ ಪುಮಾನ್ ಲೋಕೇ ಮರ್ಷಯಿಷ್ಯತಿ ಸತ್ತ್ವವಾನ್ ।
ಸಪತ್ನಾನ್ ಋದ್ಧ್ಯತೋ ದೃಷ್ಟ್ವಾ ಹಾನಿಮಾತ್ಮನ ಏವ ಚ ॥೩೦॥

ತಂ ತು ದುರ್ಮನಸಂ ದೃಷ್ಟ್ವಾ ಶಕುನಿಃ ಪ್ರತ್ಯಭಾಷತ ।
ದುರ್ಯೋಧನ ಕುತೋಮೂಲಂ ನಿಃಶ್ವನ್ನಿವ ಗಚ್ಛಸಿ ॥೨೦॥

ಅವನು ಮನಃಖೇದದಿಂದ ಕೂಡಿರುವುದನ್ನು ನೋಡಿದ ಶಕುನಿಯು ದುರ್ಯೋಧನನೇ! ಏನು ಕಾರಣದಿಂದ ನೀನು ನಿಟ್ಟುಸಿರನ್ನು ಬಿಡುವವನಂತೆ ನಡೆಯುತ್ತಿದ್ದೀಯೆ ಎಂದು ಕೇಳಿದನು.

ದುರ್ಯೋಧನಃ

ದೃಷ್ಟ್ವೇಮಾಂ ಪೃಥಿವೀಂ ಸರ್ವಾಂ ಯುಧಿಷ್ಠಿರವಶೇ ಸ್ಥಿತಾಮ್ ।
ಜಿತಾಮಸ್ತ್ರಪ್ರತಾಪೇನ ಶ್ವೇತಾಶ್ವಸ್ಯ ಮಹಾತ್ಮನಃ ॥೨೧॥

ತಂ ಚ ಯಜ್ಞಂ ತಥಾರೂಪಂ ದೃಷ್ಟ್ವಾ ಪಾರ್ಥಸ್ಯ ಮಾತುಲ ।
ಯಥಾ ಶಕ್ರಸ್ಯ ದೇವಾನಾಮೀಶ್ವರಸ್ಯ ತಥಾವಿಧಮ್ ॥೨೨॥

ಅಮರ್ಷೇಣ ಸುಸಂಪೂರ್ಣೋ ದಹ್ಯಮಾನೋ ದಿವಾನಿಶಮ್ ।
ಶುಷ್ಯತೇ ಹೃದಯಂ ಮೇऽದ್ಯ ಗ್ರೀಷ್ಮೇ ತೋಯಮಿವಾಲ್ಪಕಮ್ ॥೨೩॥

ಸೋದರಮಾವನೇ! ಶ್ವೇತಾಶ್ವನಾದ ಮಹಾತ್ಮನಾದ ಅರ್ಜುನನ ಅಸ್ತ್ರಪ್ರತಾಪದಿಂದ ಸಮಸ್ತವಾದ ಪೃಥಿವಿಯು ಜಿತವಾಗಿ ಯುಧಿಷ್ಠಿರನ ವಶವಾಗಿರುವುದನ್ನು ನೋಡಿ, ಧರ್ಮರಾಜನ ಯಜ್ಞವು ದೇವತೆಗಳ ಒಡೆಯನಾದ ಇಂದ್ರನ ಯಜ್ಞದಂತೆ ಆ ರೀತಿಯಲ್ಲಿ ಇದ್ದುದನ್ನು ನೋಡಿ, ಕ್ರೋಧ ಮತ್ತು ಅಸಮಾಧಾನಗಳಿಂದ ಪೂರ್ಣವಾಗಿ ತುಂಬಿ ಹಗಲೂ ರಾತ್ರಿಯೂ ಬೆಯ್ಯುತ್ತಿದ್ದೇನೆ. ಈ ದಿನ ನನ್ನ ಮನಸ್ಸು ಗ್ರೀಷ್ಮಕಾಲದಲ್ಲಿ ಅಲ್ಪವಾದ ನೀರು ಒಣಗಿ ಹೋಗುವಂತೆ ಒಣಗುತ್ತಿದೆ.

ಪಶ್ಯ ಸಾತ್ವತಮುಖ್ಯೇನ ಶಿಶುಪಾಲೋ ನಿಪಾತಿತಃ ।
ನ ಚ ತತ್ರ ಪುಮಾನಾಸೀತ್ ಕಶ್ಚಿತ್ ತಸ್ಯ ಪದಾನುಗಃ ॥೨೪॥

ಕ್ಷಾಂತಂ ತತೋऽಪರಾಧಂ ನ ಕ್ಷೋಭಿತಂ ಕರ್ತುಮರ್ಹಸಿ ।
ವಾಸುದೇವೇನ ತತ್ ಕರ್ಮ ಯಥಾऽಯುಕ್ತಂ ತಥಾಕೃತಮ್ ।
ಸಿದ್ಧಿಂ ಚ ಪಾಂಡವೇಯಾನಾಂ ಪ್ರಭಾವೇಣ ಮಹಾತ್ಮನಾಮ್ ॥೨೫॥

ತಥಾ ಹಿ ರತ್ನಾನ್ಯಾದಾಯ ವಿವಿಧಾನಿ ನರಾಧಿಪಾಃ ।
ಉಪಾತಿಷ್ಠಂತ ಕೌಂತೇಯಂ ವೈಶ್ಯಾ ಇವ ಕರಪ್ರದಾಃ ॥೨೬॥

ನೋಡು ಸಾತ್ವತಶ್ರೇಷ್ಠನಾದ ಕೃಷ್ಣನಿಂದ ಶಿಶುಪಾಲನು ಉರುಳಿಸಲ್ಪಟ್ಟನು. ಶಿಶುಪಾಲನಿಗೆ ಬೆಂಬಲವನ್ನು ಕೊಡುವ ಒಬ್ಬ ವ್ಯಕ್ತಿಯೂ ಅಲ್ಲಿ ಇರಲಿಲ್ಲ. ಶಿಶುಪಾಲವಧೆಯ ರೂಪವಾದ ಅಪರಾಧವನ್ನು ಎಂದೂ ನೀನು ಕ್ಷಮಿಸಬಾರದು. ಕೃಷ್ಣನು ಅಂತಹ ಅಯುಕ್ತವಾದ ಕರ್ಮವನ್ನು ಮಾಡಿದನು. ಮಹಾತ್ಮರಾದ ಪಾಂಡವರ ಪ್ರಭಾವದಿಂದ ಉಂಟಾದ ಸಿದ್ಧಿಯನ್ನು ಸಹ ಸಹಿಸಬಾರದು. ರಾಜರು ಕರವನ್ನು ಕೊಡುವ ವೈಶ್ಯರಂತೆ ವಿವಿಧ ರತ್ನಗಳನ್ನು ತೆಗೆದುಕೊಂಡು ಬಂದು ಧರ್ಮರಾಜನನ್ನು ಸಮೀಪಿಸಿ ಅರ್ಪಿಸಿದರು.

ತಂ ತಥಾ ಜ್ವಲಿತಾಂ ದೃಷ್ಟ್ವಾ ಶ್ರಿಯಂ ಮಾತುಲ ಪಾಂಡವೇ ।
ಅಮರ್ಷವಶಮಾಪನ್ನೋ ದಹ್ಯೇಯಮತಥೋಚಿತಃ ॥೨೭॥

ಸೋದರಮಾವನೇ! ಪಾಂಡವರ ಅಂತಹ ಉಜ್ವಲವಾದ ಸಂಪತ್ತನ್ನುನೋಡಿ ಕ್ರೋಧದಿಂದ ಕೂಡಿದವನಾಗಿ ತಡೆಯಲಾಗದೆ ನಾನು ಬೆಂದು ಹೋಗುತ್ತಿದ್ದೇನೆ.

ಏವಂ ಸ ನಿಶ್ಚಯಂ ಕೃತ್ವಾ ತತೋ ವಚನಮಬ್ರವೀತ್ ।
ಪುನರ್ಗಾಂಧಾರನೃಪತಿಂ ದಹ್ಯಮಾನ ಇವಾಗ್ನಿನಾ ॥೨೮॥

ಅವನು ಹೀಗೆ ನಿಶ್ಚಯವನ್ನು ಮಾಡಿ ಬೆಂಕಿಯಲ್ಲಿ ಬೆಂದು ಹೋಗುತ್ತಿರುವವನಂತೆ ಗಾಂಧಾರರಾಜನಾದ ಶಕುನಿಯನ್ನು ಕುರಿತು (ಹೀಗೆ) ಮಾತನಾಡಿದನು.

ಸೋಽಹಮಗ್ನಿಂ ಪ್ರವೇಕ್ಷ್ಯಾಮಿ ಭಕ್ಷಯಿಷ್ಯಾಮಿ ವಾ ವಿಷಮ್ ।
ಅಪೋ ವಾಽಪಿ ಪ್ರವೇಕ್ಷ್ಯಾಮಿ ನಹಿ ಶಕ್ಷ್ಯಾಮಿ ಜೀವಿತುಮ್ ॥೨೯॥

ಅಂತಹ ನಾನು ಅಗ್ನಿಪ್ರವೇಶವನ್ನು ಮಾಡುವೆನು. ಅಥವಾ ವಿಷವನ್ನು ಭಕ್ಷಿಸುವೆನು. ನೀರನ್ನಾದರೂ ಪ್ರವೇಶಿಸುವೆನು. ನಾನು ಬದುಕಿರಲಾರೆ.

ಕೋ ಹಿ ನಾಮ ಪುಮಾನ್ ಲೋಕೇ ಮರ್ಷಯಿಷ್ಯತಿ ಸತ್ತ್ವವಾನ್ ।
ಸಪತ್ನಾನ್ ಋದ್ಧ್ಯತೋ ದೃಷ್ಟ್ವಾ ಹಾನಿಮಾತ್ಮನ ಏವ ಚ ॥೩೦॥

ಆತ್ಮಾಭಿಮಾನಿಯಾದ ಯಾವನು ಲೋಕದಲ್ಲಿ ಶತ್ರುಗಳ ಸಂಪತ್ತನ್ನೂ ತನ್ನ ಪಕ್ಷದ ಹಾನಿಯನ್ನೂ ನೋಡಿ ಸಹಿಸುವನು?

ಸೋಹಂ ನಾಸ್ಮಿ ನ ನಾಪ್ಯಸ್ಮಿ ನ ಸ್ತ್ರೀ ನಚ ಪುಮಾನಪಿ ।
ಯೋಽಹಂ ತಾಂ ಮರ್ಷಯಾಮ್ಯದ್ಯ ಶ್ರಿಯಂ ತಸ್ಮಿನ್ನಶಕ್ತಿತಃ ॥೩೩॥

ಯಾವ ನಾನು ಅಸಾಮರ್ಥ್ಯದಿಂದ ಆ ಸಂಪತ್ತನ್ನು ನೋಡಿ ಸಹಿಸಿಕೊಂಡಿದ್ದೇನೆಯೋ ಅಂತಹ ನಾನು ಬದುಕಿಯೂ ಇಲ್ಲ. ಸತ್ತೂ ಇಲ್ಲ. ಸ್ತ್ರೀಯೂ ಅಲ್ಲ. ಪುರುಷನೂ ಅಲ್ಲ.

ಈಶ್ವರತ್ವಂ ಪೃಥಿವ್ಯಾಶ್ಚ ವಸುಮತ್ತಾಂ ಚ ತಾದೃಶೀಮ್ ।
ಯಜ್ಞಂ ಚ ತಾದೃಶಂ ದೃಷ್ಟ್ವಾ ಮಾದೃಶಃ ಕೋ ನ ಸಂಜ್ವರೇತ್ ॥೩೪॥

ಅಶಕ್ತಶ್ಚೈಕ ಏವಾಹಂ ತಾಮಾಹರ್ತುಂ ತತಃ ಶ್ರಿಯಮ್ ।
ಸಹಾಯಾಂಶ್ಚ ನ ಪಶ್ಯಾಮಿ ತೇನ ಮೃತ್ಯುಂ ವಿಚಿಂತಯೇ ॥೩೫॥

ಭೂಮಿಯ ಒಡೆತನವನ್ನು ಅಂತಹ ಧನ ಸಮೃದ್ಧಿಯನ್ನು ಅಂತಹ ಯಜ್ಞವನ್ನು ನೋಡಿ ನನ್ನಂತಹ ಯಾವನು ತಾನೆ ಸಂತಾಪಕ್ಕೆ ಒಳಗಾಗುವುದಿಲ್ಲ? ಆ ಸಂಪತ್ತನ್ನು ವಶಪಡಿಸಿಕೊಳ್ಳಲು ನಾನು ಒಬ್ಬನೇ ಅಸಮರ್ಥನಾಗಿದ್ದೇನೆ. ನನಗೆ ಸಹಾಯಮಾಡುವ ಯಾರನ್ನೂ ಕಾಣುತ್ತಿಲ್ಲ. ಆ ಕಾರಣದಿಂದ ಮರಣವನ್ನು ಕುರಿತು ಚಿಂತಿಸುತ್ತಿದ್ದೇನೆ.

ದೈವಮೇವ ಪರಂ ಮನ್ಯೇ ಪೌರುಷಂ ತು ನಿರರ್ಥಕಮ್ ।
ದೃಷ್ಟ್ವಾ ಕುಂತೀಸುತೇ ಶುಭ್ರಾಂ ಶ್ರಿಯಂ ತಾಮಾಹೃತಾಂ ನಯಾತ್ ॥

ಕುಂತೀಸುತನಾದ ಧರ್ಮರಾಜನಿಗೆ ಹಾಗೆ ಶುದ್ಧ ನೀತಿಯಿಂದ ಬಂದು ಸೇರಿದ ಶುಭ್ರವಾದ ಸಂಪತ್ತನ್ನು ನೋಡಿ ದೈವವೇ ಪ್ರಬಲವೆಂದು ತಿಳಿಯುತ್ತೇನೆ. ಪುರುಷ ಪ್ರಯತ್ನವು ನಿರರ್ಥಕವಾದುದು.

ಕೃತೋ ಯತ್ನೋ ಮಯಾ ಪೂರ್ವಂ ವಿನಾಶೇ ತಸ್ಯ ಸೌಬಲ ।
ತಚ್ಚ ಸರ್ವಂ ವೃಥಾ ಜಾತಂ ಸ ಚ ವೃದ್ಧೋ ಮಹಾಬಲಃ ॥೩೭॥

ಶಕುನಿಯೇ! ನಾನು ಅವನ ವಿನಾಶಕ್ಕಾಗಿ ಹಿಂದೆ ಅನೇಕ ಪ್ರಯತ್ನಗಳನ್ನು ಮಾಡಿದೆ ಅವೆಲ್ಲವೂ ವ್ಯರ್ಥವಾಯಿತು. ಅವನಾದರೂ ಮಹಾಬಲಿಷ್ಠನಾಗಿ ಬೆಳೆದನು.

ತೇನ ದೈವಂ ಪರಂ ಮನ್ಯೇ ಪೌರುಷಂ ತು ನಿರರ್ಥಕಮ್ ।
ಧಾರ್ತರಾಷ್ಟ್ರಾ ಹಿ ಹೀಯಂತೇ ವರ್ಧಂತೇ ಪಾಪಿಪಾಂಡವಾಃ ॥೩೮॥

ಆದ್ದರಿಂದ ನಾನು ದೈವವೇ ಪ್ರಬಲವೆಂದು ತಿಳಿಯುತ್ತೇನೆ. ಪೌರುಷವು ನಿರರ್ಥಕವಾದುದು. ಧೃತರಾಷ್ಟ್ರನ ಮಕ್ಕಳು ಅವನತಿಯನ್ನು ಹೊಂದುತ್ತಿದ್ದಾರೆ. ಪಾಪಿಗಳಾದ ಪಾಂಡವರು ಅಭಿವೃದ್ಧಿಯನ್ನು ಹೊಂದುತ್ತಿದ್ದಾರೆ.

ಸೋಽಹಂ ಶ್ರಿಯಂ ಚ ತಾಂ ದೃಷ್ಟ್ವಾ ಸಭಾಂ ಚೈವ ತಥಾವಿಧಾಮ್ ।
ರಕ್ಷಿಭಿಶ್ಚಾಪಹಾಸಂ ತಂ ಪರಿತಪ್ಯೇ ಯಥಾಽಗ್ನಿನಾ ॥೩೯॥

ಅಂತಹ ನಾನು ಆ ಸಂಪತ್ತನ್ನೂ ಅಂತಹ ಸಭೆಯನ್ನೂ ಸೇವಕರಿಂದ ಆದ ಅಪಹಾಸವನ್ನೂ ನೋಡಿ ಅಗ್ನಿಯಲ್ಲಿ ಸಿಕ್ಕಿದಂತೆ ಪರಿತಪಿಸುತ್ತಿದ್ದೇನೆ.

ಸ ಮಾಮಭ್ಯನುಜಾನೀಹಿ ಮಾತುಲಾದ್ಯ ಸುದುಃಖಿತಮ್ ।
ಅಮರ್ಷವಶಮಾಪನ್ನಂ ಧೃತರಾಷ್ಟ್ರೇ ನಿವೇದಯ ॥೪೦॥

ಸೋದರಮಾವನೇ! ದುಃಖಿತನಾದ ನನಗೆ ಅನುಮತಿಯನ್ನು ಕೊಡು. ಧೃತರಾಷ್ಟ್ರನಿಗೆ ನಾನು ಅಮರ್ಷವಶನಾಗಿದ್ದೇನೆ ಎಂದು ತಿಳಿಸು.

ಶಕುನಿಃ

ದುರ್ಯೋಧನ ನ ತೇಽಮರ್ಷಃ ಕಾರ್ಯಃ ಪ್ರತಿ ಯುಧಿಷ್ಠಿರಮ್ ।
ಭಾಗಧೇಯಾನಿ ಹಿ ಸ್ವಾನಿ ಪಾಂಡವಾಃ ಸಮುಪಾಶ್ನುತೇ ॥೪೧॥

ದುರ್ಯೋಧನನೇ! ನೀನು ಯುಧಿಷ್ಠಿರನ ವಿಷಯದಲ್ಲಿ ಕ್ರೋಧವನ್ನು ಮಾಡಬಾರದು. ಪಾಂಡವರು ತಮ್ಮ ಅದೃಷ್ಟದಿಂದ ಉಂಟಾದ ಫಲವನ್ನು ತಾವು ಅನುಭವಿಸುತ್ತಾರೆ.

ತಥಾಽಪ್ಯುಪಾಯೈರ್ಬಹುಭಿಃ ಸಮಾರಬ್ಧಾಸ್ತ್ವಯಾಽಸಕೃತ್ ।
ವಿಮುಕ್ತಾಶ್ಚ ನರವ್ಯಾಘ್ರಾ ಭಾಗಧೇಯಪುರಸ್ಕೃತಾಃ ॥೪೨॥

ಆದರೂ ನೀನು ಉಪಾಯಗಳನ್ನು ಅನೇಕ ಬಾರಿ ಮಾಡಿದೆ. ಆ ನರವ್ಯಾಘ್ರರು ಅದೃಷ್ಟಬಲದಿಂದ ಅವೆಲ್ಲದರಿಂದಲೂ ಮುಕ್ತರಾದರು.

ತೈರ್ಲಬ್ಧಾ ದ್ರೌಪದೀ ಭಾರ್ಯಾ ದ್ರುಪದಶ್ಚ ಸುತೈಃ ಸಹ ।
ಸಹಾಯಾಃ ಪೃಥಿವೀಪಾಲಾ ವಾಸುದೇವಶ್ಚ ವೀರ್ಯವಾನ್ ॥೪೩॥

ಅವರು ಭಾರ್ಯೆಯಾಗಿ ದ್ರೌಪದಿಯನ್ನು ಮತ್ತು ಸಹಾಯಕರಾಗಿ ಪುತ್ರರಿಂದ ಸಹಿತನಾದ ದ್ರುಪದರಾಜನನ್ನೂ ಮತ್ತು ಎಲ್ಲಾ ರಾಜರನ್ನೂ ಮತ್ತು ಪರಾಕ್ರಮಶಾಲಿಯಾದ ಕೃಷ್ಣನನ್ನೂ ಪಡೆದರು.

ಅಜಿತಃ ಸೋಽಪಿ ಸರ್ವೈರ್ಹಿ ಸದೇವಾಸುರಮಾನುಷೈಃ ।
ತತ್ತೇಜಸಾ ಪ್ರವೃದ್ಧೋಽಸೌ ತತ್ರ ಕಾ ಪರಿದೇವನಾ ॥೪೪॥

ಆ ಕೃಷ್ಣನಾದರೂ ಯಾವ ದೇವತೆಗಳಿಂದಲಾಗಲೀ ಅಸುರರಿಂದಲಾಗಲೀ ಮನುಷ್ಯರಿಂದ ಆಗಲೀ ಅಜೇಯ ನಾದವನು. ಕೃಷ್ಣನ ತೇಜಸ್ಸಿನಿಂದ ಧರ್ಮರಾಜನು ಅಭಿವೃದ್ಧಿಯನ್ನು ಹೊಂದಿದ್ದಾನೆ. ಅದಕ್ಕೆ ನೀನೇಕೆ ಗೋಳಾಡುತ್ತಿದ್ದೀಯೆ?

ಲಬ್ಧಶ್ಚ ತೈರ್ಹಿ ಭೂಯೋಽರ್ಥಃ ಪಿತ್ರ್ಯೋ ಯಂಶಃ ಪೃಥಿವೀಪತೇ ।
ವಿವೃದ್ಧಸ್ತೇಜಸಾ ತೇಷಾಂ ತತ್ರ ಕಾ ಪರಿದೇವನಾ ॥೪೫॥

ಎಲೈ ರಾಜನೇ! ಅವರು ತಮ್ಮ ಪಿತ್ರಾರ್ಜಿತವಾದ ಶ್ರೇಷ್ಠವಾದ ಭಾಗವನ್ನು ಪಡೆದು ತಮ್ಮ ಪರಾಕ್ರಮದಿಂದ ಅದನ್ನು ಅಭಿವೃದ್ಧಿಪಡಿಸಿದರು. ಅದಕ್ಕೆ ನೀನೇಕೆ ಶೋಕಪಡುತ್ತೀಯೆ?

ಧನಂಜಯೇನ ಗಾಂಡೀವಮಕ್ಷಯ್ಯೌ ಚ ಮಹೇಷುಧೀ ।
ಲಬ್ಧಾನ್ಯಸ್ತ್ರಾಣಿ ದಿವ್ಯಾನಿ ತರ್ಪಯಿತ್ವಾ ಹುತಾಶನಮ್ ॥೪೬॥

ಅರ್ಜುನನು ಅಗ್ನಿಯನ್ನು ಸಂತೋಷಪಡಿಸಿ ಗಾಂಡೀವಧನುಸ್ಸನ್ನೂ ಅಕ್ಷಯ ಬತ್ತಳಿಕೆಗಳನ್ನೂ ದಿವ್ಯವಾದ ಅಸ್ತ್ರಗಳನ್ನು ಪಡೆದನು.

ತೇನ ಕಾರ್ಮುಕಮುಖ್ಯೇನ ಬಾಹುವೀರ್ಯೇಣ ಚಾತ್ಮನಃ ।
ಕೃತಾ ವಶೇ ಮಹೀಪಾಲಾಸ್ತತ್ರ ಕಾ ಪರಿದೇವನಾ ॥೪೭॥

ಅರ್ಜುನನು ತನ್ನ ಬಾಹುವೀರ್ಯದಿಂದಲೂ ಆ ಗಾಂಡೀವ ಧನುಸ್ಸಿನ ಪ್ರಭಾವದಿಂದಲೂ ಎಲ್ಲಾ ರಾಜರನ್ನೂ ಜಯಿಸಿ ವಶದಲ್ಲಿ ಇಟ್ಟುಕೊಂಡನು. ಅದಕ್ಕೆ ನಿನ್ನ ಶೋಕವೇಕೆ?

ಅಯಂ ದಾಹಾನ್ಮಯಂ ನಾಮ ಮೋಕ್ಷಯಿತ್ವಾ ಚ ದಾನವಮ್ ।
ಸಭಾಂ ತಾಂ ಕಾರಯಾಮಾಸ ಸವ್ಯಸಾಚೀ ಪರಂತಪಃ ॥೪೮॥

ಪರಂತಪನಾದ ಧನಂಜಯನು ದಾನವನಾದ ಮಯನನ್ನು ಖಾಂಡವ ದಹನದಿಂದ ಮುಕ್ತಗೊಳಿಸಿ ಅವನಿಂದ ಆ ದಿವ್ಯವಾದ ಸಭೆಯನ್ನು ನಿರ್ಮಿಸಿದನು.

ತೇನೈವ ಚ ಮಯೇನೋಕ್ತಾಃ ಕಿಂಕರಾ ನಾಮ ರಾಕ್ಷಸಾಃ ।
ವಹಂತಿ ತಾಂ ಸಭಾಂ ಭೀಮಾಸ್ತತ್ರ ಕಾ ಪರಿದೇವನಾ ॥೪೯॥

ಆ ಮಯನ ಆಜ್ಞೆಯನ್ನು ಧರಿಸಿದ ಕಿಂಕರನಾಮಕರಾದ ಭಯಂಕರರಾದ ರಾಕ್ಷಸರು ಆ ಸಭೆಯನ್ನು ಹೊತ್ತು ಕೊಂಡಿರುತ್ತಾರೆ.(ನಿರ್ವಹಿಸುತ್ತಾರೆ) ಅದಕ್ಕೆ ನೀನೇಕೆ ಗೋಳಾಡುತ್ತಿದ್ದೀಯೆ.

ಯಚ್ಚಾಸಹಾಯತಾಂ ರಾಜನ್ನುಕ್ತವಾನಸಿ ಭಾರತ ।
ತನ್ಮಿಥ್ಯಾ ಭ್ರಾತರೋ ಹೀಮೇ ಸಹಾಯಾಸ್ತೇ ಮಹಾರಥಾಃ ॥೫೦॥

ಎಲೈ ರಾಜನೇ! ನನಗೆ ಯಾರೂ ಸಹಾಯಕರಿಲ್ಲ ಎಂದು ನೀನು ಆಡಿದ ಮಾತು ಸುಳ್ಳಾದುದು. ಮಹಾರಥರಾದ ನಿನ್ನ ತಮ್ಮಂದಿರೆಲ್ಲಾ ನಿನ್ನ ಸಹಾಯಕ್ಕೆ ಇದ್ದಾರೆ.

ದ್ರೋಣಸ್ತವ ಮಹೇಷ್ವಾಸಃ ಸಹ ಪುತ್ರೇಣ ವೀರ್ಯವಾನ್ ।
ಸೂತಪುತ್ರಸ್ತು ರಾಧೇಯೋ ದೃಢಂ ಮಿತ್ರಂ ಮಹಾರಥಃ ॥೫೧॥

ಮಹಾಧರ್ನುವಿದ್ಯೆಯನ್ನು ಬಲ್ಲ ಪರಾಕ್ರಮಶಾಲಿಯಾದ ದ್ರೋಣರು ತಮ್ಮ ಪುತ್ರರಾದ ಅಶ್ವತ್ಥಾಮರ ಜೊತೆಯಲ್ಲಿ ನಿನ್ನ ಸಹಾಯಕ್ಕೆ ಇದ್ದಾರೆ. ಮಹಾರಥನಾದ ಸೂತಪುತ್ರನಾದ ಕರ್ಣನು ನಿನಗೆ ಪ್ರಬಲನಾದ ಮಿತ್ರನಾಗಿದ್ದಾನೆ.

ಸ ಏಕಃ ಸಮರೇ ಸರ್ವಾನ್ ಪಾಂಡವಾನ್ ಸಹಸೋಮಕಾನ್ ।
ವಿಜೇಷ್ಯತಿ ಮಹಾಬಾಹೋ ಕಿಂ ಸಹಾಯೈಃ ಕರಿಷ್ಯಸಿ ॥೫೨॥

ಮಹಾಬಾಹುವೇ! ಅವನೊಬ್ಬನೇ ಎಲ್ಲಾ ಪಾಂಡವರನ್ನೂ ಸೋಮಕರನ್ನೂ ಗೆಲ್ಲುವನು. ನಿನಗೆ ಬೇರೆ ಸಹಾಯಕರಿಂದ ಏನಾಗಬೇಕಾಗಿದೆ?

ಭೀಷ್ಮಶ್ಚ ಪುರುಷವ್ಯಾಘ್ರೋ ಗೌತಮಶ್ಚ ಮಹಾರಥಃ ।
ಜಯದ್ರಥಶ್ಚ ಬಲವಾನ್ ಕೃತಾಸ್ತ್ರೋ ದೃಢವಿಕ್ರಮಃ ॥೫೩॥

ಅಹಂ ಚ ಸಹ ಸೋದರ್ಯೈಃ ಸೌಮದತ್ತಿಶ್ಚ ಕೌರವ ।
ಏತೈಸ್ತ್ವಂ ಸಹಿತಃ ಸರ್ವೈರ್ಜಯ ಸರ್ವಾಂ ವಸುಂಧರಾಮ್ ॥೫೪॥

ಪುರುಷಶ್ರೇಷ್ಠರಾದ ಭೀಷ್ಮರು, ಮಹಾರಥರಾದ ಕೃಪರು, ಬಲಿಷ್ಠನೂ ಅಸ್ತ್ರಪರಿಣತನೂ ಪರಾಕ್ರಮಶಾಲಿಯೂ ಆದ ಜಯದ್ರಥ, ನಾನು ಮತ್ತು ನನ್ನ ಸಹೋದರರು, ಸೋಮದತ್ತನ ಮಗನಾದ ಭೂರಿಶ್ರವ, ಇವರೆಲ್ಲರಿಂದಲೂ ಸಹಿತನಾಗಿ ನೀನು ಸಮಸ್ತವಾದ ಪೃಥಿವಿಯನ್ನು ಗೆಲ್ಲು.

ತ್ವಯಾ ಚ ಸಹಿತೋ ರಾಜನ್ನೇತೈಶ್ಚಾನ್ಯೈರ್ಮಹಾರಥೈಃ ।
ಏಕಾಹ್ನಾಽಹಂ ವಿಜೇಷ್ಯಾಮಿ ಯದಿ ತ್ವಮನುಮನ್ಯಸೇ ॥೫೫॥

ರಾಜನೇ! ನೀನು ಅನುಮತಿಯನ್ನು ಕೊಟ್ಟರೆ ನಿನ್ನಿಂದ ಮತ್ತು ಈ ಮಹಾರಥರಿಂದ ಸಹಿತನಾದ ನಾನು ಒಂದು ದಿನದಲ್ಲಿ ಸಮಗ್ರವಾದ ಭೂಮಿಯನ್ನು ಗೆಲ್ಲುವೆನು.

ಏತೇಷು ವಿಜಿತೇಷ್ವದ್ಯ ಭವಿಷ್ಯತಿ ಮಹೀ ತವ ।
ಸರ್ವೇ ಚ ಪೃಥಿವೀಪಾಲಾಃ ಸಭಾ ಸಾ ಚ ಮಹಾಧನಾ ॥೫೬॥

ಈ ಪಾಂಡವರನ್ನು ಗೆದ್ದರೆ ಭೂಮಿಯು ನಿನ್ನದಾಗುವುದು. ಎಲ್ಲಾ ರಾಜರೂ ಅನರ್ಘ್ಯವಾದ ಆ ಸಭೆಯೂ ಸಹ ನಿನ್ನದಾಗುವುದು.

ಧನಂಜಯೋ ವಾಸುದೇವೋ ಭೀಮಸೇನೋ ಯುಧಿಷ್ಠಿರಃ ।
ನಕುಲಃ ಸಹದೇವಶ್ಚ ದ್ರುಪದಶ್ಚ ಸಹಾತ್ಮಜೈಃ ॥೫೭॥

ನೈತೇ ಯುಧಿ ಬಲಾಜ್ಜೇತುಂ ಶಕ್ಯಾಃ ಸುರಗಣೈರಪಿ ।
ಮಹಾರಥಾ ಮಹೇಷ್ವಾಸಾಃ ಕೃತಾಸ್ತ್ರಾ ಯುಧಿ ದುರ್ಮದಾಃ ॥೫೮॥

ಅರ್ಜುನ ವಾಸುದೇವ ಭೀಮಸೇನ ಯುಧಿಷ್ಠಿರ ನಕುಲ ಸಹದೇವ ದ್ರುಪದ ದ್ರುಪದನ ಮಕ್ಕಳು ಇವರನ್ನು ದೇವತೆಗಳೂ ಸಹ ಯುದ್ಧದಲ್ಲಿ ತಮ್ಮ ಬಲದಿಂದ ಗೆಲ್ಲಲು ಸಾಧ್ಯವಿಲ್ಲ. ಇವರೆಲ್ಲರೂ ಮಹಾರಥರು ಮತ್ತು ಮಹಾಧನುಸ್ಸನ್ನು ಹೊಂದಿದವರು. ಅಸ್ತ್ರಜ್ಞಾನವುಳ್ಳವರು ಮತ್ತು ಯುದ್ಧದುರ್ಮದರಾದವರು.

ಅಹಂ ತು ತದ್ ವಿಜಾನಾಮಿ ವಿಜೇತುಂ ಯೇನ ಶಕ್ಯತೇ ।
ಯುಧಿಷ್ಠಿರಂ ತು ರಾಜೇಂದ್ರಂ ತನ್ನಿಬೋಧ ಜನೇಶ್ವರ ॥೫೯॥

ರಾಜೇಂದ್ರನೇ! ಯುಧಿಷ್ಠಿರನನ್ನು ಯಾವ ಉಪಾಯದಿಂದ ಗೆಲ್ಲಬಹುದೆಂದು ನಾನು ತಿಳಿದಿದ್ದೇನೆ. ನೀನು ಅದನ್ನು ಕೇಳು.

ದುರ್ಯೋಧನಃ

ಅಪ್ರಹಾರೇಣ ಶತ್ರೂಣಾಮ್ ಅನ್ಯೇಷಾಂ ಚ ಮಹೀಕ್ಷಿತಾಮ್ ।
ಯಥಾ ಶಕ್ನುಸಿ ತಂ ಜೇತುಂ ತನ್ಮಮಾಚಕ್ಷ್ವ ಮಾತುಲ ॥೬೦॥

ಸೋದರಮಾವನೇ! ಶತ್ರುಗಳ ಮೇಲೆ ಪ್ರಹಾರವನ್ನು ಮಾಡದೆ ಅಥವಾ ಉಳಿದ ರಾಜರ ಮೇಲೆ ಪ್ರಹಾರವನ್ನು ಮಾಡದೆ ಹೇಗೆ ಧರ್ಮರಾಜನನ್ನು ಗೆಲ್ಲುವಿ ಎಂದು ನನಗೆ ಹೇಳು.

ಶಕುನಿಃ

ದ್ಯೂತಪ್ರಿಯಶ್ಚ ಕೌಂತೇಯೋ ನ ಚ ಜಾನಾತಿ ದೇವಿತುಮ್ ।
ಸಮಾಹೂತಶ್ಚ ಕೌಂತೇಯೋ ನ ಶಕ್ನತಿ ನಿವರ್ತಿತುಮ್ ॥೬೧॥

ಕೌಂತೇಯನಾದ ಧರ್ಮರಾಜನು ದ್ಯೂತ ಪ್ರಿಯ. ಆದರೆ ಅವನಿಗೆ ಪಗಡೆಯಾಡಲು ಬರುವುದಿಲ್ಲ. ನಾವು ಆವನನ್ನು ಆಹ್ವಾನಮಾಡಿದರೆ ಅವನು ಅದನ್ನು ನಿರಾಕರಿಸಲು ಸಾಧ್ಯವಿಲ್ಲ.

ದೇವನೇ ಕುಶಲಶ್ಚಾಹಂ ನ ಮೇऽಸ್ತಿ ಸದೃಶೋ ಭುವಿ ।
ತ್ರಿಷು ಲೋಕೇಷು ಕೌಂತೇಯಂ ತಂ ತ್ವಂ ದ್ಯೂತೇ ಸಮಾಹ್ವಯ ॥೬೨॥

ನಾನು ಪಗಡೆಯಾಡುವುದರಲ್ಲಿ ಕುಶಲನಾದವನು. ಭೂಮಿಯಲ್ಲಿಯೇ ಆಗಲೀ ಅಥವಾ ಮೂರು ಲೋಕಗಳಲ್ಲಾಗಲೀ ನನಗೆ ಸಮಾನರಾದವರು ಯಾರೂ ಇಲ್ಲ. ನೀನು ಆ ಧರ್ಮರಾಜನನ್ನು ದ್ಯೂತಕ್ಕಾಗಿ ಆಹ್ವಾನಿಸು.

ಅನಕ್ಷಕುಶಲಾದ್ರಾಜ್ಯಮಾದಾಸ್ಯಾಮಿ ನ ಸಂಶಯಃ ।
ರಾಜ್ಯಂ ಶ್ರಿಯಂ ಸಭಾಂ ದೀಪ್ತಾಂ ತ್ವದರ್ಥಂ ಪುರುಷರ್ಷಭ ॥೬೩॥

ಪುರುಷ ಶ್ರೇಷ್ಠನೇ! ಅಕ್ಷ ಕುಶಲನಲ್ಲದ ಅವನಿಂದ ನಾನು ರಾಜ್ಯವನ್ನೂ ಸಂಪತ್ತನ್ನೂ ಬೆಳಗುತ್ತಿರುವ ಆ ಸಭೆಯನ್ನೂ ನಿನ್ನ ಸಲುವಾಗಿ ಅಪಹರಿಸುವೆನು. ಇದರಲ್ಲಿ ಸಂಶಯವಿಲ್ಲ.

ಇದಂ ಹಿ ಸರ್ವಂ ರಾಜ್ಞೇ ತ್ವಂ ದುರ್ಯೋಧನ ನಿವೇದಯ ।
ಅನುಜ್ಞಾತಶ್ಚ ತೇ ಪಿತ್ರಾ ವಿಜೇಷ್ಯಾಮಿ ನ ಸಂಶಯಃ ॥೬೪॥

ದುರ್ಯೋಧನನೇ ಇವೆಲ್ಲವನ್ನೂ ನೀನು ರಾಜನಾದ ಧೃತರಾಷ್ಟ್ರನಿಗೆ ತಿಳಿಸು. ನಿನ್ನ ತಂದೆಯಿಂದ ಅನುಮತಿಯ ದೊರಕಿದರೆ ನಾನು ನಿಸ್ಸಂಶಯವಾಗಿ ಗೆಲ್ಲುವೆನು.

ದುರ್ಯೋಧನಃ

ತ್ವಮೇವ ಧೃತರಾಷ್ಟ್ರಾಯ ಕುರುಮುಖ್ಯಾಯ ಮಾತುಲ ।
ನಿವೇದಯ ಯಥಾಕಾಮಂ ನಾಹಂ ಶಕ್ನ್ಯಾಮಿ ಶಂಸಿತುಮ್ ॥೬೫॥

ಸೋದರಮಾವನೇ! ಕುರುಪ್ರಧಾನನಾದ ಧೃತರಾಷ್ಟ್ರನಿಗೆ ನಿನ್ನ ಮನಸ್ಸಿಗೆ ತೋರಿದಂತೆ ನೀನೇ ಹೇಳು. ನಾನು ಅವನಿಗೆ ಹೇಳಲಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಸಪ್ತತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ದ್ವಿತೀಯೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಪ್ಪತ್ತನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ಧೃತರಾಷ್ಟ್ರಮಥೋವಾಚ ದ್ವಾಪರಾಂಶೋಽತಿಪಾಪಕೃತ್ ।
ನಾಸ್ತಿಕ್ಯರೂಪಃ ಶಕುನಿರ್ವಿವರ್ಣಂ ಹರಿಣಂ ಕೃಶಂ ॥೨೯೬॥

ದುರ್ಯೋಧನಂ ತು ತಚ್ಛ್ರುತ್ವಾ ಕುತ ಇತ್ಯಾಹ ದುರ್ಮನಾಃ ।
ಅಬ್ರೂತಾಂ ತೌ ನೃಪಾಯಾಶು ದ್ವಾಭ್ಯಾಂ ಯನ್ಮಂತ್ರಿತಂ ಪಥಿ ॥೨೯೭॥

'ದುರ್ಯೋಧನ ಸೊರಗಿದ್ದಾನೆ. ಮೊದಲಿನ ವೈಕಾಂತಿ ಇಲ್ಲದೆ ಬಿಳಚಿಕೊಂಡಿದ್ದಾನೆ' ಎಂದು ಮುಂತಾಗಿ ಧೃತರಾಷ್ಟ್ರನ ಮುಂದೆ ಬಣ್ಣಿಸಿದ. ದ್ವಾಪರ ಎಂಬ ಅಸುರನ ಅಂಶ, ನಾಸ್ತಿಕ್ಯ ಬುದ್ಧಿಗೆ ಅಭಿಮಾನಿ, ಮಹಾಪಾಪಕಾರಿಯಾದ ಶಕುನಿ. ಇದನ್ನು ಕೇಳಿ ಧೃತರಾಷ್ಟ್ರ ದುಃಖಿತನಾಗಿ 'ಏಕೆ?' ಎಂದ. ಆಗ ದುರ್ಯೋಧನ ಶಕುನಿ ಇಬ್ಬರು ತಾವು ದಾರಿಯಲ್ಲಿ ಬರುವಾಗ ಮಾತನಾಡಿಕೊಂಡಿದ್ದನ್ನು ಬೇಗನೆ ಹೇಳಿದರು.

ಶ್ರುತ್ವೈವ ತನ್ನೇತ್ಯವದತ್ ಸ ಭೂಪತಿ-
ರ್ವಿರೋಧಿ ಧರ್ಮಸ್ಯ ವಿನಾಶಕಾರಣಂ ।
ಕುಮಂತ್ರಿತಂ ವೋ ನ ಮಮೈತದಿಷ್ಟಂ
ಸ್ವಬಾಹುವೀರ್ಯಾಪ್ತ ಮಹಾಶ್ರಿಯೋ ಹಿ ತೇ ॥೨೯೮॥

ಅದನ್ನು ಕೇಳಿದೊಡನೆ ಧೃತರಾಷ್ಟ್ರ 'ಪಗಡೆಯಾಟ ಬೇಡ' ಎಂದ. 'ಅದು ಧರ್ಮ ವಿರೋಧಿ. ನಮ್ಮ ವಿನಾಶಕ್ಕೆ ಕಾರಣ. ಅದರಿಂದ ನಿಮ್ಮ ಈ ಕೆಟ್ಟ ಆಲೋಚನೆ ನನಗೆ ಇಷ್ಟವಾಗುವುದಿಲ್ಲ. ಪಾಂಡವರು ತಮ್ಮ ಬಾಹುಬಲದಿಂದ ಆ ಮಹಾಸಂಪತ್ತನ್ನು ಗಳಿಸಿದ್ದಾರೆ.

ತ್ವಯಾಽಪಿ ನಿರ್ಜಿತ್ಯ ದಿಶೋ ಮಖಾಗ್ರ್ಯಃ
ಕಾರ್ಯಾಃ ಸ್ಪೃಧೋ ಮಾ ಗುಣವತ್ತಮೈಸ್ತೈಃ ।
ವಿಶೇಷತೋ ಭ್ರಾತೃಭಿರಗ್ರ್ಯಪೌರುಷೈ-
ರಿತ್ಯುಕ್ತ ಆಹಾಶು ಸುಯೋಧನಸ್ತಂ ॥೨೯೯॥

'ನೀನೂ ದಿಗ್ವಿಜಯಮಾಡಿ ಒಳ್ಳೆಯ ಯಜ್ಞಗಳನ್ನು ಮಾಡಬೇಕು ಹೊರತು ಒಳ್ಳೆಯ ಗುಣವಂತರೊಡನೆ, ಅದರಲ್ಲಿಯೂ ವಿಶೇಷವಾಗಿ ಉತ್ತಮ ಪೌರುಷಶಾಲಿಗಳಾದ

ಸೋದರರೊಡನೆ ಮತ್ಸರಿಸಬಾರದು' ಹೀಗೆ ಧೃತರಾಷ್ಟ್ರ ಹೇಳಿದಾಗ ದುರ್ಯೋಧನ ನುಡಿದ.

ಯದಿ ಶ್ರಿಯಂ ಪಾಂಡವಾನಾಂ ನಾಕ್ಷೈರಾಚ್ಛೇತ್ತುಮಿಚ್ಛಸಿ ।
ಮೃತಮೇವಾದ್ಯ ಮಾಂ ವಿದ್ಧಿ ಪಾಂಡವೈಸ್ತ್ವಂ ಸುಖೀ ಭವ ॥೩೦೦॥

ಪಾಂಡವರ ಸಂಪತ್ತನ್ನು ಜೂಜಾಟದಿಂದ ಅಪಹರಿಸಲು ನೀನು ಒಪ್ಪಿಗೆ ಕೊಡದಿದ್ದರೆ ನಾನಿಂದು ಸತ್ತೆನೆಂದೇ ತಿಳಿ. ನೀನು ಪಾಂಡವರೊಂದಿಗೇ ಸುಖದಿಂದಿರು.

ಯದಿ ಮಜ್ಜೀವಿತಾರ್ಥೀ ತ್ವಮಾನಯಾಶ್ವಿಹ ಪಾಂಡವಾನ್ ।
ಸಭಾರ್ಯಾನ್ ದೇವನಾಯೈವ ನ ಚಾಧರ್ಮೋಽತ್ರ ಕಶ್ಚನ ॥೩೦೧॥

ನಾನು ಬದುಕಿರಬೇಕೆಂದು ನೀನು ಬಯಸುವಿಯಾದರೆ ಪಾಂಡವರನ್ನು ಪತ್ನೀ ಸಮೇತ ಜೂಜಾಟಕ್ಕೆ ಇಲ್ಲಿಗೆ ಕರೆಸಿಕೊಳ್ಳು. ಇದರಲ್ಲಿ ಯಾವ ಅಧರ್ಮವೂ ಇಲ್ಲ.

ವೇದಾನುಜೀವಿನೋ ವಿಪ್ರಾಃ ಕ್ಷತ್ರಿಯಾಃ ಶಸ್ತ್ರಜೀವಿನಃ ।
ತ್ರುಟ್ಯತೇ ಯೇನ ಶತ್ರುಶ್ಚ ತಚ್ಛಸ್ತ್ರಂ ನೈವ ಚೇತರತ್ ॥೩೦೨॥

ಬ್ರಾಹ್ಮಣರು ವೇದಗಳಿಂದ ಜೀವಿಸುವಂತೆ ಕ್ಷತ್ರಿಯರು ಶಸ್ತ್ರಗಳಿಂದ ಜೀವಿಸುವವರು. ಯಾವುದರಿಂದ ಶತ್ರುನಾಶ ಹೊಂದುವನೋ ಅದು ಶಸ್ತ್ರಹೊರತು ಇನ್ನೇನೂ ಅಲ್ಲ.

ಅತಃ ಸ್ವಧರ್ಮ ಏವಾಯಂ ತವಾಪಿ ಸ್ಯಾತ್ ಫಲಂ ಮಹತ್ ।
ಇತ್ಯುಕ್ತೋ ಮಾ ಫಲಂ ಮೇಽಸ್ತು ತವೈವಾಸ್ತ್ವಿತಿ ಸೋಽಬ್ರವೀತ್ ॥

ಅದರಿಂದ ನಮಗೆ ಇದು ಸ್ವಧರ್ಮವೆ. ನಿನಗೂ ಇದರಿಂದ ಮಹತ್ತಾದ ಫಲ ದೊರಕುವುದು'. ಹೀಗೆ ದುರ್ಯೋಧನ ಹೇಳಿದಾಗ 'ಫಲ ನಿನಗೇ ಇರಲಿ ನನಗೆ ಬೇಡ' ಎಂದ ಧೃತರಾಷ್ಟ್ರ.

ಏವಂ ಬ್ರುವನ್ನಪಿ ನೃಪ ಆವಿಷ್ಟಃ ಕಲಿನಾ ಸ್ವಯಂ ।
ಪುತ್ರಸ್ನೇಹಾಚ್ಚ ವಿದುರಮಾದಿಶತ್ ಪಾಂಡವಾನ್ ಪ್ರತಿ ॥೩೦೪॥

ಧೃತರಾಷ್ಟ್ರ ಹೀಗೆ ಹೇಳುತ್ತಿದ್ದರೂ ಸ್ವಯಂ ಕಲಿಯಿಂದ ಆವಿಷ್ಟನಾಗಿದ್ದುದರಿಂದ ಪುತ್ರಮೋಹದಿಂದ ವಿದುರನನ್ನು ಪಾಂಡವರ ಬಳಿಗೆ ಹೋಗಲು ಆಜ್ಞಾಪಿಸಿದ.

ಆವಿವೇಶ ಕಲಿಸ್ತಂ ಹಿ ಯದಾ ಪುತ್ರತ್ವಸಿದ್ಧಯೇ ।
ಅಂಶೇನ ತತ ಆರಭ್ಯ ನೈವಾಸ್ಮಾದಪಜಗ್ಮಿವಾನ್ ॥೩೦೫॥

ಕಲಿ ಧೃತರಾಷ್ಟ್ರನ ಮಗನಾಗಿ ಜನಿಸುವುದಕ್ಕಾಗಿ ಎಂದು ಅವನನ್ನು ಪ್ರವೇಶಿಸಿದನೋ ಅಂದಿನಿಂದ ಆರಂಭಿಸಿ ಒಂದಂಶದಿಂದ ಸದಾ ಅವನಲ್ಲಿ ಇದ್ದ. ಅವನಿಂದ ದೂರ ಹೋಗಲಿಲ್ಲ.

ಯಾವತ್‌ಪುರಂ ಪರಿತ್ಯಜ್ಯ ವನಮೇವ ವಿವೇಶ ಹ ।
ತದಂತರಾ ತತಸ್ತಸ್ಯ ಪಾಪಯುಕ್ತಂ ಮನೋಽಭವತ್ ॥೩೦೬॥

ಅದರಿಂದಲೆ ಮುಂದೆ ಹಸ್ತಿನಾವತಿಯನ್ನು ತೊರೆದು ಕಾಡಿಗೆ ಹೋಗುವವರೆಗೂ ಧೃತರಾಷ್ಟ್ರನ ಮನಸ್ಸು ಪಾಪಯುಕ್ತವೆ ಆಗಿತ್ತು.

★ ★ ★ ★

ಎಪ್ಪತ್ತೊಂದನೆಯ ಅಧ್ಯಾಯ

(ಧೃತರಾಷ್ಟ್ರನ ಸಮೀಪದಲ್ಲಿ ದುರ್ಯೋಧನನಿಂದ ತನ್ನ ಅಸಮಾಧಾನದ ವರ್ಣನೆ.)

ವೈಶಂಪಾಯನಃ

ಅನುಭೂಯ ಸ ತಂ ರಾಜ್ಞೋ ರಾಜಸೂಯಂ ಸುದುರ್ಮತಿಃ ।
ಯುಧಿಷ್ಠಿರಸ್ಯ ಶಕುನಿರ್ದುರ್ಯೋಧನಸುಸಂಹಿತಃ ॥೧॥

ವಿವೇಶ ಹಸ್ತಿನಪುರಂ ದುರ್ಯೋಧನಮತೇನ ಸಃ ।
ಬಾಢಮಿತ್ಯೇವ ಶಕುನಿರ್ದೃಢಂ ಹೃದಿ ಚಕಾರ ಹ ॥೨॥

ಅತ್ಯಂತ ದುಷ್ಟಬುದ್ಧಿಯುಳ್ಳ ಶಕುನಿಯು ಧರ್ಮರಾಜನ ಆ ರಾಜಸೂಯಯಾಗವನ್ನು ಅನುಭವಿಸಿ ದುರ್ಯೋಧನನ ಜೊತೆಯಲ್ಲಿ

ಒಂದುಗೂಡಿದವನಾಗಿ ದುರ್ಯೋಧನನ ಅಭಿಪ್ರಾಯದಂತೆ ಹಿಂದೆ ಸೂಚಿಸಿದಂತೆಯೇ ಮಾಡಬೇಕೆಂದು ಮನಸ್ಸಿನಲ್ಲಿ ದೃಢವಾಗಿ ನಿಶ್ಚಯಿಸಿ ಹಸ್ತಿನಪುರವನ್ನು ಪ್ರವೇಶಿಸಿದನು.

ಅಸ್ವಸ್ಥತಾಂ ಚ ತಾಂ ದೃಷ್ಟ್ವಾ ಧಾರ್ತರಾಷ್ಟ್ರಸ್ಯ ಪಾಪಕೃತ್ ।
ಪಾಪಃ ಪಾಪಾತ್ಮನಾ ತೇನ ಸಮೇತ್ಯ ಪೃಥಿವೀಕ್ಷಿತಾ ॥೩॥

ಭಾರತಾನಾಂ ಚ ದುಷ್ಟಾತ್ಮಾ ಕ್ಷಯಾಯ ಹಿ ನೃಪಕ್ಷಯಮ್ ।
ಪ್ರಿಯಕೃನ್ಮತಮಾಜ್ಞಾಯ ಪೂರ್ವಂ ದುರ್ಯೋಧನಸ್ಯ ತತ್ ॥೪॥

ವೈಶಸಂ ಸರ್ವಲೋಕಸ್ಯ ಹೃದಿ ಕೃತ್ವಾ ಸುದುರ್ಮತಿಃ ।
ದೈವೇನ ವಿಧಿನಾ ಚೈವ ಚೋದಿತಃ ಕ್ರೂರಕರ್ಮಕೃತ್ ॥೫॥

ಗಾಂಧಾರರಾಜಃ ಶಕುನಿರ್ಧೃತರಾಷ್ಟ್ರಂ ಜನೇಶ್ವರಮ್ ।
ಉಪಗಮ್ಯ ಮಹಾತ್ಮಾನಂ ಶಕುನಿರ್ವಾಕ್ಯಮಬ್ರವೀತ್ ॥೬॥

ಪಾಪಕಾರಿಯಾದ ಅವನು ದುರ್ಯೋಧನನ ಅಸಮಾಧಾನವನ್ನು ಗಮನಿಸಿ ಪಾಪಬುದ್ಧಿಯುಳ್ಳ ಅವನ ಜೊತೆಯಲ್ಲಿ ಒಂದಾಗಿ ಭರತವರ್ಷದ ನಾಶಕ್ಕೋಸ್ಕರ ರಾಜರನ್ನು ಸಂಹರಿಸುವುದು ದುರ್ಯೋಧನನಿಗೆ ಪ್ರಿಯವೆಂದು ತಿಳಿದು ದುಷ್ಟಾತ್ಮನೂ ಸುದುರ್ಮತಿಯೂ ಆದ ಅವನು ಸರ್ವಲೋಕದ ಪೀಡೆಯನ್ನು ಮನಸ್ಸಿನಲ್ಲಿ ಸಂಕಲ್ಪಿಸಿ ಜೊತೆಗೆ ವಿಧಿಯಿಂದಲೂ ಪ್ರೇರಿಸಲ್ಪಟ್ಟು ಕ್ರೂರಕರ್ಮಕಾರಕನಾದ ಗಾಂಧಾರರಾಜನಾದ ಶಕುನಿಯು ಮಹಾತ್ಮನಾದ ಧೃತರಾಷ್ಟ್ರರಾಜನನ್ನು ಸಮೀಪಿಸಿ ಹೀಗೆ ಮಾತನಾಡಿದನು.

ದುರ್ಯೋಧನೋ ಮಹಾರಾಜ ವಿವರ್ಣೋ ಹರಿಣಃ ಕೃಶಃ ।
ದೀನಶ್ಚಿಂತಾಪರಶ್ಚೈವ ತಂ ವಿದ್ಧಿ ಭರತರ್ಷಭ ॥೭॥

ಮಹಾರಾಜನೇ! ದುರ್ಯೋಧನನು ವರ್ಣಹೀನನಾಗಿ ಹರಿಣನೂ ಕೃಶನೂ ಆಗಿದ್ದಾನೆ. ಭರತಶ್ರೇಷ್ಠನೇ! ಅವನು ದೈನ್ಯದಿಂದ ಕೂಡಿ ಚಿಂತಾಕ್ರಾಂತನಾಗಿದ್ದಾನೆ ಎಂದು ತಿಳಿ.

ನ ವೈ ಪರೀಕ್ಷಸೇ ಸಮ್ಯಗಸ್ಯ ತ್ವಂ ರಾಜಸತ್ತಮ ।
ಜ್ಯೇಷ್ಠಪುತ್ರಸ್ಯ ತೇ ಶೋಕಂ ಕಿಮರ್ಥಂ ನಾವಬುಧ್ಯಸೇ ॥೮॥

ರಾಜಶ್ರೇಷ್ಠನೇ! ನೀನು ಅವನನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ನಿನ್ನ ಜೇಷ್ಠಪುತ್ರನ ಶೋಕವನ್ನು ನೀನು ಏಕೆ ಗಮನಿಸುತ್ತಿಲ್ಲ?

ವೈಶಂಪಾಯನಃ

ಏವಮುಕ್ತಃ ಶಕುನಿನಾ ಧೃತರಾಷ್ಟ್ರೋ ಜನೇಶ್ವರಃ ।
ದುರ್ಯೋಧನಂ ಸಮಾಹೂಯ ಇದಂ ವಚನಮಬ್ರವೀತ್ ॥೯॥

ಹೀಗೆ ಶಕುನಿಯಿಂದ ಹೇಳಲ್ಪಟ್ಟ ಧೃತರಾಷ್ಟ್ರನು ದುರ್ಯೋಧನನನ್ನು ಕರೆದು ಹೀಗೆ ಮಾತನಾಡಿದನು.

ದುರ್ಯೋಧನ ಕುತೋಮೂಲಂ ಭೃಶಮಾರ್ತೋಽಸಿ ಪುತ್ರಕ ।
ಶ್ರೋತವ್ಯಶ್ಚೇನ್ಮಯಾ ಸೋಽರ್ಥೋ ಬ್ರೂಹಿ ಮೇ ಕುರುನಂದನ ॥೧೦॥

ಪ್ರಿಯಪುತ್ರನಾದ ದುರ್ಯೋಧನನೇ! ನಿನ್ನ ಮಹಾದುಃಖಕ್ಕೆ ಏನು ಕಾರಣ? ಕುರುನಂದನನೇ! ನಾನು ಕೇಳಬಹುದಾದರೆ ಆ ವಿಷಯವನ್ನು ನನಗೆ ಹೇಳು.

ಅಯಂ ತ್ವಾಂ ಶಕುನಿಃ ಪ್ರಾಹ ವಿವರ್ಣಂ ಹರಿಣಂ ಕೃಶಮ್ ।
ಚಿಂತಯಂಶ್ಚ ನ ಪಶ್ಯಾಮಿ ಶೋಕಸ್ಯ ತವ ಸಂಭವಮ್ ॥೧೧॥

ಈ ಶಕುನಿಯು ನನಗೆ ನೀನು ವಿವರ್ಣನೂ ಹರಿಣನೂ ಕೃಶನೂ ಆಗಿದ್ದೀಯೆ ಎಂದು ಹೇಳುತ್ತಾನೆ. ಎಷ್ಟು ಯೋಚನೆ ಮಾಡಿದರೂ ನನಗೆ ನಿನ್ನ ಶೋಕಕ್ಕೆ ಕಾರಣವು ತಿಳಿಯುತ್ತಿಲ್ಲ.

ಐಶ್ವರ್ಯಂ ಹಿ ಮಯಾ ಪುತ್ರ ತ್ವಯಿ ಸರ್ವಂ ಸಮಾಹಿತಮ್ ।
ಭ್ರಾತರಃ ಸುಹೃದಶ್ಚೈವ ನಾಚರಂತಿ ತವಾಪ್ರಿಯಮ್ ॥೧೨॥

ಪುತ್ರನೇ! ನನ್ನ ಸಮಗ್ರ ಐಶ್ವರ್ಯವನ್ನು ನಿನ್ನಲ್ಲಿಯೇ ಸ್ಥಾಪಿಸಿದ್ದೇನೆ. ನಿನ್ನ ತಮ್ಮಂದಿರಾಗಲೀ ಅಥವಾ ಬಾಂಧವರಾಗಲೀ ಯಾರೂ ನಿನಗೆ ಅಪ್ರಿಯವನ್ನು ಮಾಡುತ್ತಿಲ್ಲ.

ತ್ವದ್ದತ್ತಂ ಚೈವ ಭುಂಜಾವೋ ಗಾಂಧಾರೀ ಚಾಹಮೇವ ಚ ।
ಆಚ್ಛಾದಯಸಿ ಚಾವಾರಾನಶ್ನಾಸಿ ಪಿಶಿತೌದನಮ್ ।
ಆಜಾನೇಯಾ ವಹಂತಿ ತ್ವಾಂ ಕಸ್ಮಾಚ್ಛೋಚಸಿ ಪುತ್ರಕ ॥೧೩॥

ನೀನು ಕೊಟ್ಟ ಅನ್ನವನ್ನೇ ಗಾಂಧಾರಿಯು ಮತ್ತು ನಾನು ಭುಂಜಿಸುತ್ತೇವೆ. ಶ್ರೇಷ್ಠವಾದ ಬಟ್ಟೆಗಳನ್ನು ಹಾಕಿಕೊಳ್ಳುತ್ತೀಯೆ ನಿತ್ಯವೂ ಮಾಂಸಾನ್ನವನ್ನು ಭುಂಜಿಸುತ್ತೀಯೆ ಒಳ್ಳೆಯ ಜಾತಿಯ ಕುದುರೆಗಳು ನಿನ್ನನ್ನು ಕೊಂಡೊಯ್ಯುತ್ತವೆ. ಮಗನೇ ಏಕೆ ಶೋಕಪಡುತ್ತೀಯೆ?

ಶಯನಾನಿ ಮಹಾರ್ಹಾಣಿ ಯೋಷಿತಶ್ಚ ಮನೋಹರಾಃ ।
ಗುಣವಂತಿ ಚ ವೇಶ್ಮಾನಿ ವಿಹಾರಾಶ್ಚ ಯಥಾಸುಖಮ್ ॥೧೪॥

ದೇವಾನಾಮಿವ ತೇ ಸರ್ವಂ ವಾಚಿ ಬದ್ಧಮಸಂಶಯಮ್ ।
ಸ ದೀನ ಇವ ದುರ್ಧರ್ಷ ಕಸ್ಮಾಚ್ಛೋಚಸಿ ಪುತ್ರಕ ॥೧೫॥

ಬಹಳ ಬೆಲೆಬಾಳುವ ಶಯನಗಳನ್ನು ಹೊಂದಿದ್ದೀಯೆ. ನಿನ್ನ ಪತ್ನಿಯರು ಸುಂದರಿಯರಿದ್ದಾರೆ. ನಿನ್ನ ಗೃಹಗಳು ಮತ್ತು ವಿಹಾರಸ್ಥಾನಗಳು ಒಳ್ಳೆಯಗುಣಗಳಿಂದ ಸುಖಪ್ರದವಾಗಿದೆ. ದೇವತೆಗಳಂತೆ ಎಲ್ಲವೂ ನಿನಗೆ ಇದೆ. ಎಲ್ಲವೂ ನಿನಗೆ ಅಧೀನವಾಗಿದೆ. ಪುತ್ರನೇ ದುರ್ಧರ್ಷನಾದ ನೀನು ದೀನನಂತೆ ಏಕೆ ಶೋಕಪಡುತ್ತಿರುವೆ?

ಮಾತ್ರಾ ಪಿತ್ರಾ ಚ ಪುತ್ರಸ್ಯ ಯದ್ಧಿ ಕಾರ್ಯಂ ಪರಂ ಸ್ಮೃತಮ್ ।
ಪ್ರಾಪ್ತಸ್ತ್ವಮಸಿ ತತ್ ತಾತ ನಿಖಿಲಾಂ ನಃ ಕುಲಶ್ರಿಯಮ್ ॥೧೬॥

ಪ್ರೀತಿಪಾತ್ರನೇ! ತಂದೆ ಮತ್ತು ತಾಯಿಯರು ಮಗನಿಗೆ ಏನು ಮಾಡಬೇಕೆಂದು ಹೇಳುತ್ತಾರೋ ಅವೆಲ್ಲವನ್ನೂ ನೀನು ಪಡೆದಿದ್ದೀಯೆ. ನಮ್ಮ ಕುಲದ ಸಮಗ್ರವಾದ ಸಂಪತ್ತನ್ನು ನೀನು ಪಡೆದಿದ್ದೀಯೆ.

ಉಪಸ್ಥಿತಃ ಸರ್ವಕಾಮೈಃ ತ್ರಿದಿವೇ ವಾಸವೋ ಯಥಾ ।
ವಿವಿಧೈರನ್ನಪಾನೈಶ್ಚ ಪ್ರವರೈಃ ಕಂ ನು ಶೋಚಸಿ ॥೧೭॥

ಸ್ವರ್ಗದಲ್ಲಿ ಇಂದ್ರನಂತೆ ಎಲ್ಲ ಕಾಮಗಳಿಂದಲೂ ನೀನು ಪೂರ್ಣನಾಗಿದ್ದೀಯೆ ಶ್ರೇಷ್ಠವಾದ ವಿಧವಿಧವಾದ ಅನ್ನ ಪಾನಗಳನ್ನು ಹೊಂದಿದ್ದೀಯೆ. ಏಕೆ ಶೋಕಪಡುತ್ತೀಯೆ?

ಅಧೀತಾಃ ಕೃತವಾನ್ ವಿದ್ಯಾಃ ಪ್ರಿಯೋ ಮೇ ಲಾಳಿತೋ ಗೃಹೇ ।
ಹಲಾಯುಧಾತ್ ಕೃಪಾದ್ ದ್ರೋಣಾದಸ್ತ್ರವಿದ್ಯಾಮಧೀತವಾನ್ ।
ಭ್ರಾತುಜ್ಯೇಷ್ಠಃ ಸ್ಥಿತೋ ರಾಜ್ಯೇ ಕಿನ್ನು ಶೋಚಸಿ ಪುತ್ರಕ ॥೧೮॥

ವಿದ್ಯೆಗಳನ್ನು ಅಧ್ಯಯನಮಾಡಿದ್ದೀಯೆ. ನೈಮಿತ್ತಿಕಕರ್ಮಗಳನ್ನು ಸಹ ಮಾಡಿದ್ದೀಯೆ. ನನ್ನ ಪ್ರೀತಿಪಾತ್ರನಾದ ನೀನು ಮನೆಯಲ್ಲಿನನ್ನಿಂದ ಲಾಲಿಸಲ್ಪಟ್ಟಿದ್ದೀಯೆ. ಬಲರಾಮನಿಂದಲೂ ಕೃಪರಿಂದಲೂ ದ್ರೋಣರಿಂದಲೂ ಅಸ್ತ್ರವಿದ್ಯೆಯನ್ನು ಸಂಪಾದಿಸಿದ್ದೀಯೆ. ನನ್ನ ಎಲ್ಲಾ ಪುತ್ರರಿಗೆ ಹಿರಿಯನಾಗಿ ನನ್ನ ರಾಜ್ಯದಲ್ಲಿ ಪ್ರತಿಷ್ಠಿತನಾಗಿದ್ದೀಯೆ. ಪುತ್ರನೇ! ಏಕೆ ಶೋಕವನ್ನು ಪಡುತ್ತೀಯೆ?

ಪೃಥಗ್ವಿಧೈರಲಭ್ಯಂ ಯದಶನಾಚ್ಛಾದನಂ ಬಹು ।
ಪ್ರಭುಸ್ತ್ವಂ ಭುಂಜಸೇ ಪುತ್ರ ಸಂಸ್ತುತಃ ಸೂತಮಾಗಧೈಃ ॥೧೯॥

ಪುತ್ರನೇ! ಸಾಮಾನ್ಯ ಜನರಿಗೆ ಅಲಭ್ಯವಾದ ಅನೇಕ ವಿಧವಾದ ಭೋಜನಾಚ್ಛಾದನಾದಿಗಳನ್ನು ಪ್ರಭುವಾದ ನೀನು ಅನುಭವಿಸುತ್ತಿರುವೆ. ಸೂತ ಮಾಗಧರಿಂದ ಸ್ತೋತ್ರಮಾಡಲ್ಪಡುತ್ತಿರುವೆ.

ತಸ್ಯ ತೇ ವಿದಿತಪ್ರಜ್ಞ ಶೋಕಮೂಲಮಿದಂ ಕಥಮ್ ।
ಲೋಕೇಽಸ್ಮಿನ್ ಜ್ಯೇಷ್ಠಭಾಕ್ ಕೋ ಯಸ್ತನ್ಮಮಾಚಕ್ಷ್ವ ಪುತ್ರಕ ॥೨೦॥

ಎಲೈ ವಿದಿತಪ್ರಜನೇ! (ಮೇಧಾವಿಯೇ) ಅಂತಹ ನಿನಗೆ ಶೋಕಕ್ಕೆ ಕಾರಣವೇನು? ಪುತ್ರನೇ! ಈ ಲೋಕದಲ್ಲಿ ನಿನಗಿಂತ ಸುಖವಾಗಿರದವನು ಯಾರಿದ್ದಾನೆ? ಅದನ್ನು ನನಗೆ ಹೇಳು.

ತಸ್ಯ ತದ್ವಚನಂ ಶ್ರುತ್ವಾ ಮಂದಃ ಕ್ರೋಧವಶಾನುಗಃ ।
ಪಿತರಂ ಪ್ರತ್ಯುವಾಚೇದಂ ಸ್ವಮತಿಂ ಸಂಪ್ರಕಾಶಯನ್ ॥೨೧॥

ಅವನ ಮಾತುಗಳನ್ನು ಕೇಳಿ ಮಂದನೂ ಕ್ರೋಧವಶನೂ ಆದ ದುರ್ಯೋಧನನು ತನ್ನ ಬುದ್ಧಿಯನ್ನು ತೋರಿಸಿಕೊಳ್ಳುತ್ತಾ ತಂದೆಯನ್ನು ಕುರಿತು ಹೀಗೆ ಉತ್ತರವನ್ನು ಕೊಟ್ಟನು.

ತ್ವದ್ದತ್ತಂ ಚೈವ ಭುಂಜಾವೋ ಗಾಂಧಾರೀ ಚಾಹಮೇವ ಚ ।
ಆಚ್ಛಾದಯಸಿ ಚಾವಾರಾನಶ್ನಾಸಿ ಪಿಶಿತೌದನಮ್ ।
ಆಜಾನೇಯಾ ವಹಂತಿ ತ್ವಾಂ ಕಸ್ಮಾಚ್ಛೋಚಸಿ ಪುತ್ರಕ ॥೧೩॥

ನೀನು ಕೊಟ್ಟ ಅನ್ನವನ್ನೇ ಗಾಂಧಾರಿಯು ಮತ್ತು ನಾನು ಭುಂಜಿಸುತ್ತೇವೆ. ಶ್ರೇಷ್ಠವಾದ ಬಟ್ಟೆಗಳನ್ನು ಹಾಕಿಕೊಳ್ಳುತ್ತೀಯೆ ನಿತ್ಯವೂ ಮಾಂಸಾನ್ನವನ್ನು ಭುಂಜಿಸುತ್ತೀಯೆ ಒಳ್ಳೆಯ ಜಾತಿಯ ಕುದುರೆಗಳು ನಿನ್ನನ್ನು ಕೊಂಡೊಯ್ಯುತ್ತವೆ. ಮಗನೇ ಏಕೆ ಶೋಕಪಡುತ್ತೀಯೆ?

ಶಯನಾನಿ ಮಹಾರ್ಹಾಣಿ ಯೋಷಿತಶ್ಚ ಮನೋಹರಾಃ ।
ಗುಣವಂತಿ ಚ ವೇಶ್ಮಾನಿ ವಿಹಾರಾಶ್ಚ ಯಥಾಸುಖಮ್ ॥೧೪॥

ದೇವಾನಾಮಿವ ತೇ ಸರ್ವಂ ವಾಚಿ ಬದ್ಧಮಸಂಶಯಮ್ ।
ಸ ದೀನ ಇವ ದುರ್ಧರ್ಷ ಕಸ್ಮಾಚ್ಛೋಚಸಿ ಪುತ್ರಕ ॥೧೫॥

ಬಹಳ ಬೆಲೆಬಾಳುವ ಶಯನಗಳನ್ನು ಹೊಂದಿದ್ದೀಯೆ. ನಿನ್ನ ಪತ್ನಿಯರು ಸುಂದರಿಯರಿದ್ದಾರೆ. ನಿನ್ನ ಗೃಹಗಳು ಮತ್ತು ವಿಹಾರಸ್ಥಾನಗಳು ಒಳ್ಳೆಯಗುಣಗಳಿಂದ ಸುಖಪ್ರದವಾಗಿದೆ. ದೇವತೆಗಳಂತೆ ಎಲ್ಲವೂ ನಿನಗೆ ಇದೆ. ಎಲ್ಲವೂ ನಿನಗೆ ಅಧೀನವಾಗಿದೆ. ಪುತ್ರನೇ ದುರ್ಧರ್ಷನಾದ ನೀನು ದೀನನಂತೆ ಏಕೆ ಶೋಕಪಡುತ್ತಿರುವೆ?

ಮಾತ್ರಾ ಪಿತ್ರಾ ಚ ಪುತ್ರಸ್ಯ ಯದ್ಧಿ ಕಾರ್ಯಂ ಪರಂ ಸ್ಮೃತಮ್ ।
ಪ್ರಾಪ್ತಸ್ತ್ವಮಸಿ ತತ್ ತಾತ ನಿಖಿಲಾಂ ನಃ ಕುಲಶ್ರಿಯಮ್ ॥೧೬॥

ಪ್ರೀತಿಪಾತ್ರನೇ! ತಂದೆ ಮತ್ತು ತಾಯಿಯರು ಮಗನಿಗೆ ಏನು ಮಾಡಬೇಕೆಂದು ಹೇಳುತ್ತಾರೋ ಅವೆಲ್ಲವನ್ನೂ ನೀನು ಪಡೆದಿದ್ದೀಯೆ. ನಮ್ಮ ಕುಲದ ಸಮಗ್ರವಾದ ಸಂಪತ್ತನ್ನು ನೀನು ಪಡೆದಿದ್ದೀಯೆ.

ಉಪಸ್ಥಿತಃ ಸರ್ವಕಾಮೈಃ ತ್ರಿದಿವೇ ವಾಸವೋ ಯಥಾ ।
ವಿವಿಧೈರನ್ನಪಾನೈಶ್ಚ ಪ್ರವರೈಃ ಕಿಂ ನು ಶೋಚಸಿ ॥೧೭॥

ಸ್ವರ್ಗದಲ್ಲಿ ಇಂದ್ರನಂತೆ ಎಲ್ಲ ಕಾಮಗಳಿಂದಲೂ ನೀನು ಪೂರ್ಣನಾಗಿದ್ದೀಯೆ ಶ್ರೇಷ್ಠವಾದ ವಿಧವಿಧವಾದ ಅನ್ನ ಪಾನಗಳನ್ನು ಹೊಂದಿದ್ದೀಯೆ. ಏಕೆ ಶೋಕಪಡುತ್ತೀಯೆ?

ಅಧೀತಾಃ ಕೃತವಾನ್ ವಿದ್ಯಾಃ ಪ್ರಿಯೋ ಮೇ ಲಾಳಿತೋ ಗೃಹೇ ।
ಹಲಾಯುಧಾತ್ ಕೃಪಾದ್ ದ್ರೋಣಾದಸ್ತ್ರವಿದ್ಯಾಮಧೀತವಾನ್ ।
ಭ್ರಾತುರ್ಜ್ಯೇಷ್ಠಃ ಸ್ಥಿತೋ ರಾಜ್ಯೇ ಕಿನ್ನು ಶೋಚಸಿ ಪುತ್ರಕ ॥೧೮॥

ವಿದ್ಯೆಗಳನ್ನು ಅಧ್ಯಯನಮಾಡಿದ್ದೀಯೆ. ನೈಮಿತ್ತಿಕಕರ್ಮಗಳನ್ನು ಸಹ ಮಾಡಿದ್ದೀಯೆ. ನನ್ನಪ್ರೀತಿಪಾತ್ರನಾದ ನೀನು ಮನೆಯಲ್ಲಿನನ್ನಿಂದ ಲಾಲಿಸಲ್ಪಟ್ಟಿದ್ದೀಯೆ. ಬಲರಾಮನಿಂದಲೂ ಕೃಪರಿಂದಲೂ ದ್ರೋಣರಿಂದಲೂ ಅಸ್ತ್ರವಿದ್ಯೆಯನ್ನು ಸಂಪಾದಿಸಿದ್ದೀಯೆ. ನನ್ನ ಎಲ್ಲಾ ಪುತ್ರರಿಗೆ ಹಿರಿಯನಾಗಿ ನನ್ನ ರಾಜ್ಯದಲ್ಲಿ ಪ್ರತಿಷ್ಠಿತನಾಗಿದ್ದೀಯೆ. ಪುತ್ರನೇ! ಏಕೆ ಶೋಕವನ್ನು ಪಡುತ್ತೀಯೆ?

ಪೃಥಗ್ಜನೈರಲಭ್ಯಂ ಯದಶನಾಚ್ಛಾದನಂ ಬಹು ।
ಪ್ರಭುಸ್ತ್ವಂ ಭುಂಜಸೇ ಪುತ್ರ ಸಂಸ್ತುತಃ ಸೂತಮಾಗಧೈಃ ॥೧೯॥

ಪುತ್ರನೇ! ಸಾಮಾನ್ಯ ಜನರಿಗೆ ಅಲಭ್ಯವಾದ ಅನೇಕ ವಿಧವಾದ ಭೋಜನಾಚ್ಛಾದನಾದಿಗಳನ್ನು ಪ್ರಭುವಾದ ನೀನು ಅನುಭವಿಸುತ್ತಿರುವೆ. ಸೂತ ಮಾಗಧರಿಂದ ಸ್ತೋತ್ರಮಾಡಲ್ಪಡುತ್ತಿರುವೆ.

ತಸ್ಯ ತೇ ವಿದಿತಪ್ರಜ್ಞ ಶೋಕಮೂಲಮಿದಂ ಕಥಮ್ ।
ಲೋಕೇಽಸ್ಮಿನ್ ಜ್ಯೇಷ್ಠಭಾಕ್ ಕೋ ಯಸ್ತನ್ಮಮಾಚಕ್ಷ್ವ ಪುತ್ರಕ ॥೨೦॥

ಎಲೈ ವಿದಿತಪ್ರಜನೇ! (ಮೇಧಾವಿಯೇ) ಅಂತಹ ನಿನಗೆ ಶೋಕಕ್ಕೆ ಕಾರಣವೇನು? ಪುತ್ರನೇ! ಈ ಲೋಕದಲ್ಲಿ ನಿನಗಿಂತ ಸುಖವಾಗಿರದವನು ಯಾರಿದ್ದಾನೆ? ಅದನ್ನು ನನಗೆ ಹೇಳು.

ತಸ್ಯ ತದ್ವಚನಂ ಶ್ರುತ್ವಾ ಮಂದಃ ಕ್ರೋಧವಶಾನುಗಃ ।
ಪಿತರಂ ಪ್ರತ್ಯುವಾಚೇದಂ ಸ್ವಮತಿಂ ಸಂಪ್ರಕಾಶಯನ್ ॥೨೧॥

ಅವನ ಮಾತುಗಳನ್ನು ಕೇಳಿ ಮಂದನೂ ಕ್ರೋಧವಶನೂ ಆದ ದುರ್ಯೋಧನನು ತನ್ನ ಬುದ್ಧಿಯನ್ನು ತೋರಿಸಿಕೊಳ್ಳುತ್ತಾ ತಂದೆಯನ್ನು ಕುರಿತು ಹೀಗೆ ಉತ್ತರವನ್ನು ಕೊಟ್ಟನು.

ಅಶ್ನಾಮ್ಯಾಚ್ಛಾದಯೇ ಚಾಹಂ ಯಥಾ ಕಾಪುರುಷಸ್ತಥಾ ।
ಅಮರ್ಷಂ ಧಾರಯೇ ಚೋಗ್ರಂ ತಿತಿಕ್ಷನ್ ಕಾಲಪರ್ಯಯಮ್ ॥೨೨॥

ಹೌದು. ನಾನು ಒಬ್ಬ ದರಿದ್ರನಂತೆ ಭೋಜನವನ್ನುಮಾಡಿ ವಸ್ತ್ರಗಳನ್ನು ಧರಿಸುತ್ತಿದ್ದೇನೆ. ನನ್ನ ಉಗ್ರವಾದ ಕೋಪವನ್ನು ಒಳಗೆ ಧರಿಸಿದ್ದೇನೆ. ಕಾಲದ ವಿಪರ್ಯಾಸವನ್ನು ನೋಡಿ ಅದನ್ನು ಸಹಿಸಿಕೊಂಡಿದ್ದೇನೆ.

ಅಮರ್ಷಣಃ ಸ್ವಾಂ ಪ್ರಕೃತಿಮಭಿಭೂಯ ಚರೇದ್ಧಿತಮ್ ।
ಕ್ಲೇಶಾನ್ಮುಮುಕ್ಷುಃ ಪರಜಾತ್ ಸ ವೈ ಪುರುಷ ಉಚ್ಯತೇ ॥೨೩॥

ಯಾವನು ಕ್ರೋದಕ್ಕೆ ಒಳಗಾಗುವನೋ ಅವನು ತನ್ನ ಸ್ವಭಾವವನ್ನು ಮುಚ್ಚಿಕೊಂಡು ತನ್ನ ಹಿತವನ್ನು ಸಂಪಾದಿಸಿ ಇನ್ನೊಬ್ಬರಿಂದ ಉಂಟಾದ ಕ್ಲೇಶದಿಂದ ಮುಕ್ತನಾದರೆ ಅವನನ್ನು ನಿಜವಾದ ಪುರುಷನೆಂದು ಕರೆಯುತ್ತಾರೆ.

ಸಂತೋಷೋ ವೈ ಶ್ರಿಯಂ ಹಂತಿ ಅಭಿಮಾನಶ್ಚ ಭಾರತ ।
ಅನುಕ್ರೋಶಃ ಶ್ರಿಯಂ ಹಂತಿ ಸಂತೋಷಶ್ಚಾಪಿ ತಾವುಭೌ ।
ಅನುತ್ಥಾನಭಯೇ ಚೋಭೇ ತೈರ್ವ್ಯತೋ ನಾಶ್ನುತೇ ಮಹತ್ ॥೨೪॥

ಭಾರತನೇ! ಇದ್ದದ್ದರಲ್ಲೇ ತೃಪ್ತಿಪಡುವುದು ಐಶ್ವರ್ಯವನ್ನು ನಾಶಮಾಡುತ್ತದೆ. ಪುಣ್ಯಕರ್ಮದ ಶ್ರದ್ಧೆಯೂ ಐಶ್ವರ್ಯವನ್ನು ನಾಶಮಾಡುತ್ತದೆ. ಸರ್ವಪ್ರಾಣಿದಯೆಯೂ ಐಶ್ವರ್ಯವನ್ನು ನಾಶಮಾಡುತ್ತದೆ. ಸಂತೋಷ (ತೃಪ್ತಿ) ಅಭಿಮಾನ ದಯೆ ಅನುತ್ಸಾಹ ಮತ್ತು ಭಯ ಈ ಐದರಿಂದ ಯುಕ್ತನಾದವನು ಮಹಾಧನವನ್ನು ಸಾಧಿಸುವುದಿಲ್ಲ.

ನ ಮಾಮವೈಹಿ ತಾಂ ಭೂತಾಂ ಶ್ರಿಯಂ ದೃಷ್ಟ್ವಾ ಯುಧಿಷ್ಠಿರೇ ।
ಜ್ವಲಂತೀಮಿವ ರಾಜೇಂದ್ರ ವಿವರ್ಣಕರಣೀಂ ಮಮ ॥೨೫॥

ರಾಜೇಂದ್ರನೇ! ಯುಧಿಷ್ಠಿರನಲ್ಲಿರುವ ಪ್ರಭೂತವಾದ ಜ್ವಲಂತವಾದ ನನ್ನ ವಿವರ್ಣಕ್ಕೆ ಕಾರಣವಾದ ಆ ಸಂಪತ್ತನ್ನು ನೋಡಿದ ಮೇಲೆ ನನ್ನ ಐಶ್ವರ್ಯವು ಅದರ ಮುಂದೆ ಏನೂ ಅಲ್ಲ ಎಂದು ತಿಳಿ.

ಸಪತ್ನಾನೃದ್ಧ್ಯತೋಽಸ್ಮಾಂಶ್ಚ ಹೀಯಮಾನಾನ್ ನಿಶಾಮ್ಯ ಕಿಮ್ ।
ಅದೃಶ್ಯಮಪಿ ಕೌಂತೇಯೇ ನಾಹಂ ಪಶ್ಯಾಮಿ ವರ್ಧತೀಮ್ ।
ತಸ್ಮಾದಹಂ ವಿವರ್ಣಶ್ಚ ದೀನಶ್ಚ ಹರಿಣಃ ಕೃಶಃ ॥೨೬॥

ಶತ್ರುಗಳು ವೃದ್ಧಿಯನ್ನು ಹೊಂದುತ್ತಿರುವುದನ್ನೂ ನಾವು ಕ್ಷಯವನ್ನು ಹೊಂದುತ್ತಿರುವುದನ್ನೂ ನೋಡಿ ಧರ್ಮರಾಜನಲ್ಲಿ ನಿತ್ಯವೂ ಅಭಿವೃದ್ಧಿಯನ್ನು ಹೊಂದುತ್ತಿರುವ ಕಣ್ಣಿನಿಂದ ನೋಡಲು ಅಸಾಧ್ಯವಾದ ಆ ಸಂಪತ್ತನ್ನು ನೋಡಿ ನನ್ನ ಐಶ್ವರ್ಯವು ನನ್ನ ಕಣ್ಣಿಗೆ ಕಾಣಿಸುತ್ತಿಲ್ಲ. (ಇನ್ನು ಭೋಗಿಸುವುದು ಎಲ್ಲಿಯ ಮಾತು?) ಆದ್ದರಿಂದ ದೀನನೂ ವಿವರ್ಣನೂ ಹರಿಣನೂ ಕೃಶನೂ ಆಗಿದ್ದೇನೆ.

ಅಷ್ಟಾಶೀತಿಸಹಸ್ರಾಣಿ ಸ್ನಾತಕಾ ಗೃಹಮೇಧಿನಃ ।
ತ್ರಿಂಶದ್ದಾಸೀಕ ಏಕೈಕೋ ಯಾನ್ ಬಿಭರ್ತಿ ಯುಧಿಷ್ಠಿರಃ ॥೨೭॥

ಎಂಬತ್ತೆಂಟು ಸಾವಿರ ಸ್ನಾತಕರು ಯುಧಿಷ್ಠಿರನ ಮನೆಯಲ್ಲಿ ಇದ್ದಾರೆ. ಅವರಲ್ಲಿ ಒಬ್ಬೊಬ್ಬರಿಗೂ ಮೂವತ್ತು ದಾಸಿಯರಿದ್ದಾರೆ. ಅವರನ್ನು ಯುಧಿಷ್ಠಿರನು ಪೋಷಿಸುತ್ತಾನೆ.

ದಶಾನ್ಯಾನಿ ಸಹಸ್ರಾಣಿ ನಿತ್ಯಂ ತತ್ರಾನ್ನಮುತ್ತಮಮ್ ।
ಭುಂಜತೇ ರುಗ್ಮಪಾತ್ರೀಭಿರ್ಯುಧಿಷ್ಠಿರನಿವೇಶನೇ ॥೨೮॥

ಇನ್ನೂ ಹತ್ತು ಸಹಸ್ರ ಸ್ನಾತಕರು ಅಲ್ಲಿ ಯುಧಿಷ್ಠಿರನ ಮನೆಯಲ್ಲಿ ನಿತ್ಯವೂ ಸುವರ್ಣಮಯವಾದ ಪಾತ್ರೆಗಳಲ್ಲಿ ಶ್ರೇಷ್ಠವಾದ ಭೋಜನವನ್ನು ಮಾಡುತ್ತಾರೆ.

ಶತ್ರೋರ್ವೃದ್ಧಿವಿಶೇಷೇಣ ವಿರೂಪೋಽನ್ನವಿವರ್ಜಿತಃ ।
ಕದಳೀಪತ್ರವರ್ಣಾನಿ ಕೃಷ್ಣಶ್ಯಾಮಾರುಣಾನಿ ಚ ।
ಕಾಂಭೋಜಃ ಪ್ರಾಹಿಣೋತ್ ತಸ್ಮೈ ಪರಾರ್ಘ್ಯಾನಪಿ ಕಂಬಲಾನ್॥೨೯॥

ಶತ್ರುವಿನ ವಿಶೇಷವಾದ ಸಮೃದ್ಧಿಯನ್ನು ನೋಡಿ ನಾನು ಅನ್ನವನ್ನು ತ್ಯಜಿಸಿ ನನ್ನ ಆಕಾರವನ್ನು ಕಳೆದುಕೊಂಡಿದ್ದೇನೆ. ಕಾಂಭೋಜರಾಜನು ಅವನಿಗೆ ಬಾಳೆಯ ಎಲೆಯ ವರ್ಣದ ಮತ್ತು ಕೃಷ್ಣ ಶ್ಯಾಮವರ್ಣದ ಬೆಲೆಬಾಳುವ ಅನೇಕ ಕಂಬಳಿಗಳನ್ನು ಕಳುಹಿಸಿದನು.

ಗಜಯೋಷಿದ್ಗವಾಶ್ವಾನಾಂ ಸಹಸ್ರಾಣಿ ಚತುರ್ದಶ ।
ತ್ರಿಶತಂ ಚೋಷ್ಟ್ರವಾಮೀನಾಂ ಸಹಸ್ರಾಣಿ ವಹಂತ್ಯುತ ॥೩೦॥

ಏವಂ ಸರ್ವಾಣಿ ರತ್ನಾನಿ ಪೃಥಿವ್ಯಾಂ ಸರ್ವಪಾರ್ಥಿವಾಃ ।
ಪ್ರಯಚ್ಛಂತಿ ಮಹಾರಾಜ ಕುಂತೀಪುತ್ರಸ್ಯ ಸರ್ವತಃ ॥೩೧॥

ಯುಧಿಷ್ಠಿರನ ರತ್ನಗಳನ್ನು ಹದಿನಾಲ್ಕು ಸಾವಿರ ಹೆಣ್ಣಾನೆಗಳು ಗೋವುಗಳು ಅಶ್ವಗಳು ಮತ್ತು ಮೂರುಸಹಸ್ರ ಒಂಟೆಗಳು ಹೊರುತ್ತವೆ. ಮಹಾರಾಜನೇ! ಹೀಗೆ ಭೂಮಿಯಲ್ಲಿರುವ ರತ್ನವೆಲ್ಲವನ್ನೂ ಎಲ್ಲಾ ರಾಜರೂ ಎಲ್ಲಾ ಕಡೆಗಳಿಂದ ತಂದು ಕುಂತೀ ಪುತ್ರನಿಗೆ ಒಪ್ಪಿಸುತ್ತಾರೆ.

ನ ಕ್ವಚಿದ್ಧಿ ಮಯಾ ದೃಷ್ಟಸ್ತಾದೃಶೋ ನೈವ ಚ ಶ್ರುತಃ ।
ಯಾವದ್ಧನಾಗಮೋ ಯಜ್ಞೇ ಪಾಂಡುಪುತ್ರಸ್ಯ ಧೀಮತಃ ॥೩೨॥

ಮೇಧಾವಿಯಾದ ಧರ್ಮರಾಜನ ಯಜ್ಞದಲ್ಲಿ ಎಷ್ಟುಯ ಧನವು ಪ್ರಾಪ್ತವಾಯಿತೋ ಅಂತಹದನ್ನು ನಾನು ಹಿಂದೆ ನೋಡಲೂ ಇಲ್ಲ ಅಥವಾ ಕೇಳಲೂ ಇಲ್ಲ.

ಅಪರ್ಯಂತಂ ಧನೌಘಂ ತಂ ದೃಷ್ಟ್ವಾ ಶತ್ರೋರಹಂ ನೃಪ ।
ಶಮಂ ನೈವಾಧಿಗಚ್ಛಾಮಿ ಚಿಂತಯಾನೋ ದಿವಾನಿಶಮ್ ॥೩೩॥

ಬ್ರಾಹ್ಮಣಾ ವಾಟಧಾನಾಶ್ಚ ಗೋಮಂತಃ ಶತಸಂಘಶಃ ।
ತ್ರೈವರ್ಣಾಃ ಬಲಿಮಾದಾಯ ದ್ವಾರಿ ತಿಷ್ಠಂತಿ ವಾರಿತಾಃ ॥೩೪॥

ಶತ್ರುವಿನ ಎಲ್ಲೆಯೇ ಇಲ್ಲದ ಆ ಧನರಾಶಿಯನ್ನು ನೋಡಿದಮೇಲೆ ಎಲೈ ರಾಜನೇ! ಅದನ್ನೇ ಹಗಲೂ ರಾತ್ರಿಯೂ ಚಿಂತಿಸುತ್ತಾ ನನ್ನ ಮನಸ್ಸಿಗೆ ಸಮಾಧಾನವೇ ದೊರೆಯುತ್ತಿಲ್ಲ. ಬ್ರಾಹ್ಮಣರು, ಪುಷ್ಪವಾಟಗಳಿಂದ ಧನವನ್ನು ಗಳಿಸಿದವರು ಗೋಸಂಪತ್ತನ್ನು ಉಳ್ಳವರು, ಮೂರು ವರ್ಣಗಳಿಗೆ ಸೇರಿದವರು, (ತ್ರಿಗರ್ತದೇಶಕ್ಕೆ ಸೇರಿದವರು) ಕಪ್ಪ ಕಾಣಿಕೆಗಳನ್ನು ಹಿಡಿದುಕೊಂಡು ಅವನ ದ್ವಾರದಲ್ಲಿ ದ್ವಾರಪಾಲಕರಿಂದ ತಡೆಯಲ್ಪಟ್ಟು ನಿಂತಿದ್ದಾರೆ.

ಕಮಂಡಲೂನುಪಾದಾಯ ಜಾತರೂಪಮಯಾನ್ ಶುಭಾನ್ ।
ತ್ರೈಖರ್ವಾಃ ಪ್ರತಿಪಾದ್ಯಾಸ್ಮೈ ಲೇಭಿರೇಽಥ ಪ್ರವೇಶನಮ್ ॥೩೫॥

ತ್ರಿಖರ್ವದೇಶದವರು ಸುವರ್ಣಮಯವಾದ ಕಮಂಡಲುಗಳನ್ನು ತೆಗೆದುಕೊಂಡು ಬಂದು ಅವನಿಗೆ ನಿವೇದಿಸಿ ಅನಂತರ ಪ್ರವೇಶವನ್ನು ಪಡೆದರು.

ಯನ್ನೈವ ಮಧು ಶಕ್ರಾಯ ಪ್ರಾಪಯಂತ್ಯಮರಸ್ತ್ರಿಯಃ ।
ತದಸ್ಮೈ ಕಾಮಮಾಹರ್ಷನ್ ವಾರುಣೀರಸಮುತ್ತಮಮ್ ॥೩೬॥

ದೇವತಾಸ್ತ್ರೀಯರು ಇಂದ್ರನಿಗೆ ಯಾವ ಮಧುವನ್ನು ತೆಗೆದುಕೊಂಡು ಹೋಗಲು ಸಾಧ್ಯವಿಲ್ಲವೋ ಅಂತಹ ಉತ್ತಮವಾದ ವಾರುಣಿ ರಸರೂಪವಾದ ಮಧುವನ್ನು ಧರ್ಮರಾಜನಿಗೆ ತೆಗೆದುಕೊಂಡು ಹೋಗುತ್ತಾರೆ.

ರುಗ್ಮಸ್ಯ ತು ಸಹಸ್ರಂ ಚ ಕಲಶಂ ರತ್ನಭೂಷಿತಮ್ ।
ದೃಷ್ಟ್ವಾಽಥ ಮೇ ಮನಸ್ತಾತ ಜ್ವರರೂಪಮಿವಾಭವತ್ ॥೩೭॥

ಪ್ರೀತಿಪಾತ್ರನೇ! ರತ್ನವಿಭೂಷಿತವಾದ ಸುವರ್ಣಮಯವಾದ ಸಹಸ್ರ ಕಲಶಗಳನ್ನು ನೋಡಿ ನನ್ನ ಮನಸ್ಸಿಗೆ ಜ್ವರ ಬಂದಂತೆ ಆಗಿದೆ.

ಗೃಹೀತ್ವಾ ಕಲಶಾನ್ ಯಾಂತಿ ಸಮುದ್ರೌ ಪೂರ್ವದಕ್ಷಿಣೌ ।
ತಥೈವ ಪಶ್ಚಿಮಂ ಯಾಂತಿ ಗೃಹೀತ್ವಾ ಭರತರ್ಷಭ ॥೩೮॥

ಜಲಾರ್ಥಂ ತತ್ರ ರಾಜೇಂದ್ರ ಘಟಾನಾದಾಯ ರಾಕ್ಷಸಾಃ ।
ದಿಶೋ ಯಯುರ್ಜಲಾರ್ಥಂ ತೇ ವರ್ಜಯಿತ್ವೋತ್ತರಾಂ ದಿಶಮ್ ॥

ಭರತರ್ಷಭನೇ! ಆ ಕಲಶಗಳನ್ನು ತೆಗೆದುಕೊಂಡು ರಾಕ್ಷಸರು ಪೂರ್ವ ದಕ್ಷಿಣ ಮತ್ತು ಪಶ್ಚಿಮ ಸಮುದ್ರಗಳಿಗೆ ನೀರನ್ನು ತರಲು ಹೋಗುತ್ತಾರೆ. ರಾಜೇಂದ್ರನೇ! ಅವರು ಉತ್ತರದಿಕ್ಕನ್ನು ಬಿಟ್ಟು ಉಳಿದ ಎಲ್ಲಾ ದಿಕ್ಕುಗಳಿಗೂ ನೀರನ್ನು ತರಲು ಹೋಗುತ್ತಾರೆ.

ಉತ್ತರಂ ತು ನ ಗಚ್ಛಂತಿ ವಿನಾ ತಾತ ಪತತ್ರಿಭಿಃ ।
ತತ್ರ ಗತ್ವಾಽರ್ಜುನೋ ದಂಡಮಾಜಹಾರಾಮಿತಂ ಧನಮ್ ॥೪೦॥

ಪಕ್ಷಿಗಳನ್ನು ಬಿಟ್ಟು ಇನ್ನು ಯಾರೂ ಉತ್ತರದಿಕ್ಕಿಗೆ ಮಾತ್ರ ಹೋಗುವುದಿಲ್ಲ. ಆದರೆ ಅರ್ಜುನನು ಮಾತ್ರ ಅಲ್ಲಿಗೂ ಹೋಗಿ ಅಪಾರವಾದ ಧನವನ್ನು ಕಾಣಿಕೆಯಾಗಿ ತೆಗೆದುಕೊಂಡು ಬಂದನು.

ಕೃತಾಂ ಬೈಂದುಸರೈ ರತ್ನೈರ್ಮಯೇನ ಸ್ಫಾಟಿಕಚ್ಛದಾಮ್ ।
ಅಪಶ್ಯಂ ನಲಿನೀಂ ಪೂರ್ಣಾಮುದಕಸ್ಯೇವ ಭಾರತ ॥೪೧॥

ಭಾರತನೇ! ಮಯನು ಬಿಂದುಸರೋವರದ ರತ್ನಗಳಿಂದ ನಿರ್ಮಿಸಿದ ಸ್ಫಟಿಕದ ಹೊದಿಕೆಯುಳ್ಳ ನೀರಿನಿಂದ ತುಂಬಿರುವ ಸರೋವರದಂತೆ ಕಾಣುವ ಪ್ರದೇಶವನ್ನು ನಾನು ನೋಡಿದೆನು.

ಉತ್ಕರ್ಷಂತಂ ಚ ವೈ ವಾಸ ಪ್ರಾಹಸನ್ಮಾಂ ವೃಕೋದರಃ ।
ಕಿಂಕರಾಶ್ಚ ಸಭಾಪಾಲಾ ಜಹಸುರ್ಭರತರ್ಷಭ ॥೪೨॥

ಎಲೈ ಭರತರ್ಷಭನೇ! ನಾನು ನನ್ನ ವಸ್ತ್ರವನ್ನು ಎತ್ತಿಹಿಡಿದುದನ್ನು ನೋಡಿ ಭೀಮಸೇನನೂ ಕಿಂಕರರು ಮತ್ತು ಸಭಾಪಾಲರೂ ನನ್ನನ್ನು ಹಾಸ್ಯಮಾಡಿದರು.

ಪಿತ್ರೋರರ್ಥೇ ವಿಶೇಷೇಣ ಪ್ರಾವೃಣ್ವಂ ತತ್ರ ಜೀವಿತಮ್ ।
ತತ್ರ ಸ್ಮ ಯದಿ ಶಕ್ತಃ ಸ್ಯಾಂ ಘಾತಯೇಯಂ ವೃಕೋದರಮ್ ।
ಸಪತ್ನೇನಾಪಹಾಸೋ ಹಿ ಸ ಮಾಂ ದಹತಿ ಭಾರತ ॥೪೩॥

ತಂದೆ ತಾಯಿಗಳ ಸಲುವಾಗಿ ನಾನು ಅಲ್ಲಿ ನನ್ನ ಜೀವವನ್ನು ಹಿಡಿದುಕೊಂಡೆ. ನನಗೆ ಶಕ್ತಿಯಿದ್ದರೆ ಆಗಲೇ ಭೀಮಸೇನನು ಕೊಲ್ಲುತ್ತಿದ್ದೆ. ಎಲೈ ಭಾರತನೇ! ಶತ್ರುವು ಮಾಡಿದ ಅಪಹಾಸವು ನನ್ನನ್ನು ಸುಡುತ್ತಿದೆ.

ತತ್ರ ಸ್ಫಾಟಿಕತೋಯಾಂ ಹಿ ಸ್ಫಾಟಿಕಾಂಬುಜಶೋಭಿತಾಮ್ ।
ಸಭಾಂ ಪುಷ್ಕರಿಣೀಂ ಮತ್ವಾ ಪತಿತೋಽಸ್ಮಿ ನರಾಧಿಪ ॥೪೪॥

ಅಲ್ಲಿ ಸ್ಫಟಿಕದಂತೆ ಶುದ್ಧ ನೀರುಳ್ಳ ಸ್ಫಟಿಕದ ವರ್ಣದ ಶುದ್ಧವಾದ ಕಮಲಗಳಿಂದ ಶೋಭಿಸುವ ಪುಷ್ಕರಿಣಿಯನ್ನು ನೆಲವೆಂದು ತಿಳಿದು ಅದರೊಳಗೆ ಬಿದ್ದೆನು.

ತತ್ರ ಮಾಮಹಸದ್ ಭೀಮಃ ಸಹ ಪಾರ್ಥೇನ ಸಸ್ವರಮ್ ।
ದ್ರೌಪದೀ ಚ ಸಹ ಸ್ತ್ರೀಭಿಃ ಪಾತಯಂತೀ ಮನೋ ಮಮ ॥೪೫॥

ಎಲೈ ರಾಜನೇ! ಅಲ್ಲಿ ಭೀಮ ಮತ್ತು ಅರ್ಜುನರು ನನ್ನನ್ನು ನೋಡಿ ಗಟ್ಟಿಯಾಗಿ ನಕ್ಕರು. ದ್ರೌಪದಿಯೂ ಸಹ ಉಳಿದ ಸ್ತ್ರೀಯರ ಜೊತೆಯಲ್ಲಿ ನನ್ನ ಮನಸ್ಸನ್ನು ಭೇದಿಸುವಂತೆ ನಕ್ಕಳು.

ಕ್ಲಿನ್ನವಸ್ತ್ರಸ್ಯ ಚ ತೇ ಕಿಂಕರಾ ರಾಜಚೋದಿತಾಃ ।
ದದುರ್ವಾಸಾಂಸಿ ಮೇಽನ್ಯಾನಿ ತಚ್ಚ ದುಃಖಿತರಂ ಮಮ ॥೪೬॥

ಎಲ್ಲವಸ್ತ್ರಗಳು ಒದ್ದೆಯಾದ ನನಗೆ ಧರ್ಮರಾಜನಿಂದ ಪ್ರೇರಿತರಾದ ಸೇವಕರು ಬೇರೆ ವಸ್ತ್ರಗಳನ್ನು ತಂದುಕೊಟ್ಟರು. ಅದೂ ನನಗೆ ಅತ್ಯಂತ ದುಃಖದಾಯಕವಾಗಿದೆ.

ಅಸ್ತಂಭಾ ಇವ ತಿಷ್ಠಂತಿ ಸ್ತಂಭಾಃ ಶತಸಹಸ್ರಶಃ ।
ಸೋಽಹಂ ತತ್ರಾಹತೋ ರಾಜನ್ ಸ್ಫಟಿಕಾಭ್ಯಂತರೇ ವಿಭೋ ॥೪೭॥

ಎಲೈ ರಾಜನೇ! ಆ ಸಭೆಯಲ್ಲಿ ನೂರಾರು ಸಾವಿರಾರು ಸ್ತಂಭಗಳು ಇದ್ದರೂ ಸ್ಥಂಭಗಳೇ ಇಲ್ಲದಂತೆ ಕಾಣುತ್ತವೆ. ವಿಭುವೇ! ನಾನು ಅಲ್ಲಿ ಸ್ಫಟಿಕಮಯವಾದ ಮಧ್ಯಪ್ರದೇಶದಲ್ಲಿ ತಲೆಯನ್ನು ಗಟ್ಟಿಸಿಕೊಂಡೆ.

ಅದ್ವಾರೇಣ ವಿನಿರ್ಗಚ್ಛನ್ ದ್ವಾರಸಂಸ್ಥಾನರೂಪಿಣಾ ।
ಅಭಿಹತ್ಯ ಶಿಲಾಂ ಭೂಯೋ ಲಲಾಟೇನಾಸ್ಮಿ ವಿಕ್ಷತಃ ॥೪೮॥

ದ್ವಾರವು ಇಲ್ಲದಿರುವ ಕಡೆಯಲ್ಲಿ ದ್ವಾರದಂತೆ ತೋರುತ್ತಿರುವ ಆಕಾರವನ್ನು ಗಮನಿಸಿ ಹೊರಗೆ ಬರಲು ಇಚ್ಛಿಸಿ ಆ ಶಿಲೆಗೆ ಡಿಕ್ಕಿಯನ್ನು ಹೊಡೆದು ಹಣೆಯಲ್ಲಿ ಗಾಯಗೊಂಡೆನು.

ಆಮೃಶನ್ನಿವ ತಾಂ ದೃಷ್ಟ್ವಾ ಮಾರ್ಗಾಂತರಮುಪಾವಿಶಮ್ ।
ಸ್ತ್ರಿಯಶ್ಚ ತತ್ರ ಮಾಂ ದೃಷ್ಟ್ವಾ ಜಹಸುಸ್ತಾದೃಶಂ ನೃಪ ॥೪೯॥

ಮಾರ್ಗವನ್ನು ಹುಡುಕುವವಂತೆ ಹಸ್ತಗಳಿಂದ ಪ್ರಯತ್ನಪಡುತ್ತಾ ನಾನು ಭಿತ್ತಿಯ ಇನ್ನೊಂದು ಭಾಗದಲ್ಲಿ ಬಿದ್ದೆನು. ಎಲೈ ರಾಜನೇ! ಅಂತಹ ನನ್ನನ್ನು ನೋಡಿ ಸ್ತ್ರೀಯರು ನಕ್ಕರು.

ಇದಂ ದ್ವಾರಮಿದಂ ರಾಜನ್ ನ ದ್ವಾರಮಿತಿ ಮಾಂ ಪ್ರತಿ ।
ಅಗ್ರತಃ ಪ್ರಹಸನ್ ವಾಕ್ಯಂ ಬಭಾಷೇ ಸ ವೃಕೋದರಃ ।
ಸರ್ವಂ ಹಾಸಕರಂ ತೇಷಾಂ ಸದಸ್ಯಾನಾಂ ನರರ್ಷಭ ॥೫೦॥

ಭೀಮಸೇನನು ನನ್ನ ಸಮೀಪಕ್ಕೆ ಬಂದು ಮುಂದೆ ನಿಂತು ನಗುತ್ತಾ ರಾಜನೇ! ಇದು ದ್ವಾರ ಇದು ದ್ವಾರವಲ್ಲ ಎಂದು ಹೇಳಿದನು. ನರಶ್ರೇಷ್ಠನೇ! ನಾನು ಅಲ್ಲಿ ಮಾಡುದುದೆಲ್ಲವೂ ಸದಸ್ಯರಿಗೆ ಹಾಸ್ಯದ ವಿಷಯವಾಗಿದ್ದಿತು.

ನ ಶ್ರುತಾನಿ ನ ದೃಷ್ಟಾನಿ ಯಾನಿ ರತ್ನಾನಿ ಮೇ ಕ್ವಚಿತ್ ।
ತಾನಿ ಮೇ ತತ್ರ ದೃಷ್ಟಾನಿ ತೇನ ತಪ್ತೋಽಸ್ಮಿ ದುಃಖಿತಃ ॥೫೧॥

ನಾನು ಯಾವ ರತ್ನಗಳನ್ನು ನೋಡಿಲ್ಲವೋ ಅಥವಾ ಕೇಳಿಲ್ಲವೋ ಅಂತಹ ರತ್ನಗಳನ್ನೆಲ್ಲಾ ಅಲ್ಲಿ ನೋಡಿದೆ. ಅದರಿಂದ ತಾಪವುಳ್ಳವನೂ ದುಃಖಿತನೂ ಆಗಿದ್ದೇನೆ.

ಹುತಾಶನಂ ಪ್ರವೇಕ್ಷ್ಯಾಮಿ ಪ್ರವಿಶೇ ವಾ ಮಹೋದಧಿಮ್ ।
ಸಂಭಾವಿತಸ್ಯ ಚಾಕೀರ್ತಿರ್ಮರಣಾದತಿರಿಚ್ಯತೇ ॥೫೨॥

ನಾನು ಅಗ್ನಿಪ್ರವೇಶವನ್ನು ಮಾಡುವೆನು. ಅಥವಾ ಸಮುದ್ರವನ್ನಾದರೂ ಪ್ರವೇಶಮಾಡುವೆನು. ಮರ್ಯಾದೆಯಿಂದ ಇದ್ದವನಿಗೆ ಅಪಕೀರ್ತಿ ಉಂಟಾದರೆ ಅದು ಮರಣಕ್ಕಿಂತಲೂ ಹೆಚ್ಚು ಬಾಧಿಸುತ್ತದೆ.

ಇದಂ ಚಾದ್ಭುತಮತ್ರಾಸೀತ್ ತನ್ಮೇ ಕಥಯತಃ ಶೃಣು ।
ಪೂರ್ಣೇ ಶತಸಹಸ್ರೇ ತು ವಿಪ್ರಾಣಾಂ ಭುಂಜತಾಂ ಸದಾ ।
ಸ್ಥಾಪಿತಾ ತತ್ರ ಸಂಜ್ಞಾಽಭೂತ್ ಶಂಖೋಽಧ್ಮಾಯತ ನಿತ್ಯಶಃ ॥೫೩॥

ಅಲ್ಲಿ ಇನ್ನೊಂದು ಅದ್ಭುತವಾದ ಘಟನೆಯು ನಡೆಯಿತು. ಅದನ್ನು ಹೇಳುತ್ತೇನೆ ಕೇಳು. ಒಂದು ಲಕ್ಷ ಬ್ರಾಹ್ಮಣರ ಭೋಜನವಾದ ಮೇಲೆ ಅದನ್ನು ಸೂಚಿಸಲು ಸ್ಥಾಪಿತವಾದ ಶಂಖವು ಯಾವಾಗಲೂ ನಾದವನ್ನು ಮಾಡುತ್ತಿತ್ತು .

ಮುಹುರ್ಮುಹುಃ ಪ್ರಣದತಸ್ತಸ್ಯ ಶಂಖಸ್ಯ ನಿಸ್ವನಃ ।
ಅನಿಶಂ ಶ್ರೂಯತೇ ತತ್ರ ತತೋ ರೋಮಾಣಿ ಮೇಽಹೃಷನ್ ॥೫೪॥

ಮತ್ತೆ ಮತ್ತೆ ಹೀಗೆ ನಾದವನ್ನು ಮಾಡುವ ಆ ಶಂಖಧ್ವನಿಯು ಅಲ್ಲಿ ಯಾವಾಗಲೂ ಕೇಳಿ ಬರುತ್ತಿತ್ತು. ಅದರಿಂದ ನನಗೆ ರೋಮಾಂಚನವಾಯಿತು.

ಪಾರ್ಥಿವೈರ್ಬಹುಭಿಃ ಕೀರ್ಣಮುಪಸ್ಥಾನಂ ದಿದೃಕ್ಷುಭಿಃ ।
ಸರ್ವರತ್ನಾನ್ಯುಪಾದಾಯ ಮಹಾರ್ಹಾಣಿ ಜನೇಶ್ವರ ॥೫೫॥

ಎಲೈರಾಜನೇ! ಧರ್ಮರಾಜನ ಉಪಸ್ಥಾನದ ಸಮಯದಲ್ಲಿ ಅನೇಕ ರಾಜರು ಬೆಲೆಬಾಳುವ ಎಲ್ಲಾ ರತ್ನಗಳನ್ನೂ ತೆಗೆದುಕೊಂಡು ಬಂದು ಅದನ್ನು ನೋಡುತ್ತಿದ್ದರು.

ಯಜ್ಞೇ ತಸ್ಯ ಮಹಾಭಾಗ ಪಾಂಡವೇಯಸ್ಯ ಧೀಮತಃ ।
ವೈಶ್ಯಾ ಇವ ಮಹೀಪಾಲಾ ದ್ವಿಜಾತಿಪರಿವೇಷಕಾಃ ॥೫೬॥

ಎಲೈ ಮಹಾನುಭಾವನಾದ ರಾಜನೇ! ಪಾಂಡುಪುತ್ರನಾದ ಧರ್ಮರಾಜನ ಯಜ್ಞದಲ್ಲಿ ರಾಜರು ವೈಶ್ಯರಂತೆ ಬ್ರಾಹ್ಮಣರಿಗೆ ಭೋಜನವನ್ನು ಬಡಿಸುತ್ತಿದ್ದರು.

ನ ಸಾ ಶ್ರೀರ್ದೇವರಾಜಸ್ಯ ಯಮಸ್ಯ ವರುಣಸ್ಯ ವಾ ।
ಗುಹ್ಯಕಾಧಿಪತೇರ್ವಾऽಪಿ ಸ್ವಯಂ ವಿಷ್ಣೋರಪಿ ಪ್ರಭೋ ।
ರಾಕ್ಷಸಾಧಿಪತೇರ್ವಾऽಪಿ ಯಾ ಶ್ರೀ ರಾಜನ್ ಯುಧಿಷ್ಠಿರೇ ॥೫೭॥

ರಾಜನೇ! ಧರ್ಮರಾಜನಲ್ಲಿ ಯಾವ ಸಂಪತ್ತು ಇದೆಯೋ ಅಂತಹ ಸಂಪತ್ತು ಇಂದ್ರನಿಗೂ ಇಲ್ಲ. ಯಮನಿಗೂ ಇಲ್ಲ ವರುಣನಿಗೂ ಇಲ್ಲ ಗುಹ್ಯಕಾಧಿಪತಿಯಾದ ಕುಬೇರನಿಗೂ ಇಲ್ಲ. ಸ್ವಯಂ ವಿಷ್ಣುವಿಗೂ ಇಲ್ಲ. ರಾಕ್ಷಾಸಾಧಿಪತಿಯಾದ ರಾವಣನಿಗೂ ಇಲ್ಲ.

ತಾಂ ದೃಷ್ಟ್ವಾ ಪಾಂಡುಪುತ್ರಸ್ಯ ಶ್ರಿಯಂ ಪರಮಿಕಾಮಹಮ್ ।
ಶಾಂತಿಂ ನ ಪರಿಗಚ್ಛಾಮಿ ದಹ್ಯಮಾನೇನ ಚೇತಸಾ ॥೫೮॥

ಪಾಂಡುಪುತ್ರನ ಆ ಸರ್ವೋತ್ತಮವಾದ ಸಂಪತ್ತನ್ನು ನೋಡಿ ಮನಸ್ಸು ಉರಿಯುತ್ತಿದೆ. ನನಗೆ ಶಾಂತಿಯು ದೊರಕುತ್ತಿಲ್ಲ.

ಅಪ್ರಾಪ್ಯ ಪಾಂಡವೈಶ್ವರ್ಯಂ ಶಮೋ ಮಮ ನ ವಿದ್ಯತೇ ।
ಅಧನ್ಯಾನ್ ಪಾತಯೇ ಬಾಣೈಃ ಶಯಿಷ್ಯೇ ವಾ ಹತಃ ಪರೈಃ ॥೫೯॥

ಆ ಪಾಂಡವೈಶ್ಯರ್ಯವನ್ನು ಸಂಪಾದಿಸದೆ ನನ್ನ ಮನಸ್ಸಿಗೆ ಸಮಾದಾನವಾಗುವುದಿಲ್ಲ. ಆ ಅಧನ್ಯರಾದ ಅವರನ್ನು ನನ್ನ ಬಾಣಗಳಿಂದ ಹೊಡೆದು ಉರುಳಿಸುತ್ತೇನೆ. ಅಥವಾ ಅವರಿಂದ ಕೊಲ್ಲಲ್ಪಟ್ಟು ಭೂಮಿಯ ಮೇಲೆ ಮಲಗುತ್ತೇನೆ.

ಅತಾದೃಶಸ್ಯ ಮೇ ಕಿಂ ನು ಜೀವಿತೇನ ಪರಂತಪ ।
ವರ್ಧಂತೇ ಪಾಂಡವಾ ರಾಜನ್ ವಯಂ ಹಿ ಸ್ಥಿತವೃದ್ಧಯಃ ॥೬೦॥

ಪರಂತಪನೇ! ಹಾಗೆ ಮಾಡದಿದ್ದರೆ ನಾನು ಬದುಕಿ ಏನು ಫಲ? ರಾಜನೇ! ಪಾಂಡವರು ಅಭಿವೃದ್ಧಿಯನ್ನು ಹೊಂದುತ್ತಿದ್ದಾರೆ. ನಮ್ಮ ಅಭಿವೃದ್ಧಿಯು ಸ್ಥಗಿತವಾಗಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಏಕಸಪ್ತತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ತೃತೀಯೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಪ್ಪತ್ತೊಂದನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ನ್ಯವಾರಯತ್ ತಂ ವಿದುರೋ ಮಹತ್ ತೇ
ಪಾಪಂ ಕುಲಸ್ಯಾಪಿ ವಿನಾಶಕೋಽಯಂ ।
ಸಮುದ್ಯಮೋ ನಾತ್ರ ವಿಚಾರ್ಯಮಸ್ತಿ
ಕೃಥಾ ನ ತಸ್ಮಾದಯಶಶ್ಚ ತೇ ಸ್ಯಾತ್ ॥೩೦೭॥

ವಿದುರ ಧೃತರಾಷ್ಟ್ರನನ್ನು ತಡೆಯಲು ಯತ್ನಿಸಿದ- 'ನಿನಗೆ ಇದರಿಂದ ಮಹಾಪಾಪ ಬರುವುದು. ಕುಲಕ್ಕೂ ನಾಶಕವಾದ ಯತ್ನ ಇದು. ಇದರಲ್ಲಿ ವಿಚಾರ ಮಾಡಬೇಕಾದುದು ಏನೂ ಇಲ್ಲ. ಅದರಿಂದ ಮಾಡಲೇಬೇಡ. ನಿನಗೆ ಅಪಕೀರ್ತಿಯೂ ಬರುವುದು'.

ಇತಿ ಬ್ರುವಾಣಂ ಕಲಹೋಽತ್ರ ನ ಸ್ಯಾ-
ನ್ನಿವಾರಯಾಮೋ ವಯಮೇವ ಯಸ್ಮಾತ್ ।
ದ್ರಷ್ಟುಂ ಸುತಾನ್ ಕ್ರೀಡತ ಏಕಸಂಸ್ಥಾ-
ನಿಚ್ಛಾಮಿ ಪಾರ್ಥಾಂಶ್ಚ ಸುಯೋಧನಾದೀನ್ ॥೩೦೮॥

ವಿದುರ ಹೀಗೆ ಹೇಳಿದಾಗ ಧೃತರಾಷ್ಟ್ರನೆಂದ. 'ಜೂಜಿನಲ್ಲಿ ಕಲಹವಾಗದು. ನಾವೇ ತಡೆಯುತ್ತೇವೆ. ಪಾಂಡವರೂ ದುರ್ಯೋಧನಾದಿಗಳೂ ನಮ್ಮ ಮಕ್ಕಳು. ಅವರು ಒಂದೆಡೆ ಕುಳಿತು ಆಟವಾಡುವುದನ್ನು ನಾನು ನೋಡಲು ಬಯಸುತ್ತೇನೆ.

ಅತಃ ಕ್ಷಿಪ್ರಮುಪಾನೇಯಾಃ ಪಾರ್ಥಾ ಇತಿ ಬಲೋದಿತಃ ।
ಯಯೌ ಸ ವಿದುರಃ ಪಾರ್ಥಾನ್ ದ್ವಾರಕಾಂ ಕೇಶವೇ ಗತೇ ॥೩೦೯॥

ಅದರಿಂದ ಬೇಗನೆ ಪಾಂಡವರನ್ನು ಇಲ್ಲಿಗೆ ಕರೆದು ತಾ ಎಂದು ಧೃತರಾಷ್ಟ್ರ ಬಲವಾಗಿ ಹೇಳಿದಾಗ ವಿದುರ ಪಾಂಡವರ ಬಳಿಗೆ ನಡೆದ. ಆಗ ಶ್ರೀಕೃಷ್ಣ ಇಂದ್ರಪ್ರಸ್ಥದಲ್ಲಿ ಇರಲಿಲ್ಲ, ದ್ವಾರಕೆಗೆ ಹೋಗಿದ್ದ.

★ ★ ★ ★

ಎಪ್ಪತ್ತೆರಡನೆಯ ಅಧ್ಯಾಯ

(ದುರ್ಯೋಧನನಿಂದ ವಶೀಕೃತನಾದ ಧೃತರಾಷ್ಟ್ರನಿಂದ ಧರ್ಮರಾಜನನ್ನು ಕರೆತರಲು ವಿದುರನ ಪ್ರೇಷಣೆ.)

ಶಕುನಿಃ

ಯಾಮೇತಾಮುತ್ತಮಾಂ ಲಕ್ಷ್ಮೀಂ ದೃಷ್ಟವಾನಸಿ ಪಾಂಡವೇ ।
ತಸ್ಯಾಃ ಪ್ರಾಪ್ತಾವುಪಾಯಂ ಮೇ ಶೃಣು ಸತ್ಯಪರಾಕ್ರಮ ॥೧॥

ಸತ್ಯಪರಾಕ್ರಮನಾದ ದುರ್ಯೋಧನನೇ! ಧರ್ಮರಾಜನ ಯಾವ ಉತ್ತಮವಾದ ಸಂಪತ್ತನ್ನು ನೋಡಿದ್ದೀಯೊ ಅದರ ಪ್ರಾಪ್ತಿಗೆ ಉಪಾಯವನ್ನು ಹೇಳುತ್ತೇನೆ ಕೇಳು.

ಅಹಮಕ್ಷೇಷ್ವಭಿಜ್ಞೋ ಹಿ ಪೃಥಿವ್ಯಾಮಪಿ ಭಾರತ ।
ಹೃದಯಜ್ಞಃ ಪಣಜ್ಞಶ್ಚ ವಿಶೇಷಜ್ಞಶ್ಚ ದೇವನೇ ॥೨॥

ಎಲೈ ಭಾರತನೇ! ನಾನು ಪಗಡೆಯಾಟದಲ್ಲಿ ನಿಷ್ಣಾತನಾದವನೆಂದು ಭೂಮಿಯಲ್ಲೇ ಪ್ರಸಿದ್ಧನಾದವನು. ನಾನು ಆಟದ ಹೃದಯವನ್ನೂ ಪಣಕ್ಕಿಡುವ ರೀತಿಯನ್ನೂ ಆಡುವ ಕ್ರಮವನ್ನೂ ವಿಶೇಷವಾಗಿ ತಿಳಿದಿದ್ದೇನೆ.

ದ್ಯೂತಪ್ರಿಯಶ್ಚ ಕೌಂತೇಯೋ ನ ಚ ಜಾನಾತಿ ದೇವಿತುಮ್ ।
ಆಹೂತಶ್ಚೈಷ್ಯತಿ ವ್ಯಕ್ತಂ ದೀವ್ಯಾವೇತ್ಯಾಹ್ವಯ ಸ್ವಯಮ್ ॥೩॥

ಧರ್ಮರಾಜನು ದ್ಯೂತಪ್ರಿಯ. ಆದರೆ ಅವನಿಗೆ ಪಗಡೆಯಾಡಲು ಬರುವುದಿಲ್ಲ. ಅವನನ್ನು ಆಹ್ವಾನಿಸಿದರೆ ಅವನು ನಿಶ್ಚಿತವಾಗಿ ಬರುತ್ತಾನೆ. ಆಡೋಣ ಎಂದು ಹೇಳಿ ನೀನೇ ಅವನನ್ನು ಆಹ್ವಾನಿಸು.

ಏವಮುಕ್ತಃ ಶಕುನಿನಾ ರಾಜಾ ದುರ್ಯೋಧನಸ್ತದಾ ।
ಧೃತರಾಷ್ಟ್ರಂ ನರವ್ಯಾಘ್ರಮಪದಾಂತರಮಬ್ರವೀತ್ ॥೪॥

ಶಕುನಿಯಿಂದ ಹೀಗೆ ಹೇಳಲ್ಪಟ್ಟ ರಾಜನಾದ ದುರ್ಯೋಧನನು ಆಗ ನರವ್ಯಾಘ್ರನಾದ ಧೃತರಾಷ್ಟ್ರನನ್ನು ಕುರಿತು ಅವನಿಗೆ ಮಾತನಾಡಲು ಅವಕಾಶವನ್ನು ನೀಡದೆ ಹೀಗೆ ಮಾತನಾಡಿದನು.

ಅಯಮುತ್ಸಹತೇ ರಾಜನ್ ಶ್ರಿಯಮಾಹರ್ತುಮಕ್ಷವಿತ್ ।
ದ್ಯೂತೇನ ಪಾಂಡುಪುತ್ರಸ್ಯ ತದನುಜ್ಞಾತುಮರ್ಹಸಿ ॥೫॥

ರಾಜನೇ! ಅಕ್ಷಜ್ಞನಾದ ಇವನು ದ್ಯೂತದಲ್ಲಿ ಪಾಂಡುಪುತ್ರನಾದ ಧರ್ಮರಾಜನ ಸಂಪತ್ತನ್ನು ದೊಚಿಕೊಳ್ಳುವ ಉತ್ಸಾಹದಲ್ಲಿ ಇದ್ದಾನೆ. ಅದಕ್ಕೆ ಅನುಮತಿಯನ್ನು ಕೊಡು.

ಧೃತರಾಷ್ಟ್ರಃ

ಕ್ಷತ್ತಾ ಮಂತ್ರೀ ಮಹಾಪ್ರಾಜ್ಞಃ ಸ್ಥಿತೋ ಯಸ್ಯಾಸ್ಮಿ ಶಾಸನೇ ।
ತೇನ ಸಂಗಮ್ಯ ವೇತ್ಸ್ಯಾಮಿ ಕಾರ್ಯಾಕಾರ್ಯವಿನಿಶ್ಚಯಮ್ ॥೬॥

ಮಹಾಪ್ರಾಜ್ಞನಾದ ವಿದುರನು ನನಗೆ ಮಂತ್ರಿಯಾಗಿದ್ದಾನೆ. ನಾನು ಯಾವಾಗಲೂ ಅವನ ಶಾಸನದಲ್ಲಿಯೇ ಇದ್ದೇನೆ. ನಾನು ಅವನ ಜೊತೆಯಲ್ಲಿ ಮಾತನಾಡಿ ಕಾರ್ಯಾಕಾರ್ಯನಿರ್ಣಯವನ್ನು ತಿಳಿಯುವೆನು.

ಸ ಹಿ ಧರ್ಮಂ ಪುರಸ್ಕೃತ್ಯ ದೀರ್ಘದರ್ಶೀ ಪರಂ ಹಿತಮ್ ।
ಉಭಯೋಃ ಪಕ್ಷಯೋಃ ಪಥ್ಯಂ ವಕ್ಷ್ಯತ್ಯರ್ಥವಿನಿಶ್ಚಯಮ್ ॥೭॥

ದೀರ್ಘದರ್ಶಿಯಾದ ಅವನು ಧರ್ಮವನ್ನು ಮುಂದೆಮಾಡಿಕೊಂಡು ಎರಡೂ ಪಕ್ಷಗಳಿಗೆ ಹಿತವಾಗುವ ಮತ್ತು ಪಥ್ಯವಾದ ಅರ್ಥ ನಿಶ್ಚಯವನ್ನು ಹೇಳುವನು.

ಅಥವಾ ವಾಸುದೇವಂ ವಾ ಭೀಷ್ಮಂ ವಾ ಕಾರ್ಯನಿಶ್ಚಯೇ ।
ಆಹೂಯ ಮಂತ್ರಣಂ ಕುರ್ಯಾಂ ಕಥಂ ವ್ಯವಸಿತಂ ತವ ॥೮॥

ಅಥವಾ ಕೃಷ್ಣನನ್ನಾಗಲೀ ಭೀಷ್ಮನನ್ನಾಗಲೀ ಕರೆದು ಕಾರ್ಯಾಕಾರ್ಯ ವಿಷಯದಲ್ಲಿ ಮಂತ್ರಾಲೋಚನೆಯನ್ನು ಮಾಡುವೆನು. ಇದರಲ್ಲಿ ನಿನ್ನ ಅಭಿಪ್ರಾಯವು ಹೇಗಿದೆ?

ದುರ್ಯೋಧನಃ

ನಿವರ್ತಯಿಷ್ಯತಿ ತ್ವಾಽಸೌ ಯದಿ ಕ್ಷತ್ತಾ ಸಮೇಷ್ಯತಿ ।
ನಿವೃತ್ತೇ ತ್ವಯಿ ರಾಜೇಂದ್ರ ಮರಿಷ್ಯಾಮಿ ನ ಸಂಶಯಃ ॥೯॥

ರಾಜೇಂದ್ರನೇ! ವಿದುರನು ಬಂದರೆ ನಿನ್ನನ್ನು ಈ ಪ್ರಯತ್ನದಿಂದ ಹಿಂದಿರುಗಿಸುವನು. ನೀನು ಹಿಮ್ಮೆಟ್ಟಿದರೆ ನಾನು ನಿಸ್ಸಂಶಯವಾಗಿ ಮರಣವನ್ನು ಹೊಂದುವೆನು.

ಸ ತ್ವಂ ಮಯಿ ಮೃತೇ ರಾಜನ್ ವಿದುರೇಣ ಸುಖೀ ಭವ ।
ಭೋಕ್ಷ್ಯಸೇ ಪೃಥಿವೀಂ ಕೃತ್ಸ್ನಾಂ ಕಿಂ ಮಯಾ ತ್ವಂ ಕರಿಷ್ಯಸಿ ॥೧೦॥

ರಾಜನೇ! ನಾನು ಮೃತನಾದ ಮೇಲೆ ನೀನು ವಿದುರನ ಜೊತೆಯಲ್ಲಿ ಸುಖವಾಗಿರು. ಸಮಗ್ರ ಭೂಮಿಯನ್ನು ಭೋಗಿಸಿಕೊಂಡಿರಬಹುದು. ನಿನಗೆ ನನ್ನಿಂದ ಏನು ಪ್ರಯೋಜನ?

ವೈಶಂಪಾಯನಃ

ಆರ್ತವಾಕ್ಯಂ ತು ತತ್ ತಸ್ಯ ಪ್ರಣಯೋಕ್ತಂ ನಿಶಮ್ಯ ಸಃ ।
ದುರ್ಯೋಧನಸ್ಯ ಶಾಂತ್ಯರ್ಥಂ ಧೃತರಾಷ್ಟ್ರೋಽನ್ವಶಾತ್ ತದಾ ॥೧೧॥

ಪ್ರೀತಿಯಿಂದ ಹೇಳಿದ ದುರ್ಯೋಧನನ ಆರ್ತವಾಕ್ಯವನ್ನು ಕೇಳಿ ಧೃತರಾಷ್ಟ್ರನು ಅವನನ್ನು ಉಪಶಮನಗೊಳಿಸುವ ಸಲುವಾಗಿ ಹೀಗೆ ಶಾಸನವನ್ನು ಮಾಡಿದನು.

ಸ್ಥೂಣಾಸಹಸ್ರೈರ್ಮಹತೀಂ ಶತದ್ವಾರಾಂ ಸಭಾಂ ಮಮ ।
ಮನೋಹರಾಂ ದರ್ಶನೀಯಾಮಾಶು ಕುರ್ವಂತು ಶಿಲ್ಪಿನಃ ॥೧೨॥

ನನ್ನ ಶಿಲ್ಪಿಗಳು ನನ್ನ ಸಲುವಾಗಿ ಸಹಸ್ರ ಸ್ಥಂಭಗಳನ್ನು ಹೊಂದಿದ ಶತದ್ವಾರಗಳನ್ನು ಹೊಂದಿದ ಸುಂದರವಾದ ದೊಡ್ಡದಾದ ಸಭೆಯನ್ನು ಬೇಗೆ ನಿರ್ಮಾಣಮಾಡಲಿ.

ತತಃ ಸಂಸ್ತೀರ್ಯ ರತ್ನೈಸ್ತಾಮಕ್ಷಾನ್ ಸಂಸ್ಥಾಪ್ಯ ಸರ್ವಶಃ।
ಸಂಸ್ಕೃತಾಂ ಸುಪ್ರವೇಶಾಂ ಚ ನಿವೇದಯತ ಮಾ ಚಿರಮ್ ॥೧೩॥

ಅನಂತರ ಆ ಸಭೆಯನ್ನು ಎಲ್ಲ ಕಡೆಯಲ್ಲಿಯೂ ರತ್ನಗಳಿಂದ ಅಲಂಕರಿಸಿ ಎಲ್ಲಾ ಕಡೆಯೂ ಪಗಡೆಯ ಆಟಕ್ಕೆ ಅನುವುಮಾಡಿ ಸಭೆಯು ಸುಂಸ್ಕೃತವಾಗಿದೆ ಮತ್ತು ಸುಸಜ್ಜಿತವಾಗಿದೆ ಎಂದು ನನಗೆ ನಿವೇದಿಸಿ. ತಡಮಾಡಬೇಡಿ.

ವೈಶಂಪಾಯನಃ

ದುರ್ಯೋಧನಸ್ಯ ಶಾಂತ್ಯರ್ಥಮಿತಿ ನಿಶ್ಚತ್ಯ ಭೂಮಿಪಃ ।
ಧೃತರಾಷ್ಟ್ರೋ ಮಹಾರಾಜ ಪ್ರಾಹಿಣೋದ್ ವಿದುರಾಯ ವೈ ॥೧೪॥

ರಾಜನಾದ ಧೃತರಾಷ್ಟ್ರನು ದುರ್ಯೋಧನನ ಶಾಂತ್ಯರ್ಥವಾಗಿ ಹೀಗೆ ನಿಶ್ಚಯವನ್ನು ಮಾಡಿ ವಿದುರನನ್ನು ಕರೆತರಲು ದೂತರನ್ನು ಕಳುಹಿಸಿದನು.

ಅಪೃಷ್ಟ್ವಾ ವಿದುರಂ ಹ್ಯಸ್ಯ ನಾಸೀತ್ ಕಶ್ಚಿದ್ ವಿನಿರ್ಣಯಃ ।
ದ್ಯೂತೇ ದೋಷಾಂಶ್ಚ ಜಾನನ್ ಸ ಪುತ್ರಸ್ನೇಹಾದಕೃಷ್ಯತ ॥೧೫॥

ವಿದುರನನ್ನು ಕೇಳದೆ ಅವನು ಯಾವ ನಿರ್ಧಾರವನ್ನು ತೆಗೆದುಕೊಳ್ಳುತ್ತಿರಲಿಲ್ಲ. ದ್ಯೂತದ ದೋಷಗಳನ್ನು ತಿಳಿದವನಾಗಿದ್ದರೂ ಪುತ್ರಸ್ನೇಹದಿಂದ ಅವನು ಆಕೃಷ್ಟನಾದನು.

ತಚ್ಚ್ರುತ್ವಾ ವಿದುರೋ ಧೀಮಾನ್ ಕಲಿದ್ವಾರಮುಪಸ್ಥಿತಮ್ ।
ವಿನಾಶಮುಖಮುತ್ಪನ್ನಂ ಧೃತರಾಷ್ಟ್ರಮುಪಾದ್ರವತ್ ॥೧೬॥

ಅದನ್ನು ಕೇಳಿದ ಮೇಧಾವಿಯಾದ ವಿದುರನು ಕಲಹದ್ವಾರವು ಉಪಸ್ಥಿತವಾಗಿದೆ ಎಂದೂ ವಿನಾಶದ ದ್ವಾರವು ಸನ್ನಿಹಿತವಾಗಿದೆ ಎಂದೂ ತಿಳಿದು ಶೀಘ್ರವಾಗಿ ಧೃತರಾಷ್ಟ್ರನಿದ್ದ ಕಡೆಗೆ ಬಂದನು.

ಸೋಽಭಿಗಮ್ಯ ಮಹಾತ್ಮಾನಂ ಭ್ರಾತಾ ಭ್ರಾತರಮಗ್ರಜಮ್ ।
ಮೂರ್ಧ್ನಾ ಪ್ರಣಮ್ಯ ಚರಣಾವಿದಂ ವಚನಮಬ್ರವೀತ್ ॥೧೭॥

ತಮ್ಮನಾದ ಅವನು ಬೇಗ ಬಂದು ಮಹಾತ್ಮನಾದ ಅಣ್ಣನ ಪಾದಗಳಿಗೆ ಶಿರಸಾ ನಮಸ್ಕರಿಸಿ ಈ ಮಾತನ್ನು ಆಡಿದನು.

ನಾಭಿನಂದಾಮಿ ತೇ ರಾಜನ್ ವ್ಯವಸಾಯಮಿಮಂ ಪ್ರಭೋ ।
ದ್ಯೂತಹೇತೋರ್ಹಿ ತೇ ಭೇದಃ ಸುತಾನಾಂ ಭವತಿ ಧ್ರುವಮ್ ।
ಪುತ್ರೈರ್ಭೇದೋ ಯಥಾ ನ ಸ್ಯಾದ್ ದ್ಯೂತಹೇತೋಸ್ತಥಾ ಕುರು ॥೧೮॥

ರಾಜನೇ! ನಿನ್ನ ಈ ನಿಶ್ಚಯವನ್ನು ನಾನು ಅನುಮೋದಿಸುವುದಿಲ್ಲ ಪ್ರಭುವೇ! ದ್ಯೂತದ ನಿಮಿತ್ತದಿಂದಾಗಿ ಪುತ್ರರಿಗೆ ಅವಶ್ಯವಾಗಿ ವಿರೋಧವು ಉಂಟಾಗುತ್ತದೆ. ದ್ಯೂತದ ನಿಮಿತ್ತದಿಂದಾಗಿ ಮಕ್ಕಳಲ್ಲಿ ವಿರೋಧವು ಉಂಟಾಗದಂತೆ ಏನಾನ್ನಾದರೂ ಮಾಡು.

ಧೃತರಾಷ್ಟ್ರಃ

ಕ್ಷತ್ತಃ ಪುತ್ರೇಷು ಪುತ್ರೈರ್ಮೇ ಕಲಹೋ ನ ಭವಿಷ್ಯತಿ ।
ಏವಂ ದೇವಾಃ ಪ್ರಸಾದಂ ನಃ ಕರಿಷ್ಯಂತಿ ನ ಸಂಶಯಃ ॥೧೯॥

ವಿದುರನೇ! ಪಾಂಡುವಿನ ಪುತ್ರರಿಗೂ ಮತ್ತು ನನ್ನ ಪುತ್ರರಿಗೂ ಕಲಹವು ಉಂಟಾಗುವುದಿಲ್ಲ. ಹೀಗೆ ದೇವತೆಗಳು ಅನುಗ್ರಹಿಸುವರು. ಇದರಲ್ಲಿ ಸಂಶಯವಿಲ್ಲ.

ಮಯಿ ಸನ್ನಿಹಿತೇ ಚೈವ ಭೀಷ್ಮೇ ಚ ಪುರುಷರ್ಷಭೇ ।
ಅನಯೋ ವಾ ಶುಭಂ ವಾಪಿ ಹಿತಂ ವಾಽಪ್ಯಥವಾಽಹಿತಮ್ ।
ಪ್ರವರ್ತತಾಂ ಸುಹೃದ್ದ್ಯೂತಂ ದಿಷ್ಟಮೇತದಸಂಶಯಮ್ ॥೨೦॥

ನಾನು ಮತ್ತು ಪುರುಷರ್ಷಭನಾದ ಭೀಷ್ಮನು ಅಲ್ಲಿ ಸನ್ನಿಹಿತರಾಗಿರುವಾಗ (ವಿರೋಧವು ಉಂಟಾಗುವುದಿಲ್ಲ). ಅದು ನ್ಯಾಯವಾಗಲಿ ಅಥವಾ ಅನ್ಯಾಯವಾಗಲಿ ಹಿತವಾಗಲಿ ಅಥವಾ ಅಹಿತವಾಗಲಿ ಶುಭವಾಗಲಿ ಅಥವಾ ಅಶುಭವಾಗಲಿ

ಸುಹೃದ್ಭೃತವು ಜರುಗಲಿ. ಇದು ದೈವ ನಿಯತವಾದದ್ದು ಎಂಬುದರಲ್ಲಿ ಸಂಶಯವಿಲ್ಲ.

ಗಚ್ಛ ತ್ವಂ ರಥಮಾಸ್ಥಾಯ ಹಯೈರ್ವಾತಸಮೈರ್ಜವೇ ।
ಖಾಂಡವಪ್ರಸ್ಥಮದ್ಯೈವ ಯುಧಿಷ್ಠಿರಮಿಹಾನಯ ॥೨೧॥

ನೀನು ವಾಯುವೇಗವನ್ನು ಹೊಂದಿದ ಅಶ್ವಗಳನ್ನು ಹೂಡಿದ ರಥದಲ್ಲಿ ಕುಳಿತು ಖಾಂಡವಪ್ರಸ್ಥಕ್ಕೆ ಹೋಗಿ ಧರ್ಮರಾಜನನ್ನು ಈ ದಿನವೇ ಇಲ್ಲಿಗೆ ಕರೆದುಕೊಂಡು ಬಾ.

ನ ವಾರ್ಯೋ ವ್ಯವಸಾಯೋ ಮೇ ವಿದುರೈತದ್ ಬ್ರವೀಮಿ ತೇ ।
ದೈವಮತ್ರ ಪರಂ ಮನ್ಯೇ ಯೇನೈತದುಪಪದ್ಯತೇ ॥೨೨॥

ವಿದುರನೇ! ನನ್ನ ನಿಶ್ಚಯವನ್ನು ನೀನು ನಿವಾರಿಸಕೂಡದು. ಇದನ್ನು ನಾನು ನಿನಗೆ ಹೇಳುತ್ತಿದ್ದೇನೆ. ದೈವವೇ ಇಲ್ಲಿ ಪ್ರಬಲವೆಂದು ಭಾವಿಸುತ್ತೇನೆ. ದೈವೇಚ್ಛೆಯಿಂದಲೇ ಈ ಕಾರ್ಯವು ಜರುಗುತ್ತಿದೆ.

ವೈಶಂಪಾಯನಃ

ಇತ್ಯುಕ್ತೋ ವಿದುರೋ ಧೀಮಾನ್ ನೈತದಸ್ತೀತಿ ಚಿಂತಯನ್ ।
ಆಪಗೇಯೇ ಮಹಾಪ್ರಾಜ್ಞೇ ಸರ್ವಮೇತನ್ನಿವೇದಯತ್ ॥೨೩॥

ಹೀಗೆ ಹೇಳಲ್ಪಟ್ಟ ಮೇಧಾವಿಯಾದ ವಿದುರನು ಇದು ಸರಿಯಲ್ಲ ಎಂದು ಯೋಚಿಸುತ್ತಾ ಮಹಾಪ್ರಾಜ್ಞರಾದ ಭೀಷ್ಮರಿಗೆ ಈ ಎಲ್ಲಾ ವಿಷಯಗಳನ್ನೂ ನಿವೇದಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ದ್ವಿಸಪ್ತತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ಚತುರ್ಥೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಪ್ಪತ್ತೆರಡನೆಯ ಅಧ್ಯಾಯವು ಮುಗಿಯಿತು.

★★★★★

ಎಪ್ಪತ್ಮೂರನೆಯ ಅಧ್ಯಾಯ

(ಏಕಾಂತದಲ್ಲಿ ತನ್ನನ್ನು ಸಮಾಧಾನ ಮಾಡಲು ಹೊರಟ ಧೃತರಾಷ್ಟ್ರನಿಗೆ ದುರ್ಯೋಧನನಿಂದ ತನಗೆ ಆದ ಅವಮಾನದ ವರ್ಣನೆ.)

ಜನಮೇಜಯಃ

ಕಥಂ ಸಮಭವದ್ ದ್ಯೂತಂ ಭ್ರಾತೄಣಾಂ ತನ್ಮಹಾತ್ಯಯಮ್ ।
ಯತ್ರ ತದ್ ವ್ಯಸನಂ ಪ್ರಾಪ್ತಂ ಪಾಂಡವೈರ್ಮೇ ಪಿತಾಮಹೈಃ ॥೧॥

ನನ್ನ ಪಿತಾಮಹರಾದ ಪಾಂಡವರು ವ್ಯಸನವನ್ನು ಹೊಂದಿದಂತಹ ಧರ್ಮದ ಮಹದತಿಕ್ರಮವಾದ ಅಣ್ಣತಮ್ಮಂದಿರ ಆ ದ್ಯೂತವು ಹೇಗೆ ಸಂಭವಿಸಿತು?

ಯೇ ಚ ತತ್ರ ಸಭಾಸ್ತಾರಾ ರಾಜಾನೋ ಬ್ರಹ್ಮವಿತ್ತಮ ।
ಕೇ ಚೈನಮನುಮೋದಂತೇ ಕೇ ಚೈನಂ ಪ್ರತ್ಯಷೇಧಯನ್ ॥೨॥

ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ ವೈಶಂಪಾಯನರೇ ! ಅಲ್ಲಿ ಯಾವ ರಾಜರು ಸಭ್ಯರಾಗಿದ್ದರು? ದ್ಯೂತವನ್ನು ಅನುಮೋದಿಸಿದವರು ಯಾರು? ದ್ಯೂತವನ್ನು ಪ್ರತಿಷೇಧಿಸಿದವರು ಯಾರು?

ವಿಸ್ತರೇಣೈತದಿಚ್ಛಾಮಿ ಕಥ್ಯಮಾನಂ ತ್ವಯಾ ದ್ವಿಜ ।
ಮೂಲಂ ಹ್ಯೇತದ್ ವಿನಾಶಸ್ಯ ಪೃಥಿವ್ಯಾಂ ದ್ವಿಜಸತ್ತಮ ॥೩॥

ಬ್ರಾಹ್ಮಣ ಶ್ರೇಷ್ಠರೇ! ಇದನ್ನು ವಿಸ್ತಾರವಾಗಿ ನಿಮ್ಮ ಮುಖದಿಂದ ಕೇಳಲು ಬಯಸುತ್ತೇನೆ. ಭೂಮಿಯಲ್ಲಿ ಈ ದ್ಯೂತವೇ ವಿನಾಶಕ್ಕೆ ಮೂಲವಾಯಿತಷ್ಟೇ ?

ಸೂತಃ

ಏವಮುಕ್ತಸ್ತು ರಾಜ್ಞಾ ಸ ವ್ಯಾಸಶಿಷ್ಯೋ ಮಹಾಮುನಿಃ ।
ಆಚಚಕ್ಷೇ ಯಥಾವೃತ್ತಂ ತತ್ ಸರ್ವಂ ಸರ್ವವೇದವಿತ್ ॥೪॥

ಜನಮೇಜಯನೇ! ಹೀಗೆ ಹೇಳಲ್ಪಟ್ಟ ಮಹಾಮುನಿಗಳೂ ಸರ್ವ ವೇದವನ್ನು ತಿಳಿದವರೂ. ವ್ಯಾಸಶಿಷ್ಯರೂ ಆದ ವೈಶಂಪಾಯನರು ನಡೆದುದೆಲ್ಲವನ್ನು ವಿಸ್ತಾರವಾಗಿ ತಿಳಿಸಿದರು.

ವೈಶಂಪಾಯನಃ

ಶೃಣು ಮೇ ವಿಸ್ತರೇಣೇಮಾಂ ಕಥಾಂ ಭರತಸತ್ತಮ ।
ಭೂಯ ಏವ ಮಹಾರಾಜ ಯದಿ ತೇ ಶ್ರವಣೇ ಮತಿಃ ॥೫॥

ಭರತಶ್ರೇಷ್ಠನಾದ ಮಹಾರಾಜನೇ! ನಿನಗೆ ಕೇಳುವ ಆಸೆಯಿದ್ದರೆ ನಾನು ಹೇಳುವ ವಿಸ್ತಾರವಾದ ಈ ಕಥೆಯನ್ನು ಇನ್ನೊಮ್ಮೆ ಕೇಳು.

ವಿದುರಸ್ಯ ಮತಂ ಜ್ಞಾತ್ವಾ ಧೃತರಾಷ್ಟ್ರೋಂಬಿಕಾಸುತಃ ।
ದುರ್ಯೋಧನಮಿದಂ ವಾಕ್ಯಮುವಾಚ ವಿಜನೇ ಪುನಃ ॥೬॥

ವಿದುರನ ಅಭಿಪ್ರಾಯವನ್ನು ತಿಳಿದ ಅಂಬಿಕಾಪುತ್ರನಾದ ಧೃತರಾಷ್ಟ್ರನು ದುರ್ಯೋಧನನನ್ನು ಏಕಾಂತದಲ್ಲಿ ಕರೆದು ಪುನಃ ಈ ಮಾತುಗಳನ್ನು ಆಡಿದನು.

ಅಲಂ ದ್ಯೂತೇನ ಗಾಂಧಾರೇ ವಿದುರೋ ನ ಪ್ರಶಂಸತಿ ।
ನ ಹ್ಯಸೌ ಸುಮಹಾಬುದ್ಧಿರಹಿತಂ ನೋ ವದಿಷ್ಯತಿ ॥೭॥

ಗಾಂಧಾರಿಯ ಪುತ್ರನೇ! ದ್ಯೂತವನ್ನು ನಿಲ್ಲಿಸು. ವಿದುರನು ದ್ಯೂತವನ್ನು ಪ್ರಶಂಸಿಸುವುದಿಲ್ಲ. ಮಹಾಮೇಧಾವಿಯಾದ ಇವನು ನಮಗೆ ಎಂದೂ ಅಹಿತವನ್ನು ಹೇಳುವುದಿಲ್ಲ.

ಹಿತಂ ಹಿ ವಿದುರಂ ಮನ್ಯೇ ವಿದುರೋ ಯತ್ ಪ್ರಭಾಷತೇ ।
ಕ್ರಿಯತಾಂ ಪುತ್ರ ತತ್ ಸರ್ವಮೇತನ್ಮನ್ಯೇ ಹಿತಂ ತವ ॥೮॥

ಪುತ್ರನೇ ವಿದುರನು ಯಾವಾಗಲೂ ನಮಗೆ ಹಿತನಾದವನು ಎಂದು ತಿಳಿದಿದ್ದೇನೆ. ವಿದುರನು ಹೇಗೆ ಹೇಳುತ್ತಾನೋ ಅದರಂತೆ ಮಾಡು. ಅದೆಲ್ಲವೂ ನಿನಗೂ ಹಿತವಾಗುತ್ತದೆ.

ದೇವರ್ಷಿರ್ವಾಸವಗುರುರ್ದೇವರಾಜಾಯ ಧೀಮತೇ ।
ಯತ್ ಪ್ರಾಹ ಶಾಸ್ತ್ರಂ ಸುಮಹದ್ ಬೃಹಸ್ಪತಿರುದಾರಧೀಃ ।
ತದ್ ವೇದ ವಿದುರಃ ಕೃತ್ಸ್ನಂ ಸರಹಸ್ಯಂ ಮಹಾಕವಿಃ ॥೯॥

ದೇವರ್ಷಿಗಳೂ ಇಂದ್ರನ ಗುರುಗಳೂ ಉದಾರಬುದ್ಧಿಯುಳ್ಳವರೂ ಆದ ಬೃಹಸ್ಪತ್ಯಾಚಾರ್ಯರು. ಮೇಧಾವಿಯಾದ ದೇವರಾಜನಿಗೆ ಯಾವ ವಿಸ್ತಾರವಾದ ನೀತಿಶಾಸ್ತ್ರವನ್ನು ಹೇಳಿದ್ದಾರೋ ಮಹಾಕವಿಯಾದ ವಿದುರನು ಆ ಎಲ್ಲಾ ಶಾಸ್ತ್ರವನ್ನೂ ಅದರ ರಹಸ್ಯ ತತ್ವಗಳೊಡನೆ ತಿಳಿದಿದ್ದಾನೆ.

ಸ್ಥಿತೋಽಸ್ಮಿ ವಚನೇ ತಸ್ಯ ಸದಾऽಹಮಪಿ ಪುತ್ರಕ ।
ವಿದುರಶ್ಚಾಪಿ ಮೇಧಾವೀ ಕುರೂಣಾಂ ಪ್ರವರೋ ಮತಃ ।
ಉದ್ಧವೋ ವಾ ಮಹಾಬುದ್ಧಿರ್ವೃಷ್ಣೀನಾಮರ್ಚಿತಃ ಕವಿಃ ॥೧೦॥

ಪುತ್ರನೇ! ನಾನು ಯಾವಾಗಲೂ ಅವನ ಮಾತಿನಂತೆ ನಡೆದುಕೊಂಡಿದ್ದೇನೆ. ವಿದುರನಾದರೂ ಮೇಧಾವಿಯಾದವನು ಮತ್ತು ಕುರುಗಳಲ್ಲಿ ಶ್ರೇಷ್ಠನಾದವನು ಎಂದು ನನ್ನ ಅಭಿಪ್ರಾಯ. ಅವನು ವೃಷ್ಣಿಗಳಲ್ಲಿ ಅರ್ಚಿತನಾದ ಜ್ಞಾನಿಯಾದ ಉದ್ಧವನಂತೆ ಮಹಾ ಮೇಧಾವಿಯಾದವನು.

ದ್ಯೂತೇನ ತದಲಂ ಪುತ್ರ ದ್ಯೂತೇ ಭೇದೋ ಹಿ ದೃಶ್ಯತೇ ।
ಭೇದೇ ವಿನಾಶೋ ರಾಜ್ಯಸ್ಯ ತತ್ ಪುತ್ರ ಪರಿವರ್ಜಯ ॥೧೧॥

ಪುತ್ರನೇ! ಆದ್ದರಿಂದ ದ್ಯೂತವನ್ನು ನಿಲ್ಲಿಸು. ದ್ಯೂತದಲ್ಲಿ ವಿರೋಧವು ಎದ್ದು ಕಾಣಿಸುತ್ತದೆ. ವಿರೋಧ ಉಂಟಾದರೆ ರಾಜ್ಯದ ವಿನಾಶವು ಉಂಟಾಗುತ್ತದೆ. ಆದ್ದರಿಂದ ಪುತ್ರನೇ ದ್ಯೂತವನ್ನು ವರ್ಜಿಸು.

ಪಿತ್ರಾ ಮಯಾ ಚ ಪುತ್ರಸ್ಯ ಯದ್ವೈ ಕಾರ್ಯಂ ಪರಂ ಸ್ಮೃತಮ್ ।
ಪಾಪ್ತಸ್ತ್ವಮಸಿ ತತ್ ತಾತ ಪಿತೃಪೈತಾಮಹಂ ಪದಮ್ ॥೧೨॥

ಪುತ್ರನಾದವನಿಗೆ ತಂದೆಯಾದವನು ಏನೇನು ಮಾಡಬೇಕೆಂದು ಹೇಳಿದ್ದಾರೋ ಅಂತಹದ್ದನ್ನೆಲ್ಲಾ ನೀನು ನನ್ನಿಂದ ಪಡೆದಿದ್ದೀಯೆ ಪುತ್ರನೇ! ಪಿತೃ ಪಿತಾಮಹರ ಸ್ಥಾನವನ್ನು ಪಡೆದಿದ್ದೀಯೆ.

ಅಧೀತವಾನ್ ಕೃತೀ ಶಾಸ್ತ್ರೇ ಲಾಳಿತಃ ಸತತಂ ಗೃಹೇ ।
ಭ್ರಾತೃಜ್ಯೇಷ್ಠಃ ಸ್ಥಿತೋ ರಾಜ್ಯೇ ವಿದ್ಯತೇ ಕಿನ್ನ್ವಶೋಭನಮ್ ॥೧೩॥

ವಿದ್ಯೆಗಳನ್ನು ಕಲಿತಿದ್ದೀಯೆ. ಶಾಸ್ತ್ರಗಳಲ್ಲಿ ನಿಪುಣನಾಗಿದ್ದೀಯೆ. ಯಾವಾಗಲೂ ಮನೆಯಲ್ಲಿ ಪ್ರೀತಿಯಿಂದ ಲಾಲನೆ ಮಾಡಲ್ಪಟ್ಟಿದ್ದೀಯೆ. ನೂರು ಜನ ಅಣ್ಣ ತಮ್ಮಂದಿರಲ್ಲಿ ಜ್ಯೇಷ್ಠನಾಗಿದ್ದೀಯೆ. ರಾಜ್ಯವನ್ನು ಅನುಭವಿಸುತ್ತಿದ್ದೀಯೆ. ನಿನಗೆ ಯಾವ ಕೊರತೆಯಿದೆ?

ಪೃಥಗ್ವಿಧೈರತುಲ್ಯಂ ಹಿ ಭೋಜನಾಚ್ಛಾದನಂ ಪರಮ್ ।
ತ್ವಂ ಪ್ರಾಪ್ತೋಽಸಿ ಮಹಾಬಾಹೋ ಕಸ್ಮಾಚ್ಛೋಚಸಿ ಪುತ್ರಕ ॥೧೪॥

ಮಹಾಬಾಹುವೇ! ಸಾಮಾನ್ಯ ಜನರಿಗೆ ಅಲಭ್ಯವಾದ ಅಶನ ವಸನಗಳನ್ನು ನೀನು ಹೊಂದಿದ್ದೀಯೆ. ಪುತ್ರನೇ! ಏಕೆ ಶೋಕಪಡುತ್ತಿದ್ದೀಯೆ?

ಸ್ಫೀತಂ ರಾಷ್ಟ್ರಂ ಮಹಾಬಾಹೋ ಪಿತೃಪೈತಾಮಹಂ ಮಹತ್ ।
ನಿತ್ಯಮಾಜ್ಞಾಪಯನ್ ಶಾಸ್ಸಿ ದಿವಿ ದೇವೇಶ್ವರೋ ಯಥಾ ॥೧೫॥

ಮಹಾಬಾಹುವೇ! ಪಿತೃಪಿತಾಮಹರಿಂದ ಬಂದ ದೊಡ್ಡದಾದ ಮತ್ತು ಪರಿಶುದ್ಧವಾದ ರಾಷ್ಟ್ರವನ್ನು ನಿತ್ಯವೂ ಆಜ್ಞೆಯನ್ನು ಮಾಡುತ್ತಾ ಇಂದ್ರನು ಸ್ವರ್ಗವನ್ನು ಆಳಿದಂತೆ ಆಳುತ್ತಿದ್ದೀಯೆ.

ಯಾದೃಶಂ ಚ ತವೈಶ್ವರ್ಯಂ ತದನ್ಯೇಷಾಂ ಸುದುರ್ಲಭಮ್ ।
ಯೇ ಚೋಪಭೋಗಾಸ್ತೇ ತಾತ ಮಯಾ ತೇ ಪರಿಕೀರ್ತಿತಾಃ ॥೧೬॥

ಪ್ರೀತಿಪಾತ್ರನೇ! ನಾನು ನಿನಗೆ ಹೇಳಿದ ನಿನ್ನ ಭೋಗಗಳು ಮತ್ತು ನಿನ್ನ ಐಶ್ವರ್ಯವು ಸಹ ಉಳಿದವರಿಗೆ ಸುದುರ್ಲಭವಾದವು.

ತಸ್ಯ ತೇ ವಿದಿತಪ್ರಜ್ಞ ಶೋಕಮೂಲಮಿದಂ ಕಥಮ್ ।
ಸಮುತ್ಥಿತಂ ದುಃಖತರಂ ತನ್ಮೇ ಶಂಸಿತುಮರ್ಹಸಿ ॥೧೭॥

ಮೇಧಾವಿಯೇ! ಅಂತಹ ನಿನಗೆ ಈ ಶೋಕಕ್ಕೆ ಕಾರಣವಾದ ದುಃಖತರವಾದ ನಿಮಿತ್ತವು ಹೇಗೆ ಉಂಟಾಯಿತು? ಎಂದು ನನಗೆ ಹೇಳು.

ದುರ್ಯೋಧನಃ

ಅಶ್ನಾಮ್ಯಾಚ್ಛಾದಯಾಮೀತಿ ಪ್ರಪಶ್ಯನ್ ಹೀನಪೌರುಷಃ ।
ನಾಮರ್ಷಂ ಕುರುತೇ ಯಸ್ತು ಪುರುಷಃ ಸೋಽಧಮಃ ಸ್ಮೃತಃ ॥೧೮॥

ಯಾವ ಪುರುಷನು ನಾನು ಊಟಮಾಡುತ್ತಿದ್ದೇನೆ ವಸ್ತ್ರಗಳನ್ನು ಧರಿಸಿದ್ದೇನೆ ಎಂದು ತಿಳಿದು ಕ್ರೋಧವನ್ನು ಮಾಡುವುದಿಲ್ಲವೋ ಅವನು ಅಧಮನೆಂದು ಹೇಳುತ್ತಾರೆ.

ನ ಮಾಂ ಪ್ರೀಣಾತಿ ಪೃಥಿವೀ ರಾಜನ್ ಸಾಧಾರಣೇ ವಿಭೋ ।
ಜ್ವಲಂತೀಮಿವ ಕೌಂತೇಯೇ ಶ್ರಿಯಂ ದೃಷ್ಟ್ವಾ ಮಹಾತ್ಮನಿ ॥೧೯॥

ಎಲೈ ರಾಜನೇ! ಮಹಾತ್ಮನಾದ ಕೌಂತೇಯನಲ್ಲಿ ಬೆಳಗುತ್ತಿರುವ ಸಂಪತ್ತನ್ನು ನೋಡಿದ ಮೇಲೆ ನನಗೆ ಸಾಧಾರಣವಾದ ಭೂಮಿಯಾಗಲೀ ಅಥವಾ ನನ್ನ ಸಾಧಾರಣವಾದ ಸಂಪತ್ತಾಗಲೀ ಸಂತೋಷವನ್ನು ಕೊಡುತ್ತಿಲ್ಲ.

ಸರ್ವಾಂ ತು ಪೃಥಿವೀಂ ದೃಷ್ಟ್ವಾ ಯುಧಿಷ್ಠಿರವಶಾನುಗಾಮ್ ।
ಸ್ಥಿರೋಽಸ್ಮಿ ಯೋಽಹಂ ಜೀವಾಮಿ ದುಃಖಾದೇತದ್ ಬ್ರವೀಮಿ ತೇ ॥

ಎಲ್ಲಾ ಭೂಮಿಯೂ ಯುಧಿಷ್ಠಿರನ ವಶವಾದದ್ದನ್ನು ನೋಡಿದ ಮೇಲೆಯೂ ನಾನು ಬದುಕಿದ್ದೇನೆ. ನನ್ನ ಹೃದಯವು ಅಷ್ಟು ಗಟ್ಟಿಯೆಂದು ತಿಳಿ. ನಾನು ದುಃಖದಿಂದ ಈ ಮಾತನ್ನು ಆಡುತ್ತಿದ್ದೇನೆ.

ಅಪಜೀವಾ ಇವಾಭಾಂತಿ ನಿಷ್ಠಾಃ ಕಿಂಕರಕಾ ಸ್ತಥಾ ।
ಕಾರಸ್ಕರಾ ಲೋಹಜಂಘಾ ಯುಧಿಷ್ಠಿರನಿವೇಶನೇ ॥೨೧॥

ಯುಧಿಷ್ಠಿರ ಮನೆಯಲ್ಲಿ ಕಿಂಕರನಾಮಕರಾದ ಸೇವಕರು ದಣಿವಿಲ್ಲದೆ ಕೈಯಿಂದ ಕೆಲಸಗಳನ್ನೂ ಪಾದಗಳಿಂದ ನಡಿಗೆಯನ್ನು ಮಾಡುತ್ತಾ ಜೀವವಿಲ್ಲದವರಂತೆ ದಣಿವೇ ಇಲ್ಲದೆ ದುಡಿಯುತ್ತಿದ್ದಾರೆ.

ಹಿಮವತ್ಸಾಗರಾನೂಪಾಃ ಸರ್ವರತ್ನಾಕರಾಸ್ತಥಾ ।
ಅಂತ್ಯಾಃ ಸರ್ವೇ ಪರ್ಯುದಸ್ತಾ ಯುಧಿಷ್ಠಿರನಿವೇಶನೇ ॥೨೨॥

ಹಿಮಾಲಯದ ತಪ್ಪಲಿನಲ್ಲಿಯೂ ಸಮುದ್ರತೀರದಲ್ಲಿಯೂ ಇರುವ ಚೋರಾದಿ ಗಣಗಳು ಹಾಗೆಯೇ ಭೂಮಿಯ ತುದಿಯಲ್ಲಿ ಮೂಲೆಯಲ್ಲಿರುವ ಚೋರಾದಿ ಜನರೂ ಸಹ ಧರ್ಮರಾಜನ ಮನೆಯಲ್ಲಿ ಸೇವಕರಾಗಿ ದುಡಿಯುತ್ತಿದ್ದಾರೆ.

ಜ್ಯೇಷ್ಠೋಽಹಮಿತಿ ಮಾಂ ಮತ್ವಾ ಶ್ರೇಷ್ಠಶ್ಚಾಪಿ ವಿಶಾಂಪತೇ ।
ಯುಧಿಷ್ಠಿರೇಣ ಸತ್ಕೃತ್ಯ ಯುಕ್ತೋ ರತ್ನಪರಿಗ್ರಹೇ ॥೨೩॥

ರಾಜನೇ! ಯುಧಿಷ್ಠಿರನು ನನ್ನನ್ನು ವಯಸ್ಸಿನಲ್ಲಿ ಜ್ಯೇಷ್ಠನೆಂದೂ ಗುಣದಿಂದ ಶ್ರೇಷ್ಠನೆಂದೂ ತಿಳಿದು ಸತ್ಕರಿಸಿ ರಾಜರಿಂದ ಬರುವ ರತ್ನ ಮೊದಲಾದ ಐಶ್ವರ್ಯವನ್ನು ಸ್ವೀಕರಿಸಲು ನನ್ನನ್ನು ನಿಯಮಿಸಿದನು.

ನ ಮೇ ಹಸ್ತಃ ಸಮಭವದ್ ವಸು ತತ್ ಪ್ರತಿಗೃಹ್ಣತಃ ।
ಪ್ರಾತಿಷ್ಠಂತ ಮಯಿ ಶ್ರಾಂತೇ ಗೃಹ್ಯ ದೂರಾಹೃತಂ ವಸು ॥೨೪॥

ರಾಜರು ತಂದ ರತ್ನಗಳನ್ನು ಸ್ವೀಕರಿಸಲು ನನಗೆ ಎರಡು ಕೈಗಳು ಸಾಕಾಗಲಿಲ್ಲ. ನಾನು ದಣಿದರೂ ಸಹ ದೂರದಿಂದ ತಂದ ಆ ರತ್ನಗಳ ಪರಿಗ್ರಹವು ನಿಲ್ಲಲೇ ಇಲ್ಲ.

ಉಪಸ್ಥಿತಾನಾಂ ರತ್ನಾನಾಂ ಶ್ರೇಷ್ಠಾನಾಂ ರತ್ನಹಾರಿಣಾಮ್ ।
ಪಾರಂ ತತ್ರ ನ ಪಶ್ಯಾಮಿ ನಾಪರಂ ತತ್ರ ಭಾರತ ॥೨೫॥

ಎಲೈ ಭಾರತನೇ! ರತ್ನಗಳಿಗಾಗಲೀ ಆ ರತ್ನಗಳನ್ನು ತಂದ ರಾಜರುಗಳಿಗಾಗಲೀ ನಾನು ಆದಿಯನ್ನಾಗಲೀ ಅಥವಾ ಅಂತ್ಯವನ್ನಾಗಲೀ ಕಾಣಲಿಲ್ಲ.

ಕೃತಾಂ ಬಿಂದುಸರೋರತ್ನೈರ್ಮಯೇನ ಸ್ಫಾಟಿಕಪ್ರಭಾಮ್ ।
ಅಪಶ್ಯಂ ನಲಿನೀಂ ಪೂರ್ಣಾಮುದಕಸ್ಯೇವ ಭಾರತ ॥೨೬॥

ಎಲೈ ! ಭಾರತನೇ! ಮಯನು ಬಿಂದು ಸರೋವರದ ಸಮೀಪದಲ್ಲಿ ಇದ್ದ ವೃಷಪರ್ವದ ಸಭೆಯ ರತ್ನಗಳಿಂದ ಸ್ಫಟಿಕ ಪ್ರಭೆಯುಳ್ಳ ನೀರಿನಿಂದ ತುಂಬಿರುವಂತೆ ತೋರುತ್ತಿರುವಂತೆ ನಿರ್ಮಿಸಿದ ಒಂದು ಸರೋವರವನ್ನು ನೋಡಿದೆನು.

ಉತ್ಕರ್ಷಂತಂ ಚ ವೈ ವಾಸಃ ಪ್ರಾಹಸನ್ಮಾಂ ವೃಕೋದರಃ ।
ಕಿಂಕರಾಶ್ಚ ಸಭಾಪಾಲಾ ಜಹಸುರ್ಭರತರ್ಷಭ ॥೨೭॥

ನಾನು ವಸ್ತ್ರವನ್ನು ಮೇಲಕ್ಕೆತ್ತಿ ನಡೆಯುತ್ತಿದ್ದಂತೆ ಎಲೈ ಭರತರ್ಷಭನೇ! ಭೀಮಸೇನನೂ ಸಭಾಪಾಲಕರಾದ ಕಿಂಕರರೂ ಗಟ್ಟಿಯಾಗಿ ನಕ್ಕರು.

ಶತ್ರೋ ರತ್ನವಿಶೇಷೇಣ ವಿಮೂಢಂ ರತ್ನವರ್ಜಿತಮ್ ।
ಮಮೃಷೇ ಯದಿ ಶಕ್ತಸ್ತಂ ಘಾತಯೇಯಂ ವೃಕೋದರಮ್ ।
ಸಪತ್ನೇನಾವಹಾಸೋ ಹಿ ಸ ಮಾಂ ದಹತಿ ಭಾರತ ॥೨೮॥

ಶತ್ರುವಿನ ರತ್ನವಿಶೇಷಗಳಿಂದ ಮೋಹಕ್ಕೆ ಒಳಗಾಗಿ ಸ್ವತಃ ಅಂತಹ ರತ್ನಗಳನ್ನು ಹೊಂದದೆ ಇರುವ ನನ್ನನ್ನು ನೋಡಿ ನೀನು ಸಹಿಸುವುದಾದರೆ ನಾನು ಬಲಿಷ್ಠನಾದ ಕಾರಣ ಭೀಮಸೇನನನ್ನು ಸಂಹರಿಸುವೆನು.

ತತ್ರ ಸ್ಫಾಟಿಕತೋಯಾಂ ಹಿ ಸ್ಫಾಟಿಕಾಂಬುಜಶೋಭಿತಾಮ್ ।
ಸಭಾಂ ಪುಷ್ಕರಿಣೀಂ ಮತ್ವಾ ಪತಿತೋಽಸ್ಮಿ ನರಾಧಿಪ ॥೨೯॥

ಎಲೈ ಭಾರತನೇ! ಶತ್ರುವಿನ ಅಪಹಾಸವು ನನ್ನನ್ನು ಸುಡುತ್ತಿದೆ. ರಾಜನೇ! ಅಲ್ಲಿ ಸ್ಫಟಿಕದಂತೆ ಜಲವನ್ನುಳ್ಳ ಸ್ಫಟಿಕದಂತಹ ಶೋಭಿತವಾದ ಸರೋವರವನ್ನು ನೆಲವೆಂದು ತಿಳಿದು ನಾನು ಅದರಲ್ಲಿ ಬಿದ್ದೆನು.

ಪುನಶ್ಚ ತಾದೃಶೀಮೇವ ವಾಪೀಂ ಜಲಜಶಾಲಿನೀಮ್ ।
ಮತ್ವಾ ಶಿಲಾಸಭಾಂ ತೋಯೇ ಪತಿತೋಽಸ್ಮಿ ನರಾಧಿಪ ॥೩೦॥

ಪುನಃ ಅಂತಹದೇ ಇನ್ನೊಂದು ಕಮಲಗಳಿರುವ ಭಾವಿಯನ್ನು ಶಿಲೆಯ ಸಭೆಯೆಂದು(ನೆಲವೆಂದು) ತಿಳಿದು ಪುನಃ ನೀರಿನಲ್ಲಿ ಬಿದ್ದೆನು.

ತತ್ರ ಮಾಂ ಪ್ರಾಹಸತ್ ಕೃಷ್ಣಃ ಪಾರ್ಥೇನ ಸಹ ಸಸ್ವರಮ್ ।
ದ್ರೌಪದೀ ಚ ಸಹ ಸ್ತ್ರೀಭಿಃ ಪೀಡಯಂತೀ ಮನೋ ಮಮ ॥೩೧॥

ಆಗ ಕೃಷ್ಣನು ಅರ್ಜುನನ ಜೊತೆಯಲ್ಲಿ ನನ್ನನ್ನು ನೋಡಿ ಗಟ್ಟಿಯಾಗಿ ನಕ್ಕನು. ದ್ರೌಪದಿಯೂ ಸಹ ಉಳಿದ ಸ್ತ್ರೀಯರ ಜೊತೆಯಲ್ಲಿ ನನ್ನ ಮನಸ್ಸಿಗೆ ಪೀಡೆಯುಂಟಾಗುವಂತೆ ನಕ್ಕಳು.

ಕ್ಲಿನ್ನವಸ್ತ್ರಸ್ಯ ಚ ಜಲೇ ಕಿಂಕರಾ ರಾಜಚೋದಿತಾಃ ।
ದದುರ್ವಾಸಾಂಸಿ ಚಾನ್ಯಾನಿ ತಚ್ಚ ದುಃಖಿತರಂ ಮಮ ॥೩೨॥

ಬಟ್ಟೆಗಳೆಲ್ಲವೂ ಒದ್ದೆಯಾದ ನನಗೆ ರಾಜಪ್ರೇರಿತರಾದ ಕಿಂಕರರು ಬೇರೆ ವಸ್ತ್ರಗಳನ್ನು ತಂದು ಕೊಟ್ಟರು. ಅದು ನನಗೆ ಅತ್ಯಂತ ದುಃಖಕರವಾಗಿದೆ.

ಪ್ರಲಂಭಂ ಚ ಶೃಣುಷ್ವಾನ್ಯದ್ ಗದತೋ ಮೇ ನರಾಧಿಪ ।
ಅದ್ವಾರೇಣ ವಿನಿರ್ಗಚ್ಛನ್ ದ್ವಾರಸಂಸ್ಥಾನರೂಪಿಣಾ ।
ಅಭಿಹತ್ಯ ಶಿಲಾಂ ಭೂಯೋ ಲಲಾಟೇ ಚಾಸ್ಮಿ ತಾಡಿತಃ ॥೩೩॥

ಎಲೈ ರಾಜನೇ! ನಾನು ಅಲ್ಲಿ ಅನುಭವಿಸಿದ ಇನ್ನೊಂದು ವಂಚನೆಯನ್ನು ಹೇಳುವೆನು ಕೇಳು. ದ್ವಾರದಂತೆ ಕಾಣುತ್ತಿದ್ದ ದ್ವಾರವಲ್ಲದ ಒಂದು ಪ್ರದೇಶದಿಂದ ಹೊರಗೆ ಹೋಗಲು ಪ್ರಯತ್ನಿಸಿ ನಾನು ತಲೆಯಿಂದ ಶಿಲೆಯನ್ನು ಘಟ್ಟಿಸಿ ಹಣೆಯಲ್ಲಿ ಗಾಯಗೊಂಡೆನು.

ಇದಂ ದ್ವಾರಮಿದಂ ರಾಜನ್ ನ ದ್ವಾರಮಿತಿ ಮಾಂ ಪ್ರತಿ ।
ಅಗ್ರತಃ ಪ್ರಹಸನ್ ವಾಕ್ಯಂ ಬಭಾಷೇ ಸ ವೃಕೋದರಃ ॥೩೪॥

ಭೀಮಸೇನನು ನನ್ನ ಮುಂದೆ ಬಂದು ರಾಜನೇ! ಇದು ಬಾಗಿಲು ಇದು ಬಾಗಿಲಲ್ಲ. ಎಂದು ನನ್ನನ್ನು ಹಾಸ್ಯಮಾಡುತ್ತಾ ನನಗೆ ಹೇಳಿದನು.

ತತ್ರ ಮಾಂ ಯಮಜೌ ದೂರಾದಾಲೋಕ್ಯ ಲಲಿತೌ ಕಿಲ ।
ಸಹಿತಾವನುಗಂತಾರೌ ಬಾಹುಭಿಃ ಪ್ರತ್ಯಗೃಹ್ಣತಾಮ್ ॥೩೫॥

ಅದನ್ನು ದೂರದಿಂದಲೇ ನೋಡಿದ ಲಲಿತರಾದ (ಮನೋಹರರಾದ) ನಕುಲಸಹದೇವರು ಅವನನ್ನು ಹಿಂಬಾಲಿಸಿ ಬಂದು ನನ್ನ ಬಾಹುಗಳನ್ನು ಹಿಡಿದುಕೊಂಡು ನಡೆಸಿದರು.

ಉವಾಚ ಸಹದೇವೋ ಮಾಂ ತತ್ರ ವಿಸ್ಮಾಪಯನ್ನಿವ ।
ಇದಂ ದ್ವಾರಮಿತೋ ರಾಜನ್ ನಿರ್ಗಚ್ಛೇತಿ ಪುನಃ ಪುನಃ ।
ನ ಶ್ರುತಾನಿ ನ ದೃಷ್ಟಾನಿ ತೇನ ತಪ್ತೋಽಸ್ಮಿ ದುಃಖಿತಃ ॥೩೬॥

ಸಹದೇವನು ನನಗೆ ಆಶ್ಚರ್ಯವಾಗುವರೀತಿಯಲ್ಲಿ ರಾಜನೇ! ಇದು ಬಾಗಿಲು ಇದರಿಂದ ಹೊರಗೆ ಹೋಗು ಎಂದು ಮತ್ತೆ ಮತ್ತೆ ಹೇಳಿದನು. ನಾನು ಅವಮಾನಿತನಾಗಿ ಅವರ ಮಾತುಗಳನ್ನು ಕೇಳಲೂ ಇಲ್ಲ. ಅವರ ಮುಖಗಳನ್ನು ನೋಡಲೂ ಇಲ್ಲ. ಆ ಕಾರಣದಿಂದ ನಾನು ದುಃಖತಪ್ತನಾಗಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ತ್ರಿಸಪ್ತತಿತಮೋಧ್ಯಾಯಃ ॥

॥ ದ್ಯೂತಪರ್ವಣಿ ಪಂಚಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಪ್ಪತ್ಮೂರನೆಯ ಅಧ್ಯಾಯವು ಮುಗಿಯಿತು.

★★★★★

ಎಪ್ಪತ್ನಾಲ್ಕನೆಯ ಅಧ್ಯಾಯ.

(ಧೃತರಾಷ್ಟ್ರನ ಮುಂದೆ ದುರ್ಯೋಧನನಿಂದ ತಾನು ನೋಡಿದ ಯುಧಿಷ್ಠರನ ಯಾಗದ ವೈಭವದ ವರ್ಣನೆ.)

ದುರ್ಯೋಧನಃ

ಹುತಾಶನಂ ಪ್ರವೇಕ್ಷ್ಯಾಮಿ ಪ್ರವಿಶೇ ವಾ ಮಹೋದಧಿಮ್ ।
ಸಂಭಾವಿತಸ್ಯ ಚಾಕೀರ್ತಿರ್ಮರಣಾದತಿರಿಚ್ಯತೇ ॥೧॥

ನಾನು ಅಗ್ನಿ ಪ್ರವೇಶಮಾಡುವೆನು ಇಲ್ಲದಿದ್ದರೆ ಸಮುದ್ರವನ್ನಾದರೂ ಪ್ರವೇಶಮಾಡುವೆನು. ಮರ್ಯಾದೆಯಿಂದ ಇದ್ದವರಿಗೆ ಅಪಕೀರ್ತಿಯುಂಟಾದರೆ ಅದು ಮರಣಕ್ಕಿಂತಲೂ ನಿಕೃಷ್ಟವಾಗಿದೆ.

ಯನ್ಮಯಾ ಪಾಂಡವಾನಾಂ ತು ದೃಷ್ಟಂ ತಚ್ಛೃಣು ಭಾರತ ।
ಆಹೃತಂ ಭೂಮಿಪಾಲೇಭ್ಯೋ ವಸು ಮುಖ್ಯಂ ತತಸ್ತತಃ ॥೨॥

ಎಲೈ ಭಾರತನೇ! ನಾನು ರಾಜರು ಆಯಾ ದೇಶಗಳಿಂದ ಪಾಂಡವನ ಯಜ್ಞಕ್ಕಾಗಿ ತಂದ ನಾನು ನೋಡಿದ ಶ್ರೇಷ್ಠವಾದ ಧನವನ್ನು ಹೇಳುತ್ತೇನೆ ಕೇಳು.

ನಿರ್ವಿದ್ಯೇ ದೃಢಮಾತ್ಮಾನಂ ದೃಷ್ಟ್ವಾऽಹಂ ತದರೇರ್ಧನಮ್ ।
ಫಲತೋ ಭೂಮಿತೋ ವಾऽಪಿ ಪ್ರತಿಪದ್ಯಸ್ವ ಭಾರತ ॥೩॥

ಎಲೈ ಭಾರತನೇ! ಆ ಶತ್ರುವಿನ ಸಂಪತ್ತನ್ನು ನೋಡಿ ನಾನು ನನ್ನ ಬಗ್ಗೆ ದೃಢವಾದ ವೈರಾಗ್ಯವನ್ನು ಹೊಂದಿದ್ದೇನೆ. ಆ ಸಂಪತ್ತಿನ ಫಲದಿಂದಲಾಗಲೀ ಅಥವಾ ಸಂಪತ್ತಿನ ಕಾರಣದಿಂದಲಾಗಲೀ ನಾನು ಅವರಿಗೆ ಸಮಾನನಲ್ಲವೆಂದು ನೀನು ತಿಳಿ.

ಔರ್ಣಾಂಶ್ಚೇಲಾನ್ ವಾರ್ಷದಂಶಾನ್ ಜಾತರೂಪಪರಿಷ್ಕೃತಾನ್ ।
ಪ್ರಾವಾರಾಜಿನಮುಖ್ಯಾಂಶ್ಚ ಕಾಂಭೋಜಃ ಪ್ರದದೌ ವಸು ॥೪॥

ಕಾಂಭೋಜರಾಜನು ಉಣ್ಣೆಯ ವಸ್ತ್ರಗಳನ್ನೂ ಸುವರ್ಣದಿಂದ ಅಲಂಕೃತವಾದ ವ್ಯಾಘ್ರನಖ ಚರ್ಮಗಳನ್ನೂ ಹೊದೆಯುವ ಶಾಲುಗಳನ್ನೂ ಮತ್ತು ಕೃಷ್ಣಾಜಿನಗಳನ್ನೂ ಮುಕ್ತವಾಗಿ ಕೊಟ್ಟನು.

ಅಶ್ವಾಂಸ್ತಿತ್ತಿರಿಕಲ್ಮಾಷಾನ್ ತ್ರಿದಶಾನ್ ಶುಕನಾಸಿಕಾನ್ ।
ಉಷ್ಟ್ರವಾಮೀಂಸ್ತ್ರಿಗರ್ತಾಶ್ಚ ಪುಷ್ಟಾನ್ ಪೀಲುಶಮೀಂಗುದೈಃ ॥೫॥

ತಿತ್ತಿರಿಕಲ್ಮಾಷ ವರ್ಣೋಪೇತವಾದ, ಪೀಲು ಮತ್ತು ಶಮೀ ಮತ್ತು ಇಂಗುದ ವೃಕ್ಷಗಳಿಂದ ಪೋಷಿಸಲ್ಪಟ್ಟ, ಗಿಣಿಯಂತೆ ಕೆಂಪಾದ ಮೂಗುಳ್ಳ, ಮುವತ್ತು ಅಶ್ವಗಳನ್ನು ಮತ್ತು ಪುಷ್ಟವಾದ ಒಂಟೆಗಳನ್ನು ತ್ರಿಗರ್ತಾಧಿಪತಿಯು ಕೊಟ್ಟನು.

ಗೋಪಾನಸೇನ ಸಹಿತಾಂತದಾದಾಯ ಚ ಷಟ್‌ಪದಮ್ ।
ವಸಾತಯೋನ್ಯದೂಷ್ಯಾಶ್ಚ ದ್ವಾರಿ ತಸ್ಯಾವತಸ್ಥಿರೇ ॥೬॥

ಗೋಪಾಲಕರು ಉಪಯೋಗಿಸುವ ಬಂಡಿಗಳಲ್ಲಿ ಎಲ್ಲರೂ ಒಟ್ಟುಗೂಡಿ ಜೇನುತುಪ್ಪದ ಗಡಿಗೆಗಳನ್ನು ಅನೇಕರು ತಂದು ಅವನ ದ್ವಾರದಲ್ಲಿ ನಿಂತರು.

ಕಮಂಡಲೂನುಪಾದಾಯ ಜಾತರೂಪಮಯಾನ್‌ಶುಭಾನ್ ।
ರತ್ನಾನಿ ಚ ಪ್ರವಾಳಾಂಶ್ಚ ಸುವರ್ಣಂ ಚೈವ ಕೇವಲಮ್ ॥೭॥

ಪ್ರೀಯಮಾಣಃ ಪ್ರಸನ್ನಾತ್ಮಾ ಸ್ವಯಂ ಸ್ವಜನಸಂವೃತಃ ।
ತ್ರೈಖಿವ್ಯೋ ರಥಮುಖ್ಯಾಂಶ್ಚ ಪಾಂಡವಾಯ ನ್ಯವೇದಯತ್ ॥೮॥

ತ್ರಿಖರ್ವದೇಶದ ರಾಜನು ಸುವರ್ಣಮಯವಾದ ಶುಭ್ರವಾದ ಕಮಂಡಲುಗಳನ್ನೂ ರತ್ನಗಳನ್ನೂ ಹವಳಗಳನ್ನೂ ಶುದ್ಧವಾದ ಸುವರ್ಣವನ್ನೂ ಅನೇಕ ಶ್ರೇಷ್ಠವಾದ ರಥಗಳನ್ನೂ ತಾನೆ ಸ್ವಜನ ಸಹಿತವಾಗಿ ತೆಗೆದು ಕೊಂಡು ಬಂದು ಸಂತೋಷದಿಂದ ಪಾಂಡವನಿಗೆ ಕೊಟ್ಟನು.

ಯಶ್ಚ ಸ ದ್ವಿಜಮುಖ್ಯೇನ ರಾಜ್ಞಃ ಶಂಖೋ ನಿವೇದಿತಃ ।
ಪ್ರೀತ್ಯಾ ದತ್ತಃ ಕುಣಿಂದೇನ ಧರ್ಮರಾಜಾಯ ಧೀಮತೇ ॥೯॥

ಕುಣಿಂದನು ಒಬ್ಬ ಬ್ರಾಹ್ಮಣನ ಮೂಲಕ ಮೇಧಾವಿಯಾದ ಧರ್ಮರಾಜನಿಗೆ ಸಂತೋಷದಿಂದ ಒಂದು ಶಂಖವನ್ನು ಕೊಟ್ಟನು.

ತಂ ಸರ್ವೇ ಭ್ರಾತರೋ ಭ್ರಾತ್ರೇ ದದುಃ ಶಂಖಂ ಕಿರೀಟಿನೇ ।
ತಂ ಪ್ರತ್ಯಗೃಹ್ಣಾದ್ಬೀಭತ್ಸುಸ್ತೋಯಜಂ ಹೇಮಮಾಲಿನಮ್ ॥೧೦॥

ಚಿತಂ ನಿಷ್ಕಸಹಸ್ರೇಣ ಭ್ರಾಜಮಾನಂ ಸ್ವತೇಜಸಾ ।
ರುಚಿರಂ ದರ್ಶನೀಯಂ ಚ ಭೂಷಿತಂ ವಿಶ್ವಕರ್ಮಣಾ ॥೧೧॥

ಎಲ್ಲಾ ಸಹೋದರೂ ಸೇರಿ ಅದನ್ನು ಅರ್ಜುನನಿಗೆ ಕೊಟ್ಟರು. ಹೇಮ ಮಾಲೆಯನ್ನು ಧರಿಸಿದ ನಿಷ್ಕ ಸಹಸ್ರದಿಂದ ಅಲಂಕೃತವಾದ ತೇಜಸ್ಸಿನಿಂದ ಬೆಳಗುತ್ತಿರುವ ಮನೋಹರವಾದ, ವಿಶ್ವಕರ್ಮನಿಂದ ಅಲಂಕೃತವಾದ, ತೇಜಸ್ಸಿನಿಂದ ಬೆಳಗುತ್ತಿರುವ ಆ ಜಲಜವಾದ ಶಂಖವನ್ನು ಅರ್ಜುನನು ಸ್ವೀಕರಿಸಿದನು.

ಅಧಾರಯಚ್ಚ ಧರ್ಮಶ್ಚ ತಂ ನಮಸ್ಯ ಪುನಃ ಪುನಃ ।
ಯೋಽನ್ನದಾನೇ ನದತಿ ಸ ನನಾದಾಧಿಕಂ ತದಾ ।
ಪ್ರಣಾದಾದ್ ಭೂಮಿಪಾಸ್ತಸ್ಯ ಪೇತುರ್ಹೀನಾಃ ಸ್ವತೇಜಸಾ ॥೧೨॥

ಧರ್ಮರಾಜನು ಆ ಬ್ರಾಹ್ಮಣನಿಗೆ ಪುನಃ ಪುನಃ ನಮಸ್ಕರಿಸಿ ಅದನ್ನು ಧರಿಸಿದನು. ಅನ್ನದಾನದ ಸಮಯದಲ್ಲಿ ಘೋಷವನ್ನು ಮಾಡುವ ಆ ಶಂಖವು ಆ ಕಾಲದಲ್ಲಿ ಅತ್ಯಧಿಕವಾಗಿ ಘೋಷವನ್ನು ಮಾಡಿತು. ಆ ಶಂಖಧ್ವನಿಯನ್ನು ಕೇಳಿ ರಾಜರು ತೇಜೋಹೀನರಾಗಿ ಭೂಮಿಯ ಮೇಲೆ ಬಿದ್ದರು.

ಧೃಷ್ಟದ್ಯುಮ್ನಃ ಪಾಂಡವಾಶ್ಚ ಸಾತ್ಯಕಿಃ ಕೇಶವೋಽಷ್ಟಮಃ ।
ಸತ್ತ್ವಸ್ಥಾಃ ಶೌರ್ಯಸಂಪನ್ನಾ ಅನ್ಯೋನ್ಯಪ್ರಿಯಕಾರಿಣಃ ।
ಏಸಂಜ್ಞಾನ್ ಭೂಮಿಪಾನ್ ದೃಷ್ಟ್ವಾ ಮಾಂ ಚ ತೇ ಪ್ರಾಹಸಂಸ್ತದಾ ॥೧೩॥

ಧೈರ್ಯಶಾಲಿಗಳಾದ ಮತ್ತು ಶೌರ್ಯಸಂಪನ್ನರಾದ ಪರಸ್ಪರವಾಗಿ ಹಿತವನ್ನು ಮಾಡುವ ದೃಷ್ಟದ್ಯುಮ್ನ ಪಾಂಡವರು ಸಾತ್ಯಕಿ ಮತ್ತು ಕೃಷ್ಣ ಈ ಎಂಟು ಜನರೂ ರಾಜರನ್ನು ಮತ್ತು ನನ್ನನ್ನು ನೋಡಿ ಅಪಹಾಸವನ್ನು ಮಾಡಿದರು.

ತತಃ ಪ್ರಹೃಷ್ಟೋ ಬೀಭತ್ಸುರದದಾದ್ಧೇಮಶೃಂಗಿಣಃ ।
ಶತಾನ್ಯನಡುಹಾಂ ಪಂಚ ದ್ವಿಜಮುಖ್ಯಾಯ ಭಾರತ ॥೧೪॥

ಎಲೈ ಭಾರತನೇ! ಆಗ ಸಂತೋಷಗೊಂಡ ಅರ್ಜುನನು ಶಂಖವನ್ನು ತಂದ ದ್ವಿಜಶ್ರೇಷ್ಠನಿಗೆ ಹೇಮಶೃಂಗಗಳಿಂದ ಕೂಡಿದ ಐದುನೂರು ವೃಷಭಗಳನ್ನು ಕೊಟ್ಟನು.

ಸುಮುಖೇನ ಬಲಿರ್ಮುಖ್ಯಃ ಪ್ರೇಷಿತೋಽಜಾತಶತ್ರವೇ ।
ಕುಣಿಂದೇನ ಹಿರಣ್ಯಂ ಚ ವಾಸಾಂಸಿ ವಿವಿಧಾನಿ ಚ ॥೧೫॥

ಕುಣಿಂದಾಧಿಪತಿಯಾದ ಸುಮುಖನು ಸುವರ್ಣಮಯವಾದ ವಿವಿಧವಾದ ವಸ್ತ್ರಗಳು ಮೊದಲಾದ ಶ್ರೇಷ್ಠವಾದ ಬಲಿಯನ್ನು ಅಜಾತ ಶತ್ರುವಿಗೆ ಕಳುಹಿಸಿದನು.

ಕಾಶ್ಮೀರರಾಜೋ ಮಾದ್ವೀಕಂ ಶುಂಡಂ ಚ ರಸವನ್ಮಧು ।
ಬಲಿಂ ಚ ಕೃತ್ಸ್ನಮಾದಾಯ ಪಾಂಡವಾಯಾಭ್ಯುಪಾಹರತ್ ॥೧೬॥

ಕಾಶ್ಮೀರರಾಜನು ಪಾನಯೋಗ್ಯವಾದ ಮಧುರವಾದ ಮಧುರೂಪವಾದ ಬಹಳ ಪ್ರಮಾಣದ ಬಲಿಯನ್ನು ತೆಗೆದುಕೊಂಡು ಬಂದು ಪಾಂಡವನಿಗೆ ಸಮರ್ಪಿಸಿದನು.

ಯವನಾ ಹಯಾನುಪಾದಾಯ ಪಾರ್ವತೇಯಾನ್ ಮನೋಜವಾನ್ ।
ಆಸನಾನಿ ಮಹಾರ್ಹಾಣಿ ಕಂಬಳಾಂಶ್ಚ ಮಹಾಧನಾನ್ ॥೧೭॥

ನವಾನ್ ವಿಚಿತ್ರಾನ್ ಸೂಕ್ಷ್ಮಾಂಶ್ಚ ಪರಾರ್ಘ್ಯಾನ್ ಸುಪ್ರದರ್ಶನಾನ್ ।
ಅನ್ಯಚ್ಚ ವಿವಿಧಂ ರತ್ನಂ ದ್ವಾರಮೇತ್ಯಾವತಸ್ಥಿರೇ ॥೧೮॥

ಶ್ರುತಾಯುರಪಿ ಕಾಳಿಂಗೋ ಮಣಿರತ್ನಮನುತ್ತಮಮ್ ।
ಅಂಗಃ ಸ್ತ್ರಿಯೋ ದರ್ಶನೀಯಾ ಜಾತರೂಪವಿಭೂಷಿತಾಃ ॥೧೯॥

ಯವನರು ಪರ್ವತ ಪ್ರದೇಶದಲ್ಲಿ ಜನಿಸಿದ ಮನೋಜವವುಳ್ಳ ಅಶ್ವಗಳನ್ನೂ ಬೆಲೆಬಾಳುವ ಕಂಬಳಿಗಳನ್ನೂ ಮತ್ತು ಆಸನಗಳನ್ನು ಹೊಸದಾದ ವಿಚಿತ್ರವಾದ ಇನ್ನೊಬ್ಬರು ಅಪೇಕ್ಷಿಸುವ ನೋಡಲು ಸುಂದರವಾಗಿರುವ ಇನ್ನೂ ಅನೇಕ ವಸ್ತ್ರಗಳನ್ನೂ ಮತ್ತು ವಿಧವಿಧವಾದ ರತ್ನಗಳನ್ನೂ ಹಿಡಿದು ಧರ್ಮರಾಜನ ಬಾಗಿಲಿನಲ್ಲಿ ನಿಂತಿದ್ದರು. ಕಳಿಂಗ ದೇಶಾಧಿಪತಿಯಾದ ಸುಪ್ರದರ್ಶನನೂ ಶ್ರೇಷ್ಠವಾದ ಮಣಿರತ್ನಗಳನ್ನು ಕೊಟ್ಟನು. ಅಂಗರಾಜನು ಸುವರ್ಣಾಲಂಕೃತರಾದ ಸುಂದರಿಯಾದ ಅನೇಕ ಸ್ತ್ರೀಯರನ್ನು ಕೊಟ್ಟನು.

ವಂಗೋ ಜಾಂಬೂನದಮಯಾನ್ ಪರ್ಯಂಕಾನ್ ಶತಶೋ ನೃಪ।
ದಕ್ಷಿಣಾತ್ ಸಾಗರಾಭ್ಯಾಶಾತ್ ಪ್ರವಾಳಂ ಚ ಪರಂ ಗತಮ್ ॥೨೦॥

ಔದಕಾನಿ ಸ ರತ್ನಾನಿ ಬಲಿಂ ಚಾದಾಯ ಭಾರತ ।
ಅನ್ಯೇಭ್ಯೋ ಭೂಮಿಪಾಲೇಭ್ಯಃ ಪಾಂಡವಾಯ ನ್ಯವೇದಯತ್ ॥೨೧॥

ಎಲೈ ರಾಜನೇ! ವಂಗರಾಜನು ಸುವರ್ಣಮಯವಾದ ನೂರಾರು ಪರ್ಯಂಕಗಳನ್ನೂ ದಕ್ಷಿಣಸಾಗರದಿಂದ ತಂದ ಚೆನ್ನಾಗಿ ಸಾಣೆಹಿಡಿದ ಅನೇಕ ಹವಳಗಳನ್ನೂ ಮತ್ತು ನೀರಿನಲ್ಲಿ ಜನಿಸಿದ ಅನೇಕ ರತ್ನರೂಪವಾದ ಬಲಿಯನ್ನೂ ತೆಗೆದುಕೊಂಡು ಬಂದು ಪಾಂಡವನಿಗೆ ಸಮರ್ಪಿಸಿದನು. ಬೇರೆ ರಾಜರಿಂದ ತಾನು ಸಂಗ್ರಹಿಸಿದ ರತ್ನವನ್ನೂ ಪಾಂಡವನಿಗೆ ಸಮರ್ಪಿಸಿದನು.

ದಾರ್ದುರಂ ಚಂದನಂ ಮುಖ್ಯಂ ಭಾರಂ ಷಣ್ಣವತಿಂ ಧ್ರುವಮ್ ।
ಪಾಂಡವಾಯ ದದೌ ಪಾಂಡ್ಯಃ ಶಂಖಾಂಸ್ತಾವತ ಏವ ಚ ॥೨೨॥

ಪಾಂಡ್ಯರಾಜನು ಸುಗಂಧಮಯವಾದ ಶ್ರೇಷ್ಠವಾದ ಗಂಧದ ತೊಂಬತ್ತಾರು ಭಾರಗಳನ್ನು(ಮಣಗಳನ್ನು) ಮತ್ತು ಅಷ್ಟೇ ಶಂಖಗಳನ್ನು ಪಾಂಡವನಿಗೆ ಕೊಟ್ಟನು.

ಚಂದನಾಗರು ಚಾನಂತಂ ಮುಕ್ತಾವೈಡೂರ್ಯಚಿತ್ರಕಾಃ ।
ಚೋಳಶ್ಚ ಕೇರಳಶ್ಚೌಭೌ ದದತುಃ ಪಾಂಡವಾಯ ವೈ ॥೨೩॥

ಚೋಳ ಮತ್ತು ಕೇರಳಾಧಿಪತಿಗಳು ಅಪರಿಮಿತವಾದ ಚಂದನ ಅಗರುಗಳನ್ನೂ ಮತ್ತು ವಿಚಿತ್ರವಾದ ವೈಡೂರ್ಯಾದಿಗಳನ್ನೂ ಪಾಂಡವನಿಗೆ ಕೊಟ್ಟರು.

ಅಶ್ಮಕೋ ಹೇಮಶೃಂಗೀಶ್ಚ ದೋಗ್ಧ್ರೀರ್ಹೇಮವಿಭೂಷಿತಾಃ ।
ಸವತ್ಸಾಃ ಕುಂಭದೋಹಾಶ್ಚ ಗಾಃ ಸಹಸ್ರಾಣ್ಯದಾದ್ ದಶ ॥೨೪॥

ಅಶ್ಮಕನು ಹೇಮ ಶೃಂಗದಿಂದ ಕೂಡಿದ ಸುವರ್ಣಾಲಂಕೃತವಾದ ಒಂದು ಗಡಿಗೆಯಷ್ಟು ಹಾಲನ್ನು ಕರೆಯುವ ಹತ್ತು ಸಹಸ್ರ ಗೋವುಗಳನ್ನು ವತ್ಸಸಹಿತವಾಗಿ ಕೊಟ್ಟನು.

ಸೈಂಧವಾನಾಂ ಸಹಸ್ರಾಣಿ ಹಯಾನಾಂ ಪಂಚವಿಂಶತಿಮ್ ।
ಅದದಾತ್ ಸೈಂಧವೋ ರಾಜಾ ಹೇಮಮಾಲ್ಯೈರಲಂಕೃತಾನ್ ॥೨೫॥

ಸೈಂಧವ ರಾಜನು ಸುವರ್ಣಮಾಲೆಗಳಿಂದ ಅಲಂಕೃತವಾದ ಇಪ್ಪತ್ತೈದು ಸಾವಿರ ಅಶ್ವಗಳನ್ನು ಕೊಟ್ಟನು.

ಸೌವೀರೋ ಹಸ್ತಿಭಿರ್ಯುಕ್ತಾನ್ ರಥಾನ್ ಷಟ್ತ್ರಿಶತಾವರಾನ್ ।
ಜಾತರೂಪಪರಿಷ್ಕಾರಾನ್ ಮಣಿರತ್ನವಿಭೂಷಿತಾನ್ ॥೨೬॥

ಮಧ್ಯಂದಿನಾರ್ಕಪ್ರತಿಮಾನ್ ತೇಜಸಾ ಜ್ವಲಿತಾನಿವ ।
ದಾಸಾನಾಮಯುತಂ ಚಾಪಿ ಪಾಂಡವಾಯ ನ್ಯವೇದಯತ್ ॥೨೭॥

ಸೌವೀರ ರಾಜನು ಸುವರ್ಣಗಳಿಂದಲೂ ಮಣಿರತ್ನಗಳಿಂದಲೂ ವಿಭೂಷಿತವಾದ, ತೇಜಸ್ಸಿನಿಂದ ಮಧ್ಯಂದಿನದ ಸೂರ್ಯನಂತೆ ಹೊಳೆಯುವ, ಗಜಗಳಿಂದ ಯುಕ್ತವಾದ, ಒಂದುಸಾವಿರದ ಎಂಟುನೂರಕ್ಕಿಂತಲೂ ಹೆಚ್ಚುಸಂಖ್ಯೆಯ ರಥಗಳನ್ನು ಮತ್ತು ಹತ್ತು ಸಹಸ್ರ ದಾಸರನ್ನು ಪಾಂಡವನಿಗೆ ನಿವೇದಿಸಿದನು.

ಅವಂತಿರಾಜೋ ರತ್ನಾನಿ ವಿವಿಧಾನಿ ಸಹಸ್ರಶಃ ।
ಹಾರಾಂಗದಾಂಶ್ಚ ಮುಖ್ಯಾನ್ ವೈ ವಿವಿಧಂ ಚ ವಿಭೂಷಣಮ್ ॥೨೮॥

ದಾಸೀನಾಮಯುತಂ ಚೈವ ಬಲಿಮಾದಾಯ ಭಾರತ ।
ಸಭಾದ್ವಾರಿ ನರಶ್ರೇಷ್ಠ ದಿದೃಕ್ಷುರವತಿಷ್ಠತೇ ॥೨೯॥

ಎಲೈ ಭಾರತನೇ! ಅವಂತಿರಾಜನು ವಿಧವಿಧವಾದ ಸಹಸ್ರ ರತ್ನಗಳನ್ನೂ ಶ್ರೇಷ್ಠವಾದ ಹಾರಾಂಗದಗಳನ್ನೂ ಮತ್ತು ಬೇರೆ ಹಾರಗಳನ್ನೂ ಹತ್ತು ಸಹಸ್ರ ದಾಸಿಯರನ್ನೂ ಕಪ್ಪವಾಗಿ ತೆಗೆದುಕೊಂಡು ಬಂದು ಸಭೆಯ ಬಾಗಿಲಿನಲ್ಲಿ ಧರ್ಮರಾಜನನ್ನು ನೋಡಲು ಕಾದು ನಿಂತಿದ್ದಾನೆ.

ವಸ್ತ್ರಾಣೆ ಮುಖ್ಯಾನ್ಯಾದಾಯ ಶೂರಸೇನೋ ನರರ್ಷಭ ।
ಬಲಿಂ ಚ ಕೃತ್ಸ್ನಮಾದಾಯ ಪಾಂಡವಾಯ ನ್ಯವೇದಯತ್ ॥೩೦॥

ಎಲೈ ರಾಜನೇ! ಶೂರಸೇನನು ಶ್ರೇಷ್ಠವಾದ ವಸ್ತ್ರಗಳನ್ನು ಮತ್ತು ಸಮಗ್ರವಾದ ಕಾಣಿಕೆಯನ್ನು ತೆಗೆದುಕೊಂಡು ಬಂದು ಪಾಂಡವನಿಗೆ ಅರ್ಪಿಸಿದನು.

ಕಾಶಿರಾಜೇನ ಹೃಷ್ಟೇನ ಬಲೀ ರಾಜ್ಞೇ ನಿವೇದಿತಃ ।
ಅಶೀತಿಂ ಗೋಸಹಸ್ರಾಣಾಂ ಶತಾನ್ಯಷ್ಟೌ ಚ ದಂತಿನಾಮ್ ॥೩೧॥

ಅಯುತಂ ಚ ನದೀಜಾನಾಂ ಹಯಾನಾಂ ಹೇಮಮಾಲಿನಾಮ್ ।
ವಿವಿಧಾನಿ ಚ ರತ್ನಾನಿ ಕಾಶಿರಾಜೋ ಬಲಿಂ ದದೌ ॥೩೨॥

ಕಾಶಿರಾಜನು ಸಂತೋಷದಿಂದ ಧರ್ಮರಾಜನಿಗೆ ಎಂಬತ್ತು ಸಾವಿರ ಗೋವುಗಳನ್ನೂ ಎಂಟುನೂರು ಗಜಗಳನ್ನೂ ಹೇಮಮಾಲೆಯಿಂದ ಅಲಂಕರಿಸಿದ ನದೀತೀರದಲ್ಲಿ ಬೆಳೆದ ಹತ್ತು ಸಹಸ್ರ ಅಶ್ವಗಳನ್ನೂ ಮತ್ತು ಅನೇಕ ವಿಧವಾದ ರತ್ನಗಳನ್ನೂ ಬಲಿಯಾಗಿ ಕೊಟ್ಟನು.

ಕೃತಕ್ಷಣಶ್ಚ ವೈದೇಹಃ ಕೌಸಲಶ್ಚ ಬೃಹದ್ಬಲಃ ।
ದದತುರ್ವಾಜಿಮುಖ್ಯಾಂಶ್ಚ ಸಹಸ್ರಾಣಿ ಚತುರ್ದಶ ॥೩೩॥

ಶೈಬ್ಯೋ ವಸಾದಿಭಿಃ ಸಾರ್ಧಂ ತ್ರಿಗರ್ತೋ ಮಾಲವೈಃ ಸಹ ।
ತಸ್ಮೈ ರತ್ನಾನಿ ದದತುರೇಕೈಕೋ ಭೂಮಿಪೋಽಮಿತಮ್ ॥೩೪॥

ವಿದೇಹರಾಜನೂ ಮತ್ತು ಕೋಸಲರಾಜನಾದ ಬೃಹದ್ಬಲನೂ ಸಹ ಸಮಯವನ್ನು ಸಂಪಾದಿಸಿ ಹದಿನಾಲ್ಕು ಸಾವಿರ ಶ್ರೇಷ್ಠವಾದ ಅಶ್ವಗಳನ್ನು ಕೊಟ್ಟರು. ಶೈಬ್ಯನು ವಸಾದಿಗಳಿಂದ ಸಹಿತನಾಗಿ ಹಾಗೆಯೇ ತ್ರಿಗರ್ತರಾಜನು ಮಾಳವರಿಂದ ಸಹಿತನಾಗಿ ಒಬ್ಬೊಬ್ಬ ರಾಜನೂ ಧರ್ಮರಾಜನಿಗೆ ಅಮಿತವಾದ ರತ್ನಗಳನ್ನು ಕೊಟ್ಟನು.

ಹಾರಾಂಶ್ಚ ಮುಕ್ತಾನ್ ಮುಖ್ಯಾಂಶ್ಚ ವಿವಿಧಂ ಚ ವಿಭೂಷಣಮ್ ।
ಶತಂ ದಾಸೀಸಹಸ್ರಾಣಿ ಕಾರ್ಪಾಸಿಕನಿವಾಸಿನಾಮ್ ॥೩೫॥

ಶ್ಯಾಮಾಸ್ತನ್ವೀರ್ದೀರ್ಘಕೇಶೀರ್ಹೇಮಾಭರಣಭೂಷಿತಾಃ ।
ಬಲಿಂ ಚ ಕೃತ್ಸ್ನಮಾದಾಯ ಭಾರುಕಚ್ಛೋ ನರರ್ಷಭ ।
ಶತಾನ್ ವಿಪ್ರೋತ್ತಮಾರ್ಹಾಂಶ್ಚ ಕಂಬಳಪ್ರವರಾನ್ ದದೌ ॥೩೬॥

ಎಲೈ ರಾಜನೇ! ಭಾರಕನು ಹಾರವನ್ನೂ ಶ್ರೇಷ್ಠವಾದ ಮುತ್ತುಗಳನ್ನೂ ವಿವಿಧವಾದ ಆಭರಣಗಳನ್ನೂ ಕಾರ್ಪಾಸಿಕನಿವಾಸಿಗಳಾದ ತರುಣವಯಸ್ಸಿನಲ್ಲಿರುವ ಕೃಶಾಂಗಿಯರೂ ದೀರ್ಘಕೇಶಿಯರೂ ಸುವರ್ಣಾಭರಣ ಭೂಷಿತರೂ ಆದ ಒಂದು ಲಕ್ಷ ದಾಸಿಯರನ್ನೂ ಬ್ರಾಹ್ಮಣ ಶ್ರೇಷ್ಠರಿಗೆ ಯೋಗ್ಯವಾದ ನೂರು ಕಂಬಳಿಗಳನ್ನೂ ಉತ್ತರೀಯಗಳನ್ನೂ ಕೊಟ್ಟನು.

ತೇ ಸರ್ವೇ ಪಾಂಡುಪುತ್ರಾಯ ದ್ವಾರ್ಯತಿಷ್ಠನ್ ದಿದೃಕ್ಷವಃ ।
ಉಪಾಯನಂ ಯದಾ ದದ್ಯುಸ್ತದಾ ದ್ವಾರಮಲಪ್ಸ್ಯತ ॥೩೭॥

ಅವರೆಲ್ಲರೂ ಧರ್ಮರಾಜನನ್ನು ನೋಡಲು ಬಯಸಿ ಆವನ ಬಾಗಿಲಿನಲ್ಲಿ ನಿಂತಿರುತ್ತಿದ್ದರು. ಕಾಣಿಕೆಯನ್ನು ಕೊಡುವ ಸರದಿ ಬಂದಾಗ ಅವರಿಗೆ ಪ್ರವೇಶವು ದೊರೆಯುತ್ತಿತ್ತು.

ಇಂದ್ರವೃಷ್ಟೈರ್ವರ್ತಯಂತಿ ಧಾನ್ಯೈರ್ನಾದ್ಯಮುಖೈಸ್ತು ಯೇ ।
ಸಮುದ್ರನಿಷ್ಕುಟಾಜ್ಜಾತಾಃ ಪರಸಿಂಧುನಿವಾಸಿನಃ ॥೩೮॥

ತೇ ವೈ ದ್ರುಮಾಃ ಪಾರದಾಶ್ಚ ಶಕಾಃ ಕೈರಾತಕೈಃ ಸಹ ।
ಬಲಿಂ ವಿವಿಧಮಾದಾಯ ರತ್ನಾನಿ ವಿವಿಧಾನಿ ಚ ॥೩೯॥

ಅಜಾವಿಕಂ ಗೋಹಿರಣ್ಯಂ ಖರೋಷ್ಟ್ರಂ ಫಲಜಂ ಮಧು ।
ಕಂಬಳಾನ್ ವಿವಿಧಾಂಶ್ಚೈವ ದ್ವಾರಿ ತಿಷ್ಠಂತಿ ವಾರಿತಾಃ ॥೪೦॥

ಇಂದ್ರನು ಸುರಿಸಿದ ಮಳೆಯಿಂದಲೇ ಬೆಳೆದ ಧಾನ್ಯಗಳಿಂದಲೇ ಜೀವಿಸುವ, ನದಿ ತಟಾಕ ಮೊದಲಾದವುಗಳ ಸಮೀಪದಲ್ಲಿ ಜೀವಿಸುವ, ಸಿಂಧುವಿನ ಆಚೆಯ

ದಡದಲ್ಲಿ ಜೀವಿಸುವ, ಸಮುದ್ರ ತೀರದಲ್ಲಿ ವಾಸಿಸುವ ದ್ರುಮರು ಪಾರದರು ಶಕರು ಕೈರಾತಕರು ಸಹ ವಿವಿಧವಾದ ಬಲಿಯನ್ನು ಆಡುಗಳು ಕುರಿಗಳು ಗೋವು ಹಿರಣ್ಯ ಕತ್ತೆಗಳು ಒಂಟೆಗಳು ಫಲದಿಂದ ಉಂಟಾದಮಧು ವಿಧವಿಧವಾದ ಕಂಬಳಿಗಳು ಇಂತಹ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಬಂದು ಧರ್ಮರಾಜನ ಬಾಗಿಲಿನಲ್ಲಿ ತಡೆಯಲ್ಪಟ್ಟು ನಿಂತಿದ್ದಾರೆ.

ಪ್ರಾಗ್ಜ್ಯೋತಿಷಪತಿಃ ಶೂರೋ ಮ್ಲೇಚ್ಛಾನಾಮಧಿಪೋ ವಶೀ ।
ಯವನೈಃ ಸಹಿತೋ ರಾಜಾ ಭಗದತ್ತೋ ಮಹಾಬಲಃ ॥೪೧॥

ಆಜಾನೇಯಾನ್ ಹಯಾನ್ ಶೀಘ್ರಾನಾದಾಯಾನಿಲರಂಹಸಃ ।
ಬಲಿಂ ಚ ಕೃತ್ಸ್ನಮಾದಾಯ ದ್ವಾರಿ ತಿಷ್ಠತಿ ವಾರಿತಃ ॥೪೨॥

ಪ್ರಾಗ್ಜ್ಯೋತಿಷ ಪತಿಯಾದ ಮ್ಲೇಚ್ಛರ ಅಧಿಪತಿಯಾದ ಪ್ರಬಲನಾದ ಭಗದತ್ತನು ಯವನರ ಜೊತೆಯಲ್ಲಿ ಕೂಡಿದವನಾಗಿ ಶೀಘ್ರಗಾಮಿಯಾದ ವಾಯುವೇಗವುಳ್ಳ ಒಳ್ಳೆಯ ಅಶ್ವರೂಪವಾದ ಬಲಿಯನ್ನು ಇನ್ನೂ ಬಹುಬಗೆಯ ಬಲಿಗಳನ್ನೂ ತೆಗೆದುಕೊಂಡು ಬಂದು ಧರ್ಮರಾಜನ ಬಾಗಿಲಿನಲ್ಲಿ ತಡೆಯಲ್ಪಟ್ಟು ನಿಂತಿದ್ದಾನೆ.

ಅಶ್ಮಸಾರಮಯಂ ಭಾಂಡಂ ಶುಭ್ರದಂತತನೂನಸಃ ।
ಪ್ರಾಗ್ಜ್ಯೋತಿಷಾಧಿಪೋ ದತ್ತ್ವಾ ಭಗದತ್ತೋऽವ್ರಜತ್ ತದಾ ॥೪೩॥

ಪ್ರಾಗ್ಜ್ಯೋತಿಷ ಪತಿಯಾದ ಭಗದತ್ತನು. ಕಲ್ಲಿನಂತೆ ಗಟ್ಟಿಯಾಗಿರುವ ಅನೇಕ ಪಾತ್ರೆಗಳನ್ನೂ ಶುಭ್ರವಾದ ದಂತ ದೇಹ ಮತ್ತು ಸೊಂಡಿಲುಗಳನ್ನು ಹೊಂದಿದ ಅನೇಕ ಗಜಗಳನ್ನೂ ಕೊಟ್ಟು ಹೊರಟು ಹೋದನು.

ದ್ವ್ಯಕ್ಷಾಂಸ್ತ್ರ್ಯಕ್ಷಾಂಲ್ಲಲಾಟಾಕ್ಷಾನ್ ನಾನಾದಿಗ್ಭ್ಯಃಸಮಾಗತಾನ್ ।
ಔಷ್ಣೀಷನಿಚಯಾಂಶ್ಚೈವ ಬಾಹುಕಾನ್ ಪುರುಷಾದಕಾನ್ ॥೪೪॥

ಏಕಪಾದಾಂಶ್ಚ ತತ್ರಾಹಮಪಶ್ಯಂ ದ್ವಾರಿ ವಾರಿತಾನ್ ।
ಬಲ್ಯರ್ಥಂ ಚ ದದುಸ್ತಸ್ಯ ನಾನಾರೂಪಮನೇಕಶಃ ॥೪೫॥

ಎರಡುಕಣ್ಣುಳ್ಳವರನ್ನೂ ಮೂರುಕಣ್ಣುಳ್ಳವರನ್ನೂ ಹಣೆಯಲ್ಲಿ ಕಣ್ಣುಳ್ಳವರನ್ನೂ ನಾನಾ ದೇಶದಿಂದ ಬರುವ ರುಮಾಲುಗಳ ರಾಶಿಯನ್ನೂ ಬಾಹುಕರನ್ನು ರಾಕ್ಷಸರನ್ನೂ ಒಂದು

ಸಣ್ಣಸ್ಥಳದಲ್ಲಿ ನಾಲ್ಕು ಪಾದಗಳನ್ನು ಇಡುವಂತೆ ಸುರಕ್ಷಿತರಾದವರನ್ನೂ ಧರ್ಮರಾಜನ ಬಾಗಿಲಲ್ಲಿ ನಿಂತಿದ್ದನ್ನು ನೋಡಿದೆನು. ಅವರೆಲ್ಲರೂ ಧರ್ಮರಾಜನಿಗೆ ನಾನಾ ವಿಧವಾದ ಬಲಿಯನ್ನು ಸಮರ್ಪಿಸಿದರು.

ಕೃಷ್ಣಗ್ರೀವಾನ್ ಮಹಾಕಾಯಾನ್ ರಾಸಭಾನ್ ಭರಧಾರಿಣಃ ।
ಆಜಹ್ರುರ್ದಶಸಾಹಸ್ರಾನ್ ವಿನೀತಾನ್ ದಿಕ್ಷು ವಿಶ್ರುತಾನ್ ।
ಪ್ರಮಾಣರಾಗಸಂಪನ್ನಾನ್ ಸಿಂಧುತೀರಸಮುದ್ಭವಾನ್ ॥೪೬॥

ಇಂದ್ರಗೋಪಕಸಂಕಾಶಾನ್ ಶುಕವರ್ಣಾನ್ ಮನೋಜವಾನ್ ।
ತಥೈವೇಂದ್ರಾಯುಧನಿಭಾನ್ ಸಂಧ್ಯಾಭ್ರಸದೃಶಾನಪಿ ॥೪೭॥

ಅನೇಕವರ್ಣಾನಾರಣ್ಯಾನ್ ಗೃಹೀತ್ವಾऽಶ್ವಾನ್ ಮನೋರಮಾನ್ ।
ಜಾತರೂಪಮನರ್ಘ್ಯಂ ಚ ದದುಸ್ತಸ್ಯೈ ಕಪಾದಕಾಃ ॥೪೮॥

ಏಕಪಾದಕರು (ಸುಶಿಕ್ಷಿತ ಜನರು) ಶುಭವಾದ ಕತ್ತುಳ್ಳ ದೊಡ್ಡದಾದ ಶರೀರವುಳ್ಳ ಬಾರವನ್ನು ಹೊರಲು ಸಮರ್ಥವಾದ ಪಳಗಿಸಲ್ಪಟ್ಟ ಪ್ರಸಿದ್ಧವಾದ ಯೋಗ್ಯವಾದ ಎತ್ತರ ಮತ್ತು ಬಣ್ಣಗಳಿಂದ ಕೂಡಿದ ಸಿಂಧುನದಿಯ ತೀರದಲ್ಲಿ ಹುಟ್ಟಿದ ಹತ್ತು ಸಹಸ್ರ ರಾಸಭಗಳನ್ನೂ ಮತ್ತು ಇಂದ್ರಗೋಪದಂತೆ ಕೆಂಪಾದ, ಗಿಣಿಯಂತೆ ಹಸಿರುಬಣ್ಣದ, ಕಾಮನ ಬಿಲ್ಲಿನಂತೆ ಅನೇಕ ಬಣ್ಣಗಳಿಂದ ಕೂಡಿದ ಸಂಧ್ಯಾಕಾಲದ ಮೋಡದಂತೆ ಅರುಣ ಬಣ್ಣದಿಂದ ಕೂಡಿದ ಮನೋಜವವುಳ್ಳ ಅನೇಕ ಅರಣ್ಯ ಪ್ರಾಣಿಗಳನ್ನೂ ತೆಗೆದು ಕೊಂಡು ಬಂದು ಅನೇಕ ಸುಂದರವಾದ ಅಶ್ವಗಳನ್ನೂ ಅರಣ್ಯ ಪ್ರಾಣಿಗಳನ್ನೂ ಅನರ್ಘ್ಯವಾದ ಸುವರ್ಣಗಳನ್ನೂ ಅವನಿಗೆ ಕಾಣಿಕೆಯಾಗಿ ಕೊಟ್ಟರು.

ವನಾನ್ ಹೂಣಾನ್ ಶಕಾನೌಭ್ರಾನ್ ಪರ್ವತಾಂತರವಾಸಿನಃ ।
ವಾರ್ಷ್ಣೇಯಾನ್ ಹಾರಹೂಣಾಂಶ್ಚ ಕಕ್ಷಾನ್ ಹೈಮವತಸ್ತಥಾ ॥೪೯॥

ನ ಪಾರಯಾಮ್ಯಭಿಗತಾನ್ ವಿವಿಧಾನ್ ದ್ವಾರಿ ವಾರಿತಾನ್ ।
ಬಲ್ಯರ್ಥಂ ದದತಸ್ತಸ್ಯ ನಾನಾರೂಪಮನೇಕಶಃ ॥೫೦॥

ಹೂಣರು ಶಕರು ಔಭ್ರರು ಪರ್ವತದ ಮಧ್ಯದಲ್ಲಿ ವಾಸಿಸುವರು ವಾರ್ಷ್ಣೇಯರು ಹಾರಹೂಣರು ಕಕ್ಷರು ಹಿಮಾಲಯವಾಸಿಗಳು ಹೀಗೆ ನಾನಾ ದೇಶಗಳಿಂದ

ಕಪ್ಪಕಾಣಿಕೆಗಳನ್ನು ಕೊಡಲು ಬಂದ ಧರ್ಮರಾಜನ ಬಾಗಿಲಿನಲ್ಲಿ ನಿಂತಿದ್ದ ಅನೇಕ ವಿಧವಾದ ಜನರನ್ನು ನಾನು ಎಣಿಸಲು ಸಾಧ್ಯವಾಗಲಿಲ್ಲ.

ಸಿಂಹಳಶ್ಚ ತತೋ ರಾಜಾ ಪರಿಗೃಹ್ಯ ಧನಂ ಬಹು ।
ಗೋಶೀರ್ಷಕಂ ಪದ್ಮಕಂ ಚ ಹರಿಂ ಶ್ಯಾಮಂ ಚ ಚಂದನಮ್ ।
ಭಾರಾಣಾಂ ಶತಮೇಕಂ ತು ದ್ವಾರಿ ತಿಷ್ಠತಿ ವಾರಿತಃ । ॥೫೧॥

ಸಿಂಹಳರಾಜನು ಅಪರಿಮಿತವಾದ ಧನವನ್ನು ಗೋಶೀರ್ಷಕ ಪದ್ಮಕ ಹರಿ ಶ್ಯಾಮ ಎಂಬ ಚಂದನ ವಿಶೇಷಗಳ ನೂರೊಂದು ಭಾರವನ್ನು ತೆಗೆದುಕೊಂಡು ಧರ್ಮರಾಜನ ಬಾಗಿಲಿನಲ್ಲಿ ತಡೆಯಲ್ಪಟ್ಟು ನಿಂತಿದ್ದಾನೆ.

ಯೇ ನಗ್ನವಿಷಯಾ ರಾಜನ್ ಬರ್ಬರೇಯಾಶ್ಚ ವಿಶ್ರುತಾಃ ।
ಶತಂ ದಾಸೀಸಹಸ್ರಾಣಾಂ ಕಂಬಳಾಂಶ್ಚ ಸಹಸ್ರಶಃ ।
ಪರಿಗೃಹ್ಯ ಮಹಾರಾಜ ದ್ವಾರಿ ತಿಷ್ಠಂತಿ ವಾರಿತಾಃ ॥೫೨॥

ಎಲೈ ಮಹಾರಾಜನೇ! ನಗ್ನದೇಶದ ನಿವಾಸಿಗಳಾದ ಬರ್ಬರೇಯರೆಂದು ಪ್ರಖ್ಯಾತರಾದವರು ಒಂದು ಲಕ್ಷದಾಸಿಯರನ್ನೂ ಸಹಸ್ರಾರು ಕಂಬಳಿಗಳನ್ನೂ ತೆಗೆದುಕೊಂಡು ಬಂದು ಧರ್ಮರಾಜನ ಬಾಗಿಲಿನಲ್ಲಿ ಬಂದು ತಡೆಯಲ್ಪಟ್ಟು ನಿಂತಿದ್ದಾರೆ.

ಪೌಂಡ್ರಾಶ್ಚ ತಾಮ್ರಲಿಪ್ತಶ್ಚ ಯಥಾಕಾಮಕೃತೋ ನೃಪಾಃ ।
ಕಾಲೇಯಕಂ ಚ ರೂಪ್ಯಂ ಚ ಪರಿಗೃಹ್ಯ ಪರಿಚ್ಛದಾನ್ ॥೫೩॥

ಅಗರೂನ್ ಸ್ಫಾಟಿಕಾಂಶ್ಚೈವ ದಾಂತಾನ್ ಜಾತಿಫಾಲಾನಿ ಚ ।
ತಕಲಾಂಶ್ಚ ಲವಂಗಾಂಶ್ಚ ಕರ್ಪೂರಾಂಶ್ಚ ಮಹಾಬಲಾಃ ॥೫೪॥

ಅನ್ಯಾಂಶ್ಚ ವಿವಿಧಾನ್ ದ್ರವ್ಯಾನ್ ಪರಿಗೃಹ್ಯೋಪಸಂಸ್ಥಿತಾಃ ।
ಏತೇ ಸರ್ವೇ ಮಹಾತ್ಮಾನೋ ದ್ವಾರಿ ತಿಷ್ಠಂತಿ ವಾರಿತಾಃ ॥೫೫॥

ಪೌಂಡ್ರರು ತಾಮ್ರಲಿಪ್ತರು ಮೊದಲಾದ ರಾಜರು ಕಾಶ್ಮೀರ ದೇಶದಲ್ಲಿ ಉದ್ಭವವಾದ ಕೇಸರಿಯನ್ನು ರಜತವನ್ನು ಹೊದೆಯುವ ವಸ್ತ್ರಗಳನ್ನು ಅಗರುಗಳನ್ನು

ಸ್ಪಟಿಕ ಮಣಿಗಳನ್ನು ಗಜದಂತಗಳನ್ನು ಜಾಜಿ ಕಾಯಿ ತಕ್ಕೊಲ, ಲವಂಗ ಕರ್ಪೂರ ಮೊದಲಾದ ಎಲ್ಲಾ ದ್ರವ್ಯಗಳನ್ನೂ ತೆಗೆದುಕೊಂಡು ಬಂದು ಮಹಾಬಲರಾದ ಆ ಮಹಾತ್ಮರಾದ ಅವರೆಲ್ಲರೂ ಧರ್ಮರಾಜನ ಬಾಗಿಲಲ್ಲಿ ತಡೆಯಲ್ಪಟ್ಟು ನಿಂತಿದ್ದಾರೆ.

ಶೈಲೇಯಶ್ಚ ತತೋ ರಾಜಾ ವಸ್ತ್ರಾಣಿ ಪರಿಗೃಹ್ಯ ಸಃ ।
ದ್ವಾರಿ ತಿಷ್ಠನ್ ಮಹಾರಾಜ ದ್ವಾರಪಾಲೈರ್ನಿವಾರಿತಃ ॥೫೬॥

ಎಲೈ ಮಹಾರಾಜನೇ! ಅನಂತರ ಶೈಲೇಯ ರಾಜನು ವಸ್ತ್ರಗಳನ್ನು ತೆಗೆದುಕೊಂಡು ಬಂದು ಅವನ ದ್ವಾರದಲ್ಲಿ ನಿಂತು ತಡೆಯಲ್ಪಟ್ಟಿದ್ದಾನೆ.

ಚೀನಾನ್ ಹೂಣಾನ್ ಖಷಾನ್ ಕಾಚಾನ್ ಪರ್ವತಾಂತರವಾಸಿನಃ।
ಹಾರಿಷುರ್ದಶಸಾಹಸ್ರಾನ್ ವಿನೀತಾನ್ ದೀರ್ಘದರ್ಶನಾನ್ ॥೫೭॥

ಉಷ್ಣೀಷಕಂ ಕರಂ ಚೈವ ಕಿಟ್ಟಜಂ ಪಟ್ಟಜಂ ತಥಾ ।
ಪ್ರಮಾಣರಾಗಸ್ಪರ್ಶಾಢ್ಯಂ ವಾಹಿಚೀನಸಮುದ್ಭವಮ್ ।
ರಸಾನ್ ಗಂಧಾನ್ ಪ್ರಶಂಸನ್ ಸ ತತೋ ದ್ವಾರಮಲಭ್ಯತ ॥೫೮॥

ಚೀನರು ಹೂಣರು ಖಷರು ಕಾಚರು ಪರ್ವತಾಂತರವಾಸಿಗಳು ಇವರ ಅಧಿಪತಿಯಾದ ಹಾರಿಷು ಎಂಬ ರಾಜನು ಹತ್ತು ಸಹಸ್ರ ವಿನೀತರಾದ ಸೇವಕರನ್ನು ಲೋಹಮಯವಾದ ಮತ್ತು ತಂತುಮಯವಾದ ಅನೇಕ ರುಮಾಲುಗಳನ್ನು ಒಳ್ಳೆಯ ಬಣ್ಣ ಸ್ಪರ್ಶ ಮತ್ತು ಪ್ರಮಾಣಗಳಿಂದ ಕೂಡಿ ತಯಾರಿಸಲ್ಪಟ್ಟ ಅನೇಕ ರಸಗಳನ್ನು ಗಂಧಗಳನ್ನು ಕೀರ್ತಿಸುತ್ತಾ ಪ್ರವೇಶವನ್ನು ಪಡೆದನು.

ಖರ್ವಟಾಸ್ತೋಮರಾಶ್ಚೈವ ಶೂರಾ ವರ್ಧನಕಾಸ್ತಥಾ ।
ಚೇಲಾನ್ ಬಹುವಿಧಾನ್ ಗೃಹ್ಯ ದ್ವಾರಿ ತಿಷ್ಠಂತಿ ವಾರಿತಾಃ ॥೫೯॥

ಪ್ರಾಕ್ಕೋಟಾ ನಾಟಕೇಯಾಶ್ಚ ನಂದೀನಾಗರಕಾಸ್ತಥಾ ।
ನಾಪಿತಾಸ್ತ್ರೈಪುರಾಶ್ಚೈವ ಪಂಚಗೇಯಾಃ ಸಹೋರುಜಾಃ ॥೬೦॥

ತಥಾ ಚಾಟವಿಕಾಃ ಸರ್ವೇ ನಾನಾದ್ರವ್ಯಪರಿಚ್ಛದಾನ್ ।
ಪರಿಗೃಹ್ಯ ಮಹಾರಾಜ ದ್ವಾರಿ ತಿಷ್ಠಂತಿ ವಾರಿತಾಃ ॥೬೧॥

ಎಲೈ ಮಹಾರಾಜನೇ! ಖರ್ವಟರು ತೋಮರರು ಶೂರರು ಮತ್ತು ವರ್ಧನಕರೂ ಸಹ ಬಹುವಿಧವಾದ ವಸ್ತ್ರಗಳನ್ನು ತೆಗೆದುಕೊಂಡು ಅವನ ಬಾಗಿಲಿನಲ್ಲಿ ನಿಂತಿದ್ದಾರೆ. ಪ್ರಾಕ್ಕೋಟರು ನಾಟಕೇಯರು ನಂದಿನಾಗರವಾಸಿಗಳು ನಾಪಿತರು ತ್ರಿಪುರವಾಸಿಗಳು ಪಂಚಗೇಯರು ಊರುಜರು ಆಟವಿಕರು ಮೊದಲಾದ ಎಲ್ಲರೂ ನಾನಾ ದ್ರವ್ಯಗಳನ್ನು ತೆಗೆದುಕೊಂಡು ಅವನ ಬಾಗಿಲಿನಲ್ಲಿ ನಿಂತಿದ್ದಾರೆ.

ಮಹಾಬಲಾ ದೂರಗಮಾ ರೋಮಕಾಃ ಶೃಂಗಿಣೋ ನರಾಃ ।
ಬಲಾದ್ದೂರಗಮಾನ್ ರಾಜನ್ ಗಣಿತಂ ಚಾರ್ಬುದಂ ಮಯಾ ॥

ಕಿಟ್ಟೀಕೃತಂ ಸುವರ್ಣಂ ಚ ಪದ್ಮಕಿಂಜಲ್ಕಸನ್ನಿಭಮ್ ।
ಶಿತಾನ್ ದೀರ್ಘಾನಸೀನನ್ಯಾನ್ ಯಷ್ಟಿಶಕ್ತಿಪರಶ್ವಧಾನ್ ॥೬೩॥

ಶ್ಲಕ್ಷ್ಣಂ ವಸ್ತ್ರಮಕಾರ್ಪಾಸಮಾವಿಕಂ ಹ್ಯೇಣಕಾಜಿನಮ್ ।
ಬಲಿಮೇತಂ ಸಮಾದಾಯ ದ್ವಾರಿ ತಿಷ್ಠಂತಿ ವಾರಿತಾಃ ॥೬೪॥

ಮಹಾಬಲರಾದ ದೂರನಡೆಯುವ ಸಾಮರ್ಥ್ಯವನ್ನು ಹೊಂದಿದ ರೋಮಕರು ಮತ್ತು ಶೃಂಗಿಗಳು ಎನಿಸಿಕೊಂಡ ನರರು - ದೂರದಿಂದ ಬಂದ ಅವರನ್ನು ನಾನು ಒಂದು ಅರ್ಬುದ ಸಂಖ್ಯೆಯಲ್ಲಿ ಎಣಿಸಿದೆ- ಪದ್ಮಕೇಸರ ಬಣ್ಣದ ಸುವರ್ಣದ ಗಟ್ಟಿಗಳನ್ನು ಹರಿತವಾದ ಮತ್ತು ದೀರ್ಘವಾದ ಕತ್ತಿಗಳನ್ನು ಯಷ್ಟಿ, ಶಕ್ತಿ, ಪರಶ್ವಧ ಮೊದಲಾದ ಆಯುಧಗಳನ್ನು ಹತ್ತಿಯದಲ್ಲದ ಆವಿಕ ಮೊದಲಾದ ಸೂಕ್ಷ್ಮ ವಸ್ತ್ರಗಳನ್ನು ಕೃಷ್ಣಾಜಿನಗಳನ್ನು ಬಲಿಯಾಗಿ ತೆಗೆದುಕೊಂಡು ಬಂದು ಧರ್ಮರಾಜನ ಬಾಗಿಲಲ್ಲಿ ತಡೆಯಲ್ಪಟ್ಟು ನಿಂತಿದ್ದಾರೆ.

ಆಸನಾನಿ ಮಹಾರ್ಹಾಣಿ ಯಾನಾನಿ ಶಯನಾನಿ ಚ ।
ಮಣಿಕಾಂಚನಚಿತ್ರಾಣಿ ಗಜದಂತಮಯಾನಿ ಚ ॥೬೫॥

ರಥಾಂಶ್ಚ ವಿವಿಧಾಕಾರಾನ್ ಜಾಂಬೂನದಪರಿಷ್ಕೃತಾನ್ ।
ಹಯೈರ್ವಿನೀತೈಃ ಸಂಪನ್ನಾನ್ ವೈಯಾಘ್ರಪರಿವಾರಿತಾನ್ ॥೬೬॥

ವಿಚಿತ್ರಾನ್ ಸಪರಿಸ್ತೋಮಾನ್ ಚಾಪಾನಿ ವಿವಿಧಾನಿ ಚ ।
ನಾರಾಚಾನರ್ಧನಾರಾಚಾನ್ ಶಸ್ತ್ರಾಣಿ ವಿವಿಧಾನಿ ಚ ॥೬೭॥

ಏತದ್ ಗೃಹ್ಯ ಮಹದ್ ದ್ರವ್ಯಂ ಪೂರ್ವದೇಶಾಧಿಪೋ ನೃಪಃ ।
ಪ್ರವಿಷ್ಟೋ ಯಜ್ಞಸದನಂ ಪಾಂಡವಸ್ಯ ಯಶಸ್ವಿನಃ ॥೬೮॥

ಜತುಚೇಲಾನ್ ದ್ವಿಸಾಹಸ್ರಂ ದುಕೂಲಾನ್ಯಯುತಾನಿ ಚ ।
ಕಾಂಸ್ಯಾನಿ ಚೈವ ಭಾಂಡಾನಿ ಮಹಾರ್ಹಾಣಿ ಕುಥಾನಿ ಚ ।
ಏತಾನ್ಯನ್ಯಾನಿ ರತ್ನಾನಿ ದದೌ ಪಾರ್ಥಸ್ಯ ವೈ ಮುದಾ ॥೬೯॥

ಪೂರ್ವದೇಶಾಧಿಪತಿಯಾದ ರಾಜನು ಬೆಲೆಬಾಳುವ ಆಸನಗಳನ್ನೂ ಯಾನಗಳನ್ನೂ ಶಯನಗಳನ್ನೂ ಮಣಿಕಾಂಚನಗಳಿಂದಲೂ ಗಜ ದಂತಗಳಿಂದಲೂ ಭೂಷಿತವಾದ, ವಿವಿಧಾಕಾರವಾದ ಸುವರ್ಣಾಭರಣಗಳಿಂದ ಭೂಷಿತವಾದ ವಿನೀತವಾದ ವ್ಯಾಘ್ರಚರ್ಮವನ್ನು ಧರಿಸಿದ ಅಶ್ವಗಳಿಂದ ಹೂಡಲ್ಪಟ್ಟ ಸುವರ್ಣಮಯವಾದ ರಥಗಳನ್ನೂ, ವಿಚಿತ್ರವಾದ ಪರಿಸ್ತೋಮಗಳನ್ನೂ ವಿವಿಧವಾದ ಧನುಸ್ಸುಗಳನ್ನೂ ಬಾಣಗಳನ್ನೂ ಅರ್ಧಬಾಣಗಳನ್ನೂ ಅನೇಕ ವಿಧವಾದ ಶಸ್ತ್ರಗಳನ್ನೂ ಜೊತೆಯಲ್ಲಿ ಬಹಳ ದ್ರವ್ಯವನ್ನೂ ತೆಗೆದುಕೊಂಡು ಬಂದು ಪಾಂಡವನಾದ ಕೀರ್ತಿಶಾಲಿಯಾದ ಧರ್ಮರಾಜನ ಯಜ್ಞ ಶಾಲೆಯನ್ನು ಪ್ರವೇಶಿಸಿದನು. ಅವನು ಲಾಕ್ಷಾರಸದಿಂದ ಚಿತ್ರಿತವಾಗಿದ್ದ ಎರಡು ಸಹಸ್ರ ವಸ್ತ್ರಗಳನ್ನೂ ಬೆಲೆಬಾಳುವ ಹತ್ತು ಸಾವಿರದುಕೂಲಗಳನ್ನೂ ಕಂಚಿನ ಪಾತ್ರೆಗಳನ್ನೂ ಬೆಲೆಬಾಳುವ ರತ್ನಗಂಬಳಿಗಳನ್ನೂ ಮತ್ತು ಇನ್ನೂ ವಿಧವಿಧವಾದ ರತ್ನಗಳನ್ನೂ ಧರ್ಮರಾಜನಿಗೆ ಸಂತೋಷದಿಂದ ಕೊಟ್ಟನು.

ಅನ್ಯಾನ್ ಬಹುವಿಧಾನ್ ರಾಜನ್ ನರಾಃಸಾಗರಮಾಶ್ರಿತಾಃ ।
ರತ್ನಂ ಬಹುವಿಧಂ ಗೃಹ್ಯ ದದುಸ್ತೇ ಪಾಂಡವಾಯ ತು ॥೭೦॥

ಎಲೈ ರಾಜನೇ! ಸಾಗರ ಸಮೀಪದಲ್ಲಿರುವ ಮನುಷ್ಯರು ಇನ್ನೂ ಅನೇಕ ವಿಧವಾದ ರತ್ನಗಳನ್ನು ತೆಗೆದುಕೊಂಡು ಬಂದು ಧರ್ಮರಾಜನಿಗೆ ಕೊಟ್ಟರು.

ಮಾಳವಶ್ಚ ತತೋ ರಾಜನ್ ರತ್ನಾನಿ ವಿವಿಧಾನಿ ಚ ।
ಗೋಧೂಮಾನಾಂ ಚ ರಾಜೇಂದ್ರ ದ್ರೋಣಾನಾಂ ಕೋಟಿಸಮ್ಮಿತಮ್ ॥

ಅನ್ಯಾಂಶ್ಚ ವಿವಿಧಾನ್ ಧಾನ್ಯಾನ್ ಪರಿಗೃಹ್ಯ ಮಹಾಬಲಃ ।
ಪಾಂಡವಾಯ ದದೌ ಪ್ರೀತ್ಯಾ ಪ್ರವಿವೇಶ ಮಹಾಧ್ವರಮ್ ॥೭೨॥

ರಾಜನೇ! ಅನಂತರ ಮಾಳವಾಧಿಪತಿಯು ವಿವಿಧವಾದ ರತ್ನಗಳನ್ನು ಮತ್ತು ಒಂದು ಕೋಟಿ ಖಂಡುಗ ಪ್ರಮಾಣದ ಗೋಧಿಯನ್ನು ಇನ್ನೂ ವಿವಿಧವಾದ ಧಾನ್ಯಗಳನ್ನೂ ತೆಗೆದುಕೊಂಡು ಬಂದು ಮಹಾಬಲನಾದ ಅವನು ಧರ್ಮರಾಜನ ಯಜ್ಞವನ್ನು ಪ್ರವೇಶಿಸಿ ಅವನಿಗೆ ಪ್ರೀತಿಯಿಂದ ಕೊಟ್ಟನು.

ನಾನಾರತ್ನಾನ್ ಬಹೂನ್ ಗೃಹ್ಯ ಸುರಾಷ್ಟ್ರಾಧಿಪತಿರ್ನೃಪಃ ।
ತೈಲಕುಂಭಾನ್ ಮಹಾರಾಜ ದ್ರೋಣಾನಾಮಯುತಾನಿ ಚ ॥೭೩॥

ಗುಡಾನಿ ಚ ಸಿತಾನ್ ಸ್ವಾದೂನ್ ಸಹಸ್ರಶಕಟೈರ್ನೃಪಃ ।
ಏತಾನಿ ಸರ್ವಾಣ್ಯಾದಾಯ ದದೌ ಕುಂತೀಸುತಾಯ ಸಃ ॥೭೪॥

ಎಲೈ ಮಹಾರಾಜನೇ! ಸುರಾಷ್ಟ್ರಾಧಿಪತಿಯು ಅನೇಕ ರಥಗಳನ್ನು ತೆಗೆದುಕೊಂಡು ಬಂದು ಹತ್ತು ಸಾವಿರ ದ್ರೋಣ ಪ್ರಮಾಣದ ತೈಲಕುಂಭಗಳನ್ನೂ ಶ್ವೇತವರ್ಣದ ಮಧುರವಾದ ಗುಡವನ್ನೂ ಸಹಸ್ರ ಶಕಟಗಳಲ್ಲಿ ಶ್ವೇತವರ್ಣದ ಮತ್ತು ಮಧುರವಾದ ಗುಡವನ್ನೂ (ಸಕ್ಕರೆಯನೂ) ತೆಗೆದುಕೊಂಡು ಬಂದು ಕುಂತೀಪುತ್ರನಾದ ಯುಧಿಷ್ಠಿರನಿಗೆ ಕೊಟ್ಟನು.

ಅನ್ಯೇ ಚ ಪಾರ್ಥಿವಾ ರಾಜನ್ ನಾನಾದೇಶಸಮಾಗತಾಃ ।
ರತ್ನಾನಿ ವಿವಿಧಾನ್ ಗೃಹ್ಯ ದದುಸ್ತೇ ಕೌರವಾಯ ತು ॥೭೫॥

ಎಲೈ ರಾಜನೇ! ಬೇರೆ ಬೇರೆ ದೇಶಗಳಿಂದ ಬಂದ ಇನ್ನೂ ಅನೇಕ ದೇಶದ ರಾಜರು ಅನೇಕ ವಿಧವಾದ ರತ್ನಗಳನ್ನು ಧರ್ಮರಾಜನಿಗೆ ಕೊಟ್ಟರು.

ಜಂಬೂದ್ವೀಪೇ ಸಮಸ್ತೇ ತು ಸರಾಷ್ಟ್ರವನಪರ್ವತೇ ।
ಕರಂ ತು ನ ಪ್ರಯಚ್ಛೇದ್ ಯೋ ನಾಸ್ತಿ ಪಾರ್ಥಸ್ಯ ಪಾರ್ಥಿವಃ ॥೭೬॥

ರಾಷ್ಟ್ರಗಳು ವನಗಳು ಪರ್ವತಗಳು ಇರುವ ಸಮಸ್ತವಾದ ಜಂಬೂದ್ವೀಪದಲ್ಲಿ ಧರ್ಮರಾಜನಿಗೆ ಕರವನ್ನು ಕೊಡದಿದ್ದ ಒಬ್ಬ ರಾಜನೂ ಇರಲಿಲ್ಲ.

ನರಃ ಸಪ್ತಸು ವರ್ಷೇಷು ತದ್ಯಜ್ಞೇ ನಾಸ್ತಿ ನಾಗತಃ ।
ಕ್ರತುರ್ನಾನಾಗುಣೈಃ ಕೀರ್ಣೋ ಬಭೌ ಶಕ್ರಸದೋ ಯಥಾ ॥೭೭॥

ಜಂಬೂದ್ವೀಪದ ಸಪ್ತವರ್ಷಗಳಿಂದ ಆ ಯಜ್ಞಕ್ಕೆ ಬರದಿದ್ದ ಒಬ್ಬ ವ್ಯಕ್ತಿಯೂ ಇರಲಿಲ್ಲ. ಅನೇಕ ಗುಣಗಳಿಂದ ಕೂಡಿದ ಆ ಯಜ್ಞಶಾಲೆಯು ಇಂದ್ರ ಸದನದಂತೆ ಶೋಭಿಸಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಚತುಃಸಪ್ತತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ಷಷ್ಠೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಪ್ಪತ್ನಾಲ್ಕನೆಯ ಅಧ್ಯಾಯವು ಮುಗಿಯಿತು.

★★★★★

ಎಪ್ಪತ್ತೈದನೆಯ ಅಧ್ಯಾಯ

(ಪುನಃ ಅಸೂಯೆಯಿಂದ ದುರ್ಯೋಧನನಿಂದ ಯಜ್ಞವೈಭವದ ವರ್ಣನೆ)

ದುರ್ಯೋಧನಃ

ಇಮಾಂಶ್ಚ ದೇಯಾನ್ ವಿವಿಧಾನ್ ನಿಬೋಧ ಮಮ ಪಾರ್ಥಿವ ।
ಯಜ್ಞಾರ್ಥೇ ರಾಜಭಿರ್ದತ್ತಾನ್ ಮಹತೋ ಧನಸಂಚಯಾನ್ ॥೧॥

ಎಲೈ ರಾಜನೇ! ಯಜ್ಞದ ಸಲುವಾಗಿ ರಾಜರು ಕೊಡಲು ತಂದಿದ್ದ ಈ ವಿವಿಧವಾದ ಮಹಾಧನರಾಶಿಗಳನ್ನು ತಿಳಿ.

ಮೇರುಮಂದರಯೋರ್ಮಧ್ಯೇ ಶೈಲೋದಾಮಭಿತೋ ನದೀಮ್ ।
ಯೇ ತೇ ಕೀಚಕವೇಣೂನಾಂ ಛಾಯಾಂ ರಮ್ಯಾಮುಪಾಸತೇ ॥೨॥

ಖಷಾಃ ಶಕಾಃ ಶತಜ್ಯೋತ್ಸ್ನಾಃ ಪ್ರವಾಸಾ ದೀರ್ಘವೇಣಿಕಾಃ ।
ಪಶುಪಾಶ್ಚ ಕುಣಿಂದಾಶ್ಚ ತಂಕಣಾಃ ಪರತಂಕಣಾಃ ॥೩॥

ತೇ ವೈ ಪಿಪೀಲಿಕಾ ನಾಮ ಪುರಾ ದತ್ತಂ ಪಿಪೀಲಿಕೈಃ ।
ಜಾತರೂಪಮಯಂ ದ್ರೋಣಮಹಾರ್ಘಃ ಪುಂಜಶೋ ನೃಪಾಃ ॥೪॥

ಮೇರುಮಂದರಪರ್ವತಗಳ ಮಧ್ಯದಲ್ಲಿರುವ ಶೈಲೋದಾನದಿಯ ತೀರದಲ್ಲಿರುವ ಕೀಚಕ ವೇಣುಗಳಚ್ಛಾಯೆಯಲ್ಲಿ ವಾಸಿಸುವ ಖಷರು ಶಕರು ಶತಜ್ಯೋತ್ಸ್ನರು

ಪ್ರವಾಸರು ದೀರ್ಘವೇಣಿಕರು ಪಶುಪರು ಕುಣಿಂದರು ತಂಕಣರು ಪರತಂಕಣರು ಇವರೆಲ್ಲರೂ ಪಿಪೀಲಕರು ಎಂದು ಕರೆಯಲ್ಪಡುತ್ತಾರೆ. ಈ ರಾಜರುಗಳು ಖಂಡುಗಗಟ್ಟಲೆ ಚಿನ್ನವನ್ನು ಹಿಂಡು ಹಿಂಡಾಗಿ ತಂದರು.

ಕೃಷ್ಣಾಭಾಂಶ್ಚಮರಾಂಶ್ಚೈವ ಶ್ವೇತ್ಯಾನನ್ಯಾನ್ ಶಶಿಪ್ರಭಾನ್ ।
ಹಿಮವತ್ಪುಷ್ಪಜಂ ಚೈವ ಸ್ವಾದು ಕ್ಷೌದ್ರರಸಂ ಬಹು ॥೫॥

ಉತ್ತರೇಭ್ಯಃ ಕುರುಭ್ಯಶ್ಚ ವ್ಯೂಢಂ ಮಾಲ್ಯಂ ಮಹಾಂಬುಭಿಃ ।
ಉತ್ತರಾದಪಿ ಕೈಲಾಸಾದ್ ಓಷಧೀಶ್ಚ ಮಹಾಬಲಾಃ ॥೬॥

ಪಾರ್ವತೇಯಾ ಬಲೀಂಶ್ಚಾನ್ಯಾನಾಹೃತ್ಯ ಪ್ರಣತಾಃ ಸ್ಥಿತಾಃ ।
ಅಜಾತಶತ್ರವೇ ರಾಜನ್ ದ್ವಾರಿ ತಿಷ್ಠಂತಿ ವಾರಿತಾಃ ॥೭॥

ಪರ್ವತ ಪ್ರದೇಶದ ರಾಜರು ಕೃಷ್ಣ ಚಮರೀ ಮೃಗಗಳನ್ನು ಚಂದ್ರನಂತೆ ಶ್ವೇತವರ್ಣದಿಂದ ಕೂಡಿದ ನಯವಾದ ಇನ್ನೂ ಅನೇಕ ಚಮರೀಮೃಗಗಳನ್ನು ಹಿಮಾಲಯದ ಪುಷ್ಪಗಳಿಂದ ಉಂಟಾದ ಸುಮಧುರವಾದ ಮಧುಗಳನ್ನು ಉತ್ತರ ಕುರು ಪ್ರದೇಶದಲ್ಲಿ ಕಟ್ಟಿದ ಅನೇಕ ಪುಷ್ಪಮಾಲೆಗಳನ್ನು ಉತ್ತರ ಕೈಲಾಸದಲ್ಲಿ ಬೆಳೆದ ಅನೇಕ ಓಷದಿಗಳನ್ನು ಮತ್ತು ಇನ್ನೂ ಅನೇಕ ಕಪ್ಪಕಾಣಿಕೆಗಳನ್ನು ಮಹಾಬಲರಾದ ಅವರು ಅಜಾತಶತ್ರುವಿಗಾಗಿ ತಂದು ಅವನ ಬಾಗಿಲಿನಲ್ಲಿ ದ್ವಾರಪಾಲಕರಿಂದ ತಡೆಯಲ್ಪಟ್ಟು ನಮಸ್ಕರಿಸಿ ನಿಂತಿದ್ದರು.

ಯೇ ಪರಾಂತನಿವಾಸಾಶ್ಚ ಸೂರ್ಯೋದಯಗಿರೇರನು ।
ವಾರಿಷೇಣಸಮುದ್ರಾಂತೇ ಲೌಹಿತ್ಯಮಭಿತಶ್ಚ ಯೇ ॥೮॥

ಫಲಮೂಲಾಶನಾ ಯೇ ಚ ಕಿರಾತಾಶ್ಚರ್ಮವರ್ಮಿಣಃ ।
ಚಂದನಾಗರುಮುಖ್ಯಾನಿ ಮಹಾರ್ಹಾನ್ ಕಂಬಳಾಂಸ್ತಥಾ ॥೯॥

ಚರ್ಮರತ್ನಸುವರ್ಣಾನಿ ಗಂಧಾನುಚ್ಚಾವಚಾನಿ ಚ ।
ಕೈರಾತಕನಾಮಯುತಂ ದಾಸೀನಾಂ ಚ ವಿಶಾಂಪತೇ ॥೧೦॥

ಆಹೃತ್ಯ ರಮಣೀಯಾರ್ಹಾನ್ ದೂರಜಾನ್ ಮೃಗಪಕ್ಷಿಣಃ ।
ನಿಚಿತಂ ಪರ್ವತೇಭ್ಯಶ್ಚ ಸುವರ್ಣಂ ಭೂರಿವರ್ಚಸಮ್ ॥೧೧॥

ಬಲಿಂ ಚ ಕೃತ್ಸ್ನಮಾದಾಯ ದ್ವಾರಿ ತಿಷ್ಠಂತಿ ವಾರಿತಾಃ ।
ಕ್ರೂರಶಸ್ತ್ರಾಃ ಕ್ರೂರದೃಶಸ್ತಾನಪಶ್ಯಮಹಂ ತದಾ ॥೧೨॥

ಸೂರ್ಯೋದಯ ಪರ್ವತದ ಸಮೀಪದಲ್ಲಿ ಕೊನೆಯಭಾಗದಲ್ಲಿ ನಿವಾಸಿಸುವಂತಹ ವಾರಿಶೇಣ ಸಮುದ್ರದ ಸಮೀಪದಲ್ಲಿ ನಿವಾಸಿಸುವ ಕೆಂಪು ಸಮುದ್ರದ ಬಳಿಯಲ್ಲಿ ನಿವಾಸಿಸುವ ಫಲಮೂಲಭಕ್ಷಕರಾದ ಕಿರಾತರು ಚರ್ಮಕವಚನವನ್ನು ಧರಿಸಿದವರು ಸಹ ಚಂದನ ಅಗರು ಮುಂತಾದ ಸುಗಂಧವಸ್ತುಗಳನ್ನೂ ಬೆಲೆ ಬಾಳುವ ಕಂಬಳಿಗಳನ್ನೂ ಚರ್ಮ ರತ್ನ ಮತ್ತು ಸುವರ್ಣಗಳನ್ನೂ ನಾನಾ ವಿಧವಾದ ಸುಗಂಧದ್ರವ್ಯಗಳನ್ನೂ ಹತ್ತುಸಾವಿರ ಕಿರಾತಸ್ತ್ರೀ ದಾಸಿಯರನ್ನೂ ಮತ್ತು ದೂರ ದೇಶದ ರಮಣೀಯವಾದ ಮೃಗ ಪಕ್ಷಿಗಳನ್ನೂ ಪರ್ವತಗಳಿಂದ ಆರಿಸಿದ ಬಹಳವಾಗಿ ಪ್ರಕಾಶಿಸುವ ಸುವರ್ಣವನ್ನೂ ಸಮಗ್ರವಾದ ಬಲಿಯನ್ನಾಗಿ ತೆಗೆದುಕೊಂಡು ಬಂದು ಧರ್ಮರಾಜನ ಬಾಗಿಲಲ್ಲಿ ದ್ವಾರಪಾಲಕರಿಂದ ತಡೆಯಲ್ಪಟ್ಟು ನಿಂತಿದ್ದಾರೆ. ಕ್ರೂರ ಶಸ್ತ್ರಗಳನ್ನು ಧರಿಸಿದವರೂ ಮತ್ತು ನೋಡಲು ಕ್ರೂರರೂ ಆದ ಅವರನ್ನು ನಾನು ಆಗ ನೋಡಿದೆನು.

ಕಾಂಭೋಜಾ ದರದಾ ದಾರ್ವ್ಯಾಃ ಶೂರಾ ಭೈಮಕಶಾಸ್ತಥಾ ।
ಔದುಂಬರಾ ದುರ್ವಿಭಾಗಾಃ ಪೌರವಾಃ ಸಹ ಬಾಹ್ಲಿಕೈಃ ॥೧೩॥

ಕಾಶ್ಮೀರಾಃ ಕುಂದಲಾಶ್ಚೈವ ಗೌರಕಾ ಹಂಸಕಾಸ್ತಥಾ ।
ಶೈಬ್ಯಾಸ್ತ್ರಿಗರ್ತಾ ಯೌಧೇಯಾ ರಾಜನ್ಯಾ ಮದ್ರಕೈಃ ಸಹ ॥೧೪॥

ವಸಾತಯಃ ಸಮೌಲೇಯಾಃ ಸಹ ಕ್ಷುದ್ರಕಮಾಳವೈಃ ।
ಶೌಂಡಿಕಾಶ್ಚೋದರಾಶ್ಚೈವ ಸಾಲ್ವಾಶ್ಚೈವ ವಿಶಾಂಪತೇ ॥೧೫॥

ಅಂಗಾ ವಂಗಾಃಕಳಿಂಗಾಶ್ಚ ಅನವದ್ಯಾ ಗಯೈಃ ಸಹ ।
ಸ್ವಜಾತೀಯಾಃ ಶ್ರೇಣಿಮಂತಃ ಶ್ರೇಯಾಂಸಃ ಶಸ್ತ್ರಧಾರಿಣಃ ।
ಆಹಾರ್ಷುಃ ಕ್ಷತ್ರಿಯಾ ವಿತ್ತಂ ಶತಶೋಽಜಾತಶತ್ರವೇ ॥೧೬॥

ಕಾಂಬೋಜರು ದರದರು ದಾರ್ವ್ಯರು ಶೂರರು ಭೈಮರು ಕಷರು ಔದುಂಬರರು ದುರ್ವಿಭಾಗರು ಪೌರವರು ಬಾಹ್ಲೀಕರು ಕಾಶ್ಮೀರರು ಕುಂದಳರು ಗೌರಕರು ಹಂಸಕರು

ಶೈಬರು ತ್ರಿಗರ್ತರು ಯೌಧೇಯರು ಮದ್ರಕರು ವಸಾತಿಗಳು ಮಾಲೇಯರು ಕ್ಷುದ್ರಕಮಾಳವರು ಶೌಂಡಿಕರು ಔದರರು ಸಾಲ್ವರು ಅಂಗರು ವಂಗರು ಕಳಿಂಗರು ಗಯರು ಈ ಎಲ್ಲಾ ಶ್ರೇಷ್ಠರಾದ ಕ್ಷತ್ರಿಯರು ಶಸ್ತ್ರಗಳನ್ನು ಧರಿಸಿ ತಮ್ಮ ಜಾತಿಯವರ ಜೊತೆಯಲ್ಲಿ ಸಾಲನ್ನು ಹಿಡಿದು ನೂರರ ಗಟ್ಟಲೆಯಲ್ಲಿ ಅಜಾತಶತ್ರುವಿಗೆ ಧನವನ್ನು ತಂದರು.

ವಂಗಾಃ ಕಳಿಂಗಪತಯಃ ತಾಮ್ರಲಿಪ್ತಾಶ್ಚ ಪುಂಡ್ರಕಾಃ ।
ದುಕೂಲಂ ಕೌಶಿಕಂ ಚೈವ ಪತ್ತ್ರೋರ್ಣಂ ಚೈವ ಭಾರತ ॥೧೭॥

ಔಪವ್ರತಾ ನೃಪಾಸ್ತಸ್ಯ ದದುಃ ಪ್ರೀತ್ಯಾऽನು ಚಾಗಮನ್ ।
ಪ್ರೋಚ್ಯಂತೇ ತತ್ರ ಹಿ ದ್ವಾಃಸ್ಥೈ ರ್ಬಲಿಮಾದಾಯ ವಿಷ್ಠಿತಾಃ ॥೧೮॥

ವಂಗರು ಕಳಿಂಗರಾಜರು ತಾಮ್ರಲಿಪ್ತರು ಪುಂಡ್ರಕರು ದುಕೂಲರು ಕೌಶಿಕರು ಮೊದಲಾದವರು ಒಳ್ಳೆಯ ರೇಷ್ಮೆವಸ್ತ್ರಗಳನ್ನು ತಂದರು. ಎಲೈ ಭಾರತನೇ! ಔಪವ್ರತರಾಜರು ಅವನ ಮೇಲಿನ ಪ್ರೀತಿಯಿಂದ ಬಂದು ಅವನಿಗೆ ಕಪ್ಪವನ್ನು ಕೊಟ್ಟರು. ಬಲಿಯನ್ನು ತಂದು ನಿಂತಿರುವ ರಾಜರನ್ನು ದ್ವಾರಪಾಲಕರು ಧರ್ಮರಾಜನಿಗೆ ನಿವೇದಿಸುತ್ತಿದ್ದರು.

ಈಷಾದಂತಾನ್ ಹೇಮಕಕ್ಷ್ಯಾನ್ ಪದ್ಮವರ್ಣಾನ್ ಕುಥಾಸ್ತೃತಾನ್ ।
ಪರ್ವತಪ್ರತಿಮಾನ್ ಜಾತಾನಭಿತಃ ಕಂಬುಕಿಂಕರಾನ್ ॥೧೯॥

ಕ್ಷಮಾವತಃ ಕುಲೀನಾಂಶ್ಚ ಕುಂಜರಾನ್ ಸಪರಿಚ್ಛದಾನ್ ।
ದತ್ತ್ವೈಕೈಕಂ ಚ ದಶಕಂ ದ್ವಾರೇಭ್ಯಃಪ್ರವಿಶಂತಿ ತೇ ॥೨೦॥

ಬಾಣದಷ್ಟು ಉದ್ದವಾದ ದಂತವನ್ನು ಉಳ್ಳ ಸುವರ್ಣ ಕಕ್ಷಗಳಿಂದ ಅಲಂಕೃತವಾದ ಪದ್ಮವರ್ಣದಿಂದ ಕೂಡಿರುವ ಬೆನ್ನಿನ ಮೇಲೆ ರತ್ನಗಂಬಳಿಯನ್ನು ಹಾಸಿರುವ ಪರ್ವತ ಸದೃಶವಾದ ಸುತ್ತಲೂ ಕಂಬು (ಶಂಖ)ವನ್ನು ಹಿಡಿದ ಕಿಂಕರರನ್ನು ಹೊಂದಿದ ಪಳಗಿದ ಕುಲೀನವಾದ ಆನೆಗಳನ್ನು ಅದರ ಸಲಕರಣೆಗಳೊಂದಿಗೆ ಅವರಲ್ಲಿ ಒಬ್ಬೊಬ್ಬನೂ ಹತ್ತು ಆನೆಗಳನ್ನು ಕೊಟ್ಟು ದ್ವಾರದಿಂದ ಒಳಗೆ ಹೋಗುತ್ತಾರೆ.

ವೈದೇಹಕಾಶ್ಚ ಪುಂಡ್ರಾಶ್ಚ ಗೌಲೇಯಾಸ್ತಾಮ್ರಲಿಪ್ತಕಾಃ ।
ಮರುಕಾಃ ಕಾಶಿಕಾ ದರ್ದಾ ಭೌಮೇಯಾ ನಟನಾಟಕಾಃ ॥೨೧॥

ಕರ್ಣಾಟಾಃ ಕಾಂಸ್ಯಕುಟ್ಟಾಶ್ಚ ಪದ್ಮಜಾಲಾಃ ಸುತೀವರಾಃ ।
ದಾಕ್ಷಿಣಾತ್ಯಾಃ ಪುಳಿಂದಾಶ್ಚ ಶಂಬರಾಃ ಕಂಗಣಾಃ ಖಷಾಃ ॥೨೩॥

ಬರ್ಬರಾ ಯವನಾಶ್ಚೈವ ಗರ್ಗರಾಭೀರಕಾಸ್ತಥಾ ।
ಪಲ್ಲವಾಃ ಶಕಕಾರೂಹಾಃ ತುಂಬರಾಃ ಕಾಶಿಕಾಸ್ತಥಾ ॥೨೪॥

ಏತೇ ಚಾನ್ಯೇ ಚ ಬಹವೋ ಗಣಾ ದಿಗ್ಭ್ಯಃ ಸಮಾಗತಾಃ ।
ಅನ್ಯೈಶ್ಚೋಪಹೃತಾನ್ಯತ್ರ ರತ್ನಾನಿ ಹಿ ಮಹಾತ್ಮಭಿಃ ॥೨೫॥

ವೈದೇಹಕರು ಪುಂಡ್ರರು ಗೌಲೇಯರು ತಾಮ್ರಲಿಪ್ತರು ಕಾಶಿಕರು ದರ್ದರು ಭೌಮೇಯರು ನಟನಾಟಕರು ಕರ್ಣಾಟರು ಕಾಂಸ್ಯಕುಟ್ಟರು ಪದ್ಮಜಾಲರು ಸುಶೀವರರು ದಾಕ್ಷಿಣಾತ್ಯರು ಪುಳಿಂದರು ಶಂಬರರು ಕಂಗಣರು ಖಷರು ಬರ್ಬರರು ಯವನರು ಗರ್ಗರರು ಆಭೀರಕರು - ಇವರೆಲ್ಲರೂ ಗಣಗಳಲ್ಲಿ ನಾನಾ ದಿಕ್ಕುಗಳಿಂದ ಬಂದರು ಇವರೂ ಮತ್ತು ಇನ್ನೂ ಅನೇಕ ಮಹಾತ್ಮರೂ ಅಲ್ಲಿಗೆ ಅನೇಕ ರತ್ನಗಳನ್ನು ತಂದರು.

ಸಮುದ್ರಸಾರವೈಡೂರ್ಯಾನ್ ಮುಕ್ತಾಃ ಶಂಖಾಂಸ್ತಥೈವ ಚ ।
ಶುಭಾವರ್ತಾನ್ ಶುಭಾಃ ಶುಕ್ತೀಃ ಸಿಂಹಳಾಃ ಸಮುಪಾಹರನ್ ॥೨೬॥

ಸಿಂಹಳರಾಜರು ಸಮುದ್ರದ ಶ್ರೇಷ್ಠವಾದ ವಸ್ತುಗಳನ್ನು ವೈಡೂರ್ಯಗಳನ್ನು ಮುತ್ತುಗಳನ್ನು ಒಳ್ಳೆಯ ಆವರ್ತಗಳನ್ನು ಹೊಂದಿದ್ದ ಶಂಖಗಳನ್ನು ಒಳ್ಳೆಯ ಶುಕ್ತಿಗಳನ್ನು ಕಾಣಿಕೆಯಾಗಿ ತಂದರು.

ಸಂಭೃತಾನ್ ಮಣಿಚೀರೈಶ್ಚ ಶ್ಯಾಮಾಂಸ್ತಾಮ್ರಾಂತಲೋಚನಾನ್ ।
ರಾಜನ್ ಚಿತ್ರರಥೋ ನಾಮ ಗಂಧರ್ವೋ ವಾಸವಾನುಗಃ ।
ಶತಾನಿ ಚತ್ವಾರ್ಯದದಾದ್ ಹಯಾನಾಂ ವಾತರಂಹಸಾಮ್ ॥೨೭॥

ಎಲೈ ರಾಜನೇ! ಚಿತ್ರರಥನೆಂಬ ಇಂದ್ರಸೇವಕನಾದ ಗಂಧರ್ವನು ಚೆನ್ನಾಗಿ ಪೋಷಿಸಲ್ಪಟ್ಟ ಮಣಿಯ ವಸ್ತ್ರಗಳಿಂದ ಅಲಂಕರಿಸಲ್ಪಟ್ಟ ಶ್ಯಾಮವರ್ಣದ ಕೆಂಪಾದ

ಕಣ್ಣಂಚುಗಳನ್ನು ಉಳ್ಳ ವಾಯುವೇಗವನ್ನು ಹೊಂದಿದ ನಾಲ್ಕು ನೂರು ಅಶ್ವಗಳನ್ನು ಕೊಟ್ಟನು.

ತುಂಬುರುಸ್ತು ಮುದಾದತ್ತ ಗಂಧರ್ವೋ ವಾಜಿನಾಂ ಶತಮ್ ।
ಆಮ್ರಪತ್ರಸವರ್ಣಾನಾಮದದಾದ್ಧೇಮಮಾಲಿನಾಮ್ ॥೨೮॥

ತುಂಬುರುವಾದರೋ ಸಂತೋಷದಿಂದ ಮಾವಿನ ಎಲೆಗಳ ವರ್ಣವನ್ನು ಹೊಂದಿದ್ದ ಸುವರ್ಣಮಾಲೆಗಳನ್ನು ಧರಿಸಿದ್ದ ನೂರು ಅಶ್ವಗಳನ್ನು ಕೊಟ್ಟನು.

ಕುಣಿಂದರಾಜಃ ಕೌರವ್ಯ ಅಂಶುಕಾನಾಂ ವಿಶಾಂಪತೇ ।
ಅದದಾತ್ ರಾಜರತ್ನಾನಾಂ ಶತಾನಿ ಚ ಬಹೂನಿ ಚ ॥೨೯॥

ಎಲೈ ರಾಜನೇ! ಕುಣಿಂದ ರಾಜನು ಅನೇಕ ವಸ್ತ್ರಗಳನ್ನೂ ನೂರಾರು ರಾಜರತ್ನಗಳನ್ನೂ ಕೊಟ್ಟನು.

ವಿರಾಟೇನ ತು ಮತ್ಸ್ಯೇನ ಬಲಿರ್ಮುಖ್ಯೋ ನಿವೇದಿತಃ ।
ಕುಂಜರಾಣಾಂ ಸಹಸ್ರೇ ದ್ವೇ ಮತ್ತಾನಾಂ ಸಮುಪಾಹೃತೇ ॥೩೦॥

ಮತ್ಸ್ಯಾದಿ ಪತಿಯಾದ ವಿರಾಟನು ಮದಿಸಿದ ಎರಡು ಸಹಸ್ರ ಆನೆಗಳ ಶ್ರೇಷ್ಠವಾದ ಕಾಣಿಕೆಯನ್ನು ಕೊಟ್ಟನು.

ವಸುರಾಷ್ಟ್ರಾದ್ವಸುದಾನೋ ರಾಜಾ ಷಟ್‌ತ್ರಿಂಶತಂ ಗಜಾನ್ ।
ಅಶ್ವಾನಾಂ ಚ ಸಹಸ್ರೇದ್ವೇ ಹ್ಯದಾತ್ ಕಾಂಚನಮಾಲಿನಾಮ್ ॥೩೧॥

ಜವಸತ್ತ್ವೋಪಪನ್ನಾನಾಂ ವಯಸ್ಥಾನಾಂ ನರಾಧಿಪ ।
ಬಲಿಂ ಚ ಕೃತ್ಸ್ನಮಾದಾಯ ಪಾಂಡವಾಯ ನ್ಯವೇದಯತ್ ॥೩೨॥

ವಸುರಾಷ್ಟ್ರಾಧಿಪತಿಯಾದ ವಸುದಾನನು ಮೂವತ್ತಾರು ಗಜಗಳನ್ನು ಮತ್ತು ಬಲ ಮತ್ತು ವೇಗಗಳನ್ನು ಹೊಂದಿದ ತರುಣ ವಯಸ್ಸಿನ ಕಾಂಚನ ಮಾಲೆಯನ್ನು ಧರಿಸಿದ ಎರಡು ಸಹಸ್ರ ಅಶ್ವಗಳನ್ನು ಸಮಗ್ರವಾಗಿ ಕಾಣಿಕೆಯಾಗಿ ತಂದು ಪಾಂಡವನಿಗೆ ಅರ್ಪಿಸಿದನು.

ಯಜ್ಞಸೇನೇನ ದಾಸೀನಾಂ ಸಹಸ್ರಾಣಿ ಚತುರ್ದಶ ।
ದಾಸಾನಾಮಯುತಂ ಚಾಪಿ ಸದಾರಾಣಾಂ ವಿಶಾಂಪತೇ ॥೩೩॥

ಗಜಯುಕ್ತಾ ಮಹಾರಾಜ ರಥಾಃ ಷಡ್ವಿಂಶತಿಸ್ತಥಾ ।
ರಾಜ್ಯಂ ಚ ಕೃತ್ಸ್ನಂ ಪಾರ್ಥೇಭ್ಯೋ ಯಜ್ಞಾರ್ಥಂ ವೈ ನಿವೇದಿತಮ್ ॥

ಎಲೈ ಮಹಾರಾಜನೇ! ದ್ರೌಪದಿಯ ತಂದೆಯಾದ ಯಜ್ಞಸೇನನು ಹದಿನಾಲ್ಕು ಸಹಸ್ರ ದಾಸಿಯರನ್ನು ಭಾರ್ಯೆಯರಿಂದ ಒಡಗೂಡಿದ ಹತ್ತು ಸಹಸ್ರ ದಾಸರನ್ನು ಗಜಯುಕ್ತವಾದ ಇಪ್ಪತ್ತಾರು ರಥಗಳನ್ನು ಮತ್ತು ತನ್ನ ಸಮಗ್ರವಾದ ರಾಜ್ಯವನ್ನು ಸಹ ಯಜ್ಞಾರ್ಥವಾಗಿ ಪಾಂಡವರಿಗೆ ನಿವೇದಿಸಿದನು.

ಪಂಚವಿಂಶತಿಸಾಹಸ್ರಮಶ್ವಾನಾಂ ಹೇಮಮಾಲಿನಾಮ್ ।
ಬಾಹ್ಲೀಕಃ ಪ್ರದದೌ ರಾಜನ್ ಪಾಂಡವಾಯ ಮಹಾತ್ಮನೇ ॥೩೫॥

ಹಯಯುಕ್ತಾನ್ ಮಹಾರಾಜ ರಥಾನ್ ಷಡ್ವಿಂಶತಿಂ ಗಜಾನ್ ।
ರಾಜ್ಯಂ ಚ ಕೃತ್ಸ್ನಂ ಪಾರ್ಥೇಭ್ಯೋ ಯಜ್ಞಾರ್ಥಂ ವೈ ನಿವೇದಿತಮ್ ॥

ಎಲೈ ರಾಜನೇ! ಬಾಹ್ಲೀಕ ರಾಜನು ಮಹಾತ್ಮನಾದ ಧರ್ಮರಾಜನಿಗೆ ಹೇಮಮಾಲೆಯನ್ನು ಧರಿಸಿದ ಇಪ್ಪತ್ತೈದು ಸಾವಿರ ಅಶ್ವಗಳನ್ನು ಅಶ್ವಯುಕ್ತವಾದ ಅನೇಕ ರಥಗಳನ್ನು ಇಪ್ಪತ್ತಾರು ಸಾವಿರ ಗಜಗಳನ್ನು ಮತ್ತು ಸಮಗ್ರವಾದ ರಾಜ್ಯವನ್ನು ಯಜ್ಞಾರ್ಥವಾಗಿ ಪಾಂಡವರಿಗೆ ನಿವೇದಿಸಿದನು.

ವಾಸುದೇವೋಪಿ ವಾರ್ಷ್ಣೇಯೋ ಮಾನಂ ಕುರ್ವನ್ ಕಿರೀಟಿನಃ ।
ಅದದಾದ್ ದ್ವಿಪಮುಖ್ಯಾನಾಂ ಸಹಸ್ರಾಣಿ ಚತುರ್ದ್ದಶ ॥೩೭॥

ವೃಷ್ಣಿಕುಲ ಸಮುದ್ಭೂತನಾದ ಕೃಷ್ಣನೂ ಸಹ ಅರ್ಜುನನಿಗೆ ಸತ್ಕಾರವನ್ನು ಮಾಡುವವನಾಗಿ ಹದಿನಾಲ್ಕು ಸಾವಿರ ಶ್ರೇಷ್ಠವಾದ ಆನೆಗಳನ್ನು ಕೊಟ್ಟನು.

ಆತ್ಮಾ ಹಿ ಪಾರ್ಥಃ ಕೃಷ್ಣಸ್ಯ ಕೃಷ್ಣೋ ಹ್ಯಾತ್ಮಾ ಕಿರೀಟಿನಃ ।
ಯದ್ ಬ್ರೂಯಾದರ್ಜುನಂ ಕೃಷ್ಣಃ ಸರ್ವಂ ಕುರ್ಯಾದಸಂಶಯಮ್ ॥

ಕೃಷ್ಣನ ಆತ್ಮ ಅರ್ಜುನ ಮತ್ತು ಅರ್ಜುನನ ಆತ್ಮ ಕೃಷ್ಣನೆಂದು ಪ್ರಸಿದ್ಧವಷ್ಟೇ. ಕೃಷ್ಣನು ಅರ್ಜುನನಿಗೆ ಏನು ಹೇಳುತ್ತಾನೋ ಅದೆಲ್ಲವನ್ನೂ ಅರ್ಜುನನು ನಿಸ್ಸಂಶಯವಾಗಿ ಮಾಡುವನು.

ಕೃಷ್ಣೋ ಧನಂಜಯಸ್ಯಾರ್ಥೇ ಸರ್ವಲೋಕಾನಪಿ ತ್ಯಜೇತ್ ।
ತಥೈವ ಪಾರ್ಥಃ ಕೃಷ್ಣಾರ್ಥೇ ಪ್ರಾಣಾನಪಿ ಪರಿತ್ಯಜೇತ್ ॥೩೯॥

ಕೃಷ್ಣನು ಅರ್ಜುನನ ಸಲುವಾಗಿ ಎಲ್ಲಾ ಲೋಕಗಳನ್ನು ತ್ಯಜಿಸಿಯಾನು. ಹಾಗೆಯೇ ಅರ್ಜುನನೂ ಸಹ ಕೃಷ್ಣನಿಗೊಸ್ಕರ ತನ್ನ ಪ್ರಾಣಗಳನ್ನಾದರೂ ಬಿಟ್ಟಾನು.

ಅಂತರಾತ್ಮಾ ಮಹಾರಾಜ ತಸ್ಮಾದ್ಯನ್ಮೇ ನ ಶಾಮ್ಯತಿ ।
ಅಶ್ವೇನೇವ ಯುಗಂ ನದ್ಧಂ ವಿಪರೀತಂ ಹಿ ದೃಶ್ಯತೇ ॥೪೦॥

ಎಲೈ ಮಹಾರಾಜನೇ! ಆದ್ದರಿಂದ ನನ್ನ ಅಂತರಾತ್ಮವು ಶಾಂತಿಯನ್ನು ಹೊಂದುತ್ತಿಲ್ಲ. ನೊಗಕ್ಕೆ ವಿಪರೀತವಾಗಿ ಕಟ್ಟಿದ ಅಶ್ವದಂತೆ ನನ್ನ ಮತ್ತು ಧರ್ಮರಾಜನ ಸಂಪತ್ತು ವಿರುದ್ಧವಾಗಿದೆ.

ಗುಣಹೀನತರಾಶ್ಚಾಪಿ ಯುಷ್ಮಾಭಿರ್ಭರತರ್ಷಭ ।
ಕನೀಯಾಂಸೋಭಿವರ್ಧಂತೇ ಜ್ಯೇಷ್ಠಪುತ್ರೋವಸೀದತಿ ॥೪೧॥

ಎಲೈ ಭರತಶ್ರೇಷ್ಠನೇ! ನಿಮ್ಮ ಸಹಾಯದಿಂದ ಅತ್ಯಂತ ಗುಣಹೀನರಾದ ಚಿಕ್ಕವರಾದ ಪಾಂಡವರು ಅಭಿವೃದ್ಧಿಯನ್ನು ಹೊಂದುತ್ತಿದ್ದಾರೆ. ಜ್ಯೇಷ್ಠ ಪುತ್ರನು ಕ್ಷಯವನ್ನು ಹೊಂದುತ್ತಿದ್ದಾನೆ.

ಯಜ್ಞೇ ಚ ಕಾರಣಂ ಭಕ್ಯಾ ಕುಂತೀಪುತ್ರಸ್ಯ ಧೀಮತಃ ।
ಸರ್ವೇ ಸುಬಲಸಂಪನ್ನಾಃ ಕ್ಷತ್ರಿಯಾ ಮಾನಗರ್ವಿತಾಃ ॥೪೨॥

ಯಜ್ಞೇ ಕರಪ್ರದಾಸ್ತಸ್ಯ ಯೇ ಚ ಮ್ಲೇಚ್ಛೇಷು ಭೂಮಿಪಾಃ ।
ಅತೀವ ತೇ ಪ್ರಮುದಿತಾಃ ಪಾಂಡುಪುತ್ರಾ ಮಹಾರಥಾಃ ॥೪೩॥

ಮೇಧಾವಿಯಾದ ಧರ್ಮರಾಜನ ಯಜ್ಞಕ್ಕೆ ಮುಖ್ಯವಾದ ಕಾರಣವೆಂದರೆ ಮಾನಗರ್ವಿತವಾದವರೂ ಬಲಸಂಪನ್ನರೂ ಆದ ಕ್ಷತ್ರಿಯರೆಲ್ಲರೂ ಅವನ ಮೇಲಿನ

ಭಕ್ತಿಯಿಂದ ಅವನಿಗೆ ಕಪ್ಪವನ್ನು ಒಪ್ಪಿಸುತ್ತಿದ್ದಾರೆ. ಮ್ಲೇಚ್ಛರಾಜರೂ ಸಹ ಅವನಿಗೆ ಕಾಣಿಕೆಯನ್ನು ಕೊಡುತ್ತಿದ್ದಾರೆ. ಆ ಕಾರಣದಿಂದ ಮಹಾರಥರಾದ ಆ ಪಾಂಡು ಪುತ್ರರು ಬಹಳ ಸಂತೋಷದಲ್ಲಿ ಇದ್ದಾರೆ.

ಅತ್ಯರ್ಥಂ ಬ್ರಾಹ್ಮಣಾಶ್ಚೈವ ಕ್ಷತ್ರಿಯಾ ಯುಧಿ ನಿರ್ಜಿತಾಃ ।
ಉಪಕರ್ತುಂ ವಿಶಶ್ಚೈವ ಶೂದ್ರಾಃ ಶುಶ್ರೂಷವೋಽಪಿ ಚ ॥೪೪॥

ಪ್ರೀತ್ಯಾ ಚ ಬಹುಮಾನಾಚ್ಚ ಅಭ್ಯಾಗಚ್ಛನ್ ಯುಧಿಷ್ಠಿರಮ್ ।
ಸರ್ವೇ ಮ್ಲೇಚ್ಛಾಃ ಸರ್ವವರ್ಣಾ ಆದಿಮಧ್ಯಾಂತಜಾಸ್ತಥಾ ॥೪೫॥

ಬ್ರಾಹ್ಮಣರು ಮತ್ತು ಯುದ್ಧದಲ್ಲಿ ಪರಾಜಿತ ಕ್ಷತ್ರಿಯರು ಮತ್ತು ವೈಶ್ಯರು ಶೂದ್ರರೂ ಸಹ ಧರ್ಮರಾಜನಿಗೆ ಉಪಕಾರವನ್ನು ಮಾಡಲು ಅವರ ಮೇಲಿನ ಪ್ರೀತಿಯಿಂದಲೂ ಬಹುಮಾನದಿಂದಲೂ ಅವನ ಬಳಿಗೆ ಬಂದಿದ್ದಾರೆ. ಎಲ್ಲಾ ಮ್ಲೇಚ್ಛರು ಎಲ್ಲಾ ವರ್ಣದವರು ಆದಿ ಮಧ್ಯಾಂತ ಜನ್ಮದವರು ಸಹ ಅವನ ಬಳಿಗೆ ಬಂದಿದ್ದಾರೆ.

ನಾನಾದೇಶಸಮುತ್ಥೈಶ್ಚ ನಾನಾಜಾತಿಭಿರಾಗತೈಃ ।
ಪರ್ಯಾಪ್ತ ಇವ ಲೋಕೋಯಂ ಯುಧಿಷ್ಠಿರನಿವೇಶನೇ ॥೪೬॥

ನಾನಾ ದೇಶದಲ್ಲಿ ಜನಿಸಿದ ನಾನಾ ಜಾತಿಯ ಜನಗಳಿಂದ ತುಂಬಿದ ಧರ್ಮರಾಜನ ಮನೆಯು ತುಂಬಿ ಹೋದ ಲೋಕದಂತೆ ಕಾಣುತ್ತಿದೆ.

ಉಚ್ಚಾವಚಾನ್ ಮಹಾನ್ ಮಹ್ಯಂ ರಾಜಭಿಃ ಪ್ರೇಷಿತಾನ್ ಬಹೂನ್ ।
ಶತ್ರೂಣಾಂ ಪಶ್ಯತೋ ದುಃಖಾನ್ಮಮೂರ್ಷಾ ಮೇದ್ಯ ಜಾಯತೇ ॥

ರಾಜರುಗಳಿಂದ ವಿಹಿತವಾದ ಅನೇಕ ವಿಧವಾದ ಉಚ್ಚಾವಚವಾದ ಶತ್ರುಗಳ ಉತ್ಸವವನ್ನು ನೋಡುತ್ತಿರುವ ನನಗೆ ದುಃಖದಿಂದ ಈ ದಿನ ಮರಣದ ಇಚ್ಛೆಯು ಉಂಟಾಗಿದೆ.

ಭೃತ್ಯಾಸ್ತು ಯೇ ಪಾಂಡವಾನಾಂ ತಾಂಸ್ತೇ ವಕ್ಷ್ಯಾಮಿ ಭಾರತ ।
ಯೇಷಾಂ ಮಾಂಸಂ ಚ ಪಕ್ವಂ ಚ ಸಂವಿಧತ್ತೇ ಯುಧಿಷ್ಠಿರಃ ॥೪೮॥

ಅಯುತಂ ತ್ರೀಣಿ ಪದ್ಮಾನಿ ಗಜಾರೋಹಾಃ ಸಸಾದಿನಃ ।
ರಥಾನಾಮರ್ಬುದಂ ಚೈವ ಪಾದಾತಾ ಬಹವಸ್ತಥಾ ॥೪೯॥

ಎಲೈ ಭಾರತನೇ! ಪಾಂಡವರ ಸೇವಕರು ಯಾರಿದ್ದಾರೋ ಅವರನ್ನು ತಿಳಿಸುವೆನು. ಅವರಿಗೆ ಅಮ ಮತ್ತು ಪಕ್ವಮಾಂಸದ ಮೇಲ್ವಿಚಾರಣೆಯನ್ನು ಸ್ವತಃ ಯುಧಿಷ್ಠಿರನೇ ನೋಡಿಕೊಳ್ಳುತ್ತಾನೆ. ಗಜಾರೋಹಿಗಳು ಅಶ್ವಾರೋಹಿಗಳು ಸೇರಿ ಮೂರು ಪದ್ಮಗಳ ಮೇಲೆ ಹತ್ತು ಸಹಸ್ರ ಸಂಖ್ಯೆಯಲ್ಲಿದ್ದಾರೆ. ಒಂದು ಅರ್ಬುದ ರಥಗಳಿವೆ. ಅನೇಕ ಪದಾತಿ ಜನರಿದ್ದಾರೆ.

ಪ್ರಣೀಯಾಮಾಣ ಆರಂಭಃ ಪಚ್ಯಮಾನಸ್ತಥೈವ ಚ ।
ವಿಸೃಜ್ಯಮಾನಶ್ಚಾನ್ಯತ್ರ ಪುಣ್ಯಾಹಸ್ವನ ಏವ ಚ ॥೫೦॥

ಒಂದು ಕಡೆ ಕಾರ್ಯ ಉಪಕ್ರಮವಾಗಿರುತ್ತದೆ. ಇನ್ನೊಂದೆಡೆ ಪಾಕವು ನಡೆಯುತ್ತಿರುತ್ತದೆ. ಇನ್ನೊಂದು ಕಡೆ ಪಾಕವು ಬಡಿಸಲ್ಪಡುತ್ತಿರುತ್ತದೆ. ಮತ್ತೊಂದು ಕಡೆ ಪುಣ್ಯಾಹ ಶಬ್ದವು ಕೇಳಿ ಬರುತ್ತದೆ.

ನಾಭುಕ್ತವಂತಂ ನಾಹೃಷ್ಟಂ ನಾಸುಭಿಕ್ಷಂ ಕಥಂಚನ ।
ಅಪಶ್ಯಂ ಸರ್ವವರ್ಣಾನಾಂ ಯುಧಿಷ್ಠಿರಮಹಾಧ್ವರೇ ॥೫೧॥

ಯುಧಿಷ್ಠಿರ ಮಹಾಯಾಗದಲ್ಲಿ ಭೋಜನವನ್ನು ಮಾಡದವನಾಗಲೀ ಸಂತೋಷವಿಲ್ಲದವನಾಗಲೀ ಸುಭಕ್ಷವಿಲ್ಲದವನಾಗಲೀ ಯಾವ ವರ್ಣಗಳಲ್ಲಿಯೂ ಒಬ್ಬನೂ ಇರಲಿಲ್ಲ.

ಅಷ್ಟಾಶೀತಿಸಹಸ್ರಾಣಿ ಸ್ನಾತಕಾ ಗೃಹಮೇಧಿನಃ ।
ತ್ರಿಂಶದ್ದಾಸೀಕ ಏಕೈಕೋ ಯಾನ್ ಬಿಭರ್ತಿ ಯುಧಿಷ್ಠಿರಃ ।
ಪರಿತುಷ್ಟಾಶ್ಚ ತೇ ಸರ್ವೇ ತಸ್ಯಾಶಂಸನ್ನರಿಕ್ಷಯಮ್ ॥೫೨॥

ಎಂಬತ್ತೆಂಟು ಸಹಸ್ರ ಸ್ನಾತಕರು ಅವನ ಮನೆಯಲ್ಲಿ ವಾಸಮಾಡುತ್ತಾರೆ. ಒಬ್ಬೊಬ್ಬರಿಗೂ ಮೂವತ್ತು ದಾಸಿಯರಿದ್ದಾರೆ. ಧರ್ಮರಾಜನು ಅವರೆಲ್ಲರನ್ನೂ ಪೋಷಿಸುತ್ತಾನೆ. ಸಂತುಷ್ಟರಾದ ಅವರೆಲ್ಲರೂ ಅವನಿಗೆ ಶತ್ರುಕ್ಷಯದ ಆಶೀರ್ವಾದವನ್ನು ಮಾಡುತ್ತಾರೆ.

ದಶಾನ್ಯಾನಿ ಸಹಸ್ರಾಣಿ ಯತೀನಾಮೂರ್ಧ್ವರೇತಸಾಮ್ ।
ಭುಂಜತೇ ರುಗ್ಮಪಾತ್ರೇಷು ಯುಧಿಷ್ಠಿರನಿವೇಶನೇ ॥೫೩॥

ಅದಲ್ಲದೆ ಇನ್ನೂ ಹತ್ತು ಸಹಸ್ರ ಊರ್ಧ್ವರೇತಸ್ಕರಾದ ಯತಿಗಳು ಸುವರ್ಣ ಪಾತ್ರೆಗಳಲ್ಲಿ ಯುಧಿಷ್ಠಿರನ ಮನೆಯಲ್ಲಿ ನಿತ್ಯವೂ ಭೋಜನವನ್ನು ಮಾಡುತ್ತಾರೆ.

ಭುಕ್ತಾಭುಕ್ತಕೃತಂ ನೈವ ಸರ್ವಮಾಕುಬ್ಜವಾಮನಾನ್ ।
ಅಭುಕ್ತ್ವಾ ಯಾಜ್ಞಸೇನೀ ತು ಪ್ರತ್ಯವೈಕ್ಷದ್ ವಿಶಾಂಪತೇ ॥೫೪॥

ಕುಬ್ಜರು (ಕಾಲು ಮಾತ್ರ ಹ್ರಸ್ವವಾಗಿರುವವರು) ವಾಮನರು (ದೇಹವೆಲ್ಲವೂ ಹ್ರಸ್ವವಾಗಿರುವವರು,) ಕುಬ್ಜರು ಮತ್ತು ವಾಮನರನ್ನು ಹಿಡಿದು ಅಲ್ಲಿ ಯಾರೂ ಭೋಜನವನ್ನು ಮಾಡದವರು ಇರಲಿಲ್ಲ. ಎಲ್ಲರೂ ಭೋಜನವನ್ನು ಮಾಡಿಯೇ ಇರುತ್ತಿದ್ದರು. ಎಲೈ ರಾಜನೇ! ಯಾಜ್ಞಸೇನಿಯಾದ ದ್ರೌಪದಿಯು ಎಲ್ಲರ ಭೋಜನವಾಗುವವರೆಗೆ ತಾನು ಭೋಜನವನ್ನು ಮಾಡದೆ ಎಲ್ಲರ ಮೇಲ್ವಿಚಾರಣೆಯನ್ನು ಮಾಡುತ್ತಿದ್ದಳು.

ದ್ವೌ ಕರಂ ನ ಪ್ರಯಚ್ಛೇತಾಂ ಕುಂತೀಪುತ್ರಾಯ ಭಾರತ ।
ವೈವಾಹಿಕೇನ ಪಾಂಚಾಲಾಃ ಸಖ್ಯೇನಾಂಧಕವೃಷ್ಣಯಃ ॥೫೫॥

ಎಲೈ ಭಾರತನೇ! ವಿವಾಹ ಸಂಬಂಧದ ಕಾರಣದಿಂದ ಪಾಂಚಾಲರು ಮತ್ತು ಸ್ನೇಹದ ಕಾರಣದಿಂದಾಗಿ ಅಂಧಕವೃಷ್ಣಿಗಳು ಇವರಿಬ್ಬರೂ ಕುಂತೀ ಪುತ್ರನಾದ ಧರ್ಮರಾಜನಿಗೆ ಕಪ್ಪವನ್ನು ಕೊಡಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಪಂಚಸಪ್ತತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ಸಪ್ತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಪ್ಪತ್ತೈದನೆಯ ಅಧ್ಯಾಯವು ಮುಗಿಯಿತು.

★★★★★

ಎಪ್ಪತ್ತಾರನೆಯ ಅಧ್ಯಾಯ

(ಪುನಃ ಅಸೂಯಾಪರನಾದ ದುರ್ಯೋಧನನಿಂದ ಯುಧಿಷ್ಠಿರನ ವೈಭವದ ವರ್ಣನೆ.)

ದುರ್ಯೋಧನಃ

ಆರ್ಯಾಸ್ತು ಯೇ ವೈ ರಾಜಾನಃ ಸತ್ಯಸಂಧಾ ಮಹಾವ್ರತಾಃ ।
ಪರ್ಯಾಪ್ತವಿದ್ಯಾ ವಕ್ತಾರೋ ಹ್ಯಧ್ವರಾವಭೃಥಾಪ್ಲುತಾಃ ॥೧॥

ಪ್ರೀತಿಮಂತೋ ಮಹಾತ್ಮಾನೋ ಧರ್ಮಾತ್ಮಾನೋ ಯಶಸ್ವಿನಃ ।
ಮೂರ್ಧಾವಸಿಕ್ತಾಸ್ತೇ ಚೈನಂ ರಾಜಾನಃ ಪರ್ಯುಪಾಸತೇ ॥೨॥

ಆರ್ಯರಾದ ಸತ್ಯಸಂಧರಾದ ಮಹಾವ್ರತರಾದ ವಿದ್ಯಾಪಾರಂಗತರಾದ ವಾಗ್ಮಿಗಳಾದ ಯಾಗವನ್ನು ಆಚರಿಸಿ, ಅವಭೃಥಸ್ನಾನವನ್ನು ಮಾಡಿದ ಕೀರ್ತಿವಂತರೂ ಧರ್ಮಾತ್ಮರೂ ಮಹಾತ್ಮರೂ ಆದ ಮೂರ್ಧಾಭಿಷಿಕ್ತರಾದ ರಾಜರು ಸಂತೋಷದಿಂದ ಧರ್ಮರಾಜನ ಸೇವೆಯನ್ನು ಮಾಡುತ್ತಾರೆ.

ದಕ್ಷಿಣಾರ್ಥಂ ಸಮಾನೀತಾ ರಾಜಭಿಃ ಕಾಂಸ್ಯದೋಹನಾಃ ।
ಅರಣ್ಯೇ ಬಹುಸಾಹಸ್ರಾ ಅಪಶ್ಯಂ ತತ್ರತತ್ರ ಗಾಃ ॥೩॥

ರಾಜರು ದಕ್ಷಿಣೆಯನ್ನು ಕೊಡಲು ಕಂಚಿನ ಪಾತ್ರೆಗಳ ಜೊತೆಯಲ್ಲಿ ತಂದ ಅನೇಕ ಸಹಸ್ರ ಗೋವುಗಳನ್ನು ನಾನು ಅರಣ್ಯದಲ್ಲಿ ಅಲ್ಲಲ್ಲಿ ನೋಡಿದೆನು.

ಆಜಹ್ರುಸ್ತಸ್ಯ ಸತ್ಕೃತ್ಯ ಸ್ವಯಮುದ್ಯಮ್ಯ ಭಾರತ ।
ಅಭಿಷೇಕಾರ್ಥಮವ್ಯಗ್ರಾ ಭಾಂಡಮುಚ್ಚಾವಚಂ ನೃಪಾಃ ॥೪॥

ಎಲೈ ಭಾರತನೇ! ಅವನ ಅಭಿಷೇಕಾರ್ಥವಾಗಿ ಎಚ್ಚರಿಕೆಯಿಂದ ಕೂಡಿದ ರಾಜರು ಅವನನ್ನು ಸತ್ಕರಿಸಿ ಚಿಕ್ಕ ಮತ್ತು ದೊಡ್ಡ ಪಾತ್ರೆಗಳನ್ನು ಸ್ವತಃ ಹೊತ್ತುತಂದರು.

ಬಾಹ್ಲೀಕೋ ರಥಮಾಹಾರ್ಷೀಜ್ಜಾಂಬೂನದಪರಿಷ್ಕೃತಮ್ ।
ಸುದಕ್ಷಿಣಸ್ತು ಯುಯುಜೇ ಶ್ವೇತೈಃ ಕಾಂಭೋಜಜೈರ್ಹಯೈಃ ॥೫॥

ಬಾಹ್ಲೀಕನು ಸುವರ್ಣದಿಂದ ಅಲಂಕೃತವಾದ ರಥವನ್ನು ತಂದನು. ಸುದಕ್ಷಿಣನು ಕಾಂಬೋಜದೇಶದ ಶ್ವೇತವರ್ಣದ ಹಯಗಳನ್ನು ಆ ರಥಕ್ಕೆ ಹೂಡಿದನು.

ಸುನೀಥಃ ಪ್ರೀತಿಮಾಂಸ್ತಸ್ಯ ಅನುಕರ್ಷಂ ಮಹಾಬಲಃ ।
ಧ್ವಜಂ ಚೇದಿಪತಿಃ ಕ್ಷಿಪ್ರಮಹಾರ್ಷೀತ್ ಸ್ವಯಮುದ್ಯತಮ್ ॥೬॥

ಮಹಾಬಲನಾದ ಚೇದಿಪತಿಯಾದ ಸುನೀಥನು ಧರ್ಮರಾಜನ ಮೇಲಿನ ಪ್ರೀತಿಯಿಂದ ಅವನ ಧ್ವಜದ ಅನುಕರ್ಷವನ್ನೂ ಸ್ವತಃ ಉದ್ಯುಕ್ತನಾಗಿ ರಥದ ಧ್ವಜವನ್ನೂ ಬೇಗ ತಂದನು.

ದಾಕ್ಷಿಣಾತ್ಯಃ ಸನ್ನಹನಂ ಸ್ರಗುಷ್ಣೀಷೇ ತು ಮಾಗಧಃ ।
ವಸುದಾನೋ ಮಹೇಷ್ವಾಸೋ ಗಜೇಂದ್ರಂ ಷಷ್ಟಿಹಾಯನಮ್ ॥೭॥

ಮಾತ್ಸ್ಯಃ ಕಕ್ಷ್ಯಾಂಸ್ತಥಾ ಚಿತ್ರಾನೇಕಲವ್ಯ ಉಪಾನಹೌ ।
ಆವಂತೇಯಾಸ್ತ್ವಭಿಷೇಕಾರ್ಥಮಪೋ ಬಹುವಿಧಾಸ್ತಥಾ ॥೮॥

ದಕ್ಷಿಣದೇಶದ ರಾಜನು ರೇಶ್ಮೆಗಳನ್ನೂ ಮಗಧರಾಜನು ರುಮಾಲು ಮತ್ತು ಪುಷ್ಪಮಾಲೆಗಳನ್ನೂ, ಮಹಾಧನುಸ್ಸನ್ನು ಹೊಂದಿದ ವಸುದಾನನು ಅರವತ್ತು ವರ್ಷ ಪ್ರಾಯದ ಗಜೇಂದ್ರನನ್ನೂ ಮತ್ಸ್ಯರಾಜನು ಆ ಗಜೇಂದ್ರನ ವಿಚಿತ್ರವಾದ ಅನೇಕ ಕಕ್ಷ್ಯಗಳನ್ನೂ ಏಕಲವ್ಯನು ಪಾದರಕ್ಷೆಗಳನ್ನೂ ಅವಂತಿರಾಜರು ಅಭಿಷೇಕದ ಸಲುವಾಗಿ ಅನೇಕ ವಿಧವಾದ ಜಲಗಳನ್ನೂ ತಂದರು.

ಚೇಕಿತಾನ ಉಪಾಸಂಗಂ ಧನುಃ ಕಾಶ್ಯ ಉಪಾಹರತ್ ।
ಅಸಿಂ ತು ಸತ್ವರುಂ ಶಲ್ಯಃ ಶೈಕ್ಯಂ ಕಾಂಚನಭೂಷಿತಮ್ ॥೯॥

ಚೇಕಿತಾನನು ಬತ್ತಳಿಕೆಯನ್ನೂ ಕಾಶಿರಾಜನು ಧನುಸ್ಸನ್ನೂ ಶಲ್ಯನು ಒಳ್ಳೆಯ ಹಿಡಿಯಿಂದ ಕೂಡಿದ ಖಡ್ಗವನ್ನೂ ಮತ್ತು ಸುವರ್ಣದಿಂದ ಭೂಷಿತವಾದ ನೆಲುವುಗಳನ್ನು ತಂದರು.

ಅನುಜಗ್ಮುರ್ಮಹಾತ್ಮಾನಮ್ ಋತ್ವಿಜೋ ಭೂರಿದಕ್ಷಿಣಮ್ ।
ಮಹೇಂದ್ರಮಿವ ದೇವೇಂದ್ರಂ ದಿವಿ ಸಪ್ತರ್ಷಯೋ ಯಥಾ ॥೧೦॥

ಸ್ವರ್ಗದಲ್ಲಿ ಸಪ್ತಋಷಿಗಳು ಅತುಲೈಶ್ವರ್ಯವುಳ್ಳ ಇಂದ್ರನನ್ನು ಹಿಂಬಾಲಿಸುವಂತೆ ಭೂರಿದಕ್ಷಿಣೆಯನ್ನು ಕೊಡುವ ಮಹಾತ್ಮನಾದ ಧರ್ಮರಾಜನನ್ನು ಋತ್ವಿಜರು ಹಿಂಬಾಲಿಸಿದರು.

ಅಧಾರಯಚ್ಛತ್ರಮಸ್ಯ ಸಾತ್ಯಕಿಃ ಸತ್ಯವಿಕ್ರಮಃ ।
ಧನಂಜಯಶ್ಚ ವ್ಯಜನೇ ಭೀಮಸೇನಶ್ಚ ಪಾಂಡವಃ ।
ಚಾಮರೇ ಚಾಪಿ ಶುದ್ಧೇ ದ್ವೇ ಯಮೌ ಜಗೃಹತುಸ್ತದಾ ॥೧೧॥

ಸತ್ಯವಿಕ್ರಮನಾದ ಸಾತ್ಯಕಿಯು ಅವನಿಗೆ ಛತ್ರವನ್ನು ಹಿಡಿದನು. ಪಾಂಡುಪುತ್ರರಾದ ಅರ್ಜುನ ಮತ್ತು ಭೀಮಸೇನರು ಅವನಿಗೆ ವ್ಯಜನವನ್ನು ಬೀಸಿದರು. ನಕುಲಸಹದೇವರು ಶುದ್ಧವಾದ ಎರಡು ಚಾಮರಗಳನ್ನು ಕೈಯ್ಯಲ್ಲಿ ತೆಗೆದುಕೊಂಡರು.

ಉಪಾಗೃಹ್ಣಾದ್ಯದಿಂದ್ರಾಯ ಪುರಾ ಕಲ್ಪೇ ಪ್ರಜಾಪತಿಃ ।
ತದಸ್ಮೈ ಶಂಖಮಾಹಾರ್ಷೀದ್ ವರುಣಃ ಕಲಶೋದಧಿಃ ॥೧೨॥

ಸಪ್ತನಿಷ್ಕಸಹಸ್ರೇಣ ಸುಕೃತಂ ವಿಶ್ವಕರ್ಮಣಾ ।
ತೇನಾಭಿಷಿಕ್ತಃ ಕೃಷ್ಣೇನ ತತ್ರ ಮೇ ಕಶ್ಮಲೋಭವತ್ ॥೧೩॥

ಹಿಂದಿನ ಕಲ್ಪದಲ್ಲಿ ಬ್ರಹ್ಮದೇವರು ಇಂದ್ರನಿಗೋಸ್ಕರವಾಗಿ ಯಾವ ಶಂಖವನ್ನು ಸ್ವೀಕರಿಸಿದ್ದರೋ ಆ ಶಂಖವನ್ನು ಕ್ಷೀರಸಮುದ್ರದ ಅಭಿಮಾನಿಯಾದ ವರುಣನು ಧರ್ಮರಾಜನಿಗೆ ತಂದುಕೊಟ್ಟನು. ವಿಶ್ವಕರ್ಮನು ಏಳು ಸಹಸ್ರ ನಿಷ್ಕಗಳಿಂದ ಚೆನ್ನಾಗಿ ಅಲಂಕರಿಸಿದ್ದ ಆ ಶಂಖದಿಂದ ಕೃಷ್ಣನು ಧರ್ಮರಾಜನಿಗೆ ಅಭಿಷೇಕವನ್ನು ಮಾಡಿದನು. ಆಗ ನನ್ನ ಮನಸ್ಸಿಗೆ ವಿಷಾದ ಉಂಟಾಯಿತು.

ಜಲಾರ್ಥಂ ತತ್ರ ರಾಜೇಂದ್ರ ಘಟಾನಾದಾಯ ರಾಕ್ಷಸಾಃ ।
ಗಚ್ಛಂತಿ ಪೂರ್ವಾದಪರಂ ಸಮುದ್ರಂ ಚಾಪಿ ದಕ್ಷಿಣಮ್ ।
ಉತ್ತರಂ ತು ನ ಗಚ್ಛಂತಿ ವಿನಾ ತಾತ ಪತತ್ರಿಭಿಃ ॥೧೪॥

ರಾಜೇಂದ್ರನೇ! ಅಭಿಷೇಕ ಜಲದ ಸಲುವಾಗಿ ರಾಕ್ಷಸರು ಘಟಗಳನ್ನು ತೆಗೆದುಕೊಂಡು ಪೂರ್ವ ಸಮುದ್ರದಿಂದ ಪಶ್ಚಿಮ ಸಮುದ್ರಕ್ಕೆ ಮತ್ತು ದಕ್ಷಿಣ

ಸಮುದ್ರಕ್ಕೂ ಹೋಗುತ್ತಿದ್ದರು. ತಂದೆಯೇ! ಪಕ್ಷಿಗಳನ್ನು ಬಿಟ್ಟು ಬೇರೆ ಯಾರೂ ಉತ್ತರ ದಿಕ್ಕಿಗೆ ಹೋಗುವುದಿಲ್ಲ.

ತತ್ರ ಸ್ಮ ದಧ್ಮುಃ ಶತಶಃ ಶಂಖಾನ್ ಮಂಗಳ್ಯಕಾರಣಾತ್ ।
ಪ್ರಾಣದಂತ ಸಮಾಧ್ಮಾತಾಸ್ತತೋ ರೋಮಾಣಿ ಮೇಽಹೃಷನ್ ।
ಪ್ರಣಮ್ಯ ಭೂಮಿಪಾಲಾಶ್ಚ ಪೇತುರ್ಹೀನಾಃ ಸ್ವತೇಜಸಾ ॥೧೫॥

ಅಲ್ಲಿ ಮಂಗಳದ ಸಲುವಾಗಿ ನೂರಾರು ಶಂಖಗಳನ್ನು ಊದಿದರು. ಹಾಗೆ ಊದಲ್ಪಟ್ಟ ಶಂಖಗಳು ದೊಡ್ಡ ನಾದವನ್ನು ಮಾಡಿದವು. ಆ ನಾದದಿಂದ ಉಂಟಾದ ಭಯದಿಂದ ನನಗೆ ರೋಮಾಂಚನವಾಯಿತು. ಆ ನಾದವನ್ನು ಕೇಳಿ ತೇಜೋಹೀನರಾದ ರಾಜರು ಭೂಮಿಯ ಮೇಲೆ ಬಿದ್ದರು.

ಧೃಷ್ಟದ್ಯುಮ್ನಃ ಪಾಂಡವಾಶ್ಚ ಸಾತ್ಯಕಿಃ ಕೇಶವೋಽಷ್ಟಮಃ ।
ಸತ್ವಸ್ಥಾಃ ಶೌರ್ಯಸಂಪನ್ನಾ ಹ್ಯನ್ಯೋನ್ಯಂ ಪ್ರಿಯಕಾರಿಣಃ ।
ವಿಸಂಜ್ಞಾನ್ ಭೂಮಿಪಾನ್ ದೃಷ್ಟ್ವಾ ಮಾಂ ಸ್ಮ ತೇ ಪ್ರಾಹಸಂಸ್ತದಾ ॥

ಪರಸ್ಪರ ಪ್ರಿಯವನ್ನು ಮಾಡುವ ಧೈರ್ಯ ಶೌರ್ಯಸಂಪನ್ನರಾದ ಧೃಷ್ಟದ್ಯುಮ್ನ ಪಂಚಪಾಂಡವರು ಸಾತ್ಯಕಿ ಮತ್ತು ಕೇಶವ ಇವರು ಸಂಜ್ಞಾಹೀನರಾದ ರಾಜರನ್ನು ಮತ್ತು ನನ್ನನ್ನು ನೋಡಿ ಆಗ ಅಪಹಾಸವನ್ನು ಮಾಡಿದರು.

ತತಃ ಪ್ರಹೃಷ್ಟೋ ಬೀಭತ್ಸುಃ ಪ್ರಾದಾದ್ಧೇಮವಿಷಾಣಿನಾಮ್ ।
ಶತಾನ್ಯನಡುಹಾಂ ಪಂಚ ದ್ವಿಜಮುಖ್ಯೇಷು ಭಾರತ ॥೧೭॥

ಆಗ ಸಂತೋಷಗೊಂಡ ಅರ್ಜುನನು ಬ್ರಾಹ್ಮಣರಿಗೆ ಸುವರ್ಣದಿಂದ ಭೂಷಿತವಾದ ಶೃಂಗಗಳುಳ್ಳ ಐದುನೂರು ವೃಷಭಗಳನ್ನು ಕೊಟ್ಟನು.

ನ ಚೈವಂ ವೀರ್ಯವಾನಾಸೀದ್ ಯೌವನಾಶ್ವೋ ಮನುರ್ನ ಚ ।
ನ ಚ ರಾಜಾ ಪೃಥುರ್ವೈನ್ಯೋ ನ ಚಾಪ್ಯಾಸೀದ್ ಭಗೀರಥಃ ॥೧೮॥

ಯಥಾತಿಮಾತ್ರಂ ಕೌಂತೇಯಃ ಶ್ರಿಯಾ ಪರಮಯಾ ಯುತಃ ।
ರಾಜಸೂಯಮವಾಪ್ಯೈವಂ ಹರಿಶ್ಚಂದ್ರ ಇವ ಪ್ರಭುಃ ॥೧೯॥

ಹೇಗೆ ಕುಂತಿಯ ಪುತ್ರನಾದ ಧರ್ಮರಾಜನು ರಾಜಸೂಯಯಾಗವನ್ನು ಮಾಡಿ ಪ್ರಭುವಾದ ಹರಿಶ್ಚಂದ್ರನಂತೆ ಕಾಂತಿಯುಕ್ತನಾದನೋ ಹಾಗೆ ಯೌವನಾಶ್ವನ ಪುತ್ರನಾದ ಮಾಂಧಾತೃವಾಗಲೀ ಅಥವಾ ಮನುವಾಗಲೀ ಅಥವಾ ವೇನನ ಮಗನಾದ ಪೃಥುಚಕ್ರವರ್ತಿಯಾಗಲೀ ಅಥವಾ ಭಗೀರಥನಾಗಲೀ ಕಾಂತಿ ಮತ್ತು ಶೌರ್ಯ ಸಂಪನ್ನರಾಗಿರಲಿಲ್ಲ.

ಏತಾಂ ದೃಷ್ಟ್ವಾ ಶ್ರಿಯಂ ಪಾರ್ಥೇ ಹರಿಶ್ಚಂದ್ರೇ ಯಥಾ ವಿಭೋ (ಪುರಾ)।
ಕಥಂ ನು ಜೀವಿತಂ ಶ್ರೇಯೋ ಮಮ ಪಶ್ಯಸಿ ಭಾರತ ॥೨೦॥

ಅಶ್ವೇನೇವ ಯುಗಂ ನದ್ಧಂ ವಿಪರ್ಯಸ್ತಂ ನರಾಧಿಪ ।
ಕನೀಯಾಂಸೋಭಿವರ್ಧಂತೇ ಜ್ಯೇಷ್ಠಾ ಹೀಯಂತಿ ಭಾರತ ॥೨೧॥

ಹಿಂದೆ ಹರಿಶ್ಚಂದ್ರನಿಗೆ ಇದ್ದ ವೈಭವದಂತೆ ಇರುವ ಧರ್ಮರಾಜನ ಸಂಪತ್ತನ್ನು ನೋಡಿ ಎಲೈ ಭಾರತನೇ! ನಾನು ಬದುಕಿರುವುದು ಒಳ್ಳೆಯದು ಎಂದು ನೀನು ಹೇಗೆ ಯೋಚಿಸುತ್ತಿಯೆ? ರಾಜನೇ! ನೊಗಕ್ಕೆ ಅಶ್ವಗಳನ್ನು ಹಿಂದೆ ಮುಂದಾಗಿ ಕಟ್ಟಿದಂತಾಯಿತು. ಭಾರತನೇ! ಚಿಕ್ಕವರು ಅಭಿವೃದ್ಧಿಯನ್ನು ಹೊಂದುತ್ತಿದ್ದಾರೆ. ಜ್ಯೇಷ್ಠರಾದವರು ಕ್ಷಯವನ್ನು ಹೊಂದುತ್ತಿದ್ದಾರೆ.

ಏವಂ ದೃಷ್ಟ್ವಾ ನಾಭಿವಿಂದಾಮಿ ಶರ್ಮ
ಪರಾಕ್ಷಮಾಣಃ ಕುರುರಾಜಮುಖ್ಯ ।
ತೇನಾಹಮೇವಂ ಕೃಶತಾಂ ಗತಶ್ಚ
ವಿವರ್ಣತಾಂ ಚೈವ ಸಶೋಕತಾಂ ಚ ॥೨೨॥

ಕುರುರಾಜ ಶ್ರೇಷ್ಠನೇ! ಈ ಸಂಪತ್ತನ್ನು ನಾನು ನೋಡಿ ಸಹಿಸಲು ಸಾಧ್ಯವಿಲ್ಲದ ಕಾರಣದಿಂದ ನನ್ನ ಮನಸ್ಸಿಗೆ ಶಾಂತಿಯು ದೊರೆಯುತ್ತಿಲ್ಲ. ಆದ್ದರಿಂದ ನಾನು ಕೃಶನೂ ವಿವರ್ಣನೂ ಮತ್ತು ಶೋಕಯುಕ್ತನೂ ಆಗಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಷಟ್‌ಸಪ್ತತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ಅಷ್ಟಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಪ್ಪತ್ತಾರನೆಯ ಅಧ್ಯಾಯವು ಮುಗಿಯಿತು.

ಎಪ್ಪತ್ತೇಳನೆಯ ಅಧ್ಯಾಯ

(ಧೃತರಾಷ್ಟ್ರನಿಂದ ದುರ್ಯೋಧನನಿಗೆ ಶಾಂತಿಯ ಉಪದೇಶ, ಅವನಿಂದ ನಿರಾಕರಣೆ.)

ಧೃತರಾಷ್ಟ್ರಃ

ತ್ವಂ ಜ್ಯೇಷ್ಠೋ ಜ್ಯೇಷ್ಠತನಯಃ ಪುತ್ರ ಮಾ ಪಾಂಡವಾನ್ ದ್ವಿಷಃ ।
ದ್ವೇಷಾದಸುಖಮಾದತ್ತೇ ಯಥೈವ ನಿಧನಂ ತಥಾ ॥೧॥

ಪುತ್ರನೇ! ನೀನು ಜ್ಯೇಷ್ಠನಾದವನು ಮತ್ತು ಜ್ಯೇಷ್ಠಪುತ್ರನಾದವನು. ಪಾಂಡವರನ್ನು ದ್ವೇಷಿಸ ಬೇಡ. ದ್ವೇಷಮಾಡುವುದರಿಂದ ಮರಣದಂತಹ ದುಃಖವನ್ನೇ ಹೊಂದುತ್ತಾರೆ.

ವ್ಯಪ್ತಂ ನಶ್ಚ ಸಮಾನಾರ್ಥಂ ತುಲ್ಯಮಿತ್ರಂ ಯುಧಿಷ್ಠಿರಮ್ ।
ಅದ್ವಿಷಂತಂ ಕಥಂ ದ್ವಿಷ್ಯಾತ್ ತ್ವಾದೃಶೋ ಭರತರ್ಷಭ ॥೨॥

ನಾವೇ ಧರ್ಮರಾಜನನ್ನು ಇಂದ್ರಪ್ರಸ್ಥದಲ್ಲಿ ಸ್ಥಾಪಿಸಿದ್ದೇವೆ. ನಮಗೂ ಮತ್ತು ಅವನಿಗೂ ಸಮಾನವಾದ ಉದ್ದೇಶಗಳು ಮತ್ತು ಸಮಾನರಾದ ಮಿತ್ರರು ಇದ್ದಾರೆ. ಭರತರ್ಷಭನೇ! ದ್ವೇಷಮಾಡದಿರುವ ಅವನನ್ನು ನಿನ್ನಂತಹವನು ಹೇಗೆ ದ್ವೇಷಮಾಡಲು ಸಾಧ್ಯ ?

ತುಲ್ಯಾಭಿಜನವೀರ್ಯಶ್ಚ ಕಥಂ ಭ್ರಾತುಃ ಶ್ರಿಯಂ ನೃಪ ।
ಪುತ್ರ ಕಾಮಯಸೇ ಮೋಹಾನ್ನೈವಂ ಭೂಃ ಶಾಮ್ಯ ಸಾಧ್ವಿಹ ॥೩॥

ಎಲೈ ರಾಜನೇ! ಸಮಾನವಾದ ಶ್ರೇಷ್ಠವಂಶ ಮತ್ತು ಪರಾಕ್ರಮ ಉಳ್ಳ ನೀನು ನಿನ್ನ ಅಣ್ಣನ ಸಂಪತ್ತನ್ನು ಹೇಗೆ ಬಯಸುತ್ತಿಯೆ? ಪುತ್ರನೇ! ಮೋಹದಿಂದ ಹೀಗೆ ಮಾಡಬೇಡ. ಈ ವಿಷಯದಲ್ಲಿ ಮನಸ್ಸಿಗೆ ಶಾಂತಿಯನ್ನು ತಂದು ಕೋ.

ಅಥ ಯಜ್ಞವಿಭೂತಿಂ ತಾಂ ಕಾಂಕ್ಷಸೇ ಭರತರ್ಷಭ ।
ಋತ್ವಿಜಸ್ತವ ತನ್ವಂತು ಸಪ್ತತಂತುಂ ಮಹಾಧ್ವರಮ್ ॥೪॥

ಭರತರ್ಷಭನೇ! ಅವನ ಯಜ್ಞವೈಭವವನ್ನು ನೀನು ಬಯಸುವುದಾದರೆ ಋತ್ವಿಜರು ನಿನ್ನ ಸಲುವಾಗಿಯೂ ದೊಡ್ಡ ಯಜ್ಞವನ್ನು ಆಚರಿಸಲಿ.

ಆಹರಿಷ್ಯಂತಿ ರಾಜಾನಸ್ತವಾಪಿ ವಿಪುಲಂ ಧನಮ್ ।
ಪ್ರೀತ್ಯಾ ಚ ಬಹುಮಾನಾಚ್ಚ ರತ್ನಾನ್ಯಾಭರಣಾನಿ ಚ ॥೫॥

ರಾಜರು ಪ್ರೀತಿಯಿಂದಲೂ ಗೌರವದಿಂದಲೂ ವಿಪುಲವಾದ ಧನವನ್ನೂ ರತ್ನಗಳನ್ನೂ ಮತ್ತು ಆಭರಣಗಳನ್ನೂ ನಿನಗೂ ತಂದು ಒಪ್ಪಿಸುತ್ತಾರೆ.

ಮಹೀ ಕಾಮದುಘಾ ಚಾಪಿ ವೀರಪತ್ನೀ ತು ಸೋಚ್ಯತೇ ।
ತಥಾ ವೀರಸ್ಯಾಶ್ರಿತಾಂ ತು ಅನುಮೇಹೀಂ ಕಳತ್ರವತ್ ।
ತವಾಪ್ಯಸ್ತಿ ಹಿ ಚೇದ್ವೀರ್ಯಂ ಭೋಕ್ಷ್ಯಸೇ ಹಿ ಮಹೀಮಿಮಾಮ್ ॥೬॥

ಭೂಮಿಯನ್ನು ಬಯಸಿದುದನ್ನು ಕೊಡುವ ಧೇನುವೆಂದು ವೀರಪತ್ನಿಯೆಂದು ಕರೆಯುತ್ತಾರೆ. ಹಾಗೆ ನಿನ್ನನ್ನು ಆಶ್ರಯಿಸಿರುವ ಭೂಮಿಯನ್ನು ಪತ್ನಿಯಂತೆ ಇಷ್ಟವಾದ ಫಲವನ್ನು ಕೊಡುವವಳಾಗಿ ಮಾಡು. ನಿನಗೂ ಪರಾಕ್ರಮವಿದ್ದರೆ ಈ ಭೂಮಿಯನ್ನು ಭೋಗಿಸುತ್ತೀಯೆ.

ಅನರ್ಥಚರಿತಂ ತಾತ ಪರಸ್ವಹರಣಂ ಭೃಶಮ್ ।
ಉಭಯೋರ್ಲೋಕಯೋರ್ದುಃಖಂ ಸುಹೃದಾಮವಮಾನನಮ್ ॥೭॥

ಪ್ರೀತಿಪಾತ್ರನೇ! ಇನ್ನೊಬ್ಬರ ಸಂಪತ್ತನ್ನು ಹರಣಮಾಡುವುದು ದೊಡ್ಡ ಅನರ್ಥಕ್ಕೆ ಕಾರಣ. ಉಭಯ ಲೋಕಗಳಲ್ಲಿ ದುಃಖವನ್ನೂ ಬಂಧುಮಿತ್ರರಿಂದ ಅವಮಾನವನ್ನೂ ತಂದು ಕೊಡುತ್ತದೆ.

ಸುಸಂತುಷ್ಟಃ ಸ್ವಕರ್ಮಸ್ಥೋ ಯಃ ಸ ವೈ ಸುಖಮೇಧತೇ ।
ಅಧ್ಯಾನಂ ಚ ಪರಾರ್ಥೇಷು ನಿತ್ಯೋದ್ಯೋಗಃ ಸ್ವಕರ್ಮಸು ।
ಉದ್ಯಮೋ ರಕ್ಷಣೇ ಸ್ವೇಷಾಮೇತದ್ ವಿಭವಲಕ್ಷಣಮ್ ॥೮॥

ತೃಪ್ತಿಯಿಂದ ತನ್ನ ಕಾರ್ಯವನ್ನು ತಾನು ಮಾಡಿಕೊಂಡು ಇರುವವನು ಸುಖವನ್ನು ಪಡೆಯುತ್ತಾನೆ. ಇನ್ನೊಬ್ಬರ ಸಂಪತ್ತನ್ನು ಚಿಂತಿಸದಿರುವುದು, ತನ್ನ ಕಾರ್ಯಗಳಲ್ಲಿ ಯಾವಾಗಲೂ ಯುಕ್ತನಾಗಿರುವುದು, ತನ್ನವರನ್ನು ರಕ್ಷಣೆಮಾಡುವುದರಲ್ಲಿ ಪ್ರಯತ್ನ ಶೀಲನಾಗಿರುವುದು, ಇದು ವೈಭವದ ಚಿಹ್ನೆ.

ನಿರ್ವರ್ತಿಷ್ವವ್ಯಥೋ ದಕ್ಷೋ ನಿತ್ಯಮುತ್ಥಾನವಾನ್ ಯತಃ ।
ಅಪ್ರಮತ್ತೋ ವಿನೀತಾತ್ಮಾ ನಿತ್ಯಂ ಭದ್ರಾಣಿ ಪಶ್ಯತಿ ॥೯॥

ಚೆನ್ನಾಗಿರುವವರನ್ನು ನೋಡಿ ವ್ಯಥೆಯನ್ನು ಪಡದೆ ದಕ್ಷನಾಗಿದ್ದು ನಿತ್ಯವೂ ಉತ್ಸಾಹಶೀಲನಾಗಿದ್ದು ದಕ್ಷನೂ ಎಚ್ಚರಿಕೆಯಿಂದ ಇರುವವನೂ ವಿನಯ ಶೀಲನೂ ಆದ ವ್ಯಕ್ತಿಯು ಯಾವಾಗಲೂ ಒಳ್ಳೆಯದನ್ನೇ ಕಾಣುತ್ತಾನೆ.

ಅಂತರ್ವೇದ್ಯಾಂ ದದದ್ ವಿತ್ತಂ ಕಾಮಾನನುಭವ ಪ್ರಿಯಾನ್ ।
ಕ್ರೀಡನ್ ಸ್ತ್ರೀಭಿಃ ನಿರಾತಂಕಃ ಪ್ರಶಾಮ್ಯ ಭರತರ್ಷಭ ॥೧೦॥

ಭರತರ್ಷಭನೇ! ಅಂತರ್ವೇದಿಯಲ್ಲಿ ಬಹಳ ವಿತ್ತವನ್ನು ದಾನಮಾಡುತ್ತಾ ಇಷ್ಟವಾದ ಕಾಮಗಳನ್ನು ಭೋಗಿಸುತ್ತಾ ಪತ್ನಿಯರ ಜೊತೆಯಲ್ಲಿ ನಿರಾತಂಕವಾಗಿ ಸುಖವಾಗಿ ಸುಖಿಸುತ್ತಾ ಶಾಂತಿಯನ್ನು ಹೊಂದು.

ದುರ್ಯೋಧನಃ

ತ್ವಂ ರಾಜನ್ ವೈ ಮೋಹಯಸಿ ಮಾಂ ನಾವಿ ನೌರಿವ ಸಂಗತಾ ।
ಸ್ವಾರ್ಥೇ ಕಿಂ ನಾವಧಾನಂ ತೇ ಉತಾಹೋ ದ್ವೇಷ್ಟಿ ಮಾಂ ಭವಾನ್ ॥

ರಾಜನೇ! ಹಡಗಿನಲ್ಲಿ ಇಟ್ಟ ಹಡಗಿನಂತೆ ನೀನು ನನ್ನನ್ನು ಮೋಹಕ್ಕೆ ವಶಪಡಿಸುತ್ತಿದ್ದೀಯೆ. ನಿನಗೆ ನಿನ್ನ ಒಳಿತಿನ ಮೇಲೆ ದೃಷ್ಟಿಯೆ ಇಲ್ಲವೋ ಅಥವಾ ನೀನು ನನ್ನನ್ನು ದ್ವೇಷಿಸುತ್ತೀಯೋ?

ನ ಸಂತೀಮೇ ಧಾರ್ತರಾಷ್ಟ್ರಾ ಯೇಷಾಂ ತ್ವಮನುಶಾಸಿತಾ ।
ಭವಿಷ್ಯದರ್ಥಮಾಖ್ಯಾಹಿ ತದಾತ್ವಂ ಕೃತ್ಯಮಾತ್ಮನಃ ॥೧೨॥

ನಿನ್ನನ್ನು ನಾಯಕನನ್ನಾಗಿ ಹೊಂದಿದ ನಿನ್ನ ಮಕ್ಕಳು ಇಲ್ಲವೆಂದೇ ತಿಳಿ. ಈಗ ನಾವು ಮಾಡಬೇಕಾದ ಕಾರ್ಯವನ್ನು ಹೇಳುವ ಸಮಯದಲ್ಲಿ ನೀನು ಮುಂದೆ ಉಂಟಾಗಬೇಕಾದ ಯಾವುದೋ ಫಲವನ್ನು ಹೇಳುತ್ತಿದ್ದೀಯೆ.

ಪರಪ್ರಣೇಯೋಽಗ್ರಣೀಶ್ಚ ಯಶ್ಚ ಮಾರ್ಗಾತ್ ಪ್ರಮುಹ್ಯತಿ ।
ಪಂಥಾನಮನುಗಚ್ಛೇಯುಃ ಕಥಂ ತಸ್ಯ ಪದಾನುಗಾಃ ॥೧೩॥

ನಾಯಕನಾದವನು ಇನ್ನೊಬ್ಬನನ್ನು ಅವಲಂಬಿಸಿ ಇನ್ನೊಬ್ಬನಿಂದ ಮಾರ್ಗ ವಿಷಯದಲ್ಲಿ ಸಂಶಯವನ್ನು ಹೊಂದಿದರೆ ಅವನ ಹಿಂಬಾಲಕರು ಅವನ ಮಾರ್ಗವನ್ನು ಹೇಗೆ ಅನುಸರಿಸಿಬೇಕು?

ರಾಜನ್ ಪರಹಿತಪ್ರಜ್ಞೋ ವೃದ್ಧಸೇವೀ ಜಿತೇಂದ್ರಿಯಃ ।
ಪ್ರತಿಪನ್ನಾನ್ ಸ್ವಕಾರ್ಯೇಷು ಸಮ್ಮೋಹಯಸಿ ನೋ ಭೃಶಮ್ ॥೧೪॥

ರಾಜನೇ! ಜಿತೇಂದ್ರಿಯನೂ ಬುದ್ಧಿಜೀವಿಯೂ ಆದ ಹಿರಿಯರ ಸೇವೆಯನ್ನು ಮಾಡಿದ ನೀನು ಇನ್ನೊಬ್ಬರ ಹಿತವನ್ನೇ ಚಿಂತಿಸುತ್ತಾ ನಮ್ಮ ಕಾರ್ಯದಲ್ಲಿ ತೊಡಗಿರುವ ನಮಗೆ ದೊಡ್ಡ ಭ್ರಾಂತಿಯನ್ನು ಉಂಟುಮಾಡುತ್ತಿದ್ದೀಯೆ.

ಲೋಕವೃತ್ತಾದ್ ರಾಜವೃತ್ತಮನ್ಯದಾಹ ಬೃಹಸ್ಪತಿಃ ।
ತಸ್ಮಾದ್ ರಾಜ್ಞಾऽಪ್ರಮತ್ತೇನ ಸ್ವಾರ್ಥಶ್ಚಿಂತ್ಯೋऽಪ್ರಮಾದತಃ ॥೧೫॥

ಲೋಕದ ನಡೆತೆಗಿಂತ ರಾಜನ ನಡತೆಯು ಭಿನ್ನವಾದುದೆಂದು ಬೃಹಸ್ಪತಿಯು ಹೇಳಿದ್ದಾನೆ. ಆದ್ದರಿಂದ ಜಾಗರೂಕನಾದ ರಾಜನು ಮೋಹಕ್ಕೆ ಒಳಗಾಗದೆ ತನ್ನ ಸ್ವಾರ್ಥವನ್ನು ಚಿಂತಿಸಬೇಕು.

ಕ್ಷತ್ರಿಯಸ್ಯ ಮಹಾರಾಜ ಯಾ ವೃತ್ತಿಃ ಸುಸಮಾಹಿತಾ ।
ಸ ವೈ ಧರ್ಮೋऽಸ್ತ್ವಧರ್ಮೋऽ ವಾ ಸ್ವಧರ್ಮೋ ಭರತರ್ಷಭ ॥೧೬॥

ಭರತರ್ಷಭನೇ! ಮಹಾರಾಜನೇ! ಕ್ಷತ್ರಿಯನಿಗೆ ಯಾವ ವೃತ್ತಿಯು ವಿಹಿತವಾಗಿದೆಯೋ ಆ ವೃತ್ತಿಯು ಧರ್ಮವಾಗಿರಲೀ ಅಥವಾ ಅಧರ್ಮವಾಗಿರಲಿ ಏನಾದರೂ ಅದು ಸ್ವಧರ್ಮವೇ ಸರಿ.

ಪ್ರಕಾಲಯೇದ್ ದಿಶಃ ಸರ್ವಾಃ ಪ್ರತೋದೇನೇವ ಸಾರಥಿಃ ।
ಪ್ರತ್ಯಮಿತ್ರ ಶ್ರಿಯಂ ದೀಪ್ತಾಂ ಬುಭೂಷುರ್ಭರತರ್ಷಭ ॥೧೭॥

ಭರತರ್ಷಭನೇ! ತನ್ನ ಏಳಿಗೆಯನ್ನು ಬಯಸುವ ರಾಜನು ಚಾವಟಿಯನ್ನು ಹಿಡಿದ ಸಾರಥಿಯು ಎಲ್ಲಾ ದಿಕ್ಕುಗಳನ್ನು ತಡಕಾಡುವಂತೆ ಜ್ವಲಿಸುತ್ತಿರುವ ಶತ್ರುವಿನ ಸಂಪತ್ತನ್ನು ತಡಕಾಡಬೇಕು.

ಪ್ರಚ್ಛನ್ನೋ ವಾ ಪ್ರಕಾಶೋ ವಾ ಯೋ ಯೋಗೋ ರಿಪುಬಾಧನಃ ।
ತದ್ವೈ ಶಸ್ತ್ರಂ ಶಸ್ತ್ರವಿದಾಂ ನ ಶಸ್ತ್ರಂ ಭೇದನಂ ಸ್ಮೃತಮ್ ॥೧೮॥

ಶಾಸ್ತ್ರವನ್ನು ತಿಳಿದವರು ಪ್ರಕಾಶವಾಗಿ ಅಥವಾ ರಹಸ್ಯವಾಗಿ ಶತ್ರುವನ್ನು ಬಾಧಿಸುವ ಉಪಾಯವನ್ನೇ ಶಸ್ತ್ರವೆಂದು ಹೇಳುತ್ತಾರೆ. ಶಸ್ತ್ರವೆಂದರೆ ಭೇದಿಸುವ ಸಾಧನ ಎಂದು ಮಾತ್ರ ಅರ್ಥವಲ್ಲ.

ಅಸಂತೋಷಃಶ್ರಿಯೋ ಮೂಲಂ ತಸ್ಮಾತ್ ತಂ ಕಾಮಯಾಮ್ಯಹಮ್।
ಸಮುಚ್ಛ್ರಯೇ ಯೋ ಯತತೇ ಸ ರಾಜನ್ ಪರಮೋ ನಯೀ ॥೧೯॥

ರಾಜನಿಗೆ ಅತೃಪ್ತಿಯು ಐಶ್ವರ್ಯಕ್ಕೆ ಕಾರಣ. ಆದ್ದರಿಂದ ಆ ಅತೃಪ್ತಿಯನ್ನು ನಾನು ಬಯಸುತ್ತೇನೆ. ಯಾವ ರಾಜನು ತನ್ನ ಏಳಿಗೆಗಾಗಿ ಶ್ರಮಿಸುತ್ತಾನೋ ಅವನು ಶ್ರೇಷ್ಠವಾದ ನೀತಿಯನ್ನು ಅನುಸರಿಸಿದವನು.

ಮಮತ್ವಂ ಚ ನ ಕರ್ತವ್ಯಮೈಶ್ವರ್ಯೇ ವಾ ಧನೇಷು ವಾ ।
ಪೂರ್ವಾವಾಪ್ತಂ ಹರತ್ಯನ್ಯೋ ರಾಜಧರ್ಮಂ ಹಿ ತಂ ವಿದುಃ ॥೨೦॥

ಸಂಪಾದಿಸಿದ ಧನದಲ್ಲಿಯಾಗಲೀ ಐಶ್ವರ್ಯದಲ್ಲಾಗಲೀ ಇದು ನನ್ನದು ಎಂದು ಸಮಾಧಾನವನ್ನು ಹೊಂದಬಾರದು. ಮೊದಲು ಸಂಪಾದಿಸಿದ ಧನವನ್ನು ಇನ್ನೊಬ್ಬ ರಾಜನು ಅಪಹರಿಸುತ್ತಾನೆ. ಇದನ್ನು ರಾಜ ಧರ್ಮವೆಂದು ಕರೆಯುತ್ತಾರೆ.

ಅದ್ರೋಹಂ ಸಮಯಂ ಕೃತ್ವಾ ಚಿಚ್ಛೇದ ನಮುಚೇಃ ಶಿರಃ ।
ಶಕ್ರೇಣ ವಿಹಿತಾ ತಾತ ರಿಪೌ ವೃತ್ತಿಃ ಸನಾತನೀ ॥೨೧॥

ದ್ರೋಹಮಾಡುವುದಿಲ್ಲವೆಂದು ಮಾತುಕೊಟ್ಟ ಇಂದ್ರನು ನಮುಚಿಯ ಶಿರಸ್ಸನ್ನು ಕತ್ತರಿಸಿದನು. ತಂದೆಯೇ ಶತ್ರುವಿನ ವಿಷಯದಲ್ಲಿ ಸನಾತನವಾದ ವೃತ್ತಿಯನ್ನು ಇಂದ್ರನು ತೋರಿಸಿಕೊಟ್ಟಿದ್ದಾನೆ.

ದ್ವಾವೇತೌ ಗ್ರಸತೇ ಭೂಮಿಃ ಸರ್ಪೋ ಬಿಲಶಯಾನಿವ ।
ರಾಜಾನಂ ಚಾಪ್ಯಯೋದ್ಧಾರಂ ಬ್ರಾಹ್ಮಣಂ ಚಾಪ್ರವಾಸಿನಮ್ ॥೨೨॥

ಯುದ್ಧಮಾಡದಿರುವ ರಾಜ ಮತ್ತು ಪ್ರವಾಸಮಾಡದಿರುವ ಬ್ರಾಹ್ಮಣ ಇವರಿಬ್ಬರನ್ನೂ ಭೂಮಿಯು ಸರ್ಪವು ಮೂಷಿಕಗಳನ್ನು ನುಂಗುವಂತೆ ನುಂಗಿ ನಾಶಮಾಡುತ್ತದೆ.

ನ ರಾಜಾ ಕುರುತೇ ಯುದ್ಧಂ ಸತ್ಯೋಪಾಯೈರ್ನರಾಧಿಪ ।
ಅಸೂಯಾಂ ಕುರುತೇ ವಿಪ್ರಃ ಕುಲಂ ರಾಷ್ಟ್ರಂ ವಿನಾಶಿತಾ ॥೨೩॥

ಎಲೈ ರಾಜನೇ! ಯಾವ ರಾಜನು ಸತ್ಯವಾದ ಉಪಾಯಗಳಿಂದ ಯುದ್ಧವನ್ನು ಮಾಡುವುದಿಲ್ಲವೋ ಅವನು ಬಂಧುಸಹಿತವಾದ ತನ್ನ ರಾಷ್ಟ್ರವನ್ನೂ ಯಾವ ಬ್ರಾಹ್ಮಣನು ಅಸೂಯೆಯನ್ನು ಮಾಡುತ್ತಾನೋ ಅವನು ತನ್ನ ಕುಲವನ್ನೂ ನಾಶಮಾಡುತ್ತಾರೆ.

ಸಂತುಷ್ಟಾ ಭೂಮಿಪಾ ನೇಶುರಸಂತುಷ್ಟಾ ದ್ವಿಜಾತಯಃ ।
ಕೇವಲಂ ತೇನ ಚಾತ್ಮಾನಂ ವಂಶಂ ರಾಷ್ಟ್ರಂ ಸಬಂಧುಕಮ್ ॥೨೪॥

ಸಂತುಷ್ಟರಾದ ರಾಜರು ನಾಶವನ್ನು ಹೊಂದಿದರು. ಅಸಂತುಷ್ಟರಾದ ಬ್ರಾಹ್ಮಣರು ನಾಶವನ್ನು ಹೊಂದಿದರು. ಆದ್ದರಿಂದ ಆ ನಾಶದಿಂದ ಬ್ರಾಹ್ಮಣನೂ, ಮತ್ತು ರಾಜನೂ ತನ್ನ ವಂಶವನ್ನೂ ಬಂಧುಸಹಿತವಾದ ತನ್ನ ರಾಷ್ಟ್ರವನ್ನೂ ನಾಶಮಾಡುತ್ತಾರೆ.

ನಾಸ್ತಿ ವೈ ಜಾತಿತಃ ಶತ್ರುಃ ಪುರುಷಸ್ಯ ವಿಶಾಂಪತೇ ।
ಯೇನ ಸಾಧಾರಣೇ ವೃತ್ತಿಃ ಸ ಶತ್ರುರ್ನೇತರೋ ಜನಃ ॥೨೫॥

ರಾಜನೇ! ಮನುಷ್ಯನಿಗೆ ಸ್ವಾಭಾವಿಕವಾದ ಶತ್ರುವೆಂಬುವನು ಇಲ್ಲ. ಯಾರ ಜೊತೆಯಲ್ಲಿ ಸಾಧಾರಣವಾದ ವೃತ್ತಿಯನ್ನು ಹೊಂದಿರುತ್ತಾನೆಯೊ ಅವನೇ ಶತ್ರು. ಇನ್ನೊಬ್ಬನು ಶತ್ರುವಲ್ಲ.

ಶತ್ರುಪಕ್ಷಂ ಸಮೃದ್ಧ್ಯಂತಂ ಯೋ ಮೋಹಾತ್ ಸಮುಪೇಕ್ಷತೇ ।
ಆಪ್ಯಾಯಿತಾ ಇವ ವ್ಯಾಧಿಸ್ತಸ್ಯ ಮೂಲಂ ಛಿನತ್ತಿ ಸಃ ॥೨೬॥

ಸಂವೃದ್ಧಿಯನ್ನು ಹೊಂದುತ್ತಿರುವ ಶತ್ರುಪಕ್ಷವನ್ನು ಯಾವನು ತನ್ನ ಮೋಹದಿಂದ ಉಪೇಕ್ಷೆಮಾಡುತ್ತಾನೆಯೋ ಬಲಿತ ರೋಗದಂತೆ ಅವನು ತನ್ನ ಮೂಲವನ್ನೇ ನಾಶಮಾಡುತ್ತಾನೆ.

ಸಮಿತ್ರಃ ಸೂಕ್ಷ್ಮವೃತ್ತಿರ್ಹಿ ರಾಜಾನಮಪರಾಕ್ರಮಮ್ ।
ಅಲ್ಪೋಽಪಿ ಹ್ಯರಿರತ್ಯಂತಂ ವರ್ಧಮಾನಪರಾಕ್ರಮಃ ।
ವಲ್ಮೀಕೋ ಮೂಲಜ ಇವ ಗ್ರಸತೇ ವೃಕ್ಷಮಂತಿಕಾತ್ ॥೨೭॥

ಮಿತ್ರರಿಂದ ಒಡಗೂಡಿ ಸೂಕ್ಷ್ಮ ವೃತ್ತಿಯನ್ನು ಅನುಸರಿಸುವ ಅಭಿವೃದ್ಧಿಯನ್ನು ಹೊಂದುತ್ತಿರುವ ಪರಾಕ್ರಮವನ್ನು ಹೊಂದಿರುವ ಅಲ್ಪನಾದ ಶತ್ರುವೂ ಸಹ ಪರಾಕ್ರಮಹೀನನಾದ ರಾಜನನ್ನು ವೃಕ್ಷದ ಮೂಲದಲ್ಲಿ ಬೆಳೆದ ಹುತ್ತದಂತೆ ಸಮೀಪದಿಂದಲೇ ನಾಶಮಾಡುತ್ತಾನೆ.

ಆಜಮೀಢ ರಿಪೋರ್ಲಕ್ಷ್ಮೀರ್ಮಾ ತೇ ರೋಚಿಷ್ಟ ಭಾರತ ।
ಏಷ ಭಾರಃ ಸತ್ತ್ವವತಾಮರೇಃ ಶಿರಸಿ ತಿಷ್ಠತಾಮ್ ॥೨೮॥

ಎಲೈ ಆಜಮೀಢನೇ! ನಿನಗೆ ಶತ್ರುಗಳ ಸಂಪತ್ತು ಇಷ್ಟವಾಗದಿರಲಿ. ಧೈರ್ಯ ಮತ್ತು ಪರಾಕ್ರಮಶಾಲಿಗಳಿಗೆ ಶತ್ರುಗಳ ತಲೆ ಮೇಲೆ ಕಾಲಿಡುವುದೇ ಅವರ ಜವಾಬ್ದಾರಿ.

ಜನ್ಮವೃದ್ಧಿಮಿವಾರ್ಯಾಣಾಂ ಯೋ ವೃದ್ಧಿಮಭಿಕಾಂಕ್ಷತೇ ।
ಏಧತೇ ಜ್ಞಾತಿಷು ಸ ವೈ ಸದ್ಯೋವೃದ್ಧಿರ್ಹಿ ವಿಕ್ರಮಃ ॥೨೯॥

ಯಾವನು ಸತ್ಕುಲಪ್ರಸೂತತ್ವವನ್ನು ಬಯಸಿದಂತೆ ಕಾರ್ಯದ ಅಭಿವೃದ್ಧಿಯನ್ನು ಬಯಸುತ್ತಾನೋ ಅವನೇ ತನ್ನ ಬಂಧುಗಳಲ್ಲಿ ಮೇಲೇರುತ್ತಾನೆ. ವಿಕ್ರಮವು ತಕ್ಷಣದಲ್ಲಿಯೇ ಸಮೃದ್ಧಿಯನ್ನು ಕೊಡುತ್ತದೆ.

ಸಂಪ್ರಾಪ್ಯ ಪಾಂಡವೈಶ್ವರ್ಯಂ ಸಂಶಯೋ ಮೇ ಭವಿಷ್ಯತಿ ।
ಅವಾಪ್ಸ್ಯೇ ವಾ ಶ್ರಿಯಂ ತಾಂ ಹಿ ಶಯಿಷ್ಯೇ ವಾ ಹತೋ ಯುಧಿ ॥

ಪಾಂಡವೈಶ್ವರ್ಯವನ್ನು ನಾನು ಪಡೆದರೆ ಸಂಶಯ ಉಂಟಾಗಬಹುದು. ನಾನು ಅವರ ಸಂಪತ್ತನ್ನು ಪಡೆಯುವೆನು. ಇಲ್ಲವೆ ಅವರಿಂದ ಹತರಾಗಿ ಭೂಮಿಯ ಮೇಲೆ ಮಲಗುವೆನು.

ಅನಾವೃತ್ತಸ್ಯ ಕಿಂ ಮೇದ್ಯ ಜೀವಿತೇನ ವಿಶಾಂಪತೇ ।
ವರ್ಧಂತೇ ಪಾಂಡವಾ ನಿತ್ಯಂ ವಯಂ ತು ಸ್ಥಿತವೃದ್ಧಯಃ ॥೩೧॥

ರಾಜನೇ! ಧರ್ಮರಾಜನ ಐಶ್ವರ್ಯವನ್ನು ನಾನು ಆಕರ್ಷಣೆಯನ್ನು ಮಾಡದಿದ್ದರೆ ನಾನು ಬದುಕಿ ಏನು ಪ್ರಯೋಜನ? ಪಾಂಡವರು ನಿತ್ಯವೂ ಅಭಿವೃದ್ಧಿಯನ್ನು ಹೊಂದುತ್ತಿದ್ದಾರೆ. ನಮ್ಮ ವೃದ್ಧಿಯಾದರೋ ಸ್ಥಗಿತವಾಗಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಸಪ್ತಸಪ್ತತಿಮತೋಧ್ಯಾಯಃ ॥

॥ ದ್ಯೂತಪರ್ವಣಿ ನವಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಪ್ಪತ್ತೇಳನೆಯ ಅಧ್ಯಾಯವು ಮುಗಿಯಿತು.

★★★★★

ಎಪ್ಪತ್ತೆಂಟನೆಯ ಅಧ್ಯಾಯ

(ಶಕುನಿಯಿಂದ ದುರ್ಯೋಧನನ ಉತ್ತೇಜನ, ಧೃತರಾಷ್ಟ್ರನ ಸಮ್ಮತಿ. ಮತ್ತು ವಿದುರನ ಪ್ರೇಷಣೆ.)

ಶಕುನಿಃ

ಯಾಂ ತ್ವಮೇತಾಂ ಶ್ರಿಯಂ ದೃಷ್ಟ್ವಾ ಪಾಂಡುಪುತ್ರೇ ಯುಧಿಷ್ಠಿರೇ ।
ತಪ್ಯಸೇ ತಾಂ ಹರಿಷ್ಯಾಮಿ ದ್ಯೂತೇನಾಹೂಯತಾಂ ಪರಮ್ ॥೧॥

ಪಾಂಡುಪುತ್ರನಾದ ಧರ್ಮರಾಜನಲ್ಲಿ ಯಾವ ಈ ಸಂಪತ್ತನ್ನು ನೋಡಿ ನೀನು ಪರಿತಪಿಸುತ್ತಿದ್ದಿಯೋ ಆ ಸಂಪತ್ತನ್ನು ನಾನು ಹರಣಮಾಡುವೆನು. ಆದರೆ ನೀನು ದ್ಯೂತದ ಸಲುವಾಗಿ ಅವನನ್ನು ಕೇವಲ ಆಹ್ವಾನಿಸು.

ಅಗತ್ವಾ ಸಂಶಯಮಹಮಯುದ್ಧ್ವಾ ಚ ಚಮೂಮುಖೇ ।
ಅಕ್ಷಾನ್ ಕ್ಷಿಪನ್ಕ್ಷತಸ್ತಾನ್ ವಿದ್ವಾನವಿದುಷೋ ಜಯೇ ॥೨॥

ನಾನು ಯಾವ ಸಂಶಯವನ್ನೂ ಹೊಂದದೆ ಸೈನ್ಯದ ಅಗ್ರಭಾಗದಲ್ಲಿ ಯುದ್ಧವನ್ನು ಮಾಡದೆ ದಾಳಗಳನ್ನು ಉರುಳಿಸುತ್ತಾ ಗಾಯಗೊಳ್ಳದೆ ಅನಭಿಜ್ಞರಾದ ಅವರನ್ನು ಅಕ್ಷಹೃದಯವನ್ನು ತಿಳಿದ ನಾನು ಜಯಿಸುತ್ತೇನೆ.

ಗ್ಲಹಂ ಧನೂಂಷಿ ಮೇ ವಿದ್ಧಿ ಶರಾನಕ್ಷಾಂಶ್ಚ ಭಾರತ ।
ಅಕ್ಷಾಣಾಂ ಹೃದಯಂ ಮೇ ಜ್ಯಾಂ ರಥಂ ವಿದ್ಧಿ ಸಮಾಸ್ತರಮ್ ॥೩॥

ಎಲೈ ಭಾರತನೇ! ಪಣವನ್ನು ನನ್ನ ಧನುಸ್ಸೆಂದು ತಿಳಿ. ದಾಳಗಳು ನನ್ನ ಬಾಣಗಳು. ಅಕ್ಷಹೃದಯವು, ನನ್ನ ಜ್ಯಾ ಬಂಧನ. ಪಗಡೆಯ ಹಾಸನ್ನು ನನ್ನ ರಥವೆಂದು ತಿಳಿ.

ದುರ್ಯೋಧನಃ

ಅಯಮುತ್ಸಹತೇ ರಾಜನ್ ಶ್ರಿಯಮಾಹರ್ತುಮಕ್ಷವಿತ್ ।
ದ್ಯೂತೇನ ಪಾಂಡುಪುತ್ರೇಭ್ಯಸ್ತತ್ ತುಭ್ಯಂ ತಾತ ರೋಚತಾಮ್ ॥೪॥

ರಾಜನೇ! ಅಕ್ಷಜ್ಞನಾದ ಇವನು ದ್ಯೂತವನ್ನು ಆಡಿ ಪಾಂಡುಪುತ್ರರಿಂದ ಆ ಸಂಪತ್ತನ್ನು ಆಕರ್ಷಿಸಲು ಉತ್ಸಾಹವನ್ನು ಹೊಂದಿದ್ದಾನೆ. ತಂದೆಯೇ ಅದನ್ನು ನೀನು ಅನುಮೋದಿಸು.

ಧೃತರಾಷ್ಟ್ರಃ

ಸ್ಥಿತೋಸ್ಮಿ ಶಾಸನೇ ಭ್ರಾತುರ್ವಿದುರಸ್ಯ ಮಹಾಮತೇಃ ।
ತೇನ ಸಂಗಮ್ಯ ವೇತ್ಸ್ಯಾಮಿ ಮಂತ್ರಸ್ಯಾಸ್ಯ ವಿನಿಶ್ಚಯಮ್ ॥೫॥

ನಾನು ಮೇಧಾವಿಯಾದ ತಮ್ಮನಾದ ವಿದುರನ ಶಾಸನದಲ್ಲಿಯೇ ಯಾವಾಗಲೂ ಇದ್ದೇನೆ. ಅವನನ್ನು ಸಂಧಿಸಿ ಈ ಮಂತ್ರಾಲೋಚನೆಯ ಫಲವನ್ನು ತಿಳಿಯುವೆನು.

ದುರ್ಯೋಧನಃ

ಕೃಷ್ಣಾದಭ್ಯಧಿಕಃ ಸೋಽಪಿ ಬುದ್ಧ್ಯಾ ಕ್ಷತ್ತಾ ವಿಶಾಂಪತೇ ।
ಕೇವಲಂ ಧರ್ಮಮೇವಾಹ ನ ತದ್ ವಿಜಯಸಾಧನಮ್ ॥೬॥

ರಾಜನೇ! ಅವನು ಬುದ್ಧಿಯಲ್ಲಿ ಕೃಷ್ಣನಿಗಿಂತ ಶ್ರೇಷ್ಠನಾದವನು. ಆದರೆ ಕೇವಲ ಧರ್ಮವನ್ನು ಹೇಳುತ್ತಾನೆ. ಅದು ಜಯಕ್ಕೆ ಸಾಧನವಲ್ಲ.

ಜಯಶ್ಚ ಧರ್ಮತಪನಸ್ತಥೈವ ಭರತರ್ಷಭ ।
ತಸ್ಮಾದ್ ವಿನಯತೋ ಜೇತಾ ತಾವುಭೌ ನ ವಿರೋಧಿನೌ ॥೭॥

ಯುದ್ಧದಲ್ಲಿ ಜಯವು ಅಹಿಂಸೆಯೆಂಬ ಧರ್ಮವನ್ನು ಪೀಡಿಸುತ್ತದೆ. ಅದರಂತೆ ಅಹಿಂಸಾರೂಪವಾದ ಧರ್ಮವು ಯುದ್ಧದಲ್ಲಿ ಜಯವನ್ನು ಪೀಡಿಸುತ್ತದೆ. ಅವೆರಡೂ ಪರಸ್ಪರ ವಿರೋಧಿಗಳು. ಆದ್ದರಿಂದ ವಿಶೇಷವಾದ ರೀತಿಯಿಂದ ಪ್ರವೃತ್ತವಾದವನು ವಿರೋಧಿಗಳಾದ ಅವೆರಡನ್ನು ಜಯಿಸುವನು. (ದ್ಯೂತದಿಂದ ಜಯವನ್ನು ಸಂಪಾದಿಸಿದರೆ ಹಿಂಸೆಯಿಲ್ಲವಾದ್ದರಿಂದ ಅಹಿಂಸೆಯ ಪೀಡೆಯೂ ಆಗುವುದಿಲ್ಲ. ಮತ್ತು ಪಾಂಡವರ ಸಂಪತ್ತಿನ ಆಕರ್ಷಣೆ ಎಂಬ ಜಯವೂ ಉಂಟಾಗುತ್ತದೆ.)

ನಿಹನಿಷ್ಯತಿ ತೇ ಬುದ್ಧಿಂ ವಿದುರೋ ಮುಕ್ತಸಂಶಯಃ ।
ಪಾಂಡವಾನಾಂ ಹಿತೇ ಯುಕ್ತೋ ನ ತಥಾ ಮಮ ಕೌರವ ॥೮॥

ಸಂಶಯರಹಿತನಾದ ವಿದುರನು ನಿನ್ನ ಬುದ್ಧಿಯನ್ನು ಹಾಳುಮಾಡುವನು. ಕೌರವನೇ! ಅವನು ಪಾಂಡವರ ಹಿತದಲ್ಲಿ ಆಸಕ್ತನಾಗಿರುವಂತೆ ನನ್ನ ಹಿತದಲ್ಲಿ ಆಸಕ್ತನಾಗಿಲ್ಲ.

ನಾರಭೇತ್ ಪರಸಾಮರ್ಥ್ಯಾತ್ ಪುರುಷಃ ಕಾರ್ಯಮಾತ್ಮನಃ ।
ಮತಿಸಾಮ್ಯಂ ದ್ವಯೋರ್ನಾಸ್ತಿ ಕಾರ್ಯೇಷು ಕುರುನಂದನ ॥೯॥

ಕುರುನಂದನನೇ! ಮನುಷ್ಯನು ಇನ್ನೊಬ್ಬನ ಬಲದಿಂದ ಎಂದೂ ತನ್ನ ಕಾರ್ಯವನ್ನು ಆರಂಭಿಸಬಾರದು. ಯಾವುದೇ ಕಾರ್ಯದಲ್ಲಿ ಇಬ್ಬರಿಗೆ ಒಂದೇ ವಿಧವಾದ ಬುದ್ಧಿಯು ಇರುವುದಿಲ್ಲ.

ಭಯಂ ಪರಿಹರನ್ ಮತ್ತ ಆತ್ಮಾನಂ ಪರಿಪಾಲಯನ್ ।
ವರ್ಷಾಸು ಕ್ಲಿನ್ನವಟವತ್ ತಿಷ್ಠನ್ ನೈವಾವಸೀದತಿ ॥೧೦॥

ದುರ್ಯೋಧನನು ಕೆಟ್ಟವನು ಧೃತರಾಷ್ಟ್ರನು ಏನುಮಾಡುತ್ತಾನೆ ಎಂದು ನನ್ನಿಂದ ಉಂಟಾಗುವ ಭಯವನ್ನು ಪರಿಹರಿಸಿಕೊಂಡು ನಿನ್ನನ್ನು ರಕ್ಷಣೆಮಾಡಿಕೊಂಡು ಮಳೆಗಾಲದಲ್ಲಿ ತೊಯ್ದುಹೋದ ವಟವೃಕ್ಷದಂತೆ ಇದ್ದರೆ ನಿನಗೆ ಯಾವ ನಾಶವೂ ಉಂಟಾವುದಿಲ್ಲ.

ನ ವ್ಯಾಧಯೋ ನಾಪಿ ಯಮಃ ಶ್ರೇಯಃಪ್ರಾಪ್ತಿಂ ಪ್ರತೀಕ್ಷತೇ ।
ಯಾವದೇವ ಭವೇತ್ ಕಲ್ಯಸ್ತಾವಚ್ಛ್ರೇಯಃ ಸಮಾಚರೇತ್ ॥೧೧॥

ವ್ಯಾಧಿಗಳಾಗಲೀ ಅಥವಾ ಮೃತ್ಯುವಾಗಲೀ ಶ್ರೇಯಸ್ಸಿನ ಪ್ರಾಪ್ತಿಗಾಗಿ ಕಾಯುವುದಿಲ್ಲ. ಮನುಷ್ಯನು ಎಲ್ಲಿಯವರೆಗೆ ಸಮರ್ಥನಾಗಿರುತ್ತಾನೆಯೋ ಅಷ್ಟರೊಳಗೆ ತನ್ನ ಶ್ರೇಯಸ್ಸನ್ನು ಸಾಧಿಸಿಕೊಳ್ಳಬೇಕು.

ಧೃತರಾಷ್ಟ್ರಃ

ಸರ್ವಥಾ ಪುತ್ರ ಬಲಿಭಿರ್ವಿಗ್ರಹಸ್ತೈರ್ನ ರೋಚತೇ ।
ವೈರಂ ವಿಕೋಶಂ ಸೃಜತಿ ತದ್ಧಿ ಶಸ್ತ್ರಮನಾಯಸಮ್ ॥೧೨॥

ಪುತ್ರನೇ! ಬಲಿಷ್ಠರಾದ ಪಾಂಡವರ ಜೊತೆಯಲ್ಲಿ ವಿರೋಧವನ್ನು ನಾನು ಸರ್ವಥಾ ಇಷ್ಟಪಡುವುದಿಲ್ಲ. ವೈರವು ಬೊಕ್ಕಸವನ್ನು ಬರಿದುಮಾಡುತ್ತದೆ. ಅದು ಕಬ್ಬಿಣದಿಂದ ಮಾಡಲ್ಪಡದ ಶಸ್ತ್ರ.

ಅನರ್ಥಮರ್ಥಂ ಮನ್ಯಸೇ ರಾಜಪುತ್ರ
ಸಂಗ್ರಂಥಿತಂ ಕಲಹಂ ಚಾಪಿ ಘೋರಮ್ ।
ತದ್ವೈ ಪ್ರವೃತ್ತಂ ತು ಯಥಾಕಥಂಚಿತ್
ವಿಮೋಕ್ಷಯೇಚ್ಚಾಪ್ಯಸಿಸಾಯಕಾಂಶ್ಚ ॥೧೩॥

ರಾಜಪುತ್ರನೇ! ಅನರ್ಥವನ್ನು ಅರ್ಥವೆಂದು ಭಾವಿಸುತ್ತಿದ್ದೀಯೆ ಘೋರವಾದ ಕಲಹವನ್ನು ಗಂಟುಹಾಕಿದ್ದೀಯೆ. ಯಾವುದಾದರೂ ರೀತಿಯಲ್ಲಿ ದ್ಯೂತವು ಪ್ರವೃತ್ತವಾದರೆ ಅದು ಖಡ್ಗಗಳನ್ನು ಮತ್ತು ಬಾಣಗಳನ್ನು ಪ್ರಯೋಗಿಸುವಂತೆ ಮಾಡುತ್ತದೆ.

ದುರ್ಯೋಧನಃ

ದ್ಯೂತೇ ಪುರಾಣೈರ್ವ್ಯವಹಾರಃ ಪ್ರಣೀತಃ
ತತ್ರಾತ್ಯಯೋ ನಾಸ್ತಿ ನ ಸಂಪ್ರಹಾರಃ ।
ತದ್ ರೋಚತಾಂ ತೇ ಶಕುನೇರ್ವಾಕ್ಯಮದ್ಯ
ಸಭಾಂ ಕ್ಷಿಪ್ರಂ ತ್ವಮಿಹಾಜ್ಞಾಪಯಸ್ವ ॥೧೪॥

ಪ್ರಾಚೀನರು ದ್ಯೂತದಿಂದ ವ್ಯವಹರಿಸುವುದನ್ನು ಅಂಗೀಕರಿಸಿದ್ದಾರೆ. ಅಲ್ಲಿ ಧರ್ಮದ ಅತಿಕ್ರಮವು ಇಲ್ಲ. ಶಸ್ತ್ರಪ್ರಹಾರಗಳೂ ಇಲ್ಲ. ಆದ್ದರಿಂದ ಈ ದಿನ ಶಕುನಿಯ ಮಾತನ್ನು ಒಪ್ಪಿ ಬೇಗ ಸಭೆಯನ್ನು ನಿರ್ಮಾಣಮಾಡಲು ನೀನು ಆದೇಶವನ್ನು ಕೊಡು.

ಸ್ವರ್ಗದ್ವಾರಂ ದೀವ್ಯತಾಂ ನೋಽವಶಿಷ್ಟಂ
ತದ್ವರ್ತಿನಾಂ ಚಾಪಿ ತಥೈವ ಯುಕ್ತಮ್ ।
ಭವೇದೇವಂ ಹ್ಯಾತ್ಮನಾ ತುಲ್ಯಮೇವ
ದುರೋದರಂ ಪಾಂಡವೈಸ್ತ್ವಂ ಕುರುಷ್ವ ॥೧೫॥

ದ್ಯೂತವನ್ನು ಆಡುವ ನಮಗೆ ಸ್ವರ್ಗದ್ವಾರವು ಮಾತ್ರ ಉಳಿದಿದೆ. ನಮ್ಮ ಸಮೀಪದಲ್ಲಿ ಇರುವವರಿಗೂ ಹಾಗೆಯೇ ಆಗುತ್ತದೆ. ನಮಗೆ ಸಮಾನವಾದ ಶ್ರೇಯಸ್ಸೇ ಅವರಿಗೂ ಉಂಟಾಗುತ್ತದೆ. ಆದ್ದರಿಂದ ಪಾಂಡವರ ಜೊತೆಯಲ್ಲಿ ದ್ಯೂತಕ್ಕೆ ಆದೇಶವನ್ನು ನೀಡು.

ಧೃತರಾಷ್ಟ್ರಃ

ವಾಕ್ಯಂ ನ ಮೇ ರೋಚತೇ ಯತ್ ತ್ವಯೋಕ್ತಂ
ಯತ್ ತೇ ಪ್ರಿಯಂ ಕ್ರಿಯತಾಂ ತನ್ನರೇಂದ್ರ ।
ಪಶ್ಚಾತ್ ತ್ವಂ ತಪ್ಸ್ಯಸೇ ಚಾತಿಕ್ರಮ್ಯ
ವಾಕ್ಯಂ ನ ಹೀದೃಶಂಭಾವಿ ಚಾದ್ಯ ಪ್ರಯುಕ್ತಮ್ ॥೧೬॥

ನೀನು ಹೇಳಿದ ಯಾವ ಮಾತೂ ನನಗೆ ಹಿಡಿಸುವುದಿಲ್ಲ. ನರೇಂದ್ರನೇ! ನಿನಗೆ ಹೇಗೆ ಇಷ್ಟವೋ ಹಾಗೆ ಮಾಡು. ನೀನು ನನ್ನ ಮಾತನ್ನು ಮೀರಿ ಪಶ್ಚಾತ್ತಾಪಪಡುತ್ತೀಯೆ. ಈ ದಿನ ನೀನು ಆಡಿದ ಮಾತುಗಳು ಹೀಗೆ ಇರಬಾರದಾಗಿದ್ದಿತು.

ದೃಷ್ಟಂ ಹ್ಯೇತದ್ ವಿದುರೇಣೈವ ಸರ್ವಂ
ವಿಪಶ್ಚಿತಾ ಬುದ್ಧಿವಿದ್ಯಾನುಗೇನ ।
ತದೇವೈತದಯಶಸ್ಯಾಭ್ಯುಪೈತಿ
ಮಹದ್ ಭಯಂ ಕ್ಷತ್ರಿಯಬೀಜಘಾತಿ ॥೧೭॥

ವ್ಯಾಧಿಗಳಾಗಲೀ ಅಥವಾ ಮೃತ್ಯುವಾಗಲೀ ಶ್ರೇಯಸ್ಸಿನ ಪ್ರಾಪ್ತಿಗಾಗಿ ಕಾಯುವುದಿಲ್ಲ. ಮನುಷ್ಯನು ಎಲ್ಲಿಯವರೆಗೆ ಸಮರ್ಥನಾಗಿರುತ್ತಾನೆಯೋ ಅಷ್ಟರೊಳಗೆ ತನ್ನ ಶ್ರೇಯಸ್ಸನ್ನು ಸಾಧಿಸಿಕೊಳ್ಳಬೇಕು.

ಧೃತರಾಷ್ಟ್ರಃ

ಸರ್ವಥಾ ಪುತ್ರ ಬಲಿಭಿರ್ವಿಗ್ರಹಸ್ತೈರ್ನ ರೋಚತೇ ।
ವೈರಂ ವಿಕೋಶಂ ಸೃಜತಿ ತದ್ಧಿ ಶಸ್ತ್ರಮನಾಯಸಮ್ ॥೧೨॥

ಪುತ್ರನೇ! ಬಲಿಷ್ಠರಾದ ಪಾಂಡವರ ಜೊತೆಯಲ್ಲಿ ವಿರೋಧವನ್ನು ನಾನು ಸರ್ವಥಾ ಇಷ್ಟಪಡುವುದಿಲ್ಲ. ವೈರವು ಬೊಕ್ಕಸವನ್ನು ಬರಿದುಮಾಡುತ್ತದೆ. ಅದು ಕಬ್ಬಿಣದಿಂದ ಮಾಡಲ್ಪಡದ ಶಸ್ತ್ರ.

ಅನರ್ಥಮರ್ಥಂ ಮನ್ಯಸೇ ರಾಜಪುತ್ರ
ಸಂಗ್ರಂಥಿತಂ ಕಲಹಂ ಚಾಪಿ ಘೋರಮ್ ।
ತದ್ಧ್ಯೂ ಪ್ರವೃತ್ತಂ ತು ಯಥಾಕಥಂಚಿತ್
ವಿಮೋಕ್ಷಯೇಚ್ಚಾಪ್ಯಸಿಸಾಯಕಾಂಶ್ಚ ॥೧೩॥

ರಾಜಪುತ್ರನೇ! ಅನರ್ಥವನ್ನು ಅರ್ಥವೆಂದು ಭಾವಿಸುತ್ತಿದ್ದೀಯೆ ಘೋರವಾದ ಕಲಹವನ್ನು ಗಂಟುಹಾಕಿದ್ದೀಯೆ. ಯಾವುದಾದರೂ ರೀತಿಯಲ್ಲಿ ದ್ಯೂತವು ಪ್ರವೃತ್ತವಾದರೆ ಅದು ಖಡ್ಗಗಳನ್ನು ಮತ್ತು ಬಾಣಗಳನ್ನು ಪ್ರಯೋಗಿಸುವಂತೆ ಮಾಡುತ್ತದೆ.

ದುರ್ಯೋಧನಃ

ದ್ಯೂತೇ ಪುರಾಣೈರ್ವ್ಯವಹಾರಃ ಪ್ರಣೀತಃ
ತತ್ರಾತ್ಯಯೋ ನಾಸ್ತಿ ನ ಸಂಪ್ರಹಾರಃ ।
ತದ್ ರೋಚತಾಂ ತೇ ಶಕುನೇರ್ವಾಕ್ಯಮದ್ಯ
ಸಭಾಂ ಕ್ಷಿಪ್ರಂ ತ್ವಮಿಹಾಜ್ಞಾಪಯಸ್ವ ॥೧೪॥

ಪ್ರಾಚೀನರು ದ್ಯೂತದಿಂದ ವ್ಯವಹರಿಸುವುದನ್ನು ಅಂಗೀಕರಿಸಿದ್ದಾರೆ. ಅಲ್ಲಿ ಧರ್ಮದ ಅತಿಕ್ರಮವು ಇಲ್ಲ. ಶಸ್ತ್ರಪ್ರಹಾರಗಳೂ ಇಲ್ಲ. ಆದ್ದರಿಂದ ಈ ದಿನ ಶಕುನಿಯ ಮಾತನ್ನು ಒಪ್ಪಿ ಬೇಗ ಸಭೆಯನ್ನು ನಿರ್ಮಾಣಮಾಡಲು ನೀನು ಆದೇಶವನ್ನು ಕೊಡು.

ಸ್ವರ್ಗದ್ವಾರಂ ದೀವ್ಯತಾಂ ನೋऽವಶಿಷ್ಟಂ
ತದ್ವರ್ತಿನಾಂ ಚಾಪಿ ತಥೈವ ಯುಕ್ತಮ್ ।
ಭವೇದೇವಂ ಹ್ಯಾತ್ಮನಾ ತುಲ್ಯಮೇವ
ದುರೋದರಂ ಪಾಂಡವೈಸ್ತ್ವಂ ಕುರುಷ್ವ ॥೧೫॥

ದ್ಯೂತವನ್ನು ಆಡುವ ನಮಗೆ ಸ್ವರ್ಗದ್ವಾರವು ಮಾತ್ರ ಉಳಿದಿದೆ. ನಮ್ಮ ಸಮೀಪದಲ್ಲಿ ಇರುವವರಿಗೂ ಹಾಗೆಯೇ ಆಗುತ್ತದೆ. ನಮಗೆ ಸಮಾನವಾದ ಶ್ರೇಯಸ್ಸೇ ಅವರಿಗೂ ಉಂಟಾಗುತ್ತದೆ. ಆದ್ದರಿಂದ ಪಾಂಡವರ ಜೊತೆಯಲ್ಲಿ ದ್ಯೂತಕ್ಕೆ ಆದೇಶವನ್ನು ನೀಡು.

ಧೃತರಾಷ್ಟ್ರಃ

ವಾಕ್ಯಂ ನ ಮೇ ರೋಚತೇ ಯತ್ ತ್ವಯೋಕ್ತಂ
ಯತ್ ತೇ ಪ್ರಿಯಂ ಕ್ರಿಯತಾಂ ತನ್ನರೇಂದ್ರ ।
ಪಶ್ಚಾತ್ ತ್ವಂ ತಪ್ಯಸೇ ಚಾತಿಕ್ರಮ್ಯ
ವಾಕ್ಯಂ ನ ಹೀದೃಶಂಭಾವಿ ಚಾದ್ಯ ಪ್ರಯುಕ್ತಮ್ ॥೧೬॥

ನೀನು ಹೇಳಿದ ಯಾವ ಮಾತೂ ನನಗೆ ಹಿಡಿಸುವುದಿಲ್ಲ. ನರೇಂದ್ರನೇ! ನಿನಗೆ ಹೇಗೆ ಇಷ್ಟವೋ ಹಾಗೆ ಮಾಡು. ನೀನು ನನ್ನ ಮಾತನ್ನು ಮೀರಿ ಪಶ್ಚಾತ್ತಾಪಪಡುತ್ತೀಯೆ. ಈ ದಿನ ನೀನು ಆಡಿದ ಮಾತುಗಳು ಹೀಗೆ ಇರಬಾರದಾಗಿದ್ದಿತು.

ದೃಷ್ಟಂ ಹ್ಯೇತದ್ ವಿದುರೇಣೈವ ಸರ್ವಂ
ವಿಪಶ್ಚಿತಾ ಬುದ್ಧಿವಿದ್ಯಾನುಗೇನ ।
ತದೇವೈತದಯಶಸ್ಯಾಭ್ಯುಪೈತಿ
ಮಹದ್ ಭಯಂ ಕ್ಷತ್ರಿಯಬೀಜಘಾತಿ ॥೧೭॥

ಇವೆಲ್ಲವನ್ನೂ ಜ್ಞಾನಿಯೂ ಬುದ್ಧಿ ವಿದ್ಯಾವಿಶಾರದನೂ ಆದ ವಿದುರನು ಗಮನಿಸಿದ್ದಾನೆ. ಎಲೈ ಕೀರ್ತಿನಾಶಕನೇ! ಕ್ಷತ್ರಿಯ ವಂಶನಾಶಕವಾದ ಈ ಮಹಾಭಯವು ಈಗಲೇ ಉಪಸ್ಥಿತವಾಗಿದೆ.

ವೈಶಂಪಾಯನಃ

ಇತ್ಯೇವಮುಕ್ತ್ವಾ ಧೃತರಾಷ್ಟ್ರೋ ಮನೀಷೀ
ದೈವಂ ಮತ್ವಾ ಪರಮಂ ದುಸ್ತರಂ ಚ ।
ಶಶಾಸೋಚ್ಚೈಃ ಪುರುಷಾನ್ ಪುತ್ರವಾಕ್ಯೇ
ಸ್ಥಿತೋ ರಾಜಾ ದೈವಸಮ್ಮೂಢಚೇತಾಃ ॥೧೮॥

ವಿವೇಕಿಯಾದ ಧೃತರಾಷ್ಟ್ರನು ಹೀಗೆ ಮಾತನಾಡಿ ದೈವವು ಪ್ರಬಲವೆಂದೂ ದುಸ್ತರವೆಂದೂ ತಿಳಿದು ಪುತ್ರವಾಕ್ಯವನ್ನು ಸ್ವೀಕರಿಸಿ ದುರದೃಷ್ಟದಿಂದ ಸಂಮೋಹಕ್ಕೆ ಒಳಗಾದ ಮನಸ್ಸುಳ್ಳವನಾಗಿ ತನ್ನ ಸೇವಕರನ್ನು ಕುರಿತು ಉಚ್ಚಸ್ವರದಿಂದ ಶಾಸನವನ್ನು ಮಾಡಿದನು.

ಸಹಸ್ರಸ್ಥೂಣಾಂ ಹೇಮವೈಡೂರ್ಯಚಿತ್ರಾಂ
ಶತದ್ವಾರಾಂ ಸ್ಫಾಟಿಕತೋರಣಾಗ್ರ್ಯಾಮ್ ।
ಸಭಾಮಗ್ರ್ಯಾಂ ಕ್ರೋಶಮಾತ್ರಾಯತಾಂ ಮೇ
ಏತದ್ವಿಸ್ತಾರಾಮಾಶು ಕುರ್ವಂತು ಯುಕ್ತಾಃ ॥೧೯॥

ಸಹಸ್ರಸ್ತಂಭಗಳಿರುವ ಸ್ವರ್ಣವೈಡೂರ್ಯದಿಂದ ಅಲಂಕೃತವಾದ ನೂರುದ್ವಾರಗಳಿರುವ ಶ್ರೇಷ್ಠವಾದ ಸ್ಫಟಿಕ ತೋರಣಗಳನ್ನು ಹೊಂದಿರುವ ಒಂದು ಕ್ರೋಶವಿಸ್ತಾರವಾದ ಶ್ರೇಷ್ಠವಾದ ಸಭೆಯನ್ನು ನನ್ನ ಸಲುವಾಗಿ ನನ್ನ ಅಧೀನರಾದ ನೀವು ಬೇಗೆ ನಿರ್ಮಿಸಿ.

ಶ್ರುತ್ವಾ ತಸ್ಯ ತ್ವರಿತಾ ನಿರ್ವಿಶಂಕಾಃ
ಪ್ರಾಜ್ಞಾಃ ತಸ್ಯ ತ್ವರಿತಾ ನಿರ್ವಿಶಂಕಾಃ ।
ಪ್ರಾಜ್ಞಾ ದಕ್ಷಾಸ್ತಾಂ ತಥಾ ಚಕ್ರುರಾಜ್ಞಾಮ್ ।
ಸರ್ವದ್ರವ್ಯಾಣ್ಯುಪಜಹ್ರುಃ ಸಭಾಯಾಃ
ಸಹಸ್ರಶಃ ಶಿಲ್ಪಿನಶ್ಚಾಪಿ ಯುಕ್ತಾಃ ॥೨೦॥

ಅವನ ಆಜ್ಞೆಯನ್ನು ಕೇಳಿ ಅವನ ಅಧೀನರಾದ ಶಿಲ್ಪಿಗಳು ಯಾವ ಶಂಕೆಯೂ ಇಲ್ಲದೆ ಅಧಿನರಾದ ಪ್ರಾಜ್ಞರೂ ದಕ್ಷರೂ ಆದ ಸಭೆಗೆ ಬೇಕಾದ ಎಲ್ಲಾ ದ್ರವ್ಯಗಳನ್ನೂ ತಂದು ಸಹಸ್ರಾರು ಶಿಲ್ಪಿಗಳನ್ನು ನಿಯೋಜಿಸಿ ಅವನ ಆಜ್ಞೆಯನ್ನು ಶೀಘ್ರವಾಗಿ ನೆರವೇರಿಸಿದರು.

ಕಾಲೇನಾಲ್ಪೇನಾಥ ನಿಷ್ಠಾಂ ಗತಾಂ ತಾಂ
ಸಭಾಂ ರಮ್ಯಾಂ ಬಹುರತ್ನಾಂ ವಿಚಿತ್ರಾಮ್ ।
ಚಿತ್ರೈರ್ಹೈಮೈರಾಸನೈರಭ್ಯುಪೇತಾಮ್
ಆಚಖ್ಯುಸ್ತೇ ತಸ್ಯ ರಾಜ್ಞಃ ಪ್ರತೀತಾಃ ॥೨೧॥

ಅವರು ಅಲ್ಪ ಕಾಲದಲ್ಲಿಯೇ ಪೂರ್ಣಗೊಂಡ ಆ ಸುಂದರವಾದ ಬಹುರತ್ನಚಿತ್ರಿತವಾದ ವಿಚಿತ್ರವಾದ ಸುವರ್ಣ ಆಸನಗಳಿಂದ ಕೂಡಿದ ಆ ಸಭೆಯನ್ನು ನಿರ್ಮಿಸಿ ರಾಜನ ಬಳಿಗೆ ಬಂದು ಸಂತೋಷದಿಂದ ಅದನ್ನು ನಿವೇದಿಸಿದರು.

ತತೋ ವಿದ್ವಾನ್ ವಿದುರಂ ಮಂತ್ರಿಮುಖ್ಯಮ್
ಉವಾಚೇದಂ ಧೃತರಾಷ್ಟ್ರೋ ನರೇಂದ್ರಃ ।
ಯುಧಿಷ್ಠಿರಂ ರಾಜಪುತ್ರಂ ಹಿ ಗತ್ವಾ
ಮದ್ವಾಕ್ಯೇನ ಕ್ಷಿಪ್ರಮಿಹಾನಯಸ್ವ ॥೨೨॥

ಅನಂತರ ವಿದ್ವಾಂಸನಾದ ಧೃತರಾಷ್ಟ್ರರಾಜನು ಮಂತ್ರಿಶ್ರೇಷ್ಠನಾದ ವಿದುರನನ್ನು ಕರೆದು ನನ್ನ ಆದೇಶದಂತೆ ರಾಜಪುತ್ರನಾದ ಯುಧಿಷ್ಠಿರನ ಬಳಿಗೆ ಹೋಗಿ ಶೀಘ್ರವಾಗಿ ಅವನನ್ನು ಇಲ್ಲಿಗೆ ಕರೆದುಕೊಂಡು ಬಾ ಎಂದು ಹೇಳಿದನು.

ಸಭೇಯಂ ಮೇ ಬಹುರತ್ನಾ ವಿಚಿತ್ರಾ ।
ಶಯ್ಯಾಸನೈರುಪಪನ್ನಾ ಮಹಾರ್ಹೈಃ ।
ಸಾ ದೃಶ್ಯತಾಂ ಭ್ರಾತೃಭಿಃ ಸಾರ್ಧಮೇತ್ಯ
ಸುಹೃದ್ದ್ಯೂತಂ ವರ್ತತಾಮತ್ರ ಚೈತ್ಯ ॥೨೩॥

ಈ ನನ್ನ ಸಭೆಯು ಅನೇಕ ರತ್ನಗಳಿಂದ ಚಿತ್ರಿತವಾಗಿದೆ. ಬೆಲೆಬಾಳುವ ಶಯ್ಯಾಸನಗಳಿಂದ ಕೂಡಿದೆ. ತಮ್ಮಂದಿರ ಜೊತೆಯಲ್ಲಿ ಬಂದು ಆ ಸಭೆಯನ್ನು ನೋಡು ಇಲ್ಲಿಗೆ ಬಂದ ಮೇಲೆ ಸುಹೃದ್‌ದ್ಯೂತವು ಜರುಗಲಿ.

ವೈಶಂಪಾಯನಃ

ಮತಮಾಜ್ಞಾಯ ಪುತ್ರಸ್ಯ ಧೃತರಾಷ್ಟ್ರಃ ಪ್ರತಾಪವಾನ್ ।
ಮತ್ವಾ ಚ ದುಸ್ತರಂ ದೈವಮೇತದ್ರಾಜಾ ಚಕಾರ ಹ ॥೨೪॥

ಪ್ರತಾಪಶಾಲಿಯಾದ ಧೃತರಾಷ್ಟ್ರನು ಮಗನ ಅಭಿಪ್ರಾಯವನ್ನು ತಿಳಿದು ದೈವವು ದುಸ್ತರವೆಂದು ತಿಳಿದು, ಹೀಗೆ ಮಾಡಿದನು.

ಅಗ್ರಜೇನ ತಥೋಕ್ತಸ್ತು ವಿದುರೋ ವಿದುಷಾಂ ವರಃ ।
ನಾಭ್ಯನಂದದ್ ವಚೋ ಭ್ರಾತುರ್ವಚನಂ ಚೇದಮಬ್ರವೀತ್ ॥೨೫॥

ಅಣ್ಣನಿಂದ ಹೀಗೆ ಹೇಳಲ್ಪಟ್ಟ ಜ್ಞಾನಿಗಳಲ್ಲಿ ಶ್ರೇಷ್ಠನಾದ ವಿದುರನು ಅಣ್ಣನ ಮಾತನ್ನು ಕೇಳಿ ಸ್ವಲ್ಪವೂ ಸಂತೋಷಪಡದೆ ಹೀಗೆ ಮಾತನಾಡಿದನು.

ನಾಭಿನಂದಾಮಿ ನೃಪತೇ ಪ್ರೇಷಣಂ ತೇ
ಮೈವಂ ಕೃಥಾಃ ಕುಲನಾಶಾದ್ ಬಿಭೇಮಿ ।
ಪುತ್ರೈರ್ಭಿನ್ನೈಃ ಕಲಹಸ್ತೇ ಧ್ರುವಂ ಸ್ಯಾತ್
ಏವಂ ಶಂಕೇ ದ್ಯೂತಕೃತೇ ನರೇಂದ್ರ ॥೨೬॥

ರಾಜನೇ! ನೀನು ನನ್ನನ್ನು ಕಳುಹಿಸುತ್ತಿರುವುದನ್ನು ನಾನು ಇಷ್ಟಪಡುವುದಿಲ್ಲ. ನೀನು ಹೀಗೆ ಮಾಡಬೇಡ. ನಾನು ಕುಲನಾಶವು ಉಂಟಾಗುವುದೆಂದು ಹೆದರುತ್ತೇನೆ. ನರೇಂದ್ರನೇ! ದ್ಯೂತದ ನಿಮಿತ್ತದಿಂದ ವಿರೋಧ ಉಂಟಾದರೆ ನಿನ್ನ ಪುತ್ರರಲ್ಲಿ ನಿಶ್ಚಿತವಾಗಿ ಕಲಹವು ಉಂಟಾಗುತ್ತದೆ ಎಂದು ನಾನು ಶಂಕಿಸುತ್ತೇನೆ.

ಧೃತರಾಷ್ಟ್ರಃ

ನೈವ ಕ್ಷತ್ತಃ ಕಲಹಸ್ತಸ್ಯ ವೈ ಮೇ
ನ ಚೇದ್ ದೈವಂ ಪ್ರತಿಲೋಮಂ ಭವಿಷ್ಯತ್ ।
ಧಾತ್ರಾ ತು ದಿಷ್ಟಸ್ಯ ವಶೇ ಕಿಲೇದಂ
ಸರ್ವಂ ಜಗಚ್ಚೇಷ್ಟತೇ ನ ಸ್ವತಂತ್ರಮ್ ॥೨೭॥

ವಿದುರನೇ! ದೈವವು ಪ್ರತಿಕೂಲವಾಗಿಲ್ಲದಿದ್ದರೆ ನನಗೂ ಮತ್ತು ಧರ್ಮರಾಜನಿಗೂ ಕಲಹವು ಉಂಟಾಗುವುದಿಲ್ಲ, ವಿಧಿಯ ವಶದಲ್ಲಿ ಎಲ್ಲಾ ಜಗತ್ತು ನಡೆಯುವುದಷ್ಟೇ? ಯಾರೂ ಸ್ವತಂತ್ರರಲ್ಲ.

ತದದ್ಯ ವಿದುರ ಪ್ರಾಪ್ಯ ರಾಜಾನಂ ಮಮ ಶಾಸನಾತ್ ।
ಕ್ಷಿಪ್ರಮಾನಯ ದುರ್ಧರ್ಷಂ ಕುಂತೀಪುತ್ರಂ ಯುಧಿಷ್ಠಿರಮ್ ॥೨೮॥

ವಿದುರನೇ! ಆದ್ದರಿಂದ ನನ್ನ ಆಜ್ಞೆಯಂತೆ ನೀನು ರಾಜನಾದ ಕುಂತೀ ಪುತ್ರನಾದ ಯುಧಿಷ್ಠಿರನ ಬಳಿಗೆ ಹೋಗಿ ಬಲಾತ್ಕರಿಸಲು ಅಶಕ್ಯನಾದ ಅವನನ್ನು ಶೀಘ್ರವಾಗಿ ಇಲ್ಲಿಗೆ ಕರೆದು ಕೊಂಡು ಬಾ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಅಷ್ಟಸಪ್ತತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ದಶಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಪ್ಪತ್ತೆಂಟನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ವಿದುರಸ್ತು ತತೋ ಗತ್ವಾ ಧರ್ಮರಾಜಮಥಾಹ್ವಯತ್ ।
ಭ್ರಾತೃಭಿರ್ವಾರ್ಯಮಾಣೋಽಪಿ ಕೃಷ್ಣಯಾ ಚ ಸ ಧರ್ಮರಾಟ್ ॥೩೧॥

ಸಾರ್ಧಂ ಮಾತ್ರಾ ಭ್ರಾತೃಭಿಶ್ಚ ಕೃಷ್ಣಯಾ ಚ ಯಯೌ ದ್ರುತಂ ॥೩೨॥

ಬಳಿಕ ವಿದುರ ಹೋಗಿ ಧರ್ಮರಾಜನನ್ನು ಕರೆದ. ಸೋದರರೂ ದ್ರೌಪದಿಯೂ ಬೇಡವೆಂದು ತಡೆದರೂ ಧರ್ಮರಾಜ ತಮ್ಮಂದಿರೊಡಗೂಡಿ ದ್ರೌಪದೀ ಸಹಿತನಾಗಿ ಬೇಗನೆ ಹಸ್ತಿನಾವತಿಗೆ ತೆರಳಿದ.

ಜ್ಯೇಷ್ಠಾಜ್ಞಯೈವ ವಿದುರ ಆಹ್ವಯನ್ನಪಿ ಧರ್ಮಜಂ ।
ನಾಗಂತವ್ಯಮಿತಿ ಪ್ರಾಹ ದೋಷಾನುಕ್ತ್ವಾ ಕ್ಷಜಾನ್‌ಬಹೂನ್ ॥೩೮॥

ಹಿರಿಯನಾದ ಧೃತರಾಷ್ಟ್ರನ ಅಪ್ಪಣೆಯಂತೆ ವಿದುರ ಧರ್ಮರಾಜನನ್ನು ಜೂಜಿಗೆ ಬರಹೇಳಿದರೂ ಜೂಜಿನಲ್ಲಿ ಬಹಳ ಅನರ್ಥ ಉಂಟೆಂದು ಹೇಳುತ್ತ ಬರಬೇಡವೆಂದೂ ಉಪದೇಶಿಸಿದ.

ಇತೀಹ ದೋಷಸಂಚಯಸ್ತಥಾ ಚ ತೇ ಪಿತುರ್ವಚಃ ।
ಸಮೀಕ್ಷ್ಯ ತದ್ದ್ವಯಂ ಸ್ವಯಂ ಕುರುಷ್ವ ಕಾರ್ಯಮಾತ್ಮನಃ ॥೩೧೯॥

'ಹೀಗೆ ಜೂಜಿನಲ್ಲಿ ಅನರ್ಥಗಳು ಬಹಳ ಇವೆ. ಆದರೂ ಬರಲೇಬೇಕೆಂದು ದೊಡ್ಡಪ್ಪನ ಆಜ್ಞೆಯೂ ಇದೆ. ಇವೆರಡನ್ನೂ ನೀನು ಸ್ವತಃ ಚೆನ್ನಾಗಿ ಆಲೋಚಿಸಿ ನಿನಗೆ ಯೋಗ್ಯವಾದ ಕಾರ್ಯದಲ್ಲಿ ಪ್ರವೃತ್ತಿ ಮಾಡು'.

ಇತೀರಿತೋಽಪಿ ಪಾಂಡವೋ ಯಯೌ ಕಲಿಪ್ರವೇಶಿತಃ ।
ವಿಚಿತ್ರವೀರ್ಯಜಂ ಚ ತಂ ಸಮಾಸದತ್ ಸಸೈನಿಕಃ ॥೩೨೦॥

ವಿದುರ ಹೀಗೆ ಹೇಳಿದರೂ ಧರ್ಮರಾಜ ಕಲ್ಯಾವೇಶದಿಂದ ಸೈನ್ಯ ಸಮೇತನಾಗಿ ಧೃತರಾಷ್ಟ್ರನ ಬಳಿಗೆ ಬಂದ.

ಕಲ್ಯಾವೇಶಾನ್ನೃಪತಿಃ ಪ್ರತಿಜಜ್ಞೇ ಪೂರ್ವಮೇವ ಧರ್ಮಾತ್ಮಾ ।
ಆಹೂತೋ ದ್ಯೂತರಣಾನ್ನಿವರ್ತೇಯಂ ನೈವ ವಾರಿತೋಽಪೀತಿ ॥೩೨೧॥

ಕಲ್ಯಾವೇಶದಿಂದ ಧರ್ಮಾತ್ಮನಾದ ಧರ್ಮರಾಜ ಹಿಂದೆ ಪ್ರತಿಜ್ಞೆ ಮಾಡಿದ್ದ, 'ಜೂಜಿನ ಯುದ್ಧಕ್ಕೆ ಕರೆದರೆ ಯಾರು ತಡೆದರೂ ನಾನು ಹಿಮ್ಮೆಟ್ಟುವುದಿಲ್ಲ' ಎಂದು.

ತೇನಾಽಯಾತ್ ಸ್ವಸುಹೃದ್ಭಿ-
ರ್ನಿರ್ವಾರ್ಯಮಾಣೋ ನಾಗಪುರಮಾಶು ।
ನ ಹಿ ಧರ್ಮೋ ದ್ಯೂತಕೃತೋ
ವಿಶೇಷತಃ ಕ್ಷತ್ರಿಯಸ್ಯ ಲೋಕಗುರೋಃ ॥೩೨೨॥

'ಜೂಜಾಡುವವನಿಗೆ ಯಾವ ಧರ್ಮವೂ ಇರುವುದಿಲ್ಲ. ವಿಶೇಷವಾಗಿ ಲೋಕಕ್ಕೆ ಧರ್ಮಾಚಾರವನ್ನು ತೋರಿಸಿಕೊಡುವ ಕ್ಷತ್ರಿಯನಿಗೆ ಜೂಜು ಸರ್ವಥಾ ಧರ್ಮವಲ್ಲ' ಎಂದು ಬಂಧುಮಿತ್ರರು ತಡೆಯುತ್ತಿದ್ದರೂ ಧರ್ಮರಾಜ ಹಸ್ತಿನಾಪುರಕ್ಕೆ ಆಗಮಿಸಿದ.

ವೈಚಿತ್ರವೀರ್ಯತನಯೇ ತು ಪಾಂಡುಪುತ್ರಾಃ
ಸಂಭಾವಿತಾಸ್ತಮುಪ ಚ ನ್ಯವಿಶನ್ ನಿಶಾಂ ತಾಮ್ ।
ಪ್ರಾತಶ್ಚ ಭೀಷ್ಮಮುಖಿರಾಃ ಸಕಲಾಶ್ಚ ಭೂಪಾ
ಆಸೇದುರಾಶು ಚ ಸಭಾಂ ಸಹ ಪಾಂಡುಪುತ್ರೈಃ ॥೩೨೩॥

ಧೃತರಾಷ್ಟ್ರನಿಂದ ಆದರಿಸಲ್ಪಟ್ಟ ಪಾಂಡವರು ಅಂದು ರಾತ್ರಿ ಅವನ ಬಳಿ ವಾಸ ಮಾಡಿದರು. ಬೆಳಿಗ್ಗೆ ಅವರೂ, ಜೊತೆಗೆ ಭೀಷ್ಮಾದಿಗಳೂ ಎಲ್ಲ ರಾಜರೂ ಸಭಾಂಗಣವನ್ನು ಹೊಕ್ಕರು.

ವೈಚಿತ್ರವೀರ್ಯನೃಪತಿರ್ವಿದುರಾನ್ವಿತೋಽಸ್ಯ
ಗಾಂಧಾರರಾಜಸಹಿತಾಸ್ತನಯಾಃ ಸಕರ್ಣಾಃ ।
ಪ್ರಾಪ್ತಾಃ ಸಭಾತಳಮಥಾಹ್ವಯದತ್ರ ಧರ್ಮ-
ರಾಜಂ ಸುತಃ ಸುಬಲಕಸ್ಯ ಸ ದೇವನಾಯ ॥೩೨೪॥

ರಾಜಾ ಧೃತರಾಷ್ಟ್ರ ವಿದುರ ಸಮೇತನಾಗಿ ಸಭಾಂಗಣಕ್ಕೆ ಬಂದ. ಕೌರವರೂ ಶಕುನಿ ಸಮೇತರಾಗಿ ಕರ್ಣನೊಂದಿಗೆ ಬಂದರು. ಶಕುನಿ ಧರ್ಮರಾಜನನ್ನು ಪಗಡೆಯಾಟಕ್ಕೆ ಕರೆದ.

ಸರ್ವಾಂಶ್ಚ ತತ್ರ ಕಲಿರಾವಿಶದೇವ ಭೀಮ
ಪೂರ್ವಾನ್‌ವಿನೈವ ಚತುರಃ ಸಪೃಥಾಂ ಚ ಕೃಷ್ಣಾಂ ।
ಕ್ಷತ್ತಾರಮೇವ ಚ ತತೋ ಹಿ ಭೀಷ್ಮಮುಖ್ಯೈ-
ಸ್ತೇ ವಾರಿತಾಃ ಕುಲವಿನಾಶನಕರ್ಮವೃತ್ತಾಃ ॥೩೨೫॥

ಆಲ್ಲಿ ಭೀಮ ಮುಂತಾದ ನಾಲ್ವರು ಪಾಂಡವರು ಕುಂತಿ ದ್ರೌಪದಿ ವಿದುರ ಹೀಗೆ ಏಳು ಮಂದಿಯನ್ನು ಹೊರತು ಇನ್ನೆಲ್ಲರನ್ನೂ ಕಲಿಯೆ ಪ್ರವೇಶಿಸಿದ್ದ. ಆದರಿಂದ ಕುಲನಾಶಕವಾದ ಕೃತ್ಯಕ್ಕೆ ಹೊರಟಿದ್ದ ಅವರನ್ನು ಭೀಷ್ಮ ಮುಂತಾದವರು ಯಾರೂ ತಡೆಯಲಿಲ್ಲ.

★ ★ ★ ★

ಎಪ್ಪತ್ತೊಂಭತ್ತನೆಯ ಅಧ್ಯಾಯ

(ಪರಿವಾರಸಹಿತನಾದ ಯುಧಿಷ್ಠಿರನಿಂದ ಹಸ್ತಿನಾಪುರಗಮನ ಮತ್ತು ಅಲ್ಲಿ ವಿಶ್ರಾಂತಿ.)

ವೈಶಂಪಾಯನಃ

ತತಃ ಪ್ರಾಯಾದ್ ವಿದುರೋಽಶ್ವೈರುದಾರೈ-
ರ್ಮಹಾಜವೈರ್ಬಲಿಭಿಃ ಸಾಧುದಾಂತೈಃ ।
ಬಲಾನ್ನಿಯುಕ್ತೋ ಧೃತರಾಷ್ಟ್ರೇಣ ರಾಜ್ಞಾ
ಮನೀಷಿಣಾಂ ಪಾಂಡವಾನಾಂ ಸಕಾಶಮ್ ॥೧॥

ಅನಂತರ ವಿದುರನು ರಾಜನಾದ ಧೃತರಾಷ್ಟ್ರನ ಅಜ್ಞೆಗೆ ಬಲಾತ್ಕಾರದಿಂದ ಒಳಗಾದವನಾಗಿ ರಾಜನಾದ ಶ್ರೇಷ್ಠವಾದ ಮನೋಜವವನ್ನುಳ್ಳ ಬಲಿಷ್ಠವಾದ ಪಳಗಿದ ಒಳ್ಳೆಯ ಕುದುರೆಗಳಿಂದ ಹೂಡಿದ ರಥದಿಂದ ವಿವೇಕಿಗಳಾದ ಪಾಂಡವರ ಸಮೀಪಕ್ಕೆ ಹೋದನು.

ಸೋಽಭಿಪತ್ಯ ತದಧ್ವಾನಮಾಸಾದ್ಯ ನೃಪತೇಃ ಪುರಮ್ ।
ಪ್ರವಿವೇಶ ಮಹಾಬುದ್ಧಿಃ ಪೂಜ್ಯಮಾನೋ ದ್ವಿಜಾತಿಭಿಃ ॥೨॥

ಮಹಾಬುದ್ಧಿಯಾದ ಅವನು ದೀರ್ಘವಾದ ಮಾರ್ಗವನ್ನು ದಾಟಿ ರಾಜಧಾನಿಯಾದ ಇಂದ್ರಪ್ರಸ್ಥವನ್ನು ತಲುಪಿ ಬ್ರಾಹ್ಮಣರಿಂದ ಪೂಜಿಸಲ್ಪಟ್ಟು ಪಟ್ಟಣವನ್ನು ಪ್ರವೇಶಿಸಿದನು.

ಸ ರಾಜಗೃಹಮಾಸಾದ್ಯ ಕುಬೇರಭವನೋಪಮಮ್ ।
ಅಭ್ಯಾಗಚ್ಛತ ಧರ್ಮಾತ್ಮಾ ಧರ್ಮರಾಜಂ ಯುಧಿಷ್ಠಿರಮ್ ॥೩॥

ಧರ್ಮಾತ್ಮನಾದ ಅವನು ಕುಬೇರಭವನದಂತಿದ್ದ ಧರ್ಮರಾಜನ ಅರಮನೆಯನ್ನು ತಲುಪಿ ಧರ್ಮರಾಜನಾದ ಯುಧಿಷ್ಠಿರನನ್ನು ಸಂಧಿಸಿದನು.

ತಂ ವೈ ರಾಜಾ ಸತ್ಯಧೃತಿರ್ಮಹಾತ್ಮಾ
ಹ್ಯಜಾತಶತ್ರುರ್ವಿದುರಂ ಯಥಾವತ್ ।

ಪೂಜಾಪೂರ್ವಂ ಪ್ರತಿಗೃಹ್ಯಾಜಮೀಢಃ
ತತೋಪೃಚ್ಛದ್ ಧೃತರಾಷ್ಟ್ರಂ ಸಪುತ್ರಮ್ ॥೪॥

ಸತ್ಯಧೃತಿಯಾದ ಮಹಾತ್ಮನಾದ ಅಜಾತಶತ್ರುವಾದ ಅಜಮೀಢನಾದ ಧರ್ಮರಾಜನಾದರೋ ವಿದುರನನ್ನು ವಿಧಿಪೂರ್ವಕವಾಗಿ ಸ್ವೀಕರಿಸಿ ಧೃತರಾಷ್ಟ್ರನ ಮತ್ತು ಅವನ ಮಕ್ಕಳ ಕುಶಲಪ್ರಶ್ನೆಯನ್ನು ಮಾಡಿದನು.

ವಿಜ್ಞಾಯತೇ ತೇ ಮನಸೋಽಪ್ರಹರ್ಷಃ
ಕಚ್ಚಿತ್ ಕ್ಷತ್ತಃ ಕುಶಲೇನಾಗತೋಽಸಿ
ಕಚ್ಚಿತ್ ಪುತ್ರಾಃ ಸ್ಥವಿರಸ್ಯಾನುಲೋಮಾ
ವಶಾನುಗಾಶ್ಚಾಪಿ ವಿಶೋಽಪಿ ಕಚ್ಚಿತ್॥೫॥

ವಿದುರನೇ! ನಿನ್ನ ಮನಸ್ಸಿನ ಅಸಮಾಧಾನವು ಎದ್ದು ಕಾಣುತ್ತಿದೆ. ಕ್ಷೇಮದ ವಾರ್ತೆಯಿಂದ ಬಂದಿದ್ದೀಯಷ್ಟೆ? ವೃದ್ಧನಾದ ಧೃತರಾಷ್ಟ್ರನಿಗೆ ಅವನ ಮಕ್ಕಳು ಅನುಕೂಲವಾಗಿದ್ದಾರಷ್ಟೆ? ಮತ್ತು ಪ್ರಜೆಗಳು ಸಹ ಅವನ ವಶವರ್ತಿಗಳಾಗಿರುವರಷ್ಟೆ?

ವಿದುರಃ

ರಾಜಾ ಮಹಾತ್ಮಾ ಕುಶಲೀ ಸಪುತ್ರ
ಆಸ್ತೇ ವೃತೋ ಜ್ಞಾತಿಭಿರಿಂದ್ರಕಲ್ಪೈಃ ।
ಪ್ರೀತೋ ರಾಜನ್ ಪುತ್ರಗಣೈರ್ವಿನೀತೈ-
ರ್ವಿಶೋಕ ಏವಾತ್ಮರತಿರ್ದೃಢಾತ್ಮಾ ॥೬॥

ಮಹಾತ್ಮನಾದ ರಾಜನು ತನ್ನ ಮಕ್ಕಳ ಜೊತೆಯಲ್ಲಿ ಕ್ಷೇಮದಿಂದಿದ್ದಾನೆ. ಇಂದ್ರನಿಗೆ ಸಮಾನರಾದ ತನ್ನ ದಾಯಾದಿಗಳಿಂದ ಪರಿವೃತನಾಗಿದ್ದಾನೆ. ರಾಜನೇ! ಅವನು ವಿನೀತರಾದ ಪುತ್ರಗಣದಿಂದ ಸಂತುಷ್ಟನಾಗಿ ಶೋಕ ರಹಿತನಾಗಿ ಆತ್ಮರತಿಯುಳ್ಳವನಾಗಿ ದೃಢವಾದ ಮನಸ್ಸುಳ್ಳವನಾಗಿ ಇದ್ದಾನೆ.

ಇದಂ ತು ತ್ವಾಂ ಕುರುರಾಜೋ ಹ್ಯುವಾಚ
ಪೂರ್ವಂ ಪೃಷ್ಟ್ವಾ ಕುಶಲಂ ಚಾವ್ಯಯಂ ಚ ।
ಯೇಯಂ ಸಭಾ ತತ್ಸಭಾತುಲ್ಯರೂಪಾ
ಭ್ರಾತೄಣಾಂ ತೇ ದೃಶ್ಯತಾಮೇತ್ಯ ಪುತ್ರ ॥೭॥

ಕುರುರಾಜನು ನಿನ್ನ ಯೋಗಕ್ಷೇಮವನ್ನು ಕೇಳಿ ಅನಂತರ ಈ ವಿಷಯವನ್ನು ನಿನಗೆ ಹೇಳಲು ತಿಳಿಸಿದ್ದಾನೆ. ಪುತ್ರನೇ! ನಿನ್ನ ತಮ್ಮಂದಿರು ನಿನ್ನ ಸಭೆಯಂತೆಯೇ ನಿರ್ಮಿಸಿರುವ ಈ ಸಭೆಯನ್ನು ಬಂದು ನೋಡು.

ಸಮಾಗಮ್ಯ ಭ್ರಾತೃಭಿಃ ಪಾರ್ಥ
ತಸ್ಯಾಂಸುಹೃದ್ದ್ಯೂತಂ ಕ್ರಿಯತಾಮತ್ರ ರಾಜನ್ ।
ಪ್ರೀಯಾಮಹೇ ಭವತಃ ಸಂಗಮೇನ
ಸಮಾಗತಾಃ ಕುರವಶ್ಚಾಪಿ ಸರ್ವೇ ॥೮॥

ರಾಜನೇ! ಕುಂತೀಸುತನೇ! ನಿನ್ನ ತಮ್ಮಂದಿರ ಜೊತೆಯಲ್ಲಿ ಸಭೆಗೆ ಬಂದು ಅಲ್ಲಿ ಸುಹೃದ್ದ್ಯೂತವನ್ನು ಆಡುವವನಾಗು. ನಿನ್ನ ಸಮಾಗಮದಿಂದಲೇ ನಾವು ಸಂತೋಷ ಪಡುತ್ತೇವೆ. ಅದೂ ಅಲ್ಲದೆ ಕುರುಗಳೆಲ್ಲರೂ ಒಟ್ಟಿಗೆ ಸೇರಿದಂತಾಗುತ್ತದೆ.

ದುರೋದರಾ ವಿಹಿತಾ ಯೇ ತು ತತ್ರ
ಮಹಾತ್ಮನಾ ಧೃತರಾಷ್ಟ್ರೇಣ ರಾಜ್ಞಾ ।
ತಾನ್ ದ್ರಕ್ಷ್ಯಸೇ ಕಿತವಾನ್ ಸನ್ನಿವಿಷ್ಟಾನ್
ಇತ್ಯಾಗತೋಽಹಂ ನೃಪತೇ ತಾನ್ ಜುಷಸ್ವ ॥೯॥

ಮಹಾತ್ಮನಾದ ಧೃತರಾಷ್ಟ್ರರಾಜನು ಅಲ್ಲಿ ದ್ಯೂತದ ಸಲಕರಣೆಗಳನ್ನು ಏನು ಸಿದ್ಧಗೊಳಿಸಿದ್ದಾನೆಯೋ ಅವುಗಳನ್ನು ಮತ್ತು ದ್ಯೂತವನ್ನು ಆಡಲು ಸೇರಿರುವ ಪುರುಷರನ್ನು ನೀನು ಅಲ್ಲಿ ನೋಡುವಿ ಎಂದು ನಾನು ಬಂದಿದ್ದೇನೆ. ಎಲೈ ರಾಜನೇ! ಇದನ್ನು ಅಂಗೀಕರಿಸು.

ಯುಧಿಷ್ಠಿರಃ

ದ್ಯೂತೇ ಕ್ಷತ್ತಃ ಕಲಹೋ ವಿದ್ಯತೇ ನಃ
ಕೋ ವೈ ದ್ಯೂತಂ ರೋಚತೇ ಬುಧ್ಯಮಾನಃ ।
ಕಿಂ ವಾ ಭವಾನ್ ಮನ್ಯತೇ ಯುಕ್ತರೂಪಂ
ಭವದ್ವಾಕ್ಯೇ ಸರ್ವ ಏವ ಸ್ಥಿತಾಃ ಸ್ಮಃ ॥೧೦॥

ಎಲೈ ವಿದುರನೇ! ದ್ಯೂತದಿಂದ ನಮ್ಮಲ್ಲಿ ಕಲಹವು ಉಂಟಾಗುತ್ತದೆ. ವಿವೇಕಿಯಾದ ಯಾವನು ತಾನೆ ದ್ಯೂತವನ್ನು ಬಯಸುತ್ತಾನೆ? ಇಂತಹ ಸಂದರ್ಭದಲ್ಲಿ ನೀನು ಏನನ್ನು ಹಿತವೆಂದು ಬಾವಿಸುತ್ತೀಯೆಎಂದು ಹೇಳು. ನಾವೆಲ್ಲರೂ ನಿನ್ನ ಮಾತಿಗೆ ಬದ್ಧರಾಗಿದ್ದೇವೆ.

ವಿದುರಃ

ಜಾನಾಮ್ಯಹಂ ದ್ಯೂತಮನರ್ಥಮೂಲಂ
ಕೃತಶ್ಚ ಯತ್ನೋಸ್ಯ ಮಯಾ ನಿವಾರಣೇ ।
ರಾಜಾ ಚ ಮಾಂ ಪ್ರಾಹಿಣೋತ್ ತ್ವತ್ಸಕಾಶಂ
ಶ್ರುತ್ವಾ ವಿದ್ವನ್ ಶ್ರೇಯ ಇಹಾಚರಸ್ವ ॥೧೧॥

ಎಲೈ ಮೇಧಾವಿಯೇ! ದ್ಯೂತವು ಅನರ್ಥಮೂಲವೆಂದು ನಾನು ತಿಳಿದಿದ್ದೇನೆ. ಅದನ್ನು ನಿವಾರಿಸಲು ನಾನು ಸಾಕಷ್ಟು ಪ್ರಯತ್ನವನ್ನು ಮಾಡಿದೆ. ಆದರೆ ರಾಜನು ನನ್ನನ್ನು ನಿನ್ನ ಬಳಿಗೆ ಕಳುಹಿಸಿದ್ದಾನೆ. ಇನ್ನು ನೀನು ಯಾವುದು ಒಳ್ಳೆಯದೋ ಅದನ್ನು ಆಚರಿಸು.

ಯುಧಿಷ್ಠಿರಃ

ಕೇ ತತ್ರಾ ವೈ ಕಿತವಾ ದೀವ್ಯಮಾನಾ
ವಿನಾ ರಾಜ್ಞೋ ಧೃತರಾಷ್ಟ್ರಸ್ಯ ಪುತ್ರೈಃ ।
ಪೃಚ್ಛಾಮಿ ತ್ವಾಂ ವಿದುರ ಬ್ರೂಹಿ ನಸ್ತಾನ್
ಯೈರ್ದೀವ್ಯಾಮಃ ಶತಶಃ ಸನ್ನಿಪತ್ಯ ॥೧೨॥

ಅಲ್ಲಿ ಧೃತರಾಷ್ಟ್ರನ ಮಕ್ಕಳಲ್ಲದೆ ದ್ಯೂತವನ್ನು ಆಡುವವರು ಬೇರೆ ಯಾರಿದ್ದಾರೆ? ಎಲೈ ವಿದುರನೇ! ನಾನು ನಿನ್ನನ್ನು ಕೇಳುತ್ತಿದ್ದೇನೆ. ನಾವು ನೂರರ ಸಂಖ್ಯೆಯಲ್ಲಿರುವ ಯಾವ ಆಟಗಾರರಿಗೆ ಎದುರಾಗಿ ದ್ಯೂತವನ್ನು ಆಡಬೇಕು ಎಂದು ಹೇಳು.

ವಿದುರಃ

ಗಾಂಧಾರರಾಜಃ ಶಕುನಿರ್ವಿಶಾಂಪತೇ
ರಾಜಾ ತು ದೇವೀ ಕೃತಹಸ್ತೋ ಮತಾಕ್ಷಃ ।

ವಿವಿಂಶತಿಶ್ಚಿತ್ರಸೇನಶ್ಚ ರಾಜಾ
ಸತ್ಯವ್ರತಃ ಪುರುಮಿತ್ರೋ ಜಯಶ್ಚ ॥೧೩॥

ಎಲೈ ರಾಜನೇ! ಗಾಂಧಾರರಾಜನಾದ ಶಕುನಿಯು ಅಕ್ಷಹೃದಯವನ್ನು ಬಲ್ಲವನು. ಅವನೊಬ್ಬ ಆಡುವವನು. ಅಲ್ಲದೆ ವಿವಿಂಶತಿ ಚಿತ್ರಸೇನ ಸತ್ಯವ್ರತ ಪುರುಮಿತ್ರ ಜಯ ಇವರುಗಳೂ ಆಡುತ್ತಾರೆ.

ಯುಧಿಷ್ಠಿರಃ

ಮಹಾಮಾಯಾಃ ಕಿತವಾಃ ಸನ್ನಿವಿಷ್ಟಾ
ಮಹೋಪಧಾ ದೇವಿತಾರೋಽತ್ರ ಸಂತಿ ।
ಧಾತ್ರಾ ತು ದಿಷ್ಟಸ್ಯ ವಶೇ ಕಿಲೇದಂ
ನ ದೇವನಂ ಕಿತವೈರದ್ಯ ತೈರ್ಮೇ ॥೧೪॥

ಮಹಾಕಪಟಿಗಳಾದ ಆಟಗಾರರು ಸೇರಿದ್ದಾರೆ. ಒಳ್ಳೆಯ ಮೋಸದಿಂದ ಅವರು ಆಟಗಳನ್ನು ಆಡುವರು. ಇದೆಲ್ಲವೂ ವಿಧಿಯ ಇಚ್ಛೆಯಂತೆ ನಡೆಯುತ್ತದೆಯಷ್ಟೇ? ಅಂತಹ ಆಟಗಾರರ ಜೊತೆಯಲ್ಲಿ ನಾನು ದ್ಯೂತವನ್ನು ಆಡುವುದಿಲ್ಲ.

ನಾಹಂ ರಾಜ್ಞೋ ಧೃತರಾಷ್ಟ್ರಸ್ಯ ಶಾಸನಾ-
ನ್ನಾಗಂತುಮಿಚ್ಛಾಮಿ ಕವೇ ದುರೋದರಮ್ ।
ಇಷ್ಟೋ ಹಿ ಪುತ್ರಸ್ಯ ಪಿತಾ ಸದೈವ
ತದಸ್ಮಿ ಕರ್ತಾ ವಿದುರಾತ್ಥ ಮಾಂ ಯಥಾ ॥೧೫॥

ಎಲೈ ಜ್ಞಾನಿಯೇ! ರಾಜನಾದ ಧೃತರಾಷ್ಟ್ರನ ಶಾಸನದ ಮೇರೆಗೆ ನಾನು ದ್ಯೂತಕ್ಕೆ ಬರದಿರಲು ಇಚ್ಛಿಸುವುದಿಲ್ಲ. ತಂದೆಗೆ ಮಗನಾದವನು ಯಾವಾಗಲೂ ಇಷ್ಟನಾಗಿಯೇ ಇರುತ್ತಾನೆ. ಆದ್ದರಿಂದ ನೀನು ಹೇಗೆ ಹೇಳಿದೆಯೋ ಅದರಂತೆ ನಡೆದು ಕೊಳ್ಳುತ್ತೇನೆ.

ನ ಚಾಕಾಮಃ ಶಕುನಿನಾ ದೇವಿತಾಽಹಂ
ನ ಹ್ಯಾತ್ಮನಾ ಧೃಷ್ಣುರಾಹ್ವಯಿತಾ ಸಭಾಯಾಮ್ ।
ಆಹೂತೋಽಹಂ ನ ನಿವರ್ತೇ ಕದಾಚಿತ್
ತಥಾ ಹೀದಂ ಶಾಶ್ವತಂ ವೈ ವ್ರತಂ ಮೇ ॥೧೬॥

ಧೈರ್ಯಶಾಲಿಯಾದ ಶಕುನಿಯು ಸಭೆಯಲ್ಲಿ ನನ್ನನ್ನು ಆಹ್ವಾನಮಾಡದಿದ್ದರೆ ನಾನು ಇಚ್ಛೆಯಿಲ್ಲದೆ ಶಕುನಿಯ ಜೊತೆಯಲ್ಲಿ ದ್ಯೂತವನ್ನು ಆಡುವುದಿಲ್ಲ. ಆಹ್ವಾನಮಾಡಿದರೆ ಮಾತ್ರ ನಾನು ದ್ಯೂತದಿಂದ ಎಂದೂ ನಿವೃತ್ತನಾಗುವುದಿಲ್ಲ.

ವೈಶಂಪಾಯನಃ

ಏವಮುಕ್ತ್ವಾ ವಿದುರಂ ಧರ್ಮರಾಜಃ
ಪ್ರಾಯಾಣಿಕಂ ಸರ್ವಮಾಜ್ಞಾಪ್ಯ ತೂರ್ಣಮ್ ।
ಪ್ರಾಯಾಚ್ಛ್ವೋಭೂತೇ ಸಗಣಃ ಸಾನುಯಾತ್ರಃ
ಸಹ ಸ್ತ್ರೀಭಿರ್ದ್ರೌಪದೀಮಾದಿಕೃತ್ವಾ ॥೧೭॥

ಧರ್ಮರಾಜನು ವಿದುರನನ್ನು ಕುರಿತು ಹೀಗೆ ಮಾತನಾಡಿ ಪ್ರಯಾಣದ ಸಿದ್ಧತೆಗೆ ಶೀಘ್ರವಾಗಿ ಆದೇಶವನ್ನು ನೀಡಿ ಮರುದಿನ ತನ್ನ ಗಣಗಳು ಮತ್ತು ಪರಿವಾರದಿಂದ ಸಹಿತನಾಗಿ ದ್ರೌಪದಿಯನ್ನು ಮುಂದಿಟ್ಟುಕೊಂಡು ಸ್ತ್ರೀಯರ ಸಮೂಹದಿಂದಲೂ ಕೂಡಿದವನಾಗಿ ಹಸ್ತಿನಾವತಿಗೆ ಹೊರಟನು.

ದೈವಂ ತು ಪ್ರಜ್ಞಾಂ ಮುಷ್ಣಾತಿ ತೇಜಶ್ಚಕ್ಷುರಿವಾಪತತ್ ।
ಧಾತುಶ್ಚ ವಶಮನ್ವೇತಿ ಪಾಶೈರಿವ ನರಃ ಸಿತಃ ॥೧೮॥

ಕಣ್ಣಿಗೆ ಹೊಡೆಯುವ ತೇಜಸ್ಸು ದೃಷ್ಟಿಯನ್ನು ಕಳೆಯುವಂತೆ ದೈವವು ವಿವೇಕವನ್ನು ನಾಶಮಾಡುತ್ತದೆ. ಮನುಷ್ಯನು ಹಗ್ಗಗಳಿಂದ ಪೋಣಿಸಲ್ಪಟ್ಟ ಪಶುವಿನಂತೆ ವಿಧಿಯ ವಶನಾಗುತ್ತಾನೆ.

ಇತ್ಯುಕ್ತ್ವಾ ಪ್ರಯಯೌ ರಾಜಾ ಸಹ ಕ್ಷತ್ತ್ರಾ ಯುಧಿಷ್ಠಿರಃ ।
ಅಮೃಷ್ಯಮಾಣಸ್ತತ್ಪಾರ್ಥಃ ಸಮಾಹ್ವಾನಮರಿಂದಮಃ ॥೧೯॥

ಅರಿಂದಮನಾದ ಯುಧಿಷ್ಠಿರನು ಆ ಆಹ್ವಾನವನ್ನು ನಿರಾಕರಿಸಲಾಗದೆ ವಿದುರನ ಜೊತೆಯಲ್ಲಿ ಹೊರಟನು.

ಬಾಹ್ಲೀಕೇನ ರಥಂ ಯತ್ತಮಾಸ್ಥಾಯ ಪರವೀರಹಾ ।
ಪರಿಚ್ಛನ್ನೋ ಯಯೌ ಪಾರ್ಥೋ ಭ್ರಾತೃಭಿಃ ಸಹಬಾಂಧವಃ ॥೨೦॥

ಪರವೀರಘಾತಕನಾದ ಧರ್ಮರಾಜನು ಬಾಹ್ಲೀಕನು ಕೊಟ್ಟಿದ್ದ ರಥವನ್ನು ಏರಿ ಪರಿಮಿತ ಪರಿವಾರದೊಂದಿಗೆ ತಮ್ಮಂದಿರ ಮತ್ತು ಬಾಂಧವರ ಜೊತೆಯಲ್ಲಿ ಹೊರಟನು.

ರಾಜಶ್ರಿಯಾ ದೀಪ್ಯಮಾನೋ ಯಯೌ ಬ್ರಹ್ಮಪುರಸ್ಸರಃ ।
ಸಂದಿದೇಶ ತತಃ ಪ್ರೇಷ್ಯಾನ್ ನಾಗಾಹ್ವಯಗತಿಂ ನೃಪ ।
ತತಸ್ತೇ ನೃಪಶಾರ್ದೂಲಾಃ ಚಕ್ರುರ್ವೈ ನೃಪಶಾಸನಮ್ ॥೨೧॥

ರಾಜ ವೈಭವದಿಂದ ಬೆಳಗುತ್ತಾ ಬ್ರಾಹ್ಮಣರನ್ನು ಮುಂದೆಮಾಡಿಕೊಂಡು ಅವನು ಹೊರಟನು. ದಾರಿಯಲ್ಲಿ ತನ್ನ ಸೇವಕರಿಗೆ ಹಸ್ತಿನಾವತಿಯ ಮಾರ್ಗವನ್ನು ಹೇಳಿದನು. ಅನಂತರ ಆ ನೃಪಶಾರ್ದೂಲರು ರಾಜಶಾಸನವನ್ನು ಅನುಸರಿಸಿದರು.

ತತೋ ರಾಜಾ ಮಹಾತೇಜಾಃ ಸಧೌಮ್ಯಃ ಸಪರಿಚ್ಛದಃ ।
ಬ್ರಾಹ್ಮಣೈಃ ಸ್ವಸ್ತಿ ವಾಚ್ಯೈವ ನಿರ್ಯಯೌ ಮಂದಿರಾದ್ ಬಹಿಃ ॥೨೨॥

ಆಗ ಮಹಾ ತೇಜಸ್ವಿಯಾದ ಧರ್ಮರಾಜನು ಧೌಮ್ಯರು ಮತ್ತು ಪರಿವಾರದೊಂದಿಗೆ ಒಡಗೂಡಿ ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿಕೊಂಡು ತನ್ನ ಮಂದಿರದಿಂದ ಹೊರಗೆ ಬಂದನು.

ಬ್ರಾಹ್ಮಣೇಭ್ಯೋ ಧನಂ ದತ್ತ್ವಾ ಗತ್ಯರ್ಥಂ ಸ ಯಥಾವಿಧಿ ।
ಅನ್ಯೇಭ್ಯಃಸತು ದತ್ತ್ವಾ ಽರ್ಥಂ ಗಂತುಂ ತತ್ರೋಪಚಕ್ರಮೇ ॥೨೩॥

ಪ್ರಯಾಣದ ಸಮಯದಲ್ಲಿ ಪ್ರಯಾಣಕ್ಕೋಸ್ಕರ ವಿಧಿವತ್ತಾಗಿ ಬ್ರಾಹ್ಮಣರಿಗೆ ಧನವನ್ನು ಕೊಟ್ಟು ಬೇರೆಯರಿಗೂ ಧನವನ್ನು ಕೊಟ್ಟು ಹೊರಡಲು ಪ್ರಾರಂಭಿಸಿದನು.

ಸರ್ವಲಕ್ಷಣಸಂಪನ್ನಂ ರಾಜಾರ್ಹಂ ಸಪರಿಚ್ಛದಮ್ ।
ತಮಾರುಹ್ಯ ಮಹಾರಾಜೋ ಗಜೇಂದ್ರಂ ಷಷ್ಟಿಹಾಯನಮ್ ॥೨೪॥

ನಿಷಸಾದ ಗಜಸ್ಕಂಧೇ ಕಾಂಚನೇ ಪರಮಾಸನೇ ।
ಹಾರೀ ಕಿರೀಟೀ ಹೇಮಾಭಃ ಸರ್ವಾಭರಣಭೂಷಿತಃ ॥೨೫॥

ಮಹಾರಾಜನಾದ ಧರ್ಮರಾಜನು ಎಲ್ಲ ಲಕ್ಷಣಗಳಿಂದ ಕೂಡಿದ್ದ ರಾಜಯೋಗ್ಯವಾದ ಎಲ್ಲಾ ಸಲಕರಣೆಗಳಿಂದ ಕೂಡಿದ್ದ ಆರವತ್ತು ವರ್ಷವಯಸ್ಸಿನ ಶ್ರೇಷ್ಠವಾದ ಆನೆಯನ್ನು ಏರಿ ಗಜಸ್ಕಂಧದಲ್ಲಿ ಸುವರ್ಣಮಯವಾದ ಆಸನದಲ್ಲಿ ಕುಳಿತು ಕೊಂಡನು. ಅವನು ಹಾರಕೀರಿಟಗಳನ್ನು ಧರಿಸಿ ಸರ್ವಾಭರಣಭೂಷಿತವಾಗಿ ಸುವರ್ಣದಂತೆ ಶೋಭಿಸುತ್ತಿದ್ದನು.

ರರಾಜ ರಾಜನ್ ಪಾರ್ಥೋ ವೈ ಪರಯಾ ನೃಪಶೋಭಯಾ ।
ರುಗ್ಮವೇದಿಗತಃ ಪ್ರಾಜ್ಯೋ ಜ್ವಲನ್ನಿವ ಹುತಾಶನಃ ॥೨೬॥

ರಾಜನೇ! ಉನ್ನತವಾದ ರಾಜಕಾಂತಿಯಿಂದ ಕಂಗೊಳಿಸುತ್ತಿದ್ದ ಅವನು ಸುವರ್ಣಮಯವಾದ ವೇದಿಕೆಯಲ್ಲಿ ಶ್ರೇಷ್ಠವಾದ ಅಗ್ನಿಯಂತೆ ಶೋಭಿಸಿದನು.

ತತೋ ಜಗಾಮ ರಾಜಾ ಸ ಪ್ರಹೃಷ್ಟನರವಾಹನಃ ।
ರಥಘೋಷೇಣ ಮಹತಾ ಪೂರಯನ್ ವೈ ನಭಸ್ಥಲಮ್ ॥೨೭॥

ಸಂಸ್ತೂಯಮಾನಃ ಸ್ತುತಿಭಿಃ ಸೂತಮಾಗಧವಂದಿಭಿಃ ।
ಸ್ವೇನ ಸೈನ್ಯೇನ ಸಂವೀತೋ ಯಥಾऽऽದಿತ್ಯಃ ಸ್ವರಶ್ಮಿಭಿಃ ॥೨೮॥

ಅನಂತರ ರಾಜನು ಸಂತೋಷಗೊಂಡ ನರರಿಂದಲೂ ಮತ್ತು ವಾಹನಗಳಿಂದಲೂ ಯುಕ್ತನಾಗಿ ದೊಡ್ಡ ರಥಘೋಷದಿಂದ ಆಕಾಶವನ್ನೇ ತುಂಬುತ್ತಾ ತನ್ನ ರಶ್ಮಿಗಳಿಂದ ಪರಿವೃತವಾದ ಸೂರ್ಯನಂತೆ ತನ್ನ ಸೈನ್ಯದಿಂದ ಪರಿವೃತನಾಗಿ ಸೂತಮಾಗಧ ಬಂದಿಗಳಿಂದ ಸ್ತೋತ್ರಗಳಿಂದ ಪ್ರಸಂಶಿಸಲ್ಪಡುತ್ತಾ ಅಲ್ಲಿಂದ ಹೊರಟನು.

ಪಾಂಡರೇಣಾತಪತ್ರೇಣ ಧ್ರಿಯಮಾಣೇನ ಮೂರ್ಧನಿ ।
ಬಭೌ ಯುಧಿಷ್ಠಿರೋ ರಾಜಾ ಪೌರ್ಣಮಾಸ್ಯಾಮಿವೋಡುರಾಟ್ ॥೨೯॥

ಉಭಯೋಃ ಪಕ್ಷಯೋಶ್ಚೈವ ಗಜಾಶ್ವೈಃ ಕುರುನಂದನಃ ।
ಚಾಮರೈರ್ಹೇಮದಂಡೈಶ್ಚ ಧೂಯಮಾನಃ ಸಮಂತತಃ ॥೩೦॥

ತನ್ನ ತಲೆಯ ಮೇಲೆ ಹಿಡಿದ ಶ್ವೇತಛತ್ರದಿಂದ ರಾಜನು ಪೂರ್ಣಿಮೆಯ ಚಂದ್ರನಂತೆ ಬೆಳಗಿದನು. ಅವನ ಎರಡು ಪಕ್ಕಗಳಲ್ಲಿ ಗಜಗಳ ಮೇಲೆ ಮತ್ತು ಅಶ್ವಗಳ

ಮೇಲೆ ಕುಳಿತವರು ಅವನಿಗೆ ಹೇಮದಂಡವುಳ್ಳ ಚಾಮರಗಳಿಂದ ಗಾಳಿಯನ್ನು ಬೀಸುತ್ತಿದ್ದರು.

ಧೃತರಾಷ್ಟ್ರೇಣ ಚಾಹೂತಃ ಕಾಲಸ್ಯ ಸಮಯೇನ ಚ ।
ಸ ಹಸ್ತಿನಪುರಂ ಗತ್ವಾ ಧೃತರಾಷ್ಟ್ರಗೃಹಂ ಯಯೌ ।
ಸಮಿಯಾಯ ಚ ಧರ್ಮಾತ್ಮಾ ಧೃತರಾಷ್ಟ್ರೇಣ ಪಾಂಡವಃ ॥೩೧॥

ಧೃತರಾಷ್ಟ್ರನ ಆಹ್ವಾನದಿಂದಲೂ ಮತ್ತು ಕಾಲದ ನಿಯಮದಿಂದಲೂ ಅವನು ಹಸ್ತಿನಪುರವನ್ನು ತಲುಪಿ ಧೃತರಾಷ್ಟ್ರನ ಮನೆಯನ್ನು ತಲುಪಿ ಧರ್ಮಾತ್ಮನಾದ ಅವನು ಧೃತರಾಷ್ಟ್ರನನ್ನು ಸಂಧಿಸಿದನು.

ತತೋ ದ್ರೋಣೇನ ಭೀಷ್ಮೇಣ ಕರ್ಣೇನ ಚ ಕೃಪೇಣ ಚ ।
ಸಮಿಯಾಯ ಯಥಾನ್ಯಾಯಂ ದ್ರೌಣಿನಾ ಚ ವಿಭುಃ ಸಹ ॥೩೨॥

ಅನಂತರ ದ್ರೋಣ ಭೀಷ್ಮ ಕೃಪ ಅಶ್ವತ್ಥಾಮ ಇವರುಗಳ ಜೊತೆಯಲ್ಲಿ ವಿಧಿವತ್ತಾಗಿ ಸಮಾಗಮವನ್ನು ಹೊಂದಿದನು.

ಸಮೇತ್ಯ ಚ ಮಹಾಬಾಹುಃ ಸೋಮದತ್ತೇನ ಚೈವ ಹಿ ।
ದುರ್ಯೋಧನೇನ ಸಭ್ರಾತ್ರಾ ಸೌಬಲೇನ ಚ ವೀರ್ಯವಾನ್ ॥೩೩॥

ಯೇ ಚಾನ್ಯೇ ತತ್ರ ರಾಜಾನಃ ಪೂರ್ವಮೇವ ಸಮಾಗತಾಃ ।
ದುಶ್ಶಾಸನೇನ ಕೌಂತೇಯಃ ಸರ್ವೈರ್ಭ್ರಾತೃಭಿರೇವ ಚ ॥೩೪॥

ಮಹಾಬಾಹುವೂ ಪರಾಕ್ರಮಶಾಲಿಯೂ ಆದ ಅವನು ಸೋಮದತ್ತನ ಜೊತೆಯಲ್ಲಿಯೂ ಭ್ರಾತೃಸಹಿತನಾದ ದುರ್ಯೋಧನನ ಜೊತೆಯಲ್ಲಿಯೂ ಶಕುನಿಯ ಜೊತೆಯಲ್ಲಿಯೂ ಸಮಾಗಮವನ್ನು ಹೊಂದಿ ಅಲ್ಲಿ ಬಂದಿದ್ದ ಉಳಿದ ರಾಜರುಗಳ ಜೊತೆಯಲ್ಲಿಯೂ ದುಶ್ಶಾಸನನ ಎಲ್ಲಾ ತಮ್ಮಂದಿರ ಜೊತೆಯಲ್ಲಿಯೂ ಸಮಾಗಮವನ್ನು ಹೊಂದಿದನು.

ಜಯದ್ರಥೇನ ಹಿ ತಥಾ ಕುರುಭಿಶ್ಚಾಪಿ ಸರ್ವಶಃ ।
ಸಮೇತ್ಯ ಕುರುಭಿಃ ಸರ್ವೈರ್ಯಥಾನ್ಯಾಯಮರಿಂದಮಃ ॥೩೫॥

ತತಃ ಸರ್ವೈರ್ಮಹಾಬಾಹುಭ್ರ್ಯಾತೃಭಿಃ ಪರಿವಾರಿತಃ ।
ಪ್ರವಿವೇಶ ಗೃಹಂ ರಾಜ್ಞೋ ಧೃತರಾಷ್ಟ್ರಸ್ಯ ಸಮ್ಮತಮ್ ॥೩೬॥

ಜಯದ್ರಥನ ಜೊತೆಯಲ್ಲಿಯೂ ಎಲ್ಲಾ ಕುರುಗಳ ಜೊತೆಯಲ್ಲಿಯೂ ಅರಿಂದಮನಾದ ರಾಜನು ವಿಧಿವತ್ತಾಗಿ ಸಮಾಗಮವನ್ನು ಹೊಂದಿ. ಆ ಮಹಾಬಾಹುವು ತಮ್ಮಂದಿರಿಂದ ಪರಿವಾರಿತನಾಗಿ ಧೃತರಾಷ್ಟ್ರರಾಜನ ಸಂಮತವಾದ ಗೃಹವನ್ನು ಪ್ರವೇಶಿಸಿದನು.

ದದರ್ಶ ತತ್ರ ಗಾಂಧಾರೀಂ ದೇವೀಂ ಪತಿಮನುವ್ರತಾಮ್ ।
ಸ್ನುಷಾಭಿಃ ಸಂವೃತಾಂ ಶಶ್ವತ್ ತಾರಾಭಿರಿವ ರೋಹಿಣೀಮ್ ॥೩೭॥

ಅವನು ಅಲ್ಲಿ ನಕ್ಷತ್ರಗಳಿಂದ ಸುತ್ತುವರೆಯಲ್ಪಟ್ಟ ರೋಹಿಣಿಯಂತೆ ತನ್ನ ಸೊಸೆಯರಿಂದ ಪರಿವೃತಳಾದ ಪತಿವ್ರತೆಯಾದ ಗಾಂಧಾರಿದೇವಿಯನ್ನು ನೋಡಿದನು.

ಅಭಿವಾದ್ಯ ಚ ಗಾಂಧಾರೀಂ ತಯಾ ಚಾಪ್ಯಭಿನಂದಿತಃ ।
ದದರ್ಶ ಪಿತರಂ ವೃದ್ಧಂ ಪ್ರಜ್ಞಾಚಕ್ಷುಷಮೀಶ್ವರಮ್ ॥೩೮॥

ಅವನು ಗಾಂಧಾರಿಗೆ ನಮಸ್ಕರಿಸಿ ಅವಳಿಂದ ಆಶೀರ್ವಾದವನ್ನು ಪಡೆದು ಅನಂತರ ಪ್ರಾಜ್ಞಚಕ್ಷುಸ್ಸನ್ನು ಹೊಂದಿದ್ದ ವೃದ್ಧನಾದ ಪ್ರಭುವಾದ ತಂದೆಯಾದ ಧೃತರಾಷ್ಟ್ರನನ್ನು ನೋಡಿದನು.

ರಾಜ್ಞಾ ಮೂರ್ಧ್ನ್ಯುಪಾಘ್ರಾತಾಸ್ತೇ ಚ ಕೌರವನಂದನಾಃ ।
ಚತ್ವಾರಃ ಪಾಂಡವಾ ರಾಜನ್ ಭೀಮಸೇನಪುರೋಗಮಾಃ ॥೩೯॥

ಧೃತರಾಷ್ಟ್ರರಾಜನು ಭೀಮಸೇನ ಮೊದಲಾದ ಕೌರವನಂದನರಾದ ನಾಲ್ಕು ಜನ ಪಾಂಡವರನ್ನು ಶಿರಸ್ಸಿನಲ್ಲಿ ಆಘ್ರಾಣಿಸಿದನು.

ತತೋ ಹರ್ಷಃ ಸಮಭವತ್ ಕೌರವಾಣಾಂ ವಿಶಾಂಪತೇ ।
ತಾನ್ ದೃಷ್ಟ್ವಾ ಪುರುಷವ್ಯಾಘ್ರಾನ್ ಪಾಂಡವಾನ್ ಪ್ರಿಯದರ್ಶನಾನ್ ॥

ಎಲೈ ರಾಜನೇ! ಆಗ ಪುರುಷವ್ಯಾಘ್ರರಾದ ಪ್ರಿಯದರ್ಶನರಾದ ಪಾಂಡವರನ್ನು ನೋಡಿ ಕೌರವರಿಗೆ ಸಂತೋಷವಾಯಿತು.

ವಿವಿಶುಸ್ತೇಽಭ್ಯನುಜ್ಞಾತಾ ರತ್ನವಂತೋ ಗೃಹಾನಥ ।
ವಿವಿಶುಸ್ತಾ ಉಪಾಯಾತಾ ದ್ರೌಪದೀಪ್ರಮುಖಾಃ ಸ್ತ್ರಿಯಃ ॥೪೧॥

ಅವರು ಧೃತರಾಷ್ಟ್ರನ ಅನುಮತಿಯನ್ನು ಪಡೆದು ರತ್ನಗಳಿಂದ ಶೋಭಿಸುತ್ತಿದ್ದ ಗೃಹಗಳನ್ನು ಪ್ರವೇಶಿಸಿದನು. ಅವರ ಜೊತೆಯಲ್ಲಿ ಬಂದ ದ್ರೌಪದಿ ಮೊದಲಾದ ಸ್ತ್ರೀಯರೂ ಆ ಗೃಹಗಳನ್ನು ಪ್ರವೇಶಿಸಿದರು.

ಯಾಜ್ಞಸೇನ್ಯಾಃ ಪರಾಂ ವೃದ್ಧಿಂ ದೃಷ್ಟ್ವಾ ಪ್ರಜ್ವಲಿತಾಮಿವ ।
ಸುಷಾಸ್ತಾ ಧೃತರಾಷ್ಟ್ರಸ್ಯ ನಾತಿಪ್ರಮನಸೋಽಭವನ್ ॥೪೨॥

ದ್ರೌಪದಿಯ ಬೆಳಗುತ್ತಿದ್ದಂತಹ ಪರಮವೈಭವವನ್ನು ನೋಡಿದ ಧೃತರಾಷ್ಟ್ರನ ಸೊಸೆಯರು ಮನಸ್ಸಿನಲ್ಲಿ ಬಹಳ ಸಂತೋಷವನ್ನು ಹೊಂದಲಿಲ್ಲ.

ತತಸ್ತೇ ಪುರುಷವ್ಯಾಘ್ರಾ ಗತ್ವಾ ಸ್ತ್ರೀಭಿಶ್ಚ ಸಂವಿದಮ್ ।
ಕೃತ್ವಾ ವ್ಯಾಯಾಮಪೂರ್ವಾಣಿ ಕೃತ್ಯಾನಿ ಪ್ರತಿಕರ್ಮ ಚ ॥೪೩॥

ತತಃ ಕೃತಾಹ್ನಿಕಾಃ ಸರ್ವೇ ದಿವ್ಯಚಂದನರೂಷಿತಾಃ ।
ಕಲ್ಯಾಣಮನಸಃ ಸರ್ವೇ ಬ್ರಾಹ್ಮಣಾನ್ ಸ್ವಸ್ತಿ ವಾಚ್ಯ ಚ ॥೪೪॥

ಮನೋಜ್ಞಮಶನಂ ಭುಕ್ತ್ವಾ ವಿವಿಶುಃ ಶಯನಾನ್ಯಥ ।
ಉಪಗೀಯಮಾನಾ ನಾರೀಭಿರಸ್ವಪನ್ ಕುರುನಂದನಾಃ ॥೪೫॥

ಅನಂತರ ಆ ಪುರುಷವ್ಯಾಘ್ರರು ಮುಂದೆ ಹೋಗಿ ಕೌರವರ ಸ್ತ್ರೀಯರ ಜೊತೆಯಲ್ಲಿ ಮಾತನಾಡಿ ವ್ಯಾಯಾಮ ಮೊದಲಾದ ದೈನಂದಿನಕರ್ಮಗಳನ್ನು ಮಾಡಿ ಅಹ್ನಿಕವನ್ನು ಮಾಡಿ ದಿವ್ಯಚಂದನವನ್ನು ಲೇಪಿಸಿಕೊಂಡು ಸಂತೋಷವುಳ್ಳ ಮನಸ್ಸಿನಿಂದ ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿಕೊಂಡು ಒಳ್ಳೆಯ ಭೋಜನವನ್ನು ಮಾಡಿ ಶಯನಗಳನ್ನು ಪ್ರವೇಶಿಸಿದರು.

ಜಗಾಮ ತೇಷಾಂ ಸಾ ರಾತ್ರಿಃ ಪುಣ್ಯಾ ರತಿವಿಹಾರಿಣಾಮ್ ।
ಸ್ತೂಯಮಾನಾಶ್ಚ ವಿಶ್ರಾಂತಾಃ ಕಾಲೇ ನಿದ್ರಾಮಥಾತ್ಯಜನ್ ॥೪೬॥

ಸುಖೋಷಿತಾಸ್ತಾಂ ರಜನೀಂ ಪ್ರಾತಃ ಸರ್ವೇ ಕೃತಾಹ್ನಿಕಾಃ ।
ಸಭಾಂ ರಮ್ಯಾಂ ಪ್ರವಿವಿಶುಃ ಕಿತವೈರಭಿಸಂವೃತಾಮ್ ॥೪೭॥

ಆ ಮಂಗಳವಾದ ರಾತ್ರಿಯು ಅವರಿಗೆ ರತಿವಿಹಾರದಿಂದ ಕಳೆಯಿತು. ಪ್ರಾತಃಕಾಲದ ವೇಳೆಗೆ ವಿಶ್ರಾಂತಿಯನ್ನು ಪಡೆದು ಸೂತ ಮೊದಲಾದವರಿಂದ ಸ್ತೋತ್ರಮಾಡಲ್ಪಟ್ಟು ಅವರು ಎಚ್ಚರಗೊಂಡರು. ಎಲ್ಲರೂ ಆ ರಾತ್ರಿಯನ್ನು ಸುಖವಾಗಿ ಕಳೆದು ಪ್ರಾತಃಕಾಲದಲ್ಲಿ ಅಹ್ನಿಕಗಳನ್ನು ಮಾಡಿ ದ್ಯೂತವನ್ನು ಆಡುವವರಿಂದ ತುಂಬಿದ್ದ ಆ ರಮ್ಯವಾದ ಸಭೆಯನ್ನು ಪ್ರವೇಶಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಏಕೋನಾಶೀತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ಏಕಾದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ಭೀಮಾದಿಭಿಃ ಸ ವಿದುರೇಣ ಚ ವಾರ್ಯಮಾಣೋ
ದ್ಯೂತೇ ನಿಧಾಯ ಪಣಮಪ್ಯಖಿಲಂ ಸ್ವವಿತ್ತಂ ।
ಗಾಂಧಾರಕೇಣ ವಿದಿತಾಕ್ಷಹೃದಾ ಜಿತೋ ದ್ರಾಕ್
ಪಾಂಡೋಃ ಸುತೋಽಥ ನಕುಲಂ ನ್ಯದಧಾತ್ ಪಣಾಯ ॥

ಭೀಮ ಮುಂತಾದವರೂ ವಿದುರನೂ ತಡೆಯುತ್ತಿದ್ದರೂ ಧರ್ಮರಾಜ ತನ್ನೆಲ್ಲ ಸಂಪತ್ತನ್ನೂ ಜೂಜಿನಲ್ಲಿ ಪಣವಿಟ್ಟು ಜೂಜಿನ ಮರ್ಮಜ್ಞನಾದ ಶಕುನಿಯಿಂದ ಬೇಗನೆ ಪರಾಜಿತನಾದ. ಬಳಿಕ ನಕುಲನನ್ನು ಪಣಕ್ಕಿಟ್ಟ.

★ ★ ★ ★

ಎಂಭತ್ತನೆಯ ಅಧ್ಯಾಯ

(ಶಕುನಿ ಮತ್ತು ಯುಧಿಷ್ಠಿರ ಸಂವಾದ. ದ್ಯೂತ ನಿರ್ಧಾರ ಮತ್ತು ಉಪಕ್ರಮ)

ವೈಶಂಪಾಯನಃ

ವೀರಾಃ ಪ್ರವಿಶ್ಯ ತಾಂ ಪಾರ್ಥಾ ಯುಧಿಷ್ಠಿರಪುರೋಗಮಾಃ ।
ಸಮೇತ್ಯ ಪಾರ್ಥಿವಾನ್ ಸರ್ವಾನ್ ಯಥಾರ್ಹಮಭಿಪೂಜ್ಯ ಚ ॥೧॥

ಯಥಾವಯಃ ಸಮೀಯಾನಾ ಉಪವಿಷ್ಟಾ ಯಥಾರ್ಹತಃ ।
ಆಸನೇಷು ವಿಚಿತ್ರೇಷು ಸ್ವಚ್ಛಾಸ್ತರಣವತ್ಸು ಚ ॥೨॥

ವೀರರಾದ ಯುಧಿಷ್ಠಿರ ಮೊದಲಾದ ಪಾಂಡವರು ಸಭೆಯನ್ನು ಪ್ರವೇಶಿಸಿ ಎಲ್ಲಾ ರಾಜರ ಜೊತೆಯಲ್ಲಿ ಸಮಾಗಮವನ್ನು ಹೊಂದಿ ಅವರವರ ಯೋಗ್ಯತೆಗೆ ಅನುಗುಣವಾಗಿ ಪೂಜಿಸಿ ತಮ್ಮ ಯೋಗ್ಯತೆಗೆ ಅನುಗುಣವಾಗಿ ವಿಧವಿಧವಾದ ವಿಚಿತ್ರವಾದ ಸ್ವಚ್ಛವಾದ ಆಸ್ತರಣಗಳನ್ನು ಹೊಂದಿದ್ದ ಆಸನದಲ್ಲಿ ಕುಳಿತು ಕೊಂಡರು.

ಅಥ ತೇಷು ಪ್ರವಿಷ್ಟೇಷು ಸರ್ವೇಷು ಚ ನೃಪೇಷು ಚ ।
ಶಕುನಿಃ ಸೌಬಲಸ್ತತ್ರ ಯುಧಿಷ್ಠಿರಮಭಾಷತ ॥೩॥

ಉಪಸ್ತೀರ್ಣಾ ಸಭಾ ರಾಜನ್ ವಯಂ ಚೈವ ಕೃತಕ್ಷಣಾಃ ।
ಅಕ್ಷಾನುಪ್ತಾ ತ್ವ ದೇವನಸ್ಯ ಸಮಯೋಸ್ತು ಯುಧಿಷ್ಠಿರ ॥೪॥

ಅನಂತರ ಎಲ್ಲಾ ರಾಜರೂ ಕುಳಿತುಕೊಂಡ ಮೇಲೆ ಸುಬಲಪುತ್ರನಾದ ಶಕುನಿಯು ಯುಧಿಷ್ಠಿರನನ್ನು ಕುರಿತು ಹೀಗೆ ಮಾತಮಾಡಿದನು. ರಾಜನೇ! ಸಭೆಯಲ್ಲಿ ಪಗಡೆ ಹಾಸನ್ನು ಹಾಸಿದೆ ನಾವೂ ಸಹ ದಾಳಗಳನ್ನು ಉರುಳಿಸಿ ಆಡಲು ಸಿದ್ಧರಾಗಿದ್ದೇವೆ. ದ್ಯೂತದ ವಿಷಯದಲ್ಲಿ ಮೊದಲು ನಿಬಂಧನೆಯುಂಟಾಗಲಿ.

ಯುಧಿಷ್ಠಿರಃ

ನಿಕೃತ್ಯಾ ದೇವನಂ ಪಾಪಂ ನ ಕ್ಷಾತ್ರೋಽತ್ರ ಪರಾಕ್ರಮಃ ।
ನ ಚ ನೀತಿರ್ಧ್ರುವಂ ರಾಜನ್ ಕಿಂ ತ್ವಂ ದ್ಯೂತಂ ಪ್ರಶಂಸಸಿ ॥೫॥

ನಚ ಮಾಯಾಂ ಪ್ರಶಂಸಂತಿ ಕೃತಿನಃ ಕಿತವಸ್ಯ ಹ ।
ಶಕುನೇ ಮೈವ ನೋ ಜೈಷೀರಮಾರ್ಗೇಣ ನೃಶಂಸವತ್ ॥೬॥

ಎಲೈ ರಾಜನೇ! ದ್ಯೂತವು ಒಂದು ಮೋಸದ ಪಾಪದ ಕ್ರಿಯೆ. ಇಲ್ಲಿ ಕ್ಷತ್ರಿಯರ ಪರಾಕ್ರಮಕ್ಕೆ ಅವಕಾಶವಿಲ್ಲ. ಇಲ್ಲಿ ಧ್ರುವವಾದ ನೀತಿಯು ಒಂದಿಲ್ಲ. ನೀನು ಏಕೆ ದ್ಯೂತವನ್ನು ಪ್ರಸಂಶಿಸುತ್ತಿದ್ದೀಯೆ? ವಿವೇಕಿಗಳಾದವರು ಆಟಗಾರರ ಮೋಸಗಳನ್ನು (ಮೋಸದ ಆಟಗಳನ್ನು) ಪ್ರಶಂಸಿಸುವುದಿಲ್ಲ. ಎಲೈ ಶಕುನಿಯೇ! ಕ್ರೌರ್ಯದಿಂದ ಕೂಡಿದವನಾಗಿ ನೀನು ನಮ್ಮನ್ನು ಅಮಾರ್ಗದಿಂದ ಗೆಲ್ಲುವುದು ಬೇಡ.

ಶಕುನಿಃ

ಯೋಽನ್ವೇತಿ ಸಂಖ್ಯಾಂ ನಿಕೃತೌ ವಿಧಿಜ್ಞಃ
ಚೇಷ್ಟಾಸ್ವಖಿನ್ನಃ ಕಿತವೋಽಕ್ಷಜಾಸು ।
ಮಹಾಮತಿರ್ಯೋಽನುಜಾನಾತಿ ದ್ಯೂತಂ
ಸ ವೈ ಸರ್ವಂ ಸಹತೇ ಪ್ರಕ್ರಿಯಾಸು ॥೭॥

ಯಾವ ಆಟಗಾರನು ಬಿದ್ದಗರಗಳನ್ನು ಹಿಂಬಾಲಿಸುತ್ತಾನೆಯೋ ನಿಕೃತಿಯ ವಿಧಿಗಳನ್ನು ತಿಳಿದು ಪಗಡೆಯ ಕಾಯಿಗಳ ನಡಿಗೆಯಲ್ಲಿ ಛದ್ಮರಹಿತನಾಗಿರುತ್ತಾನೆಯೋ ಅಂತಹ ಮೇಧಾವಿಯಾದವನು ದ್ಯೂತವನ್ನು ಅನುಮೋದಿಸುತ್ತಾನೆ. ಅವನು ಉಳಿದ ಎಲ್ಲಾ ಕಾರ್ಯಗಳಲ್ಲಿಯೂ ಸಮರ್ಥನಾಗಿರುತ್ತಾನೆ.

ಅಕ್ಷಗ್ರಹಃ ಸೋಽಭಿಭವೇತ್ ಪರಂ ತು
ತೇನೈವ ಕಾಲೋ ಭವತೀದಮಾತ್ಥ ।
ದೀವ್ಯಾವಹೇ ಪಾರ್ಥಿವ ಮಾ ವಿಶಂಕಾಂ
ಕುರುಷ್ವ ಪಾಣಂ ಚಿರಂ ಚ ಮಾ ಕೃಥಾಃ ॥೮॥

ಅಕ್ಷಗ್ರಹವು ಒಬ್ಬನನ್ನು ಪರಾಭವಗೊಳಿಸುತ್ತದೆ. ಅವನ ದುಃಖಕಾಲವು ಇನ್ನೊಬ್ಬನಿಗೆ ವಿಹಾರದ ಕಾಲವಾಗುತ್ತದೆ. ಅಮಾರ್ಗದಿಂದ ನಮ್ಮನ್ನು ಗೆಲ್ಲಬೇಡ ಎಂದು ನೀನೇ ಹೇಳಿದ್ದೀಯೆ . ಎಲೈ ರಾಜನೇ! ನಾವಿಬ್ಬರೂ ಆಟವಾಡೋಣ ಶಂಕಿಸಬೇಡ. ನಿನ್ನ ಪಣವನ್ನು ಹೇಳು. ವಿಲಂಬ ಮಾಡಬೇಡ.

ಯುಧಿಷ್ಠಿರಃ

ಏವಮಾಹಾಯಮಸಿತೋ ದೇವಲೋ ಮುನಿಸತ್ತಮಃ ।
ಇಮಾನಿ ಶೋಕದ್ವಾರಾಣಿ ಯೋ ವೈ ಸಂಚರತೇ ಸದಾ ॥೯॥

ಇದಂ ವೈ ದೇವನಂ ಪಾಪಂ ಮಾಯಯಾ ಕಿತವೈಃಸಹ ।
ಧರ್ಮೇಣ ತು ಜಯೋ ಯುದ್ಧೇ ತತ್ ಪರಂ ನ ತು ದೇವನಮ್ ॥

ನಾರ್ಯಾ ಮ್ಲೇಚ್ಛಂತಿ ಭಾಷಾಭಿರ್ಮಾಯಯಾ ನ ಚರಂತ್ಯುತ ।
ಅಜಿಹ್ಮಮಶಠಂ ಯುದ್ಧಮೇತತ್ ಸತ್ಪುರುಷವ್ರತಮ್ ॥೧೦॥

ಋಷಿಶ್ರೇಷ್ಠರಾದ ಅಸಿತರು ಮತ್ತು ದೇವಲರು ಹೀಗೆ ಹೇಳಿದ್ದಾರೆ. ಅಕ್ಷಕಿತವರ ಜೊತೆಯಲ್ಲಿ ಆಟವನ್ನು ಆಡುವುದು ಒಂದು ಪಾಪದ ಕಾರ್ಯ. ಅದರಲ್ಲಿಯೂ ಮೋಸದಿಂದ ಆಡುವುದು ಇನ್ನೂ ಪಾಪಕರವಾದುದು. ಯಾರು ಅದರಲ್ಲಿಯೇ ಆಸಕ್ತನಾಗಿರುತ್ತಾನೆಯೊ ಅವನು ಈ ಶೋಕದ್ವಾರಗಳನ್ನು ಹೊಂದುತ್ತಾನೆ. ಯುದ್ಧದಲ್ಲಿ ಜಯವು ಮಾತ್ರ ಪುಣ್ಯಪ್ರದವಾದುದು. ಆದ್ದರಿಂದ ಅಕ್ಷಕ್ರೀಡೆಯು ಎಂದೂ ಶ್ರೇಷ್ಠವಲ್ಲ. ಆರ್ಯರು ಮ್ಲೇಚ್ಛಭಾಷೆಗಳಿಂದ ವ್ಯವಹರಿಸುವುದಿಲ್ಲ. ಕಪಟದಿಂದ ಏನನ್ನೂ ಆಚರಿಸವುದಿಲ್ಲ. (ಅಕ್ಷಕ್ರೀಡೆಯಲ್ಲಿ ರತರಾದವರು ಎದುರಾಳಿಗೆ ತಿಳಿಯದ ಭಾಷೆಯಲ್ಲಿ ಮಾತನಾಡಿಕೊಂಡು ಮೋಸದ ನಡೆಗಳನ್ನು ನಡೆಸುತ್ತಾರೆ.) ಯುದ್ಧವಾದರೋ ಕುಟಿಲತೆಯಿಂದ ಮತ್ತು ಮೋಸದಿಂದ ದೂರವಾದುದು. ಅದು ಸತ್ಪುರುಷರ ವ್ರತ.

ಶಕ್ತಿತೋ ಬ್ರಾಹ್ಮಣಾರ್ಥಾಯ ಶಿಕ್ಷಿತುಂ ಪ್ರಯತಾಮಹೇ ।
ತದ್ವಿ ವಿದ್ವಾನ್ ಮಾಽತಿದೇವೀರ್ಮಾ ಜೈಷೀಃ ಶಕುನೇ ಪರಮ್ ॥೧೨॥

ನಮ್ಮ ಶಕ್ತಿಯಿದ್ದಷ್ಟು ಬ್ರಾಹ್ಮಣರನ್ನು ರಕ್ಷಿಸಲು ಮತ್ತು ದುಷ್ಟರನ್ನು ಶಿಕ್ಷಿಸಲು ನಾವು ಪ್ರಯತ್ನ ಪಡುತ್ತೇವೆ. ಅದನ್ನು ತಿಳಿದ ಎಲೈ ಶಕುನಿಯೇ! ನಮ್ಮನ್ನು ಮೀರಿ ಆಟವಾಡಿ ನಮ್ಮನ್ನು ಗೆಲ್ಲಬೇಡ.

ನಾಹಂ ನಿಕೃತ್ಯಾ ಕಾಮೇಯಂ ಸುಖಾನ್ಯುತ ಧನಾನಿ ವಾ ।
ಕಿಂ ತವಾಸ್ಯಾದ್ಯ ನಿಕೃತೇರ್ವಿತ್ತಮೇತೇನ ಯುಜ್ಯತೇ ॥೧೩॥

ನಾನು ಮೋಸದಿಂದ ಸುಖವನ್ನಾಗಲೀ ಧನವನ್ನಾಗಲೀ ಬಯಸುವುದಿಲ್ಲ. ಶಕುನಿಯೇ ನೀನು ಈ ದಿನ ಮೋಸದಿಂದ ಸಂಪಾದಿಸಿದ ಧನವು ದುರ್ಯೋಧನನಲ್ಲಿ ಶಾಶ್ವತವಾಗಿ ಇರುವುದೆಂದು ತಿಳಿದಿದ್ದೀಯಾ?

ಶಕುನಿಃ

ಶ್ರೋತ್ರಿಯೋಽಶ್ರೋತ್ರಿಯಸುತಂ ನಿಕೃತ್ಯೈವ ಯುಧಿಷ್ಠಿರ ।
ವಿದ್ವಾನವಿದುಷೋಽಭ್ಯೇತಿ ನಾಹುಸ್ತಾಂ ನಿಕೃತಿಂ ಜನಾಃ ॥೧೪॥

ಯುಧಿಷ್ಠಿರನೇ! ವೇದಜ್ಞಾನವುಳ್ಳ ಶ್ರೋತ್ರಿಯನು ಶ್ರೋತ್ರಿಯನಲ್ಲದವನ ಮಗನನ್ನು ಗೆಲ್ಲುತ್ತಾನೆ. ವಿದ್ವಾಂಸನಾದವನು ವಿದ್ವಾಂಸನಲ್ಲದವನನ್ನು ಗೆಲ್ಲುತ್ತಾನೆ. ಅದನ್ನು ಲೋಕದಲ್ಲಿ ನಿಕೃತಿ(ಮೋಸ) ಎಂದು ಹೇಳುವುದಿಲ್ಲ. (ಶ್ರೋತ್ರಿಯನಾದವನು ಅಶ್ರೋತ್ರಿಯಮಗನನ್ನು ಮೋಸದಿಂದ ಗೆದ್ದರೆ ಮಾತ್ರ ಅದನ್ನು ಮೋಸವೆಂದು ಹೇಳುತ್ತಾರೆ. ವಿಷಯವನ್ನು ತಿಳಿದವನನ್ನು ಯಾವರೀತಿಯಿಂದ ಗೆದ್ದರೂ ಅದು ಮೋಸವೆನಿಸುವುದಿಲ್ಲ.)

ಅಕ್ಷೈರ್ಹಿ ಶಿಕ್ಷಿತೋಽಭ್ಯೇತಿ ನಿಕೃತ್ಯೈವ ಯುಧಿಷ್ಠಿರ ।
ಅಕೃತಾಸ್ತ್ರಂ ಕೃತಾಸ್ತ್ರಶ್ಚ ದುರ್ಬಲಂ ಬಲವತ್ತರಃ ॥೧೫॥

ಯುಧಿಷ್ಠಿರನೇ! ಅಕ್ಷದಲ್ಲಿ ಶಿಕ್ಷಿತನಾದವನು ಶಿಕ್ಷಿತನಲ್ಲದ ಇನ್ನೊಬ್ಬನನ್ನು ಎದುರಿಸುವುದು ನಿಕೃತಿಯಿಂದಲೇ. ಶಸ್ತ್ರವಿದ್ಯೆಯನ್ನು ಬಲ್ಲವನು ಶಸ್ತ್ರವಿದ್ಯೆಯನ್ನು ತಿಳಿಯದವನ ಮೇಲೆ ಜಯವನ್ನು ಸಾಧಿಸುವುದು ಬಲಿಷ್ಠನಾದವನು ದುರ್ಬಲನಾದವನ ಮೇಲೆ ಜಯವನ್ನು ಸಾಧಿಸುವುದು ಸಹ ಒಂದು ರೀತಿ ನಿಕೃತಿಯಿಂದಲೇ. (ಅಂತಹ ನಿಕೃತಿಯು ದೋಷವಲ್ಲ.)

ಶಕುನಿಃ

ಏವಂ ತ್ವಂ ಮಾಮಿಹಾಭ್ಯೇತ್ಯ ನಿಕೃತಿಂ ಯದಿ ಮನ್ಯಸೇ ।
ದೇವನಾದ್ ವಿನಿವರ್ತಸ್ವ ಯದಿ ತೇ ವಿದ್ಯತೇ ಭಯಮ್ ॥೧೬॥

ಹಾಗೆ ನೀನು ನನ್ನ ಬಳಿಗೆ ಬಂದು ನನ್ನ ಆಟವು ನಿಕೃತಿ (ಮೋಸ) ಎಂದು ತಿಳಿಯುವುದಾದರೆ, ನಿನಗೆ ಭಯವಿರುವ ಕಾರಣ ನೀನು ಆಟದಿಂದ ನಿವೃತ್ತನಾಗು.

ಯುಧಿಷ್ಠಿರಃ

ಆಹೂತೋ ನ ನಿವರ್ತೇಯಮಿತಿ ಮೇ ವ್ರತಮಾಹಿತಮ್ ।
ವಿಧಿಶ್ಚ ಬಲವಾನ್ ರಾಜನ್ ದಿಷ್ಟಸ್ಯಾಸ್ಮಿ ವಶೇ ಸ್ಥಿತಃ ॥೧೭॥

ಅಸ್ಮಿನ್ ಸಮಾಗಮೇ ಕೇನ ದೇವನಂ ನೌ ಭವಿಷ್ಯತಿ ।
ಪ್ರತಿಪಾಣಶ್ಚ ಕೋ ನ್ಯಸ್ತಸ್ತತೋ ದ್ಯೂತಂ ಪ್ರವರ್ತತಾಮ್ ॥೧೮॥

ದ್ಯೂತಕ್ಕೆ ಕರೆದಾಗ ನಾನು ನಿವೃತ್ತನಾಗುವುದಿಲ್ಲ ಎಂಬುವುದು ನನ್ನ ವ್ರತ. ರಾಜನೇ! ವಿಧಿಯು ಪ್ರಬಲವಾದುದು ಮತ್ತು ನಾನು ಅದರ ವಶದಲ್ಲಿ ಇದ್ದೇನೆ. ಈ ಸಮಾಗಮದಲ್ಲಿ ನಮ್ಮಿಬ್ಬರಲ್ಲಿ ಯಾವ ಪಣದಿಂದ ಅಕ್ಷಕ್ರೀಡೆಯು ಉಂಟಾಗುವುದು? ನೀನು ಪಣಕ್ಕೆ ಪ್ರತಿಯಾಗಿ ಏನನ್ನು ಇಡುತ್ತಿದ್ದೀಯೆ ಎಂದು ಹೇಳು. ಅನಂತರ ದ್ಯೂತವು ಜರುಗಲಿ.

ದುರ್ಯೋಧನಃ

ಅಹಂ ದಾತಾಸ್ಮಿ ರತ್ನಾನಾಂ ಧನಾನಾಂ ಚ ವಿಶಾಂಪತೇ ।
ಮದರ್ಥೇ ದೇವಿತಾ ಚಾಯಂ ಶಕುನಿರ್ಮಾತುಲೋ ಮಮ ॥೧೯॥

ರಾಜನೇ! ನಾನು ರತ್ನಗಳನ್ನು ಮತ್ತು ಧನಗಳನ್ನು ಕೊಡುವೆನು. ನನ್ನ ಸೋದರಮಾವನಾದ ಶಕುನಿಯು ನನ್ನ ಪರವಾಗಿ ಆಡುವನು.

ಯುಧಿಷ್ಠಿರಃ

ಅನ್ಯೇನಾನ್ಯಸ್ಯ ವಿಷಮಂ ದೇವನಂ ಪ್ರತಿಭಾತಿ ಮೇ ।
ಏತದ್ವಿದ್ವಾನುಪಾದತ್ಸ್ವ ಕಾಮಮೇವಂ ಪ್ರವರ್ತತಾಮ್ ॥೨೦॥

ಒಬ್ಬನ ಪರವಾಗಿ ಮತ್ತೊಬ್ಬನು ಆಡುವುದು ವಿಷಮವಾದ ಆಟವೆಂದು ನನಗೆ ತೋರುತ್ತದೆ. ಇದನ್ನು ತಿಳಿದ ನೀನು ಪಣವನ್ನು ಹೇಳು. ಹಾಗೆಯೇ ಆಟವು ಮುಂದುವರೆಯಲಿ.

ವೈಶಂಪಾಯನಃ

ಪ್ರವರ್ತಮಾನೇ ದ್ಯೂತೇ ತು ರಾಜಾನಂ ಸರ್ವಪಾರ್ಥಿವಾಃ ।
ಧೃತರಾಷ್ಟ್ರಂ ಪುರಸ್ಕೃತ್ಯ ವಿವಿಶುಸ್ತಾಂ ಸಭಾಂ ತತಃ ॥೨೧॥

ಭೀಷ್ಮೋ ದ್ರೋಣಃ ಕೃಪಶ್ಚೈವ ವಿದುರಶ್ಚ ಮಹಾಮತಿಃ ।
ನಾತೀವ ಪ್ರೀತಮನಸಸ್ತೇನ್ವವರ್ತಂತ ಭಾರತ ॥೨೨॥

ದ್ಯೂತವು ಪ್ರವೃತ್ತವಾಗುತ್ತಿರಲು ಎಲ್ಲ ರಾಜರು ಧೃತರಾಷ್ಟ್ರನನ್ನು ಮುಂದೆಮಾಡಿಕೊಂಡು ಆ ಸಭೆಗೆ ಬಂದರು. ಎಲೈ ಭಾರತನೇ! ಭೀಷ್ಮ ದ್ರೋಣ ಕೃಪ ಮೇಧಾವಿಯಾದ ವಿದುರ ಇವರೆಲ್ಲರೂ ಬಹಳ ಸಂತೋಷವಿಲ್ಲದ ಮನಸ್ಸಿನಿಂದ ಧೃತರಾಷ್ಟ್ರನನ್ನು ಹಿಂಬಾಲಿಸಿದರು.

ತೇ ದ್ವಂದ್ವಶಃ ಪೃಥಕ್ ಚೈವ ಸಿಂಹಸ್ಕಂಧಾ ಮಹೌಜಸಃ ।
ಸಿಂಹಾಸನಾನಿ ಭೂರೀಣಿ ವಿಚಿತ್ರಾಣಿ ಚ ಭೇಜಿರೇ ॥೨೩॥

ಸಿಂಹಸ್ಕಂಧವುಳ್ಳ ಮಹಾಪರಾಕ್ರಮಿಗಳಾದ ಅವರು ಒಬ್ಬಬ್ಬರಾಗಿಯೂ ಇಬ್ಬಿಬ್ಬರಾಗಿಯೂ ಬಂದು ವಿಚಿತ್ರವಾದ ದೊಡ್ಡ ಸಂಹಾಸನಗಳನ್ನು ಏರಿ ಕುಳಿತರು.

ಶುಶುಭೇ ಸಾ ಸಭಾ ರಾಜನ್ ರಾಜಭಿಸ್ತೈಃ ಸಮಾಗತೈಃ ।
ದೇವೈರಿವ ಮಹಾಭಾಗೈಃ ಸಮುದೀರ್ಣಂ ತ್ರಿವಿಷ್ಟಪಮ್ ॥೨೪॥

ಎಲೈ ರಾಜನೇ! ಅಲ್ಲಿಗೆ ಸಮಾಗತರಾದ ರಾಜರಿಂದಸಭೆಯು ಮಹಾನುಭಾವರಾದ ದೇವತೆಗಳಿಂದ ತುಂಬಿದ ಸ್ವರ್ಗದಂತೆ ಶೋಭಿಸಿತು.

ಸರ್ವೇ ವೇದವಿದಃ ಶೂರಾಃ ಸರ್ವೇ ಭಾಸ್ವರಮೂರ್ತಯಃ ।
ಪ್ರಾವರ್ತತ ಮಹಾರಾಜ ಸುಹೃದ್ದ್ಯೂತಮನಂತರಮ್ ॥೨೫॥

ಎಲ್ಲರೂ ವೇದಜ್ಞರು ಶೂರರು ಮತ್ತು ಕಾಂತಿಯುಕ್ತವಾದ ಶರೀರವುಳ್ಳವರು. ಮಹಾರಾಜನೇ ಅನಂತರ ಸೌಹಾರ್ದದ ದ್ಯೂತವು ಜರುಗಿತು.

ಯುಧಿಷ್ಠಿರಃ

ಅಯಂ ಬಹುಧನೋ ರಾಜನ್ ಸಾಗರಾವರ್ತಸನ್ನಿಭಃ ।
ಮಣಿಹಾರೋತ್ತಮಃ ಶ್ರೀಮಾನ್ ಕನಕೋತ್ತಮಭೂಷಣಃ ॥೨೬॥

ಏತದ್‌ರಾಜಧನಂ ಮಹ್ಯಂ ಪ್ರತಿಪಾಣೋಽತ್ರ ಕಸ್ತವ ।
ಯೇನ ಮಾಂ ತ್ವಂ ಮಹಾರಾಜ ಧನೇನ ಪ್ರತಿದೀವ್ಯಸೇ ।
ಭವತ್ವೇಷ ಕ್ರಮಸ್ತಾವಜ್ಜಯಾಮ್ಯೇನಂ ದುರೋದರಮ್ ॥೨೭॥

ರಾಜನೇ! ಬಹು ಬೆಲೆಬಾಳುವ ಉತ್ತಮವಾದ ಸುವರ್ಣ- ಭೂಷಣಗಳಿಂದ ಕೂಡಿದ ಸಾಗರದ ಸುಳಿಯನ್ನು ಹೋಲುವ ಮಣಿಮಯವಾದ ಶ್ರೇಷ್ಠವಾದ ಕಾಂತಿಯುಕ್ತವಾದ ಹಾರವಾದ ಈ ರಾಜಧನವನ್ನು ನಾನು ಪಣವಾಗಿ ಇಡುತ್ತಿದ್ದೇನೆ. ಮಹಾರಾಜನೇ! ನೀನು ನನಗೆ ಎದುರಾಗಿ ಆಟವಾಡಲು ನಿನ್ನ ಪ್ರತಿಪಣವೇನು? ಈ ಕ್ರಮದಲ್ಲಿಯೇ ಪಂದ್ಯವು ಮುಂದೆ ಹೋಗಲಿ. ನಾನು ಈ ಆಟವನ್ನು ಗೆಲ್ಲುತ್ತೇನೆ.

ದುರ್ಯೋಧನಃ

ಸಂತಿ ಮೇ ಮಣಯಶ್ಚೈವ ಧನಾನಿ ವಿವಿಧಾನಿ ಚ ।
ಮತ್ಸರಶ್ಚ ನ ಮೇಽರ್ಥೇಷು ಜಯಾಮ್ಯೈತದ್ ದುರೋದರಮ್ ॥೨೮॥

ತನ್ನಲ್ಲಿ ಮಣಿಗಳೂ ವಿವಿಧವಾದ ಧನಗಳೂ ಇದೆ. ನನಗೆ ಐಶ್ವರ್ಯದಲ್ಲಿ ಮಾತ್ಸರ್ಯವಿಲ್ಲ. ಈ ಆಟವನ್ನು ನಾವು ಗೆಲ್ಲುತ್ತೇವೆ.

ವೈಶಂಪಾಯನಃ

ಏತಚ್ಛ್ರುತ್ವಾ ತು ಶಕುನಿಃ ನಿಕೃತಿಂ ತಾಮುಪಾಶ್ರಿತಃ ।
ತತೋ ಜಗ್ರಾಹ ಶಕುನಿಸ್ತಾನಕ್ಷಾನಕ್ಷತತ್ತ್ವವಿತ್ ।
ಜಿತಮಿತ್ಯೇವ ಶಕುನಿರ್ಯುಧಿಷ್ಠಿರಮಭಾಷತ ॥೨೯॥

ಇದನ್ನು ಕೇಳಿದ ಶಕುನಿಯು ಮೋಸವನ್ನು ಆಶ್ರಯಿಸಿ ಅಕ್ಷತತ್ವವನ್ನು ತಿಳಿದ ಅವನು ಅಕ್ಷಗಳನ್ನು ಹಿಡಿದು ಉರುಳಿಸಿ ಯುಧಿಷ್ಠಿರನನ್ನು ಕುರಿತು ನಾನು ಗೆದ್ದಿದ್ದೇನೆ ಎಂದು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಅಶೀತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ದ್ವಾದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಂಭತ್ತನೆಯ ಅಧ್ಯಾಯವು ಮುಗಿಯಿತು.

★★★★★

ಎಂಭತ್ತೊಂದನೆಯ ಅಧ್ಯಾಯ

(ದ್ಯೂತದಲ್ಲಿ ಧರ್ಮರಾಜನ ಪರಾಭವಸರಣಿ)

ಯುಧಿಷ್ಠಿರಃ

ತ್ವತ್ತಃ ಕೈತವಕೇನೈವ ಯಜ್ಜಿತೋಸ್ಮಿ ದುರೋದರಮ್ ।
ಶಕುನೇ ಹಂತ ದೀವ್ಯಾವೋ ಗ್ಲಹಮಾನೌ ಸಹಸ್ರಶಃ ॥೧॥

ಶಕುನಿಯೇ! ಮೋಸವನ್ನು ಆಶ್ರಯಿಸಿದ ನಿನ್ನಿಂದ ನಾನು ಆಟದಲ್ಲಿ ನಿನಗೆ ಸೋತಿರುವ ಕಾರಣ ಸಹಸ್ರಾರು ಸಂಖ್ಯೆಯಲ್ಲಿ ಪಣವನ್ನು ಇಟ್ಟು ಪುನಃ ದ್ಯೂತವನ್ನು ಆಡೋಣ.

ಇಮೇ ನಿಷ್ಕಸಹಸ್ರಸ್ಯ ಕುಂಭಿನೋ ಭರಿತಾಯುತಮ್ ।
ಕೋಶೋ ಹಿರಣ್ಯಮಕ್ಷಯ್ಯಂ ಜಾತರೂಪಮನೇಕಶಃ ।
ಏತದ್ ರಾಜಧನಂ ಮಹ್ಯಂ ತೇನ ದೀವ್ಯಾಮ್ಯಹಂ ತ್ವಯಾ ॥೨॥

ಇವು ಅಯುತಾಯುತದ್ರವ್ಯಪೂರ್ಣವಾದ ಸುವರ್ಣದ ಹಂಡೆಗಳು. ಇದು ನನ್ನ ರಾಜಧನ. ಇದನ್ನು ಪಣವಾಗಿಟ್ಟು ನಿನ್ನ ಜೊತೆ ಆಡುತ್ತೇನೆ.

ವೈಶಂಪಾಯನಃ

ಇತ್ಯುಕ್ತಃ ಶಕುನಿಃ ಪ್ರಾಹ ಜಿತಮಿತ್ಯೇವ ತಂ ನೃಪಮ್ ।
ಕೌರವಾಣಾಂ ಕುಲಕರಂ ಶ್ರೇಷ್ಠಂ ಪಾಂಡವಮಚ್ಯುತಮ್ ॥೩॥

ಹೀಗೆ ಹೇಳಲ್ಪಟ್ಟ ಶಕುನಿಯು ಕೌರವಕುಲವರ್ಧನನಾದ, ತನ್ನ ಗುಣಗಳಿಂದ ಎಂದೂ ಚ್ಯುತನಾಗದ ಶೇಷ್ಠನಾದ ಧರ್ಮರಾಜನನ್ನು ಕುರಿತು ನಾನು ಗೆದ್ದಿದ್ದೇನೆ ಎಂದು ಹೇಳಿದನು.

ಯುಧಿಷ್ಠಿರಃ

ಅಯಂ ಸಹಸ್ರಸಮಿತೋ ವೈಯಾಘ್ರಃ ಸುಪ್ರವರ್ತಿತಃ ।
ಸುಚಕ್ರೋಪಸ್ಕರಃ ಶ್ರೀಮಾನ್ ಕಿಂಕಿಣೀಜಾಲಮಂಡಿತಃ ॥೪॥

ಸಂಹ್ರಾದನೋ ರಾಜರಥೋ ಯ ಇಹಾಸ್ಮಾನುಪಾವಹತ್ ।
ಜೈತ್ರೋ ರಥವರಃ ಪುಣ್ಯೋ ಮೇಘಸಾಗರನಿಸ್ವನಃ ॥೫॥

ಅಷ್ಟೌ ಯಂ ಕುಲಸಂಪನ್ನಾಃ ಸದಶ್ವಾ ರಾಷ್ಟ್ರಸಮ್ಮತಾಃ ।
ವಹಂತಿ ನೈಷಾ ಮುಚ್ಯೇತ ಪದಾದ್ ಭೂಮಿಮುಪಸ್ಪೃಶನ್ ।
ಏತದ್ ರಾಜನ್ ಧನಂ ಮಹ್ಯಂ ತೇನ ದೀವ್ಯಾಮ್ಯಹಂ ತ್ವಯಾ ॥೬॥

ಇದು ಸಹಸ್ರ ರಥಗಳಿಗೆ ಸಮವಾದ ವ್ಯಾಘ್ರಚರ್ಮಗಳಿಂದ ಅಲಂಕೃತವಾದ ಸರಾಗವಾಗಿ ಚಲಿಸುವ ಒಳ್ಳೆಯ ಚಕ್ರಗಳನ್ನೂ ಕಿಂಕಿಣಿಯ ಮಾಲೆಗಳನ್ನೂ ಹೊಂದಿರುವ ಇಲ್ಲಿಗೆ ನಮ್ಮನ್ನು ಕರೆದು ಕೊಂಡುಬಂದ ರಾಜರಥ. ಇದು ಸಂತೋಷದಾಯಕವಾದ ಜಯಶೀಲವಾದ ಪವಿತ್ರವಾದ ಮೇಘ ಮತ್ತು ಸಾಗರದಂತೆ ಘೋಷವುಳ್ಳ ಶ್ರೇಷ್ಠವಾದ ರಥ. ಶ್ರೇಷ್ಠವಾದ ರಾಷ್ಟ್ರಸಂಮತವಾದ ಕುಲೀನವಾದ ಎಂಟು ಅಶ್ವಗಳು ಈ ರಥವನ್ನು ಎಳೆಯುತ್ತವೆ. ಈ ಅಶ್ವಗಳು ಎಂದೂ ರಣಭೂಮಿಯನ್ನು ತ್ಯಜಿಸಿ ಪಲಾಯನವನ್ನು ಮಾಡುವುದಿಲ್ಲ. ರಾಜನೇ! ಇದು ನನ್ನ ಧನ. ಇದನ್ನು ಪಣವಾಗಿಟ್ಟು ನಿನ್ನ ಜೊತೆ ಆಡುತ್ತೇನೆ.

ವೈಶಂಪಾಯನಃ

ತಮೇವಂವಾದಿನಂ ಪಾರ್ಥಂ ಪ್ರಹಸನ್ನಿವ ಸೌಬಲಃ ।
ಜಿತಮಿತ್ಯೇವ ಶಕುನಿರ್ಯುಧಿಷ್ಠಿರಮಭಾಷತ ॥೭॥

ಹೀಗೆ ಮಾತನಾಡಿದ ಧರ್ಮರಾಜನನ್ನು ಕುರಿತು ಸೌಬಲನು ನಗುತ್ತಾ ಶಕುನಿಯು ನಾನು ಗೆದ್ದೆ ಎಂದೇ ಹೇಳಿದನು.

ಯುಧಿಷ್ಠಿರಃ

ಸಹಸ್ರಸಂಖ್ಯಾ ನಾಗಾ ಮೇ ಮತ್ತಾಸ್ತಿಷ್ಠಂತಿ ಸೌಬಲ ।
ಹೇಮಕಕ್ಷ್ಯಾಃ ಕೃತಾಪೀಡಾಃ ಪದ್ಮಿನೋ ಹೇಮಮಾಲಿನಃ ॥೮॥

ಸುದಂತಾ ರಾಜವಹನಾಃ ಸರ್ವಶಸ್ತ್ರಸಹಾ ಯುಧಿ ।
ಶುಭ್ರದಂತಾ ಮಹಾಕಾಯಾಃ ಸರ್ವೇ ಚೇಷ್ಟಕರೇಣವಃ ॥೯॥

ಸರ್ವೇ ಚ ಪುರಭೇತ್ತಾರೋ ನವಮೇಘನಿಭಾ ಗಜಾಃ ।
ಏತದ್ ರಾಜನ್ ಧನಂ ಮಹ್ಯಂ ತೇನ ದೀವ್ಯಾಮ್ಯಹಂ ತ್ವಯಾ॥೧೦॥

ಶಕುನಿಯೇ! ನನ್ನಲ್ಲಿ ಒಂದು ಸಹಸ್ರ ಮದಿಸಿದ ಗಜಗಳಿವೆ. ಅವೆಲ್ಲವೂ ಸುವರ್ಣಕಕ್ಷೆಯಿಂದಲೂ ಮೂರ್ಧಾಭರಣದಿಂದಲೂ ಸುವರ್ಣಮಾಲೆಗಳಿಂದಲೂ ಅಲಂಕೃತವಾಗಿವೆ. ಒಳ್ಳೆಯ ದಂತಗಳನ್ನು ಹೊಂದಿರುವ ಅವು ಯುದ್ಧದಲ್ಲಿ ಎಲ್ಲಾ ಶಸ್ತ್ರಗಳನ್ನೂ ಸಹಿಸುವ ಸಾಮರ್ಥ್ಯವನ್ನು ಹೊಂದಿವೆ. ಎಲ್ಲವೂ ರಾಜರನ್ನೂ ಹೊತ್ತುಕೊಂಡು ಹೋಗುವಂತಹವು. ಶ್ವೇತವರ್ಣದ ದಂತಗಳನ್ನು ಹೊಂದಿರುವಂತಹವು. ಮಹಾಶರೀರವುಳ್ಳವು ಮತ್ತು ''ಕರೇಣ'' (ಚಿಕ್ಕಹೆಣ್ಣಾನೆ)ಗಳಿಗೆ ಪ್ರಿಯವಾದವು. ಹೊಸದಾದ ಮೇಘದ ಕಾಂತಿಯುಳ್ಳವು ಎಲ್ಲವೂ ಶತ್ರುಪುರವನ್ನು ಭೇದಿಸುವಂತಹವು. ಎಲೈ ರಾಜನೇ! ಇದು ನನ್ನ ಪಣ ಧನ. ಇದರಿಂದ ನಾನು ನಿನ್ನ ಜೊತೆಯಲ್ಲಿ ಆಡುತ್ತೇನೆ.

ವೈಶಂಪಾಯನಃ

ತಮೇವಂವಾದಿನಂ ಪಾರ್ಥಂ ಪ್ರಹಸನ್ನಿವ ಸೌಬಲಃ ।
ಜಿತಮಿತ್ಯೇವ ಶಕುನಿರ್ಯುಧಿಷ್ಠಿರಮಭಾಷತ ॥೧೧॥

ಹೀಗೆ ಮಾತನಾಡಿದ ಧರ್ಮರಾಜನನ್ನು ಕುರಿತು ಸುಬಲಪುತ್ರನಾದ ಶಕುನಿಯು ನಾನು ಗೆದ್ದೆ ಎಂದೇ ಹೇಳಿದನು.

ಯುಧಿಷ್ಠಿರಃ

ಶತಂ ದಾಸೀಸಹಸ್ರಾಣಿ ತರುಣ್ಯೋ ಹೇಮಭೂಷಣಾಃ ।
ಕಂಚುಕೇಯೂರಹಾರಿಣ್ಯೋ ನಿಷ್ಕಕಂಠ್ಯಃ ಸ್ವಲಂಕೃತಾಃ ॥೧೨॥

ಮಹಾರ್ಹಮಾಲ್ಯಾಭರಣಾಃ ಸುವಸ್ತ್ರಾಶ್ಚಂದನೋಕ್ಷಿತಾಃ ।
ಮಣಿಹೇಮ ಚ ಬಿಭ್ರತ್ಯಃ ಸರ್ವಾ ವೈ ಸೂಕ್ಷ್ಮವಾಸಸಃ ॥೧೩॥

ಅನುಸೇವಾಂ ಚರಂತೀಮಾಃ ಕುಶಲಾ ನೃತ್ತಸಾಮಸು ।
ಸ್ನಾತಕಾನಾಮಮಾತ್ಯಾನಾಂ ರಾಜ್ಞಾಂ ಚ ಮಮ ಶಾಸನಾತ್ ।
ಏತದ್ ರಾಜನ್ ಧನಂ ಮಹ್ಯಂ ತೇನ ದೀವ್ಯಾಮ್ಯಹಂ ತ್ವಯಾ ॥೧೪॥

ಈ ಒಂದು ಲಕ್ಷದಾಸಿಯರು ತರುಣಿಯರೂ ಸುವರ್ಣಭೂಷಿತರಾದವರೂ ಕಂಚುಕವನ್ನೂ ಕೇಯೂರವನ್ನು ಹಾರಗಳನ್ನೂ ಕಂಠಾಭರಣಗಳನ್ನೂ ಧರಿಸಿ ಅಲಂಕೃತರಾದವರು. ಒಳ್ಳೆಯ ಬೆಲೆಬಾಳುವ ಮಾಲೆಗಳನ್ನು ಮತ್ತು ಆಭರಣಗಳನ್ನು ಧರಿಸಿದರು. ಒಳ್ಳೆಯ ವಸ್ತ್ರಗಳನ್ನು ಧರಿಸಿ ಚಂದನವನ್ನು ಲೇಪಿಸಿದವರು. ರತ್ನಖಚಿತವಾದ ಸುವರ್ಣಾಭರಣವನ್ನು ಧರಿಸಿ ಸೂಕ್ಷ್ಮವಾದ ವಸ್ತ್ರಗಳನ್ನು ಧರಿಸಿದವರು. ಎಲ್ಲರೂ ಸೇವೆಮಾಡುವುದರಲ್ಲಿ ಕುಶಲರು. ಅಷ್ಟೇ ಅಲ್ಲದೆ ಬ್ರಾಹ್ಮಣರ ಮಂತ್ರಿಗಳ ಅಥವಾ ನನ್ನ ಶಾಸನದಂತೆ ನೃತ್ಯಗಾನಗಳನ್ನು ಮಾಡುವವರು. ರಾಜನೇ! ಇದನ್ನು ಪಣವಾಗಿಟ್ಟು ನಿನ್ನ ಜೊತೆಯಲ್ಲಿ ಆಡುತ್ತೇನೆ.

ವೈಶಂಪಾಯನಃ

ಏತಚ್ಛ್ರುತ್ವಾ ವ್ಯವಸಿತೋ ನಿಕೃತಿಂ ಸಮುಪಾಶ್ರಿತಃ ।
ಜಿತಮಿತ್ಯೇವ ಶಕುನಿರ್ಯುಧಿಷ್ಠಿರಮುವಾಚ ಹ ॥೧೫॥

ಇದನ್ನು ಕೇಳಿದ ಶಕುನಿಯು ಮೊದಲೇ ನಿಶ್ಚಯಿಸಿ ಮೋಸವನ್ನು ಆಶ್ರಯಿಸಿ ಯುಧಿಷ್ಠಿರನನ್ನು ಕುರಿತು ನಾನು ಗೆದ್ದಿದ್ದೇನೆ ಎಂದೇ ಹೇಳಿದನು.

ಯುಧಿಷ್ಠಿರಃ

ಏತಾವಂತ್ಯೇವ ದಾಸಾನಾಂ ಸಹಸ್ರಾಣ್ಯುತ ಸಂತಿ ಮೇ ।
ಪ್ರದಕ್ಷಿಣಾನುಲೋಮಾಶ್ಚ ಪ್ರಾವಾರವಸನಾಃ ಸದಾ ॥೧೬॥

ಪ್ರಾಜ್ಞಾ ಮೇಧಾವಿನೋ ದಕ್ಷಾ ಯುವಾನೋ ಮೃಷ್ಟಕುಂಡಲಾಃ ।
ಪಾತ್ರಹಸ್ತಾ ದಿವಾರಾತ್ರಮತಿಥೀನ್ ಭೋಜಯಂತಿ ಯೇ ।
ಏತದ್ ರಾಜನ್ ಧನಂ ಮಹ್ಯಂ ತೇನ ದೀವ್ಯಾಮ್ಯಹಂ ತ್ವಯಾ ॥೧೭॥

ನನಗೆ ಇಷ್ಟೇ ಸಹಸ್ರ ಸಂಖ್ಯೆಯ ದಾಸರಿದ್ದಾರೆ. ಎಲ್ಲರೂ ಪ್ರದಕ್ಷಿಣಾಕಾರದ ಸುಳಿಗಳನ್ನೂ ಒಳ್ಳೆಯ ವಸ್ತ್ರಗಳನ್ನು ಧರಿಸಿದವರೂ ಪ್ರಾಜ್ಞರೂ ಮೇಧಾವಿಗಳೂ ದಕ್ಷರೂ ಹೊಳೆಯುವ ಕರ್ಣಕುಂಡಲಗಳನ್ನು ಧರಿಸಿದವರು ಇವರು ಹಗಲು ಮತ್ತು ರಾತ್ರಿ ಕೈಯಲ್ಲಿ ಪಾತ್ರೆಗಳನ್ನು ಹಿಡಿದು ಅತಿಥಿಗಳಿಗೆ ಬಡಿಸುತ್ತಾರೆ. ರಾಜನೇ! ಇದು ನನ್ನ ಧನ. ಇದನ್ನು ಪಣವಾಗಿಟ್ಟು ನಿನ್ನ ಜೊತೆಯಲ್ಲಿ ಆಡುವೆನು.

ವೈಶಂಪಾಯನಃ

ಏತಚ್ಛ್ರುತ್ವಾ ವ್ಯವಸಿತೋ ನಿಕೃತಿಂ ಸಮುಪಾಶ್ರಿತಃ ।
ಜಿತಮಿತ್ಯೇವ ಶಕುನಿರ್ಯುಧಿಷ್ಠಿರಮಭಾಷತ ॥೧೮॥

ಇದನ್ನು ಕೇಳಿದ ಶಕುನಿಯು ಮೊದಲೇ ನಿಶ್ಚಯಿಸಿ ಮೋಸವನ್ನು ಅವಲಂಬಿಸಿ ಧರ್ಮರಾಜನನ್ನು ಕುರಿತು ನಾನು ಗೆದ್ದಿದ್ದೇನೆ ಎಂದೇ ಹೇಳಿದನು.

ಯುಧಿಷ್ಠಿರಃ

ರಥಾಸ್ತಾವಂತ ಏವೈತೇ ಹೇಮಭಾಂಡಾಃ ಪತಾಕಿನಃ ।
ಹಯೈರ್ವಿನೀತೈಃ ಸಂಪನ್ನಾ ರಥಿಭಿಶ್ಚಿತ್ರಯೋಧಿಭಿಃ ॥೧೯॥

ಏಕೈಕೋ ಯತ್ರ ಲಭತೇ ಸಹಸ್ರಪರಮಾಂ ಭೃತಿಮ್ ।
ಯುಧ್ಯತೋಽಯುಧ್ಯತೋ ವಾಽಪಿ ವೇತನಂ ಮಾಸಕಲ್ಪಿತಮ್ ।
ಏತದ್ ರಾಜನ್ ಧನಂ ಮಹ್ಯಂ ತೇನ ದೀವ್ಯಾಮ್ಯಹಂ ತ್ವಯಾ ॥೨೦॥

ಇವು ಸುವರ್ಣಉಪಕರಣಗಳಿಂದಲೂ ಪತಾಕೆಗಳಿಂದಲೂ ಕೂಡಿದ ಅಷ್ಟೇ ಸಂಖ್ಯೆಯ (ಒಂದು ಲಕ್ಷ) ರಥಗಳು ಚೆನ್ನಾಗಿ ಶಿಕ್ಷಿಸಲ್ಪಟ್ಟ ಅಶ್ವಗಳಿಂದಲೂ ವಿಶಿಷ್ಟವಾಗಿ ಯುದ್ಧವನ್ನು ಮಾಡಬಲ್ಲ ರಥಿಕರಿಂದಲೂ ಕೂಡಿರುವಂತಹವು. ಒಬ್ಬೊಬ್ಬ ರಥಿಕನೂ ಯುದ್ಧಮಾಡಲಿ ಯುದ್ಧಮಾಡದೇ ಇರಲಿ ಒಂದು ತಿಂಗಳಿಗೆ ಒಂದು ಸಹಸ್ರ ನಿಷ್ಕಗಳಿಗೆ ಕಡಿಮೆಯಿಲ್ಲದ ಸುವರ್ಣವನ್ನು ವೇತನವಾಗಿ ಪಡೆಯುತ್ತಾನೆ. ರಾಜನೇ! ಇದು ನನ್ನ ಪಣಧನ ಇದರಿಂದ ನಾನು ನಿನ್ನ ಜೊತೆಯಲ್ಲಿ ಆಡುತ್ತೇನೆ.

ವೈಶಂಪಾಯನಃ

ಇತ್ಯೇವಮುಕ್ತಃ ಪಾರ್ಥೇನ ಕೃತವೈರೋ ದುರಾತ್ಮವಾನ್ ।
ಜಿತಮಿತ್ಯೇವ ಶಕುನಿರ್ಯುಧಿಷ್ಠಿರಮಭಾಷತ ॥೨೧॥

ಧರ್ಮರಾಜನಿಂದ ಹೀಗೆ ಹೇಳಲ್ಪಟ್ಟ ದುಷ್ಟನೂ ದ್ವೇಷಿಯೂ ಆದ ಶಕುನಿಯು ಯುಧಿಷ್ಠಿರನನ್ನು ಕುರಿತು ನಾನು ಗೆದ್ದಿದ್ದೇನೆ ಎಂದು ಹೇಳಿದನು.

ಯುಧಿಷ್ಠಿರಃ

ಅಶ್ವಾಂಸ್ತಿತ್ತಿರಿಕಲ್ಮಾಷಾನ್ ಗಾಂಧರ್ವಾನ್ ಹೇಮಮಾಲಿನಃ ।
ದದೌ ಚಿತ್ರರಥಸ್ತುಷ್ಟೋ ಯಾಂಸ್ತಾನ್ ಗಾಂಡೀವಧನ್ವನೇ ।
ಏತದ್ ರಾಜನ್ ಧನಂ ಮಹ್ಯಂ ತೇನ ದೀವ್ಯಾಮ್ಯಹಂ ತ್ವಯಾ ॥೨೨॥

ತಿತ್ತಿರಿ ಪಕ್ಷಿಗಳಂತೆ ಕೆಂಪು-ಕಪ್ಪುವರ್ಣೋಪೇತವಾದ ಹೇಮಮಾಲೆಯನ್ನು ಧರಿಸಿದ ಇವು ಗಂಧರ್ವರ ಅಶ್ವಗಳು. ಇವುಗಳನ್ನು ಚಿತ್ರರಥಗಂಧರ್ವನು ಸಂತೋಷದಿಂದ ಅರ್ಜುನನಿಗೆ ಕೊಟ್ಟನು. ರಾಜನೇ! ಇದು ನನ್ನ ಪಣಧನ. ಇದರಿಂದ ನಿನ್ನ ಜೊತೆಯಲ್ಲಿ ಆಡುತ್ತೇನೆ.

ವೈಶಂಪಾಯನಃ

ಏತಚ್ಛ್ರುತ್ವಾ ವ್ಯವಸಿತೋ ನಿಕೃತಿಂ ಸಮುಪಾಶ್ರಿತಃ ।
ಜಿತಮಿತ್ಯೇವ ಶಕುನಿರ್ಯುಧಿಷ್ಠಿರಮಭಾಷತ ॥೨೩॥

ಇದನ್ನು ಕೇಳಿ ಮೊದಲೇ ನಿಶ್ಚಯಿಸಿದ್ದ ಶಕುನಿಯು ಮೋಸವನ್ನು ಆಶ್ರಯಿಸಿ ಯುಧಿಷ್ಠಿರನನ್ನು ಕುರಿತು ನಾನು ಗೆದ್ದಿದ್ದೇನೆ ಎಂದು ಹೇಳಿದನು.

ಯುಧಿಷ್ಠಿರಃ

ರಥಾನಾಂ ಶಕಟಾನಾಂ ಚ ಯಾನಾನಾಂ ಚಾಯುತಾನಿ ಮೇ ।
ಯುಕ್ತಾನ್ಯೇವ ಹಿ ತಿಷ್ಠಂತಿ ವಾಹೈರುಚ್ಚಾವಚೈರ್ಹಯೈಃ ॥೨೪॥

ಏವಂ ವರ್ಣಸ್ಯ ವರ್ಣಸ್ಯ ಸಮುಚ್ಚಯಸಹಸ್ರಶಃ ।
ತಥಾ ಸಮುದಿತಾ ವೀರಾಃ ಸರ್ವೇ ವೀರಪರಾಕ್ರಮಾಃ ।
ಕ್ಷೀರಂ ಪಿಬಂತಸ್ತಿಷ್ಠಂತಿ ಭುಂಜಾನಾಃ ಶಾಲಿತಂಡುಲಾನ್ ॥೨೫॥

ಷಷ್ಟಿಸ್ತಾನಿ ಸಹಸ್ರಾಣಿ ಸರ್ವೇ ಪೃಥುಲವಕ್ಷಸಃ ।
ಏತದ್ ರಾಜನ್ ಧನಂ ಮಹ್ಯಂ ತೇನ ದೀವ್ಯಾಮ್ಯಹಂ ತ್ವಯಾ ॥೨೬॥

ನನ್ನ ಬಳಿಯಲ್ಲಿ ಹತ್ತಾರು ಸಾವಿರ ರಥಗಳು ಗಾಡಿಗಳು ಮತ್ತು ಬೇರೆ ವಾಹನಗಳೂ ಇವೆ. ಯಾವಾಗಲೂ ಶ್ರೇಷ್ಠವಾದ ಮತ್ತು ಅಸಾಧಾರಣವಾದ ಅಶ್ವಗಳಿಂದ

ಹೂಡಲ್ಪಟ್ಟಿರುತ್ತವೆ. ಒಂದೊಂದು, ಒಂದೊಂದು ಬಣ್ಣದ ಅಶ್ವಗಳನ್ನು ಹೊಂದಿರುವ ವಾಹನಗಳ ಒಂದೊಂದು ಗುಂಪಿನಲ್ಲಿಯೂ ಸಹಸ್ರಾರು ವಾಹನಗಳಿವೆ. (ಹಾಗೆಯೇ ಕ್ಷತ್ರಿಯರು ವೈಶ್ಯರು ಮತ್ತು ಶೂದ್ರರು ಇಂತಹ ರಥಿಕರನ್ನು ಮತ್ತು ಸಾರಥಿಗಳನ್ನು ಹೊಂದಿದ ಬೇರೆ ಬೇರೆ ಗುಂಪುಗಳು ಸಹಸ್ರ ಸಂಖ್ಯೆಯಲ್ಲಿವೆ) ಆ ವೀರರೆಲ್ಲರೂ ಪರಾಕ್ರಮಶಾಲಿಗಳಾದವರು. ಅವರೆಲ್ಲರೂ ಶಾಲ್ಯೋದನವನ್ನು ಭುಂಜಿಸಿ ಕ್ಷೀರಪಾನಮಾಡುವವರು. ವಿಸ್ತಾರವಾದ ವಕ್ಷಸ್ಥಳವುಳ್ಳ ಅಂತಹ ವೀರರು ಅರವತ್ತು ಸಾವಿರ ಜನರಿದ್ದಾರೆ. ಇದು ನನ್ನ ರಾಜಧನ. ರಾಜನೇ! ಅದರಿಂದ ನಿನ್ನ ಜೊತೆಯಲ್ಲಿ ಆಟವಾಡುತ್ತೇನೆ.

ವೈಶಂಪಾಯನಃ

ಏತಚ್ಛ್ರುತ್ವಾ ವ್ಯವಸಿತೋ ನಿಕೃತಿಂ ಸಮುಪಾಶ್ರಿತಃ ।
ಜಿತಮಿತ್ಯೇವ ಶಕುನಿರ್ಯುಧಿಷ್ಠಿರಮಭಾಷತ ॥೨೬॥

ಇದನ್ನು ಕೇಳಿದ ಶಕುನಿಯು ಮೊದಲೇ ಮನಸ್ಸಿನಲ್ಲಿ ನಿರ್ಧರಿಸಿ ಮೋಸವನ್ನು ಆಶ್ರಯಿಸಿ ಯುಧಿಷ್ಠಿರನನ್ನು ಕುರಿತು ನಾನು ಗೆದ್ದಿದ್ದೇನೆ ಎಂದು ಹೇಳಿದನು.

ಯುಧಿಷ್ಠಿರಃ

ತಾಮ್ರಲೋಹ್ಯೈಃ ಪರಿವೃತಾ ನಿಧಯೋ ಮೇ ಚತುಶ್ಶತಮ್ ।
ಪಂಚದ್ರೋಣಿಕ ಏಕೈಕಃ ಸುವರ್ಣಸ್ಯಾಹತಸ್ಯ ವೈ ।
ಏತದ್ ರಾಜನ್ ಧನಂ ಮಹ್ಯಂ ತೇನ ದೀವ್ಯಾಮ್ಯಹಂ ತ್ವಯಾ ॥೨೭॥

ತಾಮ್ರದ ಹಂಡೆಗಳಲ್ಲಿ ತುಂಬಲ್ಪಟ್ಟ ನನ್ನ ನಾಲ್ಕುನೂರು ನಿಧಿಗಳಿವೆ ಒಂದೊಂದರಲ್ಲಿಯೂ ಪಂಚದ್ರೋಣ (ಖಂಡುಗ)ಪರಿಮಿತವಾದ ಶುದ್ಧವಾದ ಸುವರ್ಣಗಳಿದೆ. ರಾಜನೇ! ಇದು ನನ್ನ ಪಣಧನ. ಅದರಿಂದ ನಿನ್ನ ಜೊತೆಯಲ್ಲಿ ಆಡುತ್ತೇನೆ.

ವೈಶಂಪಾಯನಃ

ಏತಚ್ಛ್ರುತ್ವಾ ವ್ಯವಸಿತೋ ನಿಕೃತಿಂ ಸಮುಪಾಶ್ರಿತಃ ।
ಜಿತಮಿತ್ಯೇವ ಶಕುನಿರ್ಯುಧಿಷ್ಠಿರಭಾಷತ ॥೨೮॥

ಇದನ್ನು ಕೇಳಿದ ಶಕುನಿಯು ಮೊದಲೇ ನಿರ್ಧರಿಸಿ ಮೋಸವನ್ನು ಅವಲಂಬಿಸಿ ಯುಧಿಷ್ಠಿರನನ್ನು ಕುರಿತು ನಾನು ಗೆದ್ದಿದ್ದೇನೆ ಎಂದು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಏಕಾಶೀತಿತಮೋಧ್ಯಾಯಃ ॥

॥ ದ್ಯೂತಪರ್ವಣಿ ತ್ರಯೋದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಂಭತ್ತೊಂದನೆಯ ಅಧ್ಯಾಯವು ಮುಗಿಯಿತು.

★★★★★

ಎಂಭತ್ತೆರಡನೆಯ ಅಧ್ಯಾಯ

(ವಿದುರನಿಂದ ಧೃತರಾಷ್ಟ್ರನನ್ನು ಕುರಿತು ದುರ್ಯೋಧನನ್ನು ನಿಂದಿಸಿ ದ್ಯೂತವನ್ನು ನಿಲ್ಲಿಸುವಂತೆ ಒತ್ತಾಯ.)

ವೈಶಂಪಾಯನಃ

ಏವಂ ಪ್ರವೃತ್ತೇ ದ್ಯೂತೇ ತು ಘೋರೇ ಸರ್ವಾಪಹಾರಿಣಿ ।
ಸರ್ವಸಂಶಯನಿರ್ಮೋಕ್ತಾ ವಿದುರೋ ವಾಕ್ಯಮಬ್ರವೀತ್ ॥೧॥

ಹೀಗೆ ವಸರ್ವಾಪಹಾರಕವಾದ ಘೋರವಾದ ದ್ಯೂತವು ನಡೆಯುತ್ತಿರಲು ಸರ್ವಸಂಶಯಪರಿಹಾರಕನಾದ ವಿದುರನು ಧೃತರಾಷ್ಟ್ರನನ್ನು ಕುರಿತು ಮಾತನಾಡಿದನು.

ಮಹಾರಾಜ ವಿಜಾನೀಹಿ ಯತ್ ತ್ವಾಂ ವಕ್ಷ್ಯಾಮಿ ತಚ್ಛೃಣು ।
ಮುಮೂರ್ಷೋರಿವೌಷಧಮಿವ ನ ರೋಚೇತ ವಚೋ ಮಮ ॥೨॥

ಮಹಾರಾಜನೇ! ನಾನು ಏನು ಹೇಳುವೆನೋ ಅದನ್ನು ಕೇಳಿ ತಿಳಿದುಕೋ. ಮರಣವು ಸನ್ನಿಹಿತವಾದ ಮನುಷ್ಯನಿಗೆ ಔಷಧವು ಹಿಡಿಸದಿರುವಂತೆ ನನ್ನ ಮಾತು ನಿನಗೆ ಹಿಡಿಸದೇ ಇರಬಹುದು.

ಯೋ ವೈ ಪುರಾ ಜಾತಮಾತ್ರೋ ರುರಾವ
ಗೋಮಾಯುವದ್ ವಿಸ್ವರಂ ಪಾಪಚೇತಾಃ ।

ದುರ್ಯೋಧನೋ ಭಾರತಾನಾಂ ಕುಲಘ್ನಃ
ಸೋಽಯಂ ಯುಕ್ತೋ ಭವಿತಾ ಕಾಲಹೇತುಃ ॥೩॥

ಈ ದುರ್ಯೋಧನನು ಹುಟ್ಟಿದ ತಕ್ಷಣವೇ ನರಿಯಂತೆ ಅಪಸ್ವರದಂತೆ ಕಿರುಚಿದನು. ಇವನು ಪಾಪಬುದ್ಧಿಯುಳ್ಳವನು. ಮತ್ತು ಕುಲನಾಶಕನಾದವನು. ಇವನು ಸರ್ವರ ಮರಣಕ್ಕೆ ಕಾರಣನಾಗುವನು.

ಗೃಹೇ ವಸಂತಂ ಗೋಮಾಯುಂ ತ್ವಂ ವೈ ಮಂದೋ ನ ಬುಧ್ಯಸೇ ।
ದುರ್ಯೋಧನಸ್ವರೂಪೇಣ ಶೃಣು ಕಾಮ್ಯಾಂ ಗಿರಂ ಮಮ ॥೪॥

ಮಂದಬುದ್ಧಿಯುಳ್ಳ ನೀನು ದುರ್ಯೋಧನನ ಆಕಾರವನ್ನು ತಳೆದು ಮನೆಯಲ್ಲಿರುವ ಈ ನರಿಯನ್ನು ತಿಳಿಯುತ್ತಿಲ್ಲ. ನೀನು ಬಯಸಬೇಕಾದಂತಹ ನನ್ನ ಮಾತುಗಳನ್ನು ಕೇಳು.

ಮಧು ವೈ ಮಾಧ್ವಿಕೋ ಲಬ್ಧ್ವಾ ಪ್ರಪಾತಂ ನಾವಬುಧ್ಯತೇ ।
ಆರುಹ್ಯ ತೇನ ಸಜ್ಜೇತ ಪತನಂ ವಾಽಧಿಗಚ್ಛತಿ ॥೫॥

ಮಧುವನ್ನು ನೋಡಿದ ಮಧುಕಾರನು ತಾನು ಬೀಳುವುದನ್ನು ಗಮನಿಸುವುದಿಲ್ಲ. ಅವನು ಅಗ್ರಭಾಗದಲ್ಲಿ(ಮಧುವಿರುವ) ವೃಕ್ಷವನ್ನು ಏರಿ ಮಧುವನ್ನು ಪಡೆಯುತ್ತಾನೆ. ಅಥವಾ ಕೆಳಗೆ ಬೀಳುತ್ತಾನೆ.

ಸೋಽಯಂ ಮತ್ತೋ ದೇವನೇನ ಮಧುವನ್ನ ಪರೀಕ್ಷತೇ ।
ಪ್ರಪಾತಂ ಬುಧ್ಯತೇ ನೈವ ವೈರಂ ಕೃತ್ವಾ ಮಹಾರಥೈಃ ।
ವಿದಿತಂ ಮೇ ಮಹಾರಾಜ ಸ್ವೇ ಪರೇ ವಾಽಸಮಂಜಸಮ್ ॥೬॥

ಈ ದ್ಯೂತದಿಂದ ಮತ್ತನಾದ ದುರ್ಯೋಧನನು ಮಧುಕಾರನಂತೆ ಬುದ್ಧಿಶೂನ್ಯನಾಗಿದ್ದಾನೆ. ಮಹಾರಥರಾದ ಪಾಂಡವರ ಜೊತೆಯಲ್ಲಿ ವೈರವನ್ನು ಮಾಡಿ ತನ್ನ ಅಧಃಪಾತವನ್ನು ಗಮನಿಸುತ್ತಿಲ್ಲ. ಮಹಾರಾಜನೇ! ಇವನು ತನ್ನವರ ವಿಷಯದಲ್ಲಿಯೂ ಪರರಾದ ಪಾಂಡವರ ವಿಷಯದಲ್ಲಿಯೂ ಅಸಮಂಜಸನಾದವನು ಎಂದು ನಾನು ತಿಳಿದಿದ್ದೇನೆ.

ಅಂಧಕಾ ಯಾದವಾ ಭೋಜಾಃ ಸಮೇತಾಃ ಕಂಸಮತ್ಯಜನ್ ।
ನಿಯೋಗಾಚ್ಚ ಹತೇ ತಸ್ಮಿನ್ ಕೃಷ್ಣೇನಾಮಿತ್ರಘಾತಿನಾ ।
ಏವಂ ತೇ ಜ್ಞಾತಯಃ ಸರ್ವೇ ಮೋದಮಾನಾಃ ಶತಂ ಸಮಾಃ ॥೭॥

ಅಂಧಕರು ಯಾದವರು ಭೋಜರು ಎಲ್ಲರೂ ಸೇರಿ ಕಂಸನನ್ನು ತ್ಯಜಿಸಿದರು. ಅವರ ಪ್ರಾರ್ಥನೆಯಂತೆ ಶತ್ರು ಸಂಹಾರಕನಾದ ಕೃಷ್ಣನಿಂದ ಅವನು ಹತನಾದ ಮೇಲೆ ಎಲ್ಲಾ ಸಂಬಂಧಿಬಾಂಧವರು ಸಂತೋಷದಿಂದ ನೂರು ಕಾಲ ಒಟ್ಟಿಗೆ ಇದ್ದಾರೆ.

ತನ್ನಿಯುಕ್ತಃ ಸವ್ಯಸಾಚೀ ನಿಗೃಹ್ಣಾತು ಸುಯೋಧನಮ್ ।
ನಿಗ್ರಹಾದಸ್ಯ ಪಾಪಸ್ಯ ಮೋದಂತಾಂ ಕುರವಃ ಸುಖಿಮ್ ॥೮॥

ನಿನ್ನ ಆಪ್ಪಣೆಯಂತೆ ಅರ್ಜುನನು ಸುಯೋಧನನನ್ನು ನಿಗ್ರಹಿಸಲಿ. ಈ ಪಾಪಿಯನ್ನು ನಿಗ್ರಹಿಸಿದ ಮೇಲೆ ಕುರುಗಳು ಸಂತೋಷದಿಂದ ಇರಲಿ.

ಕಾಕೇನೇಮಾಂಶ್ಚಿತ್ರಬರ್ಹಾನ್ ಶಾರ್ದೂಲಾನ್ ಕ್ರೋಷ್ಟುಕೇನ ಚ ।
ಕ್ರೀಣೀಷ್ವ ಪಾಂಡವಾನ್ ರಾಜನ್ ಮಾ ಮಜ್ಜೀಃ ಶೋಕಸಾಗರೇ ॥

ಮಹಾರಾಜನೇ! ಕಾಗೆಯಿಂದ ನವಿಲುಗಳನ್ನು ಕೊಂಡುಕೊಂಡಂತೆ ನರಿಗಳನ್ನು ಕೊಟ್ಟು ವ್ಯಾಘ್ರಗಳನ್ನು ಕೊಂಡುಕೊಂಡಂತೆ ಪಾಂಡವರನ್ನು ಕೊಂಡುಕೋ. ಶೋಕ ಸಾಗರದಲ್ಲಿ ಮುಳುಗ ಬೇಡ.

ತ್ಯಜೇತ್ ಕುಲಾರ್ಥೇ ಪುರುಷಂ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ ।
ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥೧೦॥

ಕುಲದ ಸಲುವಾಗಿ ಒಬ್ಬ ಪುರುಷನನ್ನು ತ್ಯಜಿಸಬೇಕು. ಗ್ರಾಮದ ಸಲುವಾಗಿ ಒಂದು ಕುಲವನ್ನು ತ್ಯಜಿಸಬೇಕು. ರಾಷ್ಟ್ರದ ಸಲುವಾಗಿ ಒಂದು ಗ್ರಾಮವನ್ನು ತ್ಯಜಿಸಬೇಕು. ತನ್ನ ಸಲುವಾಗಿ ಪೃಥ್ವಿಯನ್ನೇ ತ್ಯಜಿಸಬೇಕು.

ಸರ್ವಜ್ಞಃ ಸರ್ವಭಾಷೀ ಚ ಸರ್ವಶತ್ರುಭಯಂಕರಃ ।
ಇತಿ ಸ್ಮ ಭಾಷತೇ ಕಾವ್ಯೋ ಜಂಭತ್ಯಾಗೇ ಮಹಾಸುರಾನ್ ॥೧೧॥

ಹೀಗೆ ಸರ್ವಜ್ಞರೂ ಸರ್ವಭಾಷಾವಿಶಾರದರೂ ಸರ್ವಶತ್ರುಭಯಂಕರರೂ ಆದ ಶುಕ್ರಾಚಾರ್ಯರು ಜಂಭಾಸುರನನ್ನು ತ್ಯಾಗಮಾಡುವ ವಿಷಯದಲ್ಲಿ ಮಹಾಸುರರನ್ನು ಕುರಿತು ಹೇಳಿದರು.

ಹಿರಣ್ಯಷ್ಠೀವಿನಃ ಕಾಂಶ್ಚಿತ್ ಪಕ್ಷಿಣೋ ವನಗೋಚರಾನ್ ।
ಗೃಹೇ ಕಿಲ ಕೃತಾವಾಸಾನ್ ಲೋಭಾದ್ ರಾಜನ್ನಪೀಡಯತ್ ॥೧೨॥

ಎಲೈ ರಾಜನೇ! ಸುವರ್ಣವನ್ನು ಉದ್ಗಿರಣಮಾಡುವ ಕಾಡಿನ ಕೆಲವು ಪಕ್ಷಿಗಳನ್ನು ಮನೆಯಲ್ಲಿ ಸಾಕಿ ಒಬ್ಬ ರಾಜನು ಲೋಭದಿಂದ ಅವುಗಳನ್ನು ಕೊಂದು ಬಿಟ್ಟನು.

ಸದೋಪಭುಗ್ನೋ ಭೋಗಾತ್ಮಾ ಹಿರಣ್ಯಾರ್ಥೀ ತಪನ್ ಪುನಃ ।
ಆಯತಿಂ ಚ ದದತ್ತ್ಯಂ ಚ ಉಭೇ ಸದ್ಯೋ ವ್ಯನಾಶಯತ್ ॥೧೩॥

ಯಾವಾಗಲೂ ವಕ್ರಸ್ವಭಾವದವನೂ ಸುವರ್ಣಲೋಭಿಯೂ ಭೋಗದಲ್ಲಿಯೇ ಆಸಕ್ತನಾದವನೂ ಆದ ಅವನು ಅನಂತರ ಪಶ್ಚತ್ತಾಪಪಟ್ಟು ತನಗೆ ಬರುತ್ತಿದ್ದ ಸುವರ್ಣವನ್ನೂ ತಾನು ದಾನಮಾಡುವ ಅವಕಾಶವನ್ನೂ ತಕ್ಷಣದಲ್ಲಿಯೇ ಕಳೆದು ಕೊಂಡನು.

ತಥಾ ತ್ವಕಾಮಃ ಪಾಂಡೂನಾಂ ಮಾ ದ್ರುಹೀ ರ್ಭರತರ್ಷಭ ।
ಮೋಹಾತ್ಮಾ ತಪ್ಸ್ಯಸೇ ಪಶ್ಚಾತ್ ಪಕ್ಷಿಹಾ ಪುರುಷೋ ಯಥಾ ।
ಏತೇನ ತವ ನಾಶಃ ಸ್ಯಾದ್ ಬಡಿಶಾಚ್ಛಫರೋ ಯಥಾ ॥೧೪॥

ಹಾಗೆ ನೀನು ಸಹ ಪರರ ವಿತ್ತದಲ್ಲಿ ಆಸೆಯನ್ನು ಬಿಡು. ಭರತರ್ಷಭನೇ! ಪಾಂಡವರಿಗೆ ದ್ರೋಹವನ್ನು ಮಾಡಬೇಡ. ಮೋಹದಿಂದ ದ್ರೋಹವನ್ನು ಮಾಡಿದರೆ ಪಕ್ಷಿಗಳನ್ನು ಕೊಂದ ಆ ಪುರುಷನಂತೆ ನೀನು ಪಶ್ಚಾತ್ತಾಪವನ್ನು ಪಡಬೇಕಾಗುತ್ತದೆ. ಬಡಿಶ (ಮೀನನ್ನು ಹಿಡಿಯುವ ಸಾಧನ) ದಿಂದ ಮೀನು ನಾಶವನ್ನು ಹೊಂದುವಂತೆ ಈ ದ್ಯೂತದಿಂದ ನೀನು ನಾಶವನ್ನು ಹೊಂದುವಿ.

ಜಾತಂ ಜಾತಂ ಪಾಂಡವೇಭ್ಯಃ ಪುಷ್ಪಮಾದತ್ಸ್ವ ಭಾರತ ।
ಮಾಲಾಕಾರ ಇವಾರಾಮೇ ಸ್ನೇಹಂ ಕುರ್ವನ್ ಪುನಃ ಪುನಃ ॥೧೫॥

ಎಲೈ ಭಾರತನೇ! ಮಾಲೆಯನ್ನು ಕಟ್ಟುವ ಪುರುಷನು ತೋಟದಲ್ಲಿ ಪ್ರತಿಯೊಂದು ಗಿಡದಿಂದ ಬಂದ ಪುಷ್ಪಗಳನ್ನು ತೆಗೆದು ಕೊಳ್ಳುವಂತೆ, ಪಾಂಡವರಿಂದ ಉಂಟಾದ ಪುಷ್ಪಗಳಂತಹ ಸತ್ಫಲಗಳನ್ನು ನೀನು ಮತ್ತೆ ಮತ್ತೆ ಸ್ವೀಕರಿಸು.

ವೃಕ್ಷಾನಂಗಾರಕಾರೀವ ಮಾ ಚ ಧಾಕ್ಷೀಃ ಸಮೂಲಕಾನ್ ।
ಮಾ ಗಮಃ ಸಸುತಾಮಾತ್ಯಃ ಸಬಲಶ್ಚ ಪರಾಭವಮ್ ॥೧೬॥

ಇದ್ದಿಲನ್ನು ಮಾಡುವವನು ಮರಗಳನ್ನು ಮೂಲಸಹಿತವಾಗಿ ಸುಟ್ಟಂತೆ ನೀನು ವರ್ತಿಸಬೇಡ. ನಿನ್ನ ಮಕ್ಕಳು ಆಮಾತ್ಯರು ಮತ್ತು ಸೈನ್ಯದ ಜೊತೆಯಲ್ಲಿ ನೀನು ಪರಾಭವವನ್ನು ಹೊಂದಬೇಡ.

ಸಮವೇತಾನ್ ಹಿ ಕಃ ಪಾರ್ಥಾನ್ ಪ್ರತಿಯುಧ್ಯೇತ ಭಾರತ ।
ಮರುದ್ಭಿಃ ಸಹಿತೋ ರಾಜನ್ನಪಿ ಸಾಕ್ಷಾನ್ಮರುತ್ಪತಿಃ ।
ಯುಧಿ ಜೇತುಮಶಕ್ತೋ ಹಿ ಪಾಂಡವಾನ್ ಪುರುಷೋತ್ತಮಾನ್ ॥೧೭॥

ಎಲೈ ಭಾರತನೇ ಪಾಂಡವರು ಒಟ್ಟುಗೂಡಿದರೆ ಅವರನ್ನು ಯಾವನು ಯುದ್ಧದಲ್ಲಿ ಎದುರಿಸುತ್ತಾನೆ? ರಾಜನೇ! ಪುರುಷಶ್ರೇಷ್ಠರಾದ ಪಾಂಡವರನ್ನು ಮರುದ್ಗಣದಿಂದ ಸಹಿತನಾದ ಇಂದ್ರನೂ ಯುದ್ಧದಲ್ಲಿ ಗೆಲ್ಲಲು ಸಮರ್ಥನಾಗುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ದ್ವ್ಯಶೀತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ಚತುರ್ದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಂಭತ್ತೆರಡನೆಯ ಅಧ್ಯಾಯವು ಮುಗಿಯಿತು.

★★★★★

ಎಂಭತ್ಮೂರನೆಯ ಅಧ್ಯಾಯ

(ಪುನಃ ವಿದುರನಿಂದ ಭಾವಿ ವಿನಾಶವನ್ನು ಹೇಳಿ, ದ್ಯೂತದಿಂದ ಹಿಂದಿರುಗಿಸುವ ಪ್ರಯತ್ನ)

ವಿದುರಃ

ದ್ಯೂತಂ ಮೂಲಂ ಕಲಹಸ್ಯಾತಿಘೋರಂ
ಭೇದೋಽಯಂ ಮಹತೇ ವೈ ರಣಾಯ ।
ಯದಾಸ್ಥಿತೋಽಯಂ ಧೃತರಾಷ್ಟ್ರಸ್ಯ ಪುತ್ರೋ
ದುರ್ಯೋಧನಃ ಸೃಜತೇ ವೈರಮುಗ್ರಮ್ ॥೧॥

ಈ ದ್ಯೂತವು ಅತಿಘೋರವಾದ ವಿರೋಧಕ್ಕೆ ಕಾರಣವಾಗುತ್ತದೆ. ಆ ವಿರೋಧವು ದೊಡ್ಡ ಯುದ್ಧಕ್ಕೆ ಕಾರಣವಾಗುತ್ತದೆ. ಧೃತರಾಷ್ಟ್ರಪುತ್ರನಾದ ದುರ್ಯೋಧನನು ಈ ದ್ಯೂತವನ್ನು ಆಶ್ರಯಿಸಿದವನಾಗಿ ಘೋರವಾದ ವೈರವನ್ನು ಸೃಷ್ಟಿಮಾಡುತ್ತಿದ್ದಾನೆ.

ಜ್ಞಾತಾಃ ಪ್ರಿಯಾಃ ಶಾಂತನವಾ ಭೈಮಸೇನಾಃ ಸಬಾಹ್ಲಿಕಾಃ ।
ದುರ್ಯೋಧನಾಪರಾಧೇನ ಕೃಚ್ಛ್ರಂ ಪ್ರಾಪ್ಸ್ಯಂತಿ ಸರ್ವಶಃ ॥೨॥

ದುರ್ಯೋಧನನ ಅಪರಾಧದಿಂದ ಕಾಂಬೋಜಕುದುರೆಗಳನ್ನು ಮತ್ತು ಭಯಂಕರವಾದ ಸೈನ್ಯವನ್ನು ಹೊಂದಿರುವ ಶಂತನು ವಂಶಕ್ಕೆ ಸೇರಿದ ಪ್ರಿಯರಾದ ಎಲ್ಲಾ ದಾಯಾದಿಗಳು ಬಹಳ ಕಷ್ಟಕ್ಕೆ ಸಿಲುಕುವರು.

ದುರ್ಯೋಧನೋ ಮದೇನೈವ ಕ್ಷೇಮಂ ರಾಷ್ಟ್ರಾದಪೋಹತಿ ।
ವಿಷಾಣಂ ಗೌರಿವ ಮದಾತ್ ಸ್ವಯಮಾರುಜತೇ ಬಲಾತ್ ॥೩॥

ಮದಿಸಿದ ವೃಷಭವು ತನ್ನ ಬಲದಿಂದ ತಾನೇ ತನ್ನ ಕೊಂಬನ್ನು ಘಾಸಿಮಾಡಿಕೊಂಡಂತೆ ದುರ್ಯೋಧನನು ತನ್ನ ಬಲದಿಂದ ತನ್ನ ರಾಷ್ಟ್ರವನ್ನೇ ಕ್ಷೇಮದಿಂದ ಹೊರಗೆ ತಳ್ಳುತ್ತಿದ್ದಾನೆ.

ಯಶ್ಚಿತ್ತಮನ್ವೇತಿ ಪರಸ್ಯ ರಾಜನ್
ವೀರಃ ಕವಿಃ ಸ್ವಾಮವಮತ್ಯ ದೃಷ್ಟಿಮ್ ।

ನಾವಂ ಸಮುದ್ರೇ ಇವ ಬಾಲನೇತ್ರೇಮ್
ಆರುಹ್ಯ ಘೋರೇ ವ್ಯಸನೇ ನಿಮಜ್ಜೇತ್ ॥೪॥

ರಾಜನೇ! ವಿವೇಕಿಯಾದ ವೀರನಾದ ಯಾವನು ತನ್ನ ಆಲೋಚನೆಗೆ ಬೆಲೆಕೊಡದೆ ಇನ್ನೊಬ್ಬರ ಮಾತನ್ನೂ ಮನಸ್ಸನ್ನೂ ಅನುಸರಿಸುತ್ತಾನೆಯೋ ಅವನು ಸಮುದ್ರದಲ್ಲಿ ಒಬ್ಬ ಬಾಲಕನು ನಾಯಕನಾಗಿರುವ ನಾವೆಯನ್ನು ಹತ್ತಿ ವ್ಯಸನದಲ್ಲಿ ಮುಳುಗುತ್ತಾನೆ.

ದುರ್ಯೋಧನೋ ಗ್ಲಹತೇ ಪಾಂಡವೇನ
ಸಂಪ್ರೀಯಸೇ ತ್ವಂ ಜಯತೀತಿ ತಂ ಚ ।
ಅನಂತರಂ ಜಾಯತೇ ಸಂಪ್ರಹಾರೋ
ಯತೋ ವಿನಾಶಃ ಸಮುಪೈತಿ ಪುಂಸಾಮ್ ॥೫॥

ದುರ್ಯೋಧನನು ಧರ್ಮರಾಜನ ಜೊತೆಯಲ್ಲಿ ಪಣವನ್ನಿಟ್ಟು ಆಡುತ್ತಿದ್ದಾನೆ. ದುರ್ಯೋಧನನು ಜಯಿಸುತ್ತಿದ್ದಾನೆಂದು ನೀನು ಸಂತೋಷದಿಂದ ಕೂಡಿದ್ದೀಯೆ. ಅನಂತರ ದೊಡ್ಡ ಕಲಹವು ಉಂಟಾಗುತ್ತದೆ. ಆದರಿಂದ ಎಲ್ಲಾ ಪುರುಷರ ವಿನಾಶವು ಉಂಟಾಗುತ್ತದೆ.

ಆಕರ್ಷತೇ ವಾಕ್ಯಬಲಪ್ರಣೀತೋ
ಹೃದಿ ಪ್ರೌಢೋ ಮಂತ್ರಪದಃ ಸಮಾಧಿಃ ।
ಯುಧಿಷ್ಠಿರೇಣ ಸಕಲಸ್ತವಾಸ್ತು
ಸುಖಿಪ್ರದಃ ಸುಚಿರಂ ತೇ ಸುಧನ್ವಾ ॥೬॥

ಯುಧಿಷ್ಠಿರನ ವಾಕ್ಯಬಲದಿಂದ ಉಂಟಾದ ಮುಂದಿನಕಾರ್ಯಗಳ ಆಲೋಚನೆಯ ವಿಷಯವಾದ (ಸ್ಥಾನವಾದ) ನಿನ್ನ ಪುತ್ರನ ಧನ ಪ್ರಾಪ್ತಿಯಿಂದ ಉಂಟಾದ ಅವನ (ದುರ್ಯೋಧನನ) ಮೌನವು ನಿನ್ನ ಮನಸ್ಸನ್ನು ಆಕರ್ಷಿಸಿ ಒಪ್ಪುವಂತೆ ಮಾಡುತ್ತಿದೆ. ಅದು ನಿನಗೆ ಬಹಳ ಕಾಲ ಸುಖವನ್ನು ಕೊಡಲಿ. (ಸ್ವಲ್ಪ ಸಮಯ ಆ ದ್ರವ್ಯದಿಂದ ಸುಖವನ್ನು ಅನುಭವಿಸು. ಮುಂದಿನ ಫಲಗಳನ್ನು ನೀನೇ ಅನುಭವಿಸುತ್ತೀಯೆ.)

ಪ್ರಾತಿಪೀಯಃ ಶಾಂತನವಶ್ಚ ಭೀಷ್ಮೋ
ದ್ರೋಣಶ್ಚ ಶೃಣ್ವಂತು ವಚೋ ಮಮೇದಮ್ ।
ವೈಶ್ವಾನರಂ ಪ್ರಜ್ವಲಿತಂ ಸುಘೋರಂ
ಕೋ ಯುದ್ಧೇನ ಪ್ರಶಮಯಿತೋತ್ಪತಂತಮ್ ॥೭॥

ಪ್ರತೀಪನ ಮಗನಾದ ಬಾಹ್ಲೀಕನೂ ಶಂತನುವಿನ ಮಗನಾದ ಭೀಷ್ಮನೂ ದ್ರೋಣರು ಎಲ್ಲರೂ ಈ ನನ್ನ ಮಾತನ್ನು ಕೇಳಿ, ಉಗ್ರವಾಗಿ ಪ್ರಜ್ವಲಿಸಿ ಮೇಲೆ ಬರುತ್ತಿರುವ ಅಗ್ನಿಯನ್ನು ಯಾವನು ಯುದ್ಧದಿಂದ ಶಾಂತಗೊಳಿಸುವನು?

ಯದಾ ಮನ್ಯುಂ ಪಾಂಡವೋಽಜಾತಶತ್ರು-
ರ್ನ ಸಂಯಚ್ಛೇದಕ್ಷಮಯಾಽಭಿಭೂತಃ ।
ವೃಕೋದರಃ ಸವ್ಯಸಾಚೀ ಯಮೌ ಚ
ಕೋಽತ್ರ ಸ್ಥಾತಾ ತುಮುಲೇ ವೈ ತದಾನೀಮ್ ॥೮॥

ಇದುವರೆಗೆ ಕ್ಷಮೆಯಿಂದ ಇರುವ ಅಜಾತಶತ್ರುವಾದ ಧರ್ಮರಾಜನು ಕ್ಷಮೆಯನ್ನು ಕಳೆದುಕೊಂಡು ಉಂಟಾದ ತನ್ನ ಕೋಪವನ್ನು ಯಾವಾಗ ಶಾಂತಗೊಳಿಸುವುದಿಲ್ಲವೋ ಭೀಮಸೇನ ಅರ್ಜುನ ನಕುಲ ಸಹದೇವರೂ ಸಹ ಯಾವಾಗ ತಮ್ಮ ಕೋಪವನ್ನು ಶಾಂತಗೊಳಿಸುವುದಲ್ಲಿವೋ ಆಗ ಉಂಟಾಗುವ ಘೋರವಾದ ಯುದ್ಧದಲ್ಲಿ ಅವರೆದುರಿಗೆ ಯಾರು ನಿಲ್ಲುವರು?

ಮಹಾರಾಜ ಪ್ರಭವಸ್ತ್ವಂ ಧನಾನಾಂ
ಪುರಾ ದ್ಯೂತಂ ಮನಸಾ ಯಾವದಿಚ್ಛೇಃ ।
ಬಹು ವಿತ್ತಂ ಪಾಂಡವಾಂಶ್ಚೇಜ್ಜಯಸ್ತ್ವಂ
ಕಿಂ ಚಿದ್ ವಃ ಸ್ಯಾದ್ ವಸು ವಿಂದೇತ ಪಾರ್ಥಾನ್ ॥೯॥

ಮಹಾರಾಜನೇ! ದ್ಯೂತಕ್ಕಿಂತ ಮೊದಲು ನಿನ್ನ ಇಚ್ಛೆ ಇದ್ದಷ್ಟು ಧನವನ್ನು ನೀನು ಸಂಪಾದಿಸಿದ್ದೀಯೆ. ದ್ಯೂತದಲ್ಲಿ ಪಾಂಡವರನ್ನು ಜಯಿಸಿ ನೀನು ಬಹು ವಿತ್ತವನ್ನು ಜಯಿಸಿದರೆ ನಿನ್ನ ಬಳಿ ಮೊದಲಿದ್ದ ಸಂಪತ್ತೆಲ್ಲಾ ಪಾಂಡವರನ್ನೇ ಹೋಗಿ ಸೇರುತ್ತದೆ.

ಜಾನೀಮಹೇ ದೇವನಂ ಸೌಬಲಸ್ಯ
ವೇದ ದ್ಯೂತೇ ನಿಕೃತಿಂ ಪಾರ್ವತೀಯಃ ।
ಯತಃ ಪ್ರಾಪ್ತಃ ಶಕುನಿಸ್ತತ್ರ ಯಾತು
ಮಾಯಾಯೋಧೀ ಭಾರತ ಪಾರ್ವತೀಯಃ ॥೧೦॥

ಶಕುನಿಯು ಆಟವಾಡುವ ರೀತಿಯು ನಮಗೆ ತಿಳಿದಿದೆ. ಪರ್ವತ ಪ್ರದೇಶದಿಂದ ಬಂದ ಅವನು ದ್ಯೂತದಲ್ಲಿ ಮೋಸಮಾಡುವ ರೀತಿಯನ್ನು ಚೆನ್ನಾಗಿ ತಿಳಿದಿದ್ದಾನೆ. ಭಾರತನೇ! ಮಾಯಾಯೋಧಿಯಾದ ಈ ಶಕುನಿಯು ಎಲ್ಲಿಂದ ಬಂದನೋ ಅಲ್ಲಿಗೇ ಹೊರಟು ಹೊಗಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ತ್ರ್ಯಶೀತಿತಮೋಧ್ಯಾಯಃ॥
॥ ದ್ಯೂತಪರ್ವಣಿ ಪಂಚದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಂಭತ್ಮೂರನೆಯ ಅಧ್ಯಾಯವು ಮುಗಿಯಿತು.

★★★★★

ಎಂಭತ್ನಾಲ್ಕನೆಯ ಅಧ್ಯಾಯ

(ದುರ್ಯೋಧನನಿಂದ ವಿದುರನ ನಿಂದೆ. ಆದರೂ ವಿದುರನ ಹಿತೋಪದೇಶ)

ದುರ್ಯೋಧನಃ

ಪರೇಷಾಮೇವ ಯಶಸಾಂ ಶ್ಲಾಘಸೇ ತ್ವಂ
ಯದಾ ಚ್ಛನ್ನಃ ಕುತ್ಸಯನ್ ಧಾರ್ತರಾಷ್ಟ್ರಾನ್ ।
ಜಾನೀಮಹೇ ವಿದುರ ವಿಪ್ರಿಯಸ್ತ್ವಂ
ಬಾಲಾನಿವಾಸ್ಮಾನವಮನ್ಯಸೇ ತ್ವಮ್ ॥೧॥

ವಿದುರನೇ! ನೀನು ಯಾವಾಗಲೂ ಶತ್ರುಗಳ ಯಶಸ್ಸನ್ನೇ ಶ್ಲಾಘಿಸುತ್ತಿದ್ದೀಯೆ. ಪ್ರಚ್ಛನ್ನವಾಗಿ ಪಾಂಡವರ ಮೇಲೆ ಪ್ರೀತಿಯನ್ನು ಹೊಂದಿ ಧೃತರಾಷ್ಟ್ರನ ಮಕ್ಕಳಾದ ನಮ್ಮನ್ನು ನಿಂದಿಸುತ್ತಿದ್ದೀಯೆ. ನೀನು ನಮಗೆ ವಿಪ್ರಿಯನಾದವನೆಂದು ನಾವು ತಿಳಿದಿದ್ದೇವೆ. ನಮ್ಮನ್ನು ನೀನು ಮಕ್ಕಳನ್ನು ಅವಮಾನಮಾಡುವಂತೆ ಅವಮಾನ ಮಾಡುತ್ತಿದ್ದೀಯೆ.

ಸ ವಿಜ್ಞೇಯಃ ಪುರುಷೋಽನ್ಯತ್ರಕಾಮೋ
ನಿಂದಾಪ್ರಶಂಸೇ ಹಿ ತಥಾ ಯುನಕ್ತಿ ।
ಜಿಹ್ವಾ ಮನೋ ಹೃದಯಂ ನಿರ್ದಿನಕ್ತಿ
ಜ್ಯಾಯೋ ನಿರೀಹಂ ಮನಸಃ ಪ್ರಾತಿಕೂಲ್ಯಮ್ ॥೨॥

ಹೀಗೆ ಯಾವನು ನಿಂದೆಪ್ರಶಂಸೆಗಳನ್ನು ಮಾಡುತ್ತಾನೆಯೋ ಅವನು ಇನ್ನೊಂದು ಕಡೆಯಲ್ಲಿ ಪಕ್ಷಪಾತ ಉಳ್ಳವನೆಂದು ತಿಳಿಯ ಬೇಕು. ಎಲೈ ವಿದುರನೇ! ನಿನ್ನ ಜಿಹ್ವೆಯು ನಿನ್ನ ಮನಸ್ಸಿನ ಅಭಿಪ್ರಾಯಕ್ಕಿಂತಲೂ ಭಿನ್ನವಾಗಿದೆ. ನಮ್ಮ ಬಗ್ಗೆ ನಿನ್ನ ಮನಸ್ಸಿನಲ್ಲಿರುವ ದೊಡ್ಡದಾದ ಪ್ರಾತಿಕೂಲ್ಯವು ನಿಷ್ಫಲವಾದುದು.

ಉತ್ಸಂಗೇ ಚ ವ್ಯಾಲ ಇವಾಧೃತೋಽಸಿ
ಮಾರ್ಜಾರವತ್ ಪೋಷಕಂ ಚಾಭಿಹಂಸಿ ।
ಭರ್ತೃಘ್ನಂ ತ್ವಾಂ ನ ಹಿ ಪಾಪೀಯಮಾಹುಃ
ತಸ್ಮಾತ್ ಕ್ಷತ್ತಃ ಕಿಂ ನ ಬಿಭೇಷಿ ಪಾಪಾತ್ ॥೩॥

ತೊಡೆಯ ಮೇಲೆ ಸರ್ಪವನ್ನು ಧರಿಸಿದಂತೆ ನೀನು ನಮ್ಮಿಂದ ಧರಿಸಲ್ಪಟ್ಟಿದ್ದೀಯೆ. ಬೆಕ್ಕಿನಂತೆ ಪೋಷಕನನ್ನೇ ಹಿಂಸುತ್ತಿದ್ದೀಯೆ ಭರ್ತೃಘ್ನನಾದ ನಿನಗಿಂತಲೂ ಪಾಪಿಯಾದವನು ಇನ್ನೊಬ್ಬನಿಲ್ಲ. ವಿದುರನೇ ನಿನಗೆ ಪಾಪದ ಹೆದರಿಕೆಯಿಲ್ಲವೆ?

ಜಿತ್ವಾ ಶತ್ರೂನ್ ಫಲಮಾಪ್ತಂ ಮಹನ್ನೋ
ಮಾಽಸ್ಮಾನ್ ಕ್ಷತ್ತಃ ಪರುಷಾಣೀಹ ವೋಚಃ ।
ದ್ವಿಷದ್ಭಿಸ್ತ್ವಂ ಸಂಪ್ರಯೋಗಾಭಿನಂದೀ
ಮುಹುರ್ದೋಷಂ ಯಾಸಿ ನಃ ಸಂಪ್ರಮೋಹಾತ್ ॥೪॥

ನಾವು ಶತ್ರುಗಳನ್ನು ಗೆದ್ದು ಮಹಾಫಲವನ್ನು ಸಂಪಾದಿಸಿದ್ದೇವೆ. ಎಲೈ ವಿದುರನೇ! ನಮ್ಮನ್ನು ಕುರಿತು ಒರಾಟಾದ ಮಾತುಗಳನ್ನು ಆಡಬೇಡ. ನೀನು ನಮ್ಮ ಶತ್ರುಗಳ ಜೊತೆಯಲ್ಲಿ ಸಮಾಗಮವನ್ನು ಅಭಿನಂದಿಸುವವನು. ನಮಗೆ ಬುದ್ಧಿಮೋಹವನ್ನು ಉಂಟುಮಾಡಿ ಪುನಃ ನೀನು ಪಾಪವನ್ನು ಗಳಿಸುತ್ತಿದ್ದೀಯೆ.

ಅಮಿತ್ರತಾಂ ಯಾತಿ ನರೋಽಕ್ಷಮಂ ಬ್ರುವನ್
ನಿಗೂಹತೇ ಗುಹ್ಯಮಮಿತ್ರಸಂಭವೇ ।
ತದಾಶ್ರಿತಾಪತ್ರಪ ಕಿಂನು ಬಾಧಸೇ
ಯದಿಚ್ಛಸಿ ತ್ವಂ ತದಿಹಾಪಭಾಷಸೇ ॥೫॥

ಅಸಹನೀಯವಾದುದನ್ನು ಹೇಳುವ ಮನುಷ್ಯನು ಶತ್ರುವಾಗುತ್ತಾನೆ. ಶತ್ರುಗಳ ವಿಷಯದಲ್ಲಿ ರಹಸ್ಯವಾದುದನ್ನು ನೀನು ಮುಚ್ಚಿಡುತ್ತಿದ್ದೀಯೆ. ಶತ್ರುಗಳನ್ನು ಆಶ್ರಯಿಸಿದ ನಾಚಿಕೆಯಿಲ್ಲದ ಎಲೈ ವಿದುರನೇ! ನೀನು ನಮಗೆ ಯಾವ ಬಾಧೆಯನ್ನು ಮಾಡುತ್ತೀಯೆ? ನಿನ್ನ ಮನಸ್ಸಿಗೆ ಬಂದಂತೆ ನಿಂದನೆಯನ್ನು ಮಾಡುತ್ತಿದ್ದೀಯೆ. (ನಿಂದನೆಯನ್ನು ಬಿಟ್ಟು ಬೇರೆ ಯಾವ ರೀತಿಯ ಬಾಧೆಯನ್ನೂ ನೀನು ಮಾಡಲಾರೆ.)

ಮಾ ನೋಽವಮಂಸ್ಥಾ ವಿದ್ಮ ಮನಸ್ತವೇದಂ
ಶಿಕ್ಷಸ್ವ ಬುದ್ಧಿಂ ಸ್ಥವಿರಾಣಾಂ ಸಕಾಶಾತ್ ।
ಯಶೋ ರಕ್ಷಸ್ವ ವಿದುರ ಸಂಪ್ರಣೀತಂ
ಮಾ ವ್ಯಾಪೃತಃ ಪರಕಾರ್ಯೇಷು ಭೂಸ್ತ್ವಮ್ ॥೬॥

ವಿದುರನೇ! ನಮ್ಮನ್ನು ಅವಮಾನಗೊಳಿಸಬೇಡ. ಈ ನಿನ್ನ ಮನಸ್ಸು ಹೇಗಿದೆ ಎಂದು ತಿಳಿದಿದ್ದೇವೆ. ಹಿರಿಯರ ಸಮೀಪಕ್ಕೆ ಹೋಗಿ ಒಳ್ಳೆಯ ಬುದ್ಧಿಯನ್ನು ಕಲಿ. ವಿದುರನೇ! ಸಂಪಾದಿಸಿರುವ ಕೀರ್ತಿಯನ್ನು ರಕ್ಷಿಸಿಕೋ. ಶತ್ರು ಕಾರ್ಯಗಳಲ್ಲಿ ಆಸಕ್ತನಾಗಿರಬೇಡ.

ಅಹಂ ಕರ್ತೇತಿ ವಿದುರ ಮಾಽತಿಮಂಸ್ಥಾ
ಮಾ ನೋ ನಿತ್ಯಂ ಪರುಷಾಣೀಹ ವೋಚಃ ।
ನ ತ್ವಾಂ ಪೃಚ್ಛಾಮಿ ವಿದುರ ಮತಿಂ ಮೇ
ಸ್ವಸ್ತ್ಯಸ್ತು ಕ್ಷತ್ತರ್ಮಾ ತಿತಿಕ್ಷುಂ ಕ್ಷಿಣು ತ್ವಮ್ ॥೭॥

ವಿದುರನೇ! ನಾನೇ ಎಲ್ಲವನ್ನು ಮಾಡುವವನು ಎಂದು ತಿಳಿದು ನೀನು ಗರ್ವಪಡಬೇಡ. ಮತ್ತು ನಿತ್ಯವೂ ನಮ್ಮನ್ನು ಕುರಿತು ಉಗ್ರವಾದ ಮಾತನ್ನು ಆಡಬೇಡ. ವಿದುರನೇ! ನನಗೆ ಯಾವುದು ಹಿತವೆಂದು ನಾನು ನಿನ್ನನ್ನೇನೂ ಕೇಳುತ್ತಿಲ್ಲ. ನಿನಗೆ ಮಂಗಳವಾಗಲಿ. ನನ್ನ ಸಹನೆಯ ಗುಣವನ್ನು ನಾಶಮಾಡಬೇಡ.

ವಿದುರಃ

ಏಕಃ ಶಾಸ್ತಾ ನ ದ್ವಿತೀಯೋಽಸ್ತಿ ಶಾಸ್ತಾ
ಗರ್ಭೇ ಶಯಾನಂ ಪುರುಷಂ ಶಾಸ್ತಿ ಶಾಸ್ತಾ ।
ತೇನಾನುಶಿಷ್ಟಃ ಪ್ರವಣಾದಿವಾಂಭೋ
ಯಥಾ ನಿಯುಕ್ತೋಽಸ್ಮಿ ತಥಾ ಚರಾಮಿ ॥೮॥

ಈ ಜಗತ್ತಿಗೆ ಒಬ್ಬನೇ ಶಾಸಕನಿದ್ದಾನೆ. ಎರಡನೆಯ ಶಾಸಕನು ಯಾರೂ ಇಲ್ಲ. ಆ ಶಾಸಕನು ಗರ್ಭದಲ್ಲಿರುವ ಶಿಶುವನ್ನು ಶಾಸನಮಾಡುತ್ತಾನೆ. ಎತ್ತರ ಸ್ಥಳದಿಂದ ತಗ್ಗಿನ ಸ್ಥಳಕ್ಕೆ ನೀರುಹರಿದಂತೆ ಶಾಸಕನಾದ ಆ ಭಗವಂತನು ನನ್ನನ್ನು ಹೇಗೆ ಪ್ರೇರಿಸುತ್ತಾನೋ ಹಾಗೆಯೇ ಮಾಡುತ್ತೇನೆ.

ಭಿನತ್ತಿ ಶಿರಸಾ ಶೈಲಂ ಮಹೀಂ ಭೇದಯತೇ ಚ ಯಃ ।
ಸ ಏವ ತಸ್ಯ ಕುರುತೇ ಕಾರ್ಯಾಣಾಮನುಶಾಸನಮ್ ॥೯॥

ಯಾವನು ತನ್ನ ತಲೆಯಿಂದ ಪರ್ವತವನ್ನು ಭೇದಿಸಿಸುತ್ತಾನೋ ಅಥವಾ ಭೂಮಿಯನ್ನು ಭೇದಿಸುತ್ತಾನೋ ಅವನು ಮಾಡುವ ಕಾರ್ಯಗಳನ್ನು ಸಹ ಆ ಭಗವಂತನೇ ಶಾಸನಮಾಡುತ್ತಾನೆ.

ಯೋ ಬಾಲ್ಯಾದನುಶಾಸ್ತೀಹ ಸೋಽಮಿತ್ರಂ ತಸ್ಯ ವಿಂದತಿ ।
ಯಃ ಸತಾಮನುವೃತ್ತಂ ತು ಸಮುಪೇಕ್ಷತ್ಯಪಂಡಿತಃ ॥೧೦॥

ಯಾರು ಭೃತ್ಯ ಬಲದಿಂದ (ತನ್ನ ಬಲದಿಂದ) ಅನುಶಾಸನ- ಮಾಡುತ್ತಾರೆಯೋ ಅಂತಹವರು ಶತ್ರುಗಳನ್ನು ಸಂಪಾದನೆ ಮಾಡುತ್ತಾರೆ. ಸಜ್ಜನರ ನಡತೆಯನ್ನು ಅವಿವೇಕಿಯಾದವನು ಉಪೇಕ್ಷೆಮಾಡುತ್ತಾನೆ.

ಆದೀಪ್ಯ ಯಃ ಪ್ರದೀಪ್ತಾಗ್ನಿಂ ಸತ್ವರಂ ನಾಭಿಧಾವತಿ ।
ತಸ್ಮಾಚ್ಚ ನ ಸ ವಿಂದೇತ ಶಿಷ್ಟಂ ಕಿಂಚನ ಭಾರತ ॥೧೧॥

ಎಲೈ ಭಾರತನೇ! ಯಾರು ಬೆಂಕಿಯನ್ನು ಹೊತ್ತಿಸಿ ಬೇಗ ದೂರ ಓಡಿ ಹೋಗುವುದಿಲ್ಲವೊ ಅವನ ಯಾವ ಪದಾರ್ಥವೂ ಉಳಿಯದೆ ಇರುವುದರಿಂದ ಯಾವ ಪದಾರ್ಥವನ್ನೂ ಹೊಂದುವುದಿಲ್ಲ.

ದುರ್ಯೋಧನಃ

ನ ವಾಸಯೇತ್ ಪಾರವರ್ಗ್ಯಂ ದ್ವಿಷಂತಂ
ವಿಶೇಷತಃ ಕ್ಷತ್ತರಹಿತಂ ಮನುಷ್ಯಮ್
ಯತ್ರೇಚ್ಛಸಿ ತ್ವಂ ವಿದುರ ತತ್ರ ಗಚ್ಛ
ಸುಸಾಂತ್ವಿತಾಽಪಿ ಹ್ಯಸತೀ ಸ್ತ್ರೀ ಜಹಾತಿ ॥೧೨॥

ಶತ್ರುವರ್ಗಕ್ಕೆ ಸೇರಿದ ದ್ವೇಷವನ್ನು ಮಾಡುವ ಅಹಿತನಾದ ಮನುಷ್ಯನನ್ನು ವಿಶೇಷವಾಗಿ ತನ್ನ ಮನೆಯಲ್ಲಿ ಇಟ್ಟುಕೊಳ್ಳಬಾರದು ವಿದುರನೇ! ನಿನಗೆ ಎಲ್ಲಿಗೆ ಬೇಕೋ ಅಲ್ಲಿಗೆ ಹೊರಟು ಹೋಗು. ಕೆಟ್ಟ ಹೆಂಡತಿಯಾದವಳು ಎಷ್ಟು ಸಮಾಧಾನಮಾಡಿದರೂ ಪತಿಯನ್ನು ಬಿಟ್ಟು ಹೊರಟು ಹೋಗುತ್ತಾಳೆ.

ವಿದುರಃ

ಏತಾವತಾ ಯೇ ಪುರುಷಂ ಸಂತ್ಯಜಂತಿ
ತೇಷಾಂ ಸಖ್ಯ ಮಂತಂ ಪ್ರಬ್ರವೀಹಿ ।
ರಾಜ್ಞಾಂ ಹಿ ಚಿತ್ತಾನಿ ಪರಿಪ್ಲುತಾನಿ
ಸಾಂತ್ವಂ ದತ್ತ್ವಾ ಮುಸಲೈರ್ಘಾತಯಂತಿ ॥೧೩॥

ಇಷ್ಟೇ ಕಾರಣದಿಂದ ಯಾರು ಪುರುಷನನ್ನು ತ್ಯಜಿಸುತ್ತಾರೆಯೋ ಅವರ ಸ್ನೇಹವು ಅಂತವುಳ್ಳದ್ದು ಎಂದು ತಿಳಿ. ರಾಜರ ಮನಸ್ಸು ಬಹಳ ಚಂಚಲವಾದುದು. ಸಮಾಧಾನದ ಮಾತುಗಳನ್ನು ಆಡುತ್ತಾ ಅವರು ಮುಸಲಗಳಿಂದ ಕೊಲ್ಲುತ್ತಾರೆ.

ಅಬಾಲಂ ಮಾಂ ಮನ್ಯಸೇ ರಾಜಪುತ್ರ
ಬಾಲೋಽಯಮಿತ್ಯೇವ ಸುಮಂದಬುದ್ಧೇ ।
ಯಃ ಸೌಹೃದೇ ಪುರುಷಂ ಸ್ಥಾಪಯಿತ್ವಾ
ಪಶ್ಚಾದೇನಂ ದೂಷಯತೇ ಸ ಬಾಲಃ ॥೧೪॥

ಎಲೈ ಸುಮಂದಬುದ್ಧಿಯಾದ ರಾಜಕುಮಾರನೇ! ಬಾಲಕನಲ್ಲದ ನನ್ನನ್ನು ಬಾಲಕನೆಂದು ತಿಳಿಯುತ್ತಿದ್ದೀಯೆ. ಯಾರು ಒಬ್ಬ ಮನುಷ್ಯನನ್ನು ತನ್ನ ಸುಹೃತ್‌ಸ್ಥಾನದಲ್ಲಿ ಇಟ್ಟು ಅನಂತರ ದೂಷಿಸುತ್ತಾನೆಯೋ ಅವನೇ ಬಾಲಕನಾದವನು.

ನ ಶ್ರೇಯಸೇ ನೀಯತೇ ಮಂದಬುದ್ಧಿಃ
ಸ್ತ್ರೀ ಶ್ರೋತ್ರಿಯಸ್ಯೇವ ಗೃಹೇ ಪ್ರದುಷ್ಟಾ ।
ಧ್ರುವಂ ನ ರೋಚೇದ್ ಭರತರ್ಷಭಾಯ
ಪತಿಃ ಕುಮಾರ್ಯಾ ಇವ ಷಷ್ಟಿವರ್ಷಃ ॥೧೫॥

ದುಷ್ಟಳಾದ ಸ್ತ್ರೀಯು ಶ್ರೋತ್ರಿಯನ ಮನೆಯಲ್ಲಿ ಹೊಂದಿಕೊಳ್ಳದೆ ಇರುವಂತೆ ಮಂದಬುದ್ಧಿಯ ಪುರುಷನು ಶ್ರೇಯಸ್ಸಿನ ದಾರಿಯಲ್ಲಿ ನಡೆಯುವುದಿಲ್ಲ. ಕುಮಾರಿಯಾದವಳಿಗೆ ಅರವತ್ತು ವರ್ಷದ ಪತಿಯು ಹೇಗೆ ರುಚಿಸುವುದಿಲ್ಲವೊ ಹಾಗೆಯೇ ಭರತರ್ಷಭನಾದ ನಿನಗೆ(ಅಥವಾ ಧೃತರಾಷ್ಟ್ರನಿಗೆ) ನನ್ನ ಮಾತುಗಳು ರುಚಿಸುವುದಿಲ್ಲ.

ಅನುಪ್ರಿಯಂ ಚೇದನುಕಾಂಕ್ಷಸೇ ತ್ವಂ
ಸರ್ವೇಷು ಕಾರ್ಯೇಷು ಹಿತಾಹಿತೇಷು ।
ಸ್ತ್ರಿಯಶ್ಚ ರಾಜನ್ ಜಡಪಂಗಕಾಂಶ್ಚ
ಪೃಚ್ಛಸ್ವ ತಾಂಸ್ತಾದೃಶಾಂಶ್ಚೈವ ಮೂಢಾನ್ ॥೧೬॥

ರಾಜನೇ! ನಿನ್ನ ಎಲ್ಲಾ ಕಾರ್ಯಗಳಲ್ಲಿಯೂ ಪ್ರಿಯವನ್ನೇ ಮಾತನಾಡುವವನನ್ನು ನೀನು ಮಂತ್ರಿಯಾಗಿ ಅಥವಾ ಆಪ್ತನಾಗಿ ಬಯಸುವುದಾದರೆ ಸ್ತ್ರೀಯರನ್ನೂ ಜಡರನ್ನೂ ಪಂಗುಗಳನ್ನೂ ಮತ್ತು ಅಂತಹ ಮೂಡರನ್ನೂ ಕೇಳು.

ಲಭ್ಯಸ್ತೇ ಖಲು ಪಾಪೀಯಾನ್ ನರೋಽನುಪ್ರಿಯವಾಗಿಹ ।
ಅಪ್ರಿಯಸ್ಯ ತು ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ ॥೧೭॥

ನೀನು ಮಾಡುವ ಒಳ್ಳೆಯ ಅಥವಾ ಕೆಟ್ಟ ಕೆಲಸಗಳಲ್ಲಿ ನಿನ್ನನ್ನು ಕುರಿತು ಪ್ರಿಯವನ್ನೇ ಮಾತನಾಡುವ ಪಾಪಿಷ್ಠನಾದ ಪುರುಷನು ನಿನಗೆ ದೊರಕುತ್ತಾನೆ. ಆದರೆ ಅಪ್ರಿಯವಾದರೂ ಹಿತವಾದ ವಿಷಯವನ್ನು ಹೇಳುವವನೂ ಮತ್ತು ಕೇಳುವವನೂ ದುರ್ಲಭರು.

ಯಸ್ತು ಧರ್ಮಂ ಪರಾಮೃಶ್ಯ ಹಿತ್ವಾ ಭರ್ತುಃ ಪ್ರಿಯಾಪ್ರಿಯೇ ।
ಅಪ್ರಿಯಾಣ್ಯಾಹ ಪಥ್ಯಾನಿ ತೇನ ರಾಜಾ ಸಹಾಯವಾನ್ ॥೧೮॥

ಯಾವನು ಸ್ವಾಮಿಯ ಇಷ್ಟಾನಿಷ್ಟಗಳನ್ನು ಬಿಟ್ಟು ಧರ್ಮವನ್ನೇ ವಿಮರ್ಶೆಮಾಡಿ ಸ್ವಾಮಿಗೆ ಹಿತವಾದುದನ್ನೇ ಹೇಳುತ್ತಾನೆಯೋ ಅವನಿಂದಲೇ ರಾಜನು ಸಹಾಯವುಳ್ಳವನಾಗುತ್ತಾನೆ.

ನಾಪ್ರಿಯಃ ಸಾಧುರ್ಭವತಿ ನ ಮೇಧಾವೀ ನ ಪಂಡಿತಃ ।
ಪ್ರಿಯೇಷ್ವೇತಾನಿ ದೃಶ್ಯಂತೇ ಯಾವದ್ದ್ವೇಷೋಽಥ ಭಾರತ ॥೧೯॥

ಎಲೈ ಭಾರತನೇ! ಅಪ್ರಿಯವಾಗಿ ಮಾತನಾಡುವವನು (ಅಂತಹವನ ದೃಷ್ಟಿಯಲ್ಲಿ) ಸಾಧುವಾಗುವುದಿಲ್ಲ.ಮೇಧಾವಿಯೂ ಆಗುವುದಿಲ್ಲ. ಪಂಡಿತನೂ ಆಗುವುದಿಲ್ಲ. ಯಾರು ಪ್ರಿಯವಾಗಿ ಮಾತನಾಡುತ್ತಾನೆಯೋ ಅವನಲ್ಲಿ ಈ ಗುಣಗಳನ್ನು ಕಾಣುತ್ತಾನೆ. ಅದು ಅವರಲ್ಲಿ ದ್ವೇಷವು ಉಂಟಾಗುವವರೆಗೆ ಮಾತ್ರ .

ಅವ್ಯಾಧಿಕಂ ಕಟುಕಂ ತೀಕ್ಷ್ಣಮುಷ್ಣಂ
ಯಥೌಷಧಂ ಪರುಷಂ ಪೂತಿಗಂಧಿ ।
ಸತಾಂ ಪೇಯಂ ಯನ್ನ ಪಿಬಂತ್ಯಸಂತೋ
ಮನ್ಯುಂ ಮಹಾರಾಜ ಪರಂ ಪ್ರಶಾಮ್ಯ ॥೨೦॥

ಮಹಾರಾಜನೇ! ಕ್ರೋಧ ಎಂಬುದು ಕಟುವಾದ ತೀಕ್ಷ್ಣವಾದ ಕೆಟ್ಟವಾಸನೆಯಿರುವ ಉಗ್ರವಾದ ಔಷಧಿಯಿದ್ದಂತೆ. ಆದರೆ ವ್ಯಾಧಿಯನ್ನು ಪರಿಹರಿಸುವಂತಹದು. ಸಜ್ಜನರು ಮಾತ್ರ ಈ ಕ್ರೋಧವನ್ನು ಕುಡಿಯುತ್ತಾರೆ. ದುಷ್ಟರು ಎಂದೂ ಕುಡಿಯುವುದಿಲ್ಲ. ಮಹಾರಾಜನೇ! ಶಾಂತಿಯನ್ನು ಹೊಂದು.

ವೈಚಿತ್ರವೀರ್ಯಸ್ಯ ಯಶೋ ಧನಂ ಚ
ವಾಂಛಾಮ್ಯಹಂ ಸಹಪುತ್ರಸ್ಯ ಶಶ್ವತ್ ।
ಯಥಾ ತಥಾ ವಾಸ್ತು ಮನಶ್ಚ ವೋಸ್ತು
ಮಮಾಪಿ ಚ ಸ್ವಸ್ತಿ ದಿಶಂತು ವಿಪ್ರಾಃ ॥೨೧॥

ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರನ ಸಂಪತ್ತನ್ನು ಕೀರ್ತಿಯನ್ನು ಮತ್ತು ಪುತ್ರಸಂಪತ್ತನ್ನು ನಾನು ಯಾವಾಗಲೂ ಬಯಸುತ್ತೇನೆ. ಏನು ನಡೆಯುತ್ತದೆಯೋ

ಆದೆಲ್ಲವೂ ನಡೆಯಲಿ. ನಿನಗೆ ಒಳ್ಳೆಯ ಮನಸ್ಸು ಉಂಟಾಗಲಿ. ಬ್ರಾಹ್ಮಣರ ಆಶೀರ್ವಾದದಿಂದ ನನಗೂ ಮಂಗಳವಾಗಲಿ.

ಆಶೀವಿಷಾನ್ ನೇತ್ರವಿಷಾನ್ ಕೋಪಯೇನ್ನ ತು ಪಂಡಿತಃ ।
ಏವಂ ತೇಽಹಂ ವದಾಮೀದಮಪ್ರಿಯಂ ಕುರುನಂದನ ॥೨೨॥

ಎಲೈ ಕುರುನಂದನನೇ! ಆಶೀವಿಷವಾದ ಸರ್ಪಗಳನ್ನು ನೇತ್ರದಲ್ಲಿಯೇ ಕೋಪವೆಂಬ ವಿಷವನ್ನು ಕಾರುವಂತಿರುವ ಶೂರರನ್ನು ವಿವೇಕಿಯಾದವನು ಎಂದೂ ಕೋಪಗೊಳಿಸಬಾರದು. ನಿನಗೆ ಅಪ್ರಿಯವಾದರೂ ನಾನು ನಿನಗೆ ಹೀಗೆ ಈ ವಿಷಯವನ್ನು ಹೇಳುತ್ತಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಚತುರಶೀತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ಷೋಡಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಂಭತ್ನಾಲ್ಕನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ತಸ್ಮಿನ್ ಜಿತೇಽಥ ಸಹದೇವಮಥಾರ್ಜುನಂ ಚ
ಭೀಮಂ ಚ ಸೋಮಕಸುತಾಂ ಸ್ವಮಪಿ ಕ್ರಮೇಣ ।
ರಾಜಾ ನಿಧಾಯ ವಿಜಿತೋಽಥ ಸುಯೋಧನಃ ಸ್ವಂ
ಸೂತಂ ದಿದೇಶ ಪೃಷತಾತ್ಮಜಪುತ್ರಿಕಾಯಾಃ ॥೩೨॥

ಧರ್ಮರಾಜ ನಕುಲನನ್ನು ಸೋತಾಗ ಸಹದೇವನನ್ನೂ ಪಣಕ್ಕಿಟ್ಟುಸೋತ. ಬಳಿಕ ಅರ್ಜುನನನ್ನೂ ಭೀಮನನ್ನೂ ದ್ರೌಪದಿಯನ್ನೂ ತನ್ನನ್ನೂ ಕ್ರಮವಾಗಿ ಪಣಕ್ಕಿಟ್ಟುಸೋತ. ಆಗ ದುರ್ಯೋಧನ ತನ್ನ ಸಾರಥಿಯಾದ ಪ್ರಾತಿಕಾಮಿಯನ್ನು ದ್ರೌಪದಿಯ ಬಳಿಗೆ ಕಳಿಸಿದ.

★ ★ ★ ★

ಎಂಭತ್ತೈದನೆಯ ಅಧ್ಯಾಯ

(ತಮ್ಮಂದಿರನ್ನು ದ್ರೌಪದಿಯನ್ನು ಮತ್ತು ತನ್ನನ್ನೂ ಪಣಕ್ಕಿಟ್ಟು ಯುಧಿಷ್ಠಿರನ ಪರಾಜಯ.)

ಶಕುನಿಃ

ಬಹು ವಿತ್ತಂ ಪರಾಜೈಷೀಃ ಪಾಂಡವಾನಾಂ ಯುಧಿಷ್ಠಿರ ।
ಆಚಕ್ಷ್ವ ವಿತ್ತಂ ಕೌಂತೇಯ ಯದಿ ತೇಽಸ್ಯಪರಾಜಿತಮ್ ॥೧॥

ಯುಧಿಷ್ಠಿರನೇ! ಪಾಂಡವರ ಬಹುಧನವನ್ನು ಕಳೆದಿದ್ದೀಯೆ. ಕೌಂತೇಯನೇ! ಪರಾಜಿತವಲ್ಲದ ಧನವೇನಾದರೂ ಇದ್ದರೆ ಅದನ್ನು ಹೇಳು.

ಯುಧಿಷ್ಠಿರಃ

ಮಮ ವಿತ್ತಮಸಂಖ್ಯೇಯಂ ಯದಹಂ ವೇದ್ಮಿ ಸೌಬಲ ।
ಅಥ ತ್ವಂ ಶಕುನೇ ಕಸ್ಮಾದ್ ವಿತ್ತಂ ಸಮನುಪೃಚ್ಛಸಿ ॥೨॥

ಸುಬಲಪುತ್ರನಾದ ಶಕುನಿಯೇ ನನ್ನ ಬಳಿ ಇರುವ ವಿತ್ತವು ಅಸಂಖ್ಯೇಯವಾದುದು. ಅದನ್ನು ನಾನು ತಿಳಿದಿದ್ದೇನೆ. ನೀನೇಕೆ ಅದನ್ನು ಪ್ರಶ್ನೆಮಾಡುತ್ತಿದ್ದೀಯೆ?

ಅಯುತಂ ಪ್ರಯುತಂ ಚೈವ ನಿಖರ್ವಂ ಖರ್ವಮರ್ಬುದಮ್ ।
ಪ್ರಖರ್ವಂ ಚ ನಿಖರ್ವಂಚ ಸಮುದ್ರಂ ಚಾತ್ರ ಸೌಬಲ ।
ಏತನ್ಮಮ ಧನಂ ರಾಜನ್ ತೇನ ದೀವ್ಯಾಮ್ಯಹಂ ತ್ವಯಾ ॥೩॥

ಸೌಬಲನೇ! ಅಯುತವಾಗಲೀ ಪ್ರಯುತವಾಗಲೀ ಖರ್ವವಾಗಲೀ ನಿಖರ್ವವಾಗಲೀ ಅರ್ಬುದವಾಗಲೀ ಪ್ರಖರ್ವವಾಗಲೀ ಸಮುದ್ರವಾಗಲೀ ಎಲ್ಲ ಧನವೂ ನನ್ನ ಬಳಿಯಿದೆ. ರಾಜನೇ! ಅದರಿಂದ ನಿನ್ನ ಜೊತೆಯಲ್ಲಿ ನಾನು ಆಟವಾಡುತ್ತೇನೆ.

ವೈಶಂಪಾಯನಃ

ಏತಚ್ಛ್ರುತ್ವಾ ವ್ಯವಸಿತೋ ನಿಕೃತಿಂ ಸಮುಪಾಶ್ರಿತಃ ।
ಜಿತಮಿತ್ಯೇವ ಶಕುನಿರ್ಯುಧಿಷ್ಠಿರಮಭಾಷತ ॥೪॥

ಇದನ್ನು ಕೇಳಿ ಮನಸ್ಸಿನಲ್ಲೇ ನಿರ್ಧರಿಸಿ ಮೋಸವನ್ನು ಅವಲಂಬಿಸಿ ಶಕುನಿಯು ಯುಧಿಷ್ಠಿರನನ್ನು ಕುರಿತು ನಾನು ಗೆದ್ದಿದ್ದೇನೆ ಎಂದು ಹೇಳಿದನು.

ಯುಧಿಷ್ಠಿರಃ

ಗವಾಶ್ವಂ ಬಹುಧೇನೂಕಮಸಂಖ್ಯೇಯಮಜಾವಿಕಮ್ ।
ಯತ್ಕಿಂಚಿದನುವರ್ಣಂ ಚ ಪ್ರಾಕ್ ಸಿದ್ಧಮಪಿ ಸೌಬಲ ।
ಏತನ್ಮಮ ಧನಂ ರಾಜನ್ ತೇನ ದೀವ್ಯಾಮ್ಯಹಂ ತ್ವಯಾ ॥೫॥

ಅನೇಕ ಕರೆಯುವ ಹಸುಗಳನ್ನು ಹೊಂದಿರುವ ಗೋವುಗಳ ಮತ್ತು ಅಶ್ವಗಳ ಸಮೂಹ. ಅಸಂಖ್ಯೇಯವಾದ ಆಡು ಮತ್ತು ಕುರಿಗಳ ಸಮೂಹ. ಅವುಗಳ ವರ್ಣಗಳಿಗೆ ಸಮವಾಗಿ ಮೊದಲೇ ಬೇರ್ಪಡಿಸಿದ ಬೇರೆ ಬೇರೆ ಗುಂಪುಗಳು. ರಾಜನಾದ ಶಕುನಿಯೇ ಇದು ನನ್ನ ಧನ. ಅದರಿಂದ ನಾನು ನಿನ್ನ ಜೊತೆಯಲ್ಲಿ ಆಡುತ್ತೇನೆ.

ವೈಶಂಪಾಯನಃ

ಏತಚ್ಛ್ರುತ್ವಾ ವ್ಯವಸಿತೋ ನಿಕೃತಿಂ ಸಮುಪಾಶ್ರಿತಃ ।
ಜಿತಮಿತ್ಯೇವ ಶಕುನಿರ್ಯುಧಿಷ್ಠಿರಮಭಾಷತ ॥೬॥

ಇದನ್ನು ಕೇಳಿ ಮನಸ್ಸಿನಲ್ಲೇ ನಿರ್ಧರಿಸಿ ಶಕುನಿಯು ಯುಧಿಷ್ಠರನನ್ನು ಕುರಿತು ನಾನು ಗೆದಿದ್ದೇನೆ ಎಂದು ಹೇಳಿದನು.

ಯುಧಿಷ್ಠಿರಃ

ಪುರಂ ಜನಪದೋ ಭೂಮಿರಬ್ರಾಹ್ಮಣಧನೈಃ ಸಹ ।
ಅಬ್ರಾಹ್ಮಣಾಶ್ಚ ಪುರುಷಾ ರಾಜನ್ ಶಿಷ್ಟಂ ಧನಂ ಮಮ ॥೭॥

ರಾಜನೇ! ನನ್ನ ರಾಜಧಾನಿ, ರಾಜ್ಯ, ಭೂಮಿ, ಬ್ರಾಹ್ಮಣರದ್ದಲ್ಲದ ಧನ, ಬ್ರಾಹ್ಮಣರಲ್ಲದ ಪುರುಷರು. ಇದು ನನಗೆ ಉಳಿದಿರುವ ಧನ.

ವೈಶಂಪಾಯನಃ

ಏತಚ್ಛ್ರುತ್ವಾ ವ್ಯವಸಿತೋ ನಿಕೃತಿಂ ಸಮುಪಾಸ್ಥಿತಃ ।
ಜಿತಮಿತ್ಯೇವ ಶಕುನಿರ್ಯುಧಿಷ್ಠಿರಮಭಾಷತ ॥೮॥

ಇದನ್ನು ಕೇಳಿ ಮನಸ್ಸಿನಲ್ಲೇ ನಿರ್ಧರಿಸಿ ಮೋಸವನ್ನು ಅವಲಂಬಿಸಿ ಶಕುನಿಯು ಯುಧಿಷ್ಠಿರನನ್ನು ಕುರಿತು ನಾನು ಗೆದ್ದಿದ್ದೇನೆ ಎಂದು ಹೇಳಿದನು.

ಯುಧಿಷ್ಠಿರಃ

ರಾಜಪುತ್ರಾ ಇಮೇ ರಾಜನ್ ಶೋಭಂತೇ ಯೈರ್ವಿಭೂಷಿತಾಃ ।
ಕುಂಡಲಾನಿ ಚ ನಿಷ್ಕಾಶ್ಚ ಸರ್ವಶಶ್ಚಾಂಗಭೂಷಣಾಃ ॥೯॥

ವಾಸಾಂಸಿ ಚ ವಿಚಿತ್ರಾಣಿ ಸರ್ವಮನ್ಯದ್ ವಿನಾಯುಧೈಃ ।
ಏತದ್ ರಾಜನ್ ಧನಂ ಮಹ್ಯಂ ತೇನ ದೀವ್ಯಾಮ್ಯಹಂ ತ್ವಯಾ ॥೧೦॥

ಎಲೈ ರಾಜನೇ! ಈ ರಾಜ ಪುತ್ರರು ಮತ್ತು ಇವರು ಧರಿಸಿರುವ ಕುಂಡಲಗಳೂ ನಿಷ್ಕಗಳೂ ಅಂಗಭೂಷಣಗಳೂ ವಿಚಿತ್ರವಾದ ವಸ್ತ್ರಗಳೂ ಮತ್ತು ಆಯುಧವನ್ನು ಬಿಟ್ಟು ಉಳಿದೆಲ್ಲವೂ ನನ್ನ ಧನ. ಅದರಿಂದ ನಿನ್ನ ಜೊತೆಯಲ್ಲಿ ಆಡುತ್ತೇನೆ.

ವೈಶಂಪಾಯನಃ

ಏತಚ್ಛ್ರುತ್ವಾ ವ್ಯವಸಿತೋ ನಿಕೃತಿಂ ಸಮುಪಾಶ್ರಿತಃ ।
ಜಿತಮಿತ್ಯೇವ ಶಕುನಿರ್ಯುಧಿಷ್ಠಿರಮಭಾಷತ ॥೧೧॥

ಇದನ್ನು ಕೇಳಿ ಮನಸ್ಸಿನಲ್ಲೇ ನಿರ್ಧರಿಸಿ ಮೋಸವನ್ನು ಅವಲಂಬಿಸಿ ಶಕುನಿಯು ಯುಧಿಷ್ಠಿರನನ್ನು ಕುರಿತು ನಾನು ಗೆದ್ದಿದ್ದೇನೆ ಎಂದು ಹೇಳಿದನು.

ಯುಧಿಷ್ಠಿರಃ

ಶ್ಯಾಮೋ ಯುವಾ ಲೋಹಿತಾಕ್ಷಃ ಸಿಂಹಸ್ಕಂಧೋ ಮಹಾಭುಜಃ ।
ನಕುಲೋ ಗ್ಲಹ ಏವೈಕ ಏತದ್ವೈ ಮದ್ಗತಂ ಧನಮ್ ॥೧೨॥

ಶ್ಯಾಮವರ್ಣದವನೂ ಲೋಹಿತಾಕ್ಷನೂ ಸಿಂಹಸ್ಕಂಧನೂ ಮಹಾಭುಜವುಳ್ಳವನೂ ಯುವಕನೂ ಆದ ನಕುಲನೊಬ್ಬನೇ ನನ್ನ ಪಣ. ಇದು ನನ್ನಲ್ಲಿರುವ ಧನ.

ಶಕುನಿಃ

ಪ್ರಿಯಸ್ತೇ ನಕುಲೋ ರಾಜನ್ ರಾಜಪುತ್ರೋ ಯುಧಿಷ್ಠಿರ ।
ಅಸ್ಮಾಕಂ ಧನತಾಂ ಪ್ರಾಪ್ತೋ ಭೂಯಸ್ತ್ವಂ ಕೇನ ದೀವ್ಯಸೇ ॥೧೩॥

ರಾಜನಾದ ಯುಧಿಷ್ಠಿರನೇ! ರಾಜಪುತ್ರನಾದ ನಕುಲನು ನಿನಗೆ ಪ್ರಿಯನಾದವನು ಅವನು ನಮಗೆ ಧನವಾಗುತ್ತಾನೆ. ಪುನಃ ನೀನು ಯಾವುದನ್ನು ಪಣಕ್ಕಿಟ್ಟು ಆಡುತ್ತೀಯೆ?

ವೈಶಂಪಾಯನಃ

ಏವಮುಕ್ತ್ವಽಥ ಶಕುನಿಸ್ತಾನಕ್ಷಾನ್ ಪ್ರತ್ಯಪದ್ಯತ ।
ಜಿತಮಿತ್ಯೇವ ಶಕುನಿರ್ಯುಧಿಷ್ಠಿರಮಭಾಷತ ॥೧೪॥

ಹೀಗೆ ಹೇಳಿ ಶಕುನಿಯು ಕೈಗಳಲ್ಲಿ ದಾಳಗಳನ್ನು ತೆಗೆದುಕೊಂಡನು. ಯುಧಿಷ್ಠಿರನನ್ನು ಕುರಿತು ನಾನು ಗೆದ್ದಿದ್ದೇನೆ ಎಂದು ಹೇಳಿದನು.

ಯುಧಿಷ್ಠಿರಃ

ಅಯಂ ಧರ್ಮಾನ್ ಸಹದೇವೋಽನುಶಾಸ್ತಿ
ಲೋಕೇ ಹ್ಯಸ್ಮಿನ್ ಪಂಡಿತಾಖ್ಯಾಂ ಗತಶ್ಚ ।
ಅನರ್ಹತಾ ರಾಜಪುತ್ರೇಣ ತೇನ
ತ್ವಯಾ ದೀವ್ಯಾಮ್ಯಪ್ರಿಯವತ್ ಪ್ರಿಯೇಣ ॥೧೫॥

ಸಹದೇವನು ಎಲ್ಲಾ ಧರ್ಮಗಳನ್ನೂ ಅನುಶಾಸನಮಾಡುವವನು. ಈ ಲೋಕದಲ್ಲಿ ಪಂಡಿತನೆಂಬ ಹೆಸರನ್ನು ಸಂಪಾದಿಸಿದ್ದಾನೆ. ಪಣಕ್ಕಿಡಲು ಯೋಗ್ಯನಲ್ಲದ ಪ್ರಿಯನಾದ ಅವನನ್ನು ಅಪ್ರಿಯನೆಂಬಂತೆ ಪಣಕ್ಕಿಟ್ಟು ನಿನ್ನ ಜೊತೆಯಲ್ಲಿ ಆಡುತ್ತೇನೆ.

ಶಕುನಿಃ

ಮಾದ್ರೀಪುತ್ರೌ ಪ್ರಿಯೌ ರಾಜನ್ ತವೇಮೌ ವಿಜಿತೌ ಮಯಾ ।
ಬಲೀಯಾಂಸೌ ತು ತೌ ಮನ್ಯೇ ಭೀಮಸೇನಧನಂಜಯೌ ॥೧೬॥

ರಾಜನೇ! ನಿನಗೆ ಪ್ರಿಯರಾದ ಈ ಇಬ್ಬರು ಮಾದ್ರೀ ಪುತ್ರರನ್ನು ನಾನು ಗೆದ್ದಿದ್ದೇನೆ. ಆದರೆ ಭೀಮಾರ್ಜುನರು ಇವರಿಗಿಂತಲೂ ಅಧಿಕವಾದ ಬಲವುಳ್ಳವರೆಂದು ನಾನು ಭಾವಿಸಿದ್ದೇನೆ.

ಯುಧಿಷ್ಠಿರಃ

ಅಧರ್ಮಂ ಚರಸೇ ಮೂಢ ಯೋ ನಾವೇಕ್ಷಸಿ ವೈ ನಯಮ್ ।
ಯೋ ನಃ ಸುಮನಸಾಂ ತ್ವಂ ಚ ಭೇದಂ ಕರ್ತುಮಿಹೇಚ್ಛಸಿ ॥೧೭॥

ಮೂಢನೇ! ನೀನು ನೀತಿಯನ್ನು ಮೀರಿ ಅಧರ್ಮವನ್ನು ಆಚರಿಸುತ್ತಿದ್ದೀಯೆ.ಏಕೆಂದರೆ ಸೌಮನಸ್ಯವುಳ್ಳ ನಮ್ಮಲ್ಲಿ ನೀನು ವಿರೋಧವನ್ನು ಹುಟ್ಟುಹಾಕಲು ಇಚ್ಛೆಪಡುತ್ತಿದ್ದೀಯೆ.

ಶಕುನಿಃ

ಗರ್ತೇ ಮತ್ತಃ ಪ್ರಪತತಿ ಪ್ರಮತ್ತಃ ಸ್ಥಾಣುಮೃಚ್ಛತಿ ।
ಜ್ಯೇಷ್ಠೋ ರಾಜನ್ ವರಿಷ್ಠೋಽಸಿ ನಮಸ್ತೇ ಭರತರ್ಷಭ ॥೧೮॥

ಮತ್ತನಾದವನು ಹಳ್ಳದಲ್ಲಿ ಬೀಳುತ್ತಾನೆ. ಪ್ರಮತ್ತನಾದನು ಮರಕ್ಕೆ ಡಿಕ್ಕಿಹೊಡೆಯುತ್ತಾನೆ. ಭರತ ಶ್ರೇಷ್ಠನಾದ ರಾಜನೇ! ನೀನು ಜ್ಯೇಷ್ಠನೂ ಶ್ರೇಷ್ಠನೂ ಆಗಿದ್ದೀಯೆ. ನಿನಗೆ ನಮಸ್ಕಾರ.

ಸ್ವಪ್ನೇಽಪಿ ತಾನಿ ಪಶ್ಯಂತಿ ಜಾಗ್ರತೋಪಿ ಯುಧಿಷ್ಠಿರ ।
ಕಿತವಾಶ್ಚಾಪಿ ದೀವ್ಯಂತಃ ಪ್ರಲಪಂತ್ಯುತ್ಕಟಾ ಇವ ॥೧೯॥

ಯುಧಿಷ್ಠಿರನೇ! ಪಣವನ್ನು ಇಟ್ಟು ಆಡುವವರು ಜಾಗ್ರದವಸ್ಥೆಯಲ್ಲಿ ಏನನ್ನು ನೋಡುತ್ತಾರೆಯೋ, ಅದನ್ನು ಸ್ವಪ್ನದಲ್ಲಿಯೂ ನೋಡುತ್ತಾರೆ. ದ್ಯೂತವನ್ನು ಆಡುವವರು ಉತ್ಕಟವಾಗಿ ಪ್ರಲಾಪವನ್ನು ಮಾಡುತ್ತಾರೆ.

ಯುಧಿಷ್ಠಿರಃ

ಯೋ ನಃ ಸಂಘೇ ನೌರಿವ ಪಾರನೇತಾ ।
ಜೇತಾಽರೀಣಾಂ ರಾಜಪುತ್ರಸ್ತರಸ್ವೀ ।

ಅನರ್ಹತಾ ಲೋಕವೀರೇಣ ತೇನ
ದೀವ್ಯಾಮ್ಯಹಂ ಶಕುನೇ ಫಲ್ಗುನೇನ ॥೨೦॥

ಎಲೈ ಶಕುನಿಯೇ ! ಯಾವನು ನಮ್ಮನ್ನು ನೌಕೆಯು ಆಚೆಯ ದಡವನ್ನು ಸೇರಿಸುವಂತೆ ಯುದ್ಧದಲ್ಲಿ ಪಾರುಮಾಡುತ್ತಾನೆಯೋ ವೇಗಶಾಲಿಯಾಗಿ ಶತ್ರುಗಳನ್ನು ಗೆಲ್ಲುತ್ತಾನೆಯೋ ಲೋಕವೀರನಾದ ಪಣಕ್ಕಿಡಲು ಯೋಗ್ಯನಲ್ಲದ ರಾಜಪುತ್ರನಾದ ಅಂತಹ ಅರ್ಜುನನನ್ನು ಪಣಕ್ಕಿಟ್ಟು ನಾನು ನಿನ್ನ ಜೊತೆಯಲ್ಲಿ ಆಡುತ್ತೇನೆ.

ವೈಶಂಪಾಯನಃ

ಏತಚ್ಛ್ರುತ್ವಾ ವ್ಯವಸಿತೋ ನಿಕೃತಿಂ ಸಮುಪಾಸ್ಥಿತಃ ।
ಜಿತಮಿತ್ಯೇವ ಶಕುನಿರ್ಯುಧಿಷ್ಠಿರಮಭಾಷತ ॥೨೧॥

ಇದನ್ನು ಕೇಳಿದ ಶಕುನಿಯು ಮನಸ್ಸಿನಲ್ಲಿಯೇ ನಿಶ್ಚಯಿಸಿ ಮೋಸವನ್ನು ಅವಲಂಬಿಸಿ ಯುಧಿಷ್ಠಿರನನ್ನು ಕುರಿತು ನಾನು ಗೆದ್ದಿದ್ದೇನೆ ಎಂದು ಹೇಳಿದನು.

ಶಕುನಿಃ

ಅಯಂ ಮಯಾ ಪಾಂಡವಾನಾಂ ಧನುರ್ಧರಃ
ಪರಾಜಿತಃ ಪಾಂಡವಃ ಸವ್ಯಸಾಚೀ ।
ಭೀಮೇನ ರಾಜನ್ ದಯಿತೇನ ದೀವ್ಯ
ಯೋ ಜೇತವ್ಯಃ ಪಾಂಡವ ತೇಽವಶಿಷ್ಟಃ ॥೨೨॥

ಎಲೈ ರಾಜನೇ! ಪಾಂಡುಪುತ್ರನಾದ ಪಾಂಡವರಲ್ಲಿ ಶ್ರೇಷ್ಠಧರ್ನುಧಾರಿಯಾದ ಅರ್ಜುನನ್ನು ಗೆದ್ದಿದ್ದೇನೆ. ರಾಜನೇ! ನಿನಗೆ ಪ್ರಿಯನಾದ ಭೀಮನನ್ನು ಪಣಕ್ಕೆ ಇಡು. ಪಾಂಡವನೇ! ಅವನು ಉಳಿದಿದ್ದಾನೆ. ಅವನನ್ನು ನಾನು ಮುಖ್ಯವಾಗಿ ಜಯಿಸಬೇಕಾಗಿದೆ.

ಯುಧಿಷ್ಠಿರಃ

ಸೇನಾಂ ನೇತಾ ಸಂಯುಗಾರ್ಥಂ ಪ್ರಣೇತಾ
ಯಥಾ ವಜ್ರೀ ದಾನವಶತ್ರುರೇಕಃ ।

ತಿರ್ಯಕ್ಪ್ರೇಕ್ಷೀ ಸಂಗತಭ್ರೂರ್ಮಹಾತ್ಮಾ
ಸಿಂಹಸ್ಕಂಧೋ ಯಶ್ಚ ಸದಾತ್ಯಮರ್ಷೀ ॥೨೩॥

ಬಲೇನ ತುಲ್ಯೋ ಯಸ್ಯ ಪುಮಾನ್ ನ ವಿದ್ಯತೇ
ಗದಾಭೃತಾಮಗ್ರ್ಯ ಇಹಾರಿಮರ್ದನಃ ।
ಅನರ್ಹತಾ ರಾಜಪುತ್ರೇಣ ತೇನ
ದೀವ್ಯಾಮ್ಯಹಂ ಭೀಮಸೇನೇನ ರಾಜನ್ ॥೨೪॥

ಎಲೈ ರಾಜನೇ! ಇಂದ್ರನು ದಾನವರ ಜೊತೆಯಲ್ಲಿ ಯುದ್ಧವನ್ನು ಮಾಡುವಾಗ ಸೇನೆಯನ್ನು ನಡೆಸಿದಂತೆ ಯಾವನು ನಮ್ಮ ಸೇನೆಯನ್ನು ಯುದ್ಧದಲ್ಲಿ ನಡೆಸುತ್ತಾನೆಯೋ ಶತ್ರುಗಳನ್ನು ಒರೆನೋಟದಿಂದಲೇ ನೋಡುತ್ತಾನೆಯೋ ಕೂಡಿರುವ ಹುಬ್ಬುಳ್ಳವನೂ ಸಿಂಹಸ್ಕಂದನೂ ಯಾವಾಗಲೂ ಶತ್ರುಗಳ ಮೇಲೆ ಕ್ರೋಧವನ್ನು ಹೊಂದಿರುವವನೂ ಆದ ಮತ್ತು ಯಾವನ ಬಲಕ್ಕೆ ಸಮಾನವಾದ ಬಲವು ಎಲ್ಲಿಯೂ ಯಾವ ಲೋಕದಲ್ಲಿಯೂ ಇಲ್ಲವೋ ಯಾವನು ಗದಾಧಾರಿಗಳಲ್ಲಿ ಅಗ್ರಗಣ್ಯನೋ ಶತ್ರುಸಂಹಾರಕನೋ ಅಂತಹ ಮಹಾತ್ಮನಾದ ಪಣಕ್ಕಿಡಲು ಯೋಗ್ಯನಲ್ಲದ ರಾಜಪುತ್ರನಾದ ಭೀಮಸೇನನನ್ನು ಪಟಕ್ಕಿಟ್ಟು ನಿನ್ನ ಜೊತೆಯಲ್ಲಿ ಆಡುವೆನು.

ವೈಶಂಪಾಯನಃ

ಏತಚ್ಛ್ರುತ್ವಾ ವ್ಯವಸಿತೋ ನಿಕೃತಿಂ ಸಮುಪಾಶ್ರಿತಃ ।
ಜಿತಮಿತ್ಯೇವ ಶಕುನಿರ್ಯುಧಿಷ್ಠಿರಮಭಾಷತ ॥೨೫॥

ಇದನ್ನು ಕೇಳಿ ಮನಸ್ಸಿನಲ್ಲಿಯೇ ನಿಶ್ಚಯಿಸಿ ಮೋಸವನ್ನು ಅವಲಂಬಿಸಿ ಯುಧಿಷ್ಠಿರನನ್ನು ಕುರಿತು ನಾನು ಗೆದ್ದಿದ್ದೇನೆ ಎಂದು ಹೇಳಿದನು.

ಶಕುನಿಃ

ಬಹು ವಿತ್ತಂ ಪರಾಜೈಷೀರ್ಭ್ರಾತೄಂಶ್ಚ ಸಹಯದ್ವಿಪಾನ್ ।
ಆಚಕ್ಷ್ವ ವಿತ್ತಂ ಕೌಂತೇಯ ಯದಿ ತೇಽಸ್ಯಪರಾಜಿತಮ್ ॥೨೬॥

ಕೌಂತೇಯನೇ! ನೀನು ಬಹಳ ಧನವನ್ನೂ ಗಜಾಶ್ವಗಳನ್ನೂ ತಮ್ಮಂದಿರನ್ನೂ ಕಳೆದು ಕೊಂಡ್ದಿದ್ದೀಯೆ! ನೀನು ಕಳೆದುಕೊಳ್ಳದಿರುವ ಬೇರೆ ಯಾವುದಾದರೂ ವಿತ್ತವಿದ್ದರೆ ಹೇಳು.

ಯುಧಿಷ್ಠಿರಃ

ಅಹಂ ವಿಶಿಷ್ಟಃ ಸರ್ವೇಷಾಂ ಭ್ರಾತೄಣಾಂ ದಯಿತಸ್ತಥಾ ।
ಕುರ್ಯಾಮಸ್ತೇ ಜಿತಾಃ ಕರ್ಮ ಸ್ವಯಮಾತ್ಮನ್ಯುಪಗ್ರಹೇ ॥೨೭॥

ನಾನು ಪಾಂಡವರಲ್ಲಿ ವಿಶಿಷ್ಟನಾದವನು. ಎಲ್ಲಾ ತಮ್ಮಂದಿರಿಗೂ ಪ್ರೀತಿಪಾತ್ರನಾದವನು. ನಾನು ನನ್ನನ್ನೇ ಪಣವಾಗಿ ಒಡ್ಡುತ್ತಿದ್ದೇನೆ. ನಾನು ಜಿತನಾದರೆ ನಾವೆಲ್ಲರೂ ನಿನ್ನ ಕಿಂಕರರಾಗಿ ಕರ್ಮವನ್ನು ಮಾಡುತ್ತೇವೆ.

ವೈಶಂಪಾಯನಃ

ಏತಚ್ಛ್ರುತ್ವಾ ವ್ಯವಸಿತೋ ನಿಕೃತಿಂ ಸಮುಪಾಸ್ಥಿತಃ ।
ಜಿತಮಿತ್ಯೇವ ಶಕುನಿರ್ಯುಧಿಷ್ಠಿರಮಭಾಷತ ॥೨೮॥

ಇದನ್ನು ಕೇಳಿ ಮನಸ್ಸಿನಲ್ಲಿಯೇ ನಿಶ್ಚಯವನ್ನು ಮಾಡಿ ಮೋಸವನ್ನು ಅವಲಂಬಿಸಿ ಯುಧಿಷ್ಠಿರನನ್ನು ಕುರಿತು ಶಕುನಿಯು ನಾನು ಗೆದ್ದಿದ್ದೇನೆ ಎಂದು ಹೇಳಿದನು.

ಶಕುನಿಃ

ಏತತ್ ಪಾಪಿಷ್ಠಮಕರೋರ್ಯದಾತ್ಮಾನಂ ಪರಾಜಯಃ ।
ಶಿಷ್ಟೇ ಸತಿ ಧನೇ ರಾಜನ್ ಪಾಪ ಆತ್ಮಪರಾಜಯಃ ॥೨೯॥

ರಾಜನೇ! ನಿನ್ನನ್ನೇ ನೀನು ಸೋತು ಪಾಪಿಷ್ಠವಾದ ಕೆಲಸವನ್ನು ಮಾಡಿದ್ದೀಯೆ. ನಿನ್ನ ಧನವು ಇನ್ನೂ ಇರುವಾಗ ನಿನ್ನನ್ನೇ ನೀನು ಸೋಲುವುದು ಪಾಪಕರವಾದುದು.

ವೈಶಂಪಾಯನಃ

ಏವಮುಕ್ತ್ವಾ ಮತಾಕ್ಷಸ್ತಾನ್ ಗ್ಲಹೇ ಸರ್ವಾನವಸ್ಥಿತಾನ್ ।
ಅಪಾಜಯಲ್ಲೋಕವೀರಾನ್ ಮಹಾರಾಜ ಪೃಥಕ್ ಪೃಥಕ್ ॥೩೦॥

ಎಲೈ ಮಹಾರಾಜನೇ! ಹೀಗೆ ಹೇಳಿ ಅಕ್ಷಹೃದಯವನ್ನು ತಿಳಿದ ಆ ಶಕುನಿಯು ಆ ಸಭೆಯಲ್ಲಿ ಉಪಸ್ಥಿತರಾದ ಎಲ್ಲಾ ಲೋಕವೀರರನ್ನೂ ಪ್ರತ್ಯೇಕವಾಗಿ ಪಣಗಳಲ್ಲಿ ಗೆದ್ದನು.

ಶಕುನಿಃ

ಅತೀವ ತೇ ಪ್ರಿಯಾ ದೇವೀ ಗ್ಲಹ ಏಕೋಪರಾಜಿತಃ ।
ಪಣಸ್ವ ಕೃಷ್ಣಾಂ ಪಾಂಚಾಲೀಂ ತಥಾऽऽತ್ಮಾನಂ ಪುನರ್ಜಯ ॥೩೧॥

ನಿನಗೆ ಅತ್ಯಂತ ಪ್ರಿಯಳಾದವಳು ದ್ರೌಪದಿ, ಅವಳೊಬ್ಬಳು ಅಪರಾಜಿತಳಾಗಿ ಉಳಿದಿದ್ದಾಳೆ. ಪಾಂಚಾಲಿಯನ್ನು ಪಣವಾಗಿಟ್ಟು ಆಡು. ಹಾಗೆ ಮತ್ತೆ ನಿನ್ನನ್ನು ನೀನು ಜಯಿಸು.

ಯುಧಿಷ್ಠಿರಃ

ನೈವ ಹ್ರಸ್ವಾ ನ ಮಹತೀ ನ ಕೃಶಾ ನಚ ರೋಹಿಣೀ ।
ಸಾ ರಾಗರಕ್ತವಸನಾ ತಯಾ ದೀವ್ಯಾಮ್ಯಹಂ ತ್ವಯಾ ।
ಶಾರದೋತ್ಪಲಪತ್ರಾಕ್ಷ್ಯಾ ಶಾರದೋತ್ಪಲಗಂಧಯಾ ॥೩೨॥

ತಥೈವ ಸ್ಯಾದಾನೃಶಂಸ್ಯಂ ತಥಾ ಸ್ಯೂ ರೂಪಸಂಪದಃ ।
ತಥಾ ಸ್ಯಾತ್ ಪುಣ್ಯಸಂಪತ್ಯಾ ಯಾಮಿಚ್ಛೇತ್ ಪುರುಷಃ ಸ್ತ್ರಿಯಮ್ ॥

ಯಾದೃಶೀಂ ಧರ್ಮ್ಯಕಾಮಾರ್ಥಸಿದ್ಧಿಮಿಚ್ಛೇನ್ನರಃ ಸ್ತ್ರಿಯಮ್ ।
ಚರಮಂ ಸಂಸ್ಪಪತಿ ಯಾ ಪ್ರಥಮಂ ಪ್ರತಿಬುಧ್ಯತೇ ।
ಆಗೋಪಾಲಾವಿಪಾಲೇಭ್ಯಃ ಸರ್ವಂ ವೇದ ಕೃತಾಕೃತಮ್ ॥೩೪॥

ಆಭಾತಿ ಪದ್ಮವದ್ ವಕ್ತ್ರಂ ಸಸ್ಮಿತಾ ಮಲ್ಲಿಕೇವ ಚ ।
ವೇದಿಮಧ್ಯಾ ದೀರ್ಘಕೇಶೀ ತಾಮ್ರಾಕ್ಷೀ ನಾತಿರೋಮಶಾ ॥೩೫॥

ತಥೈವಂವಿಧಯಾ ರಾಜನ್ ಪಾಂಚಾಲ್ಯಾऽಹಂ ಸುಮಧ್ಯಯಾ ।
ಗ್ಲಹಂ ದೀವ್ಯಾಮಿ ಚಾರ್ವಂಗ್ಯಾ ದ್ರೌಪದ್ಯಾ ಹಂತ ಸೌಬಲ ॥೩೬॥

ಎಲೈ ಸೌಬಲನೇ! ಯಾವ ದ್ರೌಪದಿಯು ಎತ್ತರವೂ ಅಲ್ಲ ತಗ್ಗೂ ಅಲ್ಲ ಕೃಶಳೂ ಅಲ್ಲ ಸ್ಥೂಲಳೂ ಅಲ್ಲವೋ ಅಂತಹ ಯಾವಾಗಲೂ ರಕ್ತವಸ್ತ್ರವನ್ನು ಧರಿಸಿದ ಅವಳನ್ನು

ಪಣವಾಗಿಟ್ಟು ನಿನ್ನ ಜೊತೆಯಲ್ಲಿ ಆಡುತ್ತೇನೆ. ಶರತ್ಕಾಲದ ಉತ್ಪಲದಂತೆ ಕಣ್ಣುಳ್ಳವಳು ಶರತ್ಕಾಲದ ಉತ್ಪಲದಂತೆ ಸುಗಂಧವುಳ್ಳವಳು ಆದ ಅವಳ ರೂಪಸಂಪತ್ತು ಹೇಗಿದೆಯೋ ಅದರಂತೆ ಸೌಮ್ಯಭಾವವುಳ್ಳವಳು. ಮನುಷ್ಯನು ಧರ್ಮಕಾಮಾರ್ಥಗಳನ್ನು ಸಾಧಿಸಲು ಎಂತಹ ಸ್ತ್ರೀಯನ್ನು ಬಯಸುತ್ತಾನೆಯೋ ಅಂತಹ ಗುಣಗಳಿಂದಲೂ ಅಂತಹ ಪುಣ್ಯಸಂಪತ್ತಿನಿಂದಲೂ ಕೂಡಿದವಳು ಯಾವಳು ಪತಿಯು ಮಲಗಿದನಂತರ ಮಲಗಿ ಪತಿಯು ಏಳುವುದಕ್ಕಿಂತ ಮುಂಚೆಯೇ ಏಳುತ್ತಾಳೆಯೋ, ದನವನ್ನು ಕಾಯುವವರು ಮತ್ತು ಕುರಿಯನ್ನು ಕಾಯುವವರಿಂದ ಹಿಡಿದು ರಾಜ್ಯದಲ್ಲಿರುವ ಎಲ್ಲರೂ ಮಾಡಿದ, ಮಾಡದಿದ್ದ ಕಾರ್ಯಗಳನ್ನು ತಿಳಿದಿರುತ್ತಾಳೆಯೋ, ಮಗುಳ್ನಗೆಯಿಂದ ಕೂಡಿದ ಯಾವಳ ಮುಖವು ಪದ್ಮದಂತೆ ಮಲ್ಲಿಗೆಯಂತೆ ಶೋಭಿಸುತ್ತದೆಯೋ ಕೃಶಮಧ್ಯಳಾದವಳೂ ದೀರ್ಘಕೇಶ ಉಳ್ಳವಳೂ (ಕೆಂಪಾದ ಕಣ್ಣುಳ್ಳವಳೂ) ಮೈಮೇಲೆ ಕೂದಲಿಲ್ಲದವಳೂ ಅಂತಹ ಚಾರ್ವಂಗಿಯೂ ಆದ ದ್ರೌಪದಿಯನ್ನು ಪಣವಾಗಿಟ್ಟು ನಿನ್ನ ಜೊತೆಯಲ್ಲಿ ಆಡುತ್ತೇನೆ.

ವೈಶಂಪಾಯನಃ

ಏವಮುಕ್ತೇ ತು ವಚನೇ ಧರ್ಮರಾಜೇನ ಭಾರತ ।
ಧಿಗ್ಧಿಗಿತ್ಯೇವ ವೃದ್ಧಾನಾಂ ಸಭ್ಯಾನಾಂ ನಿಃಸೃತಾ ಗಿರಃ ॥೩೭॥

ಭಾರತನೇ! ಧರ್ಮರಾಜನು ಹೀಗೆ ಹೇಳುತ್ತಿರಲು ಸಭೆಯಲ್ಲಿ ಎಲ್ಲರ ಕಡೆಯಿಂದಲೂ ಧಿಕ್ಕಾರ ಧಿಕ್ಕಾರ ಎಂಬ ವೃದ್ಧರ ಮಾತುಗಳು ಕೇಳಿ ಬಂದವು.

ಚುಕ್ಷುಭೇ ಸಾ ಸಭಾ ರಾಜನ್ ರಾಜ್ಞಾಂ ಸಂಜಜ್ಞಿರೇ ಕಥಾಃ ।
ಭೀಷ್ಮದ್ರೋಣಕೃಪಾದೀನಾಂ ಖೇದಶ್ಚ ಸಮಜಾಯತ ॥೩೮॥

ರಾಜನೇ! ಆ ಸಭೆಯಲ್ಲಿ ಕ್ಷೋಭೆಯುಂಟಾಯಿತು. ರಾಜರು ಪರಸ್ಪರವಾಗಿ ಮಾತನಾಡಲು ಪ್ರಾರಂಭಿಸಿದರು. ಭೀಷ್ಮ ದ್ರೋಣ ಕೃಪ ಮೊದಲಾದವರಿಗೆ ಖೇದ ಉಂಟಾಯಿತು.

ಶಿರೋ ಗೃಹೀತ್ವಾ ವಿದುರೋ ಗತಸತ್ವ ಇವಾಭವತ್ ।
ಆಸ್ತೇ ಧ್ಯಾಯನ್ನಧೋವಕ್ತ್ರೋ ನಿಃಶ್ವಸನ್ನಿವ ಪನ್ನಗಃ ॥೩೯॥

ವಿದುರನು ತಲೆಯ ಮೇಲೆ ಕೈಗಳನ್ನು ಇಟ್ಟುಕೊಂಡು ಮೃತನಂತೆ ಕುಳಿತನು. ಮುಖವನ್ನು ಕೆಳಗೆಮಾಡಿ ಸರ್ಪದಂತೆ ನಿಟ್ಟುಸಿರನ್ನು ಬಿಡುತ್ತಾ ಚಿಂತಿಸುತ್ತಾ ಕುಳಿತನು.

ಧೃತರಾಷ್ಟ್ರಸ್ತು ಸಂಹೃಷ್ಟಃ ಪರ್ಯಪೃಚ್ಛತ್ ಪುನಃ ಪುನಃ ।
ಕಿಂ ಜಿತಂ ಕಿಂ ಜಿತಮಿತಿ ವ್ಯಾಕಾರಂ ನಾಭ್ಯರಕ್ಷತ ॥೪೦॥

ಧೃತರಾಷ್ಟ್ರನು ಮಾತ್ರ ಸಂತೋಷದಿಂದ ಕೂಡಿದವನಾಗಿ ಮತ್ತೆ ಮತ್ತೆ ಏನನ್ನು ಗೆದ್ದನು ಏನನ್ನು ಗೆದ್ದನು ಎಂದು ಕೇಳಿದನು. ಪಾಂಡವರಿಗೆ ವಿರುದ್ಧವಾದ ತನ್ನ ಹೃದಯದ ಅಭಿಪ್ರಾಯವನ್ನು ಅವನು ಮುಚ್ಚಿಕೊಳ್ಳಲು ಸಾಧ್ಯವಾಗಲಿಲ್ಲ.

ಜಹರ್ಷ ಕರ್ಣೋಽತಿಭೃಶಂ ಸಹ ದುಶ್ಶಾಸನಾದಿಭಿಃ ।
ಇತರೇಷಾಂ ತು ಸಭ್ಯಾನಾಂ ನೇತ್ರೇಭ್ಯಃ ಪ್ರಾಪತಜ್ಜಲಮ್ ॥೪೧॥

ಕರ್ಣನು ದುಶ್ಶಾಸನ ಮೊದಲಾದವರಿಂದ ಒಡಗೂಡಿ ಬಹಳವಾಗಿ ಸಂತೋಷಪಟ್ಟನು. ಉಳಿದ ಸಭ್ಯರ ಕಣ್ಣುಗಳಿಂದ ನೀರು ಉರುಳಿತು.

ಸೌಬಲಸ್ತ್ವವಿಚಾರ್ಯೈವ ಜಿತಕಾಶೀ ಮದೋತ್ಕಟಃ ।
ಜಿತಮಿತ್ಯೇವ ತಾನಕ್ಷಾನ್ ಪುನರೇವಾನ್ವಪದ್ಯತ ॥೪೨॥

ಶಕುನಿಯಾದರೂ ಏನೂ ವಿಚಾರಮಾಡದೆ ಗೆದ್ದವನಂತೆ ಮದೋತ್ಕಟನಾಗಿ ನಾನು ಗೆದ್ದಿದ್ದೇನೆ ಎಂದು ಹೇಳುತ್ತಲೇ ದಾಳಗಳನ್ನು ಕೈಗೆ ತೆಗೆದುಕೊಂಡನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಪಂಚಶೀತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ಸಪ್ತದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಂಭತ್ತೈದನೆಯ ಅಧ್ಯಾಯವು ಮುಗಿಯಿತು.

★★★★★

ಎಂಭತ್ತಾರನೆಯ ಅಧ್ಯಾಯ

(ದುರ್ಯೋಧನನಿಂದ ದ್ರೌಪದಿಯನ್ನು ಕರೆತರಲು ಆದೇಶ. ವಿದುರನ ಕಟೂಕ್ತಿ)

ದುರ್ಯೋಧನಃ

ಏಹಿ ಕ್ಷತ್ತರ್ದ್ರೌಪದೀಮಾನಯಸ್ವ
ಪ್ರಿಯಾಂ ಭಾರ್ಯಾಂ ಸಮ್ಮತಾಂ ಪಾಂಡವಾನಾಮ್ ।
ಸಮ್ಮಾರ್ಜತಾಂ ವೇಶ್ಮ ಪರೈತು ಶೀಘ್ರಮ್
ಆನಂದೋ ನಃ ಸಹ ದಾಸೀಭಿರಸ್ತು ॥೧॥

ಎಲೈ ಸೂತನೇ! ಇಲ್ಲಿ ಬಾ. ಪಾಂಡವರಿಗೆ ಸಂಮತಳಾದ ಅವರ ಪ್ರಿಯಪತ್ನಿಯಾದ ದ್ರೌಪದಿಯನ್ನು ಇಲ್ಲಿಗೆ ಕರೆದುಕೊಂಡು ಬಾ. ಅವಳು ಬೇಗ ಹೊರಟು ಬಂದು ನನ್ನ ಮನೆಯನ್ನು ಶುದ್ಧಮಾಡಲಿ. ನಮಗೂ ಮತ್ತು ನಮ್ಮ ದಾಸಿಯರಿಗೂ ಆನಂದ ಉಂಟಾಗಲಿ.

ವಿದುರಃ

ದುರ್ವಿಭಾವ್ಯಂ ಭವತಿ ತ್ವಾದೃಶೇನ
ನ ಮಂದ ಸಂಬುದ್ಧ್ಯಸಿ ಪಾಪಬದ್ಧಮ್ ।
ಪ್ರಪಾತೇ ತ್ವಂ ಲಂಬಮಾನೋ ನ ವೇತ್ಸಿ
ವ್ಯಾಘ್ರಂ ಮೃಗಃ ಕೋಪಯಸೇ ಹಿ ಬಾಲ್ಯಾತ್ ॥೨॥

ಎಲೈ ಮಂದನೇ! ವಿಧಿಯ ವ್ಯಾಪಾರವು ನಿನ್ನಿಂದ ತಿಳಿಯಲು ಅಸಾಧ್ಯವಾದುದು. ಪಾಪಬದ್ಧನಾದ ನೀನು ಎಂದೂ ಎಚ್ಚೆತ್ತು ಕೊಳ್ಳುವುದಿಲ್ಲ. ಪ್ರಪಾತದಲ್ಲಿ ಜೋಲಾಡುತ್ತಿರುವ ನೀನು ಅದನ್ನು ತಿಳಿಯುತ್ತಿಲ್ಲ. ಅವಿವೇಕತನದಿಂದ ಜಿಂಕೆಯು ವ್ಯಾಘ್ರಕ್ಕೆ ಸಿಟ್ಟು ಬರುವಂತೆ ಮಾಡುತ್ತಿದೆ.

ಆಶೀವಿಷಾಗ್ನಿಶ್ವಸಿತಾನ್ ಪೂರ್ಣಕೋಪಾನ್ ಮಹಾವಿಷಾನ್ ।
ಮಾ ಕೋಪಿಷ್ಠಾಃ ಸುಮಂದಾತ್ಮನ್ ಮಾ ಗಮಸ್ತ್ವಂ ಯಮಕ್ಷಯಮ್ ॥೩॥

ಆಶೀವಿಷ ಸರ್ಪಗಳಂತೆ, ಜ್ವಲಿಸುವ ಅಗ್ನಿಯ ಶಬ್ದದಂತೆ ಉಸಿರಾಡುತ್ತಿರುವ, ಮಹಾ ವಿಷವುಳ್ಳವರೂ ಕೋಪದಿಂದ ಪೂರ್ಣವುಳ್ಳವರೂ ಆದ ಪಾಂಡವರನ್ನು ಕೋಪಗೊಳ್ಳುವಂತೆಮಾಡಿ ನೀನು ಯಮಲೋಕಕ್ಕೆ ಹೋಗಬೇಡ.

ನ ಹಿ ದಾಸೀತ್ವಮಾಪನ್ನಾ ಕೃಷ್ಣಾ ಭವತಿ ಧರ್ಮತಃ ।
ಅನೀಶೇನ ಹಿ ರಾಜ್ಞೈಷಾ ಪಣೇ ನ್ಯಸ್ತೇತಿ ಮೇ ಮತಿಃ ॥೪॥

ದ್ರೌಪದಿಯು ಧರ್ಮದ ದೃಷ್ಟಿಯಿಂದ ನೋಡಿದಾಗ ಎಂದೂ ದಾಸಿಯಾಗುವುದಿಲ್ಲ. ಅಸ್ವತಂತ್ರನಾದ ರಾಜನು ಅವಳನ್ನು ಪಣಕ್ಕೆ ಒಡ್ಡಿದ್ದಾನೆ ಎಂದು ನನ್ನ ಅಭಿಪ್ರಾಯ.

ಅಯಂ ಧತ್ತೇ ವೇಣುರಿವಾತ್ಮಘಾತೀ
ಫಲಂ ರಾಜಾ ಧೃತರಾಷ್ಟ್ರಃ ಸಪುತ್ರಃ ।
ದ್ಯೂತಂ ಹಿ ವೈರಾಯ ಮಹಾಭಯಾಯ
ಪಕ್ವಂ ನ ಬುಧ್ಯತ್ಯಯಮಂತಕಾಲಮ್ ॥೫॥

ಪುತ್ರರಿಂದ ಸಹಿತನಾದ ಈ ಧೃತರಾಷ್ಟ್ರರಾಜನು ಬಿದುರುಮೆಳೆಯು ತನ್ನ ಆತ್ಮಘಾತಕವಾದ ಫಲವನ್ನು ಧರಿಸಿದಂತೆ ಮಹಾಭಯಕಾರಿಯೂ ಮತ್ತು ವೈರಕ್ಕೆ ಕಾರಣವೂ ಆದ ದ್ಯೂತವನ್ನು ಧರಿಸಿದ್ದಾನೆ. ತನ್ನ ಅಂತಕಾಲವು ಪಕ್ವವಾಗಿ ಪ್ರಾಪ್ತವಾಗಿದೆ ಎಂಬುದನ್ನು ತಿಳಿಯುತ್ತಿಲ್ಲ.

ನಾರುಂತುದಃ ಸ್ಯಾನ್ನ ನೃಶಂಸವಾದೀ
ನ ಹೀನತಃ ಪರಮಭ್ಯಾದದೀತ ।
ಯಥಾಸ್ಯ ವಾಚಾ ಪರ ಉದ್ವಿಜೇತ
ನ ತಾಂ ವದೇದ್ ರುಶತೀಂ ಪಾಪಲೋಕ್ಯಾಮ್ ॥೬॥

ಇನ್ನೊಬ್ಬರ ಮರ್ಮವನ್ನು ಭೇದಿಸುವ ಮಾತನ್ನು ಆಡಬಾರದು. ಕ್ರೂರವಾದ ಮಾತನ್ನು ಆಡಬಾರದು. ಹೀನನಾದ ಮನುಷ್ಯನಿಂದ ಯಾವುದೇ (ಶ್ರೇಷ್ಠವಾದ)

ವಸ್ತುವನ್ನು ಸ್ವೀಕರಿಸಬಾರದು. ಯಾವ ಮಾತು ಇನ್ನೊಬ್ಬರಿಗೆ ಉದ್ವೇಗವನ್ನು ಉಂಟುಮಾಡುವುದೋ ಅಂತಹ ಪಾಪಿಷ್ಠ ಜನರು ಮಾತನಾಡುವಂತಹ ಉಗ್ರವಾದ ಮಾತುಗಳನ್ನು ಆಡಬಾರದು.

ಸಮುಚ್ಚರಂತ್ಯತಿವಾದಾ ಹಿ ವಕ್ತ್ರಾದ್
ಯೈರಾಹತಃ ಶೋಚತಿ ರಾತ್ರ್ಯಹಾನಿ ।
ಪರಸ್ಯ ವಾ ಮರ್ಮಸು ಯೇ ಪತಂತಿ
ತಾನ್ ಪಂಡಿತೋ ನಾವಸೃಜೇತ್ ಪರೇಷು ॥೭॥

ನಿಂದನೆಯ ಮಾತುಗಳು ಮುಖದಿಂದ ಹೊರ ಹೊಮ್ಮುತ್ತವೆ. ಅದರಿಂದ ತಾಡಿತನಾದವನು ಹಗಲೂ ರಾತ್ರಿಯೂ ದುಃಖಪಡುತ್ತಾನೆ. ಯಾವ ಮಾತುಗಳು ಇನ್ನೊಬ್ಬರ ಮರ್ಮಗಳನ್ನು ಭೇದಿಸುತ್ತವೆಯೋ ವಿವೇಕಿಯಾದವನು ಅಂತಹ ಮಾತುಗಳನ್ನು ಆಡಬಾರದು.

ಅಜೋ ಹಿ ಶಸ್ತ್ರಮಖನತ್ ಕಿಲೈಕಂ
ಶಸ್ತ್ರೇ ವಿಪನ್ನೇ ಪದ್ಭಿರಪಾಸ್ಯ ಭೂಮಿಮ್ ।
ನಿಕೃಂತನಂ ಸ್ವಸ್ಯ ಕಂಠಸ್ಯ ಘೋರಂ
ತದ್ವದ್ವೈರಂ ಮಾ ಖನೀಃ ಪಾಂಡುಪುತ್ರೈಃ ॥೮॥

ಪರಮಾತ್ಮನು ಶಸ್ತ್ರವನ್ನು ತ್ಯಜಿಸಿ ಅದನ್ನು ಭೂಮಿಯಲ್ಲಿ ನೆಟ್ಟನು. ಶಸ್ತ್ರವು ಯಾವುದಾದರೂ ವಿಪತ್ತಿಗೆ ಒಳಗಾಗಿ ಭೂಮಿಯನ್ನು ಬಿಟ್ಟುಮೇಲೆ ಹಾರಿದರೆ ಅದು ತನ್ನ ಕಂಠವನ್ನೇ ಕತ್ತರಿಸುತ್ತದೆ. ಅಂತಹ ವೈರವನ್ನು ಪಾಂಡು ಪುತ್ರರ ಜೊತೆಯಲ್ಲಿ ನೀನು ಹುಟ್ಟುಹಾಕಬೇಡ.

ನ ಕಿಂಚಿದಿತ್ಥಂ ಪ್ರವದಂತಿ ಪಾರ್ಥಾಃ
ವನೇಚರಂ ವಾ ಗೃಹಮೇಧಿನಂ ವಾ ।
ತಪಸ್ವಿನಃ ಸಂಪರಿಪೂರ್ಣವಿದ್ಯಾಃ
ಭಷಂತಿ ಯೇ ವೈ ಶ್ವನರಾಃ ಸದೈವ ॥೯॥

ಪಾಂಡವರಾದರೂ ತಪಸ್ವಿಗಳು ಮತ್ತು ವಿದ್ಯೆಯಿಂದ ಪರಿಪೂರ್ಣರಾದವರು. ಅವರು ಕಾಡಿನಲ್ಲಿ ವಾಸಿಸುವ ಮನುಷ್ಯನಿಗಾಗಲೀ ಅಥವಾ ರಾಜಧಾನಿಯಲ್ಲಿ ವಾಸಿಸುವ ಮನುಷ್ಯನನ್ನು ಕುರಿತಾಗಲೀ ಈ ರೀತಿ ಮಾತನಾಡುವುದಿಲ್ಲ. ಯಾರೂ ಯಾವಾಗಲೂ ಇಂತಹ ಪಾಪದ ಮಾತುಗಳನ್ನೇ ಆಡುತ್ತಾರೆಯೋ (ಬೊಗಳುತ್ತಾರೆಯೋ) ಅವರು ಮನುಷ್ಯರೂಪದಲ್ಲಿರುವ ನಾಯಿಗಳು.

ದ್ವಾರಂ ಸುಘೋರಂ ನರಕಸ್ಯ ಜಿಹ್ಮ
ನ ಬುಧ್ಯಸೇ ಧೃತರಾಷ್ಟ್ರಸ್ಯ ಪುತ್ರ ।
ತಮತ್ಯೇತಾರೋ ಬಹವಃ ಕುರವಃ
ದ್ಯೂತೋದಯೇ ಸಹ ದುಶ್ಶಾಸನೇನ ॥೧೦॥

ಎಲೈ ವಕ್ರನಾದ ಧೃತರಾಷ್ಟ್ರನಪುತ್ರನೇ! ನರಕದ ಘೋರವಾದ ದ್ವಾರವು ತೆಗೆದಿರುವುದನ್ನು ನೀನು ಗಮನಿಸುತ್ತಿಲ್ಲ. ಈ ದ್ಯೂತದ ಉದಯದ ಕಾರಣದಿಂದ ದುಶ್ಶಾಸನನನ್ನು ಸೇರಿಸಿ ಅನೇಕಮಂದಿ ಕುರುಗಳು ಆ ಬಾಗಿಲನ್ನು ದಾಟಿ ಒಳಗೆ ಹೋಗುವವರಿದ್ದಾರೆ.

ಮಜ್ಜಂತ್ಯಲಾಬೂನಿ ಶಿಲಾಃ ಪ್ಲವಂತೇ
ಮುಹ್ಯಂತಿ ಚಾಪೋऽಂಭಸಿ(ನಾವೋऽಂಭಸಿ) ಶಶ್ವದೇವ ।
ಅಹೋ ಮೂಢೋ ಧೃತರಾಷ್ಟ್ರಸ್ಯ ಪುತ್ರೋ
ನ ಮೇ ವಾಚಂ ಪಥ್ಯರೂಪಾಂ ಶೃಣೋತಿ ॥೧೧॥

ಸೊರೆಯ ಬುರುಡೆಗಳು ನೀರಿನಲ್ಲಿ ಮುಳುಗಬಹುದು. ಬಂಡೆಗಳು ನೀರಿನಲ್ಲಿ ತೇಲಬಹುದು. ಸಮುದ್ರಕ್ಕೆ ಹರಿಯುವನದಿಗಳು ತಮ್ಮ ಮಾರ್ಗವನ್ನು ಮರೆತು ಬಿಡಬಹುದು. ಆದರೆ ಧೃತರಾಷ್ಟ್ರ ಪುತ್ರನಾದ ಈ ಮೂಢನು ಮಾತ್ರ ಎಂದೂ ಹಿತವಚನಗಳನ್ನು ಕೇಳುವುದಿಲ್ಲ.

ಅತೋ ನೂನಂ ಭವಿತಾऽನೇನ ತೇಷಾಂ
ಸುದಾರುಣಃ ಸರ್ವಹರೋ ವಿನಾಶಃ ।

ವಾಚಃ ಪುಣ್ಯಾಃ ಸುಹೃದಾಂ ಪಥ್ಯರೂಪಾಃ
ನ ಶ್ರೂಯಂತೇ ವರ್ಧತೇ ಲೋಭ ಏವ ॥೧೨॥

ಆದ್ದರಿಂದ ಇವನಿಗೂ ಮತ್ತು ಆ ಪಾಂಡವರಿಗೂ ನಿಶ್ಚಯವಾಗಿ ವಿರೋಧವು ಉಂಟಾಗುತ್ತದೆ. ಅದರಿಂದ ಘೋರವಾದ ಸರ್ವಹರವಾದ ವಿನಾಶವು ಉಂಟಾಗುತ್ತದೆ. ವಿಶ್ವಾಸಿಗಳ ಹಿತವಚನಗಳನ್ನು ಯಾರೂ ಕೇಳುತ್ತಿಲ್ಲ. ಐಶ್ವರ್ಯದ ಲೋಭವೇ ಹೆಚ್ಚಾಗುತ್ತಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಷಡಶೀತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ಅಷ್ಟಾದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಂಭತ್ತಾರನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ಸೂತೋ ಗತ್ವಾ ತದಂತಂ ಸಮಕಥಯದಿಮಾಂ ದ್ಯೂತಮಧ್ಯೇ ಜಿತಾಸಿ
ಕ್ಷಿಪ್ರಂ ಚಾಯಾಹಿ ರಾಜ್ಞಾಂ ಸಮಿತಿಮುರುತರಾ-
ಮಿತ್ಯಥೋ ಸಾಽಪ್ಯವಾದೀತ್ ।
ನಾಹಂ ಯಾಸ್ಯೇ ಗುರೂಣಾಂ ಸಮಿತಿಮಿತಿ ಯಯೌ
ಸೋಽಪ್ಯಮುಂ ಭೀಮಭೀತಂ
ಜ್ಞಾತ್ವಾ ದುಶ್ಶಾಸನಂ ಸೋಽಪ್ಯದಿಶದಥ ನೃಪೋ
ಧಾರ್ತರಾಷ್ಟ್ರೋಽನುಜಂ ಸ್ವಂ ॥೩೨॥

ಪ್ರಾತಿಕಾಮಿ ದ್ರೌಪದಿಯ ಬಳಿಗೆ ಹೋಗಿ ಹೇಳಿದ. 'ನೀನು ಜೂಜಿನಲ್ಲಿ ಪರಾಜಿತಳಾಗಿರುವೆ. ರಾಜರ ಮಹಾಸಭೆಗೆ ಬೇಗನೆ ಬಾ' ಎಂದು. ಆಗ ದ್ರೌಪದಿ ಹೇಳಿದಳು. 'ನಾನು ಗುರು ಹಿರಿಯರಿಂದ ತುಂಬಿದ ಸಭೆಗೆ ಬರಲಾರೆ' ಸಾರಥಿ ಹಿಂತಿರುಗಿ ಬಂದ. ಅವನು ಭೀಮನಿಗೆ ಅಂಜುತ್ತಾನೆ ಎಂದು ತಿಳಿದು ದುರ್ಯೋಧನ ತನ್ನ ತಮ್ಮನಾದ ದುಃಶಾಸನನನ್ನೇ ಕಳಿಸಿದ.

ಸ ಪಾಪಪೂರುಷೋತ್ತಮಃ ಪ್ರಗೃಹ್ಯ ಕೇಶಪಕ್ಷಕೇ ।
ಪುರಃ ಸ್ವಮಾತುರಾನಯತ್‌ಸಭಾಮಯುಗ್ಮವಾಸಸೀಂ ॥೩೨೯॥

ಪಾಪಪುರುಷರಲ್ಲಿ ಅಗ್ರಗಣ್ಯನಾದ ದುಃಶಾಸನ ತನ್ನ ತಾಯಿಯ ಮುಂದೆಯೆ ಏಕವಸ್ತ್ರೆಯಾದ ದ್ರೌಪದಿಯನ್ನು ಕೇಶಪಾಶದಲ್ಲಿ ಹಿಡಿದು ಸಭೆಗೆ ಎಳೆದು ತಂದ.

ಸಮಾಹೃತಾ ರಜಸ್ವಲಾ ಜಗಾದ ಭೀಷ್ಮಪೂರ್ವಕಾನ್ ।
ಅಧರ್ಮ ಏಷ ವಾರ್ಯತೇ ನ ಧರ್ಮಿಭಿರ್ಭವದ್ವಿಧೈಃ ॥೩೩೦॥

ರಜಸ್ವಲೆಯಾಗಿದ್ದ ದ್ರೌಪದಿ ಸಭೆಯಲ್ಲಿ ತರಲ್ಪಟ್ಟು ಭೀಷ್ಮಾದಿಗಳನ್ನು ಆಕ್ಷೇಪಿಸಿದಳು, 'ಇದು ಅಧರ್ಮ. ನಿಮ್ಮಂಥ ಧಾರ್ಮಿಕರು ಇದನ್ನು ಏಕೆ ತಡೆಯುತ್ತಿಲ್ಲ?'

ಕಥಂ ಛಲಾತ್ಮಕೇ ದ್ಯೂತೇ ಜಿತೇ ಧರ್ಮಜಯೋ ಭವೇತ್ ।
ನ ಹಿ ದ್ಯೂತಂ ಧರ್ಮ್ಯಮಾಹುರ್ವಿಶೇಷೇಣ ತು ಭೂಭುಜಾಂ॥೩೩೧॥

ಮೋಸದಿಂದ ತುಂಬಿದ ಜೂಜಿನಲ್ಲಿ ಗೆದ್ದ ಮಾತ್ರಕ್ಕೆ ಹೇಗೆ ನ್ಯಾಯವಾಗಿ ಗೆದ್ದಂತಾದೀತು? ಜೂಜನ್ನು ಧರ್ಮಕಾರ್ಯವೆಂದು ಬಲ್ಲವರು ಹೇಳುವುದಿಲ್ಲ. ವಿಶೇಷವಾಗಿ ಕ್ಷತ್ರಿಯರಿಗೆ ಅದು ಸರ್ವಥಾ ಧರ್ಮವಲ್ಲ.

ಯೇ ಧರ್ಮಂ ನ ವದಂತೀಹ ನ ತೇ ವೃದ್ಧಾ ಇತೀರಿತಾಃ ।
ಅವೃದ್ಧಮಂಡಿತಾಂ ನೈವ ಸಭೇತ್ಯಾಹುರ್ಮನೀಷಿಣಃ ॥೩೩೨॥

ಯಾರುಧರ್ಮವನ್ನು ಹೇಳುವುದಿಲ್ಲವೋ ಅವರು ಜ್ಞಾನಿಗಳೆನಿಸುವುದಿಲ್ಲ. ಜ್ಞಾನಿಗಳಿಲ್ಲದ ಸಭೆಯನ್ನು ಸಭೆ ಎಂದು ತಿಳಿದವರು ಹೇಳುವುದಿಲ್ಲ.

ಕಥಂ ದ್ಯೂತೇ ಜಿತಾ ಚಾಹಮಜಿತೇ ಸ್ವಪತೌ ಸ್ಥಿತೇ ।
ಸಮಾನಧರ್ಮಿಣೀಮಾಹುರ್ಭಾರ್ಯಾಂ ಯಸ್ಮಾದ್ ವಿಪಶ್ಚಿತಃ ॥೩೩೩॥

ನನ್ನ ಪತಿ ಪರಾಜಿತನಾಗದಿದ್ದಾಗ ನಾನು ಹೇಗೆ ಪರಾಜಿತಳಾದೆ? ಏಕೆಂದರೆ ಪತ್ನಿಯನ್ನು ಪತಿಯ ಸಹಧರ್ಮಿಣಿ ಎನ್ನುತ್ತಾರೆ ಬಲ್ಲವರು.

ಸಹೈವ ಕರ್ಮ ಕರ್ತವ್ಯಂ ಪತೌ ದಾಸೇ ಹಿ ಭಾರ್ಯಯಾ ।
ದಾಸೀತ್ವಂ ನ ಪೃಥಙ್ ಮೇ ಸ್ಯಾಮೇಜ್ಜಿತೇಽಪಿ ಹಿ ಪತೌ ತತಃ ॥೩೩೪॥

ಪತಿ ದಾಸನಾದಾಗಲೂ ಪತ್ನಿ ಅವನು ಮಾಡುವ ಕೆಲಸವನ್ನು ಅವನ ಜೊತೆಗೇ ಮಾಡಬೇಕು. ಅದರಿಂದ ಪತಿ ಪರಾಜಿತನಾದರೂ ನನಗೆ ಪ್ರತ್ಯೇಕವಾಗಿ ದಾಸ್ಯ ಬರುವುದಿಲ್ಲ.

ಇತ್ಯುಕ್ತಾ ಅಪಿ ಭೀಷ್ಮಾದ್ಯಾಃ ಕಲ್ಯಾವೇಶೇನ ಮೋಹಿತಾಃ ।
ಪೃಚ್ಛ ಧರ್ಮಜಮಿತ್ಯುಕ್ತ್ವಾ ತೂಷ್ಣೀಮೇವ ಬಭೂವಿರೇ ॥೩೩೫॥

ದ್ರೌಪದಿ ಹೀಗೆ ಹೇಳಿದರೂ ಭೀಷ್ಮಾದಿಗಳು ಕಲ್ಯಾವೇಶದಿಂದ ಮೂಢರಾಗಿ ಧರ್ಮರಾಜನನ್ನೇ ಕೇಳು ಎಂದು ಹೇಳಿ ಸುಮ್ಮನೆ ಕುಳಿತರು.

ದುರ್ಯೋಧನಪ್ರತೀಪಂ ಹಿ ನ ಕಶ್ಚಿದಶಕತ್ ತದಾ ।
ಉವಾಚ ವಿದುರಸ್ತತ್ರ ನ ಧರ್ಮೋಽಯಮಿತಿ ಸ್ಫುಟಂ ॥೩೩೬॥

ದುರ್ಯೋಧನನಿಗೆ ವಿರೋಧವಾಗಿ ನುಡಿಯಲೂ ನಡೆಯಲೂ ಯಾರೂ ಆಗ ಶಕ್ತರಾಗಲಿಲ್ಲ. ಆಗ ವಿದುರನೊಬ್ಬನೆ ಇದು ಧರ್ಮವಲ್ಲವೆಂದು ಸ್ಪಷ್ಟವಾಗಿ ನುಡಿದ.

ನ ತಸ್ಯ ವಾಚಂ ಜಗ್ರಾಹ ಧೃತರಾಷ್ಟ್ರಃ ಸಹಾತ್ಮಜಃ ।
ಊರ್ಧ್ವಬಾಹುಃ ಸ ಚುಕ್ರೋಶ ದೇವಾನಾಂ ಖ್ಯಾಪಯಂಸ್ತದಾ ॥೩೩೭॥

ಸ್ವಾಶಕ್ತಿಂ ದ್ರೌಪದೀಂ ಚಾಹ ಜಿತಾ ನೈವಾಸಿ ಧರ್ಮತಃ ।
ಅಧರ್ಮೋ ಹಿ ಮಹಾನೇತಾಂ ಸಭಾಮಾಕ್ರಮ್ಯ ತಿಷ್ಠತಿ ॥೩೩೮॥

ತನ್ನ ಮಾತನ್ನು ಧೃತರಾಷ್ಟ್ರನಾಗಲಿ ಅವನ ಮಕ್ಕಳಾಗಲಿ ಕೇಳದಿದ್ದಾಗ ವಿದುರ ತನ್ನ ಅಶಕ್ತಿಯನ್ನು ತೋರುತ್ತ ಎರಡು ಕೈಯೆತ್ತಿ ದೇವತೆಗಳಿಗೆ ಸಾರಿ ಹೇಳಿದ. ದ್ರೌಪದಿಗೂ 'ನ್ಯಾಯವಾಗಿ ನೀನು ಸರ್ವಥಾ ಪರಾಜಿತಳೆ ಅಲ್ಲ. ಮಹಾ ಅಧರ್ಮವೆ ಈ ಸಭೆಯನ್ನು ಆಕ್ರಮಿಸಿಕೊಂಡಿದೆ' ಎಂದ.

★ ★ ★ ★

ಎಂಭತ್ತೇಳನೆಯ ಅಧ್ಯಾಯ

(ದುಶ್ಶಾಸನನಿಂದ ದ್ರೌಪದಿಯ ಸಭಾನಯನ, ದ್ರೌಪದಿಯ ಮಾತುಗಳು)

ವೈಶಂಪಾಯನಃ

ಧಿಗಸ್ತು ಕ್ಷತ್ತಾರಮಿತಿ ಬ್ರುವಾಣೋ
ದರ್ಪೇಣ ಪೂರ್ಣೋ ಧೃತರಾಷ್ಟ್ರಸ್ಯ ಪುತ್ರಃ ।
ಅವೈಕ್ಷತ ಪ್ರಾತಿಕಾಮೀಂ ಸಭಾಯಾಮ್
ಉವಾಚೈನಂ ಪರಮಾಚಾರ್ಯಮಧ್ಯೇ ॥೧॥

ದರ್ಪಪೂರ್ಣನಾದ ಧೃತರಾಷ್ಟ್ರಪುತ್ರನಾದ ದುರ್ಯೋಧನನು ವಿದುರನಿಗೆ ದಿಕ್ಕಾರವಿರಲಿ ಎಂದು ಹೇಳುತ್ತಾ ಸಭೆಯಲ್ಲಿ ಪ್ರಾತಿಕಾಮಿ ಎಂಬ ತನ್ನ ಸೂತನನ್ನು ನೋಡಿದನು. ಅಷ್ಟುಮಂದಿ ಗುರುಹಿರಿಯರ ಮಧ್ಯದಲ್ಲಿ ಅವನನ್ನು ಕುರಿತು ಹೇಳಿದನು.

ತ್ವಂ ಪ್ರಾತಿಕಾಮಿನ್ ದ್ರೌಪದೀಮಾನಯಸ್ವ
ನ ತೇ ಭಯಂ ವಿದ್ಯತೇ ಪಾಂಡವೇಭ್ಯಃ ।
ಕ್ಷತ್ತಾ ಹ್ಯಯಂ ವಿವದತ್ಯೇಷ ನಿತ್ಯಂ
ನ ಚಾಸ್ಮಾಕಂ ವೃದ್ಧಿಕಾಮಃ ಸದೈವ ॥೨॥

ಎಲೈ ಪ್ರಾತಿಕಾಮಿಯೇ! ನೀನು ಹೋಗಿ ದ್ರೌಪದಿಯನ್ನು ಇಲ್ಲಿಗೆ ಕರೆದುಕೊಂಡು ಬಾ. ನಿನಗೆ ಪಾಂಡವರಿಂದ ಹೆದರಿಕೆ ಏನೂ ಇಲ್ಲ. ಈ ವಿದುರನಾದರೋ ನಮ್ಮ ಏಳಿಗೆಯನ್ನು ಸಹಿಸದವನಾಗಿ ಯಾವಾಗಲೂ ಹೀಗೆಯೆ ವಿವಾದವನ್ನು ಮಾಡುತ್ತಿರುತ್ತಾನೆ.

ಏವಮುಕ್ತಃ ಪ್ರಾತಿಕಾಮೀ ಸ ಸೂತಃ
ಪ್ರಾಯಾಚ್ಛೀಘ್ರಂ ರಾಜವಚೋ ನಿಶಮ್ಯ ।
ಪ್ರವಿಶ್ಯ ಚ ಶ್ವೇವ ಸ ಸಿಂಹಗೋಷ್ಠಂ
ಸಮಾಸದನ್ಮಹಿಷೀಂ ಪಾಂಡವಾನಾಮ್ ॥೩॥

ಹೀಗೆ ಹೇಳಲ್ಪಟ್ಟ ಪ್ರಾತಿಕಾಮಿಯೆಂಬ ಸೂತನು ರಾಜವಾಚನವನ್ನು ಕೇಳಿ ಶೀಘ್ರವಾಗಿ ಹೊರಟು ನಾಯಿಯು ಸಿಂಹದ ಗುಹೆಯನ್ನು ಪ್ರವೇಶಿಸುವಂತೆ ಪಾಂಡವರ ಪಟ್ಟಮಹಿಷಿಯನ್ನು ಸಮೀಪಿಸಿದನು.

ಪ್ರಾತಿಕಾಮೀ

ಯುಧಿಷ್ಠಿರೇ ದ್ಯೂತಮದೇನ ಮತ್ತೇ
ದುರ್ಯೋಧನೋ ದ್ರೌಪದಿ ತ್ವಾಮಜೈಷೀತ್ ।
ಆಗಚ್ಛ ತ್ವಂ ಧೃತರಾಷ್ಟ್ರಸ್ಯ ವೇಶ್ಮ
ನಯಾಮಿ ತ್ವಾಂ ಕರ್ಮಣೆ ಯಾಜ್ಞಸೇನಿ ॥೪॥

ಎಲೌ ದ್ರೌಪದಿಯೇ! ಯುಧಿಷ್ಠಿರನು ದ್ಯೂತಮದದಿಂದ ಮತ್ತನಾಗಿರುವಾಗ ದುರ್ಯೋಧನನು ನಿನ್ನನ್ನು ಜಯಿಸಿದನು. ಯಾಜ್ಞಸೇನಿಯೇ! ನೀನು ಧೃತರಾಷ್ಟ್ರನ ಮನಗೆ ಬಾ. ಕೆಲಸವನ್ನು ಮಾಡುವುದಕ್ಕೆ ನಿನ್ನನ್ನು ಕರೆದೊಯ್ಯುತ್ತಿದ್ದೇನೆ.

ದ್ರೌಪದೀ

ಕಥಂ ತ್ವೇವಂ ವದಸಿ ಪ್ರಾತಿಕಾಮಿನ್
ಕೋ ವಾ ದೀವ್ಯೇದ್ ಭಾರ್ಯಯಾ ರಾಜಪುತ್ರಃ ।
ಮೂಢೋ ರಾಜಾ ದ್ಯೂತಮದೇನ ಮತ್ತ
ಅಹೋ ನಾನ್ಯತ್ ಕೈತವಮಸ್ಯ ಕಿಂಚಿತ್ ॥೫॥

ಪ್ರಾತಿಕಾಮಿಯೇ! ಹೇಗೆ ಈ ರೀತಿ ಮಾತನಾಡುತ್ತಿದ್ದಿಯೆ? ಯಾವ ರಾಜಪುತ್ರನು ತನ್ನ ಭಾರ್ಯೆಯನ್ನು ಪಣಕ್ಕೆ ಒಡ್ಡುತ್ತಾನೆ? ರಾಜನು ದ್ಯೂತಮದದಿಂದ ಮತ್ತನಾಗಿ ವಿವೇಕವನ್ನು ಕಳೆದುಕೊಂಡನೋ ಅಥವಾ ಇದೇನಾದರೂ ದುರ್ಯೋಧನನ ಇನ್ನೊಂದು ಮೋಸವೋ?

ಪ್ರಾತಿಕಾಮೀ

ಯದಾ ನಾಸೀತ್ ಕೈತವಮಸ್ಯ ಕಿಂಚತ್
ತದಾದೇವೀತ್ ಪಾಂಡವೋಽಜಾತಶತ್ರುಃ ।

ನ್ಯಸ್ತಾಃ ಪೂರ್ವಂ ಭ್ರಾತರಸ್ತೇನ ರಾಜ್ಞಾ
ಸ್ವಯಂ ಚಾತ್ಮಾನಂ ತ್ವಾಮಥೋ ರಾಜಪುತ್ರಿ ॥೬॥

ರಾಜಪುತ್ರಿಯೇ! ಪಾಂಡವನಾದ ಅಜಾತಶತ್ರುವಿನ ಬಳಿ ಪಣಕ್ಕೆ ಒಡ್ಡಬಹುದಾದ ಯಾವ ಧನವೂ ಇಲ್ಲದಿರುವಾಗ ರಾಜನು ಆಟವಾಡಿದನು. ಆಗ ಮೊದಲು ತಮ್ಮಂದಿರನ್ನೂ ಅನಂತರ ತನ್ನನ್ನೂ, ಅನಂತರ ನಿನ್ನನ್ನೂ ಪಣಕ್ಕೊಡ್ಡಿ ಸೋತನು.

ದ್ರೌಪದೀ

ಗಚ್ಛ ತ್ವಂ ಕಿತವಂ ಗತ್ವಾ ಸಭಾಯಾಂ ಪೃಚ್ಛ ಸೂತಜ ।
ಕಿಂ ನು ಪೂರ್ವಂ ಪರಾಜೈಷೀರಾತ್ಮಾನಮಥವಾಽಪಿ ಮಾಮ್ ॥೭॥

ಏತಜ್ಜ್ಞಾತ್ವಾ ತ್ವಮಾಗಚ್ಛ ತತೋ ಮಾಂ ನಯ ಸೂತಜ ।
ಜ್ಞಾತ್ವಾ ಚಿಕೀರ್ಷಿತಮಹಂ ರಾಜ್ಞೋ ಯಾಸ್ಯಾಮಿ ದುಃಖಿತಾ ॥೮॥

ಸೂತಪುತ್ರನೇ! ನೀನು ಸಭೆಗೆ ಹೋಗಿ ದ್ಯೂತವನ್ನು ಆಡಿದ ಧರ್ಮರಾಜನನ್ನು ತನ್ನನ್ನು ಮೊದಲು ಸೋತನೇ ಅಥವಾ ನನ್ನನ್ನು ಮೊದಲು ಸೋತನೇ ಎಂದ ಕೇಳು. ಸೂತ ಪುತ್ರನೇ! ಇದನ್ನು ತಿಳಿದುಕೊಂಡು ಬಂದು ಅನಂತರ ನನ್ನನ್ನು ಕರೆದುಕೊಂಡು ಹೋಗು. ರಾಜನ ಅಭಿಪ್ರಾಯವನ್ನು ತಿಳಿದು ದುಃಖಿತಳಾದ ನಾನೇ ಬರುವೆನು.

ವೈಶಂಪಾಯನಃ

ಸಭಾಂ ಗತ್ವಾ ಸ ಚೋವಾಚ ದ್ರೌಪದ್ಯಾಸ್ತದ್ವಚಸ್ತದಾ ।
ಯುಧಿಷ್ಠಿರಂ ನರೇಂದ್ರಾಣಾಂ ಮಧ್ಯೇ ಸ್ಥಿತಮರಿಂದಮಮ್ ॥೯॥

ಅವನು ಸಭೆಗೆ ಹೋಗಿ ದ್ರೌಪದಿಯ ವಚನದಂತೆ ರಾಜರಮಧ್ಯದಲ್ಲಿ ಇದ್ದ ಅರಿಂದಮನಾದ ಯುಧಿಷ್ಠಿರನನ್ನು ಕುರಿತು ಹಾಗೆಯೇ ಹೇಳಿದನು.

ಪ್ರಾತಿಕಾಮೀ

ಕಸ್ಯ ಸ್ವಿನ್ ನಃ ಪರಾಜೈಷೀರಿತಿ ತ್ವಾಮಾಹ ದ್ರೌಪದೀ ।
ಕಿಂ ತ್ವಂ ಪೂರ್ವಂ ಪರಾಜೈಷೀರಾತ್ಮಾನಮಥವಾಽಪಿ ಮಾಮ್ ॥೧೦॥

ಯಾವ ಕಾರ್ಯದ ಸಲುವಾಗಿ ನೀನು ನಮ್ಮನ್ನು ಪಣಕ್ಕೊಡ್ಡಿ ಸೋತೆ ಎಂದು ದ್ರೌಪದಿಯು ಕೇಳುತ್ತಾಳೆ. ನೀನು ಮೊದಲು ನಿನ್ನನ್ನೇ ಪಣಕ್ಕೊಡ್ಡಿಸೋತೆಯೋ? ಅಥವಾ ನನ್ನನ್ನೇ ಪಣಕ್ಕೊಡ್ಡಿ ಸೋತೆಯೊ? (ಎಂದು ಅವಳ ಪ್ರಶ್ನೆ)

ವೈಶಂಪಾಯನಃ

ಯುಧಿಷ್ಠಿರಸ್ತು ತಚ್ಛ್ರುತ್ವಾ ಗತಸತ್ವ ಇವಾಭವತ್ ।
ನ ತಂ ಸೂತಂ ಪ್ರತ್ಯುವಾಚ ವಚನಂ ಸಾಧ್ವಸಾಧು ವಾ ॥೧೧॥

ಯುಧಿಷ್ಠಿರನು ಆ ಮಾತನ್ನು ಕೇಳಿ ಮೃತನಂತೆ ಆದನು. ಅವನು ಆ ಸೂತನನ್ನು ಕುರಿತು ಒಳ್ಳೆಯದಾಗಲೀ ಕೆಟ್ಟದ್ದಾಗಲೀ ಯಾವ ಮಾತನ್ನೂ ಆಡಲಿಲ್ಲ.

ದುರ್ಯೋಧನಃ

ಇಹೈತ್ಯ ಕೃಷ್ಣಾ ಪಾಂಚಾಲೀ ಪ್ರಶ್ನಂ ಸಮನುಪೃಚ್ಛತಾಮ್ ।
ಇಹೈವ ಸಭ್ಯಾಃ ಶೃಣ್ವಂತು ತಸ್ಯಾ ಅಸ್ಯ ಚ ಯದ್ವಚಃ ॥೧೨॥

ಪಾಂಚಾಲಿಯಾದ ಕೃಷ್ಣೆಯು ಇಲ್ಲಿ ಬಂದು ಆ ಪ್ರಶ್ನೆಯನ್ನು ಕೇಳಲಿ. ಸಭ್ಯರಾದವರು ಇಲ್ಲಿಯೇ ಇವಳ ಮತ್ತು ಅವನ ಮಾತನ್ನು ಕೇಳಲಿ.

ವೈಶಂಪಾಯನಃ

ಸ ಗತ್ವಾ ರಾಜಭವನಂ ದುರ್ಯೋಧನವಶಾನುಗಃ ।
ಉವಾಚ ದ್ರೌಪದೀಂ ಸೂತಃ ಪ್ರಾತಿಕಾಮೀ ವ್ಯಥನ್ನಿವ ॥೧೩॥

ದುರ್ಯೋಧನನ ವಶವರ್ತಿಯಾದ ಪ್ರಾತಿಕಾಮಿಸೂತನು ರಾಜಭವನಕ್ಕೆ ಹೋಗಿ ವ್ಯಥೆಯನ್ನು ಪಡುವವನಂತೆ ದ್ರೌಪದಿಯನ್ನು ಕುರಿತು ಹೇಳಿದನು.

ಸಭ್ಯಾಶ್ಚ ತ್ವಾಮಿಹ ರಾಜಪುತ್ರ್ಯಾ ಹ್ವಯಂತಿ
ಮನ್ಯೇ ಪ್ರಾಪ್ತಂ ಸಂಕ್ಷಯಂ ಕೌರವಾಣಾಮ್ ।
ನ ವೈ ಸಮಯಂ ಪಾಲಯತೇ ಲಘೀಯಾನ್
ಯಸ್ತ್ವಾಂ ಸಭಾಂ ನೇಷ್ಯತಿ ರಾಜಪುತ್ರಿ ॥೧೪॥

ರಾಜಪುತ್ರಿಯೇ! ಸಭ್ಯರು ನಿನ್ನನ್ನು ಇಲ್ಲಿ ಸಭೆಗೆ ಆಹ್ವಾನಿಸುತ್ತಿದ್ದಾರೆ. ಕೌರವರ ವಿನಾಶವು ಪ್ರಾಪ್ತವಾಗಿದೆ ಎಂದು ಭಾವಿಸುತ್ತೇನೆ. ಅಲ್ಪರು ಯಾವ ಮರ್ಯಾದೆಯನ್ನೂ ಅನುಸರಿಸುವುದಿಲ್ಲ. ರಾಜಕುಮಾರಿಯೇ! ಯಾವ ಅಲ್ಪನು ನಿನ್ನನ್ನು ಸಭೆಗೆ ಕರೆದುಕೊಂಡು ಹೋಗುವನೊ ಅವನು ತನ್ನ ಸಂವೃದ್ಧಿಯನ್ನು ರಕ್ಷಿಸಿಕೊಳ್ಳುವುದಿಲ್ಲವೆಂದು ತೋರುತ್ತಿದೆ.

ದ್ರೌಪದೀ

ಏವಂ ದ್ಯೂತೇ ವ್ಯದಧಾತ್ ಸಂವಿಧಾತಾ
ಸ್ಪರ್ಶಾವುಭೌ ಸ್ಪೃಶತೋ ಧೀರಬಾಲೌ ।
ಧರ್ಮಂ ತ್ವೇಕಂ ಪರಮಂ ಪ್ರಾಹ ಲೋಕಃ
ಸ ನಃ ಶಮಂ ದಾಸ್ಯತಿ ಗೋಪ್ಯಮಾನಃ ॥೧೫॥

ವಿಧಿಯು ದ್ಯೂತವನ್ನು ಹೀಗೆಯೇ ನಿರೂಪಿಸಿದ್ದಾನೆ. ಸುಖದುಃಖಗಳಿಗೆ ಕಾರಣವಾದ ಜಯಾಪಜಯಗಳು ಧೀರರಿಗೂ ಬರುತ್ತವೆ. ಬಾಲಕರಿಗೂ ಬರುತ್ತವೆ. ಆದರೆ ಲೋಕವು ಧರ್ಮವೇ ಶ್ರೇಷ್ಠವೆಂದು ಹೇಳುತ್ತದೆ. ಆ ಧರ್ಮವನ್ನು ರಕ್ಷಿಸಿದರೆ ಅದು ನಮಗೆ ಕ್ಷೇಮವನ್ನು ಉಂಟುಮಾಡುವುದು.

ವೈಶಂಪಾಯನಃ

ಯುಧಿಷ್ಠಿರಸ್ತು ತಚ್ಛ್ರುತ್ವಾ ದುರ್ಯೋಧನಚಿಕೀರ್ಷಿತಮ್ ।
ದ್ರೌಪದ್ಯಾಃ ಸಮ್ಮತಂ ದೂತಂ ಪ್ರಾಹಿಣೋದ್ ಭರತರ್ಷಭ ॥೧೬॥

ಎಲೈ ಭರತರ್ಷಭನೇ! ಯುಧಿಷ್ಠಿರನು ದ್ರೌಪದಿಯ ಅಭಿಪ್ರಾಯವನ್ನು ತಿಳಿದವನಾಗಿ ದ್ರೌಪದಿಗೆ ಸಂಮತನಾದ ಒಬ್ಬ ದೂತನನ್ನು ಕಳುಹಿಸಿದನು.

ಸಭಾಮಾಗಮ್ಯ ಪಾಂಚಾಲಿ ಶ್ವಶುರಸ್ಯಾಗ್ರತೋ ಭವ ।
ಅಥ ತ್ವಾಮಾಗತಾಂ ದೃಷ್ಟ್ವಾ ರಾಜಪುತ್ರೀಂ ಸಭಾಂ ತದಾ ।
ಸಭ್ಯಾಃ ಸರ್ವೇ ವಿನಿಂದೇರನ್ ತತೋ ಹಿ ಧೃತರಾಷ್ಟ್ರಜಮ್ ॥೧೭॥

ಪಾಂಚಾಲಿಯೇ! ಸಭೆಗೆ ಬಂದು ನಿನ್ನ ಮಾವನ ಮುಂದೆ ನಿಲ್ಲು. ರಾಜ ಪುತ್ರಿಯಾದ ನೀನು ಸಭೆಗೆ ಬಂದುದನ್ನು ನೋಡಿ ಎಲ್ಲಾ ಸಭ್ಯರು ದುರ್ಯೋಧನನ್ನು ನಿಂದಿಸಿಯಾರು.

ವೈಶಂಪಾಯನಃ

ಸ ಗತ್ವಾ ತ್ವರಿತಂ ದೂತಃ ಕೃಷ್ಣಾಯಾ ಭವನಂ ನೃಪ ।
ನ್ಯವೇದಯನ್ಮತಂ ಧೀಮಾನ್ ಧರ್ಮರಾಜಸ್ಯ ನಿಶ್ಚಿತಮ್ ॥೧೮॥

ಎಲೈ ರಾಜನೇ! ಆ ದೂತನು ಶೀಘ್ರವಾಗಿ ದ್ರೌಪದಿಯ ಮನೆಗೆ ಹೋಗಿ ಧರ್ಮರಾಜನ ಅಭಿಪ್ರಾಯವನ್ನು ಅವಳಿಗೆ ನಿವೇದಿಸಿದನು.

ಪಾಂಡವಾಶ್ಚ ಮಹಾತ್ಮಾನೋ ದೀನಾ ದುಃಖಸಮನ್ವಿತಾಃ ।
ಸತ್ಯೇನಾಧಿಪರೀತಾಂಗಾ ನೋದೀಕ್ಷಂತೇ ಸ್ಮ ಕಿಂಚನ ॥೧೯॥

ಮಹಾತ್ಮರಾದ ಪಾಂಡವರು ದೈನ್ಯದಿಂದಲೂ ದುಃಖದಿಂದಲೂ ಕೂಡಿದವರಾಗಿ ಸತ್ಯದಿಂದ ಕಟ್ಟಲ್ಪಟ್ಟವರಾಗಿ ಕಣ್ಣೆತ್ತಿ ಏನನ್ನೂ ನೋಡಲಿಲ್ಲ.

ತತಸ್ತೇಷಾಂ ಮುಖಮಾಲೋಕ್ಯ ರಾಜಾ
ದುರ್ಯೋಧನಃ ಸೂತಮುವಾಚ ಹೃಷ್ಟಃ ।
ಇಹೈವ ತಾಮಾನಯ ಪ್ರಾತಿಕಾಮಿನ್
ಪ್ರತ್ಯಕ್ಷಮಸ್ಯಾಃ ಕುರವೋ ಬ್ರುವಂತು ॥೨೦॥

ಆಗ ಆ ಪಾಂಡವರ ಮುಖವನ್ನು ನೋಡಿದ ದುರ್ಯೋಧನನು ಸಂತೋಷದಿಂದ ಸೂತನನ್ನು ಕುರಿತು ಪ್ರಾತಿಕಾಮಿಯೇ ಅವಳನ್ನು ಇಲ್ಲಿಗೆ ಕರೆದುಕೊಂಡು ಬಾ. ಅವಳ ಎದುರಿನಲ್ಲಿಯೇ ಈ ಪಾಂಡವರು ಮಾತನಾಡಲಿ. (ಎಂದು ಹೇಳಿದನು.)

ತತಃ ಸೂತಸ್ತಸ್ಯ ವಶಾನುಗಾಮೀ
ಭೀತಶ್ಚ ಕೋಪಾದ್ ದ್ರುಪದಾತ್ಮಜಾಯಾಃ ।
ವಿಗಾಹಮಾನಃ ಪುನರೇವ ಸಭ್ಯಾನ್
ಉವಾಚ ಕೃಷ್ಣಾಂ ಕಿಮಹಂ ಬ್ರವೀಮಿ ॥೨೧॥

ಆಗ ದುರ್ಯೋಧನನ ವಶವರ್ತಿಯಾದ ಸೂತನು ದ್ರೌಪದಿಯ ಕೋಪಕ್ಕೆ ಹೆದರಿದವನಾಗಿ ಪುನಃ ಸಭ್ಯರನ್ನು ದಾಟಿಕೊಂಡು ದುರ್ಯೋಧನನ ಬಳಿಗೆ ಬಂದು ದ್ರೌಪದಿಗೆ ನಾನು ಏನು ಹೇಳಲಿ ಎಂದು ಕೇಳಿದನು.

ದುರ್ಯೋಧನಃ

ದುಶ್ಶಾಸನೈಷಾಂ ಮಮ ಸೂತಪುತ್ರೋ
ವೃಕೋದರಾದುದ್ವಿಜತೇಽಲ್ಪಚೇತಾಃ ।
ಸ್ವಯಂ ನಿಗೃಹ್ಯಾನಯ ಯಾಜ್ಞಸೇನೀಂ
ಕಿಂ ತೇ ಕರಿಷ್ಯಂತ್ಯವಶಾಃ ಸಪತ್ನಾಃ ॥೨೨॥

ದುಶ್ಶಾಸನನೇ! ಈ ಅಲ್ಪ ಚೇತಸ್ಸಿನ ನನ್ನ ಸೂತಪುತ್ರನು ಭೀಮಸೇನನಿಗೆ ಹೆದರುತ್ತಿದ್ದಾನೆ. ನೀನೇ ದ್ರೌಪದಿಯನ್ನು ಬಲಾತ್ಕಾರದಿಂದ ಎಳೆದುಕೊಂಡು ಬಾ. ಸ್ವಾತಂತ್ರ್ಯವನ್ನು ಕಳೆದುಕೊಂಡ ನಮ್ಮ ಶತ್ರುಗಳು ಏನು ಮಾಡುವರು? (ಎಂದು ಹೇಳಿದನು.)

ವೈಶಂಪಾಯನಃ

ತತಃ ಸಮುತ್ಥಾಯ ಸ ರಾಜಪುತ್ರಃ
ಶ್ರುತ್ವಾ ಭ್ರಾತುಃ ಶಾಸನಂ ರಕ್ತದೃಷ್ಟೇಃ ।
ಪ್ರವಿಶ್ಯ ತದ್ವೇಶ್ಮ ಮಹಾರಥಾನಾಮ್
ಇತ್ಯಬ್ರವೀದ್ ದ್ರೌಪದೀಂ ರಾಜಪುತ್ರೀಮ್ ॥೨೩॥

ಆಗ ರಾಜಪುತ್ರನಾದ ದುಶ್ಶಾಸನನು ಕೋಪದಿಂದ ಕೆಂಪಾದ ಕಣ್ಣುಳ್ಳ ತನ್ನ ಅಣ್ಣನ ಶಾಸನವನ್ನು ಕೇಳಿ ಅಲ್ಲಿಂದ ಎದ್ದು ಮಹಾರಥರಾದ ಪಾಂಡವರ ಗೃಹವನ್ನು ಪ್ರವೇಶಿಸಿ ರಾಜಪುತ್ರಿಯಾದ ದ್ರೌಪದಿಯನ್ನು ಕುರಿತು ಹೀಗೆ ಹೇಳಿದನು.

ದುಶ್ಶಾಸನಃ

ಏಹ್ಯೇಹಿ ಪಾಂಚಾಲಿ ಜಿತಾಽಸಿ ಕೃಷ್ಣೇ
ದುರ್ಯೋಧನಂ ಪಶ್ಯ ವಿಮುಕ್ತಲಜ್ಜಾ ।

ಕುರೂನ್ ಭಜಸ್ವಾಯತಪದ್ಮನೇತ್ರೇ
ಧರ್ಮೇಣ ಲಬ್ಧಾಸಿ ಸಭಾಂ ಪರೈಹಿ ॥೨೪॥

ಪಾಂಚಾಲಿ ಏಳು ಏಳು. ನೀನು ದ್ಯೂತದಲ್ಲಿ ಜಿತಳಾಗಿದ್ದೀಯೆ. ಕೃಷ್ಣೆಯೇ! ನೀನು ನಾಚಿಕೆಯನ್ನು ಬಿಟ್ಟು ದುರ್ಯೋಧನನನ್ನು ನೋಡು. ವಿಶಾಲಾಕ್ಷಿಯೇ! ನೀನು ಕುರುಗಳನ್ನು ಹೊಂದು. ನಿನ್ನನ್ನು ನಾವು ಧರ್ಮದಿಂದ ಪಡೆದಿದ್ದೇವೆ. ಸಭೆಗೆ ಹೊರಟು ಬಾ. (ಎಂದು ಹೇಳಿದನು.)

ವೈಶಂಪಾಯನಃ

ತತಃ ಸಮುತ್ಥಾಯ ಸುದುರ್ಮನಾಃ ಸಾ
ವಿವರ್ಣಮಾವೃತ್ಯ ಮುಖಂ ಕರೇಣ ।
ಆರ್ತಾ ಪ್ರದುದ್ರಾವ ಯತಃ ಸ್ತ್ರಿಯಸ್ತಾ
ವೃದ್ಧಸ್ಯ ರಾಜ್ಞಃ ಕುರುಪುಂಗವಸ್ಯ ॥೨೫॥

ಆಗ ಅತ್ಯಂತದುಃಖಪೂರಿತಳಾದ ಅವಳು ಎದ್ದು ತನ್ನ ಕೈಯಿಂದ ಬಾಡಿದ ಮುಖವನ್ನು ಮುಚ್ಚಿಕೊಂಡು ಕುರು ಪುಂಗವನಾದ ವೃದ್ಧನಾದ ಧೃತರಾಷ್ಟ್ರನ ಸ್ತ್ರೀಯರು ಇದ್ದ ಸ್ಥಳಕ್ಕೆ ಆರ್ತಳಾಗಿ ಓಡಿ ಬಂದಳು.

ತತೋ ಜವೇನಾಭಿಪಪಾತ ರೋಷಾದ್
ದುಶ್ಶಾಸನಸ್ತಾಮಭಿಗರ್ಜಮಾನಃ ।
ದೀರ್ಘೇಷು ನೀಲೇಷ್ವಥ ಚೋರ್ಮಿಮತ್ಸು
ಜಗ್ರಾಹ ಕೇಶೇಷು ನರೇಂದ್ರಪತ್ನೀಮ್ ॥೨೬॥

ಆಗ ದುಶ್ಶಾಸನನು ರೋಷದಿಂದ ಗರ್ಜಿಸುತ್ತಾ ಅವಳ ಹಿಂದೆ ಓಡಿ ಬಂದು ನರೇಂದ್ರಪತ್ನಿಯಾದ ಅವಳನ್ನು ದೀರ್ಘವಾದ ಕಪ್ಪಾದ ಗುಂಗುರುಗಳಿಂದ ಕೂಡಿದ ಅವಳ ತಲೆ ಕೂದಲುಗಳಲ್ಲಿ ಹಿಡಿದು ಕೊಂಡನು.

ಯೇ ರಾಜಸೂಯಾವಭೃಥೇ ಜಲೇನ
ಮಹಾಕ್ರತೌ ಮಂತ್ರಪೂತೇನ ಸಿಕ್ತಾಃ ।

ತೇ ಪಾಂಡವಾನಾಂ ಪರಿಭೂಯ ವೀರ್ಯಂ
ಬಲಾತ್ ಪ್ರಮೃಷ್ಯಾ ಧೃತರಾಷ್ಟ್ರಜೇನ ॥೨೭॥

ಯಾವ ದ್ರೌಪದಿಯ ಕೇಶಗಳು ರಾಜಸೂಯ ಮಹಾಯಾಗದ ಅವಭೃಥ ಸ್ನಾನದ ಸಮಯದಲ್ಲಿ ಮಂತ್ರಪೂತವಾದ ಜಲದಿಂದ ಅಭಿಷೇಕಮಾಡಲ್ಪಟ್ಟಿದ್ದವೋ ಅಂತಹ ಕೂದಲುಗಳನ್ನು ಧೃತರಾಷ್ಟ್ರನ ಪುತ್ರನಾದ ದುಶ್ಶಾಸನನು ಪಾಂಡವರ ಪರಾಕ್ರಮವನ್ನು ಲೆಕ್ಕಿಸದೆ ಬಲದಿಂದ ತನ್ನ ಕೈಗಳಿಂದ ಹಿಡಿದನು.

ಸ ತಾಂ ಪರಾಮೃಶ್ಯ ಸಭಾಸಮೀಪಮ್
ಆನೀಯ ಕೃಷ್ಣಾಮತಿಕೃಷ್ಣಕೇಶೀಮ್ ।
ದುಶ್ಶಾಸನೋ ನಾಥವತೀಮನಾಥವತ್
ಚಕರ್ಷ ವಾಯುಃ ಕದಲೀಮಿವಾರ್ತಾಮ್ ॥೨೮॥

ದುಶ್ಶಾಸನನು ಅತಿ ಕಪ್ಪಾದ ಕೂದಲುಳ್ಳ ದ್ರೌಪದಿಯನ್ನು ಹಾಗೆಯೇ ಹಿಡಿದು ಸಭೆಯ ಸಮೀಪಕ್ಕೆ ಎಳೆದುಕೊಂಡು ಬಂದನು. ನಾಥವತಿಯಾದ ಅವಳನ್ನು ಅನಾಥಳಂತೆ ಬಿರುಗಾಳಿಯು ಕದಳಿ ವೃಕ್ಷವನ್ನು ಎಳೆದಂತೆ ಆರ್ತಳಾದ ದ್ರೌಪದಿಯನ್ನು ಎಳೆದಾಡಿದನು.

ಸಾ ಕೃಷ್ಯಮಾಣಾ ನಮಿತಾಂಗಯಷ್ಟಿಃ
ಶನೈರುವಾಚಾದ್ಯ ರಜಸ್ವಲಾಽಸ್ಮಿ ।
ಏಕಂ ಚ ವಾಸೋ ಮಮ ಮಂದಬುದ್ಧೇ
ನೇತುಂ ಸಭಾಂ ನಾರ್ಹಸೇ ಮಾಮನಾರ್ಯ ॥೨೯॥

ಹೀಗೆ ಎಳೆದಾಡಲ್ಪಡುವ ದ್ರೌಪದಿಯು ತನ್ನ ಕೃಶವಾದ ಶರೀರವನ್ನು ಮುಚ್ಚಿಕೊಂಡು ಸಣ್ಣ ಧ್ವನಿಯಲ್ಲಿ , ಎಲೈ ಮಂದಬುದ್ಧಿಯ ಅನಾರ್ಯನೇ! ನಾನು ಈ ದಿನ ರಜಸ್ವಲೆಯಾಗಿದ್ದೇನೆ. ನನಗೆ ಒಂದೇ ವಸ್ತ್ರವಿದೆ. ನನ್ನನ್ನು ಸಭೆಗೆ ಎಳೆದು ಕೊಂಡು ಹೋಗಬೇಡ ಎಂದು ಹೇಳಿದಳು.

ತತೋಽಬ್ರವೀತ್ ತಾಂ ಪ್ರಹಸನ್ ನಿಗೃಹ್ಯ
ಕೇಶೇಷು ಕೃಷ್ಣೇಷು ತದಾ ಸ ಕೃಷ್ಣಾಮ್ ।

ಜಿಷ್ಣುಂ ಚ ಕೃಷ್ಣಂ ಚ ಹರಿಂ ನರಂ ಚ
ತ್ರಾಣಾಯ ವಿಕ್ರೋಶಯ ಯಾಜ್ಞಸೇನಿ ॥೩೦॥

ಆಗ ಅವನು ಅವಳನ್ನು ಕೃಷ್ಣಕೇಶಗಳಲ್ಲಿ ಹಿಡಿದು ಗಟ್ಟಿಯಾಗಿ ನಗುತ್ತಾ ದ್ರೌಪದಿಯನ್ನು ಕುರಿತು ಯಾಜ್ಞಸೇನಿ ಅರ್ಜುನನ್ನಾಗಲೀ ಕೃಷ್ಣನನ್ನಾಗಲೀ ಹರಿಯನ್ನಾಗಲೀ ಅಥವಾ ನರನನ್ನಾಗಲೀ ನಿನ್ನ ರಕ್ಷಣೆಗೋಸ್ಕರ ಕಿರುಚು.

ರಜಸ್ವಲಾ ವಾಽಪ್ಯಥ ಯಾಜ್ಞಸೇನಿ
ಏಕಾಂಬರಾ ವಾಽಪ್ಯಥವಾ ವಿವಸ್ತ್ರಾ ।
ದ್ಯೂತೇ ಜಿತಾ ಚಾಸಿ ಕೃತಾ ಚ ದಾಸೀ
ದಾಸೀಷು ಕಾಮಶ್ಚ ಯಥೋಪಜೋಷಮ್ ॥೩೧॥

ಯಾಜ್ಞಸೇನಿಯೇ! ನೀನು ರಜಸ್ವಲೆಯಾಗಿರು ಅಥವಾ ಒಂದೇ ವಸ್ತ್ರವನ್ನು ಧರಿಸಿರು ಅಥವಾ ವಿವಸ್ತ್ರಳಾಗಿರು. ಏನಾದರೂ ದ್ಯೂತದಲ್ಲಿ ಗೆಲ್ಲಲ್ಪಟ್ಟು ದಾಸಿಯಾಗಿದ್ದೀಯೆ. ದಾಸಿಯರ ವಿಷಯದಲ್ಲಿ ಮನಸ್ಸಿಗೆ ಬಂದಂತೆ ವ್ಯವಹರಿಸಬಹುದು. (ಎಂದು ಹೇಳಿದನು.)

ಪ್ರಕೀರ್ಣಕೇಶೀ ಪತಿತಾರ್ದ್ರವಸ್ತ್ರಾ
ದುಶ್ಶಾಸನೇನ ವ್ಯವಧೂಯಮಾನಾ ।
ಹ್ರೀಮತ್ಯಮರ್ಷೇಣ ಚ ದಹ್ಯಮಾನಾ
ಶನೈರಿದಂ ವಾಕ್ಯಮುವಾಚ ಕೃಷ್ಣಾ ॥೩೨॥

ತನ್ನ ಕೂದಲುಗಳನ್ನು ಕೆದರಿಕೊಂಡು ವಸ್ತ್ರದ ಒಂದು ಭಾಗವು ಜಾರುತ್ತಿರಲು ದುಶ್ಶಾಸನನಿಂದ ಎಳೆಯಲ್ಪಡುತ್ತಿದ್ದ ನಾಚಿಕೆಯಿಂದ ಕೂಡಿದ ದ್ರೌಪದಿಯು ಕೋಪದಿಂದ ಉರಿಯುತ್ತಾ ಮೆಲ್ಲಗೆ ಈ ಮಾತನ್ನು ಆಡಿದಳು.

ಇಮೇ ಸಭಾಯಾಮುಪದಿಷ್ಟಶಾಸ್ತ್ರಾ
ಕ್ರಿಯಾವಂತಃ ಸರ್ವ ಏವೇಂದ್ರಕಲ್ಪಾಃ ।
ಗುರುಸ್ಥಾನಾ ಗುರವಶ್ಚ ಸರ್ವೇ
ತೇಷಾಮಗ್ರೇ ನೋತ್ಸಹೇ ಸ್ಥಾತುಮೇವಮ್ ॥೩೩॥

ಸಭೆಯಲ್ಲಿರುವ ಇವರೆಲ್ಲರೂ ಶಾಸ್ತ್ರೋಪದೇಶವನ್ನು ಮಾಡಿದ ಗುರುಗಳು. ಸತ್ಕರ್ಮವನ್ನು ಮಾಡಿದವರು. ಇಂದ್ರನಂತೆ ಇರುವವರು. ಎಲ್ಲರೂ ನನ್ನ ಗುರುಸ್ಥಾನದಲ್ಲಿ ಇರುವ ಗುರುಗಳೇ ಆಗಿದ್ದಾರೆ. ಅವರ ಎದುರಿನಲ್ಲಿ ನಾನು ಹೀಗೆ ನಿಲ್ಲಲು ಬಯಸುವುದಿಲ್ಲ.

ನೃಶಂಸಕರ್ಮಂಸ್ತ್ವಮನಾರ್ಯವೃತ್ತ
ಮಾ ಮಾ ವಿವಸ್ತ್ರಾಮಿತಿ ಮಾ ವಿಕರ್ಷೀಃ ।
ನ ಮರ್ಷಯೇಯುಸ್ತವ ರಾಜಪುತ್ರಾಃ
ಸೇಂದ್ರಾ ದೇವಾ ಯದಿ ತೇ ವೈ ಸಭಾಯಾಮ್ ॥೩೪॥

ಕ್ರೂರಕರ್ಮಿಯೇ! ಅನಾರ್ಯವೃತ್ತನೇ! ನನ್ನನ್ನು ಹೀಗೆ ಎಳೆದು ವಿವಸ್ತ್ರಳನ್ನಾಗಿ ಮಾಡಬೇಡ. ಇಂದ್ರಾದಿ ದೇವತೆಗಳು ಸಭೆಯಲ್ಲಿದ್ದರೂ ಸಹ ರಾಜಪುತ್ರರಾದ ನನ್ನ ಪತಿಗಳು ನಿನ್ನ ಈ ಕಾರ್ಯವನ್ನು ಎಂದೂ ಸಹಿಸುವುದಿಲ್ಲ.

ಧರ್ಮೇ ಸ್ಥಿತೋ ಧರ್ಮಸುತಶ್ಚ ರಾಜಾ
ಧರ್ಮಶ್ಚ ಸೂಕ್ಷ್ಮೋ ನಿಪುಣೋಪಲಕ್ಷ್ಯಃ ।
ನ ಚಾಪಿ ಭರ್ತುಃ ಪರಮಾಣುಮಾತ್ರಮ್
ಇಚ್ಛಾಮಿ ದೋಷಂ ಸ್ವಗುಣಾನ್ ವಿಸೃಜ್ಯ ॥೩೫॥

ಯಮಧರ್ಮನ ಮಗನಾದ ಯುಧಿಷ್ಠಿರರಾಜನು ಯಾವಾಗಲೂ ಧರ್ಮದಲ್ಲಿಯೇ ಇರುವವನು. ಧರ್ಮವು ಬಹಳ ಸೂಕ್ಷ್ಮವಾದುದು. ಇದು ನಿಪುಣರಿಗೆ ಮಾತ್ರ ತಿಳಿಯುವಂತಹದು. ನನ್ನ ಗುಣಗಳನ್ನು ತೊರೆದು ನಾನು ನನ್ನ ಪತಿಯಾದ ಧರ್ಮರಾಜನಲ್ಲಿ ಒಂದು ಪರಮಾಣುವಿನಷ್ಟು ದೋಷವನ್ನೂ ಸಹ ಎಣಿಸಲು ಬಯಸುವುದಿಲ್ಲ.

ಇದಂ ತ್ವನಾರ್ಯಂ ಕುರುವೀರಮಧ್ಯೇ
ರಜಸ್ವಲಾಂ ಯತ್ ಪರಿಕರ್ಷಸೇ ಮಾಮ್ ।
ನ ಚಾಪಿ ಕಶ್ಚಿತ್ ಕುರುತೇ ಸ್ಮ ಪೂಜಾಂ
ಬಲಂ ತವೇದಂ ಪರಮಂ ತ್ವವೇಕ್ಷ್ಯ ॥೩೬॥

ಆದರೆ ಎಲೈ ಅನಾರ್ಯನೇ! ರಜಸ್ವಲೆಯಾದ ನನ್ನನ್ನು ಕುರುವೀರರ ಮಧ್ಯೆ ಎಳೆದಾಡುತ್ತಿರುವುದು ನಿನ್ನ ನೀಚವಾದ ಕರ್ಮ. ಇಲ್ಲಿ ನಿನ್ನ ಈ ನೀಚಕರ್ಮವನ್ನು ನೋಡಿ ನಿನ್ನ ಬಲವನ್ನು ನೋಡಿ ಯಾರೂ ನಿನ್ನನ್ನು ಸತ್ಕರಿಸುತ್ತಿಲ್ಲ. ಅಧರ್ಮವು ನಡೆಯುತ್ತಿದೆ.

ಧಿಗಸ್ತು ನಷ್ಟಃ ಖಲು ಭಾರತಾನಾಂ
ಧರ್ಮಸ್ತಥಾ ಧರ್ಮವಿದಾಂ ಚ ವೃತ್ತಮ್ ।
ಯತ್ರ ಹ್ಯತೀತಾಂ ಕುರುಧರ್ಮವೇಲಾಂ
ಪ್ರೇಕ್ಷಂತಿ ಸರ್ವೇ ಕುರವಃ ಸಭಾಯಾಮ್ ॥೩೭॥

ನಿನಗೆ ಧಿಕ್ಕಾರವಿರಲಿ. ಭಾರತವಂಶದವರ ಧರ್ಮವೆತ್ತ ನಡತೆಯು ಈ ದಿನ ನಷ್ಟವಾಯಿತು. ಏಕೆಂದರೆ ಎಲ್ಲಾ ಕುರುಗಳೂ ಸಭೆಯಲ್ಲಿ ಕುರುವಂಶದ ಧರ್ಮದ ಮರ್ಯಾದೆಯನ್ನು ಮೀರಿ ನಡೆಯುತ್ತಿರುವ ನಿನ್ನನ್ನು ನೋಡುತ್ತಿದ್ದಾರೆ.

ದ್ರೋಣಸ್ಯ ಭೀಷ್ಮಸ್ಯ ಚ ನಾಸ್ತಿ ಸತ್ವಂ
ಕ್ಷತ್ತುಸ್ತಥೈವಾಸ್ಯ ಮಹಾತ್ಮನೋಽಪಿ ।
ರಾಜ್ಞಸ್ತಥಾ ಭೀಮಮಧರ್ಮಮುಗ್ರಂ
ನ ಲಕ್ಷಯಂತೇ ಕುರುವೃದ್ಧಮುಖ್ಯಾಃ ॥೩೮॥

ದ್ರೋಣರಿಗಾಗಲೀ ಭೀಷ್ಮರಿಗಾಗಲೀ ಸತ್ವವಿಲ್ಲ. ಮಹಾತ್ಮನಾದ ಈ ವಿದುರನಿಗೂ ಕೂಡ ಸತ್ವವಿಲ್ಲ. ಇಲ್ಲಿ ನೆರೆದಿರುವ ಈ ರಾಜರುಗಳಿಗೂ ಸತ್ವವಿಲ್ಲ. ಕುರುವೃದ್ಧರೂ ಮತ್ತು ಮುಖ್ಯರಾದವರೂ ಸಹ ತಮ್ಮ ಕಣ್ಣೆದುರಿಗೆ ನಡೆದಿರುವ ಈ ಘೋರ ಭಯಂಕರವಾದ ಅಧರ್ಮವನ್ನು ಗಮನಿಸುತ್ತಿಲ್ಲ.

ಇಮಂ ಪ್ರಶ್ನಮಿಮೇ ಬ್ರೂತ ಸರ್ವ ಏವ ಸಭಾಸದಃ ।
ಜಿತಾಂ ವಾಽಪ್ಯಜಿತಾಂ ವಾ ಮಾಂ ಮನ್ಯಧ್ವೇ ಸರ್ವಭೂಮಿಪಾಃ ॥೩೯॥

ಎಲ್ಲಾ ಸಭಾಸದರು ಮತ್ತು ರಾಜರು ಈ ನನ್ನ ಪ್ರಶ್ನೆಗೆ ಉತ್ತರವನ್ನು ಹೇಳಿ. ನಾನು ಜಿತಳಾಗಿದ್ದೇನೆಯೇ? ಅಥವಾ ಇಲ್ಲವೆ? ನಿಮ್ಮ ಅಭಿಪ್ರಾಯವೇನು?

ವೈಶಂಪಾಯನಃ

ತಥಾ ಬ್ರುವಂತೀ ಕರುಣಂ ಸುಮಧ್ಯಾ
ಭರ್ತೄನ್ ಕಟಾಕ್ಷೈಃ ಕುಪಿತಾನಪಶ್ಯತ್ ।
ಸಾ ಪಾಂಡವಾನ್ ಕೋಪಪರೀತದೇಹಾ
ಸಂದೇಶಯಾಮಾಸ ಕಟಾಕ್ಷಪತ್ರೈಃ ॥೪೦॥

ಸುಂದರಿಯಾದ ದ್ರೌಪದಿಯು ಹೀಗೆ ಮಾತನಾಡುತ್ತಾ ಓರೆಗಣ್ಣಿನಿಂದ ತನ್ನ ಪತಿಗಳು ಕುಪಿತರಾಗಿರುವುದನ್ನು ನೋಡಿದಳು. ಕೋಪದಿಂದ ಪೂರ್ಣವಾದ ದೇಹವನ್ನು ಹೊಂದಿದ್ದ ಅವಳು ತನ್ನ ಕಟಾಕ್ಷ ಎಂಬ ಪತ್ರಗಳಿಂದಲೇ ಸಂದೇಶವನ್ನು ಕಳುಹಿಸಿದಳು.

ಹೃತೇನ ರಾಜ್ಯೇನ ತಥಾ ಧನೇನ
ರತ್ನೈಶ್ಚ ಮುಖ್ಯೈರ್ನ ತಥಾ ಬಭೂವ ।
ಯಥಾ ತಥಾ ಕೋಪಸಮೀರಿತೇನ
ಕೃಷ್ಣಾಕಟಾಕ್ಷೇಣ ಬಭೂವ ದುಃಖಮ್ ॥೪೧॥

ಪಾಂಡವರಿಗೆ ಕೋಪಪೂರ್ಣವಾದ ದ್ರೌಪದಿಯ ಕಟಾಕ್ಷ ಸಂದೇಶದಿಂದ ಎಂತಹ ದುಃಖವು ಉಂಟಾಯಿತೋ ಅಂತಹ ದುಃಖವು ರಾಜ್ಯವನ್ನು ಕಳೆದುಕೊಂಡಾಗಲಾಗಲೀ ಅಥವಾ ಧನವನ್ನು ಕಳೆದುಕೊಂಡಾಗಲಾಗಲೀ ಶ್ರೇಷ್ಠರತ್ನಗಳನ್ನು ಕಳೆದುಕೊಂಡಾಗಲಾಗಲೀ ಆಗಿರಲಿಲ್ಲ.

ದುಶ್ಶಾಸನಶ್ಚಾಪಿ ಸಮೀಕ್ಷ್ಯ ಕೃಷ್ಣಾಮ್
ಅವೇಕ್ಷಮಾಣಾಂ ಕೃಪಣಾಂ ಪತೀಂಸ್ತಾನ್ ।
ಆಧೂಯ ವೇಗೇನ ವಿಸಂಜ್ಞಕಲ್ಪಾಮ್
ಉವಾಚ ದಾಸೀತಿ ಹಸನ್ನಿವೋಗ್ರಮ್ ॥೪೨॥

ದುಶ್ಶಾಸನನು ಸಹ ದ್ರೌಪದಿಯು ತನ್ನ ಕೃಪಣರಾದ ಪತಿಗಳನ್ನು ನೋಡುತ್ತಿರುವುದನ್ನು ಗಮನಿಸಿ ಪ್ರಜ್ಞೆಯನ್ನು ಕಳೆದುಕೊಳ್ಳುವ ಸ್ಥಿತಿಗೆ ಹತ್ತಿರವಾದ ಸ್ಥಿತಿಯಲ್ಲಿದ್ದ ಅವಳನ್ನು ವೇಗದಿಂದ ಎಳೆದು ನಗುತ್ತಾ ದಾಸಿ ದಾಸಿ ಎಂದು ಉಗ್ರವಾಗಿ ಕರೆದನು.

ಕರ್ಣಸ್ತು ತದಾಕ್ಯಮತೀವ ಹೃಷ್ಟಃ
ಸಂಪೂಜಯಾಮಾಸ ಹಸನ್ ಸಶಬ್ದಮ್ ।
ಗಾಂಧಾರರಾಜಃ ಸುಬಸ್ಯ ಪುತ್ರಃ
ತಥೈವ ದುಶ್ಶಾನಸಮಭ್ಯನಂದತ್ ॥೪೩॥

ಕರ್ಣನು ಸಂತೋಷದಿಂದ ಗಟ್ಟಿಯಾಗಿ ನಗುತ್ತಾ ದುಶ್ಶಾಸನನ ಮಾತುಗಳನ್ನು ಸತ್ಕರಿಸಿದನು. ಸುಬಲನ ಪುತ್ರನಾದ ಗಾಂಧಾರರಾಜನಾದ ಶಕುನಿಯು ಸಹ ದುಶ್ಶಾಸನನನ್ನು ಅಭಿನಂದಿಸಿದನು.

ಸಭ್ಯಾಸ್ತು ಯೇ ತತ್ರ ಬಭೂವುರನ್ಯೇ
ತಾಭ್ಯಾಮೃತೇ ಧಾರ್ತರಾಷ್ಟ್ರೇಣ ಚೈವ ।
ತೇಷಾಮಭೂದ್ ದುಃಖಮತೀವ ಕೃಷ್ಣಾಂ
ದೃಷ್ಟ್ವಾ ಸಭಾಯಾಂ ಪರಿಕೃಷ್ಯಮಾಣಾಮ್ ॥೪೪॥

ಕರ್ಣ ಶಕುನಿಗಳನ್ನು ಬಿಟ್ಟು ದುರ್ಯೋಧನನ್ನೂ ಬಿಟ್ಟು ಅಲ್ಲಿದ್ದ ಉಳಿದ ಎಲ್ಲಾ ಸಭ್ಯರಿಗೂ ಸಹ ಸಭೆಯಲ್ಲಿ ಹಾಗೆ ಎಳೆದಾಡಲ್ಪಡುತ್ತಿರುವ ದ್ರೌಪದಿಯನ್ನು ನೋಡಿ ಬಹಳ ದುಃಖ ಉಂಟಾಯಿತು.

ಭೀಷ್ಮಃ

ನ ಧರ್ಮಸೌಕ್ಷ್ಮ್ಯಾತ್ ಸುಭಗೇ ವಿವೇಕ್ತುಂ
ಶಕ್ನೋಮಿ ತೇ ಪ್ರಶ್ನಮಿಮಂ ಯಥಾವತ್ ।
ಅಸ್ವೋಪ್ಯಶಕ್ತಃ ಪಣಿತುಂ ಪರಸ್ವಂ
ಸ್ತ್ರಿಯಾಶ್ಚ ಭರ್ತುರ್ವಶತಾಂ ಸಮೀಕ್ಷ್ಯ ॥೪೫॥

ಸೌಭಾಗ್ಯವತಿಯೇ! ಧರ್ಮವು ಸೂಕ್ಷ್ಮವಾದುದರಿಂದ ನಿನ್ನ ಪ್ರಶ್ನೆಗೆ ಸರಿಯಾದ ಉತ್ತರವನ್ನು ಹೇಳಲಾರೆ. ತನ್ನಲ್ಲಿ ಧನವಿಲ್ಲದವನು ಪರಧನವನ್ನು ಪಣಕ್ಕೆ ಒಡ್ಡಲು ಸಾಧ್ಯವಿಲ್ಲ. ಮತ್ತು ಸ್ತ್ರೀಯರು ಯಾವಾಗಲೂ ಪತಿಯ ವಶರಾದವರು ಎಂಬ ವಿಷಯಗಳನ್ನು ತಿಳಿದು ನಾನು ಉತ್ತರವನ್ನು ಕೊಡಲಾರೆ.

ತ್ಯಜೇದ್ಧಿ ಸರ್ವಾಂ ಪೃಥಿವೀಂ ಸಮೃದ್ಧಾಂ
ಯುಧಿಷ್ಠಿರಃ ಸತ್ಯಮಥೋ ನ ಜಹ್ಯಾತ್ ।
ಉಕ್ತಂ ಜಿತೋಽಸ್ಮೀತಿ ಚ ಪಾಂಡವೇನ
ತಸ್ಮಾನ್ನ ಶಕ್ನೋಮಿ ಏವೇಕ್ತುಮೇತತ್ ॥೪೬॥

ಯುಧಿಷ್ಠಿರನು ಸಮೃದ್ಧವಾದ ಪೃಥಿವಿಯನ್ನಾದರೂ ತ್ಯಜಿಸಬಹುದು. ಆದರೆ ಎಂದೂ ಸತ್ಯವನ್ನು ತ್ಯಜಿಸಲಾರ. ಪಾಂಡವನಾದ ಅವನು ನಾನು ಪರಾಜಿತನಾಗಿದ್ದೇನೆ ಎಂದು ಹೇಳಿದ್ದಾನೆ. ಆದ್ದರಿಂದ ನಿನ್ನ ಪ್ರಶ್ನೆಯನ್ನು ಬಿಡಿಸಲು ನಾನು ಸಮರ್ಥನಾಗಿರುವುದಿಲ್ಲ.

ದ್ಯೂತೇಽದ್ವಿತೀಯಃ ಶಕುನಿರ್ನರೇಷು
ಕುಂತೀಸುತಸ್ತೇನ ನಿಸೃಷ್ಟ(ನಿಕೃತ್ತ)ಕಾಮಃ ।
ನ ಮನ್ಯತೇ ತಾಂ ನಿಕೃತಿಂ ಮಹಾತ್ಮಾ
ತಸ್ಮಾನ್ನ ತೇ ಪ್ರಶ್ನಮಿಮಂ ಬ್ರವೀಮಿ ॥೪೭॥

ಭೂಮಿಯ ಮೇಲೆ ಇರುವ ನರರಲ್ಲಿ ಶಕುನಿಯ ದ್ಯೂತದಲ್ಲಿ ಅದ್ವಿತಿಯನಾದವನು. ಕುಂತೀಸುತನು ಅವನಿಂದ ತನ್ನ ಎಲ್ಲಾ ವಸ್ತುಗಳನ್ನು ಕಳೆದು ಕೊಂಡಿದ್ದಾನೆ. ಆದರೆ ಮಹಾತ್ಮನಾದ ಅವನು ಅದನ್ನು ಮೋಸವೆಂದು ಹೇಳುತ್ತಿಲ್ಲ. ಆದ್ದರಿಂದ ನಿನ್ನ ಪ್ರಶ್ನೆಗೆ ಉತ್ತರವನ್ನು ಕೊಡಲಾರೆ.

ದ್ರೌಪದೀ

ಆಹೂಯ ರಾಜಾ ಕುಶಲೈಃ ಸಭಾಯಾಂ
ಧೃಷ್ಟಾತ್ಮಭಿರ್ನೈಕೃತಿಕೈರನಾರ್ಯೈಃ ।
ದ್ಯೂತಪ್ರಿಯೈರ್ನಾತಿಕೃತಪ್ರಯತ್ನಃ
ಕಸ್ಮಾದಯಂ ನಾಮ ನಿಕೃಷ್ಟಕಾಮಃ ॥೪೮॥

ದ್ಯೂತದಲ್ಲಿ ಅಪ್ಪು ಪರಿಶ್ರಮವನ್ನು ಹೊಂದಿರದ ಧರ್ಮರಾಜನನ್ನು ದ್ಯೂತದಲ್ಲಿ ಕುಶಲನಾದ ದುಷ್ಟಸ್ವಭಾವವನ್ನು ಹೊಂದಿದ ಮೋಸಗಾರರಾದ, ದ್ಯೂತ ಪ್ರಿಯರಾದ ಅನಾರ್ಯರೆಲ್ಲರೂ ಸೇರಿ ದ್ಯೂತವನ್ನು ಮಾಡಿ ಸೋಲಿಸಿದಾಗ ಅವನು ಹೇಗೆ ತನ್ನ ಎಲ್ಲಾ ಧನವನ್ನು ಕಳೆದುಕೊಳ್ಳುತ್ತಾನೆ?

ಸ ಶುದ್ಧಕಾಮೋ ನಿಕೃತಿಪ್ರವೃತ್ತಿಮ್
ಅಬುಧ್ಯಮಾನಃ ಕುರುಪಾಂಡವಾಗ್ರ್ಯಃ ।
ಸಂಭೂಯ ಸರ್ವೈಶ್ಚ ಜಿತೋಽಪಿ ಯಸ್ಮಾತ್
ಪಶ್ಚಾಚ್ಚ ತತ್ ಕೈತವಮಭ್ಯುಪೇತಃ ॥೪೯॥

ಶುದ್ಧಮನಸ್ಸಿನ ಅವನು ಮೋಸದ ಪ್ರವೃತ್ತಿಯನ್ನು ತಿಳಿಯದಂತಹ ಕುರು ಪಾಂಡವಾಗ್ರಗಣ್ಯನಾದವನು. ಅವನನ್ನು ಎಲ್ಲರೂ ಸೇರಿ ದ್ಯೂತದಲ್ಲಿ ಕೆಡವಿ ಬೇರೆ ಧನವಿಲ್ಲದಂತೆ ಮಾಡಿದ ಮೇಲೆ ಅವನು ಇಂತಹ ಪಣಗಳನ್ನು ಒಡ್ಡಿದ್ದಾನಷ್ಟೇ ?

ತಿಷ್ಠಂತಿ ಚೇಮೇ ಕುರವಃ ಸಭಾಯಾಮ್
ಈಶಾಃ ಸುತಾನಾಂ ಚ ತಥಾ ಸ್ನುಷಾಣಾಮ್ ।
ಸಮೀಕ್ಷ್ಯ ಸರ್ವೇ ಮಮ ಚಾಪಿ ವಾಕ್ಯಂ
ಬ್ರುವಂತು ಮೇ ಪ್ರಶ್ನಮಿಮಂ ಯಥಾವತ್ ॥೫೦॥

ಈ ಸಭೆಯಲ್ಲಿ ಕುರುಗಳಿದ್ದಾರೆ. ಅವರು ಹೇಗೆ ತಮ್ಮ ಮಕ್ಕಳ ಮೇಲೆ ಪ್ರಭುತ್ವವನ್ನು ಹೊಂದಿದ್ದಾರೆಯೋ ಹಾಗೆಯೇ ಸೊಸೆಯರ ಮೇಲೆಯೂ ಪ್ರಭುತ್ವವನ್ನು ಹೊಂದಿದ್ದಾರೆ. ಅವರೆಲ್ಲರೂ ಎಲ್ಲಾ ವಿಷಯಗಳನ್ನು ಮತ್ತು ನನ್ನ ಮಾತನ್ನು ಗಮನಿಸಿ ನನ್ನ ಪ್ರಶ್ನೆಗೆ ಸರಿಯಾದ ಉತ್ತರವನ್ನು ಹೇಳಿ.

ನ ಸಾ ಸಭಾ ಯತ್ರ ನ ಸಂತಿ ವೃದ್ಧಾ
ನ ತೇ ವೃದ್ಧಾ ಯೇ ನ ವದಂತಿ ಧರ್ಮಮ್ ।
ನಾಸೌ ಧರ್ಮೋ ಯತ್ರ ನ ಸತ್ಯಮಸ್ತಿ
ನ ತತ್ ಸತ್ಯಂ ಯಚ್ಛಲೇನಾನುವಿದ್ಧಮ್ ॥೫೧॥

ಎಲ್ಲಿ ವೃದ್ಧರಿರುವುದಿಲ್ಲವೋ ಅದು ಸಭೆಯಲ್ಲ ಯಾರು ಧರ್ಮವನ್ನು ಹೇಳುವುದಿಲ್ಲವೋ ಅವರು ವೃದ್ಧರಲ್ಲ. ಎಲ್ಲಿ ಸತ್ಯವಿಲ್ಲವೋ ಅದು ಧರ್ಮವಲ್ಲ. ಯಾವುದು ಮೋಸದಿಂದ ಕೂಡಿರುತ್ತದೆಯೋ ಅದು ಸತ್ಯವಲ್ಲ.

ವೈಶಂಪಾಯನಃ

ತಥಾ ಬ್ರುವಂತೀಂ ಕರುಣಂ ರುದಂತೀಮ್
ಅವೇಕ್ಷಮಾಣಾಮಸಕೃತ್ ಪತೀಂಸ್ತಾನ್ ।
ದುಶ್ಶಾಸನಃ ಪರುಷಾಣ್ಯಪ್ರಿಯಾಣಿ
ವಾಕ್ಯಾನ್ಯುವಾಚಾಮಧುರಾಣಿ ಚೈವ ॥೫೨॥

ಹೀಗೆ ಕರುಣಾಜನಕವಾಗಿ ಮಾತನಾಡುತ್ತಾ ಅಳುತ್ತಾ ತನ್ನ ಪತಿಗಳನ್ನು ಮತ್ತೆ ಮತ್ತೆ ನೋಡುತ್ತಿದ್ದ ಅವಳನ್ನು ಕುರಿತು ದುಶ್ಶಾಸನನು ಕ್ರೂರವಾದಕಿವಿಯಿಂದ ಕೇಳಲು ಸಾಧ್ಯವಾಗದ ನಿಷ್ಠುರವಾದ ಮಾತುಗಳನ್ನು ಆಡಿದನು.

ತಾಂ ಕ್ಲಿಶ್ಯಮಾನಾಂ ಚ ರಜಸ್ವಲಾಂ ಚ
ಸ್ರಸ್ತೋತ್ತರೀಯಾಮತದರ್ಹಮಾಣಾಮ್ ।
ವೃಕೋದರಃ ಪ್ರೇಕ್ಷ್ಯ ಯುಧಿಷ್ಠಿರಸ್ಯ
ಚಕಾರ ರೋಷಂ ಪರಮಾರ್ತರೂಪಃ ॥೫೩॥

ಅವನ ಕೈಯಲ್ಲಿ ಸಿಲುಕಿ ಒದ್ದಾಡುತ್ತಿರುವ, ರಜಸ್ವಲೆಯಾದ, ವಸ್ತ್ರವು ಜಾರುತ್ತಿರುವ, ಅಂತಹ ಅವಮಾನಕ್ಕೆ ಯೋಗ್ಯಳಲ್ಲದ ದ್ರೌಪದಿಯನ್ನು ನೋಡಿ, ಭೀಮಸೇನನು ಪರಮಾರ್ತಿಯಿಂದ ಕೂಡಿದವನಾಗಿ ಯುಧಿಷ್ಠಿರನ ಮೇಲೆ ರೋಷವನ್ನು ಹೊಂದಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಸಪ್ತಾಶೀತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ಏಕೋನವಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಂಭತ್ತೇಳನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ದೃಷ್ಟ್ವಾ ಭೀಮಃ ಕ್ಲಿಶ್ಯಮಾನಾಂ ತು ಕೃಷ್ಣಾಂ
ಧರ್ಮಾತ್ಯಯಂ ಧರ್ಮರಾಜೇ ಚ ದೃಷ್ಟ್ವಾ ।
ರಾಜಾ ಶಾಸ್ಯೋ ಯುವರಾಜೇನ ಧರ್ಮಾ-
ಚ್ಚಲನ್ ಯಸ್ಮಾದ್ ವಾಕ್ಯಮಿದಂ ಬಭಾಷೇ ॥೩೪೧॥

ಇಮಾಂ ನ್ಯಸ್ತವತೋ ದ್ಯೂತೇ ಧಕ್ಷ್ಣೋಯೌ ಹಿ ತೇ ಭುಜೌ ।
ನೈವಮಿತ್ಯರ್ಜುನೋಽವಾದೀತ್ ತಮಾಹಾಥ ವೃಕೋದರಃ ।
ವಕ್ತವ್ಯಂ ನ ತು ಕರ್ತವ್ಯಂ ತಸ್ಮಾನ್ನ ಹಿ ಮಯಾ ಕೃತಂ ॥೩೪೨॥

ದ್ರೌಪದಿ ಕ್ಲೇಶಪಡುವುದನ್ನೂ ಧರ್ಮರಾಜನಲ್ಲಿ ಧರ್ಮಚ್ಯುತಿಯಾಗಿರುವುದನ್ನೂ ಕಂಡು, ರಾಜ ಧರ್ಮಮಾರ್ಗದಿಂದ ದೂರ ಸರಿಯುವಾಗ ಯುವರಾಜ ಅವನಿಗೆ ಶಾಸನ ಮಾಡಬೇಕೆಂದು, 'ದ್ರೌಪದಿಯನ್ನು ಜೂಜಿನಲ್ಲಿ ಪಣಕ್ಕಿಟ್ಟ ನಿನ್ನ ಕೈಗಳನ್ನು ಸುಡಬೇಕು' ಎಂದ. 'ಅಣ್ಣ! ಹಾಗೆ ಹೇಳಬೇಡ' ಎಂದ ಅರ್ಜುನ. ಆಗ ಭೀಮ ನುಡಿದ, 'ಹೇಳಬೇಕು, ಮಾಡಬಾರದು. ಅದರಿಂದಲೆ ನಾನು ಮಾಡಲಿಲ್ಲ'.

ಉತ್ತಮೇ ವಚಸಾ ಶಿಕ್ಷಾ ಮಧ್ಯಮೇಽರ್ಥಾಪಹಾರಣಂ ।
ಅಧಮೇ ದೇಹದಂಡಶ್ಚ ತಸ್ಮಾದ್‌ವಾಚ್ಯೋ ಯುಧಿಷ್ಠಿರಃ ॥೩೪೩॥

ಉತ್ತಮರಿಗೆ ಮಾತಿನಿಂದಲೆ ಶಿಕ್ಷೆ. ಮಧ್ಯಮರಿಗೆ ಧನಾಪಹಾರ. ಅಧಮರಿಗೆ ದೇಹದಂಡನೆ. ಅದರಿಂದ ನಾನು ಯುಧಿಷ್ಠಿರನಿಗೆ ಮಾತಿನಿಂದ ಹೇಳಬೇಕು.

ಅಥ ಕರ್ಣೋಽಬ್ರವೀತ್ ಕೃಷ್ಣಾಮಪತಿರ್ಹ್ಯಸಿ ಶೋಭನೇ ।
ಧಾರ್ತರಾಷ್ಟ್ರಗೃಹಂ ಯಾಹೀತ್ಯಥ ದುರ್ಯೋಧನೋಽವದತ್ ॥೩೪೪॥

ಪರಸ್ಪರ ವಿರೋಧಾರ್ಥಂ ಪಾಂಡವಾನಾಮಿದಂ ವಚಃ ॥೩೪೫॥

ಯುಧಿಷ್ಠಿರೋ ದುಃಖಹೇತುಸ್ತವೈಕೋ
ಯದ್ಯೇನಮನ್ಯೇ ನ ಗುರುರ್ನ ಏಷಃ ।
ಇತಿ ಬ್ರೂಯುರಥವಾ ಭೀಮಪಾರ್ಥಾ-
ವೇಕೇಽಪಿ ವಾ ಭೀಮ ಇಹೋತ್ಸ್ಮಜೇತ್ವಾಮ್ ॥೩೪೬॥

ಬಳಿಕ ಕರ್ಣ ದ್ರೌಪದಿಗೆ ಹೇಳಿದ, 'ಸುಂದರಿ, ನಿನಗೆ ಇನ್ನು ಪತಿಗಳಿಲ್ಲ. ದುರ್ಯೋಧನನ ಮನೆಗೇ ಹೋಗು'. ದುರ್ಯೋಧನನೂ ಪಾಂಡವರಲ್ಲಿ ಪರಸ್ಪರ ವಿರೋಧ ಉಂಟುಮಾಡುವ ಉದ್ದೇಶದಿಂದ ಈ ಮಾತನ್ನು ನುಡಿದ- 'ದ್ರೌಪದಿ ಯುಧಿಷ್ಠಿರನೊಬ್ಬನೇ ನಿನಗೆ ಈ ರೀತಿ ದುಃಖ ನೀಡುವವನು. ಉಳಿದವರು ಈತನನ್ನು ನಮಗೆ ಈತ ಪೂಜ್ಯನಲ್ಲ ಎನ್ನಲಿ, ನಾನು ನಿನ್ನನ್ನು ಬಿಟ್ಟು ಬಿಡುತ್ತೇನೆ. ಭೀಮಾರ್ಜುನರಾಗಲಿ, ಕೊನೆಗೆ ಭೀಮನೊಬ್ಬನೆ ಆಗಲಿ ಹಾಗೆ ಹೇಳಿದರೂ ನಿನ್ನನ್ನು ಬಿಟ್ಟುಬಿಡುತ್ತೇನೆ'.

ಇತ್ಯುಕ್ತ ಊಚೇ ಪವಮಾನಸೂನುಃ
ಪೂಜ್ಯೋಽಸ್ಮಾಕಂ ಧರ್ಮಜೋಽಸಂಶಯೇನ ।
ಗುರುಶ್ಚಾಹಂ ವೋಽಖಿಲಾನಾಂ ಯತೋ ಹಿ
ಬಲಜ್ಯೇಷ್ಠಂ ಕ್ಷತ್ರಮಾಹುರ್ಮಹಾಂತಃ ॥೩೪೭॥

ಆಗ ಭೀಮನೆಂದ, ಧರ್ಮರಾಜ ನಮಗೆಲ್ಲರಿಗೂ ಪೂಜ್ಯನೆ. ಇದರಲ್ಲಿ ಸಂಶಯವಿಲ್ಲ. ನಾನು ನಿಮಗೆಲ್ಲರಿಗೂ ಪೂಜ್ಯ. ಏಕೆಂದರೆ ಕ್ಷತ್ರಿಯರಲ್ಲಿ ಯಾರು ಹೆಚ್ಚು ಬಲಿಷ್ಠನೋ ಅವನು ಪೂಜ್ಯ ಎನ್ನುತ್ತಾರೆ ಹಿರಿಯರು.

ಬಲಜ್ಯೈಷ್ಠ್ಯೇ ಯದಿ ವಃ ಸಂಶಯಃ ಸ್ಯಾ-
ದುತ್ತಿಷ್ಠಧ್ವಂ ಸರ್ವ ಏವಾದ್ಯ ವೀರಾಃ ।
ಮೃದ್ನಾಮಿ ವಃ ಪಾದತಳೇನ ಸರ್ವಾನ್
ಸಹಾನುಬಂಧಾನ್ ಯಶ್ಚ ಮಾಂ ಯೋದ್ಧುಕಾಮಃ ॥೩೪೮॥

ಬಲದಲ್ಲಿ ನಾನು ನಿಮ್ಮೆಲ್ಲರನ್ನೂ ಮೀರಿಸಿರುವೆನೆಂಬ ವಿಷಯದಲ್ಲಿ ನಿಮಗೆ ಸಂಶಯವಿರುವುದೇ ಆದರೆ ಈಗಲೆ ಎಲ್ಲ ವೀರರೂ ಎದ್ದೇಳಿರಿ. ಎಲ್ಲರನ್ನೂ ಪರಿವಾರ ಸಮೇತ ನನ್ನ ಕಾಲಿಂದ ತುಳಿದು ಹೊಸಕಿ ಹಾಕುತ್ತೇನೆ. ಯಾರು ನನ್ನೊಡನೆ ಹೋರಾಡಲು ಬಯಸುತ್ತಾನೆ?

ಇತಿ ಬ್ರುವನ್ ಸಮುತ್ಥಿತೋ ನದನ್ ವೃಕೋದರೋ ಯದಾ ।
ವಿಘೂರ್ಣಿತಾ ಸಭಾಽಖಿಲಾ ಭಯಾನ್ನ ಚಾಹ ಕಿಂಚನ ॥೩೪೯॥

ಹೀಗೆ ಹೇಳುತ್ತ ಗುಡುಗುತ್ತ ಭೀಮನೆದ್ದು ನಿಂತಾಗ ಇಡೀ ಸಭೆ ಭಯದಿಂದ ನಡುಗಿ ಏನೂ ಹೇಳದಾಯಿತು.

ಭೀಷ್ಮೋ ದ್ರೋಣೋ ವಿದುರಾದ್ಯಾಃ ಕ್ಷಮಸ್ವ
ಸರ್ವಂ ತ್ವಯೋಕ್ತಂ ಸತ್ಯಮಿತ್ಯೇವ ಹಸ್ತೌ ।
ಗೃಹೀತ್ವೈನಂ ಸ್ಥಾಪಯಾಮಾಸುರಸ್ಮಿನ್-
ಸ್ತಿತೇ ಶಾಂತಿಂ ಚಾಪಿರೇ ಧಾರ್ತರಾಷ್ಟ್ರಾಃ ॥೩೫೦॥

ಭೀಷ್ಮ ದ್ರೋಣ ವಿದುರ ಮುಂತಾದವರು 'ತಾಳು ಭೀಮಸೇನ. ನೀನು ಹೇಳಿದುದೆಲ್ಲವೂ ನಿಜವೆ' ಎಂದು ಎರಡೂ ಕೈಗಳನ್ನು ಹಿಡಿದು ಕೂಡಿಸಿದರು. ಭೀಮ ಸುಮ್ಮನಾದ, ಕೌರವರು ನೆಮ್ಮದಿ ಹೊಂದಿದರು.

ನಿವಾರಿತೋ ಧರ್ಮಜೇನ ಗುರುಭಿಶ್ಚಾಪರೈಸ್ತದಾ ।
ಮಾನನಾರ್ಥಂ ಗುರೂಣಾಂ ತು ನ ಭೀಮಸ್ತಾನ್ ಜಘಾನ ಹ ॥

ಧರ್ಮರಾಜನೂ ಭೀಮನನ್ನು ತಡೆದ, ಬೇರೆ ಹಿರಿಯರೂ ತಡೆದರು ಎಂದು ಹಿರಿಯರಿಗೆ ಗೌರವ ಕೊಡುವುದಕ್ಕಾಗಿ ಭೀಮ ಕೌರವರನ್ನು ಆಗ ಕೊಲ್ಲಲಿಲ್ಲ.

ನಚಾತ್ಯವರ್ತತ ಜ್ಯೇಷ್ಠಂ ಧರ್ಮಾತ್ಮಾನಂ ಯುಧಿಷ್ಠಿರಂ ।
ತೇಷಾಂ ಪಾಪಾಭಿವೃದ್ಧ್ಯರ್ಥಂ ಜ್ಯೇಷ್ಠವೃತ್ತಿಂ ಚ ದರ್ಶಯನ್ ॥೩೫೨॥

ಕೌರವರ ಪಾಪ ಇನ್ನೂ ಹೆಚ್ಚುವುದಕ್ಕಾಗಿ ಮತ್ತು ಅಣ್ಣನಲ್ಲಿ ತಮ್ಮ ಹೇಗೆ ವರ್ತಿಸಬೇಕೆನ್ನುವುದನ್ನು ತೋರುವುದಕ್ಕಾಗಿ ಭೀಮ ಧರ್ಮಾತ್ಮನಾದ ಯುಧಿಷ್ಠಿರನ ಮಾತನ್ನು ಮೀರಲಿಲ್ಲ.

ಅಥ ದುರ್ಯೋಧನಃ ಪಾಪೋ ಭೀಮಸೇನಸ್ಯ ಪಶ್ಯತಃ ।
ಊರುಂ ಸಂದರ್ಶಯಾಮಾಸ ಕೃಷ್ಣಾಯೈಃ ಭೀಮ ಆಹ ತಂ ॥೩೫೩॥

ತವೋರುಮೇನಂ ಗದಯೋರುವೇಗಯಾ
ಬಿಭೇತ್ಸ್ಯ ಇತ್ಯೇವ ಪುನಃ ಸುಯೋಧನಃ ।
ಊಚೇ ನಾನ್ಯದ್ ಭವತಾಮಸ್ತಿ ವಿತ್ತಂ
ದ್ಯೂತೇ ಕೃಷ್ಣಂ ಸ್ಥಾಪಯಧ್ವಂ ಪಣಾಯ ॥೩೫೪॥

ಬಳಿಕ ಪಾಪಿ ದುರ್ಯೋಧನ ಭೀಮಸೇನ ನೋಡುತ್ತಿದ್ದಂತೆಯೆ ದ್ರೌಪದಿಗೆ ತನ್ನ ತೊಡೆಯನ್ನು ತೋರಿದ. ಭೀಮ ಹೇಳಿದ, 'ನಿನ್ನ ಈ ತೊಡೆಯನ್ನು ಬಲು ವೇಗದ ನನ್ನ ಗದೆಯಿಂದ ಕುಟ್ಟಿಪುಡಿ ಮಾಡುತ್ತೇನೆ. ನಿಶ್ಚಯ'. ದುರ್ಯೋಧನನೆಂದ 'ನಿಮಗೆ ಜೂಜಿನಲ್ಲಿ ಪಣವಾಗಿಡಲು ಇನ್ನು ಬೇರೆ ಸಂಪತ್ತು ಏನೂ ಇಲ್ಲ. ಕೃಷ್ಣನನ್ನು ಪಣವಾಗಿಟ್ಟು ಆಡಿರಿ'.

ಅಥಾಬ್ರವೀದ್ ವೃಕೋದರಃ ಕೃತೇऽವಮಾನನೇ ಹರೇಃ ।
ನಿಪಾತ್ಯ ಭೂತಳೇ ಹಿ ತೇ ಶಿರೋ ಮೃದಿಷ್ಯ ಇತ್ಯಲಂ ॥೩೫೫॥

ಹೀಗೆ ದುರ್ಯೋಧನ ಶ್ರೀಕೃಷ್ಣನಿಗೆ ಅವಮಾನ ಮಾಡಿದಾಗ ಭೀಮನೆಂದ, 'ನಿನ್ನನ್ನು ನೆಲದ ಮೇಲೆ ಕೆಡವಿ ತಲೆಯನ್ನು ಚೆನ್ನಾಗಿ ತುಳಿಯುವೆನು'.

ಸ ವಧ್ಯ ಏವ ಮೇ ಸದಾ ಪರೋಕ್ಷತೋऽಪಿ ಯೋ ಹರಿಂ ।
ವಿನಿಂದಯೇದಿತಿ ಧ್ರುವಂ ಪ್ರತಿಶ್ರುತಂ ಹಿ ಮಾರುತೇಃ ॥೩೫೬॥

ಪರೋಕ್ಷದಲ್ಲಿಯಾದರೂ ಸರಿಯೆ, ಯಾರು ಹರಿಯನ್ನು ನಿಂದಿಸುವನೋ ಅವನು ಸದಾ ನನಗೆ ವಧಾರ್ಹನೇ ಆಗುತ್ತಾನೆ ಎಂಬುದು ಭೀಮನ ದೃಢಪ್ರತಿಜ್ಞೆ.

ಪುನಶ್ಚ ಪಾಪವೃದ್ಧಯೇ ತದೈವ ನೋ ಜಘಾನ ತಂ ।
ವಿಕರ್ತನಾತ್ಮಜಃ ಪುನರ್ಜಗಾದ ಸೋಮಕಾತ್ಮಜಾಂ ॥೩೫೭॥

ಪ್ರಯಾಹಿ ಭೂಭೃತೋ ಹಿ ನೋ ಗೃಹಂ ನ ಸಂತಿ ಪಾಂಡವಾಃ ।
ಇತೀರಿತೇ ಸಮುತ್ಥಿತೋ ವೃಕೋದರೋऽನು ಚಾರ್ಜುನಃ ।
ಉಭೌ ಚ ತೌ ಯುಧಿಷ್ಠಿರೋ ನ್ಯವಾರಯತ್ ತಥಾಪರೇ ॥೩೫೮॥

ಇನ್ನಷ್ಟು ಪಾಪ ವೃದ್ಧಿಯಾಗಲಿ ಎಂದು ಭೀಮ ಆಗಲೆ ದುರ್ಯೋಧನನನ್ನು ಕೊಲ್ಲದೆ ಬಿಟ್ಟ. ಕರ್ಣ ಪುನಃ ದ್ರೌಪದಿಗೆ ಹೇಳಿದ 'ನಿನಗೆ ಇನ್ನು ಈ ಪಾಂಡವರಿಲ್ಲ. ನೀನು ಇನ್ನು ನಮ್ಮ ರಾಜನಾದ ದುರ್ಯೋಧನನ ಮನೆಗೇ ಹೋಗು'. ಕರ್ಣ ಹೀಗೆ ಹೇಳಿದಾಗ ಭೀಮ ಎದ್ದ. ಅರ್ಜುನನೂ ಎದ್ದ. ಆಗ ಅವರನ್ನು ಯುಧಿಷ್ಠಿರನೂ ಇನ್ನಿತರರೂ ತಡೆದರು.

ತತೋ ನಿಷಣ್ಣಯೋಸ್ತಯೋಃ ಸುಯೋಧನೋ ವಚೋಽಬ್ರವಿತ್ ।
ದುಶ್ಶಾಸನೈಷಾಂ ವಾಸಾಂಸಿ ದಾಸಾನಾಂ ನೋ ವ್ಯಪಾಕುರು ॥೩೫೯॥

ಇತ್ಯುಕ್ತೋಽಭ್ಯಗಮತ್ ಪಾರ್ಥಾನ್ ಸ್ವವಾಸಾಂಸ್ಯಥ ತೇ ದದುಃ ।
ತೇ ಚರ್ಮವಸನಾ ಭೂತ್ವಾ ತಾನಶಿಷ್ಟಾನ್ಪ್ರಕಾಶ್ಯ ಚ ।
ನಿಷೇದುಶ್ಚ ಕ್ಷಮಾಯಾಂ ತೇ ಕ್ಷಮಾಮಾಲಂಬ್ಯ ವಿಸ್ಮತಾಂ ॥೩೬೦॥

ಭೀಮಾರ್ಜುನರು ಕುಳಿತ ಮೇಲೆ ದುರ್ಯೋಧನನೆಂದ 'ದುಃಶಾಸನ, ಇವರು ನಮ್ಮ ದಾಸರು. ಅವರ ಉಟ್ಟ ಬಟ್ಟೆಗಳನ್ನು ತೆಗೆ'. ಹೀಗೆ ಹೇಳಿದಾಗ ದುಃಶಾಸನ ಪಾಂಡವರ ಬಳಿಗೆ ನಡೆದ. ಪಾಂಡವರು ಅತ್ಯಂತ ತಾಳ್ಮೆ ವಹಿಸಿ ತಮ್ಮ ಬಟ್ಟೆಗಳನ್ನು ಬಿಚ್ಚಿಕೊಟ್ಟರು. ಕೃಷ್ಣಾಜಿನವನ್ನು ಉಟ್ಟು ಕೌರವರನ್ನು ಅಸಭ್ಯರೆಂದು ತೋರಿಸುತ್ತ ನೆಲದ ಮೇಲೆ ಕುಳಿತರು.

ಪುನರ್ದುರ್ಯೋಧನೇನೋಕ್ತಃ ಪಾರ್ಥಾನಾಮಥ ಪಶ್ಯತಾಮ್ ।
ಚಕರ್ಷ ವಾಸೋ ದ್ರೌಪದ್ಯಾಸ್ತದಾವಾದೀದ್ ವೃಕೋದರಃ ॥೩೬೧॥

ಪುನಃ ದುರ್ಯೋಧನನ ಮಾತಿನಂತೆ ದುಃಶಾಸನ ಪಾಂಡವರು ನೋಡುತ್ತಿದ್ದಂತೆಯೆ ದ್ರೌಪದಿಯ ಸೀರೆಯನ್ನು ಸೆಳೆದ. ಆಗ ಭೀಮ ನುಡಿದ.

ಪಾಪೇಷು ಪೂರ್ವಸ್ಯ ತಥಾಽಧಮಸ್ಯ
ವಂಶೇ ಕುರೂಣಾಮುರುಧರ್ಮಶೀಲಿನಾಮ್ ।
ದುಶ್ಶಾಸನಸ್ಯಾಸ್ಯ ವಿದಾರ್ಯ ವಕ್ಷಃ
ಪಿಬಾಮಿ ರಕ್ತಂ ಜಗತಃ ಸಮಕ್ಷಂ ॥೩೬೨॥

'ಪಾಪಿಗಳಲ್ಲಿ ಶ್ರೇಷ್ಠ ಮತ್ತು ಮಹಾಧರ್ಮಶೀಲರಾದ ಕುರುಗಳ ವಂಶದಲ್ಲಿ ನೀಚನಾದ ಈ ದುಃಶಾಸನನ ಎದೆಯನ್ನು ಬಗಿದು ಲೋಕದ ಸಮಕ್ಷಮದಲ್ಲಿ ರಕ್ತಪಾನ ಮಾಡುವೆನು'.

ವಿಕೃಷ್ಯಮಾಣೇ ವಸನೇ ತು ಕೃಷ್ಣಾ
ಸಸ್ಮಾರ ಕೃಷ್ಣಂ ಸುವಿಶೇಷತೋಽಪಿ ।

ತದಾನ್ಯದಾಸೀದ್ ವಸನಂ ಚ ತಸ್ಯಾ
ದಿವ್ಯಂ ಸುಸೂಕ್ಷ್ಮಂ ಕನಕಾವದಾತಂ ॥೩೬೩॥

ದುಃಶಾಸನ ಸೀರೆಯನ್ನು ಸೆಳೆಯುವಾಗ ಸದಾ ಕೃಷ್ಣಸ್ಮರಣೆ ಮಾಡುವ ದ್ರೌಪದಿ ಇನ್ನೂ ವಿಶೇಷವಾಗಿ ಶ್ರೀಕೃಷ್ಣನನ್ನು ನೆನೆದಳು. ಆಗ ಅವಳಿಗೆ ಬಂಗಾರದಂತೆ ಶುಭ್ರವಾದ ಬಲು ತೆಳ್ಳಗಿನ ಇನ್ನೂ ಉತ್ತಮವಾದ ಬೇರೆ ಸೀರೆ ಪ್ರಾದುರ್ಭವಿಸಿತು.

ಪುನಃ ಪುನಶ್ಚೈವ ವಿಕರ್ಷಮಾಣೇ
ದುಶ್ಶಾಸನೇಽನ್ಯಾನಿ ಚ ತಾದೃಶಾನಿ ।
ಬಭೂವುರಂತಂ ನ ಜಗಾಮ ಪಾಪಃ
ಶ್ರಾಂತೋ ನ್ಯಷೀದತ್ ಸ್ವಿನ್ನಗಾತ್ರಃ ಸಭಾಯಾಂ ॥೩೬೪॥

ಪುನಃ ಪುನಃ ದುಃಶಾಸನ ಸೀರೆ ಎಳೆಯುತ್ತಿದ್ದಂತೆ ಅದೇ ರೀತಿಯ ಬೇರೆ ಸೀರೆಗಳು ಪ್ರಾದುರ್ಭವಿಸಿದವು. ಪಾಪಿಯಾದ ಆತ ನೋಡಿದರೆ ಸೀರಿಗಳಿಗೆ ಕೊನೆಯ ಇರಲಿಲ್ಲ. ಸೋತು ಮೈ ಬೆವೆತುಕೊಂಡು ನೆಲದ ಮೇಲೆ ಕುಸಿತು ಕುಳಿತ.

ವಸ್ತ್ರೋಚ್ಚಯೇ ಶೈಲನಿಭೇ ಪ್ರಜಾತೇ
ದುರ್ಯೋಧನಃ ಪ್ರಾಹ ಸಂಜಾತಕೋಪಃ ।
ಪ್ರವೇಶಯೇಮಾಂ ಗೃಹಮೇವ ಶೀಘ್ರಂ
ಕಿಂ ನಶ್ಚಿರೇಣೇತಿ ಸುಮಂದಬುದ್ಧಿಃ ॥೩೬೫॥

ಸೀರೆಗಳ ರಾಶಿ ಬೆಟ್ಟದಂತಾಗಲು ಮಹಾಮಂದ ಬುದ್ಧಿಯವನಾದ ದುರ್ಯೋಧನ ಕೋಪಗೊಂಡು ನುಡಿದ, 'ದುಃಶಾಸನ, ಇನ್ನೇಕೆ ವಿಲಂಬ? ಇವಳನ್ನು ಬೇಗನೆ ಮನೆಯೊಳಕ್ಕೆ ಒಯ್ಯು!'

★ ★ ★ ★

ಎಂಭತ್ತೆಂಟನೆಯ ಅಧ್ಯಾಯ

(ಯುಧಿಷ್ಠಿರನ ಮೇಲೆ ಭೀಮನ ಕೋಪ, ವಿಕರ್ಣನ ವಚನ, ದುಶ್ಶಾಸನನಿಂದ ದ್ರೌಪದಿಯ ವಸ್ತ್ರಾಪಹರಣದ ಕ್ರಿಯೆ, ಕೃಷ್ಣನಿಂದ ರಕ್ಷಣೆ, ವಿದುರ ವಚನ.)

ಭೀಮಸೇನಃ

ಭವಂತಿ ವೇಶ್ಮಾ ವರ್ಧಕ್ಯಃ ಕಿತವಾನಾಂ ಯುಧಿಷ್ಠಿರ ।
ನ ತಾಭಿರಪಿ ದೀವ್ಯಂತಿ ದಯಾ ನೈವಾಸ್ತಿ ತೇ ವಿಭೋ ॥೧॥

ಯುಧಿಷ್ಠಿರನೇ! ತನ್ನ ಮನೆಯಲ್ಲಿಯೇ ಇದ್ದು ಭೋಗ್ಯರಾದ ದಾಸಿಯರು ಮತ್ತು ತಮ್ಮ ದೇಹವನ್ನು ಮಾರಿ ಸ್ವಾಮಿಗೆ ಧನವನ್ನು ತಂದುಕೊಡುವ ವರ್ಧಕಿಯರು ದ್ಯೂತವನ್ನು ಆಡುವವರಿಗೂ ಇರುತ್ತಾರೆ. ಆದರೆ ಯಾರೂ ಅವರನ್ನೂ ಪಣವಾಗಿ ಇಡುವುದಿಲ್ಲ. ವಿಭುವೇ! ನಿನಗೆ ದಯಯೇ ಇಲ್ಲ.

ಕಾಶ್ಯೋ ಯದ್ಧನಮಾಹಾರ್ಷೀದ್ ದ್ರವ್ಯಂ ಯಚ್ಚಾನ್ಯದುತ್ತಮಮ್ ।
ತಥಾऽನ್ಯೇ ಪೃಥಿವೀಪಾಲಾ ಯಾನಿ ರತ್ನಾನ್ಯುಪಾಹರನ್ ॥೨॥

ವಾಹನಾನಿ ಧನಂ ಚೈವ ಕವಚಾನ್ಯಾಯುಧಾನಿ ಚ ।
ರಾಜ್ಯಮಾತ್ಮಾ ವಯಂ ಚೈವ ಕೈತವೇನ ಹೃತಾಃ ಪರೈಃ ॥೩॥

ನ ಚ ಮೇ ತತ್ರ ಕೋಪೋऽಭೂತ್ ಸರ್ವಸ್ಯೇಶೋ ಹಿ ನೋ ಭವಾನ್ ।
ಇದಂ ತ್ವತಿಕೃತಂ ಮನ್ಯೇ ದ್ರೌಪದೀ ಯತ್ರ ಪಣ್ಯತೇ ॥೪॥

ಕಾಶಿರಾಜನು ಯಜ್ಞಕ್ಕಾಗಿ ಯಾವ ಶ್ರೇಷ್ಠವಾದ ಧನವನ್ನು ತಂದು ಕೊಟ್ಟನೋ ಹಾಗೆಯೇ ಉಳಿದ ರಾಜರೂ ಸಹ ಯಾವ ರತ್ನಗಳನ್ನೂ ವಾಹನಗಳನ್ನೂ ಧನವನ್ನೂ ಕವಚಗಳನ್ನೂ ಮತ್ತು ಆಯುಧಗಳನ್ನು ತಂದುಕೊಟ್ಟರೋ ಅವೆಲ್ಲವೂ ರಾಜ್ಯವೂ ನೀನೂ ಮತ್ತು ನಾವೂ ಸಹ ಮೋಸದಿಂದ ಶತ್ರುಗಳಿಂದ ಅಪಹರಿಸಿಲ್ಪಟ್ಟಿದ್ದೇವೆ. ನನಗೆ ಅದಾವುದರಿಂದಲೂ ಕೋಪವುಂಟಾಗಲಿಲ್ಲ. ಏಕೆಂದರೆ ನಮಗೆಲ್ಲರಿಗೂ ನೀನು ಪ್ರಭುವಾದವನು. ಆದರೆ ದ್ರೌಪದಿಯನ್ನು ಪಣಕ್ಕಿಟ್ಟುದುದು ಮಾತ್ರ ಎಲ್ಲಾ ಧರ್ಮದ ಎಲ್ಲೆಯನ್ನು ಮೀರಿದ ನಿನ್ನ ಕಾರ್ಯ.

ತದಾನ್ಯದಾಸೀದ್ ವಸನಂ ಚ ತಸ್ಯಾ
ದಿವ್ಯಂ ಸುಸೂಕ್ಷ್ಮಂ ಕನಕಾವದಾತಂ ॥೩೬೩॥

ದುಃಶಾಸನ ಸೀರೆಯನ್ನು ಸೆಳೆಯುವಾಗ ಸದಾ ಕೃಷ್ಣಸ್ಮರಣೆ ಮಾಡುವ ದ್ರೌಪದಿ ಇನ್ನೂ ವಿಶೇಷವಾಗಿ ಶ್ರೀಕೃಷ್ಣನನ್ನು ನೆನೆದಳು. ಆಗ ಅವಳಿಗೆ ಬಂಗಾರದಂತೆ ಶುಭ್ರವಾದ ಬಲು ತೆಳ್ಳಗಿನ ಇನ್ನೂ ಉತ್ತಮವಾದ ಬೇರೆ ಸೀರೆ ಪ್ರಾದುರ್ಭವಿಸಿತು.

ಪುನಃ ಪುನಶ್ಚೈವ ವಿಕರ್ಷಮಾಣೇ
ದುಶ್ಶಾಸನೇಽನ್ಯಾನಿ ಚ ತಾದೃಶಾನಿ ।
ಬಭೂವುರಂತಂ ನ ಜಗಾಮ ಪಾಪಃ
ಶ್ರಾಂತೋ ನ್ಯಷೀದತ್ ಸ್ವಿನ್ನಗಾತ್ರಃ ಸಭಾಯಾಂ ॥೩೬೪॥

ಪುನಃ ಪುನಃ ದುಃಶಾಸನ ಸೀರೆ ಎಳೆಯುತ್ತಿದ್ದಂತೆ ಅದೇ ರೀತಿಯ ಬೇರೆ ಸೀರೆಗಳು ಪ್ರಾದುರ್ಭವಿಸಿದವು. ಪಾಪಿಯಾದ ಆತ ನೋಡಿದರೆ ಸೀರಿಗಳಿಗೆ ಕೊನೆಯ ಇರಲಿಲ್ಲ. ಸೋತು ಮೈ ಬೆವೆತುಕೊಂಡು ನೆಲದ ಮೇಲೆ ಕುಸಿತು ಕುಳಿತ.

ವಸ್ತ್ರೋಚ್ಚಯೇ ಶೈಲನಿಭೇ ಪ್ರಜಾತೇ
ದುರ್ಯೋಧನಃ ಪ್ರಾಹ ಸಂಜಾತಕೋಪಃ ।
ಪ್ರವೇಶಯೇಮಾಂ ಗೃಹಮೇವ ಶೀಘ್ರಂ
ಕಿಂ ನಶ್ಚಿರೇಣೇತಿ ಸುಮಂದಬುದ್ಧಿಃ ॥೩೬೫॥

ಸೀರೆಗಳ ರಾಶಿ ಬೆಟ್ಟದಂತಾಗಲು ಮಹಾಮಂದ ಬುದ್ಧಿಯವನಾದ ದುರ್ಯೋಧನ ಕೋಪಗೊಂಡು ನುಡಿದ, 'ದುಃಶಾಸನ, ಇನ್ನೇಕೆ ವಿಲಂಬ? ಇವಳನ್ನು ಬೇಗನೆ ಮನೆಯೊಳಕ್ಕೆ ಒಯ್ಯು!'

★ ★ ★ ★

ಎಂಭತ್ತೆಂಟನೆಯ ಅಧ್ಯಾಯ

(ಯುಧಿಷ್ಠಿರನ ಮೇಲೆ ಭೀಮನ ಕೋಪ, ವಿಕರ್ಣನ ವಚನ, ದುಶ್ಶಾಸನನಿಂದ ದ್ರೌಪದಿಯ ವಸ್ತ್ರಾಪಹರಣದ ಕ್ರಿಯೆ, ಕೃಷ್ಣನಿಂದ ರಕ್ಷಣೆ, ವಿದುರ ವಚನ.)

ಭೀಮಸೇನಃ

ಭವಂತಿ ವೇಶ್ಮಾ ವರ್ಧಕ್ಯಃ ಕಿತವಾನಾಂ ಯುಧಿಷ್ಠಿರ ।
ನ ತಾಭಿರಪಿ ದೀವ್ಯಂತಿ ದಯಾ ನೈವಾಸ್ತಿ ತೇ ವಿಭೋ ॥೧॥

ಯುಧಿಷ್ಠರನೇ! ತನ್ನ ಮನೆಯಲ್ಲಿಯೇ ಇದ್ದು ಭೋಗ್ಯರಾದ ದಾಸಿಯರು ಮತ್ತು ತಮ್ಮ ದೇಹವನ್ನು ಮಾರಿ ಸ್ವಾಮಿಗೆ ಧನವನ್ನು ತಂದುಕೊಡುವ ವರ್ಧಕಿಯರು ದ್ಯೂತವನ್ನು ಆಡುವವರಿಗೂ ಇರುತ್ತಾರೆ. ಆದರೆ ಯಾರೂ ಅವರನ್ನೂ ಪಣವಾಗಿ ಇಡುವುದಿಲ್ಲ. ವಿಭುವೇ! ನಿನಗೆ ದಯಯೇ ಇಲ್ಲ.

ಕಾಶ್ಯೋ ಯದ್ಧನಮಾಹಾರ್ಷೀದ್ ದ್ರವ್ಯಂ ಯಚ್ಚಾನ್ಯದುತ್ತಮಮ್ ।
ತಥಾऽನ್ಯೇ ಪೃಥಿವೀಪಾಲಾ ಯಾನಿ ರತ್ನಾನ್ಯುಪಾಹರನ್ ॥೨॥

ವಾಹನಾನಿ ಧನಂ ಚೈವ ಕವಚಾನ್ಯಾಯುಧಾನಿ ಚ ।
ರಾಜ್ಯಮಾತ್ಮಾ ವಯಂ ಚೈವ ಕೈತವೇನ ಹೃತಾಃ ಪರೈಃ ॥೩॥

ನ ಚ ಮೇ ತತ್ರ ಕೋಪೋऽಭೂತ್ ಸರ್ವಸ್ಯೇಶೋ ಹಿ ನೋ ಭವಾನ್ ।
ಇದಂ ತ್ವತಿಕೃತಂ ಮನ್ಯೇ ದ್ರೌಪದೀ ಯತ್ರ ಪಣ್ಯತೇ ॥೪॥

ಕಾಶಿರಾಜನು ಯಜ್ಞಕ್ಕಾಗಿ ಯಾವ ಶ್ರೇಷ್ಠವಾದ ಧನವನ್ನು ತಂದು ಕೊಟ್ಟನೋ ಹಾಗೆಯೇ ಉಳಿದ ರಾಜರೂ ಸಹ ಯಾವ ರತ್ನಗಳನ್ನೂ ವಾಹನಗಳನ್ನೂ ಧನವನ್ನೂ ಕವಚಗಳನ್ನೂ ಮತ್ತು ಆಯುಧಗಳನ್ನು ತಂದುಕೊಟ್ಟರೋ ಅವೆಲ್ಲವೂ ರಾಜ್ಯವೂ ನೀನೂ ಮತ್ತು ನಾವೂ ಸಹ ಮೋಸದಿಂದ ಶತ್ರುಗಳಿಂದ ಅಪಹರಿಸಿಲ್ಪಟ್ಟಿದ್ದೇವೆ. ನನಗೆ ಅದಾವುದರಿಂದಲೂ ಕೋಪವುಂಟಾಗಲಿಲ್ಲ. ಏಕೆಂದರೆ ನಮಗೆಲ್ಲರಿಗೂ ನೀನು ಪ್ರಭುವಾದವನು. ಆದರೆ ದ್ರೌಪದಿಯನ್ನು ಪಣಕ್ಕಿಟ್ಟುದುದು ಮಾತ್ರ ಎಲ್ಲಾ ಧರ್ಮದ ಎಲ್ಲೆಯನ್ನು ಮೀರಿದ ನಿನ್ನ ಕಾರ್ಯ.

ಏಷಾ ಹ್ಯನರ್ಹತೀ ಬಾಲಾ ಪಾಂಡವಾನ್ ಪ್ರಾಪ್ಯ ಕೌರವೈಃ ।
ತ್ವತ್ಕೃತೇ ಕ್ಲಿಶ್ಯತೇ ಕ್ಷುದ್ರೈರ್ನೃಶಂಸೈರ್ನಿಕೃತಿಪ್ರಿಯೈಃ ॥೫॥

ಅಂತಹ ಅವಮಾನಕ್ಕೆ ಯೋಗ್ಯಳಲ್ಲದ ಈ ಬಾಲೆಯು ಪಾಂಡವರನ್ನು ಹೊಂದಿ ನಿನ್ನ ಕಾರಣದಿಂದ ಕ್ಷುದ್ರರೂ ಕ್ರೂರರೂ ಕಪಟಪ್ರಿಯರೂ ಆದ ಕೌರವರಿಂದ ಕ್ಲೇಶವನ್ನು ಅನುಭವಿಸುತ್ತಿದ್ದಾಳೆ.

ಅಸ್ಯಾಃ ಕೃತೇ ಮನ್ಯುರಯಂ ತ್ವಯಿ ರಾಜನ್ ನಿಪಾತ್ಯತೇ ।
ಬಾಹೂ ತೇ ಸಂಪ್ರಧಕ್ಷ್ಯಾಮಿ ಸಹದೇವಾಗ್ನಿಮಾನಯ ॥೬॥

ಎಲೈ ರಾಜನೇ! ಇವಳ ಸಲುವಾಗಿ ನನ್ನ ಕೋಪವನ್ನು ನಿನ್ನ ಮೇಲೆ ಕೇಂದ್ರಿಕರಿಸುತ್ತಿದ್ದೇನೆ. ನಿನ್ನ ಎರಡು ಬಾಹುಗಳನ್ನು ಸುಡುವೆನು. ಸಹದೇವನೇ! ಅಗ್ನಿಯನ್ನು ತೆಗೆದುಕೊಂಡು ಬಾ.

ಅರ್ಜುನಃ

ಪುರಾ ನ ಭೀಮಸೇನ ತ್ವಮೀದೃಶೀರ್ವದಸೇ ಗಿರಃ ।
ಪರೈಸ್ತೇ ನಾಶಿತಂ ನೂನಂ ನೃಶಂಸೈರ್ಧರ್ಮಗೌರವಮ್ ॥೭॥

ಭೀಮಸೇನನೇ! ನೀನು ಹಿಂದೆ ಇಂತಹ ಮಾತುಗಳನ್ನು ಆಡುತ್ತಿರಲಿಲ್ಲ. ಕ್ರೂರರಾದ ಶತ್ರುಗಳಿಂದ ನಿನ್ನ ಧರ್ಮಬುದ್ಧಿಯು ಖಂಡಿತವಾಗಿ ಹಾಳಾಗಿದೆ.

ನ ಸಕಾಮಾಃ ಪರೇ ಕಾರ್ಯಾ ಧರ್ಮಮೇವಾಚರೋತ್ತಮಮ್ ।
ಭ್ರಾತರಂ ಧಾರ್ಮಿಕಂ ಜ್ಯೇಷ್ಠಂ ನಾತಿಕ್ರಮಿತುಮರ್ಹಸಿ ॥೮॥

ಶತ್ರುಗಳ ಆಸೆಯನ್ನು ನಾವು ಪೂರ್ಣಗೊಳಿಸಬಾರದು. ಶ್ರೇಷ್ಠವಾದ ಧರ್ಮವನ್ನೇ ಆಚರಿಸು. ಧಾರ್ಮಿಕನಾದ ಅಣ್ಣನನ್ನು ನೀನು ಅತಿಕ್ರಮಿಸಬಾರದು.

ಆಹೂತೋಪಿ ಪರೈ ರಾಜಾ ಕ್ಷಾತ್ರಂ ಧರ್ಮಮನುಸ್ಮರನ್ ।
ದೀವ್ಯತೇ ಪರಕಾಮೇನ ತನ್ನಃ ಕೀರ್ತಿಕರಂ ಮಹತ್ ॥೯॥

ಪರರಿಂದ ಆಹ್ವಾನವನ್ನು ಪಡೆದ ರಾಜನು ಕ್ಷತ್ರಿಯ ಮರ್ಯಾದೆಯನ್ನು ಅನುಸರಿಸಿ ಇನ್ನೊಬ್ಬರ ಇಚ್ಛೆಯಂತೆ ಆಡಿಸಲ್ಪಟ್ಟಿದ್ದಾನೆ. ಇದು ನಮಗೆ ದೊಡ್ಡ ಕೀರ್ತಿಯನ್ನೇ ತರುವಂತಹದು.

ಭೀಮಸೇನಃ

ಏವಮಸ್ಮಿನ್ ಕೃತೇ ವಿದ್ಯಾಂ ಯದಿ ಸ್ಮಾಹ ಧನಂಜಯ ।
ದೀಪ್ತೋಽಗ್ನೌ ಸಹಿತೌ ಬಾಹೂ ಪ್ರಕ್ಷಿಪೇಯಂ ಬಲಾದಿವ ॥೧೦॥

ಧನಂಜಯನೇ! ಧರ್ಮರಾಯನ ಈ ಬುದ್ಧಿಯನ್ನು ಧರ್ಮಬುದ್ಧಿಯೆಂದು ನೀನು ತಿಳಿಯುವುದಾದರೆ ದೀಪ್ತವಾದ ಅಗ್ನಿಯಲ್ಲಿ ಅವನ ಬಾಹುಗಳ ಜೊತೆಯಲ್ಲಿ ನಿನ್ನ ಬಾಹುಗಳನ್ನೂ ನನ್ನ ಸಾಮರ್ಥ್ಯದಿಂದ ಹಾಕುವೆನು. (ಸುಡುವೆನು)

ವೈಶಂಪಾಯನಃ

ತಥಾ ತಾನ್ ದುಃಖಿತಾನ್ ದೃಷ್ಟ್ವಾ ಪಾಂಡವಾನ್ ಧೃತರಾಷ್ಟ್ರಜಃ ।
ಕ್ಲಿಶ್ಯಮಾನಾಂ ಚ ಪಾಂಚಾಲೀಂ ವಿಕರ್ಣ ಇದಮಬ್ರವೀತ್ ॥೧೧॥

ಹಾಗೆ ಪಾಂಡವರು ದುಃಖಿತರಾಗಿರುವುದನ್ನು ನೋಡಿ ಮತ್ತು ದ್ರೌಪದಿಯು ಕ್ಲೇಶಪಡುತ್ತಿರುವುದನ್ನು ನೋಡಿ ಧೃತರಾಷ್ಟ್ರಪುತ್ರನಾದ ವಿಕರ್ಣನು ಹೀಗೆ ಮಾತನಾಡಿದನು.

ಯಾಜ್ಞಸೇನ್ಯಾ ಯದುಕ್ತಂ ತದ್ ವಾಕ್ಯಂ ವಿಬ್ರೂತ ಪಾರ್ಥಿವಾಃ ।
ಅವಿವೇಕೇನ ವಾಕ್ಯಸ್ಯ ನರಕಃ ಸತ್ಯಮೇವ ನಃ ॥೧೨॥

ಎಲೈ ರಾಜರೇ! ಯಾಜ್ಞಸೇನಿಯಾದ ದ್ರೌಪದಿಯು ಕೇಳಿದ ಪ್ರಶ್ನೆಗೆ ಉತ್ತರವನ್ನು ಹೇಳಿ. ಆ ಪ್ರಶ್ನೆವಾಕ್ಯವನ್ನು ನಾವು ವಿವೇಚನೆ ಮಾಡದಿದ್ದರೆ. ನಮಗೆಲ್ಲರಿಗೂ ಖಂಡಿತವಾಗಿ ನರಕವೇ ಆಗುವುದು.

ಭೀಷ್ಮಶ್ಚ ಧೃತರಾಷ್ಟ್ರಶ್ಚ ಕುರುವೃದ್ಧತಮಾವುಭೌ ।
ಸಮೇತ್ಯ ನಾಹತುಃ ಕಿಂಚಿದ್ ವಿದುರಶ್ಚ ಮಹಾಮತಿಃ ॥೧೩॥

ಭೀಷ್ಮ ಮತ್ತು ಧೃತರಾಷ್ಟ್ರ ಇವರಿಬ್ಬರೂ ಕುರುವಂಶದಲ್ಲಿ ಅತ್ಯಂತ ವೃದ್ಧರಾದವರು. ಅವರಿಬ್ಬರೂ ಒಟ್ಟಾಗಿ ಅಥವಾ ಮಹಾಮತಿಯಾದ ವಿದುರನೂ ಸಹ ಏನನ್ನೂ ಮಾತನಾಡಲಿಲ್ಲ.

ಭಾರದ್ವಾಜೋऽಪಿ ಸರ್ವೇಷಾಮಾಚಾರ್ಯಃ ಕೃಪ ಏವ ಚ ।
ಯತ ಏತಾವಪಿ ಪ್ರಶ್ನಂ ನಾಹತುರ್ದ್ವಿಜಸತ್ತಮೌ ॥೧೪॥

ದ್ರೋಣರು ಮತ್ತು ಕೃಪರೂ ಸಹ ಎಲ್ಲರಿಗೂ ಆಚಾರ್ಯರಾದವರು. ದ್ವಿಜ ಶ್ರೇಷ್ಠರಾದ ಅವರಿಬ್ಬರೂ ಸಹ ಪ್ರಶ್ನೆಗೆ ಏನೂ ಉತ್ತರವನ್ನು ಹೇಳಲಿಲ್ಲ.

ಯೇ ತ್ವನ್ಯೇ ಪೃಥಿವೀಪಾಲಾಃ ಸಮೇತಾಃ ಸರ್ವತೋದಿಶಮ್ ।
ಕಾಮಕ್ರೋಧೌ ವಿಹಾಯೈವ ತೇ ಬ್ರುವಂತು ಯಥಾಮತಿ ॥೧೫॥

ಆದ್ದರಿಂದ ಎಲ್ಲ ದಿಕ್ಕುಗಳಿಂದ ಬಂದು ಇಲ್ಲಿ ಒಟ್ಟಿಗೆ ಸೇರಿರುವ ಎಲ್ಲರಾಜರೂ ಕಾಮ ಕ್ರೋಧಗಳನ್ನು ಬಿಟ್ಟು ತಮಗೆ ತಿಳಿದಂತೆ ಉತ್ತರವನ್ನು ಹೇಳಲಿ.

ಯದೇತದ್ ದ್ರೌಪದೀ ವಾಕ್ಯಮುಕ್ತವತ್ಯಸಕೃಚ್ಛುಭಮ್ ।
ವಿಮೃಶ್ಯ ಕಸ್ಯ ಕಃ ಪಕ್ಷಃ ಪಾರ್ಥಿವಾ ವದತೋತ್ತರಮ್ ॥೧೬॥

ದ್ರೌಪದಿಯು ಮತ್ತೆ ಮತ್ತೆ ಶುಭವಾದ ಯಾವ ವಾಕ್ಯವನ್ನು ಹೇಳಿದ್ದಾಳೆಯೋ ಅದನ್ನು ವಿಮರ್ಶೆಮಾಡಿ ಎಲೈ ರಾಜರೇ! ಯಾರದ್ದು ಯಾವ ಪಕ್ಷವೆಂದು ಉತ್ತರವನ್ನು ಹೇಳಿ.

ಏವಂ ಸ ಬಹುಶಃ ಸರ್ವಾನ್ ಉಕ್ತವಾಂಸ್ತಾನ್ ಸಭಾಸದಃ ।
ನ ಚ ತೇ ಪೃಥಿವೀಪಾಲಾಸ್ತಮೂಚುಃ ಸಾಧ್ವಸಾಧು ವಾ ॥೧೭॥

ಹೀಗೆ ವಿಕರ್ಣನು ಆ ಎಲ್ಲಾ ಸಭಾಸದರನ್ನು ಕುರಿತು ಅನೇಕಬಾರಿ ಹೇಳಿದರೂ ಸಹ ಆ ರಾಜರು ಶುಭವನ್ನಾಗಲೀ ಅಶುಭವನ್ನಾಗಲೀ ಏನನ್ನೂ ಮಾತನಾಡಲಿಲ್ಲ.

ಉಕ್ತ್ವಾ ತ್ವಸಕೃತ್ ತಥಾ ಸರ್ವಾನ್ ವಿಕರ್ಣಃ ಪೃಥಿವೀಪತೀನ್ ।
ಪಾಣಿಂ ಪಾಣೌ ವಿನಿಷ್ಪಿಷ್ಯ ನಿಶ್ಶ್ವಸನ್ನಿದಮಬ್ರವೀತ್ ॥೧೮॥

ವಿಕರ್ಣನು ಆ ರಾಜರುಗಳನ್ನು ಉದ್ದೇಶಿಸಿ ಅನೇಕ ಬಾರಿ ಹೀಗೆ ಮಾತನಾಡಿ ಕೈಯಿಂದ ಕೈಯನ್ನು ಹೊಸಕುತ್ತಾ ನಿಟ್ಟುಸಿರನ್ನು ಬಿಡುತ್ತಾ ಹೀಗೆ ಮಾತನಾಡಿದನು.

ವಿಬ್ರೂತ ಪೃಥಿವೀಪಾಲಾ ವಾಕ್ಯಂ ಮಾ ವಾ ಕಥಂಚನ ।
ಮನ್ಯೇ ನ್ಯಾಯ್ಯಂ ಯದತ್ರಾಹಂ ತದ್ಧಿ ವಕ್ಷ್ಯಾಮಿ ಕೌರವಾಃ ॥೧೯॥

ಎಲೈ ರಾಜರೇ! ದ್ರೌಪದಿಯ ವಾಕ್ಯಕ್ಕೆ ನೀವು ಉತ್ತರವನ್ನು ಹೇಳಿ ಅಥವಾ ಬಿಡಿ. ಎಲೈ ಕೌರವರೇ! ಈ ವಿಷಯದಲ್ಲಿ ನಾನು ಯಾವುದನ್ನು ನ್ಯಾಯವೆಂದು ತಿಳಿದಿದ್ದೀನೋ ಅದನ್ನು ಹೇಳುವೆನು.

ಚತ್ವಾರ್ಯಾಹುರ್ಮುನಿಶ್ರೇಷ್ಠಾ ವ್ಯಸನಾನಿ ಮಹೀಕ್ಷಿತಾಮ್ ।
ಮೃಗಯಾಂ ಪಾನಮಕ್ಷಾಂಶ್ಚ ಸ್ತ್ರೀಷು ಚೈವಾತಿಸಕ್ತತಾಮ್ ॥೨೦॥

ಎಲೈ ಮುನಿಶ್ರೇಷ್ಠರೇ! ಬೇಟೆ ಪಾನ ದ್ಯೂತ ಮತ್ತು ಅತಿಯಾದ ಸ್ತ್ರೀಸಕ್ತಿ. ಈ ನಾಲ್ಕನ್ನು ರಾಜರ ವ್ಯಸನ ಸ್ಥಾನಗಳೆಂದು ಹೇಳುತ್ತಾರೆ.

ಏತೇಷು ಚ ನರಃ ಸಕ್ತೋ ಧರ್ಮಮುತ್ಸೃಜ್ಯ ವರ್ತತೇ ।
ತಥಾಯುಕ್ತೇನ ಚ ಕೃತಾಂ ಕ್ರಿಯಾಂ ಲೋಕೋ ನ ಪಶ್ಯತಿ ॥೨೧॥

ಈ ನಾಲ್ಕರಲ್ಲಿ ವಿಶೇಷವಾಗಿ ಸಕ್ತನಾದವನು ಧರ್ಮವನ್ನು ಮೀರಿ ನಡೆಯುತ್ತಾನೆ. ಧರ್ಮವನ್ನು ಮೀರಿ ನಡೆದ ಆ ವ್ಯಕ್ತಿಯ ಕ್ರಿಯೆಯನ್ನು ಲೋಕವು ಪರಿಗಣಿಸುವುದಿಲ್ಲ.

ತಥೇಯಂ ಪಾಂಡುಪುತ್ರೇಣ ವ್ಯಸನೇ ವರ್ತತಾ ಭೃಶಮ್ ।
ಸಮಾಹೂತೇನ ಕಿತವೈರಾಹಿತಾ ದ್ರೌಪದೀ ಪಣಃ ॥೨೨॥

ಹಾಗೆಯೇ ವ್ಯಸನಕ್ಕೆ ಬಲಿಯಾದ ಈ ಧರ್ಮರಾಜನು ಕಿತವರು ಆಹ್ವಾನಮಾಡಿದ ಕಾರಣದಿಂದ ದ್ರೌಪದಿಯನ್ನು ಪಣಕ್ಕೆ ಒಡ್ಡಿದನು.

ಸಾಧಾರಣೇ ಚ ಸರ್ವೇಷಾಂ ಪಾಂಡವಾನಾಮನಿಂದಿತಾ ।
ಜಿತೇನ ಪೂರ್ವಂ ಚಾನೇನ ಪಾಂಡವೇನ ಪಣೇಕೃತಾ ॥೨೩॥

ಅನಿಂದಿತಳಾದ ಈ ದ್ರೌಪದಿಯು ಎಲ್ಲಾ ಪಾಂಡವರಿಗೆ ಸಮಾನವಾಗಿ ಸೇರಿದವಳು. ತಾನು ಮೊದಲು ತನ್ನನ್ನು ಸೋತ ಯುಧಿಷ್ಠಿರನು ಅವಳನ್ನು ಅನಂತರ ಪಣವಾಗಿ ಇಟ್ಟನು.

ಇಯಂ ಚ ಕೀರ್ತಿತಾ ಕೃಷ್ಣಾ ಸೌಬಲೇನ ಪಣಾರ್ಥಿನಾ ।
ಏತತ್ ಸರ್ವಂ ವಿಚಾರ್ಯಾಹಂ ಮನ್ಯೇ ನ ವಿಜಿತಾಮಿಮಾಮ್ ॥

ಪಣವನ್ನು ಬಯಸಿದ ಶಕುನಿಯು ದ್ರೌಪದಿಯ ಹೆಸರನ್ನು ಸೂಚಿಸಿದನು. (ಧರ್ಮರಾಜನು ತಾನಾಗಿಯೇ ಎಡವಿದ) ಈ ಎಲ್ಲಾ ಅಂಶಗಳನ್ನು ವಿಮರ್ಶೆಮಾಡಿ ನಾನು ದ್ರೌಪದಿಯು ಅಜಿತಳೆಂದು ತಿಳಿಯುತ್ತೇನೆ.

ವೈಶಂಪಾಯನಃ

ಏತಚ್ಛ್ರುತ್ವಾ ಮಹಾನ್ ನಾದಃ ಸಭ್ಯಾನಾಮುದತಿಷ್ಠತ ।
ವಿಕರ್ಣಂ ಶಂಸಮಾನಾನಾಂ ಸೌಬಲಂ ಚ ವಿನಿಂದತಾಮ್ ॥೨೫॥

ಇದನ್ನು ಕೇಳಿ ಸಭ್ಯರಲ್ಲಿ ವಿಕರ್ಣನನ್ನು ಪ್ರಸಂಶಿಸಿಸುವ ಮತ್ತು ಶಕುನಿಯನ್ನು ನಿಂದಿಸುವ ಮಹಾನಾದವು ಉದ್ಭವಿಸಿತು.

ತಸ್ಮಿನ್ನುಪರತೇ ಶಬ್ದೇ ರಾಧೇಯಃ ಕ್ರೋಧಮೂರ್ಚ್ಛಿತಃ ।
ಪ್ರಗೃಹ್ಯ ರುಚಿರಂ ಬಾಹುಮಿದಂ ವಚನಮಬ್ರವೀತ್ ॥೨೬॥

ಆ ಶಬ್ದವು ಅಡಗುತ್ತಿರಲು ಕ್ರೋಧಾವಿಷ್ಟನಾದ ಕರ್ಣನು ತನ್ನ ಸುಂದರವಾದ ಬಾಹುವನ್ನು ಮೇಲಕ್ಕೆತ್ತಿ ಈ ಮಾತನ್ನು ಆಡಿದನು.

ಕರ್ಣಃ

ದೃಶ್ಯಂತೇ ವೈ ವಿಕರ್ಣೇ ಹಿ ವೈಕೃತಾನಿ ಬಹೂನ್ಯಪಿ ।
ತಜ್ಜಾತಸ್ತದ್ವಿನಾಶಾಯ ಯಥಾऽಗ್ನಿರರಣೇಃಪ್ರಜಃ ॥೨೭॥

ವಿಕರ್ಣನಲ್ಲಿ ಅನೇಕ ವಿಕಾರಗಳು ಕಂಡು ಬರುತ್ತವೆ. ಇವನು ಅರಣಿಯಿಂದ ಹುಟ್ಟಿದ ಅಗ್ನಿಯು ಅರಣಿಯನ್ನೇ ನಾಶಮಾಡುವಂತೆ ಎಲ್ಲಿ ಜನಿಸಿದ್ದಾನೆಯೋ ಆ ಕುಲವನ್ನೇ ನಾಶಮಾಡಲು ಹೊರಟಿದ್ದಾನೆ.

ವ್ಯಾಧಿರ್ಬಲಂ ನಾಶಯತೇ ಶರೀರಸ್ಥೋಽಪಿ ಸಂಭೃತಃ ।
ತೃಣಾನಿ ಪಶವೋ ಘ್ನಂತಿ ಸ್ವಪಕ್ಷಂ ಚೈವ ಕೌರವಃ ॥೨೮॥

ವ್ಯಾಧಿಯು ಶರೀರವನ್ನೇ ಆಶ್ರಯಿಸಿಕೊಂಡಿದ್ದರೂ ವ್ಯಾಧಿಯು ಬೆಳೆಯುತ್ತಾ ಶರೀರವನ್ನೇ ನಾಶಮಾಡುತ್ತದೆ. ತೃಣವನ್ನು ಉಪಜೀವಿಸಕೊಂಡು ಇರುವ ಪಶುಗಳು ತೃಣಗಳನ್ನೇ ನಾಶಮಾಡುತ್ತವೆ. ಹಾಗೆ ಕೌರವನಾದ ಈ ವಿಕರ್ಣನೂ ಸಹ ತನ್ನ ಪಕ್ಷವನ್ನೇ ನಾಶಮಾಡುತ್ತಿದ್ದಾನೆ.

ದ್ರೋಣೋ ಭೀಷ್ಮಃ ಕೃಪೋ ದ್ರೌಣಿರ್ವಿದುರಶ್ಚ ಮಹಾಮತಿಃ ।
ಧೃತರಾಷ್ಟ್ರಶ್ಚ ಗಾಂಧಾರೀ ಭವತಃ ಪ್ರಾಜ್ಞವತ್ತರಾಃ ॥೨೯॥

ಎಲೈ ವಿಕರ್ಣನೇ! ದ್ರೋಣ ಭೀಷ್ಮ ಕೃಪ ಅಶ್ವತ್ಥಾಮ ಮಹಾಮಂತ್ರಿಯಾದ ವಿದುರ. ಧೃತರಾಷ್ಟ್ರಮತ್ತು ಗಾಂಧಾರಿ ಇವರೆಲ್ಲರೂ ನಿನಗಿಂತ ಪ್ರಾಜ್ಞರಾದವರು.

ಏತೇ ನ ಕಿಂಚಿದಪ್ಯಾಹುಶ್ಚೋದ್ಯಮಾನಾಶ್ಚ ಕೃಷ್ಣಯಾ ।
ಧರ್ಮೇಣ ವಿಜಿತಾಂ ಕೃಷ್ಣಾಂ ಮನ್ಯಂತೇ ದ್ರುಪದಾತ್ಮಜಾಮ್ ॥೩೦॥

ದ್ರೌಪದಿಯು ಮತ್ತೆ ಮತ್ತೆ ಕೇಳುತ್ತಿದ್ದರೂ ಇವರಲ್ಲಿ ಯಾರೂ ಒಂದು ಮಾತನ್ನೂ ಆಡಲಿಲ್ಲ. ಇವರೆಲ್ಲರೂ ದ್ರುಪದಾತ್ಮಜೆಯಾದ ಕೃಷ್ಣೆಯು ಧರ್ಮದಿಂದಲೇ ಜಿತಳಾಗಿದ್ದಾಳೆ ಎಂದು ತಿಳಿದಿದ್ದಾರೆ.

ತ್ವಂ ತು ಕೇವಲಬಾಲ್ಯೇನ ಧಾರ್ತರಾಷ್ಟ್ರ ವದಿಷ್ಯಸಿ ।
ಯದ್ ಬ್ರವೀಷಿ ಸಭಾಮಧ್ಯೇ ಬಾಲಃ ಸ್ಥವಿರಭಾಷಿತಮ್ ।
ನ ಚ ಧರ್ಮಂ ಯಥಾವತ್ ತ್ವಂ ವೇತ್ಸಿ ದುರ್ಯೋಧನಾವರ ॥೩೧॥

ಧೃತರಾಷ್ಟ್ರನ ಪುತ್ರನಾದ ವಿಕರ್ಣನೇ! ನೀನು ಸಭಾಮಧ್ಯದಲ್ಲಿ ಬಾಲಕನಾದರೂ ವೃದ್ಧನಂತೆ ಮಾತನಾಡುತ್ತಿರುವುದರಿಂದ ನಿನ್ನ ಮಾತುಗಳೆಲ್ಲವೂ ಬಾಲವಾಕ್ಯವೇ ಸರಿ. ಎಲೈ ದುರ್ಯೋಧನನ ತಮ್ಮನೇ! ನೀನು ಸರಿಯಾಗಿ ಧರ್ಮವನ್ನು ತಿಳಿದಿಲ್ಲ.

ಯದ್ ಬ್ರವೀಷಿ ಜಿತಾಂ ಕೃಷ್ಣಮಜಿತೇತಿ ಸುಮಂದಧೀಃ ।
ಕಥಂ ಹ್ಯವಿಜಿತಾಂ ಕೃಷ್ಣಾಂ ಮನ್ಯಸೇ ಧೃತರಾಷ್ಟ್ರಜ ॥೩೨॥

ಅನಿಂದಿತಳಾದ ಈ ದ್ರೌಪದಿಯು ಎಲ್ಲಾ ಪಾಂಡವರಿಗೆ ಸಮಾನವಾಗಿ ಸೇರಿದವಳು. ತಾನು ಮೊದಲು ತನ್ನನ್ನು ಸೋತ ಯುಧಿಷ್ಠಿರನು ಅವಳನ್ನು ಅನಂತರ ಪಣವಾಗಿ ಇಟ್ಟನು.

ಇಯಂ ಚ ಕೀರ್ತಿತಾ ಕೃಷ್ಣಾ ಸೌಬಲೇನ ಪಣಾರ್ಥಿನಾ ।
ಏತತ್ ಸರ್ವಂ ವಿಚಾರ್ಯಾಹಂ ಮನ್ಯೇ ನ ವಿಜಿತಾಮಿಮಾಮ್ ॥

ಪಣವನ್ನು ಬಯಸಿದ ಶಕುನಿಯು ದ್ರೌಪದಿಯ ಹೆಸರನ್ನು ಸೂಚಿಸಿದನು. (ಧರ್ಮರಾಜನು ತಾನಾಗಿಯೇ ಎಡವಿದ) ಈ ಎಲ್ಲಾ ಅಂಶಗಳನ್ನು ವಿಮರ್ಶೆಮಾಡಿ ನಾನು ದ್ರೌಪದಿಯು ಅಜಿತಳೆಂದು ತಿಳಿಯುತ್ತೇನೆ.

ವೈಶಂಪಾಯನಃ

ಏತಚ್ಛ್ರುತ್ವಾ ಮಹಾನ್ ನಾದಃ ಸಭ್ಯಾನಾಮುದತಿಷ್ಠತ ।
ವಿಕರ್ಣಂ ಶಂಸಮಾನಾನಾಂ ಸೌಬಲಂ ಚ ವಿನಿಂದತಾಮ್ ॥೨೫॥

ಇದನ್ನು ಕೇಳಿ ಸಭ್ಯರಲ್ಲಿ ವಿಕರ್ಣನನ್ನು ಪ್ರಸಂಶಿಸಿಸುವ ಮತ್ತು ಶಕುನಿಯನ್ನು ನಿಂದಿಸುವ ಮಹಾನಾದವು ಉದ್ಭವಿಸಿತು.

ತಸ್ಮಿನ್ನುಪರತೇ ಶಬ್ದೇ ರಾಧೇಯಃ ಕ್ರೋಧಮೂರ್ಚ್ಛಿತಃ ।
ಪ್ರಗೃಹ್ಯ ರುಚಿರಂ ಬಾಹುಮಿದಂ ವಚನಮಬ್ರವೀತ್ ॥೨೬॥

ಆ ಶಬ್ದವು ಅಡಗುತ್ತಿರಲು ಕ್ರೋಧಾವಿಷ್ಟನಾದ ಕರ್ಣನು ತನ್ನ ಸುಂದರವಾದ ಬಾಹುವನ್ನು ಮೇಲಕ್ಕೆತ್ತಿ ಈ ಮಾತನ್ನು ಆಡಿದನು.

ಕರ್ಣಃ

ದೃಶ್ಯಂತೇ ವೈ ವಿಕರ್ಣೇ ಹಿ ವೈಕೃತಾನಿ ಬಹೂನ್ಯಪಿ ।
ತಜ್ಜಾತಸ್ತದ್ವಿನಾಶಾಯ ಯಥಾऽಗ್ನಿರರಣೇಃಪ್ರಜಃ ॥೨೭॥

ವಿಕರ್ಣನಲ್ಲಿ ಅನೇಕ ವಿಕಾರಗಳು ಕಂಡು ಬರುತ್ತವೆ. ಇವನು ಅರಣಿಯಿಂದ ಹುಟ್ಟಿದ ಅಗ್ನಿಯು ಅರಣಿಯನ್ನೇ ನಾಶಮಾಡುವಂತೆ ಎಲ್ಲಿ ಜನಿಸಿದ್ದಾನೆಯೋ ಆ ಕುಲವನ್ನೇ ನಾಶಮಾಡಲು ಹೊರಟಿದ್ದಾನೆ.

ವ್ಯಾಧಿರ್ಬಲಂ ನಾಶಯತೇ ಶರೀರಸ್ಥೋಽಪಿ ಸಂಭೃತಃ ।
ತೃಣಾನಿ ಪಶವೋ ಘ್ನಂತಿ ಸ್ವಪಕ್ಷಂ ಚೈವ ಕೌರವಃ ॥೨೮॥

ವ್ಯಾಧಿಯು ಶರೀರವನ್ನೇ ಆಶ್ರಯಿಸಿಕೊಂಡಿದ್ದರೂ ವ್ಯಾಧಿಯು ಬೆಳೆಯುತ್ತಾ ಶರೀರವನ್ನೇ ನಾಶಮಾಡುತ್ತದೆ. ತೃಣವನ್ನು ಉಪಜೀವಿಸಕೊಂಡು ಇರುವ ಪಶುಗಳು ತೃಣಗಳನ್ನೇ ನಾಶಮಾಡುತ್ತವೆ. ಹಾಗೆ ಕೌರವನಾದ ಈ ವಿಕರ್ಣನೂ ಸಹ ತನ್ನ ಪಕ್ಷವನ್ನೇ ನಾಶಮಾಡುತ್ತಿದ್ದಾನೆ.

ದ್ರೋಣೋ ಭೀಷ್ಮಃ ಕೃಪೋ ದ್ರೌಣಿರ್ವಿದುರಶ್ಚ ಮಹಾಮತಿಃ ।
ಧೃತರಾಷ್ಟ್ರಶ್ಚ ಗಾಂಧಾರೀ ಭವತಃ ಪ್ರಾಜ್ಞವತ್ತರಾಃ ॥೨೯॥

ಎಲೈ ವಿಕರ್ಣನೇ! ದ್ರೋಣ ಭೀಷ್ಮ ಕೃಪ ಅಶ್ವತ್ಥಾಮ ಮಹಾಮಂತ್ರಿಯಾದ ವಿದುರ. ಧೃತರಾಷ್ಟ್ರಮತ್ತು ಗಾಂಧಾರಿ ಇವರೆಲ್ಲರೂ ನಿನಗಿಂತ ಪ್ರಾಜ್ಞರಾದವರು.

ಏತೇ ನ ಕಿಂಚಿದಪ್ಯಾಹುಶ್ಚೋದ್ಯಮಾನಾಶ್ಚ ಕೃಷ್ಣಯಾ ।
ಧರ್ಮೇಣ ವಿಜಿತಾಂ ಕೃಷ್ಣಾಂ ಮನ್ಯಂತೇ ದ್ರುಪದಾತ್ಮಜಾಮ್ ॥೩೦॥

ದ್ರೌಪದಿಯು ಮತ್ತೆ ಮತ್ತೆ ಕೇಳುತ್ತಿದ್ದರೂ ಇವರಲ್ಲಿ ಯಾರೂ ಒಂದು ಮಾತನ್ನೂ ಆಡಲಿಲ್ಲ. ಇವರೆಲ್ಲರೂ ದ್ರುಪದಾತ್ಮಜೆಯಾದ ಕೃಷ್ಣೆಯು ಧರ್ಮದಿಂದಲೇ ಜಿತಳಾಗಿದ್ದಾಳೆ ಎಂದು ತಿಳಿದಿದ್ದಾರೆ.

ತ್ವಂ ತು ಕೇವಲಬಾಲ್ಯೇನ ಧಾರ್ತರಾಷ್ಟ್ರ ವದಿಷ್ಯಸಿ ।
ಯದ್ ಬ್ರವೀಷಿ ಸಭಾಮಧ್ಯೇ ಬಾಲಃ ಸ್ಥವಿರಭಾಷಿತಮ್ ।
ನ ಚ ಧರ್ಮಂ ಯಥಾವತ್ ತ್ವಂ ವೇತ್ಸಿ ದುರ್ಯೋಧನಾವರ ॥೩೧॥

ಧೃತರಾಷ್ಟ್ರನ ಪುತ್ರನಾದ ವಿಕರ್ಣನೇ! ನೀನು ಸಭಾಮಧ್ಯದಲ್ಲಿ ಬಾಲಕನಾದರೂ ವೃದ್ಧನಂತೆ ಮಾತನಾಡುತ್ತಿರುವುದರಿಂದ ನಿನ್ನ ಮಾತುಗಳೆಲ್ಲವೂ ಬಾಲವಾಕ್ಯವೇ ಸರಿ. ಎಲೈ ದುರ್ಯೋಧನನ ತಮ್ಮನೇ! ನೀನು ಸರಿಯಾಗಿ ಧರ್ಮವನ್ನು ತಿಳಿದಿಲ್ಲ.

ಯದ್ ಬ್ರವೀಷಿ ಜಿತಾಂ ಕೃಷ್ಣಮಜಿತೇತಿ ಸುಮಂದಧೀಃ ।
ಕಥಂ ಹ್ಯವಿಜಿತಾಂ ಕೃಷ್ಣಾಂ ಮನ್ಯಸೇ ಧೃತರಾಷ್ಟ್ರಜ ॥೩೨॥

ಧರ್ಮದಿಂದ ಜಿತಳಾದ ಕೃಷ್ಣೆಯನ್ನು ಅಜಿತಳೆಂದು ಹೇಳುತ್ತಿದ್ದೀಯೆ. ಎಲೈ ಧೃತರಾಷ್ಟ್ರಪುತ್ರನೇ! ನೀನು ಕೃಷ್ಣೆಯು ಅಜಿತಳೆಂದು ಹೇಗೆ ಹೇಳುತ್ತೀಯೆ?

ಯದಾ ಸಭಾಯಾಂ ಸರ್ವಸ್ವಂ ನ್ಯಸ್ತವಾನ್ ಪಾಂಡವಾಗ್ರಜಃ ।
ಅಭ್ಯಂತರಾಂಶ್ಚ ಸರ್ವಸ್ವಂ ದ್ರೌಪದೀಂ ಭರತರ್ಷಭಃ ।
ಏವಂ ಧರ್ಮಜಿತಾಂ ಕೃಷ್ಣಾಂ ಮನ್ಯಸೇ ನಜಿತಾಂ ಕಥಮ್ ॥೩೩॥

ಸಭೆಯಲ್ಲಿ ಯಾವಾಗ ಭರತಶ್ರೇಷ್ಠನಾದ ಪಾಂಡವಾಗ್ರಜನಾದ ಯುಧಿಷ್ಠಿರನು ಸರ್ವಸ್ವವನ್ನು ಪಣವಾಗಿ ಒಡ್ಡಿದನೋ ಅನಂತರ ತನ್ನ ತಮ್ಮಂದಿರನ್ನೂ ಮತ್ತು ದ್ರೌಪದಿಯನ್ನೂ ಪಣವಾಗಿ ಒಡ್ಡಿದನು. ಆಗ ದ್ರೌಪದಿಯು ಧರ್ಮದಿಂದಲೇ ಜಿತಳಾದಳು ಅವಳು ಜಿತಳಲ್ಲವೆಂದು ಹೇಗೆ ಹೇಳುತ್ತಿಯೇ?

ಕೀರ್ತಿತಾ ದ್ರೌಪದೀ ವಾಚಾऽಪ್ಯನುಜ್ಞಾತಾ ಚ ಪಾಂಡವೈಃ ।
ಭವತ್ಯವಿಜಿತಾ ಕೇನ ಹೇತುನೈಷಾ ಮತಾ ತವ ॥೩೪॥

ದ್ರೌಪದಿಯ ಹೆಸರನ್ನು ಕಂಠತಃ ಹೇಳಿದ್ದಾಯಿತು. ಪಾಂಡವರು ಅದಕ್ಕೆ ತಮ್ಮ ಅನುಜ್ಞೆಯನ್ನೂ ಕೊಟ್ಟರು. ಹೀಗಿರುವಾಗ ನಿನ್ನ ದೃಷ್ಟಿಯಲ್ಲಿ ಯಾವ ಕಾರಣದಿಂದ ದ್ರೌಪದಿಯು ಅಜಿತಳಾಗುತ್ತಾಳೆ?

ಅಹಂ ಮನ್ಯೇ ಸಭಾಮೇತಾಮಾನೀತಾಮೇಕವಾಸಸಮ್ ।
ಅಧರ್ಮೇಣೇತಿ ತತ್ರಾಪಿ ಶೃಣು ಮೇ ವಾಕ್ಯಮುತ್ತರಮ್ ॥೩೫॥

ಈ ಸಭೆಗೆ ಏಕವಸ್ತ್ರಳಾದ ಅವಳನ್ನು ಕರೆದುಕೊಂಡು ಬಂದದ್ದು ಅಧರ್ಮವೆಂದು ತಿಳಿದಿರುವೆ. ಆ ವಿಷಯದಲ್ಲೂ ನನ್ನ ಉತ್ತರವನ್ನು ಹೇಳುವೆನು ಕೇಳು.

ಏಕೋ ಭರ್ತಾ ಸ್ತ್ರಿಯೋ ದೇವೈರ್ವಿಹಿತಃ ಕುರುನಂದನ ।
ಇಯಂ ತ್ವನೇಕವಶಗಾ ವರ್ಧಕೀತಿ ವಿನಿಶ್ಚಿತಾ ॥೩೬॥

ಎಲೈ ಕುರುನಂದನನೇ! ಒಬ್ಬ ಹೆಂಗಸಿಗೆ ಒಬ್ಬ ಪತಿಯೆಂದು ದೇವತೆಗಳಿಂದ ವಿಹಿತವಾಗಿದೆ. ಅನೇಕ ಪತಿಗಳನ್ನು ಹೊಂದಿರುವ ಇವಳು ವೇಶ್ಯೆ ಎಂಬುವಲ್ಲಿ ಸಂಶಯವಿಲ್ಲ.

ಅಸ್ಯಾಃ ಸಭಾಯಾಂ ನಯನಂ ನ ಚಿತ್ರಮಿತಿ ಮೇ ಮತಿಃ ।
ಏಕಾಂಬರಧರತ್ವಂ ವಾऽಪ್ಯಥವಾಪಿ ವಿವಸ್ತ್ರತಾ ॥೩೭॥

ಇವಳು ಒಂದೇ ವಸ್ತ್ರವನ್ನು ಧರಿಸಿದವಳಾಗಿರಲಿ ಅಥವಾ ವಿವಸ್ತ್ರಳೇ ಆಗಿರಲಿ ಇಂತಹವಳನ್ನು ಸಭೆಗೆ ಕರತಂದುದರಲ್ಲಿ ಯಾವ ದೋಷವಿಲ್ಲ ಎಂದು ನನ್ನ ಅಭಿಪ್ರಾಯ.

ಯಚ್ಚೈಷಾಂ ದ್ರವಿಣಂ ಕಿಂಚಿದ್ ಯಾ ಚೈಷಾ ಯೇ ಚ ಪಾಂಡವಾಃ।
ಸೌಬಲೇನೇಹ ತತ್ ಸರ್ವಂ ಧರ್ಮೇಣ ವಿಜಿತಂ ವಸು ॥೩೮॥

ಈ ಪಾಂಡವಧನ ಈ ದ್ರೌಪದಿ ಮತ್ತು ಪಾಂಡವರು ಈ ಎಲ್ಲವನ್ನೂ ಶಕುನಿಯು ಧರ್ಮದಿಂದಲೇ ಜಯಿಸಿದ್ದಾನೆ.

ದುಶ್ಶಾಸನ ಸುಬಾಲೋऽಯಂ ವಿಕರ್ಣಃ ಪ್ರಾಜ್ಞವಾದಿಕಃ ।
ಪಾಂಡವಾನಾಂ ಚ ವಾಸಾಂಸಿ ದ್ರೌಪದ್ಯಾಶ್ಚಾಪ್ಯುಪಾಹರ ॥೩೯॥

ಎಲೈ ದುಶ್ಶಾಸನನೇ! ದೊಡ್ಡ ಮಾತುಗಳನ್ನು ಆಡುವ ಈ ವಿಕರ್ಣನು ಕೇವಲ ಬಾಲಕನಾಗಿದ್ದಾನೆ. ಪಾಂಡವರ ಮತ್ತು ದ್ರೌಪದಿಯ ವಸ್ತ್ರಗಳನ್ನು ತೆಗೆದುಕೋ.

ವೈಶಂಪಾಯನಃ

ತಚ್ಛ್ರುತ್ವಾ ಪಾಂಡವಾಃ ಸರ್ವೇ ಸ್ವಾನಿ ವಾಸಾಂಸಿ ಭಾರತ ।
ಅವಕೀರ್ಯೋತ್ತರೀಯಾಣಿ ಸಭಾಯಾಂ ಸಮುಪಾವಿಶನ್ ॥೪೦॥

ಎಲೈ ಭಾರತನೇ! ಆ ಮಾತುಗಳನ್ನು ಕೇಳಿದ ಪಾಂಡವರು ತಮ್ಮ ಉತ್ತರೀಯವನ್ನು ತೆಗೆದು ಸಭೆಯಲ್ಲಿಟ್ಟು ನೆಲದ ಮೇಲೆ ಕುಳಿತರು.

ತತೋ ದುಶ್ಶಾಸನೋ ರಾಜನ್ ದ್ರೌಪದ್ಯಾ ವಸನಂ ಬಲಾತ್ ।
ಸಭಾಮಧ್ಯೇ ಸಮಾಕ್ಷಿಪ್ಯ ವ್ಯಪಾಕ್ರಷ್ಟುಂ ಪ್ರಚಕ್ರಮೇ ।
ಆಕೃಷ್ಯಮಾಣೇ ವಸನೇ ವಿಲಲಾಪ ಸುದುಃಖಿತಾ ॥೪೧॥

ರಾಜನೇ! ಅನಂತರ ದುಶ್ಶಾಸನನು ಬಲಾತ್ಕರದಿಂದ ಸಭಾಮಧ್ಯದಲ್ಲಿ ದ್ರೌಪದಿಯ ವಸ್ತ್ರವನ್ನು ಮೇಲೆತ್ತಿ ಎಳೆಯಲು ಪ್ರಾರಂಬಿಸಿದನು. ವಸ್ತ್ರವು ಎಳೆಯಲ್ಪಡುತ್ತಿರಲು ಅತ್ಯಂತ ದುಃಖಿತಳಾದ ದ್ರೌಪದಿಯು ವಿಲಾಪವನ್ನು ಮಾಡಿದಳು.

ಜ್ಞಾತಂ ಮಯಾ ವಸಿಷ್ಠೇನ ಪುರಾ ಗೀತಂ ಮಹಾತ್ಮನಾ ।
ಮಹತ್ಯಾಪದಿ ಸಂಪ್ರಾಪ್ತೇ ಸ್ಮರ್ತವ್ಯೋ ಭಗವಾನ್ ಹರಿಃ ॥೪೨॥

ಮಹಾತ್ಮರಾದ ವಸಿಷ್ಠರು ಹಿಂದೆ ಹೇಳಿದ ಮಾತನ್ನು ನಾನು ತಿಳಿದಿದ್ದೇನೆ. ದೊಡ್ಡ ಆಪತ್ತು ಒದಗಿದಾಗ ಭಗವಂತನಾದ ಹರಿಯನ್ನು ಸ್ಮರಿಸಬೇಕು.

ಇತಿ ನಿಶ್ಚಿತ್ಯ ಮನಸಾ ಶರಣಾಗತವತ್ಸಲಮ್ ।
ಮನಸಾ ಚಿಂತಯಾಮಾಸ ದೇವಂ ನಾರಾಯಣಂ ಪ್ರಭುಮ್ ॥೪೩॥

ಹೀಗೆ ಮನಸ್ಸಿನಲ್ಲೇ ನಿಶ್ಚಿಯಿಸಿ ಶರಣಾಗತವತ್ಸಲನಾದ ಪ್ರಭುವಾದ ದೇವನಾದ ನಾರಾಯಣನನ್ನು ಮನಸ್ಸಿನಲ್ಲಿಯೇ ಚಿಂತಿಸಿದಳು.

ದ್ರೌಪದೀ

ಶಂಖಚಕ್ರಗದಾಪಾಣೇ ದ್ವಾರಕಾನಿಲಯಾಚ್ಯುತ ।
ಗೋವಿಂದ ಪುಂಡರೀಕಾಕ್ಷ ರಕ್ಷ ಮಾಂ ಶರಣಾಗತಾಮ್ ॥೪೪॥

ಎಲೈ ಶಂಖಚಕ್ರಗದಾಪಾಣಿಯಾದ ದ್ವಾರಕಾವಾಸಿಯಾದ ಅಚ್ಯುತನೇ ಗೋವಿಂದನೇ ಪುಂಡರೀಕಾಕ್ಷನೇ ಶರಣಾಗತಳಾದ ನನ್ನನ್ನು ರಕ್ಷಿಸು.

ಹಾ ಕೃಷ್ಣ ದ್ವಾರಕಾವಾಸಿನ್ ಕ್ವಾಸಿ ಯಾದವನಂದನ ।
ಇಮಾಮವಸ್ಥಾಂ ಸಂಪ್ರಾಪ್ತಾಮನಾಥಾಂ ಕಿಮುಪೇಕ್ಷಸೇ ॥೪೫॥

ಅಯ್ಯೋ ಅಯ್ಯೋ ದ್ವಾರಕಾವಾಸಿಯಾದ ಯಾವದನಂದನನಾದ ಕೃಷ್ಣನೇ! ಎಲ್ಲಿ ಹೋಗಿರುವೆ? ಇಂತಹ ದುರವಸ್ಥೆಯನ್ನು ಹೊಂದಿರುವ ಅನಾಥಳಾದ ನನ್ನನ್ನು ಏಕೆ ಉಪೇಕ್ಷೆಮಾಡುತ್ತಿರುವೆ?

ಗೋವಿಂದ ದ್ವಾರಕಾವಾಸಿನ್ ಕೃಷ್ಣ ಗೋಪೀಜನಪ್ರಿಯ ।
ಕೌರವೈಃ ಪರಿಭೂತಾಂ ಮಾಂ ಕಿಂ ನ ಜಾನಾಸಿ ಕೇಶವ ॥೪೬॥

ದ್ವಾರಕಾವಾಸಿಯಾದ ಗೋವಿಂದನೇ! ಗೋಪೀಜನ ಪ್ರಿಯನಾದ ಕೃಷ್ಣನೇ! ಕೇಶವನೇ! ನಾನು ಕೌರವರಿಂದ ಅಪಮಾನಕ್ಕೆ ಒಳಗಾಗಿರುವುದನ್ನು ನೀನು ತಿಳಿಯುತ್ತಿಲ್ಲವೆ?

ಹೇ ನಾಥ ಹೇ ರಮಾನಾಥ ವ್ರಜನಾಥಾರ್ತಿನಾಶನ ।
ಕೌರವಾರ್ಣವಮಗ್ನಾಂ ಮಾಮುದ್ಧರಸ್ವ ಜನಾರ್ದನ ॥೪೭॥

ಎಲೈ ಸ್ವಾಮಿಯೇ ಲಕ್ಷ್ಮೀಪತಿಯೇ ವ್ರಜನಾಥನೇ! ಜನಾರ್ದನನೇ! ಕೌರವಸಮುದ್ರದಲ್ಲಿ ಮುಳುಗಿ ಹೋಗುತ್ತಿರುವ ನನ್ನನ್ನು ಮೇಲೆಕ್ಕೆ ಎತ್ತು.

ಕೃಷ್ಣ ಕೃಷ್ಣ ಮಹಾಯೋಗಿನ್ ವಿಶ್ವಾತ್ಮನ್ ವಿಶ್ವಭಾವನ ।
ಪ್ರಪನ್ನಾಂ ಪಾಹಿ ಗೋವಿಂದ ಕುರುಮಧ್ಯೇऽವಸೀದತೀಮ್ ॥೪೮॥

ಕೃಷ್ಣಾ ಕೃಷ್ಣಾ ಮಹಾಯೋಗಿಯೇ! ವಿಶ್ವ ಸ್ವಾಮಿಯೇ ಸೃಷ್ಟಿಕರ್ತನೇ! ಗೋವಿಂದನೇ! ಕೌರವರ ಮಧ್ಯದಲ್ಲಿ ವಿನಾಶವನ್ನು ಹೊಂದುತ್ತಿರುವ ನಿನಗೆ ಶರಣಾಗತಳಾಗಿರುವ ನನ್ನನ್ನು ರಕ್ಷಿಸು.

ವೈಶಂಪಾಯನಃ

ಇತ್ಯನುಸ್ಮೃತ್ಯ ಕೃಷ್ಣಾ ಸಾ ಹರಿಂ ತ್ರಿಭುವನೇಶ್ವರಮ್ ।
ಪ್ರಾರುದದ್ ದುಃಖಿತಾ ರಾಜನ್ ಮುಖಮಾಚ್ಛಾದ್ಯ ಭಾಮಿನೀ ।
ಯಾಜ್ಞಸೇನ್ಯಾ ವಚಃ ಶ್ರುತ್ವಾ ಕೃಷ್ಣಾಂಗಂ ಪರಿತೋಭವತ್ ॥೪೯॥

(ಕೃಷ್ಣಾಂಗಂಜ್ವಲಿತೋऽಭವತ್ / ಕೃಷ್ಣೋऽಂಗ ಜ್ವಲಿತೋಭವತ್)

ಎಲೈ ರಾಜನೇ! ಹೀಗೆ ಭಾಮಿನಿಯಾದ ದ್ರೌಪದಿಯು ತ್ರಿಭುವನೇಶ್ವರನಾದ ಹರಿಯನ್ನು ಸ್ಮರಿಸಿ ತನ್ನ ಮುಖವನ್ನು ಮುಚ್ಚಿಕೊಂಡು ದುಃಖಿತಳಾಗಿ ಬಹಳವಾಗಿ ಅತ್ತಳು. ಎಲೈ ಪ್ರೀತಿ ಪಾತ್ರನೇ! ದ್ರೌಪದಿಯ ಮಾತನ್ನು ಕೇಳಿ ಕೃಷ್ಣನು ಅವಳ ಸುತ್ತಲೂ ನಿಂತನು.

ವೈಶಂಪಾಯನಃ

ಕೃಷ್ಣಂ ಚ ವಿಷ್ಣುಂ ಚ ಹರಿಂ ನರಂ ಚ
ತ್ರಾಣಾಯ ವಿಕ್ರೋಶತಿ ಯಾಜ್ಞಸೇನೀ ।
ತತೋ ಹರಿಸ್ತ್ವಂತರಿತೋ ಮಹಾತ್ಮಾ
ಸಮಾವೃಣೋತ್ ತಾಂ ವಿವಿಧೈರ್ವಸ್ತ್ರಪೂಗೈಃ ॥೫೦॥

ಕೃಷ್ಣನನ್ನೂ ವಿಷ್ಣುವನ್ನೂ ಹರಿಯನ್ನೂ ನರನನ್ನೂ ದ್ರೌಪದಿಯು ರಕ್ಷಣೆಗಾಗಿ ಮೊರೆಹೋಗುತ್ತಿರಲು ಮಹಾತ್ಮನಾದ ಹರಿಯು ಅದೃಶ್ಯನಾಗಿ ಅನೇಕ ವಿಧವಾದವಸ್ತ್ರ ರಾಶಿಗಳಿಂದ ಅವಳನ್ನು ಚೆನ್ನಾಗಿ ಸುತ್ತಿದನು.

ಆಕೃಷ್ಯಮಾಣೇ ವಸನೇ ದ್ರೌಪದ್ಯಾಶ್ಚ ವಿಶಾಂಪತೇ ।
ತದ್ರೂಪಮಪರಂ ವಸ್ತ್ರಂ ಪ್ರಾದುರಾಸೀದನೇಕಶಃ ॥೫೧॥

ಎಲೈ ರಾಜನೇ! ದ್ರೌಪದಿಯ ವಸ್ತ್ರವು ಎಳೆಯಲ್ಪಡುತ್ತಿರಲು ಅಂತಹದೇ ಇನ್ನೊಂದು ವಸ್ತ್ರವು ಅನೇಕ ಸಂಖ್ಯೆಯಲ್ಲಿ ಪ್ರಾದುರ್ಭವಿಸಿತು.

ನಾನಾರಾಗವಿರಾಗಾಣಿ ವಸನಾನ್ಯಥ ವೈ ಪ್ರಭೋ ।
ಪ್ರಾದುರ್ಭವಂತಿ ಶತಶಃ ಕೃಷ್ಣಸ್ಯ ಪರಿಪಾಲನಾತ್ ॥೫೨॥

ಪ್ರಭುವೇ! ಅನಂತರ ಕೃಷ್ಣನ ರಕ್ಷಣೆಯ ಕಾರಣದಿಂದಾಗಿ ಅನೇಕ ಬಣ್ಣದ ವಿಚಿತ್ರವಾದ ವಸನಗಳು ನೂರರ ಸಂಖ್ಯೆಯಲ್ಲಿ ಪ್ರಾದುರ್ಭವಿಸಲು ಪ್ರಾರಂಭವಾದವು.

ತತೋ ಹಲಹಲಾಶಬ್ದಃ ತತ್ರಾಸೀದ್ ಘೋರನಿಸ್ಸ್ವನಃ ।
ತದದ್ಭುತತಮಂ ಲೋಕೇ ಪ್ರೇಕ್ಷ್ಯ ಸರ್ವೇ ಸಭಾಸದಃ ।
ಧಿಗ್‌ಧಿಗಿತ್ಯನಿಶಂ ವಾಚ ಉತ್ಸೃಜನ್ ಕೌರವಂ ಪ್ರತಿ ॥೫೩॥

ಆಗ ಆ ಸಭೆಯಲ್ಲಿ ಘೋರವಾದ ನಾದವುಳ್ಳ ಸಂತೋಷದಿಂದ ಕೂಡಿದ ಶಬ್ದವು ಉಂಟಾಯಿತು. ಈ ಅತ್ಯದ್ಭುತವಾದ ದೃಶ್ಯವನ್ನು ನೋಡಿದ ಎಲ್ಲಾ ಸಭಾಸದರೂ ಕೌರವನಿಗೆ ಧಿಕ್ಕಾರ ಧಿಕ್ಕಾರ ಎಂಬ ಮಾತುಗಳನ್ನು ಆಡಿದರು.

ಯದಾ ತು ವಾಸಸಾಂ ರಾಶಿಃ ಸಭಾಮಧ್ಯೇ ಸಮಾಸ್ಥಿತಃ ।
ತತೋ ದುಶ್ಶಾಸನಃ ಶ್ರಾಂತೋ ವ್ರೀಳಿತಃ ಸಮುಪಾವಿಶತ್ ॥೫೪॥

ಯಾವಾಗ ಸಭೆಯ ಮಧ್ಯದಲ್ಲಿ ದೊಡ್ಡ ವಸ್ತ್ರದ ರಾಶಿಯೇ ಬಿದ್ದಿತೋ ಆಗ ದುಶ್ಶಾಸನನು ದಣಿದು ನಾಚಿಕೆಯಿಂದ ಕುಳಿತು ಕೊಂಡನು.

ಶಶಾಪ ತತ್ರ ಭೀಮಸ್ತು ರಾಜಮಧ್ಯೇ ಮಹಾಸ್ವರಃ ।
ಕ್ರೋಧಾದ್ ವಿಸ್ಫುರಮಾಣೋಷ್ಠೋ ವಿನಿಷ್ಪಿಷ್ಯ ಕರೇ ಕರಮ್ ॥೫೫॥

ಆಗ ಅಲ್ಲಿ ರಾಜಮಧ್ಯದಲ್ಲಿ ಭೀಮಸೇನನು ಕ್ರೋಧದಿಂದ ಅವನ ತುಟಿಗಳು ಅದುರುತ್ತಿರಲು ಕೈಯಿಂದ ಕೈಯನ್ನು ಹೊಸಕುತ್ತಾ ದೊಡ್ಡ ಧ್ವನಿಯಿಂದ ಹೀಗೆ ಶಪಿಸಿದನು.

ಭೀಮಃ

ಇದಂ ಮೇ ವಾಕ್ಯಮಾದಧ್ವಂ ಕ್ಷತ್ರಿಯಾ ಲೋಕವಾಸಿನಃ ।
ನೋಕ್ತಪೂರ್ವಂ ನರೈರನ್ಯೈರ್ನ ಚಾನ್ಯೋ ಯದ್ ವದಿಷ್ಯತಿ ॥೫೬॥

ಲೋಕವಾಸಿಗಳಾದ ಕ್ಷತ್ರಿಯರೇ ಈ ನನ್ನ ಮಾತನ್ನು ಸ್ವೀಕರಿಸಿ. ಇಂತಹ ಮಾತನ್ನು ಹಿಂದೆ ಯಾವ ಮನುಷ್ಯನೂ ಆಡಿರಲಿಲ್ಲ. ಮುಂದೆ ಯಾವನೂ ಆಡುವುದಿಲ್ಲ.

ಯದ್ಯೇತದೇವಮುಕ್ತ್ವಾ ತು ನ ಕುರ್ಯಾಂ ಪೃಥಿವೀಶ್ವರಾಃ ।
ಪಿತಾಮಹಾನಾಂ ಸರ್ವೇಷಾಂ ನಾಹಂ ಗತಿಮವಾಪ್ನುಯಾಮ್ ॥೫೭॥

ಅಸ್ಯ ಪಾಪಸ್ಯ ದುರ್ಜಾತೇರ್ಭಾರತಾಪಶದಸ್ಯ ಚ ।
ನ ಪಿಬೇಯಂ ಬಲಾದ್ ವಕ್ಷೋ ಭಿತ್ತ್ವಾ ಚೇದ್ರುಧಿರಂ ರಣೇ ॥೫೮॥

ಎಲೈ ಪೃಥಿವೀಪತಿಗಳೇ! ನಾನು ಈ ಮಾತನ್ನು ಆಡಿ ಅದರಂತೆ ನಡೆದುಕೊಳ್ಳದಿದ್ದರೆ ನಾನು ಮೃತನಾದ ಮೇಲೆ ನನ್ನ ಎಲ್ಲಾ ಪಿತಾಮಹರಿಗೂ ಆದ ಗತಿಯು ನನಗೆ ಆಗದೇ ಇರಲಿ. ಭರತವಂಶದಲ್ಲಿ ಅಧಮನಾಗಿ ದುರ್ಜಾತನಾದ ಈ ಪಾಪಿಯ ಎದೆಯನ್ನು ನಾನು ಯುದ್ಧದಲ್ಲಿ ಬಗೆದು ಅವನ ರಕ್ತವನ್ನು ಕುಡಿಯದಿದ್ದರೆ (ನನಗೆ ನನ್ನ ಪಿತಾಮಹರ ಸದ್ಗತಿಯು ಆಗುವುದು ಬೇಡ.)

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ಸರ್ವಲೋಕಪ್ರಹರ್ಷಣಮ್ ।
ಪ್ರಚಕ್ರುರ್ಬಹುಲಾಂ ಪೂಜಾಂ ಕುತ್ಸಂತೋ ಧೃತರಾಷ್ಟ್ರಜಮ್ ॥೫೯॥

ಸರ್ವಲೋಕಸಂತೋಷದಾಯಕವಾದ ಭೀಮನ ಆ ಮಾತುಗಳನ್ನು ಕೇಳಿ ಸಭಾಸದರೆಲ್ಲರೂ ಧೃತರಾಷ್ಟ್ರನನ್ನು ನಿಂದಿಸಿ ಭೀಮನ ಮಾತುಗಳನ್ನು ಬಹಳವಾಗಿ ಗೌರವಿಸಿದರು.

ಧಿಗ್ಧಿಕ್ಶಬ್ದಸ್ತತಸ್ತತ್ರ ಸಮಭೂದ್ ರೋಮಹರ್ಷಣಃ ।
ಸಭ್ಯಾನಾಂ ನರದೇವಾನಾಂ ದೃಷ್ಟ್ವಾ ಕುಂತೀಸುತಾಂಸ್ತದಾ ॥೬೦॥

ಆಗ ಕುಂತೀ ಪುತ್ರರನ್ನು ನೋಡಿದ ಸಭ್ಯರಾದ ಎಲ್ಲ ರಾಜರೂ ರೋಮಾಂಚಕಾರಿಯಾದ ಧಿಕ್ಕಾರ ಶಬ್ದವನ್ನು ಎಲ್ಲ ಕಡೆಗಳಿಂದಲೂ ಉಚ್ಚರಿಸಿದರು.

ನ ಬ್ರುವಂತಿ ಹಿ ಕೌರವ್ಯಾಃ ಪ್ರಶ್ನಮೇತಮಿತಿ ಸ್ಮ ಹ ।
ಸಜ್ಜನಃ ಕ್ರೋಶತಿ ಸ್ಮಾತ್ರ ಧೃತರಾಷ್ಟ್ರಂ ವಿಗರ್ಹಯನ್ ॥೬೧॥

ಅಲ್ಲಿದ್ದ ಸಜ್ಜನರೆಲ್ಲರೂ ದ್ರೌಪದಿಯು ಕೇಳಿದ ಈ ಪ್ರಶ್ನೆಗೆ ಕೌರವರು ಯಾರೂ ಉತ್ತರವನ್ನು ಕೊಡುತ್ತಿಲ್ಲ. ಎಂದು ಹೇಳಿ ಧೃತರಾಷ್ಟ್ರನನ್ನು ನಿಂದಿಸುತ್ತಾ ಸಿಡುಕಿದರು.

ತತೋ ಬಾಹೂ ಸಮುದ್ಧೃತ್ಯ ನಿವಾರ್ಯ ಚ ಸಭಾಸದಃ ।
ವಿದುರಃ ಸರ್ವಧರ್ಮಜ್ಞ ಇದಂ ವಚನಮಬ್ರವೀತ್ ॥೬೨॥

ಆಗ ಸರ್ವಧರ್ಮಜ್ಞನಾದ ವಿದುರನು ತನ್ನ ಬಾಹುಗಳನ್ನು ಮೇಲೆಕ್ಕೆತ್ತಿ ಸಭಾಸದರನ್ನು ಸುಮ್ಮನಿರುವಂತೆ ಹೇಳಿ ಈ ಮಾತನ್ನು ಆಡಿದನು.

ದ್ರೌಪದೀ ಪ್ರಶ್ನಮುಕ್ತೈವಂ ರೋರವೀತಿ ಹ್ಯನಾಥವತ್ ।
ನ ಚ ವಿಬ್ರೂತ ತಂ ಪ್ರಶ್ನಂ ಸಭ್ಯಾ ಧರ್ಮೋಽತ್ರ ಪೀಡ್ಯತೇ ॥೬೩॥

ದ್ರೌಪದಿಯು ಈ ಪ್ರಶ್ನೆಯನ್ನು ಕೇಳಿ ಅನಾಥಳಂತೆ ಮತ್ತೆ ಮತ್ತೆ ಅಳುತ್ತಿದ್ದಾಳೆ. ಎಲೈ ಸಭ್ಯರೆ! ನೀವು ಯಾರು ಈ ಪ್ರಶ್ನೆಗೆ ಉತ್ತರವನ್ನು ಹೇಳುತ್ತಿಲ್ಲ. ಇಲ್ಲಿ ಧರ್ಮದ ಪೀಡೆಯು ಉಂಟಾಗಿದೆ.

ಸಭಾಂ ಪ್ರಪದ್ಯತೇ ಪ್ರಶ್ನಃ ಪ್ರಜ್ವಲನ್ನಿವ ಹವ್ಯವಾಟ್ ।
ತಂ ವೈ ಸತ್ಯೇನ ಧರ್ಮೇಣ ಸಭ್ಯಾಃ ಪ್ರಶಮಯಂತ್ಯುತ ॥೬೪॥

ಪ್ರಜ್ವಲಿಸುವ ಅಗ್ನಿಯಂತೆ ಪ್ರಶ್ನೆಯು ಸಭೆಯನ್ನು ಪ್ರವೇಶಿಸುತ್ತದೆ. ಪ್ರಾಜ್ಞರಾದವರು ಸತ್ಯದಿಂದಲೂ ಮತ್ತು ಧರ್ಮದಿಂದಲೂ ಆ ಅಗ್ನಿಯನ್ನು ಉಪಶಮನಗೊಳಿಸುತ್ತಾರೆ.

ಧರ್ಮ್ಯಪ್ರಶ್ನಮಥೋ ಬ್ರೂಯಾದೇತತ್ ಸತ್ಯೇನ ಮಾನವಃ ।
ನ ಬ್ರೂಯುಶ್ಚ ತತಃ ಪ್ರಶ್ನಂ ಕಾಮಕ್ರೋಧವಶಾನುಗಾಃ ॥೬೫॥

ಆದ್ದರಿಂದ ಮನುಷ್ಯನಾದವನು ಇಂತಹ ಧರ್ಮಪ್ರಶ್ನೆಗೆ ಸತ್ಯದಿಂದ ಉತ್ತರಿಸಬೇಕು. ಕಾಮ ಕ್ರೋಧಗಳಿಗೆ ವಶರಾಗುವವರನ್ನು ಅನುಸರಿಸುವವರು ಮಾತ್ರ ಪ್ರಶ್ನೆಗೆ ಉತ್ತರವನ್ನು ಕೊಡುವುದಿಲ್ಲ.

ವಿಕರ್ಣೇನ ಯಥಾಪ್ರಶ್ನಂ ಪೂರ್ವಮುಕ್ತಂ ನರಾಧಿಪಾಃ ।
ಭವಂತೋಽಪಿ ಹಿ ತಂ ಪ್ರಶ್ನಂ ವಿಬ್ರುವಂತು ಯಥಾಮತಿ ॥೬೬॥

ಎಲೈ ರಾಜರೇ! ವಿಕರ್ಣನು ಪ್ರಶ್ನೆಗೆ ಅನುಗುಣವಾಗಿ ಮೊದಲು ಉತ್ತರವನ್ನು ಹೇಳಿದ್ದಾನೆ. ನೀವೂ ಸಹ ನಿಮ್ಮ ಮನಸ್ಸಿಗೆ ಒಪ್ಪುವಂತೆ ಆ ಪ್ರಶ್ನೆಗೆ ಉತ್ತರವನ್ನು ಹೇಳಿ.

ಯೋ ಹಿ ಪ್ರಶ್ನಂ ನ ವಿಬ್ರೂಯಾದ್ ಧರ್ಮದರ್ಶೀ ಸಭಾಂ ಗತಃ ।
ಅನೃತೇ ಯಾ ಫಲಪ್ರಾಪ್ತಿಸ್ತಸ್ಯಾಃ ಸೋಽರ್ಧಂ ಸಮಶ್ನುತೇ ॥೬೭॥

ಯಾವನು ಧರ್ಮದರ್ಶಿಯಾಗಿ ಸಭೆಗೆ ಬಂದು ಪ್ರಶ್ನೆಗೆ ಉತ್ತರವನ್ನು ಹೇಳುವುದಿಲ್ಲವೋ ಅವನು ಸುಳ್ಳನ್ನು ಆಡಿದರೆ ಏನು ಫಲವೋ ಅದರಲ್ಲಿ ಅರ್ಧಫಲವನ್ನು ಹೊಂದುತ್ತಾನೆ.

ಯಃ ಪುನರ್ವಿತಥಂ ಬ್ರೂಯಾದ್ ಧರ್ಮದರ್ಶೀ ಸಭಾಂ ಗತಃ ।
ಅನೃತಸ್ಯ ಫಲಂ ಕೃತ್ಸ್ನಂ ಪ್ರಾಪ್ನೋತೀತಿ ವಿನಿಶ್ಚಯಃ ॥೬೮॥

ಯಾವನು ಧರ್ಮದರ್ಶಿಯಾಗಿ ಸಭೆಗೆ ಬಂದು ವಿರುದ್ಧವಾಗಿ ಹೇಳುತ್ತಾನೆಯೋ ಅವನು ಅನೃತದ ಪೂರ್ಣಫಲವನ್ನು ನಿಶ್ಚಯವಾಗಿ ಪಡೆಯುತ್ತಾನೆ.

ಅತ್ರಾಪ್ಯುದಾಹರಂತೀಮಿತಿಹಾಸಂ ಪುರಾತನಮ್ ।
ಪ್ರಹ್ಲಾದಸ್ಯ ಚ ಸಂವಾದಂ ಮುನೇರಾಂಗಿರಸಸ್ಯ ಚ ॥೬೯॥

ಈ ವಿಷಯದಲ್ಲಿ ಪ್ರಹ್ಲಾದನಿಗೂ ಮತ್ತು ಅಂಗೀರಸರ ಕುಲದವನಾದ ಒಬ್ಬ ಋಷಿಗೂ ಹಿಂದೆ ನಡೆದ ಒಂದು ಸಂವಾದವನ್ನು ಇತಿಹಾಸರೂಪವಾಗಿ ಹೇಳುತ್ತಾರೆ.

ಪ್ರಹ್ಲಾದೋ ನಾಮ ದೈತ್ಯೇಂದ್ರಸ್ತಸ್ಯ ಪುತ್ರೋ ವಿರೋಚನಃ
ಕನ್ಯಾಹೇತೋರಾಂಗಿರಸಂ ಸುಧನ್ವಾನಮುಪಾದ್ರವತ್ ॥೭೦॥

ಪ್ರಹ್ಲಾದನೆಂಬ ಒಬ್ಬ ದೈತ್ಯೇಂದ್ರನ ಮಗನಾದ ವಿರೋಚನನು ಒಂದು ಕನ್ಯಾ ಸಲುವಾಗಿ ಅಂಗೀರಸರ ಮಗನಾದ ಸುಧನ್ವನ ಕಡೆಗೆ ಹೋದನು.

ಅಹಂ ಜ್ಯಾಯಾನಹಂ ಜ್ಯಾಯಾನಿತಿ ಕನ್ಯೇಪ್ಸಯಾ ತದಾ ।
ತಯೋರ್ದೇವನಮತ್ರಾಸೀತ್ ಪ್ರಾಣಯೋರಿತಿ ನಃ ಶ್ರುತಮ್ ॥೭೧॥

ಒಂದೇ ಕನ್ಯೆಯನ್ನು ಬಯಸಿದ ಇಬ್ಬರಲ್ಲಿ ನಾನು ಶ್ರೇಷ್ಠ .ನಾನು ಶ್ರೇಷ್ಠ ಎಂಬ ವಿವಾದವು ಉಂಟಾಯಿತು. ಆಗ ಅವರು ತಮ್ಮ ಪ್ರಾಣವನ್ನೇ ಪಣವಾಗಿಟ್ಟು ದ್ಯೂತವನ್ನು ಆಡಿದರೆಂದು ಕೇಳಿದ್ದೇನೆ.

ತಯೋಃ ಪ್ರಶ್ನವಿವಾದೋಽಭೂತ್ ಪ್ರಹ್ಲಾದಂ ತಾವಪೃಚ್ಛತಾಮ್ ।
ಜ್ಯಾಯಾನ್ ಕ ಆವಯೋರೇಕಃ ಪ್ರಶ್ನಂ ಪ್ರಬ್ರೂಹಿ ಮಾ ಮೃಷಾ ॥೭೨॥

ಅವರಿಗೆ ಪ್ರಶ್ನೆವಿವಾದವು ಉಂಟಾಯಿತು. ಆಗ ಅವರು ಪ್ರಹ್ಲಾದನ ಬಳಿಗೆ ಹೋಗಿ, ನಮ್ಮಿಬ್ಬರಲ್ಲಿ ಯಾರು ಶ್ರೇಷ್ಠ ಎಂಬ ಪ್ರಶ್ನೆಗೆ ಉತ್ತರವನ್ನು ಹೇಳು ಸುಳ್ಳನ್ನು ಹೇಳಬೇಡ ಎಂದು ಹೇಳಿದರು.

ಸ ವೈ ವಿವದನಾದ್ಭೀತಃ ಸುಧನ್ವಾನಂ ವ್ಯಲೋಕಯತ್ ।
ತಂ ಸುಧನ್ವಾಬ್ರವೀತ್ ಕ್ರುದ್ಧೋ ಬ್ರಹ್ಮದಂಡ ಇವ ಜ್ವಲನ್ ॥೭೩॥

ಯದಿ ವೈ ವಕ್ಷ್ಯಸಿ ಮೃಷಾ ಪ್ರಹ್ಲಾದಾಥ ನ ವಕ್ಷ್ಯಸಿ ।
ಶತಧಾ ತೇ ಶಿರೋ ವಜ್ರೀ ವಜ್ರೇಣ ಪ್ರಹರಿಷ್ಯತಿ ॥೭೪॥

ವಿರುದ್ಧವಾಗಿ ಮಾತನಾಡುವುದಕ್ಕೆ ಹೆದರಿ ಪ್ರಹ್ಲಾದನು ಸುಧನ್ವನನ್ನು ನೋಡಿದನು. ಆಗ ಸುಧನ್ವನು ಕೋಪದಿಂದ ಬ್ರಹ್ಮದಂಡದಂತೆ ಪ್ರಜ್ವಲಿಸುತ್ತಾ ಹೀಗೆ ಮಾತನಾಡಿದನು. ಎಲೈ ಪ್ರಹ್ಲಾದನೇ! ನೀನು ಸುಳ್ಳನ್ನು ಹೇಳಿದರೆ ಅಥವಾ ಏನನ್ನೂ ಹೇಳದಿದ್ದರೆ ನಿನ್ನ ಶಿರಸ್ಸನ್ನು ಇಂದ್ರನು ವಜ್ರಾಯುಧದಿಂದ ನೂರು ಭಾಗಗಳಾಗಿ ಸೀಳುವನು.

ವಿದುರಃ

ಸುಧನ್ವನಾ ತಥೋಕ್ತಃ ಸನ್ ವ್ಯಥಿತೋಶ್ವತ್ಥಪರ್ಣವತ್ ।
ಜಗಾಮ ಕಾಶ್ಯಪಂ ದೈತ್ಯೋ ಧೃತರಾಷ್ಟ್ರ ಮಹೌಜಸಮ್ ॥೭೫॥

ಎಲೈ ಧೃತರಾಷ್ಟ್ರನೇ! ಸುಧನ್ವನಿಂದ ಈ ಮಾತನ್ನು ಕೇಳಿದ ಪ್ರಹ್ಲಾದನು ಅಶ್ವತ್ಥ ವೃಕ್ಷದ ಎಲೆಯಂತೆ ನಡುಗುತ್ತಾ ವ್ಯಾಧಿತನಾಗಿ ಮಹಾಪರಾಕ್ರಮಶಾಲಿಗಳಾದ ಕಾಶ್ಯಪರ ಬಳಿಗೆ ಹೋದನು.

ಪ್ರಹ್ಲಾದಃ

ತ್ವಂ ವೈ ಧರ್ಮಸ್ಯ ವಿಜ್ಞಾತಾ ದೈವಸ್ಯೇಹಾಸುರಸ್ಯ ಚ ।
ಬ್ರಾಹ್ಮಣಸ್ಯ ಮಹಾಪ್ರಾಜ್ಞ ಧರ್ಮಕೃಚ್ಛ್ರಮಿದಂ ಶೃಣು ॥೭೫॥

ಮಹಾಪ್ರಾಜ್ಞರೇ! ನೀವು ದೇವಧರ್ಮಗಳನ್ನೂ ಅಸುರ ಧರ್ಮಗಳನ್ನೂ ತಿಳಿದಿದ್ದೀರಿ. ಬ್ರಾಹ್ಮಣರಿಗೆ ಒದಗಿದ ಈ ಧರ್ಮವ್ಯಥೆಯನ್ನು ಕೇಳಿ.

ಯೋ ಹಿ ಪ್ರಶ್ನಂ ನ ವಿಬ್ರೂಯಾದ್ ವಿತಥಂ ವಾ ವಿನಿರ್ದಿಶೇತ್ ।
ಕೇ ಚ ತಸ್ಯ ಪರೇ ಲೋಕಾಸ್ತನ್ಮಮಾಚಕ್ಷ್ವ ಪೃಚ್ಛತಃ ॥೭೬॥

ಯಾರು ಪ್ರಶ್ನೆಗೆ ಉತ್ತರವನ್ನು ಹೇಳುವುದಿಲ್ಲವೋ ಅಥವಾ ವಿರುದ್ಧವಾಗಿ ಹೇಳುತ್ತಾನೋ ಅವನಿಗೆ ಪರಲೋಕದಲ್ಲಿ ಯಾವ ಗತಿಯು ಆಗುವುದೆಂದು ಪ್ರಶ್ನೆಮಾಡುತ್ತಿರುವ ನನಗೆ ತಿಳಿಸಿ.

ಕಶ್ಯಪಃ

ಜಾನನ್ನವಿಬ್ರುವನ್ ಪೃಷ್ಟಃ ಕಾಮಾತ್ ಕ್ರೋಧಾದ್ ಭಯಾತ್ ತಥಾ ।
ಸಹಸ್ರಂ ವಾರುಣಾನ್ ಪಾಶಾನ್ ಆತ್ಮನಿ ಪ್ರತಿಮುಂಚತಿ ॥೭೭॥

ಪ್ರಶ್ನೆಯನ್ನು ಮಾಡಿದಾಗ ಉತ್ತರವನ್ನು ತಿಳಿದಿದ್ದರೂ ಯಾವನು ಕಾಮದಿಂದಲಾಗಲೀ ಕ್ರೋಧದಿಂದಲಾಗಲೀ ಭಯದಿಂದಲಾಗಲೀ ಉತ್ತರವನ್ನು ಹೇಳುವುದಿಲ್ಲವೋ ಅವನು ಸಹಸ್ರ ವಾರುಣ ಪಾಶಗಳಿಂದ ಬಿಗಿಯಲ್ಪಡುತ್ತಾನೆ.

ಸಾಕ್ಷೀ ಚ ವಿಬ್ರುವನ್ ಸಾಕ್ಷ್ಯಂ ಗೋಕರ್ಣಶಿಥಿಲಂ ಚರನ್ ।
ಸಹಸ್ರಂ ವಾರುಣಾನ್ ಪಾಶಾನ್ ಆತ್ಮನಿ ಪ್ರತಿಮುಂಚತಿ ॥೭೮॥

ಯಾವ ಸಾಕ್ಷಿಯು ಪ್ರಶ್ನೆಯನ್ನು ಕೇಳಿದಾಗ ಕೇಳದವನಂತೆ ನಟಿಸುತ್ತಾನೆಯೋ, ಅಥವಾ ಕೇಳಿದರೂ ಉತ್ತರವನ್ನು ಕೊಡದೆ ಇರುತ್ತಾನೆಯೋ ಅಂತಹ ಸಾಕ್ಷಿಯು ಪರಲೋಕದಲ್ಲಿ ನೂರು ವಾರುಣ ಪಾಶಗಳಿಂದ ಬಂಧಿಸಲ್ಪಡುತ್ತಾನೆ.

ತಸ್ಯ ಸಂವತ್ಸರೇ ಪೂರ್ಣೇ ಪಾಶ ಏಕಃ ಪ್ರಮುಚ್ಯತೇ ।
ತಸ್ಮಾತ್ ಸತ್ಯಂ ಹಿ ವಕ್ತವ್ಯಂ ಜಾನತಾ ಸತ್ಯಮಂಜಸಾ ॥೭೯॥

ಒಂದೊಂದು ವರ್ಷವು ಪೂರ್ಣವಾದಾಗ ಸಾವಿರ ಪಾಶಗಳಲ್ಲಿ ಒಂದು ಪಾಶವು ಬಿದ್ದು ಹೋಗುತ್ತದೆ. ಆದ್ದರಿಂದ ಸತ್ಯವನ್ನು ತಿಳಿದವನು ಸಭೆಯಲ್ಲಿ ಸತ್ಯವನ್ನೇ ಹೇಳಬೇಕು.

ವಿದ್ಧೋ ಧರ್ಮೋ ಹ್ಯಧರ್ಮೇಣ ಸಭಾಂ ಯತ್ರೋಪಪದ್ಯತೇ ।
ನ ಚಾಸ್ಯ ಶಲ್ಯಂ ಕೃಂತಂತಿ ವಿದ್ಧಾಃ ಸರ್ವೇ ಸಭಾಸದಃ ॥೮೦॥

ಯಾವ ಸಭೆಯಲ್ಲಿ ಧರ್ಮವು ಅಧರ್ಮದಿಂದ ವಿದ್ಧವಾಗುತ್ತದೆಯೋ ಅಲ್ಲಿ ಧರ್ಮಕ್ಕೆ ನಾಟಿದ ಈ ಶಲ್ಯವನ್ನು ಯಾರೂ ತೆಗೆಯದಿರುವ ಕಾರಣ ಎಲ್ಲಾ ಸಭಾಸದರೂ ಪಾಪವಿದ್ಧರಾಗುತ್ತಾರೆ.

ಅರ್ಧಂ ಭಜತಿ ವೈ ಶ್ರೇಷ್ಠಃ ಪಾದೋ ಭವತಿ ಕರ್ತೃಷು ।
ಪಾದಶ್ಚೈಕಃ ಸಭಾಸತ್ಸು ಯೋ ನ ನಿಂದಂತಿ ನಿಂನಿತಮ್ ॥೮೧॥

ನಿಂದನೀಯನಾದವನನ್ನು (ಅಥವಾ ನಿಂದನೀಯವಾದ ಕರ್ಮವನ್ನು) ನಿಂದಿಸದಿದ್ದರೆ ಸಭೆಯಲ್ಲಿ ಶ್ರೇಷ್ಠವಾದ ಸಭಾಪತಿಯು ಅರ್ಧಭಾಗ ಪಾಪವನ್ನು ಪಡೆಯುತ್ತಾನೆ. ಪಾಪವನ್ನು ಆಚರಿಸಿದವನು ಕಾಲುಭಾಗವನ್ನು ಪಡೆಯುತ್ತಾನೆ. ಉಳಿದೆಲ್ಲಾ ಸಭಾಸದರಿಗೂ ಇನ್ನು ಕಾಲು ಭಾಗವು ಸೇರುತ್ತದೆ.

ಅನೇನಾ ಭವತಿ ಶ್ರೇಷ್ಠೋ ಮುಚ್ಯಂತೇ ಚ ಸಭಾಸದಃ ।
ಏನೋ ಗಚ್ಛತಿ ಕರ್ತಾರಂ ನಿಂದಾರ್ಹೋ ಯತ್ರ ನಿಂದ್ಯತೇ ॥೮೨॥

ನಿಂದನಾರ್ಹನಾದವನನ್ನು ನಿಂದಿಸಿದರೆ ಸಭಾಪತಿಯು ಪಾಪದಿಂದ ನಿರ್ಮುಕ್ತನಾಗುತ್ತಾನೆ. ಸಭಾಸದರೂ ಪಾಪದಿಂದ ನಿರ್ಮುಕ್ತರಾಗುತ್ತಾರೆ. ಸಮಗ್ರವಾದ ಪಾಪವು ಪಾಪಕರ್ಮವನ್ನು ಮಾಡಿದವನನ್ನೇ ಹೋಗಿ ಸೇರುತ್ತದೆ.

ವಿತಥಂ ತು ವದೇಯುರ್ಯೇ ಧರ್ಮಂ ಪ್ರಹ್ಲಾದ ಪೃಚ್ಛತೇ ।
ಇಷ್ಟಾಪೂರ್ತಂ ಚ ತೇ ಘ್ನಂತಿ ಸಪ್ತ ಚೈವ ಪರಾವರಾನ್ ॥೮೩॥

ಎಲೈ ಪ್ರಹ್ಲಾದನೇ! ಸಭೆಯಲ್ಲಿ ಯಾರು ಪ್ರಶ್ನೆಮಾಡಿದವನನ್ನು ಕುರಿತು ಸುಳ್ಳನ್ನು ಹೇಳುತ್ತಾರೆಯೋ ಅವರು ಮಾಡಿದ ಇಷ್ಟಾಪೂರ್ತಗಳೆಲ್ಲವೂ ನಾಶವನ್ನು ಹೊಂದುತ್ತವೆ. ಹಿಂದಿನ ಏಳು ತಲೆಮಾರಿನವರು ಮತ್ತೆ ಮುಂದೆ ಬರುವ ಏಳು ತಲೆಮಾಡಿನವರು ದುರ್ಗತಿಯನ್ನು ಹೊಂದುತ್ತಾರೆ.

ಹೃತಕನ್ಯಸ್ಯ ಯದ್ ದುಃಖಂ ಮೃತಪುತ್ರಸ್ಯ ಚಾಪಿ ಯತ್ ।
ವೈರಿಣಾ ಪ್ರತಿಪನ್ನಸ್ಯ ರಾಜ್ಞಾ ಗ್ರಸ್ತಸ್ಯ ಚಾಪಿ ಯತ್ ॥೮೪॥

ಸ್ತ್ರಿಯಾಃ ಪತ್ಯಾ ವಿಹೀನಾಯಾಃ ಸ್ವಾರ್ಥಾದ್ ಭ್ರಷ್ಟಸ್ಯ ಚೈವ ಯತ್ ।
ಅಧ್ಯೂಢಾಯಾಶ್ಚ ಯದ್ ದುಃಖಂ ಸಾಕ್ಷಿಭಿರ್ವಿಹತಸ್ಯ ಚ ॥೮೫॥

ಏತಾನಿ ವೈ ಸಮಾನ್ಯಾಹುರ್ದುಃಖಾನಿ ತ್ರಿದಶೇಶ್ವರಾಃ
ತಾನಿ ದುಃಖಾನಿ ಸರ್ವಾಣಿ ಪ್ರಾಪ್ನೋತಿ ವಿತಥಂ ಬ್ರುವನ್ ॥೮೬॥

ಮಗಳನ್ನು ಕಳೆದುಕೊಂಡವನಿಗೆ ಯಾವ ದುಃಖವೋ ಮಗನು ಮೃತನಾದರೆ ಯಾವ ದುಃಖವೋ ಶತ್ರುವಿನಿಂದ ಮುತ್ತಿಗೆ ಹಾಕಲ್ಪಟ್ಟ ದುರ್ಬಲನಾದ ರಾಜನಿಗೆ ಯಾವ ದುಃಖವೋ ಪತಿಯನ್ನು ಶತ್ರುವಿನಿಂದ ಕಳೆದುಕೊಂಡ ಸ್ತ್ರೀಗೆ ಯಾವ ದುಃಖವೋ ತನ್ನ ಎಲ್ಲಾ ಸಂಪತ್ತನ್ನು ಕಳೆದುಕೊಂಡ ಮನುಷ್ಯನಿಗೆ ಯಾವ ದುಃಖವೋ ತನಗಿಂತ ಶ್ರೇಷ್ಠಳಾದ ಸವತಿಯನ್ನು ಪಡೆದವಳಿಗೆ ಯಾವ ದುಃಖವೋ ಈ ಎಲ್ಲಾ ದುಃಖಗಳೂ ಸಾಕ್ಷಿಯಿಂದ ವಿಹತನಾದ ಮನುಷ್ಯನ ದುಃಖಕ್ಕೆ ಸಮನಾಗುತ್ತದೆ.

ದೇವತೆಗಳು ಈ ದುಃಖಗಳನ್ನು ಸಮಾನವೆಂದು ಹೇಳುತ್ತಾರೆ. ಸುಳ್ಳನ್ನು ಹೇಳುವವನಿಗೆ ಮತ್ತು ಸಭೆಯಲ್ಲಿ ವಿರುದ್ಧವಾಗಿ ಮಾತನಾಡುವವನಿಗೆ ಈ ಎಲ್ಲಾ ದುಃಖಗಳೂ ಬಂದು ಸೇರುತ್ತವೆ.

ಸಮಕ್ಷಂ ದರ್ಶನಾತ್ ಸಾಕ್ಷ್ಯಂ ಶ್ರವಣಾಚ್ಚೇತಿ ಧಾರಣಾತ್ ।
ತಸ್ಮಾತ್ ಸತ್ಯಂ ಬ್ರುವನ್ ಸಾಕ್ಷೀ ಧರ್ಮಾರ್ಥಾಭ್ಯಾಂ ನ ಹೀಯತೇ ॥

ಸ್ವತಃ ನೋಡುವುದರಿಂದ ಸಾಕ್ಷಿ ಎಂದು ಕರೆಯುತ್ತಾರೆ. ಅಥವಾ ಕೇಳುವುದರಿಂದ ಅಥವಾ ಶಿಲೆ, ಪತ್ರಗಳಲ್ಲಿ ಬರೆದಿಡುವುದರಿಂದಲೂ ಸಾಕ್ಷಿ ಎನ್ನುತ್ತಾರೆ. ಆದ್ದರಿಂದ ಸತ್ಯವನ್ನು ಹೇಳುವ ಸಾಕ್ಷಿಯು ಧರ್ಮಾರ್ಥವನ್ನು ಕಳೆದು ಕೊಳ್ಳುವುದಿಲ್ಲ.

ವಿದುರಃ

ಕಾಶ್ಯಪಸ್ಯ ವಚಃ ಶ್ರುತ್ವಾ ಪ್ರಹ್ಲಾದಃ ಪುತ್ರಮಬ್ರವೀತ್ ।
ಶ್ರೇಯಾನ್ ಸುಧನ್ವಾ ತ್ವತ್ತೋ ವೈ ಮತ್ತಃ ಶ್ರೇಯಾಂಸ್ತಥಾಽಂಗಿರಾಃ ॥

ಮಾತಾ ಸುಧನ್ವನಶ್ಚೈವ ಶ್ರೇಯಸೀ ಮಾತೃತಸ್ತವ ।
ವಿರೋಚನ ಸುಧನ್ವಾಽಯಂ ಪ್ರಾಣಾನಾಮೀಶ್ವರಸ್ತವ ॥೮೯॥

ಕಾಶ್ಯಪರ ಮಾತುಗಳನ್ನು ಕೇಳಿದ ರಾಜನು ಪುತ್ರನಾದ ವಿರೋಚನನನ್ನು ಕುರಿತು ನಿನಗಿಂತ ಸುಧನ್ವನು ಶ್ರೇಷ್ಠನಾದವನು ನನಗಿಂತಲೂ ಅಂಗೀರಸರು ಶ್ರೇಷ್ಠರಾದವರು ಸುಧನ್ವನ ತಾಯಿಯು ನಿನ್ನ ತಾಯಿಗಿಂತ ಶ್ರೇಷ್ಠಳಾದವಳು. ಆದ್ದರಿಂದ ಎಲೈ ವಿರೋಚನನೇ ಈ ಸುಧನ್ವನು ನಿನ್ನ ಪ್ರಾಣಗಳಿಗೆ ಒಡೆಯನಾಗಿದ್ದಾನೆ.

ಸುಧನ್ವಾ

ಪುತ್ರಸ್ನೇಹಂ ಪರಿತ್ಯಜ್ಯ ಯಸ್ತ್ವಂ ಧರ್ಮೇ ವ್ಯವಸ್ಥಿತಃ ।
ಅನುಜಾನಾಮಿ ತೇ ಪುತ್ರಂ ಜೀವತ್ವೇಷ ಶತಂ ಸಮಾಃ ॥೯೦॥

ಪ್ರಹ್ಲಾದನೇ! ಪುತ್ರಸ್ನೇಹವನ್ನು ತೊರೆದು ನೀನು ಧರ್ಮದಲ್ಲೇ ವ್ಯವಸ್ಥಿತನಾಗಿರುವುದರಿಂದ ನಿನ್ನ ಪುತ್ರನಿಗೆ ಅನುಮತಿಯನ್ನು ಕೊಡುತ್ತಿದ್ದೇನೆ. ಇವನು ನೂರು ವರ್ಷ ಜೀವಿಸಲಿ.

ವಿದುರಃ

ಏವಂ ವೈ ಪರಮಂ ಧರ್ಮಂ ಶ್ರುತ್ವಾ ಸರ್ವೇ ಸಭಾಸದಃ ।
ಯಥಾಪ್ರಶ್ನಂ ಚ ಕೃಷ್ಣಾಯಾ ಮನ್ಯಧ್ವಂ ತತ್ರ ಕಿಂ ಪರಮ್ ॥೯೧॥

ಹೀಗೆ ಪರಮಧರ್ಮವನ್ನು ಕೇಳಿದ ಸಭಾಸದರಾದ ನೀವೆಲ್ಲರೂ ದ್ರೌಪದಿಯ ಪ್ರಶ್ನೆಗೆ ಯಾವುದು ಶ್ರೇಷ್ಠವಾದ ಉತ್ತರ ಎಂದು ತಿಳಿಯುತ್ತೀರಿ?

ವಿದುರಸ್ಯ ವಚಃ ಶ್ರುತ್ವಾ ನೋಚುಃ ಕಿಂಚನ ಪಾರ್ಥಿವಾಃ ।
ಕರ್ಣೋ ದುಶ್ಶಾಸನಂ ಪ್ರಾಹ ಕೃಷ್ಣಾಂ ದಾಸೀಂ ಗೃಹಂ ನಯ ॥೯೨॥

ವಿದುರನ ಮಾತುಗಳನ್ನು ಕೇಳಿದ ರಾಜರು ಏನನ್ನೂ ಮಾತನಾಡಲಿಲ್ಲ. ಕರ್ಣನು ದುಶ್ಶಾಸನನನ್ನು ಕುರಿತು ದಾಸಿಯಾದ ದ್ರೌಪದಿಯನ್ನು ಮನೆಗೆ ಕರೆದುಕೊಂಡು ಹೋಗು ಎಂದನು.

ತಾಂ ವೇಪಮಾನಾಂ ಸವ್ರೀಡಾಂ ರೋಕಯಂತೀಂ ಚ ಪಾಂಡವಾನ್ ।
ದುಶ್ಶಾಸನಃ ಸಭಾಮಧ್ಯೇ ಏಚಕರ್ಷ ತಪಸ್ವಿನೀಮ್ ॥೯೩॥

ನಾಚಿಕೆ ಮತ್ತು ಅವಮಾನಗಳಿಂದ ಸಭೆಯ ಮಧ್ಯೆ ನಡುಗುತ್ತಾ ಪಾಂಡವರ ಕಡೆಗೆ ನೋಡುತ್ತಿದ್ದ ಶೋಚನೀಯಳಾದ ಆ ದ್ರೌಪದಿಯನ್ನು ದುಶ್ಶಾಸನನು ಪುನಃ ಎಳೆದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಸಭಾಪರ್ವಣಿ ಅಷ್ಟಾಶೀತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ವಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಂಭತ್ತೆಂಟನೆಯ ಅಧ್ಯಾಯವು ಮುಗಿಯಿತು.

★★★★★

ಎಂಭತ್ತೊಂಭತ್ತನೆಯ ಅಧ್ಯಾಯ

(ದ್ರೌಪದಿಯ ವಿಲಾಪ ಮತ್ತು ವಿದುರನ ಸಾಂತ್ವನ.)

ದ್ರೌಪದೀ

ತಾವತ್ ಪ್ರತೀಕ್ಷ ದುಷ್ಪುದ್ಧೇ ದುಶ್ಶಾಸನ ನರಾಧಮ ।
ಪುರಸ್ತಾತ್ ಕರಣೀಯಂ ಮೇ ನ ಕೃತಂ ಕಾರ್ಯಮುತ್ತಮಮ್ ।
ವಿಹ್ವಲಾಽಸ್ಮಿ ಕೃತಾನೇನ ಕರ್ಷತಾ ಬಲಿನಾ ಬಲಾತ್ ॥೧॥

ಅಭಿವಾದಂ ಕರೋಮ್ಯೇಷಾಂ ಕುರೂಣಾಂ ಕುರುಸಂಸದಿ ।
ನ ಮೇ ಸ್ಯಾದಪರಾಧೋಽಯಂ ಯದಿದಂ ನ ಕೃತಂ ಮಯಾ ॥೨॥

ಎಲೈ ನರಾಧಮನಾದ ದುರ್ಬುದ್ಧಿಯುಳ್ಳ ದುಶ್ಶಾಸನನೇ! ಒಂದು ಕ್ಷಣ ತಡೆ. ನಾನು ಮೊದಲು ಮಾಡಬೇಕಿದ್ದ ನಿನ್ನ ಹಸ್ತಚ್ಛೇದ ರೂಪವಾದ ಶ್ರೇಷ್ಠವಾದ ಕಾರ್ಯವನ್ನು ಮಾಡಲಿಲ್ಲ. ಅಂತಹ ನಾನು ಬಲಿಷ್ಠನಾದ ನೀನು ನನ್ನನ್ನು ಎಳೆದೊಯ್ಯುತ್ತಿರುವಾಗ ವಿಹ್ವಲಳಾಗಿದ್ದೇನೆ. ಈ ಕುರುಸಭೆಯಲ್ಲಿ ಎಲ್ಲ ಕುರುಗಳಿಗೂ ನಮಸ್ಕಾರವನ್ನು ಮಾಡುತ್ತಿದ್ದೇನೆ. ಈ ದ್ಯೂತವನ್ನು ನಾನು ಮಾಡಲಿಲ್ಲ. ಆದ್ದರಿಂದ ನನ್ನ ಅಪರಾಧವಿಲ್ಲ.

ವೈಶಂಪಾಯನಃ

ಸಾ ತೇನ ಚ ಸಮುದ್ಧೂತಾ ದುಃಖೇನ ಚ ತಪಸ್ವಿನೀ ।
ಪತಿತಾ ವಿಲಲಾಪೇದಂ ಸಭಾಯಾಮತಥೋಚಿತಾ ॥೩॥

ಶೋಚನೀಯಳಾದ ದ್ರೌಪದಿಯು ದುಶ್ಶಾಸನನಿಂದ ಎಳೆಯಲ್ಪಟ್ಟವಳಾಗಿ ದುಃಖದಿಂದ ನೆಲದ ಮೇಲೆ ಬಿದ್ದು, ಸಭೆಯಲ್ಲಿ ವಿಲಾಪಮಾಡಲು ಅನರ್ಹಳಾದ ಅವಳು ಹೀಗೆ ವಿಲಾಪವನ್ನು ಮಾಡಿದಳು.

ದ್ರೌಪದೀ

ಸ್ವಯಂವರೇ ಯಾಸ್ಮಿ ನೃಪೈರ್ದ್ಯಷ್ಟಾ ರಂಗೇ ಸಮಾಗತೈಃ ।
ನದೃಷ್ಟಪೂರ್ವಾ ಚಾನ್ಯತ್ರ ಸಾಽಹಮದ್ಯ ಸಭಾಂ ಗತಾ ॥೪॥

ಯಾವ ನನ್ನನ್ನು ಸ್ವಯಂವರಕಾಲದಲ್ಲಿ ಮಾತ್ರ ರಂಗಸ್ಥಳದಲ್ಲಿ ರಾಜರು ನೋಡಿದ್ದರೋ ಇನ್ನು ಬೇರೆ ಸಮಯದಲ್ಲಿಯೂ ಹಿಂದೆ ಯಾರೂ ನೋಡಿರಲಿಲ್ಲವೋ ಅಂತಹ ನಾನು ಈ ದಿನ ಸಭೆಗೆ ಬಂದಿದ್ದೇನೆ.

ಯಾಂ ನ ವಾಯುರ್ನ ಚಾದಿತ್ಯೋ ದೃಷ್ಟವಂತೌ ಪುರಾ ಗೃಹೇ ।
ಸಾಹಮದ್ಯ ಸಭಾಮಧ್ಯೇ ಕ್ಲಿಶ್ಯಾಮಿ ಕುರುಸಂಸದಿ ॥೫॥

ಹಿಂದೆ ಅರಮನೆಯಲ್ಲಿ ಯಾವ ನನ್ನನ್ನು ವಾಯುವಾಗಲೀ ಅಥವಾ ಸೂರ್ಯನಾಗಲೀ ನೋಡಿರಲಿಲ್ಲವೋ ಅಂತಹ ನಾನು ಈ ದಿನ ಸಭೆಯ ಮಧ್ಯದಲ್ಲಿ ನಿಂತು ಈ ಕುರುಸಭೆಯಲ್ಲಿ ಕ್ಲೇಶವನ್ನು ಅನುಭವಿಸುತ್ತಿದ್ದೇನೆ.

ಯಾಂ ನ ಮೃಷ್ಯಂತಿ ವಾತೇನ ಸ್ಪೃಶ್ಯಮಾನಾಂ ಪುರಾ ಗೃಹೇ ।
ಸ್ಪೃಶ್ಯಮಾನಾಂ ಸಹಂತೇದ್ಯ ಪಾಂಡವಾಸ್ತಾಂ ದುರಾತ್ಮನಾ ॥೬॥

ಹಿಂದೆ ಅರಮನೆಯಲ್ಲಿ ಯಾವ ನನ್ನನ್ನು ವಾಯುವು ಸ್ಪರ್ಶಮಾಡಿದರೂ ಸಹಿಸದಿದ್ದ ಪಾಂಡವರು ಅಂತಹ ನನ್ನನ್ನು ಈ ದಿನ ಈ ದುರಾತ್ಮನು ಸ್ಪರ್ಶಮಾಡುವುದನ್ನು ಸಹಿಸುತ್ತಿದ್ದಾರೆ.

ಮೃಷ್ಯಂತೇ ಕುರವಶ್ಚೇಮೇ ಮನ್ಯೇ ಕಾಲವಿಪರ್ಯಯಮ್ ।
ಸ್ನುಷಾಂ ದುಹಿತರಂ ಚೈವ ಕ್ಲಿಶ್ಯಮಾನಾಮನರ್ಹತೀಮ್ ॥೭॥

ಸೊಸೆಯೂ ಮಗಳೂ ಆದ ಕ್ಲೇಶಕ್ಕೆ ಅನರ್ಹಳಾದ ನಾನು ಹೀಗೆ ಕ್ಲೇಶಪಡುವುದನ್ನು ನೋಡಿ ಈ ಕುರುಗಳೂ ಸುಮ್ಮನಿದ್ದಾರೆ. ಕಾಲವು ವ್ಯತ್ಯಾಸವನ್ನು ಹೊಂದಿದೆ ಎಂದು ಭಾವಿಸುತ್ತೇನೆ.

ಕಿನ್ನ್ವತಃ ಕೃಪಣಂ ಭೂಯೋ ಯದಹಂ ಸ್ತ್ರೀ ಸತೀ ಶುಭಾ ।
ಸಭಾಮಧ್ಯೇ ವಿಗಾಹೇದ್ಯ ಕ್ವ ನು ಧರ್ಮೋ ಮಹೀಕ್ಷಿತಾಮ್ ॥೮॥

ಇದಕ್ಕಿಂತ ಕೃಪಣವಾದದ್ದು ಏನಿದೆ? ನಾನು ಪರಿಶುದ್ಧಳಾದ ಸ್ತ್ರೀಯಾಗಿ ಈ ಸಭಾಮಧ್ಯದಲ್ಲಿ ನಿಂತಿದ್ದೇನೆ. ರಾಜರ ಧರ್ಮವು ಎಲ್ಲಿ ಹೊಯಿತು?

ಧರ್ಮಂ ಸ್ತ್ರಿಯಃ ಸಭಾಂ ಪೂರ್ಣಾಂ ನ ನಯಂತೀತಿ ನಃ ಶ್ರುತಮ್ ।
ಸ ನಷ್ಟಃ ಕೌರವೇಯೇಷು ಪೂರ್ವೋ ಧರ್ಮಃ ಸನಾತನಃ ॥೯॥

ಸ್ತ್ರೀಯರನ್ನು ಪೂರ್ಣವಾದ ಸಭೆಗೆ ಕರೆದುಕೊಂಡು ಹೋಗದಿರುವುದು ಧರ್ಮವೆಂದು ನಾನು ಕೇಳಿದ್ದೇನೆ. ಆ ಸನಾತನವಾದ ಪೂರ್ವಧರ್ಮವು ಈ ದಿನ ಕೌರವರಲ್ಲಿ ನಷ್ಟವಾಗಿದೆ.

ಕಥಂ ಭಾರ್ಯಾ ಪಾಂಡವಾನಾಂ ಪಾರ್ಷತಸ್ಯ ಸ್ವಸಾ ಸತೀ ।
ವಾಸುದೇವಸ್ಯ ಚ ಸಖೀ ಪಾರ್ಥಿವಾನಾಂ ಸಭಾಮಿಮಾಮ್ ॥೧೦॥

ಪಾಂಡವರ ಭಾರ್ಯೆಯೂ ಧೃಷ್ಟದ್ಯುಮ್ನನ ತಂಗಿಯೂ ಕೃಷ್ಣನ ಸ್ನೇಹಿತೆಯೂ ಆದ ನನ್ನನ್ನು ರಾಜರಿರುವ ಈ ಸಭೆಗೆ ಹೇಗೆ ಕರೆತಂದರು?

ಮಾಮಿಮಾಂ ಧರ್ಮರಾಜಸ್ಯ ಭಾರ್ಯಾಂ ಸದೃಶವರ್ಣಜಾಮ್ ।
ಬ್ರೂತ ದಾಸೀಮದಾಸೀಂ ಚ ಕಿಂ ಕರಿಷ್ಯಾಮಿ ಕೌರವಾಃ ॥೧೧॥

ಕೌರವರೇ! ನಿಮಗೆ ಸಮಾನವಾದ ವರ್ಣದಳಾದ ಧರ್ಮರಾಜನ ಭಾರ್ಯೆಯಾದ ಅದಾಸಿಯಾದ ನನ್ನನ್ನು ದಾಸಿ ಎಂದು ಕರೆಯುತ್ತಿದ್ದೀರಿ. ನಾನೇನು ಮಾಡಲಿ?

ಅಯಂ ಹಿ ಮಾಂ ದೃಢಂ ಕ್ಷುದ್ರಃ ಕೌರವಾಣಾಂ ಯಶೋಹರಃ ।
ಕ್ಲಿಶ್ನಾತಿ ನಾಹಂ ತತ್ ಸೋಢುಂ ಚಿರಂ ಶಕ್ಷ್ಯಾಮಿ ಕೌರವಾಃ ॥೧೨॥

ಕೌರವರ ಕೀರ್ತಿನಾಶಕನಾದ ಈ ಕ್ಷುದ್ರನು ನನ್ನನ್ನು ದೃಢವಾಗಿ ಕ್ಲೇಶಕ್ಕೆ ಒಳಪಡಿಸುತ್ತಿದ್ದಾನೆ. ಕೌರವರೇ! ನಾನು ಇದನ್ನು ಬಹಳ ಕಾಲ ಸಹಿಸಲಾರೆ.

ವಿದುರಃ

ಉಕ್ತವಾನಸ್ಮಿ ಕಲ್ಯಾಣಿ ಧರ್ಮಸ್ಯಾಸ್ಯ ಪರಾಂ ಗತಿಮ್ ।
ಲೋಕೇ ನ ಶಕ್ಯತೇ ಗಂತುಮಪಿ ವಿಪ್ರೈರ್ಮಹಾತ್ಮಭಿಃ ॥೧೩॥

ಎಲೌ ಕಲ್ಯಾಣಿಯೇ ನಾನು ನಿನಗೆ ಧರ್ಮದ ಸೂಕ್ಷ್ಮಗತಿಯನ್ನು ತಿಳಿಸಿದ್ದೇನೆ. ಲೋಕದಲ್ಲಿ ಮಹಾತ್ಮರಾದ ಬ್ರಾಹ್ಮಣರಿಗೂ ಸಹ ಅದನ್ನು ತಿಳಿಯುವುದು ಕಷ್ಟ.

ಬಲವಾಂಸ್ತು ಯಥಾ ಧರ್ಮಂ ಲೋಕೇ ಪಶ್ಯತಿ ಪೂರುಷಃ ।
ಸ ಧರ್ಮೋ ಧರ್ಮವೇಲಾಯಾಂ ಭವತ್ಯಭಿಹತಃ ಪರೈಃ ॥೧೪॥

ಪ್ರಬಲನಾದ ವ್ಯಕ್ತಿಯು ಧರ್ಮವನ್ನು ಹೇಗೆ ನೋಡುತ್ತಾನೋ ಅಂತಹಧರ್ಮವು, ಅಧರ್ಮದ ಸಮಯದಲ್ಲಿ ಪರರಿಂದ ಕೆಡಿಸಲ್ಪಡುತ್ತದೆ.

ನಹಿ ವಕ್ತುಂ ತು ತೇ ಪ್ರಶ್ನಮಿಮಂ ಶಕ್ನೋಮಿ ನಿಶ್ಚಯಾತ್ ।
ಸೂಕ್ಷ್ಮತ್ವಾದ್ ಗಹನತ್ವಾಚ್ಚ ಕಾರ್ಯಸ್ಯಾಸ್ಯ ಚ ಗೌರವಾತ್ ॥೧೫॥

ನಾನು ಖಂಡಿತವಾಗಿ ನಿನ್ನ ಈ ಪ್ರಶ್ನೆಯು ಸೂಕ್ಷ್ಮವಾಗಿರುವುದರಿಂದ ಗಹನವಾಗಿರುವುದರಿಂದ ಮತ್ತು ಮುಂದೆ ಆಗ ಬೇಕಾಗಿರುವ ಭೂಭಾರಹರಣರೂಪವಾದ ಕಾರ್ಯದ ಗೌರವದಿಂದ ಅದಕ್ಕೆ ಬಿಡಿಸಿ ಉತ್ತರವನ್ನು ಹೇಳಲು ಸಮರ್ಥನಾಗುತ್ತಿಲ್ಲ.

ನೂನಮಂತಃ ಕುಲಸ್ಯಾಸ್ಯ ಭವಿತಾ ನಚಿರಾದಿವ ।
ತಥಾ ಹಿ ಕುರವಃ ಸರ್ವೇ ಲೋಭಮೋಹಪರಾಯಣಾಃ ॥೧೬॥

ನಿಶ್ಚಯವಾಗಿ ಇನ್ನು ಅಲ್ಪಕಾಲದಲ್ಲಿಯೇ ಈ ಕುಲದ ನಾಶವು ಸಂಭವಿಸುವುದು. ಅದಕ್ಕೆ ಅನುಗುಣವಾಗಿ ಎಲ್ಲಾ ಕುರುಗಳು ಲೋಭವನ್ನೂ ಮೋಹವನ್ನೂ ಆಶ್ರಯಿಸಿದ್ದಾರೆ.

ಕುಲೇ ಜಾತಾ ಹಿ ಕಲ್ಯಾಣಿ ವ್ಯಸನಾಭ್ಯಾಹತಾ ಭೃಶಮ್ ।
ಧರ್ಮ್ಯಾನ್ಮಾರ್ಗಾನ್ನ ಚ್ಯವಂತೇ ಯಥಾ ನಸ್ತ್ವಂ ವಧೂಸ್ತಥಾ ॥೧೭॥

ಎಲೌ ಕಲ್ಯಾಣಿಯೇ! ಸತ್ಕುಲದಲ್ಲಿ ಹುಟ್ಟಿದ ವ್ಯಸನಕ್ಕೆ ಸಿಲುಕಿದ ನಿನ್ನ ಪತಿಗಳಾದ ಪಾಂಡವರು ಧರ್ಮಸಮ್ಮತವಾದ ಮಾರ್ಗವನ್ನು ಬಿಡುತ್ತಿಲ್ಲ. ನೀನಾದರೂ ಸಹ ನಮ್ಮ ಸೊಸೆಯು ಹೇಗಿರಬೇಕೊ ಹಾಗೆಯೇ ನಡೆದು ಕೊಳ್ಳುತ್ತಿದ್ದೀಯೆ.

ಉಪಪನ್ನಂ ಚ ಪಾಂಚಾಲಿ ತವೇದಂ ವೃತ್ತಮೀದೃಶಮ್ ।
ಯತ್ ಕೃಚ್ಛ್ರಮಪಿ ಸಂಪ್ರಾಪ್ತಾ ಧರ್ಮಮೇವಾನ್ವವೇಕ್ಷಸೇ ॥೧೮॥

ಪಾಂಚಾಲಿಯೇ ಕಷ್ಟಕ್ಕೆ ಸಿಲುಕಿದರೂ ಧರ್ಮವನ್ನೇ ನೋಡುವ ಇಂತಹ ನಡತೆಯು ಅತ್ಯಂತ ಪಪನ್ನವಾಗಿದೆ.

ಏತೇ ದ್ರೋಣಾದಯಶ್ಚೈವ ವೃದ್ಧಾ ಧರ್ಮವಿದೋ ಜನಾಃ ।
ಶೂನ್ಯೈಃ ಶರೀರೈಸ್ತಿಷ್ಠಂತಿ ಗತಾಸವ ಇವಾನತಾಃ ॥೧೯॥

ಈ ದ್ರೋಣ ಮೊದಲಾದ ಪೂಜ್ಯರೂ ಧರ್ಮಜ್ಞರೂ ಮೊದಲಾದ ಜನರೆಲ್ಲರೂ ಪ್ರಾಣವನ್ನು ಕಳೆದು ಕೊಂಡವರಂತೆ ಶೂನ್ಯ ಶರೀರದಿಂದ ತಲೆಯನ್ನು ತಗ್ಗಿಸಿ ಕುಳಿತಿದ್ದಾರೆ.

ಯುಧಿಷ್ಠಿರಸ್ತು ಪ್ರಶ್ನೇಽಸ್ಮಿನ್ ಪ್ರಮಾಣಮಿತಿ ಮೇ ಮತಿಃ ।
ಅಜಿತಾಂ ವಾ ಜಿತಾಂ ವಾ ತ್ವಾಂ ಸ್ವಯಂ ವ್ಯಾಹರ್ತುಮರ್ಹತಿ ॥೨೦॥

ಈ ಪ್ರಶ್ನೆಗೆ ಉತ್ತರವನ್ನು ಹೇಳುವ ವಿಷಯದಲ್ಲಿ ಧರ್ಮರಾಜನೇ ಸಮರ್ಥನೆಂದು ನನ್ನ ಅಭಿಪ್ರಾಯ. ನೀನು ಜಿತಳಾಗಿದ್ದೀಯೋ ಅಥವಾ ಅಜಿತಳಾಗಿದ್ದೀಯೋ ಎಂದು ತಾನೇ ಹೇಳಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಏಕೋನನವತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ಏಕವಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಂಭತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು.

★★★★★

ತೊಂಬತ್ತನೆಯ ಅಧ್ಯಾಯ

(ಧರ್ಮರಾಜನು ನಮಗೆ ಪ್ರಭುವಲ್ಲ ಎಂದು ಪಾಂಡವರು ಹೇಳಲಿ ಎಂದು ದುರ್ಯೋಧನನ ಒತ್ತಾಯ, ಅದಕ್ಕೆ ಭೀಮಸೇನನ ಉತ್ತರ.)

ವೈಶಂಪಾಯನಃ

ತಥಾ ಚ ದೃಷ್ಟ್ವಾ ಬಹು ತತ್ರ ದೇವೀಂ
ರೋರೂಯಮಾಣಾಂ ಕುರರೀಮಿವಾರ್ತಾಮ್ ।
ನೋಚುರ್ವಚಃ ಸಾಧ್ವಥವಾಽಪ್ಯಸಾಧು
ಮಹೀಕ್ಷಿತೋ ಧಾರ್ತರಾಷ್ಟ್ರಸ್ಯ ಭೀತಾಃ ॥೧॥

ಹಾಗೆ ದ್ರೌಪದಿದೇವಿಯು ಆರ್ತಳಾಗಿ ಬಹಳ ರೋದನ ಮಾಡುತ್ತಿರುವುದನ್ನು ನೋಡಿ ರಾಜರು ದುರ್ಯೋಧನನಿಗೆ ಹೆದರಿ ಶುಭವನ್ನಾಗಲೀ ಅಥವಾ ಅಶುಭವನ್ನಾಗಲೀ ಏನನ್ನೂ ಮಾತನಾಡಲಿಲ್ಲ.

ದೃಷ್ಟ್ವಾ ತು ತಾನ್ ಪಾರ್ಥಿವಪುತ್ರಪೌತ್ರಾನ್
ತೂಷ್ಣೀಂಭೂತಾನ್ ಧೃತರಾಷ್ಟ್ರಸ್ಯ ಪುತ್ರಃ ।
ಸ್ಮಯನ್ನಿವೇದಂ ವಚನಂ ಬಭಾಷೇ
ಪಾಂಚಾಲರಾಜಸ್ಯ ಸುತಾಂ ತದಾನೀಮ್ ॥೨॥

ರಾಜರ ಮಕ್ಕಳು ಮೊಮ್ಮಕ್ಕಳು ಸುಮ್ಮನಿರುವುದನ್ನು ನೋಡಿದ ದುರ್ಯೋಧನನು ಆಗ ಪಾಂಚಾಲರಾಜ ಕುಮಾರಿಯಾದ ಕೃಷ್ಣೆಯನ್ನು ಕುರಿತು ನಗುತ್ತಾ ಹೀಗೆ ಮಾತನಾಡಿದನು.

ತಿಷ್ಠತ್ವಯಂ ಪ್ರಶ್ನ ಉದಾರಸತ್ವೇ
ಭೀಮೇಽರ್ಜುನೇ ಸಹದೇವೇ ತಥೈವ ।
ಪತ್ಯೌ ಚ ತೇ ನಕುಲೇ ಯಾಜ್ಞಸೇನಿ
ವದಂತ್ವೇತೇ ವಚನಂ ತ್ವತ್ಪ್ರಯುಕ್ತಮ್ ॥೩॥

ಉದಾರಸತ್ವವುಳ್ಳವಳೇ! ಈ ಪ್ರಶ್ನೆಯನ್ನು ಭೀಮನಿಗೆ ಅರ್ಜುನನಿಗೆ ಮತ್ತು ಸಹದೇವನಿಗೆ ಕೇಳು. ಯಾಜ್ಞಸೇನಿಯೆ! ನಿನ್ನ ಪತಿಯಾದ ನಕುಲನಿಗೂ ಈ ಪ್ರಶ್ನೆಯನ್ನು ಕೇಳು. ನೀನು ಕೇಳಿದ ಪ್ರಶ್ನೆಗೆ ಇವರು ಉತ್ತರವನ್ನು ಹೇಳಲಿ.

ಅನೀಶ್ವರಂ ವಿಬ್ರುವಂತ್ವಾರ್ಯಮಧ್ಯೇ
ಯುಧಿಷ್ಠಿರಂ ತವ ಪಾಂಚಾಲಿಹೇತೋಃ ।
ಕುರ್ವಂತು ಸರ್ವೇ ಚಾನೃತಂ ಧರ್ಮರಾಜಂ
ಪಾಂಚಾಲಿ ತ್ವಂ ಮೋಕ್ಷ್ಯಸೇ ದಾಸಭಾವಾತ್ ॥೪॥

ಪಾಂಚಾಲಿಯೇ ! ನಿನ್ನ ಕ್ಲೇಶವನ್ನು ನೋಡಿದ ಇವರು ಯುಧಿಷ್ಠಿರನು ನಮಗೆ ಪ್ರಭುವಲ್ಲ ಎಂದು ಈ ಸಭೆಯಲ್ಲಿ ಹೇಳಲಿ. ಪಾಂಚಾಲಿಯೇ ಧರ್ಮರಾಜನ ಮಾತನ್ನು ಎಲ್ಲರೂ ಸುಳ್ಳು ಎಂದು ಹೇಳಲಿ. ಆಗ ನೀನು ದಾಸ್ಯದಿಂದ ಬಿಡುಗಡೆಯನ್ನು ಹೊಂದುವಿ.

ಧರ್ಮೇ ಸ್ಥಿತೋ ಧರ್ಮರಾಜೋ ಮಹಾತ್ಮಾ
ಸ್ವಯಂ ಚೇದಂ ಕಥಯತ್ವಿಂದ್ರಕಲ್ಪಃ ।
ಈಶೋ ವಾ ತೇ ಹ್ಯನೀಶೋऽಥವೈಷ
ವಾಕ್ಯಾದಸ್ಯ ಕ್ಷಿಪ್ರಮೇಕಂ ಭಜಸ್ವ ॥೫॥

ಮಹಾತ್ಮನಾದ ಧರ್ಮರಾಜನು ಯಾವಾಗಲೂ ಧರ್ಮದಲ್ಲಿಯೇ ನಡೆಯುವನು. ಇಂದ್ರನಿಗೆ ಸಮಾನವಾದ ಅವನು ತಾನೇ ನಿನಗೆ ಪ್ರಭುವೋ ಅಲ್ಲವೋ ಎಂದು ಹೇಳಲಿ. ಅವನ ವಾಕ್ಯದಂತೆ ಶೀಘ್ರವಾಗಿ ಯಾವುದಾದರೊಂದು ಪಕ್ಷವನ್ನು ಸ್ವೀಕರಿಸಲಿ.

ಸರ್ವೇ ಹೀಮೇ ಕೌರವೇಯಾಃ ಸಭಾಯಾಂ
ದುಃಖಾಂತರೇ ವರ್ತಮಾನಾಸ್ತಥೈವ ।
ನ ವಿಬ್ರುವಂತ್ಯಾರ್ಯವೃತ್ತಾ ಯಥಾವತ್
ಪತೀಂಶ್ಚ ತೇ ಸಮವೇಕ್ಷ್ಯಾಲ್ಪಭಾಗ್ಯಾನ್ ॥೬॥

ಈ ಸಭೆಯಲ್ಲಿ ಕುಳಿತಿರುವ ಕೌರವರೆಲ್ಲರೂ ನಿನಗೆ ಸಮಾನವಾದ ದುಃಖವನ್ನು ಹೊಂದಿದವರು. ಅಲ್ಪ ಭಾಗ್ಯರಾದ ನಿನ್ನ ಪತಿಗಳನ್ನು ನೋಡಿ ಆರ್ಯವೃತ್ತರಾದ ಇವರು ನಿನ್ನ ಪ್ರಶ್ನೆಗೆ ಸರಿಯಾದ ಉತ್ತರವನ್ನು ನೀಡುತ್ತಿಲ್ಲ.

ವೈಶಂಪಾಯನಃ

ತತಃ ಸಭ್ಯಾಃ ಕುರುರಾಜಸ್ಯ ತತ್ರ
ವಾಕ್ಯಂ ಸರ್ವೇ ಪ್ರಶಶಂಸುಸ್ತಥೋಚ್ಚೈಃ ।
ಚೇಲಾವೇಧಾಂಶ್ಚಾಪಿ ಚಕ್ರುರ್ನದಂತೋ
ಹಾಹೇತ್ಯಾಸೀದಪಿ ಚೈವಾತ್ರ ನಾದಃ ।
ಸರ್ವೇ ಚಾಸನ್ ಪಾರ್ಥಿವಾಃ ಪ್ರೀತಿಮಂತಃ।
ಕುರುಶ್ರೇಷ್ಠಂ ಪಾರ್ಥಿವಂ ಪೂಜಯಂತಃ ॥೭॥

ಆಗ ಕುರುರಾಜನ ಸಭೆಯಲ್ಲಿದ್ದ ಎಲ್ಲಾ ಸಭ್ಯರು ಅವನ ಮಾತುಗಳನ್ನು ಗಟ್ಟಿಯಾಗಿ ಪ್ರಶಂಸಿಸಿದರು. ತಮ್ಮ ಉತ್ತರೀಯಗಳನ್ನು ಬೀಸಿ ಸಂತೋಷದಿಂದ ಗರ್ಜಿಸುತ್ತಾ ದೊಡ್ಡನಾದವನ್ನು ಮಾಡಿದರು. ಅಲ್ಲಿ ಹಾಹಾಕಾರನಾದವು ಉಂಟಾಯಿತು. ಎಲ್ಲ ರಾಜರು ದುರ್ಯೋಧನನಲ್ಲಿ ಪ್ರೀತಿಯುಳ್ಳವರಾಗಿ ಅವನನ್ನು ಮನಸ್ಸಿನಲ್ಲಿಯೇ ಪೂಜಿಸಿದರು.

ಯುಧಿಷ್ಠಿರಂ ಚ ತೇ ಸರ್ವೇ ಸಮವೈಕ್ಷಂತ ಪಾರ್ಥಿವಾಃ ।
ಕಿಂ ನು ವಕ್ಷ್ಯತಿ ಧರ್ಮಾತ್ಮಾ ಇತಿ ಸಾಚೀಕೃತಾನನಾಃ ॥೮॥

ಆ ಎಲ್ಲ ರಾಜರೂ ಮುಖವನ್ನು ತಿರುಗಿಸಿ ಧರ್ಮರಾಜನ ಕಡೆಗೆ ನೋಡಿ ಈ ಧರ್ಮಾತ್ಮನು ಏನು ಹೇಳುವನು ಎಂದು ಕುತೂಹಲಭರಿತರಾದರು.

ಕಿಂ ನು ವಕ್ಷ್ಯತಿ ಬೀಭತ್ಸುರಜಿತೋ ಯುಧಿ ಪಾಂಡವಃ ।
ಭೀಮಸೇನೋ ಯಮೌ ಚೋಭೌ ಭೃಶಂ ಕೌತೂಹಲಾನ್ವಿತಾಃ ॥೯॥

ಯುದ್ಧದಲ್ಲಿ ಎಂದೂ ಪರಾಜಯವನ್ನು ಹೊಂದದ ಪಾಂಡುಪುತ್ರನಾದ ಅರ್ಜುನನಾಗಲಿ ಅಥವಾ ಭೀಮಸೇನನಾಗಲೀ ಅಥವಾ ನಕುಲಸಹದೇವರಾಗಲೀ ಏನು ಹೇಳುವರು ಎಂದು ಯೋಚಿಸುತ್ತಾ ಅತ್ಯಂತ ಕುತೂಹಲ ಭರಿತರಾದರು.

ತಸ್ಮಿನ್ನುಪರತೇ ಶಬ್ದೇ ಭೀಮಸೇನೋऽಬ್ರವೀದಿದಮ್ ।
ಪ್ರಗೃಹ್ಯ ವಿಪುಲಂ ವೃತ್ತಂ ಭುಜಂ ಚಂದನರೂಷಿತಮ್ ॥೧೦॥

ಆ ಶಬ್ದವು ಆಡಗುತ್ತಿರಲು ಭೀಮಸೇನನು ಚಂದನಲೇಪಿತವಾದ ತನ್ನ ಪೀನವಾದ ವಿಸ್ತಾರವಾದ ಭುಜವನ್ನು ಎತ್ತಿ ಈ ಮಾತನ್ನು ಆಡಿದನು.

ಯದ್ಯೇಷ ಗುರುರಸ್ಮಾಕಂ ಧರ್ಮರಾಜೋ ಯುಧಿಷ್ಠಿರಃ ।
ನ ಪ್ರಭುಃ ಸ್ಯಾತ್ ಕುಲಸ್ಯಾಸ್ಯ ನ ವಯಂ ಮರ್ಷಯಾಮಹೇ ॥೧೧॥

ನಮ್ಮ ಹಿರಿಯನಾದ ಧರ್ಮರಾಜನಾದ ಯುಧಿಷ್ಠಿರನು ನಮ್ಮ ಕುಲಕ್ಕೆ ಪ್ರಭುವಲ್ಲ ಎಂದು ಯಾರಾದರೂ ಹೇಳಿದರೆ ನಾವು ಅದನ್ನು ಸಹಿಸುವುದಿಲ್ಲ.

ಈಶೋ ಹಿ ನಃ ಪುಣ್ಯತಪಾಃ ಪ್ರಾಣಾನಾಮಪಿ ಚೇಶ್ವರಃ ।
ಮನ್ಯತೇ ಜಿತಮಾತ್ಮಾನಂ ಯದ್ಯೇಷ ವಿಜಿತಾ ವಯಮ್ ॥೧೨॥

ಪವಿತ್ರವಾದ ತಪಸ್ಸುಳ್ಳ ಅವನು ನಮಗೆಲ್ಲರಿಗೂ ಪ್ರಭು. ಅವನು ನಮ್ಮ ಪ್ರಾಣಗಳಿಗೂ ಒಡೆಯ. ಅವನು ತಾನು ಸೋತಿದ್ದೇನೆ ಎಂದು ಭಾವಿಸುವುದಾದರೆ, ನಾವೆಲ್ಲರೂ ಸೋತಿದ್ದೇವೆ.

ನ ಹಿ ಮುಚ್ಯೇತ ಜೀವನ್ ಮೇ ಪದಾ ಭೂಮಿಮುಪಸ್ಪೃಶನ್ ।
ಸತ್ಯಧರ್ಮಾನ್ ಪರಾಮೃಶ್ಯ ಪಾಂಚಾಲ್ಯಾ ಮೂರ್ಧಜಾನಿಮಾನ್ ॥

ಪಾಂಚಾಲಿಯ ಕೇಶವನ್ನು ಹಿಡಿದವನು ನನ್ನ ಪಾದಘಾತದಿಂದ ಭೂಮಿಯ ಮೇಲೆ ಬಿದ್ದು ಜೀವ ಸಹಿತನಾಗಿ ಉಳಿಯುವುದಿಲ್ಲ. ಸತ್ಯಧರ್ಮಗಳನ್ನು ಆಶ್ರಯಿಸಿದರೆ ಮಾತ್ರ ಜೀವಸಹಿತನಾಗಿ ಬಿಡುಗಡೆಯನ್ನು ಹೊಂದಬಹುದು.

ಪಶ್ಯಧ್ವಂ ಹ್ಯಾಯತೌ ವೃತ್ತೌ ಭುಜೌ ಮೇ ಪರಿಘಾವಿವ ।
ನೈತಯೋರಂತರಂ ಪ್ರಾಪ್ಯ ಮುಚ್ಯೇತಾಪಿ ಪುರಂದರಃ ॥೧೪॥

ನನ್ನ ವಿಸ್ತಾರವಾದ ವೃತ್ತವಾದ ಒನಕೆಗಳಿಂತಿರುವ ಈ ಭುಜಗಳನ್ನು ನೋಡಿ. ಇದರ ಮಧ್ಯದಲ್ಲಿ ಸಿಲುಕಿದವನು ಇಂದ್ರನೇ ಆದರೂ ಅವನು ಬಿಡಿಸಿಕೊಳ್ಳಲಾರ.

ಧರ್ಮಪಾಶಸ್ಥಿತಸ್ತ್ವೇವಮಧಿಗಚ್ಛಾಮಿ ಸಂಕಟಮ್ ।
ಗೌರವೇಣ ನಿರುದ್ಧೋಸ್ಯ ನಿಗ್ರಹಾದರ್ಜುನಸ್ಯ ಚ ॥೧೫॥

ಧರ್ಮರಾಜನ ಮೇಲಿನ ಗೌರವದಿಂದ ಬದ್ಧನಾಗಿ ಅರ್ಜುನನ ನಿಗ್ರಹದಿಂದ ನಿಬದ್ಧನಾಗಿ ಈ ಸಂಕಟವನ್ನು ಅನುಭವಿಸುತ್ತಿದ್ದೇನೆ.

ಧರ್ಮರಾಜನಿಸೃಷ್ಟಸ್ತು ಸಿಂಹಃ ಕ್ಷುದ್ರಮೃಗಾನಿವ ।
ಧಾರ್ತರಾಷ್ಟ್ರಾನಿಮಾನ್ ಪಾಪಾನ್ ನಿಷ್ಪಿಷೇಯಂ ತಳಾಸಿನಾ ॥೧೬॥

ಧರ್ಮರಾಜನು ಅನುಮತಿಯನ್ನು ನೀಡಿದರೆ ಈ ಕ್ಷುದ್ರರಾದ ಪಾಪಿಗಳಾದ ಧೃತರಾಷ್ಟ್ರಪುತ್ರರನ್ನು ಸಿಂಹವು ಕ್ಷುದ್ರ ಮೃಗಗಳನ್ನು ಸಂಹರಿಸಿದಂತೆ ನನ್ನ ಹಸ್ತತಳದಿಂದಲೇ ಭೂಮಿಯ ಮೇಲೆ ಒರೆಸಿಬಿಡುತ್ತೇನೆ.

ವೈಶಂಪಾಯನಃ

ಏವಮುಕ್ತ್ವಾ ಮಹಾಬಾಹುಂ ವಿಷ್ಫುರಂತಂ ಮುಹುರ್ಮುಹುಃ ।
ತಮುವಾಚ ತದಾ ಭೀಷ್ಮೋ ದ್ರೋಣೋ ವಿದುರ ಏವ ಚ ।
ಕ್ಷಾಮ್ಯತಾಂ ಕ್ಷಾಮ್ಯತಾಮೇವಂ ಸರ್ವಂ ಸಂಭವತಿ ತ್ವಯಿ ॥೧೭॥

ಮಹಾಬಾಹುವಾದ ಭೀಮನು ಹೀಗೆ ಮಾತನಾಡುತ್ತಾ ಅವನ ತುಟಿಗಳು ಕೋಪದಿಂದ ಅದುರುತ್ತಿರಲು ಭೀಷ್ಮ ದ್ರೋಣ ಮತ್ತು ವಿದುರರು ಅವನನ್ನು ಕುರಿತು ಭೀಮಸೇನನೇ! ಶಾಂತನಾಗು ಶಾಂತನಾಗು. ನೀನು ಹೇಳುದುದೆಲ್ಲವೂ ನಿನ್ನಲ್ಲಿ ಉಪಪನ್ನವಾಗಿಯೇ ಇದೆ ಎಂದು ಹೇಳಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ನವತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ದ್ವಾವಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ತೊಂಬತ್ತನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ತಚ್ಛ್ರುತ್ವಾ ವಚನಂ ಕೃಷ್ಣಾ ಪ್ರತಿಜ್ಞಾಮಕರೋತ್ ತದಾ ।
ಭೀಮೋ ದುರ್ಯೋಧನಂ ಹಂತಾ ಕರ್ಣಂ ಹಂತಾ ಧನಂಜಯಃ ॥

ಶಕುನಿಂ ತ್ವಕ್ಷಕಿತವಂ ಸಹದೇವೋ ವಧಿಷ್ಯತಿ ।
ಇತ್ಯುಕ್ತೇ ತತ್ ತಥೇತ್ಯಾಹ ಭೀಮಸೇನಃ ಸಭಾತಲೇ ॥೩೬೭॥

ಅದನ್ನು ಕೇಳಿದ ದ್ರೌಪದಿ ಸಭೆಯಲ್ಲಿ ಪ್ರತಿಜ್ಞೆ ಮಾಡಿದಳು. 'ಭೀಮ ದುರ್ಯೋಧನನನ್ನು ಕೊಲ್ಲುತ್ತಾನೆ. ಅರ್ಜುನ ಕರ್ಣನನ್ನು ಕೊಲ್ಲುತ್ತಾನೆ. ಜೂಜಿನಲ್ಲಿ ವಂಚನೆ ಮಾಡುವ ಶಕುನಿಯನ್ನು ಸಹದೇವ ಕೊಲ್ಲುತ್ತಾನೆ'. ದ್ರೌಪದಿ ಹೀಗೆ ಹೇಳಿದಾಗ 'ಅದು ಹಾಗೇ ಆಗುವುದು' ಎಂದ ಭೀಮ.

ಪ್ರತಿಜ್ಞಾಮಾದದೇ ಪಾರ್ಥಸ್ತಾಂ ಮಾದ್ರೀನಂದನಸ್ತಥಾ ।
ನಕುಲಃ ಪ್ರತಿಜಜ್ಞೇಽಥ ಶಾಕುನೇಯವಧಂ ಪ್ರತಿ ॥೩೬೮॥

ಅರ್ಜುನನೂ ಆ ಪ್ರತಿಜ್ಞೆಯನ್ನು ಸ್ವೀಕರಿಸಿದ. ಸಹದೇವನೂ ಹಾಗೇ ಮಾಡಿದ. ನಕುಲನೂ ಶಕುನಿಯ ಮಗನನ್ನು ಕೊಲ್ಲುವುದಕ್ಕೆ ಪ್ರತಿಜ್ಞೆ ಮಾಡಿದ.

ತತಃ ಸುಯೋಧನಾನುಜಶ್ಚಕರ್ಷ ಪಾರ್ಷತಾತ್ಮಜಾಮ್ ।
ಗೃಹಾಯ ತನ್ನಿಶಾಮ್ಯ ತು ಕ್ರುಧಾऽऽಹ ಮಾರುತಾತ್ಮಜಃ ॥೩೬೯॥

ಬಳಿಕ ದುಃಶಾಸನ ದ್ರೌಪದಿಯನ್ನು ಮನೆಯೊಳಗೆ ಸೆಳೆದೊಯ್ಯಲು ತೊಡಗಿದ. ಅದನ್ನು ನೋಡಿ ಭೀಮ ಕೋಪದಿಂದ ನುಡಿದ.

ಅರ್ಜುನಾರ್ಜುನ ನೈವಾತ್ರ ಕ್ಷಮಾ ಮೇ ತಾತ ರೋಚತೇ ।
ಪತಿತಸ್ಯಾಸ್ಯ ದೇಹಸ್ಯ ಕಾಷ್ಠವಿಷ್ಠಾಸಮಸ್ಯ ಚ ।
ಫಲಾನಿ ತ್ರೀಣಿ ಶಿಷ್ಯಂತೇ ವಿದ್ಯಾ ಕರ್ಮ ಸುತಾ ಇತಿ ॥೩೭೦॥

ಅರ್ಜುನ, ಅರ್ಜುನ, ಈಗ ಸಹನೆ ಮಾಡಿಕೊಳ್ಳುವುದು ನನಗೆ ಸರಿಕಾಣುವುದಿಲ್ಲ. ಈ ಶರೀರ ಪತನ ಹೊಂದಿದಾಗ ಕಟ್ಟಿಗೆಯಂತೆ ಇಲ್ಲವೆ ಮಲದಂತೆ ಆಗುವುದು. ವಿದ್ಯೆ ಕರ್ಮ ಸಂತಾನ ಇವು ಮೂರೇ ಬದುಕಿನ ಫಲವಾಗಿ ಉಳಿವವು.

ಇತಿ ವೇದೋದಿತಂ ವಾಕ್ಯಂ ನ ಸುತೋ ದಾರದೂಷಣೇ ।
ದುಷ್ಟದಾರೋ ನ ಚಾಪ್ನೋತಿ ಲೋಕಾನದ್ಧೋ ಹಿ ದೂಷಿತಃ ॥೩೭೧॥

ಅರಕ್ಷಣಾದ್ ದೂಷಿತಾಯಾ ನ ತ್ಯಾಗಾಚ್ಚ ಶುಭಂ ಭವೇತ್ ॥೩೭೨॥

ಇದು ವೇದೋಕ್ತ ವಚನ. ಪತ್ನಿಯನ್ನು ಯಾರಾದರೂ ಬಲಾತ್ಕರಿಸಿದರೆ ಪತಿಗೆ ಸತ್ಸಂತಾನ ಇಲ್ಲವಾಗುವುದು. ಮತ್ತು ಪತ್ನಿ ಕೆಟ್ಟರೆ ಪತಿ ಪುಣ್ಯಲೋಕಗಳನ್ನು ಪಡೆಯಲಾರ. ಏಕೆಂದರೆ ಅವನ ಅರ್ಧ ಅಂಗವೆ ಕೆಟ್ಟುಹೋಗಿರುತ್ತದೆ. ಪತ್ನಿ ಕೆಟ್ಟು ಹೋದ ಬಳಿಕ ತಾನು ರಕ್ಷಣೆ ಮಾಡದಿದ್ದರೂ ಪರಿತ್ಯಾಗ ಮಾಡಿದರೂ ಸುಖವಿಲ್ಲ.

ಅತೋಽದ್ಯ ಸಾನುಬಂಧಕಾನ್ನಿಹನ್ಮಿ ಧಾರ್ತರಾಷ್ಟ್ರಕಾನ್ ।
ಇತಿ ಬ್ರುವನ್ ವ್ಯಲೋಕಯದ್ ರಿಪೂನ್ ದಹನ್ನಿವೌಜಸಾ ॥೩೭೩॥

ಅದರಿಂದ ನಾನು ಈಗಲೆ ಕೌರವರನ್ನು ಬಂಧು ಸಮೇತರಾಗಿ ಸಂಹರಿಸುವೆನು ಎಂದು ಹೇಳುತ್ತ ಭೀಮ ಓಜಸ್ಸಿನಿಂದ ಶತ್ರುಗಳನ್ನು ಸುಟ್ಟು ಬಿಡುವಂತೆ ನೋಡಿದ.

ದದರ್ಶ ಚ ಮಹಾಘೋರಮಾದಾತುಂ ಪರಿಘಂ ರುಷಾ ।
ಕರ್ತುಂ ವ್ಯವಸಿತೋ ಬುದ್ಧ್ಯಾ ನಿಃಶೇಷಾನ್ ಧೃತರಾಷ್ಟ್ರಜಾನ್ ॥೩೭೪॥

ಭೀಮು ಕೌರವರನ್ನು ಆಗಲೆ ನಿಃಶೇಷರನ್ನಾಗಿ ಮಾಡಲು ಮನಸ್ಸಿನಲ್ಲಿ ನಿಶ್ಚಯಿಸಿದವನಂತೆ ಪರಿಘವನ್ನು ಎತ್ತಿಕೊಳ್ಳಲು ಮಹಾಭಯಂಕರವಾಗಿ ದಿಟ್ಟಿಸಿ ನೋಡಿದ.

ತದಾ ಶಿವಾ ವವಾಶಿರೇ ಸುಯೋಧನಾಗ್ನಿಗೇಹತಃ ।
ತಥೈವ ತತ್ಪಿತುರ್ಗೃಹೇಷ್ವಭೂದ್ ಭಯಾನಕಂ ಬಹು ॥೩೭೫॥

ಆಗ ದುರ್ಯೋಧನನ ಯಾಗಶಾಲೆಯಲ್ಲಿ ಹೆಣ್ಣು ನರಿಗಳು ಕೂಗಿದುವು. ಧೃತರಾಷ್ಟ್ರನ ಅರಮನೆಯಲ್ಲಿಯೂ ಬಹುಭಯಾನಕ ಉತ್ಪಾತಗಳು ಕಂಡುಬಂದುವು.

ನಿಮಿತ್ತಾನ್ಯತಿಘೋರಾಣಿ ಕುಪಿತೇ ಮಾರುತಾತ್ಮಜೇ ।
ದೃಷ್ಟ್ವಾಂಬಿಕೇಯೋ ವಿದುರಂ ಪಪ್ರಚ್ಛೈಷಾಂ ಫಲಂ ದ್ರುತಂ ॥೩೭೬॥

ಭೀಮ ಕುಪಿತನಾದಾಗ ಅತಿ ಭಯಾನಕ ಉತ್ಪಾತಗಳುಂಟಾದುದನ್ನು ಕಂಡು ಧೃತರಾಷ್ಟ್ರ ಬೇಗನೆ ವಿದುರನ ಮುಂದೆ ಅವುಗಳ ಫಲವನ್ನು ಕೇಳಿದ.

ಆಹ ತಂ ವಿದುರೋ ಜ್ಯೇಷ್ಠಂ ಕ್ಷಣೇಽಸ್ಮಿಂಸ್ತವ ಪುತ್ರಕಾಃ ।
ಸಾನುಬಂಧಾ ನಶಿಷ್ಯಂತಿ ವೃಕೋದರಬಲಾಹತಾಃ ॥೩೭೭॥

ವಿದುರ ಧೃತರಾಷ್ಟ್ರನಿಗೆ ಹೇಳಿದ, 'ಇದೇ ಕ್ಷಣದಲ್ಲಿ ನಿನ್ನ ಮಕ್ಕಳೂ, ಬಂಧು ಬಾಂಧವರೂ ಭೀಮನ ಬಲವಾದ ಹೊಡೆತಕ್ಕೆ ಸಿಕ್ಕಿ ನಾಶವಾಗುತ್ತಾರೆ'.

ಕ್ರೀಡಸೇಽರ್ಭಕವತ್ ತ್ವಂ ಹಿ ಕಿಂ ಜಿತಂ ಕಿಂ ಜಿತಂ ತ್ವಿತಿ ।
ಅಧರ್ಮೇಣ ಜಿತಾನತ್ರ ಜಿತಾನ್ ಪಶ್ಯಸಿ ಪಾಂಡವಾನ್ ॥೩೭೮॥

ಆದರೂ ನೀನು ಏನು ಗೆದ್ದೆವು ಏನು ಗೆದ್ದೆವೆಂದು ಮಕ್ಕಳಂತೆ ಆಡುತ್ತಿರುವೆ. ಅಧರ್ಮದಿಂದ ಪಾಂಡವರನ್ನು ಗೆದ್ದು ನ್ಯಾಯವಾಗಿ ಗೆದ್ದೆವೆಂದುಕೊಳ್ಳುತ್ತಿ.

ಸ್ತ್ರೀಷು ದ್ಯೂತೇಷು ವಾ ದತ್ತಂ ಮದಾಂಧೇನ ನರೇಣ ವಾ ।
ನ ದತ್ತಮಾಹುರ್ವಿದ್ವಾಂಸಸ್ತಸ್ಯ ಬಂಧುಭಿರೇವ ಚ ॥೩೭೯॥

ಆಹಾರ್ಯಂ ಪುನರಾಹುಶ್ಚ ತಥಾಪಿ ನ ತು ಪಾಂಡವೈಃ ।
ತತ್ ಕೃತಂ ತವ ಪುತ್ರಾಣಾಂ ಖ್ಯಾಪಯದ್ಭಿರಶಿಷ್ಟತಾಂ ॥೩೮೦॥

ವೇಶ್ಯಾಸ್ತ್ರೀಯರಿಗೆ ಕೊಟ್ಟಿದ್ದು, ಜೂಜುಗಳಲ್ಲಿ ಕೊಟ್ಟಿದ್ದು, ಮತ್ತೇರಿ ಎಚ್ಚರದಪ್ಪಿದ ಮನುಷ್ಯ ಕೊಟ್ಟಿದ್ದು ಇವನ್ನು ಬಲ್ಲವರು ನ್ಯಾಯವಾಗಿ ಕೊಟ್ಟಿದ್ದೆಂದು ಹೇಳುವುದಿಲ್ಲ. ಅವರ ಬಂಧುಗಳು ಅವನ್ನು ಹಿಂದಿರುಗಿ ಪಡೆಯಬಹುದು ಎನ್ನುತ್ತಾರೆ. ಆದರೂ ಪಾಂಡವರು ಹಾಗೆ ಮಾಡಲಿಲ್ಲ. ನಿನ್ನ ಮಕ್ಕಳು ಎಷ್ಟು ಅಸಭ್ಯರೆಂದು ಲೋಕಕ್ಕೆ ತೋರಿಸುತ್ತಿದ್ದಾರೆ.

ಇತ್ಯುಕ್ತ ಆಹಾಂಽಬಿಕೇಯೋ ನಿಮಿತ್ತಾನಾಂ ಫಲಂ ಕಥಂ ।
ನ ಭವೇದಿತಿ ಸ ಪ್ರಾಹ ದ್ರುತಂ ಕೃಷ್ಣಾ ವಿಮುಚ್ಯತಾಮ್ ॥೩೮೧॥

ವಿದುರ ಹೀಗೆ ಹೇಳಿದಾಗ ಧೃತರಾಷ್ಟ್ರ 'ಈ ಉತ್ಪಾತಗಳ ಫಲ ಬಾರದಂತೆ ಮಾಡುವ ಬಗ್ಗೆ ಹೇಗೆ ಎಂದು ಕೇಳಿದ. ಒಡನೆ ವಿದುರನೆಂದ, 'ದ್ರೌಪದಿಯನ್ನು ಮೊದಲು ಬಿಡಿಸು'.

ತೋಷಯಸ್ವ ವರೈಶ್ಚೈನಾಮನ್ಯಥಾ ತೇ ಸುತಾನ್ ಮೃತಾನ್ ।
ವಿದ್ಧಿ ಭೀಮೇನ ನಿಷ್ಪಿಷ್ಟಾನ್ ಮಾತ್ರ ತೇ ಸಂಶಯೋ ಭವೇತ್ ॥೩೮೨॥

ಅವಳಿಗೆ ವರಗಳನ್ನಿತ್ತು ಸಂತೋಷಗೊಳಿಸು. ಇಲ್ಲದಿದ್ದರೆ ನಿನ್ನ ಮಕ್ಕಳು ಭೀಮನಿಂದ ಪುಡಿಯಾಗಿ ಈ ಕ್ಷಣದಲ್ಲಿ ಸತ್ತರೆಂದೇ ತಿಳಿ. ಇದರಲ್ಲಿ ನಿನಗೆ ಸಂಶಯಬೇಡ.

ಕೃಷ್ಣಾ ಚ ಪಾಂಡವಾಶ್ಚೈವ ತಪೋವೃದ್ಧಿಮಭೀಪ್ಸವಃ ।
ತಪಸಾ ನೈವ ಧಕ್ಷ್ಯಂತಿ ತೇನ ಜೀವಂತಿ ತೇ ಸುತಾಃ ॥೩೮೩॥

ದ್ರೌಪದಿಯಾಗಲಿ ಪಾಂಡವರಾಗಲಿ ತಪೋವೃದ್ಧಿಯನ್ನು ಬಯಸುವುದರಿಂದ ತಪಸ್ಸಿನಿಂದ ಸುಡುತ್ತಿಲ್ಲ. ಅದರಿಂದ ನಿನ್ನ ಮಕ್ಕಳು ಇನ್ನೂ ಬದುಕಿದ್ದಾರೆ.

ತಥಾऽಪಿ ಯದಿ ಕೃಷ್ಣಾಂ ತ್ವಂ ನ ಮೋಚಯಸಿ ತೇ ಸುತಾನ್ ।
ಹನಿಷ್ಯತಿ ನ ಸಂದೇಹೋ ಬಲೇನೈವ ವೃಕೋದರಃ ॥೩೮೪॥

ಇಷ್ಟಾದರೂ ನೀನು ದ್ರೌಪದಿಯನ್ನು ಬಿಡಿಸದಿದ್ದರೆ ನಿನ್ನ ಮಕ್ಕಳನ್ನು ಭೀಮ ತನ್ನ ಬಾಹುಬಲದಿಂದಲೆ ಕೊಲ್ಲುತ್ತಾನೆ, ಸಂಶಯವಿಲ್ಲ.

ಇತೀರಿತೋ ವಿನಿರ್ಭರ್ತ್ಸ್ಯ ಪುತ್ರಂ ದುಃಶಾಸನಂ ನೃಪಃ ।
ಅಮೋಚಯದ್ ವರೈಶ್ಚೈನಾಂ ಛಂದಯಾಮಾಸ ಪಾರ್ಷತೀಂ ॥೩೮೫॥

ವಿದುರ ಹೀಗೆ ಹೇಳಿದಾಗ ಧೃತರಾಷ್ಟ್ರಪುತ್ರ ದುಃಶಾಸನನನ್ನು ಬೈದು ದ್ರೌಪದಿಯನ್ನು ಬಿಡಿಸಿದ. ವರಗಳನ್ನು ಸ್ವೀಕರಿಸುವಂತೆ ಅವಳಿಗೆ ಒತ್ತಾಯಿಸಿದ.

ಛಂದಿತಾ ಸಾ ವರೈಸ್ತೇನ ಧರ್ಮೇ ಭಾಗವತೇ ಸ್ಥಿತಾ ।
ನೈವಾತ್ಮನೋ ವರಾನ್ ವವ್ರೇ ತೇಷಾಂ ವಿಮೋಕ್ಷಣಂ ॥೩೮೬॥

ವರಗಳನ್ನು ಸ್ವೀಕರಿಸಲು ಧೃತರಾಷ್ಟ್ರ ದ್ರೌಪದಿಗೆ ಒತ್ತಾಯಿಸಿದರೂ ಭಾಗವತ ಧರ್ಮದಲ್ಲಿ ನಿಷ್ಠಳಾದ ಅವಳು ತನಗಾಗಿ ವರಗಳನ್ನು ಕೇಳಲಿಲ್ಲ. ಕೇವಲ ಪಾಂಡವರ ವಿಮೋಚನೆಯನ್ನೇ ಕೇಳಿದಳು.

ಯುಧಿಷ್ಠಿರಸ್ಯ ಸಭ್ರಾತುಃ ಸರಾಷ್ಟ್ರಸ್ಯ ವಿಮೋಕ್ಷಣಂ ।
ದದೌ ನೃಪೋಽಸ್ಯಾ ನ ಪುನಶ್ಚಂದ್ಯಮಾನಾಪಿ ಸಾಽವೃಣೋತ್ ॥೩೮೭॥

ಧೃತರಾಷ್ಟ್ರ ಧರ್ಮರಾಜನನ್ನೂ ಅವನ ತಮ್ಮಂದಿರನ್ನೂ ರಾಜ್ಯಸಹಿತ ಬಿಡುಗಡೆ ಮಾಡಿ ಹಿಂದಿರುಗಿಸಿದ. ಇನ್ನೂ ವರ ಕೇಳೆಂದು ಒತ್ತಾಯಿಸಿದರೂ ದ್ರೌಪದಿ ಕೇಳಲಿಲ್ಲ.

ಭರ್ತುರ್ವಿಷ್ಣೋಶ್ಚ ನಾನ್ಯಸ್ಮಾದ್ ವರಸ್ವೀಕಾರ ಇಷ್ಯತೇ ।
ಏವಂ ಹಿ ಭಗವದ್ಧರ್ಮಸ್ತಸ್ಮಾತ್ ಸಾ ನಾವೃಣೋತ್‌ಪರಂ ॥೩೮೮॥

ಹೆಣ್ಣು ತನ್ನ ಗಂಡನಿಂದ ಅಥವಾ ಪರಮಾತ್ಮನಿಂದ ಹೊರತು ಬೇರೆಯವರಿಂದ ವರ ಪಡೆಯಕೂಡದು. ಭಾಗವತ ಧರ್ಮ ಹೀಗಿದೆ. ಅದರಿಂದ ದ್ರೌಪದಿ ಬೇರೆ ವರ ಪಡೆಯಲಿಲ್ಲ.

ಅಧರ್ಮತೋ ಹೃತತ್ವಾತ್ತು ತದ್ ದಾನಂ ನ ವರೋ ಭವೇತ್ ।
ಇತಿ ಮತ್ವಾ ಪಾಂಡವಾನಾಂ ವವ್ರೇ ಕೃಷ್ಣಾ ವಿಮೋಕ್ಷಣಂ ॥೩೮೯॥

ಧೃತರಾಷ್ಟ್ರ ಪಾಂಡವರ ಬಿಡುಗಡೆಯನ್ನು ನೀಡುದುದು ವರವಾಗುವುದಿಲ್ಲ. ಏಕೆಂದರೆ ಅದು ಅನ್ಯಾಯದಿಂದ ಅಪಹೃತವಾಗಿರುವಂಥದ್ದು. ಹೀಗೆ ಆಲೋಚಿಸಿ ದ್ರೌಪದಿ ಪಾಂಡವರ ಬಿಡುಗಡೆಯನ್ನು ಕೇಳಿದಳು.

ಶ್ವಶುರಾದ್ಯೈಹಿಕವರಾಃ ಕ್ಷತ್ರಿಯಾಯಾಸ್ತ್ರಯೋ ಯತಃ ।
ಉಕ್ತಾಃ ಶತಂ ಚ ವಿಪ್ರಾಯಾ ಧರ್ಮೇ ಭಾಗವತೇ ತತಃ ।
ಹೇತುಕನಾನೇನ ವವ್ರೇ ಸಾ ನಾನ್ಯತ್ ಕಿಂಚಿದತಃ ಪರಂ ॥೩೯೦॥

ಕ್ಷತ್ರಿಯ ಸ್ತ್ರೀಗೆ ಮಾವನಿಂದ ಮೂರು ಐಹಿಕ ವರಗಳೂ ಬ್ರಾಹ್ಮಣ ಸ್ತ್ರೀಗೆ ನೂರು ಐಹಿಕ ವರಗಳೂ ಭಾಗವತ ಧರ್ಮದಲ್ಲಿ ವಿಹಿತವಾಗಿವೆ. ಅದರಿಂದಲೂ ದ್ರೌಪದಿ ಮೇಲೆ ಹೇಳಿದ ವರಗಳನ್ನು ಹೊರತು ಬೇರೇನನ್ನು ಕೇಳಲಿಲ್ಲ.

ತತೋ ವಿಮುಕ್ತಾಃ ಪ್ರಯಯುಶ್ಚ ಪಾರ್ಥಾ
ಗುರೂನ್‌ಪ್ರಣಮ್ಯ ಸ್ವಪುರಂ ಸಕೃಷ್ಣಾಃ ।

ದುರ್ಯೋಧನಾನಂತರಜೋ ಜಗಾದ
ತಾತಂ ನಿಜಂ ಪಾಪಕೃತಾಂ ಪ್ರಧಾನಃ ॥೩೯೧॥

ಆಗ ಪಾಂಡವರು ವಿಮುಕ್ತರಾಗಿ ಹಿರಿಯರನ್ನು ನಮಸ್ಕರಿಸಿ ದ್ರೌಪದಿಯೊಂದಿಗೆ ತಮ್ಮ ಪಟಲ್ಣಕ್ಕೆ ಹೊರಟರು. ಆಗ ಪಾಪಕಾರಿಗಳಲ್ಲಿ ಅಗ್ರಗಣ್ಯನಾದ ದುಃಶಾಸನ ಧೃತರಾಷ್ಟ್ರನ ಮುಂದೆ ನುಡಿದ.

★ ★ ★ ★

ತೊಂಬತ್ತೊಂದನೆಯ ಅಧ್ಯಾಯ

(ಕರ್ಣನಮಾತುಗಳು. ದುರ್ಯೋಧನನಿಂದ ಊರುದರ್ಶನ, ದ್ರೌಪದಿ ಮೊದಲಾದರ ಪ್ರತಿಜ್ಞೆ, ವಿದುರನ ಮಾತಿನಂತೆ ಧೃತರಾಷ್ಟ್ರನಿಂದ ದ್ರೌಪದಿಗೆ ವರಪ್ರದಾನ.)

ಕರ್ಣಃ

ತ್ರಯಃ ಕಿಲೇಮೇ ಹ್ಯಧನಾ ಭವಂತಿ
ದಾಸಃ ಶಿಷ್ಯಶ್ಚಾಸ್ತತಂತ್ರಾಚ ನಾರೀ ।
ತ್ವಂ ದಾಸಪತ್ನೀ ಧನಮಸ್ಯ ಭದ್ರೇ
ಹೀನೇಶ್ವರಾ ದಾಸಧನಂ ಚ ದಾಸೀ ॥೧॥

ದಾಸ, ಶಿಷ್ಯ ಮತ್ತು ಅಸ್ವತಂತ್ರಳಾದ ನಾರಿ ಈ ಮೂವರು ಲೋಕದಲ್ಲಿ ನಿರ್ಧನರೆನಿಸುತ್ತಾರೆ. ಎಲೌ ಭದ್ರೆಯೇ! ನೀನು ಪತಿಗಳನ್ನು ಕಳೆದುಕೊಂಡು ದಾಸಧನವೂ ಮತ್ತು ದಾಸಿಯೂ ಆಗಿದ್ದೀಯೆ (ದುರ್ಯೋಧನನ ಮನೆಯ ಕೆಲಸವನ್ನು ಮಾಡುವುದಕ್ಕೆ ಯೋಗ್ಯವಾಗಿರುವುದರಿಂದ ನೀನು ದಾಸಿ. ನೀನು ದುರ್ಯೋಧನನ ದಾಸನಾದ ಧರ್ಮರಾಜ ಪತ್ನಿ ಯಾಗಿರುವುದರಿಂದ ದಾಸನ ಜೀವಂತವಾದ ಧನ. ಆದ್ದರಿಂದ ಸಾಕ್ಷಾತ್ ಉಪಭೋಗಾರ್ಹಳಲ್ಲ.)

ಪ್ರವಿಶ್ಯ ಚಾಽಂತಃ ಪರಿಚಾರೈರ್ಭಜಸ್ವ
ತತ್ ತೇ ಕಾರ್ಯಂ ದಿಷ್ಟಮಾವಿಶ್ಯ ವೇಶ್ಮ ।

ಈಶಾಶ್ಚ ಸರ್ವೇ ತವ ರಾಜಪುತ್ರಿ
ಭವಂತಿ ತೇ ಧಾರ್ತರಾಷ್ಟ್ರಾ ನ ಪಾರ್ಥಾಃ ॥೨॥

ಆದ್ದರಿಂದ ನೀನು ಅಂತರ್ಗೃಹವನ್ನು ಪ್ರವೇಶಿಸಿ ಪರಿಚಾರಕರ ಜೊತೆಯಲ್ಲಿ ನಿನಗೆ ಆದಿಷ್ಟವಾದ ಕೆಲಸವನ್ನು ಮಾಡು. ರಾಜಕುಮಾರಿಯೇ ಇನ್ನು ಮೇಲೆ ಧೃತರಾಷ್ಟ್ರಪುತ್ರರೆಲ್ಲರೂ ನಿನ್ನ ಒಡೆಯರಾಗುತ್ತಾರೆ. ಪಾಂಡವರು ಒಡೆಯರಾಗುವುದಿಲ್ಲ.

ಅನ್ಯಂ ವೃಣೀಷ್ವ ಪತಿಮಾಶು ಭಾಮಿನಿ
ಯಸ್ಮಾದ್ ದಾಸ್ಯಂ ನ ಭಜಸೇ ದೇವನೇನ ।
ಅನವದ್ಯಾ ವೈ ಪತಿಷು ಕಾಮವೃತ್ತಿಃ
ನಿತ್ಯಂ ತು ದಾಸ್ಯೇ ವಿಹಿತಾ ವೈ ತವಾಸ್ತು ॥೩॥

ಎಲೌ ಭಾಮಿನಿಯೇ! ಯಾವನು ದ್ಯೂತವನ್ನು ಆಡಿ ದಾಸ್ಯವನ್ನು ಪಡೆಯುವುದಿಲ್ಲವೋ ಅಂತಹ ಇನ್ನೊಬ್ಬ ಪತಿಯನ್ನು ಆರಿಸಿಕೋ. ದಾಸಿಯರು ತಮ್ಮ ಪತಿಗಳ ವಿಷಯದಲ್ಲಿ ಯಾವ ರೀತಿಯಿಂದ ಬೇಕಾದರೂ ವ್ಯವಹರಿಸಬಹುದು. ಅಂತಹ ದಾಸ್ಯವು ನಿನಗೆ ಶಾಶ್ವತವಾಗಿರಲಿ.

ಪರಾಜಿತೋ ನಕುಲೋ ಭೀಮಸೇನೋ
ಯುಧಿಷ್ಠಿರಃ ಸಹದೇವೋಽರ್ಜುನಶ್ಚ ।
ದಾಸೀಭೂತಾ ಪ್ರವಿಶತು ಯಾಜ್ಞಸೇನಿ ।
ಪರಾಜಿತಾಸ್ತೇ ಪತಯೋ ನ ಸಂತಿ ॥೪॥

ನಕುಲ ಸಹದೇವ ಅರ್ಜುನ ಭೀಮಸೇನ ಮತ್ತು ಧರ್ಮರಾಜ ಎಲ್ಲರೂ ಪರಾಜಿತರಾಗಿದ್ದಾರೆ. ಎಲೌ ಯಾಜ್ಞಸೇನಿಯೆ ನೀನು ದಾಸಿಯಾಗಿ ದುರ್ಯೋಧನನ ಗೃಹವನ್ನು ಪ್ರವೇಶಿಸು. ಪರಾಜಿತನಾದ ನಿನ್ನ ಮೊದಲಿನ ಪತಿಗಳು ಇಲ್ಲವೆಂದು ತಿಳಿ.

ಪ್ರಯೋಜನಂ ಜನ್ಮನಿ ಕಿಂ ನು ಮನ್ಯತೇ ।
ಪರಾಕ್ರಮಂ ಚಾತ್ಮನಿ ಚೇಹ ಪಾರ್ಥಃ ।
ಪಾಂಚಾಲ್ಯಸ್ಯ ದ್ರುಪದಸ್ಯಾತ್ಮಜಾಂ ತ್ವಾಂ
ಸಭಾಮಧ್ಯೇ ಯೋಽತಿದೇವೀದ್ ಗ್ಲಹೇಷು ॥೫॥

ಪಾಂಚಾಲರಾಜನಾದ ದ್ರುಪದನ ಪುತ್ರಿಯಾದ ನಿನ್ನನ್ನು ಸಭಾಮಧ್ಯದಲ್ಲಿ ಪಣಕ್ಕೊಡ್ಡಿದ ಧರ್ಮರಾಜನು ಇನ್ನು ತನ್ನ ಜೀವನದಲ್ಲಿ ಯಾವ ಪ್ರಯೋಜನವಿದೆ ಎಂದು ಭಾವಿಸುತ್ತಾನೆ? ಅಥವಾ ತನ್ನಲ್ಲಿ ಏನಾದರೂ ಪರಾಕ್ರಮವಿದೆ ಎಂದು ಹೇಗೆ ತಿಳಿಯುತ್ತಾನೆ?

ವೈಶಂಪಾಯನಃ

ತಚ್ಚ ಶ್ರುತ್ವಾ ಭೀಮಸೇನೋಽತ್ಯಮರ್ಷೀ
ಭೃಶಂ ನಿಶಶ್ವಾಸ ತದಾಽರ್ತರೂಪಃ ।
ರಾಜಾನುಗೋ ಧರ್ಮಪಾಶಾನುಬದ್ಧೋ
ದಹನ್ನಿವೈನಂ ಕ್ರೋಧವಿರಕ್ತಚಕ್ಷುಃ ॥೬॥

ಅದನ್ನು ಕೇಳಿದ ಕ್ರೋಧಶೀಲನಾದ ಭೀಮಸೇನನು ರಾಜನನ್ನು ಮೀರಲು ಸಾಧ್ಯವಾಗದೆ ಧರ್ಮಪಾಶದಿಂದ ಬದ್ಧನಾಗಿ ಕ್ರೋಧದಿಂದ ಇನ್ನೂ ಕೆಂಪಾದ ಕಣ್ಣುಳ್ಳವನಾಗಿ ಕರ್ಣನನ್ನು ಸುಟ್ಟು ಬಿಡುವಂತೆ ನೋಡುತ್ತಾ ಬಹಳ ದುಃಖವನ್ನು ಹೊಂದಿ ದೀರ್ಘವಾದ ನಿಟ್ಟುಸಿರನ್ನು ಬಿಟ್ಟನು.

ಭೀಮಸೇನಃ

ನಾಹಂ ಕುಪ್ಯೇ ಸೂತಪುತ್ರಾಯ ರಾಜನ್
ಏತತ್ ಸತ್ಯಂ ದಾಸಧರ್ಮಂ ಪ್ರದಿಷ್ಟಃ ।
ಕಿಂ ವಿದ್ವಿಷೋ ವಾಕ್ಯಮಾಹಾರಯೇಯುಃ
ನಾದೇವೀಸ್ತ್ವಂ ಯದ್ಯನಯಾ ನರೇಂದ್ರ ॥೭॥

ಎಲೈ ರಾಜನೇ! ಸೂತಪುತ್ರನಾದ ಕರ್ಣನ ಮಾತುಗಳಿಂದ ನಾನು ಕೋಪಗೊಳ್ಳುವುದಿಲ್ಲ. ಅವನು ನಿಜವಾದ ದಾಸಧರ್ಮವನ್ನು ಹೇಳಿದ್ದಾನೆ. ನರೇಂದ್ರನೇ! ನೀನು ದ್ರೌಪದಿಯನ್ನು ಪಣಕ್ಕೆ ಒಡ್ಡದಿದ್ದರೆ ನಮ್ಮ ಶತ್ರುಗಳು ಇಂತಹ ಮಾತುಗಳನ್ನು ಆಡಲು ಸಾಧ್ಯವಾಗುತ್ತಿತ್ತೆ ?

ವೈಶಂಪಾಯನಃ

ರಾಧೇಯಸ್ಯ ವಚಃ ಶ್ರುತ್ವಾ ರಾಜಾ ದುರ್ಯೋಧನಸ್ತದಾ ।
ಯುಧಿಷ್ಠಿರಮುವಾಚೇದಂ ತೂಷ್ಣೀಂಭೂತಮಚೇತನಮ್ ॥೯॥

ಕರ್ಣನ ಮಾತುಗಳನ್ನು ಕೇಳಿದ ದುರ್ಯೋಧನನು ಪ್ರಜ್ಞಾರಹಿತನಂತೆ ಮೋಹಿತನಾಗಿದ್ದ ಯುಧಿಷ್ಠಿರನನ್ನು ಕುರಿತು ಈ ಮಾತುಗಳನ್ನು ಆಡಿದನು.

ಭೀಮಾರ್ಜುನೌ ಯಮೌ ಚೈವ ಸ್ಥಿತೌ ನೃಪತಿಶಾಸನೇ ।
ಪ್ರಶ್ನಂ ಪ್ರಬ್ರೂಹಿ ಕೃಷ್ಣಾಂ ತ್ವಮಜಿತಾಂ ಯದಿ ಮನ್ಯಸೇ ॥೯॥

ಏವಮುಕ್ತ್ವಾ ಸ ಕೌಂತೇಯಮಪೋಹ್ಯ ವಸನಂ ಸ್ವಕಮ್ ।
ಸ್ಮಯನ್ನೈಕ್ಷತ ಪಾಂಚಾಲೀಮೈಶ್ವರ್ಯಮದಮೋಹಿತಃ ॥೧೦॥

ಭೀಮಾರ್ಜುನರು ಮತ್ತು ನಕುಲಸಹದೇವರು ರಾಜನಾದ ನಿನ್ನ ಶಾಸನವನ್ನು ಪಾಲಿಸುವವರಾಗಿದ್ದಾರೆ. ದ್ರೌಪದಿಯು ಕೇಳಿದ ಪ್ರಶ್ನೆಗೆ ಉತ್ತರವನ್ನು ಹೇಳು. ನೀನು ದ್ರೌಪದಿಯನ್ನು ಅಜಿತಳೆಂದೇನಾದರೂ ಹೇಳುವೆಯಾ? ಧರ್ಮರಾಜನನ್ನು ಕುರಿತು ಹೀಗೆ ಹೇಳಿ, ಐಶ್ವರ್ಯಮದಮೋಹಿತನಾದ ದುರ್ಯೋಧನನು ತನ್ನ ವಸ್ತ್ರವನ್ನು ಧರಿಸಿ ನಗುತ್ತಾ ದ್ರೌಪದಿಯನ್ನು ನೋಡಿದನು.

ಕದಲೀಕಾಂಡಸದೃಶಂ ಸರ್ವಲಕ್ಷಣಪೂಜಿತಮ್ ।
ಗಜಹಸ್ತಪ್ರತೀಕಾಶಂ ವಜ್ರಪ್ರತಿಮಗೌರವಮ್ ॥೧೧॥

ಅಭ್ಯುತ್ಸ್ಮಯಿತ್ವಾ ರಾಧೇಯಂ ಭೀಮಮಾಧರ್ಷಯನ್ನಿವ ।
ದ್ರೌಪದ್ಯಾಂ ಪ್ರೇಕ್ಷಮಾಣಾಯಾಂ ಸವ್ಯಮೂರುಮದರ್ಶಯತ್ ॥೧೨॥

ಬಾಳೆಯ ಕಂಬದಂತೆ ಇದ್ದ, ಸರ್ವಲಕ್ಷಣಸಂಪನ್ನವಾದ, ಅನೆಯಸೊಂಡಿಲ ಕಾಂತಿಯನ್ನು ಹೊಂದಿದ್ದ, ವಜ್ರದಂತೆ ಧೃಢವಾದ, ತನ್ನ ಎಡತೊಡೆಯನ್ನು ಕರ್ಣನನ್ನು ನೋಡಿ ನಗುತ್ತಾ ಭೀಮಸೇನನನ್ನು ಅವಮಾನಗೊಳಿಸುವವನಂತೆ, ದ್ರೌಪದಿಗೆ ತೋರಿಸಿದನು.

ವೃಕೋದರಸ್ತದಾಲೋಕ್ಯ ನೇತ್ರೇ ಉತ್ಫಾಲ್ಯ ಲೋಹಿತೇ।
ಪ್ರೋವಾಚ ರಾಜಮಧ್ಯೇ ತಂ ಸಭಾಂ ವಿಶ್ರಾವಯನ್ನಿವ ॥೧೩॥

ಭೀಮಸೇನನು ಅದನ್ನು ನೋಡಿ ರಾಜಮಧ್ಯದಲ್ಲಿ ತನ್ನ ಕಣ್ಣುಗಳನ್ನು ಅರಳಿಸಿ ಎಲ್ಲಾ ಸಭೆಗೂ ಕೇಳಿಸುವಂತೆ ಗಟ್ಟಿಯಾಗಿ ಹೇಳಿದನು.

ಪಿತೃಭಿಃ ಸಹ ಸಾಲೋಕ್ಯಂ ಮಾ ಸ್ಮ ಗಚ್ಛೇದ್ ವೃಕೋದರಃ ।
ಯದ್ಯೇತಮೂರುಂ ಗದಯಾ ನ ಭಿದ್ಯೇಽಹಂ ತೇ ಮಹಾಹವೇ ॥೧೪॥

ಈ ನಿನ್ನ ತೊಡೆಯನ್ನು ನಾನು ದೊಡ್ಡ ಯುದ್ಧದಲ್ಲಿ ಮುರಿಯುದಿದ್ದರೆ ವೃಕೋದರನಾದ ನನಗೆ ಮರಣಾನಂತರದಲ್ಲಿ ಪಿತೃಗಳ ಲೋಕ ಪ್ರಾಪ್ತಿಯಾಗುವುದು ಬೇಡ.

ವೈಶಂಪಾಯನಃ

ಕ್ರುದ್ಧಸ್ಯ ತಸ್ಯ ಸ್ರೋತೋಭ್ಯಃ ನಿಃಸೃತಾಃ ಪಾವಕಾರ್ಚಿಷಃ ।
ವೃಕ್ಷಸ್ಯೇವ ವಿನಿಶ್ವೇರುಃ ಕೋಟರೇಭ್ಯಃ ಪ್ರದಹ್ಯತಃ ॥೧೫॥

ಉರಿಯುತ್ತಿರುವ ಮರದ ಪೊಟರೆಗಳಿಂದ ಕಿಡಿಗಳು ಹೊರಟಂತೆ ಕ್ರುದ್ಧನಾದ ಭೀಮಸೇನನ ಜ್ವಲಿಸುವ ಕೋಪದಿಂದ ಅಗ್ನಿಯ ಕಿಡಿಗಳು ಹಾರಿ ಬರುತ್ತಿದ್ದವು.

ವಿದುರಃ

ಪರಂ ಭಯಂ ಪಶ್ಯತಿ ಭೀಮಸೇನಾದ್
ಬುಧ್ಯಧ್ವಂ ವೈ ವರುಣಸ್ಯೇವ ಪಾಶಾತ್ ।
ದೈವೇಷಿತೋ ನೂನಮಯಂ ಪುರಸ್ತಾತ್ ।
ಪರಾಭವೋ ಭರತೇಷೂದಪಾದಿ ॥೧೬॥

ವರುಣನ ಪಾಶದಿಂದಲೋ ಎಂಬಂತೆ ದುರ್ಯೋಧನನು ಭೀಮಸೇನನಿಂದ ಮಹಾಭಯವನ್ನು ಪಡೆಯುತ್ತಾನೆ. ಇದನ್ನು ಎಲ್ಲರೂ ತಿಳಿಯಿರಿ. ಧರ್ಮರಾಜನ ಪರಾಭವವವು ಮೊದಲೇ ದೇವತೆಗಳಿಂದ ಸಂಕಲ್ಪಿತವಾದದ್ದು ಎನಿಸುತ್ತದೆ. ಅಂತಹ ಒಂದು ಘೋರಕಾರ್ಯವು ಭರತವಂಶದಲ್ಲಿ ಉಂಟಾಯಿತು.

ಅತಿದ್ಯೂತಂ ಕೃತಮಿದಂ ಧಾರ್ತರಾಷ್ಟ್ರೈಃ
ಯೇಸ್ಯಾಂ ಸ್ತ್ರಿಯಾಂ ವಿವದಧ್ವೇ ಸಭಾಯಾಮ್ ।
ಯೋಗಕ್ಷೇಮೋ ದೃಶ್ಯತೇ ನೈವ ನಾಶಂ
ಪಾಪಾತ್ಮಾನಃ ಕುರವೋ ಮಂತ್ರಯಂತೇ ॥೧೭॥

ಧೃತರಾಷ್ಟ್ರಪುತ್ರರು ಸಭೆಯಲ್ಲಿ ಈ ದ್ರೌಪದಿಯ ಜೊತೆಯಲ್ಲಿ ವಿವಾದವನ್ನು ಮಾಡುತ್ತಿರುವುದರಿಂದ ಇದು ದ್ಯೂತವನ್ನು ಮೀರಿದ ಪಾಪಕರ್ಮವಾಯಿತು. ಕುರುಗಳಿಗೆ ತಮ್ಮ ಯೋಗಕ್ಷೇಮವು ಕಾಣುತ್ತಿಲ್ಲ. ಪಾಪಾತ್ಮರಾದ ಅವರು ತಮ್ಮ ನಾಶವನ್ನೇ ಚಿಂತಿಸುತ್ತಿದ್ದಾರೆ.

ಇದಂ ಧರ್ಮಂ ಕುರವೋ ಜಾನತಾಶು
ದುರ್ದ್ಯೂಷ್ಟೇಽಸ್ಮಿನ್ ಪರಿಷತ್ ಸಂಪ್ರದುಷ್ಯೇತ್ ।
ಇಮಾಂ ಚ ಪೂರ್ವಂ ಕಿತವೋಽಗ್ರಹೀಷ್ಯದ್
ದೋಷೋಽಭವಿಷ್ಯನ್ನಪರಾಜಿತಾತ್ಮಾ ॥೧೮॥

ಈ ಧರ್ಮವನ್ನು ಎಲ್ಲಾ ಕುರುಗಳು ಮೊದಲೇ ತಿಳಿಯಲಿ. ಜಿತಮನಸ್ಕನಲ್ಲದ ಈ ದುರ್ಯೋಧನನು ಈ ದ್ಯೂತಲೀಲೆಯನ್ನು ಧರ್ಮರಾಜನ ಮೇಲೆ ಬಲಾತ್ಕಾರವಾಗಿ ಹೇರದಿದ್ದರೆ ಇಂತಹ ಪರಿಸ್ಥಿತಿಯು ಬರುತ್ತಿರಲಿಲ್ಲ. ದುಷ್ಟಾಲೋಚನೆಯಿಂದ ಮಾಡಿದ ಈ ಕಾರ್ಯದಲ್ಲಿ ಮೂಕರಾಗಿ ಭಾಗವಸಿದ ಈ ಸಭಾಸದರು ದೋಷಕ್ಕೆ ಒಳಗಾಗುವರು.

ಸ್ವಪ್ನೇ ಯಥೈತದ್ಧಿ ಧನಂ ಜಿತಂ ಸ್ಯಾತ್
ಏವಂ ಮನ್ಯೇ ಯದಿ ದೀವ್ಯತ್ಯನೀಶಃ ।
ಗಾಂಧಾರಪುತ್ರಸ್ಯ ವಚೋ ನಿಶಮ್ಯ
ಧರ್ಮಾದಸ್ಮಾತ್ ಕುರವೋ ಮಾಽಪಗಾತ ॥೧೯॥

ಒಂದು ಪಕ್ಷ ಅಸ್ವತಂತ್ರ ನಾದ ಧರ್ಮರಾಜನು ದ್ಯೂತವನ್ನು ಆಡಿ ಕಳೆದುಕೊಂಡಿದ್ದರೆ, ಹಾಗೆ ಗೆದ್ದ ಧನವು ಸ್ವಪ್ನದಲ್ಲಿಗಳಿಸಿದ ಧನಕ್ಕೆ ಸಮವಾಗಿರುತ್ತದೆ. ಎಲೈ ಕೌರವರೇ! ಗಾಂಧಾರ ರಾಜನ ಪುತ್ರನಾದ ಶಕುನಿಯ ಮಾತನ್ನು ಕೇಳಿ ನೀವು ಧರ್ಮದ ಮಾರ್ಗದಿಂದ ದೂರಹೋಗಬೇಡಿ.

ದುರ್ಯೋಧನಃ

ಭೀಮಸ್ಯ ವಾಕ್ಯೇ ತದ್ವದೇವಾರ್ಜುನಸ್ಯ
ಸ್ಥಿತೋಽಹಂ ವೈ ಯಮಯೋಶ್ಚೈವಮೇವ ।
ಯುಧಿಷ್ಠಿರಶ್ಚೇದ್ ವಿವದತ್ಯನೀಶಂ
ತದಾ ದಾಸ್ಯಾನ್ಮೋಕ್ಷತೇ ಯಾಜ್ಞಸೇನೀ ॥೨೦॥

ನಾನು ಭೀಮನ ಅದರಂತೆ ಅರ್ಜುನ ನಕುಲಸಹದೇವರ ಮಾತುಗಳನ್ನು ನಂಬುತ್ತೇನೆ.ತಾನು ಅಸ್ವತಂತ್ರನೆಂದು ಯುಧಿಷ್ಠಿರನು ಸ್ಪಷ್ಟವಾಗಿ ಹೇಳಿದರೆ ಆಗ ದ್ರೌಪದಿಯು ದಾಸ್ಯದಿಂದ ಬಿಡುಗಡೆಯನ್ನು ಹೊಂದುವಳು.

ಅರ್ಜುನಃ

ಈಶೋ ರಾಜಾ ಪೂರ್ವಮಾಸೀದ್ ಗೃಹೇಶಃ
ಕುಂತೀಪುತ್ರೋ ಧರ್ಮರಾಜೋ ಮಹಾತ್ಮಾ ।
ಈಶಸ್ತ್ವಯಂ ಕಸ್ಯ ಪರಾಜಿತಾತ್ಮಾ
ತಂ ಜಾನೀಧ್ವಂ ಕುರವಃ ಸರ್ವ ಏವ ॥೨೧॥

ಕುಂತಿಪುತ್ರನಾದ ಮಹಾತ್ಮನಾದ ಧರ್ಮರಾಜನು ಮೊದಲು ನಮಗೆ ಪ್ರಭುವಾಗಿಯೇ ಇದ್ದನು. ಈಗಲೂ ಅವನು ನಮಗೆ ಪ್ರಭುವಾಗಿಯೇ ಇದ್ದಾನೆ. ಅವನು ಯಾರಿಗೆ ಸೋತಿದ್ದಾನೆಂದು ಕುರುಗಳಾದ ನೀವೆಲ್ಲರೂ ತಿಳಿಯಿರಿ. (ಶಕುನಿಯು ಮೋಸಗಾರನಾದ್ದರಿಂದ ಅವನ ಕೈಯ್ಯಲ್ಲಿ ಉಂಟಾದ ಸೋಲು ಸೋಲಾಗುವುದಿಲ್ಲ ಎಂದು ಅರ್ಜುನನ ಅಭಿಪ್ರಾಯ.)

ಕರ್ಣಃ

ದುಶ್ಶಾಸನ ನಿಬೋಧೇದಂ ವಚನಂ ಮೇ ಪ್ರಭಾಷಿತಮ್ ।
ಕಿಮನೇನ ಚಿರಂ ಏರ ನಯಸ್ವ ದ್ರುಪದಾತ್ಮಜಾಮ್ ।
ದಾಸೀಭಾವೇನ ಭುಂಕ್ಷ ತ್ವಂ ಯಥೇಷ್ಟಂ ಕುರು ಮಾನದ ॥೨೨॥

ದುಶ್ಶಾಸನನೇ! ನನ್ನ ಮಾತನ್ನು ಕೇಳು. ಇವರ ಮಾತುಗಳಿಂದ ಏನು ಪ್ರಯೋಜನ? ಮಾನದನೇ! ದ್ರೌಪದಿಯನ್ನು ಕರೆದುಕೊಂಡು ಹೋಗಿ ಅವಳಿಗೆ ದಾಸ್ಯವನ್ನು ನೀಡಿ ನಿನಗೆ ಮನ ಬಂದಂತೆ ಉಪಭೋಗಿಸು.

ವೈಶಂಪಾಯನಃ

ತತೋ ಗಾಂಧಾರರಾಜಸ್ಯ ಪುತ್ರಃ ಶಕುನಿರಬ್ರವೀತ್ ।
ಸಾಧು ಕರ್ಣ ಮಹಾಬಾಹೋ ಯಥೇಷ್ಟಂ ಕ್ರಿಯತಾಮಿತಿ ॥೨೩॥

ಗಾಂಧಾರರಾಜನಾದ ಶಕುನಿಯು ಕರ್ಣನೇ! ಸಾಧು, ದುಶ್ಶಾಸನನಿಗೆ ಬೇಕಾದಂತೆ ಮಾಡಲಿ ಎಂದು ಹೇಳಿದನು.

ತತೋ ದುಶ್ಶಾಸನಸ್ತೂರ್ಣಂ ದ್ರುಪದಸ್ಯ ಸುತಾಂ ಬಲಾತ್ ।
ಪ್ರವೇಶಯಿತುಮಾರಬ್ಧಃ ಸ ಚಕರ್ಷ ದುರಾತ್ಮವಾನ್ ॥೨೪॥

ಆಗ ದುರಾತ್ಮನಾದ ದುಶ್ಶಾಸನನು ತನ್ನ ಬಲದಿಂದ ದ್ರುಪದರಾಜನ ಪುತ್ರಿಯಾದ ಕೃಷ್ಣೆಯನ್ನು ಅಂತಃಪುರದ ಒಳಗೆ ಕರೆದುಕೊಂಡು ಹೋಗುವುದಕ್ಕಾಗಿ ಎಳೆಯಲು ಪ್ರಾರಂಭಿಸಿದನು.

ತತೋ ವಿಕ್ರೋಶತೀ ವೇಗಾತ್ ಪಾಂಚಾಲೀ ದೇವವರ್ಣಿನೀ ॥೨೫॥

ಆಗ ದೇವತಾಸ್ತ್ರೀ ಕಾಂತಿಯನ್ನು ಹೊಂದಿದ ಪಾಂಚಾಲಿಯು ದುಃಖದಿಂದ ಕಿರುಚಿದಳು.

ದ್ರೌಪದೀ

ಪರಿತ್ರಾಯಸ್ವ ಮಾಂ ಭೀಷ್ಮ ದ್ರೋಣ ದ್ರೌಣೇ ತಥಾ ಕೃಪ ।
ಪರಿತ್ರಾಯಸ್ವ ವಿದುರ ಧರ್ಮಿಷ್ಠೋ ಧರ್ಮವತ್ಸಲ ॥೨೬॥

ಎಲೈ ಭೀಷ್ಮನೇ! ದ್ರೋಣ ಅಶ್ವತ್ಥಾಮ ಮತ್ತು ಕೃಪಾಚಾರ್ಯರೇ! ಧರ್ಮಿಷ್ಠನಾದ ಧರ್ಮವತ್ಸಲನಾದ ವಿದುರನೇ! ನನ್ನನ್ನು ಕಾಪಾಡಿ. ಕಾಪಾಡಿ.

ಧೃತರಾಷ್ಟ್ರ ಮಹಾರಾಜ ಪರಿತ್ರಾಯಸ್ವ ವೈ ಸ್ನುಷಾಮ್ ।
ಗಾಂಧಾರಿ ತ್ವಂ ಮಹಾಭಾಗೇ ಸರ್ವಜ್ಞೇ ಧರ್ಮದರ್ಶಿನಿ ।
ಪರಿತ್ರಾಯಸ್ವ ಮಾಂ ದೇವಿ ಸುಯೋಧನಪರಾಜಿತಾಮ್ ॥೨೭॥

ಧೃತರಾಷ್ಟ್ರಮಹಾರಾಜನೇ! ನಿನ್ನ ಸೊಸೆಯನ್ನು ರಕ್ಷಿಸು. ಮಹಾನುಭಾವಳಾದ ಸರ್ವಜ್ಞಳಾದ ಧರ್ಮದರ್ಶಿನಿಯಾದ ಗಾಂಧಾರಿ ದೇವಿಯೇ ಸುಯೋಧನನ ಭಯದಲ್ಲಿ ಸಿಲುಕಿರುವ ನನ್ನನ್ನು ರಕ್ಷಿಸು.

ತ್ವಮಾರ್ಯೇ ವೀರಜನನಿ ಕಿಂ ಮಾಂ ಪಶ್ಯಸಿ ಚಾಪದಿ ।
ಕ್ಲಿಶ್ಯಮಾನಾಮನಾರ್ಯೈರ್ಮಾಂ ಕಿ ನ ತ್ರಾಯಸಿ ಸ್ವಾಂ ವಧೂಮ್ ॥

ಎಲೈ ವೀರಮಾತೆಯಾದ ಕುಂತಿಯೇ! ನಾನು ಸಂಕಟದಲ್ಲಿ ಇರುವುದನ್ನು ನೀನು ನೋಡುತ್ತಿಲ್ಲವೇ? ಅನಾರ್ಯ ಪುರುಷರಿಂದ ಕ್ಲೇಶಕ್ಕೆ ಒಳಗಾದ ನಿನ್ನ ಸೊಸೆಯನ್ನು ಏಕೆ ರಕ್ಷಿಸುತ್ತಿಲ್ಲ?

ಇತಿ ಲಾಲಪ್ಯಮಾನಾಂ ಮಾಂ ನ ಕಶ್ಚಿತ್ ಕಿಂಚಿದಬ್ರವೀತ್ ।
ಹಾ ಹತಾಸ್ಮಿ ಸುಮಂದಾತ್ಮಾ ಸುಯೋಧನವಶಂ ಗತಾ ॥೨೯॥

ಹೀಗೆ ಗೋಳಾಡುತ್ತಿರುವ ನನ್ನನ್ನು ಕುರಿತು ಯಾರೂ ಒಂದೂಮಾತನ್ನೂ ಆಡುತ್ತಿಲ್ಲ. ಅಯ್ಯೋ! ದುರ್ಯೋಧನನ ವಶಳಾಗಿ ಮಂದ ಭಾಗ್ಯೆಯಾದ ನಾನು ಸತ್ತೆ.

ನ ವಾ ಪಾಂಡುರ್ನರಪತಿರ್ನ ಧರ್ಮೋ ನ ಚ ದೇವರಾಟ್ ।
ನ ವಾಯುರ್ನಾಶ್ವಿನೌ ವಾऽಪಿ ಪರಿತ್ರಾಯಂತಿ ವೈ ಸ್ನುಷಾಮ್ ।
ಧಿಕ್ ಕಷ್ಟಂ ಯದಹಂ ಜೀವೇ ಮಂದಭಾಗ್ಯಾ ಪತಿವ್ರತಾ ॥೩೦॥

ರಾಜನಾದ ಪಾಂಡುವಾಗಲೀ ಯಮಧರ್ಮರಾಜನಾಗಲೀ ದೇವೇಂದ್ರನಾಗಲೀ ವಾಯುದೇವನಾಗಲೀ ಅಶ್ವಿನಿ ದೇವತೆಗಳಾಗಲೀ ತಮ್ಮಸೊಸೆಯಾದ ನನ್ನನ್ನು ರಕ್ಷಿಸುತ್ತಿಲ್ಲ. ಪತಿವ್ರತೆಯಾದ ಮಂದಭಾಗ್ಯಳಾದ ನಾನು ಬದುಕಿದ್ದೇನೆ. ಅಯ್ಯೋ ಎಂತಹ ಕಷ್ಟ!

ವಿದುರಃ

ಶೃಣೋಮಿ ವಾಕ್ಯಂ ತವ ರಾಜಪುತ್ರಿ
ನವೈ ಪಾರ್ಥಾಃ ಕಿಂಚಿದಪಿ ಬ್ರುವಂತಿ ।
ಸಾ ತ್ವಂ ಪ್ರಿಯಾರ್ಥಂ ಕುರು ವಾಕ್ಯಮೇತದ್
ಯದುಚ್ಯತೇ ಪಾಪಮತಿಃ ಕೃತಘ್ನಃ ॥೩೧॥

ಸುಯೋಧನಃ ಸಾನುಚರಃ ಸುದುಷ್ಟಃ
ಸಹೈವ ರಾಜ್ಞಾ ಧಿಕೃತಸೂನುನಾ ಚ ।
ಯದ್ಯೇವ ವಾಕ್ಯಂ ಮಹದುಚ್ಯಮಾನಂ
ನ ಶ್ರೋಷ್ಯತೇ ಪಾಪಮತಿಃ ಸುದುಷ್ಟಃ ॥೩೨॥

ರಾಜ ಪುತ್ರಿಯೇ! ನಿನ್ನ ಮಾತುಗಳನ್ನು ನಾನು ಕೇಳುತ್ತಿದ್ದೇನೆ. ಪಾಂಡವರು ಏನನ್ನೂ ಮಾತನಾಡುತ್ತಿಲ್ಲ. ಎಲ್ಲಾ ಸಜ್ಜನರಿಂದಲೂ ಧಿಕೃತನಾದ ಪಾಪಬುದ್ಧಿಯುಳ್ಳವನೂ ಅತ್ಯಂತದುಷ್ಟನೂ ಆದ ಅನುಚರರಿಂದ ಒಡಗೂಡಿದ ಸುಯೋಧನನು ಹೀಗೆ ಗಟ್ಟಿಯಾಗಿ ಗೋಳಿಡುತ್ತಿರುವ ನಿನ್ನ ಮಾತನ್ನು ಕೇಳದಿದ್ದರೆ, ದುರ್ಯೋಧನನ ಪ್ರೀತಿಗಾಗಿ ಆ ಕೃತಘ್ನನೂ ಮತ್ತು ಪಾಪಮತಿಯೂ ಹೇಳುವ ಮಾತನ್ನು ಕೇಳು.

ವೈಶಂಪಾಯನಃ

ಇತ್ಯೇವಮುಕ್ತ್ವಾ ದ್ರುಪದಸ್ಯ ಪುತ್ರೀಂ
ಕ್ಷತ್ತಾऽಬ್ರವೀದ್ ಧೃತರಾಷ್ಟ್ರಸ್ಯ ಪುತ್ರಮ್ ।
ಮಾ ಕ್ಲೇಶ್ಯತಾಂ ವೈ ದ್ರುಪದಸ್ಯ ಪುತ್ರೀ
ಮಾ ತ್ವಂ ಚಾರೀನ್ ದ್ರಕ್ಷ್ಯಸಿ ರಾಜಪುತ್ರಃ ॥೩೩॥

ವಿದುರನು ದ್ರೌಪದಿಯನ್ನು ಕುರಿತು ಹೀಗೆ ಮಾತನಾಡಿ ಅನಂತರ ದುರ್ಯೋಧನನನ್ನು ಕುರಿತು ರಾಜಪುತ್ರನೇ ದ್ರೌಪದಿಯನ್ನು ಹೀಗೆ ಕ್ಲೇಶಗೊಳಿಸಬೇಡ. ಹೀಗೆ ಕ್ಲೇಶಗೊಳಿಸಿದರೆ ನೀನು ಶತ್ರುಗಳಿಂದ ವಿನಾಶವನ್ನು ಹೊಂದುವಿ ಎಂದು ಹೇಳಿದನು.

ತಮೇವಮುಕ್ತ್ವಾ ಪ್ರಥಮಂ ಧೃತರಾಷ್ಟ್ರಮುವಾಚ ಹ ।
ಯದ್ಯೇವಂ ತ್ವಂ ಮಹಾರಾಜ ಸಂಕ್ಲೇಶಯಸಿ ದ್ರೌಪದೀಮ್ ॥೩೪॥

ಅಚಿರೇಣೈವ ಕಾಲೇನ ಪುತ್ರಸ್ತೇ ಸಹ ಮಂತ್ರಿಭಿಃ ।
ಗಮಿಷ್ಯತಿ ಕ್ಷಯಂ ಪಾಪಃ ಪಾಂಡವಾಪ್ರಿಯಕಾರಕಃ ॥೩೫॥

ಭೀಮಾರ್ಜುನಾಭ್ಯಾಂ ಕ್ರುದ್ಧಾಭ್ಯಾಂ ಮಾದ್ರೀಪುತ್ರದ್ವಯೇನ ಚ ।
ತಸ್ಮಾನ್ನಿವಾರಯ ಸುತಂ ಮಾ ವಿನಾಶಂ ವಿಚಿಂತಯ ॥೩೬॥

ದುರ್ಯೋಧನನ್ನು ಕುರಿತು ಮೊದಲು ಹೀಗೆ ಮಾತನಾಡಿ ಅನಂತರ ಧೃತರಾಷ್ಟ್ರನನ್ನು ಕುರಿತು ಹೀಗೆ ಮಾತನಾಡಿದನು. ಮಹಾರಾಜನೇ! ನೀನು ಹೀಗೆ ದ್ರೌಪದಿಯನ್ನು ಕ್ಲೇಶಪಡಿಸುತ್ತಿದ್ದರೆ ಅಲ್ಪಕಾಲದಲ್ಲಿಯೇ ನಿನ್ನ ಪುತ್ರನೂ ಮಂತ್ರಿಗಳೂ ಎಲ್ಲರೂ ಪಾಂಡವರಿಗೆ ಅಪ್ರಿಯವನ್ನು ಉಂಟುಮಾಡಿದ ಕಾರಣದಿಂದ ಕ್ರೋಧಗೊಂಡ ಭೀಮಾರ್ಜುನರಿಂದ ಮತ್ತು ನಕುಲಸಹದೇವರಿಂದ ವಿನಾಶವನ್ನು ಹೊಂದುವರು. ಆದ್ದರಿಂದ ನಿನ್ನ ಮಗನನ್ನು ತಡೆ. ವಿನಾಶವನ್ನು ಹೊಂದಬೇಡ.

ವೈಶಂಪಾಯನಃ

ಏತಚ್ಛ್ರುತ್ವಾ ಮಂದಬುದ್ಧಿರ್ನೋತ್ತರಂ ಕಿಂಚಿದಬ್ರವೀತ್ ।
ತತೋ ದುರ್ಯೋಧನಸ್ತತ್ರ ದೈವಮೋಹಬಲಾತ್ಕೃತಃ ॥೩೭॥

ಅಚಿಂತ್ಯ ಕ್ಷತ್ತುರ್ವಚನಂ ಹರ್ಷೇಣಾಯತಲೋಚನಃ ।
ಊರೂ ದರ್ಶಯತೇ ಪಾಪೋ ದ್ರೌಪದ್ಯಾ ವೈ ಮುಹುರ್ಮುಹುಃ ॥

ಇದನ್ನು ಕೇಳಿದ ಮಂದಬುದ್ಧಿಯಾದ ಧೃತರಾಷ್ಟ್ರನಾಗಲೀ ಅಥವಾ ದುರ್ಯೋಧನನಾಗಲೀ ಯಾವ ಮಾತನ್ನೂ ಆಡಲಿಲ್ಲ. ಆಗ ಪಾಪಿಯಾದ ದುರ್ಯೋಧನನು ದೈವಘಟನೆಯಿಂದ ಮೋಹಕ್ಕೆ ಒಳಗಾದವನಾಗಿ ವಿದುರನ ಮಾತುಗಳನ್ನು ಲೆಕ್ಕಿಸದೆ ಸಂತೋಷದಿಂದ ಅರಳಿದ ಕಣ್ಣುಳ್ಳವನಾಗಿ ದ್ರೌಪದಿಗೆ ಮತ್ತೆ ತನ್ನ ತೊಡೆಗಳನ್ನು ತೋರಿಸಿದನು.

ದ್ರೌಪದೀ

ಯಸ್ಮಾಚ್ಚೋರುಂ ದರ್ಶಯಸೇ ಯಸ್ಮಾಚ್ಚೋರುಂ ನಿರೀಕ್ಷಸಿ ।
ತಸ್ಮಾತ್ ತವಾಪ್ಯಧರ್ಮಿಷ್ಠ ಊರೌ ಮೃತ್ಯುರ್ಭವಿಷ್ಯತಿ ॥೩೯॥

ಯಸ್ಮಾಚ್ಚೈವಂ ಕ್ಲೇಶಯತಿ ಭ್ರಾತಾ ತೇ ಮಾಂ ದುರಾತ್ಮವಾನ್ ।
ತಸ್ಮಾದ್ ರುಧಿರಮೇವಾಸ್ಯ ಪಾಸ್ಯತೇ ವೈ ವೃಕೋದರಃ ॥೪೦॥

ಇಮಂ ಚ ಪಾಪಿಷ್ಠಮತಿಂ ಕರ್ಣಂ ಸಸುತಬಾಂಧವಮ್ ।
ಸಾಮಾತ್ಯಂ ಸಪರೀವಾರಂ ಹನಿಷ್ಯತಿ ಧನಂಜಯಃ ॥೪೧॥

ಕ್ಷುದ್ರಕರ್ಮನ್ ನೈಕೃತಿಕಂ ಶಕುನಿಂ ಪಾಪಚೇತಸಮ್ ।
ಸಹದೇವೋ ರಣೇ ಕ್ರುದ್ಧೋ ಹನಿಷ್ಯತಿ ಸಬಾಂಧವಮ್ ॥೪೨॥

ಎಲೈ ಅಧರ್ಮಿಷ್ಠನೇ! ನಿನ್ನ ತೊಡೆಗಳನ್ನು ತೊರಿಸುತ್ತಿದ್ದೀಯೆ ಮತ್ತು ನನ್ನ ತೊಡೆಯನ್ನು ನೋಡುತ್ತಿದ್ದೀಯೆ ಆ ಕಾರಣದಿಂದ ನಿನಗೆ ತೊಡೆಯಲ್ಲಿಯೇ ಮೃತ್ಯುವುಂಟಾಗುವುದು. ನಿನ್ನ ದುರಾತ್ಮನಾದ ತಮ್ಮನು ನನ್ನನ್ನು ಈ ರೀತಿ ಸಂಕಟಕ್ಕೆ ಗುರಿಮಾಡಿದುದರಿಂದ ವೃಕೋದರನು ಅವನ ರಕ್ತವನ್ನು ಕುಡಿಯುವನು. ಅತ್ಯಂತ ಪಾಪದ ಬುದ್ಧಿಯುಳ್ಳ ಈ ಕರ್ಣನನ್ನು ಅವನ ಪುತ್ರರು ಬಂಧುಗಳು ಅಮಾತ್ಯರು ಮತ್ತು ಪರಿವಾರದೊಡನೆ ಅರ್ಜುನನು ಸಂಹರಿಸುವನು. ಎಲೈ ಕ್ಷುದ್ರಕರ್ಮಿಯಾದ ದುರ್ಯೋಧನನೇ! ಈ ಪಾಪಬುದ್ಧಿಯುಳ್ಳ ಮೋಸಗಾರನಾದ ಶಕುನಿ ಮತ್ತು ಅವನ ಬಂಧುಗಳನ್ನು ಕ್ರುದ್ಧನಾದ ಸಹದೇವನು ಯುದ್ಧದಲ್ಲಿ ಸಂಹರಿಸುವನು.

ಇತ್ಯೇವಮಾಹ ವಚನಂ ದ್ರೌಪದೀ ಧರ್ಮದರ್ಶಿನೀ ।
ತತೋಽಂತರಿಕ್ಷಾತ್ ಸುಮಹತ್ ಪುಷ್ಪವರ್ಷಮವಾಪತತ್ ।
ಮೂರ್ಧ್ನ್ಯದೃಶ್ಯತ ಪಾಂಚಾಲ್ಯಾಃ ಸಾಧುಶಬ್ದಶ್ಚ ಸರ್ವಶಃ ॥೪೩॥

ಧರ್ಮದರ್ಶಿನಿಯಾದ ದ್ರೌಪದಿಯು ಹೀಗೆ ಮಾತನಾಡಿದಳು. ಆಗ ದ್ರೌಪದಿಯು ತಲೆಯ ಮೇಲೆ ಅಂತರಿಕ್ಷದಿಂದ ದೊಡ್ಡ ಪುಷ್ಪವೃಷ್ಟಿಯುಂಟಾಯಿತು. ಎಲ್ಲ ಕಡೆಗಳಿಂದಲೂ ಸಾಧುವೆಂಬ ಶಬ್ದವು ಕೇಳಿ ಬಂದಿತು.

ತೇಷಾಂ ತು ವಚನಂ ಶ್ರುತ್ವಾ ನೋಚುಸ್ತತ್ರ ಸಭಾಸದಃ ।
ಅರ್ಜುನಸ್ಯ ಭಯಾದ್ ರಾಜನ್ನಭೂನ್ನಿಶ್ಶಬ್ದಮತ್ರ ವೈ ॥೪೪॥

ಅವರುಗಳ ಮಾತನ್ನು ಕೇಳಿದ ಸಭಾಸದರು ಅರ್ಜುನನ ಭಯದಿಂದ ಏನನ್ನೂ ಮಾತನಾಡಲಿಲ್ಲ. ರಾಜನೇ! ಸಭೆಯು ನಿಶ್ಶಬ್ದವಾಯಿತು.

ದ್ರೌಪದ್ಯಾ ವಚನಂ ಶ್ರುತ್ವಾ ಚುಕೋಪಾಥ ಧನಂಜಯಃ ।
ಸ ತದಾ ಕ್ರೋಧತಾಮ್ರಾಕ್ಷ ಇದಂ ವಚನಮಬ್ರವೀತ್ ।
ಕರ್ಣಂ ಹಂತಾಸ್ಮಿ ಸಮರೇ ಸಪುತ್ರಂ ಸಹಬಾಂಧವಮ್ ॥೪೫॥

ದ್ರೌಪದಿಯ ಮಾತುಗಳನ್ನು ಕೇಳಿ ಧನಂಜಯನು ಕೋಪಗೊಂಡನು. ಕ್ರೋಧದಿಂದ ಕೆಂಪಾದ ಕಣ್ಣುಳ್ಳ ಅವನು ಈ ಮಾತುಗಳನ್ನು ಆಡಿದನು. ಕರ್ಣನನ್ನು ಅವನ ಪುತ್ರ ಮತ್ತು ಬಂಧುಗಳ ಜೊತೆಯಲ್ಲಿಯುದ್ಧದಲ್ಲಿನಾನು ಕೊಲ್ಲುವೆನು.

ಯಸ್ಯಾಶ್ರಯಾತ್ ಸ್ವಯಂ ಪಾಪೋ ಧಾರ್ತರಾಷ್ಟ್ರಃ ಪ್ರಗರ್ಜತಿ ।
ತಂ ಸಮೂಲಂ ಹನಿಷ್ಯಾಮಿ ಸೂತಜಂ ಬಲಶಾಲಿನಮ್ ॥೪೬॥

ಯಾವನನ್ನು ಆಶ್ರಯಿಸಿ ಪಾಪಿಯಾದ ದುರ್ಯೋಧನನು ಹೀಗೆ ಗರ್ಜಿಸುತ್ತಿದ್ದಾನೆಯೋ, ಅಂತಹ ಬಲಶಾಲಿಯಾದ ಸೂತಪುತ್ರನಾದ ಕರ್ಣನನ್ನು ಮೂಲಸಹಿತನಾದ ನಾಶಮಾಡುವೆನು.

ಯೇ ಚಾಪರೇ ಚ ಯೋತ್ಸ್ಯಂತಿ ಧಾರ್ತರಾಷ್ಟ್ರಸ್ಯ ರಾಜಕಾಃ ।
ತಾನ್ ಸರ್ವಾನ್ ನಿಹನಿಷ್ಯಾಮಿ ಸತ್ಯೇನಾಯುಧಮಾಲಭೇ ॥೪೭॥

ಇನ್ನು ದುರ್ಯೋಧನನ ಪರವಾಗಿ ಯಾವ ರಾಜರು ಯುದ್ಧವನ್ನು ಮಾಡುವರೋ ಅವರೆಲ್ಲರನ್ನು ನಾನು ಸಂಹರಿಸುವೆನು ಎಂದು ಆಯುಧವನ್ನು ಹಿಡಿದು ಈ ಪ್ರತಿಜ್ಞೆಯನ್ನು ಮಾಡುತ್ತಿದ್ದೇನೆ.

ಅದ್ಯೈವಾಹಂ ಹನಿಷ್ಯಾಮಿ ಸರ್ವಾನೇತಾನ್ ಸಭಾಸದಃ ।
ಅತೀವ ಮನ್ಯುರ್ಭವತಿ ದೃಷ್ಟ್ವೇಮಾಂ ದ್ರುಪದಾತ್ಮಜಾಮ್ ।
ಕಿನ್ತ್ವಹಂ ವೈ ಕರಿಷ್ಯಾಮಿ ಯದ್ ರಾಜಾ ಸತತಂ ಘೃಣೀ ॥೪೮॥

ದ್ರೌಪದೀ

ಯಸ್ಮಾಚ್ಚೋರುಂ ದರ್ಶಯಸೇ ಯಸ್ಮಾಚ್ಚೋರುಂ ನಿರೀಕ್ಷಸಿ ।
ತಸ್ಮಾತ್ ತವಾಪ್ಯಧರ್ಮಿಷ್ಠ ಊರೌ ಮೃತ್ಯುರ್ಭವಿಷ್ಯತಿ ॥೩೯॥

ಯಸ್ಮಾಚ್ಚೈವಂ ಕ್ಲೇಶಯತಿ ಭ್ರಾತಾ ತೇ ಮಾಂ ದುರಾತ್ಮವಾನ್ ।
ತಸ್ಮಾದ್ ರುಧಿರಮೇವಾಸ್ಯ ಪಾಸ್ಯತೇ ವೈ ವೃಕೋದರಃ ॥೪೦॥

ಇಮಂ ಚ ಪಾಪಿಷ್ಠಮತಿಂ ಕರ್ಣಂ ಸಸುತಬಾಂಧವಮ್ ।
ಸಾಮಾತ್ಯಂ ಸಪರೀವಾರಂ ಹನಿಷ್ಯತಿ ಧನಂಜಯಃ ॥೪೧॥

ಕ್ಷುದ್ರಕರ್ಮನ್ ನೈಕೃತಿಕಂ ಶಕುನಿಂ ಪಾಪಚೇತಸಮ್ ।
ಸಹದೇವೋ ರಣೇ ಕ್ರುದ್ಧೋ ಹನಿಷ್ಯತಿ ಸಬಾಂಧವಮ್ ॥೪೨॥

ಎಲೈ ಅಧರ್ಮಿಷ್ಠನೇ! ನಿನ್ನ ತೊಡೆಗಳನ್ನು ತೊರಿಸುತ್ತಿದ್ದೀಯೆ ಮತ್ತು ನನ್ನ ತೊಡೆಯನ್ನು ನೋಡುತ್ತಿದ್ದೀಯೆ ಆ ಕಾರಣದಿಂದ ನಿನಗೆ ತೊಡೆಯಲ್ಲಿಯೇ ಮೃತ್ಯುವುಂಟಾಗುವುದು. ನಿನ್ನ ದುರಾತ್ಮನಾದ ತಮ್ಮನು ನನ್ನನ್ನು ಈ ರೀತಿ ಸಂಕಟಕ್ಕೆ ಗುರಿಮಾಡಿದುದರಿಂದ ವೃಕೋದರನು ಅವನ ರಕ್ತವನ್ನು ಕುಡಿಯುವನು. ಅತ್ಯಂತ ಪಾಪದ ಬುದ್ಧಿಯುಳ್ಳ ಈ ಕರ್ಣನನ್ನು ಅವನ ಪುತ್ರರು ಬಂಧುಗಳು ಅಮಾತ್ಯರು ಮತ್ತು ಪರಿವಾರದೊಡನೆ ಅರ್ಜುನನು ಸಂಹರಿಸುವನು. ಎಲೈ ಕ್ಷುದ್ರಕರ್ಮಿಯಾದ ದುರ್ಯೋಧನನೇ! ಈ ಪಾಪಬುದ್ಧಿಯುಳ್ಳ ಮೋಸಗಾರನಾದ ಶಕುನಿ ಮತ್ತು ಅವನ ಬಂಧುಗಳನ್ನು ಕ್ರುದ್ಧನಾದ ಸಹದೇವನು ಯುದ್ಧದಲ್ಲಿ ಸಂಹರಿಸುವನು.

ಇತ್ಯೇವಮಾಹ ವಚನಂ ದ್ರೌಪದೀ ಧರ್ಮದರ್ಶಿನೀ ।
ತತೋಽಂತರಿಕ್ಷಾತ್ ಸುಮಹತ್ ಪುಷ್ಪವರ್ಷಮವಾಪತತ್ ।
ಮೂರ್ಧ್ನ್ಯದೃಶ್ಯತ ಪಾಂಚಾಲ್ಯಾಃ ಸಾಧುಶಬ್ದಶ್ಚ ಸರ್ವಶಃ ॥೪೩॥

ಧರ್ಮದರ್ಶಿನಿಯಾದ ದ್ರೌಪದಿಯು ಹೀಗೆ ಮಾತನಾಡಿದಳು. ಆಗ ದ್ರೌಪದಿಯು ತಲೆಯ ಮೇಲೆ ಅಂತರಿಕ್ಷದಿಂದ ದೊಡ್ಡ ಪುಷ್ಪವೃಷ್ಟಿಯುಂಟಾಯಿತು. ಎಲ್ಲ ಕಡೆಗಳಿಂದಲೂ ಸಾಧುವೆಂಬ ಶಬ್ದವು ಕೇಳಿ ಬಂದಿತು.

ತೇಷಾಂ ತು ವಚನಂ ಶ್ರುತ್ವಾ ನೋಚುಸ್ತತ್ರ ಸಭಾಸದಃ ।
ಅರ್ಜುನಸ್ಯ ಭಯಾದ್ ರಾಜನ್ನಭೂನ್ನಿಶ್ಶಬ್ದಮತ್ರ ವೈ ॥೪೪॥

ಅವರುಗಳ ಮಾತನ್ನು ಕೇಳಿದ ಸಭಾಸದರು ಅರ್ಜುನನ ಭಯದಿಂದ ಏನನ್ನೂ ಮಾತನಾಡಲಿಲ್ಲ. ರಾಜನೇ! ಸಭೆಯು ನಿಶ್ಶಬ್ದವಾಯಿತು.

ದ್ರೌಪದ್ಯಾ ವಚನಂ ಶ್ರುತ್ವಾ ಚುಕೋಪಾಥ ಧನಂಜಯಃ ।
ಸ ತದಾ ಕ್ರೋಧತಾಮ್ರಾಕ್ಷ ಇದಂ ವಚನಮಬ್ರವೀತ್ ।
ಕರ್ಣಂ ಹಂತಾಸ್ಮಿ ಸಮರೇ ಸಪುತ್ರಂ ಸಹಬಾಂಧವಮ್ ॥೪೫॥

ದ್ರೌಪದಿಯ ಮಾತುಗಳನ್ನು ಕೇಳಿ ಧನಂಜಯನು ಕೋಪಗೊಂಡನು. ಕ್ರೋಧದಿಂದ ಕೆಂಪಾದ ಕಣ್ಣುಳ್ಳ ಅವನು ಈ ಮಾತುಗಳನ್ನು ಆಡಿದನು. ಕರ್ಣನನ್ನು ಅವನ ಪುತ್ರ ಮತ್ತು ಬಂಧುಗಳ ಜೊತೆಯಲ್ಲಿಯುದ್ಧದಲ್ಲಿನಾನು ಕೊಲ್ಲುವೆನು.

ಯಸ್ಯಾಶ್ರಯಾತ್ ಸ್ವಯಂ ಪಾಪೋ ಧಾರ್ತರಾಷ್ಟ್ರಃ ಪ್ರಗರ್ಜತಿ ।
ತಂ ಸಮೂಲಂ ಹನಿಷ್ಯಾಮಿ ಸೂತಜಂ ಬಲಶಾಲಿನಮ್ ॥೪೬॥

ಯಾವನನ್ನು ಆಶ್ರಯಿಸಿ ಪಾಪಿಯಾದ ದುರ್ಯೋಧನನು ಹೀಗೆ ಗರ್ಜಿಸುತ್ತಿದ್ದಾನೆಯೋ, ಅಂತಹ ಬಲಶಾಲಿಯಾದ ಸೂತಪುತ್ರನಾದ ಕರ್ಣನನ್ನು ಮೂಲಸಹಿತನಾದ ನಾಶಮಾಡುವೆನು.

ಯೇ ಚಾಪರೇ ಚ ಯೋತ್ಸ್ಯಂತಿ ಧಾರ್ತರಾಷ್ಟ್ರಸ್ಯ ರಾಜಕಾಃ ।
ತಾನ್ ಸರ್ವಾನ್ ನಿಹನಿಷ್ಯಾಮಿ ಸತ್ಯೇನಾಯುಧಮಾಲಭೇ ॥೪೭॥

ಇನ್ನು ದುರ್ಯೋಧನನ ಪರವಾಗಿ ಯಾವ ರಾಜರು ಯುದ್ಧವನ್ನು ಮಾಡುವರೋ ಅವರೆಲ್ಲರನ್ನು ನಾನು ಸಂಹರಿಸುವೆನು ಎಂದು ಆಯುಧವನ್ನು ಹಿಡಿದು ಈ ಪ್ರತಿಜ್ಞೆಯನ್ನು ಮಾಡುತ್ತಿದ್ದೇನೆ.

ಅದ್ಯೈವಾಹಂ ಹನಿಷ್ಯಾಮಿ ಸರ್ವಾನೇತಾನ್ ಸಭಾಸದಃ ।
ಅತೀವ ಮನ್ಯುರ್ಭವತಿ ದೃಷ್ಟ್ವೇಮಾಂ ದ್ರುಪದಾತ್ಮಜಾಮ್ ।
ಕಿನ್ತ್ವಹಂ ವೈ ಕರಿಷ್ಯಾಮಿ ಯದ್ ರಾಜಾ ಸತತಂ ಘೃಣೀ ॥೪೮॥

ಈ ಸಭಾಸದರನ್ನು ಈ ದಿನವೇ ಕೊಲ್ಲುವೆನು. ದ್ರೌಪದಿಯ ಸಂಕಟವನ್ನು ನೋಡುವಾಗ ಬಹಳ ಕ್ರೋಧವು ಉಂಟಾಗುತ್ತದೆ. ಆದರೆ ಧರ್ಮರಾಜನು ಯಾವಾಗಲೂ ದಯಾಶೀಲನಾಗಿದ್ದಾನೆ. ನಾನು ಏನುಮಾಡಲು ಸಾಧ್ಯ ?

ಅದ್ಯೈ ವಾऽಹಂ ಮುಹೂರ್ತೇನ ಕೃತ್ಸ್ನಂ ನೃಪತಿಮಂಡಲಮ್ ।
ಶರೈರ್ನಯಿಷ್ಯೇ ಸದನಂ ಯಮಸ್ಯಾಮಿತ್ರಕರ್ಶಿನಃ ।
ಅಯಂ ತು ಮಾಂ ವಾರಯತೇ ಧರ್ಮರಾಜೋ ಯುಧಿಷ್ಠಿರಃ ॥೪೯॥

ಈ ದಿನವೇ ನಾನು ಇಲ್ಲಿ ನೆರೆದಿರುವ ಸಮಗ್ರವಾದ ರಾಜಸಮೂಹವನ್ನು ನನ್ನ ಬಾಣಗಳಿಂದ ಯಮಲೋಕಕ್ಕೆ ಕಳುಹಿಸುವೆನು. ಈ ಧರ್ಮರಾಜನಾದ ಯುಧಿಷ್ಠಿರನು ಮಾತ್ರ ನನ್ನನ್ನು ತಡೆಯುತ್ತಿದ್ದಾನೆ.

ಯುಧಿಷ್ಠಿರಃ

ಮಾ ಪಾರ್ಥ ಸಾಹಸಂ ಕಾರ್ಷೀರ್ವಿನಾಶಂ ಗಮಯೇದ್ ಯಶಃ ।
ಪಾಪಂ ತ್ವಿಮಂ ಪಾಪಮತಿಂ ಸ ಭವಾನ್ ಹಂತುಮುತ್ಸಹೇತ್ ।
ತ್ವಮಿಮಂ ಜಗತೋऽರ್ಥೇ ವೈ ಕ್ರೋಧಂ ಸಂಯಚ್ಛ ಪಾಂಡವ ॥

ಅರ್ಜುನನೇ! ಸಾಹಸವನ್ನು ಮಾಡಬೇಡ. ನಮ್ಮ ಕೀರ್ತಿಯು ವಿನಾಶವಾಗದಿರಲಿ. ನೀನು ಈ ಪಾಪ ಬುದ್ಧಿಯುಳ್ಳ ದುರ್ಯೋಧನನನ್ನು ಕೊಲ್ಲಲು ಉತ್ಸಾಹನಾಗಿದ್ದೀಯೆ. ಎಲೈ ಪಾಂಡವನೇ! ಆದರೂ ಪ್ರಪಂಚದ ಸಲುವಾಗಿ ಈ ನಿನ್ನ ಕೋಪವನ್ನು ಉಪಸಂಹಾರಮಾಡು.

ವೈಶಂಪಾಯನಃ

ಏವಮುಕ್ತಸ್ತದಾ ರಾಜ್ಞಾ ಪಾಂಡವೋಥ ಧನಂಜಯಃ ।
ಕ್ರೋಧಂ ಸಂಶಮಯನ್ ಪಾರ್ಥೋ ಧಾರ್ತರಾಷ್ಟ್ರಂ ಪ್ರತಿ ಸ್ಥಿತಃ ॥

ರಾಜನಾದ ಧರ್ಮರಾಜನಿಂದ ಹೀಗೆ ಹೇಳಲ್ಪಟ್ಟ ಅರ್ಜುನನು ದುರ್ಯೋಧನನ ಬಗ್ಗೆ ಇದ್ದ ತನ್ನ ಕೋಪವನ್ನು ಉಪಶಮನಗೊಳಿಸಿ ದುರ್ಯೋಧನನ ಎದುರಿಗೆ ನಿಂತನು.

ತಸ್ಮಿನ್ ವೀರೇ ಪ್ರಶಾಂತೇ ತು ಪಾಂಡವೇ ಫಲ್ಗುನೇ ತತಃ ।
ಸರ್ವಂ ಪ್ರಹೃಷ್ಟಮಭವಜ್ಜಗತ್ ಸ್ಥಾವರಜಂಗಮಮ್ ॥೫೨॥

ಆ ವೀರನಾದ ಪಾಂಡುಪುತ್ರನಾದ ಅರ್ಜುನನು ಶಾಂತನಾಗುತ್ತಿರಲು ಸ್ಥಾವರಜಂಗಮಾತ್ಮಕವಾದ ಎಲ್ಲ ಪ್ರಪಂಚವೂ ಸಂತೋಷಗೊಂಡಿತು.

ವಾರಿತಂ ಚ ತತೋ ದೃಷ್ಟ್ವಾ ಭ್ರಾತ್ರಾ ಪಾರ್ಥಂ ವೃಕೋದರಃ ।
ಬಭೂವ ವಿಮನಾ ರಾಜನ್ನಭೂನ್ನಿಶ್ಶಬ್ದಮತ್ರ ವೈ ॥೫೩॥

ಅಣ್ಣನಾದ ಧರ್ಮರಾಜನಿಂದ ಅರ್ಜುನನು ನಿವಾರಿಸಲ್ಪಟ್ಟಿದ್ದನ್ನು ನೋಡಿ ಭೀಮಸೇನನು ಬಹಳ ಬೇಸರಗೊಂಡನು. ರಾಜನೇ! ಪುನಃ ಸಭೆಯು ನಿಶ್ಶಬ್ದವಾಯಿತು.

ತತೋ ರಾಜ್ಞೋ ಧೃತರಾಷ್ಟ್ರಸ್ಯ ಗೇಹೇ
ಗೋಮಾಯುರುಚ್ಚೈರ್ವ್ಯಾಜಹಾರಾಗ್ನಿಹೋತ್ರೇ ।
ತಂ ರಾಸಭಾಃ ಪ್ರತ್ಯವದಂಶ್ಚ ರಾಜನ್
ಸಮಂತತಃ ಪಕ್ಷಿಣಶ್ಚೈವ ರೌದ್ರಾಃ ॥೫೪॥

ಆಗ ರಾಜನಾದ ಧೃತರಾಷ್ಟ್ರನ ಅಗ್ನಿಹೋತ್ರದಲ್ಲಿ ನರಿಯು ಉಚ್ಚಸ್ವರದಲ್ಲಿ ಕೂಗಿತು. ರಾಜನೇ! ಅದಕ್ಕೆ ಕತ್ತೆಗಳು ಮತ್ತು ಉಗ್ರವಾದ ಪಕ್ಷಿಗಳು ಎಲ್ಲ ಕಡೆಗಳಿಂದಲೂ ಪ್ರತಿಧ್ವನಿಯನ್ನು ನೀಡಿದವು.

ತಂ ವೈ ಶಬ್ದಂ ವಿದುರಸ್ತ್ವ ವೇದೀತ್
ಸಾ ಚೈವ ದೇವೀ ಸುಬಲಾತ್ಮಜಾ ಚ ।
ಭೀಷ್ಮೋ ದ್ರೋಣಃ ಗೌತಮಶ್ಚಾಪಿ ವಿದ್ವಾನ್
ಸ್ವಸ್ತಿ ಸ್ವಸ್ತೀತ್ಯಬ್ರುವನ್ ಸರ್ವ ಏವ ॥೫೫॥

ಆ ಶಬ್ದವನ್ನು(ಶಬ್ದದ ಫಲವನ್ನು) ವಿದುರನು ತಿಳಿದನು. ಹಾಗೆಯೇ ಸುಬಲಪುತ್ರಿಯಾದ ಗಾಂಧಾರಿಯೂ ತಿಳಿದಳು ಮತ್ತು ವಿದ್ವಾಂಸರಾದ ಭೀಷ್ಮ, ದ್ರೋಣ ಮತ್ತು ಕೃಪರು ತಿಳಿದರು. ಎಲ್ಲರೂ ಸ್ವಸ್ತಿ ಎಂದು ಹೇಳಿದರು. (ಒಳ್ಳೆಯದಾಗಲಿ, ಕೆಟ್ಟದ್ದು ಆಗುವುದು ಬೇಡ ಎಂದು ಹೇಳಿದರು.)

ತತೋ ಗಾಂಧಾರೀ ವಿದುರಶ್ಚೈವ ವಿದ್ವಾನ್
ತಮುತ್ಪಾತಂ ಘೋರಮಾಲಕ್ಷ್ಯ ರಾಜ್ಞೇ ।
ನಿವೇದಯಾಮಾಸತುರಾರ್ತವತ್ ತದಾ
ತತೋ ರಾಜಾ ವಾಕ್ಯಮಿದಂ ಬಭಾಷೇ ॥೫೬॥

ಆಗ ಗಾಂಧಾರಿಯೂ ಮತ್ತು ಮೇಧಾವಿಯಾದ ವಿದುರನೂ ಈ ಘೋರವಾದ ಅಪಶಕುನಗಳನ್ನು ಅವಲೋಕಿಸಿ ಆರ್ತರಾಗಿ ರಾಜನಿಗೆ ನಿವೇದಿಸಿದರು. ಆಗ ರಾಜನಾದ ಧೃತರಾಷ್ಟ್ರನು ಈ ಮಾತನ್ನು ಆಡಿದನು.

ಹತೋಽಸಿ ದುರ್ಯೋಧನ ಮಂದಬುದ್ಧೇ
ಯಸ್ತ್ವಂ ಸಭಾಯಾಂ ಕುರುಪುಂಗವಾನಾಮ್ ।
ಸ್ತ್ರಿಯಂ ಸಮಾಕರ್ಷಸಿ ದುರ್ವಿನೀತ
ವಿಶೇಷತೋ ದ್ರೌಪದೀಂ ಧರ್ಮಪತ್ನೀಮ್ ॥೫೭॥

ಮಂದಬುದ್ಧಿಯಾದ ದುರ್ಯೋಧನನೇ! ನೀನು ಸಭೆಯಲ್ಲಿ ಕುರುಶ್ರೇಷ್ಠರ ಅದರಲ್ಲೂ ವಿಶೇಷವಾಗಿ ಪಾಂಡವರ ಧರ್ಮಪತ್ನಿಯನ್ನು ಹೀಗೆ ಎಳೆದಾಡುತ್ತಿರುವುದರಿಂದ ಎಲೈ ದುರ್ವಿನೀತನೇ! ನೀನು ಮೃತನಾಗಿದ್ದೀಯೆ.

ಏವಮುಕ್ತ್ವಾ ಧೃತರಾಷ್ಟ್ರೋ ಮನೀಷೀ
ಹಿತಾನ್ಷೇಷೀ ಬಾಂಧವಾನಾಮಪಾಯಾತ್ ।
ಕೃಷ್ಣಾಂ ಪಾಂಚಾಲೀಮಬ್ರವೀತ್ ಸಾಂತ್ವಪೂರ್ವಂ
ವಿಮೃಶ್ಯೈತತ್ ಪ್ರಜ್ಞಯಾ ಮಂದಬುದ್ಧಿಃ ॥೫೮॥

ಹೀಗೆ ಮಾತನಾಡಿ ವಿವೇಕಿಯಾದ ಧೃತರಾಷ್ಟ್ರನು ತನ್ನ ಬಂಧುಗಳನ್ನು ಅಪಾಯದಿಂದ ಪಾರುಮಾಡಲು ಬಯಸಿ ಮೇಧಾವಿಯಾದ ಅವನು ತನ್ನ ಪ್ರಜ್ಞೆಯಿಂದ ಎಲ್ಲವನ್ನು ವಿಮರ್ಶೆಮಾಡಿ ದ್ರೌಪದಿಯನ್ನು ಕುರಿತು ಸಮಾಧಾನಪೂರ್ವಕವಾಗಿ ಈ ಮಾತನ್ನು ಆಡಿದನು.

ವರಂ ವೃಣೀಷ್ವ ಪಾಂಚಾಲಿ ಮತ್ತೋ ಯದಭಿಕಾಂಕ್ಷಸಿ ।
ವಧೂನಾಂ ಹಿ ವಿಶಿಷ್ಟಾ ಮೇ ತ್ವಂ ಧರ್ಮಪರಮಾ ಸತೀ ॥೫೯॥

ಪಾಂಚಾಲಿಯೇ! ನೀನು ನನ್ನ ಎಲ್ಲಾ ಸೊಸೆಯರಲ್ಲಿಯೂ ಶ್ರೇಷ್ಠಳಾದವಳು ಮತ್ತು ಧರ್ಮಿಷ್ಠಳಾದವಳು. ನಿನಗೆ ಬೇಕಾದ ವರವನ್ನು ನನ್ನಿಂದ ಕೇಳು.

ದ್ರೌಪದೀ

ದದಾಸಿ ಚೇದ್ ವರಂ ಮಹ್ಯಂ ವೃಣೋಮಿ ಭರತರ್ಷಭ ।
ಸರ್ವಧರ್ಮಾನುಗಃ ಶ್ರೀಮಾನದಾಸೋಽಸ್ತು ಯುಧಿಷ್ಠಿರಃ ॥೬೦॥

ಭರತರ್ಷಭನೇ! ನೀನು ನನಗೆ ವರವನ್ನು ಕೊಡುವುದಾದರೆ ಸರ್ವಧರ್ಮಅನುಸಾರಿಯಾದ ಸಂಪದ್ಯುಕ್ತನಾದ ಯುಧಿಷ್ಠಿರನು ದಾಸ್ಯದಿಂದ ಬಿಡುಗಡೆಯನ್ನು ಹೊಂದಲಿ.

ಮನಸ್ವಿನಮಜಾನಂತೋ ಮೈವಂ ಬ್ರೂಯುಃ ಕುಮಾರಕಾಃ ।
ಏಷ ವೈ ದಾಸಪುತ್ರೇತಿ ಪ್ರತಿವಿಂಧ್ಯಂ ಮಮಾತ್ಮಜಮ್ ॥೬೧॥

ಅವನ ಧೈರ್ಯ ಸಾಹಸಗಳನ್ನು ತಿಳಿಯದೆ ಉಳಿದ ಕುಮಾರರು ನನ್ನ ಮತ್ತು ಧರ್ಮರಾಜನ ಪುತ್ರನಾದ ಪ್ರತಿವಿಂಧ್ಯನನ್ನು ದಾಸಪುತ್ರ ಎಂದು ಕರೆಯುವುದು ಬೇಡ.

ರಾಜಪುತ್ರಃ ಪುರಾ ಭೂತ್ವಾ ಯಥಾ ನಾನ್ಯಃ ಪುಮಾನ್ ಕ್ವಚಿತ್ ।
ಲಾಳಿತೋ ದಾಸಪುತ್ರತ್ವಂ ಪಶ್ಯನ್ ನಶ್ಯೇದ್ಧಿ ಭಾರತ ॥೬೨॥

ಎಲೈ ಭಾರತನೇ! ಮೊದಲು ರಾಜಪುತ್ರನಾಗಿ ಮರ್ಯಾದೆಯನ್ನು ಪಡೆದು ಇನ್ನೊಬ್ಬ ಕುಮಾರನು ಪಡೆಯದ ಲಾಲನೆಯನ್ನು ಪಡೆದು ಈಗ ತಾನು ದಾಸ ಪುತ್ರನೆಂದು ತಿಳಿದರೆ ಅವನು ವಿನಾಶವನ್ನು ಹೊಂದುವನು.

ಧೃತರಾಷ್ಟ್ರ

ತಥಾಸ್ತು ತೇ ಮಹಾಭಾಗೇ ಯಥಾ ತ್ವಂ ನಂದಿನೀಚ್ಛಸಿ ।
ದ್ವಿತೀಯಂ ತೇ ವರಂ ಭದ್ರೇ ದದಾಮಿ ವರಯಸ್ವ ಮೇ ।
ಮನೋ ಹಿ ಮೇ ವಿತರತಿ ನೈಕಂ ತ್ವಂ ವರಮರ್ಹಸಿ ॥೬೩॥

ಮಹಾನುಭಾವಳೇ! ಮಗಳೇ! ನೀನು ಬಯಸಿದಂತೆಯೇ ಆಗಲಿ. ಮಂಗಳಸ್ವರೂಪಳೇ ಎರಡನೆಯ ವರವನ್ನು ಕೊಡುತ್ತೇನೆ. ಅದನ್ನು ಕೇಳು. ನನ್ನ ಮನಸ್ಸು

ನಿನಗೆ ಇನ್ನೂ ವರವನ್ನು ಕೊಡಬೇಕೆಂದು ಕಾತರಿಸುತ್ತಿದೆ. ಒಂದು ವರವು ನಿನಗೆ ಸಾಕಾಗುವುದಿಲ್ಲ.

ದ್ರೌಪದೀ

ಸರಥೌ ಸಧನುಷ್ಕೌ ಚ ಭೀಮಸೇನಧನಂಜಯೌ ।
ನಕುಲಃ ಸಹದೇವಶ್ಚ ದ್ವಿತೀಯಂ ವರಯೇ ವರಮ್ ॥೬೪॥

ಭೀಮಸೇನಾರ್ಜುನರು ಮತ್ತು ನಕುಲ ಸಹದೇವರು ತಮ್ಮ ರಥ ಮತ್ತು ಆಯುಧಗಳಿಂದ ಕೂಡಿದವರಾಗಿ ದಾಸ್ಯದಿಂದ ಬಿಡುಗಡೆಯನ್ನು ಹೊಂದಲಿ. ಇದು ನಾನು ಕೇಳುವ ಎರಡನೆಯ ವರ.

ಧೃತರಾಷ್ಟ್ರಃ

ಏವಂ ಭವತು ಕಲ್ಯಾಣಿ ಯಥಾ ತ್ವಮಭಿಭಾಷಸೇ ।
ತೃತೀಯಂ ವರಯಾಸ್ಮತ್ತೋ ನಾಸಿ ದ್ವಾಭ್ಯಾಂ ಸುಸತ್ಕೃತಾ ।
ತ್ವಂ ಹಿ ಸರ್ವಸ್ನುಷಾಣಾಂ ಮೇ ಶ್ರೇಯಸೀ ಧರ್ಮಚಾರಿಣೀ ॥೬೫॥

ಎಲೌ ಕಲ್ಯಾಣಿಯೇ ನೀನು ಹೇಳಿದಂತೆ ಆಗಲಿ. ಮೂರನೆಯ ವರವನ್ನು ಕೇಳು. ಎರಡು ವರಗಳಿಂದ ನಿನ್ನನ್ನು ಸತ್ಕರಿಸಿದಂತೆ ಆಗುವುದಿಲ್ಲ. ನೀನು ನನ್ನ ಎಲ್ಲಾ ಸೊಸೆಯರಲ್ಲಿಯೂ ಶ್ರೇಷ್ಠಳಾದವಳು ಮತ್ತು ಧರ್ಮಿಷ್ಠಳಾದವಳು.

ದ್ರೌಪದೀ

ಲೋಭೋ ಧರ್ಮವಿನಾಶಾಯ ಭಗವನ್ ನಾಹಮುತ್ಸಹೇ ।
ಅನರ್ಹಾ ವರಮಾದಾತುಂ ತೃತೀಯಂ ರಾಜಸತ್ತಮ ॥೬೬॥

ಪೂಜ್ಯನಾದ ರಾಜಶ್ರೇಷ್ಠನೇ! ಲೋಭವು ಧರ್ಮವನ್ನು ನಾಶಮಾಡುತ್ತದೆ. ನಾನು ಮೂರನೆಯ ವರವನ್ನು ಕೇಳಲು ಬಯಸುವುದಿಲ್ಲ. ನಾನು ಮೂರನೆಯ ವರವನ್ನು ಕೇಳಲು ಅರ್ಹಳೂ ಅಲ್ಲ.

ಏಕಮಾಹುರ್ವೈಶ್ಯವರಂ ದ್ವೌ ವರೌ ಕ್ಷತ್ರಿಯಸ್ತ್ರಿಯಾಃ ।
ತ್ರಯಸ್ತು ರಾಜ್ಞಾಂ ರಾಜೇಂದ್ರ ಬ್ರಾಹ್ಮಣಸ್ಯ ಶತಂ ವರಾಃ ॥೬೭॥

ರಾಜೇಂದ್ರನೇ! ವೈಶ್ಯರಿಗೆ ಒಂದು ವರ. ಕ್ಷತ್ರಿಯ ಸ್ತ್ರೀಗೆ ಎರಡುವರಗಳು. ರಾಜರಿಗೆ ಮೂರು ವರಗಳು ಮತ್ತು ಬ್ರಾಹ್ಮಣರಿಗೆ ನೂರು ವರಗಳು (ಎಂದು ಹೇಳುತ್ತಾರೆ.)

ಪಾಪೀಯಾಂಸ ಇಮೇ ಭೂತ್ವಾ ಸಂತೀರ್ಣಾಃ ಪತಯೋ ಮಮ ।
ವೇತ್ಸ್ಯಂತಿ ಚೈವ ಭದ್ರಾಣಿ ರಾಜನ್ ಪುಣ್ಯೇನ ಕರ್ಮಣಾ ॥೬೮॥

ನನ್ನ ಪತಿಗಳೆಲ್ಲರೂ ಪಾಪಿಯಾದ ದುರ್ಯೋಧನನ ದಾಸರಾಗಿ ಈ ದಾಸ್ಯದಿಂದ ಬಿಡುಗಡೆಯನ್ನು ಹೊಂದಿದ್ದಾರೆ. ಎಲೈ ರಾಜನೇ! ತಮ್ಮ ಶುಭಕರ್ಮಗಳಿಂದ ಅವರು ಎಲ್ಲಾ ಮಂಗಳವನ್ನೂ ಸಂಪಾದಿಸುವರು. (ನನಗೆ ಬೇರೆವರಗಳ ಅವಶ್ಯಕತೆಯಿಲ್ಲ.)

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಏಕನವತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ತ್ರಯೋವಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ತೊಂಬತ್ತೊಂದನೆಯ ಅಧ್ಯಾಯವು ಮುಗಿಯಿತು.

★★★★★

ತೊಂಬತ್ತೆರಡನೆಯ ಅಧ್ಯಾಯ

(ಕರ್ಣಪ್ರಲಾಪದಿಂದ ಕ್ರೋಧಗೊಂಡ ಭೀಮನನ್ನು ಸಂತೈಸಿ, ಪಾಂಡವರಿಂದ ಇಂದ್ರಪ್ರಸ್ಥಗಮನ.)

ಕರ್ಣಃ

ಯಾ ನಃ ಶ್ರುತಾ ಮನುಷ್ಯೇಷು ಸ್ತ್ರಿಯೋ ರೂಪೇಣ ಸಮ್ಮತಾಃ ।
ಯಾಸಾಮೇತಾದೃಶಂ ಕರ್ಮ ನ ಕಸ್ಯಾಶ್ಚಿನ್ನಿಶಾಮ್ಯತೇ ॥೧॥

ನಾವು ಮನುಷ್ಯರಲ್ಲಿ ಸುಂದರಿಯಾದ ಎಷ್ಟು ಸ್ತ್ರೀಯರ ಬಗ್ಗೆ ಕೇಳಿದ್ದೇವೆಯೋ ಅವರಲ್ಲಿ ಯಾರೂ ದ್ರೌಪದಿಯು ಮಾಡಿದಂತಹ ಇಂತಹ ಕರ್ಮವನ್ನು ಮಾಡಿದುದನ್ನು ನೋಡಿಲ್ಲ.

ಕ್ರೋಧಾವಿಷ್ಟೇಷು ಪಾರ್ಥೇಷು ಧೃತರಾಷ್ಟ್ರಸುತೇನ ಚ ।
ದ್ರೌಪದೀ ಪಾಂಡುಪುತ್ರಾಣಾಂ ಕೃಷ್ಣಾ ಶಾಂತಿರಿಹಾಭವತ್ ॥೨॥

ಧೃತರಾಷ್ಟ್ರಸುತನಾದ ದುರ್ಯೋಧನನಿಂದ ಪಾಂಡವರು ಕೋಪಗೊಳ್ಳುತ್ತಿರಲು ದ್ರುಪದರಾಜಕುಮಾರಿಯಾದ ಕೃಷ್ಣೆಯು ಅವರಿಗೆ ಉಪಶಮನಮಾಡುವ ವಸ್ತುವಾದಳು.

ಅಪ್ಲವೇಽಂಭಸಿ ಮಗ್ನಾನಾಮಪ್ರತಿಷ್ಠೇ ನಿಮಜ್ಜತಾಮ್ ।
ಪಾಂಚಾಲೀ ಪಾಂಡುಪುತ್ರಾಣಾಂ ಪಾರಗಾ ನೌರಿವಾಭವತ್ ॥೩॥

ಚಂಚಲವಾದ ಸಮುದ್ರದಲ್ಲಿ ದೋಣಿಯಿಲ್ಲದೆ ಮುಳುಗುವ ಪಾಂಡವರಿಗೆ ಪಾಂಚಾಲಿಯು ದಡವನ್ನು ಸೇರಿಸುವ ದೋಣಿಯಾದಳು.

ವೈಶಂಪಾಯನಃ

ತದ್ವೈ ಶ್ರುತ್ವಾ ಭೀಮಸೇನಃ ಕುರುಮಧ್ಯೇಽತ್ಯಮರ್ಷಣಃ॥
ಸ್ತ್ರೀ ಗತಿಃ ಪಾಂಡುಪುತ್ರಾಣಾಮಿತ್ಯುವಾಚ ಸುದುರ್ಮನಾಃ ॥೪॥

ಅದನ್ನು ಕೌರವರ ಮಧ್ಯದಲ್ಲಿ ಕೇಳಿದ ಭೀಮಸೇನನು ಅತ್ಯಂತ ಕೋಪಗೊಂಡವನಾಗಿ ಅತ್ಯಂತ ಖೇದದಿಂದ ಪಾಂಡುಪುತ್ರರಿಗೆ ಒಬ್ಬ ವನಿತೆಯು ಗತಿಯಾದಳು ಎಂದು ಹೇಳಿದನು.

ಭೀಮಸೇನಃ

ತ್ರೀಣಿ ಜ್ಯೋತೀಂಷಿ ಪುರುಷ ಇತಿ ವೈ ದೇವಲೋಬ್ರವೀತ್ ।
ಯುದ್ಧೇಽಪರಾಙ್ಮುಖತ್ವಂ ಚ ಆಹೂತಸ್ಯಾನಿವರ್ತನಮ್ ।
ದಾರಾಣಾಂ ವರ್ತನಂ ಚೈವ ಇತಿ ತಜ್ಜ್ಯೋತಿಷಾಂ ತ್ರಯಮ್ ॥೫॥

ಮನುಷ್ಯನಿಗೆ ಮೂರು ಜ್ಯೋತಿಗಳೆಂದು ದೇವಲರು ಹೇಳಿದ್ದಾರೆ. ಯುದ್ಧಕ್ಕೆ ಕರೆದಾಗ ಹೋಗುವುದು. ಯುದ್ಧದಲ್ಲಿ ಹಿಮ್ಮೆಟ್ಟದಿರುವುದು. ಮತ್ತು ಪತ್ನಿಯ ಜೊತೆಯಲ್ಲಿ ಔಪಾಸನಾಗ್ನಿಯನ್ನು ಸೇವಿಸುವುದು. ಇವು ಆ ಮೂರು ಧರ್ಮಗಳು.

ಅಮೇಧ್ಯೇ ವೈ ಗತಪ್ರಾಣೇ ಶೂನ್ಯೇ ಜ್ಞಾತಿಭಿರುಜ್ಝಿತೇ ।
ದೇಹೇ ತ್ರಿತಯಮೇವೈತತ್ ಪುರುಷಸ್ಯೋಪಜಾಯತೇ ॥೬॥

ಪತ್ನಿಯೆಂಬ ಮೂರನೆಯ ಜ್ಯೋತಿಯು ಅಪವಿತ್ರಳಾದರೆ ಅಥವಾ ಮೃತಳಾದರೆ ಅಥವಾ ಸದ್ಧರ್ಮರಹಿತಳಾದರೆ ಅಥವಾ ಬಾಂಧವರಿಂದ ತ್ಯಕ್ತಳಾದರೆ ಈ ಮೂರು ಜ್ಯೋತಿಗಳು ಪುರುಷನ ದೇಹದಲ್ಲಿಯೇ ಉಂಟಾಗುತ್ತವೆ. (ಕುಂಡವಿಲ್ಲದ ಅಗ್ನಿಯನ್ನು ದೇಹದಲ್ಲಿ ಸಮಾರೋಪಮಾಡಿಕೊಂಡು ಧ್ಯಾನ ಅರ್ಚನೆಗಳಿಂದ ಪೂಜಿಸುವಂತೆ ಒಳಗೆ ಪೂಜಿಸಬೇಕು. ಹೊರಗಲ್ಲ.)

ತನ್ನೋ ಜ್ಯೋತಿರುಪಹತಂ ದಾರಾಣಾಮಭಿಮರ್ಶನಾತ್ ।
ಧನಂಜಯ ಕಥಂ ಸ್ವಿತ್ ಸ್ಯಾದ್ ಅಪತ್ಯಮಭಿಮೃಷ್ಟಜಮ್ ॥೭॥

ದುಶ್ಶಾಸನನು ಅಭಿಮರ್ಶಣೆಮಾಡಿದುದರಿಂದ ನಮ್ಮ ಮೂರನೆಯ ಜ್ಯೋತಿಯು ನಷ್ಟವಾಗಿದೆ. ಧನಂಜಯನೇ! ನಮಗೆ ಇಷ್ಟವಾದ ಸಂತಾನವು ಎಲ್ಲಿಂದ ದೊರೆಯುವುದು?

ಧನಂಜಯಃ

ನ ಚೈವೋಕ್ತಾ ನ ಚಾನುಕ್ತಾ ಹೀನತಃ ಪರುಷಾ ಗಿರಃ ।
ಭಾರತಾಃ ಪ್ರತಿಜಲ್ಪಂತಿ ಸದಾನುತ್ತಮಪೂರುಷಾಃ ॥೮॥

ನೀಚರೂ ಆಡದಂತಹ ಅಥವಾ ಆಡಿದರೂ ಅಸ್ಪಷ್ಟವಾಗಿ ಆಡುವಂತಹ ಕೆಟ್ಟ ಮಾತುಗಳನ್ನು ಅಧಮ ಪುರುಷರಾದ ಈ ದುರ್ಯೋಧನಾದಿಗಳು ಯಾವಾಗಲೂ ಮಾತನಾಡುತ್ತಿದ್ದಾರೆ.

ಸ್ಮರಂತಿ ಸುಕೃತಾನ್ಯೇವ ನ ವೈರಾಣಿ ಕೃತಾನಿ ಚ ।
ಸಂತಃ ಪ್ರತಿವಿಜಾನಂತೋ ಲಬ್ಧ್ವಾ ಪ್ರತ್ಯಯಮಾತ್ಮನಃ ॥೯॥

ಸಜ್ಜನರಾದವರು ಪರಮಾತ್ಮನ ಮಾತಿಗೆ ಬದ್ಧರಾಗಿ ಅಧಮರ ಮಾತಿಗೆ ಪ್ರತ್ಯುತ್ತರವನ್ನು ತಿಳಿದಿದ್ದರೂ ಸಹ ಅವರು ಮಾಡಿದ ವಿರೋಧಗಳನ್ನು ಸಹಿಸದೆ ಅವರು ಮಾಡಿದ ಒಳ್ಳೆಯ ಕೆಲಸಗಳನ್ನೇ ಸ್ಮರಿಸುತ್ತಾರೆ.

ಭೀಮಸೇನಃ

ಇಹೈವೈತಾನಹಂ ಸರ್ವಾನ್ ಹತ್ವಾ ಶತ್ರೂನ್ ಸಮಾಗತಾನ್ ।
ಅಥ ನಿಷ್ಕ್ರಮ್ಯ ರಾಜೇಂದ್ರ ಆಮೂಲಾದ್ದನ್ಮಿ ಭಾರತ ॥೧೦॥

ರಾಜೇಂದ್ರನೇ! ಇಲ್ಲಿ ಬಂದ ಎಲ್ಲಾ ಶತ್ರುಗಳನ್ನೂ ಈಗಲೇ ಕೊಂದು ಹೊರಗೆ ಹೋಗಿ ಉಳಿದವರನ್ನು ಮೂಲಸಹಿತವಾಗಿ ಎಲ್ಲರನ್ನೂ ಕೊಲ್ಲುತ್ತೇನೆ.

ಕಿಂ ನೋ ವಿವದಿತೇನೇಹ ಕಿಂ ನಃ ಕ್ಲೇಶೇನ ಭಾರತ ।
ಅದ್ಯೈವ ತಾನ್ ನಿಹತ್ಯಾಜೌ ಪ್ರಶಾಧಿ ವಸುಧಾಮಿಮಾಮ್ ॥೧೧॥

ಎಲೈ ಭಾರತನೇ! ನಾವು ಏಕೆ ಕ್ಲೇಶವನ್ನು ಪಡಬೇಕು? ಇಲ್ಲಿ ಇವರ ಜೊತೆ ವಿವಾದ ಮಾಡಿ ಏನು ಪ್ರಯೋಜನ? ಈ ದಿನವೇ ಶತ್ರುಗಳೆಲ್ಲರನ್ನೂ ಕೊಂದು ನೀನು ಈ ಭೂಮಿಯನ್ನು ಆಳು.

ಇತ್ಯುಕ್ತ್ವಾ ಭೀಮಸೇನಸ್ತು ಕನಿಷ್ಠೈರ್ಭ್ರಾತೃಭಿರ್ವೃತಃ ।
ಮೃಗಮಧ್ಯೇ ಯಥಾ ಸಿಂಹೋ ಮುಹುಃ ಪರಿಘಮೈಕ್ಷತ ॥೧೨॥

ಹೀಗೆ ಹೇಳಿ ಮೃಗಗಳ ಮಧ್ಯೆ ಇರುವ ಸಿಂಹದಂತೆ ತನ್ನ ತಮ್ಮಂದಿರಿಂದ ಪರಿವೃತನಾದ ಭೀಮಸೇನನು ಮತ್ತೆ ಮತ್ತೆ ಒಂದು ದೊಡ್ಡ ಸ್ತಂಭವನ್ನು ನೋಡಿದನು.

ಸಾಂತ್ವ್ಯಮಾನೋ ವಾರ್ಯಮಾಣಃ ಪಾರ್ಥೇನಾಕ್ಲಿಷ್ಟಕರ್ಮಣಾ ।
ಸ್ವಿದ್ಯತೇ ಚ ಮಹಾಬಾಹುರಂತರ್ದಾಹೇನ ವೀರ್ಯವಾನ್ ॥೧೩॥

ಅಕ್ಲಿಷ್ಟಕಾರಿಯಾದ ಧರ್ಮರಾಜನು ಅವನನ್ನು ತಡೆದು ಸಮಾಧಾನಮಾಡುತ್ತಿದ್ದರೂ ಮಹಾಬಾಹುವಾದ ವೀರನಾದ ಭೀಮಸೇನನು ದೇಹದ ಒಳಗಿನ ತಾಪದಿಂದ ಬೆವರುತ್ತಿದ್ದನು.

ಕ್ರುದ್ಧಸ್ಯ ತಸ್ಯ ಸ್ರೋತೋಭ್ಯಃ ಕರ್ಣಾದಿಭ್ಯೋ ನರಾಧಿಪ ।
ಸಧೂಮಃ ಸಸ್ಫುಲಿಂಗಾರ್ಚಿಃ ಪಾವಕಃ ಸಮಜಾಯತ ॥೧೪॥

ಎಲೈ ಜನಮೇಜಯ ರಾಜನೇ! ಕೋಪಗೊಂಡ ಅವನ ರೋಮಕೂಪಗಳಿಂದಲೂ ಕರ್ಣಗಳಿಂದಲೂ ಧೂಮ ಮತ್ತು ಅಗ್ನಿಯ ಕಣಗಳಿಂದ ಕೂಡಿದ ಅಗ್ನಿಯು ಹೊರಬರುತ್ತಿತ್ತು.

ಭ್ರುಕುಟೀಪುಟದುಷ್ಪ್ರೇಕ್ಷಮಭವತ್ ತಸ್ಯ ತನ್ಮುಖಮ್ ।
ಯುಗಾಂತಕಾಲೇ ಸಂಪ್ರಾಪ್ತೇ ಕೃತಾಂತಸ್ಯೇವ ರೂಪಿಣಃ ॥೧೫॥

ಯುಗಾಂತಕಾಲದಲ್ಲಿ ಧರಿಸಿದ ಯಮನ ರೂಪದಂತಿದ್ದ ಅವನ ಹುಬ್ಬುಗಂಟಿನ ಮುಖವನ್ನು ನೋಡುವುದು ಸಹ ಅಸಾಧ್ಯವಾಗಿದ್ದಿತು.

ಯುಧಿಷ್ಠಿರಸ್ತಮಾವಾರ್ಯ ಬಾಹುನಾ ಬಾಹುಶಾಲಿನಮ್ ।
ಮೈವಮಿತ್ಯಬ್ರವೀಚ್ಚೈನಂ ಜೋಷಮಾಸ್ಸ್ವೇತಿ ಭಾರತ ॥೧೬॥

ಭಾರತನೇ! ಯುಧಿಷ್ಠಿರನು ತನ್ನ ಬಾಹುಗಳಿಂದ ಬಾಹುಶಾಲಿಯಾದ ಅವನನ್ನು ತಡೆದು ಹೀಗೆ ಮಾಡಬೇಡ ಸುಮ್ಮನಿರು ಎಂದು ಹೇಳಿದನು.

ನಿವಾರ್ಯ ತಂ ಮಹಾಬಾಹುಂ ಕೋಪಸಂರಕ್ತಲೋಚನಮ್ ।
ಪಿತರಂ ಸಮುಪಾತಿಷ್ಠದ್ ಧೃತರಾಷ್ಟ್ರಂ ಕೃತಾಂಜಲಿಃ ॥೧೭॥

ಧರ್ಮರಾಜನು ಕೋಪದಿಂದ ಕೆಂಪಾದ ಕಣ್ಣುಳ್ಳ ಮಹಾಬಾಹುವಾದ ಭೀಮಸೇನನನ್ನು ತಡೆದು ಕೈಗಳನ್ನು ಮುಗಿದು ತಂದೆಯಾದ ಧೃತರಾಷ್ಟ್ರನನ್ನು ಸ್ತೋತ್ರಮಾಡಿದನು.

ಯುಧಿಷ್ಠಿರಃ

ರಾಜನ್ ಕಿಂ ಕರವಾಮಸ್ತೇ ಪ್ರಶಾಧ್ಯಸ್ಮಾಂಸ್ತ್ವಮೀಶ್ವರಃ ।
ನಿತ್ಯಂ ಹಿ ಸ್ಥಾತುಮಿಚ್ಛಾಮಸ್ತವ ಭಾರತ ಶಾಸನೇ ॥೧೮॥

ರಾಜನೇ! ನೀನು ನಮಗೆ ಪ್ರಭುವಾದವನು. ನಮಗೆ ಶಾಸನವನ್ನು ಮಾಡು. ನಾವು ನಿನಗೆ ಏನನ್ನು ಮಾಡೋಣ? ಭಾರತನೇ! ನಾವು ಯಾವಾಗಲೂ ನಿನ್ನ ಶಾಸನದಲ್ಲಿ ಇರಲು ಬಯಸುತ್ತೇವೆ.

ಧೃತರಾಷ್ಟ್ರಃ

ಅಜಾತಶತ್ರೋ ಭದ್ರಂ ತೇ ಅರಿಷ್ಟಂ ಸ್ವಸ್ತಿ ಗಚ್ಛತ ।
ಅನುಜ್ಞಾತಾಃ ಸಹಧನಾಃ ಸ್ವರಾಜ್ಯಮನುಶಾಸತ ॥೧೯॥

ಅಜಾತ ಶತ್ರುವೇ! ನಿನಗೆ ಮಂಗಳವಾಗಲಿ. ನಿರ್ವಿಘ್ನವಾಗಿ ಇಲ್ಲಿಂದ ಹೋಗು. ನಿನ್ನ ಸಂಪತ್ತಿನೊಡನೆ (ಮತ್ತು ಪರಿವಾರದೊಡನೆ) ನನ್ನ ಅನುಜ್ಞೆಯನ್ನು ಪಡೆದು ಹೊರಟು ನಿನ್ನ ರಾಜ್ಯವನ್ನು ನೀನು ಆಳು.

ಇದಂ ತೇ ತಾತ ಬೋದ್ಧವ್ಯಂ ವೃದ್ಧಸ್ಯ ಮಮ ಶಾಸನಮ್ ।
ಮಯಾ ನಿಗದಿತಂ ಕೃತ್ಸ್ನಂ ಪಶ್ಯ ನಿಶ್ರೇಯಸಂ ಪರಮ್ ॥೨೦॥

ಪ್ರೀತಿಪಾತ್ರನೇ! ನನ್ನ ಶಾಸನವನ್ನು ತಿಳಿದುಕೋ. ನಾನು ಹೇಳಿದುದಿಲ್ಲವೂ ಉತ್ತಮ ಶ್ರೇಯಸ್ಸನ್ನು ಸಂಪಾದಿಸಿಕೊಡುವುದಾಗಿದೆ ಎಂದು ತಿಳಿ.

ವೇತ್ಥ ತ್ವಂ ತಾತ ಧರ್ಮಾಣಾಂ ಗತಿಂ ಸೂಕ್ಷ್ಮಾಂ ಯುಧಿಷ್ಠಿರ ।
ವಿನೀತೋಽಸಿ ಮಹಾಪ್ರಾಜ್ಞ ವೃದ್ಧಾನಾಂ ಪರ್ಯುಪಾಸಿತಾ ॥೨೧॥

ಎಲೈ ಯುಧಿಷ್ಠಿರನೇ! ನೀನು ಧರ್ಮದಸೂಕ್ಷ್ಮಗತಿಯನ್ನು ತಿಳಿದವನಾಗಿದ್ದೀಯೆ. ಮಹಾಪ್ರಾಜ್ಞನೇ! ನೀನು ಹಿರಿಯರ ಸೇವೆಯನ್ನು ಮಾಡಿ ವಿನಯವನ್ನು ಸಂಪಾದಿಸಿದವನಾಗಿದ್ದೀಯೆ.

ಯತೋಽನುಬುದ್ಧಿತಃ ಶಾಂತಿಃ ಪ್ರಶಮಂ ಗಚ್ಛ ಭಾರತ ।
ನಾದಾರೌ ಕ್ರಮತೇ ಶಸ್ತ್ರಂ ದಾರೌ ಶಸ್ತ್ರಂ ನಿಪಾತ್ಯತೇ ॥೨೨॥

ಎಲೈ ಭಾರತನೇ! ಒಳ್ಳೆಯ ವಿಮರ್ಶೆಯಿಂದ ಶಾಂತಿಯು ದೊರೆಯುವುದರಿಂದ ನೀನು ಪ್ರಯತ್ನಪೂರ್ವಕವಾಗಿ ಶಾಂತಿಯನ್ನು ಹೊಂದು. ಮರವಲ್ಲದೆ ಶಿಲೆಯಲ್ಲಿ ಯಾರೂ ಕೊಡಲಿಯನ್ನು ಬೀಸುವುದಿಲ್ಲ. ಮರದಲ್ಲಿಯೇ ಕೊಡಲಿಯನ್ನು ಪ್ರಹರಿಸುತ್ತಾರೆ. (ಮೃದುವಾದವನ ಮೇಲೆಯೇ ದುಷ್ಟರು ಆಕ್ರಮಣ ಮಾಡುತ್ತಾರೆ.)

ನ ವೈರಾಣ್ಯಭಿಜಾನಂತಿ ಗುಣಾನ್ ಪಶ್ಯಂತಿ ನಾಗುಣಾನ್
ವಿರೋಧಂ ನಾಧಿಗಚ್ಛಂತಿ ನಿತ್ಯಮುತ್ತಮಪೂರುಷಾಃ ॥೨೩॥

ಉತ್ತಮ ಪುರುಷರು ವೈರವನ್ನು ಪರಿಗಣಿಸುವುದಿಲ್ಲ. ಗುಣಗಳನ್ನೇ ನೋಡುತ್ತಾರೆ ಹೊರತು ದೊಷಗಳನ್ನು ಎಣಿಸುವುದಿಲ್ಲ. ಆವರು ಇನ್ನೊಬ್ಬರ ಜೊತೆಯಲ್ಲಿ ಎಂದೂ ವಿರೋಧವನ್ನು ಸಂಪಾದಿಸುವುದಿಲ್ಲ.

ಸಂವಾದೇ ಪರುಷಾಣ್ಯಾಹುರ್ಯುಧಿಷ್ಠಿರ ನರಾಧಮಾಃ ।
ಪ್ರತ್ಯಾಹುರ್ಮಧ್ಯಮಾಸ್ತ್ವೇತೇಽನುಕ್ತಾಃ (ಅನುಕ್ತಾ) ಪರುಷಮುತ್ತರಮ್ ॥

ಯುಧಿಷ್ಠಿರನೇ! ನರಾಧಮರು ಇನ್ನೊಬ್ಬರ ಜೊತೆಯಲ್ಲಿ ಮಾತನಾಡುವಾಗ ಕ್ರೂರವಾಗಿ ಮಾತನಾಡುತ್ತಾರೆ. ಮಧ್ಯಮರಾದವರು ಕ್ರೂರವಾದ ಮಾತುಗಳನ್ನು ಆಡದೆ ಅವರ ಮಾತುಗಳಿಗೆ ಉತ್ತರವನ್ನು ಕೊಡುತ್ತಾರೆ.

ನಚ್ಚೈವೋಕ್ತಾ ನ ಚಾನುಕ್ತಾ ಅಹಿತಾಃ ಪರುಷಾ ಗಿರಃ ।
ಅಭಿಜಲ್ಪಂತಿ ನೋ ಧೀರಾಃ ಸದಾ ತೂತ್ತಮಪೂರುಷಾಃ ॥೨೫॥

ಉತ್ತಮ ಪುರುಷರಾದವರು ಮಾತ್ರ ಅಹಿತವಾದ ಮತ್ತು ಕ್ರೂರವಾದ ಮಾತುಗಳನ್ನು ಇನ್ನೊಬ್ಬರು ಆಡಿದರೂ ಆಡದಿದ್ದರೂ ಸಹ ಧೀರರಾದ ಅವರು ಆ ಮಾತುಗಳನ್ನು ಇನ್ನೊಮ್ಮೆ ಆಡುವುದಿಲ್ಲ.

ಸ್ಮರಂತಿ ಸುಕೃತಾನ್ಯೇವ ನ ವೈರಾಣಿ ಕೃತಾನ್ಯಪಿ ।
ಸಂತಃ ಪ್ರತಿವಿಜಾನಂತೋ ಲಬ್ಧ್ವಾ ಪ್ರತ್ಯಯಮಾತ್ಮನಃ ॥೨೬॥

ಸಜ್ಜನರಾದವರು ಪರಮಾತ್ಮನ ಜ್ಞಾನವನ್ನು ಹೊಂದಿ ಉತ್ತರವನ್ನು ಕೊಡಲು ತಿಳಿದಿದ್ದರೂ ಇನ್ನೊಬ್ಬರುಮಾಡಿದ ವೈರವನ್ನು ಸ್ಮರಿಸಿದೆ ಅವರು ಮಾಡಿದ ಸುಕೃತಗಳನ್ನೇ ಸ್ಮರಿಸುತ್ತಾರೆ.

ಯಥಾ ಚರಿತಮಾರ್ಯೇಣ ತ್ವಯಾಽಸ್ಮಿನ್ ಸತ್ಸಮಾಗಮೇ ।
ದುರ್ಯೋಧನಸ್ಯ ಪಾರುಷ್ಯಂ ತತ್ ತಾತ ಹೃದಿ ಮಾ ಕೃಥಾಃ ॥೨೭॥

ಪ್ರೀತಿಪಾತ್ರನೆ! ನೀನು ಈ ಸಜ್ಜನರ ಸಮಾಗಮದಲ್ಲಿ ಹಿಂದೆ ಸಜ್ಜನರು ಆಚರಿಸದಂತೆಯೇ ನಡೆದುಕೊಂಡಿದ್ದೀಯೆ. ಪ್ರೀತಿಪಾತ್ರನೇ! ದುರ್ಯೋಧನನ ಕ್ರೂರವಾದ ಮಾತುಗಳನ್ನು ಮನಸ್ಸಿಗೆ ತಂದು ಕೊಳ್ಳಬೇಡ.

ಮಾತರಂ ಚೈವ ಗಾಂಧಾರೀಂ ಮಾಂ ಚ ತ್ವದ್ಗುಣಕಾಂಕ್ಷಿಣಮ್ ।
ಉಪಸ್ಥಿತಂ ವೃದ್ಧಮಂಧಂ ಪಿತರಂ ಪಶ್ಯ ಭಾರತ ॥೨೮॥

ಭಾರತನೇ! ನಿನ್ನ ಗುಣವನ್ನೇ ಬಯಸಿ ನಿನ್ನನ್ನು ಆಶ್ರಯಿಸುತ್ತಿರುವ ವೃದ್ಧನೂ ಅಂಧನೂ ಆದ ತಂದೆಯಾದ ನನ್ನನ್ನೂ ತಾಯಿಯಾದ ಗಾಂಧಾರಿಯನ್ನೂ ಗಮನಿಸು.

ಮಿತ್ರಾಣಿ ದ್ರಷ್ಟುಕಾಮೇನ ಪುತ್ರಾಣಾಂ ಚ ಬಲಾಬಲಮ್ ।
ಅಶೋಚ್ಯಾಃ ಕುರವೋ ರಾಜನ್ ಯೇಷಾಂ ತ್ವಮನುಶಾಸಿತಾ ॥೨೯॥

ರಾಜನೇ! ಮಿತ್ರರನ್ನು ನೋಡುವ ಆಸೆಯಿಂದ ಪುತ್ರರ ಬಲಾಬಲಗಳನ್ನು ತಿಳಿಯುವ ಆಸೆಯಿಂದ ನಾನು ಈ ಕಾರ್ಯವನ್ನು ಮಾಡಿದೆನು. ಯಾರಿಗೆ ನೀನು ಶಾಸಕನಾಗಿದ್ದೀಯೊ ಅಂತಹ ಕುರುಗಳು ಎಂದೂ ಶೋಚ್ಯರಲ್ಲ.

ಮಂತ್ರೀ ಚ ವಿದುರೋ ಧೀಮಾನ್ ಸರ್ವಶಾಸ್ತ್ರವಿಶಾರದಃ ।
ತ್ವಯಿ ಧರ್ಮೋಽರ್ಜುನೇ ಧೈರ್ಯಂ ಭೀಮಸೇನೇ ಪರಾಕ್ರಮಃ॥೩೦॥

ಅಜಾತಶತ್ರೋ ಭದ್ರಂ ತೇ ಖಾಂಡವಪ್ರಸ್ಥಮಾವಿಶ ।
ಭ್ರಾತೃಭಿಸ್ತೇಽಸ್ತು ಸೌಭ್ರಾತ್ರಂ ಧರ್ಮೇ ತೇ ಧೀಯತಾಂ ಮನಃ ॥೩೧॥

ನಿನಗೆ ಸರ್ವಶಾಸ್ತ್ರವಿಶಾರದನಾದ ಮೇಧಾವಿಯಾದ ವಿದುರನು ಮಂತ್ರಿಯಾಗಿದ್ದಾನೆ. ನಿನ್ನಲ್ಲಿ ಧರ್ಮವೂ ಅರ್ಜುನನಲ್ಲಿ ವಿಜಯವೂ ಭೀಮಸೇನನಲ್ಲಿ ಪರಾಕ್ರಮವೂ ಇದೆ. ಅಜಾತಶತ್ರುವೇ ನಿನಗೆ ಮಂಗಳವಾಗಲಿ. ಇಂದ್ರಪ್ರಸ್ಥಕ್ಕೆ ಹಿಂದಿರುಗು. ನಿನ್ನ ತಮ್ಮಂದಿರ ಜೊತೆಯಲ್ಲಿ ನಿನಗೆ ಯಾವಾಗಲೂ ಸೌಭ್ರಾತೃತ್ವವು ಇರಲಿ. ನಿನ್ನ ಮನಸ್ಸು ಯಾವಾಗಲೂ ಧರ್ಮದಲ್ಲಿಯೇ ನೆಲೆಸಲಿ.

ವೈಶಂಪಾಯನಃ

ಇತ್ಯುಕ್ತೋ ಭರತಶ್ರೇಷ್ಠೋ ಧರ್ಮರಾಜೋ ಯುಧಿಷ್ಠಿರಃ ।
ಕೃತ್ವಾಽಽರ್ಯಸಮಯಂ ಸರ್ವಂ ಪ್ರತಸ್ಥೇ ಭ್ರಾತೃಭಿಃ ಸಹ ॥೩೨॥

ಧೃತರಾಷ್ಟ್ರನಿಂದ ಹೀಗೆ ಹೇಳಲ್ಪಟ್ಟ ಭರತಶ್ರೇಷ್ಠನಾದ ಧರ್ಮರಾಜನಾದ ಯುಧಿಷ್ಠಿರನು ಎಲ್ಲಾ ವಿಷಯಗಳಲ್ಲಿಯೂ ಉದಾತ್ತವಾದ ಪ್ರತಿಜ್ಞೆಯನ್ನುಮಾಡಿ ತಮ್ಮಂದಿರ ಜೊತೆಯಲ್ಲಿ ಹೊರಟನು.

ತೇ ರಥಾನ್ ಸೂರ್ಯಸಂಕಾಶಾ ಆಸ್ಥಾಯ ಸಹ ಕೃಷ್ಣಯಾ ।
ಪ್ರಯಯುರ್ಹೃಷ್ಟಮನಸ ಇಂದ್ರಪ್ರಸ್ಥಪುರಂ ಪ್ರತಿ ॥೩೩॥

ಪಾಂಡವರು ಸೂರ್ಯನಂತೆ ಹೊಳೆಯುವ ರಥಗಳನ್ನು ಏರಿ (ಸೂರ್ಯನಕಾಂತಿಯುಳ್ಳವರಾಗಿ) ದ್ರೌಪದಿಯ ಜೊತೆಯಲ್ಲಿ ಸಂತೋಷದಿಂದ ಕೂಡಿದ ಮನಸ್ಸುಳ್ಳವರಾಗಿ ಇಂದ್ರಪ್ರಸ್ಥಕ್ಕೆ ಹೊರಟರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ದ್ವಿನವತಿತಮೋಧ್ಯಾಯಃ ॥
॥ ದ್ಯೂತಪರ್ವಣಿ ಚತುರ್ವಿಂಶೋಧ್ಯಾಯಃ ॥

॥ ದ್ಯೂತಪರ್ವ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ತೊಂಬತ್ತೆರಡನೆಯ ಅಧ್ಯಾಯವು ಮುಗಿಯಿತು.

ಇಲ್ಲಿಗೆ ದ್ಯೂತಪರ್ವವು ಮುಗಿಯಿತು

★★★★

೮. ಅನುದ್ಯೂತಪರ್ವ

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ಸಮಸ್ತ ಪಾಂಡವಶ್ರಿಯಂ ಸಮಾಗತಾಮಹೋ ಪುನಃ ।
ವ್ಯಮೋಚಯೋ ವೃಕೋದರಾದ್ ವಧಶ್ಚ ನೋ ಧ್ರುವಂ ಭವೇತ್ ॥

ನಮ್ಮ ಕೈಗೇ ಬಂದಿದ್ದ ಪಾಂಡವರ ಎಲ್ಲ ಸಂಪತ್ತನ್ನೂ ಪುನಃ ಅವರಿಗೇ ಬಿಟ್ಟುಕೊಟ್ಟೆ! ಏನಾಶ್ಚರ್ಯ! ಇನ್ನು ಭೀಮನಿಂದ ನಮ್ಮ ವಧೆಯಾಗುವುದು ನಿಶ್ಚಿತ!

ಅತಃ ಪುನಶ್ಚ ಪಾಂಡವಾನ್ ಸಮಾಹ್ವಯಸ್ವ ನಃ ಕೃತೇ ।
ಪುನಶ್ಚ ದೇವನಂ ಭವೇಜ್ಜಿತೋ ವನಂ ಪ್ರಯಾಂತು ಚ ॥೩೯೩॥

ಅದರಿಂದ ನಮಗಾಗಿ ಪಾಂಡವರನ್ನು ಪುನಃ ಕರೆಸು. ಇನ್ನೊಮ್ಮೆ ಜೂಜು ನಡೆಯಲಿ. ಸೋತವರು ಕಾಡಿಗೆ ಹೋಗಲಿ.

ತೇನೋಕ್ತಃ ಸ ತದಾ ರಾಜಾ ಪಾಂಡವಾನ್ ಪುನರಾಹ್ವಯತ್ ।
ಪುನಃ ಪಿತ್ರಾ ಸಮಾಹೂತೋ ದೇವನಾಯ ಯುಧಿಷ್ಠಿರಃ ॥೩೯೪॥

ಭ್ರಾತೃಭಿರ್ವಾರ್ಯಮಾಣೋಽಪಿ ಕೃಷ್ಣಯಾ ಚಾಽಗಮತ್ ಸಭಾಂ ।

ದುಃಶಾಸನ ಹೀಗೆ ಹೇಳಿದಾಗ ಧೃತರಾಷ್ಟ್ರ ಪಾಂಡವರನ್ನು ಪುನಃ ಕರೆಸಿದ. ದೊಡ್ಡಪ್ಪ ಪುನಃ ಜೂಜಿಗೆ ಕರೆದಾಗ ಧರ್ಮರಾಜ ಸೋದರರು ಮತ್ತು ದ್ರೌಪದಿ ತಡೆಯುತ್ತಿದರೂ ಸಭೆಗೆ ನಡೆದ.

ದ್ವಾದಶಾಬ್ದಂ ವನೇ ವಾಸಮಜ್ಞಾತಂ ತ್ವೇಕವತ್ಸರಂ ॥೩೯೫॥

ವಾಸಂ ಪ್ರಸಿದ್ಧನೃಪತೇಃ ಪುರೇ ನೈವಾತಿದೂರತಃ ॥೩೯೬॥

ಕೃಷ್ಣಾಯಾಃ ಪಾಂಡವಾನಾಂ ವಾ ದರ್ಶನೇಜ್ಞಾತವಾಸಿನಾಂ ।
ಏಕಸ್ಯಾಪಿ ಸಮಸ್ತಾನಾಂ ದ್ವಾದಶಾಬ್ದಂ ಪುನರ್ವನಂ ॥೩೯೭॥

ವತ್ಸರಾಜ್ಞಾತವಾಸಂ ಚ ತ್ಯಾಗೇऽಪ್ಯುಕ್ತವಿಧೇಸ್ತಥಾ ।
ದುರ್ಯೋಧನಃ ಪಣಂ ಚಕ್ರೇ ಬದ್ಧ್ವಾ ದುಶ್ಶಾಸನೋಕ್ತಯಾ ॥೩೯೮॥

ಹನ್ನೆರಡು ವರ್ಷ ವನವಾಸ ಮಾಡಬೇಕು. ಹೆಚ್ಚು ದೂರವಿರದ ಒಬ್ಬ ಪ್ರಸಿದ್ಧ ರಾಜನ ಪಟ್ಟಣದಲ್ಲಿ ಒಂದು ವರ್ಷ ಅಜ್ಞಾತವಾಸ ಮಾಡಬೇಕು. ಅಜ್ಞಾತವಾಸ ಮಾಡುತ್ತಿರುವಾಗ ದ್ರೌಪದಿಯನ್ನಾಗಲಿ, ಪಾಂಡವರಲ್ಲಿ ಒಬ್ಬನನ್ನಾಗಲಿ ಇಲ್ಲವೆ ಎಲ್ಲರನ್ನೂ ನೋಡಿದರೆ ತಿರುಗಿ ಎಲ್ಲರೂ ಹನ್ನೆರಡು ವರ್ಷ ವನವಾಸವನ್ನೂ ಒಂದು ವರ್ಷ ಹಿಂದಿನಂತೆ ಅಜ್ಞಾತವಾಸವನ್ನೂ ಮಾಡಬೇಕು. ಈ ವನವಾಸ ಅಜ್ಞಾತವಾಸಗಳನ್ನು ನಡುವೆ ಬಿಟ್ಟರೆ ಪುನಃ ಪ್ರಾರಂಭದಿಂದಲೆ ಮಾಡಬೇಕು. ಹೀಗೆ ದುಃಶಾಸನನ ಸಲಹೆಯಂತೆ ದುರ್ಯೋಧನ ಪಣವನ್ನು ನಿರ್ಧರಿಸಿದ.

ಗಾಂಧಾರೇಣ ಪುನಶ್ಚಾಕ್ಷಹೃದಯಜ್ಞೇನ ಧರ್ಮಜಃ ।
ಪರಾಜಿತೋ ವನಂ ಯಾತುಮೈಚ್ಛತ್ ಸಭ್ರಾತೃಕೋ ಯದಾ ॥೩೯೯॥

ತದಾ ನನರ್ತ ಪಾಪಕೃತ್ ಸುಯೋಧನಾನುಜೋ ಹಸನ್ ।
ವದಂಶ್ಚ ಮಾರುತಾತ್ಮಜಂ ಪುನಃ ಪುನಶ್ಚ ಗೌರಿತಿ ॥೪೦೦॥

ಜೂಜಿನ ಮರ್ಮಜ್ಞನಾದ ಶಕುನಿಯಿಂದ ಯುಧಿಷ್ಠಿರ ಪುನಃ ಪರಾಜಿತನಾಗಿ ಸೋದರರೊಂದಿಗೆ ಕಾಡಿಗೆ ಹೋಗಲು ಬಯಸಿದಾಗ ಪಾಪಕಾರಿಯಾದ ದುಃಶಾಸನ ಅಟ್ಟಹಾಸ ಮಾಡುತ್ತ ಭೀಮನನ್ನು ಪುನಃ ಪುನಃ 'ಬಸವ ಬಸವ' ಎಂದೆನ್ನುತ್ತ ನರ್ತಿಸಿದ.

ಉವಾಚ ಚ ಪುನಃ ಕೃಷ್ಣಾಂ ನೃತ್ಯನ್ನೇವ ಸಭಾತಲೇ ।
ಅಪತಿರ್ಹ್ಯಸಿ ಕಲ್ಯಾಣಿ ಗಚ್ಛ ದುರ್ಯೋಧನಾಲಯಮ್ ॥೪೦೧॥

ಏತೇಽಖಿಲಾಃ ಷಂಢತಿಲಾಸ್ತಮೋಽಂಧಂ-
ಪ್ರಾಪ್ತಾ ನ ಚೈಷಾಂ ಪುನರುತ್ಥಿತಿಃ ಸ್ಯಾತ್ ।
ಇತಿ ಬ್ರುವಾಣೋಽನುಚಕಾರ ಭೀಮಂ
ತದಾಹಸನ್ ಧಾರ್ತರಾಷ್ಟ್ರಾಶ್ಚ ಸರ್ವೇ ॥೪೦೨॥

ಪುನಃ ಸಭಾಂಗಣದಲ್ಲಿ ಕುಣಿಯುತ್ತಲೇ ದುಃಶಾಸನ ದ್ರೌಪದಿಗೆ ಹೇಳಿದ, ಸುಂದರಿ, ನೀನು ಇನ್ನು ದುರ್ಯೋಧನನ ಮನೆಗೆ ಹೋಗು. ನಿನಗೆ ಇನ್ನು ಪತಿಗಳಿಲ್ಲ. ಇವರೆಲ್ಲರೂ ಎಣ್ಣೆ ಇಲ್ಲದ ಎಳ್ಳುಕಾಳುಗಳು. ನಪುಂಸಕರು. ಎಂದೂ ಮೇಲೇಳದಂಥ ದುಃಸ್ಥಿತಿಗೆ ಇಳಿದಿದ್ದಾರೆ. ಇನ್ನು ಮೇಲೇಳುವುದಿಲ್ಲ ಎಂದು ಹೇಳುತ್ತ ಭೀಮನ ನಡಿಗೆಯನ್ನು ತನ್ನ ನಡೆಯಿಂದ ಅಣುಕಿಸಿದ. ಆಗ ಕೌರವರೆಲ್ಲರೂ ನಕ್ಕರು.

ತದಾಕರೋದ್‌ಭೀಮಸೇನಃ ಪ್ರತಿಜ್ಞಾಂ
ಹಂತಾಸ್ಮಿ ವೋ ನಿಖಿಲಾನ್ ಸಂಗರೇಽಹಂ ।
ಇತೀರಿತೇ ಶರಣಂ ದ್ರೋಣಮೇವ
ಜಗ್ಮುಃ ಸಮಸ್ತಾ ಧೃತರಾಷ್ಟ್ರಪುತ್ರಾಃ ॥೪೦೩॥

ಆಗ ಭೀಮಸೇನ ಪ್ರತಿಜ್ಞೆ ಮಾಡಿದ, 'ನಾನು ಯುದ್ಧದಲ್ಲಿ ನಿಮ್ಮೆಲ್ಲರನ್ನೂ ಕೊಲ್ಲುತ್ತೇನೆ' ಎಂದು. ಭೀಮ ಹೀಗೆ ಹೇಳಿದಾಗ ಕೌರವರೆಲ್ಲರೂ ದ್ರೋಣನನ್ನು ಮೊರೆಹೊಕ್ಕರು.

ಯತ್ರ ದ್ರೋಣಸ್ತತ್ರ ಪುತ್ರಸ್ತತ್ರ ಭೀಷ್ಮಃ ಕೃಪಸ್ತಥಾ ।
ನ ಜಾತ್ಯೇತಿ ಗುರೂನ್ ಭೀಮ ಇತಿ ತಂ ಶರಣಂ ಯಯುಃ ॥೪೦೪॥

ಎಲ್ಲಿ ದ್ರೋಣನಿರುವನೋ ಅಲ್ಲಿ ಅಶ್ವತ್ಥಾಮ, ಅಲ್ಲಿ ಭೀಷ್ಮಕೃಪರು. ಭೀಮ ಈ ಎಲ್ಲ ಗುರುಹಿರಿಯರನ್ನು ಅತಿಕ್ರಮಿಸುವುದಿಲ್ಲ ಎಂದು ಆಲೋಚಿಸಿ ಕೌರವರು ದ್ರೋಣನನ್ನೆ ಮೊರೆಹೊಕ್ಕರು.

ಅಬ್ರವೀದ್ ಧಾರ್ತರಾಷ್ಟ್ರಾಂಶ್ಚ ದ್ರೋಣೋ ವಿಪ್ರೋಽಪಿ ಸನ್ನಹಂ ।
ಸಪುತ್ರಃ ಸಕೃಪಃ ಶಸ್ತ್ರಂ ಗ್ರಹೀಷ್ಯೇ ಭವತಾಂ ಕೃತೇ ॥೪೦೫॥

ದ್ರೋಣ ಕೌರವರಿಗೆ ಹೇಳಿದ, 'ನಾನು ಬ್ರಾಹ್ಮಣನಾದರೂ ಅಶ್ವತ್ಥಾಮಕೃಪರೊಂದಿಗೆ ನಿಮಗಾಗಿ ಶಸ್ತ್ರ ಹಿಡಿಯುವೆನು.

ರಕ್ಷಣೇ ಭವತಾಂ ಚೈವ ಕುರ್ಯಾಂ ಯತ್ನಂ ಸ್ವಶಕ್ತಿತಃ ।
ನ ತು ಭೀಮಾದ್ ರಕ್ಷಿತುಂ ವಃ ಶಕ್ತಃ ಸತ್ಯಂ ಬ್ರವೀಮ್ಯಹಂ ॥೪೦೬॥

ನನ್ನ ಶಕ್ತಿ ಇದ್ದಷ್ಟು ನಿಮ್ಮ ರಕ್ಷಣೆಗೆ ಯತ್ನ ಮಾಡುವೆನು. ಆದರೆ ಭೀಮನಿಂದ ನಿಮ್ಮನ್ನು ರಕ್ಷಿಸಲು ನಾನು ಶಕ್ತನಲ್ಲ. ನಿಜವನ್ನೇ ಹೇಳುತ್ತಿದ್ದೇನೆ.

ತತೋ ಯಯುಃ ಪಾಂಡವಾಸ್ತೇ ಸಭಾಯಾ
ವನಾಯ ಕೃಷ್ಣಾಸಹಿತಾಃ ಸುಶೂರಾಃ ।
ಗತ್ಯಾನುಚಕ್ರೇ ಯುವಸಿಂಹಖೇಲ-
ಗತಿಂ ಭೀಮಂ ಧಾರ್ತರಾಷ್ಟ್ರೋಽಪಹಸ್ಯ ॥೪೦೭॥

ಅಷ್ಟರಲ್ಲಿ ಮಹಾಶೂರರಾದ ಪಾಂಡವರು ದ್ರೌಪದಿಯೊಂದಿಗೆ ಸಭೆಯಿಂದ ಕಾಡಿಗೆ ಹೊರಟರು. ದುರ್ಯೋಧನ ಯೌವನಭರಿತ ಸಿಂಹನಂತೆ ಗಂಭೀರ ನಡೆಯುಳ್ಳ ಭೀಮನನ್ನು ಅಣಕಿಸುತ್ತ ಅವನ ನಡಿಗೆಯನ್ನು ತನ್ನ ನಡಿಗೆಯಿಂದ ಅನುಕರಣ ಮಾಡಿದ.

ದೃಷ್ಟ್ವಾ ಸಭಾಯಾ ಅರ್ಧನಿಷ್ಕ್ರಾಂತದೇಹೋ
ವ್ಯಾವೃತ್ಯ ಭೀಮಃ ಪ್ರಾಹ ಸಂರಕ್ತನೇತ್ರಃ ।
ಊರುಂ ತವಾನ್ಯಂ ಚ ರಣೇ ವಿಭೇತ್ಸ್ಯೇ
ಇತ್ಯುಕ್ತ್ವಾ ಸೌ ನಿರ್ಗತೋಽಸತ್ಸಭಾಯಾಃ ॥೪೦೮॥

ಆಗ ಸಭಾಂಗಣದಿಂದ ಅರ್ಧ ಹೊರಗೆ ಹೋಗಿದ್ದ ಭೀಮ ಹಿಂತಿರುಗಿ ಕೆಂಗಣ್ಣಿಂದ ನೋಡುತ್ತ 'ನಿನ್ನ ಇನ್ನೊಂದು ತೊಡೆಯನ್ನು ಯುದ್ಧದಲ್ಲಿ ಮುರಿಯುವೆನು' ಎಂದ. ಹೀಗೆ ಹೇಳಿ ಆ ದುಷ್ಟಸಭೆಯಿಂದ ಹೊರಗೆ ನಡೆದ.

ಪ್ರಯಾತಾನನು ತಾನ್ ಕುಂತೀ ಪ್ರಯಯೌ ಪುತ್ರಗೃದ್ಧಿನೀ ।
ರೋರುದ್ಯಮಾನಾಂ ವಿದುರಃ ಸ್ಥಾಪಯಾಮಾಸ ತಾಂ ಗೃಹೇ ॥೪೦೯॥

ಮಕ್ಕಳನ್ನು ಪ್ರೀತಿಸುವ ತಾಯಿ ಕುಂತಿ ಕಾಡಿಗೆ ಹೊರಟ ಪಾಂಡವರನ್ನು ತಾನೂ ಅಳುತ್ತ ಹಿಂಬಾಲಿಸಿದಳು. ವಿದುರ ಅವಳನ್ನು ತಡೆದು ತನ್ನ ಮನೆಯಲ್ಲಿ ನಿಲ್ಲಿಸಿದ.

ಪ್ರಣಮ್ಯ ತಾಂ ಯಯುಃ ಪಾರ್ಥಾಃ ಸಕೃಷ್ಣಾಃ ಶೀಘ್ರಗಾಮಿನಃ ।
ಯುಧಿಷ್ಠಿರೋಽವಾಗ್ವದನೋ ಯಯೌ ನ ಕ್ರೋಧಚಕ್ಷುಷಾ ।
ದಹೇಯಂ ಕೌರವಾನ್ ಸರ್ವಾನಿತಿ ಕಾರುಣಿಕೋ ನೃಪಃ ॥೪೧೦॥

ಪಾಂಡವರು ದ್ರೌಪದೀ ಸಹಿತರಾಗಿ ಕುಂತಿಯನ್ನು ನಮಿಸಿ ಶೀಘ್ರವಾಗಿ ಹೆಜ್ಜೆಯಿಡುತ್ತ ಹೊರಟರು. ಧರ್ಮರಾಜ ಮುಖ ತಗ್ಗಿಸಿಕೊಂಡು ನಡೆದ. ಕೋಪದ ಕಣ್ಣಿಂದ ಎಲ್ಲ ಕೌರವರನ್ನೂ ಸುಡಬಾರದೆಂದು ಕರುಣಾಳುವಾದ ಯುಧಿಷ್ಠಿರ ಹಾಗೆ ಮಾಡಿದ.

ಉದ್ಧೃತ್ಯ ಬಾಹೂ ಪ್ರಯಯೌ ಬಾಹುಶಾಲೀ ವೃಕೋದರಃ ।
ಆಭ್ಯಾಮೇವಾಖಿಲಾನ್ ಶತ್ರೂನ್ ಶಕ್ತೋ ಹಂತುಮಹಂ ತ್ವಿತಿ ॥೪೧೧॥

ಬಾಹುಶಾಲಿಯಾದ ವೃಕೋದರ ಎರಡು ತೋಳುಗಳನ್ನು ಮೇಲೆತ್ತಿ ತೋರುತ್ತ ನಡೆದ. ಈ ಎರಡು ತೋಳುಗಳಿಂದಲೆ ಎಲ್ಲ ಶತ್ರುಗಳನ್ನು ಕೊಲ್ಲಲು ನಾನು ಶಕ್ತ ಎಂದು.

ಅಬದ್ಧಕೇಶಾ ಪ್ರಯಯೌ ದ್ರೌಪದೀ ಸಾ ಸಭಾತಲಾತ್ ।
ಮುಕ್ತಕೇಶಾ ಭವಿಷ್ಯಂತಿ ಧಾರ್ತರಾಷ್ಟ್ರಸ್ತ್ರಿಯಸ್ತ್ವಿತಿ ॥೪೧೨॥

ದ್ರೌಪದಿ ಮುಕ್ತಕೇಶಳಾಗಿಯೆ ಸಭಾಂಗಣದಿಂದ ಹೊರಟಳು. 'ಕೌರವರ ಹೆಂಡಿರು ಸದಾ ಮುಕ್ತ ಕೇಶರಾಗುವರು' ಎಂದು.

ವರ್ಷನ್ ಪಾಂಸೂನ್ ಯಯೌ ಪಾರ್ಥ ಇತ್ಥಂ ಶತ್ರುಷು ಸಾಯಕಾನ್।
ವರ್ಷಯಾಮೀತ್ಯಭಿಪ್ರಾಯಃ ಪರಮಾಸ್ತ್ರವಿದಾಂ ವರಃ ॥೪೧೩॥

ಮಹಾ ಅಸ್ತ್ರಜ್ಞರಲ್ಲಿಯೇ ಉತ್ತಮನಾದ ಅರ್ಜುನ ದಾರಿಯುದ್ದಕ್ಕೂ ಧೂಳೆರಚುತ್ತ ನಡೆದ. ಹೀಗೇ ಶತ್ರುಗಳ ಮೇಲೆ ನಾನು ಬಾಣಗಳನ್ನು ಎರಚುತ್ತೇನೆ ಎಂಬುದು ಅವನ ಭಾವವಾಗಿತ್ತು.

ಯಮಾವವಾಙ್ಮುಖೌ ಯಾತೌ ನಾವಯೋಃ ಶತ್ರವೋ ಮುಖಂ ।
ಪಶ್ಯಂತ್ವಸ್ಯಾಮವಸ್ಥಾಯಾಮಿತ್ಯೇವ ಧೃತಚೇತಸೌ ॥೪೧೪॥

ನಕುಲ ಸಹದೇವರು ಮುಖ ತಗ್ಗಿಸಿಕೊಂಡು ನಡೆದರು. ಅವರು, ನಮ್ಮ ಶತ್ರುಗಳು ಇನ್ನು ಮುಂದೆ ಈ ಅವಸ್ಥೆಯಲ್ಲಿ ನಮ್ಮ ಮುಖವನ್ನು ನೋಡುವಂತಾಗಬಾರದೆಂದು ಮನಸ್ಸಿನಲ್ಲಿ ಮಾಡಿಕೊಂಡಿದ್ದರು.

ಪ್ರೇತಸಂಸ್ಕಾರಸೂಕ್ತಾನಿ ಪಠನ್ ಧೌಮ್ಯೋಽಗ್ರತೋ ಯಯೌ ।
ಹತೇಷು ಧಾರ್ತರಾಷ್ಟ್ರೇಷ್ಟು ಮಯಾ ಕಾರ್ಯಾಃ ಕ್ರಿಯಾ ಇತಿ ॥೪೧೫॥

ಶವಸಂಸ್ಕಾರ ಸೂಕ್ತಗಳನ್ನು ಪಠಿಸುತ್ತ ಧೌಮ್ಯರು ಮುಂದೆ ನಡೆದರು. ಕೌರವರು ಹತರಾದಾಗ ನಾನು ಈ ಕಾರ್ಯಮಾಡಬೇಕು ಎಂದ.

ತಾನಥಾನುಯಯುಃ ಸೂತಾ ರಥೈಃ ಪರಿಚತುರ್ದಶೈಃ ।
ಸೂದಾಃ ಪೌರೋಗವಾಶ್ಚೈವ ಭೃತ್ಯಾ ಯೇ ತ್ವಾಪ್ತಕಾರಿಣಃ ॥೪೧೬॥

ಪಾಂಡವರನ್ನು ಹದಿನಾಲ್ಕು ಉಪರಥಗಳಿಂದ ಕೂಡಿದ ಐದು ಮುಖ್ಯ ರಥಗಳಿಂದ ಸಾರಥಿಗಳೂ ಅಡಿಗೆಯವರೂ ಪಾಕಾಧ್ಯಕ್ಷರೂ ಬೇರೆ ಆಪ್ತರಾದ ಭೃತ್ಯರೂ ಹಿಂಬಾಲಿಸಿದರು.

ತತಸ್ತೇ ಜಾಹ್ನವೀತೀರೇ ವನೇ ವಟಮುಪಾಶ್ರಿತಾಃ ।
ನೃಷೀದನ್ನಾಗತಾನ್ ದೃಷ್ಟ್ವಾ ಸಮಸ್ತಾನ್ ಪುರವಾಸಿನಃ ॥೪೧೭॥

ಬಳಿಕ ಪಾಂಡವರು ಎಲ್ಲ ನಗರವಾಸಿಗಳೂ ತಮ್ಮನ್ನು ಹಿಂಬಾಲಿಸಿ ಬಂದುದನ್ನು ಕಂಡು ಗಂಗಾನದಿತೀರದ ಕಾಡಿನಲ್ಲಿ ಒಂದು ಆಲದ ಮರದ ಬುಡವನ್ನಾಶ್ರಯಿಸಿ ಕುಳಿತರು.

ತತಸ್ತು ತೇ ಸರ್ವಜಗನ್ನಿವಾಸಂ
ನಾರಾಯಣಂ ನಿತ್ಯಸಮಸ್ತ ಸದ್ಗುಣಂ ।
ಸ್ವಯಂಭುಶರ್ವಾದಿಭಿರರ್ಚಿತಂ ಸದಾ
ಭಕ್ತ್ಯಾ ಸ್ಮರನ್ ಭಕ್ತಭವಾಪಹಂ ಪ್ರಭುಂ ॥೪೧೮॥

ಸರ್ವ ಜಗನ್ನಿವಾಸನೂ ನಿತ್ಯ ಸಕಲ ಸದ್ಗುಣನೂ ಸದಾ ಬ್ರಹ್ಮ ರುದ್ರಾದಿಗಳಿಂದ ಪೂಜಿತನೂ ಭಕ್ತರ ಸಂಸಾರವನ್ನು ಕಳೆವವನೂ ಆದ ಪ್ರಭು ನಾರಾಯಣನನ್ನು ಪಾಂಡವರು ಭಕ್ತಿಯಿಂದ ನೆನೆದರು.

★ ★ ★ ★

ತೊಂಬತ್ಮೂರನೆಯ ಅಧ್ಯಾಯ

(ದುರ್ಯೋಧನನಿಂದ ಧೃತರಾಷ್ಟ್ರನ ಬುದ್ಧಿ ಭೇದನ ಮತ್ತು ಕಾರ್ತವೀರ್ಯನ ಕಥೆಯ ನಿರೂಪಣೆ.)

ಜನಮೇಜಯಃ

ಅನುಜ್ಞಾತಾಂಸ್ತಾನ್ ವಿದಿತ್ವಾ ಸರತ್ನಧನಸಂಚಯಾನ್ ।
ಪಾಂಡವಾನ್ ಧಾರ್ತರಾಷ್ಟ್ರಾಣಾಂ ಕಥಮಾಸೀನ್ಮನಸ್ತದಾ ॥೧॥

ಪಾಂಡವರು ತಮ್ಮ ಧನಸಂಚಯದೊಂದಿಗೆ ಹಿಂದಿರುಗಲು ಧೃತರಾಷ್ಟ್ರನ ಅನುಮತಿಯನ್ನು ಪಡೆದುದನ್ನು ಕೇಳಿದ ಧೃತರಾಷ್ಟ್ರನ ಮಕ್ಕಳ ಮನಸ್ಸು ಆಗ ಹೇಗಾಯಿತು?

ವೈಶಂಪಾಯನಃ

ಅನುಜ್ಞಾತಾಂಸ್ತಾನ್ ವಿದಿತ್ವಾ ಧೃತರಾಷ್ಟ್ರೇಣ ಧೀಮತಾ ।
ರಾಜನ್ ದುಶ್ಶಾಸನಃ ಕ್ಷಿಪ್ರಂ ಜಗಾಮ ಭ್ರಾತರಂ ಪ್ರತಿ ॥೨॥

ರಾಜನೇ! ಮೇಧಾವಿಯಾದ ಧೃತರಾಷ್ಟ್ರನಿಂದ ಪಾಂಡವರು ಅನುಮತಿಯನ್ನು ಪಡೆದುದನ್ನು ಕೇಳಿ ದುಶ್ಶಾಸನನು ಶೀಘ್ರವಾಗಿ ತನ್ನ ಅಣ್ಣನ ಬಳಿಗೆ ಹೋದನು.

ದುರ್ಯೋಧನಂ ಸಮಾಸೀನಂ ಸಾಮಾತ್ಯಂ ಭರತರ್ಷಭ ।
ದುಃಖಾರ್ತೋ ಭರತಶ್ರೇಷ್ಠ ಇದಂ ವಚನಮಬ್ರವೀತ್ ॥೩॥

ಎಲೈ ಭರತರ್ಷಭನೇ! ದುಃಖಾರ್ತನಾದ ಭರತಶ್ರೇಷ್ಠನಾದ ದುಶ್ಶಾಸನನು ಅಮಾತ್ಯರ ಜೊತೆಯಲ್ಲಿ ಕುಳಿತಿದ್ದ ದುರ್ಯೋಧನನನ್ನು ಕುರಿತು ಈ ಮಾತನ್ನು ಆಡಿದನು.

ದುಃಖೇನೈತಾನ್ ಸಮಾನೀತಾನ್ ಸ್ಥವಿರೋ ನಾಶಯತ್ಯಸೌ ।
ಶತ್ರುಸಾದ್ ಗಮಯನ್ ದ್ರವ್ಯಂ ತದ್ ಬುಧ್ಯಧ್ವಂ ಮಹಾಬಲಾಃ ॥೪॥

ಎಲೈ ಮಹಾಬಲರೇ! ಬಹಳ ಕಷ್ಟಪಟ್ಟು ನಾವು ಸಂಪಾದಿಸಿದ ಶತ್ರುಸಂಪತ್ತನ್ನು ಈ ಮುದುಕನು ಶತ್ರುಗಳಿಗೆ ಅಧೀನವನ್ನಾಗಿ ಮಾಡಿ ನಾಶಮಾಡುತ್ತಿದ್ದಾನೆ. ಅದನ್ನು ನೀವೆಲ್ಲರೂ ಗಮನಿಸಿ.

ವೈಶಂಪಾಯನಃ

ಅಥ ದುರ್ಯೋಧನಃ ಕರ್ಣಃ ಶಕುನಿಶ್ಚಾಪಿ ಸೌಬಲಃ ।
ಮಿಥಃ ಸಂಗಮ್ಯ ಸಹಿತಾಃ ಪಾಂಡವಾನ್ ಪ್ರತಿ ಮಂತ್ರಿತಾಃ ॥೫॥

ಆಗ ದುರ್ಯೋಧನ ಕರ್ಣ ಮತ್ತು ಸುಬಲಪುತ್ರನಾದ ಶಕುನಿ ಮೂವರೂ ಸೇರಿ ದುಶ್ಶಾಸನನ ಜೊತೆಯಲ್ಲಿ ಸೇರಿ ಪಾಂಡವರನ್ನು ಮಣಿಸಲು ಏನು ತಂತ್ರವನ್ನು ಮಾಡಬೇಕೆಂದು ಮಂತ್ರಾಲೋಚನೆಯನ್ನು ಮಾಡಿದರು.

ವೈಚಿತ್ರವೀರ್ಯಂ ರಾಜಾನಂ ಧೃತರಾಷ್ಟ್ರಂ ಮನೀಷಿಣಮ್ ।
ಅಭಿಗಮ್ಯ ತ್ವರಾಯುಕ್ತಾಃ ಶ್ಲಕ್ಷ್ಣಂ ವಚನಮಬ್ರುವನ್ ॥೬॥

ಅವರು ಕ್ಷಿಪ್ರವಾಗಿ ವಿಚಿತ್ರವೀರ್ಯನ ಸುತನಾದ ಮೇಧಾವಿಯಾದ ಧೃತರಾಷ್ಟ್ರನನ್ನು ಸಮೀಪಿಸಿ ನಯವಾಗಿ ಈ ಮಾತುಗಳನ್ನು ಆಡಿದರು.

ನ ತ್ವಯೇದಂ ಶ್ರುತಂ ರಾಜನ್ ಯಜ್ಜಗಾದ ಬೃಹಸ್ಪತಿಃ ।
ಶಕ್ರಸ್ಯ ನೀತಿಂ ಪ್ರವದನ್ ಧೀಮಾನ್ ದೇವಪುರೋಹಿತಃ ॥೭॥

ರಾಜನೇ! ಮೇಧಾವಿಯಾದ ದೇವಪುರೋಹಿತರಾದ ಬೃಹಸ್ಪತ್ಯಾಚಾರ್ಯರು ಇಂದ್ರನಿಗೆ ನೀತಿಯನ್ನು ಉಪದೇಶಮಾಡುತ್ತಾ ಹೇಳಿದ ವಿಷಯವನ್ನು ನೀನು ಕೇಳಿಲ್ಲವೆ?

ಸರ್ವೋಪಾಯೈರ್ನಿಹಂತವ್ಯಾಃ ಶತ್ರವಃ ಶತ್ರುಕರ್ಶನ ।
ಪುರಾ ಯುದ್ಧಾದ್ ಬಲಾದ್ವಾಪಿ ಪ್ರಕುರ್ವಂತಿ ಯಥಾಹಿತಮ್ ॥೮॥

ಸರ್ವ ಜಗನ್ನಿವಾಸನೂ ನಿತ್ಯ ಸಕಲ ಸದ್ಗುಣನೂ ಸದಾ ಬ್ರಹ್ಮ ರುದ್ರಾದಿಗಳಿಂದ ಪೂಜಿತನೂ ಭಕ್ತರ ಸಂಸಾರವನ್ನು ಕಳೆವವನೂ ಆದ ಪ್ರಭು ನಾರಾಯಣನನ್ನು ಪಾಂಡವರು ಭಕ್ತಿಯಿಂದ ನೆನೆದರು.

★ ★ ★ ★

ತೊಂಬತ್ಮೂರನೆಯ ಅಧ್ಯಾಯ

(ದುರ್ಯೋಧನನಿಂದ ಧೃತರಾಷ್ಟ್ರನ ಬುದ್ಧಿ ಭೇದನ ಮತ್ತು ಕಾರ್ತವೀರ್ಯನ ಕಥೆಯ ನಿರೂಪಣೆ.)

ಜನಮೇಜಯಃ

ಅನುಜ್ಞಾತಾಂಸ್ತಾನ್ ವಿದಿತ್ವಾ ಸರತ್ನಧನಸಂಚಯಾನ್ ।
ಪಾಂಡವಾನ್ ಧಾರ್ತರಾಷ್ಟ್ರಾಣಾಂ ಕಥಮಾಸೀನ್ಮನಸ್ತದಾ ॥೧॥

ಪಾಂಡವರು ತಮ್ಮ ಧನಸಂಚಯದೊಂದಿಗೆ ಹಿಂದಿರುಗಲು ಧೃತರಾಷ್ಟ್ರನ ಅನುಮತಿಯನ್ನು ಪಡೆದುದನ್ನು ಕೇಳಿದ ಧೃತರಾಷ್ಟ್ರನ ಮಕ್ಕಳ ಮನಸ್ಸು ಆಗ ಹೇಗಾಯಿತು?

ವೈಶಂಪಾಯನಃ

ಅನುಜ್ಞಾತಾಂಸ್ತಾನ್ ವಿದಿತ್ವಾ ಧೃತರಾಷ್ಟ್ರೇಣ ಧೀಮತಾ ।
ರಾಜನ್ ದುಶ್ಶಾಸನಃ ಕ್ಷಿಪ್ರಂ ಜಗಾಮ ಭ್ರಾತರಂ ಪ್ರತಿ ॥೨॥

ರಾಜನೇ! ಮೇಧಾವಿಯಾದ ಧೃತರಾಷ್ಟ್ರನಿಂದ ಪಾಂಡವರು ಅನುಮತಿಯನ್ನು ಪಡೆದುದನ್ನು ಕೇಳಿ ದುಶ್ಶಾಸನನು ಶೀಘ್ರವಾಗಿ ತನ್ನ ಅಣ್ಣನ ಬಳಿಗೆ ಹೋದನು.

ದುರ್ಯೋಧನಂ ಸಮಾಸೀನಂ ಸಾಮಾತ್ಯಂ ಭರತರ್ಷಭ ।
ದುಃಖಾರ್ತೋ ಭರತಶ್ರೇಷ್ಠ ಇದಂ ವಚನಮಬ್ರವೀತ್ ॥೩॥

ಎಲೈ ಭರತರ್ಷಭನೇ! ದುಃಖಾರ್ತನಾದ ಭರತಶ್ರೇಷ್ಠನಾದ ದುಶ್ಶಾಸನನು ಅಮಾತ್ಯರ ಜೊತೆಯಲ್ಲಿ ಕುಳಿತಿದ್ದ ದುರ್ಯೋಧನನನ್ನು ಕುರಿತು ಈ ಮಾತನ್ನು ಆಡಿದನು.

ದುಃಖೇನೈತಾನ್ ಸಮಾನೀತಾನ್ ಸ್ಥವಿರೋ ನಾಶಯತ್ಯಸೌ ।
ಶತ್ರುಸಾದ್ ಗಮಯನ್ ದ್ರವ್ಯಂ ತದ್ ಬುಧ್ಯಧ್ವಂ ಮಹಾಬಲಾಃ ॥೪॥

ಎಲೈ ಮಹಾಬಲರೇ! ಬಹಳ ಕಷ್ಟಪಟ್ಟು ನಾವು ಸಂಪಾದಿಸಿದ ಶತ್ರುಸಂಪತ್ತನ್ನು ಈ ಮುದುಕನು ಶತ್ರುಗಳಿಗೆ ಅಧೀನವನ್ನಾಗಿ ಮಾಡಿ ನಾಶಮಾಡುತ್ತಿದ್ದಾನೆ. ಅದನ್ನು ನೀವೆಲ್ಲರೂ ಗಮನಿಸಿ.

ವೈಶಂಪಾಯನಃ

ಅಥ ದುರ್ಯೋಧನಃ ಕರ್ಣಃ ಶಕುನಿಶ್ಚಾಪಿ ಸೌಬಲಃ ।
ಮಿಥಃ ಸಂಗಮ್ಯ ಸಹಿತಾಃ ಪಾಂಡವಾನ್ ಪ್ರತಿ ಮಂತ್ರಿತಾಃ ॥೫॥

ಆಗ ದುರ್ಯೋಧನ ಕರ್ಣ ಮತ್ತು ಸುಬಲಪುತ್ರನಾದ ಶಕುನಿ ಮೂವರೂ ಸೇರಿ ದುಶ್ಶಾಸನನ ಜೊತೆಯಲ್ಲಿ ಸೇರಿ ಪಾಂಡವರನ್ನು ಮಣಿಸಲು ಏನು ತಂತ್ರವನ್ನು ಮಾಡಬೇಕೆಂದು ಮಂತ್ರಾಲೋಚನೆಯನ್ನು ಮಾಡಿದರು.

ವೈಚಿತ್ರವೀರ್ಯಂ ರಾಜಾನಂ ಧೃತರಾಷ್ಟ್ರಂ ಮನೀಷಿಣಮ್ ।
ಅಭಿಗಮ್ಯ ತ್ವರಾಯುಕ್ತಾಃ ಶ್ಲಕ್ಷ್ಣಂ ವಚನಮಬ್ರುವನ್ ॥೬॥

ಅವರು ಕ್ಷಿಪ್ರವಾಗಿ ವಿಚಿತ್ರವೀರ್ಯನ ಸುತನಾದ ಮೇಧಾವಿಯಾದ ಧೃತರಾಷ್ಟ್ರನನ್ನು ಸಮೀಪಿಸಿ ನಯವಾಗಿ ಈ ಮಾತುಗಳನ್ನು ಆಡಿದರು.

ನ ತ್ವಯೇದಂ ಶ್ರುತಂ ರಾಜನ್ ಯಜ್ಜಗಾದ ಬೃಹಸ್ಪತಿಃ ।
ಶಕ್ರಸ್ಯ ನೀತಿಂ ಪ್ರವದನ್ ಧೀಮಾನ್ ದೇವಪುರೋಹಿತಃ ॥೭॥

ರಾಜನೇ! ಮೇಧಾವಿಯಾದ ದೇವಪುರೋಹಿತರಾದ ಬೃಹಸ್ಪತ್ಯಾಚಾರ್ಯರು ಇಂದ್ರನಿಗೆ ನೀತಿಯನ್ನು ಉಪದೇಶಮಾಡುತ್ತಾ ಹೇಳಿದ ವಿಷಯವನ್ನು ನೀನು ಕೇಳಿಲ್ಲವೆ?

ಸರ್ವೋಪಾಯೈರ್ನಿಹಂತವ್ಯಾಃ ಶತ್ರವಃ ಶತ್ರುಕರ್ಶನ ।
ಪುರಾ ಯುದ್ಧಾದ್ ಬಲಾದ್ವಾಽಪಿ ಪ್ರಕುರ್ವಂತಿ ಯಥಾಹಿತಮ್ ॥೮॥

ಎಲೈಶತ್ರುಕರ್ಶನನೇ! ಶತ್ರುಗಳನ್ನು ಯುದ್ದಕ್ಕಿಂತ ಮೊದಲೇ ಎಲ್ಲಾ ಉಪಾಯಗಳಿಂದಲೂ ಸಂಹರಿಸಬೇಕು. ಅವರು ತಮ್ಮ ಹಿತವನ್ನು ಸಾಧಿಸಿಕೊಳ್ಳದಂತೆ ನಮ್ಮ ಸಾಮರ್ಥ್ಯದಿಂದ ನೋಡಿಕೊಳ್ಳಬೇಕು.

ತೇ ವಯಂ ಪಾಂಡವಧನೈಃ ಸರ್ವಾನ್ ಸಂಪೂಜ್ಯ ಪಾರ್ಥಿವಾನ್ ।
ಯದಿ ತಾನ್ ಯೋಧಯಿಷ್ಯಾಮಃ ಕಿಂ ವಾ ನಃ ಪರಿಹಾಸ್ಯತಿ ॥೯॥

ಅಂತಹ ನಾವು ಪಾಂಡವರ ಸಂಪತ್ತಿನಿಂದ ಎಲ್ಲಾ ರಾಜರನ್ನೂ ಪೂಜಿಸಿ ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಿದ್ದರೆ ನಮ್ಮ ಗಂಟು ಏನು ಹೋಗುತ್ತಿತ್ತು ?

ಅಹೀನಾಶೀವಿಷಾನ್ ಕ್ರುದ್ಧಾನ್ ದಂಶಾಯ ಸಮುಪಸ್ಥಿತಾನ್ ।
ಕೃತ್ವಾ ಕಂಠೇ ಚ ಪೃಷ್ಠೇ ಚ ಕಃ ಸಮುತ್ಸ್ರಷ್ಟುಮರ್ಹತಿ ॥೧೦॥

ಮಹಾ ವಿಷದಿಂದ ಕೂಡಿದ ಕೋಪಗೊಂಡ ಕಚ್ಚಲು ಉದ್ಯುಕ್ತವಾಗಿರುವ ಸರ್ಪಗಳನ್ನು ಕಂಠದಲ್ಲಿಯೂ ಬೆನ್ನಿನ ಮೇಲೆಯೂ ಇಟ್ಟುಕೊಂಡು ಯಾವನು ಅವುಗಳನ್ನು ಹಾಗೆಯೇ ಬಿಡುತ್ತಾನೆ?

ಆತ್ತಶಸ್ತ್ರಾ ರಥಗತಾಃ ಕುಪಿತಾಸ್ತಾತ ಪಾಂಡವಾಃ ।
ನಿಶ್ಶೇಷಾನ್ ನಃ ಕರಿಷ್ಯಂತಿ ಕ್ರುದ್ಧಾ ಹ್ಯಾಶೀವಿಷಾ ಯಥಾ ॥೧೧॥

ಎಲೈ ತಂದೆಯೇ ಶಸ್ತ್ರವನ್ನು ಹಿಡಿದು ರಥದಲ್ಲಿ ಕುಳಿತ ಕ್ರುದ್ಧರಾದ ಪಾಂಡವರು ಆ ಸರ್ಪಗಳಂತೆ ನಮ್ಮನ್ನು ನಿಶ್ಶೇಷಗೋಳಿಸುವರು.

ಸನ್ನದ್ಧೋ ಹ್ಯರ್ಜುನೋ ಯಾತಿ ವಿಧೂಯ ಪರಮೇಷುಧೀ ।
ಗಾಂಡೀವಂ ಗೃಹ್ಯ ಸಂಕ್ರುದ್ಧಃ ಪಾರ್ಥಃ ಶಸ್ತ್ರಭೃತಾಂ ವರಃ ॥೧೨॥

ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಅರ್ಜುನನು ಯುದ್ಧ ಸನ್ನದ್ಧನಾಗಿ ತನ್ನ ಬತ್ತಳಿಕೆಗಳನ್ನೂ ಗಾಂಡೀವ ಧನುಸ್ಸನ್ನೂ ಅಲಂಕರಿಸಿ ಕ್ರೋಧದಿಂದ ಕೂಡಿದವನಾಗಿ ಹೋಗುತ್ತಿದ್ದಾನೆ.

ಗದಾಂ ಗುರ್ವೀಂ ಸಮುದ್ಯಮ್ಯ ತ್ವರಿತಂಚ ವೃಕೋದರಃ ।
ಸ್ವಂ ರಥಂ ಯೋಜಯಿತ್ವಾಶು ನಿರ್ಯಾತ ಇತಿ ನಃ ಶ್ರುತಮ್ ॥೧೩॥

ಭೀಮಸೇನನು ಶೀಘ್ರವಾಗಿ ತನ್ನ ಭಾರವಾದ ಗದೆಯನ್ನು ಎತ್ತಿಕೊಂಡು ತನ್ನ ರಥವನ್ನು ಹೂಡಿ ಹೊರಟನೆಂದು ಕೇಳಿದ್ದೇವೆ.

ನಕುಲಃ ಖಡ್ಗಮಾದಾಯ ಚರ್ಮ ಚಾಪ್ಯಷ್ಟಚಂದ್ರಕಮ್ ।
ಸಹದೇವಶ್ಚ ರಾಜಾ ಚ ಚಕ್ರುರಾಕಾರಮಿಂಗಿತೈಃ ॥೧೪॥

ನಕುಲನು ಅಷ್ಟಚಂದ್ರಗಳಿಂದ ಕೂಡಿರುವ ಗುರಾಣಿಯನ್ನು ಮತ್ತು ಖಡ್ಗವನ್ನು ಹಿಡಿದು ಹೊರಟನು. ರಾಜನಾದ ಯುಧಿಷ್ಠಿರನೂ ಸಹದೇವನೂ ಸಹ ತಮ್ಮ ಭಾವನೆಗಳನ್ನು ತಮ್ಮ ಚೇಷ್ಟೆಗಳಿಂದಲೇ ವ್ಯಕ್ತಪಡಿಸಿದರು.

ತೇ ಚಾಸ್ಥಾಯ ರಥಾನ್ ಸರ್ವೇ ಬಹುಶಸ್ತ್ರಪರಿಚ್ಛದಾನ್ ।
ಅಭಿಘ್ನಂತೋ ರಥಾನ್ ರಾಜನ್ ಸೇನಾಯೋಗಾಯ ನಿರ್ಯಯುಃ ॥೧೫॥

ಎಲೈ ರಾಜನೇ! ಅವರೆಲ್ಲರೂ ಬಹು ಶಸ್ತ್ರಗಳಿಂದ ಸುಸಜ್ಜಿತವಾದ ರಥಗಳನ್ನು ಏರಿ ರಥಗಳನ್ನು ವೇಗವಾಗಿ ಓಡಿಸುತ್ತಾ ಸೈನ್ಯವನ್ನು ಸಂಗ್ರಹಮಾಡುವುದಕ್ಕಾಗಿಯೇ ಹೊರಟಿದ್ದಾರೆ.

ನ ಕ್ಷಮಂತೇ ಯಥಾಽಸ್ಮಾಭಿರ್ಜ್ಞಾತು ವಿಪ್ರಕೃತಾ ಹಿ ತೇ ।
ದ್ರೌಪದ್ಯಾಸ್ತು ಪರಿಕ್ಲೇಶಂ ಕಸ್ತೇಷಾಂ ಕ್ಷಂತುಮರ್ಹತಿ ॥೧೬॥

ನಮ್ಮಿಂದ ಅವಮಾನಕ್ಕೆ ಒಳಗಾದ ಅವರು ನಮ್ಮನ್ನು ಎಂದೂ ಕ್ಷಮಿಸುವುದಿಲ್ಲ. ದ್ರೌಪದಿಗೆ ಉಂಟಾದ ಕ್ಲೇಶವನ್ನು ಅವರಲ್ಲಿ ಯಾರೂ ಕ್ಷಮಿಸುವರು.

ಪುನರ್ದೀವ್ಯಾಮ ಭದ್ರಂ ತೇ ವನವಾಸಾಯ ಪಾಂಡವೈಃ ।
ನ ಪಶ್ಯಾಮಿ ರಣೇ ಕ್ರುದ್ಧಂ ಬೀಭತ್ಸುಂ ಪ್ರತಿ ವಾರಣಮ್ ॥೧೭॥

ನಿನಗೆ ಮಂಗಳವಾಗಲಿ. ನಾವು ವನವಾಸವನ್ನು ಪಣವಾಗಿಟ್ಟು ಪಾಂಡವರ ಜೊತೆಯಲ್ಲಿ ಪುನಃ ದ್ಯೂತವನ್ನು ಆಡೋಣ. ಈ ಯುದ್ಧದಲ್ಲಿ ಕ್ರುದ್ಧನಾದ ಅರ್ಜುನನ್ನು ತಡೆಯುವ ಯಾವ ಪುರುಷನನ್ನೂ ನಾನು ಕಾಣುತ್ತಿಲ್ಲ.

ಭೀಷ್ಮೋ ದ್ರೋಣಶ್ಚ ಕರ್ಣಶ್ಚ ದ್ರೌಣಿಶ್ಚ ರಥಿನಾಂ ವರಃ ।
ಕೃಪಶ್ಚ ವೃಷಸೇನಶ್ಚ ವಿಕರ್ಣಶ್ಚ ಜಯದ್ರಥಃ ॥೧೮॥

ಬಾಹ್ಲೀಕಃ ಸೋಮದತ್ತಶ್ಚ ಭೂರಿರ್ಭೂರಿಶ್ರವಾಃ ಶಲಃ ।
ಶಕುನಿಃ ಸಸುತಶ್ಚೈವ ನೃಪಾಶ್ಚಾನ್ಯೇ ಚ ಕೌರವಾಃ ।
ಏತೇ ಸರ್ವೇ ರಣೇ ಯತ್ತಾಃ ಪಾರ್ಥಂ ಸೋಢುಂ ನ ಶಕ್ನುವನ್ ॥೧೯॥

ಭೀಷ್ಮ ದ್ರೋಣ ಕರ್ಣ ರಥಿಶ್ರೇಷ್ಠರಾದ ಅಶ್ವತ್ಥಾಮ ಕೃಪ ವೃಷಸೇನ ವಿಕರ್ಣ ಜಯದ್ರಥ ಬಾಹ್ಲೀಕ ಸೋಮದತ್ತ ಭೂರಿ ಭೂರಿಶ್ರವ ಶಲ ಮಕ್ಕಳಿಂದ ಒಡಗೂಡಿದ ಶಕುನಿ ಮತ್ತು ಉಳಿದ ಕೌರವ ರಾಜರುಗಳು ಇವರೆಲ್ಲರೂ ಸೇರಿ ಪ್ರಯತ್ನಪಟ್ಟರೂ ಯುದ್ಧದಲ್ಲಿ ಅರ್ಜುನನ್ನು ಎದುರಿಸಲು ಸಾಧ್ಯವಿಲ್ಲ.

ಅರ್ಜುನೇನ ಸಮೋ ವೀರ್ಯೇ ನಾಸ್ತಿ ಲೋಕೇ ಧನುರ್ಧರಃ ।
ಯೋಽರ್ಜುನೇನಾರ್ಜುನಸ್ತುಲ್ಯೋ ದ್ವಿಬಾಹುರ್ಬಹುಬಾಹುನಾ ॥೨೦॥

ಅರ್ಜುನನಿಗೆ ಸಮನಾದ ಧನುರ್ಧಾರಿಯು ಲೋಕದಲ್ಲಿ ಯಾರೂ ಇಲ್ಲ. ಎರಡು ಬಾಹುಗಳುಳ್ಳ ಸಹಸ್ರ ಬಾಹುಗಳುಳ್ಳ ಆ ಅರ್ಜುನನಿಗೆ (ಕಾರ್ತವೀರ್ಯಾರ್ಜುನನಿಗೆ) ಸಮನಾಗಿದ್ದಾನೆ.

ಧೃತರಾಷ್ಟ್ರಃ

ಕಸ್ತ್ವಯೋಕ್ತಃ ಪುಮಾನ್ ವೀರೋ ಬೀಭತ್ಸುಸಮವಿಕ್ರಮಃ ।
ತಂ ಮೇ ಬ್ರೂಹಿ ಮಹಾವೀರ್ಯಂ ಶ್ರೋತುಮಿಚ್ಛಾಮಿ ಪುತ್ರಕ ॥೨೧॥

ಪುತ್ರನೇ! ಅರ್ಜುನನಿಗೆ ಸಮಾನವಾದ ಪರಾಕ್ರಮವುಳ್ಳ ನೀನು ಹೇಳಿದ ಮಹಾಪರಾಕ್ರಮಿಯಾದ ಆ ಇನ್ನೊಬ್ಬ ವೀರನು ಯಾರು? ಅವನ ವಿಷಯವನ್ನು ನನಗೆ ತಿಳಿಸು. ನಾನು ಕೇಳಲು ಇಚ್ಛಿಪಡುತ್ತೇನೆ.

ದುರ್ಯೋಧನಃ

ಕಾರ್ತವೀರ್ಯಾರ್ಜುನೋ ನಾಮ ರಾಜಾ ಬಾಹುಸಹಸ್ರವಾನ್ ।
ಹೈಹಯಾಧಿಪತಿರ್ವೀರಃ ಪಾಂಚದಶ್ಯಃ ಪಿತಾಮಹಾತ್ ॥೨೨॥

ಕಾರ್ತವೀರ್ಯಾರ್ಜುನನೆಂಬ ರಾಜನು ಸಹಸ್ರಬಾಹುವುಳ್ಳವನು. ಅವನು ಹೈಹಯದೇಶದ ಅಧಿಪತಿಯಾದ ವೀರ. ಜಗತ್‌ಪಿತಾಮಹನಾದ ಬ್ರಹ್ಮ ಅವನು ಹದಿನೈದಯನೆಯವನು.

ಧೃತರಾಷ್ಟ್ರಃ

ಗಾಂಧಾರೀಪುತ್ರ ಸರ್ವಾಂಸ್ತಾನ್ ಕಾರ್ತವೀರ್ಯಪಿತಾಮಹಾನ್ ।
ಆನುಪೂರ್ವ್ಯಾಚ್ಚ ಮೇ ಶಂಸ ತತಸ್ತಂ ಪಾರ್ಥಿವಂ ತಥಾ ॥೨೩॥

ಗಾಂಧಾರೀ ಕುಮಾರನೇ ಕಾರ್ತವೀರ್ಯನ ಪಿತಾಮಹರನ್ನೆಲ್ಲಾ ಕ್ರಮವಾಗಿ ಹೇಳಿ ಅನಂತರ ಕಾರ್ತವೀರ್ಯನ ಚರಿತ್ರೆಯನ್ನು ಹೇಳು.

ದುರ್ಯೋಧನಃ

ಕಾರ್ತವೀರ್ಯಸ್ಯ ಚರಿತಂ ಶೃಣು ರಾಜನ್ ಮಹಾತ್ಮನಃ ॥೨೪॥

ರಾಜನೇ! ಮಹಾತ್ಮನಾದ ಕಾರ್ತವೀರ್ಯನ ಚರಿತ್ರೆಯನ್ನು ಕೇಳು.

ಅವ್ಯಕ್ತಪ್ರಭವೋ ಬ್ರಹ್ಮಾ ಸರ್ವಲೋಕಪಿತಾಮಹಃ ।
ಬ್ರಹ್ಮಣೋಽತ್ರಿಃ ಸುತೋ ವಿದ್ವಾನತ್ರೇಃ ಪುತ್ರೋ ನಿಶಾಕರಃ ॥೨೫॥

ಸರ್ವಲೋಕಪಿತಾಮಹನಾದ ಬ್ರಹ್ಮನು ಅವ್ಯಕ್ತನಾದ ಪರಮಾತ್ಮನಿಂದ ಹುಟ್ಟಿದವನು. ಅತ್ರಿಋಷಿಗಳು ಬ್ರಹ್ಮನ ಮಕ್ಕಳು. ಚಂದ್ರನು ಅತ್ರಿಯ ಮಗ.

ಸೋಮಸ್ಯ ತು ಬುಧಃ ಪುತ್ರೋ ಬುಧಸ್ಯ ತು ಪುರೂರವಾಃ ।
ತಸ್ಯಾಪ್ಯಥ ಸುತೋಪ್ಯಾಯುರಾಯೋಸ್ತು ನಹುಷಃ ಸುತಃ ॥೨೬॥

ಚಂದ್ರನ ಮಗ ಬುಧ. ಬುಧನ ಮಗ ಪುರೂರವ. ಪುರೂರವನ ಮಗ ಆಯು ಮತ್ತು ಆಯುವಿನ ಮಗ ನಹುಷ.

ನಹುಷಸ್ಯ ಯಯಾತಿಸ್ತು ಯಯಾತೇಸ್ತನುಜೋ ಯದುಃ ।
ಯದೋಃ ಪುತ್ರೋ ಮಹಾರಾಜ ಸಹಸ್ರಾಜೇತಿ ವಿಶ್ರುತಃ ॥೨೭॥

ಯಯಾತಿಯು ನಹುಷನ ಪುತ್ರ. ಯದುವು ಯಯಾತಿಯ ಪುತ್ರ. ಮಹಾರಾಜನೇ! ಯದುವಿಗೆ ಸಹಸ್ರಾಜನೆಂಬ ಪ್ರಖ್ಯಾತನಾದ ಪುತ್ರನಾದನು.

ಸಹಸ್ರಾಜಸುತೋ ರಾಜನ್ ಚಕ್ರದಾಸೇತಿ ವಿಶ್ರುತಃ ।
ಚಕ್ರದಾಸಸ್ಯ ದಾಯಾದೋ ಹೇಹಯೋ ನಾಮ ಪಾರ್ಥಿವಃ ॥೨೮॥

ರಾಜನೇ! ಸಹಸ್ರೌಜನಿಗೆ ಚಕ್ರದಾಸನೆಂಬ ಪ್ರಖ್ಯಾತನಾದ ಸುತನಿದ್ದನು. ಚಕ್ರದಾಸನ ಮಗನೆಂದರೆ ಹೇಹಯ ಎಂಬರಾಜ.

ಹೇಹಯಸ್ಯಾಭವತ್ ಪುತ್ರೋ ಧರ್ಮನೇತ್ರ ಇತಿ ಶ್ರುತಃ ।
ಧರ್ಮನೇತ್ರಸ್ಯ ಕಾರ್ತಸ್ತು ಕೃತವೀರ್ಯಸ್ತು ಕಾರ್ತಜಃ ॥೨೯॥

ಹೇಹಯನಿಗೆ ಧರ್ಮನೇತ್ರನೆಂಬ ಮಗನಾದನು. ಧರ್ಮನೇತ್ರನಿಗೆ ಕಾರ್ತನೆಂಬ ಮಗ. ಕೃತವೀರ್ಯನು ಕಾರ್ತನ ಮಗ.

ಕೃತವೀರ್ಯಸ್ಯ ತನಯೋ ಹ್ಯರ್ಜುನೋ ಬಲಿನಾಂ ವರಃ ।
ಸ ಚಾರ್ಜುನೋ ಮಹಾರಾಜ ತಪೋ ಘೋರಂ ಚಕಾರ ಹ ॥೩೦॥

ಕೃತವೀರ್ಯನ ಮಗ ಬಲಿಷ್ಠನಾದ ಅರ್ಜುನ. ಎಲೈ ಮಹಾರಾಜನೇ! ಆ ಅರ್ಜುನನು ಘೋರವಾದ ತಪಸ್ಸನ್ನು ಆಚರಿಸಿದನು.

ಸಾಗ್ರಂ ವರ್ಷಾಯುತಂ ತಪ್ತ್ವಾ ತಪಃ ಪರಮದುಶ್ಚರಮ್ ।
ದತ್ತಮಾರಾಧಯಾಮಾಸ ಸೋಽರ್ಜುನೋತ್ರಿಸುತಂ ಮುನಿಮ್ ॥೩೧॥

ಅವನು ಹತ್ತುಸಾವಿರವರ್ಷಗಳಿಗಿಂತಲೂ ಹೆಚ್ಚುಕಾಲ ಅತ್ಯಂತ ದುಶ್ಚರವಾದ ತಪಸ್ಸನ್ನು ಆಚರಿಸಿ ಅತ್ರಿಸುತನಾದ ದತ್ತಾತ್ರೇಯ ಮುನಿಯನ್ನು ಆರಾಧಿಸಿದನು.

ತಸ್ಯ ದತ್ತೋ ವರಾನ್ ಪ್ರಾದಾಚ್ಚತುರಃ ಪಾರ್ಥಿವಸ್ಯ ವೈ ।
ಪೂರ್ವಂ ಬಾಹುಸಹಸ್ರಂ ತು ಪ್ರಾರ್ಥಿತಃ ಪರಮೋ ವರಃ ॥೩೨॥

ದತ್ತನು ಆ ರಾಜನಿಗೆ ನಾಲ್ಕುವರಗಳನ್ನು ನೀಡಿದನು. ಸಹಸ್ರ ಬಾಹುಗಳು ಅರ್ಜುನನು ಕೇಳಿದ ಮೊದಲ ವರ.

ಅಧರ್ಮೇ ಪ್ರೀಯಮಾಣಸ್ಯ ಸದ್ಭಿಸ್ತತ್ರ ನಿವಾರಣಮ್ ।
ಧರ್ಮೇಣ ಪೃಥಿವೀಂ ಜಿತ್ವಾ ಧರ್ಮೇಣೈವಾನುರಂಜನಮ್ ॥೩೩॥

ಅಧರ್ಮದಲ್ಲಿ ಆಸಕ್ತಿಯನ್ನು ಹೊಂದಿದರೆ ಸಜ್ಜನರಿಂದ ಅದರ ನಿವಾರಣೆ (ಇದು ಎರಡನೆಯ ವರ) ಭೂಮಿಯನ್ನು ಧರ್ಮದಿಂದಲೇ ಗೆದ್ದು ಧರ್ಮದಿಂದಲೇ ಪ್ರಜೆಗಳನ್ನು ಸಂತೋಷಪಡಿಸುವುದು (ಇದು ಮೂರನೆಯ ವರ)

ಸಂಗ್ರಾಮಾನ್ ಸುಬಹೂನ್ ಜಿತ್ವಾ ಹತ್ವಾ ಚಾರೀನ್ ಸಹಸ್ರಶಃ ।
ಸಂಗ್ರಾಮೇ ಯತಮಾನಸ್ಯ ವಧಶ್ಚೈವಾಧಿಕಾದ್ ರಣೇ ॥೩೪॥

ಅನೇಕ ಯುದ್ಧಗಳನ್ನು ಮಾಡಿ ಗೆದ್ದು ಸಹಸ್ರ ಸಂಖ್ಯೆಯಲ್ಲಿ ಶತ್ರುಗಳನ್ನು ಕೊಂದು ಯುದ್ಧದಲ್ಲಿ ಪ್ರಯತ್ನ ಶೀಲವಾಗಿರುವ ಸಮಯದಲ್ಲಿಯೇ ತನಗಿಂತ ಉತ್ತಮನಾದವನಿಂದ ಯುದ್ಧದಲ್ಲಿ ಮರಣ. (ಇದು ನಾಲ್ಕನೆಯ ವರ)

ತಸ್ಯ ಬಾಹುಸಹಸ್ರಂ ತು ಯುಧ್ಯತಃ ಕಿಲ ಭಾರತ ।
ರಥೋ ಧ್ವಜಶ್ಚ ಸಂಜಾತಾ ಇತ್ಯೇವಂ ಮೇ ಶ್ರುತಂ ಪುರಾ ॥೩೫॥

ಎಲೈ ಭಾರತನೇ! ಅವನು ಯುದ್ಧಮಾಡುತ್ತಿರುವಾಗ ಅವನಿಗೆ ಸಹಸ್ರ ಬಾಹುಗಳು ದಿವ್ಯವಾದ ರಥ ಮತ್ತು ಧ್ವಜಗಳು ಉಂಟಾದವು ಎಂದು ನಾನು ಕೇಳಿದ್ದೇನೆ.

ತಥೇಯಂ ಪೃಥಿವೀ ರಾಜನ್ ಸಪ್ತದ್ವೀಪಾ ಸಪತ್ತನಾ ।
ಸಸಮುದ್ರಾಕರಾ ತಾತ ಬಲಿನೋಗ್ರೇಣ ವೈ ಜಿತಾ ॥೩೬॥

ಎಲೈ ರಾಜನೇ! ಅವನು ತನ್ನ ಉಗ್ರವಾದ ವರದಿಂದ ಸಪ್ತದ್ವಿಪಗಳನ್ನು ಪಟ್ಟಣಗಳನ್ನು ಸಮುದ್ರಗಳನ್ನು ಮತ್ತು ಹೊಂದಿದ ಈ ಭೂಮಿಯನ್ನು ಜಯಿಸಿದನು.

ಸ ಚಾರ್ಜುನೋಥ ತೇಜಸ್ವೀ ಸಪ್ತದ್ವೀಪೇಶ್ವರೋಽಭವತ್ ।
ಸ ಚ ರಾಜಾ ಮಹಾಯಜ್ಞಾನಾಜಹಾರ ಮಹಾಬಲಃ ।
ಮಹೀಂ ಚ ಸಕಲಾಂ ಜಿತ್ವಾ ಅಸಕೃತ್ ಸ ಸಮಾ ಬಹೂಃ ॥೩೭॥

ಮಹಾತೇಜಸ್ವಿಯಾದ ಆ ಅರ್ಜುನನು ಆಗ ಸಪ್ತದ್ವೀಪಾಧಿಪತಿಯಾದನು. ಮಹಾಬಲನಾದ ಅವನು ಅನಂತರ ಮಹಾಯಜ್ಞಗಳನ್ನು ಆಚರಿಸಿದನು. ಅನೇಕ ಬಾರಿ ಸಮಗ್ರವಾದ ಭೂಮಿಯನ್ನು ಜಯಿಸಿ ಅನೇಕ ವರ್ಷಗಳ ಕಾಲ ಆಳಿದನು.

ತತೋಽರ್ಜುನಃ ಕದಾಚಿದ್ವೈ ರಾಜನ್ ಮಾಹಿಷ್ಮತೀಪತಿಃ ।
ನರ್ಮದಾಂ ಭರತಶ್ರೇಷ್ಠ ಸ್ನಾತುಂ ದಾರೈರ್ಯಯೌ ಸಹ ॥೩೮॥

ಭರತ ಶ್ರೇಷ್ಠನಾದ ಎಲೈ ರಾಜನೇ! ಅನಂತರ ಒಮ್ಮೆ ಮಾಹಿಷ್ಮತೀಪತಿಯಾದ ಅರ್ಜುನನು ತನ್ನ ಪತ್ನಿಯ ಜೊತೆಯಲ್ಲಿ ನರ್ಮದಾ ನದಿಗೆ ಸ್ನಾನವನ್ನು ಮಾಡಲು ಹೋದನು.

ತತಸ್ತು ಸ ನದೀಂ ಗತ್ವಾ ಪ್ರವಿಶ್ಯಾಂತರ್ಜಲಂ ಮುದಾ ।
ಕರ್ತುಂ ರಾಜನ್ ಜಲಕ್ರೀಡಾಂ ತತೋ ರಾಜೋಪಚಕ್ರಮೇ ॥೩೯॥

ಎಲೈ ರಾಜನೇ! ಅನಂತರ ಅವನು ನದಿಯನ್ನು ಸಮೀಪಿಸಿ ಸಂತೋಷದಿಂದ ಜಲವನ್ನು ಪ್ರವೇಶಿಸಿ ಜಲಕ್ರೀಡೆಯನ್ನು ಮಾಡಲು ಉಪಕ್ರಮಿಸಿದನು.

ತಸ್ಮಿನ್ನೇವ ತು ಕಾಲೇ ತು ರಾವಣೋ ರಾಕ್ಷಸೈಃ ಸಹ ।
ಲಂಕಾಯಾ ಈಶ್ವರಸ್ತಾತ ತಂ ದೇಶಂ ಪ್ರಯಯೌ ಬಲೀ ॥೪೦॥

ಎಲೈ ತಂದೆಯೇ ಅದೇ ಕಾಲಕ್ಕೆ ಸರಿಯಾಗಿ ಲಂಕಾಧಿಪತಿಯಾದ ಬಲಿಷ್ಠನಾದ ರಾವಣನೂ ಸಹ ರಾಕ್ಷಸರ ಜೊತೆಯಲ್ಲಿ ಆ ದೇಶಕ್ಕೆ ಬಂದನು.

ತತಸ್ತಮರ್ಜುನಂ ದೃಷ್ಟ್ವಾ ನರ್ಮದಾಯಾಂ ದಶಾನನಃ ।
ನಿತ್ಯಂ ಕ್ರೋಧಪರೋ ಧೀರೋ ವರದಾನೇನ ಮೋಹಿತಃ ।
ಅಭ್ಯಧಾವತ್ ಸುಸಂಕ್ರುದ್ಧೋ ಮಹೇಂದ್ರಂ ಶಂಬರೋ ಯಥಾ ॥೪೧॥

ನಿತ್ಯವೂ ಕ್ರೋಧಪರನಾದವನೂ ವರದಾನದಿಂದ ದರ್ಪಿತನೂ ಧೀರನಾದ ದಶಾನನನೂ ಆದ ರಾವಣನು ನರ್ಮದೆಯಲ್ಲಿ ಬಹಳ ಕೋಪವುಳ್ಳವನಾಗಿ ಶಂಬರನು ಮಹೇಂದ್ರನ ಜೊತೆಯಲ್ಲಿ ಯುದ್ಧಕ್ಕೆ ಹೋದಂತೆ ಅವನನ್ನು ಸಮೀಪಿಸಿದನು.

ಅರ್ಜುನೋಽಪ್ಯಥ ತಂ ದೃಷ್ಟ್ವಾ ರಾವಣಂ ಪ್ರತ್ಯವಾರಯತ್ ।
ತತಸ್ತೌ ಚಕ್ರತುಯುರ್ದ್ಧಂ ರಾವಣಶ್ಚಾರ್ಜುನಶ್ಚ ವೈ ॥೪೨॥

ಅರ್ಜುನನೂ ಸಹ ರಾವಣನನ್ನು ನೋಡಿ ಅವನನ್ನು ತಡೆದನು. ಆಗ ಅರ್ಜುನ ಮತ್ತು ರಾವಣರು ಯುದ್ಧವನ್ನು ಮಾಡಿದರು ಎಂದು ಪ್ರಸಿದ್ಧವಾಗಿದೆ.

ತತಸ್ತು ದುರ್ಜಯಂ ವೀರಂ ವರದಾನೇನ ದರ್ಪಿತಮ್ ।
ರಾಕ್ಷಸೇಂದ್ರಂ ಮನುಷ್ಯೇಂದ್ರೋ ಯುಧ್ವಾ ಜಿತ್ವಾ ರಣೇ ಬತ ।
ಬದ್ವಾ ಧನುರ್ಜ್ಯಯಾ ರಾಜನ್ ವಿವೇಶಾಥ ಪುರೀಂ ಸ್ವಕಾಮ್ ॥೪೩॥

ಅನಂತರ ವರದಾನದಿಂದ ಗರ್ವಿಷ್ಠನಾದ ದುರ್ಜಯನಾದ ರಾಕ್ಷಸಾಧಿಪತಿಯಾದ ವೀರನಾದ ರಾವಣನನ್ನು ಮನುಷ್ಯೇಂದ್ರನಾದ ಅರ್ಜುನನು ಯುದ್ಧದಲ್ಲಿ ತನ್ನ

ಬಲದಿಂದ ಜಯಿಸಿ ಅವನನ್ನು ತನ್ನ ಧನುಸ್ಸಿನ ಹಗ್ಗದಿಂದ ಕಟ್ಟಿಕೊಂಡು ತನ್ನ ಪಟ್ಟಣವನ್ನು ಪ್ರವೇಶಿಸಿದನು.

ಸ ತು ತಂ ಬಂಧಿತಂ ಶ್ರುತ್ವಾ ಪುಲಸ್ತ್ಯೋ ರಾವಣಂ ತದಾ ।
ಮೋಕ್ಷಯಾಮಾಸ ದೃಷ್ಟ್ವಾಥ ಪುರೇದೃಷ್ಟ್ವಾ ರ್ಜುನಂ ತದಾ ॥೪೪॥

ಪುಲಸ್ತ್ಯರು ರಾವಣನು ಬಂಧಿತನಾಗಿದ್ದಾನೆ ಎಂದು ಕೇಳಿ ಲಂಕೆಯಲ್ಲಿ ಅವನನ್ನು ಕಾಣದೆ ಅರ್ಜುನನನ್ನು ನೋಡಿ ಅವನಿಂದ ರಾವಣನನ್ನು ಬಿಡಿಸಿದರು.

ತತಃ ಕದಾಚಿತ್ ತೇಜಸ್ವೀ ಕಾರ್ತವೀರ್ಯಾರ್ಜುನೋ ಬಲೀ ।
ಸಮುದ್ರತೀರಂ ಗತ್ವಾಽಥ ವಿಚರನ್ ದರ್ಪಮೋಹಿತಃ ॥೪೫॥

ಅವಾಕಿರತ್ ಶಿತಶರೈಃ ಸಮುದ್ರಂ ಸ ತು ಭಾರತ ।
ತಂ ಸಮುದ್ರೋ ನಮಸೃತ್ಯ ಕೃತಾಂಜಲಿರಭಾಷತ ॥೪೬॥

ಅನಂತರ ತೇಜಸ್ವಿಯಾದ ಬಲಿಷ್ಠನಾದ ಕಾರ್ತವೀರ್ಯಾರ್ಜುನನು ಸಮುದ್ರತೀರಕ್ಕೆ ಹೋಗಿ ಅಲ್ಲಿ ದರ್ಪಮೋಹಿತನಾಗಿ ಸಂಚರಿಸುತ್ತಾ ತೀಕ್ಷ್ಣವಾದ ಬಾಣಗಳನ್ನು ಸಮುದ್ರದ ಮೇಲೆ ಪ್ರಯೋಗಿಸಿದನು. ಎಲೈ ಭಾರತನೇ! ಆಗ ಸಮುದ್ರರಾಜನು ನಮಸ್ಕಾರವನ್ನು ಮಾಡಿ ಕೈಗಳನ್ನು ಮುಗಿದು ಹೀಗೆ ಹೇಳಿದನು.

ಆಶುಗಾನ್ ವೀರ ಮಾ ಮುಂಚ ಬ್ರೂಹಿ ಕಿಂ ಕರವಾಣಿ ತೇ ।
ಮದಾಶ್ರಯಾಣಿ ಭೂತಾನಿ ತ್ವನ್ನಿಸೃಷ್ಟೈರ್ಮಹೇಷುಭಿಃ ।
ವಧ್ಯಂತೇ ರಾಜಶಾರ್ದೂಲ ತೇಭ್ಯೋ ದೇಹ್ಯಭಯಂ ವಿಭೋ ॥೪೮॥

ವೀರನೇ! ಇಂತಹ ವೇಗವುಳ್ಳ ಬಾಣಗಳನ್ನು ಪ್ರಯೋಗಿಸಬೇಡ. ನಿನಗೆ ನಾನೇನು ಮಾಡಲಿ ಎಂದು ಹೇಳು. ಪ್ರಾಯಶಃ ನೀನು ಪ್ರಯೋಗಿಸಿದ ಬಾಣದಿಂದ ನನ್ನನ್ನು ಆಶ್ರಯಿಸಿದ ಪ್ರಾಣಿಗಳು ಮರಣವನ್ನು ಹೋದುತ್ತಿವೆ. ವಿಭುವೇ! ಆ ಪ್ರಾಣಿಗಳಿಗೆ ಅಭಯವನ್ನು ಕೊಡು.

ಅರ್ಜುನಃ

ದೇಹಿ ಸಿಂಧುಪತೇ ಯುದ್ಧಮದ್ಯೈವ ತ್ವರಯಾ ಮಮ ।
ಅಥವಾ ಪೀಡಯಾಮಿ ತ್ವಾಂ ತಸ್ಮಾತ್ ತ್ವಂ ಕುರು ಮಾ ಚಿರಮ್ ॥೪೯॥

ಸಿಂಧುಪತಿಯೇ! ಈ ದಿನ ಶೀಘ್ರವಾಗಿ ನನಗೆ ಯುದ್ಧವನ್ನುಕೊಡು. ಇಲ್ಲದಿದ್ದರೆ ನಾನು ನಿನ್ನನ್ನು ಪೀಡಿಸುತ್ತೇನೆ. ಆದ್ದರಿಂದ ನೀನು ತಡಮಾಡದೆ ಯುದ್ಧವನ್ನು ಮಾಡು.

ಸಮುದ್ರಃ

ಲೋಕೇ ರಾಜನ್ ಮಹಾವೀರ್ಯಾ ಬಹವೋ ನಿವಸಂತಿ ಯೇ ।
ತೇಷಾಮೇಕೇನ ರಾಜೇಂದ್ರ ಕುರು ಯುದ್ಧಂ ಮಹಾಬಲ ॥೫೦॥

ರಾಜನೇ! ಲೋಕದಲ್ಲಿ ಅನೇಕ ಪರಾಕ್ರಮಶಾಲಿಗಳಿದ್ದಾರೆ ಮಹಾಬಲನಾದ ರಾಜೇಂದ್ರನೇ! ಅವರಲ್ಲಿ ಯಾರಾದರೂ ಒಬ್ಬನ ಜೊತೆಯಲ್ಲಿ ಯುದ್ಧವನ್ನು ಮಾಡು.

ಅರ್ಜುನಃ

ಮತ್ಸಮೋ ಯದಿ ಸಂಗ್ರಾಮೇ ವರಾಯುಧಧರಃ ಕ್ವಚಿತ್ ।
ವಿದ್ಯತೇ ತಂ ಮಮಾಚಕ್ಷ್ವ ಯಃ ಸಹೇತ ಮಹಾಮೃಧೇ ॥೫೧॥

ಯುದ್ಧದಲ್ಲಿ ನನಗೆ ಸಮಾನವಾದ ಶ್ರೇಷ್ಠವಾದ ಆಯುಧವನ್ನು ಧರಿಸಿ ಬಾ. ಇಲ್ಲದಿದ್ದರೆ ಯುದ್ಧದಲ್ಲಿ ನನ್ನ ಸಾಮರ್ಥ್ಯವನ್ನು ಸಹಿಸಬಲ್ಲವನನ್ನು ನನಗೆ ತಿಳಿಸು.

ಸಮುದ್ರಃ

ಮಹರ್ಷಿರ್ಜಮದಗ್ನಿಸ್ತು ಯದಿ ರಾಜನ್ ಪರಿಶ್ರುತಃ ।
ತಸ್ಯ ಪುತ್ರೋ ರಣಂ ದಾತುಂ ಯಥಾವದ್ವೈ ತವಾರ್ಹತಿ ॥೫೨॥

ರಾಜನೇ! ನೀನು ಮಹರ್ಷಿಗಳಾದ ಜಮದಗ್ನಿಗಳನ್ನು ಕೇಳಿದ್ದರೆ. ಅವರ ಪುತ್ರನು ನಿನಗೆ ಯಥಾಯೋಗ್ಯವಾದ ಯುದ್ಧವನ್ನು ಕೊಡಲು ಸಮರ್ಥನಾಗಿದ್ದಾನೆ.

ದುರ್ಯೋಧನಃ

ಸಮುದ್ರಸ್ಯ ವಚಃ ಶ್ರುತ್ವಾ ರಾಜಾ ಮಾಹಿಷ್ಮತೀಪತಿಃ ।
ನನಾದ ಸಚಿವೈಃ ಪೂರ್ವಂ ಕ್ರೋಧೇನ ಮಹತಾ ವೃತಃ ॥೫೩॥

ತತಃ ಪ್ರತಿಯಯೌ ಶೀಘ್ರಂ ಕ್ರೋಧೇನ ಸಹ ಭಾರತ ।
ಸ ತಮಾಶ್ರಮಮಾಗತ್ಯ ರಾಮಮೇವಾನ್ವಪದ್ಯತ ॥೫೪॥

ಮಾಹಿಷ್ಮತೀ ರಾಜನು ಸಮುದ್ರರಾಜನ ಮಾತುಗಳನ್ನು ಕೇಳಿ ತಾನು ಮೊದಲು ಕೇಳಿದ್ದ ಮಾತುಗಳನ್ನು ಕೇಳಿ ಮಹಾಕ್ರೋಧಾವಿಷ್ಟನಾಗಿ ಶೀಘ್ರವಾಗಿ ಹೊರಟನು. ಎಲೈ ಭಾರತನೇ! ಜಮದಗ್ನಿಗಳ ಆಶ್ರಮವನ್ನು ಕೇಳಿ ಅಲ್ಲಿ ಪರುಶುರಾಮನನ್ನೇ ಸಂಧಿಸಿದನು.

ಸ ರಾಮಪ್ರತಿಕೂಲಾನಿ ಚಕಾರ ಸಹ ಬಂಧುಭಿಃ ।
ಆಯಾಸಂ ಜನಯಾಮಾಸ ರಾಮಸ್ಯ ಸ ಮಹಾತ್ಮನಃ ॥೫೫॥

ಅವನು ತನ್ನ ಬಂಧುಗಳ ಜೊತೆಯಲ್ಲಿ ಹೋದವನಾಗಿ ಪರಶುರಾಮನಿಗೆ ಪ್ರತಿಕೂಲವಾದ ಅನೇಕ ಕಾರ್ಯಗಳನ್ನು ಮಾಡಿ ಮಹಾತ್ಮನಾದ ರಾಮನಿಗೆ ತೊಂದರೆಯನ್ನು ಉಂಟುಮಾಡಿದನು.

ತತಸ್ತೇಜಃ ಪ್ರಜಜ್ವಾಲ ರಾಮಸ್ಯಾಮಿತತೇಜಸಃ ।
ಪ್ರದಹನ್ನಿವ ಸೈನ್ಯಾನಿ ರಶ್ಮಿಮಾನಿವ ತೇಜಸಾ ।
ಅಥ ತೌ ಚಕ್ರತುಯುರ್ದ್ಧಂ ವೃತ್ರವಾಸವಯೋರಿವ ॥೫೬॥

ಆಗ ಅಮಿತ ಪರಾಕ್ರಮಿಯಾದ ರಾಮನ ತೇಜಸ್ಸು ಪ್ರಜ್ವಲಿಸಿತು. ಅವನು ರಶ್ಮಿಮಾಲೆಯುಳ್ಳ ಸೂರ್ಯನಂತೆ ತನ್ನ ತೇಜಸ್ಸಿನಿಂದ ಅರ್ಜುನನ ಸೈನ್ಯವನ್ನು ದಹಿಸುವವನಂತೆ ನೋಡಿದನು. ಅನಂತರ ಅವರಿಬ್ಬರೂ ವೃತ್ರ ಮತ್ತು ಇಂದ್ರರಂತೆ ಯುದ್ಧವನ್ನು ಮಾಡಿದರು.

ತತಃ ಪರಶುಮಾದಾಯ ನೃಪಂ ಬಾಹುಸಹಸ್ರಿಣಮ್ ।
ಚಿಚ್ಛೇದ ಸಹಸಾ ರಾಮೋ ಬಹುಶಾಖಮಿವ ದ್ರುಮಮ್ ॥೫೭॥

ಆಗ ರಾಮನು ತನ್ನ ಪರಶುವನ್ನು ತೆಗೆದುಕೊಂಡು ಸಹಸ್ರ ಬಾಹುಗಳುಳ್ಳ ಅರ್ಜುನನ್ನು ಅನೇಕ ಕೊಂಬೆಗಳಿರುವ ಮರದಂತೆ ಕಡಿದು ಉರುಳಿಸಿದನು.

ತಂ ಹತಂ ಪತಿತಂ ದೃಷ್ಟ್ವಾ ಸಮೇತಾಃ ಸರ್ವಬಾಂಧವಾಃ ।
ಅಸೀನಾದಾಯ ಶಕ್ತೀಶ್ಚ ರಾಮಂ ತೇ ಪ್ರತ್ಯವಾರಯನ್ ॥೫೮॥

ಅರ್ಜುನನು ಹತನಾಗಿ ಬಿದ್ದುದನ್ನು ನೋಡಿದ ಅವನ ಬಂಧುಗಳೆಲ್ಲರೂ ಖಡ್ಗಗಳನ್ನೂ ಶಕ್ತಿ ಆಯುಧಗಳನ್ನೂ ಹಿಡಿದುಕೊಂಡು ರಾಮನನ್ನು ತಡೆಯಲು ಪ್ರಯತ್ನಿಸಿದರು.

ರಾಮೋಽಪಿ ರಥಮಾಸ್ಥಾಯ ಧನುರಾಯಮ್ಯ ಸತ್ವರಃ ।
ವಿಸೃಜನ್ ಪರಮಾಸ್ತ್ರಾಣಿ ವ್ಯಧಮತ್ ಪಾರ್ಥಿವಂ ಬಲಮ್ ॥೫೯॥

ರಾಮನಾದರೂ ರಥವನ್ನು ಏರಿ ಶೀಘ್ರವಾಗಿ ತನ್ನ ಧನುಸ್ಸನ್ನು ಬಗ್ಗಿಸಿ ಶ್ರೇಷ್ಠವಾದ ಅಸ್ತ್ರಗಳನ್ನು ಪ್ರಯೋಗಿಸುತ್ತಾ ಆ ಕ್ಷತ್ರಿಯ ಬಲವನ್ನು ನಾಶಮಾಡಿದನು.

ತತಸ್ತು ಕ್ಷತ್ರಿಯಾ ರಾಜನ್ ಜಾಮದಗ್ನ್ಯಭಯಾರ್ದಿತಾಃ ।
ವಿವಿಶುರ್ಗಿರಿದುರ್ಗಾಣಿ ಮೃಗಾಃ ಸಿಂಹಭಯಾದಿವ ॥೬೦॥

ರಾಜನೇ! ಅನಂತರ ಪರುಶುರಾಮನ ಭಯದಿಂದ ಪೀಡಿತರಾದ ಕ್ಷತ್ರಿಯರು ಸಿಂಹದ ಭಯದಿಂದ ಪೀಡಿತವಾದ ಪಶುಗಳಂತೆ ಗಿರಿದುರ್ಗಗಳನ್ನು ಹೊಕ್ಕರು.

ತೇಷಾಂ ಸ್ವವಿಹಿತಂ ಕರ್ಮ ತದ್ಭಯಾನ್ನಾನುತಿಷ್ಠತಾಮ್ ।
ಪ್ರಜಾ ವೃಷಲತಾಂ ಪ್ರಾಪ್ತಾ ಬ್ರಾಹ್ಮಣಾನಾಮದರ್ಶನಾತ್ ॥೬೧॥

ಆ ಕ್ಷತ್ರಿಯರು ರಾಮನ ಭಯದಿಂದ ತಮಗೆ ವಿಹಿತವಾದ ಕರ್ಮಗಳನ್ನು ಆಚರಿಸಲಿಲ್ಲ. ಆ ಕಾರಣದಿಂದಲೂ ಮತ್ತು ಬ್ರಾಹ್ಮಣರ ದರ್ಶನವಿಲ್ಲದ ಕಾರಣದಿಂದಲೂ ಪ್ರಜೆಗಳು ಶೂದ್ರರಾದರು.

ತಥಾ ತೇ ದ್ರವಿಡಾಃ ಕಾಶಾಃ ಪುಂಡ್ರಾಶ್ಚ ಶಬರೈಃ ಸಹ ।
ವೃಷಲತ್ವಂ ಪರಿಗತಾ ಹ್ಯುಚ್ಛಿನ್ನಾಃ ಕ್ಷತ್ರಕರ್ಮಣಃ ॥೬೨॥

ಹಾಗೆ ದ್ರವಿಡರು ಕಾಶರು ಪುಂಡ್ರರು ಶಬಲರರೂ ಸಹ ಕ್ಷತ್ರಿಯಕರ್ಮಗಳನ್ನು ಬಿಟ್ಟು ವೃಷಲತ್ವವನ್ನು (ಶೂದ್ರತ್ವವನ್ನು) ಹೊಂದಿದರು.

ತತಸ್ತು ಹತವೀರಾಸು ಕ್ಷತ್ರಿಯಾಸು ಪುನಃ ಪುನಃ ।
ದ್ವಿಜೈರಭ್ಯುದಿತಂ ಕ್ಷತ್ರಂ ತಾನಿ ರಾಮೋ ನಿಹತ್ಯ ಚ ॥೬೩॥

ಅನಂತರ ತಮ್ಮ ಪತಿಗಳನ್ನು ಕಳೆದುಕೊಂಡ ಕ್ಷತ್ರಿಯಸ್ತ್ರೀಯರಲ್ಲಿ ಮತ್ತೆ ಮತ್ತೆ ಬ್ರಾಹ್ಮಣರು ಸಂತಾನವನ್ನು ಪಡೆದು ಕ್ಷತ್ರಿಯ ಕುಲವನ್ನು ಬೆಳೆಸಿದರು ಪರಶುರಾಮನು ಆ ಕ್ಷತ್ರಿಯರನ್ನು ನಾಶಮಾಡಿದನು.

ತತಸ್ತ್ರಿಸಪ್ತಮಂ ವಾರಂ ರಾಮಂ ವಾಗಶರೀರಿಣೀ ।
ದಿವ್ಯಾ ಪ್ರೋವಾಚ ಮಧುರಾ ಸರ್ವಲೋಕಪರಿಶ್ರುತಾ ॥೬೪॥

ಅನಂತರ ಇಪ್ಪತ್ತೊಂದು ಬಾರಿ ರಾಮನು (ಭೂ ಪ್ರದಕ್ಷಿಣೆ ಮಾಡಿ) ಕ್ಷತ್ರಿಯರನ್ನು ಸಂಹರಿಸುತ್ತಿರಲು ಲೋಕ ಪ್ರಸಿದ್ಧವಾದ ಅಶರೀರವಾಣಿಯು ದಿವ್ಯವಾದ ಮತ್ತು ಮಧುರವಾದ ವಾಣಿಯನ್ನು ಆಡಿತು.

ರಾಮ ರಾಮ ನಿವರ್ತಸ್ವ ಸ್ವಗುಣಂ ಚಾಥ ಪಶ್ಯಸಿ ।
ಕ್ಷತ್ರಬಂಧೂನಿಮಾನ್ ಪ್ರಾಣೈರ್ವಿಪ್ರಯುಜ್ಯ ಪುನಃ ಪುನಃ ॥೬೫॥

ಪರಶುರಾಮನೇ! ಈ ಕ್ಷತ್ರಿಯ ಬಂಧುಗಳನ್ನು ಪುನಃ ಪುನಃ ಕೊಲ್ಲುವುದನ್ನು ನಿಲ್ಲಿಸು. ನಿನ್ನ ಧರ್ಮವನ್ನೇ ನೀನು ಆಚರಿಸು.

ತಥೈವ ತಂ ಮಹಾತ್ಮಾನಮೃಚೀಕಪ್ರಮುಖಾಸ್ತಥಾ ।
ರಾಮ ರಾಮ ಮಹಾವೀರ ನಿವರ್ತಸ್ವೇತ್ಯಥಾಬ್ರುವನ್ ॥೬೬॥

ಹಾಗೆಯೇ ಅವನ ಪೂರ್ವಪಿತೃಗಳಾದ ಋಚೀಕ ಮೊದಲಾದವರು ಬಂದು ಆ ಮಹಾತ್ಮನನ್ನು ಕುರಿತು ಮಹಾವೀರನಾದ ರಾಮನೇ! ಕ್ಷತ್ರಿಯ ಹನನವನ್ನು ನಿಲ್ಲಿಸು ಎಂದು ಹೇಳಿದರು.

ಪಿತುರ್ವಧಮಮೃಷ್ಯಂಸ್ತು ರಾಮಃ ಪ್ರೋವಾಚ ತಾನೃಷೀನ್ ।
ನಾರ್ಹಾ ಹಂತ ಭವಂತೋ ಮಾಂ ನಿವಾರಯಿತುಮಿತ್ಯುತ ॥೬೭॥

ತನ್ನ ತಂದೆಯ ವಧೆಯನ್ನು ಸಹಿಸದಿದ್ದ ರಾಮನು ಆ ಋಷಿಗಳನ್ನು ಕುರಿತು ನೀವು ಹೀಗೆ ನನ್ನನ್ನು ತಡೆಯ ಬಾರದು ಎಂದು ಹೇಳಿದನು.

ಪಿತರಃ

ನಾರ್ಹಸಿ ಕ್ಷತ್ರಬಂಧೂಂಸ್ತ್ವಂ ನಿಹಂತುಂ ಜಯತಾಂ ವರ ।
ನ ಹಿ ಯುಕ್ತಸ್ತದಾಘಾತೋ ಬ್ರಾಹ್ಮಣೇನ ಸತಾ ತ್ವಯಾ ॥೬೮॥

ಜಯಶೀಲರಲ್ಲಿ ಶ್ರೇಷ್ಠನಾದವನೇ! ಹೀಗೆ ಕ್ಷತ್ರಬಂಧುಗಳನ್ನು ಕೊಲ್ಲುವುದು ನಿನಗೆ ಯೋಗ್ಯವಲ್ಲ. ಬ್ರಾಹ್ಮಣನಾದ ನೀನು ಅವರನ್ನು ಹಾಗೆ ಕೊಲ್ಲಬಾರದು.

ದುರ್ಯೋಧನಃ

ಪಿತೃಣಾಂ ವಚನಂ ಶ್ರುತ್ವಾ ಕ್ರೋಧಂ ತ್ಯಕ್ತ್ವಾ ಸ ಭಾರ್ಗವಃ ।
ಅಶ್ವಮೇಧಸಹಸ್ರಾಣಿ ನರಮೇಧಶತಾನಿ ಚ ॥೬೯॥

ಭಾರ್ಗವರಾಮನು ಪಿತೃವಚನವನ್ನು ಕೇಳಿ ಕ್ರೋಧವನ್ನು ತ್ಯಜಿಸಿ ಸಹಸ್ರಅಶ್ವಮೇಧಯಾಗಗಳನ್ನೂ ನೂರು ನರಮೇಧ ಯಾಗಗಳನ್ನೂ ಮಾಡಿದನು.

ಇಷ್ಟ್ವಾ ಸಾಗರಪರ್ಯಂತಾಂ ಕಾಶ್ಯಪಾಯ ಮಹೀಂ ದದೌ ।
ತೇನ ರಾಮೇಣ ಸಂಗ್ರಾಮೇ ತುಲ್ಯಸ್ತಾತ ಧನಂಜಯಃ ॥೭೦॥

ಯಾಗವನ್ನು ಮಾಡಿ ಸಾಗರಪರ್ಯಂತ ಭೂಮಿಯನ್ನು ಕಾಶ್ಯಪರಿಗೆ ದಾನವಾಗಿ ಕೊಟ್ಟನು. ತಂದೆಯೇ ಧನಂಜಯನು ಸಂಗ್ರಾಮದಲ್ಲಿ ಆ ರಾಮನಿಗೆ ಸಮಾನನಾದವನು.

ಕಾರ್ತವೀರ್ಯೇಣ ಚ ರಣೇ ತುಲ್ಯಃ ಪಾರ್ಥೋ ನ ಸಂಶಯಃ ।
ರಣೇ ವಿಕ್ರಮ್ಯ ರಾಜೇಂದ್ರ ಪಾರ್ಥಂ ಜೇತುಂ ನ ಶಕ್ಯತೇ ॥೭೧॥

ಪಾರ್ಥನು ಯುದ್ಧದಲ್ಲಿ ಕಾರ್ತವೀರ್ಯನಿಗೂ ನಮನಾದವನು ಎಂಬ ವಿಷಯದಲ್ಲಿ ಸಂಶಯವಿಲ್ಲ. ರಾಜೇಂದ್ರನೇ! ಯುದ್ಧದಲ್ಲಿ ಪರಾಕ್ರಮದಿಂದ ಅರ್ಜುನನನ್ನು ಗೆಲ್ಲುವುದು ಅಸಾಧ್ಯವಾದುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ತ್ರಿನವತಿತಮೋಧ್ಯಾಯಃ ॥

॥ಅನುದ್ಯೂತಪರ್ವಣಿ ಪ್ರಥಮೋಧ್ಯಾಯಃ ॥೧॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ತೊಂಬತ್ಮೂರನೆಯ ಅಧ್ಯಾಯವು ಮುಗಿಯಿತು.

★ ★ ★ ★

ತೊಂಬತ್ತನಾಲ್ಕನೆಯ ಅಧ್ಯಾಯ.

(ದುರ್ಯೋಧನನಿಂದ ಅರ್ಜುನನ ಶೌರ್ಯವರ್ಣನೆ. ವಶೀಕೃತನಾದ ಧೃತರಾಷ್ಟ್ರನಿಂದ ಪಾಂಡವರನ್ನು ಮತ್ತೆ ಕರೆತರಲು ಆದೇಶ.)

ದುರ್ಯೋಧನಃ

ಶೃಣು ರಾಜನ್ ಪುರಾऽಚಿಂತ್ಯಾನ್ ಅರ್ಜುನಸ್ಯ ಚ ಸಾಹಸಾನ್ ।
ಅರ್ಜುನೋ ಧನ್ವಿನಾಂ ಶ್ರೇಷ್ಠೋ ದುಷ್ಕೃತಂ ಕೃತವಾನ್ ಪುರಾ ॥೧॥

ರಾಜನೇ! ಹಿಂದೆ ಅರ್ಜುನನು ಮಾಡಿದ ಅಚಿಂತ್ಯವಾದ ಸಾಹಸಕಾರ್ಯಗಳನ್ನು ಕೇಳು. ಧನುರ್ಧಾರಿಗಳಲ್ಲಿ ಶ್ರೇಷ್ಠನಾದ ಅರ್ಜುನನು, ಹಿಂದೆ ಇನ್ನೊಬ್ಬರು ಮಾಡಲು ಸಾಧ್ಯವಾಗದ ಅನೇಕ ಕಾರ್ಯಗಳನ್ನು ಮಾಡಿದ್ದಾನೆ.

ದ್ರುಪದಸ್ಯ ಪುರೇ ರಾಜನ್ ದ್ರೌಪದ್ಯಾಶ್ಚ ಸ್ವಯಂವರೇ ।
ಆಬಾಲವೃದ್ಧಸಂಘೋಷೇ ಸರ್ವಕ್ಷತ್ರಸಮಾಗಮೇ ।
ಕ್ಷಿಪ್ರಕಾರೀ ಜಲೇ ಮತ್ಸ್ಯಂ ದುರ್ನಿರೀಕ್ಷ್ಯಂ ಸಸರ್ಜ ಹ ॥೨॥

ದ್ರುಪದರಾಜನ ಪಟ್ಟಣದಲ್ಲಿ ದ್ರೌಪದಿಯ ಸ್ವಯಂವರದ ಕಾಲದಲ್ಲಿ ಬಾಲರಿಂದ ವೃದ್ಧರವರೆಗೆ ಎಲ್ಲ ಕ್ಷತ್ರಿಯರ ಸಮಾಗಮವು ಉಂಟಾಗಿರಲು ಕ್ಷಿಪ್ರಕಾರಿಯಾದ ಅರ್ಜುನನು ಇನ್ನೊಬ್ಬರಿಗೆ ಕಾಣದಂತಹ ಮತ್ಸ್ಯಪ್ರತಿಬಿಂಬವನ್ನು ಜಲದಲ್ಲಿ ನೋಡಿದನು.

ಸರ್ವೈರ್ನರ್ಪೈರಸಾಧ್ಯಂ ತತ್ ಕಾರ್ಮುಕಪ್ರವರಂ ಚ ವೈ ।
ಕ್ಷಣೇನ ಸಜ್ಯಮಕರೋತ್ ಸರ್ವಕ್ಷತ್ರಸ್ಯ ಪಶ್ಯತಃ ॥೩॥

ಇನ್ನು ಯಾವ ರಾಜರಿಗೂ ಹೆದೆ ಏರಿಸಲು ಸಾಧ್ಯವಾಗದ ಆ ಶ್ರೇಷ್ಠವಾದ ಬಿಲ್ಲನ್ನು ಎಲ್ಲಕ್ಷತ್ರಿಯರು ನೋಡುತ್ತಿರುವಂತೆ ಒಂದು ಕ್ಷಣದಲ್ಲಿ ಹೆದೆ ಏರಿಸಿದನು.

ತತೋ ಯಂತ್ರಮಯಂ ವಿದ್ಧ್ವಾ ವಿವಾಹಂ ಫಲ್ಗುನೋ ಬಲೀ ।
ಕೃಷ್ಣಯಾ ಹೇಮಮಾಲ್ಯೇನ ಸ್ಕಂಧೇ ಸ ಪರಿವೇಷ್ಟಿತಃ ॥೪॥

ಅನಂತರ ಬಲಿಷ್ಠನಾದ ಫಲ್ಗುಣನು ಯಂತ್ರಮಯವಾದ ಮತ್ಸ್ಯವನ್ನು ಹೊಡೆದು ಬೀಳಿಸಿ ದ್ರೌಪದಿಯಿಂದ ಹೇಮಮಾಲೆಯಿಂದ ಭುಜದಲ್ಲಿ ಅಲಂಕರಿಸಲ್ಪಟ್ಟನು.

ತತಸ್ತಯಾ ವೃತಂ ಪಾರ್ಥಂ ದೃಷ್ಟ್ವಾ ಸರ್ವೇ ನೃಪಾಸ್ತದಾ ।
ರೋಷಾತ್ ಸರ್ವಾಯುಧಾನ್ ಗೃಹ್ಯ ಕ್ರುದ್ಧಾ ವೀರಾ ಮಹಾಬಲಾಃ ।
ವೈಕರ್ತನಂ ಪುರಸ್ಕೃತ್ಯ ಸರ್ವೇ ಪಾರ್ಥಮುಪಾದ್ರವನ್ ॥೫॥

ಆಗ ದ್ರೌಪದಿಯು ಅವನನ್ನು ವರಿಸಿಸುದನ್ನು ನೋಡಿ ಎಲ್ಲಾ ವೀರರಾದ ಮಹಾಬಲರಾದ ರಾಜರು ಕರ್ಣನನ್ನು ಮುಂದೆಮಾಡಿಕೊಂಡು ರೋಷದಿಂದ ತಮ್ಮ ಆಯುಧಗಳನ್ನು ಹಿಡಿದುಕೊಂಡು ಅರ್ಜುನನ ಕಡೆಗೆ ಧಾವಿಸಿದರು.

ಸ ದೃಷ್ಟ್ವಾ ಪಾರ್ಥಿವಾನ್ ಸರ್ವಾನ್ ಕ್ರುದ್ಧಾನ್ ಪಾರ್ಥೋ ಮಹಾಬಲಃ ।
ವಾರಯಿತ್ವಾ ಶರೈಸ್ತೀಕ್ಷ್ಣೈರಜಯತ್ ತತ್ರ ಸ ಸ್ವಯಮ್ ॥೬॥

ಮಹಾಬಲನಾದ ಅರ್ಜುನನು ಆ ಎಲ್ಲಾ ರಾಜರನ್ನೂ ತಡೆದು ತನ್ನ ತೀಕ್ಷ್ಣವಾದ ಬಾಣಗಳಿಂದ ತಾನೊಬ್ಬನೇ ಅವರನ್ನೆಲ್ಲಾ ಜಯಿಸಿದನು.

ಜಿತ್ವಾ ತು ತಾನ್ ಮಹೀಪಾಲಾನ್ ಸರ್ವಾನ್ ಕರ್ಣಪುರೋಗಮಾನ್ ।
ಲೇಭೇ ಕೃಷ್ಣಾಂ ಶುಭಾಂ ಪಾರ್ಥೋ ಯುದ್ಧ್ವಾ ವೀರ್ಯಬಲಾತ್ ತದಾ ।
ಸರ್ವಕ್ಷತ್ರಸಮೂಹೇಷು ಅಂಬಾಂ ಭೀಷ್ಮೋ ಯಥಾ ಪುರಾ ॥೭॥

ಪರಾಕ್ರಮ ಮತ್ತು ಶೌರ್ಯ ಬಲದ ಕಾರಣದಿಂದ ಅರ್ಜುನನು ಕರ್ಣನೇ ಮೊದಲಾದ ಎಲ್ಲಾ ರಾಜರನ್ನೂ ಗೆದ್ದು ಹಿಂದೆ ಭೀಷ್ಮನು ಅಂಬೆಯನ್ನು ಪಡೆದಂತೆ ಸರ್ವಕ್ಷತ್ರಿಯ ಸಮೂಹದಲ್ಲಿ ಶುಭಳಾದ ದ್ರೌಪದಿಯನ್ನು ಪಡೆದನು.

ತತಃ ಕದಾಚಿದ್ಬೀಭತ್ಸುಃ ತೀರ್ಥಯಾತ್ರಾಂ ಯಯೌ ಸ್ವಯಮ್ ।
ಅಥೋಲೂಪೀಂ ಶುಭಾಂ ಜಾತಾಂ ನಾಗರಾಜಸುತಾಂ ತದಾ ।
ನಾಗೇಷ್ವವಾಪ ಚಾಗ್ರ್ಯೇಷು ಪ್ರಾರ್ಥಿತೋಥ ಯಥಾತಥಮ್ ॥೮॥

ಅನಂತರ ಒಮ್ಮೆ ಅರ್ಜುನನು ತೀರ್ಥಯಾತ್ರೆಗೆ ಹೊರಟನು. ಆಗ ನಾಗರಾಜ ಕುಮಾರಿಯಾದ ಶುಭಳಾದ ಉಲೂಪಿಯನ್ನು ಅವಳಿಂದ ಪ್ರಾರ್ಥಿಸಲ್ಪಟ್ಟವನಾಗಿ ಶ್ರೇಷ್ಠವಾದ ನಾಗಗಳ ಮಧ್ಯದಲ್ಲಿ ಅವಳನ್ನು ಪಡೆದನು.

ತತೋ ಗೋದಾವರೀಂ ವೇಣ್ಣಾಂ ಕಾವೇರೀಂ ಚಾವಗಾಹತ ।
ತತ್ರ ಪಾಂಡ್ಯಂ ಸಮಾಸಾದ್ಯ ತಸ್ಯ ಕನ್ಯಾಮವಾಪ ಸಃ ।
ಲಬ್ಧ್ವಾ ಜಿಷ್ಣುರ್ಮುದಂ ತತ್ರ ತತೋ ಯಾಮ್ಯಾಂ ಯಯೌ ದಿಶಮ್ ॥೯॥

ಅನಂತರ ಗೋದಾವರಿಯನ್ನೂ ವೆಣ್ಣಾನದಿಯನ್ನೂ ಕಾವೇರಿಯನ್ನೂ ದಾಟಿ ಪಾಂಡ್ಯದೇಶದಲ್ಲಿ ಪಾಂಡ್ಯರಾಜಕುಮಾರಿಯನ್ನು ಪಡೆದನು. ಅರ್ಜುನನು ಅಲ್ಲಿ ಸ್ವಲ್ಪ ಸಮಯ ಸಂತೋಷದಿಂದ ಇದ್ದು ಅನಂತರ ದಕ್ಷಿಣ ದಿಕ್ಕಿಗೆ ಪ್ರಯಾಣವನ್ನು ಬೆಳೆಸಿದನು.

ಸ ದಕ್ಷಿಣಂ ಸಮುದ್ರಾಂತಂ ಗತ್ವಾ ಚಾಪ್ಸರಸಾಂ ಚ ವೈ ।
ಕುಮಾರೀತೀರ್ಥಮಾಸಾದ್ಯ ಮೋಕ್ಷಯಾಮಾಸ ಚಾರ್ಜುನಃ ।
ಗ್ರಾಹರೂಪಾನ್ವಿತಾಃ ಪಂಚ ಅತಿಶೌರ್ಯೇಣ ವೈ ಬಲಾತ್ ॥೧೦॥

ಆ ಅರ್ಜುನನು ದಕ್ಷಿಣಸಮುದ್ರತೀರದಲ್ಲಿರುವ ಕನ್ಯಾತೀರ್ಥವನ್ನು ತಲುಪಿ ಅಲ್ಲಿ ತನ್ನ ಅತಿಶಯವಾದ ಬಲದಿಂದ ಮೊಸಳೆಯ ರೂಪದಲ್ಲಿದ್ದ ಐವರು ಅಪ್ಸರೆಯರನ್ನು ವಿಮೋಚನೆಗೊಳಿಸಿದನು.

ಕನ್ಯಾತೀರ್ಥಂ ಸಮಭ್ಯೇತ್ಯ ತತೋ ದ್ವಾರವತೀಂ ಯಯೌ ।
ತತ್ರ ಕೃಷ್ಣನಿದೇಶಾತ್ ಸ ಸುಭದ್ರಾಂ ಪ್ರಾಪ್ಯ ಫಲ್ಗುನಃ ।
ತಾಮಾರೋಪ್ಯ ರಥೋಪಸ್ಥೇ ಪ್ರಯಯೌ ಸ್ವಪುರೀಂ ಪ್ರತಿ ॥೧೧॥

ಕನ್ಯಾತೀರ್ಥದಿಂದ ಅವನು ದ್ವಾರವತಿಗೆ ಹೊರಟನು. ಅಲ್ಲಿಗೆ ಬಂದು ಕೃಷ್ಣನ ಇಚ್ಛೆಯಂತೆ ಅವನು ಸುಭದ್ರೆಯನ್ನು ಪಡೆದು ಅವಳನ್ನು ರಥದಲ್ಲಿ ಕೂಡಿಸಿಕೊಂಡು ತನ್ನ ಪಟ್ಟಣಕ್ಕೆ ಹೊರಟನು.

ಅಥಾದಾಯ ಗತೇ ಪಾರ್ಥೇ ತೇ ಶ್ರುತ್ವಾ ಸರ್ವಯಾದವಾಃ ।
ತಮಭ್ಯಧಾವನ್ ಸಂಕ್ರುದ್ಧಾಃ ಸಿಂಹಂ ವ್ಯಾಘ್ರಗಣಾ ಇವ ॥೧೨॥

ಪ್ರದ್ಯುಮ್ನಃ ಕೃತವರ್ಮಾ ಚ ಗದಃ ಸಾರಣಸಾತ್ಯಕೀ ।
ಆಹುಕಶ್ಚೈವ ಸಾಂಬಶ್ಚ ಚಾರುದೇಷ್ಣೋ ವಿಡೂರಥಃ ॥೧೩॥

ಅನ್ಯೇ ಚ ಯಾದವಾಃ ಸರ್ವೇ ಬಲದೇವಪುರೋಗಮಾಃ ।
ಏಕಮೇವ ಋತೇ ಕೃಷ್ಣಂ ಗಜವಾಜಿರಥೈರ್ಯುತಾಃ ॥೧೪॥

ಅನಂತರ ಅರ್ಜುನನು ಸುಭದ್ರೆಯನ್ನು ಕರೆದುಕೊಂಡು ಹೋಗುತ್ತಿರುವದನ್ನು ಕೇಳಿದ ಎಲ್ಲಾ ಯಾದವರು ಸಂಕ್ರುದ್ಧರಾಗಿ ವ್ಯಾಘ್ರಗಳ ಸಮೂಹವು ಸಿಂಹವನ್ನು ಎದುರಿಸಲು ಹೋದಂತೆ, ಅವನನ್ನು ಹಿಂಬಾಲಿಸಿ ಎದುರಿಸಿದರು. ಪ್ರದ್ಯುಮ್ನ ಕೃತವರ್ಮ ಗದ ಸಾರಣ ಸಾತ್ಯಕಿ ಆಹುಕ ಸಾಂಬ ಚಾರುದೇಷ್ಣ ವಿಡೂರಥ ಇವರಲ್ಲದೆ ಬಲದೇವನನ್ನು ಮುಂದೆಮಾಡಿಕೊಂಡು ಅನೇಕಯಾದವರು ಹೊರಟರು. ಕೃಷ್ಣನೊಬ್ಬನನ್ನು ಬಿಟ್ಟು ಉಳಿದವರೆಲ್ಲರೂ ತಮ್ಮ ಅಶ್ವಗಳನ್ನು ರಥಗಳನ್ನು ಗಜಗಳನ್ನು ತೆಗೆದುಕೊಂಡು ಹೊರಟರು.

ಅಥಾಸಾದ್ಯ ವನೇ ಯಾಂತಂ ಪರಿವಾರ್ಯ ಧನಂಜಯಮ್ ।
ಚಕ್ರುರ್ಯುದ್ಧಂ ಸುಸಂಕ್ರುದ್ಧಾ ಬಹುಕೋಟ್ಯಶ್ಚ ಯಾದವಾಃ ॥೧೫॥

ಅನೇಕ ಕೋಟಿಸಂಖ್ಯೆಯಲ್ಲಿದ್ದ ಯಾದವರು ಕಾಡಿನಲ್ಲಿ ಹೋಗುತ್ತಿದ್ದ ಅರ್ಜುನನ್ನು ಸುತ್ತವರೆದು ಬಹಳ ಕೋಪದಿಂದ ಕೂಡಿದವರಾಗಿ ಯುದ್ಧವನ್ನು ಮಾಡಿದರು.

ಏಕ ಏವ ತು ಪಾರ್ಥಸ್ತೈರ್ಯುದ್ಧಂ ಚಕ್ರೇ ಸುದಾರುಣಮ್ ।
ತೇನ ತೇಷಾಂ ಸಮಂ ಯುದ್ಧಂ ಮುಹೂರ್ತಂ ಪ್ರಬಭೂವ ಹ ॥೧೬॥

ಪಾರ್ಥನೊಬ್ಬನೆ ಅವರೆಲ್ಲರ ಜೊತೆಯಲ್ಲಿ ದಾರುಣವಾಗಿ ಯುದ್ಧವನ್ನು ಮಾಡಿದನು. ಒಂದು ಮುಹೂರ್ತದ ವರೆಗೆ ಅವನ ಮತ್ತು ಅವರ ಯುದ್ಧವು ಸಮವಾಗಿದ್ದಿತು.

ತತಃ ಪಾರ್ಥೋ ರಣೇ ಸರ್ವಾನ್ ವಾರಯಿತ್ವಾ ಶಿತೈಃ ಶರೈಃ ।
ಬಲಾದ್ ವಿಜಿತ್ಯ ರಾಜೇಂದ್ರ ವೀರಸ್ತಾನ್ ಸರ್ವಯಾದವಾನ್ ।
ತಾಂ ಸುಭದ್ರಾಮಥಾದಾಯ ಶಕ್ರಪ್ರಸ್ಥಂ ವಿವೇಶ ಹ ॥೧೭॥

ಎಲೈ ರಾಜೇಂದ್ರನೇ! ಅನಂತರ ಪಾರ್ಥನು ಆ ಎಲ್ಲ ಯಾದವರನ್ನು ತನ್ನ ನಿಶಿತವಾದ ಬಾಣಗಳಿಂದ ತಡೆದು ತನ್ನ ಬಲದಿಂದ ಅವರೆಲ್ಲರನ್ನೂ ಗೆದ್ದು ಆ ಸುಭದ್ರೆಯನ್ನು ಕರೆದುಕೊಂಡು ಇಂದ್ರಪ್ರಸ್ಥವನ್ನು ಪ್ರವೇಶಿಸಿದನು.

ಭೂಯಃ ಶೃಣು ಮಹಾರಾಜ ಫಲ್ಗುನಸ್ಯ ತು ಸಾಹಸಮ್ ।
ದದೌ ಚ ವಹ್ನೇರ್ಬೀಭತ್ಸುಃ ಪ್ರಾರ್ಥಿತಂ ಖಾಂಡವಂ ವನಮ್ ॥೧೮॥

ಮಹಾರಾಜನೇ! ಅರ್ಜುನನ ಸಾಹಸವನ್ನು ಇನ್ನೂ ಕೇಳು ಬೀಭತ್ಸುವು ಅಗ್ನಿಯಿಂದ ಪ್ರಾರ್ಥಿತನಾಗಿ ಅವನಿಗೆ ಖಾಂಡವ ವನವನ್ನು ಕೊಟ್ಟನು.

ಲಬ್ಧಮಾತ್ರೇ ತು ತೇನಾಥ ಭಗವಾನ್ ಹವ್ಯವಾಹನಃ ।
ಭಕ್ಷಿತುಂ ಖಾಂಡವಂ ರಾಜನ್ ತತಃ ಸಮುಪಚಕ್ರಮೇ ॥೧೯॥

ರಾಜನೇ! ಖಾಂಡವ ವನವು ದೊರಕಿದ ತಕ್ಷಣ ಪೂಜ್ಯನಾದ ಅಗ್ನಿಯ ಅದನ್ನು ಭಕ್ಷಿಸಲು ಪ್ರಾರಂಭಿಸಿದನು.

ತತಸ್ತಂ ಭಕ್ಷಯಂತಂ ವೈ ಸವ್ಯಸಾಚೀ ವಿಭಾವಸುಮ್ ।
ರಥೀ ಧನ್ವೀ ಶರಾನ್ ಗೃಹ್ಯ ಸ ಕಲಾಪಯುತಃ ಪ್ರಭುಃ ।
ಪಾಲಯಾಮಾಸ ರಾಜೇಂದ್ರ ಸ್ವವೀರ್ಯೇಣ ಮಹಾಬಲಃ ॥೨೦॥

ಎಲೈ ರಾಜೇಂದ್ರನೇ! ಅಗ್ನಿಯು ಖಾಂಡವವನವನ್ನು ಭಕ್ಷಿಸುತ್ತಿರಲು ಮಹಾಬಲನಾದ ಸವ್ಯಸಾಚಿಯು ರಥವನ್ನು ಧನುಸ್ಸನ್ನು ಬಾಣಗಳನ್ನು ಮತ್ತು ಉಳಿದ ಕಲಾಪಗಳನ್ನು ಹೊಂದಿದವನಾಗಿ ಪ್ರಭುವಾದ ಅವನು ತನ್ನ ಪರಾಕ್ರಮದಿಂದ ಅಗ್ನಿಯ ರಕ್ಷಣೆಯನ್ನು ಮಾಡುತ್ತಿದ್ದನು.

ತತಃ ಶ್ರುತ್ವಾ ಮಹೇಂದ್ರಸ್ತಂ ಮೇಘಾಂಸ್ತಾನ್ ಸಂದಿದೇಶ ಹ ।
ತೇನೋಕ್ತಾ ಮೇಘಸಂಘಾಶ್ಚ ವವರ್ಷುರತಿವೃಷ್ಟಿಭಿಃ ॥೨೧॥

ಅನಂತರ ಅದನ್ನು ಕೇಳಿದ ಮಹೇಂದ್ರನು ಮೇಘಗಳಿಗೆ ಸಂದೇಶವನ್ನು ನೀಡಿದನು. ಅವನಿಂದ ಹೇಳಲ್ಪಟ್ಟ ಆ ಸಂವರ್ತಕ ಮೇಘಗಳ ಸಮೂಹವು ಅತಿವೃಷ್ಟಿಯನ್ನು ಕರೆದವು.

ತತೋ ಮೇಘಗಣಾನ್ ಪಾರ್ಥಃ ಶರವ್ರಾತೈಃ ಸಮಂತತಃ ।
ಖಗಮೈರ್ವಾರಯಾಮಾಸ ತದಾಶ್ಚರ್ಯಮಿವಾಭವತ್ ॥೨೨॥

ಪಾರ್ಥನು ಅಂತರಿಕ್ಷದಲ್ಲಿ ಚಲಿಸುವ ತನ್ನ ಬಾಣಗಳ ಸಮೂಹದಿಂದ ಎಲ್ಲ ಕಡೆಯಲ್ಲಿಯೂ ಆ ಮೇಘಗಳಿಂದ ಸುರಿದ ಮಳೆಯು ವನದ ಮೇಲೆ ಬೀಳದಂತೆ ತಡೆದನು. ಅದು ಆಶ್ಚರ್ಯಕರವಾಗಿದ್ದಿತು.

ವಾರಿತಾನ್ ಮೇಘಸಂಘಾಂಶ್ಚ ಶ್ರುತ್ವಾ ಕ್ರುದ್ಧಃ ಪುರಂದರಃ ।
ಪಾಂಡರಂ ಗಜಮಾಸ್ಥಾಯ ಸರ್ವದೇವಗಣೈರ್ವೃತಃ ।
ಯಯೌ ಪಾರ್ಥೇನ ಸಂಯೋದ್ಧುಂ ರಕ್ಷಾರ್ಥಂ ಖಾಂಡವಸ್ಯ ಚ ॥೨೩॥

ಮೇಘ ಸಮೂಹವು ತಡೆಹಿಡಿಯಲ್ಪಟ್ಟಿದ್ದನ್ನು ಕೇಳಿ ಕ್ರುದ್ಧವಾದ ಇಂದ್ರನು ತನ್ನ ಬಿಳಿಯಾದ ಐರಾವತವನ್ನು ಏರಿ ಎಲ್ಲಾ ದೇವತೆಗಳ ಸಮೂಹದಿಂದಯುತನಾಗಿ ಖಾಂಡವವನವನ್ನು ರಕ್ಷಿಸಲು ಅರ್ಜುನನ ಜೊತೆಯಲ್ಲಿ ಯುದ್ಧಮಾಡುವುದಕ್ಕೆ ಹೊರಟನು.

ರುದ್ರಾಶ್ಚ ಮರುತಶ್ಚೈವ ವಸವಶ್ಚಾಶ್ವಿನೌ ತದಾ ।
ಆದಿತ್ಯಾಶ್ಚೈವ ಸಾಧ್ಯಾಶ್ಚ ವಿಶ್ವೇ ದೇವಾಶ್ಚ ಭಾರತ ।
ಗಂಧರ್ವಾಶ್ಚೈವ ಸಹಿತಾ ಅನ್ಯೇ ಸುರಗಣಾಶ್ಚ ಯೇ ॥೨೪॥

ತೇ ಸರ್ವೇ ಶಸ್ತ್ರಸಂಪನ್ನಾ ದೀಪ್ಯಮಾನಾಃ ಸ್ವತೇಜಸಾ ।
ಧನಂಜಯಂ ಜಿಘಾಂಸಂತಃ ಪ್ರಪೇತುರ್ವಿಬುಧಾಧಿಪಾಃ ॥೨೫॥

ಎಲೈ ಭಾರತನೇ! ರುದ್ರರು ಮರುತ್‌ಗಳು ವಸುಗಳು ಅಶ್ವಿನಿಗಳು ಆದಿತ್ಯರು ಸಾಧ್ಯರು ವಿಶ್ವೇದೇವತೆಗಳು ಗಂಧರ್ವರು ಮತ್ತು ಉಳಿದ ಸುರಗಣಗಳೆಲ್ಲರೂ ಶಸ್ತ್ರಗಳನ್ನು ಧರಿಸಿ ತಮ್ಮ ಕಾಂತಿಯಿಂದ ಬೆಳಗುತ್ತಾ ಅರ್ಜುನನ್ನು ಕೊಲ್ಲುವ ಇಚ್ಛೆಯುಳ್ಳವರಾಗಿ ಅವನ ಮೇಲೆ ಎರಗಿದರು.

ಯುಗಾಂತೇ ಯಾನಿ ದೃಶ್ಯಂತೇ ನಿಮಿತ್ತಾನಿ ಮಹಾಂತ್ಯಪಿ ।
ಸರ್ವಾಣಿ ತತ್ರ ದೃಶ್ಯಂತೇ ಸುಘೋರಾಣಿ ಮಹೀಪತೇ ।
ತತೋ ದೇವಗಣಾಃ ಸರ್ವೇ ಪಾರ್ಥಂ ಸಮಭಿದುದ್ರುವುಃ ॥೨೬॥

ರಾಜನೇ! ಯುಗಾವಸಾನದಲ್ಲಿ ಯಾವ ಯಾವ ದೊಡ್ಡ ಅಪಶಕುನಗಳು ಕಂಡು ಬರುತ್ತವೆಯೋ ಅಂತಹ ಎಲ್ಲಾ ಘೋರವಾದ ಅಪಶಕುನಗಳು ಆಗ ಕಂಡುಬಂದವು. ಆಗ ಎಲ್ಲಾ ದೇವಸಮೂಹಗಳೂ ಅರ್ಜುನನ ಮೇಲೆ ಎರಗಿದವು.

ಅಸಂಭ್ರಾಂತಸ್ತು ತಾನ್ ದೃಷ್ಟ್ವಾ ಸ ತಾಂ ದೇವಮಯೀಂ ಚಮೂಮ್ ।
ತ್ವರಿತಃ ಫಲ್ಗುನೋ ಗೃಹ್ಯ ತೀಕ್ಷ್ಣಾಂಸ್ತಾನಾಶುಗಾಂಸ್ತದಾ ।
ಶಕ್ರಂ ದೇವಾಂಶ್ಚ ಸಂಪ್ರೇಕ್ಷ್ಯ ತಸ್ಥೌ ಕಾಲ ಇವಾತ್ಯಯೇ ॥೨೭॥

ಅರ್ಜುನನು ಆ ದೇವತೆಗಳ ಸೈನ್ಯವನ್ನೂ ಇಂದ್ರ ಮತ್ತು ಉಳಿದ ದೇವತೆಗಳನ್ನೂ ನೋಡಿ ಯಾವ ಗಾಬರಿಯೂ ಇಲ್ಲದೆ ಶೀಘ್ರವಾಗಿ ತೀಕ್ಷ್ಣವಾದ ವೇಗಗಾಮಿಗಳಾದ ತನ್ನ ಬಾಣಗಳನ್ನು ಹಿಡಿದುಕೊಂಡು ಪ್ರಳಯಕಾಲದ ಮೃತ್ಯುವಿನಂತೆ ನಿಂತನು.

ತತೋ ದೇವಗಣಾಃ ಸರ್ವೇ ಬೀಭತ್ಸುಂ ಸಪುರಂದರಾಃ ।
ಅವಾಕಿರನ್ ಶರವ್ರಾತೈರ್ಮಾನುಷಂ ತಂ ಮಹೀಪತೇ ॥೨೮॥

ಎಲೈ ಮಹಾರಾಜನೇ! ಆಗ ಇಂದ್ರನನ್ನು ಮುಂದೆಮಾಡಿಕೊಂಡ ದೇವತೆಗಳ ಸಮೂಹಗಳೆಲ್ಲವೂ ಮನುಷ್ಯನಾದ ಬಿಭತ್ಸುವಿನ ಮೇಲೆ ತಮ್ಮ ಬಾಣಗಳ ಮಳೆಗಳನ್ನು ಕರೆದವು.

ತತಃ ಪಾರ್ಥೋ ಮಹಾತೇಜಾ ಗಾಂಡೀವಂ ಗೃಹ್ಯ ಸತ್ವರಃ ।
ವಾರಯಾಮಾಸ ದೇವಾನಾಂ ಶರವ್ರಾತೈಃ ಶರಾಂಸ್ತದಾ ॥೨೯॥

ಅನಂತರ ಮಹಾತೇಜಸ್ವಿಯಾದ ಪಾರ್ಥನು ಶೀಘ್ರವಾಗಿ ಗಾಂಡೀವ ಧನುಸ್ಸನ್ನು ತೆಗೆದುಕೊಂಡು ತನ್ನ ಬಾಣಗಳ ಸಮೂಹದಿಂದ ದೇವತೆಗಳ ಬಾಣಗಳನ್ನು ನಿವಾರಿಸಿದನು.

ಪುನಃ ಕ್ರುದ್ಧಾಃ ಸುರಾಃ ಸರ್ವೇ ಮರ್ತ್ಯಂ ಸಂಖ್ಯೇ ಮಹಾಬಲಾಃ ।
ನಾನಾಶಸ್ತ್ರೈರ್ವವರ್ಷುಸ್ತಂ ಸವ್ಯಸಾಚಿಂ ಮಹೀಪತೇ ॥೩೦॥

ಎಲೈ ಮಹಿಪತಿಯೇ! ಪುನಃ ಕ್ರುದ್ಧರಾದ ಮಹಾಬಲರಾದ ಎಲ್ಲಾ ದೇವತೆಗಳು ಮರ್ತ್ಯನಾದ ಸವ್ಯಸಾಚಿಯ ಮೇಲೆ ಅನೇಕ ಶಸ್ತ್ರಗಳ ಮಳೆಯನ್ನು ಕರೆದರು.

ತಾನ್ ಪಾರ್ಥಃ ಶಸ್ತ್ರವರ್ಷಾನ್ ವೈ ವಿಸೃಷ್ಟಾನ್ ವಿಬುಧೈಸ್ತದಾ ।
ದ್ವಿಧಾ ತ್ರಿಧಾ ಚ ಚಿಚ್ಛೇದ ಖ ಏವ ನಿಶಿತೈಃ ಶರೈಃ ॥೩೧॥

ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಆ ಶಸ್ತ್ರಗಳ ಮಳೆಯನ್ನು ಪಾರ್ಥನುತನ್ನ ನಿಶಿತವಾದ ಬಾಣಗಳಿಂದ ಆಕಾಶದಲ್ಲಿಯೇ ಮೂರು ನಾಲ್ಕು ತುಂಡುಗಳಾಗಿ ಕತ್ತರಿಸಿದನು.

ಪುನಶ್ಚ ಪಾರ್ಥಃ ಸಂಕ್ರುದ್ಧೋ ಮಂಡಲೀಕೃತಕಾರ್ಮುಕಃ ।
ದೇವಸಂಘಾಂಛರೈಸ್ತೀಕ್ಷ್ಣೈರರ್ಪಯದ್ವೈ ಸಮಂತತಃ ॥೩೨॥

ಪುನಃ ಕೋಪಗೊಂಡ ಪಾರ್ಥನು ತನ್ನ ಬಿಲ್ಲನ್ನು ಬಗ್ಗಿಸಿ ದೇವಸಂಘಗಳ ಮೇಲೆ ಎಲ್ಲಕಡೆಗಳಿಂದಲೂ ತನ್ನ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದನು.

ತತೋ ದೇವಗಣಾಃ ಸರ್ವೇ ಯುದ್ಧ್ವಾ ಪಾರ್ಥೇನ ವೈ ಮುಹುಃ ।
ರಣೇ ಜೇತುಮಶಕ್ಯಂ ತಂ ಜ್ಞಾತ್ವಾ ತೇ ಭರತರ್ಷಭ ॥೩೩॥
ಶಾಂತಾಸ್ತೇ ವಿಬುಧಾಃ ಸರ್ವೇ ಪಾರ್ಥಬಾಣಾಭಿಪೀಡಿತಾಃ ।
ಸದ್ವಿಪಂ ವಾಸವಂ ತ್ಯಕ್ತ್ವಾ ದುದ್ರುವುಃ ಸರ್ವತೋದಿಶಮ್ ॥೩೪॥

ಎಲೈ ಭರತರ್ಷಭನೇ! ಅನಂತರ ದೇವತೆಗಳ ಎಲ್ಲ ಗಣಗಳು ಅರ್ಜುನನ ಜೊತೆಯಲ್ಲಿ ಪುನಃ ಪುನಃ ಯುದ್ಧವನ್ನುಮಾಡಿ ಯುದ್ಧದಲ್ಲಿ ಅವನನ್ನು ಗೆಲ್ಲುವುದು ಅಸಾಧ್ಯವೆಂದು ತಿಳಿದು ಶಾಂತರಾದ ಅವರೆಲ್ಲರೂ ಅರ್ಜುನನ ಬಾಣಗಳಿಂದ ಪೀಡಿತರಾಗಿ ಇಂದ್ರನನ್ನೂ ಐರಾವತವನ್ನೂ ಅಲ್ಲಿಯೇ ಬಿಟ್ಟು ಎಲ್ಲ ದಿಕ್ಕುಗಳಿಗೂ ಓಡಿ ಹೋದರು.

ಪ್ರಾಚೀಂ ರುದ್ರಾಃ ಸಗಂಧರ್ವಾ ದಕ್ಷಿಣಾಂ ಮರುತೋ ಯುಧಿ ।
ದಿಶಂ ಪ್ರತೀಚೀಂ ಭೀತಾಸ್ತೇ ವಸವಶ್ಚ ತಥಾऽಶ್ವಿನೌ ॥೩೫॥

ಗಂಧರ್ವಸಹಿತರಾದ ರುದ್ರರು ಪೂರ್ವದಿಕ್ಕಿಗೂ ಮರುತ್ತುಗಳು ದಕ್ಷಿಣದಿಕ್ಕಿಗೂ ವಸುಗಳು ಮತ್ತು ಅಶ್ವಿನಿಗಳು ಯುದ್ಧದಲ್ಲಿ ಭೀತರಾಗಿ ಪಶ್ಚಿಮ ದಿಕ್ಕಿಗೂ ಓಡಿ ಹೋದರು.

ಆದಿತ್ಯಾಶ್ಚೈವ ವಿಶ್ವೇ ಚ ದುದ್ರುವುರ್ವಾ ಉದಙ್ಮುಖಾಃ ।
ಸಾಧ್ಯಾಶ್ಚೋರ್ಧ್ವಮುಖಾ ಭೀತಾಶ್ಚಿಂತಯನ್ ಪಾರ್ಥಸಾಯಕಾನ್ ॥

ಆದಿತ್ಯರು ಮತ್ತು ವಿಶ್ವೇದೇವತೆಗಳು ಪಾರ್ಥನ ಬಾಣಗಳನ್ನೇ ಚಿಂತಿಸುತ್ತಾ ಭೀತರಾಗಿ ಉತ್ತರಾಭಿಮುಖವಾಗಿ ಓಡಿಹೋದರು. ಸಾಧ್ಯರು ಊರ್ಧ್ವಮುಖವಾಗಿ ಓಡಿಹೋದರು.

ಏವಂ ಸುರಗಣಾಃ ಸರ್ವೇ ಪ್ರಾದ್ರವನ್ ಸರ್ವತೋದಿಶಮ್ ।
ಮುಹುರ್ಮುಹುಃ ಪ್ರೇಕ್ಷಮಾಣಾಃ ಪಾರ್ಥಮೇವ ಸಕಾರ್ಮುಕಮ್ ॥

ಹೀಗೆ ಸುರಗಣಗಳೆಲ್ಲವೂ ಧನುಸ್ಸನ್ನು ಹಿಡಿದ ಅರ್ಜುನನನ್ನೇ ಪುನಃ ಪುನಃ ನೋಡುತ್ತಾ ಎಲ್ಲ ದಿಕ್ಕುಗಳಿಗೂ ಓಡಿ ಹೋದರು.

ವಿದ್ರುತಾನ್ ದೇವಸಂಘಾಂಸ್ತಾನ್ ರಣೇ ದೃಷ್ಟ್ವಾ ಪುರಂದರಃ ।
ತತಃ ಕ್ರುದ್ಧೋ ಮಹಾತೇಜಾಃ ಪಾರ್ಥಂ ಬಾಣೈರವಾಕಿರತ್ ।
ಪಾರ್ಥೋಽಪಿ ಶಕ್ರಂ ವಿವ್ಯಾಧ ಮಾನುಷೋ ವಿಬುಧಾಧಿಪಮ್ ॥೩೮॥

ದೇವತೆಗಳ ಸಮೂಹವು ಯುದ್ಧದಲ್ಲಿ ಓಡಿಹೋದುದನ್ನು ನೋಡಿ ಮಹಾತೇಜಸ್ವಿಯಾದ ಇಂದ್ರನು ಕ್ರುದ್ಧನಾಗಿ ಅರ್ಜುನನ ಮೇಲೆ ತನ್ನ ಬಾಣಗಳ ಮಳೆಯನ್ನು ಸುರಿಸಿದನು. ಮನುಷ್ಯನಾದ ಅರ್ಜುನನು ಸಹ ದೇವಾಧಿಪನಾದ ಇಂದ್ರನಿಗೆ ಬಾಣಗಳನ್ನು ಪ್ರಯೋಗಿಸಿ ಅವನನ್ನು ವ್ಯಥೆ ಪಡಿಸಿದನು.

ತತಃ ಸೋಽಶ್ಮಮಯಂ ವರ್ಷಂ ವ್ಯಸೃಜದ್ ವಿಬುಧಾಧಿಪಃ ।
ತಚ್ಚರೈರರ್ಜುನೋ ವರ್ಷಂ ಪ್ರತಿಜಘ್ನೇಽತ್ಯಮರ್ಷಣಃ ॥೩೯॥

ಅನಂತರ ವಿಬುಧಾಧಿಪನಾದ ಇಂದ್ರನು ಪಾಷಾಣಮಯವಾದ ವರ್ಷವನ್ನು ಸೃಷ್ಟಿಸಿದನು. ಅತ್ಯಂತ ಸಿಟ್ಟಿನಿಂದ ಕೂಡಿದ ಅರ್ಜುನನು ತನ್ನ ಬಾಣಗಳಿಂದ ಆ ಬಂಡೆಗಳ ಮಳೆಯನ್ನು ನಿವಾರಿಸಿದನು.

ಅಥ ಸಂವರ್ಧಯಾಮಾಸ ತದ್ವರ್ಷಂ ದೇವರಾಡಪಿ ।
ಭೂಯ ಏವ ತದಾ ವೀರ್ಯಂ ಜಿಜ್ಞಾಸುಃ ಸವ್ಯಸಾಚಿನಃ ॥೪೦॥

ಆಗ ಇಂದ್ರನು ಅರ್ಜುನನ ಬಲವನ್ನು ಇನ್ನೂ ತಿಳಿಯಲು ಅಪೇಕ್ಷಿಸಿದನವಾಗಿ ಆ ಮಳೆಯನ್ನು ಇನ್ನೂ ಹೆಚ್ಚಿಸಿದನು.

ಸೋಽಶ್ಮವರ್ಷಂ ಮಹಾವೇಗಮಿಷುಭಿಃ ಪಾಂಡವೋಽಪಿ ಚ ।
ವಿಲಯಂ ಗಮಯಾಮಾಸ ಹರ್ಷಯನ್ ಪಾಕಶಾಸನಮ್ ॥೪೧॥

ಅರ್ಜುನನೂ ಸಹ ಮಹಾವೇಗವುಳ್ಳ ಆ ಬಂಡೆಗಳ ಮಳೆಯನ್ನು ತನ್ನ ಬಾಣಗಳಿಂದ ನಾಶಮಾಡಿ ದೇವೇಂದ್ರನನ್ನು ಸಂತೋಷಪಡಿಸಿದನು.

ಉಪಾದಾಯ ತು ಪಾಣಿಭ್ಯಾಮಂಗದಂ ನಾಮ ಪರ್ವತಮ್ ।
ಸದ್ರುಮಂ ವ್ಯಸೃಜಚ್ಛಕ್ರೋ ಜಿಘಾಂಸುಃ ಶ್ವೇತವಾಹನಮ್ ॥೪೨॥

ಇಂದ್ರನು ಅಂಗದವೆಂಬ ಪರ್ವತವನ್ನು ಅದರಲ್ಲಿದ್ದ ವೃಕ್ಷಗಳ ಸಹಿತವಾಗಿ ತನ್ನ ಎರಡೂ ಕೈಗಳಿಂದ ಕಿತ್ತು ಅರ್ಜುನನನ್ನು ಕೊಲ್ಲುವ ಇಚ್ಛೆಯಿಂದ ಅದನ್ನು ಅರ್ಜುನನ ಮೇಲೆ ಎಸೆದನು.

ತತೋಽರ್ಜುನೋ ವೇಗವದ್ಭಿರ್ಜ್ವಲದ್ಭಿರಜಿಹ್ಮಗೈಃ ।
ಬಾಣೈರ್ವಿಧ್ವಂಸಯಾಮಾಸ ಗಿರಿರಾಜಂ ಸಹಸ್ರಶಃ ।
ಶಕ್ರಂ ಚ ವಾರಯಾಮಾಸ ಶರೈಃ ಪಾರ್ಥೋ ಬಲಾದ್ಯುಧಿ ॥೪೩॥

ಆಗ ಅರ್ಜುನನು ವೇಗವುಳ್ಳ ಪ್ರಕಾಶಮಾನವಾದ ಮತ್ತು ನೇರವಾಗಿ ಹೋಗುವ ತನ್ನ ಬಾಣಗಳಿಂದ ಆ ಶ್ರೇಷ್ಠವಾದ ಪರ್ವತವನ್ನು ಸಹಸ್ರಾರು ಚೂರುಗಳನ್ನಾಗಿ ಮಾಡಿ ನಾಶಗೊಳಿಸಿದನು. ಅರ್ಜುನನು ತನ್ನ ಬಲದಿಂದ ಯುದ್ಧದಲ್ಲಿ ಇಂದ್ರನನ್ನೂ ಸಹ ತನ್ನ ಬಾಣಗಳಿಂದ ತಡೆದನು.

ತತಃ ಶಕ್ರೋ ಮಹಾರಾಜ ರಣೇ ವೀರಂ ಧನಂಜಯಮ್ ।
ಜ್ಞಾತ್ವಾ ಜೇತುಮಶಕ್ಯಂ ತಂ ತೇಜೋಬಲಸಮನ್ವಿತಮ್ ।
ಪರಾಂ ಪ್ರೀತಿಂ ಯಯೌ ತತ್ರ ಪುತ್ರಶೌರ್ಯೇಣ ವಾಸವಃ ॥೪೪॥

ಮಹಾರಾಜನೇ! ಆಗ ಇಂದ್ರನು ವೀರನೂ ತೇಜೋಬಲಸಮನ್ವಿತನೂ ಆದ ಅರ್ಜುನನನ್ನು ಯುದ್ಧದಲ್ಲಿ ಜಯಿಸಲು ಸಾಧ್ಯವಿಲ್ಲವೆಂದು ತಿಳಿದು ತನ್ನ ಮಗನ ಪರಾಕ್ರಮದಿಂದ ಬಹಳ ಸಂತೋಷಗೊಂಡನು.

ತದಾ ತತ್ರ ನ ತಸ್ಯಾಸೀದ್ ದಿವಿ ಕಶ್ಚಿನ್ಮಹಾಯಶಾಃ ।
ಸಮರ್ಥೋ ನಿರ್ಜಯೇ ರಾಜನ್ನಪಿ ಸಾಕ್ಷಾತ್ ಪ್ರಜಾಪತಿಃ ॥೪೫॥

ಮಹಾರಾಜನೇ! ಆಗ ದೇವಲೋಕದಲ್ಲಿ ಪ್ರಜಾಪತಿಯನ್ನು ಸೇರಿಸಿ ಯಾವ ಮಹಾಕೀರ್ತಿವಂತನಾದವನೂ ಅರ್ಜುನನನ್ನು ಜಯಿಸಲು ಸಾಧ್ಯವಾಗಲಿಲ್ಲ.

ತತಃ ಪಾರ್ಥಃ ಶರೈರ್ಹತ್ವಾ ಯಕ್ಷರಾಕ್ಷಸಪನ್ನಗಾನ್ ।
ದೀಪ್ತೇ ಚಾಗ್ನೌ ಮಹಾತೇಜಾಃ ಪಾತಯಾಮಾಸ ಸಂತತಮ್ ॥೪೬॥

ಅನಂತರ ಮಹಾತೇಜಸ್ವಿಯಾದ ಅರ್ಜುನನು ತನ್ನ ಬಾಣಗಳಿಂದ ಯಕ್ಷರಾಕ್ಷಸಗಣಗಳನ್ನು ಕತ್ತರಿಸಿ ಸಂತತವಾಗಿ ಅವು ಉರಿಯುತ್ತಿರುವ ಅಗ್ನಿಯಲ್ಲಿ ಬೀಳುವಂತೆ ಮಾಡಿದನು.

ಪ್ರತಿಪ್ರೇಕ್ಷಯಿತುಂ ಪಾರ್ಥಂ ನ ಶೇಕುಸ್ತತ್ರ ಕೇಚನ ।
ದೃಷ್ಟ್ವಾ ನಿವಾರಿತಂ ಶಕ್ರಂ ದಿವಿ ದೇವಗಣೈಃ ಸಹ ॥೪೭॥

ದೇವಗಣಗಳಿಂದ ಕೂಡಿದ ಇಂದ್ರನೂ ಸಹ ಪಾರ್ಥನಿಂದ ನಿವಾರಿಸಲ್ಪಟ್ಟುದುದನ್ನು ನೋಡಿ ಆಗ ಯಾರೂ ಸಹ ಅರ್ಜುನನನ್ನು ನೋಡುವುದಕ್ಕೂ ಸಮರ್ಥರಾಗಲಿಲ್ಲ.

ಯಥಾ ಸುಪರ್ಣಃ ಸೋಮಾರ್ಥಂ ವಿಬುಧಾನಜಯತ್ ಪುರಾ ।
ತಥಾ ಜಿತ್ವಾ ಸುರಾನ್ ಪಾರ್ಥಸ್ತರ್ಪಯಾಮಾಸ ಪಾವಕಮ್ ॥೪೮॥

ಹೇಗೆ ಗರುಡನು ಹಿಂದೆ ಅಮೃತದ ಸಲುವಾಗಿ ಎಲ್ಲ ದೇವತೆಗಳನ್ನು ಜಯಿಸಿದನೋ ಹಾಗೆ ಅರ್ಜುನನು ಎಲ್ಲಾ ದೇವತೆಗಳನ್ನೂ ಜಯಿಸಿ ಅಗ್ನಿಯನ್ನು ಸಂತೋಷಪಡಿಸಿದನು.

ತತೋऽರ್ಜುನಃ ಸ್ವವೀರ್ಯೇಣ ತರ್ಪಯಿತ್ವಾ ವಿಭಾವಸುಮ್ ।
ರಥಂ ಧ್ವಜಂ ಹಯಾಂಶ್ಚೈವ ದಿವ್ಯಾಸ್ತ್ರಾಣಿ ಸಭಾಂ ಚ ವೈ ॥೪೯॥

ಗಾಂಡೀವಂ ಚ ಧನುಶ್ರೇಷ್ಠಂ ತೂಣೌ ಚಾಕ್ಷಯಸಾಯಕೌ ।
ಏತಾನ್ಯವಾಪ ಬೀಭತ್ಸುರ್ಲೇಭೇ ಕೀರ್ತಿಂ ಚ ಭಾರತ ॥೫೦॥

ಅನಂತರ ಅರ್ಜುನನು ತನ್ನ ಪರಾಕ್ರಮದಿಂದ ಅಗ್ನಿಯನ್ನು ಸಂತೋಷಪಡಿಸಿ ಅವನಿಂದ ರಥ'ಧ್ವಜ, ಅಶ್ವಗಳು ದಿವ್ಯಾಸ್ತ್ರಗಳು ಸಭೆ ಮತ್ತು ಶ್ರೇಷ್ಠವಾದ ಗಾಂಡೀವ ಧನುಸ್ಸು ಅಕ್ಷಯಬತ್ತಳಿಕೆಗಳು ಎಲ್ಲವನ್ನೂ ಪಡೆದನು. ಭಾರತನೇ! ಕೀರ್ತಿಯನ್ನೂ ಪಡೆದನು.

ಭೂಯೋऽಪಿ ಶೃಣು ರಾಜೇಂದ್ರ ಪಾರ್ಥೋ ಗತ್ವೋತ್ತರಾಂ ದಿಶಮ್ ।
ವಿಜಿತ್ಯ ನವವರ್ಷಾಂಶ್ಚ ಸಪುರಾಂಶ್ಚ ಸಪರ್ವತಾನ್ ॥೫೧॥

ಜಂಬೂದ್ವೀಪಂ ವಶೇ ಕೃತ್ವಾ ಸರ್ವಂ ತದ್ಭರತರ್ಷಭ ।
ಬಲಾಜ್ಜಿತ್ವಾ ನೃಪಾನ್ ಸರ್ವಾನ್ ಕರೇ ಚ ವಿನಿವೇಶ್ಯ ಚ ॥೫೨॥

ರತ್ನಾನ್ಯಾದಾಯ ಸರ್ವಾಣಿ ಗತ್ವಾ ಚೈವ ಪುನಃ ಪುರೀಮ್ ।
ತತೋ ಜ್ಯೇಷ್ಠಂ ಮಹಾತ್ಮಾನಂ ಧರ್ಮರಾಜಂ ಯುಧಿಷ್ಠಿರಮ್ ।
ರಾಜಸೂಯಂ ಕ್ರತುಶ್ರೇಷ್ಠಂ ಕಾರಯಾಮಾಸ ಭಾರತ ॥೫೩॥

ರಾಜೇಂದ್ರನೇ ಅರ್ಜುನನ ಸಾಹಸಗಳನ್ನು ಇನ್ನೂ ಕೇಳು. ಅವನು ಉತ್ತರದಿಕ್ಕನ್ನು ಗೆದ್ದು ಪಟ್ಟಣಗಳು ಮತ್ತು ಪರ್ವತಗಳಿಂದ ಕೂಡಿದ ನವವರ್ಷಗಳನ್ನು ಗೆದ್ದು ಸಮಸ್ತವಾದ ಜಂಬೂದ್ವೀಪವನ್ನು ವಶಪಡಿಸಿಕೊಂಡು ತನ್ನ ಬಲದಿಂದ ಎಲ್ಲಾ ರಾಜರನ್ನೂ ಗೆದ್ದು ಎಲ್ಲರೂ ಕಪ್ಪಕಾಣಿಕೆಯನ್ನು ಕೊಡುವಂತೆಮಾಡಿ ಅವರು ಕೊಟ್ಟ ಎಲ್ಲಾ ರತ್ನಗಳನ್ನೂ ತೆಗೆದುಕೊಂಡು ತನ್ನ ಪುರಕ್ಕೆ ಹಿಂದಿರುಗಿ ತನ್ನ ಅಣ್ಣನಾದ ಮಹಾತ್ಮನಾದ ಧರ್ಮರಾಜನಿಂದ ಶ್ರೇಷ್ಠವಾದ ರಾಜಸೂಯಯಾಗವನ್ನು ಮಾಡಿಸಿದನು.

ಸ ತಾನ್ಯನ್ಯಾನಿ ಕರ್ಮಾಣಿ ಕೃತವಾನರ್ಜುನಃ ಪುರಾ ।
ಅರ್ಜುನೇನ ಸಮೋ ವೀರ್ಯೇ ನಾಸ್ತಿ ಲೋಕೇ ಪುಮಾನ್ ಕ್ವಚಿತ್ ॥

ಅರ್ಜುನನು ಹಿಂದೆ ಅಂತಹ ಅನೇಕ ಕರ್ಮಗಳನ್ನು ಮಾಡಿದನು.ಪರಾಕ್ರಮದಲ್ಲಿ ಅರ್ಜುನನಿಗೆ ಸಮನಾದವರು ಲೋಕದಲ್ಲಿ ಯಾರೂ ಇಲ್ಲ.

ದೇವದಾನವಯಕ್ಷಾಶ್ಚ ಪಿಶಾಚೋರಗರಾಕ್ಷಸಾಃ ।
ಭೀಷ್ಮದ್ರೋಣಾದಯಃ ಸರ್ವೇ ಕುರವಶ್ಚ ಮಹಾರಥಾಃ ॥೫೫॥

ಲೋಕೇ ಸರ್ವನೃಪಾಶ್ಚೈವ ವೀರಾಶ್ಚಾನ್ಯೇ ಧನುರ್ಧರಾಃ ।
ಏತೇ ಚಾನ್ಯೇ ಚ ಬಹವಃ ಪರಿವಾರ್ಯ ಮಹೀಪತೇ ।
ಏಕಂ ಪಾರ್ಥಂ ರಣೇ ಯತ್ತಾಃ ಪ್ರತಿಯೋದ್ಧುಂ ನ ಶಕ್ನುಯುಃ ॥೫೬॥

ದೇವತೆಗಳು ದಾನವರು ಯಕ್ಷರು ಪಿಶಾಚಿಗಳು ಉರಗಗಳು ರಾಕ್ಷಸರು ಮಹಾರಥರಾದ ಎಲ್ಲ ಕುರುಗಳು ಭೀಷ್ಮದ್ರೋಣಾದಿಗಳು ಲೋಕದಲ್ಲಿರುವ ಎಲ್ಲ ರಾಜರೂ ಇನ್ನೂ ಬೇರೆ ಧನುರ್ಧಾರಿಗಳಾದ ವೀರರು, ಎಲೈ ರಾಜನೇ! ಈ ಅನೇಕ ಜನರು ಸುತ್ತುವರೆದರೂ ಒಬ್ಬ ಪಾರ್ಥನ ಜೊತೆಯಲ್ಲಿ ಯುದ್ಧಮಾಡಲು ಸಮರ್ಥರಾಗುವುದಿಲ್ಲ.

ಅಹಂ ಹಿ ನಿತ್ಯಂ ಕೌರವ್ಯ ಫಲ್ಗುನಂ ಪ್ರತಿ ಸತ್ತಮಮ್ ।
ಅನಿಶಂ ಚಿಂತಯಿತ್ವಾ ತಂ ಸಮುದ್ವಿಗ್ನೋಽಸ್ಮಿ ತದ್ಭಯಾತ್ ॥೫೭॥

ಕುರುರಾಜನೇ! ನಾನು ಯಾವಾಗಲೂ ಶ್ರೇಷ್ಠನಾದ ಅರ್ಜುನನನ್ನು ಚಿಂತಿಸಿ ಅವನ ಭಯದಿಂದ ಉದ್ವಿಗ್ನನಾಗಿದ್ದೇನೆ.

ಗೃಹೇ ಗೃಹೇ ಚ ಪಶ್ಯಾಮಿ ತಾತ ಪಾರ್ಥಮಹಂ ಸದಾ ।
ಶರಗಾಂಡೀವಸಂಯುಕ್ತಂ ಪಾಶಹಸ್ತಮಿವಾಂತಕಮ್ ॥೫೮॥

ತಂದೆಯೇ! ನಾನು ಮನೆಮನೆಗಳಲ್ಲಿ ಪಾಶಹಸ್ತನಾಗಿರುವ ಯಮನಂತೆ ಶರಗಾಂಡೀವಯುಕ್ತನಾದ ಅರ್ಜುನನನ್ನು ನೋಡುತ್ತೇನೆ.

ಅಪಿ ಪಾರ್ಥಸಹಸ್ರಾಣಿ ಭೀತಃ ಪಶ್ಯಾಮಿ ಭಾರತ ।
ಪಾರ್ಥಭೂತಮಿದಂ ಸರ್ವಂ ನಗರಂ ಪ್ರತಿಭಾತಿ ಮೇ ॥೫೯॥

ಎಲೈ ಭಾರತನೇ! ನಾನು ಭಯದಿಂದ ಕೂಡಿದವನಾಗಿ ಸಹಸ್ರಸಂಖ್ಯೆಯಲ್ಲಿ ಪಾರ್ಥರನ್ನು ನೋಡುತ್ತೇನೆ. ಈ ನಗರವೆಲ್ಲವೋ ಅರ್ಜುನರಿಂದಲೇ ತುಂಬಿರುವಂತೆ ನನಗೆ ತೋರುತ್ತದೆ.

ಪಾರ್ಥಮೇವ ಹಿ ಪಶ್ಯಾಮಿ ರಹಿತೇ ತಾತ ಭಾರತ ।
ದೃಷ್ಟ್ವಾ ಸ್ವಪ್ನಗತಂ ಪಾರ್ಥಮುದ್ಭ್ರಮಾಮಿ ಹ್ಯಚೇತನಃ ॥೬೦॥

ಎಲೈ ಭಾರತನೇ! ನಾನು ಏಕಾಂತದಲ್ಲಿರುವಾಗ ಅರ್ಜುನನೇ ಕಾಣುತ್ತಾನೆ. ನಾನು ಸ್ವಪ್ನದಲ್ಲಿ ಅರ್ಜುನನನ್ನು ನೋಡಿದರೂ ಹೆದರಿ ಪ್ರಜ್ಞಾಶೂನ್ಯನಾಗುತ್ತೇನೆ.

ಅಕಾರಾದೀನಿ ನಾಮಾನಿ ಅರ್ಜುನತ್ರಸ್ತಚೇತಸಃ ।
ಅಶ್ವಾಶ್ಚಾರ್ಥಾ ಹ್ಯಜಾಶ್ಚೈವ ತ್ರಾಸಂ ಸಂಜನಯಂತಿ ಮೇ ॥೬೧॥

ಅಕಾರದಿಂದ ಪ್ರಾರಂಭವಾಗುವ ಅಶ್ವ ಅರ್ಥ ಅಜ ಮೊದಲಾದ ಶಬ್ದಗಳೆಲ್ಲವೂ ನನಗೆ ಭಯವನ್ನು ಉಂಟುಮಾಡುತ್ತವೆ.

ನಾಸ್ತಿ ಪಾರ್ಥಾದೃತೇ ತಾತ ಪರವೀರಾದ್ ಭಯಂ ಮಮ ।
ಪ್ರಹ್ಲಾದಂ ವಾ ಬಲಿಂ ವಾऽಪಿ ಹನ್ಯಾದ್ಧಿ ವಿಜಯೋ ರಣೇ ॥೬೨॥

ತಂದೆಯೇ! ಅರ್ಜುನನನ್ನು ಬಿಟ್ಟು ನನಗೆ ಇನ್ನಾವ ಶತ್ರುವೀರರಿಂದಲೂ ಭಯವಿಲ್ಲ. ಅರ್ಜುನನು ಯುದ್ಧದಲ್ಲಿ ಪ್ರಹ್ಲಾದನನ್ನೇ ಆಗಲಿ ಅಥವಾ ಬಲಿಯನ್ನೇ ಆಗಲಿ ಕೊಂದಾನು.

ತಸ್ಮಾತ್ ತೇನ ಮಹಾರಾಜ ಯುದ್ಧಮಸ್ಮಜ್ಜನಕ್ಷಯಮ್ ।
ಅಹಂ ತಸ್ಯ ಪ್ರಭಾವಜ್ಞೋ ನಿತ್ಯಂ ದುಃಖಂ ವಹಾಮಿ ಚ ॥೬೩॥

ಮಹಾರಾಜನೇ! ಅದ್ದರಿಂದ ಅವನ ಜೊತೆಯಲ್ಲಿ ಯುದ್ಧವು ನಮ್ಮ ಜನಗಳನಾಶಕ್ಕೆ ಕಾರಣವಾಗುತ್ತದೆ. ಅವನ ಪ್ರಭಾವವನ್ನು ತಿಳಿದ ನಾನು ನಿತ್ಯವೂ ದುಃಖವನ್ನು ಧರಿಸಿದ್ದೇನೆ.

ಪುರಾ ಹಿ ದಂಡಕಾರಣ್ಯೇ ಮಾರೀಚಸ್ಯ ಯಥಾ ಭಯಮ್ ।
ಭವೇದ್ರಾಮೇ ಮಹಾವೀರ್ಯೇ ತಥಾ ಪಾರ್ಥೇ ಭಯಂ ಮಮ ॥

ಹಿಂದೆ ದಂಡಕಾರಣ್ಯದಲ್ಲಿ ಮಾರೀಚನು ಹೇಗೆ ಮಹಾವೀರ್ಯನಾದ ರಾಮನಿಗೆ ಹೆದರಿದನೋ ಹಾಗೆ ನಾನು ಅರ್ಜುನನಿಗೆ ಹೆದರುತ್ತೇನೆ.

ಧೃತರಾಷ್ಟ್ರಃ

ಜಾನಾಮ್ಯೇವ ಮಹದ್ವೀರ್ಯಂ ಜಿಷ್ಣೋರೇತದ್ ದುರಾಸದಮ್ ।
ತಾತ ವೀರಸ್ಯ ಪಾರ್ಥಸ್ಯ ಮಾ ಕಾರ್ಷೀಸ್ತ್ವಂ ತು ವಿಪ್ರಿಯಮ್ ।
ದ್ಯೂತಂ ವಾ ಶಸ್ತ್ರಯುದ್ಧಂ ವಾ ದುರ್ವಾಕ್ಯಂ ವಾ ಕದಾಚನ ॥೬೫॥

ಪ್ರೀತಿಪಾತ್ರನೇ! ನಾನು ದುರಾಸದನಾದ ಅರ್ಜುನನ ಈ ಮಹಾಪರಾಕ್ರಮವನ್ನು ತಿಳಿದೇ ಇದ್ದೇನೆ. ನೀನಾದರೋ ವೀರನಾದ ಪಾರ್ಥನಿಗೆ ಅಪ್ರಿಯವಾದುದನ್ನು ಏನನ್ನೂ ಮಾಡಬೇಡ. ದ್ಯೂತವನ್ನಾಗಲೀ ಶಸ್ತ್ರಯುದ್ಧವನ್ನಾಗಲೀ ಅಥವಾ ದುರ್ವಾಕ್ಯ ಪ್ರಯೋಗವನ್ನಾಗಲೀ ಎಂದೂ ಮಾಡಬೇಡ.

ಏತೇಷ್ವೇವಂ ಕೃತೇ ತಸ್ಯ ವಿಗ್ರಹಶ್ಚೈವ ವೋ ಭವೇತ್ ।
ತಸ್ಮಾತ್ ತ್ವಂ ಪುತ್ರ ಪಾರ್ಥೇನ ನಿತ್ಯಂ ಸ್ನೇಹೇನ ವರ್ತಯ ॥೬೬॥

ಇವುಗಳಲ್ಲಿ ಅವನಿಗೆ ಯಾವುದನ್ನಾದರೂ ಮಾಡಿದರೆ ನಿನಗೆ ನಿಶ್ಚಿತವಾಗಿ ಅವರ ವಿರೋಧವು ಉಂಟಾಗುವುದು. ಪುತ್ರನೇ! ಆದುದರಿಂದ ನೀನು ಪಾರ್ಥನ ಜೊತೆಯಲ್ಲಿ ಯಾವಾಗಲೂ ಸ್ನೇಹದಿಂದಿರು.

ಯಶ್ಚ ಪಾರ್ಥೇನ ಸಂಬಂಧಾದ್ ವರ್ತತೇ ಚ ನರೋ ಭುವಿ ।
ತಸ್ಯ ನಾಸ್ತಿ ಭಯಂ ಕಿಂಚಿತ್ ತ್ರಿಷು ಲೋಕೇಷು ಭಾರತ ।
ತಸ್ಮಾತ್ ತ್ವಂ ಜಿಷ್ಣುನಾ ವತ್ಸ ನಿತ್ಯಂ ಸ್ನೇಹೇನ ವರ್ತಯ ॥೬೭॥

ಎಲೈ ಭಾರತನೇ! ಭೂಮಿಯಲ್ಲಿರುವ ಯಾವನು ಅರ್ಜುನನ ಜೊತೆಯಲ್ಲಿ ಸ್ನೇಹಸಂಬಂಧವನ್ನು ಹೊಂದಿರುತ್ತಾನೆಯೋ ಅವನಿಗೆ ಮೂರುಲೋಕಗಳಿಲ್ಲಿಯೂ ಯಾವ ಭಯವೂ ಇಲ್ಲ. ವತ್ಸನೇ! ಆದ್ದರಿಂದ ನೀನು ಅರ್ಜುನನ ಜೊತೆಯಲ್ಲಿ ಸ್ನೇಹದಿಂದಿರು.

ದುರ್ಯೋಧನಃ

ದ್ಯೂತೇ ಪಾರ್ಥಸ್ಯ ಕೌರವ್ಯ ಮಾಯಯಾ ನಿಕೃತಿಃ ಕೃತಾ ।
ತಸ್ಮಾದ್ಧಿ ತಂ ಜಹಿ ಸದಾ ತನ್ನೋಪಾಯೇನ ನೋ ಭವೇತ್ ॥೬೮॥

ಕುರುರಾಜನೇ! ದ್ಯೂತದಲ್ಲಿ ಅರ್ಜುನನಿಗೆ ಕಪಟವನ್ನು ಆಶ್ರಯಿಸಿ ಮೋಸಮಾಡಿದ್ದಾಯಿತು. ಅವನನ್ನು ಆ ಉಪಾಯದಿಂದಲೇ ಗೆಲ್ಲಬೇಕು. ಇನ್ನು ಬೇರೆಯಾವ ಉಪಾಯದಿಂದಲೂ ಸಾಧ್ಯವಿಲ್ಲ.

ಧೃತರಾಷ್ಟ್ರಃ

ಉಪಾಯಶ್ಚ ನ ಕರ್ತವ್ಯಃ ಪಾಂಡವಾನ್ ಪ್ರತಿ ಭಾರತ ।
ಪಾರ್ಥಾನ್ ಪ್ರತಿ ಪುರಾ ವತ್ಸ ಬಹೂಪಾಯಾಃ ಕೃತಾಸ್ತ್ವಯಾ ।
ತಾನುಪಾಯಾನ್ ಹಿ ಕೌಂತೇಯಾ ಬಹುಶೋ ವ್ಯತಿಚಕ್ರಮುಃ ॥೬೯॥

ಭಾರತನೇ! ಪಾಂಡವರನ್ನು ಕುರಿತು ಅಂತಹ ಯಾವ ಉಪಾಯವನ್ನು ಮಾಡಬೇಡ. ವತ್ಸನೇ! ನೀನು ಹಿಂದೆ ಪಾಂಡವರ ವಿರುದ್ಧವಾಗಿ ಅನೇಕ ಉಪಾಯಗಳನ್ನು ಮಾಡಿದ್ದೆ. ಕುಂತಿಯ ಪುತ್ರರಾದ ಅವರು ಆ ಎಲ್ಲಾ ಉಪಾಯಗಳನ್ನು ಮೀರಿ ನಿಂತರು.

ತಸ್ಮಾದ್ಧಿತಂ ಜೀವಿತಾಯ ನಃ ಕುಲಸ್ಯ ಜನಸ್ಯ ಚ ।
ತ್ವಂ ಚಿಕೀರ್ಷಸಿ ಚೇದ್ವತ್ಸ ಸಮಿತ್ರಃ ಸಹಬಾಂಧವಃ ।
ಸಭ್ರಾತೃಕಸ್ತ್ವಂ ಪಾರ್ಥೇನ ನಿತ್ಯಂ ಸ್ನೇಹೇನ ವರ್ತಯ ॥೭೦॥

ಆದ್ದರಿಂದ ವತ್ಸನೇ! ನೀನು ನಮ್ಮ ಕುಲಕ್ಕೆ ಮತ್ತು ಜನಗಳಿಗೆ ಜೀವನವನ್ನು ಕೊಡಲು ಹಿತವನ್ನು ಮಾಡಲು ಬಯಸುವುದಾದರೆ ಮಿತ್ರರಿಂದಲೂ ಬಾಂಧವರಿಂದಲೂ, ತಮ್ಮಂದಿರಿಂದಲೂ ಕೂಡಿದವನಾಗಿ ನಿತ್ಯವೂ ಅರ್ಜುನನ ಜೊತೆಯಲ್ಲಿ ಸ್ನೇಹದಿಂದಿರು.

ವೈಶಂಪಾಯನಃ

ಧೃತರಾಷ್ಟ್ರವಚಃ ಶ್ರುತ್ವಾ ರಾಜಾ ದುರ್ಯೋಧನಸ್ತದಾ ।
ಚಿಂತಯಿತ್ವಾ ಮುಹೂರ್ತಂ ತು ವಿಧಿನಾ ಚೋದಿತೋಽಬ್ರವೀತ್ ॥

ಧೃತರಾಷ್ಟ್ರನ ಮಾತುಗಳನ್ನು ಕೇಳಿದ ರಾಜನಾದ ದುರ್ಯೋಧನನು ಒಂದು ಮುಹೂರ್ತಕಾಲ ಚಿಂತಿಸಿ ವಿಧಿಯಿಂದ (ಚೋದಿತನಾಗಿ) ಪ್ರೇರಿತನಾಗಿ ಮಾತನಾಡಿದನು.

ದುರ್ಯೋಧನಃ

ನ ತ್ವಯೀದಂ ಶ್ರುತಂ ರಾಜನ್ ಯಜ್ಜಗಾದ ಬೃಹಸ್ಪತಿಃ ।
ಶಕ್ರಸ್ಯ ನೀತಿಂ ಪ್ರವದನ್ ವಿದ್ವಾನ್ ದೇವಪುರೋಹಿತಃ ॥೭೨॥

ರಾಜನೇ! ಇಂದ್ರನಿಗೆ ರೀತಿಯನ್ನು ಉಪದೇಶಿಸುತ್ತಾ ದೇವಪುರೋಹಿತರಾದ ಮೇಧಾವಿಗಳಾದ ಬೃಹಸ್ಪತ್ಯಾಚಾರ್ಯರು ಹೇಳಿದುದನ್ನು ನೀನು ಕೇಳಿಲ್ಲವೆ?

ಸರ್ವೋಪಾಯೈರ್ನಿಹಂತವ್ಯಾಃ ಶತ್ರವಃ ಶತ್ರುಕರ್ಶನ ।
ಪುರಾ ಯುದ್ಧಾದ್ ಬಲಾದ್ವಾಽಪಿ ಪ್ರಕುರ್ವಂತಿ ಯಥಾಹಿತಮ್ ॥೭೩॥

ಎಲೈ ಶತ್ರುಕರ್ಶನನೇ! ಯುದ್ಧವನ್ನು ಮಾಡುವುದಕ್ಕಿಂತ ಮುಂಚೆಯೇ ನಮ್ಮ ಬಲದಿಂದ ಶತ್ರುಗಳು ತಮ್ಮ ಹಿತವನ್ನು ಸಾಧಿಸಿಕೊಳ್ಳಲಾಗದಂತೆ ಎಲ್ಲಾ ಉಪಾಯಗಳಿಂದಲೂ ಅವರನ್ನು ಕೊಲ್ಲಬೇಕು.

ತೇ ವಯಂ ಪಾಂಡವಧನೈಃ ಸರ್ವಾನ್ ಸಂಪೂಜ್ಯ ಪಾರ್ಥಿವಾನ್ ।
ಯದಿ ತಾನ್ ಯೋಧಯಿಷ್ಯಾಮಃ ಕಿಂ ವಾ ನಃ ಪರಿಹಾಸ್ಯತಿ ॥೭೪॥

ಅಂತಹ ನಾವು ಪಾಂಡವರ ಸಂಪತ್ತಿನಿಂದ ಎಲ್ಲ ರಾಜರನ್ನು ಸತ್ಕರಿಸಿ ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಿದರೆ ನಮಗೆ ಏನು ನಷ್ಟವಾಗುವುದು?

ಅಹೀನಾಶೀವಿಷಾನ್ ಕ್ರುದ್ಧಾನ್ ದಂಶಾಯ ಸಮುಪಸ್ಥಿತಾನ್ ।
ಬದ್ಧ್ವಾ ಕಂಠೇ ಚ ಪೃಷ್ಠೇ ಚ ಕಃ ಸಮುತ್ಸ್ರಷ್ಟುಮರ್ಹತಿ ॥೭೫॥

ಕೋಪಗೊಂಡ ಮಹಾವಿಷಪೂರಿತವಾದ ಕಚ್ಚಲು ಉದ್ಯುಕ್ತವಾದ ಸರ್ಪಗಳನ್ನು ಕಂಠದಲ್ಲಿಯೂ ಬೆನ್ನಿನಲ್ಲಿಯೂ ಕಟ್ಟಿಕೊಂಡು ಯಾರು ಅವುಗಳನ್ನು ಸುಮ್ಮನೆ ಬಿಡಲು ಸಾಧ್ಯ ?

ಆತ್ತಶಸ್ತ್ರಾ ರಥಗತಾಃ ಕುಪಿತಾಸ್ತಾತ ಪಾಂಡವಾಃ ।
ನಿಶ್ಶೇಷಾನ್ ನಃ ಕರಿಷ್ಯಂತಿ ಕ್ರುದ್ಧಾ ಹ್ಯಾಶೀವಿಷಾ ಯಥಾ ॥೭೬॥

ಎಲೈ ತಂದೆಯೇ! ಶಸ್ತ್ರಗಳನ್ನು ಹಿಡಿದ ರಥಗತರಾದ ಕುಪಿತರಾದ ಪಾಂಡವರು ಕ್ರುದ್ಧ ಸರ್ಪಗಳಂತೆ ನಮ್ಮನ್ನು ನಿಶ್ಶೇಷಗೊಳಿಸುವರು.

ಸನ್ನದ್ಧೋ ಹ್ಯರ್ಜುನೋ ಯಾತೋ ವಿವೃತ್ಯ ಪರಮೇಷುಧೀಃ ।
ಗಾಂಡೀವಂ ಮುಹುರಾದತ್ತೇ ನಿಶಶ್ವಾಸ ನರಾಧಿಪ ।
ಸರಥಂ ಯೋಜಯಿತ್ವಾ ತು ನಿರ್ಯಾತ ಇತಿ ನಃ ಶ್ರುತಮ್ ॥೭೭॥

ಎಲೈ ನರಾಧಿಪನೇ! ಸನ್ನದ್ಧನಾದ ಅರ್ಜುನನು ತನ್ನ ಬತ್ತಳಿಕೆಗಳನ್ನು ತೆಗೆದು ಗಾಂಡೀವವನ್ನು ಪುನಃ ಪುನಃ ಕೈಯಲ್ಲಿ ಹಿಡಿದು ನಿಟ್ಟುಸುರು ಬಿಡುತ್ತಾ ರಥವನ್ನು ಹೂಡಿ ನಡೆದನೆಂದು ನಾವು ಕೇಳಿದ್ದೇವೆ.

ನಕುಲಃ ಖಡ್ಗಮಾದಾಯ ಚರ್ಮ ಚಾಪ್ಯಷ್ಟಚಂದ್ರಕಮ್ ।
ಸಹದೇವಶ್ಚ ರಾಜಾ ಚ ಚಕ್ರುರಾಕಾರಮಿಂಗಿತೈಃ ॥೭೮॥

ನಕುಲನು ಅಷ್ಟ ಚಂದ್ರವಿರುವ ಚರ್ಮವನ್ನು ಮತ್ತು ಖಡ್ಗವನ್ನು ಹಿಡಿದು (ಹೊರಟನೆಂದು ಕೇಳಿದ್ದೇವೆ.) ನಕುಲ ಸಹದೇವರು ತಮ್ಮ ಆಕಾರದಿಂದಲೇ ತಮ್ಮ ಮನಸ್ಸಿನ ಅಭಿಪ್ರಾಯವನ್ನು ಸೂಚಿಸಿದರು.

ತೇ ತ್ವಾಸ್ಥಾಯ ರಥಾನ್ ಸರ್ವೇ ಬಹುಶಸ್ತ್ರಪರಿಗ್ರಹಾಃ ।
ಅಭಿಘ್ನಂತೋ ರಥಾನ್ ರಾಜನ್ ಸೇನಾಯೋಗಾಯ ನಿರ್ಯಯುಃ ॥

ಎಲೈ ರಾಜನೇ! ಬಹುಶಸ್ತ್ರಗಳನ್ನು ಹೊಂದಿದ್ದ ಅವರೆಲ್ಲರೂ ರಥಗಳನ್ನು ಏರಿ ರಥಗಳನ್ನು ಓಡಿಸುತ್ತಾ ಸೈನ್ಯವನ್ನು ಕೂಡಿಸುವುದಕ್ಕಾಗಿಯೇ ಹೊರಟಿದ್ದಾರೆ.

ನ ಕ್ಷಮಂತೇ ತಥಾಸ್ಮಾಭಿಃ ಜಾತು ವಿಪ್ರಕೃತಾಸ್ತು ತೇ ।
ದ್ರೌಪದ್ಯಾಸ್ತು ಪರಿಕ್ಲೇಶಂ ಕಸ್ತೇಷಾಂ ಕ್ಷಂತುಮರ್ಹತಿ ॥೮೦॥

ನಮ್ಮಿಂದ ಅವಮಾನಾದಿಗಳಿಗೆ ಒಳಗಾದ ಅವರು ಎಂದೂ ನಮ್ಮನ್ನು ಕ್ಷಮಿಸುವುದಿಲ್ಲ. ಅವರಲ್ಲಿ ಯಾವನು ದ್ರೌಪದಿಯ ಕ್ಲೇಶವನ್ನು ಸಹಿಸುತ್ತಾನೆ?

ಪುನರ್ದೀವ್ಯಾಮ ಭದ್ರಂ ತೇ ವನವಾಸಾಯ ಪಾಂಡವೈಃ ।
ಏವಮೇತಾನ್ ವಶೇ ಕರ್ತುಂ ಶಕ್ಷ್ಯಾಮೋ ಭರತರ್ಷಭ ॥೮೧॥

ಭರತರ್ಷಭನೇ! ನಿನಗೆ ಮಂಗಳವಾಲಿ. ವನವಾಸವನ್ನು ಪಣವಾಗಿಟ್ಟು ನಾವು ಪಾಂಡವರ ಜೊತೆಯಲ್ಲಿ ಪುನಃ ದ್ಯೂತವನ್ನು ಆಡೋಣ. ಈ ರೀತಿಯಲ್ಲಿ ಮಾತ್ರ ನಾವು ಅವರನ್ನು ವಶದಲ್ಲಿ ಇಟ್ಟುಕೊಳ್ಳಲು ಸಮರ್ಥರಾಗುವೆವು.

ತೇ ವಾ ದ್ವಾದಶ ವರ್ಷಾಣಿ ವಯಂ ವಾ ದ್ಯೂತನಿರ್ಜಿತಾಃ ।
ಪ್ರವಿಶೇಮ ಮಹಾರಣ್ಯಂ ರೌರವಾಜಿನವಾಸಸಃ ॥೮೨॥

ಅವರಾಗಲೀ ಅಥವಾ ನಾವಾಗಲೀ ದ್ಯೂತದಲ್ಲಿ ನಿರ್ಜಿತರಾದರೆ ರೌರವಾಜಿನಗಳನ್ನು ಧರಿಸಿ ಹನ್ನೆರಡು ವರ್ಷಗಳ ಕಾಲ ದೊಡ್ಡ ಅರಣ್ಯವನ್ನು ಪ್ರವೇಶಿಸೋಣ.

ತ್ರಯೋದಶಂ ಚ ಸ್ವಜನೈರಜ್ಞಾತಾಃ ಪರಿವತ್ಸರಮ್ ।
ಜ್ಞಾತಾಶ್ಚ ಪುನರನ್ಯಾನಿ ವನೇ ವರ್ಷಾಣಿ ದ್ವಾದಶ ।
ನಿವಸೇಮ ವಯಂ ತೇ ವಾ ತಥಾ ದ್ಯೂತಂ ಪ್ರವರ್ತತಾಮ್ ।
ಅಜ್ಞಾತಸಾತ್ ಪುನರ್ದ್ಯೂತಮಿದಂ ಕುರ್ವಂತು ಪಾಂಡವಾಃ ॥೮೩॥

ಹದಿಮೂರನೆಯ ವರ್ಷ ಯಾವ ಸ್ವಜನರಿಗೂ ಗೊತ್ತಾಗದಂತೆ ಅಜ್ಞಾತವಾಸವನ್ನು ಮಾಡಬೇಕು. ಆ ಸಂದರ್ಭದಲ್ಲಿ ಯಾರಿಂದಲಾದರೂ ಜ್ಞಾತವಾದರೆ ಪುನಃ ಹನ್ನೆರಡುವರ್ಷ ವನವಾಸವನ್ನೂ ಒಂದು ವರ್ಷದ ಅಜ್ಞಾತವಾಸವನ್ನೂ ಮಾಡಬೇಕೆಂಬ ಪಣವನ್ನು ಇಟ್ಟು, ಪಾಂಡವರ ಜೊತೆಯಲ್ಲಿ ಪುನಃ ದ್ಯೂತವು ನಡೆಯಲಿ.

ಏತತ್ ಕೃತ್ಯತಮಂ ರಾಜನ್ನಸ್ಮಾಕಂ ಭರತರ್ಷಭ ।
ಅಯಂ ಹಿ ಶಕುನಿರ್ವೇದ ತದ್ವಿಧಾಮಕ್ಷಸಂವಿದಮ್ । ॥೮೪॥

ಭರತರ್ಷಭನೇ! ರಾಜನೇ! ಇದು ನಾವು ಅತ್ಯಂತ ಅವಶ್ಯಕವಾಗಿ ಮಾಡಬೇಕಾದ ಕಾರ್ಯ. ಈ ಸಭೆಯಲ್ಲಿ ಈ ಶಕುನಿಯು ಅಂತಹ ಅಕ್ಷಜ್ಞಾನವನ್ನು ಪಡೆದಿದ್ದಾನೆ.

ದೃಢಮೂಲಾ ವಯಂ ರಾಜ್ಯೇ ಮಿತ್ರಾಣಿ ಪರಿಗೃಹ್ಯ ಚ ।
ಸಾರವದ್ವಿಪುಲಂ ಸೈನ್ಯಂ ಸತೃತ್ಯ ಸುದುರಾಸದಮ್ ॥೮೫॥

ಏತೇ ತ್ರಯೋದಶೇ ವರ್ಷೇ ಪಾರಯಿಷ್ಯಂತಿ ಚೇದ್ ವ್ರತಮ್ ।
ಜೇಷ್ಯಾಮಸ್ತಾನ್ ವಯಂ ರಾಜನ್ ರೋಚತಾಂ ತೇ ಪರಂತಪ ॥೮೬॥

ನಾವು ರಾಜ್ಯದಲ್ಲಿ ಚೆನ್ನಾಗಿ ಬೇರೂರಿದ ಮಿತ್ರರನ್ನು ಸಂಪಾದಿಸಿ ದುರಾಸದವಾದ ಬಲಿಷ್ಠವಾದ ದೊಡ್ಡ ಸೈನ್ಯವನ್ನು ಸತ್ಕರಿಸಿ ಈ ಪಾಂಡವರು ಏನಾದರೂ ಹದಿಮೂರುವರ್ಷದ ವ್ರತವನ್ನು ಸಮಾಪ್ತಿಗೊಳಿಸಿದ್ದೇ ಆದರೆ ಅವರನ್ನು ಯುದ್ಧದಲ್ಲಿ ಗೆಲ್ಲೋಣ. ಪರಂತಪನಾದ ರಾಜನೇ! ಇದನ್ನು ನೀನು ಅಂಗೀಕರಿಸು.

ಧೃತರಾಷ್ಟ್ರಃ

ತೂರ್ಣಂ ಪ್ರತ್ಯಾನಯಸ್ವೈತಾನಿಂದ್ರಪ್ರಸ್ಥಗತಾನಪಿ ।
ಆಗಚ್ಛಂತು ಪುನರ್ದ್ಯೂತಮಿದಂ ಕುರ್ವಂತು ಪಾಂಡವಾಃ ॥೮೭॥

ಪಾಂಡವರು ಇಂದ್ರಪ್ರಸ್ಥವನ್ನು ತಲುಪಿದರೂ ಸಹ (ಅವರು ದಾರಿಯಲ್ಲೇ ಇದ್ದರೂ ಸಹ) ಬೇಗ ಹಿಂದಿರುಗುವಂತೆ ಮಾಡು. ಪಾಂಡವರು ಹಿಂದಿರುಗಿ ಬಂದು ಪುನಃ ಈ ದ್ಯೂತವನ್ನು ಆಡಲಿ.

ವೈಶಂಪಾಯನಃ

ತತೋ ದ್ರೋಣಃ ಸೋಮದತ್ತೋ ಬಾಹ್ಲೀಕಶ್ಚೈವ ಗೌತಮಃ ।
ವಿದುರೋ ದ್ರೋಣಪುತ್ರಶ್ಚ ವೈಶ್ಯಾಪುತ್ರಶ್ಚ ವೀರ್ಯವಾನ್ ॥೮೮॥

ಭೂರಿಶ್ರವಾಃ ಶಾಂತನವೋ ವಿಕರ್ಣಶ್ಚ ಮಹಾರಥಃ ।
ಮಾ ದ್ಯೂತಮಿತ್ಯಭಾಷಂತ ಶಮೋऽಸ್ತ್ವಿತಿ ಚ ಸರ್ವಶಃ ॥೮೯॥

ಆಗ ದ್ರೋಣ ಸೋಮದತ್ತ ಬಾಹ್ಲೀಕ ಕೃಪ ವಿದುರ ಅಶ್ವತ್ಥಾಮ ಪರಾಕ್ರಮಿಯಾದ ವೈಶ್ಯಪುತ್ರನಾದ ಯುಯುತ್ಸು ಭೂರಿಶ್ರವ ಭೀಷ್ಮ ಮಹಾರಥನಾದ ವಿಕರ್ಣ ಎಲ್ಲರೂ ದ್ಯೂತವು ಬೇಡ ಎಲ್ಲರೂ ಶಾಂತಿಯಿಂದ ಇರಲಿ ಎಂದು ಹೇಳಿದರು.

ಅಕಾಮಾನಾಂ ಚ ಸರ್ವೇಷಾಂ ಸುಹೃದಾಮರ್ಥದರ್ಶಿನಾಮ್ ।
ಅಕರೋತ್ ಪಾಂಡವಾಹ್ವಾನಂ ಧೃತರಾಷ್ಟ್ರಃ ಸುತಪ್ರಿಯಃ ॥೯೦॥

ಆದರೆ ಸಂತಪ್ರಿಯನಾದ ಧೃತರಾಷ್ಟ್ರನು ಹಿತೈಷಿಗಳಾದ ದೀರ್ಘದರ್ಶಿಗಳಾದ ಎಲ್ಲಾ ಸುಹೃಜ್ಜನರ ಇಚ್ಛೆಗೆ ವಿರುದ್ಧವಾಗಿ ಪಾಂಡವರ ಆಹ್ವಾನವನ್ನು ಮಾಡಿದನು.

ಅಥಾಬ್ರವೀನ್ಮಹಾರಾಜ ಧೃತರಾಷ್ಟ್ರಂ ಜನೇಶ್ವರಮ್ ।
ಪುತ್ರಹಾರ್ದಾದ್ಧರ್ಮಶೀಲಾ ಗಾಂಧಾರೀ ಶೋಕಕರ್ಶಿತಾ ॥೯೧॥

ಮಹಾರಾಜನೇ! ಆಗ ದುಃಖತಪ್ತಳಾದ ಗಾಂಧಾರಿಯು ಪುತ್ರನ ಮೇಲಿನ ಮಮತೆಯನ್ನು ತೊರೆದು ರಾಜನಾದ ಧೃತರಾಷ್ಟ್ರನನ್ನು ಕುರಿತು ಹೇಳಿದಳು.

ಜಾತೇ ದುರ್ಯೋಧನೇ ಕ್ಷತ್ತಾ ಮಹಾಮತಿರಭಾಷತ ।
ನೀಯತಾಂ ಪರಲೋಕಾಯ ಸಾಧ್ವಯಂ ಕುಲಪಾಂಸನಃ ॥೯೨॥

ದುರ್ಯೋಧನನು ಜನಿಸಿದಾಗ ಮಹಾಮತಿಯಾದ ವಿದುರನು ಈ ಕುಲನಾಶಕನಾದ ಪುತ್ರನನ್ನು ಪರಲೋಕಕ್ಕೆ ಕಳುಹಿಸು ಎಂದು ಹೇಳಿದನು.

ವ್ಯನದಜ್ಜಾತಮಾತ್ರೋ ಹಿ ಗೋಮಾಯುರಿವ ಭಾರತ ।
ಅಂತೋ ನೂನಂ ಕುಲಸ್ಯಾಸ್ಯ ಕುರವಸ್ತನ್ನಿಬೋಧತ ॥೯೩॥

ಎಲೈ ಭಾರತನೇ! ಇವನು ಹುಟ್ಟಿದ ತಕ್ಷಣ ನರಿಯಂತೆ ಕಿರುಚಿದನು. ಎಲೈ ಕುರುಗಳೇ! ಈ ವಂಶದ ವಿನಾಶವು ಪ್ರಾಪ್ತವಾಗಿದೆಯೆಂದು ತಿಳಿಯಿರಿ.

ಅಬಾಲಾನಾಂ ವಿಶಿಷ್ಟಾನಾಂ ಮಾऽವಮಂಸ್ಥಾ ಮತಿಂ ಪ್ರಭೋ ।
ನೀಯತಾಂ ಪರಲೋಕಾಯ ಸಾಧ್ವಯಂ ಕುಲಪಾಂಸನಃ ।
ಮಾ ಕುಲಸ್ಯ ಕ್ಷಯೇ ಘೋರೇ ಕಾರಣಂ ತ್ವಂ ನರೇಂದ್ರ ಭೂಃ ॥೯೪॥

ಪ್ರಭುವೇ! ವೃದ್ಧರೂ ಧರ್ಮವಿಶಿಷ್ಟರೂ ಆದವರು ಹೇಳಿದ ಮಾತನ್ನು ಮೀರಿ ಅವರನ್ನು ಅವಮಾನಗೊಳಿಸುವುದು ಬೇಡ. ಈ ಕುಲನಾಶಕನನ್ನು ಈಗಲಾದರೂ ಪರಲೋಕಕ್ಕೆ ಕಳುಹಿಸು. ನರೇಂದ್ರನೇ! ಘೋರ ಕುಲನಾಶಕ್ಕೆ ನೀನು ಕಾರಣವಾಗುವುದು ಬೇಡ.

ಬದ್ಧಂ ಸೇತುಂ ಕೋ ನು ಭಿಂದ್ಯಾದ್ ಧಮೇಚ್ಛಾಂತಂ ಹುತಾಶನಮ್ ।
ಕ್ಷಮೇಧಿತಾನ್ ಪಾಂಡುಪುತ್ರಾನ್ ಕೋಪಯೇತ್ ಕೋ ನು ಭಾರತ ॥೯೫॥

ಕಟ್ಟಿದ ಸೇತುವೆಯನ್ನು ಯಾವನು ಒಡೆಯುತ್ತಾನೆ? ಶಾಂತವಾದ ಅಗ್ನಿಯನ್ನು ಯಾವನು ಪುನಃ ಪುನರುಜ್ಜೀವನಮಾಡುತ್ತಾನೇ ರಾಜನೇ! ಸಹನೆಯಿಂದ ಅಭಿವೃದ್ಧಿಯನ್ನು ಹೊಂದುತ್ತಿರುವ ಪಾಂಡುಪುತ್ರರನ್ನು ಯಾವನು ಕೋಪಗೊಳ್ಳುವಂತೆ ಮಾಡುತ್ತಾನೆ?

ಸ್ಮರಂತಂ ತ್ವಾಮಾಜಮೀಢಂ ಸ್ಮಾರಯಿಷ್ಯಾಮ್ಯಹಂ ಪುನಃ ।
ನ ಶಾಸ್ತ್ರಂ ಶಾಸ್ತಿ ದುರ್ಬುದ್ಧಿಂ ಶ್ರೇಯಸೇ ವೇತರಾಯ ವಾ ॥೯೬॥

ಆಜಮೀಢನೇ! ನಿನ್ನ ನೆನಪಿನಲ್ಲಿ ಇದ್ದರೂ ಇನ್ನೊಮ್ಮೆ ನಿನಗೆ ಜ್ಞಾಪಿಸುತ್ತಿದ್ದೇನೆ. ದುರ್ಬುದ್ಧಿಯಿಂದ ಕೂಡಿದ ಮನುಷ್ಯನನ್ನು ಶಾಸ್ತ್ರವು ಶ್ರೇಯಸ್ಸಿಗಾಗಲೀ ಅಶ್ರೇಯಸ್ಸಿಗಾಗಲೀ ಶಾಸನಮಾಡುವುದಿಲ್ಲ.

ನ ವೈ ವೃದ್ಧೋ ಬಾಲಮತಿರ್ಭವೇದ್ ರಾಜನ್ ಕಥಂಚನ ।
ತ್ವನ್ನೇತ್ರಾಃ ಸಂತು ತೇ ಪುತ್ರಾ ಮಾ ತ್ವಾಂ ಜೇಷ್ಮುಃ ಪ್ರಹಾಸಿಷುಃ ॥೯೭॥

ರಾಜನೇ! ವೃದ್ಧನಾದವನು ಎಂದೂ ಬಾಲಬುದ್ಧಿಯನ್ನುಹೊಂದಬಾರದು. ನಿನ್ನ ಮಕ್ಕಳೆಲ್ಲರೂ ನಿನ್ನನ್ನೇ ನಾಯಕನನ್ನಾಗಿಹೊಂದಿರಲಿ. ಪಾಂಡವರನ್ನು ವಿರೋಧಿಸಿ ನಾಶವನ್ನು ಹೊಂದಿ ಅವರು ನಿನ್ನನ್ನು ತೊರೆಯವುದು ಬೇಡ.

ಶಮೇನ ಧರ್ಮೇಣ ಪರಸ್ಯ ಬುದ್ಧ್ಯಾ
ಜಾತಾ ಬುದ್ಧಿಃ ಸಾಽಸ್ತು ತೇ ಮಾ ಪ್ರತೀಪಾ ।
ಪ್ರಧ್ವಂಸಿನೀ ಕ್ರೂರಸಮಾಹಿತಾ ಶ್ರೀಃ
ಮೃದುಪ್ರೌಢಾ ಗಚ್ಛತಿ ಪುತ್ರಪೌತ್ರಾನ್ ॥೯೮॥

ಶ್ರಮದಿಂದಲೂ ಧರ್ಮದಿಂದಲೂ ಹಿರಿಯರ ಉಪದೇಶದಿಂದಲೂ ಉಂಟಾದ ಸದ್ಬುದ್ಧಿಯು ನಿನಗಿರಲಿ. ಕುಲನಾಶಕವಾದ ಬುದ್ಧಿಯು ನಿನಗೆ ಇರುವುದು ಬೇಡ. ಕುರುಗಳನ್ನು ಆಶ್ರಯಿಸಿದ ಸಂಪತ್ತು ಅವರನ್ನೇ ನಾಶಗೊಳಿಸುತ್ತದೆ. ಶಾಂತರಾದ ಪುರುಷರು ಸಂಪಾದಿಸಿದ ಐಶ್ವರ್ಯವು ಅವರ ಮಕ್ಕಳನ್ನು ಮೊಮ್ಮಕ್ಕಳನ್ನು ತಲುಪುತ್ತದೆ.

ವೈಶಂಪಾಯನಃ

ಅಥಾಬ್ರವೀನ್ಮಹಾಪ್ರಜ್ಞಾಂ ಗಾಂಧಾರೀಂ ಧರ್ಮಚಾರಿಣೀಮ್ ।
ಅಂತಃ ಕಾಮಂ ಕುಲಸ್ಯಾಸ್ತು ನ ಶಕ್ಷ್ಯಾಮಿ ನಿವರ್ತಿತುಮ್ ॥೯೯॥

ಆಗ ಧೃತರಾಷ್ಟ್ರನು ಧರ್ಮಚಾರಿಣಿಯಾದ ಮಹಾಪ್ರಾಜ್ಞಳಾದ ಗಾಂಧಾರಿಯನ್ನು ಕುರಿತು ಬೇಕಾದರೆ ನನ್ನ ಕುಲವು ನಾಶವಾಗಲಿ ನಾನು ದ್ಯೂತದಿಂದ ಹಿಂದಿರುಗಿಸಲು ಶಕ್ತನಾಗುವುದಿಲ್ಲ ಎಂದು ಹೇಳಿದನು.

ಯಥೇಚ್ಛಂತಿ ತಥೈವಾಸ್ತು ಪ್ರತ್ಯಾಗಚ್ಛಂತು ಪಾಂಡವಾಃ ।
ಪುನರ್ದ್ಯೂತಂ ತು ಕುರ್ವಂತು ಮಾಮಕಾಃ ಪಾಂಡವೈಃ ಸಹ ॥೧೦೦॥

ದುರ್ಯೋಧನಾದಿಗಳು ಹೇಗೆ ಬಯಸುತ್ತಾರೋ ಹಾಗೆಯೇ ಆಗಲಿ. ಪಾಂಡವರು ಹಿಂದಿರುಗಿ ಬರಲಿ. ನನ್ನ ಮಕ್ಕಳು ಪಾಂಡವರ ಜೊತೆಯಲ್ಲಿ ಪುನಃ ದ್ಯೂತವನ್ನು ಆಡಲಿ.

॥ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಚತುರ್ನವತಿತಮೋಧ್ಯಾಯಃ॥
॥ಅನುದ್ಯೂತಪರ್ವಣಿ ದ್ವಿತೀಯೋಧ್ಯಾಯಃ॥೨॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ತೊಂಬತ್ತನಾಲ್ಕನೆಯ ಅಧ್ಯಾಯವು ಮುಗಿಯಿತು.

★★★★★

ತೊಂಬತ್ತೈದನೆಯ ಅಧ್ಯಾಯ

(ಪುನಃ ದ್ಯೂತ. ವನವಾಸ ಅಜ್ಞಾತವಾಸದ ಪಣದಲ್ಲಿ ಧರ್ಮರಾಜನ ಪರಾಜಯ.)

ವೈಶಂಪಾಯನಃ

ತತೋ ವೃದ್ಧಗತಂ ಪಾರ್ಥಂ ಪ್ರಾತಿಕಾಮೀ ಯುಧಿಷ್ಠಿರಮ್ ।
ಉವಾಚ ವಚನಾದ್ರಾಜ್ಞೋ ಧೃತರಾಷ್ಟ್ರಸ್ಯ ಧೀಮತಃ ॥೧॥

ಅನಂತರ ಮೇಧಾವಿಯಾದ ಧೃತರಾಷ್ಟ್ರನ ಮಾತಿನಂತೆ ಪ್ರಾತಿಕಾಮಿಯು ಬಹುದೂರಹೋಗಿದ್ದ ಯುಧಿಷ್ಠಿರನನ್ನು ಸಂಧಿಸಿ ಮಾತನಾಡಿದನು.

ಉಪಾಸ್ತೀರ್ಣಾ ಸಭಾ ರಾಜನ್ಕ್ಷಾನುಪ್ತಾ ತ್ವಾ ಯುಧಿಷ್ಠಿರ ।
ಏಹಿ ಪಾಂಡವ ದೀವ್ಯೇತಿ ಪಿತಾ ತ್ವಾಹ ನರಾಧಿಪಃ ॥೨॥

ಸಭೆಯು ಸಿದ್ಧವಾಗಿ ಪಗಡೆಯ ಹಾಸನ್ನು ಹಾಸಿದೆ. ಪಾಂಡವನೇ ಇಲ್ಲಿಗೆ ಬಂದು ದಾಳಗಳನ್ನು ಉರುಳಿಸಿ ದ್ಯೂತವನ್ನು ಆಡು ಎಂದು ನಿನ್ನ ತಂದೆಯಾದ ರಾಜನು ನಿನಗೆ ಹೇಳಿಕಳುಹಿಸಿದ್ದಾನೆ.

ಯುಧಿಷ್ಠಿರಃ

ಧಾತುರ್ನಿಯೋಗಾದ್ ಭೂತಾನಿ ಪ್ರಾಪ್ನುವಂತಿ ಶುಭಾಶುಭೇ ।
ನ ನಿವೃತ್ತಿಸ್ತಯೋರಸ್ತಿ ದೇವಿತವ್ಯಂ ಪುನರ್ಯದಿ ॥೩॥

ವಿಧಿಯ ನಿಯೋಗದಂತೆ ಪ್ರಾಣಿಗಳಿಗೆ ಶುಭಾಶುಭ ಉಂಟಾಗುತ್ತದೆ. ನಾನು ಪುನಃ ದ್ಯೂತವನ್ನು ಆಡಬೇಕಾಗಿ ಬಂದರೆ ಆ ಶುಭಾಶುಭಗಳಿಗೆ ಪರಿಹಾರವಿಲ್ಲ.

ಅಕ್ಷದ್ಯೂತೇ ಸಮಾಹ್ವಾನಂ ನಿಯೋಗಾತ್ ಸ್ಥವಿರಸ್ಯ ಚ ।
ಜಾನನ್ನಪಿ ಚ ಯತ್ ಕ್ಷುದ್ರಂ ನಾತಿಕ್ರಮಿತುಮುತ್ಸಹೇ ॥೪॥

ವೃದ್ಧನಾದ ರಾಜನು ಆಹ್ವಾನಿಸುತ್ತಿರುವಾಗ ಅಕ್ಷದ್ಯೂತವು ಕ್ಷುದ್ರವೆಂದು ತಿಳಿದಿದ್ದರೂ ಸಹ ನಾನು ರಾಜನ ಆದೇಶವನ್ನು ಮೀರಲಾರೆ.

ವೈಶಂಪಾಯನಃ

ಇತಿ ಬ್ರುವನ್ ನಿವವೃತೇ ಭ್ರಾತೃಭಿಃ ಸಹ ಪಾಂಡವಃ ।
ಜಾನಂಶ್ಚ ಶಕುನೇರ್ಮಾಯಾಂ ಪಾರ್ಥೋ ದ್ಯೂತಮಿಯಾತ್ ಪುನಃ ॥೫॥

ಹೀಗೆ ಹೇಳುತ್ತಾ ಧರ್ಮರಾಜನು ತನ್ನ ತಮ್ಮಂದಿರ ಜೊತೆಯಲ್ಲಿ ಹಿಂದಿರುಗಿದನು. ಶಕುನಿಯ ಮೋಸವನ್ನು ತಿಳಿದಿದ್ದರೂ ಸಹ ಧರ್ಮರಾಜನು ಪುನಃ ದ್ಯೂತಕ್ಕೆ ಹೊರಟನು.

ವಿವಿಶುಸ್ತೇ ಸಭಾಂ ತಾಂ ತು ಪುನರೇವ ಮಹಾರಥಾಃ ।
ವ್ಯಥಯಂತಿ ಸ್ಮ ಚೇತಾಂಸಿ ಸುಹೃದಾಂ ಭರತರ್ಷಭ ॥೬॥

ಎಲೈ ಭರತರ್ಷಭನೇ! ಆ ಮಹಾರಥರೆಲ್ಲರೂ ಪುನಃ ಸಭೆಯನ್ನು ಪ್ರವೇಶಿಸಿದರು. ವಿಶ್ವಾಸವುಳ್ಳವರ ಅವರ ಹಿತೈಷಿಗಳ ಮನಸ್ಸೆಲ್ಲವೂ ದುಃಖದಿಂದ ಕೂಡಿದ್ದಿತು.

ಯಥೋಪಜೋಷಮಾಸೀನಾಃ ಪುನರ್ದ್ಯೂತಪ್ರವೃತ್ತಯೇ ।
ಸರ್ವರಾಜವಿನಾಶಾಯ ದೈವೇನೋಪನಿಪೀಡಿತಾಃ ॥೭॥

ಸರ್ವಕ್ಷತ್ರಿಯರ ವಿನಾಶದ ಸಲುವಾಗಿ ದೈವದಿಂದ ಪ್ರೇರಿಸಲ್ಪಟ್ಟ ಅವರು ಪುನಃ ದ್ಯೂತವನ್ನು ಆಡುವುದಕ್ಕೋಸ್ಕರ ತಮಗೆ ಉಚಿತವಾದ ಆಸನಗಳಲ್ಲಿ ಕುಳಿತರು.

ಶಕುನಿಃ

ಅಮುಂಚತ್ ಸ್ಥವಿರೋ ಯದ್ವೋ ಧನಂ ವಿಜಿತಮೇವ ತತ್ ।
ಮಹಾಗ್ಗಹಂ ಧನಂ ಚೈಕಂ ಶೃಣು ಮೇ ಭರತರ್ಷಭ ॥೮॥

ಭರತರ್ಷಭನೇ! ವೃದ್ಧನಾದ ಧೃತರಾಷ್ಟ್ರನು ನಿಮಗೆ ಏನು ಧನವನ್ನು ಹಿಂದಕ್ಕೆ ಕೊಟ್ಟನೋ ಅವೆಲ್ಲವೂ ನಿಮ್ಮದೇ. ಮಹಾಪಣದ ಇನ್ನೊಂದು ಧನವನ್ನು ಕೇಳು.

ವಯಂ ದ್ವಾದಶ ವರ್ಷಾಣಿ ಯುಷ್ಮಾಭಿರ್ದ್ಯೂತನಿರ್ಜಿತಾಃ ।
ಪ್ರವಿಶೇಮ ಮಹಾರಣ್ಯಂ ರೌರವಾಜಿನವಾಸಸಃ ॥೯॥

ನಾವು ನಿಮ್ಮಿಂದ ದ್ಯೂತದಲ್ಲಿ ನಿರ್ಜಿತರಾದರೆ ರೌರವಾಜಿನಗಳನ್ನು ಧರಿಸಿ ಹನ್ನೆರಡುವರ್ಷಗಳಕಾಲ ಮಹಾರಣ್ಯವನ್ನು ಪ್ರವೇಶಿಸುತ್ತೇನೆ.

ತ್ರಯೋದಶಂ ಚ ಸ್ವಜನೈಃ ಪ್ರಚ್ಛನ್ನಾಃ ಪರಿವತ್ಸರಮ್ ।
ಜ್ಞಾತಾಶ್ಚೇತ್ ಪುನರನ್ಯಾನಿ ವನೇ ವರ್ಷಾಣಿ ದ್ವಾದಶ ॥೧೦॥

ಹದಿಮೂರನೆಯ ವರ್ಷ ಪೂರ್ಣವಾದ ಒಂದು ವರ್ಷದವರೆಗೆ ಸ್ವಜನರಿಗೆ ತಿಳಿಯದಂತೆ ಅಜ್ಞಾತವಾಸವು ಇರುತ್ತವೆ. ಆ ಸಮಯದಲ್ಲಿ ನಮ್ಮನ್ನು ಯಾರಾದರೂ ಗುರುತಿಸಿದರೆ ನಾವು ಪುನಃ ಹನ್ನೆರಡುವರ್ಷಗಳ ಕಾಲ ವನವಾಸವನ್ನು ಮಾಡುತ್ತೇವೆ.

ಅಸ್ಮಾಭಿರ್ವಾ ಜಿತಾ ಯೂಯಂ ವನೇ ವರ್ಷಾಣಿ ದ್ವಾದಶ ।
ವಸಧ್ವಂ ಕೃಷ್ಣಯಾ ಸಾರ್ಧಮಜಿನೈಃ ಪರಿವಾರಿತಾಃ ॥೧೧॥

ಅಥವಾ ನೀವೇ ನಮ್ಮಿಂದ ಜಿತರಾದರೆ ಅಜಿನಗಳನ್ನು ಧರಿಸಿ ದ್ರೌಪದಿಯ ಜೊತೆಯಲ್ಲಿ ಹನ್ನೆರಡುವರ್ಷಗಳಕಾಲ ವನವಾಸವನ್ನು ಮಾಡಿ.

ತ್ರಯೋದಶೇ ಚ ನಿರ್ವೃತ್ತೇ ಪುನರೇವ ಯಥೋಚಿತಮ್ ।
ಸ್ವರಾಜ್ಯಂ ಪ್ರತಿಪತ್ತವ್ಯಮಿತರೈರಥವೇತರೈಃ ॥೧೨॥

ಹದಿಮೂರು ವರ್ಷಗಳು ಕಳೆದ ಮೇಲೆ ನಾವಾಗಲೀ ಅಥವಾ ನೀವಾಗಲೀ ಹಿಂದೆ ಬಂದು ಯಥೋಚಿತವಾದ ರೀತಿಯಲ್ಲಿ ನಮ್ಮನಮ್ಮ ರಾಜ್ಯವನ್ನು ಹೊಂದೋಣ.

ಅನೇನ ವ್ಯವಸಾಯೇನ ಸಹಾಸ್ಮಾಭಿರ್ನರಪೋತ್ತಮ ।
ಅಕ್ಷಾನುಪ್ತ್ವಾ ಪುನರ್ದ್ಯೂತಮೇಹಿ ದೀವ್ಯಸ್ವ ಭಾರತ ॥೧೩॥

ಎಲೈ ಭಾರತನೇ! ನೃಪೋತ್ತಮನೇ! ಈ ನಿರ್ಧಾರದೊಂದಿಗೆ ದಾಳಗಳನ್ನು ಉರುಳಿಸಿ ದ್ಯೂತಕ್ಕೆ ಬಂದು ಪುನಃ ನಮ್ಮ ಜೊತೆಯಲ್ಲಿ ಆಟವಾಡು.

ಅಥ ಸಭ್ಯಾಃ ಸಭಾಮಧ್ಯೇ ಸಮುಚ್ಚ್ರಿತಕರಾಸ್ತಥಾ ।
ಊಚುರುದ್ವಿಗ್ನಮನಸಃ ಸಂವೇಗಾತ್ ಸರ್ವ ಏವ ಹಿ ॥೧೪॥

ಆಗ ಸಭೆಯಲ್ಲಿದ್ದ ಸಭ್ಯರೆಲ್ಲರೂ ತಮ್ಮ ಕೈಗಳನ್ನು ಎತ್ತಿ ಉದ್ವಿಗ್ನವಾದ ಮನಸ್ಸಿನಿಂದ ಮತ್ತು ದುಃಖದಿಂದ ಹೀಗೆ ಹೇಳಿದರು.

ಅಹೋ ಧಿಕ್ ಬಾಂಧವಾನೇತಾನ್ ಬೋಧಯಂತಿ ಮಹದ್ಭಯಮ್ ।
ಬುದ್ಧ್ಯಾऽಬುಧ್ಯಂತ ಬುಧ್ಯಂತೇ ವಯಂ ಚ ಭರತರ್ಷಭಾಃ ॥೧೫॥

ಅಯ್ಯೋ ಈ ಬಾಂಧವರಿಗೆ ಧಿಕ್ಕಾರವಿರಲಿ. ಪಾಂಡವರಿಗೆ ಶಕುನಿ ಮೊದಲಾದವರು ದುರ್ಬುದ್ಧಿಯಿಂದ ಬೋಧಿಸುತ್ತಿದ್ದಾರೆ. ಅದಕ್ಕೂ ಧಿಕ್ಕಾರವಿರಲಿ. ನಾವು ಮತ್ತು ಭರತರ್ಷಭರು ಅವರ ಕುಬುದ್ಧಿಯ ಕೊನೆಯಲ್ಲಿ ಅವರಿಂದ ನೋಡಲ್ಪಟ್ಟೆವು ಇದಕ್ಕಿಂತ ಮೊದಲು ಈ ದುರ್ಜನರಿಂದ ನೋಡಲ್ಪಟ್ಟಿರುವುದಿಲ್ಲ. (ಅಥವಾ- ಈ ದುರ್ವಾಕ್ಯದಫಲಗಳನ್ನು ದುರ್ಯೋಧನಾದಿಗಳು ಹಿಂದೆ ಅನುಭವಿಸಿದ್ದಾರೆ. ಮುಂದೆಯೂ ಅನುಭವಿಸುವವರಿದ್ದಾರೆ. ಆ ದುರ್ಬುದ್ಧಿಯಪರಿಪಾಕದ ಸಮಯದಲ್ಲಿ ನಾವು ಮತ್ತು ಭರತರ್ಷಭರು ಅದನ್ನು ನೋಡುವೆವು ಎಂದು ಇನ್ನೊಂದು ಅರ್ಥ.)

ವೈಶಂಪಾಯನಃ

ಜನಪ್ರವಾದಾನ್ ಸುಬಹೂನ್ ಇತಿ ಶೃಣ್ವನ್ ನರಾಧಿಪಃ ।
ಹ್ರಿಯಾ ಚ ಧರ್ಮಸಂಗಾಚ್ಚ ಪಾರ್ಥೋ ದ್ಯೂತಮಿಯಾತ್ ಪುನಃ ॥

ಜನಗಳ ಇಂತಹವಾದಗಳನ್ನು ಕೇಳುತ್ತಿದ್ದರೂ ಸಹ ಕುಂತಿಯ ಮಗನಾದ ಧರ್ಮರಾಜನು ನಾಚಿಕೆಯಿಂದಲೂ ಮತ್ತು ಧರ್ಮದ ಆಸಕ್ತಿಯಿಂದಲೂ ಪುನಃ ದ್ಯೂತಕ್ಕೆ ಬಂದನು.

ಜಾನನ್ನಪಿ ಮಹಾಬುದ್ಧಿಃ ಪುನರ್ದ್ಯೂತಮವರ್ತಯತ್ ।
ಅಪ್ಯಯಂ ನು ವಿನಾಶಃ ಸ್ಯಾತ್ ಕುರೂಣಾಮಿತಿ ಚಿಂತಯನ್ ॥೧೭॥

ಮಹಾಬುದ್ಧಿಯುಳ್ಳ ಧರ್ಮರಾಜನು ಈ ದ್ಯೂತವು ಎಲ್ಲಕುರುಗಳ ವಿನಾಶಕ್ಕೆ ಕಾರಣವಾಗುವುದೋ ಎಂದು ಚಿಂತಿಸುತ್ತಲೇ ಪುನಃ ದ್ಯೂತವನ್ನು ಜರುಗಿಸಿದರು.

ಯುಧಿಷ್ಠಿರಃ

ಕಥಂ ವೈ ಮದ್ವಿಧೋ ರಾಜಾ ಸ್ವಧರ್ಮಮನುಪಾಲಯನ್ ।
ಆಹೂತೋ ವಿನಿವರ್ತೇತ ದೀವ್ಯಾಮಿ ಶಕುನೇ ತ್ವಯಾ ॥೧೮॥

ನನ್ನಂತಹ ಸ್ವಧರ್ಮವನ್ನು ಪಾಲಿಸುವ ರಾಜನು ಆಹ್ವಾನಮಾಡಿದ ಮೇಲೆ ಹೇಗೆ ಹಿಂದೆ ಹೋಗಲು ಸಾಧ್ಯ ? ಆದ್ದರಿಂದ ಶಕುನಿಯೇ ನಿನ್ನ ಜೊತೆಯಲ್ಲಿ ದ್ಯೂತವನ್ನು ಆಡುತ್ತೇನೆ.

ಶಕುನಿಃ

ಗಜಾಶ್ವಂ ಬಹುಧೇನೂಕಮಪರ್ಯಂತಮಜಾವಿಕಮ್ ।
ತಥಾ ಗಾವೋ ಹಿರಣ್ಯಂ ಚ ದಾಸೀದಾಸಂ ಚ ಸರ್ವಶಃ ।
ಏಷ ವೈ ಗ್ಲಹ ಏವೈಕೋ ವನವಾಸಾಯ ಪಾಂಡವಃ ॥೧೯॥

ಎಲೈ ಪಾಂಡವನೇ! ಗಜಾಶ್ವಗಳು ಧೇನುಗಳ ಸಮೂಹ ಅಪರ್ಯಂತ ಅಜಾವಿಗಳು ಹಿರಣ್ಯ ದಾಸರ ಮತ್ತು ದಾಸಿಯರ ಸಮೂಹ ಇದು ವನವಾಸ ಮತ್ತು ಅಜ್ಞಾತವಾಸಕ್ಕಾಗಿ ಇರುವ ಒಂದೇ ಪಣ.

ಯೂಯಂ ವಯಂ ವಾ ವಿಜಿತಾ ವಸೇಮ ವನಮಾಶ್ರಿತಾಃ ।
ತ್ರಯೋದಶಂ ಚ ವೈ ವರ್ಷಮಜ್ಞಾತಾಃ ಸ್ವಜನೈಸ್ತಥಾ ॥೨೦॥

ನಾವು ಅಥವಾ ನೀವು ಪರಾಜಿತರಾದರೆ ವನವಾಸವನ್ನು ಮಾಡೋಣ. ಹದಿಮೂರನೆಯ ವರ್ಷ ಸ್ವಜನರಿಗೆ ತಿಳಿಯದಂತೆ ಅಜ್ಞಾತವಾಸವನ್ನು ಮಾಡೋಣ.

ಅನೇನ ವ್ಯವಸಾಯೇನ ದೀವ್ಯಾಮ ಭರತರ್ಷಭ ।
ಸಮುತ್ಕ್ಷೇಪೇಣ ಚೈಕೇನ ವನವಾಸಾಯ ಭಾರತ ॥೨೧॥

ಭರತರ್ಷಭನೇ! ಈ ನಿರ್ಧಾರದಿಂದ ನಾವು ದ್ಯೂತವನ್ನು ಆಡೋಣ. ಎಲೈ ಭಾರತನೇ! ಒಂದೇ ಸಲ ದಾಳವನ್ನು ಉರುಳಿಸಿ ವನವಾಸ ಪಣಕ್ಕಾಗಿ ದ್ಯೂತವನ್ನು ಆಡೋಣ.

ವೈಶಂಪಾಯನಃ

ಏವಂ ದೈವಬಲಾವಿಷ್ಟೋ ಧರ್ಮರಾಜೋ ಯುಧಿಷ್ಠಿರಃ ।
ಭೀಷ್ಮದ್ರೋಣೈರ್ವಾರ್ಯಮಾಣೋ ವಿದುರೇಣ ಚ ಧೀಮತಾ ॥೨೨॥

ಯುಯುತ್ಸುನಾ ಕೃಪೇಣಾಥ ಸಂಜಯೇನ ಚ ಭಾರತ ।
ಗಾಂಧಾರ್ಯಾ ಪೃಥಯಾ ಚೈವ ಭೀಮಾರ್ಜುನಯಮೈಸ್ತಥಾ ॥೨೩॥

ವಿಕರ್ಣೇನ ಚ ವೀರೇಣ ದ್ರೌಪದ್ಯಾ ದ್ರೌಣಿನಾ ತಥಾ ।
ಸೋಮದತ್ತೇನ ಚ ತಥಾ ಬಾಹ್ಲೀಕೇನ ಚ ಧೀಮತಾ ।
ವಾರ್ಯತೇಽತೀವ ಸತತಂ ನ ಚ ರಾಜಾ ನಿಯಚ್ಛತಿ ॥೨೪॥

ಎಲೈ ಭಾರತನೇ! ಹೀಗೆ ದೈವಬಲಕ್ಕೆ ಅಧೀನನಾದ ಯುಧಿಷ್ಠಿರನು ಭೀಷ್ಮದ್ರೋಣರಿಂದಲೂ ಮೇಧಾವಿಯಾದ ವಿದುರನಿಂದಲೂ ಯುಯುತ್ಸುವಿನಿಂಲೂ ಕೃಪರಿಂದಲೂ ಸಂಜಯನಿಂದಲೂ ಗಾಂಧಾರಿಯಿಂದಲೂ ಕುಂತಿಯಿಂದಲೂ ಭೀಮಾರ್ಜುನ ನಕುಲಸಹದೇವರಿಂದಲೂ ವೀರನಾದ ವಿಕರ್ಣನಿಂದಲೂ ದ್ರೌಪದಿಯಿಂದಲೂ ಅಶ್ವತ್ಥಾಮರಿಂದಲೂ ಸೋಮದತ್ತನಿಂದಲೂ, ಮೇಧಾವಿಯಾದ ಬಾಹ್ಲೀಕನಿಂದಲೂ ನಿವಾರಿಸಲ್ಪಟ್ಟರೂ ಸಹ ರಾಜನು ತನ್ನನ್ನು ತಾನು ನಿಯಂತ್ರಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಏವಂ ಸಂ ವಾರ್ಯಮಾಣೋಽಪಿ ಕೌಂತೇಯೋ ಹಿತಕಾಮ್ಯಯಾ ।
ದೇವಕಾರ್ಯಾರ್ಥಸಿದ್ಧ್ಯರ್ಥಂ ಮುಹೂರ್ತಂ ಕಲಿಮಾವಿಶತ್ ॥೨೫॥

ಹೀಗೆ ತಮ್ಮ ಹಿತವನ್ನು ಬಯಸಿದ ಹಿತೈಷಿಗಳಿಂದ ನಿವಾರಿಸಲ್ಪಡುತ್ತಿದ್ದರೂ ಸಹ ದೇವಕಾರ್ಯ ಸಿದ್ಧಿಗಾಗಿ ಧರ್ಮರಾಜನು ಒಂದು ಮುಹೂರ್ತದ ಕಾಲ ಕಲಿಯ ಆವೇಶಕ್ಕೆ ಒಳಗಾದನು.

ಆವಿಷ್ಟಃ ಕಲಿನಾ ರಾಜನ್ ಶಕುನಿಂ ಪ್ರತ್ಯಭಾಷತ ।
ಏವಂ ಭವತ್ವಿತಿ ತದಾ ವನವಾಸಾಯ ದೀವ್ಯತೇ ॥೨೬॥

ರಾಜನೇ! ಕಲಿಯ ಆವೇಶಕ್ಕೆ ಒಳಗಾದ ಆವನು ಶಕುನಿಯು ವನವಾಸದ ಪಣವನ್ನು ಸ್ವೀಕರಿಸಿ ಆವನಿಗೆ ಹಾಗೆಯೇ ಆಗಲಿ ಎಂದು ಹೇಳಿದನು.

ಪ್ರತಿಜಗ್ರಾಹ ತತ್ ಪಾರ್ಥೋ ಗ್ಲಹಂ ಜಗ್ರಾಹ ಸೌಬಲಃ ।
ಜಿತಮಿತ್ಯೇವ ಶಕುನಿರ್ಯುಧಿಷ್ಠಿರಮಭಾಷತ ॥೨೭॥

ಶಕುನಿಯು ಹೇಳಿದ ವನವಾಸದ ಪಣವನ್ನು ಧರ್ಮರಾಜನು ಸ್ವೀಕರಿಸಿದನು ಶಕುನಿಯು ದಾಳಗಳನ್ನು ತೆಗೆದುಕೊಂಡು ಉರುಳಿಸಿ ಯುಧಿಷ್ಠಿರನನ್ನು ಕುರಿತು ನಾನು ಗೆದ್ದಿದ್ದೇನೆ ಎಂದೇ ಹೇಳಿದನು.

॥ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಪಂಚನವತಿತಮೋಧ್ಯಾಯಃ॥

॥ಅನುದ್ಯೂತಪರ್ವಣಿ ತೃತೀಯೋಧ್ಯಾಯಃ ॥೩॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ತೊಂಬತ್ತೈದನೆಯ ಅಧ್ಯಾಯವು ಮುಗಿಯಿತು.

★ ★ ★ ★

ತೊಂಬತ್ತಾರನೆಯ ಅಧ್ಯಾಯ

(ಸಭೆಯಿಂದ ಹೊರಗೆ ಹೊರಟ ಪಾಂಡವರ ಪ್ರತಿಜ್ಞೆಗಳು)

ವೈಶಂಪಾಯನಃ

ವನವಾಸಾಯ ಚಕ್ರುಸ್ತೇ ಮತಿಂ ಪಾರ್ಥಾಃ ಪರಾಜಿತಾಃ ।
ಅಜಿನಾನ್ಯುತ್ತರೀಯಾಣಿ ಜಗೃಹುಶ್ಚ ಯಥಾಕ್ರಮಮ್ ॥೧॥

ದ್ಯೂತದಲ್ಲಿ ಪರಾಜಿತರಾದ ಪಾಂಡವರು ವನವಾಸಕ್ಕೆ ಹೊರಡಲು ನಿರ್ಧರಿಸಿ ಕ್ರಮವಾಗಿ ಕೃಷ್ಣಾಜಿನದ ಉತ್ತರೀಯಗಳನ್ನು ತೆಗೆದುಕೊಂಡರು.

ಅಜಿನೈಃ ಸಂವೃತಾನ್ ದೃಷ್ಟ್ವಾ ಹೃತರಾಜ್ಯಾನರಿಂದಮಾನ್ ।
ಪ್ರಸ್ಥಿತಾನ್ ವನವಾಸಾಯ ತತೋ ದುಶ್ಶಾಸನೋಽಬ್ರವೀತ್ ॥೨॥

ರಾಜ್ಯವನ್ನು ಕಳೆದುಕೊಂಡು ಅಜಿನಗಳನ್ನು ಧರಿಸಿ ವನವಾಸಕ್ಕೆ ಹೊರಟ ಅರಿಂಧಮರಾದ ಪಾಂಡವರನ್ನು ನೋಡಿ ಆಗ ದುಶ್ಶಾಸನನು ಮಾತನಾಡಿದನು.

ಪ್ರವೃತ್ತಂ ಧಾರ್ತರಾಷ್ಟ್ರಸ್ಯ ಚಕ್ರಂ ರಾಜ್ಞೋ ಮಹಾತ್ಮನಃ ।
ಪರಿಭೂತಾಃ ಪಾಂಡುಸುತಾ ಆರ್ತಿಂ ಪರಮಿಕಾಂ ಗತಾಃ ॥೩॥

ಮಹಾತ್ಮನಾದ ಧೃತರಾಷ್ಟ್ರನ ಪುತ್ರನಾದ ದುಯೋಧನನ ಸಾಮ್ರಾಜ್ಯವು ಪ್ರವೃತ್ತವಾಗಿದೆ. ಪಾಂಡುಪುತ್ರರು ಪರಾಭವನ್ನು ಹೊಂದಿ ಅತ್ಯಂತ ದುಃಸ್ಥಿತಿಯನ್ನು ಹೊಂದಿದ್ದಾರೆ.

ಅದ್ಯ ದೇವಾಃ ಸುಪ್ರವೃತ್ತಾಃ ಸರ್ವೈರ್ವರ್ತ್ಮಭಿರಚ್ಛಲೈಃ ।
ಗುಣಜ್ಯೇಷ್ಠಾಸ್ತಥಾ ಜ್ಯೇಷ್ಠಾಃ ಶ್ರೇಯಾಂಸೋ ಯದ್ ವಯಂ ಪರೈಃ॥೪॥

ಈ ದಿನ ದೇವತೆಗಳು ಪರಿಶುದ್ಧವಾದ ಎಲ್ಲಾ ಮಾರ್ಗಗಳಿಂದಲೂ ನಮಗೆ ಅನುಕೂಲರಾಗಿ ಪ್ರವೃತ್ತರಾಗಿದ್ದಾರೆ. ಗುಣಜ್ಯೇಷ್ಠರೂ ಮತ್ತು ಜ್ಯೇಷ್ಠರೂ ಆದ ನಾವು ಶತ್ರುಗಳಾದ ಪಾಂಡವರಿಗಿಂತಲೂ ಉನ್ನತರಾಗಿದ್ದೇವೆ.

ನರಕಂ ಪತಿತಾಃ ಪಾರ್ಥಾ ದೀರ್ಘಕಾಲಮನಂತಕಮ್ ।
ಸುಖಾಚ್ಚ ಹೀನಾ ರಾಜ್ಯಾಚ್ಚ ವಿನಷ್ಟಾಃ ಶಾಶ್ವತೀಃ ಸಮಾಃ ॥೫॥

ಪಾಂಡವರು ಕೊನೆಯೇ ಇಲ್ಲದ ದೀರ್ಘಕಾಲದವರೆಗೆ ನರಕದಲ್ಲಿ ಬಿದ್ದಿದ್ದಾರೆ. ಸುಖವನ್ನೂ ರಾಜ್ಯವನ್ನೂ ಕಳೆದುಕೊಂಡ ಅವರು ಶಾಶ್ವತವಾಗಿ ಬಹುಕಾಲ ವಿನಾಶವನ್ನು ಹೊಂದಿದ್ದಾರೆ.

ಬಲೇನ ಮತ್ತಾ ಯೇ ತೇ ಸ್ಮ ಧಾರ್ತರಾಷ್ಟ್ರಾನ್ ಪ್ರಹಾಸಿಷುಃ ।
ತೇ ನಿರ್ಜಿತಾ ಹೃತಧನಾ ವನಮೇಷ್ಯಂತಿ ಪಾಂಡವಾಃ ॥೬॥

ತಮ್ಮ ಬಲದಿಂದ ಗರ್ವಿಷ್ಠರಾದ ಯಾವ ಪಾಂಡವರು ಧೃತರಾಷ್ಟ್ರಪುತ್ರರಾದ ನಮ್ಮನ್ನು ಅಪಹಾಸಮಾಡಿದ್ದಾರೋ ಅಂತಹ ಪಾಂಡವರು ದ್ಯೂತದಲ್ಲಿ ನಿರ್ಜಿತರಾಗಿ ತಮ್ಮ ಸಂಪತ್ತನ್ನು ಕಳೆದುಕೊಂಡು ವನವಾಸಕ್ಕೆ ಹೋಗುವರು.

ಚಿತ್ರಾನ್ ಸನ್ನಾಹಾನವಮುಂಚಂತು ಪಾರ್ಥಾ
ವಾಸಾಂಸಿ ದಿವ್ಯಾನಿ ಚ ಭಾನುಮಂತಿ ।
ವಿವಸ್ಯಂತಾಂ ರುರುಚರ್ಮಾಣಿ ತಾನಿ
ಯಥಾಗ್ಲಹಂ ಸೌಬಲೇನಾಭ್ಯುಪೇತಂ ॥೭॥

ಪಾಂಡವರು ವಿಚಿತ್ರವಾದ ವೇಶವನ್ನೂ ದಿವ್ಯವಾದ ಪ್ರಕಾಶಮಾನವಾದ ವಸ್ತ್ರಗಳನ್ನೂ ತೆಗೆದು ಕೆಳಗಿಡಲಿ. ಸೌಬಲನಾದ ಶಕುನಿಯು ಹೇಳಿದ ಪಣಕ್ಕೆ ಅನುಗುಣವಾಗಿ ಅವರು ರುರುಚರ್ಮವನ್ನು ಧರಿಸಲಿ.

ನ ಸಂತಿ ಲೋಕೇಷು ಪುಮಾಂಸ ಈದೃಶಾ
ಇತ್ಯೇವಂ ವೈ ಭಾವಿತಬುದ್ಧಯಃ ಸದಾ ।
ಜ್ಞಾಸ್ಯಂತಿ ತೇ ತ್ಮಾನಮಿಮೇಽದ್ಯ ಪಾಂಡವಾ
ವಿಪರ್ಯಯೇ ಷಂಡತಿಲಾ ಇವಾಫಲಾಃ ॥೮॥

ಲೋಕದಲ್ಲಿ ನಮ್ಮಂತಹ ಪುರುಷರೇ ಇಲ್ಲ ಎಂದು ಯಾವಾಗಲೂ ಗರ್ವಿಷ್ಠರಾಗಿದ್ದ ಈ ಪಾಂಡವರು ಈಗ ವಿಪರ್ಯಯವನ್ನು ಹೊಂದಿ ಹುಳಿತುಹೋದ ಎಳ್ಳುಕಾಳುಗಳಂತೆ ತಮ್ಮ ಬೆಲೆ ಏನೆಂಬುದನ್ನು ಈ ದಿನ ತಿಳಿಯುವರು

ಅಯಂ ಹಿ ಭಾವೋದಯ ಈದೃಶಾನಾಂ
ಮನಸ್ವಿನಾಂ ಕೌರವ ಮಾ ಭವೇದ್ವಃ ।
ಆದೀಕ್ಷಿತಾನಾಮಜಿನಾನಿ ಯದ್ವದ್
ಬಲೀಯಸಾಂ ಪಾಂಡವಾನಾಂ ತಥೈವ ॥೯॥

ಎಲೈ ಕೌರವನಾದ ದುರ್ಯೋಧನನೇ! ಇಂತಹ ಗರ್ವಿಷ್ಠರಾದ ರುರುಚರ್ಮಗಳನ್ನು ಧರಿಸಿದ ಬಲಿಷ್ಠರಾದ ಪಾಂಡವರಿಗೆ ಬಂದು ಒದಗಿದ ಸ್ಥಿತಿಯು ನಿನಗೆ ಎಂದೂ ಬರುವುದು ಬೇಡ.

ಮಹಾಪ್ರಾಜ್ಞಃ ಸೋಮಕೋ ಯಜ್ಞಸೇನಃ
ಕನ್ಯಾಂ ಪಾಂಚಾಲೀಂ ಪಾಂಡವೇಭ್ಯಃ ಪ್ರದಾಯ ।
ಸಚಾಕಾರ್ಷೀತ್ ದುಷ್ಕೃತಂ ತೇ ಹಸಂತಿ
ಕ್ಲೀಬಾಃ ಪಾರ್ಥಾಃ ಪತಯೋ ಯಾಜ್ಞಸೇನ್ಯಾಃ ॥೧೦॥

ಮಹಾಪ್ರಾಜ್ಞನಾದ ಸೋಮರಾಜನಾದ ಯಜ್ಞಸೇನನು ತನ್ನ ಮಗಳಾದ ಪಾಂಚಾಲಿಯನ್ನು ಪಾಂಡವರಿಗೆ ಕೊಟ್ಟು ದೊಡ್ಡ ದುಷ್ಕಾರ್ಯವನ್ನು ಮಾಡಿದನು. ಯಾಜ್ಞಸೇನೆಯಪತಿಗಳಾದ ಪಾಂಡವರು ನಪುಂಸಕರು ಎಂದು ಈ ದಿನ ಎಲ್ಲ ಜನರೂ ಹಾಸ್ಯಮಾಡುತ್ತಾರೆ.

ಪ್ರನಷ್ಟವೃತ್ತಾನಜಿನಾನಿವೋಷಿತಾನ್
ದೃಷ್ಟ್ವಾಽರಣ್ಯೇ ನಿರ್ಧನಾನಪ್ರತಿಷ್ಠಾನ್ ।
ಕಾಂ ತ್ವಂ ಪ್ರೀತಿಂ ಲಪ್ಸ್ಯಸೇ ಯಾಜ್ಞಸೇನಿ
ಪತಿಂ ವೃಣೇಷ್ವಾನ್ಯಮಥೋ ಯಮಿಚ್ಛಸಿ ॥೧೧॥

ಎಲೌ ಯಾಜ್ಞಸೇನಿಯೇ! ತಮ್ಮ ವೃತ್ತಿಯನ್ನು ಕಳೆದುಕೊಂಡು ಭಿಕ್ಷುಕರಂತೆ ಅಜಿನಗಳನ್ನು ಧರಿಸಿ ನಿರ್ಧನರಾಗಿ ಒಂದು ನೆಲೆಯಿಲ್ಲದೆ ಕಾಡಿನಲ್ಲಿ ಇಂತಹ ಪಾಂಡವರನ್ನು ನೋಡಿ ನಿನಗೆ ಯಾವ ಸಂತೋಷ ಉಂಟಾಗುವುದು? ಆದ್ದರಿಂದ ನೀನು ನಿನ್ನ ಮನಸ್ಸಿಗೆ ಬಂದಂತೆ ಬೇರೆಯಾವನನ್ನಾದರೂ ಪತಿಯನ್ನು ವರಿಸು.

ಏತೇ ಹಿ ಸರ್ವೇ ಕುರವಃ ಸಮೇತಾಃ
ಕ್ಷಾಂತಾ ದಾಂತಾಃ ಸುದ್ರವಿಣೋಪಪನ್ನಾಃ ।
ಏಷಾಂ ವೃಣೇಷ್ವಾನ್ಯತರಂ ಪತಿತ್ವೇ
ಮಾ ತ್ವಾಂ ತಪೇತ್ ಕಾರ್ಯವಿಪರ್ಯಯೋಽಯಮ್ ॥೧೨॥

ಕುರುಗಳಾದ ಈ ದುರ್ಯೋಧನಾದಿಗಳೆಲ್ಲರೂ ಸಹನೆಯುಳ್ಳವರು. ದಾಂತರು ಮತ್ತು ಒಳ್ಳೆಯ ಐಶ್ವರ್ಯದಿಂದ ಕೂಡಿದವರು. ಇವರಲ್ಲಿ ಯಾವನನ್ನಾದರೂ ಒಬ್ಬನನ್ನು ಪತಿಯಾಗಿ ಆರಿಸು. ಈಗ ಉಂಟಾದ ಕಾರ್ಯವಿಪರ್ಯಾಸವು ನಿನಗೆ ತಾಪವನ್ನು ಕೊಡದಿರಲಿ.

ಯಥಾಽಫಲಾಃ ಷಂಡತಿಲಾ ಯಥಾ ಚರ್ಮಮಯಾ ಮೃಗಾಃ ।
ತಥೈವ ಪಾಂಡವಾಃ ಸರ್ವೇ ಯಥಾ ಕಾಕಯವಾ ಅಪಿ ॥೧೩॥

ಹೇಗೆ ಹುಳಿತುಹೋದ ಎಳ್ಳುಕಾಳು ನಿಷ್ಫಲವೋ ಚರ್ಮಮಯವಾದ ಮೃಗಗಳು ನಿಷ್ಫಲವೋ ಕಾಗೆಗಳನ್ನು ತಿಂದ ಯವಗಳು ನಿಷ್ಫಲವೋ ಅದರಂತೆ ಎಲ್ಲಾ ಪಾಂಡವರು ನಿಷ್ಫಲರಾಗಿದ್ದಾರೆ.

ಕಿಂ ಪಾಂಡವಾಂಸ್ತ್ವಂ ಪತಿತಾನುಪಾಸ್ಸೇ
ಮೋಘಃ ಶ್ರಮಃ ಷಂಡತಿಲಾನುಪಾಸ್ಯ ॥೧೩॥

ಪತಿತರಾದ ಪಾಂಡವರನ್ನು ನೀನು ಏಕೆ ಸೇವಿಸುತ್ತಿದ್ದೀಯೆ? ಅಂತಹ ಷಂಡತಿಲರನ್ನು ಉಪಾಸನೆಯನ್ನು ಮಾಡುವುದು ವ್ಯರ್ಥ ಮತ್ತು ಶ್ರಮದಾಯಕ.

ವೈಶಂಪಾಯನಃ

ಏವಂ ನೃಶಂಸಃ ಪರುಷಾಣಿ ಪಾರ್ಥಾನ್
ವ್ಯಾಶ್ರಾವಯದ್ ಧೃತರಾಷ್ಟ್ರಸ್ಯ ಪುತ್ರಃ ॥೧೪॥

ಹೀಗೆ ಧೃತರಾಷ್ಟ್ರನ ಪುತ್ರನಾದ ದುಶ್ಶಾಸನನು ಪಾಂಡವರನ್ನು ಕುರಿತು ಇಂತಹ ಉಗ್ರವಾದ ಮಾತುಗಳನ್ನು ಆಡಿದನು.

ತದ್ವೈ ಶ್ರುತ್ವಾ ಭೀಮಸೇನೋಽತ್ಯಮರ್ಷೀ
ನಿರ್ಭರ್ತ್ಸ್ಯೋರ್ಚ್ಚೈಃ ಸನ್ನಿಗೃಹ್ಯೈವ ರೋಷಾತ್ ।
ಉವಾಚೈನಂ ಸಹಸೈವೋಪಗಮ್ಯ
ಸಿಂಹೋ ಯಥಾ ಹೈಮವತಃ ಸೃಗಾಲಮ್ ॥೧೫॥

ಅದನ್ನು ಕೇಳಿದ ಕೋಪಿಷ್ಠನಾದ ಭೀಮಸೇನನು ತನ್ನನ್ನು ನಿಯಂತ್ರಿಸಿಕೊಂಡು ದುಶ್ಶಾಸನನನ್ನು ಗಟ್ಟಿಯಾಗಿ ಹೀಯಾಳಿಸಿ ರೋಷದಿಂದ ತಕ್ಷಣ ಮೇಲೆದ್ದು ಹಿಮಾಲಯದ ಸಿಂಹವು ನರಿಯ ಬಳಿಗೆ ಹೋದಂತೆ ಅವನ ಬಳಿಗೆ ಹೋಗಿ ಮಾತನಾಡಿದನು.

ಕ್ರೂರ ಪಾಪಜನೈರ್ಜುಷ್ಟಮಕೃತಾರ್ಥಂ ಪ್ರಭಾಷಸೇ ।
ಗಾಂಧಾರವಿದ್ಯಯಾ ಹಿ ತ್ವಂ ರಾಜಮಧ್ಯೇ ವಿಕತ್ಥಸೇ ॥೧೬॥

ಎಲೈ ಕ್ರೂರನೇ! ಪಾಪಜನರು ಮಾತ್ರ ಮಾತನಾಡುವ ಅಧನ್ಯವಾದ ಮಾತುಗಳನ್ನು ಆಡುತ್ತಿದ್ದೀಯೆ. ಗಾಂಧಾರರಾಜನಾದ ಶಕುನಿಯ ವಿದ್ಯೆಯ ಬಲದಿಂದ ನೀನು ರಾಜರ ಮಧ್ಯದಲ್ಲಿ ಬಡಬಡಿಸುತ್ತಿದ್ದೀಯೆ.

ಯಥಾ ತುದಸಿ ಮರ್ಮಾಣಿ ವಾಕ್ಕರೈರಿಹ ನೋ ಭೃಶಮ್ ।
ತಥಾ ಸ್ಮಾರಯಿತಾ ತೇಽಹಂ ಕೃಂತನ್ ಮರ್ಮಾಣಿ ಸಂಯುಗೇ ॥೧೭॥

ನೀನು ನಿನ್ನ ವಾಗ್‌ಬಾಣಗಳಿಂದ ಹೇಗೆ ನಮ್ಮನ್ನು ಮರ್ಮಸ್ಥಾನದಲ್ಲಿ ಅತ್ಯಂತವಾಗಿ ಭೇದಿಸುತ್ತಿದ್ದೀಯೋ ಹಾಗೆ ನಿನ್ನನ್ನು ಯುದ್ಧದಲ್ಲಿ ಈ ಮಾತುಗಳನ್ನು ನೆನಪಿಗೆ ತಂದುಕೊಟ್ಟು ನಿನ್ನ ಮರ್ಮವನ್ನು ಭೇದಿಸುತ್ತೇನೆ.

ಯೇ ಚ ತ್ವಾಮನುವರ್ತಂತೇ ಕಾಮಲೋಭವಶಾನುಗಮ್ ।
ಗೋಪ್ತಾರಃ ಸಾನುಬಂಧಾಂಸ್ತಾನ್ ನೇಷ್ಯಾಮಿ ಯಮಸಾದನಮ್‌॥೧೮॥

ಯಾರು ಕಾಮಲೋಭವಶನಾದ ನಿನ್ನನ್ನು ಅನುಸರಿಸಿ ನಿನ್ನನ್ನು ರಕ್ಷಿಸುತ್ತಾರೋ ಅವರನ್ನೂ ಮತ್ತು ಅವರ ಪರಿವಾರವನ್ನೂ ಯಮಸದನಕ್ಕೆ ಕಳುಹಿಸುವೆನು.

ವೈಶಂಪಾಯನಃ

ಏವಂ ಬ್ರುವಾಣಮಜಿನೈರ್ನಿವಾಸಿತಂ
ದುಃಖಾಭಿಭೂತಂ ಪರಿನೃತ್ಯತಿ ಸ್ಮ ।
ಮಧ್ಯೇ ಕುರೂಣಾಮನಿಷಿದ್ಧಮಾರ್ಗಂ
ಗೌರ್ಗೌರಿತಿ ಸ್ಮಾಹ್ವಯನ್ ಮುಕ್ತಲಜ್ಜಃ ॥೧೯॥

ಅಜಿನಗಳನ್ನು ಧರಿಸಿದ ಭೀಮಸೇನನು ದುಃಖದಿಂದ ಪೂರ್ಣನಾಗಿ ಹೀಗೆ ಮಾತನಾಡುತ್ತಿರಲು ಕುರುಗಳ ಮಧ್ಯದಲ್ಲಿ ಯಾರಿಂದಲೂ ತಡೆಯಲ್ಪಡದೆ ಭೀಮಸೇನನನ್ನು ಗೌಃ ಗೌಃ (ದನ ದನ) ಎಂದು ಕರೆಯುತ್ತಾ ನಾಚಿಕೆಯನ್ನು ಬಿಟ್ಟು ದುಶ್ಶಾಸನನು ನರ್ತನವನ್ನು ಮಾಡಿದನು.

ಭೀಮಸೇನಃ

ನೃಶಂಸ ಪರುಷಂ ವಕ್ತುಂ ಶಕ್ಯಂ ದುಶ್ಶಾಸನ ತ್ವಯಾ ।
ನಿಕೃತ್ಯಾ ಹಿ ಧನಂ ಲಬ್ಧ್ವಾ ಕೋ ವಿಕತ್ಥಿತುಮರ್ಹತಿ ॥೨೦॥

ಎಲೈ ಕ್ರೂರನಾದ ದುಶ್ಶಾಸನನೇ! ಇಂತಹ ಒರಟುಮಾತುಗಳನ್ನು ನೀನು ಮಾತ್ರ ಆಡಲು ಸಾಧ್ಯ. ಮೋಸದಿಂದ ಧನವನ್ನು ಪಡೆದು ಯಾವನು ಹೀಗೆ ಹೊಗಳಿಕೊಳ್ಳುತ್ತಾನೆ?

ಮಾ ಹ ಸ್ಮ ಸುಕೃತಾಂ ಲೋಕಾನ್ ಗಚ್ಛೇತ್ ಪಾರ್ಥೋ ವೃಕೋದರಃ ।
ಯದಿ ವಕ್ಷಸಿ ಭಿತ್ತ್ವಾ ತೇ ನ ಪಿಬೇಚ್ಛೋಣಿತಂ ರಣೇ ॥೨೧॥

ಯುದ್ಧದಲ್ಲಿ ನಿನ್ನ ಎದೆಯನ್ನು ಬಗೆದು ರಕ್ತವನ್ನು ಕುಡಿಯದಿದ್ದರೆ ಕುಂತಿಯ ಪುತ್ರನಾದ ವೃಕೋದರನಿಗೆ ಪುಣ್ಯವಂತರು ಹೊಂದುವ ಲೋಕಗಳು ದೊರೆಯುವುದು ಬೇಡ.

ಧಾರ್ತರಾಷ್ಟ್ರಾನ್ ರಣೇ ಹತ್ವಾ ಮಿಷತಾಂ ಸರ್ವಧನ್ವಿನಾಮ್ ।
ಶಮಂ ಗಂತಾಸ್ಮಿ ನಚಿರಾತ್ ಸತ್ಯಮೇತತ್ ಬ್ರವೀಮಿ ತೇ ॥೨೨॥

ಎಲ್ಲ ಧರ್ಮಧಾರಿಗಳ ಎದುರಿನಲ್ಲಿ ಯುದ್ಧದಲ್ಲಿ ಧೃತರಾಷ್ಟ್ರನ ಪುತ್ರರನ್ನು ಕೊಂದು ನಾನು ಸದ್ಯದಲ್ಲಿಯೇ ಶಾಂತಿಯನ್ನು ಪಡೆಯುವೆನು. ಇದು ನನ್ನ ಸತ್ಯವಾದ ಪ್ರತಿಜ್ಞೆ.

ವೈಶಂಪಾಯನಃ

ತತಃ ಸ ರಾಜಾ ಸಿಂಹಗತೇಃ ಸಹೇಳಂ
ದುರ್ಯೋಧನೋ ಭೀಮಸೇನಸ್ಯ ರೋಷಾತ್ ।
ಗತಿಂ ಸರೋಷಾದನುಚಕಾರ ಮಂದೋ
ನಿರ್ಗಚ್ಛತಾಂ ಕೌರವಾಣಾಂ ಸಭಾಯಾಃ ॥೨೩॥

ಆಗ ರಾಜನಾದ ದುರ್ಯೋಧನನು ತಿರಸ್ಕಾರಪೂರ್ವಕವಾಗಿ ಭೀಮಸೇನನ ರೋಷವನ್ನು ಅನುಕರಿಸಿ ಪಾಂಡವರು ಸಭೆಯಿಂದ ಹೊರಕ್ಕೆ ಹೋಗುತ್ತಿರಲು ಭೀಮಸೇನನ ನಡಿಗೆಯನ್ನು ತಿರಸ್ಕಾರದಿಂದ ಅನುಕರಿಸಿದನು.

ನೈತಾವತಾ ಕೃತಮಿತ್ಯಬ್ರವೀತ್ ತಂ
ವೃಕೋದರಃ ಸನ್ನಿವೃತ್ತಾರ್ಧಕಾಯಃ ।
ಶೀಘ್ರಂ ಹಿ ತ್ವಾಂ ನಿಹತಂ ಸಾನುಬಂಧಂ
ಸಂಸ್ಮಾರ್ಯಾಹಂ ಸಂಪ್ರವಕ್ಷ್ಯಾಮಿ ಮೂಢಮ್ ॥೨೪॥

ಭೀಮಸೇನನು ಅರ್ಧತಿರುಗಿ ಇಷ್ಟರಿಂದಲೇ ಮುಗಿಯುವುದಿಲ್ಲ. ಶೀಘ್ರದಲ್ಲಿಯೇ ನಿನ್ನನ್ನೂ ನಿನ್ನ ಅನುಚರರನ್ನೂ ಕೊಂದು ಮೂಢನಾದ ನಿನಗೆ ನಿನ್ನ ನೀಚವೃತ್ಯಗಳನ್ನು ಸ್ಮರಣೆಮಾಡಿಸಿ ಉತ್ತರವನ್ನು ಹೇಳುವೆನು ಎಂದು ಹೇಳಿದನು.

ಏವಂ ಸಮೀಕ್ಷ್ಯಾತ್ಮನಿ ವಾಚ್ಯಮಾನಂ
ನಿಯಮ್ಯ ಮನ್ಯುಂ ಬಲವಾನ್ ಸ ಮಾನೀ ।
ರಾಜಾನುಜಃ ಸಂಸದಿ ಕೌರವಾಣಾಂ
ವಿನಿಷ್ಕ್ರಮನ್ ವಾಕ್ಯಮುವಾಚ ಭೀಮಃ ॥೨೫॥

ಹೀಗೆ ತನ್ನಲ್ಲಿ ಪ್ರಯುಕ್ತವಾದ ಅವಮಾನವನ್ನು ಗಮನಿಸಿ ಬಲಿಷ್ಠನೂ ಮತ್ತು ಆತ್ಮಾಭಿಮಾನವುಳ್ಳವನೂ ರಾಜಾನುಜನೂ ಆದ ಭೀಮಸೇನನು ತನ್ನ ರೋಷವನ್ನು ನಿಯಂತ್ರಿಸಿಕೊಂಡು ಕೌರವರ ಸಭೆಯಿಂದ ಹೊರಗೆ ಹೋಗುತ್ತಾ ಮಾತನಾಡಿದನು.

ಅಹಂ ದುರ್ಯೋಧನಂ ಹಂತಾ ಕರ್ಣಂ ಹಂತಾ ಧನಂಜಯಃ ।
ಶಕುನಿಂ ಚಾಕ್ಷಕಿತವಂ ಸಹದೇವೋ ಹನಿಷ್ಯತಿ ॥೨೬॥

ನಾನು ದುರ್ಯೋಧನನನ್ನು ಕೊಲ್ಲುವೆನು. ಅರ್ಜುನನು ಕರ್ಣನನ್ನು ಕೊಲ್ಲುವನು. ಮೋಸದ ದ್ಯೂತದ ಶಕುನಿಯನ್ನು ಸಹದೇವನು ಕೊಲ್ಲುವನು.

ಇದಂ ಚ ಭೂಯೋ ವಕ್ಷ್ಯಾಮಿ ಸಭಾಮಧ್ಯೇ ಮಹದ್ ವಚಃ ।
ಸತ್ಯಂ ದೇವಾಃ ಕರಿಷ್ಯಂತಿ ಯನ್ನೋ ಬುದ್ಧಂ ಭವಿಷ್ಯತಿ ॥೨೭॥

ಈ ಸಭೆಯ ಮಧ್ಯದಲ್ಲಿ ದೇವತೆಗಳಲ್ಲಿ ನನ್ನ ಮಾತನ್ನು ಸತ್ಯವನ್ನಾಗಿ ಮಾಡುವರು. ನಮ್ಮ ಮನಸ್ಸಿನಲ್ಲಿ ಸಂಕಲ್ಪಿಸಿದುದು ನಿಶ್ಚಯವಾಗಿ ಜರುಗುತ್ತದೆ.

ಸುಯೋಧನಮಿಮಂ ಪಾಪಂ ಹಂತಾಸ್ಮಿ ಗದಯಾ ಯುಧಿ ।
ಶಿರಃ ಪಾದೇನ ಚಾಸ್ಯಾಹಮಧಿಷ್ಠಾಸ್ಯಾಮಿ ಭೂತಳೇ ॥೨೮॥

ಈ ಪಾಪಿಯಾದ ಸುಯೋಧನನನ್ನು ನಾನು ಯುದ್ಧದಲ್ಲಿ ಗದೆಯಿಂದ ಕೊಲ್ಲುವೆನು. ಭೂಮಿಯ ಮೇಲೆ ಅವನ ತಲೆಯನ್ನು ನನ್ನ ಪಾದದಿಂದ ಮೆಟ್ಟಿ ನಿಲ್ಲುವೆನು.

ವಾಕ್ಯಶೂರಸ್ಯ ಚೈವಾಸ್ಯ ಪರುಷಸ್ಯ ದುರಾತ್ಮನಃ ।
ದುಶ್ಶಾಸನಸ್ಯ ರುಧಿರಂ ಪಾತಾಸ್ಮಿ ಮೃಗರಾಡಿವ ॥೨೯॥

ಈ ದುರಾತ್ಮನಾದ ಉಗ್ರನಾದ ಕೇವಲ ವಾಕ್ಯಶೂರನಾದ ದುಶ್ಶಾಸನನ ರಕ್ತವನ್ನು ಸಿಂಹದಂತೆ ಕುಡಿಯುವೆನು.

ಅರ್ಜುನಃ

ಭೀಮಸೇನ ನ ತೇ ಸಂತಿ ಯೇಷಾಂ ವೈರಂ ತ್ವಯಾ ಸಹ ।
ಮತ್ವಾ ಗೃಹೇಷು ಸುಖಿನೋ ನ ಬುಧ್ಯಂತೇ ಮಹದ್ಭಯಮ್ ॥೩೦॥

ಭೀಮಸೇನನೇ! ನೀನು ಯಾರ ಜೊತೆಯಲ್ಲಿ ವೈರವನ್ನು ಸಾಧಿಸುತ್ತೀಯೋ ಅವರು ಇಲ್ಲವೆಂದು ತಿಳಿ. ತಮ್ಮ ಮನೆಗಳಲ್ಲಿ ತಾವು ಸುಖವಾಗಿದ್ದೇವೆ ಎಂದು ತಿಳಿದು ಮಹದ್ಭಯವನ್ನು ಅವರು ತಿಳಿಯುತ್ತಿಲ್ಲ.

ನ ವೈ ವಾಚ್ಯಂ ವ್ಯವಸಿತಂ ಭೀಮ ವಿಜ್ಞಾಯತಾಂ ಸತಾಮ್ ।
ಇತಶ್ಚತುರ್ದಶೇ ವರ್ಷೇ ದ್ರಷ್ಟಾರೋ ಯದ್ ಭವಿಷ್ಯತಿ ॥೩೧॥

ಎಲೈ ಭೀಮಸೇನನೇ! ಸಜ್ಜನರು ತಮ್ಮ ಮನಸ್ಸಿನ ನಿರ್ಧಾರಗಳನ್ನು ಮಾತಿನಿಂದ ಆಡಿ ತೋರಿಸಬಾರದು ಪ್ರಯತ್ನದಿಂದ ಮಾಡಿ ತೋರಿಸಬೇಕು. ಸಜ್ಜನರು ಅದನ್ನು ನೋಡಬೇಕು. ಇವತ್ತಿನಿಂದ ಹದಿನಾಲ್ಕನೆಯ ವರ್ಷದಲ್ಲಿ ಏನು ನಡೆಯುವುದೆಂದು ಎಲ್ಲರೂ ನೋಡುವರು.

ಭೀಮಸೇನಃ

ದುರ್ಯೋಧನಸ್ಯ ಕರ್ಣಸ್ಯ ಶಕುನೇಶ್ಚ ದುರಾತ್ಮನಃ ।
ದುಶ್ಶಾಸನಚತುರ್ಥಾನಾಂ ಭೂಮಿಃ ಪಾಸ್ಯತಿ ಶೋಣಿತಮ್ ॥೩೨॥

ದುರ್ಯೋಧನ ಕರ್ಣ ದುರಾತ್ಮನಾದ ಶಕುನಿ ಮತ್ತು ನಾಲ್ಕನೆಯವನಾದ ದುಶ್ಶಾಸನ ಇವರ ರಕ್ತವನ್ನು ಭೂಮಿಯು ಕುಡಿಯುವುದು.

ಅರ್ಜುನಃ

ಅಸೂನೃತಾನಾಂ ವಕ್ತಾರಂ ಸಂಹೃಷ್ಟಾನಾಂ ದುರಾತ್ಮನಾಮ್ ।
ಭೀಮಸೇನ ನಿಯೋಗಾತ್ ತೇ ಹಂತಾऽಹಂ ಕರ್ಣಮಾಹವೇ ॥೩೩॥

ಉಗ್ರಮಾತುಗಳನ್ನು ಆಡಿ ಸಂತೋಷಪಡುವ ದುಷ್ಟರಿಗೆ ದುರ್ಮಾತುಗಳನ್ನು ಉಪದೇಶಿಸುವ ಕರ್ಣನನ್ನು ಎಲೈ ಭೀಮಸೇನನೇ! ನಿನ್ನ ಆದೇಶದಿಂದ ನಾನು ಯುದ್ಧದಲ್ಲಿ ಕೊಲ್ಲುವೆನು.

ಅರ್ಜುನಃ ಪ್ರತಿಜಾನೀತೇ ಭೀಮಸ್ಯ ಪ್ರಿಯಕಾಮ್ಯಯಾ ।
ಕರ್ಣಂ ಕರ್ಣಾನುಗಾಂಶ್ಚೈವ ರಣೇ ಹಂತಾಸ್ಮಿ ಪತ್ರಿಭಿಃ ॥೩೪॥

ಭೀಮನಿಗೆ ಪ್ರಿಯವನ್ನು ಮಾಡುವ ಉದ್ದೇಶದಿಂದ ಅರ್ಜುನನು ಪ್ರತಿಜ್ಞೆಯನ್ನು ಮಾಡುತ್ತಾನೆ. ಕರ್ಣನನ್ನು ಮತ್ತು ಕರ್ಣನ ಅನುಚರರನ್ನು ಯುದ್ಧದಲ್ಲಿ ಬಾಣಗಳಿಂದ ಕೊಲ್ಲುವೆನು.

ಯೇ ಚಾನ್ಯೇ ಪ್ರತಿಯೋತ್ಸ್ಯಂತಿ ಬುದ್ಧಿಮೋಹೇನ ವೈ ನೃಪಾಃ ।
ತಾಂಶ್ಚ ಸರ್ವಾನ್ ಶಿತೈರ್ಬಾಣೈರ್ನೇತಾಸ್ಮಿ ಯಮಸಾದನಮ್ ॥೩೫॥

ಇನ್ನು ಯಾರಾದರೂ ಬೇರೆರಾಜರು ಬುದ್ಧಿಮೋಹದಿಂದ ನನಗೆ ಪ್ರತಿಯಾಗಿ ಯುದ್ಧಮಾಡುವುದಾದರೆ ಅವರೆಲ್ಲರನ್ನೂ ನಿಶಿತವಾದ ಬಾಣಗಳಿಂದ ಯಮಲೋಕಕ್ಕೆ ಕಳುಹಿಸುವೆನು.

ಚಲೇದ್ಧಿ ಹಿಮವಾನ್ ಸ್ಥಾನಾನ್ನಿಷ್ಪ್ರಭಃ ಸ್ಯಾದ್ದಿವಾಕರಃ ।
ಶೈತ್ಯಂ ಸೋಮಾತ್ ಪ್ರಣಶ್ಯೇತ ಮತ್ಸತ್ಯಂ ವಿಚಲೇದ್ ಯದಿ ॥೩೬॥

ನನ್ನ ಮಾತಿನ ಸಾಧ್ಯವು ವಿಚಲಿತವಾನಾದರೆ (ನನ್ನ ಮಾತು ಸುಳ್ಳಾಗುವುದಾದರೆ) ಹಿಮಾಲಯವು ತನ್ನ ಸ್ಥಾನವನ್ನು ಬಿಟ್ಟು ಕದಲೀತು. ಸೂರ್ಯನು ಕಾಂತಿ ಹೀನನಾದಾನು. ಚಂದ್ರನ ಶೈತ್ಯವು ನಾಶವಾದೀತು.

ನ ಪ್ರದಾಸ್ಯತಿ ಚೇದ್ ರಾಜ್ಯಮಿತೋ ವರ್ಷೇ ಚತುರ್ದಶೇ ।
ದುರ್ಯೋಧನೋಽಪಿ ಸತ್ಕೃತ್ಯ ಸತ್ಯಮೇತದ್ಭವಿಷ್ಯತಿ ॥೩೭॥

ದುರ್ಯೋಧನನು ಈ ದಿನಕ್ಕೆ ಹದಿನಾಲ್ಕನೆ ವರ್ಷದಲ್ಲಿ ಸತ್ಕಾರಪೂರ್ವಕವಾಗಿ ನಮಗೆ ರಾಜ್ಯವನ್ನು ಹಿಂದಿರುಗಿ ಕೊಡದಿದ್ದರೆ ನಾನು ಹೇಳಿದ ಮಾತುಗಳೆಲ್ಲವೂ ಸತ್ಯವಾಗುವುವು.

ವೈಶಂಪಾಯನಃ

ಇತ್ಯುಕ್ತವತಿ ಪಾರ್ಥೇ ತು ಶ್ರೀಮಾನ್ ಮಾದ್ರವತೀಸುತಃ ।
ಪ್ರಗೃಹ್ಯ ವಿಪುಲಂ ಬಾಹುಂ ಸಹದೇವಃ ಪ್ರತಾಪವಾನ್ ॥೩೮॥

ಸೌಬಲಸ್ಯ ವಧಪ್ರೇಪ್ಸುರಿದಂ ವಚನಮಬ್ರವೀತ್ ।
ಕ್ರೋಧಸಂರಕ್ತನಯನೋ ನಿಶ್ಶ್ವಸನ್ನಿವ ಪನ್ನಗಃ ॥೩೯॥

ಅರ್ಜುನನು ಹೀಗೆ ಹೇಳುತ್ತಿರಲು ಕಾಂತಿಯುಕ್ತನಾದ ಮಾದ್ರೀಪುತ್ರನಾದ ಪ್ರತಾಪಶಾಲಿಯಾದ ಸಹದೇವನು ಶಕುನಿಯ ವಧೆಯನ್ನು ಮಾಡಲು ಬಯಸಿ ಕ್ರೋಧದಿಂದ ಕೆಂಪಾದ ಕಣ್ಣುಳ್ಳವನಾಗಿ ಸರ್ಪದಂತೆ ಉಸಿರಾಡುತ್ತಾ ತನ್ನ ವಿಪುಲವಾದ ಬಾಹುವನ್ನು ಎತ್ತಿ ಮಾತನಾಡಿದನು.

ಅಕ್ಷಾಣಿ ಮೂಢ ದುರ್ಬುದ್ಧೇ ಗಾಂಧಾರಾಣಾಂ ಯಶೋಹರ ।
ನೈತೇಕ್ಷಾ ನಿಶಿತಾ ಬಾಣಾಃ ತ್ವಯೈತೇ ಸಮರೇ ವೃತಾಃ ॥೪೦॥

ಗಾಂಧಾರರ ಕೀರ್ತಿನಾಶಕನಾದ ದುರ್ಬುದ್ಧಿಯಾದ ಎಲೈ ಶಕುನಿಯೇ ನೀನು ಹಿಡಿದ ಅಕ್ಷಗಳು ಅಕ್ಷಗಳಲ್ಲ. ಅವುಗಳನ್ನು ನೀನು ಸಮರದಲ್ಲಿ ಸ್ವೀಕರಿಸಿದ ಬಾಣಗಳು ಎಂದು ತಿಳಿ.

ಯಚ್ಚೈವೇಹೋಕ್ತವಾನ್ ಭೀಮಃ ತ್ವಾಮುದ್ದಿಶ್ಯ ಸಬಾಂಧವಮ್ ।
ಕರ್ತಾऽಹಂ ಕರ್ಮಣಸ್ತಸ್ಯ ಕುರು ಕಾರ್ಯಾಣಿ ಸರ್ವಶಃ ॥೪೧॥

ನಿನ್ನ ಮತ್ತು ನಿನ್ನ ಬಾಂಧವರ ವಿಷಯದಲ್ಲಿ ಭೀಮನು ಇಲ್ಲಿ ಏನು ಹೇಳಿದನೋ ನಾನು ಅದೆಲ್ಲವನ್ನೂ ಮಾಡುತ್ತೇನೆ. ನಿನ್ನ ಕಾರ್ಯಗಳನ್ನೆಲ್ಲಾ ಬೇಗ ಮುಗಿಸು.

ಹಂತಾಸ್ಮಿ ತರಸಾ ಯುದ್ಧೇ ತ್ವಾಂ ವಿಕ್ರಮ್ಯ ಸಬಾಂಧವಮ್ ।
ಯದಿ ಸ್ಥಾಸ್ಯಸಿ ಸಂಗ್ರಾಮೇ ಕ್ಷತ್ರಧರ್ಮೇಣ ಸೌಬಲ ॥೪೨॥

ಎಲೈ ಶಕುನಿಯೇ ಕ್ಷತ್ರಧರ್ಮಕ್ಕೆ ಅನುಸಾರವಾಗಿ ಯುದ್ಧದಲ್ಲಿ ನನ್ನ ಎದುರಿಗೆ ನೀನು ನಿಲ್ಲುವುದಾದರೆ ನಿನ್ನನ್ನೂ ನಿನ್ನ ಬಂಧುಗಳನ್ನೂ ಮೆಟ್ಟಿ ಶೀಘ್ರವಾಗಿ ಯುದ್ಧದಲ್ಲಿ ನಿನ್ನನ್ನು ಕೊಲ್ಲುವೆನು.

ವೈಶಂಪಾಯನಃ

ಸಹದೇವವಚಃ ಶ್ರುತ್ವಾ ನಕುಲೋಽಪಿ ವಿಶಾಂಪತೇ ।
ದರ್ಶನೀಯತಮೋ ನೃಣಾಮಿದಂ ವಚನಮಬ್ರವೀತ್ ॥೪೩॥

ಎಲೈ ರಾಜನೇ! ಸಹದೇವನ ಮಾತನ್ನು ಕೇಳಿ ಮನುಷ್ಯರಲ್ಲಿ ಅತ್ಯಂತ ಸುಂದರನಾದ ನಕುಲನು ಸಹ ಈ ಮಾತನ್ನು ಹೇಳಿದನು.

ಸುತೇಯಂ ಯಜ್ಞಸೇನಸ್ಯ ದ್ಯೂತೇಸ್ಮಿನ್ ಧೃತರಾಷ್ಟ್ರಜೈಃ ।
ಯೈರ್ವಾಚಃ ಶ್ರಾವಿತಾ ರೂಕ್ಷಾಃ ಸ್ಥಿತೈರ್ದುರ್ಯೋಧನಪ್ರಿಯೇ ॥೪೪॥

ಧಾರ್ತರಾಷ್ಟ್ರಾನ್ ಸುದುರ್ವೃತ್ತಾನ್ ಮುಮೂರ್ಷೂನ್ ಕಾಲಚೋದಿತಾನ್।
ದರ್ಶಯಿಷ್ಯಾಮಿ ಭೂಯಿಷ್ಠಮಹಂ ವೈವಸ್ವತಕ್ಷಯಮ್ ॥೪೫॥

ಯಾವ ಧೃತರಾಷ್ಟ್ರಪುತ್ರರು ದ್ಯೂತದಲ್ಲಿ ಯುಜ್ಞಸೇನನ ಪುತ್ರಿಯಾದ ದ್ರೌಪದಿಗೆ ದುರ್ಯೋಧನನಿಗೆ ಪ್ರಿಯವನ್ನು ಉಂಟುಮಾಡುವ ಸಲುವಾಗಿ ಕ್ರೂರವಾದ ಮಾತುಗಳನ್ನು ಆಡಿದರೋ ಅಂತಹ ಕೆಟ್ಟನಡತೆಯುಳ್ಳ ಮರಣವು ಸನ್ನಿಹಿತವಾದ ಕಾಲಚೋದಿತರಾದ ಎಲ್ಲಾ ಧೃತರಾಷ್ಟ್ರಪುತ್ರರಿಗೆ ನಾನು ಯಮಲೋಕವನ್ನು ಚೆನ್ನಾಗಿ ತೋರಿಸುವೆನು.

ಉಲೂಕಂ ಚ ದುರಾತ್ಮಾನಂ ಸೌಬಲಸ್ಯ ಸುತಂ ಪ್ರಿಯಮ್ ।
ಕ್ರೂರಂ ಹಂತಾಸ್ಮಿ ಸಮರೇ ತಂ ವೈ ಕ್ರೂರಂ ನರಾಧಮಮ್ ॥೪೬॥

ಶಕುನಿಯ ಪ್ರಿಯಪುತ್ರನಾದ ಕ್ರೂರನಾದ ದುರಾತ್ಮನಾದ ನರಾಧಮನಾದ ಉಲೂಕನನ್ನು ನಾನು ಯುದ್ಧದಲ್ಲಿ ಕೊಲ್ಲುವೆನು.

ನಿದೇಶಾದ್ ಧರ್ಮರಾಜಸ್ಯ ದ್ರೌಪದ್ಯಾಃ ಪದವೀಂ ಚರನ್ ।
ನಿರ್ಧಾರ್ತರಾಷ್ಟ್ರಾಂ ಪೃಥಿವೀಂ ಕರ್ತಾಸ್ಮಿ ನಚಿರಾದಿವ ॥೪೭॥

ಧರ್ಮರಾಜನ ಆದೇಶದಂತೆ ದ್ರೌಪದಿಗೆ ದುಶ್ಶಾಸನನು ಮಾಡಿದಂತೆ ಕೇಶಗಳಲ್ಲಿ ಹಿಡಿದು ಎಳೆದು ಅವನನ್ನು ಕೊಲ್ಲುವೆನು. ಶೀಘ್ರದಲ್ಲಿಯೇ ಪೃಥಿವಿಯ ಮೇಲೆ ಧೃತರಾಷ್ಟ್ರಪುತ್ರರು ಇಲ್ಲದಂತೆ ಮಾಡುವೆನು.

ವೈಶಂಪಾಯನಃ

ಏವಂ ತೇ ಪುರುಷವ್ಯಾಘ್ರಾಃ ಪರಿಘಾಯತಬಾಹವಃ ।
ಪ್ರತಿಜ್ಞಾಂ ವಿಪುಲಾಂ ಕೃತ್ವಾ ಧೃತರಾಷ್ಟ್ರಮುಪಾಗಮನ್ ॥೪೮॥

ಹೀಗೆ ಪರಿಘದಂತೆ ವಿಸ್ತಾರವಾದ ಬಾಹುಗಳುಳ್ಳ ಆ ಪುರುಷವ್ಯಾಘ್ರರು ದೊಡ್ಡ ಪ್ರತಿಜ್ಞೆಯನ್ನು ಮಾಡಿ ಧೃತರಾಷ್ಟ್ರನ ಸಮೀಪಕ್ಕೆ ಬಂದರು.

॥ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಷಣ್ಣವತಿತಮೋಧ್ಯಾಯಃ॥
॥ಅನುದ್ಯೂತಪರ್ವಣಿ ಚತುರ್ಥೋಽಧ್ಯಾಯಃ ॥೪॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ತೊಂಬತ್ತಾರನೆಯ ಅಧ್ಯಾಯವು ಮುಗಿಯಿತು.

★★★★★

ತೊಂಬತ್ತೇಳನೆಯ ಅಧ್ಯಾಯ

(ಭೀಷ್ಮಾದಿಗಳ ಅನುಜ್ಞೆಯನ್ನು ಪಡೆದು ಪಾಂಡವರ ಪ್ರಯಾಣ)

ಯುಧಿಷ್ಠಿರಃ

ಆಮಂತ್ರಯಾಮಿ ಭವತಃ ತಥಾ ವೃದ್ಧಂ ಪಿತಾಮಹಮ್ ।
ರಾಜಾನಂ ಸೋಮದತ್ತಂ ಚ ಮಹಾರಾಜಂ ಚ ಬಾಹ್ಲಿಕಮ್ ॥೧॥

ದ್ರೋಣಂ ಕೃಪಂ ನೃಪಾಂಶ್ಚಾನ್ಯಾನ್ ಅಶ್ವತ್ಥಾಮಾನಮೇವ ಚ ।
ವಿದುರಂ ಧೃತರಾಷ್ಟ್ರಂ ಚ ಧಾರ್ತರಾಷ್ಟ್ರಾಂಶ್ಚ ಸರ್ವಶಃ ॥೨॥

ಸೌಮದತ್ತಿಂ ಮಹಾವೀರ್ಯಂ ವಿಕರ್ಣಂ ಚ ಮಹಾಬಲಮ್ ।
ಯುಯುತ್ಸುಂ ಸಂಜಯಂ ಚೈವ ತಥೈವಾನ್ಯಾನ್ ಸಭಾಸದಃ ॥೩॥

ಗಾಂಧಾರೀಂ ಚ ಮಹಾಭಾಗಾಂ ಮಾತರಂ ಚ ತಥಾ ಪೃಥಾಮ್ ।
ಸರ್ವಾನಾಮಂತ್ರ್ಯ ಗಚ್ಛಾಮಿ ದ್ರಕ್ಷ್ಯಾಮಿ ಪುನರೇತ್ಯ ಚ ॥೪॥

ನಿಮ್ಮೆಲ್ಲರನ್ನೂ ಹಾಗೂ ವೃದ್ಧನಾದ ಪಿತಾಮಹನನ್ನು ಹೋಗಿಬರಲು ಅಪ್ಪಣೆಯನ್ನು ಕೇಳುತ್ತಿದ್ದೇನೆ. ಸೋಮದತ್ತರಾಜ ಬಾಹ್ಲೀಕಮಹಾರಾಜ ದ್ರೋಣ ಕೃಪ ಉಳಿದ ರಾಜರು ಅಶ್ವತ್ಥಾಮ ವಿದುರ ಧೃತರಾಷ್ಟ್ರನ ಎಲ್ಲಾ ಪುತ್ರರು ಮಹಾಪರಾಕ್ರಮಿಯಾದ ಸೋಮದತ್ತನ ಮಗನಾದ ಭೂರಿಶ್ರವ ಮಹಾಬಲನಾದ ವಿಕರ್ಣ ಯುಯುತ್ಸು ಸಂಜಯ ಹಾಗೆಯೇ ಉಳಿದ ಸಭಾಸದರು ಮಹಾನುಭಾವಳಾದ ಗಾಂಧಾರಿ ತಾಯಿಯಾದ ಕುಂತಿ ಈ ಎಲ್ಲರ ಅನುಮತಿಯನ್ನು ಪಡೆದು ನಾನು ಹೋಗುತ್ತಿದ್ದೇನೆ. ಹಿಂದಿರುಗಿ ಬಂದು ನಿಮ್ಮನ್ನು ನೋಡುವೆನು.

ವೈಶಂಪಾಯನಃ

ನೈವ ಕಿಂಚಿತ್ ತದೋಚುಸ್ತೇ ಹ್ರಿಯಾ ಸಂತೋ ಯುಧಿಷ್ಠಿರಮ್ ।
ಮನೋಭಿರೇವ ಕಲ್ಯಾಣಂ ದಧ್ಯುಸ್ತೇ ತಸ್ಯ ಧೀಮತಃ ॥೫॥

ಅವರೆಲ್ಲರೂ ನಾಚಿಕೆಯಿಂದ ಕೂಡಿದವರಾಗಿ ಯುಧಿಷ್ಠಿರನನ್ನು ಕುರಿತು ಏನನ್ನೂ ಮಾತನಾಡಲಿಲ್ಲ. ತಮ್ಮ ಮನಸ್ಸಿನಿಂದಲೇ ಮೇಧಾವಿಯಾದ ಅವನಿಗೆ ಕಲ್ಯಾಣವನ್ನು ಬಯಸಿದರು.

ವಿದುರಃ

ಆರ್ಯಾ ಪೃಥಾ ರಾಜಪುತ್ರೀ ನಾರಣ್ಯಂ ವಸ್ತುಮರ್ಹತಿ ।
ಸುಕುಮಾರೀ ಚ ವೃದ್ಧಾ ಚ ನಿತ್ಯಂ ಚೈವ ಸುಖೋಚಿತಾ ॥೬॥

ಇಹ ವತ್ಸ್ಯತಿ ಕಲ್ಯಾಣೀ ಸತ್ಕೃತಾ ಮಮ ವೇಶ್ಮನಿ ।
ಇದಂ ಪಾರ್ಥಾ ವಿಜಾನೀಧ್ವಮಭಯಂ ವೋಽಸ್ತು ಸರ್ವಶಃ ॥೭॥

ಆರ್ಯೆಯೂ ವೃದ್ಧೆಯೂ ಸುಕುಮಾರಿಯೂ ರಾಜಕುಮಾರಿಯೂ ಆದ ಕುಂತಿಯು ಯಾವಾಗಲೂ ಸುಖಕ್ಕೆ ಅರ್ಹಳಾದವಳು. ಅವಳು ವನವಾಸವನ್ನು ಮಾಡುವುದು ಬೇಡ. ಕಲ್ಯಾಣಿಯಾದ ಅವಳು ನನ್ನ ಮನೆಯಲ್ಲಿ ಸತ್ಕರಿಸಲ್ಪಟ್ಟು ವಾಸವನ್ನು ಮಾಡುವಳು. ಪಾಂಡವರೇ ಇದನ್ನು ತಿಳಿಯಿರಿ. ನಿಮಗೆಲ್ಲರಿಗೂ ಕ್ಷೇಮವಾಗಲಿ.

ಯುಧಿಷ್ಠಿರ ವಿಜಾನೀಹಿ ಮಮೇದಂ ಭರತರ್ಷಭ ।
ನ ಧರ್ಮೋಽಪಚಿತಃ ಕಶ್ಚಿದ್ ವಿಂದತೇ ವೈ ಪರಾಭವಮ್ ॥೯॥

ಭರತರ್ಷಭನೇ! ಯುಧಿಷ್ಠಿರನೇ! ನನ್ನ ಈ ಮಾತನ್ನು ಕೇಳು. ಧರ್ಮವನ್ನು ಆಶ್ರಯಿಸಿದ ವ್ಯಕ್ತಿಯು ಎಂದೂ ಪರಾಭವವನ್ನು ಹೊಂದುವುದಿಲ್ಲ.

ತ್ವಂ ವೈ ಧರ್ಮಂ ವಿಜಾನೀಷೇ ಯುದ್ಧಂ ವೇತ್ತಾ ಧನಂಜಯಃ ।
ಹಂತಾऽರೀಣಾಂ ಭೀಮಸೇನೋ ನಕುಲಸ್ತ್ವರ್ಥಸಂಗ್ರಹೀ ॥೯॥

ಸಹದೇವಸ್ತು ಸಂಯಂತಾ ಧೌಮ್ಯೋ ಬ್ರಹ್ಮವಿದುತ್ತಮಃ ।
ಧರ್ಮಾರ್ಥಕುಶಲಾ ಚೈವ ದ್ರೌಪದೀ ಧರ್ಮಚಾರಿಣೀ ॥೧೦॥

ಅನ್ಯೋನ್ಯಸ್ಯ ಪ್ರಿಯಾಃ ಸರ್ವೇ ತಥೈವ ಪ್ರಿಯವಾದಿನಃ ।
ಪರೈರಲಂಘ್ಯಾಃ ಸಂತುಷ್ಟಾಃ ಕೋ ವೋ ನ ಸ್ಪೃಹಯೇದಿಹ ॥೧೧॥

ನೀನು ಧರ್ಮವನ್ನು ಚೆನ್ನಾಗಿ ತಿಳಿದಿದ್ದೀಯೆ. ಅರ್ಜುನನು ಯುದ್ಧವನ್ನು ತಿಳಿದಿದ್ದಾನೆ. ಭೀಮಸೇನನು ಶತ್ರುಗಳನ್ನು ಸಂಹಾರಮಾಡುತ್ತಾನೆ. ನಕುಲನು ದ್ರವ್ಯಸಂಗ್ರಹವನ್ನು ಮಾಡುತ್ತಾನೆ. ಸಹದೇವನು ಸೈನ್ಯವನ್ನು ನಡೆಸುತ್ತಾನೆ. ಧೌಮ್ಯರು ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದವರು. ಧರ್ಮಚಾರಿಣಿಯಾದ ದ್ರೌಪದಿಯು ಧರ್ಮಾರ್ಥಕುಶಲಳಾದವಳು. ನೀವೆಲ್ಲರೂ ಪರಸ್ಪರವಾಗಿ ಪ್ರೀತಿಯಿಂದ ಇದ್ದೀರಿ. ಮತ್ತು ಪರಸ್ಪರವಾದ ಪ್ರಿಯವಾದ ಮಾತುಗಳನ್ನು ಆಡುತ್ತೀರಿ. ಶತ್ರುಗಳು ನಿಮ್ಮನ್ನು ಮೀರಲಾರದಂತೆ ಸಂತುಷ್ಟರಾಗಿದ್ದೀರಿ. ನಿಮ್ಮಲ್ಲಿ ಒಬ್ಬರನೊಬ್ಬರು ಪ್ರೀತಿಸದಿದ್ದವರು ಅಥವಾ ಬಯಸದಿದ್ದವರು ಯಾರಿದ್ದಾರೆ? (ನಿಮ್ಮನ್ನು ಬಯಸದಿರುವ ಸಜ್ಜನರು ಇಲ್ಲಿ ಯಾರಿದ್ದಾರೆ?)

ಏಷ ವೈ ಸರ್ವಕಲ್ಯಾಣಃ ಸಮಾಧಿಸ್ತವ ಭಾರತ ।
ನೈವ ಶತ್ರುರ್ವಿಷಹತೇ ಶಕ್ರೇಣಾಪಿ ಸಮದ್ಯುತಿಃ ॥೧೨॥

ಭಾರತನಾದ ಧರ್ಮರಾಜನೇ! ನಿನ್ನ ಸಮಾಧಾನವು ಪರಮಮಂಗಳಕರವಾದುದು. ಇಂದ್ರನಿಗೆ ಸಮಾನವಾದ ತೇಜಸ್ಸುಳ್ಳ ಶತ್ರುವೂ ಸಹ ಅದನ್ನು ನೋಡಿ ಸಹಿಸಲಾರ.

ಹಿಮವತ್ಯನುಶಿಷ್ಟೋಽಸಿ ಮೇರುಸಾವರ್ಣಿನಾ ಪುರಾ ।
ದ್ವೈಪಾಯನೇನ ಕೃಷ್ಣೇನ ನಗರೇ ವಾರಣಾವತೇ ॥೧೩॥

ಭೃಗುತುಂಗೇ ಚ ರಾಮೇಣ ದೃಷದ್ವತ್ಯಾಂ ಚ ಶಂಭುನಾ ।
ಅಶ್ರೌಷೀರಸಿತಸ್ಯಾಪಿ ಮಹರ್ಷೇರಥ ಧೀಮತಃ ॥೧೪॥

ನೀನು ಹಿಂದೆ ಬಾಲ್ಯದಲ್ಲಿ ಹಿಮಾಲಯ ಪರ್ವದಲ್ಲಿ ಮೇರುಸಾವರ್ಣಿಯಿಂದ ಶಿಕ್ಷಿತನಾಗಿದ್ದೀಯೆ. ವಾರಣಾವತದಲ್ಲಿ ವೇದವ್ಯಾಸರಿಂದ ಶಿಕ್ಷಿತನಾಗಿದ್ದೀಯೆ. ಭೃಗುತುಂಗದಲ್ಲಿ ಪರಶುರಾಮನಿಂದಲೂ ದೃಶದ್ವತಿಯಲ್ಲಿ ಶಿವನಿಂದಲೂ ಉಪದೇಶವನ್ನು ಪಡೆದಿದ್ದೀಯೆ. ಮಹರ್ಷಿಗಳೂ ಮೇಧಾವಿಗಳೂ ಆದ ಅಸಿತರಿಂದಲೂ ಉಪದೇಶವನ್ನು ಪಡೆದಿದ್ದೀಯೆ.

ದೃಷ್ಟ್ವಾ ಸದಾ ನಾರದಸ್ಯ ಧೌಮ್ಯಸ್ತೇಽಯಂ ಪುರೋಹಿತಃ ।
ಮಹರ್ಷಿಃ ಸಾಂಪರಾಯೇ ತೇ ಬುದ್ಧಿಂ ತಾಮೃಷಿಪೂಜಿತಾಮ್ ।
ಪುರೂರವಸಮೈಲಂ ಚ ಬುದ್ಧ್ಯಾ ಜಯಸಿ ಪಾಂಡವ ॥೧೫॥

ನಿನ್ನ ಪುರೋಹಿತರಾದ ಧೌಮ್ಯರು ಯಾವಾಗಲೂ ನಾರದರನ್ನು ನೋಡುವವರು. ಆಪತ್ತು ಒದಗಿದಾಗ ಮಹರ್ಷಿಗಳಾದ ಧೌಮ್ಯರು ಋಷಿಪೂಜಿತವಾದ ನಿನ್ನ ಬುದ್ಧಿಯನ್ನು ತಿದ್ದುವರು. ಪಾಂಡವನೇ! ನೀನು ಇಳೆಯ ಪುತ್ರನಾದ ಪುರೂರವನನ್ನೂ ಬುದ್ಧಿಯಲ್ಲಿ ಮೀರಿದ್ದೀಯೆ.

ಶಕ್ತ್ಯಾ ಜಯಸಿ ರಾಜ್ಞೋನ್ಯಾನ್ ಋಷೀನ್ ಧರ್ಮೋಪಸೇವಯಾ ।
ಐಂದ್ರೇ ಜಯೇ ಧೃತಾತ್ಮಾ ತ್ವಂ ಯಾಮ್ಯಕೋಪವಿಧಾರಣೇ ।
ವಿಸರ್ಗೇ ಚೈವ ಧನದೋ ವರುಣಶ್ಚೈವ ಸಂಯಮೇ ॥೧೬॥

ನೀನು ನಿನ್ನ ಶಕ್ತಿಯಲ್ಲಿ ಬೇರೆ ರಾಜರನ್ನು ಮೀರಿದ್ದೀಯೆ. ಧರ್ಮಾಚರಣೆಯ ವಿಷಯದಲ್ಲಿ ಋಷಿಗಳನ್ನು ಮೀರಿದ್ದೀಯೆ. ಇಂದ್ರನ ಜಯವನ್ನೂ ಯಮನ ಕೋಪನಿಯಂತ್ರಣವನ್ನೂ ಯಾವಾಗಲೂ ಮನಸ್ಸಿನಲ್ಲಿ ಧ್ಯಾನಿಸುತ್ತಿದ್ದೀಯೆ. ಧನವನ್ನು ಕೊಡುವ ವಿಷಯದಲ್ಲಿ ನೀನು ಕುಬೇರನಾಗಿದ್ದೀಯೆ. ಸಂಯಮದ ವಿಷಯದಲ್ಲಿ ನೀನು ವರುಣನಾಗಿದ್ದೀಯೆ.

ಆತ್ಮಪ್ರದಾನೇ ಸೋಮ್ಯಸ್ತ್ವಮಗ್ರ್ಯಶ್ಚೈವಾತ್ಮಜೀವನೇ ।
ಭೂಮೇಃ ಕ್ಷಮಾಂ ಚ ತೇಜಶ್ಚ ಸಾಮಗ್ರ್ಯಂ ಸೂರ್ಯಮಂಡಲಾತ್ ।
ವಾಯೋಶ್ಚೈವ ಬಲಂ ವಿದ್ಧಿ ಭೂತೇಭ್ಯಶ್ಚಾತ್ಮಸಂಪದಃ ॥೧೮॥

ನಿನ್ನನ್ನೇ ಕೊಟ್ಟುಕೊಳ್ಳುವ ವಿಷಯದಲ್ಲಿ ನೀನು ಚಂದ್ರನನ್ನು ಹೋಲುತ್ತೀಯೆ. ಪ್ರಾಣಿಗಳಿಗೆ ಜೀವನವನ್ನು ಕೊಡುವುದರಲ್ಲಿ ನೀನು ಶ್ರೇಷ್ಠನಾಗಿದ್ದೀಯೆ. ನಿನ್ನ ಸಂಪತ್ತುಗಳಾದ ಕ್ಷಮೆಯನ್ನು ಭೂಮಿಯಿಂದಲೂ ತೇಜಸ್ಸು ಮತ್ತು ಸರ್ವದಾ ಏಕಪ್ರಕಾರಸ್ಥಿತಿಯನ್ನು ಸೂರ್ಯಮಂಡಲ- ದಿಂದಲೂ ಬಲವನ್ನು ವಾಯುವಿನಿಂದಲೂ ಮತ್ತು ಉಳಿದ ಯೋಗ್ಯವಾದ ಗುಣಗಳನ್ನು ಉಳಿದ ಭೂತಗಳಿಂದಲೂ ತೆಗೆದುಕೊಂಡಿದ್ದೀಯೆ.

ಅಗದಂ ವೋಽಸ್ತು ಸರ್ವಂ ವೋ ದ್ರಕ್ಷ್ಯಾಮಿ ಪುನರಾಗತಾನ್ ।
ಆಪದ್ಧರ್ಮಾರ್ಥಕೃಚ್ಛ್ರೇಷು ಸರ್ವಕಾರ್ಯೇಷು ವಾ ಪುನಃ ।
ಯಥಾವತ್ ಪ್ರತಿಪದ್ಯೇಥಾಃ ಕಾಲೇ ಕಾಲೇ ಯುಧಿಷ್ಠಿರ ॥೧೯॥

ನೀವು ಯಾವಾಗಲೂ ಆರೋಗ್ಯವಂತರಾಗಿರಿ. ಪುನಃ ಹಿಂದೆ ಬಂದ ಮೇಲೆ ನಾನು ನಿಮ್ಮೆಲ್ಲರನ್ನೂ ನೋಡುವೆನು. ಯುಧಿಷ್ಠಿರನೇ! ಅರ್ಥಸಂಕಟವು ಒದಗಿದಾಗ ಆಪದ್ಧರ್ಮದ ವಿಷಯದಲ್ಲೂ ಎಲ್ಲಾ ಕಾರ್ಯಗಳ ವಿಷಯದಲ್ಲಿಯೂ, ನೀನು ಸರಿಯಾದ ಆಲೋಚನೆಯನ್ನು ಹೊಂದುವವನಾಗು.

ಆಪೃಷ್ಟಸ್ತ್ವಿಹ ಕೌಂತೇಯ ಸ್ವಸ್ತಿ ಪ್ರಾಪ್ನುಹಿ ಭಾರತ ।
ಕೃತಾರ್ಥಂ ಸ್ವಸ್ತಿಮಂತಂ ತ್ವಾ ದ್ರಕ್ಷ್ಯಾಮಃ ಪುನರಾಗತಮ್ ॥೨೦॥

ಕೌಂತೇಯನೇ ನಿನಗೆ ನಾನು ಅನುಮತಿಯನ್ನು ಕೊಟ್ಟಿದ್ದೇನೆ. ಭಾರತನೇ! ನಿನಗೆ ಮಂಗಳವಾಗಲಿ. ಕೃತಾರ್ಥನಾಗಿ ಹಿಂದಿರುಗಿ ಬಂದು ಕ್ಷೇಮದಿಂದಿರುವ ನಿನ್ನನ್ನು ನಾನು ನೋಡುವೆನು.

ವೈಶಂಪಾಯನಃ

ಏವಮುಕ್ತಸ್ತಥೇತ್ಯುಕ್ತ್ವಾ ಪಾಂಡವಃ ಸತ್ಯವಿಕ್ರಮಃ ।
ಭೀಷ್ಮದ್ರೋಣೌ ನಮಸ್ಕೃತ್ಯ ಪ್ರಾತಿಷ್ಠತ ಯುಧಿಷ್ಠಿರಃ ॥೨೧॥

ಹೀಗೆ ಹೇಳಲ್ಪಟ್ಟ ಸತ್ಯವಿಕ್ರಮನಾದ ಪಾಂಡುಪುತ್ರನಾದ ಯುಧಿಷ್ಠಿರನು ಹಾಗೆಯೇ ಆಗಲಿ ಎಂದು ಭೀಷ್ಮ ದ್ರೋಣರಿಗೆ ನಮಸ್ಕರಿಸಿ ಅಲ್ಲಿಂದ ಹೊರಟನು.

॥ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಸಪ್ತನವತಿತಮೋಧ್ಯಾಯಃ॥

॥ಅನುದ್ಯೂತಪರ್ವಣಿ ಪಂಚಮೋಧ್ಯಾಯಃ ॥೫॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ತೊಂಬತ್ತೇಳನೆಯ ಅಧ್ಯಾಯವು ಮುಗಿಯಿತು.

★★★★★

ತೊಂಬತ್ತೆಂಟನೆಯ ಅಧ್ಯಾಯ

(ಪಾಂಡವರು ಕಾಡಿಗೆ ಹೊರಡುತ್ತಿರಲು ಪೌರರ ಮತ್ತು ಕುಂತಿಯ ವಿಲಾಪ)

ವೈಶಂಪಾಯನಃ

ತತಃ ಸಂಪ್ರಸ್ಥಿತೇ ತತ್ರ ಧರ್ಮರಾಜೇ ತದಾ ನೃಪ ।
ಜನಾಃ ಸಮಸ್ತಾಸ್ತಂ ದ್ರಷ್ಟುಂ ಸಮಾರುರುಹುರಾತುರಾಃ ॥೧॥

ಎಲೈ ರಾಜನೇ! ಧೃತರಾಷ್ಟ್ರನು ಅಲ್ಲಿಂದ ಹೊರಡುತ್ತಿರಲು ಆಗ ಎಲ್ಲ ಜನರೂ ದುಃಖಾತುರರಾಗಿ ಮನೆಯ ಮೇಲು ಭಾಗಗಳಿಗೆ ಹತ್ತಿದರು.

ತತಃ ಪ್ರಾಸಾದವರ್ಯಾಣಿ ವಿಮಾನಶಿಖರಾಣಿ ಚ ।
ಗೋಪುರಾಣಿ ಚ ಸರ್ವಾಣಿ ವೃಕ್ಷಾನನ್ಯಾಂಶ್ಚ ಸರ್ವಶಃ ॥೨॥

ಅಥಾऽಧಿರುಹ್ಯ ಸಸ್ತ್ರೀಕಾ ಉದಾಸೀನಾ ವ್ಯಲೋಕಯನ್ ।
ನ ಹಿ ರಥ್ಯಾಸ್ತತಃ ಶಕ್ಯಾ ಗಂತುಂ ತಾಃ ಸ್ವಜನಾಕುಲಾಃ ॥೩॥

ಆಗ ಅನೇಕ ಅಂತಸ್ತಿನ ಮನೆಗಳನ್ನೂ ವಿಮಾನ ಶಿಖರಗಳನ್ನೂ ಗೋಪುರಗಳನ್ನೂ ಮರಗಳನ್ನೂ ಹತ್ತಿದ ಜನರು ಎತ್ತರವಾದ ಸ್ಥಾನದಲ್ಲಿ ಕುಳಿತು ನೋಡಿದರು. ಜನನಿಬಿಡವಾದ ರಸ್ತೆಗಳಲ್ಲಿ ಸ್ತ್ರೀಯರಾಗಲೀ ಬಾಲಕರಾಗಲೀ ಹೋಗಲು ಸಾಧ್ಯವಿರಲಿಲ್ಲ.

ಆರುಹ್ಯ ತೇನ ತೇ ಸರ್ವೇ ದೀನಾಃ ಪಶ್ಯಂತಿ ಪಾಂಡವಮ್ ।
ಪದಾತಿಂ ವರ್ಜಿತರಥಂ ವಲ್ಕಲಾಜಿನವಾಸಸಮ್ ॥೪॥

ಆ ಕಾರಣದಿಂದ ದೈನ್ಯದಿಂದ ಕೂಡಿದ ಅವರೆಲ್ಲರೂ ಮೇಲು ಭಾಗಗಳಿಗೆ ಹೋಗಿ ವಲ್ಕಲಾಜಿನಗಳನ್ನು ಧರಿಸಿ ರಥವನ್ನು ಬಿಟ್ಟು ಕಾಲ್ನಡಿಗೆಯಲ್ಲಿ ಹೋಗುತ್ತಿದ್ದ ಧರ್ಮರಾಜನನ್ನು ನೋಡಿದರು.

ಪಾರ್ಥಂ ದೃಷ್ಟ್ವಾ ಜನಾಃ ಸರ್ವೇ ವ್ಯಸನೈರ್ಬಹು ಪೀಡಿತಾಃ ।
ಊಚುರ್ಬಹುವಿಧಾ ವಾಚಃ ಶೋಕೋಪಹತಚೇತಸಃ ॥೫॥

ಧರ್ಮರಾಜನನ್ನು ನೋಡಿದ ಜನರೆಲ್ಲರೂ ದುಃಖಗಳಿಂದ ಬಹಳ ಪೀಡಿತರಾದರು. ಶೋಕದಿಂದ ಉದ್ವಿಗ್ನವಾದ ಮನಸ್ಸಿನಿಂದ ಅವರೆಲ್ಲರೂ ಬಹುವಿಧಾವಾದ ಮಾತುಗಳನ್ನು ಆಡಿದರು.

ಯಂ ಯಾಂತಮನುಯಾಂತಿ ಸ್ಮ ಚತುರಂಗಬಲಂ ಮಹತ್ ।
ತಮೇಕಂ ಕೃಷ್ಣಯಾ ಸಾರ್ಧಮನುಯಾಂತಿ ಸ್ಮ ಪಾಂಡವಾಃ ।
ಚತ್ವಾರೋ ಭ್ರಾತರಶ್ಚೈವ ಪುರೋಧಾಶ್ಚ ವಿಶಾಂಪತೇ ॥೬॥

ಎಲೈ ರಾಜನೇ! ಯಾವನು ಹೊರಟಾಗ ದೊಡ್ಡ ಚತುರಂಗಬಲವು ಅವನನ್ನು ಹಿಂಬಾಲಿಸುತ್ತಿದ್ದಿತೊ ಅಂತಹ ಧರ್ಮರಾಜನು ನಾಲ್ವರು ತಮ್ಮಂದಿರಾದ ಪಾಂಡವರಿಂದಲೂ ಪುರೋಹಿತರಿಂದಲೂ ಹಿಂಬಾಲಿಸಲ್ಪಟ್ಟು ದ್ರೌಪದಿಯ ಜೊತೆಯಲ್ಲಿ ಒಬ್ಬನೇ ಮುಂದೆ ನಡೆಯುತ್ತಿದ್ದಾನೆ.

ಭೀಮಾರ್ಜುನೌ ವಾರಯಿತಾ ನಿಕೃತ್ಯಾ ಬದ್ಧಕಾರ್ಮುಕೌ ।
ಧರ್ಮ ಏವಾಸ್ಥಿತೋ ಯೇನ ತ್ಯಕ್ತಂ ರಾಜ್ಯಂ ಮಹಾತ್ಮನಾ ॥೭॥

ಮುಂದೆ ಬಹಳ ಕಾರ್ಯವಿದೆ ಎಂದು ಹೇಳಿ ಭೀಮಾರ್ಜುನರನ್ನು ತಮ್ಮ ಬಿಲ್ಲುಗಳನ್ನು ಕಟ್ಟಿಡುವಂತೆ ಮಾಡಿದ, ಧರ್ಮದಲ್ಲಿಯೇ ಸ್ಥಿತನಾದ ಮಹಾತ್ಮನಾದ ಧೌಮ್ಯನು ಸಹ ರಾಜ್ಯವನ್ನು ಬಿಟ್ಟು ಹಿಂಬಾಲಿಸುತ್ತಿದ್ದಾನೆ.

ಯಾ ನ ಶಕ್ಯಾ ಪುರಾ ದ್ರಷ್ಟುಂ ಭೂತೈರಾಕಾಶಗೈರಪಿ ।
ತಾಮದ್ಯ ಕೃಷ್ಣಾಂ ಪಶ್ಯಂತಿ ರಾಜಮಾರ್ಗಗತಾ ಜನಾಃ ॥೮॥

ಯಾವ ದ್ರೌಪದಿಯನ್ನು ಹಿಂದೆ ಆಕಾಶದಲ್ಲಿ ಸಂಚರಿಸುವ ಪ್ರಾಣಿಗಳಿಗೂ ಸಹ ನೋಡಲು ಸಾಧ್ಯವಿರಲಿಲ್ಲವೋ ಅಂತಹ ಅವಳನ್ನು ಈ ದಿನ ರಾಜಮಾರ್ಗದಲ್ಲಿ ನಡೆಯುವ ಜನಗಳು ನೋಡುತ್ತಿದ್ದಾರೆ.

ಅಂಗರಾಗೋಚಿತಾಂ ಕೃಷ್ಣಾಂ ರಕ್ತಚಂದನಸೇವಿತಾಮ್ ।
ವರ್ಷಮುಷ್ಣಂ ಚ ಶೀತಂ ಚ ನೇಷ್ಯತ್ಯಾಶು ವಿವರ್ಣತಾಮ್ ॥೯॥

ದಿವ್ಯವಾದ ಅಂಗರಾಗಗಳಿಗೂ ರಕ್ತಚಂದನಕ್ಕೂ ಅರ್ಹಳಾದ ದ್ರೌಪದಿಯನ್ನು ಛಳಿಮಳೆಗಾಳಿಗಳು ವಿವರ್ಣವುಳ್ಳವಳನ್ನಾಗಿ ಮಾಡುವುವು.

ಅದ್ಯ ನೂನಂ ಪೃಥಾ ದೇವೀ ಸತ್ಯಮಾವಿಶ್ಯ ಭಾಷತೇ ।
ಪುತ್ರಾನ್ ಸ್ನುಷಾಂ ಚ ದೇವೀ ತು ದ್ರಷ್ಟುಮಪ್ಯಥ ನಾರ್ಹತಿ ॥೧೦॥

ಈ ದಿನ ನಿಶ್ಚಿತವಾಗಿ ಕುಂತಿಯು ಧೈರ್ಯವನ್ನು ಅವಲಂಬಿಸಿ ಮಾತನಾಡುತ್ತಿದ್ದಾಳೆ. ಈ ದಿನ ಆ ದೇವಿಯು ಮಕ್ಕಳನ್ನಾಗಲೀ ಸೊಸೆಯನ್ನಾಗಲೀ ನೋಡಬಾರದು.

ನಿರ್ಗುಣಸ್ಯಾಪಿ ಪುತ್ರಸ್ಯ ಕಥಂಸ್ಯಾದ್ವಿಪ್ರವಾಸನಮ್ ।
ಕಿಂ ಪುನರ್ಯಸ್ಯ ಲೋಕೋಽಯಂ ಜಿತೋ ವೃತ್ತೇನ ಕೇವಲಮ್ ॥೧೧॥

ಗುಣರಹಿತನಾದ ಪುತ್ರನನ್ನೂ ಸಹ ರಾಜ್ಯದಿಂದ ಹೊರಗೆ ಕಳುಹಿಸಲು ಸಾಧ್ಯವಿಲ್ಲ. ಹೀಗಿರುವಾಗ ಯಾರ ಗುಣಗಳಿಂದ ಸಮಸ್ತವಾದ ಲೋಕವೇ ಜಿತವಾಗಿದೆಯೋ ಅಂತಹವನನ್ನು ರಾಜ್ಯದಿಂದ ಹೊರಗೆ ಕಳುಹಿಸುವುದು ಹೇಗೆ?

ಆನೃಶಂಸ್ಯಮನುಕ್ರೋಶೋ ಧೃತಿಃ ಶೀಲಂ ದಮಃ ಶಮಃ ।
ಪಾಂಡವಂ ಶೋಭಯಂತ್ಯೇ ತೇ ಸದ್ಗುಣಾಃ ಪುರುಷೋತ್ತಮಮ್ ॥೧೨॥

ಮಾರ್ದವ ದಯೆ ಧೈರ್ಯ ಶೀಲ ದಮ ಶಮ ಈ ಎಲ್ಲ ಸದ್ಗುಣಗಳೂ ಪುರುಷೋತ್ತಮನಾದ ಪಾಂಡವನಿಗೆ ಶೋಭೆಯನ್ನು ಉಂಟುಮಾಡುತ್ತವೆ.

ತಸ್ಮಾತ್ ತಸ್ಯೋಪಘಾತೇನ ಪ್ರಜಾಃ ಪರಮಪೀಡಿತಾಃ ।
ಔದಕಾನೀವ ಸತ್ವಾನಿ ಗ್ರೀಷ್ಮೇ ಸಲಿಲಸಂಕ್ಷಯಾತ್ ॥೧೩॥

ಆದ್ದರಿಂದ ಗ್ರಿಷ್ಮ ಋತುವಿನಲ್ಲಿ ನೀರು ಒಣಗಿಹೋಗುವಾಗ ಜಲಸಸ್ಯಗಳು ಬಾಡಿಹೋದಂತೆ ಧರ್ಮರಾಜನಿಗೆ ಉಂಟಾದ ದುಃಖದಿಂದ ಎಲ್ಲ ಪ್ರಜೆಗಳೂ ಬಹಳ ಪೀಡಿತರಾಗಿದ್ದಾರೆ.

ಪೀಡಯಾ ಪೀಡಿತಂ ಸರ್ವಂ ಜಗತ್ ತಸ್ಯ ಜಗತ್ಪತೇಃ ।
ಮೂಲಸ್ಯೇವೋಪಘಾತೇನ ವೃಕ್ಷಃ ಪುಷ್ಪಫಲೋಪಗಃ ॥೧೪॥

ವೃಕ್ಷದ ಮೂಲವನ್ನು ಕಡಿಯುವುದರಿಂದ ಸದ್ಯದಲ್ಲಿಯೇ ಪುಷ್ಪಫಲಗಳನ್ನು ಕೊಡಲಿರುವ ವೃಕ್ಷವೇ ನಾಶವಾಗುವಂತೆ ಜಗತ್ಪತಿಯಾದ ಅವನನ್ನು ಪೀಡಿಸುವುದರಿಂದ ಜಗತ್ತೇ ಪೀಡಿತವಾಗಿದೆ.

ಮೂಲಂ ಹ್ಯೇಷ ಮನುಷ್ಯಾಣಾಂ ಧರ್ಮರಾಜೋ ಮಹಾದ್ಯುತಿಃ ।
ಪುಷ್ಪಂ ಫಲಂ ಚ ಪತ್ರಂ ಚ ಶಾಖಾಶ್ಚಾನ್ಯೇತರೇ ಜನಾಃ ॥೧೫॥

ಮಹಾದ್ಯುದ್ಧಿತಿಯುಳ್ಳ ಈ ಧರ್ಮರಾಜನು ಎಲ್ಲ ಮನುಷ್ಯರಿಗೆ ಮೂಲವಾಗಿದ್ದಾನೆ. ಇತರ ಜನಗಳು ಆ ವೃಕ್ಷದ ಪುಷ್ಪ ಪತ್ರ ಮತ್ತು ಕೊಂಬೆಗಳಾಗಿದ್ದಾರೆ.

ತೇ ಭ್ರಾತರ ಇವ ಕ್ಷಿಪ್ರಂ ಸಪುತ್ರಾಃ ಸಹಬಾಂಧವಾಃ ।
ಗಚ್ಛಂತಮನುಗಚ್ಛಾಮೋ ಯೇನ ಗಚ್ಛಂತಿ ಪಾಂಡವಃ ॥೧೬॥

ಅವನ ತಮ್ಮಂದಿರಂತೆ ನಾವೂ ಸಹ ಪುತ್ರ ಬಾಂಧವರೊಡನೆ ಪಾಂಡವನು ಯಾವ ಮಾರ್ಗದಲ್ಲಿ ಹೋಗುವನೋ ಅದರಲ್ಲಿ ಅವನನ್ನು ನಾವೂ ಹಿಂಬಾಲಿಸೋಣ.

ಉದ್ಯಾನಾನಿ ಪರಿತ್ಯಜ್ಯ ಕ್ಷೇತ್ರಾಣಿ ಚ ಗೃಹಾಣಿ ಚ ।
ಏಕದುಃಖಸುಖಾಃ ಪಾರ್ಥಮನುಯಾಮ ಸುಧಾರ್ಮಿಕಮ್ ॥೧೭॥

ನಮ್ಮ ಉದ್ಯಾನಗಳನ್ನು ನಮ್ಮ ಮನೆಗಳನ್ನು ನಮ್ಮ ಭೂಕ್ಷೇತ್ರಗಳನ್ನು ಪರಿತ್ಯಜಿಸಿ ಧಾರ್ಮಿಕನಾದ ಧರ್ಮರಾಜನ ಜೊತೆಯಲ್ಲಿ ಸಮಾನಸುಖದುಃಖಗಳನ್ನು ಹೊಂದಿದವರಾಗಿ ಅವನನ್ನು ಹಿಂಬಾಲಿಸೋಣ.

ಸಮುದ್ಧೃತನಿಧಾನಾನಿ ಪರಿಧ್ವಸ್ತಾಜಿರಾಣಿ ಚ ।
ಉಪಾತ್ತಧನಧಾನ್ಯಾನಿ ಹೃತಸಾರಾಣಿ ಸರ್ವಶಃ ॥೧೮॥

ರಜಸಾऽಪ್ಯವಕೀರ್ಣಾನಿ ಪರಿತ್ಯಕ್ತಾನಿ ದೈವತೈಃ ।
ಮೂಷಕೈಃ ಪರಿಧಾವದ್ಭಿರುಪಲೈರಾವೃತಾನಿ ಚ ॥೧೯॥

ಸರ್ವತೋದಕಧೂಮಾನಿ ಹೀನಸಮ್ಮಾರ್ಜನಾನಿ ಚ ।
ಪ್ರನಷ್ಟಬಲಿಕರ್ಮೇಜ್ಯಾಮಂತ್ರಹೋಮಜಪಾನಿ ಚ ॥೨೦॥

ದುಷ್ಕಾಲ ಇವ ಭಗ್ನಾನಿ ಭಿನ್ನಭಾಜನವಂತಿ ಚ ।
ಅಸ್ಮತ್ಕೃತಾನಿ ವೇಶ್ಮಾನಿ ಸೌಬಲಃ ಪ್ರತಿಪದ್ಯತಾಮ್ ॥೨೧॥

ಎಲ್ಲ ನಿಧಿಗಳನ್ನು ಬರಿದುಮಾಡಿದಂತಹ, ನಾಶವಾದ ಮನೆಗಳುಳ್ಳ, ಧನಧಾನ್ಯಗಳನ್ನೂ ಶ್ರೇಷ್ಠವಾದ ಪದಾರ್ಥಗಳನ್ನೂ ಎಲ್ಲ ಕಡೆಗಳಿಂದಲೂ ತೆಗೆಯಲ್ಪಟ್ಟಿರುವ, ಎಲ್ಲ ಕಡೆಗಳಲ್ಲಿಯೂ ಕಸದಿಂದ ತುಂಬಿರುವ, ದೇವತೆಗಳಿಂದ ಪರಿತ್ಯಕ್ತವಾದ, ಇಲಿಗಳ ಓಡಾಟಕ್ಕೆ ಪಾತ್ರವಾದ, ಕಲ್ಲುಗಳಿಂದ ಆವೃತವಾದ, ಎಲ್ಲರಿಗೂ ಹಿಂಸೆಯನ್ನು ಕೊಡುವ ಧೂಮದಿಂದ ಕೂಡಿರುವ, ಸಮ್ಮಾರ್ಜನಾದಿಗಳಿಂದ ಹೀನವಾದ, ಬಲಿಕರ್ಮಗಳು ಯಾಗಗಳು ಮಂತ್ರಗಳು ಹೋಮ ಜಪಗಳು ಇವುಗಳಿಂದ ರಹಿತವಾದ, ದುಷ್ಕಾಲದಿಂದಲೋ ಎಂಬಂತೆ ಮುರಿದ ಮತ್ತು ಒಡೆದ ಪಾತ್ರೆಗಳಿಂದ ತುಂಬಿದ ನಮ್ಮಿಂದ ಪರಿತ್ಯಕ್ತವಾದ ಗೃಹಗಳನ್ನು ಶಕುನಿಯು ಹೊಂದಲಿ.

ವನಂ ನಗರಮದ್ಯಾಸ್ತು ಯತ್ರ ಗಚ್ಛಂತಿ ಪಾಂಡವಾಃ ।
ಅಸ್ಮಾಭಿಶ್ಚ ಪರಿತ್ಯಕ್ತಂ ಪುರಂ ಸಂಪದ್ಯತಾಂ ವನಮ್ ॥೨೨॥

ವನಂ ಬಿಲಾನಿ ದಂಷ್ಟ್ರಿಣಃ ಸರ್ವಸ್ಥಾನಾನಿ ಪಕ್ಷಿಣಃ ।
ತ್ಯಜಂತ್ವಸ್ಮದ್ಭಯಾದ್ಭೀತಾ ಗಜಾಃ ಸಿಂಹಾಶ್ಚ ಗಾಸ್ತಥಾ ॥೨೩॥

ಪಾಂಡವರು ಎಲ್ಲಿ ಹೋಗುತ್ತಾರೆಯೋ ಆ ವನವು ಈ ದಿನ ನಗರವಾಗಲಿ. ನಮ್ಮಿಂದ ಪರಿತ್ಯಕ್ತವಾದ ಈ ಪುರವು ವನವಾಗಲಿ. ಮಾಂಸಹಾರಿ ಪ್ರಾಣಿಗಳು ಕಾಡನ್ನು ಮತ್ತು ಬಿಲವನ್ನು ತ್ಯಜಿಸಲಿ. ಉಗ್ರವಾದ ಪಕ್ಷಿಗಳು ಕಾಡಿನಲ್ಲಿರುವ ತಮ್ಮ ಸ್ಥಾನವನ್ನು

ತ್ಯಜಿಸಲಿ. ನಮ್ಮ ಭಯದಿಂದ ಭೀತವಾದ ಗಜಗಳು ಸಿಂಹಗಳು ಮತ್ತು ಅರಣ್ಯಪ್ರಾಣಿಗಳು ಕಾಡಿನಲ್ಲಿ ತಮ್ಮ ಸ್ಥಾನಗಳನ್ನು ತ್ಯಜಿಸಲಿ.

ಅನಾಕ್ರಾಂತಂ ಪ್ರಪದ್ಯಂತಾಂ ಸೇವ್ಯಮಾನಂ ತ್ಯಜಂತು ಚ ।
ವಯಂ ಪಾರ್ಥೈರ್ವನೇ ಸಮ್ಯಕ್ ಸಹ ವತ್ಸ್ಯಾಮ ನಿರ್ವೃತಾಃ ॥೨೪॥

ಅವು ಕಾಡಿನಲ್ಲಿ ನಾವು ಹೋಗದಿರುವಸ್ಥಾನವನ್ನು ಆಕ್ರಮಿಸಲಿ. ನಾವು ವಾಸಿಸುವ ಸ್ಥಾನವನ್ನು ತ್ಯಜಿಸಲಿ. ನಾವು ಪಾಂಡವರ ಜೊತೆಯಲ್ಲಿ ಕಾಡಿನಲ್ಲಿ ಸುಖದಿಂದ ವಾಸಮಾಡುವೆವು.

ಇತ್ಯೇವಂ ವಿವಿಧಾ ವಾಚೋ ನಾನಾಜನಸಮೀರಿತಾಃ ।
ಶುಶ್ರಾವ ಪಾರ್ಥಃ ಶ್ರುತ್ವಾ ಚ ನ ವಿಚಕ್ಷೇಽಸ್ಯ ಮಾನಸಮ್ ॥೨೫॥

ಧರ್ಮರಾಜನು ಈ ರೀತಿಯಾಗಿ ನಾನಾ ಜನರು ಆಡಿದ ವಿವಿಧಮಾತುಗಳನ್ನು ಕೇಳಿದನು. ಆದರೂ ಅವನ ಮನಸ್ಸಿನಲ್ಲಿ ಯಾವುದೇ ವಿಕಾರವೂ ಆಗಲಿಲ್ಲ.

ತತಃ ಪ್ರಾಸಾದಸಂಸ್ಥಾಸ್ತು ಸಮಂತಾದ್ವೈ ಗೃಹೇ ಗೃಹೇ ।
ಬ್ರಾಹ್ಮಣಕ್ಷತ್ರಿಯವಿಶಾಂ ಶೂದ್ರಾಣಾಂ ಚೈವ ಯಾಃ ಸ್ಥಿತಾಃ ॥೨೬॥

ತತಃ ಪ್ರಾಸಾದಜಾಲಾನಿ ಉತ್ಪಾಟ್ಯಾವರಣಾನಿ ಚ ।
ದದೃಶುಃ ಪಾಂಡವಾನ್ ದಾಂತಾನ್ ರೌರವಾಜಿನವಾಸಸಃ ॥೨೭॥

ಆಗ ಪ್ರಾಸಾದಗಳಲ್ಲಿ ವಾಸಿಸುವ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರವರ್ಗಗಳಿಗೆ ಸೇರಿದ ಪ್ರಜೆಗಳೆಲ್ಲರೂ ಮನೆ ಮನೆಗಳಲ್ಲಿ ಮಹಡಿಯನ್ನು ಹತ್ತಿ ಕಿಟಕಿಯ ಬಾಗಿಲುಗಳನ್ನು ತೆರೆದು ರೌರವಾಜಿನವಸ್ತ್ರಗಳನ್ನು ಧರಿಸಿದ ವಿನೀತರಾದ ಪಾಂಡವರನ್ನು ನೋಡಿದರು.

ಕೃಷ್ಣಾಂ ಚಾದೃಷ್ಟಪೂರ್ವಾಂ ತಾಂ ವ್ರಜಂತೀಂ ಪದ್ಭಿರೇವ ಚ ।
ಏಕವಸ್ತ್ರಾಂ ರುದಂತೀ ತಾಂ ಮುಕ್ತಕೇಶೀಂ ರಜಸ್ವಲಾಮ್ ॥೨೮॥

ದೃಷ್ಟ್ವಾ ತದಾ ಸ್ತ್ರಿಯಃ ಸರ್ವಾ ವಿವರ್ಣವದನಾ ಭೃಶಮ್ ।
ವಿಲಪ್ಯ ಬಹುಶೋ ಮೋಹಾದ್ ದುಃಖಶೋಕಸಮಾಚಿತಾಃ ।
ಹಾ ಹಾ ಧಿಗ್ಧಿಗ್ಧಿಗಿತ್ಯುಕ್ತ್ವಾ ನೇತ್ಯೈರಶ್ರೂಣ್ಯವರ್ತಯನ್ ॥೨೯॥

ತಾವು ಹಿಂದೆ ನೋಡದಿದ್ದಂತಹ ಪಾದಗಳಿಂದಲೇ ನಡೆದು ಹೋಗುತ್ತಿದ್ದಂತಹ ರಜಸ್ವಲೆಯಾಗಿ ಏಕವಸ್ತ್ರವನ್ನು ಧರಿಸಿ ತಲೆಕೂದಲುಗಳನ್ನು ಕೆದರಿಕೊಂಡು ಅಳುತ್ತಾ ನಡೆಯುತ್ತಿರುವ ದ್ರೌಪದಿಯನ್ನು ನೋಡಿ ಎಲ್ಲಸ್ತ್ರೀಯರೂ ಮುಖದ ಕಾಂತಿಯನ್ನು ಕಳೆದುಕೊಂಡು ಬಹಳವಾಗಿ ವಿಲಾಪವನ್ನು ಮಾಡಿ ಮೋಹದಿಂದಲೂ ದುಃಖಶೋಕಗಳಿಂದಲೂ ಕೂಡಿದವರಾಗಿ ಅಯ್ಯೋ ದಿಕ್ಕಾರವಿರಲಿ ದಿಕ್ಕಾರವಿರಲಿ ಎಂದು ಹೇಳುತ್ತಾ ತಮ್ಮ ಕಣ್ಣುಗಳಿಂದ ನೀರನ್ನು ಸುರಿಸಿದರು.

ಜನಸ್ಯಾಥ ವಚಃ ಶ್ರುತ್ವಾ ಸ ರಾಜಾ ಭ್ರಾತೃಭಿಃ ಸಹ ।
ಉದ್ದಿಶ್ಯ ವನವಾಸಾಯ ಪ್ರತಸ್ಥೇ ಕೃತನಿಶ್ಚಯಃ ॥೩೦॥

ಧರ್ಮರಾಜನಾದರೋ ತನ್ನ ಜನಗಳ ಮಾತುಗಳನ್ನೇ ಕೇಳುತ್ತಲೇ ವನವಾಸವನ್ನು ಮಾಡಲು ನಿರ್ಧರಿಸಿ ತಮ್ಮಂದಿರ ಜೊತೆಯಲ್ಲಿ ಮುಂದೆ ನಡೆದನು.

ತಸ್ಮಿನ್ ಸಂಪ್ರಸ್ಥಿತೇ ಕೃಷ್ಣಾ ಪೃಥಾಂ ಪ್ರಾಪ್ಯ ಯಶಸ್ವಿನೀಮ್ ।
ಅಪೃಚ್ಛದ್ ಭೃಶದುಃಖಾರ್ತಾ ಯಾಶ್ಚಾನ್ಯಾಸ್ತತ್ರ ಯೋಷಿತಃ ॥೩೧॥

ಧರ್ಮರಾಜನು ಹಾಗೆ ಹೊರಡುತ್ತಿರಲು ಯಶಸ್ವಿನಿಯಾದ ದ್ರೌಪದಿಯು ಕುಂತಿಯನ್ನು ಮತ್ತು ಉಳಿದ ಅಲ್ಲಿದ್ದ ವನಿತೆಯರನ್ನು ಸಂಧಿಸಿ ಬಹಳ ದುಃಖಾರ್ತಳಾಗಿ ಅನುಮತಿಯನ್ನು ಕೇಳಿದಳು.

ಯಥಾರ್ಹಂ ವಂದನಾಶ್ಲೇಷಾನ್ ಕೃತ್ವಾ ಗಂತುಮಿಯೇಷ ಸಾ ।
ತತೋ ನಿನಾದಃ ಸುಮಹಾನ್ ಪಾಂಡವಾಂತಃಪುರೇऽಭವತ್ ॥೩೨॥

ಯಥಾಯೋಗ್ಯವಾಗಿ ನಮಸ್ಕಾರಾದಿಗಳನ್ನು ಆಲಿಂಗನಾದಿಗಳನ್ನು ಮಾಡಿದ ಅವಳು ಅಲ್ಲಿಂದ ಹೊರಡಲು ಬಯಸಿದಳು. ಆಗ ಪಾಂಡವರ ಅಂತಃಪುರದಲ್ಲಿ ದೊಡ್ಡ ದುಃಖದನಾದವು ಉಂಟಾಯಿತು.

ಕುಂತೀ ಚ ಭೃಶಸಂತಪ್ತಾ ದ್ರೌಪದೀಂ ಪ್ರೇಕ್ಷ್ಯ ಗಚ್ಛತೀಮ್ ।
ಶೋಕವಿಹ್ವಲಯಾ ವಾಚಾ ಕೃಚ್ಛ್ರಾದ್ ವಚನಮಬ್ರವೀತ್ ॥೩೩॥

ಬಹಳಸಂತಪ್ತಳಾದ ಕುಂತಿಯೂಸಹ ಹೊರಟಿರುವ ದ್ರೌಪದಿಯನ್ನು ನೋಡಿ ಶೋಕವಿಹ್ವಲಳಾಗಿ ಬಹಳ ಕಷ್ಟದಿಂದ ಅವಳನ್ನು ಕುರಿತು ಮಾತನಾಡಿದಳು.

ವತ್ಸೇ ಶೋಕೋ ನ ತೇ ಕಾರ್ಯಃ ಪ್ರಾಪ್ಯೇದಂ ವ್ಯಸನಂ ಮಹತ್ ।
ಸ್ತ್ರೀಧರ್ಮಾನಮಭಿಜಾನಾಸಿ ಶೀಲಾಚಾರವತೀ ತಥಾ ॥೩೪॥

ಮಗಳೇ! ಈ ದೊಡ್ಡ ಕಷ್ಟವನ್ನು ಹೊಂದಿ ಶೋಕಪಡಬೇಡ. ಶೀಲಾಚಾರವುಳ್ಳ ನೀನು ಸ್ತ್ರೀಧರ್ಮಗಳನ್ನು ಚೆನ್ನಾಗಿ ತಿಳಿದವಳಾಗಿದ್ದೀಯೆ.

ನ ತ್ವಾಂ ಸಂದೇಷ್ಟುಮರ್ಹಾಮಿ ಭರ್ತೃನ್ ಪ್ರತಿ ಶುಚಿಸ್ಮಿತೇ ।
ಸಾಧ್ವೀ ಗುಣಸಮಾಧಾನೈರ್ಭೂಷಿತಂ ತೇ ಕುಲದ್ವಯಮ್ ॥೩೫॥

ಎಲೌ ಶುಚಿಸ್ಮಿತೆಯೇ! ಪತಿಗಳ ಜೊತೆಯಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ನಿನಗೆ ಹೇಳಲು ನಾನು ಅರ್ಹಳಲ್ಲ ಪತಿವ್ರತೆಯಾದ ನೀನು ನಿನ್ನ ಗುಣ ಮತ್ತು ಸಮಾಧಾನದಿಂದ ಎರಡು ಕುಲಗಳನ್ನು ಅಲಂಕರಿಸಿದ್ದೀಯೆ.

ಸಭಾಗ್ಯಾಃ ಕುರವಶ್ಚೇಮೇ ಯೇ ನ ದಗ್ಧಾಸ್ತ್ವಯಾಽನಘೇ ।
ಅರಿಷ್ಟಂ ವ್ರಜ ಪಂಥಾನಂ ಮದನುಧ್ಯಾನಬೃಂಹಿತಾ ॥೩೬॥

ಪರಿಶುದ್ಧಳಾದವಳೇ! ನಿನ್ನಿಂದ ದಗ್ಧರಾಗದ ಈ ಕುರುಗಳನ್ನು ಭಾಗ್ಯವಂತರೆಂದು ತಿಳಿಯಬೇಕು. ನನ್ನ ಆಶೀರ್ವಾದದೊಂದಿಗೆ ಯಾವ ತೊಂದರೆಯೂ ಉಂಟಾಗದಂತೆ ನಿನ್ನ ದಾರಿಯಲ್ಲಿ ನೀನು ಮುಂದೆ ಸಾಗು.

ಭಾವಿನ್ಯರ್ಥೇ ಹಿ ಸತ್ಸ್ತ್ರೀಣಾಂ ವೈಕ್ಲವ್ಯಂ ನೋಪಜಾಯತೇ ।
ಗುರುಧರ್ಮಾಭಿಗುಪ್ತಾ ಚ ಶ್ರೇಯಃ ಕ್ಷಿಪ್ರಮವಾಪ್ಸ್ಯಸಿ ॥೩೭॥

ಅಪರಿಹಾರ್ಯವಾದ ಕಾರ್ಯಗಳ ವಿಷಯದಲ್ಲಿ ಸಾಧುಸ್ವಭಾವದ ಸ್ತ್ರೀಯರ ಮನಸ್ಸಿನಲ್ಲಿ ಎಂದೂ ವೈಕ್ಲವ್ಯವು ಉಂಟಾಗುವುದಿಲ್ಲ. ಶ್ರೇಷ್ಠವಾದ ಧರ್ಮದಿಂದ ರಕ್ಷಿತಳಾದ ನೀನು ಬೇಗ ಶ್ರೇಯಸ್ಸನ್ನು ಹೊಂದುವಿ.

ಸಹದೇವಶ್ಚ ಮೇ ಪುತ್ರಃ ಸದಾಽವೇಕ್ಷ್ಯೋ ವನೇ ವಸನ್ ।
ಯಥೇದಂ ವ್ಯಸನಂ ಪ್ರಾಪ್ಯ ನಾವಸೀದೇನ್ಮಹಾಮನಾಃ ॥೩೮॥

ನನ್ನ ಮಗನಾದ ಉದಾರಸ್ವಭಾವದ ಸಹದೇವನು ಇಂತಹ ಕಷ್ಟವನ್ನು ಹೊಂದಿ ನಲುಗಿ ಹೋಗದಂತೆ ನೀನು ಅವನನ್ನು ಯಾವಾಗಲೂ ನೋಡಿಕೊಳ್ಳಬೇಕು.

ತಥೇತ್ಯುಕ್ತ್ವಾ ತು ಸಾ ದೇವೀ ಸ್ರವನ್ನೇತ್ರಜಲಾವಿಲಾ ।
ಶೋಣಂತಾಕ್ಷೈಕವಸನಾ ಮುಕ್ತಕೇಶ್ಯಭಿನಿರ್ಯಯೌ ॥೩೯॥

ಹಾಗೆಯೇ ಆಗಲೆಂದು ಹೇಳಿ ದ್ರೌಪದೀದೇವಿಯು ನೀರನ್ನು ಸುರಿಸುವ ಕಣ್ಣುಗಳಿಂದ ಮಂಕಾದ ದೃಷ್ಟಿಯುಳ್ಳವಳಾಗಿ ರಕ್ತಸಿಕ್ತವಾದ ಒಂದು ವಸ್ತ್ರವನ್ನು ಧರಿಸಿ ಕೇಶಗಳನ್ನು ಕೆದರಿಕೊಂಡು ಅಲ್ಲಿಂದ ಹೊರಟಳು.

ತಾಂ ಕ್ರೋಶಂತೀಂ ಪೃಥಾ ದುಃಖಾದನುವವ್ರಾಜ ಗಚ್ಛತೀಮ್ ।
ಅಥಾಪಶ್ಯತ್ ಸುತಾನ್ ಸರ್ವಾನ್ ಗತಾಭರಣವಾಸಸಃ ॥೪೦॥

ಅಳುತ್ತಾ ಮುಂದೆ ನಡೆಯುತ್ತಿರುವ ದ್ರೌಪದಿಯನ್ನು ಕುಂತಿಯು ಹಿಂಬಾಲಿಸಿ ವಸ್ತ್ರಾಭರಣರಹಿತರಾಗಿ ನಡೆಯುತ್ತಿರುವ ತನ್ನ ಎಲ್ಲಾ ಮಕ್ಕಳನ್ನೂ ನೋಡಿದಳು.

ರುರುಚರ್ಮಾವೃತತನೂನ್ ಹ್ರಿಯಾ ಕಿಂಚಿದವಾಙ್ಮುಖಾನ್ ।
ಪರೈಃ ಪರೀತಾನ್ ಸಂಹೃಷ್ಟೈಃ ಸುಹೃದ್ಭಿಶ್ಚಾನುಶೋಚತಃ ।
ಸಸ್ವಜಾನಾऽವದಚ್ಛೋಕಾತ್ ತತ್ತದ್ವಿಲಪತೀ ಬಹು ॥೪೧॥

ರುರುಚರ್ಮವನ್ನು ಧರಿಸಿ ನಾಚಿಕೆಯಿಂದ ಮುಖವನ್ನು ಸ್ವಲ್ಪತಗ್ಗಿಸಿ ಶೋಕಪಡುತ್ತಿರುವ ಹಿತೈಷಿಗಳಿಂದಲೂ ಹರ್ಷಪಡುತ್ತಿರುವ ಶತ್ರುಗಳಿಂದಲೂ ಪರಿವೃತರಾಗಿ ನಡೆಯುತ್ತಿರುವ ಅವರನ್ನು ನೋಡಿ ಅವರನ್ನು ಆಲಿಂಗಿಸಿ ಬಹುವಿಧವಾಗಿ ವಿಲಾಪಮಾಡುತ್ತಾ ಶೋಕದಿಂದ ಮಾತನಾಡಿದಳು.

ಕುಂತೀ

ಕಥಂ ಸದ್ಧರ್ಮಚಾರಿತ್ರವೃತ್ತಸ್ಥಿತಿವಿಭೂಷಿತಾನ್ ।
ಅಕ್ಷುದ್ರಾಂಶ್ಚೈವ ಭಕ್ತಾಂಶ್ಚ ದೈವತೇಜ್ಯಾಪರಾನ್ ಸದಾ ।
ಸದಾ ವ್ಯಸನಮಭ್ಯಾಗಾದ್ ವಿಧೇಃ ಕೋऽಯಂ ವಿಪರ್ಯಯಃ ॥೪೨॥

ಸದ್ಧರ್ಮ ಚಾರಿತ್ರ್ಯ ನಡತೆ ಸುಸ್ಥಿತಿಯಿಂದ ವಿಭೂಷಿತರಾದ ಕ್ಷುದ್ರರಲ್ಲದ ಭಗವದ್ಭಕ್ತರಾದ ಯಾವಾಗಲೂ ದೇವತಾಪೂಜಾತತ್ಪರರಾದ ನನ್ನ ಮಕ್ಕಳಿಗೆ ಇಂತಹ ವ್ಯಸನವು ಹೇಗೆ ಪ್ರಾಪ್ತವಾಯಿತು? ಎಲೈ ವಿಧಿಯೇ ಇದೇನು ವಿಪರ್ಯಯ?

ಕಸ್ಯಾಪಧ್ಯಾನಜಂ ಚೇದಂ ಧಿಯಾ ಪಶ್ಯಾಮಿ ನೈವ ತತ್ ।
ಸ್ಯಾತ್ತು ಮದ್ಭಾಗ್ಯದೋಷೋಽಯಂ ಯಾಽಹಂ ಯುಷ್ಮಾನಜೀಜನಮ್ ॥

ಇದು ಯಾರ ದುರ್ಧ್ಯಾನದ ಫಲವೆಂದು ಎಷ್ಟು ಯೋಚಿಸಿದರೂ ನನಗೆ ತಿಳಿಯುತ್ತಿಲ್ಲ. ಬಹುಶಃ ಉತ್ತಮ ಗುಣಗಳುಳ್ಳ ನಿಮ್ಮನ್ನು ದುಃಖಾಯಾಸವನ್ನು ಅನುಭವಿಸುವ ಸಲುವಾಗಿಯೇ ಮಕ್ಕಳನ್ನಾಗಿ ಪಡೆದ ನನ್ನ ದೌರ್ಭಾಗ್ಯವೇ ದೋಷವೆಂದು ಭಾವಿಸುತ್ತೇನೆ.

ದುಃಖಾಯಾಸಭುಜೋಽತ್ಯರ್ಥಂ ಯುಕ್ತಾಂಶ್ಚಾಪ್ಯುತ್ತಮೈರ್ಗುಣೈಃ ।
ಕಥಂ ವತ್ಸ್ಯಥ ದುರ್ಗೇಷು ವನೇಷ್ವದ್ಧಿವಿನಾಕೃತಾಃ ।
ಪರಾಕ್ರಮಬಲೋತ್ಸಾಹತೇಜೋಭಿರಕೃಶಾಃ ಕೃಶಾಃ ॥೪೪॥

ಪುತ್ರರೇ! ಸಮೃದ್ಧಿ ಹೀನರಾಗಿ ಪರಾಕ್ರಮ ಬಲ ಉತ್ಸಾಹ ತೇಜಸ್ಸುಗಳಿಂದ ತುಂಬಿದವರಾದ ನೀವು ಕೃಶರಾಗಿ ಅಗಮ್ಯವಾದ ಕಾಡುಗಳಲ್ಲಿ ಹೇಗೆ ವಾಸಿಸುವಿರಿ?

ಯದ್ಯೇತದಹಮಜ್ಞಾಸ್ಯಂ ವನವಾಸಂ ಹಿ ವೋ ಧ್ರುವಮ್ ।
ಶತಶೃಂಗಾನ್ಮೃತೇ ಪಾಂಡೌ ನಾಗಮಿಷ್ಯಂ ಗಜಾಹ್ವಯಂ ॥೪೫॥

ನಾನು ಈ ನಿಮ್ಮ ವನವಾಸವನ್ನು ಮೊದಲೇ ನಿಶ್ಚಿತವಾಗಿ ತಿಳಿದಿದ್ದರೆ. ಪಾಂಡುವು ಮೃತನಾದ ಮೇಲೆ ಶತಶೃಂಗ ಪರ್ವತದದಿಂದ ಹಸ್ತಿನಪುರಕ್ಕೆ ಬರುತ್ತಲೇ ಇರಲಿಲ್ಲ.

ಧನ್ಯಂ ವಃ ಪಿತರಂ ಮನ್ಯೇ ತಪಸ್ತಪ್ತ್ವಾ ಮೃತಂ ತದಾ ।
ಯಮಪುತ್ರಾಧಿಮಪ್ರಾಪ್ಯ ಸ್ವರ್ಗೇಚ್ಛಾಮಕರೋತ್ ಪ್ರಿಯಾಮ್ ॥೪೬॥

ತಪಸ್ಸನ್ನುಮಾಡಿ ಮೃತನಾದ ನಿಮ್ಮ ತಂದೆಯು ಧನ್ಯನೆಂದು ಭಾವಿಸುತ್ತೇನೆ. ನಕುಲ ಸಹದೇವರ ಮಾತೆಯಾದ ಪ್ರಿಯೆಯಾದ ಮಾದ್ರಿಯ ಆಸೆಯನ್ನು ಪೂರೈಸಿಕೊಳ್ಳದೆ ಅವನು ಸ್ವರ್ಗದ ಆಸೆಯನ್ನೇ ಮಾಡಿದನು.

ಧನ್ಯಾಂ ಚಾತೀಂದ್ರಿಯಜ್ಞಾನಾಂ ಪ್ರಾಪ್ತಾಂ ಚೈವ ಪರಾಂ ಗತಿಮ್ ।
ಮನ್ಯೇಽದ್ಯ ಮಾದ್ರೀಂ ಧರ್ಮಜ್ಞಾಂ ಕಲ್ಯಾಣೀಂ ಸರ್ವಥೈವ ತು ॥೪೭॥

ನಾನು ಈ ದಿನ ಧರ್ಮಜ್ಞಳೂ ಕಲ್ಯಾಣಿಯೂ ಅತೀಂದ್ರಿಯ ಜ್ಞಾನವನ್ನು ಹೊಂದಿ ಪರಗತಿಯನ್ನು ಪಡೆದವಳೂ ಆದ ಮಾದ್ರಿಯನ್ನು ಎಲ್ಲ ರೀತಿಯಿಂದಲೂ ಧನ್ಯಳೆಂದು ಭಾವಿಸುತ್ತೇನೆ.

ರತ್ಯಾ ಗತ್ಯಾ ಚ ಮತ್ಯಾ ಚ ಮಾದ್ಯಾಹಮಭಿಸಂಧಿತಾ ।
ಜೀವಿತಪ್ರಿಯತಾಮೇತಾಂ ಧಿಗ್ ಧಿಙ್ಮಾಂ ಕ್ಲೇಶಭಾಗಿನೀಮ್ ॥೪೮॥

ರತಿ ಗತಿ ಮತ್ತು ಬುದ್ಧಿಗಳಿಂದ ನಾನು ಮಾದ್ರಿಯಿಂದ ವಂಚಿಸಲ್ಪಟ್ಟೆ, ನನ್ನ ಜೀವನದ ಆಸೆಗೆ ಧಿಕ್ಕಾರವಿರಲಿ. ಕ್ಲೇಶ ಭಾಗಿನಿಯಾದ ನನಗೂ ಧಿಕ್ಕಾರವಿರಲಿ.

ಪುತ್ರಕಾನ್ ನ ವಿಹಾಸ್ಯೇಽಹಂ ಕೃಚ್ಛ್ರಲಬ್ಧಾನ್ ಪ್ರಿಯಾನ್ ಸತಃ ।
ಸಾಹಂ ಯಾಸ್ಯಾಮಿ ಹಿ ವನಂ ಹಾ ಕೃಷ್ಣೇ ಕಿಂ ಜಹಾಸಿ ಮಾಮ್ ॥

ಕಷ್ಟದಿಂದ ಪಡೆದ ಪ್ರಿಯರಾದ ನನ್ನ ಮಕ್ಕಳನ್ನು ನಾನು ಬಿಡಲಾರೆ. ನಾನೂ ಸಹ ಕಾಡಿಗೆ ಹೋಗುವೆನು. ಅಯ್ಯೋ ದ್ರೌಪದಿಯೇ ಏಕೆ ನನ್ನನ್ನು ತೊರೆಯುತ್ತಿರುವೆ.

ಅಂತವತ್ಯಸುಧರ್ಮೇಽಸ್ಮಿನ್ ಧಾತ್ರಾ ಕಿಂನು ಪ್ರಮಾದತಃ ।
ಮಮಾಂತೋ ನೈವ ವಿಹಿತಸ್ತೇನಾಯುರ್ನ ಜಹಾತಿ ಮಾಮ್ ॥೫೦॥

ಪ್ರಾಣಧರ್ಮವು ನಾಶವುಳ್ಳದ್ದಾದರೂ ವಿಧಿಯು ಏಕೆ ಮರೆತು ನನ್ನ ವಿನಾಶವನ್ನು ಬರೆಯಲಿಲ್ಲ? ಆದ್ದರಿಂದ ನನ್ನ ಆಯುಸ್ಸು ಮುಗಿಯುತ್ತಿಲ್ಲ.

ಹಾ ಕೃಷ್ಣ ದ್ವಾರಕಾವಾಸಿನ್ ಕ್ವಾಸಿ ಸಂಕರ್ಷಣಾನುಜ ।
ಕಸ್ಮಾನ್ನ ತ್ರಾಯಸೇ ದುಃಖಾನ್ಮಾಂ ಚೇಮಾಂಶ್ಚ ನರೋತ್ತಮಾನ್ ॥೫೧॥

ಅಯ್ಯೋ ದ್ವಾರಕಾವಾಸಿಯಾದ ಕೃಷ್ಣನೇ! ಬಲರಾಮನ ತಮ್ಮನೇ! ನೀನು ಎಲ್ಲಿದ್ದೀಯೆ? ದುಃಖದಲ್ಲಿ ಮುಳುಗಿದ ನನ್ನನ್ನೂ ಈ ಪುರುಷ ಶ್ರೇಷ್ಠರನ್ನೂ ನೀನು ಏಕೆ ಕಾಪಾಡುವುದಿಲ್ಲ?

ಅನಾದಿನಿಧನಂ ತ್ವಾಂ ಯೇ ಬುಧ್ಯಾ ಯಂತಿ ನರಾಃ ಸದಾ ।
ತಾಂಸ್ತ್ವಂ ಪಾಸೀತ್ಯಯಂ ವಾದಃ ಸ ಗತೋ ವ್ಯರ್ಥತಾಂ ಕಥಮ್ ॥

ಅನಾದಿನಿಧನನಾದ ನಿನ್ನನ್ನು ಯಾರು ತಮ್ಮ ಬುದ್ಧಿಯಿಂದ ಶರಣು ಹೊಂದುತ್ತಾರೋ ಅಂತಹವರನ್ನು ನೀನು ಯಾವಾಗಲೂ ರಕ್ಷಿಸುತ್ತೀಯೆ ಎಂಬ ಮಾತು ಈ ದಿನ ಹೇಗೆ ಸುಳ್ಳಾಯಿತು?

ಇಮೇ ಸ್ವಧರ್ಮಮಾಹಾತ್ಮ್ಯಾದ್ ಯಶೋವೀರ್ಯಾನುವರ್ತಿನಃ ।
ನಾರ್ಹಂತಿ ವ್ಯಸನಂ ಭೋಕ್ತುಂ ತಸ್ಮಾದ್ ವೈ ಕ್ರಿಯತಾಂ ದಯಾ ॥೫೩॥

ಪ್ರಭುವೇ! ತಮ್ಮ ಧರ್ಮದಿಂದಲೂ ತಮ್ಮ ಮಹಿಮೆಯಿಂದಲೂ ಯಶಸ್ಸನ್ನೂ ಪರಾಕ್ರಮವನ್ನೂ ಅನುಸರಿಸಿಕೊಂಡಿರುವ ಈ ನನ್ನ ಮಕ್ಕಳು ಹೀಗೆ ಕಷ್ಟ ಪಡಲು ಅರ್ಹರಲ್ಲ. ಆದ್ದರಿಂದ ದಯೆಯನ್ನು ತೋರಿಸು.

ಸೇಯಂ ನೀತ್ಯರ್ಥವಿಜ್ಞೇಷು ಭೀಷ್ಮದ್ರೋಣಕೃಪಾದಿಷು ।
ಸ್ಥಿತೇಷು ಕುಲನಾಥೇಷು ಕಥಮಾಪದುಪಾಗತಾ ॥೫೪॥

ನೀತ್ಯರ್ಥವಿಶಾರದರಾದ ಕುಲನಾಥರಾದ ಭೀಷ್ಮದ್ರೋಣಕೃಪಾದಿಗಳು ಇರುವಾಗ ಇಂತಹ ಆಪತ್ತು ಹೇಗೆ ಉಂಟಾಯಿತು?

ಹಾ ಪಾಂಡೋ ಹಾ ಮಹಾರಾಜ ಕ್ವಾಸಿ ಕಿಂ ಸಮುಪೇಕ್ಷಸೇ ।
ಪುತ್ರಾನ್ ನಿರ್ವಾಸ್ಯತಃ ಸಾಧೂನರಿಭಿರ್ದ್ಯೂತವಂಚಿತಾನ್ ॥೫೫॥

ಅಯ್ಯೋ ಪಾಂಡುಮಹಾರಾಜನೇ! ಎಲ್ಲಿದ್ದೀಯೆ? ಸಜ್ಜನರಾದ ನಿನ್ನ ಪುತ್ರರನ್ನು ಶತ್ರುಗಳು ದ್ಯೂತದಲ್ಲಿ ವಂಚಿಸಿ ಕಾಡಿಗೆ ಕಳುಹಿಸುತ್ತಿರುವಾಗ ನೀನು ಏಕೆ ಉಪೇಕ್ಷೆಮಾಡುತ್ತಿದ್ದೀಯೆ?

ಸಹದೇವ ನಿವರ್ತಸ್ವ ನನು ತ್ವಮಸಿ ಮೇ ಪ್ರಿಯೇ ।
ಶರೀರಾದಪಿ ಮಾದ್ರೇಯ ಮಾಂ ಮಾ ತ್ಯಾಕ್ಷೀಃ ಕುಪುತ್ರವತ್ ॥೫೬॥

ಸಹದೇವನೇ! ನೀನಾದರೂ ಹಿಂದಿರುಗು. ನೀನು ಯಾವಾಗಲೂ ನನಗೆ ಪ್ರಿಯವನ್ನು ಮಾಡುವನಷ್ಟೇ? ಮಾದ್ರೇಯನೇ! ನಿನ್ನ ಶರೀರಕ್ಕಿಂತಲೂ ನಿನಗೆ ನನ್ನ ಮೇಲಿನ ಪ್ರೀತಿಯು ಅಧಿಕ. ಕೆಟ್ಟ ಮಗನಂತೆ ನೀನು ನನ್ನನ್ನು ತೊರೆಯಬೇಡ.

ವ್ರಜಂತ್ವಿಮೇ ಭ್ರಾತರಸ್ತೇ ಯದಿ ಸತ್ಯಾಭಿಸಂಧಿತಾಃ ।
ಮತ್ಪರಿತ್ರಾಣಜಂ ಧರ್ಮಮಿಹೈವ ತ್ವಮವಾಪ್ನುಹಿ ॥೫೭॥

ಈ ನಿನ್ನ ಸಹೋದರರು ಸತ್ಯಪ್ರತಿಜ್ಞೆಯುವುಳ್ಳವರಾದರೆ ಅವರು ವನಕ್ಕೆ ಹೋಗಲಿ. ನೀನು ಇಲ್ಲಿಯೇ ಇದ್ದು ನನ್ನನ್ನು ರಕ್ಷಣೆಮಾಡುವುದರಿಂದ ಉಂಟಾಗುವ ಪುಣ್ಯವನ್ನು ಪಡೆ.

ಯದಿ ಶುಶ್ರೂಷತೇ ನೈವ ಮದ್ವಾಕ್ಯಂ ಸಾತ್ವತರ್ಷಭಃ ।
ಬಹುಪ್ರಲಾಪಯುಕ್ತೇನ ಕಿಮುಕ್ತೇನ ಪ್ರಯೋಜನಮ್ ॥೫೮॥

ಇಷ್ಟು ಪ್ರಲಾಪವನ್ನು ಮಾಡಿದರೂ ಸಾತ್ವತರ್ಷಭನಾದ ಕೃಷ್ಣನು ನನ್ನ ಮಾತನ್ನು ಕೇಳದಿದ್ದರೆ ಪ್ರಲಾಪವನ್ನು ಮಾಡಿ ಏನು ಪ್ರಯೋಜನ?

ಏವಂ ವಿಲಪತೀಂ ಕುಂತೀಮಭಿಸಾಂತ್ವ್ಯ ಪ್ರಣಮ್ಯ ಚ ।
ಪಾಂಡವಾ ವಿಗತಾನಂದಾ ವನಾಯೈವ ಪ್ರಚಕ್ರಮುಃ ॥೫೯॥

ಹೀಗೆ ವಿಲಾಪವನ್ನು ಮಾಡುತ್ತಿದ್ದ ಕುಂತಿಯನ್ನು ಸಮಾಧಾನಪಡಿಸಿ ಅವಳಿಗೆ ನಮಸ್ಕರಿಸಿ ಪಾಂಡವರು ನಿರಾನಂದರಾಗಿ ಕಾಡಿಗೇ ಹೊರಟರು.

ವಿದುರಾದಯಶ್ಚ ತಾಮಾರ್ತಾಂ ಕುಂತೀಮಾಶ್ವಾಸ್ಯ ಹೇತುಭಿಃ ।
ಪ್ರಾವೇಶಯದ್ ಗೃಹಂ ಕ್ಷತ್ತಾ ಸ್ವಯಮಾರ್ತಾತುರಾನ್ ಶನೈಃ ॥೬೦॥

ವಿದುರ ಮೊದಲಾದವರು ಆರ್ತಳಾದ ಕುಂತಿಯನ್ನು ಒಳ್ಳೆಯ ಯುಕ್ತಿಗಳಿಂದ ಸಮಾಧಾನಪಡಿಸಿ ನಿದಾನವಾಗಿ ತಮ್ಮ ಮನೆಗೆ ಕರೆದುಕೊಂಡು ಹೋದರು. ವಿದುರನು ಆರ್ತಾತುರರಾದ ಎಲ್ಲರನ್ನೂ ತಾನೇ ಸಮಾಧಾನ ಮಾಡಿ (ಕುಂತಿಯನ್ನು ತನ್ನ ಮನೆಗೆ ಕರೆದುಕೊಂಡು ಹೋದನು.)

ಧೃತರಾಷ್ಟ್ರಸ್ತ್ರಿಯಸ್ತಾಶ್ಚ ನಿಖಿಲೇನೋಪಲಕ್ಷ್ಯ ತತ್ ।
ಗಮನಂ ಪರಿಕರ್ಷಂ ಚ ಕೃಷ್ಣಾಯಾ ದ್ಯೂತಮಂಡಲೇ ॥೬೧॥

ರುರುದುಃ ಸಸ್ವನಂ ಸರ್ವಾ ವಿನಿಂದಂತ್ಯಃ ಕುರೂನ್ ಭೃಶಮ್ ।
ದಧ್ಯುಶ್ಚ ಸುಚಿರಂ ಕಾಲಂ ಕರಾಸಕ್ತಮುಖಾಂಬುಜಾಃ ॥೬೨॥

ಧೃತರಾಷ್ಟ್ರನ ಎಲ್ಲಸ್ತ್ರೀಯರೂ ದ್ಯೂತಮಂಡಲದಲ್ಲಿ ಕೃಷ್ಣೆಯನ್ನು ಕರೆತಂದುದನ್ನೂ ಅವಳನ್ನು ಎಳೆದಾಡಿದುದನ್ನೂ ಅವಳ ಗಟ್ಟಿಯಾದ ರೋದನವನ್ನೂ ಸಮಗ್ರವಾಗಿ ನೋಡಿ ಕುರುಗಳನ್ನು ಬಹಳವಾಗಿ ನಿಂದಿಸುತ್ತಾ ಕೈಗಳ ಮೇಲೆ ತನ್ನ ಮುಖ ಕಮಲಗಳನ್ನು ಇಟ್ಟು ಬಹಳಕಾಲ ಚಿಂತಾಪರವಶರಾದರು.

ರಾಜಾ ಚ ಧೃತರಾಷ್ಟ್ರಃ ಸ ಪುತ್ರಾಣಾಮನಯಾತ್ ತದಾ ।
ಧ್ಯಾಯನ್ನುದ್ವಿಗ್ನಹೃದಯಃ ಶಾಂತಿಂ ನ ಸ್ಮಾಧಿಗಚ್ಛತಿ ॥೬೩॥

ಧೃತರಾಷ್ಟ್ರರಾಜನು ಮಕ್ಕಳ ದುರ್ನೀತಿಯಿಂದ ಉದ್ವಿಗ್ನವಾದ ಹೃದಯವುಳ್ಳವನಾಗಿ ಚಿಂತಿಸುತ್ತಾ ಆಗ ಶಾಂತಿಯನ್ನು ಹೊಂದಲಿಲ್ಲ.

ಸ ಚಿಂತಯನ್ನನೇಕಾಗ್ರಃ ಶೋಕಾಕುಲಿತಚೇತನಃ ।
ಕ್ಷತ್ತುಃ ಸಂಪ್ರೇಷಯಾಮಾಸ ಶೀಘ್ರಮಾಗಮ್ಯತಾಮಿತಿ ॥೬೪॥

ಶೋಕಗ್ರಸ್ತಮನಸ್ಸುಳ್ಳವನಾಗಿ ಏಕಾಗ್ರತೆಯನ್ನು ಕಳೆದುಕೊಂಡು ಚಿಂತಿಸುತ್ತಾ ಅವನು ಬೇಗ ವಿದುರನನ್ನು ಕರೆದುಕೊಂಡು ಬನ್ನಿ ಎಂದು ಹೇಳಿ ದೂತರನ್ನು ಕಳುಹಿಸಿದನು.

ತತೋ ಜಗಾಮ ವಿದುರೋ ಧೃತರಾಷ್ಟ್ರನಿವೇಶನಮ್ ।
ತಂ ಪರ್ಯಪೃಚ್ಛತ್ ಸಂವಿಗ್ನೋ ಧೃತರಾಷ್ಟ್ರೋ ನರಾಧಿಪಃ ॥೬೫॥

ಅನಂತರ ವಿದುರನು ಧೃತರಾಷ್ಟ್ರನ ಮನೆಗೆ ಹೋದನು. ಶೋಕಸಂವಿಗ್ನನಾದ ಧೃತರಾಷ್ಟ್ರರಾಜನು ಅವನನ್ನು ಕುರಿತು ಪ್ರಶ್ನೆಮಾಡಿದನು.

॥ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಅಷ್ಟನವತಿತಮೋಧ್ಯಾಯಃ॥
॥ಅನುದ್ಯೂತಪರ್ವಣಿ ಷಷ್ಠೋಧ್ಯಾಯಃ॥೬॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ತೊಂಬತ್ತೆಂಟನೆಯ ಅಧ್ಯಾಯವು ಮುಗಿಯಿತು.

★ ★ ★ ★

ತೊಂಬತ್ತೊಂಬನೆಯ ಅಧ್ಯಾಯ

(ವಿದುರನಿಂದ ಪಾಂಡವರ ಚೇಷ್ಟಾವಿಶೇಷದ ಅಭಿಪ್ರಾಯ ಕಥನ. ನಾರದರಿಂದ ಕೌರವರ ವಿನಾಶದ ಭವಿಷ್ಯವಾಣಿ. ದುರ್ಯೋಧನಾದಿಗಳಿಂದ ದ್ರೋಣರ ಶರಣಾಗತಿ. ದ್ರೋಣರ ಮತ್ತು ಧೃತರಾಷ್ಟ್ರನ ಹಿತೋಪದೇಶ.)

ಧೃತರಾಷ್ಟ್ರಃ

ಕಥಂ ಗಚ್ಛತಿ ಕೌಂತೇಯೋ ಧರ್ಮಪುತ್ರೋ ಯುಧಿಷ್ಠಿರಃ ।
ಭೀಮಸೇನಃ ಸವ್ಯಸಾಚೀ ಮಾದ್ರೀಪುತ್ರೌ ಚ ತಾವುಭೌ ॥೧॥

ಧೌಮ್ಯಶ್ಚಾಪಿ ಕಥಂ ಕ್ಷತ್ತರ್ದ್ರೌಪದೀ ಚ ಯಶಸ್ವಿನೀ ।
ಶ್ರೋತುಮಿಚ್ಛಾಮ್ಯಹಂ ಸರ್ವಂ ತೇಷಾಮಿಂಗಿತಚೇಷ್ಟಿತಮ್ ॥೨॥

ಕುಂತಿಪುತ್ರನಾದ ಯಮಪುತ್ರನಾದ ಯುಧಿಷ್ಠಿರನು ಹೇಗೆ ಹೋಗುತ್ತಿದ್ದಾನೆ? ಭೀಮಸೇನನು ಸವ್ಯಸಾಚಿಯಾದ ಅರ್ಜುನನು ಮತ್ತು ಮಾದ್ರಿ ಪುತ್ರರು ಹೇಗೆ ಹೋಗುತ್ತಿದ್ದಾರೆ? ವಿದುರನೇ! ಧೌಮ್ಯನು ಮತ್ತು ಕೀರ್ತಿಶಾಲಿನಿಯಾದ ದ್ರೌಪದಿಯು ಹೇಗೆ ಹೋಗುತ್ತಿದ್ದಾಳೆ? ಅವರಚೇಷ್ಟೆಗಳಿಂದ ಅವರ ಮನಸ್ಸಿನ ಎಲ್ಲಾ ಅಭಿಪ್ರಾಯಗಳನ್ನು ನಾನು ತಿಳಿಯಲು ಬಯಸುತ್ತೇನೆ.

ವಿದುರಃ

ವಸ್ತ್ರೇಣ ಮುಖಮಾವೃತ್ಯ ಕುಂತೀಪುತ್ರೋ ಯುಧಿಷ್ಠಿರಃ ।
ಬಾಹೂ ವಿಶಾಲೌ ಕೃತ್ವಾ ತು ಭೀಮೋ ಗಚ್ಛತಿ ಪಾಂಡವಃ ॥೩॥

ಕುಂತಿಪುತ್ರನಾದ ಯುಧಿಷ್ಠಿರನು ವಸ್ತ್ರದಿಂದ ತನ್ನ ಮುಖವನ್ನು ಮುಚ್ಚಿಕೊಂಡು ಹೋಗುತ್ತಿದ್ದಾನೆ. ಪಾಂಡವನಾದ ಭೀಮಸೇನನು ತನ್ನ ಬಾಹುಗಳನ್ನು ವಿಶಾಲವಾಗಿ ಚಾಚಿ ಹೋಗುತ್ತಿದ್ದಾನೆ.

ಸಿಕತಾನ್ ವಪನ್ ಸವ್ಯಸಾಚೀ ರಾಜಾನಮನುಗಚ್ಛತಿ ।
ಮಾದ್ರೀಪುತ್ರಃ ಸಹದೇವೋ ಮುಖಮಾಲಿಪ್ಯ ಗಚ್ಛತಿ ॥೪॥

ಧನಂಜಯನು ಮರಳುಗಳನ್ನು ತೂರುತ್ತಾ ರಾಜನ ಹಿಂದೆ ಹೋಗುತ್ತಿದ್ದಾನೆ. ಮಾದ್ರೀಪುತ್ರನಾದ ಸಹದೇವನು ತನ್ನ ಮುಖವನ್ನೆಲ್ಲಾ ಬಣ್ಣದಿಂದ ಬಳಿದುಕೊಂಡು ಹೋಗುತ್ತಿದ್ದಾನೆ.

ಪಾಂಸೂಪಲಿಪ್ತಿಸರ್ವಾಂಗೋ ನಕುಲಶ್ಚಿತ್ತವಿಹ್ವಲಃ ।
ದರ್ಶನೀಯತಮೋ ವೀರೋ ರಾಜಾನಮನುಗಚ್ಛತಿ ॥೫॥

ಅತ್ಯಂತಸುಂದರನೂ ವೀರನೂ ಆದ ನಕುಲನು ಚಿತ್ತಕ್ಷೋಭೆಯುಳ್ಳವನಾಗಿ ತನ್ನ ದೇಹವನ್ನೆಲ್ಲಾ ಧೂಳಿನಿಂದ ಲೇಪನವನ್ನುಮಾಡಿಕೊಂಡು ರಾಜನ ಹಿಂದೆ ಹೋಗುತ್ತಿದ್ದಾನೆ.

ಕೃಷ್ಣಾ ಕೇಶೈಃ ಪ್ರತಿಚ್ಛಾದ್ಯ ಮುಖಮಾಯತಲೋಚನಾ ।
ದರ್ಶನೀಯಾ ಪ್ರರುದತೀ ರಾಜಾನಮನುಗಚ್ಛತಿ ॥೬॥

ಆಯತಾಕ್ಷಿಯಾದ ದ್ರೌಪದಿಯು ತನ್ನ ಕೇಶಗಳಿಂದ ಮುಖವನ್ನು ಮುಚ್ಚಿಕೊಂಡು ಸುಂದರಿಯಾದ ಅವಳು ಅಳುತ್ತಾ ರಾಜನ ಹಿಂದೆ ಹೋಗುತ್ತಿದ್ದಾಳೆ.

ಧೌಮ್ಯೋ ಯಾಮ್ಯಾನಿ ಸಾಮಾನಿ ರೌದ್ರಾಣಿ ಚ ವಿಶಾಂಪತೇ ।
ಗಾಯನ್ ಗಚ್ಛತಿ ಮಾರ್ಗೇಷು ಕುಶಾನಾದಾಯ ಪಾಣಿನಾ ॥೭॥

ಎಲೈ ರಾಜನೇ! ಧೌಮ್ಯರು ಘೋರವಾದ ಯಮದೇವತಾಕವಾದ ಸಾಮಗಳನ್ನು ಗಾನಮಾಡುತ್ತಾ ಕೈಯಲ್ಲಿ ದರ್ಭೆಗಳನ್ನು ಹಿಡಿದುಕೊಂಡು ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾರೆ.

ಧೃತರಾಷ್ಟ್ರಃ

ವಿವಿಧಾನೀಹ ರೂಪಾಣಿ ಕೃತ್ವಾ ಗಚ್ಛಂತಿ ಪಾಂಡವಾಃ ।
ತನ್ಮಮಾಚಕ್ಷ್ವ ವಿದುರ ಏವಂ ಕಸ್ಮಾದ್ ಬ್ರವೀಮಿ ತೇ ॥೮॥

ಪಾಂಡವರು ಅನೇಕ ರೂಪಗಳನ್ನು ಧರಿಸಿ ಹೋಗುತ್ತಿದ್ದಾರೆ. ವಿದುರನೇ ನಾನು ನಿನ್ನನ್ನು ಕೇಳುತ್ತಿದ್ದೇನೆ. ಇದಕ್ಕೆ ಕಾರಣವನ್ನು ನನಗೆ ಹೇಳು.

ವಿದುರಃ

ನಿಕೃತ್ತಸ್ಯಾಪಿ ತೇ ಪುತ್ರೈರ್ಹೃತೇ ರಾಜ್ಯೇ ಧನೇಷು ಚ ।
ನ ಧರ್ಮಾಚ್ಚ್ಯವತೇ ಬುದ್ಧಿರ್ಧರ್ಮರಾಜಸ್ಯ ಧೀಮತಃ ॥೯॥

ರಾಜ್ಯದಿಂದಲೂ ಧನದಿಂದಲೂ ಮೋಸದಿಂದ ನಿನ್ನ ಪುತ್ರರಿಂದ ವಂಚಿತನಾದ ಮೇಧಾವಿಯಾದ ಧರ್ಮರಾಜನ ಬುದ್ಧಿಯು ಧರ್ಮವನ್ನು ಬಿಟ್ಟುಕದಲುವುದಿಲ್ಲ.

ಯೋಽಸೌ ರಾಜಾ ಘೃಣೇ ನಿತ್ಯಂ ಧಾರ್ತರಾಷ್ಟ್ರೇಷು ಭಾರತ ।
ನಿಕೃತ್ಯಾ ಕ್ರೋಧಸಂತಪ್ತೋ ನೋನ್ಮೀಲಯತಿ ಲೋಚನೇ ॥೧೦॥

ನಾಹಂ ಜನಂ ನಿರ್ದಹೇಯಂ ದೃಷ್ಟ್ವಾ ಘೋರೇಣ ಚಕ್ಷುಷಾ ।
ಅಪಿಧಾಯ ಮುಖಂ ರಾಜಾ ತಸ್ಮಾದ್ ಗಚ್ಛತಿ ಪಾಂಡವಃ ।
ಯಥಾ ಚ ಭೀಮೋ ವ್ರಜತಿ ತನ್ಮೇ ನಿಗದತಃ ಶೃಣು ॥೧೧॥

ಎಲೈ ಭಾರತನೇ! ದುರ್ಯೋಧನಾದಿಗಳಲ್ಲಿ ಯಾವಾಗಲೂ ದಯಾಪರನಾದ ರಾಜನು ಮೋಸದ ನಿಮಿತ್ತದಿಂದ ಉಂಟಾದ ಕ್ರೋಧದಿಂದ ಸಂತಪ್ತನಾದ ಕಾರಣ ಕಣ್ಣುಗಳನ್ನು ಮುಚ್ಚಿಕೊಂಡಿದ್ದಾನೆ. ಕ್ರೋಧಸತವಾದ ನನ್ನ ದೃಷ್ಟಿಯಿಂದ ನಾನು ನೋಡಿದ ಜನರನ್ನು ದಹಿಸಬಾರದು ಎಂದು ಪಾಂಡುಪುತ್ರನಾದ ಧರ್ಮರಾಜನು ಮುಖವನ್ನು ಮುಚ್ಚಿಕೊಂಡು ನಡೆಯುತ್ತಿದ್ದಾನೆ. ಭೀಮನು ಹೇಗೆ ಹೋಗುತ್ತಿದ್ದಾನೆಂದು ಹೇಳುತ್ತೇನೆ ಕೇಳು.

ಬಾಹ್ವೋರ್ಬಲೇ ನಾಸ್ತಿ ಸಮೋ ಮಮೇತಿ ಭರತರ್ಷಭ ।
ಬಾಹೂ ವಿಶಾಲೌ ಕೃತ್ವಾ ತು ಭೀಮಸೇನೋಽನುಗಚ್ಛತಿ ॥೧೨॥

ಭರತರ್ಷಭನೇ! ಬಾಹುಬಲದಲ್ಲಿ ನನಗೆ ಸಮನಾದವರು ಯಾರೂ ಇಲ್ಲ ಎಂದು ತಿಳಿಸುತ್ತಾ ಭೀಮನು ತನ್ನ ಬಾಹುಗಳನ್ನು ಚಾಚಿಕೊಂಡು ರಾಜನನ್ನು ಹಿಂಬಾಲಿಸುತ್ತಿದ್ದಾನೆ.

ಪ್ರದಿಶನ್ ಶರಸಂಘಾತಾನ್ ಕುಂತೀಪುತ್ರೋಽರ್ಜುನಸ್ತದಾ ।
ಸಿಕತಾ ವಪನ್ ಸವ್ಯಸಾಚೀ ರಾಜಾನಮನುಗಚ್ಛತಿ ॥೧೩॥

ಕುಂತೀಪುತ್ರನಾದ ಅರ್ಜುನನು ಬಾಣಗಳ ಸಮೂಹವನ್ನು ನಿದರ್ಶಿಸುವಂತೆ ಮರಳುಗಳನ್ನು ಗಾಳಿಯಲ್ಲಿ ತೂರೂತ್ತಾ ರಾಜನನ್ನು ಹಿಂಬಾಲಿಸುತ್ತಿದ್ದಾನೆ.

ಅಸಕ್ತಾಃ ಸಿಕತಾಸ್ತಸ್ಯ ಯಥಾ ಸಂಪ್ರತಿ ಭಾರತ ।
ಅಸಕ್ತಾಃ ಶರವರ್ಷಾಣಿ ತಥಾ ಮೋಕ್ಷತಿ ಶತ್ರುಷು ॥೧೪॥

ಎಲೈ ಭಾರತನೇ! ಅವನು ತೂರಿದ ಮರಳಿನ ಕಣಗಳು ಹೇಗೆ ಪರಸ್ಪರ ಸೇರಿಕೊಳ್ಳುವುದಿಲ್ಲವೋ ಮತ್ತು ಅಸಂಖ್ಯೇಯವಾಗಿ ಇರುತ್ತವೆಯೋ ಹಾಗೆ ಅವನು ಶತ್ರುಗಳಲ್ಲಿ ಪರಸ್ಪರವಾಗಿ ಸಕ್ತವಾಗದಂತಹ ಬಾಣಗಳ ಮಳೆಯನ್ನು ಸುರಿಸುವನು.

ನ ಮೇ ಕಶ್ಚಿದ್ ವಿಜಾನೀಯಾನ್ಮುಖಮದ್ಯೇತಿ ಭಾರತ ।
ಮುಖಮಾಲಿಪ್ಯ ತೇನಾಸೌ ಸಹದೇವೋಽನುಗಚ್ಛತಿ ॥೧೫॥

ಎಲೈ ಭಾರತನೇ! ಈ ದಿನ ಯಾರೂ ನನ್ನ ಮುಖವನ್ನು ನೋಡುವುದು ಬೇಡ ಎಂದು ಸಹದೇವನು ತನ್ನ ಮುಖವನ್ನು ಬಣ್ಣದಿಂದ ಬಳಿದುಕೊಂಡು ಹಿಂಬಾಲಿಸುತ್ತಿದ್ದಾನೆ.

ನಾಸಾಂ ಮನಾಂಸ್ಯಾದದೇಯಂ ಮಾರ್ಗೇ ಸ್ತ್ರೀಣಾಮಿತಿ ಪ್ರಭುಃ ।
ಪಾಂಸೂಪಲಿಪ್ತಸರ್ವಾಂಗೋ ನಕುಲಸ್ತೇನ ಗಚ್ಛತಿ ॥೧೬॥

ಪ್ರಭುವಾದ ನಕುಲನು ದಾರಿಯಲ್ಲಿ ಹೋಗುವ ಸ್ತ್ರೀಯರ ಮನಸ್ಸನ್ನು ತಾನು ಅಪಹರಿಸಬಾರದೆಂದು ದೇಹಕ್ಕೆಲ್ಲಾ ಧೂಳನ್ನು ಲೇಪಿಸಿಕೊಂಡು ಹೋಗುತ್ತಿದ್ದಾನೆ.

ಏಕವಸ್ತ್ರಾ ಪ್ರರುದತೀ ಮುಕ್ತಕೇಶೀ ರಜಸ್ವಲಾ।
ಶೋಣಿತಾಕ್ತಾರ್ದ್ರವಸನಾ ದ್ರೌಪದೀ ವಾಕ್ಯಮಬ್ರವೀತ್ ॥೧೭॥

ಏಕವಸ್ತ್ರವನ್ನು ಧರಿಸಿದ ರಜಸ್ವಲೆಯಾದ ರಕ್ತದಿಂದ ಆರ್ದ್ರವಾದ ವಸ್ತ್ರವುಳ್ಳ ದ್ರೌಪದಿಯು ತನ್ನ ಕೇಶಗಳನ್ನು ಕೆದರಿಕೊಂಡು ಹೀಗೆ ಮಾತನಾಡಿದಳು.

ಯತ್ಕೃತೇಽಹಮಿದಂ ಪ್ರಾಪ್ತಾ ತೇಷಾಂ ವರ್ಷೇ ಚತುರ್ದಶೇ ।
ಹತಾಃ ಪತ್ಯಾ ಹತಸುತಾ ಹತಬಂಧುಜನಪ್ರಿಯಾಃ ॥೧೮॥

ಬಹ್ವ್ಯಃ ಶೋಣಿತದಿಗ್ಧಾಂಗ್ಯೋ ಮುಕ್ತಕೇಶ್ಯೋ ರಜಸ್ವಲಾಃ ।
ಏವಂ ಕೃತೋದಕಾ ನಾರ್ಯ್ಯಃ ಪ್ರವೇಕ್ಷ್ಯಂತಿ ಗಜಾಹ್ವಯಮ್ ॥೧೯॥

ಯಾರ ನಿಮಿತ್ತದಿಂದ ನಾನು ಇಂತಹ ದುರವಸ್ಥೆಯನ್ನು ಹೊಂದಿದೆನೋ ಇವತ್ತಿಗೆ ಹದಿನಾಲ್ಕನೆವರ್ಷದಲ್ಲಿ ಅವರ ಸ್ತ್ರೀಯರೆಲ್ಲರೂ ತನ್ನ ಪತಿಗಳಿಂದ ವೈಧವ್ಯವನ್ನು ಹೊಂದಿದವರಾಗಿ ಮಕ್ಕಳನ್ನೂ ಬಂಧುಜನಗಳನ್ನೂ ಪ್ರಿಯಜನರನ್ನೂ ಕಳೆದುಕೊಂಡು ರಣರಂಗದಲ್ಲಿ ಪತಿಯ ಶವದ ಮೇಲೆ ಹೊರಳಾಡುವುದರಿಂದ ಧೂಳಿನಿಂದಲೂ ರಕ್ತದಿಂದಲೂ ಅಂಕಿತವುಳ್ಳ ಶರೀರವುಳ್ಳವರಾಗಿ ಕೇಶಗಳನ್ನು ಕೆದರಿಕೊಂಡು ಧರ್ಮೋದಕವನ್ನು ಕೊಟ್ಟು ಈ ರೀತಿಯಲ್ಲಿಯೇ ಹಸ್ತಿನಪುರವನ್ನು ಪ್ರವೇಶಿಸುವರು.

ಕೃತ್ವಾ ತು ನೈಋತಾನ್ ದರ್ಭಾನ್ ಧೀರೋ ಧೌಮ್ಯಃ ಪುರೋಹಿತಃ ।
ಸಾಮಾನಿ ಗಾಯನ್ ಯಾಮ್ಯಾನಿ ಪುರತೋ ಯಾತಿ ಭಾರತ ॥೨೦॥

ಹತೇಷು ಭರತೇಷ್ವಾಜೌ ಕುರೂಣಾಂ ಕುರವಸ್ತದಾ ।
ಏವಂ ಸಾಮಾನಿ ಗಾಯಂತಿತ್ಯುಕ್ತ್ವಾ ಧೌಮ್ಯೋಪಿ ಗಚ್ಛತಿ ॥೨೧॥

ಭಾರತನೇ! ಪುರೋಹಿತರಾದ ಧೀರರಾದ ಧೌಮ್ಯರು ಉತ್ತರಕ್ರಿಯೆಗೆ ಬೇಕಾದಂತೆ ದರ್ಭೆಗಳನ್ನು ನಿಯೋಜಿಸಿ ಉತ್ತರಕ್ರಿಯೆಗೆ ಬೇಕಾದ ಸಾಮಗಳನ್ನು ಗಾನಮಾಡುತ್ತಾ ಮುಂದೆ ಹೋಗುತ್ತಿದ್ದಾರೆ. ಯುದ್ಧದಲ್ಲಿ ಕುರುಗಳು ಹತರಾದ ಮೇಲೆ ಅವರ ಪುರೋಹಿತರು ಹೀಗೆಯೇ ಉತ್ತರಕ್ರಿಯೆಯೂ ಮಂತ್ರಗಳನ್ನು ಗಾನಮಾಡಲಿ ಎಂದು ಹೇಳುತ್ತಾ ಧೌಮ್ಯರು ಹೋಗುತ್ತಿದ್ದಾರೆ.

ಪ್ರಸ್ಥಾಪ್ಯ ಪಾಂಡವಾನೇತಾನ್ ನಿಶ್ಶೇಷಸ್ತೇ ಭವಿಷ್ಯತಿ ।
ಇತಿ ಧೌಮ್ಯೋ ವ್ಯವಸಿತೋ ರೌದ್ರಸಾಮಾನಿ ಗಾಯತಿ ॥೨೨॥

ಈ ಪಾಂಡವರನ್ನು ನಗರದಿಂದ ವನವಾಸಕ್ಕೆ ಕಳುಹಿಸಿದ ಮೇಲೆ ನಿನ್ನ ವಂಶವು ನಿಶ್ಶೇಷವಾಗುವುದು ಎಂದು ನಿರ್ಧರಿಸಿದ ಧೌಮ್ಯರು ಭಯಂಕರ ಮಂತ್ರಗಳನ್ನು ಗಾನಮಾಡುತ್ತಿದ್ದಾರೆ.

ಏವಮಾಕಾರಲಿಂಗೈಸ್ತೇ ವ್ಯವಸಾಯಂ ಮನೋಗತಮ್ ।
ಕಥಯಂತಶ್ಚ ಕೌಂತೇಯಾ ವನಂ ಜಗ್ಮುರ್ಮನಸ್ವಿನಃ ॥೨೩॥

ಧೀರರಾದ ಕುಂತಿಪುತ್ರರಾದ ಪಾಂಡವರು ಇಂತಹ ಆಕಾರಗಳಿಂದ ತಮ್ಮ ಮನಸ್ಸಿನ ನಿರ್ಧಾರವನ್ನು ತಿಳಿಸುತ್ತಾ ವನಕ್ಕೆ ತೆರಳಿದರು.

ಏವಂ ತೇಷು ನರಾಗ್ರ್ಯೇಷು ನಿರ್ಯಾತ್ಸು ಗಜಸಾಹ್ವಯಾತ್ ।
ಅನಭ್ರೇ ವಿದ್ಯುತಶ್ಚಾಸನ್ ಭೂಮಿಶ್ಚ ಸಮಕಂಪತ ॥೨೪॥

ಹೀಗೆ ಆ ಪುರುಷಶ್ರೇಷ್ಠರು ಹಸ್ತಿನಪುರವನ್ನು ಬಿಟ್ಟು ಹೊರಡುತ್ತಿರಲು ಮೋಡವಿಲ್ಲದ ಆಕಾಶದಲ್ಲಿ ಮಿಂಚುಗಳು ಉಂಟಾದವು. ಭೂಮಿಯು ನಡುಗಿತು.

ರಾಹುರಗ್ರಸದಾದಿತ್ಯಮಪರ್ವಣಿ ವಿಶಾಂಪತೇ ।
ಉಲ್ಕಾ ಚಾಪ್ಯಪಸವ್ಯಂ ತು ಪುರಸ್ಕೃತ್ವಾ ವ್ಯಶೀರ್ಯತ ॥೨೫॥

ರಾಜನೇ! ಪರ್ವಕಾಲವಲ್ಲದ ದಿವಸದಲ್ಲಿ ರಾಹುವು ಸೂರ್ಯನನ್ನು ನುಂಗಿದನು. ಉಲ್ಕೆಗಳು ಮುಂದಿನಿಂದ ಬಲಬಾಗಕ್ಕೆ ಬಂದು ನಾಶವನ್ನು ಹೊಂದಿದವು.

ಪ್ರವ್ಯಾಹರಂತ ಕ್ರವ್ಯಾದಾ ಗೃಧ್ರಗೋಮಾಯುವಾಯಸಾಃ ।
ದೇವಾಯತನಚೈತ್ಯೇಷು ಪ್ರಾಕಾರಾಟ್ಟಾಲಕೇಷು ಚ ॥೨೬॥

ಮಾಂಸಹಾರಿಪ್ರಾಣಿಗಳು ತಮ್ಮ ತಮ್ಮ ಧ್ವನಿಗಳನ್ನು ಮಾಡಿದವು. ದೇವಾಲಯಗಳಲ್ಲಿಯೂ ಪೂಜ್ಯವಾದ ವೃಕ್ಷಗಳಲ್ಲಿಯೂ ಕೋಟೆ ಮೊದಲಾದ ಸ್ಥಳಗಳಲ್ಲಿಯೂ ಹದ್ದುಗಳು ನರಿಗಳು ಮತ್ತು ಕಾಗೆಗಳು ಕಿರುಚಿದವು.

ಏವಮೇತೇ ಮಹಾರಾಜ ವನಂ ಗಚ್ಛಂತಿ ಪಾಂಡವಾಃ ।
ಭರತಾನಾಂ ವಿನಾಶಾಯ ರಾಜನ್ ದುರ್ಮಂತ್ರಿತೇ ತವ ।
ಏವಮುಕ್ತ್ವಾ ತು ವಿದುರಃ ತೂಷ್ಣೀಮಾಸೀದ್ ವಿಶಾಂಪತೇ ॥೨೭॥

ಮಹಾರಾಜನೇ! ನಿನ್ನ ದುರ್ಮಂತ್ರಣದ ನಿಮಿತ್ತದಿಂದ ಭರತವಂಶದ ವಿನಾಶಕ್ಕಾಗಿ ಈ ಪಾಂಡವರು ಹೀಗೆ ಕಾಡಿಗೆ ಹೋಗುತ್ತಿದ್ದಾರೆ. ಎಲ್ಲೆ ರಾಜನೇ! ಹೀಗೆ ಹೇಳಿ ವಿದುರನು ಸುಮ್ಮನಾದನು.

ನಾರದಶ್ಚ ಸಭಾಮಧ್ಯೇ ಕುರೂಣಾಮಗ್ರತಃ ಸ್ಥಿತಃ ।
ಮಹರ್ಷಿಭಿಃ ಪರಿವೃತೋ ರೌದ್ರಂ ವಾಕ್ಯಮುವಾಚ ಹ ॥೨೮॥

ಆ ವೇಳೆಗೆ ಸಭಾಮಧ್ಯದಲ್ಲಿ ನಾರದರು ಮಹರ್ಷಿಗಳ ಜೊತೆಯಲ್ಲಿ ಕುರುಗಳ ಮುಂದೆ ಪ್ರತ್ಯಕ್ಷವಾಗಿ ನಿಂತು ಭಯಂಕರವಾದ ಮಾತನ್ನು ಆಡಿದರು.

ಇತಶ್ಚತುರ್ದಶೇ ವರ್ಷೇ ವಿನಶಿಷ್ಯಂತಿ ಕೌರವಾಃ ।
ದುರ್ಯೋಧನಾಪರಾಧೇನ ಭೀಮಾರ್ಜುನಬಲೇನ ಚ ॥೨೯॥

ಇವತ್ತಿಗೆ ಹದಿನಾಲ್ಕನೆಯ ವರ್ಷದಲ್ಲಿ ದುರ್ಯೋಧನನ ಅಪರಾಧದಿಂದ ಮತ್ತು ಭೀಮಾರ್ಜುನನರ ಬಲದಿಂದ ಕೌರವರು ನಾಶವನ್ನು ಹೊಂದುವರು.

ಇತ್ಯುಕ್ತ್ವಾ ದಿವಮಾಕ್ರಮ್ಯ ಕ್ಷಿಪ್ರಮಂತರಧೀಯತ ।
ಬ್ರಾಹ್ಮೀಂ ಶ್ರಿಯಂ ಚ ವಿಪುಲಾಂ ಬಿಭ್ರದ್ ದೇವರ್ಷಿಸತ್ತಮಃ ॥೩೦॥

ವಿಪುಲವಾದ ಬ್ರಹ್ಮತೇಜಸ್ಸನ್ನು ಹೊಂದಿದ್ದ ದೇವರ್ಷಿಶ್ರೇಷ್ಠರಾದ ಅವರು ಹೀಗೆ ಹೇಳಿ ಆಕಾಶಕ್ಕೆ ಹಾರಿ ಬೇಗ ಅಂತರ್ಧಾನವನ್ನು ಹೊಂದಿದರು.

ಧೃತರಾಷ್ಟ್ರಃ

ಕಿಮಬ್ರುವನ್ ನಾಗರಿಕಾಃ ಕಿಂ ವೈ ಜಾನಪದಾ ಜನಾಃ ।
ಮಹ್ಯಂ ತತ್ತ್ವೇನ ಚಾಚಕ್ಷ್ವ ಕ್ಷತ್ತಃ ಸರ್ವಮಶೇಷತಃ ॥೩೧॥

ನಗರವಾಸಿಗಳಾದ ಜನರೂ ರಾಷ್ಟ್ರವಾಸಿಗಳಾದ ಜನರೂ ಏನನ್ನು ಹೇಳಿದರು? ವಿದುರನೇ! ನನಗೆ ಅದೆಲ್ಲವನ್ನೂ ಯಥಾರ್ಥವಾಗಿ ಹೇಳು.

ವಿದುರಃ

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾ ಯೇನ್ಯೇ ವದಂತ್ಯಥ ।
ತಚ್ಛೃಣುಷ್ವ ಮಹಾರಾಜ ವಕ್ಷ್ಯತೇ ಚ ಮಯಾ ತವ ॥೩೨॥

ಮಹಾರಾಜನೇ! ಬ್ರಾಹ್ಮಣರು ಕ್ಷತ್ರಿಯರು ವೈಶ್ಯರು ಮತ್ತು ಶೂದ್ರರು ಮತ್ತು ಉಳಿದವರೂ ಸಹ ಏನು ಮಾತನಾಡುತ್ತಾರೆಂದು ನಾನು ನಿನಗೆ ಹೇಳುತ್ತೇನೆ. ಅದನ್ನು ಕೇಳು.

ಹಾ ಹಾ ಗಚ್ಛಂತಿ ನೋ ನಾಥಾಃ ಸಮವೇಕ್ಷಧ್ವಮೀದೃಶಮ್ ।
ಇತಿ ಪೌರಾಃ ಸುದುಃಖಾರ್ತಾಃ ಶೋಚಂತಿ ಸ್ಮ ಸಮಂತತಃ ॥೩೩॥

ಅಯ್ಯೋ ನಮ್ಮ ಒಡೆಯರಾದ ಪಾಂಡವರು ಹೋಗುತ್ತಿದ್ದಾರೆ. ಇಂತಹ ದೃಶ್ಯವನ್ನು ನೋಡಿ ಎಂದು ದುಃಖಾರ್ಥವಾಗಿ ಹೇಳುತ್ತಾ ಪೌರರು ಎಲ್ಲಾ ಕಡೆಗಳಲ್ಲಿಯೂ ಶೋಕವನ್ನು ಮಾಡಿದರು.

ತತಃ ಪೌರಾಶ್ಚ ದೀನಾಸ್ತೇ ಗತೇ ಪಾರ್ಥೇ ವನಂ ತಥಾ ।
ಗಾವೋ ಹೀನಾ ಯಥಾ ವತ್ಸೈಃ ಪುರಂ ಪ್ರವಿವಿಶುಃ ಪುನಃ ॥೩೪॥

ಅನಂತರ ಪಾಂಡವರು ಕಾಡಿಗೆಹೋದಮೇಲೆ ದೀನರಾದ ಪೌರರು ಕರುಗಳನ್ನು ಕಳೆದುಕೊಂಡ ಹಸುಗಳಂತೆ ಪಟ್ಟಣಕ್ಕೆ ಹಿಂದಿರುಗಿದರು.

ತದಹೃಷ್ಟಮಿವಾಕೂಜಂ ಗತೋತ್ಸವಮಿವಾಭವತ್ ।
ನಗರಂ ಹಸ್ತಿನಪುರಂ ಸಸ್ತ್ರೀವೃದ್ಧಕುಮಾರಕಮ್ ।
ಸರ್ವೇ ಚಾಸನ್ ನಿರುತ್ಸಾಹಾ ವ್ಯಾಧಿನಾ ಬಾಧಿತಾ ಯಥಾ ॥೩೫॥

ಹಸ್ತಿನಪುರವು ಸ್ತ್ರೀವೃದ್ಧಕುಮಾರಕರನ್ನು ಸೇರಿ ಅಸಂತೋಷಮಯವೂ ನಿಶ್ಶಬ್ದವೂ ಉತ್ಸವಹೀನವೂ ಆಯಿತು. ವ್ಯಾಧಿಯಿಂದ ಬಾಧಿತರಾದಂತೆ ಎಲ್ಲರೂ ಉತ್ಸಾಹವನ್ನು ಕಳೆದುಕೊಂಡರು.

ಪಾರ್ಥಾನ್ ಪ್ರತಿ ನರಾ ನಿತ್ಯಂ ಚಿಂತಾಶೋಕಪರಾಯಣಾಃ ।
ತತ್ರ ತತ್ರ ಕಥಾಂ ಚಕ್ರುಃ ಸಮಾಸಾದ್ಯ ಪರಸ್ಪರಮ್ ॥೩೬॥

ಚಿಂತಾಶೋಕಪರಾಯಣರಾದ ಪ್ರಜೆಗಳು ಒಬ್ಬರನೊಬ್ಬರು ಸೇರಿ ಪಾಂಡವರ ವಿಷಯದಲ್ಲಿ ಯಾವಾಗಲೂ ಮಾತನಾಡಿದರು.

ಕುಂತೀ ಚ ಭೃಶದುಃಖಾರ್ತಾ ಪುತ್ರೈಃ ಸರ್ವೈರ್ವಿವರ್ಜಿತಾ ।
ಹೀನವತ್ಸಾ ಯಥಾ ಧೇನುರ್ವಿಲಲಾಪ ಸುದುಃಖಿತಾ ॥೩೭॥

ಎಲ್ಲಾ ಮಕ್ಕಳಿಂದ ವಿಯೋಗವನ್ನು ಪಡೆದ ಕುಂತಿಯು ಬಹಳ ದುಃಖಕ್ಕೆ ಒಳಗಾದವಳಾಗಿ ಕರುವನ್ನು ಕಳೆದು ಕೊಂಡ ಹಸುವಿನಂತೆ ದುಃಖದಿಂದ ವಿಲಾಪವನ್ನು ಮಾಡಿದಳು.

ವನಂ ಗತೇ ಧರ್ಮರಾಜೇ ದುಃಖಶೋಕಪರಾಯಣಾಃ ।
ಬಭೂವುಃ ಕೌರವಾ ವೃದ್ಧಾ ಭೃಶಂ ಶೋಕೇನ ಪೀಡಿತಾಃ ॥೩೮॥

ಧರ್ಮರಾಜನು ಕಾಡಿಗೆ ಹೋಗುತ್ತಿರಲು ದುಃಖಶೋಕ- ಪರಾಯಣರಾದ ಕುರುವೃದ್ಧರು ಬಹಳ ಶೋಕದಿಂದ ಪೀಡಿತರಾದರು.

ತತಃ ಪೌರಜನಃ ಸರ್ವಃ ಶೋಚನ್ನಾಸ್ತೇ ಜನಾಧಿಪಮ್ ।
ಕುರ್ವಾಣಾಶ್ಚ ಕಥಾಸ್ತತ್ರ ಬ್ರಾಹ್ಮಣಾಃ ಪಾರ್ಥಿವಂ ಪ್ರತಿ ॥೩೯॥

ಅನಂತರ ಪೌರಜನರೆಲ್ಲರೂ ರಾಜನಾದ ಧರ್ಮರಾಜನನ್ನು ಕುರಿತು ಶೋಕಪಡುತ್ತಿದ್ದರು. ಬ್ರಾಹ್ಮಣರೂ ಸಹ ರಾಜನ ವಿಷಯದಲ್ಲಿ ಅಲ್ಲಲ್ಲಿ ಮಾತನಾಡಿದರು.

ಕಥಂ ನು ರಾಜಾ ಧರ್ಮಾತ್ಮಾ ವನೇ ವಸತಿ ನಿರ್ಜನೇ ।
ತಸ್ಯಾನುಜಾಶ್ಚ ತೇ ನಿತ್ಯಂ ಕೃಷ್ಣಾ ಚ ದ್ರುಪದಾತ್ಮಜಾ ।
ಸುಖಾರ್ಹಾऽಪಿ ಚ ದುಃಖಾರ್ತಾ ಕಥಂ ವಸತಿ ಸಾ ವನೇ ॥೪೦॥

ಧರ್ಮಾತ್ಮನಾದ ರಾಜನು ನಿರ್ಜನವಾದ ಕಾಡಿನಲ್ಲಿ ಹೇಗೆ ವಾಸಮಾಡುತ್ತಾನೆ? ಅವನ ತಮ್ಮಂದಿರಾಗಲೀ ಸುಖಕ್ಕೆ ಯೋಗ್ಯಳಾದ ದ್ರೌಪದಿಯಾಗಲೀ ಯಾವಾಗಲೂ ದುಃಖಾರ್ತರಾಗಿ ಕಾಡಿನಲ್ಲಿ ಹೇಗೆ ವಾಸಮಾಡುತ್ತಾರೆ?

ಏವಂ ಪೌರಾಶ್ಚ ವಿಪ್ರಾಶ್ಚ ಸದಾರಾಃ ಸಹಪುತ್ರಕಾಃ ।
ಸ್ಮರಂತಃ ಪಾಂಡವಾನ್ ಸರ್ವೇ ಬಭೂವುರ್ಭೃಶದುಃಖಿತಾಃ ॥೪೧॥

ಹೀಗೆ ಪೌರರೂ ಮತ್ತು ವಿಪ್ರರೂ ತಮ್ಮ ಪತ್ನೀ ಪುತ್ರರ ಜೊತೆಯಲ್ಲಿ ಪಾಂಡವರನ್ನು ಸ್ಮರಿಸುತ್ತಾ ಅತ್ಯಂತ ದುಃಖಿತರಾದರು.

ಆವಿದ್ಧಾ ಇವ ಶಸ್ತ್ರೇಣ ನಾಭ್ಯನಂದನ್ ಕಥಂಚನ ।
ಸಂಭಾಷ್ಯಮಾಣಾ ಅಪಿ ತೇ ನ ಕಂಚಿತ್ ಪ್ರತ್ಯಪೂಜಯನ್ ॥೪೨॥

ಶಸ್ತ್ರದ ಆಘಾತಕ್ಕೆ ಒಳಗಾದವರಂತೆ ಅವರು ಯಾವುದರಿಂದಲೂ ಸಂತೋಷಪಡಲಿಲ್ಲ. ಮಾತನಾಡಿಸಿದರೂ ಅವರು ಪ್ರತಿವಚನವನ್ನು ನೀಡಿ ಯಾರನ್ನೂ ಸತ್ಕರಿಸಲಿಲ್ಲ.

ನಭುಕ್ತ್ವಾ ನಶಯಿತ್ವಾ ತೇ ದಿವಾ ವಾ ಯದಿ ವಾ ನಿಶಿ ।
ಶೋಕೋಪಹತವಿಜ್ಞಾನಾ ನಷ್ಟಸಂಜ್ಞಾ ಇವಾಭವನ್ ॥೪೩॥

ಅವರು ಹಗಲಾಗಲೀ ರಾತ್ರಿಯಾಗಲೀ ಊಟವನ್ನು ಮಾಡದೆ ನಿದ್ರೆಯನ್ನೂ ಮಾಡದೆ ಶೋಕದಿಂದ ಉಪಹತವಾದ ಬುದ್ಧಿಯುಳ್ಳವರಾಗಿ ಪ್ರಜ್ಞೆತಪ್ಪಿದವರಂತೆ ಆದರು.

ಯದವಸ್ಥಾ ಬಭೂವಾರ್ತಾ ಹ್ಯಯೋಧ್ಯಾ ನಗರೀ ಪುರಾ ।
ರಾಮೇ ವನಂ ಗತೇ ದುಃಖಾದ್ಹೃತರಾಜ್ಯೇ ಸಲಕ್ಷ್ಮಣೇ ॥೪೪॥

ತದವಸ್ಥಂ ಬಭೂವಾರ್ತಮದ್ಯೇದಂ ಗಜಸಾಹ್ವಯಮ್ ।
ಗತೇ ಪಾರ್ಥೇ ವನಂ ದುಃಖಾದ್ಹೃತರಾಜ್ಯೇ ಸಹಾನುಜೈಃ ॥೪೫॥

ಹಿಂದೆ ರಾಮನು ರಾಜ್ಯವನ್ನು ಕಳೆದುಕೊಂಡು ಲಕ್ಷ್ಮಣನ ಜೊತೆಯಲ್ಲಿ ಕಾಡಿಗೆಹೋದಾಗ ಅಯೋಧ್ಯಾಪಟ್ಟಣಕ್ಕೆ ಎಂತಹ ಅವಸ್ಥೆಯು ಉಂಟಾಯಿತೋ ಅಂತಹ ಅವಸ್ಥೆಯು ರಾಜ್ಯವನ್ನು ಕಳೆದುಕೊಂಡು ತಮ್ಮಂದಿರ ಜೊತೆಯಲ್ಲಿ ಧರ್ಮರಾಜನು ಕಾಡಿಗೆ ಹೋಗುತ್ತಿರಲು ಈ ಹಸ್ತಿನಪುರಕ್ಕೆ ಉಂಟಾಯಿತು.

ವೈಶಂಪಾಯನಃ

ವಿದುರಸ್ಯ ವಚಃ ಶ್ರುತ್ವಾ ನಾಗರಸ್ಯ ಗಿರಂ ಚ ವೈ ।
ಭೂಯೋ ಮುಮೋಹ ಶೋಕಾಚ್ಚ ಧೃತರಾಷ್ಟ್ರಃ ಸಬಾಂಧವಃ ॥೪೬॥

ವಿದುರನು ಹೇಳಿದ ನಾಗರಿಕರ ಮಾತುಗಳನ್ನು ಕೇಳಿದ ಧೃತರಾಷ್ಟ್ರನು ಶೋಕದಿಂದ ಬಂಧುಸಹಿತನಾಗಿ ಪುನಃ ಮೋಹಕ್ಕೆ ಒಳಗಾದನು.

ತತೋ ದುರ್ಯೋಧನಃ ಕರ್ಣಃ ಶಕುನಿಶ್ಚಾಪಿ ಭಾರತ ।
ದ್ರೋಣಂ ದೀಪಮಮನ್ಯಂತ ರಾಜ್ಯಂ ಚಾಸ್ಮೈ ನ್ಯವೇದಯನ್ ॥೪೭॥

ಭಾರತನೇ! ಆಗ ದುರ್ಯೋಧನ ಕರ್ಣ ಮತ್ತು ಶಕುನಿ ಇವರು ದ್ರೋಣರನ್ನು ಅಂಧಕಾರದಲ್ಲಿ ದೀಪದಂತೆ ಭಾವಿಸಿ ಅವರಿಗೆ ತಮ್ಮ ರಾಜ್ಯವನ್ನು ನಿವೇದಿಸಿದರು.

ಅಥಾಬ್ರವೀತ್ ತದಾ ದ್ರೋಣೋ ದುರ್ಯೋಧನಮಮರ್ಷಣಮ್ ।
ದುಶ್ಶಾಸನಂ ಚ ಕರ್ಣಂ ಚ ಸರ್ವಾನೇವ ಚ ಭಾರತಾನ್ ॥೪೮॥

ಆಗ ದ್ರೋಣರು ಅಸಹನಶೀಲನಾದ ದುರ್ಯೋಧನನನ್ನು ದುಶ್ಶಾಸನನನ್ನು ಕರ್ಣನನ್ನು ಮತ್ತು ಉಳಿದ ಎಲ್ಲಾ ಭಾರತ ವಂಶದವರನ್ನು ಕುರಿತು ಹೇಳಿದರು.

ಅವಧ್ಯಾನ್ ಪಾಂಡವಾನಾಹುರ್ದೇವಪುತ್ರಾನ್ ದ್ವಿಜಾತಯಃ ।
ಅಹಂ ತು ಚರಣಂ ಪ್ರಾಪ್ತಾನ್ ವರ್ತಮಾನಾನ್ ಯಥಾಬಲಮ್ ॥

ಆಗತಾನ್ ಪಾಲಯಿಷ್ಯಾಮಿ ಧಾರ್ತರಾಷ್ಟ್ರಾನ್ ಸರಾಜಕಾನ್ ।
ನೋತ್ಸಹೇ ಸಮಭಿತ್ಯಕ್ತುಂ ದೈವಂ ಮೂಲಮತಃ ಪರಮ್ ॥೫೦॥

ಬ್ರಾಹ್ಮಣರು ಪಾಂಡವರು ದೇವಪುತ್ರರೆಂದೂ ಅವಧ್ಯರೆಂದೂ ಹೇಳುತ್ತಾರೆ. ನಾನು ಶರಣಾಗತರಾಗಿ ನನ್ನ ಕಾಲಿಗೆ ಬಿದ್ದ ದುರ್ಯೋಧನಾದಿಗಳನ್ನು ಮತ್ತು ಉಳಿದ ರಾಜರನ್ನು ನನಗೆ ಶಕ್ತಿಯಿದ್ದಷ್ಟು ರಕ್ಷಿಸುವೆನು. ಅವರನ್ನು ಪರಿತ್ಯಾಗಮಾಡಲು ನಾನು ಸಮರ್ಥನಾಗುವುದಿಲ್ಲ. ಉಳಿದ ವಿಷಯವು ದೈವವನ್ನು ಅವಲಂಬಿಸಿದೆ.

ಧರ್ಮತಃ ಪಾಂಡುಪುತ್ರಾ ವೈ ವನಂ ಗಚ್ಛಂತಿ ಕೌರವಾಃ ।
ತೇ ಚ ದ್ವಾದಶ ವರ್ಷಾಣಿ ವನೇ ವತ್ಸ್ಯಂತಿ ನಿರ್ಜಿತಾಃ ॥೫೧॥

ಎಲೈ ಕೌರವರೇ ಪಾಂಡುಪುತ್ರರು ಧರ್ಮದಿಂದಲೇ ಕಾಡಿಗೆ ಹೋಗುತ್ತಿದ್ದಾರೆ. ದ್ಯೂತದಲ್ಲಿ ಪರಾಜಿತರಾದ ಅವರು ಕಾಡಿನಲ್ಲಿ ಹನ್ನೆರಡುವರ್ಷಗಳ ಕಾಲ ವಾಸವನ್ನು ಮಾಡುವರು.

ಚರಿತಬ್ರಹ್ಮಚರ್ಯಾಶ್ಚ ಕ್ರೋಧಾಮರ್ಷವಶಾನುಗಾಃ ।
ವೈರಂ ಪ್ರತ್ಯಾನಯಿಷ್ಯಂತಿ ಮಮ ದುಃಖಾಯ ಪಾಂಡವಾಃ ॥೫೨॥

ಪಾಂಡವರು ಬ್ರಹ್ಮಚರ್ಯವ್ರತವನ್ನು ಧರಿಸಿದವರಾಗಿ ಕ್ರೋಧ ಮತ್ತು ಅಸಹನೆಯಿಂದ ಕೂಡಿದವರಾಗಿ ನನ್ನ ದುಃಖಕ್ಕಾಗಿ ನೀನು ಮಾಡಿದ ವೈರವನ್ನು ಹಿಂದಿರುಗಿಸುವರು.

ಮಯಾ ತು ಭ್ರಂಶಿತೋ ರಾಜ್ಯಾದ್ ದ್ರುಪದಃ ಸಖಿವಿಗ್ರಹೇ ।
ಪುತ್ರಾರ್ಥಮಯಜತ್ ಕೋಪಾದ್ ವಧಾಯ ಮಮ ಭಾರತ ॥೫೩॥

ನಾನು ಹಿಂದೆ ಸ್ನೇಹಿತನ ಜೊತೆಯ ಕಲಹದಲ್ಲಿ ದ್ರುಪದನನ್ನು ರಾಜ್ಯಚ್ಯುತನಾಗುವಂತೆ ಮಾಡಿದೆ. ಎಲೈ ಭಾರತನೇ! ಅವನು ಕೋಪದಿಂದ ನನ್ನನ್ನು ವಧಿಸುವ ಪುತ್ರನನ್ನು ಪಡೆಯುವ ಸಲುವಾಗಿ ಯಾಗವನ್ನು ಮಾಡಿದನು.

ಯಾಜೋಪಯಾಜತಪಸಾ ಪುತ್ರಂ ಲೇಭೇ ಸ ಪಾವಕಾತ್ ।
ಧೃಷ್ಟದ್ಯುಮ್ನಂ ದ್ರೌಪದೀಂ ಚ ವೇದಿಮಧ್ಯಾತ್ ಸುಮಧ್ಯಮಾಮ್ ॥

ಯಾಜೋಪಯಾಜರ ತಪಸ್ಸಿನ ಬಲದಿಂದ ಅಗ್ನಿಕುಂಡದಿಂದ ಧೃಷ್ಟದ್ಯುಮ್ನನನ್ನೂ ವೇದಿಮಧ್ಯದಿಂದ ಸುಂದರಿಯಾದ ದ್ರೌಪದಿಯನ್ನೂ ಮಕ್ಕಳಾಗಿ ಪಡೆದನು.

ಜ್ವಾಲಾವರ್ಣೋ ದೇವದತ್ತೋ ಧನುಷ್ಮಾನ್ ಕವಚೀ ಶರೀ ।
ಮರ್ತ್ಯಧರ್ಮತಯಾऽಸ್ಮಾಕಂ ತಸ್ಮಾನ್ನಾಂ ಭಯಮಾವಿಶತ್ ॥೫೫॥

ಅಗ್ನಿಜ್ವಾಲೆಯ ವರ್ಣವುಳ್ಳವನಾಗಿ ಧನುನಸ್ಸು ಕವಚ ಮತ್ತು ಬಾಣಗಳನ್ನು ಧರಿಸಿ ಧೃಷ್ಟದ್ಯುಮ್ನನು ಅಗ್ನಿಯಿಂದ ದತ್ತನಾದನು. ನಾನು ಮರಣಶೀಲನಾದುದರಿಂದ ನನ್ನ ಮೃತ್ಯುವಾದ ಧೃಷ್ಟದ್ಯುಮ್ನನ ದೆಸೆಯಿಂದ ನನಗೆ ಭಯವು ಉಂಟಾಯಿತು.

ಗತೋ ಹಿ ಪಕ್ಷತಾಂ ತೇಷಾಂ ಪಾರ್ಷತಃ ಪುರುಷರ್ಷಭಃ ।
ಮದ್ವಧಾಯೋತ್ಥಿತೋ ಧೀಮಾನ್ ಲೋಕೇ ಚಾಪ್ಯಭಿವಿಶ್ರುತಃ ।
ಸೃಷ್ಟಪ್ರಾಣೋ ಭೃಶತರಂ ತಸ್ಮಾದ್ ಯೋತ್ಸ್ಯೇ ತವಾರಿಭಿಃ ॥೫೬॥

ಪುರುಷಶ್ರೇಷ್ಠನಾದ ಪಾರ್ಷತನು ಪಾಂಡವರ ಪಕ್ಷವನ್ನು ಸೇರಿದನು. ನನ್ನ ಮರಣದ ಸಲುವಾಗಿಯೇ ಜನ್ಮವೆತ್ತಿದ ಅವನು ಲೋಕದಲ್ಲಿ ಬಹಳ ಪ್ರಖ್ಯಾತನಾಗಿದ್ದಾನೆ. ನೀನು ಬಹಳ ವೇತನವನ್ನು ಕೊಟ್ಟು ನನ್ನ ಪ್ರಾಣಗಳನ್ನು ಉಳಿಸಿರುವುದರಿಂದ ನಾನು ನಿನ್ನ ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವೆನು.

ನೂನಂ ಸೋಯಮಭಿಪ್ರಾಪ್ತಃ ತ್ವತ್ಕೃತೇ ಕಾಲಪರ್ಯಯಃ ।
ತ್ವರಿತಾಃ ಕುರುತ ಶ್ರೇಯೋ ನೈತದೇತಾವತಾ ಕೃತಮ್ ॥೫೭॥

ನಿನ್ನ ಕಾರಣದಿಂದಾಗಿಯೇ ಈ ಕಾಲವಿಪರ್ಯಾಸವು ನಿಶ್ಚಿತವಾಗಿ ಪ್ರಾಪ್ತವಾಗಿದೆ. ಶೀಘ್ರವಾಗಿ ಒಳ್ಳೆಯ ಕಾರ್ಯಗಳನ್ನುಮಾಡಿ. ಇದು ಇಷ್ಟಕ್ಕೇ ಮುಗಿಯುವುದಿಲ್ಲ.

ಮುಹೂರ್ತಂ ಸುಖಮೇವೈತತ್ ಕೂಲಚ್ಛಾಯೇವ ಹೇಮನಿ ।
ಯಜಧ್ವಂ ಚ ಮಹಾಯಜ್ಞೈ ರ್ಭೋಗಾನಶ್ನೀತ ಪಾರ್ಥಿವಾಃ ॥೫೮॥

ಹೇಮಂತಋತುವಿನ ತೀರಛಾಯೆಯಂತೆ ಇದು ಒಂದು ಮುಹೂರ್ತಕಾಲ ಮಾತ್ರ ಸುಖವನ್ನು ಕೊಡುವಂತಹದು. ಎಲೈ ರಾಜರೇ! ಮಹಾಯಜ್ಞಗಳನ್ನು ಆಚರಿಸಿ ಮತ್ತು ಇಷ್ಟವಾದ ಭೋಗಗಳನ್ನು ಭುಂಜಿಸಿ.

ಇತಶ್ಚತುರ್ದಶೇ ವರ್ಷೇ ಮಹತ್ ಪ್ರಾಪ್ಸ್ಯಥ ವೈಶಸಮ್ ।
ದುರ್ಯೋಧನ ನಿಶಮ್ಯೈತತ್ ಪ್ರತಿಪದ್ಯ ಯಥೇಚ್ಛಸಿ ।
ಶಮಂ ವಾ ಪಾಂಡವೇಯೇಷು ಪ್ರಯುಂಕ್ಷ ಯದಿ ಮನ್ಯಸೇ ॥೫೯॥

ಈ ದಿನಕ್ಕೆ ಹದಿನಾಲ್ಕನೆಯ ವರ್ಷದಲ್ಲಿ ದೊಡ್ಡ ಹಿಂಸೆಗೆ ಪಾತ್ರರಾಗುವಿರಿ. ದುರ್ಯೋಧನನೇ ಇದನ್ನು ಕೇಳಿ ನಿನಗೆ ಇಷ್ಟವಾದಂತೆ ಮಾಡು. ಅಥವಾ ನಿನ್ನ ಅಭಿಪ್ರಾಯವಿದ್ದರೆ ಪಾಂಡುಪುತ್ರರಲ್ಲಿ ಉಪಶಮನವನ್ನು ಹೊಂದು.

ವೈಶಂಪಾಯನಃ

ದ್ರೋಣಸ್ಯ ವಚನಂ ಶ್ರುತ್ವಾ ಧೃತರಾಷ್ಟ್ರೋಬ್ರವೀದಿದಮ್ ।
ಸಮ್ಯಗಾಹ ಗುರುಃ ಕ್ಷತ್ತರುಪಾವರ್ತಯ ಪಾಂಡವಾನ್ ॥೬೦॥

ದ್ರೋಣರ ಮಾತುಗಳನ್ನು ಕೇಳಿ ಧೃತರಾಷ್ಟ್ರನು ಹೀಗೆ ಹೇಳಿದನು. ಗುರುಗಳಾದ ದ್ರೋಣರು ಸರಿಯಾಗಿ ಹೇಳಿದ್ದಾರೆ. ವಿದುರನೇ ಪಾಂಡವರನ್ನು ಹಿಂದಿರುಗಿಸು.

ಯದಿ ವಾ ನ ನಿವರ್ತಂತೇ ಸತ್ಕೃತಾ ಯಾಂತು ಪಾಂಡವಾಃ ।
ಸಶಸ್ತ್ರರಥಪಾದಾತಾ ಭೋಗವಂತಶ್ಚ ಪುತ್ರಕಾಃ ॥೬೧॥

ಎಲೈ ಪುತ್ರರೇ! ಒಂದು ಪಕ್ಷ ಅವರು ಹಿಂದಿರುಗದಿದ್ದರೆ ಪಾಂಡವರು ಒಮ್ಮೆ ಇಲ್ಲಿ ಬಂದು ನಮ್ಮ ಸತ್ಕಾರವನ್ನು ಸ್ವೀಕರಿಸಿ ತಮ್ಮ ಶಸ್ತ್ರ ರಥ ಪತಾಕೆಗಳ ಜೊತೆಯಲ್ಲಿಯೂ ಮತ್ತು ಸಕಲ ಭೋಗಗಳ ಜೊತೆಯಲ್ಲಿಯೂ ಪುನಃ ಹೋಗಲಿ.

॥ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಏಕೋನಶತತಮೋಧ್ಯಾಯಃ॥

॥ಅನುದ್ಯೂತಪರ್ವಣಿ ಸಪ್ತಮೋಧ್ಯಾಯಃ ॥೭॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ತೊಂಬತ್ತೊಂಬತ್ತನೆಯ ಅಧ್ಯಾಯವು ಮುಗಿಯಿತು.

★★★★★

ನೂರನೆಯ ಅಧ್ಯಾಯ

(ಸಂಜಯ ಧೃತರಾಷ್ಟ್ರ ಸಂವಾದ)

ವೈಶಂಪಾಯನಃ

ವನಂ ಗತೇಷು ಪಾರ್ಥೇಷು ನಿರ್ಜಿತೇಷು ದುರೋದರೇ ।
ಧೃತರಾಷ್ಟ್ರಂ ಮಹಾರಾಜ ತದಾ ಚಿಂತಾ ಸಮಾವಿಶತ್ ॥೧॥

ಮಹಾರಾಜನೇ! ಪಾಂಡವರು ದ್ಯೂತದಲ್ಲಿ ನಿರ್ಜಿತರಾಗಿ ವನಕ್ಕೆ ತೆರಳಿದ ಮೇಲೆ ಧೃತರಾಷ್ಟ್ರನನ್ನು ಚಿಂತೆಯು ಆವರಿಸಿತು.

ತಂ ಚಿಂತಯಾನಮಾಸೀನಂ ಧೃತರಾಷ್ಟ್ರಂ ಜನೇಶ್ವರಮ್ ।
ನಿಶ್ಶ್ವಸಂತಮನೇಕಾಗ್ರಮಿತಿ ಹೋವಾಚ ಸಂಜಯಃ ॥೨॥

ಹೀಗೆ ಚಿಂತಿಸುತ್ತಾ ಕುಳಿತ ಏಕಾಗ್ರತೆಯನ್ನು ಕಳೆದುಕೊಂಡು ನಿಟ್ಟುಸಿರು ಬಿಡುತ್ತಿದ್ದ ಧೃತರಾಷ್ಟ್ರರಾಜನನ್ನು ಕುರಿತು ಸಂಜಯನು ಹೀಗೆ ಮಾತನಾಡಿದನು.

ಅವಾಪ್ಯ ವಸುಸಂಪೂರ್ಣಾಂ ವಸುಧಾಂ ವಸುಧಾಧಿಪ ।
ಪ್ರವ್ರಾಜ್ಯ ಪಾಂಡವಾನ್ ರಾಜ್ಯಾದ್ ರಾಜನ್ ಕಿಮನುಶೋಚಸಿ ॥೩॥

ಎಲೈ ವಸುಧಾದಿಪನೇ! ಧನಪೂರ್ಣವಾದ ಭೂಮಿಯನ್ನು ಪಡೆದು ಪಾಂಡವರನ್ನು ರಾಜ್ಯದಿಂದ ಹೊರಗೆ ಕಳುಹಿಸಿ ಏತಕ್ಕೆ ಶೋಕಡುತ್ತಿದ್ದೀಯೆ?

ಧೃತರಾಷ್ಟ್ರಃ

ಅಶೋಚ್ಯತ್ವಂ ಕುತಸ್ತೇಷಾಂ ಯೇಷಾಂ ವೈರಂ ಭವಿಷ್ಯತಿ ।
ಪಾಂಡವೈರ್ಯುದ್ಧಶೌಂಡೈಸ್ತು ಬಲವದ್ಭಿರ್ಮಹಾರಥೈಃ ॥೪॥

ಯಾರು ಬಲಿಷ್ಠರಾದ ಯುದ್ಧನಿಪುಣರಾದ ಮಹಾರಥರಾದ ಪಾಂಡವರ ಜೊತೆಯಲ್ಲಿ ವೈರವನ್ನು ಸಂಪಾದಿಸುತ್ತಾರೆಯೋ ಅವರು ಹೇಗೆ ಶೋಕಪಡದೆ ಇರಲು ಸಾಧ್ಯ ?

ಸಂಜಯಃ

ತವೇದಂ ಸ್ವಕೃತಂ ರಾಜನ್ ಮಹದ್ವೈರಂ ಭವಿಷ್ಯತಿ ।
ವಿನಾಶಃ ಸರ್ವಲೋಕಸ್ಯ ಸಾನುಬಂಧೋ ಭವಿಷ್ಯತಿ ॥೫॥

ರಾಜನೇ! ಇದು ನಿನ್ನ ಆತ್ಮಕೃತವಾದ ದೋಷ. ದೊಡ್ಡ ವೈರವು ಉಂಟಾಗುವುದು. ಸರ್ವಲೋಕದ ವಿನಾಶವೂ ಅನಂತರ ಯಮಲೋಕದಲ್ಲಿ ಯಮಪಾಶಗಳಿಂದ ಬಂಧನವೂ ಉಂಟಾಗುವುದು.

ವಾರ್ಯಮಾಣೋऽಪಿ ಭೀಷ್ಮೇಣ ದ್ರೋಣೇನ ವಿದುರೇಣ ಚ ।
ಪಾಂಡವಾನಾಂ ಪ್ರಿಯಾಂ ಭಾರ್ಯಾಂ ದ್ರೌಪದೀಂ ಧರ್ಮಚಾರಿಣೀಮ್ ॥

ಪ್ರಾಹಿಣೋದಾನಯೇಹೇತಿ ಪುತ್ರೋ ದುರ್ಯೋಧನಸ್ತವ ।
ಸೂತಪುತ್ರಂ ಸುಮಂದಾತ್ಮಾ ನಿರ್ಲಜ್ಜಃ ಪ್ರಾತಿಕಾಮಿನಮ್ ॥೭॥

ಭೀಷ್ಮರಿಂದಲೂ ದ್ರೋಣರಿಂದಲೂ ವಿದುರನಿಂದಲೂ ನಿಷೇಧಿ- ಸಲ್ಪಟ್ಟರೂ ಸಹ ಮೂರ್ಖನಾದ ನಿರ್ಲಜ್ಜನಾದ ನಿನ್ನ ಪುತ್ರನಾದ ದುರ್ಯೋಧನನು ಪಾಂಡವರ ಪ್ರಿಯ ಭಾರ್ಯೆಯಾದ ಧರ್ಮಚಾರಿಣಿಯಾದ ದ್ರೌಪದಿಯನ್ನು ಇಲ್ಲಿಗೆ ಕರೆದುಕೊಂಡು ಬಾ ಎಂದು ಹೇಳಿ ತನ್ನ ಸೂತಪುತ್ರನಾದ ಪ್ರಾತಿಕಾಮಿಯನ್ನು ಕಳುಹಿಸಿದನು.

ಯಸ್ಯೈ ದೇವಾಃ ಪ್ರಯಚ್ಛಂತಿ ಪುರುಷಾಯ ಪರಾಭವಮ್ ।
ಬುದ್ಧಿಂ ತಸ್ಯಾಪಕರ್ಷಂತಿ ಸೋಽಪನೀತಾನಿ ಪಶ್ಯತಿ ॥೮॥

ದೇವತೆಗಳು ಯಾವ ಪುರುಷನಿಗೆ ಪರಾಭವವನ್ನು ಕೊಡಲು ಇಚ್ಛಿಸುತ್ತಾರೋ ಅವರು ಅವರ ಬುದ್ಧಿಯನ್ನು ಅಪಹರಿಸುತ್ತಾರೆ. ಆ ಪುರುಷನು ದುರ್ನೀತಿಯುಳ್ಳವನಾಗಿ ಅರ್ಥಕಾಮಗಳನ್ನೇ ಕಾಣುತ್ತಾನೆ.

ಬುದ್ಧೌ ಕಲುಷಭೂತಾಯಾಂ ವಿನಾಶೇ ಪರ್ಯುಪಸ್ಥಿತೇ ।
ಅನಯೋ ನಯಸಂಕಾಶೋ ಹೃದಯಾನ್ನಾಪಸರ್ಪತಿ ॥೯॥

ವಿನಾಶವು ಸಮೀಪಸ್ಥವಾದಾಗ ಬುದ್ಧಿಯು ಕೆಟ್ಟುಹೋಗುತ್ತಿರಲು ನ್ಯಾಯದಂತೆ ತೋರುವ ಅನ್ಯಾಯವು ಮನಸ್ಸಿನಿಂದ ಹೊರಗೆ ಹೋಗುವುದಿಲ್ಲ.

ಅನರ್ಥಾಶ್ಚಾರ್ಥರೂಪೇಣ. ಅರ್ಥಾಶ್ಚಾನರ್ಥರೂಪಿಣಃ ।
ಉತ್ತಿಷ್ಠಂತಿ ವಿನಶ್ಯಂತಿ ನೂನಂ ತಚ್ಚಾಸ್ಯ ರೋಚತೇ ॥೧೦॥

ಅನರ್ಥಗಳು ಅರ್ಥಗಳಂತೆ ಉದ್ಭವಿಸುತ್ತವೆ. ಅರ್ಥಗಳು ಅನರ್ಥಗಳಂತೆ ನಾಶವನ್ನು ಹೊಂದುತ್ತವೆ. ಇದು ಆ ಪುರುಷನಿಗೆ ಬಹಳ ಮೆಚ್ಚುಗೆಯಾಗುತ್ತದೆ.

ನ ಕಾಲೋ ದಂಡಮುದ್ಯಮ್ಯ ಶಿರಃ ಕೃಂತತಿ ಕಸ್ಯ ಚಿತ್ ।
ಕಾಲಸ್ಯ ಬಲಮೇವೈತದ್ ವಿಪರೀತಾರ್ಥದರ್ಶನಮ್ ॥೧೧॥

ಕಾಲವು ಕೈಯಲ್ಲಿ ದಂಡವನ್ನು ಹಿಡಿದು ಯಾರ ಶಿರಸ್ಸನ್ನು ಕತ್ತರಿಸುವುದಿಲ್ಲ. ಈ ವಿರುದ್ಧಾರ್ಥ ದರ್ಶನವೇ ಕಾಲದ ಬಲ.

ಆಸಾದಿತಮಿದಂ ಘೋರಂ ತುಮುಲಂ ರೋಮಹರ್ಷಣಮ್ ।
ಪಾಂಚಾಲೀಮಪಕರ್ಷದ್ಭಿಃ ಸಭಾಮಧ್ಯೇ ತಪಸ್ವಿನೀಮ್ ॥೧೨॥

ಸಭಾಮಧ್ಯದಲ್ಲಿ ತಪಸ್ವಿನಿಯಾದ ಪಾಂಚಾಲಿಯನ್ನು ಎಳೆದು ಈ ಘನಘೋರವಾದ ರೋಮಾಂಚಕಾರಿಯಾದ ವಿಪತ್ತು ನಿಮ್ಮಿಂದ ಸಂಪಾದಿಸಲ್ಪಟ್ಟಿತು.

ಅಯೋನಿಜಾಂ ರೂಪವತೀಂ ಕುಲಜಾಂ ತಾಂ ವಿಭಾವರೀಮ್ ।
ಕೋ ನು ತಾಂ ಸರ್ವಧರ್ಮಜ್ಞಾಂ ಪರಿಹೂಯ ಯಶಸ್ವಿನೀಮ್ ।
ಪರ್ಯಾನಯೇತ್ ಸಭಾಮಧ್ಯೇ ದ್ಯೂತೇ ದುರ್ಯೋತದೇವಿನಃ ॥೧೩॥

ಸ್ತ್ರೀಧರ್ಮಿಣೀಂ ವರಾರೋಹಾಂ ಶೋಣಿತೇನ ಸಮುಕ್ಷಿತಾಮ್ ।
ಏಕವಸ್ತ್ರಾಂ ಚ ಪಾಂಚಾಲೀಂ ಪಾಂಡವಾನಪ್ಯವೇಕ್ಷ್ಯ ಚ ॥೧೪॥

ಹೃತಸ್ವಾನ್ ಭ್ರಷ್ಟಚಿತ್ತಾಂಸ್ತಾನ್ ಹೃತದಾರಾನ್ ಋತಪ್ರಿಯಾನ್ ।
ವಿಹೀನಾನ್ ಸರ್ವಕಾಮೇಭ್ಯೋ ದಾಸಭಾವಮುಪಾಗತಾನ್ ।
ಧರ್ಮಪಾಶಪರಿಕ್ಷಿಪ್ತಾನ್ ಅಶಕ್ತಾನಿವ ವಿಕ್ರಮೇ ॥೧೫॥

ತಮ್ಮ ಧನವನ್ನೆಲ್ಲಾ ಕಳೆದುಕೊಂಡು ಚಿತ್ತಸ್ವಾಸ್ಥ್ಯವನ್ನು ಕಳೆದುಕೊಂಡು ಸತ್ಯಪ್ರಿಯರಾದ ಪಾಂಡವರು ಎಲ್ಲ ಕಾಮಗಳಿಂದಲೂ ರಹಿತರಾಗಿ ದಾಸಭಾವವನ್ನು ಹೊಂದಿ ಧರ್ಮಪಾಶದಿಂದ ಕಟ್ಟಲ್ಪಟ್ಟು ಪರಾಕ್ರಮವನ್ನು ತೋರಿಸಲು ಅಶಕ್ತರಂತೆ ಕಂಡು ತಮ್ಮ ಪತ್ನಿಯನ್ನು ಕಳೆದುಕೊಂಡಿದ್ದನ್ನು ಗಮನಿಸಿ ಅಯೋನಿಜಯೂ ಸುಂದರಿಯೂ ಸತ್ಕುಲಪ್ರಸೂತೆಯೂ ತನ್ನ ವಿರುದ್ಧಭಾವನೆಯುಳ್ಳವರನ್ನು ನಾಶಪಡಿಸುವವಳೂ ಸರ್ವಧರ್ಮಜ್ಞಳೂ ಕೀರ್ತಿಶಾಲಿನಿಯೂ ರಜಸ್ವಲೆಯೂ ರಕ್ತದಿಂದ ಸಿಕ್ತವಾದ ಏಕವಸ್ತ್ರವುಳ್ಳವಳೂ ಆದ ಪಾಂಚಾಲಿಯನ್ನು ಮೋಸದ ದ್ಯೂತವನ್ನು ಆಡುವ ಶಕುನಿಯ ದ್ಯೂತದಲ್ಲಿ ಆಹ್ವಾನಮಾಡಿ ಯಾವನು ಎಳೆದುತರುತ್ತಾನೆ?

ಕ್ರುದ್ಧಾಮಮರ್ಷಿತಾಂ ಕೃಷ್ಣಾಂ ದುಃಖಿತಾಂ ಕುರುಸಂಸದಿ ।
ದುರ್ಯೋಧನಶ್ಚ ಕರ್ಣಶ್ಚ ಕಟುಕಾನ್ಯಭ್ಯಭಾಷತಾಮ್ ॥೧೬॥

ದುರ್ಯೋಧನ ಮತ್ತು ಕರ್ಣರು ಕುರುಸಂಸತ್ತಿನಲ್ಲಿ ಕೋಪ ಅಸಹನೆ ಮತ್ತು ದುಃಖಗಳಿಂದ ಕೂಡಿದ್ದ ದ್ರೌಪದಿಯನ್ನು ಕುರಿತು ಕಟುವಾದ ಮಾತುಗಳನ್ನು ಆಡಿದರು.

ಧೃತರಾಷ್ಟ್ರಃ

ತಸ್ಯಾಃ ಕೃಪಣಚಕ್ಷುರ್ಭ್ಯಾಂ ಪ್ರದಹ್ಯೇತಾಪಿ ಮೇದಿನೀ ।
ಅವಿಶೇಷಂ ಭವೇದೇಷಾಂ ಪುತ್ರಾಣಾಮಪಿ ಸಂಜಯ ॥೧೭॥

ಅವಳ ಕಾರ್ಪಣ್ಯದೃಷ್ಟಿಯಿಂದ ಭೂಮಿಯೇ ಬೇಕಾದರೂ ಸುಟ್ಟು ಹೋಗಬಹುದು. ಸಂಜಯನೇ! ನನ್ನ ಪುತ್ರರ ವಂಶವು ನಿರ್ವಂಶವಾಗುತ್ತದೆ.

ಭಾರತಾನಾಂ ಸ್ತ್ರಿಯಃ ಸರ್ವಾ ಗಾಂಧಾರ್ಯಾ ಸಹ ಸಂಯುತಾಃ ।
ಪ್ರಾಕ್ರೋಶನ್ ಭೈರವಂ ತತ್ರ ದೃಷ್ಟ್ವಾ ಕೃಷ್ಣಾಂ ಸಭಾಗತಾಮ್ ॥೧೮॥

ದ್ರೌಪದಿಯು ಸಭೆಗೆ ಬಂದುದನ್ನು ನೋಡಿ ಗಾಂಧಾರಿಯ ಜೊತೆಯಲ್ಲಿ ಭರತವಂಶಕ್ಕೆ ಸೇರಿದ ಸ್ತ್ರೀಯರೆಲ್ಲರೂ ಭೈರವನಾದವನ್ನು ಮಾಡಿ ಕಿರುಚಿದರು.

ಅಗ್ನಿಹೋತ್ರಾಣಿ ಸಾಯಾಹ್ನೇ ನ ಚಾಹೂಯಂತ ಸರ್ವಶಃ ।
ಬ್ರಾಹ್ಮಣಾಃ ಕುಪಿತಾಶ್ಚಾಸನ್ ದ್ರೌಪದ್ಯಾಃ ಪರಿಕರ್ಷಣೇ ।
ಆಸೀನ್ನಿಷ್ಠಾತಪೋ ಘೋರೋ ನಿರ್ಘಾತಶ್ಚ ಮಹಾನಭೂತ್ ॥೧೯॥

ಸಾಯಂಕಾಲದಲ್ಲಿ ಎಲ್ಲಿಯೂ ಅಗ್ನಿಹೋತ್ರದಲ್ಲಿ ಹವಿಸ್ಸಿನ ಆರ್ಪಣೆಯಾಗಲಿಲ್ಲ. ದ್ರೌಪದಿಯನ್ನು ಎಳೆದಾಗ ಬ್ರಾಹ್ಮಣರೆಲ್ಲರೂ ಕುಪಿತರಾದರು. ಸೂರ್ಯನು ಪ್ರಖರವಾದ ತಾಪವನ್ನು ಉಂಟುಮಾಡಿದನು. ಘೋರವಾದ ಸಿಡಿಲು ಉಂಟಾಯಿತು.

ದಿವ ಉಲ್ಕಾಶ್ಚಾಪತಂತ ರಾಹುಶ್ಚಾರ್ಕಮುಪಾಗ್ರಸತ್ ।
ಅಪರ್ವಣಿ ಮಹಾಘೋರಂ ಪ್ರಾಣಿನಾಂ ಜನಯನ್ ಭಯಮ್ ॥೨೦॥

ಆಕಾಶದಿಂದ ಉಲ್ಕೆಗಳು ಬಿದ್ದವು. ಎಲ್ಲ ಪ್ರಾಣಿಗಳಿಗೆ ಘೋರವಾದ ಭಯವನ್ನು ಉಂಟುಮಾಡುತ್ತಾ ಪರ್ವವಲ್ಲದ ಕಾಲದಲ್ಲಿ ರಾಹುವು ಸೂರ್ಯಗ್ರಹಣದಲ್ಲಿ ಸೂರ್ಯನನ್ನು ನುಂಗಿದನು.

ತಥೈವ ರಥಶಾಲಾಸು ಪ್ರಾದುರಾಸೀದ್ಧುತಾಶನಃ ।
ಧ್ವಜಾಶ್ಚಾಪ್ಯವಶೀರ್ಯಂತ ಭಾರತಾನಾಮಭೂತಯೇ ॥೨೧॥

ರಥಶಾಲೆಗಳಲ್ಲಿ ಅಗ್ನಿಯು ಕಾಣಿಸಿಕೊಂಡಿತು. ಭಾರತವಂಶದವರ ಅಭೂತಿಯನ್ನು ಸೂಚಿಸುತ್ತಾ ಧ್ವಜಗಳು ಮುರಿದವು.

ದುರ್ಯೋಧನಸ್ಯಾಗ್ನಿಹೋತ್ರೇ ಸೃಗಾಲೋತ್ಯಭಷದ್ ಭೃಶಮ್ ।
ತಂ ತಥಾ ಪ್ರತ್ಯವಾಶ್ಯಂತ ರಾಸಭಾಃ ಸರ್ವತೋದಿಶಮ್ ॥೨೨॥

ದುರ್ಯೋಧನನ ಅಗ್ನಿಹೋತ್ರದಲ್ಲಿ ನರಿಯು ಬಹಳವಾಗಿ (ನಾಯಿಯಂತೆ) ಬೊಗುಳಿತು. ಅದಕ್ಕೆ ಪ್ರತಿಯಾಗಿ ಎಲ್ಲ ದಿಕ್ಕುಗಳಲ್ಲಿಯೂ ಕತ್ತೆಗಳು (ನರಿಯಂತೆ) ಪ್ರತಿಧ್ವನಿಯನ್ನು ನೀಡಿದವು.

ಪ್ರಾತಿಷ್ಠತ ತದಾ ಭೀಷ್ಮೋ ದ್ರೋಣೇನ ಸಹ ಸಂಜಯ ।
ಕೃಪಶ್ಚ ಸೋಮದತ್ತಶ್ಚ ಬಾಹ್ಲೀಕಶ್ಚ ಮಹಾರಥಃ ॥೨೩॥

ಸಂಜಯನೇ! ಆಗ ಭೀಷ್ಮರು ದ್ರೋಣರ ಜೊತೆಯಲ್ಲಿ ಅಲ್ಲಿಂದ ಹೊರಟರು. ಮಹಾರಥರಾದ ಕೃಪ ಸೋಮದತ್ತ ಮತ್ತು ಬಾಹ್ಲೀಕರೂ ಹೊರಟರು.

ತತೋಽಹಮಬ್ರುವಂ ತತ್ರ ವಿದುರೇಣಾಭಿ ಚೋದಿತಃ ।
ವರಂ ದದಾಮಿ ಕೃಷ್ಣಾಯೈ ಕಾಂಕ್ಷಿತಂ ಯದ್ಯದಿಚ್ಛತಿ ॥೨೪॥

ಆಗ ನಾನು ವಿದುರನಿಂದ ಪ್ರೇರಿಸಲ್ಪಟ್ಟು ದ್ರೌಪದಿಗೆ ಇಷ್ಟವಾದ ವರವನ್ನು ಕೊಡುತ್ತೇನೆ ಎಂದು ಹೇಳಿದೆ.

ಸಾವೃಣೋತ್ ತತ್ರ ಪಾಂಚಾಲೀ ಪಾಂಡವಾನಮಿತೌಜಸಃ ।
ಸರಥಾನ್ ಸಧನುಷ್ಕಾಂಶ್ಚಾಪ್ಯನಜ್ಞಾಸಿಷಮಪ್ಯಹಮ್ ॥೨೫॥

ಆಗ ಪಾಂಚಾಲಿಯು ತಮ್ಮ ರಥ ಮತ್ತು ಧನುಸ್ಸುಗಳಿಂದ ಸಹಿತರಾದ ಅಮಿತಪರಾಕ್ರಮಿಗಳಾದ ಪಾಂಡವರು ದಾಸ್ಯದಿಂದ ವಿಮೋಚನೆಯನ್ನು ಹೊಂದಲಿ ಎಂದು ವರವನ್ನು ಕೇಳಿದಳು. ನಾನು ಹಾಗೆಯೇ ಆಗಲಿ ಎಂದು ಆಜ್ಞೆಯನ್ನು ಮಾಡಿದೆ.

ಅಥಾಬ್ರವೀನ್ಮಹಾಪ್ರಾಜ್ಞೋ ವಿದುರಃ ಸರ್ವಧರ್ಮವಿತ್ ।
ಏತದಂತಾಃ ಸ್ಮ ಭರತಾ ಯದ್ವಃ ಕೃಷ್ಣಾ ಸಭಾಗತಾ ॥೨೬॥

ಆಗ ಮಹಾಪ್ರಾಜ್ಞನೂ ಸರ್ವಧರ್ಮಜ್ಞನೂ ಆದ ವಿದುರನು ಹೀಗೆ ಹೇಳಿದನು. ಎಲೈ ಭರತರೇ! ನೀವು ದ್ರೌಪದಿಯನ್ನು ಸಭೆಗೆ ಕರೆದಂದುದರಿಂದ ಇದೇ ನಿಮ್ಮ ವಿನಾಶ.

ಏಷಾ ಪಾಂಚಾಲರಾಜಸ್ಯ ಸುತೇಷ್ಟಾ ಶ್ರೀರನುತ್ತಮಾ ।
ಪಾಂಚಾಲೀ ಪಾಂಡವಾನೇತಾನ್ ದೇವಸೃಷ್ಟೋಪಸರ್ಪತಿ ॥೨೭॥

ಪಾಂಚಾಲರಾಜನ ಪ್ರಿಯಕುಮಾರಿಯಾದ ಶ್ರೇಷ್ಠಳಾದ ಶ್ರೀದೇವಿಯಾದ ದೇವತೆಗಳಿಂದ ಸೃಷ್ಟಳಾದ ಈ ಪಾಂಚಾಲಿಯು ಈ ಪಾಂಡವರನ್ನು ಸಮೀಪಿಸುತ್ತಾಳೆ. (ದ್ರೌಪದಿಯ ದೇಹದಲ್ಲಿರುವ ಭಾರತ್ಯಾದಿ ಪಂಚದೇವಿಯರಿಗೂ ತಮ್ಮ ತಮ್ಮ ಪತಿಗಳನ್ನು ಆಶ್ರಯಿಸಿದ ಕಾರಣದಿಂದ ಶ್ರೀದೇವಿ ಎಂಬ ಹೆಸರಿದೆ)

ತಸ್ಯಾಃ ಪಾರ್ಥಾಃ ಪರಿಕ್ಲೇಶಂ ನ ಕ್ಷಮಂತೇ ಹ್ಯಮರ್ಷಿಣಃ ।
ವೃಷ್ಣಯೋ ವಾ ಮಹೇಷ್ವಾಸಾಃ ಪಾಂಚಾಲಾಶ್ಚಮಿತೌಜಸಃ ॥೨೮॥

ಅಸಹನಶೀಲರಾದ ಮಹಾಧನುರ್ಧಾರಿಗಳಾದ ಪಾಂಡವರಾಗಲೀ ವೃಷ್ಣಿಗಳಾಗಲೀ ಅಥವಾ ಅಮಿತ ಶೌರ್ಯವುಳ್ಳ ಪಾಂಚಾಲರಾಗಲೀ ದ್ರೌಪದಿಯ ಪರಿಕ್ಷೇಶವನ್ನು ಸಹಿಸುವುದಿಲ್ಲ.

ತೇನ ಸತ್ಯಾಭಿಸಂಧೇನ ವಾಸುದೇವೇನ ರಕ್ಷಿತಾಃ ।
ಆಗಮಿಷ್ಯತಿ ಬೀಭತ್ಸುಃ ಪಾಂಚಾಲೈಶ್ಚಾಭಿಸೇವಿತಃ ॥೨೯॥

ಸತ್ಯಪ್ರತಿಜ್ಞೆಯುಳ್ಳ ಕೃಷ್ಣನಿಂದ ರಕ್ಷಿತನಾಗಿ ಪಾಂಚಾಲರಿಂದಲೂ ಕೂಡಿದವನಾಗಿ ಅರ್ಜುನನು ಯುದ್ಧಕ್ಕಾಗಿ ಬರುವನು.

ತೇಷಾಂ ಮಧ್ಯೇ ಮಹೇಷ್ವಾಸೋ ಭೀಮಸೇನೋ ಮಹಾಬಲಃ ।
ಆಗಮಿಷ್ಯತಿ ಧೂನ್ವಾನೋ ಗದಾಂ ದಂಡಮಿವಾಂತಕಃ ॥೩೦॥

ಅವರ ಮಧ್ಯದಲ್ಲಿ ಮಹಾಧನುರ್ಧಾರಿಯೂ ಮಹಾಬಲವುಳ್ಳವನೂ ಆದ ಭೀಮಸೇನನು ಸಹ ಯಮನು ತನ್ನ ದಂಡವನ್ನು ತಿರುಗಿಸಿದಂತೆ ಗದೆಯನ್ನು ತಿರುಗಿಸುತ್ತಾ ಬರುವನು.

ತತೋ ಗಾಂಡೀವನಿರ್ಘೋಷಂ ಶ್ರುತ್ವಾ ಪಾರ್ಥಸ್ಯ ಧೀಮತಃ ।
ಗದಾವೇಗಂ ಚ ಭೀಮಸ್ಯ ನಾಲಂ ಸೋಢುಂ ನರಾಧಿಪಾಃ ॥೩೧॥

ಆಗ ಮೇಧಾವಿಯಾದ ಅರ್ಜುನನ ಗಾಂಡೀವಘೋಷವನ್ನು ಮತ್ತು ಭೀಮಸೇನನ ಗದಾವೇಗವನ್ನು ಸಹಿಸಲು ಯಾವ ರಾಜರಿಗೂ ಸಾಧ್ಯವಾಗುವುದಿಲ್ಲ.

ತತ್ರ ಮೇ ರೋಚತೇ ನಿತ್ಯಂ ಪಾರ್ಥೈಃ ಸಾಮ ನ ವಿಗ್ರಹಃ ।
ಕುರುಭ್ಯೋ ಹಿ ಸದಾ ಮನ್ಯೇ ಪಾಂಡವಾನ್ ಶಕ್ತಿಮತ್ತರಾನ್ ॥೩೨॥

ಆ ವಿಷಯದಲ್ಲಿ ನನಗೆ ಯಾವಾಗಲೂ ಪಾಂಡವರ ಜೊತೆಯಲ್ಲಿ ಶಾಂತಿಸಂಧಾನವೇ ಇಷ್ಟವಾಗುತ್ತದೆ. ವಿರೋಧವು ಎಂದೂ ಇಷ್ಟವಾಗುವುದಿಲ್ಲ. ಕುರುಗಳಿಗಿಂತ ಪಾಂಡವರು ಎಂದೂ ಹೆಚ್ಚು ಶಕ್ತಿಯಿಂದ ಕೂಡಿದವರು. ಎಂದು ನಾನು ಯಾವಾಗಲೂ ತಿಳಿದಿದ್ದೇನೆ.

ತಥಾऽತಿಬಲವಾನ್ ರಾಜಾ ಜರಾಸಂಧೋ ಮಹಾದ್ಯುತಿಃ ।
ಬಾಹುಪ್ರಹರಣೇನೈವ ಭೀಮೇನ ನಿಹತೋ ಯುಧಿ ॥೩೩॥

ಅಂತಹ ಬಲಿಷ್ಠನಾದ ಮಹಾಕಾಂತಿಯುಕ್ತನಾದ ಜರಾಸಂಧರಾಜನು ಭೀಮಸೇನನಿಂದ ಯುದ್ಧದಲ್ಲಿ ಕೇವಲ ಬಾಹುಗಳಿಂದಲೇ ಕೊಲ್ಲಲ್ಪಟ್ಟನು.

ತಸ್ಯ ತೇ ಶಮ ಏವಾಸ್ತು ಪಾಂಡವೈರ್ಭರತರ್ಷಭ ।
ಉಭಯೋಃ ಪಕ್ಷಯೋರ್ಯುಕ್ತಂ ಕ್ರಿಯತಾಮವಿಶಂಕಯಾ ॥೩೪॥

ಎಲೈ ಭರತರ್ಷಭನೇ! ಅಂತಹ ಪಾಂಡವರ ಜೊತೆಯಲ್ಲಿ ನಿನಗೆ ಶಾಂತಿಯೇ ಉಂಟಾಗಲಿ. ಎರಡು ಪಕ್ಷಗಳಿಗೂ ಯೋಗ್ಯವಾದ ಈ ಕಾರ್ಯವನ್ನು ನೀನು ಶಂಕೆಯಿಲ್ಲದೆ ಮಾಡು.

ಏವಂ ಗಾವಲ್ಗಣೇ ಕ್ಷತ್ತಾ ಧರ್ಮಾರ್ಥಸಹಿತಂ ವಚಃ ।
ಉಕ್ತವಾನ್ ನ ಗೃಹೀತಂ ವೈ ಮಯಾ ಪುತ್ರಹಿತೇಪ್ಸುನಾ ॥೩೫॥

ಸಂಜಯನೇ! ಹೀಗೆ ವಿದುರನು ಧರ್ಮಾರ್ಥಸಹಿತವಾದ ವಚನಗಳನ್ನು ಹೇಳಿದನು. ಆದರೆ ಪುತ್ರಹಿತವನ್ನು ಬಯಸಿದ ನಾನು ಅವನ ಮಾತುಗಳನ್ನು ಕೇಳಲಿಲ್ಲ.

ವೈಶಂಪಾಯನಃ

ಸಮಾಪ್ತೇ ಪರ್ವಣಿ ತದಾ ಸ್ವಶಕ್ತ್ಯಾ ತರ್ಪಯೇದ್ ದ್ವಿಜಾನ್ ।
ಪರ್ವಪರ್ವಣಿ ಚಾವಶ್ಯಂ ಹೋಮಂ ಕುರ್ಯಾತ್ ಪ್ರಯತ್ನತಃ ॥೩೬॥

ಪರ್ವಸಮಾಪ್ತಿಯಾದಾಗ ಶಕ್ತಿಯಿದ್ದಷ್ಟು ಬ್ರಾಹ್ಮಣರನ್ನು ಸಂತೋಷಪಡಿಸಬೇಕು. ಪ್ರತಿಯೊಂದು ಪರ್ವದಲ್ಲಿಯೂ ಅವಶ್ಯವಾಗಿ ಪ್ರಯತ್ನಪೂರ್ವಕವಾಗಿ ಹೋಮವನ್ನು ಮಾಡಬೇಕು.

ಆದೌ ಚ ವಾಚಕೇ ದೇಯಂ ವಸ್ತ್ರಂ ಗಂಧಸಮನ್ವಿತಮ್ ।
ಸಭಾಪರ್ವಣಿ ರಾಜೇಂದ್ರ ಹವಿಷ್ಯಂ ಭೋಜಯೇದ್ ದ್ವಿಜಾನ್ ॥೩೭॥

ಆದಿಪರ್ವದಲ್ಲಿ ವಾಚಕರಿಗೆ ಗಂಧವನ್ನು ಮತ್ತು ವಸ್ತ್ರವನ್ನು ಕೊಡಬೇಕು. ರಾಜೇಂದ್ರನೇ! ಸಭಾಪರ್ವದಲ್ಲಿ ಬ್ರಾಹ್ಮಣರಿಗೆ ಹವಿಷ್ಯಾನ್ನವನ್ನು ಭೋಜನಮಾಡಿಸಬೇಕು.

ತರ್ಪಯೇದ್ ವಿವಿಧೈಃ ಕಾಮೈರ್ದಾನೈಶ್ಚೋಚ್ಚಾವಚೈಸ್ತಥಾ ।
ಅತಿರಾತ್ರಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ॥೩೮॥

ವಿವಿಧಕಾಮಗಳಿಂದಲೂ ಶ್ರೇಷ್ಠವಾದ ಮತ್ತು ಕನಿಷ್ಠವಾದ ದಾನಗಳಿಂದಲೂ ಬ್ರಾಹ್ಮಣರನ್ನು ಸಂತೋಷಗೊಳಿಸಿದ ಮನುಷ್ಯನು ಅತಿರಾತ್ರಯಾಗದ ಫಲವನ್ನು ಹೊಂದುತ್ತಾನೆ.

ಪ್ರಾಪ್ನುಯಾಚ್ಚ ಕ್ರತುಫಲಂ ನರಃ ಪುಸ್ತಕಪೂಜನೇ ।
ಅಪುತ್ರಃ ಪುತ್ರಮಾಪ್ನೋತಿ ಪುತ್ರವಾನ್ ಲಭತೇ ಧನಮ್ ॥೩೯॥

ಪುಸ್ತಕವನ್ನು ಪೂಜಿಸುವ ಮನುಷ್ಯನು ಕ್ರತುವಿನ ಫಲವನ್ನು ಪಡೆಯುತ್ತಾನೆ.ಪುತ್ರನಿಲ್ಲದವನು ಪುತ್ರನನ್ನು ಪಡೆಯುತ್ತಾನೆ. ಪುತ್ರನನ್ನು ಹೊಂದಿದವನು ಧನವನ್ನು ಪಡೆಯುತ್ತಾನೆ.

ಪುತ್ರೈರ್ಧನೈಶ್ಚ ಸಹಿತೋ ಯಶಃ ಕೀರ್ತಿಂ ಚ ವಿಂದತಿ ।
ಶ್ರುತ್ವಾಖ್ಯಾನಮಿದಂ ಪುಣ್ಯಂ ನಿಷ್ಪಾಪೋ ಜಾಯತೇ ನರಃ ॥೪೦॥

ಪುತ್ರ ಮತ್ತು ಧನ ಎರಡನ್ನು ಹೊಂದಿದವನು ಯಶಸ್ಸನ್ನು ಕೀರ್ತಿಯನ್ನು ಪಡೆಯುತ್ತಾನೆ. ಈ ಆಖ್ಯಾನವನ್ನು ಶ್ರವಣಮಾಡಿದ ಮನುಷ್ಯನು ಪಾಪಗಳಿಂದ ನಿರ್ಮುಕ್ತನಾಗುತ್ತಾನೆ.

ಏತತ್ಸರ್ವಂ ಸಭಾಪರ್ವ ಹ್ಯಾಖ್ಯಾತಂ ತೇ ಮಹಾವಿಭೋ ।
ಗ್ರಂಥಾಗ್ರಂ ಸಪ್ತಕೇ ಯಾತೇ ವ್ಯಾಪ್ತೆ ಚಾಷ್ಟಸಮಾಖ್ಯಯಾ ॥

ಶ್ಲೋಕಾನಾಂ ದ್ವೇ ಸಹಸ್ರೇ ತು ಪಂಚಶ್ಲೋಕಶತಾನಿ ಚ ।
ವೇದವ್ಯಾಸೇನ ಮುನಿನಾ ಪರ್ವಣ್ಯಸ್ಮಿನ್ ಪ್ರಕೀರ್ತಿತಾಃ ॥೪೨॥

ಮಹಾಪ್ರಭುವಾದ ಜನಮೇಜಯನೇ! ನಾನು ಸಮಗ್ರವಾದ ಸಭಾಪರ್ವವನ್ನು ನಿನಗೆ ಹೇಳಿದ್ದೇನೆ. ಇದರಲ್ಲಿ ಶ್ಲೋಕಪ್ರಮಾಣವು ಏಳುನೂರು ಎಂಟುನೂರು ಎರಡುಸಾವಿರ ಎರಡುಸಾವಿರ ಐದುನೂರು ಮತ್ತು ಐದುನೂರು ಹೀಗೆ ನಾಲ್ಕುಸಾವಿರದ ಐದುನೂರು. ವಿಶ್ವರೂಪವನ್ನು ಧರಿಸಿದ ವೇದವ್ಯಾಸರು ಈ ಪರ್ವದಲ್ಲಿ ಇಷ್ಟು ಶ್ಲೋಕಗಳನ್ನು ಹೇಳಿದ್ದಾರೆ.

॥ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಶತತಮೋಧ್ಯಾಯಃ॥
॥ಅನುದ್ಯೂತಪರ್ವಣಿ ಅಷ್ಟಮೋಧ್ಯಾಯಃ ॥೮॥

॥ ಅನುದ್ಯೂತ ಪರ್ವ ಸಮಾಪ್ತಮ್ ॥

॥ ಸಭಾಪರ್ವ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ನೂರನೆಯ ಅಧ್ಯಾಯವು ಮುಗಿಯಿತು.

ಅನುದ್ಯೂತಪರ್ವವು ಮುಗಿಯಿತು.

ಇಲ್ಲಿಗೆ ಸಭಾಪರ್ವವು ಮುಗಿಯಿತು.

★ ★ ★ ★

ದ್ವೈಪಾಯನೌಷ್ಠಪುಟನಿಃಸೃತಮಪ್ರಮೇಯಂ
ಪುಣ್ಯಂ ಪವಿತ್ರಮಥ ಪಾಪಹರಂ ಶಿವಂ ಚ ।
ಯೋ ಭಾರತಂ ಸಮಧಿಗಚ್ಛತಿ ವಾಚ್ಯಮಾನಂ
ಕಿಂ ತಸ್ಯ ಪುಷ್ಕರಜಲೈರಭಿಷೇಚನೇನ ॥

ವ್ಯಾಸರ ಮುಖಾರವಿಂದದಿಂದ
ಹೊರಹೊಮ್ಮಿದ, ತುಲನೆ ಇಲ್ಲದ,
ಪುಣ್ಯವೂ ಪವಿತ್ರವೂ ಪಾಪಹರವೂ
ಮಂಗಳವೂ ಆದ ಗ್ರಂಥ ಮಹಾಭಾರತ.
ಭಾರತ ಕಥೆ ಕೇಳುಗನಿಗೆ
ಪುಷ್ಕರಾದಿ ಪುಣ್ಯತೀರ್ಥ
ಸ್ನಾನದಿಂದಾಗಬೇಕಾದ್ದೇನೂ ಇಲ್ಲ.

ISBN 978-93-81807-47-7